రంగాభినందన

ರಂಗಾಭಿನಂದನ

ವಿದ್ವಾನ್ ಶ್ರೀ ಎನ್. ರಂಗನಾಥ ಶರ್ಮಾ ಅಭಿನಂದನ ಗ್ರಂಥ

1994

ವಿದ್ವಾನ್ ಶ್ರೀ ಎನ್. ರಂಗನಾಥಶರ್ಮಾ ಅಭಿನಂದನ ಸಮಿತಿ

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ

ಬೆಂಗಳೂರು–560 019

RANGABHINANDANA—Vidwan Sri N. Ranganatha Sharma Felicitation Volume, Published by Vidwan Sri N. Ranganatha Sharma Felicitation Committee, Gokhale Institute of Public Affairs, Bangalore-19 1994
Pages : 464 + xvi

© : Vidwan Sri N. Ranganatha Sharma Felicitation Committee

ಪುಟಗಳು : 464 + xvi

ಮೊದಲ ಮುದ್ರಣ : 1994

ಬೆಲೆ : ರೂ. 120/-

ಮುದ್ರಕರು :

ನೇತ್ರಾ ಪ್ರಿಂಟರ್ಸ್
ಚಾಮರಾಜಪೇಟೆ, ಬೆಂಗಳೂರು-18

ವಿನಾಯಕ. ರಾಘವೇಂದ್ರ. ಭಟ್ಟ. ಜೋಗದಮನೆ.
ಇಡಗುಂದಿ. ಯಲ್ಲಾಪುರ. ಉ.ಕ. 25-11-2005

ವಿದ್ವಾನ್ ಶ್ರೀ ಎನ್. ರಂಗನಾಥ ಶರ್ಮಾ ಅವರಿಗೆ
ಅವರ ಶಿಷ್ಯರು, ಮಿತ್ರರು, ಅಭಿಮಾನಿಗಳು
ಸಮರ್ಪಿಸಿದ ಅಭಿನಂದನ ಗ್ರಂಥ

ಸಮರ್ಪಣೆ

ಸಂಸ್ಕೃತ, ಕನ್ನಡ ಸಾಹಿತ್ಯಗಳಲ್ಲಿ ಶ್ರೇಷ್ಠ ವಿದ್ವಾಂಸರಾಗಿರುವ ಶ್ರೀ ಎನ್. ರಂಗನಾಥಶರ್ಮಾ ಅವರು ಸಾರಸ್ವತ ಕ್ಷೇತ್ರದಲ್ಲಿ ಮಾಡುತ್ತಿರುವ ಕಾರ್ಯ ಅಮೋಘ ವಾದುದು. ಅವರ ವಿನಯ, ಸೌಜನ್ಯ, ಸಹೃದಯತೆಗಳು ಅವರ ಪಾಂಡಿತ್ಯಕ್ಕೆ ಭೂಷಣಗಳಾಗಿವೆ.

ಬೆಂಗಳೂರು ಮತ್ತು ಮೈಸೂರಿನ ಸಂಸ್ಕೃತ ಕಾಲೇಜುಗಳಲ್ಲಿ ವ್ಯಾಕರಣಶಾಸ್ತ್ರದ ಪ್ರಾಧ್ಯಾಪಕರಾಗಿ ಅವರು ಅನೇಕ ಮಂದಿ ಶಿಷ್ಯರನ್ನು ತಯಾರು ಮಾಡಿದ್ದಾರೆ. ಸುಮಾರು ಒಂದು ಶತಮಾನದ ಹಿಂದೆ ಪ್ರಕಟವಾಗಿದ್ದು, ದುರ್ಲಭವಾಗಿದ್ದ ಶ್ರೀ ಚಾಮರಾಜೋಕ್ತಿ ವಿಲಾಸವೆಂಬ ಕನ್ನಡ ರಾಮಾಯಣವನ್ನು ಪರಿಷ್ಕರಿಸುವುದರಲ್ಲಿ ಅವರು ಮುಖ್ಯ ಪಾತ್ರವನ್ನು ವಹಿಸಿದ್ದರು. ಶ್ರೀಮದ್ವಾಲ್ಮೀಕಿ ರಾಮಾಯಣದ ಅವರ ಅನುವಾದ ಬಹುಜನಾದರಣೀಯವಾಗಿದೆ. ಲೌಕಿಕನ್ಯಾಯಗಳು, ಹೊಸಗನ್ನಡ ವ್ಯಾಕರಣ ಸೂಕ್ತಿ-ವ್ಯಾಪ್ತಿ ಮೊದಲಾದ ಗ್ರಂಥಗಳನ್ನು ಕನ್ನಡದಲ್ಲಿ ರಚಿಸಿರುವ ಶ್ರೀ ರಂಗನಾಥ ಶರ್ಮಾ ಅವರು ವಿಷ್ಣುಪುರಾಣ, ಶ್ರೀಮದ್ಭಾಗವತದ ಕೊನೆಯ ಮೂರು ಸ್ಕಂಧಗಳನ್ನು ಸೊಗಸಾಗಿ ಅನುವಾದ ಮಾಡಿ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ ; ಅಮರ ಕೋಶವನ್ನು ಸಂಪಾದಿಸಿ ಕನ್ನಡದಲ್ಲಿ ತಂದಿದ್ದಾರೆ ; ಸಂಸ್ಕೃತದಲ್ಲಿ ಬಾಹುಬಲಿ ವಿಜಯಂ, ಏಕಚಕ್ರಂ ಎಂಬ ನಾಟಕಗಳನ್ನು ಬರೆದಿದ್ದಾರೆ ಮತ್ತು ಗೋಮ್ಮಟೇಶ್ವರ ಸುಪ್ರಭಾತ, ಸುಬ್ರಹ್ಮಣ್ಯ ಸುಪ್ರಭಾತ, ರಾಮಚಂದ್ರ ಸುಪ್ರಭಾತ ಕೃತಿಗಳನ್ನು ರಚಿಸಿ ವಿದ್ವಜ್ಜನರಿಗೆ ಆದರಣೀಯರಾಗಿದ್ದಾರೆ.

ಅನೇಕ ನಿಯತ ಕಾಲಿಕೆಗಳಲ್ಲಿ ಪ್ರಕಟವಾಗಿರುವ, ಆಗುತ್ತಿರುವ ಅವರ ಲೇಖನಗಳು ಅವರ ದೇಶಭಕ್ತಿ, ಆರೋಗ್ಯಕರ ಅಧ್ಯಾಪನಕ್ರಮ ಮತ್ತು ಚಿಂತನಶೀಲ ಹಾಗೂ ಮಾರ್ಗದರ್ಶಕ ದೃಷ್ಟಿಯನ್ನು ಪ್ರತಿಬಿಂಬಿಸುತ್ತವೆ. ವ್ಯಾಕರಣ, ವೇದಾಂತ, ಕಾವ್ಯಮೀಮಾಂಸೆ ಮೊದಲಾದ ಶಾಸ್ತ್ರಗಳಲ್ಲಿ ಅವರಿಗಿರುವ ನಿಷ್ಕೃಷ್ಟ, ವಿಶಾಲ ವ್ಯಾಪ್ತಿಯ ಜ್ಞಾನ, ಸಾಹಿತ್ಯದಲ್ಲಿರುವ ಸಹೃದಯತೆ, ಅವರ ಬರಹಗಳಲ್ಲಿ ಉಪನ್ಯಾಸ ಗಳಲ್ಲಿ ಪ್ರತಿಬಿಂಬಿತವಾಗಿವೆ. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಪ್ರಾಚೀನ ಕನ್ನಡ ಕಾವ್ಯಗಳನ್ನು ಹೊಸಗನ್ನಡಕ್ಕೆ ತರುವ ಯೋಜನೆಯ ನಿರ್ದೇಶಕ ರಾಗಿದ್ದು ಆ ಗ್ರಂಥಗಳು ಇಂದಿನವರಿಗೆ ಎಟುಕುವಂತೆ ಮಾಡಿದ್ದಾರೆ. 'ಉತ್ಥಾನ' ಪತ್ರಿಕೆಯಲ್ಲಿ 'ಸೂಕ್ತಿ ವ್ಯಾಪ್ತಿ' ಎಂಬ ಶೀರ್ಷಿಕೆಯಲ್ಲಿ ಸಮಕಾಲೀನ ವಿಷಯಗಳನ್ನು ಆರ್ಷೇಯ ಮತ್ತು ಮಹಾಕವಿ ಸೂಕ್ತಿಗಳ ಬೆಳಕಿನಲ್ಲಿ ಸಮೀಕ್ಷಿಸಿದ್ದಾರೆ.

1974ರಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಇವರನ್ನು ಗೌರವಿಸಿವೆ. 1984ರಲ್ಲಿ ಅವರು ಅಖಿಲ ಕರ್ನಾಟಕ ಸಂಸ್ಕೃತ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು. ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಭಾರತೀಯ ವಿದ್ಯಾಭವನ, ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಶ್ರೀ ರಾಮಕೃಷ್ಣಾಶ್ರಮ ಮುಂತಾದ ಸಂಸ್ಥೆಗಳು ಅವರ ವಿದ್ವತ್ತಿನ ಲಾಭವನ್ನು ಪಡೆಯುತ್ತಿವೆ.

ಇಂತಹ ಮಹನೀಯರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯವೆಂಬ ದೃಷ್ಟಿಯಿಂದ ಶ್ರೀ ರಂಗನಾಥಶರ್ಮಾ ಅವರ ಶಿಷ್ಯರೂ, ಅಭಿಮಾನಿಗಳೂ ಮತ್ತು ಗಣ್ಯರೂ ಸೇರಿದ ಸಮಿತಿಯೊಂದು 1991ರಲ್ಲೇ ಕಾರ್ಯ ಪ್ರವೃತ್ತವಾಯಿತು. ಆ ಸಮಿತಿಯ ಸದಸ್ಯರ ಹೆಸರುಗಳನ್ನು ಮುಂದಿನ ಪುಟದಲ್ಲಿ ಕೊಡಲಾಗಿದೆ.

ನಮ್ಮ ಕೃತಜ್ಞತೆಯ ಗೌರವದ ಕುರುಹಾಗಿ ಶ್ರೀಮಾನ್ ರಂಗನಾಥಶರ್ಮಾ ಅವರಿಗೆ ಒಂದು ಅಭಿನಂದನ ಗ್ರಂಥವನ್ನು ಸಮರ್ಪಿಸಬೇಕೆಂದು ಮಾಡಿಕೊಂಡ ಸಂಕಲ್ಪ ಈಗ ಈಡೇರಿದೆ.

ಈ ಅಭಿನಂದನ ಗ್ರಂಥವನ್ನು ಎರಡು ಭಾಗಗಳಲ್ಲಿ ಬೇರೆ ಬೇರೆ ಪುಸ್ತಕಗಳನ್ನಾಗಿ ಮಾಡಲಾಗಿದೆ. ಒಂದು ಸಂಸ್ಕೃತ ಲೇಖನಗಳ ಸಂಕಲನ, ಇನ್ನೊಂದು ಕನ್ನಡ ಲೇಖನಗಳ ಸಂಕಲನ.

ಈ ಅಭಿನಂದನ ಗ್ರಂಥದಲ್ಲಿ ಶ್ರೀಮಾನ್ ರಂಗನಾಥಶರ್ಮಾ ಅವರಿಗೆ ಪ್ರಿಯವಾದ ಕಾವ್ಯಮೀಮಾಂಸೆ, ವ್ಯಾಕರಣ, ಶ್ರೀಮದ್ರಾಮಾಯಣ ಮುಂತಾದವುಗಳ ಬಗ್ಗೆ ಲೇಖನಗಳಿವೆ. ಶ್ರೀರಾಮಕಥೆ ಹೇಗೆ ವಿಧ ವಿಧವಾಗಿ ರೂಪುಗೊಂಡಿದೆ ಎಂಬುದನ್ನು ವಿದ್ವಾಂಸರು ತಮ್ಮ ಲೇಖನಗಳಲ್ಲಿ ಹೇಳಿದ್ದಾರೆ. ಮತ್ತು ಅನೇಕ ದೃಷ್ಟಿ ಕೋನಗಳಿಂದ ಆ ಕಥೆಯನ್ನು ವೀಕ್ಷಿಸಿದ್ದಾರೆ. ನಮ್ಮ ಬೇಡಿಕೆಯನ್ನು ಮನ್ನಿಸಿ ಈ ವಿದ್ವಾಂಸರೆಲ್ಲರೂ ದಯಮಾಡಿ ಲೇಖನಗಳನ್ನು ಕೊಟ್ಟಿದ್ದಾರೆ. ಅವರೆಲ್ಲರಿಗೂ ಕೃತಜ್ಞತೆಗಳು ಮತ್ತು ವಂದನೆಗಳು.

ಈ ಪ್ರಕಟನೆ ಹೊರಬರುವುದರಲ್ಲಿ ಸನ್ಮಾನ ಸಮಾರಂಭ ಏರ್ಪಾಟು ಮಾಡುವುದರಲ್ಲಿ ವಿಳಂಬವಾದುದಕ್ಕಾಗಿ ಕ್ಷಮೆ ಕೋರುತ್ತೇವೆ.

ಈ ಗ್ರಂಥಕ್ಕಾಗಿ ಲೇಖನಗಳನ್ನು ಸಂಗ್ರಹಿಸುವುದರಲ್ಲಿ, ಲೇಖನಗಳ ಸಂಪಾದನ ಕಾರ್ಯದಲ್ಲಿ, ಮುದ್ರಣ ಕಾರ್ಯದಲ್ಲಿ ಡಾ॥ ಶ್ರೀಮಾನ್ ಟಿ. ವಿ. ವೆಂಕಟಾಚಲ ಶಾಸ್ತ್ರಿಗಳು, ಶ್ರೀಮಾನ್ ಎಸ್. ಟಿ. ನಾಗರಾಜ್, ಶ್ರೀಮಾನ್ ಮಹಾಬಲೇಶ್ವರ ಭಟ್ಟ, ಶ್ರೀಮಾನ್ ಸಿ. ವಿ. ಶ್ರೀನಾಥ ಶಾಸ್ತ್ರಿ ಮತ್ತು ಶ್ರೀಮಾನ್ ಡಿ. ಆರ್. ವೆಂಕಟರಮಣನ್ ಇವರುಗಳು ಶ್ರಮ ವಹಿಸಿದ್ದಾರೆ.

ಹಾಗೆಯೇ ಈ ಕೆಲಸದಲ್ಲಿ ಸಹಾಯ ಮಾಡಿರುವ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಶ್ರೀಮಾನ್ ಕೆ. ಜಿ. ಪ್ರಕಾಶ್ ಅವರಿಗೆ ವಂದನೆಗಳು.

ಈ ಗ್ರಂಥವನ್ನು ಬಹು ಸ್ವಲ್ಪ ಕಾಲದಲ್ಲೇ ಶ್ರದ್ಧೆಯಿಟ್ಟು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿರುವ ನೇತ್ರಾ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀಮಾನ್ ಮುನಿಧರ್ಮಯ್ಯನವರಿಗೂ ಅವರ ಸಿಬ್ಬಂದಿ ವರ್ಗಕ್ಕೂ ನಮ್ಮ ಕೃತಜ್ಞತೆಗಳು ಮತ್ತು ವಂದನೆಗಳು.

ಭಗವಂತನು ಶ್ರೀಮಾನ್ ರಂಗನಾಥಶರ್ಮಾ ಅವರಿಗೆ ಆಯುರಾರೋಗ್ಯಗಳನ್ನು ಎಲ್ಲ ಶುಭಗಳನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತ ಅವರ ಶಿಷ್ಯರ, ಅಭಿಮಾನಿಗಳ ಪರವಾಗಿ ಈ ಸಾಹಿತ್ಯ ಕುಸುಮ ಮಂಜರಿಯನ್ನು ಅವರಿಗೆ ಸಮರ್ಪಿಸಿ, ಇದನ್ನು ಅವರು ದಯಮಾಡಿ ಸ್ವೀಕರಿಸಬೇಕೆಂದು ಬೇಡುತ್ತೇನೆ. ನಮ್ಮ ಪ್ರೀತಿ ವಿಶ್ವಾಸಗಳ ಕುರುಹಾದಈ ರಂಗಾಭಿನಂದನ ಗ್ರಂಥವು ಅವರಿಗೆ ಪ್ರೀತಿಯನ್ನುಂಟು ಮಾಡಲಿ.

ಇ. ಎಸ್. ವೆಂಕಟರಾಮಯ್ಯ

ಅಧ್ಯಕ್ಷರು,

ವಿದ್ವಾನ್ ಶ್ರೀ ಎನ್. ರಂಗನಾಥಶರ್ಮಾ ಅಭಿನಂದನ ಸಮಿತಿ

ಕಾರ್ಯಸಮಿತಿ

ಅಧ್ಯಕ್ಷರು : ನ್ಯಾಯಮೂರ್ತಿ ಶ್ರೀ ಇ. ಎಸ್. ವೆಂಕಟರಾಮಯ್ಯ

ಸದಸ್ಯರು : ಸರ್ವಶ್ರೀ

ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್
ಜಿ. ನಾರಾಯಣ
ಪದ್ಮಶ್ರೀ ಡಾ॥ ಬಿ. ಪಿ. ರಾಧಾಕೃಷ್ಣ
ಪ್ರೊ॥ ಎಸ್. ಕೆ. ರಾಮಚಂದ್ರರಾವ್
ಹೊಸಬಾಳೆ ಸೀತಾರಾಮರಾವ್
ಪ್ರೊ॥ ಕೆ. ಟಿ. ಪಾಂಡುರಂಗಿ
ಡಾ॥ ಟಿ. ವಿ. ವೆಂಕಟಾಚಲಶಾಸ್ತ್ರಿ
ಆರ್. ಗಣೇಶ್
ಬಿ. ಜಿ. ಶ್ರೀಧರ್
ಗಮಕಿ ಎಂ. ರಾಘವೇಂದ್ರರಾವ್
ಎಂ. ಜಿ. ಕೋದಂಡರಾಮಶೆಟ್ಟಿ
ಬಿ. ಎನ್. ವಿ. ಸುಬ್ರಹ್ಮಣ್ಯಮ್
ಕೃ. ನರಹರಿ
ಜಿ. ಕೆ. ಗುಂಡೂರಾವ್
ಗಮಕ ಆರ್. ಶಂಕರನಾರಾಯಣ್
ಆರ್. ಎಸ್. ರಾಮರಾವ್
ಎಸ್. ಎನ್. ಮೂರ್ತಿ
ಕೆ. ಎಸ್. ವೆಂಕಲನಾರಾಯಣ
ಡಾ॥ ಎನ್. ಆರ್. ನಾಗಭೂಷಣ
ಎಂ. ವಿ. ರಾಮಚೈತನ್ಯ
ಎಸ್. ಆರ್. ರಾಮಸ್ವಾಮಿ
ಸುಬ್ರಹ್ಮಣ್ಯಭಟ್ಟ
ಎಸ್. ಟಿ. ನಾಗರಾಜ್
ತ್ಯಾಗಲಿ ರಾಮಚಂದ್ರಶರ್ಮ
ಶ್ರೀರಾಮ ಭಟ್ಟ
ಎಸ್. ಪಿ. ಸುಬ್ಬರಾಯ
ಬಿ. ಎಸ್. ಸುಬ್ಬರಾಯ
ನೀಲತ್ತಹಳ್ಳಿ ಕಸ್ತೂರಿ
ಟಿ. ಕೇಶವ ಭಟ್ಟ
ಎಚ್. ವಿ. ಅಪ್ರಮೇಯ

ಕಾರ್ಯದರ್ಶಿಗಳು :

ಟಿ. ವಿ. ಶ್ರೀನಾಥಶಾಸ್ತ್ರೀ
ಡಿ. ಆರ್. ವೆಂಕಟರಮಣನ್

ಖಜಾಂಚಿ :

ಎಂ. ವಿ. ಸೂರ್ಯನಾರಾಯಣ

ಮಂಜರಿಯ ಕುಸುಮಗಳು

1. ಧ್ವನಿ ವಿರೋಧಿ ಪ್ರಸ್ಥಾನಗಳು
— ಒಂದು ಸಮೀಕ್ಷೆ ಡಾ॥ ಕೆ. ಕೃಷ್ಣಮೂರ್ತಿ 1

2. ಕನ್ನಡಕ್ಕೆ ಒಂದು ವ್ಯಾಕರಣ
— ಒಂದು ವಿಶ್ಲೇಷಣೆ ಟಿ. ಕೇಶವಭಟ್ಟ 15

3. ಪ್ರೊ॥ ಕೆ. ಕೃಷ್ಣಮೂರ್ತಿಯವರ
"ಅಲಂಕಾರ ಶಾಸ್ತ್ರೇ ವೈವಿಧ್ಯವಾದ ವಿಮರ್ಶಃ"
— ಒಂದು ಪರಿಚಯ 30

4. ಶ್ರೀ ಚಾಮುಂಡಿಕಾ ಲಘು ನಿಘಂಟು
— ಒಂದು ಪರಿಶೀಲನೆ ಜಿ. ಅಶ್ವತ್ಥನಾರಾಯಣ 40

5. "ಕುಂಭಿನೀ" ಶಬ್ದಾರ್ಥ ವಿಚಾರ ಪ್ರೊ॥ ಗರ್ಗೇಶ್ವರಿ ವೆಂಕಟಸುಬ್ಬಯ್ಯ 53

6. ಭಾರತೀಯ ಸಂಗೀತದಲ್ಲಿ ಛಂದಸ್ಸು ಡಾ॥ ರಾ. ಸತ್ಯನಾರಾಯಣ 61

7. ಸರಳರಗಳೆ ಮಹಾಛಂದಸ್ಸುಗಳ ಹಾದಿಯಲ್ಲಿ ನಡೆದ
ಛಂದಃ ಪ್ರಯೋಗಗಳು ಡಾ॥ ಕೆ. ಜಿ. ನಾರಾಯಣಪ್ರಸಾದ್ 106

8. ಜೈನಭಾರತ : ಕಥೆ ಮತ್ತು ಸ್ವರೂಪ
ಡಾ॥ ಟಿ. ವಿ. ವೆಂಕಟಾಚಲಶಾಸ್ತ್ರೀ 122

9. ಪಂಪಭಾರತ ಅಥವಾ ವಿಕ್ರಮಾರ್ಜುನ ವಿಜಯಂ
ಡಾ॥ ಕೆ. ಕುಶಾಲಪ್ಪಗೌಡ 150

10. ಈ ಕಾಲಕ್ಕೆ ರಾಮನ ಪ್ರಸ್ತುತತೆ ಸುಜನಾ 175

11. ಎಂ. ಆರ್. ಶ್ರೀಯವರ ಗ್ರಂಥ ಸಂಪಾದಿತ ಕೃತಿಗಳು
ವೈ. ಸಿ. ಭಾನುಮತಿ 194

12. ಧೀರೋದಾತ್ತ ದುಷ್ಯಂತ ಟಿ. ಎನ್. ಪದ್ಮನಾಭನ್ 206

13. ಕರಕಂಡು ಕಥೆಯ ಕಥಾಪರಂಪರೆಗಳು
ಡಾ|| ಸರಸ್ವತಿ ವಿಜಯಕುಮಾರ್ 212

14. ಕವಿ ಲೀಲಾಶುಕ ; ಕೆಲವು ಸಂಗತಿಗಳು ಸೀತಾರಾಮ ಜಾಗೀರ್‌ದಾರ್ 235

15. "ಮಾಘೇ ಸನ್ತಿ ತ್ರಯೋಗುಣಾಃ" ಡಾ|| ಬಿ. ಚೆನ್ನಕೇಶವ 250

16. ಕಂಬ ರಾಮಾಯಣದಲ್ಲಿ ಸರ್ವಧರ್ಮಸಮನ್ವಯ ದೃಷ್ಟಿ
ಡಾ|| ಪಾ. ಶ. ಶ್ರೀನಿವಾಸ 273

17. ಶಾಸನಗಳಲ್ಲಿ ರಾಮಾಯಣದ ಕೆಲವು ಅಂಶಗಳು
ಹೆಚ್. ಎಂ. ನಾಗರಾಜರಾವ್ 283

18. 'ಭಕ್ತಿ'—ಆಳ್ವಾರರು (ತಮಿಳು ನಾಡಿನ ವೈಷ್ಣವ ಸಂತರು)
ಕರ್ನಾಟಕದ ಶಿವಶರಣರು ಹಾಗೂ ಹರಿದಾಸರಲ್ಲಿ : ಒಂದು
ತೌಲನಿಕ ಪರಿಚಯ ಎಸ್. ಕೆ. ರಾಮಶೇಷನ್ 308

19. ಕನ್ನಡದಲ್ಲಿ ತೋಂಡೀ ಸಾಹಿತ್ಯ ಸಂಪಾದನೆ ಟಿ. ಎನ್. ನಾಗರತ್ನ 327

20. ಕನ್ನಡ ವ್ಯಾಕರಣಗಳ ಮೇಲೆ ಸಂಸ್ಕೃತ ವ್ಯಾಕರಣಗಳ ಪ್ರಭಾವ.
ಡಾ|| ಕೆ. ಕೆಂಪೇಗೌಡ 338

21. ವಾಲ್ಮೀಕಿ ರಾಮಾಯಣದ ಅಹಲ್ಯಾ ಪ್ರಸಂಗ
ಡಾ|| ಸಿ. ಪಿ. ಕೃಷ್ಣಕುಮಾರ್ 358

22. ಶ್ರೀಮದ್ರಾಮಾಯಣದಲ್ಲಿ ಜೀವನ ಧರ್ಮ–ಒಂದು ಚಿಂತನೆ
ಡಾ|| ಎ. ಎಸ್. ವೇಣುಗೋಪಾಲರಾವ್ 362

23. ಶ್ರೀತತ್ತ್ವನಿಧಿಯನ್ನು ಕುರಿತು
ಪ್ರೊ|| ಸಾ. ಕೃ. ರಾಮಚಂದ್ರರಾವ್ 380

24. ಶ್ರೀಮತಿ–ವಜ್ರಜಂಘರ ಕಥಾಪ್ರಸಂಗ ಶೀಲಾಂಕ–ಪಂಪ
ಡಾ|| ಸರಸ್ವತಿ 389

25. ವಾನಪ್ರಸ್ಥಾಶ್ರಮ ಯು. ಕೃಷ್ಣಶರ್ಮಾ 395

26. ಪಟ್ಟಾಭಿರಾಮ ಧ್ಯಾನ ಡಾ|| ಪು.ತಿ. ನರಸಿಂಹಾಚಾರ್ 403

ಶ್ರೀ ರಂಗನಾಥ ಶರ್ಮರನ್ನು ಕುರಿತು

27. ನಮ್ಮ ತಂದೆಯನ್ನು ನಾನು ಕಂಡಂತೆ — ಎನ್.ಆರ್. ಜಯಶ್ರೀ 423

28. ವಿದ್ವಾನ್ ಎನ್. ರಂಗನಾಥಶರ್ಮಾ — ಡಾ|| ಡಿ. ವಿ. ರಾವ್ 427

29. ವಿದ್ವಾನ್ ಎನ್. ರಂಗನಾಥಶರ್ಮರವರಿಗೆ ಶುಭಾಶಂಸೆ — ಹೆಚ್. ಎಂ. ತಿಮ್ಮಪ್ಪ 441

30. ಅದ್ವಿತೀಯರು — ಪರಿಹರಪುರ ಬಿ. ಸುಬ್ರಹ್ಮಣ್ಯ 443

31. ಶರ್ಮರು — ಸ. ವೆಂಕಟಾಚಲಪತಿ 449

32. ವಿದ್ವದ್ರಸಿಕರು — ಡಿ.ವಿ.ಜಿ. 450

33. ಋಜು ಮಾರ್ಗದರ್ಶಿ — ಡಿ. ಆರ್. ವೆಂಕಟರಮಣನ್ 452

34. ವಿದ್ವಾನ್ ಶ್ರೀ ಎನ್. ರಂಗನಥಶರ್ಮರ ಮುಖ್ಯ ಬರಹಗಳು — ಎಂ. ವಿ. ರಾಮು ಚೈತನ್ಯ 461

ಚಿತ್ರಗಳ ವಿವರಗಳು

1. ಗೋಖಲೆ ಸಂಸ್ಥೆಯಲ್ಲಿ
2. ಬರವಣಿಗೆಯಲ್ಲಿ ನಿರತರು
3. ಅಮೆರಿಕದಲ್ಲಿ ಯು.ಎನ್. ಸಂಸ್ಥೆಯ ಮುಂದೆ
4. ನಯಾಗರಾ ಜಲಪಾತದ ಬಳಿ
5. ಪ್ರವಾಸದಲ್ಲಿ
6. ಮಗಳು ಶಾರದೆಯ ಮದುವೆ
7. ಮಗಳು ಅಳಿಯ ಮೊಮ್ಮಗಳೊಂದಿಗೆ
8. ಮೊಮ್ಮಕ್ಕಳೊಂದಿಗೆ
9. ಮಗಳು ಜಯಶ್ರೀಯೊಂದಿಗೆ
10. ಮೊಮ್ಮಕ್ಕಳೊಂದಿಗೆ
11. ಮೊಮ್ಮಕ್ಕಳೊಂದಿಗೆ

ಲೇಖಕರು

1. **ಡಾ|| ಕೆ. ಕೃಷ್ಣಮೂರ್ತಿ**
   32 ಪೂರನೆ ಮೇನ್
   ಜಯನಗರ, ಮೈಸೂರು–14

2. **ಟಿ. ಕೇಶವಭಟ್ಟ**
   784, 15ನೆ ಮುಖ್ಯರಸ್ತೆ
   2ನೆ ಹಂತ, ಬನಶಂಕರಿ
   ಬೆಂಗಳೂರು–79

3. **ಪ್ರೊ|| ಎಸ್. ರಂಗನಾಥ್**
   ಎನ್.ಎಂ.ಕೆ.ಆರ್.ವಿ. ಕಾಲೇಜ್
   ಜಯನಗರ, ಬೆಂಗಳೂರು

4. **ಜಿ. ಅಶ್ವತ್ಥನಾರಾಯಣ**
   95, 34ನೆ ಬಿ ಕ್ರಾಸ್
   16ನೆ ಮೇನ್, 4ನೆ ಟಿ ಬ್ಲಾಕ್
   ಜಯನಗರ, ಬೆಂಗಳೂರು–41

5. **ಪ್ರೊ|| ಗರ್ಗೇಶ್ವರಿ ವೆಂಕಟಸುಬ್ಬಯ್ಯ**
   20, ಎರಡನೆ ಕ್ರಾಸು, 9ನೆ ಮೇನ್
   ರಾಜಾಮಹಲ್ ವಿಲಾಸ್ ಎಕ್ಸ್‌ಟೆನ್‌ಷನ್
   ಬೆಂಗಳೂರು–80

6. **ಡಾ|| ರಾ. ಸತ್ಯನಾರಾಯಣ**
   ತ್ರಯೀಲಕ್ಷ್ಮಿ, 9ನೆ ಕ್ರಾಸು
   ಜಯನಗರ ಮೈಸೂರು–14

7. **ಡಾ|| ಕೆ. ಜಿ. ನಾರಾಯಣಪ್ರಸಾದ್**
   ಪ್ರಾಧ್ಯಾಪಕರು, ಕನ್ನಡ ವಿಭಾಗ
   ಸರಕಾರಿ ಆರ್ಟ್ಸ್ ಕಾಲೇಜ್
   ಉಸ್ಮಾನಿಯಾ ವಿಶ್ವವಿದ್ಯಾಲಯ
   ಹೈದರಾಬಾದು–7

8. **ಡಾ|| ಟಿ. ವಿ. ವೆಂಕಟಾಚಲಶಾಸ್ತ್ರೀ**
   ಮಾನಸ ಗಂಗೋತ್ರಿ ಮೈಸೂರು–6

9. **ಡಾ॥ ಕೆ. ಕುಶಾಲಪ್ಪಗೌಡ**
ಜಟ್ಟಿಹಳ್ಳಿ ಅಂಚೆ ಸುಳ್ಯ ದ.ಕ. 574339

10. **ಸುಜನಾ**
ನಿವೃತ್ತ ಕನ್ನಡ ಪ್ರಾಧ್ಯಾಪಕರು
ಶುಚಿಸ್ಮಿತಾ, ಗೋಕುಲಂ ರಸ್ತೆ
ಜಯಲಕ್ಷ್ಮೀಪುರಂ, ಮೈಸೂರು–12

11. **ವೈ. ಸಿ. ಭಾನುಮತಿ**
ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ ಮೈಸೂರು–6

12. **ಟಿ. ಎನ್. ಪದ್ಮನಾಭನ್**
1167, 26 ಎ ಮೇನ್ 4ನೆ ಟಿ ಬ್ಲಾಕ್
ಜಯನಗರ ಬೆಂಗಳೂರು–11

13. **ಡಾ॥ ಸರಸ್ವತಿ ವಿಜಯಕುಮಾರ್**
ಟೈಪ್ 3–23 ರೀಜನಲ್ ಕಾಲೇಜ್ ಕ್ಯಾಂಪಸ್
ಮೈಸೂರು–6

14. **ಡಾ॥ ಸೀತಾರಾಮ ಜಾಗೀರ್‌ದಾರ್**
(ಶಾಸನತಜ್ಞ) ಕಾರ್ಯಧಾರಿ
ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು–6

15. **ಡಾ॥ ಬಿ. ಚನ್ನಕೇಶವ**
ಸಂಸ್ಕೃತ ಪ್ರಾಧ್ಯಾಪಕ
ಮಹಾರಾಜಾ ಕಾಲೇಜು, ಮೈಸೂರು

16. **ಡಾ॥ ಪಾ. ಶಾ. ಶ್ರೀನಿವಾಸ**
ಪ್ರಾಧ್ಯಾಪಕರು, ಮುಖ್ಯಸ್ಥರು
ಕನ್ನಡ ವಿಭಾಗ
ಮಧುರೈ ಕಾಮರಾಜ್ ವಿಶ್ವವಿದ್ಯಾನಿಲಯ
ಮಧುರೈ–625021

17. ಎಚ್. ಎಂ. ನಾಗರಾಜರಾವ್
ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು-6

18. ಎನ್. ಕೆ. ರಾಮಶೇಷನ್
1904 ಕೆ ಬ್ಲಾಕ್
ಕುವೆಂಪುನಗರ ಮೈಸೂರು-23

19. ಟಿ. ಎನ್. ನಾಗರತ್ನ
ಸಂಶೋಧಕ ಸಹಾಯಕರು
ಮಾನಸ ಗಂಗೋತ್ರಿ, ಮೈಸೂರು-6

20. ಡಾ॥ ಕೆ. ಕೆಂಪೇಗೌಡ
ಭಾಷಾ ವಿಜ್ಞಾನ ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಸಂಸ್ಥೆ ಮೈಸೂರು-6

21. ಡಾ॥ ಸಿ. ಪಿ. ಕೃಷ್ಣಕುಮಾರ್
ಕನ್ನಡ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ ಮೈಸೂರು-6

22. ಡಾ॥ ಎ. ಎನ್. ವೇಣುಗೋಪಾಲರಾವ್
ಮುಖ್ಯಸ್ಥರು, ಕನ್ನಡ ವಿಭಾಗ
ಕಮಲಾ ನೆಹರೂ ಮಹಿಳಾ ಕಾಲೇಜು
ಶಿವಮೊಗ್ಗ

23. ವಿದ್ಯಾಲಂಕಾರ, ಶಾಸ್ತ್ರಚೂಡಾಮಣಿ
ಸಂಗೀತ ಕಲಾರತ್ನ
ಸಾ. ಕೃ. ರಾಮಚಂದ್ರ ರಾವ್
II ಬ್ಲಾಕ್, ಜಯನಗರ
ಬೆಂಗಳೂರು

24. ಡಾ॥ ಸರಸ್ವತಿ
ಕನ್ನಡ ಅಧ್ಯಾಪಕಿ
ಪ್ರಾಯೋಗಿಕ ವಿದ್ಯಾಸಂಸ್ಥೆ, ಮೈಸೂರು

25. **ಯು. ಕೃಷ್ಣಶರ್ಮಾ**
ಸಜ್ಜನರಾವ್ ದೇವಸ್ಥಾನದ ಮನೆಗಳು
ವಿಶ್ವೇಶ್ವರಪುರ ಬೆಂಗಳೂರು-4

26. **ಪದ್ಮಶ್ರೀ ಡಾ|| ಪು. ತಿ. ನರಸಿಂಹಾಚಾರ್**
578, 11ನೆ ಮುಖ್ಯ ರಸ್ತೆ, ಐದನೆಯ ಬ್ಲಾಕ್
ಜಯನಗರ ಬೆಂಗಳೂರು-41

27. **ಎನ್. ಆರ್. ಜಯಶ್ರೀ**
ಯು.ಎಸ್.ಎ.

28. **ಡಾ|| ಡಿ. ವಿ. ರಾವ್**
ದೊಡ್ಡೇರಿ ಉಳವಿ, ಶಿವಮೊಗ್ಗ ಜಿಲ್ಲೆ-577434

29. **ಹೆಚ್. ಎಂ. ತಿಮ್ಮಪ್ಪ**
ಕಲಸಿ, ಸಾಗರ

30. **ಹರಿಹರಪುರ ಬಿ. ಸುಬ್ರಹ್ಮಣ್ಯ**
ಸಾಹಿತ್ಯಭೂಷಣ, ಜ್ಯೋತಿಷ್ಯರತ್ನಂ
11, ಮಾಡಲ್ ಹೌಸ್ ಬ್ಲಾಕ್, ಶಾಮಣ್ಣ ಪಾರ್ಕ್ ಎದುರು
ರಾಘವೇಂದ್ರಸ್ವಾಮಿ ಮಠದ ರಸ್ತೆ
ಬಸವನಗುಡಿ, ಬೆಂಗಳೂರು-560 004

31. **ಸ. ವೆಂಕಟಾಚಲಪತಿ**
10ನೆ ಕ್ರಾಸ್, ನರಸಿಂಹರಾಜಾ ಕಾಲೋನಿ
ಬೆಂಗಳೂರು-19

32. **ಡಿ.ವಿ.ಜಿ.**

33. **ಡಿ. ಆರ್. ವೆಂಕಟರಮಣನ್**
ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ
ಬೆಂಗಳೂರು-19

34. **ಎಂ. ವಿ. ರಾಮ ಚೈತನ್ಯ**
ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ
ಬೆಂಗಳೂರು-19



THE WHITE HOUSE
OPEN
TUESDAY thru SATURDAY
10:00 A M TO 12 NOON



ಧ್ವನಿ ವಿರೋಧಿ ಪ್ರಸ್ಥಾನಗಳು
ಒಂದು ಸಮೀಕ್ಷೆ

ಡಾ || ಕೆ. ಕೃಷ್ಣಮೂರ್ತಿ

'ಧ್ವನಿ'ಯೆಂಬ ಸಿದ್ಧಾಂತ ಕಾವ್ಯಮೀಮಾಂಸಾ-ಶಾಸ್ತ್ರದಲ್ಲಿ ಪ್ರತಿಷ್ಠಾಪಿತವಾಗಬೇಕಾದರೆ, ಅದಕ್ಕೆ ಅಡ್ಡ ಬರಬಹುದಾದ ವಿಚಾರಧಾರೆಗಳ ಪರಾಮರ್ಶೆ ಮತ್ತು ನಿರಾಸ ಮೊದಲ ಅಗತ್ಯವೆಂದು ಮನಗಂಡ ಯಶಸ್ಸು ಆನಂದವರ್ಧನನದು.

ಪುಸ್ತಕ ರೂಪದಲ್ಲಿ ಸ್ಪಷ್ಟ ಅಭಿವ್ಯಕ್ತಿ ಪಡೆಯದೆ ಇದ್ದರೂ ಕೂಡ, ಪ್ರಾಚೀನ ಶಾಸ್ತ್ರಕಾರರ ಕಾವ್ಯತತ್ತ್ವಗಳ ಹಿನ್ನೆಲೆಯಲ್ಲಿ 'ಧ್ವನಿ' ವಾದಕ್ಕೆ ಬರಬಹುದಾದ ವಿರೋಧವನ್ನು ಮಾತ್ರವಲ್ಲದೆ, ತರ್ಕ-ವ್ಯಾಕರಣ-ಪೂರ್ವ ಮೀಮಾಂಸಾ ಮುಂತಾದ ಶಾಸ್ತ್ರಗಳಲ್ಲಿ ಮೂಡಿಬಂದ ಶಬ್ದವ್ಯಾಪಾರ, ಅರ್ಥ ವಿವೇಚನೆಗಳ ಹಿನ್ನೆಲೆಯಲ್ಲಿ ಕೂಡ 'ಧ್ವನಿ' ತತ್ತ್ವಕ್ಕೆ ಬರಬಹುದಾದ ವಿರೋಧಗಳನ್ನು 'ಧ್ವನ್ಯಾಲೋಕ'ಗ್ರಂಥದಲ್ಲಿ ಊಹಿಸಿಕೊಂಡು, ವಿಸ್ತಾರವಾಗಿ ವಿವೇಚಿಸಿ, ಸ್ಪಷ್ಟವಾಗಿ ಖಂಡಿಸಲಾಗಿದೆ. ಈ ಗ್ರಂಥಾಂತರ್ಗತ ಧ್ವನಿ ವಿರೋಧಿ ವಾದಗಳಲ್ಲದೆ, ಆನಂದವರ್ಧನನ ಬಳಿಕ ಧ್ವನಿಸಿದ್ಧಾಂತದ ಖಂಡನೆಗೆ ಸ್ವತಂತ್ರ ಗ್ರಂಥಗಳನ್ನೇ ಬರೆದ ಭಟ್ಟನಾಯಕ, ಮಹಿಮಭಟ್ಟ ಮುಂತಾದವರ ವಿಚಾರಸರಣಿಯೂ ಪ್ರಾಸಂಗಿಕವಾಗಿಯೆಂದರೂ ಈ ವಿರುದ್ಧ ಸರಣಿಯನ್ನು ಬೆಂಬಲಿಸಿ ಪುಷ್ಟೀಕರಿಸಿದ ಧನಂಜಯಾದಿಗಳ ಅಭಿಪ್ರಾಯಗಳೂ ಇಲ್ಲಿ ಪ್ರಸಕ್ತವಾಗುತ್ತವೆ. ಇಡಿಯಾಗಿ ಧ್ವನಿ ವಿರೋಧದ ಸ್ಪಷ್ಟ ಪರಿಜ್ಞಾನವಾಗಬೇಕಾದರೆ ರುಯ್ಯಕನ 'ಅಲಂಕಾರ ಸರ್ವಸ್ವ'ದ ಪ್ರಸ್ತಾವನಾಭಾಗ, ಆ ಭಾಗಕ್ಕೆ ವಿದ್ಯಾಚಕ್ರವರ್ತಿ ಬರೆದಿರುವ 'ಸಂಜೀವಿನಿ'ಯಲ್ಲಿ ಬರುವ ವಿವರಣೆಗಳೂ ಅಗತ್ಯವಾಗುತ್ತವೆ. ವಿಶೇಷತಃ, ಅಭಿನವಗುಪ್ತರ "ಲೋಚನ"ಕ್ಕೆ ನಾವು ಶರಣಾಗದಿದ್ದರೆ ಈ ದಾರಿಯಲ್ಲಿ ಕುರುಡರಂತಾಗುತ್ತೇವೆ. ಧ್ವನಿಕಾರನ ಸಿದ್ಧಾಂತದ ಮರ್ಮವೇ ಅಗೋಚರವಾಗಿ ನಾವು ದಾರಿ ತಪ್ಪಬಹುದು. ಹೀಗೆ ಗ್ರಂಥಸ್ಥ ಆಧಾರಗಳ ಪರಿಶೀಲನೆಯ ಬಳಿಕ, ಆಧುನಿಕ ವಿದ್ವಾಂಸರಾದ ಎಸ್. ಕೆ. ಡೇ, ಪಿ. ವಿ.

ಕಾಣೆ, ವಿ. ರಾಘವನ್ ಮುಂತಾದವರು ಈ ಬಗ್ಗೆ ವ್ಯಕ್ತಪಡಿಸಿರುವ ವಿಮರ್ಶೆಗಳನ್ನು ಸಂಶೋಧಕರು ಪುನರಾಲೋಚಿಸಬಹುದಾಗಿದೆ.

ಮೊದಲ ಧ್ವನಿಕಾರಿಕೆಯಲ್ಲಿ ಬರುವ ಧ್ವನಿ-ವಿರೋಧ ಯಾವುದನ್ನು ಕುರಿತದ್ದು ? 'ಧ್ವನಿ' ಎಂಬ ಶಬ್ದದ ಬಳಕೆಗೆ ವಿರೋಧವೆ ? ಅಥವಾ ಆ ಶಬ್ದದಿಂದ ಬೋಧ್ಯವಾದ ವಿಷಯ ಕಾವ್ಯಾತ್ಮವಾಗಲಾರದು ಎಂಬ ಬಗೆಗೆ ವಿರೋಧವೆ ? ಮೊದಲ ವಿರೋಧ ಕಾವ್ಯದ ಆತ್ಮಕ್ಕೆ 'ಧ್ವನಿ' ಎಂಬ ಹೊಸ ಶಬ್ದದಿಂದ ನಾಮಕರಣ ಸಲ್ಲದು ಎಂಬುದೇ. "ಲೋಚನ"ದಲ್ಲಿ ಇದು ಸ್ಫಟಿಕದಂತೆ ಸ್ಪಷ್ಟವಾಗಿದೆ.

'ಧ್ವನಿ' ಎಂದರೇನೆಂಬ ವಿವರಣೆ ಬರುವವರೆಗೆ, ಈ ಹೊಸ ಶಬ್ದದ ಆಗತ್ಯವಿಲ್ಲ ವೆಂಬುದೊಂದೇ ಎದುರಾಗಬಹುದಾದ ಮೊದಲ ವಿರೋಧ. ಆದರೆ ಆನಂದವರ್ಧನನು ಮನಸ್ಸಿನಲ್ಲಿ ಕಲ್ಪಿಸುವ ವಿರೋಧವಾದ-ಪ್ರಕಾರಗಳು ನಾಮಮಾತ್ರಕ್ಕೆ ಸಂಬಂಧಿಸ ತಕ್ಕವಲ್ಲ. ತನ್ನ ಅಭಿಪ್ರಾಯದಲ್ಲಿ 'ಧ್ವನಿ' ಶಬ್ದ ಬೋಧ್ಯವಾದ ಯಾವ ಕಾವ್ಯಾತ್ಮವುಂಟೋ ಅದನ್ನು ಅನ್ಯಥಾಸಿದ್ಧವೆಂಬ ವಾದವಿಕಲ್ಪಗಳು ಮಾತ್ರ ಅವನಿಗೆ ನಿರಾಕರಣಯೋಗ್ಯ ಪ್ರತಿಪಕ್ಷಗಳು. ನಾಮ ಮಾತ್ರ ವಿರೋಧ ಪ್ರಸಕ್ತವಾದಾಗ "ಕಾವ್ಯಸ್ಯ ಆತ್ಮಾ ಧ್ವನಿ ಇತಿ" ಎಂದು ಕಾರಿಕೆಯ ಪದಗಳ ಅನ್ವಯ ಕ್ರಮ ; ಅಭಿಪ್ರಾಯವಿರೋಧ ಪ್ರಸಕ್ತ ವಾದಾಗ ಅನ್ವಯ ಕ್ರಮ ಬೇರೆಯಾಗುತ್ತದೆ:-"ಧ್ವನಿಃ ಕಾವ್ಯಸ್ಯ ಆತ್ಮಾ ಇತಿ" ಎಂದು. 'ಲೋಚನ'ವನ್ನು ಹೃದ್ಗತ ಮಾಡಿಕೊಳ್ಳದವರಿಗೆ ಈ ಮೊದಲ ಹೆಜ್ಜೆಯೇ ತಪ್ಪುತ್ತದೆ. ಮುಂದಿನ ವಿಚಾರಗಳು ತಪ್ಪುವುದು ಸಹಜವೆಂದು ಬಾಯಿ ಬಿಟ್ಟು ಹೇಳುವ ಕಾರಣವಿಲ್ಲ ; ಇರಲಿ.

'ಧ್ವನಿ' ಶಬ್ದಬೋಧ್ಯವಾದ ಅರ್ಥ ಈ ಮೊದಲ ಕಾರಿಕೆಯಲ್ಲಿ ಯಾವುದು? ಇದು ಅತ್ಯಂತ ಮೂಲಭೂತ ಪ್ರಶ್ನೆ. ವಿದ್ವಾಂಸರೆನಿಸಿಕೊಳ್ಳುವವರೂ ಈ ಪ್ರಶ್ನೆಯನ್ನೆತ್ತದೆ ತೇಲಿಸಿಕೊಂಡು ಹಾರಿಕೆಯ ಉತ್ತರದಿಂದ ಮುಂದುವರಿಯುವುದೇ ಹೆಚ್ಚು. ಏಕೆಂದರೆ ಧ್ವನ್ಯಾಲೋಕದಲ್ಲಿ 'ಧ್ವನಿ' ಶಬ್ದಕ್ಕೆ ಐದು ಅರ್ಥಗಳು ವಿವಕ್ಷಿತವಿದೆ:—(೧) ವ್ಯಂಜಕ-ಶಬ್ದ ; (೨) ವ್ಯಂಜಕ-ಅರ್ಥ ; (೩) ವ್ಯಂಜನಾ-ವ್ಯಾಪಾರ ; (೪) ವ್ಯಂಗ್ಯ-ಅರ್ಥ ಮತ್ತು (೫) ಇವೆಲ್ಲವುಗಳ ಸಮುದಾಯದ ಕಾವ್ಯ-ವಿಶೇಷ ; ಎಂದು. ಈ ಐದರ್ಥ ಗಳೂ ನಮ್ಮ ಗಮನಕ್ಕೆ ಬರುವುದು "ಯತ್ರಾರ್ಥಃ ಶಬ್ದೋವಾ..." ಎಂಬ ಧ್ವನಿ-ಲಕ್ಷಣ ಕಾರಿಕೆಯನ್ನು ಅರಿತಾಗ ಮಾತ್ರ. ಅಲ್ಲಿಯವರೆಗೆ ಈ ನಾನಾರ್ಥಗಳ ಪ್ರಸಕ್ತಿಯೇ ಇಲ್ಲ. ಮೊದಲ ಪ್ರತಿಜ್ಞಾವಾಕ್ಯದಲ್ಲಿ ಎಂದರೆ ಪ್ರಥಮಕಾರಿಕೆಯಲ್ಲಿ "ಧ್ವನಿಃ ಕಾವ್ಯಸ್ಯ ಆತ್ಮಾ" ಎಂಬ ಪ್ರಯೋಗವಿದೆ ; ಈ ವಾಕ್ಯದಲ್ಲಿ 'ಧ್ವನಿ' ಎಂದರೆ ಸಂಭಾವ್ಯವಾದ ಐದರ್ಥಗಳಲ್ಲಿ ನಿಶ್ಚಿತವಾಗಿ ವಿವಕ್ಷಿತವಾಗಿರುವುದು ಒಂದೇ ಅರ್ಥವಾಗಿರಬೇಕು. ಅದು ಯಾವದು ಎಂಬುದೇ ನಿರ್ಣಯವಾಗದಿದ್ದರೆ ಧ್ವನಿ-ವಿರೋಧವೂ ಅಸ್ಪಷ್ಟವಾಗಿಯೇ ಉಳಿಯುತ್ತದೆ. 'ಲೋಚನ'ದ ಸಹಾಯದಿಂದ, ಹಾಗೂ 'ವೃತ್ತಿಯ' ಪುನಃಪುನರಪು

ಶೀಲನದಿಂದ—ಇಲ್ಲಿ ವಿವಕ್ಷಿತವಾದ 'ಧ್ವನಿ' ಶಬ್ದದ ಏಕಮೇವ ಅರ್ಥವೆಂದರೆ ವ್ಯಂಗ್ಯಾರ್ಥವೇ ಹೊರತು ಬೇರಾವುದೂ ಅಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಇದಕ್ಕೆ ರುಯ್ಯಕನ 'ಅಲಂಕಾರ ಸರ್ವಸ್ವ'ದ ಆದಿವಾಕ್ಯಗಳೂ ನೆರವೀಯುತ್ತವೆ.

ಆದರೆ ವ್ಯಂಗ್ಯಾರ್ಥ ಲೋಕದಲ್ಲೂ ಉಂಟು ; 'ಬಾಗಿಲು' ಎಂದರೆ ಸಂದರ್ಭಾನುಸಾರ 'ತೆಗಿ' ಎಂದೋ 'ಮುಚ್ಚು' ಎಂದೋ ವ್ಯಂಗ್ಯಾರ್ಥ ಅನುಭವಸಿದ್ಧ. ಇದು ಕಾವ್ಯಾತ್ಮವೆನಿಸಲಾರದು ಎಂಬುದೂ ಸೂರ್ಯಪ್ರಕಾಶದಷ್ಟು ಸ್ಪಷ್ಟ ; ವಿವರಣೆಯ ಅಗತ್ಯವಿಲ್ಲ. ಇದನ್ನು ವ್ಯಂಗ್ಯ 'ವಸ್ತು' ಎನ್ನುವುದು ಪಾರಿಭಾಷಿಕ. ಹಾಗೆಯೇ 'ಮುಖಚಂದ್ರ' ಅಥವಾ 'ಮುಖಕಮಲ' ಎಂಬ ರೂಪಕಸ್ಥಲದಲ್ಲಿ ಚಂದ್ರ ಸದೃಶವಾದ ಸೌಂದರ್ಯ ಮುಖದಲ್ಲಿದೆಯೆಂಬ ಅಂಶ ವ್ಯಂಗ್ಯ. ಇದನ್ನು ವಾಚ್ಯವಾಗಿ ಹೇಳಿದ್ದರೆ 'ಉಪಮಾಲಂಕಾರ' ಎನಿಸುತ್ತಿತ್ತು. ವ್ಯಂಗ್ಯವಾಗಿ ಹೇಳಿರುವುದರಿಂದ ಇದು ವ್ಯಂಗ್ಯವಾದ ಉಪಮಾಲಂಕಾರವಾಗಿದೆ. ಕವಿಕಲ್ಪನೆಯಿಂದ ಮೂಡಿ ಬಂದ ಈ ವಸ್ತು 'ಅಲಂಕಾರ' ಶಬ್ದದಿಂದ ವ್ಯವಹೃತವಾಗುವುದು ಪಾರಿಭಾಷಿಕ. ಹಾಗೆಯೇ "'ವಧು ಪರೀಕ್ಷೆ'ಗೆ ಬಂದ ವರನನ್ನು ನೇರವಾಗಿ ನೋಡದೆ, ಕಣ್ಣು ತಪ್ಪಿಸಿ, ತಲೆ ತಗ್ಗಿಸಿ, ಕಾಲಿಂದ ನೆಲವನ್ನು ಬರೆಯುತ್ತಿದ್ದಾಳೆ ಈ ತರುಣಿ" ಎಂಬ ವಾಕ್ಯದಲ್ಲಿ ಅವಳ ನಾಚಿಕೆಯೆಂಬ ಸಂಚಾರಿಭಾವ ವ್ಯಂಗ್ಯವಾಗಿದೆ. ಇದು ವ್ಯಂಗ್ಯವಾದ 'ರಸಾದಿ' ಎಂಬುದು ಪಾರಿಭಾಷಿಕ. ಹೇಗೇ ಇರಲಿ ; ವಸ್ತು, ಅಲಂಕಾರ, ರಸಾದಿ—ಎಂಬ ಮೂರು ಬಗೆಯ ವ್ಯಂಗ್ಯಾರ್ಥಗಳು ಲೌಕಿಕ ವ್ಯವಹಾರದ ಶಬ್ದ ಪ್ರಯೋಗದಲ್ಲಿಯೇ ಇವೆ ಎಂಬುದನ್ನು ಮರೆಯಲಾಗದು. ಇಂತಹ ಪ್ರಯೋಗಗಳನ್ನು ಕಂಡಾಗ ನಮಗೆ ಚಮತ್ಕಾರವೂ ಬರಬಹುದು ; ಬಾರದೆಯೂ ಇರಬಹುದು. ಆದರೆ ನಮಗೆ ಇಲ್ಲಿ ಅದು ಪ್ರಸ್ತುತವಲ್ಲ. ಕಾವ್ಯದಲ್ಲಿಯೂ ಹೀಗೆ ವ್ಯಂಗ್ಯಾರ್ಥ ಮೂರು ಪರಿಯಾಗಿ ಇರುವ ಶಕ್ಯತೆಯಿದೆ ಎಂಬುದನ್ನು ನಿರ್ದೇಶಿಸುವುದಷ್ಟೆ ಈಗ ಪ್ರಸ್ತುತ. ಈ ಮೂರೂ ಕಾವ್ಯಪ್ರಯೋಗದಲ್ಲಿ ಇದ್ದ ಮಾತ್ರಕ್ಕೆ ಕಾವ್ಯದ 'ಆತ್ಮ'ವೆಂಬ ಪದವಿ ಪ್ರಾಪ್ತವಾಗುತ್ತದೆಯೇ ?—ಇದು ನಾವೆಲ್ಲ ನಿರ್ಣಯಿಸಬೇಕಾದ ಪ್ರಶ್ನೆ. 'ಆಗುತ್ತದೆ' ಎನ್ನುವುದು ಆನಂದವರ್ಧನನ ಅಭಿಪ್ರಾಯವಲ್ಲ; ಅದು, ಎಂದರೆ ತ್ರಿವಿಧ ವ್ಯಂಗ್ಯಾರ್ಥ, ಮಿಕ್ಕೆಲ್ಲಕ್ಕಿಂತ ಪ್ರಧಾನವೂ ಆಗಿದ್ದರೆ ಮಾತ್ರ ಕಾವ್ಯದ ಆತ್ಮವೆನಿಸುವುದೆಂದು ಅವನ ಸಿದ್ಧಾಂತ. ಕಾವ್ಯದಲ್ಲಿ 'ವ್ಯಂಗ್ಯ ಪ್ರಾಧಾನ್ಯ' ವೆಂದರೇನು ? ಸೌಂದರ್ಯಾಧಿಕ್ಯ ಎಂದೇ ಇದನ್ನು ಅರ್ಥಯಿಸಲಾಗಿದೆ. ಕಾವ್ಯದಲ್ಲಿ ವಾಚ್ಯಾಂಶವಿರುವುದೂ ಸೌಂದರ್ಯನಿರ್ಮಾಣಕ್ಕಾಗಿಯೇ. ಆ ವಾಚ್ಯಾಂಶ ವಸ್ತು, ಅಲಂಕಾರ ಎಂದು ದ್ವಿರೂಪವಾಗಿರುತ್ತದೆ. ಮೊದಲನೆಯದನ್ನು 'ಸ್ವಭಾವೋಕ್ತಿ'ಯೆಂದೂ ಎರಡನೆಯದನ್ನು 'ವಕ್ರೋಕ್ತಿ'ಯೆಂದೂ ಹೇಳುವುದುಂಟು. ಎರಡೂ ವಾಚ್ಯಸೌಂದರ್ಯದ ಪ್ರಕಾರಗಳೇ. ಹಾಗೆಯೇ ಕಾವ್ಯದಲ್ಲಿ ಬಳಸಲಾಗುವ ವರ್ಣ-ಸಂಘಟನೆ, ಅಥವಾ ಅಕ್ಷರ-ಯೋಜನೆ, ಅಥವಾ

ವಾಕ್ಯರಚನೆ—ಇದರಲ್ಲಿ ಸಮಾಸಗಳ ಸನ್ನಿವೇಶವೂ ಬರುತ್ತದೆ—ಅಥವಾ ಬಂಧ-ವಿನ್ಯಾಸ ಇಲ್ಲವೆ 'ರೀತಿ' ಕೂಡ ಸೌಂದರ್ಯದೃಷ್ಟಿಯಿಂದಲೇ ನಿಬದ್ಧವಾಗಿರುತ್ತದೆ. ಅರ್ಥಸೌಂದರ್ಯಕ್ಕೆ ವಾಚ್ಯಾಲಂಕಾರಗಳು ಕಾರಣ ಹೇಗೋ ಹಾಗೆಯೇ ಬಂಧ ಸೌಂದರ್ಯಕ್ಕೆ ಅಥವಾ ಉಕ್ತಿ-ವೈಚಿತ್ರ್ಯಕ್ಕೆ ಓಜಸ್ಸು, ಮಾಧುರ್ಯ ಮುಂತಾದ ಗುಣಗಳು ಕಾರಣವಾಗಿರುತ್ತವೆ.

ಎಂದ ಮೇಲೆ ಆನಂದವರ್ಧನ ಹೇಳುವ ವ್ಯಂಗ್ಯಾರ್ಥ-ಪ್ರಾಧಾನ್ಯ ಕೂಡ ಕಾವ್ಯದಲ್ಲಿ ಸೌಂದರ್ಯ ಕಾರಣವೇ ಆದ್ದರಿಂದ ಅಲಂಕಾರ-ಕೃತ ಸೌಂದರ್ಯ ಹಾಗು ಗುಣ-ಕೃತ ಸೌಂದರ್ಯಗಳಿಗಿಂತಲೂ ಮಿಗಿಲಾದ ಹಾಗು ಸಹೃದಯರಿಗೆ ಹೆಚ್ಚು ಮೆಚ್ಚಾಗುವ ಸೌಂದರ್ಯವನ್ನು ಪಡೆದಿರುವ ಕಾವ್ಯಪ್ರಯುಕ್ತ ವ್ಯಂಗಾರ್ಥ ಮಾತ್ರ 'ಧ್ವನಿ' ಎಂಬ ಆನಂದವರ್ಧನನ ನಿರ್ಣಯ ನಮಗೆ ಅರಿವಾಗುತ್ತದೆ. ಈ ವಿಶಿಷ್ಟಾರ್ಥದ 'ಧ್ವನಿ' ಮಾತ್ರ ಕಾವ್ಯದ ಆತ್ಮ ಎಂಬುದು ಆನಂದವರ್ಧನನ ಸಿದ್ಧಾಂತ. ಇದನ್ನು ಯಾರು ಅಲ್ಲಗಳೆಯುವರೋ ಅವರು ಧ್ವನಿವಿರೋಧಿಗಳು. ಕಾವ್ಯೈಕಗೋಚರವಾದ ಅಥವಾ ಕವಿ ವ್ಯಾಪಾರ ಮಾತ್ರ ಗಮ್ಯವಾದ ತ್ರಿವಿಧ 'ಧ್ವನಿ' ಮಾತ್ರ ಚರ್ಚೆಯ ವಿಷಯ ; ಬೇರಾವುದೂ ಅಲ್ಲ.

'ಧ್ವನಿವಿರೋಧಿ'ಗಳ ವರ್ಗದಲ್ಲಿ ಸೇರಬೇಕಾದರೆ ವ್ಯಂಗ್ಯಾರ್ಥವೇ ಇಲ್ಲ ಎನ್ನುವ ಪ್ರಸಕ್ತಿಯಿಲ್ಲ. ಲೋಕವ್ಯವಹಾರದಲ್ಲಿ ಮತ್ತು ಕಾವ್ಯ ವ್ಯವಹಾರದಲ್ಲಿ ವ್ಯಂಗ್ಯಾರ್ಥವಿರುವುದನ್ನು ಎಲ್ಲ ವಾದಿಗಳೂ ಒಪ್ಪುತ್ತಾರೆ. ಅದು ತ್ರಿವಿಧವೆಂದೂ ಒಪ್ಪಲಡ್ಡಿಯಿಲ್ಲ. ಆದರೆ ಇರುವ ಚರ್ಚೆಯೆಲ್ಲ ಕಾವ್ಯದ ವ್ಯಂಗ್ಯಾರ್ಥದ 'ಆತ್ಮ'ತ್ವದ ವಿಷಯದಲ್ಲಿ ಮಾತ್ರ. 'ಆತ್ಮ' ಎಂದರೆ ಅತ್ಯಂತ ಸಾರಭೂತವಾದದ್ದು ಎಂದು ತಾತ್ಪರ್ಯ. ಸೌಂದರ್ಯವಷ್ಟೇ ಕಾವ್ಯಲಾಕ್ಷಣಿಕರಿಗೆ ಪರೀಕ್ಷಾ ವಿಷಯ. ಕಾವ್ಯ ಸೌಂದರ್ಯದಲ್ಲಿ ವಸ್ತುಕೃತ ಸೌಂದರ್ಯ, ಅಲಂಕಾರ-ಕೃತ-ಸೌಂದರ್ಯ, ಗುಣಕೃತ-ಸೌಂದರ್ಯ, ಎಂಬ ಮೂರು ಪ್ರಕಾರದ ಸೌಂದರ್ಯಗಳನ್ನು ಮಾತ್ರ ಪ್ರಾಚೀನ ಲಾಕ್ಷಣಿಕರು ಗುರುತಿಸಿದರು. ಅವು ಧ್ವನಿಕಾರನಿಗೂ ಗ್ರಾಹ್ಯವೇ ಇವೆ. ಆದರೆ ಅವರು ವ್ಯಂಗ್ಯ-ಕೃತ ಸೌಂದರ್ಯವನ್ನು ಗೃಹೀತ ಹಿಡಿದರೇ ಹೊರತು, ಅದನ್ನು ಮುಖ್ಯವಾಗಿ ವಿವೇಚಿಸಲು ತೊಡಗಲೇಇಲ್ಲವೆಂಬುದು ಅವನ ಆರೋಪಣೆ. ಭಾಮಹ-ಉದ್ಭಟ-ದಂಡಿ-ವಾಮನ-ರುದ್ರಟರು ಹೇಳುವ ಅನೇಕ ಅಲಂಕಾರಗಳಲ್ಲಿ ವಾಚ್ಯಾರ್ಥ ಸೌಂದರ್ಯದ ಜೊತೆಜೊತೆಗೇ ವ್ಯಂಗ್ಯಾರ್ಥಸೌಂದರ್ಯವೂ ಅಡಕವಾಗಿರುತ್ತದೆ. ಉದಾಹರಣೆಗೆ ಸಮಾಸೋಕ್ತಿ, ಪರ್ಯಾಯೋಕ್ತಿ, ಅಪ್ರಸ್ತುತ ಪ್ರಶಂಸೆ, ವ್ಯಾಜಸ್ತುತಿ, ಆಕ್ಷೇಪ, ವಿಶೇಷೋಕ್ತಿ – ಮುಂತಾದುವನ್ನು ಹೆಸರಿಸಬಹುದು. ಇಲ್ಲಿ ವಾಚ್ಯವಾದ ವಸ್ತು ಒಂದೇದರೆ ವ್ಯಂಗ್ಯವಾದ ವಸ್ತು ಇನ್ನೊಂದೇ ಇರುತ್ತದೆ. ಆದರೆ ಇವೆರಡರಲ್ಲಿ ಯಾವ ಅಂಶಕ್ಕೆ ಸಹೃದಯ ಶ್ಲಾಘ್ಯವಾದ ಚಾರುತ್ವ ಹೆಚ್ಚು ಎಂಬ ಪ್ರಶ್ನೆಯನ್ನು

ಪ್ರಾಚೀನರು ಎತ್ತಲಿಲ್ಲ, ಆನಂದ ಎತ್ತುವುದಷ್ಟೇ ಅಲ್ಲ ; ವ್ಯಂಗ್ಯಾಂಶಕ್ಕೆ ಮಾತ್ರ ಎಂದು ನಿರ್ಣಯಿಸುತ್ತಾನೆ. ಭಾಮಹಾದಿ ಪ್ರಾಚೀನರ ಅನುಯಾಯಿಗಳು ಈ ಮಾತನ್ನು ಒಪ್ಪಬೇಕೆ ?

ಒಪ್ಪದಿದ್ದರೂ ನಡೆದೀತೆಂದು ಅವರು ಸಾಧಿಸಲು ತೊಡಗಬಹುದು. ವ್ಯಂಗ್ಯ ವಸ್ತು ಸಮನ್ವಿತವಾದ 'ಅಲಂಕಾರ'ಗಳಲ್ಲಿ ವ್ಯಂಗ್ಯವಸ್ತುವಿನಲ್ಲೇ ಚಾರುತ್ವಾತಿಶಯ ವುಂಟೆಂಬ ಅಭಿಪ್ರಾಯ ಪ್ರಾಚೀನರಿಗೂ ಇತ್ತೆಂದು ಅವರು ವಾದಿಸಬಹುದು. ಆದ್ದರಿಂದ 'ಧ್ವನಿ'ಯೆಂಬ ಹೊಸ ಸಿದ್ಧಾಂತವೇನೂ ಅಗತ್ಯವಿಲ್ಲವೆನ್ನಬಹುದು. ಈ ಬಗೆಯ ಧ್ವನಿ ವಿರೋಧಿಗಳನ್ನು 'ಅಲಂಕಾರಾಂತರ್ಭಾವ-ವಾದಿ'ಗಳೆಂದು ಕರೆಯಲಾಗಿದೆ.

ಇದು ವಸ್ತುಧ್ವನಿಯ ಮಾತಾಯಿತು. ಹಾಗೆಯೇ ದೀಪಕ, ತುಲ್ಯಯೋಗಿತೆ, ನಿದರ್ಶನ ಮುಂತಾದ ಅಲಂಕಾರಗಳಲ್ಲಿ ಉಪಮಾಲಂಕಾರ ವ್ಯಂಗ್ಯವಾಗಿ ಅಂತರ್ಗತ ವಾಗಿರುವುದನ್ನೂ ಭಾಮಹಾದಿಗಳ ಲಕ್ಷ್ಯ-ಲಕ್ಷಣಗಳಲ್ಲಿ ನಿರ್ದೇಶಿಸಿ ವಿವರಿಸಲು ಅವಕಾಶವಿದೆ. ಆದ್ದರಿಂದ 'ಅಲಂಕಾರಧ್ವನಿ'ಯ ಚಾರುತ್ವವೂ ಅವರಿಗೆ ಸುಪರಿಚಿತವೆಂದೇ ಈ ವಿರೋಧಿಗಳು ಸಾಧಿಸಬಹುದು.

ಇನ್ನು ಉಳಿದಿರುವುದೆಂದರೆ ರಸಾದಿ-ಧ್ವನಿ. ಇದನ್ನು ಕೂಡ ಪ್ರಾಚೀನರ 'ಪ್ರೇಯಸ್', 'ರಸವತ್' ಮುಂತಾದ ಅಲಂಕಾರಗಳಲ್ಲಿ ಅಭಿಪ್ರೇತವೆಂದು ವ್ಯಾಖ್ಯಾನ ಮಾಡಿಬಿಟ್ಟರೆ ಈ ಅಂತರ್ಭಾವವಾದಿಗಳ ಕೆಲಸವಾಯಿತು.

ಹೀಗೆ ಧ್ವನಿಕಾರನ ತ್ರಿವಿಧ ವ್ಯಂಗ್ಯಾರ್ಥವೂ ಪ್ರಾಚೀನ ಲಾಕ್ಷಣಿಕರ ಒಂದಿಲ್ಲೊಂದು ಅಲಂಕಾರದಲ್ಲಿ ಐಕ್ಯ ಪಡೆಯುವುದರಿಂದ, ಹಿಂದಿನವರು ಹೇಳದೆ ಉಳಿದ ಹೊಸ ಸೌಂದರ್ಯ ಪ್ರಕಾರವೊಂದು ಇದೆಯೆಂದಾಗಲಿ, ಅದು 'ಧ್ವನಿ' ಯೆಂದಾಗಲಿ ಸಾಧಿಸುವ ಹವ್ಯಾಸ ಹಾಸ್ಯಾಸ್ಪದವೆಂದು ಅವರು ಹಿಯ್ಯಾಳಿಸಲೂ ಬಹುದು.

ಹಿಂದಿನವರು ಕಾವ್ಯದ ಶಬ್ದಾರ್ಥಗಳ ಎಲ್ಲ ಚಾರುತ್ವಪ್ರಕಾರಗಳನ್ನೂ ಪರಿಗಣಿಸಿದ್ದಾಗಿದೆ ; ಅವರು ಪರಿಗಣಿಸದೆ ಏನನ್ನಾದರೂ ಬಿಟ್ಟಿದ್ದರೆ, ಅದು ಚಾರುತ್ವಕಾರಿಯಲ್ಲವೆಂದೇ ತೀರ್ಮಾನ ; ಯಾವುದೇ ಚಾರುತ್ವಕಾರಿಯಾದ ಅಂಶವಿರಲಿ—ಅದು ಉಕ್ತ ಗುಣಗಳಲ್ಲಿ ಇಲ್ಲವೆ ಅಲಂಕಾರಗಳಲ್ಲಿ ಅಂತರ್ಭಾವ ಪಡೆದೇ ತೀರಬೇಕು. ಈ ಮೂರೇ ಧ್ವನ್ಯಾಭಾವವಾದದ ತ್ರಿಪ್ರಕಾರಗಳೆಂದು 'ಲೋಚನ'ದಲ್ಲಿ ಸ್ಪಷ್ಟಪಡಿಸಲಾಗಿದೆ. ಅಕಸ್ಮಾತ್ ಯಾವದೋ ಒಂದು ಸಣ್ಣ ಅಂಶ ಅಪರಿಗಣಿತವಾಗಿ ಕೈಬಿಟ್ಟಿದ್ದರೆ ತಾನೇ ಆದ ಪ್ರಮಾದವೇನು ? ಇನ್ನೊಂದು ಹೊಸ ಗುಣವೆಂದೋ ಹೊಸ ಅಲಂಕಾರವೆಂದೋ ಸೇರಿಸಿದರೆ ಸಾಲದೆ ? ಅದಕ್ಕಾಗಿ ದೊಡ್ಡ ಧ್ವನಿ-ಪ್ರತಿಷ್ಠಾಪನ ಗ್ರಂಥದ ಅಗತ್ಯವಿಲ್ಲ ಎನ್ನುವುದು ಈ ಅಭಾವವಾದಷೇ ತಳೆಯ ಬಹುದಾದ ಇನ್ನೊಂದು ಪರಿ.

ಇವಲ್ಲದೆ ಇನ್ನೆರಡು ಧ್ವನಿವಿರೋಧಗಳಿವೆ. ಅವು ಯಾವವೆಂದರೆ "'ಧ್ವನಿ' ಯೆಂಬುದು ಭಾಕ್ತವಾದಕ್ಕೇ ಕೊಟ್ಟಿರುವ ಹೊಸ ಹೆಸರು. ಲಾಕ್ಷಣಿಕ ಶಬ್ದಾರ್ಥಕ್ಕೂ, ವ್ಯಂಗ್ಯಾರ್ಥಕ್ಕೂ ಯಾವ ವ್ಯತ್ಯಾಸವೂ ಇಲ್ಲ ; ಎರಡೂ ಒಂದೇ" ಎನ್ನುವುದೇ ಭಾಕ್ತವಾದ. ಇದನ್ನು ಹೇಳುವವರು 'ವಾಕ್ಯಾರ್ಥ' ಶಾಸ್ತ್ರದಲ್ಲಿ ಅಗ್ರೇಸರರಾದ ಮೀಮಾಂಸಕರು. ಇದರ ಒಂದು ಮುಂದಿನ ಮಾತೇದರೆ "ತಾತ್ಪರ್ಯ" ಅಥವಾ ವಿವಕ್ಷಿತಾರ್ಥದ ಬೋಧೆಯೆಲ್ಲ ಮುಖ್ಯಾರ್ಥದ ಬೆಂಬಳಿಯಲ್ಲಿ ಬರುವ ಲಕ್ಷಣಾ ವ್ಯಾಪಾರದಲ್ಲೇ ಅಂತರ್ಗತ ಎನ್ನುವುದು. 'ಧ್ವನಿ'ಯೆಂದರೆ ವಾಕ್ಯ 'ತಾತ್ಪರ್ಯ'ವಲ್ಲದೆ ಮತ್ತೇನು ?

ಇನ್ನು ಕಡೆಯದಾದ ಧ್ವನಿವಿರೋಧವೆಂದರೆ—"ಕಾವ್ಯದಲ್ಲಿ ಸಹೃದಯರು ಅನುಭವ ಮಾತ್ರದಿಂದ ಆಸ್ವಾದಿಸಬಲ್ಲ ವಿಶಿಷ್ಟವಾದ ಒಂದು ಸೌಂದರ್ಯಾಂಶ ಅಥವಾ ಆತ್ಮವಿದೆ. ಹಿಂದಿನವರು ಅದನ್ನು ವಿವರವಾಗಿ ಸ್ಪಷ್ಟಪಡಿಸಿಲ್ಲ ಎಂಬುದೂ ನಿಜವೇ. ಆದರೆ ಅದು ಮಾತಿಂದ ವರ್ಣಿಸಲಾರದಂತಹ ಅಸಾಧಾರಣ ಅನುಭವ. ಅನಿರ್ವಚನೀಯವಾದುದನ್ನು ನೀವು 'ಧ್ವನಿ' ಎಂಬ ಶಬ್ದ ಹೇಳಿದ್ದರಿಂದ ನಿರ್ವಚನ ಮಾಡಿದಂತೇನೂ ಆಗಲಿಲ್ಲ" ಎಂಬುದು. ಆಪಾತತ : ಈ ಧ್ವನಿಯು ಅಂಗೀಕಾರವಾದ ಅನಿರ್ವಚನೀಯವಾದ್ದನ್ನು ನಿರ್ವಚನ ಮಾಡುವ ಪ್ರಯತ್ನವನ್ನು ನಗೆಗೀಡು ಮಾಡುವುದೇ ಆಗಿದೆ.

ಹೀಗೆ ಐದು ಬಗೆಯ ಧ್ವನಿವಿರೋಧಗಳನ್ನು ಖಚಿತಪಡಿಸಿ, ಅಷ್ಟನ್ನೂ ಸ್ಪಷ್ಟವಾಗಿ ನಿರಾಕರಣ ಮಾಡಿದಾಗಷ್ಟೆ ನಿಜವಾದ 'ಧ್ವನಿ'ಯ ಸ್ವರೂಪದರ್ಶನ ನಮಗೆ ಲಭಿಸುತ್ತದೆ. ಈ ಕಾರ್ಯವನ್ನೇ ಧ್ವನ್ಯಾಲೋಕ ಅಷ್ಟೊಂದು ಸಮರ್ಥವಾಗಿ ನಿರ್ವಹಿಸಿದೆ.

ನಿರಾಕರಣೆಗೆ ಮುನ್ನ ಮುಖ್ಯವಾಗಿ ನಾವು ತತ್ತ್ವಚಿಂತನೆಯನ್ನು ಕೈಗೊಳ್ಳಬೇಕು. 'ಅಲಂಕಾರ' ಎಂಬುದು ಸಾಪೇಕ್ಷಶಬ್ದ. ಅಲಂಕಾರ್ಯವಿಲ್ಲದೆ ಅಲಂಕಾರವೆಂಬ ಉಕ್ತಿಯೇ ಸಲ್ಲ. 'ಅಲಂಕಾರ'ದ ಬಗೆಗಳನ್ನು ವಿಸ್ತರಿಸಿ ಬರೆದ ಪ್ರಾಚೀನರಲ್ಲಿ ಯಾರೊಬ್ಬರಾಗಲಿ 'ಅಲಂಕಾರ್ಯ'ದ ಸೌಂದರ್ಯವನ್ನು ಕುರಿತು ಆಳವಾದ ಚಿಂತನೆ ಮಾಡಿದ್ದಾರೆಯೆ ? ಅವರು ಮಾಡಲಿಲ್ಲವೆಂದು ಸ್ವತಃಸಿದ್ಧವಾಗುವುದು ಅವರು ಹೇಳುವ 'ಪ್ರೇಯಸ್', 'ರಸವದ್' ಮುಂತಾದ ಅಲಂಕಾರಗಳ ಸಂದರ್ಭದಲ್ಲಿ. ಪರಿಪುಷ್ಟವಾದ ರಸ–ಭಾವಗಳು ಎಂದೂ ವಾಚ್ಯವಾಗಲಾರವು ; ಅವು ವ್ಯಂಗ್ಯವಾಗಿಯೇ ಸಹೃದಯನಿಗೆ ಪ್ರತೀತವಾಗುವಂಥವು. ವಾಚ್ಯವಾಗಲು ಶಕ್ಯವಿದ್ದರೆ 'ಶೃಂಗಾರ' ಮುಂತಾದ ಶಬ್ದಗಳಿಂದ ರಸಗಳು ವಾಚ್ಯವಾಗಬೇಕಾಗಿತ್ತು. ಆದರೆ 'ಶೃಂಗಾರ' ಎಂಬ ಶಬ್ದದ ಉಚ್ಚಾರದಿಂದ ಯಾವ ಸಹೃದಯನ ಹೃದಯದಲ್ಲೂ ಪ್ರೇಮರಸದ ಅನುಭವ ಬರುವುದಿಲ್ಲ. ಎಂದಮೇಲೆ ಅವು ಎಂದೂ ವಾಚ್ಯವಲ್ಲವೆಂದಾಯಿತು. ಕೇವಲ

ವ್ಯಂಗ್ಯವಾದ ರಸಾದಿಗಳು ಕೂಡ ವಾಚ್ಯವಾದ ಉಪಮಾದಿ ಅಲಂಕಾರಗಳಂತೆ, 'ಅಲಂಕಾರ' ಎನಿಸುವುದಾದರೆ ಈ ಪರಿಭಾಷೆಯೇ ಅಪ್ರಬುದ್ಧ ಆಲೋಚನೆಯ ಕುರುಹಾಗುತ್ತದೆ. ರಸ ಎಂದೂ ವಾಚ್ಯಾಲಂಕಾರವಲ್ಲ ; ಅದು ಕೇವಲ ವ್ಯಂಗ್ಯವಾದ ಅಲಂಕಾರ್ಯ. ಈ ತಾತ್ತ್ವಿಕ ಆಲೋಚನೆಯಿಲ್ಲದವರು ಎಲ್ಲವನ್ನೂ ಸಾರಾಸಗಟಾಗಿ 'ಅಲಂಕಾರ'ವೆಂದು ಕರೆದರೆನ್ನದೆ ವಿಧಿಯಿಲ್ಲ. ಆದ್ದರಿಂದ ಹೊಸ ಚಿಂತನೆಗೆ ಒತ್ತುಕೊಟ್ಟು ತೋರಿಸುವ ಸಲುವಾಗಿ 'ಧ್ವನಿ'ಯೆಂಬ ಹೊಸ ಪಾರಿಭಾಷಿಕ ಪ್ರಕ್ರಿಯೆಯ ಅಗತ್ಯ ಬೀಳುತ್ತದೆ. ರಸಾದಿಗಳು ಪ್ರಧಾನವಾಗಿದ್ದಾಗ ಎಂದೂ 'ಅಲಂಕಾರ'ವಲ್ಲ ; ಧ್ವನಿಯೇ ಎಂಬ ತೀರ್ಮಾನ ಸಿದ್ಧಿಸುತ್ತದೆ.

ಹೀಗೆ 'ಧ್ವನಿ'ಯ ಕ್ಷೇತ್ರದ ವ್ಯಾಪ್ತಿ ಯಾವಾಗ ರಸಾದಿಗಳ ಅನಂತ ವೈಶಾಲ್ಯವನ್ನೆಲ್ಲ ಒಳಗೊಳ್ಳುವಷ್ಟಿದೆಯೋ, ಆವಾಗ 'ಅಲಂಕಾರ' ಕ್ಷೇತ್ರದ ಸೀಮಿತತ್ವ ಅಥವಾ ಪರಿಮಿತತ್ವದ ಕಲ್ಪನೆಯೂ ನಮಗೆ ಬರುತ್ತದೆ. ವಾಚ್ಯ-ಸೌಂದರ್ಯದ ಪ್ರಕಾರಗಳಿಗೆ ಮಾತ್ರ 'ಅಲಂಕಾರ' ಎಂಬ ಹೆಸರು ಅನ್ವಯಿಸಬಹುದೇ ಹೊರತು ವ್ಯಂಗ್ಯ-ಸೌಂದರ್ಯದ ಪ್ರಕಾರಗಳಿಗಲ್ಲ ಎಂಬುದೂ ಮನವರಿಕೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ವ್ಯಂಗ್ಯ-ಸಹಕೃತವಾದ ವಾಚ್ಯಾರ್ಥವಿರುವ 'ಪರ್ಯಾಯೋಕ್ತ', ಅಪ್ರಸ್ತುತ-ಪ್ರಶಂಸಾ' ಮುಂತಾದ ಎಡೆಗಳು ಕೂಡ ಪ್ರಾಚೀನರ ದೃಷ್ಟಿಯಿಂದ ವಾಚ್ಯ-ಪ್ರಾಧಾನ್ಯದ ಸ್ಥಳಗಳಾಗುತ್ತವೆಯೇ ಹೊರತು ವ್ಯಂಗ್ಯ-ಪ್ರಾಧಾನ್ಯದ ಸ್ಥಳಗಳಲ್ಲ. ಸೌಂದರ್ಯ ದೃಷ್ಟಿಯಿಂದ ವಾಚ್ಯದ ಚಮತ್ಕಾರವೇ ವ್ಯಂಗ್ಯದ ಚಮತ್ಕಾರಕ್ಕಿಂತ ಹೆಚ್ಚೆಂಬ ಭಾವನೆ ಹಿಂದಿನವರಿಗೆ ಇತ್ತೆಂದೇ ಅವರು ಅವಕ್ಕೆ ಹೆಸರುಗಳನ್ನು ಅನ್ವರ್ಥವಾಗಿ ಕೊಟ್ಟಿದ್ದಾರೆ. ಉದಾಹರಣೆಗೆ, 'ಅಪ್ರಸ್ತುತ-ಪ್ರಶಂಸೆ'ಯೆಂಬ ಹೆಸರನ್ನು ನೋಡಿ. ಅಪ್ರಸ್ತುತವಾದದ್ದು ವಾಚ್ಯಾರ್ಥ ; ಪ್ರಸ್ತುತವೇ ವ್ಯಂಗ್ಯಾರ್ಥ. ಅಲಂಕಾರದ ಹೆಸರು ವಾಚ್ಯವನ್ನಾಧರಿಸಿದೆ, ವ್ಯಂಗ್ಯವನ್ನಲ್ಲ. ಹಾಗೆಯೇ 'ಸಮಾಸೋಕ್ತಿ'; 'ಪರ್ಯಾಯೋಕ್ತ'—ಇತ್ಯಾದಿಗಳು ಕೂಡ. ವಿಶೇಷಣ ಸಾಮ್ಯದ ಮೇಲಿಂದ ಇನ್ನೊಂದರ ವ್ಯವಹಾರವನ್ನು ಪ್ರಕೃತ ವಸ್ತುವಿಗೆ ಸಮಾರೋಪ ಮಾಡುವದೇ 'ಸಮಾಸೋಕ್ತಿ'. ಇನ್ನೊಂದರ ವ್ಯವಹಾರ ವ್ಯಂಗ್ಯ : ಸಮಾರೋಪದ ಸಂಕ್ಷಿಪ್ತ ಉಕ್ತಿ ವಾಚ್ಯ ; ಇಲ್ಲಿಯೂ ಹೆಸರು ವಾಚ್ಯವನ್ನಾಧರಿಸಿದೆ. 'ಪರ್ಯಾಯೋಕ್ತ'ದಲ್ಲಿ ಒಂದೇ ವಸ್ತು ವಾಚ್ಯವೂ ಆಗಿರುತ್ತದೆ. ವ್ಯಂಗ್ಯವೂ ಆಗಿರುತ್ತದೆ. ಬಳಸಿ ಬಳಸಿ ಹೇಳಿದ ವಾಚ್ಯದಲ್ಲಿಯೇ ಚಮತ್ಕಾರಾಂಶ. ಆದ್ದರಿಂದ ಹೆಸರು ವಾಚ್ಯವನ್ನಾಧರಿಸಿ 'ಪರ್ಯಾಯೋಕ್ತ' ಎಂದಾಗಿದೆ. ಹೀಗೆ ಪ್ರಾಚೀನರ 'ಅಲಂಕಾರ'ವೆಂಬ ಪರಿಕಲ್ಪನೆ ಕೇವಲ ಪ್ರಧಾನವಾಚ್ಯ-ಸೌಂದರ್ಯಕ್ಕೆ ಪರಿಸೀಮಿತವೆಂದು ನಮಗೆ ಪರೀಕ್ಷಿಸಿದಾಗ ಕಾಣಬರುತ್ತದೆ. ಹೇಗೆ ತಾನೆ ಪ್ರಧಾನವಾದ ವ್ಯಂಗ್ಯ-ಸೌಂದರ್ಯವನ್ನು ಆಧರಿಸಿರುವ 'ಧ್ವನಿ'ಗೆ ಅದು ಅಂತರ್ಭಾವಕವಾದೀತು ? ಅಲಂಕಾರವೆಲ್ಲ ಕಾವ್ಯದ ಶಬ್ದಾರ್ಥರೂಪೀ ಶರೀರದ ಸೌಂದರ್ಯವನ್ನಷ್ಟೇ

ವಿವರಿಸಬಲ್ಲದು. ಎಂದೂ 'ಅಲಂಕಾರ' ಕಾವ್ಯದ ಆತ್ಮವಾಗಲಾರದು ; ಆತ್ಮವನ್ನು ವಿವರಿಸಲೂ ಆರದು. ಕಾವ್ಯದ ಆತ್ಮ 'ಧ್ವನಿ'ಯಷ್ಟೇ ಆಗಬಲ್ಲದು. ರಸವಿಲ್ಲದಾಗ ಒಂದು ಕವಿರಚನೆಗೆ ಕಾವ್ಯತ್ವವೇ ಸಿದ್ಧಿಸುವಂತಿಲ್ಲ, ರಸ-ಧ್ವನಿ ಆತ್ಮವಲ್ಲವೆಂದ ಮೇಲೆ. ಆದರೆ ರಸವಿದ್ದಾಗ, ಒಂದಾನೊಮ್ಮೆ ಅಲಂಕಾರವಿಲ್ಲದಿದ್ದರೂ ಕಾವ್ಯತ್ವಸಿದ್ಧಿಗೆ ಅಡ್ಡಿಯೇನೂ ಇಲ್ಲ.' ಪರ್ಯಾಯೋಕ್ತ'ದಿಗಳಲ್ಲಿ ವ್ಯಂಗ್ಯವಸ್ತುವಿದ್ದರೂ, ಅದು ಪ್ರಧಾನವಾಗಿರದೆ, ವಾಚ್ಯ-ಸೌಂದರ್ಯಕ್ಕೆ ಪೋಷಕವಾಗಿ, ತನ್ನನ್ನು ಗುಣೀಭೂತಗೊಳಿಸಿಕೊಳ್ಳುವುದರಿಂದ ಅವನ್ನೆಲ್ಲ 'ಗುಣೀಭೂತ ವ್ಯಂಗ್ಯ' ಅಲಂಕಾರಗಳೆಂದೇ ಪರಿಗಣಿಸಬೇಕು. ಇಲ್ಲಿ ಅಲಂಕಾರತ್ವ ವಿರುವುದು ಪ್ರಧಾನ ವಾಚ್ಯದಲ್ಲಿ ಅಥವಾ ವಾಚ್ಯ-ವಸ್ತುವಿನ ಹಾಗು ಗುಣೀಭೂತವಾದ ವ್ಯಂಗ್ಯವಸ್ತುವಿನಲ್ಲಿ ಎಂಬುದನ್ನು ಮರೆಯಬಾರದು. ಇದೇ ನ್ಯಾಯವನ್ನು ವಿಸ್ತರಿಸಿದರೆ, ರಸಾದಿಗಳು ಕೂಡ ವಾಚ್ಯವಸ್ತು-ಸೌಂದರ್ಯಕ್ಕೆ ಗುಣೀಭೂತವೆನಿಸುವ ಸಂದರ್ಭಗಳಲ್ಲಿ 'ಧ್ವನಿ'ಯೆನಿಸಲಾರವು ; 'ರಸವದಲಂಕಾರ' ಎಂದೇ ಪರಿಗಣಿಸಬಹುದು.

ಇನ್ನೊಂದು ಮುಖ್ಯವಾದ ಸಂಗತಿಯೆಂದರೆ ಶರೀರ, ಆತ್ಮ ಎರಡೂ ಕಾವ್ಯಕ್ಕೆ ಅನಿವಾರ್ಯ ಅಗತ್ಯಗಳಾದ ಎರಡು ಮುಖಗಳು. ಎರಡರಲ್ಲೂ ಸೌಂದರ್ಯವಿರಬೇಕು. ಆದರೆ ಆತ್ಮಸೌಂದರ್ಯ ಮುಖ್ಯ ; ಶರೀರದ ಸೌಂದರ್ಯ ಅದಕ್ಕೆ ಅಂಗ ಅಥವಾ ಪೋಷಕ. ವಾಚ್ಯಾಲಂಕಾರಗಳ ಸೌಂದರ್ಯಕ್ಕೆ ಕೂಡ ನಿಜವಾದ ಮೂಲಕಾರಣ ಯಾವುದೆಂದರೆ ಅಲಂಕಾರ್ಯವಾದ ರಸದ ಸೌಂದರ್ಯವೇ ಎಂಬುದೂ ಇದರಿಂದ ಅರಿವಿಗೆ ಬರುತ್ತದೆ. ರಸದ ಆವೇಶದಲ್ಲಿ ಪರವಶನಾದ ಮಹಾಕವಿಯ ಪ್ರತಿಭೆಯಲ್ಲಿ ಮಾತ್ರ 'ನಾ ಮುಂಚೆ' 'ತಾ ಮುಂಚೆ' ಎಂದು ನಾನಾ ಅಲಂಕಾರಗಳೆಲ್ಲ ಸಾಲುಗಟ್ಟಿ ಮಿಂಚುತ್ತವೆ. ಇದು ಕವಿಯ ದೃಷ್ಟಿಯಿಂದ ಹೇಳಿದ ಮಾತು. ಸಹೃದಯನ ಪ್ರತೀತಿ ಯಲ್ಲಂತೂ ಮೊದಲು ಅವನನ್ನು ಮೆಚ್ಚಿಸುವುದೇ ರಸದ ಸೌಂದರ್ಯ ; ಅಂತೆಯೇ ಅದು ಅಲಕ್ಷ್ಯ-ಕ್ರಮ ವ್ಯಂಗ್ಯ. ಬಳಿಕ ಸಾವಕಾಶವಾಗಿ ಅವನು ವಾಚ್ಯ ಚಮತ್ಕಾರವನ್ನು ಕ್ರಮಕ್ರಮವಾಗಿ ಗುರುತಿಸುತ್ತಾನೆ. ವ್ಯಂಗ್ಯ ವಸ್ತುವನ್ನು ಪರಾಮರ್ಶಿಸುವಾಗಲೂ ವಾಚ್ಯ-ವ್ಯಂಗ್ಯಗಳ ನಡುವಣ ಕ್ರಮ ಸಂಲಕ್ಷ್ಯವಾಗಿಯೇ ಇರುತ್ತದೆ. ಯಾವ ರಸಾದಿಗಳ ಅಭಿವ್ಯಕ್ತಿ ಕಾಲದಲ್ಲಿ ಅಪ್ರಯತ್ನವಾಗಿ ಕವಿ ವಾಚ್ಯ ಚಮತ್ಕಾರವನ್ನು ಕೂಡ ಸಾಧಿಸುವನೋ, ಅವಷ್ಟೇ ಸಹಜವಾಗಿ ಸಹೃದಯನ ಮೆಚ್ಚುಗೆ ಗಳಿಸುವವು. ಕೇವಲ ಬುದ್ಧಿಯ ಕಸರತ್ತಿನಿಂದ, ಬಹಳ ಶ್ರಮಪಟ್ಟು ದುಷ್ಕರಾಲಂಕಾರಗಳಾದ ಯಮಕ-ಶ್ಲೇಷಾದಿಗಳನ್ನು ಕವಿ ಬಳಸಿದಾಗ, ಕವಿಯ ವ್ಯುತ್ಪತ್ತಿಗೆ ಸಹೃದಯನು ಬೆರಗಾಗಬಹುದೇ ಹೊರತು, ರಸವತ್ಕವಿತೆಯನ್ನು ಹೃತ್ಪೂರ್ವಕವಾಗಿ ಮೆಚ್ಚುವಂತೆ ಮೆಚ್ಚಲಾರನು. ಹೀಗೆ ಅಲಂಕಾರಗಳ ಪ್ರಯೋಗಕ್ಕೆ ಕೂಡ ಔಚಿತ್ಯವನ್ನು ಒದಗಿಸುವ ನಿಯಾಮಕವೇ 'ರಸ-ಧ್ವನಿ'ಯ ಮರ್ಮ. ರಸದ ಪ್ರಭಾವದಿಂದ 'ಪುನರುಕ್ತಿ'ಯೇ ಮುಂತಾದ ದೋಷಗಳು ಕೂಡ ದೋಷತ್ವವನ್ನು ಕಳೆದುಕೊಂಡು 'ಗುಣ'ಗಳ ದರ್ಜೆ

ಗೇರಬಹುದು. ಹಿಂದಿನವರಿಗೆ ಕೂಡ ಕಾವ್ಯದಲ್ಲಿ 'ಅನಿತ್ಯದೋಷ'ಗಳ ವಿಷಯದ ಅರಿವಿತ್ತು ; ಆದರೆ ಆ ಅನಿತ್ಯತೆ ಏತರಿಂದ ? ಎಂದರೆ ರಸದ ಪ್ರಭಾವದಿಂದ ಎಂಬ ಸೂಕ್ಷ್ಮ ಉತ್ತರ ಹೊಳೆದಿರಲಿಲ್ಲ ಅಷ್ಟೆ !

ಇನ್ನು ಉಳಿದ 'ಅಲಂಕಾರ-ಧ್ವನಿ'ಯ ವಿಷಯವೂ ಹಾಗೆಯೇ. ಪ್ರಾಚೀನರಿಗೆ ರೂಪಕ-ದೀಪಕಾದಿಗಳಲ್ಲೆಲ್ಲ ವ್ಯಂಗ್ಯ ಉಪಮಾಲಂಕಾರವಿದೆಯೆಂಬ ಕಲ್ಪನೆಯಿತ್ತು. ಆದರೆ ಅಲ್ಲೆಲ್ಲ ವ್ಯಂಗ್ಯ-ಉಪಮೆಯೇ ಸೌಂದರ್ಯ ದೃಷ್ಟಿಯಿಂದ ಪ್ರಧಾನವೆಂಬ ಕಲ್ಪನೆ ಮಾತ್ರ ಇರಲಿಲ್ಲ. ಇದ್ದಿದ್ದರೆ ಅವರು ವಾಚ್ಯ ಸೌಂದರ್ಯವನ್ನಾಧರಿಸಿ 'ರೂಪಕ', 'ದೀಪಕ' ಮುಂತಾದ ಹೆಸರುಗಳನ್ನೇ ಕೊಡುತ್ತಿರಲಿಲ್ಲ. ಧ್ವನಿವಾದಿಗಳ ದೃಷ್ಟಿಯಲ್ಲಿ ಕೂಡ ಸೌಂದರ್ಯದ ಪ್ರಾಧಾನ್ಯ ಅಲ್ಲೆಲ್ಲ ವಾಚ್ಯಕ್ಕೇ ಹೊರತು ವ್ಯಂಗ್ಯಾಲಂಕಾರಕ್ಕಲ್ಲ. ಹಾಗಾದರೆ ನಿಜವಾಗಿ 'ಅಲಂಕಾರ-ಧ್ವನಿ'ಗೆ ಸ್ಥಳ ಯಾವದು ? ಎಂಬ ಪ್ರಶ್ನೆಯೇಳುತ್ತದೆ. ಯಾವಾಗ ಶಬ್ದಶಕ್ತಿಯಿಂದ ಎರಡರ್ಥಗಳು ಏಕಕಾಲದಲ್ಲಿ ಭಾಸವಾಗಿ, ಒಂದಕ್ಕೊಂದು ಸಂಬಂಧ ಕಲ್ಪಿಸುವುದಕ್ಕಾಗಿ ಸಹೃದಯನು ಸ್ವಬುದ್ಧಿಯಿಂದ ಸಾದೃಶ್ಯ, ವಿರೋಧ, ವ್ಯತಿರೇಕ—ಮುಂತಾದ ವ್ಯಂಗ್ಯ ಅಲಂಕಾರಗಳನ್ನು ಕಲ್ಪಿಸಿಕೊಳ್ಳಬೇಕಾಗುವುದೋ, ಅಂತಹ ವಿರಲ ಸಂದರ್ಭಗಳಲ್ಲಿ ಮಾತ್ರ 'ಧ್ವನಿ'ವಾದಿಗಳಿಗೆ ಸಮ್ಮತವಾದ ಅಲಂಕಾರ ಧ್ವನಿಯಿರುತ್ತದೆ. ಎಂದಮೇಲೆ ಪ್ರಾಚೀನಲಾಕ್ಷಣಿಕರಿಗೆ ಕೂಡ 'ಅಲಂಕಾರ-ಧ್ವನಿ' ಗೊತ್ತೇ ಇತ್ತೆಂದಾಗಲಿ, ಅದಕ್ಕವರು ಚಾರುತ್ವಾತಿಶಯವನ್ನು ಹೇಳಿದ್ದರೆಂದಾಗಲಿ, ಧ್ವನಿವಿರೋಧಿಯು ವಾದಿಸಲು ಲೇಶಮಾತ್ರವೂ ಅವಕಾಶವಿಲ್ಲ.

ಧ್ವನಿವಾದಿಯು ವ್ಯಾಪಕವಾಗಿ ವಸ್ತು-ಅಲಂಕಾರ-ರಸಾದಿಗಳೆಂಬ ತ್ರಿವಿಧ ಧ್ವನಿ ಪ್ರಕಾರಗಳನ್ನೊಪ್ಪಿದರೂ ಕೂಡ, ವಸ್ತುತಃ ವಸ್ತು ಅಲಂಕಾರ ಧ್ವನಿಗಳೆರಡೂ ಪರ್ಯವಸಾನದಲ್ಲಿ ರಸದೃಷ್ಟಿಗೇ ಪೋಷಕವಾಗುವುದರಿಂದ, ರಸದೃಷ್ಟಿಯನ್ನು ಅತ್ತ ಸರಿಸಿದಾಗ ಮಾತ್ರ ಮಿಕ್ಕ ಅಪೆರಡರ ಪ್ರತೀತಿ ಬರುವುದರಿಂದ ಮತ್ತು ರಸದೃಷ್ಟಿಯನ್ನು ಅವಲಂಬಿಸಿದರೆ ಅವುಗಳ ಪ್ರಾಧಾನ್ಯ ತಪ್ಪುವುದರಿಂದ, ನಿಜವಾಗಿ "ಧ್ವನಿ ಕಾವ್ಯದ ಆತ್ಮ"ವೆನ್ನುವಾಗ "ರಸ-ಧ್ವನಿಯೇ ಕಾವ್ಯದ ಆತ್ಮ" ಎಂಬ ನವೋನವ ಸಿದ್ಧಾಂತ ಅಬಾಧಿತವಾಗಿ ನಮ್ಮೆದುರಿಗೆ ನಿಲ್ಲುತ್ತದೆ. ಇದನ್ನು ಒಪ್ಪದವರು ರಸಜ್ಞರೇ ಅಲ್ಲ ಎಂದು ಬೇರೆಯಾಗಿ ಹೇಳಬೇಕಾಗಿಲ್ಲ.

ಇಲ್ಲಿಯವರೆಗೆ, ರಸಧ್ವನಿಯ ಅಂತರ್ಭಾವ ಶಬ್ದಾರ್ಥಗಳ 'ಅಲಂಕಾರ' ಗಳಲ್ಲಿ ಸಾಧ್ಯವಿಲ್ಲವೆಂಬುದನ್ನು ನೋಡಲಾಯಿತು. ಈಗ 'ಗುಣಗಳಲ್ಲಿ' ಸಾಧ್ಯವೆ ಎಂಬ ಮುಂದಿನ ಪ್ರಶ್ನೆಗೆ ತಿರುಗೋಣ. ಗುಣಗಳಿಗೆ ಎಂದರೆ ಮಾಧುರ್ಯಾದಿಗಳಿಗೆ ಆಲಂಬನ ಯಾವದು ? ಸಾಮಾನ್ಯವಾಗಿ ಶಬ್ದಾರ್ಥಗಳೇ ಎಂದರೂ, ಈ ಮೊದಲು ಹೇಳಿದಂತೆ ಇಡಿಯ ಕವಿನಿರ್ಮಿತ ಶಬ್ದಾರ್ಥಮಯ ಸಾಮಗ್ರಿಯನ್ನೆಲ್ಲ ವ್ಯಾಪಿಸುವ 'ಬಂಧ' ಅಥವಾ 'ರಚನೆ' ಅಥವಾ 'ಸಂಘಟನೆ' ಅಥವಾ 'ರೀತಿ'ಯೇ ಗುಣಗಳಿಗೆ

ಆಲಂಬನ. ಇಂಪಾದ ಅಥವಾ ಪರುಷ ಅಕ್ಷರಗಳ ಆಯ್ಕೆ, ಯೋಜನೆ, ಸಮಾಸ-ಅಸಮಾಸಗಳ ಪದವರಿತ ಬಳಕೆ ಮೊದಲಾದವೆಲ್ಲ ಈ 'ಬಂಧ' ದಲ್ಲಿ ಅಡಕವಾಗುತ್ತವೆ. ಯಾವಾಗ ಯಾವ ಸಂಘಟನೆ ಉಚಿತ ? ಯಾವಾಗ ಲಲಿತ ವರ್ಣಗಳಿರಬೇಕು ? ಯಾವಾಗ ಯಾವ ಪರುಷವರ್ಣಗಳಿರಬೇಕು ? ದೀರ್ಘಸಮಾಸ ಯಾವ ಸನ್ನಿವೇಶದಲ್ಲಿ ಯುಕ್ತ ? ಯಾವ ಸನ್ನಿವೇಶದಲ್ಲಿ ಅಯುಕ್ತ ? ಎಂಬ ಮೂಲಭೂತ ಪ್ರಶ್ನೆ ಹಿಂದಿನ ವರೆಗೆ ಬಂದಿತ್ತೆ ಅಥವಾ ಇಲ್ಲವೆ ? ಎಂಬುದು ಧ್ವನಿಕಾರನ ಶಂಕೆ. ಇಂತಹ ರೀತಿ ಅಥವಾ ರಚನೆಯಲ್ಲಿ ಇಂತಹ ಗುಣಗಳಿರುತ್ತವೆಯೆಂದು ದಂಡಿ-ವಾಮನಾದಿಗಳು ವಿವರಿಸಿರುವುದು ಸರಿ. ಆದರೆ ಆ ರೀತಿಭೇದಕ್ಕೆ ನಿಯಾಮಕ ಯಾವದು ಎಂಬ ಪ್ರಶ್ನೆ ಕೇಳಿ, ಉತ್ತರ ಕಂಡು ಕೊಂಡಿದ್ದರೆ ಆಗ ಅವರ ಚಿಂತನೆಯೂ ಸಮರ್ಪಕವಾಗುತ್ತಿತ್ತು. ಅವರು ತತ್ತ್ವರಹಸ್ಯದ ಮಿಂಚನ್ನು ಕಂಡರೂ ಕಾಣದವರಂತೆ ವಿವರಿಸದೆ ಕೈ ಬಿಟ್ಟರು. ಮೃದು-ಮಧುರ ರಸಗಳಿದ್ದಾಗ ಸುಕುಮಾರ ವರ್ಣಗಳೂ ಸಮಾಸರಾಹಿತ್ಯವೂ ಅಪೇಕ್ಷಿತ ; ಪ್ರದೀಪ್ತ ರೌದ್ರಾದಿ ರಸಗಳ ಸನ್ನಿವೇಶದಲ್ಲಿ ಪರುಷವರ್ಣ, ಓಜೋಗುಣ, ದೀರ್ಘ ಸಮಾಸಗಳೇ ಉಪಾದೇಯ. ಈ ಮರ್ಮವನ್ನು ಅವರು ಹೇಳಲಿಲ್ಲ. ರಸಗಳನ್ನೂ ಇತರ ಗುಣಗಳಂತೆ ಒಂದು ಗುಣವೆಂದು ತಮ್ಮ ಚಿಂತನೆಯನ್ನು ನಿಲ್ಲಿಸಿದರು. ಗುಣಾತಿರಿಕ್ತವಾಗಿದ್ದುಕೊಂಡು, ಎಲ್ಲ ಗುಣಗಳಿಗೂ ಪ್ರಾಣಸ್ಪಂದನ ವನ್ನೊದಗಿಸುವ ಕೇಂದ್ರತತ್ತ್ವವೇ ರಸವೆಂಬುದು ಅವರಿಗೂ ತಿಳಿಯದೆ ಹೋಯಿತು. ಧ್ವನಿವಾದಿಗಳು ವಾಮನಾದಿಗಳ ರೀತಿ-ತತ್ತ್ವವನ್ನಾಗಲಿ, ಗುಣಗಳನ್ನಾಗಲಿ ಅಲ್ಲಗಳೆಯು ವುದಿಲ್ಲ. ಅದಕ್ಕೆ ಬದಲು, ಆ ಗುಣಗಳು ಬಂಧನಿಷ್ಠವಿದ್ದರೂ ಗುಣಗಳ ಆಶ್ರಯ ಬಂಧವಲ್ಲ ; ಅದಕ್ಕೂ ಆಚೆಗೆ ಗುಪ್ತವಾಗಿರುವ ರಸ ಎಂದು ತೀರ್ಮಾನಿಸುತ್ತಾರೆ. ಕಾವ್ಯಶರೀರದ ಬಾಹ್ಯಸೌಂದರ್ಯಪ್ರಕಾರಗಳು ಅಲಂಕಾರಗಳಾದರೆ ಕಾವ್ಯಶರೀರದ ಅಂತರಂಗಸೌಂದರ್ಯದ ಆವಿಷ್ಕಾರಗಳೇ ಗುಣಗಳು. ಆದ್ದರಿಂದಲೇ ಅವನ್ನು 'ರಸಧರ್ಮ'ಗಳೆಂದು ತಿಳಿಯಬೇಕೇ ಹೊರತು, ವಾಮನಾದಿಗಳು ಭಾವಿಸಿದಂತೆ ರಚನಾಧರ್ಮಗಳೆಂದು ಭ್ರಮಿಸಲಾಗದು. ಹೀಗೆ ಪ್ರಾಚೀನರು ಹೇಳಿದ ಅಲಂಕಾರಕೃತ ಕಾವ್ಯಸೌಂದರ್ಯ, ಗುಣ-ಕೃತ ಕಾವ್ಯಸೌಂದರ್ಯಗಳೆರಡೂ ಅಲಂಕಾರ್ಯವಾದ ರಸದ ಸೌಂದರ್ಯಕ್ಕೆ ಅಂಗಗಳೆಂಬುದು ಧ್ವನಿ-ವಾದದಿಂದ ಮಾತ್ರ ಬೆಳಕಿಗೆ ಬರುತ್ತದೆ. ಧ್ವನಿಯ ಕ್ಷೇತ್ರವಿಸ್ತಾರ ಅವಕ್ಕಿಂತ ಹೆಚ್ಚು ವ್ಯಾಪಕವಾದ್ದರಿಂದ ವ್ಯಾಪಕವಾದದ್ದು ಪರಿಮಿತವಾದದ್ದರಲ್ಲಿ ಅಂತರ್ಭಾವಗೊಳ್ಳುವುದೆಂತು ? ಎಂದಿಗೂ ಶಕ್ಯವಿಲ್ಲದ ಮಾತು.

ಇಲ್ಲಿಯವರೆಗೂ ಪ್ರಾಚೀನ ಕಾವ್ಯಲಾಕ್ಷಣಿಕರ ಪರಿಕಲ್ಪನೆಗಳು ತತ್ತ್ವದೂರವೆಂದೂ, ಧ್ವನ್ಯಭಾವದಿಂದ ಸಹೃದಯರ ಹೃದಯಾನುಭವದ ವರ್ಣನೆ ಅಸಾಧ್ಯವೆಂದೂ ತೋರಿಸಲಾಯಿತು. ಮುಂದಿನ ಎರಡು ಧ್ವನಿವಿರೋಧಗಳು ಶಾಸ್ತ್ರಕಾರರ ಚಿಂತನೆಯ

ದೃಷ್ಟಿಯಿಂದ ಪ್ರೇರಿತವಾದಂಥವು. ಅವನ್ನು ವಿವೇಚಿಸುವ ಮುನ್ನ ಎಲ್ಲಕ್ಕೂ ಮೊದಲು ಕಾರಿಕೆಯಲ್ಲಿ ಹೇಳಿದ 'ಧ್ವನಿ' ಶಬ್ದವಿರೋಧದ ಬಗ್ಗೆಯೂ ಒಂದು ಮಾತು ಇದೆ. 'ಧ್ವನಿ' ಶಬ್ದ ಆನಂದವರ್ಧನನಿಂದ ಮೊದಲು ಅಂಕಿತವಾದದ್ದೇನೂ ಅಲ್ಲ. ನಾವು ಮೇಲೆ ಹೇಳಿದ ವಿಶಾಲ ಅರ್ಥವ್ಯಾಪ್ತಿಯ ಸಮೇತ ಮಹಾವೈಯಾಕರಣಿಯಾದ ಭರ್ತೃಹರಿಯೇ ಆ ಶಬ್ದವನ್ನು ತನ್ನ ಸ್ಫೋಟವಾದದ ವಿವರಣಕಾಲದಲ್ಲಿ ಬಳಸಿದ್ದಾನೆ. ಎಲ್ಲ ವಿದ್ಯಾಸ್ಥಾನಗಳಿಗೂ ವ್ಯಾಕರಣವೇ ಮೂಲಭೂತ, ಹಾಗೂ ಪ್ರಧಾನ. ಆ ಶಾಸ್ತ್ರಜ್ಞರು ಪಾರಿಭಾಷಿಕವಾಗಿ ಬಳಸಿದ ಶಬ್ದವೇ 'ಧ್ವನಿ'. ಆ ಪಾರಿಭಾಷಿಕ ಶಬ್ದಕ್ಕೆ ಅರ್ಥವನ್ನು ಹಿಗ್ಗಿಸಿ ರಸಪ್ರತೀತಿಗೂ ಅನ್ವಯಿಸುವಂತೆ ಬಳಸಿದವನು ಆನಂದವರ್ಧನ. ಆದ್ದರಿಂದ ಸ್ವಕಪೋಲಕಲ್ಪಿತವೆಂಬ ದೋಷಕ್ಕೆ ಎಡೆಯಿಲ್ಲವೆಂದಾಯಿತು.

ಈಗ ಧ್ವನಿವಿರೋಧಿ ಶಾಸ್ತ್ರವೇತ್ತರಲ್ಲಿ ಪ್ರಬಲರಾದ ಭಾಕ್ತವಾದಿಗಳತ್ತ ತಿರುಗೋಣ. ಅವರು ಹೇಳುವ ಪ್ರಕಾರ ಶಬ್ದಗಳು ತಂತಮ್ಮ ಸಂಕೇತಿಕ ಅರ್ಥಗಳನ್ನು ನೇರವಾಗಿ ಬೋಧಿಸುವ ಶಬ್ದಶಕ್ತಿ 'ಅಭಿದಾ' ಅಥವಾ ವಾಚಕತ್ವ ; ನೇರವಾಗಿ ಸಂಕೇತಿಕವಲ್ಲದಿದ್ದರೂ, ಮುಖ್ಯಾರ್ಥ ಬಾಧಾಪ್ರಸಂಗದಲ್ಲಿ ಮುಖ್ಯಾರ್ಥಕ್ಕೆ ಒಂದಿಲ್ಲೊಂದು ರೀತಿ ಸಂಬದ್ಧವಾದ ಅಮುಖ್ಯಾರ್ಥವನ್ನು ಹೇಳುವ ಶಬ್ದಶಕ್ತಿ 'ಲಕ್ಷಣಾ' ಅಥವಾ 'ಭಕ್ತಿ' ಅಥವಾ 'ಗುಣವೃತ್ತಿ'. ಹೀಗೆ ಶಬ್ದಗಳಿಗೆ ವಾಕ್ಯದಲ್ಲಿ 'ಮುಖ್ಯ' 'ಅಮುಖ್ಯ' ಎಂಬ ಎರಡೇ ಶಕ್ತಿಗಳನ್ನೊಪ್ಪಿದರೆ ಭಾಷಾಪ್ರಯೋಗಗಳನ್ನೆಲ್ಲ ವಿವರಿಸಲು ಸಾಕಾಗುತ್ತದೆ. ಪದಾರ್ಥಗಳ ಜ್ಞಾನಾನಂತರ ಆಕಾಂಕ್ಷೆ, ಯೋಗ್ಯತೆ, ಸನ್ನಿಧಿಗಳ ಸಹಾಯದಿಂದ ಅನ್ವಯಮಾಡಿಕೊಂಡು ಒಂದು ಇಡಿಯ ವಾಕ್ಯಾರ್ಥದ ಅರಿವನ್ನು ಮಾಡಿಕೊಳ್ಳುತ್ತೇವೆ. ಈ ಅನ್ವಯ ಸಾಧಕವಾದುದನ್ನು ಕೆಲವರು ತಾತ್ಪರ್ಯಶಕ್ತಿಯೆನ್ನುವುದೂ ಉಂಟು. ವಕ್ತೃರಸ ಅಭಿಪ್ರಾಯವನ್ನೇ ತಾತ್ಪರ್ಯ ವೆನ್ನುವುದೂ ಉಂಟು. ಹೇಗೆ ಇರಲಿ. 'ಭಕ್ತಿ' ಮತ್ತು 'ತಾತ್ಪರ್ಯ' ಇತ್ಯಾದಿಗಳೆಲ್ಲ ಲೋಕದ ಹಾಗೂ ಶಾಸ್ತ್ರದ ಶಾಬ್ದ ವ್ಯವಹಾರವನ್ನಷ್ಟೇ ವಿವರಿಸಬಲ್ಲವು. ಅವು ಎಂದೂ ಕಾವ್ಯಮಾತ್ರ ಗೋಚರವಾದ, ಅಲೌಕಿಕವಾದ ರಸವೆಂಬ ಕಾವ್ಯಾರ್ಥವನ್ನು ವಿವರಿಸಲಾರವು. 'ಧ್ವನಿ' ಪದವಿಗೆ ಪ್ರಾಪ್ತವಾದ ರಸವನ್ನೂ ಈ ಶಕ್ತಿಗಳು ಸಾಧಿಸುವ ಹಾಗಿದ್ದರೆ ಲೋಕದ ಶಬ್ದವ್ಯವಹಾರಕ್ಕೂ ಕಾವ್ಯದ ಶಬ್ದವ್ಯವಹಾರಕ್ಕೂ ವ್ಯತ್ಯಾಸವೇ ಇಲ್ಲವಾದೀತು. ರಸಜ್ಞರಾದ ಸಹೃದಯರಿಗೆ ಮಾತ್ರ ಕಾವ್ಯರಸ ಗೋಚರವಾಗುತ್ತದೆಂಬುದು ತಪ್ಪಿ, ಶಬ್ದಾರ್ಥಜ್ಞಾನವುಳ್ಳ ಸಕಲರಿಗೂ—ಅವರು ರಸಿಕರಿರಲಿ, ಅರಸಿಕರೇ ಇರಲಿ—ಗೋಚರವೆನ್ನುವ ಪ್ರಸಂಗ ಬಂದೀತು. ಇದು ಅನುಭವವಿರುದ್ಧ. ಅಷ್ಟೇ ಅಲ್ಲದೆ, ವಾಕ್ಯದ ಮುಖ್ಯಾರ್ಥ ಸೌಂದರ್ಯವನ್ನು ಕೆಲವು ಅಲಂಕಾರಗಳು ನಿರೂಪಿಸುವಂತೆ ಅಮುಖ್ಯಾರ್ಥ ಸೌಂದರ್ಯವನ್ನು ಕೂಡ ಮತ್ತೆ ಕೆಲವು ಅಲಂಕಾರಗಳೇ ರೂಪಿಸುತ್ತವೆಂಬುದನ್ನು ಲಾಕ್ಷಣಿಕರೇ ತೋರಿಸಿದ್ದಾರೆ.

'ರೂಪಕ' ಎಂಬ ಅಲಂಕಾರದಲ್ಲಿ ಗುಣಮೂಲವಾದ ಸಾದೃಶ್ಯದಿಂದ ಉಪಮಾನೋಪಮೇಯಗಳ ಐಕ್ಯ ಆರೋಪಿತವಾಗಿರುತ್ತದೆ. ಹಾಗೆಯೇ 'ಸಾದೃಶ್ಯಾಲ್ಲಕ್ಷಣಾ ವಕ್ರೋಕ್ತಿಃ' ಎಂದು ವಾಮನನು ಸೂತ್ರವನ್ನೇ ಬರೆದಿದ್ದಾನೆ. ಇಂತಹ 'ಅಲಂಕಾರ'ಗಳು ಎಂದೂ 'ಅಲಂಕಾರ್ಯ'ವಾದ ರಸದ ಸೌಂದರ್ಯವನ್ನು ಗ್ರಹಿಸಲಾರವು ಎಂಬ ಸೂತ್ರವನ್ನು ಈಗಾಗಲೇ ವಿವರಿಸಿದ್ದಾಗಿದೆ.

ಕಾವ್ಯದಲ್ಲಿ ಶಬ್ದಗಳಿಗೆ ಮೊದಲ ವ್ಯಾಪಾರ ವಾಚಕತ್ವವಾದರೆ, ಅದು ಬಾಧಿತವಾದಾಗ ಮಾತ್ರ ಬರುವ ಲಕ್ಷಣೆ ಅಥವಾ ಗುಣವೃತ್ತಿಯೂ ಕೂಡ ಅದೇ ದರ್ಜೆಗೆ ಸೇರುವಂಥದು. ಲೋಕ-ಶಾಸ್ತ್ರ ವ್ಯವಹಾರದಲ್ಲಿ ಇವೆರಡರದೇ ರಾಜ್ಯ. ಆದರೆ ಕಾವ್ಯದಲ್ಲಿ ಇವುಗಳ ಪಟ್ಟ ಕೆಳಗಿನದು. ಇವು ತಮ್ಮ ಕಾರ್ಯವಾದೊಡನೆ ಹಿಂಜರಿದು ನಿಲ್ಲುತ್ತವೆ ; ಮುಂದಿನ ರಸವ್ಯಂಜನೆಯೆಂಬ ಮೂರನೆಯ ವ್ಯಾಪಾರಕ್ಕೆ ತಾವೇ ನಿಂತು ಪಟ್ಟ ಕಟ್ಟುತ್ತವೆ. ಗುಣವೃತ್ತಿಯ ಕೆಲವು ಸ್ಥಳಗಳಲ್ಲಿ ವಸ್ತುಧ್ವನಿ ವ್ಯಂಗ್ಯವಾಗಬಹುದು ; ಆದರೆ ವ್ಯಂಗ್ಯವಿಲ್ಲದ ಗುಣವೃತ್ತಿ ಸ್ಥಳಗಳೂ ಇರಬಹುದು. ಎಲ್ಲ ವ್ಯಂಗ್ಯಾರ್ಥದ ಬೆನ್ನ ಹಿಂದೆಯೂ ಒಂದು ವಾಚಕತ್ವದ ಇಲ್ಲವೆ ಗುಣವೃತ್ತಿಯ ಕೈವಾಡವಿರುತ್ತದೆ. ತಾತ್ಕಾಲಿಕವಾಗಿ, ಆದರೆ ಆ ಪ್ರಾಥಮಿಕ ಅರ್ಥಗಳಲ್ಲಿ ವಿಶ್ರಾಂತವಾಗದೆ, ರಸಿಕನ ಹೃದಯ ಅವೆರಡನ್ನೂ ಉಲ್ಲಂಘಿಸಿ ರಸಧ್ವನಿಯ ಅಥವಾ ಮೂರನೆಯ ವ್ಯಂಜನಾವ್ಯಾಪಾರದತ್ತ ಧಾವಿಸುತ್ತದೆ. ಹೀಗೆ ಭಕ್ತಿಧ್ವನಿಗಳಿಗೆ ಸ್ವರೂಪ-ಭೇದ, ವಿಷಯ-ಭೇದ, ಪರಿಣಾಮ-ಭೇದಗಳಿರುವುದರಿಂದ ಅವೆರಡಕ್ಕೂ ಐಕ್ಯ ಹೇಳುವುದು ಅಶಕ್ಯ.

ಕಡೆಯದಾಗಿ ಉಳಿದಿರುವ ಧ್ವನಿ-ವಿರೋಧವೇ ಅನಿರ್ವಚನೀಯತಾವಾದ. " 'ಧ್ವನಿ' ಎಂಬುದು ಅನಿರ್ವಚನೀಯವಾದ ಕಾವ್ಯರಹಸ್ಯ. ಎಂದಮೇಲೆ ಅದಕ್ಕಾಗಿ ಪುಸ್ತಕ ಬರೆದು ತತ್ತ್ವನಿರೂಪಣೆ ಮಾಡುವ ನಿಮ್ಮ ಕೆಲಸ ಅಸಂಭವ" ಎಂಬ ಈ ಟೀಕೆ ವಾದಕ್ಕಾಗಿ ಹೊರಟವನ ಉಕ್ತಿ ಕೌಶಲವನ್ನು ತೋರಿಸುತ್ತದೆಯೇ ಹೊರತು ಗಾಢವಾದ ಯಾವ ತತ್ತ್ವಚಿಂತನೆಯೂ ಅದರ ಹಿಂದಿಲ್ಲ. ಇಡಿಯ ಪುಸ್ತಕವನ್ನೋದುವ ಮೊದಲು ಅಂತಹ ಶಂಕೆ ಒಂದು ವೇಳೆ ಶಕ್ಯವೆನಿಸಿದರೂ, ಪುಸ್ತಕವನ್ನೋದಿ ಮುಗಿಸುವ ವೇಳೆಗೆ ಆ ಶಂಕೆಯಲ್ಲಿ ಹುರುಳಿಲ್ಲವೆಂಬುದು ತಾನೇ ತಿಳಿದುಬರುತ್ತದೆ. ಧ್ವನಿಯ ಅನೇಕಾನೇಕ ಭೇದ-ಪ್ರಭೇದಗಳನ್ನು, ಲಕ್ಷ್ಯ-ಲಕ್ಷಣ ಸಮನ್ವಯವನ್ನು ಅರಿತ ಮೇಲೆ ಧ್ವನಿ-ನಿರ್ವಚನ ಸಾಂಗೋಪಾಂಗವಾಗಿ ಇಲ್ಲಿ ಬಂದಿದೆಯೆಂದು ಮನದಟ್ಟಾಗಿ ಈ ಆಶಂಕೆಗೆ ಬುಡವೇ ಉಳಿಯುವುದಿಲ್ಲ.

ಇಷ್ಟು ಧ್ವನ್ಯಾಲೋಕ ಗ್ರಂಥದ ಉಪಕ್ರಮದಲ್ಲಿಯೇ ಬರುವ ಧ್ವನಿವಿರೋಧಗಳ ವಿವೇಚನೆಯಾಯಿತು. ಇನ್ನು ಮೂರನೆಯ ಉದ್ದ್ಯೋತದಲ್ಲಿ ದೀರ್ಘವಾಗಿಯೇ ಬರುವ ಇನ್ನೊಂದು ಧ್ವನಿ-ವಿರುದ್ಧವಾದವೆಂದರೆ "ಅನುಮಿತಿ-ವಾದ". ಇದರ

ಪುರಸ್ಕೃತರು ತಾರ್ಕಿಕರು. ಎಲ್ಲ ಶಾಬ್ದವ್ಯವಹಾರದಿಂದ ಒದಗುವ ಪ್ರತೀತಿಯನ್ನೂ ಅವರು ಶಾಸ್ತ್ರೀಯವಾಗಿ ಎರಡೇ ಶೀರ್ಶಿಕೆಯಲ್ಲಿ ಅಡಕ ಮಾಡುತ್ತಾರೆ : ೧. ಅಭಿಧೇಯ ; ೨. ಅನುಮೇಯ. ಮೊದಲನೆಯದು ಸಂಕೇತಿಕವಾದ ಮುಖ್ಯ ವಾಕ್ಯಾರ್ಥ. ಎರಡನೆಯದು ನಾವು ನಮ್ಮ ಊಹಾಪೋಹ ಸಾಮರ್ಥ್ಯದಿಂದ, ಸಂದರ್ಭಾದಿಗಳನ್ನು ಗಮನಿಸಿ ಕಾರ್ಯಕಾರಣಭಾವಕ್ಕೆ ಅನುಗುಣವಾಗಿ ಊಹಿಸಿ ಕೊಳ್ಳುವ ಅಂಶ, ಎಂದಮೇಲೆ ತ್ರಿವಿಧ-ಧ್ವನಿ ಕೂಡ ಅನುಮೇಯವೇ ಆಗುತ್ತದೆ. ವಾಚ್ಯಾರ್ಥಪ್ರತೀತಿ ಲಿಂಗಪ್ರತೀತಿಯೆನಿಸಿದರೆ ತನ್ಮೂಲಕ ಬರುವ ವ್ಯಂಗ್ಯಾರ್ಥ ಪ್ರತೀತಿಯೇ ಅನುಮಾನದ ಅಂಗವಾಗಿ ಲಿಂಗಪ್ರತೀತಿಯಾಗುತ್ತದೆ. ಇದು ತಾರ್ಕಿಕರ ವಿಶ್ಲೇಷಣೆ. ತಾರ್ಕಿಕರಿಗೆ ಸೌಂದರ್ಯದ ಕಲ್ಪನೆಯೇ ಅಗೋಚರವಾಗಿದ್ದರೆ ಆಶ್ಚರ್ಯ ವಿಲ್ಲ. ಕಾವ್ಯ ಸತ್ಯ ಲೌಕಿಕ ಸತ್ಯವಲ್ಲ ; ಕಲ್ಪನಾ ಸತ್ಯ. ಲೌಕಿಕ ಸತ್ಯವನ್ನಷ್ಟೇ ವಿವರಿಸಬಲ್ಲ ಅನುಮಾನ ಪ್ರಮಾಣ ಕಲ್ಪನಾಸತ್ಯವನ್ನು ಹೇಗೆ ಸಮರ್ಪಕವಾಗಿ ವಿವರಿಸೀತು ? ಅನುಮಾನ ಒಂದು ಬೌದ್ಧಿಕ ಕ್ರಿಯೆ ; ರಸಾನುಭವ ಒಂದು ಹೃದಯ ವೇದ್ಯವಾದ ಆಸ್ವಾದನೆ. ಎರಡಕ್ಕೂ ಅಜಗಜಾಂತರವಿದೆ. ಇನ್ನೂ ಒಂದು ಮಾತೆಂದರೆ, ಅನುಮಾನದಲ್ಲಿ ಬರುವ ಜ್ಞಾನ ಸರ್ವ ಅನುಮಾತೃಗಳಿಗೂ ಏಕರೀತಿಯಾಗಿದ್ದೇ ತೀರುತ್ತದೆ. ಆದರೆ ರಸಪ್ರತೀತಿ ಮಾತ್ರ ಸಕಲ ಪ್ರಮಾತೃಗಳಿಗೂ ಏಕರೀತಿ ಯಾಗಿರುವುದಿಲ್ಲ. ಸಹೃದಯರ ಸಂಸ್ಕಾರ ಹಾಗು ರುಚಿಭೇದದಿಂದ ಅವರ ರಸಪ್ರತೀತಿಯಲ್ಲೂ ವೈರೂಪ್ಯಗಳಿರುತ್ತವೆ ; ವಸ್ತು-ಧ್ವನಿಯಲ್ಲಿ ಕೂಡ ಬೇರೆ ಬೇರೆ ಅಭಿರುಚಿಯ ರಸಿಕರು ಬೇರೆಬೇರೆಯಾದ ವಸ್ತುಗಳನ್ನು ವ್ಯಂಗ್ಯವೆಂದು ಗ್ರಹಿಸಿ ವಿವರಿಸುವುದನ್ನು ಕಾಣುತ್ತೇವೆ.

ಹೀಗ ಧ್ವನಿ-ವಿರೋಧ ವಾದಗಳನ್ನು ಕೂಲಂಕಷವಾಗಿ ಪರಿಶೀಲಿಸಿ ನಿರಾಸ ಮಾಡುವವರೆಗೆ 'ಧ್ವನಿ'ಯ ನಿಜಸ್ವರೂಪ ತಿಳಿಯುವುದೇ ಕಡುಕಷ್ಟ. ವ್ಯಂಜನಾ ವ್ಯಾಪಾರಕ್ಕೇ ನಾಮಾಂತರದಿಂದ ಭಾವಕತ್ವ-ಭೋಜಕತ್ವಗಳೆಂದು ವಿವರಣೆ ನೀಡಿ "ಧ್ವನಿ-ಧ್ವಂಸ" ಮಾಡಿದೆನೆಂದುಕೊಂಡ ಭಟ್ಟನಾಯಕನಾಗಲಿ, ಭಕ್ತಿ-ಅನುಮಿತಿ ವಾದಗಳಿಗೇ ಪುನಶ್ಚೇತನ ನೀಡಲು ಪ್ರಯಾಸಪಟ್ಟ ಮಹಿಮಭಟ್ಟನಾಗಲಿ, ತಾತ್ಪರ್ಯ ವಾದಕ್ಕೆ ಹೊಸ ವೈಶಾಲ್ಯವನ್ನು ಕಲ್ಪಿಸಿ ಧ್ವನಿನಿರಾಕರಣೆಗೆ ಮುಂದಾದ ಧನಿಕನಾಗಲಿ, ಎಲ್ಲಕ್ಕೂ ಮೇಲುಮೇಲೆ ಮಾತ್ರ ನಿಲ್ಲಬಲ್ಲಂತಹ ದುರ್ಬಲ ಸಾಮರಸ್ಯವನ್ನು ಹೇಳ ಬಯಸಿದ ಭೋಜನಾಗಲಿ ಧ್ವನಿತತ್ತ್ವದ ಸೂಕ್ಷ್ಮವನ್ನು ಅರಿಯಲು ಅಸಮರ್ಥರಾದ ರೆಂಬುದನ್ನು ಈಗ ತೀರ್ಮಾನಿಸಬಹುದು. ಅಂತೆಯೇ 'ಅಲಂಕಾರ ಸರಣಿ ವ್ಯವಸ್ಥಾಪಕ'ರಾದ ಮಮ್ಮಟ, ರುಯ್ಯಕ ವಿಶ್ವನಾಥ, ವಿದ್ಯಾನಾಥ, ವಿದ್ಯಾಧರ, ಜಗನ್ನಾಥ ಮುಂತಾದ ಮಹಾಲೇಖಕರೆಲ್ಲ 'ಧ್ವನಿಪ್ರತಿಷ್ಠಾಪನ ಪರಮಾಚಾರ್ಯ'ರೇ ಆದರು. ಧ್ವನಿ-ವಿರೋಧ ವಾದಗಳು ಎಷ್ಟು ನಿಸ್ಸಾರವೆಂಬುದನ್ನು ಎಲ್ಲರೂ ಬಿಡಿಸಿ

ತೋರಿಸಿದರು. ಆಧುನಿಕ ಸಂಶೋಧಕ–ವಿದ್ವಾಂಸರು ಕೂಡ ತಮ್ಮ ಅಲಂಕಾರ ಶಾಸ್ತ್ರ–ಇತಿಹಾಸ ಹಾಗು ಸಮೀಕ್ಷೆಗಳಲ್ಲಿ ತೌಲನಿಕವಾಗಿ ಬೆಲೆ ಕಟ್ಟುವಾಗ ಧ್ವನಿಕಾರನ ಮೌಲಿಕ ಚಿಂತನೆಗೆ ಪ್ರಥಮ ಪ್ರಾಶಸ್ತ್ಯವನ್ನು ನೀಡಿರುವುದು ಗಮನಾರ್ಹವಾಗಿದೆ. ಈಚೆಗೆ ಎಡ್ವಿನ್ ಜೆರೋ ಮುಂತಾದ ವಿದ್ವಾಂಸರು ಪ್ರಾಚೀನ ಲಾಕ್ಷಣಿಕರ ಸಂಕ್ಷಿಪ್ತೋಕ್ತಿಗಳ ಹಿಂದೆಯೂ ಮೌಲಿಕ ಚಿಂತನೆಯ ಕಿಡಿಗಳನ್ನು ಗುರುತಿಸತೊಡಗಿದ್ದಾರೆ. ಇವೆಲ್ಲ ಪಠನೀಯವಾಗಿವೆ.

ವ್ಯಾಕರಣಾತ್ ಪದಸಿದ್ಧಿಃ
ಪದಸಿದ್ಧೇರರ್ಥ ನಿರ್ಣಯೋ ಭವತಿ
ಅರ್ಥಾತ್ ತತ್ತ್ವಜ್ಞಾನಂ
ತತ್ತ್ವ ಜ್ಞಾನಾತ್ ಪರಂ ಶ್ರೇಯಃ

ವ್ಯಾಕರಣದಿಂದೆ ಪದಮಾ
ವ್ಯಾಕರಣದ ಪದದಿನರ್ಥಮರ್ಥದೆ ತತ್ತ್ವಾ–
ಲೋಕಂ ತತ್ತ್ವಾಲೋಕದಿ
ನಾಕಾಂಕ್ಷಿಪ ಮುಕ್ತಿಯಕ್ಕುಮಿದೆ ಬುಧರ್ಗೆ ಫಲಂ

—ಕೇಶಿರಾಜ

ಕನ್ನಡಕ್ಕೆ ವ್ಯಾಕರಣ : ಒಂದು ವಿಶ್ಲೇಷಣೆ

ಟಿ. ಕೇಶವ ಭಟ್ಟ

ಒಂದೆಡೆ ಆಡುಮಾತುಗಳಿಗಾಗಿ ವಿವಿಧ ಜಾನಪದರೂಪಗಳಲ್ಲಿ ನಮ್ಮ ಕನ್ನಡವಿದೆ. ಇನ್ನೊಂದೆಡೆ ನಿಶ್ಚಿತ ಶಿಷ್ಟಭಾಷೆಯಾಗಿ ಗ್ರಾಂಥಿಕರೂಪದಲ್ಲಿ ಬೆಳಗುತ್ತಿದೆ. ಕನ್ನಡಕ್ಕೆ ವ್ಯಾಕರಣವುಂಟೆ ? ಅದು ಬೇಕೆ, ಬೇಡವೆ ? ಎಂಬ ಆಧುನಿಕ ವಿಚಾರಧೋರಣೆ ಈಗೀಗ ಹೆಚ್ಚು ಮೇಲೆದ್ದಿರುವಂತೆ ಕಂಡುಬರುತ್ತದೆ. ಈ ವಿಷಯವನ್ನು ವಿಶ್ಲೇಷಿಸಬೇಕಾದರೆ, ಕನ್ನಡದ ಲಾಕ್ಷಣಿಕ ವೈಶಿಷ್ಟ್ಯ, ಹಿರಿಮೆ, ಬೆಳವಣಿಗೆ, ಮಾರ್ಪಾಡು, ಅನುಸರಣೆ ಮುಂತಾದುವೆಲ್ಲವನ್ನೂ ಅನುಲಕ್ಷಿಸಿ ಮುಂದುವರಿಯಬೇಕಾಗುತ್ತದೆ.

'ಕನ್ನಡ' ಎಂಬುದು ಅದೇ ಹೆಸರ ನಾಡು ನುಡಿಗಳೆರಡನ್ನೂ ದ್ಯೋತಿಸುವ ಅರ್ಥವತ್ತಾದ ಶಬ್ದ. ಪ್ರಕೃತ, ಈ ಲೇಖನ ನುಡಿಗೆ ಸೀಮಿತ. ಕನ್ನಡಕ್ಕೆ ಅಗ್ಗಳೆಯ ಗುಣವಿಶೇಷಣಗಳಿವೆ—'ಕನ್ನಡಂ ಕತ್ತುರಿಯಲ್ತೆ ?' ಎಂಬುದು ಮುದ್ದಣ ಕವಿಯ ಮಾತು. ದಿ. ಗೋವಿಂದ ಪೈಗಳು ಅದನ್ನೆ ಲಕ್ಷವಿಟ್ಟು ತಮ್ಮದೊಂದು ಕವನದಲ್ಲಿ ಹೀಗೆಂದಿದ್ದಾರೆ—

> ಕನ್ನಡ ಕಸ್ತೂರಿಯನ್ನ ಹೊಸತುಸಿರಿ ತೀಡದನ್ನ
> ಸುರಭಿಯಲ್ಲಿ ನೀನದನ್ನ ನವಶಕ್ತಿಯಿನೆಬ್ಬಿಸು
> ಹೊಸ ಸುಗಂಧದೊಸಗೆಯಿಂದ ಜಗದಿ ಹೆಸರ ಹಬ್ಬಿಸು

ತೆರೆದ ಕರಡಿಗೆಯ ಕಸ್ತೂರಿಯ ಸುವಾಸನೆಯಂತೆ, ಕನ್ನಡ ಸಾಹಿತ್ಯದ ಕಂಪು ಇರುವುದು. ಕನ್ನಡವು ಮಾತಾಡುವ ನಾಲಗೆಗೆ ಸವಿ ; ಆದುದರಿಂದಲೇ 'ಎನಿತು ಇನಿದು ಈ ಕನ್ನಡ ನುಡಿಯು ಮನವನು ತಣಿಸುವ ಮೋಹನ ಸುಧೆಯು' ಎಂಬ ಆಧುನಿಕ ಕವಿವಾಣಿಯ ಉದ್ಗಾರವೂ ಪ್ರಚಲಿತ. ಕನ್ನಡವನ್ನು 'ಕಮ್ಮಿತು ನಾಡು'

ಎಂಬುದರಿಂದ ನಿಷ್ಪತ್ತಿ ಮಾಡಿದ್ದಾರೆ. ಮಲಯ ಪರ್ವತದ ಗಂಧ ವೃಕ್ಷಗಳಿಂದ ಕಂಗೊಳಿಸುವ ನಾಡಾಗಿ ಈ ಅರ್ಥವನ್ನು ಸಾಧಿಸಿದ್ದಾರೆ. ಇದಲ್ಲದೆ 'ಕರು + ನಾಡು' ಅಂದರೆ ವಿಸ್ತಾರವಾದ ನಾಡು (ಮಹಾರಾಷ್ಟ್ರ), ಎತ್ತರದ ನಾಡು, ಮೇಲ್ಮೆಯುಳ್ಳ ನಾಡು ಎಂತಲೂ ಈ ಶಬ್ದಕ್ಕೆ ಅರ್ಥ ಹೊಳೆದುಬರುತ್ತದೆ. ಕನ್ನಡ ಎಂಬುದರ ಸಂಸ್ಕೃತರೂಪ 'ಕರ್ನಾಟ'. ಇದನ್ನು 'ಕರ್ಣೇ ಅಟತಿ' ಎಂದು ನಿಷ್ಪತ್ತಿಗೊಳಿಸಿ ತನ್ನದೇ ಅದ ಧ್ವನಿಮಾಧುರ್ಯದಿಂದ ಕಿವಿಯಲ್ಲಿ ಸಂಚರಿಸುವ ನುಡಿ ಎಂದು ಒಪ್ಪುವ ಅರ್ಥವನ್ನು ಹೇಳಿರುವುದೂ ಲಕ್ಷ್ಯಾರ್ಹ. ಈ ವಿವರಗಳೆಲ್ಲ ಗ್ರಾಹ್ಯವಾದುವೇ ಸರಿ. ಕನ್ನಡದ ಈ ಹಿರಿಮೆಗೆ ಭಾಷೆ ಮತ್ತು ಸಾಹಿತ್ಯ ಮಾತ್ರವೇ ಕಾರಣವಲ್ಲ : ಭಾಷೆಯ ಅಭಿಜಾತ ಸ್ವರೂಪವನ್ನು ಉಳಿಸಿಕೊಂಡು ಬಂದಿರುವ ಕನ್ನಡ ವ್ಯಾಕರಣವೂ ಕಾರಣ ವಾಗಿದೆ.

ಭಟ್ಟಾಕಲಂಕನು (ಕ್ರಿ.ಶ. 1604) ತನ್ನ ಶಬ್ದಾನುಶಾಸನದಲ್ಲಿ ಕನ್ನಡವೇನೂ ಕೀಳಲ್ಲ, ಸಂಸ್ಕೃತಕ್ಕಿಂತಲೂ ಮೇಲು ಎಂದೇ ಅಭಿಪ್ರಾಯಪಟ್ಟಿದ್ದಾನೆ. ಅವನ ಮಾತಿನ ಅರ್ಥವಿದು–"ಕನ್ನಡವು ಸಂಸ್ಕೃತದಂತೆ ಸಕಲದೇಶ ಪ್ರಸಿದ್ಧವಾದುದಲ್ಲ, ಸಕಲಶಾಸ್ತ್ರೋಪ ಯೋಗಿಯೂ ಅಲ್ಲ. ಆದುದರಿಂದ ಸಕಲ ಮಹಾಜನ ಪರಿಗ್ರಾಹ್ಯವಲ್ಲ. ಕನ್ನಡವು ಪಾಮರರ ಭಾಷೆ. ಈ ಭಾಷೆಯಲ್ಲಿ ಪಾಮರರಿಗೇ ಅಧಿಕಾರ, ಪಂಡಿತರಿಗಲ್ಲ. ಆದುದರಿಂದ ಕನ್ನಡವು ವ್ಯಾಕರಣಶಾಸ್ತ್ರಕ್ಕೆ ಒಳಪಡುವುದಿಲ್ಲ ಎನ್ನುವ ಪಂಡಿತ ಮನ್ಯರ ಅನ್ಯಥಾಖ್ಯಾತಿಯು ಖಂಡತುಂಡವಾದುದು". ಅಷ್ಟೇ ಅಲ್ಲ, ಅವನದೇ ಆದ ಮಾತು ಗಳಿವು :

"ಸರ್ವವಿದ್ಯಾನಾಂ ಪ್ರದೀಪಭೂತಂ ವಾಙ್ಮಲಾನಾಂ ಚಿಕಿತ್ಸಿತರೂಪಂ ಪದಸಿಧ್ಯ ರ್ಥನಿರ್ಣಯ ದ್ವಾರಾ ನಿಃಶ್ರೇಯಸ ಸಾಧನಂ ನಾಪರಂ ಲೋಕೇ ವ್ಯಾಕರಣಾತ್... ಸರಸಪರಿಷತ್ ಪ್ರೌಢರೂಢ ವಿದ್ವತ್ಕವೀನಾಂ ಪೂರ್ಣಂ, ಕರ್ಣಾಟನೇನ ತೂರ್ಣಂ, ಚೇತಶ್ಚಮತ್ಕಾರಕಾರಿಣೀ ಕಾರ್ನಾಟಿಕ್ಯೇವ ಗೀರ್ನಾನ್ಯಾ"

ಅಂದರೆ.—"ಎಲ್ಲ ವಿದ್ಯೆಗಳಿಗೆ ಬೆಳಕಿನಂತಿರುವ ಮಾತಿನ ಕೊಳೆಯನ್ನು ಶುದ್ಧ ಪಡಿಸುವ ರೂಪವುಳ್ಳ, ಪದಸಿದ್ಧಿ, ಅರ್ಥನಿರ್ಣಯ, ತತ್ತ್ವಜ್ಞಾನಗಳ ಮೂಲಕ ಮೋಕ್ಷಕ್ಕೆ ಸಾಧನವೂ ಅದುದು ಈ ಲೋಕದಲ್ಲಿ ವ್ಯಾಕರಣವನ್ನು ಬಿಟ್ಟರೆ ಬೇರೆ ಯಾವುದೂ ಅಲ್ಲ...ರಸಿಕರ ಸಭೆಗಳಲ್ಲಿರತಕ್ಕ ಪ್ರೌಢ ಮತ್ತು ಪ್ರಸಿದ್ಧ ವಿದ್ವಾಂಸರ. ಮತ್ತು ಕವಿಗಳ ಕಿವಿಗಳಲ್ಲಿ ತುಂಬಿ ಸಂಚರಿಸುವುದರಿಂದ ಒಡನೆಯೇ ಮನಸ್ಸಿಗೆ ಚಮತ್ಕಾರಕವಾಗಿರುವ ಭಾಷೆ ಕನ್ನಡವೇ ಆಗಿದೆ. ಬೇರೆ ಯಾವುದೂ (ಸಂಸ್ಕೃತವೂ) ಅಲ್ಲ". ಕರ್ಣಾಟಕ ಸಂಸ್ಕೃತ ಉಭಯವಿಧ ಶಬ್ದಸಾಗರವನ್ನು ದಾಟಿದವನಾದ ಭಟ್ಟಾ ಕಲಂಕನು ಹೀಗೆನ್ನಬೇಕಾದರೆ, ಕನ್ನಡದ ಹಿರಿಮೆ ಕೇವಲ ಅಭಿಮಾನದ ಮಾತಾಗದೆ, ವಾಸ್ತವನಿರೂಪಣೆಯೇ ಆಗಿರುವುದು ಸ್ಪಷ್ಟವಲ್ಲವೇ ?

ರಾಜಶೇಖರನೆಂಬ ಸಂಸ್ಕೃತ ಲಾಕ್ಷಣಿಕನು (ಹತ್ತನೆಯ ಶತಮಾನ) ತನ್ನ ಕಾವ್ಯ ಮೀಮಾಂಸಾ ಗ್ರಂಥದಲ್ಲಿ ಕನ್ನಡವನ್ನೂ ಕನ್ನಡಿಗರನ್ನೂ ಪ್ರಶಂಸೆಮಾಡಿರುವುದು ಹೀಗೆ :

ರಸಃ ಕೋಪ್ಯಸ್ತು ಕಾಪ್ಯಸ್ತು ರೀತಿ ; ಕೋಪ್ಯಸ್ತು ವಾ ಗುಣ :
ಸಗರ್ವಂ ಸರ್ವಕರ್ಣಾಟಾಃ ಟಂಕಾರೋತ್ತರಪಾಠಿನ :

ಅಂದರೆ—"ಕಾವ್ಯದಲ್ಲಿ ಬರುವ ರಸ, ರೀತಿ, ಗುಣಗಳು ಯಾವುದೇ ಇರಲಿ, ಅವಕ್ಕೆ ಅನುಗುಣವಾಗಿ ಕನ್ನಡಿಗರೆಲ್ಲರೂ ಟಂಕಾರದಿಂದ (ಗಮಕ ಗತ್ತುಗಳಿಂದ) ಓದುವವರಾಗಿದ್ದಾರೆ". "ನನ್ನ ಭಾಷೆ ಕನ್ನಡ—ಕರ್ಣಾಟ" ಎಂದು ಕೊಳ್ಳುವುದು ಇತರರಿಗೂ ಅಭಿಮಾನದ ಸಂಗತಿ. ಸುಮಾರು 15 ನೆಯ ಶತಮಾನದ ತೆಲುಗು ಕವಿ ಶ್ರೀನಾಥನು 'ನಾ ಕವಿತ್ವಂಬು ನಿಜಮು ಕರ್ಣಾಟ ಭಾಷ'—ನನ್ನ ಕವಿತೆಯ ಭಾಷೆ ಕರ್ಣಾಟ (ಕನ್ನಡ) ಎಂದೇ ನುಡಿದಿದ್ದಾನೆ. ಶ್ರುತಿ ಸುಭಗವಾಗಿ ಅರ್ಥ, ಭಾವ, ರಸ, ಪ್ರಕಟನಕ್ಕೆ ಹಾಗೂ ಬಾಯಿ ಉಚ್ಚಾರಣೆಗೆ ಒಪ್ಪುವ ಶ್ರೇಷ್ಠ ಭಾಷೆ—ಎಂಬರ್ಥದಲ್ಲಿ ಹೀಗೆ ಹೇಳಿದುದಾಗಿ ಕಂಡುಬರುತ್ತದೆ. ಕನ್ನಡದ ಶ್ರುತಿಸುಭಗತೆಗೆ ಕಾರಣಗಳಲ್ಲಿ ದ್ವಿತೀಯಾಕ್ಷರ ಪ್ರಾಸವೂ ಒಂದು. ಕನ್ನಡದ ಶಬ್ದಾಲಂಕಾರಗಳಲ್ಲಿ ಇದು ಅತಿಶಯವಾಗಿದ್ದು 'ಕನ್ನಡಕ್ಕೆ ಸತತಂ ಪ್ರಾಸಂ' ಎಂಬುದು ಕವಿರಾಜಮಾರ್ಗದ ಘೋಷಣೆ (2-38).

ಕನ್ನಡವು ಅರ್ಥಗರ್ಭಿತ ; ಅರ್ಥಗ್ರಹಣೆಗೆ ತುಂಬ ಸುಲಭ ಎಂಬುದನ್ನು 'ಅನುಭವಾಮೃತ' ದಲ್ಲಿ ಹೀಗೆ ಹೇಳಿದೆ—

ಸುಲಿದ ಬಾಳೆಯ ಹಣ್ಣಿನಂದದಿ । ಕಳೆದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರುವ ॥
ಲಲಿತವಹ ಕನ್ನಡದ ನುಡಿಯಲಿ । ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲಿನ್ನೇನು ?॥

ತತ್ತ್ವಪ್ರತಿಪಾದನೆಯಲ್ಲಿ, ವೈಚಾರಿಕತೆಯಲ್ಲಿ ಸಂಸ್ಕೃತದಂತೆಯೇ ಕನ್ನಡವಿದೆ. ಆದರೆ ಸಂಸ್ಕೃತ ಅರ್ಥಕ್ಕೆ ಸುಲಭವಲ್ಲ. ಅಂತಹ ಸಂಸ್ಕೃತವನ್ನು ಕಲಿತು ಯಾವ ಆತ್ಮಜ್ಞಾನವನ್ನು ಪಡೆದು ಮುಕ್ತಿಯನ್ನು ಗಳಿಸಬಹುದೋ ಅದನ್ನೇ ಸುಲಭವೂ ಚೆಲುವೂ ಆದ ಕನ್ನಡ ನುಡಿಯಿಂದ ಪಡೆಯಲು ಸಾಧ್ಯವೆಂದು ಇಲ್ಲಿ ಹೇಳಿದೆ.

ಭಾಷಾಸ್ವರೂಪದಲ್ಲಿ ಇತರ ಹಲವು ಭಾಷೆಗಳಲ್ಲಿಲ್ಲದ ವಿಶೇಷಲಕ್ಷಣ ಕನ್ನಡದಲ್ಲಿದೆ: ಇದು ಧ್ವನಿಯುಕ್ತ ಭಾಷೆ (PHONETIC). ಲಿಪಿರೂಪಕ್ಕೂ ಉಚ್ಚಾರಣೆಗೂ

2]

ಸಾಮ್ಯವಿದೆ. ಅದಕ್ಕಾಗಿ ಬೇಕಾಗುವ ಎಲ್ಲ ಅಕ್ಷರಗಳೂ (ಹ್ರಸ್ವ ಎಕಾರ ಒಕಾರ ಕೂಡ) ಕನ್ನಡದಲ್ಲಿದೆ. ಎಲ್ಲ ಸಾಹಿತ್ಯ ಶಾಸ್ತ್ರಗ್ರಂಥಗಳೂ—ವ್ಯಾಕರಣ, ಛಂದಸ್ಸು, ಅಲಂಕಾರ, ರಸಶಾಸ್ತ್ರಗಳು (ಇತ್ತೀಚೆಯ ಭಾಷಾಶಾಸ್ತ್ರ ಕೂಡ) ಕನ್ನಡದಲ್ಲಿ ಮೂಡಿ ಬಂದಿವೆ. ಇವನ್ನನುಸರಿಸಿದ ಕಾವ್ಯಗಳ ಸಮೃದ್ಧಿಯೂ ಕನ್ನಡದಲ್ಲಿದೆ. ಗಮಕಕ್ಕೆ ಅಳವಡುವ ರಗಳೆ, ಷಟ್ಪದಿ, ಸಾಂಗತ್ಯ, ಚೌಪದಿ ಕೃತಿಗಳೂ ಸಮೃದ್ಧವಾಗಿವೆ. ಕನ್ನಡದ ಲಾಕ್ಷಣಿಕ ವೈಶಿಷ್ಟ್ಯಗಳಾಗಿ ಕೇಶಿರಾಜನು ಹೇಳಿರುವ ಗಮಕಸಮಾಸ, ಱ ೞ ಕುಳ ಕ್ಷಳ, ಶ್ರುತಿಸಹ್ಯ ಸಂಧಿ, ಔಚಿತ್ಯಪೂರ್ಣ ಸತಿಸಪ್ತಮಿ, ಸಮಸಂಸ್ಕೃತೋಕ್ತಿ, ಪ-ಮ-ಹ-ಪಗಳ ವ್ಯತ್ಯಾಸ ವಿಧಾನ, ಅವ್ಯಯವಲ್ಲದ ಸಂಸ್ಕೃತ ಶಬ್ದ ಮಾತ್ರ ನಾಮಪ್ರಾತಿಪದಿಕವಾಗುವಿಕೆ, ಶಿಥಿಲೋಚ್ಚಾರಣೆ, ಯತಿವಿಲುಪ್ತನೆ—ಎಂಬಿವು ಲಕ್ಷ್ಯಾರ್ಹ ಸಂಗತಿಗಳು. ಇವಕ್ಕೆ ಸೇರಿಸಿ, ಅರಿಸಮಾಸ ತ್ಯಾಗವನ್ನೂ, ದ್ವಿತೀಯಾಕ್ಷರಪ್ರಾಸದ ಅನಿವಾರ್ಯತೆಯನ್ನೂ ಹೇಳಬಹುದಾಗಿದೆ. ಈ ವೈಶಿಷ್ಟ್ಯಗಳಲ್ಲಿ ಒಂದೆರಡನ್ನುಳಿದು ಇತರವು ಎಲ್ಲವೂ ಕನ್ನಡದ ವ್ಯಾಕರಣಕ್ಕೆ ಸಂಬಂಧಪಟ್ಟವುಗಳೇ ಆಗಿವೆ.

ಹಿಂದೆ ಹೇಳಿದಂತೆ ಕನ್ನಡಕ್ಕೆ ಜಾನಪದರೂಪವೂ ಗ್ರಾಂಥಿಕರೂಪವೂ ಇವೆ. ಜಾನಪದಕ್ಕೆ ಅನ್ವಯವಾಗುವ ವ್ಯಾಕರಣಾಂಶ ಪರಿಮಿತ. ಅಪಠಿತರ ಆಡುಮಾತಾಗಿ ಅದರಲ್ಲಿ ಶುದ್ಧಾಶುದ್ಧತೆಯ ಚರ್ಚೆಗೆ ಇಂಬಿಲ್ಲ. ಒಂದು ಉದಾಹರಣೆ : 'ಹೇಳಿದರು' ಎಂಬುದನ್ನು 'ಯೇಳಿದರು, ಯೇಳಿದ್ರು, ಏಳಿದರು, ಏಳಿದ್ರು' ಎಂದರೂ ದಕ್ಕುವುದು. ಇದರಿಂದಾಗಿ ಜಾನಪದ ಅಥವಾ ಈ ದೇಸಿ ರೂಪದಲ್ಲಿ ಬಹುವಿಧ. ಇದನ್ನು ಅನುಲಕ್ಷಿಸಿರುವ ಕವಿರಾಜಮಾರ್ಗಕಾರನು 'ವಾಸುಗಿಯುಮರಿಯಲಾರದೆ ಬೇಸರುಗುಂ ದೇಸಿ ಬೇರೆ ವೇರಪ್ಪುದರಿಂ' ಎಂದು ಉದ್ಗರಿಸಿದ್ದಾನೆ. ದ್ರಾವಿಡ ಭಾಷೆಗಳಲ್ಲಿ ಒಂದಾಗಿರುವ ತುಳುವಿನಲ್ಲಿ—ಅದು ಜಾನಪದ ಭಾಷೆಯಾಗಿಯೇ ಇರುವುದರಿಂದ,—ಶಬ್ದಗಳಿಗೆ ಸಿದ್ಧರೂಪವಿಲ್ಲ. ಉಚ್ಚಾರಣೆಯಲ್ಲಿ ತುಂಬಾ ವೈವಿಧ್ಯವಿದೆ. ಕನ್ನಡದ ಜಾನಪದ ರೂಪವೂ ಹಾಗೆಯೇ. ಆದರೆ, ಕನ್ನಡದ ಪರಿಷ್ಕೃತ (ಗ್ರಾಂಥಿಕ) ರೂಪವು ವ್ಯಾಕರಣ ನಿಯಮಗಳನ್ನು ತಾಳಿರುತ್ತದೆ. ಪ್ರಾಚೀನಕಾಲದಿಂದಲೇ ಕನ್ನಡದ ಕವಿಗಳು ಲಾಕ್ಷಣಿಕರು ವ್ಯಾಕರಣಕ್ಕೆ ಒಳಪಟ್ಟ ಶಿಷ್ಟಭಾಷೆಯನ್ನು ಕಲ್ಪಿಸಿಕೊಂಡು ಅದಕ್ಕನುಗುಣವಾಗಿ ಕೃತಿರಚನೆ ಮಾಡುತ್ತ ಬಂದಿದ್ದಾರೆ. ಶಿಷ್ಟಭಾಷೆಯ ಸ್ವರೂಪ ಪರಿಜ್ಞಾನವನ್ನುಳಿಸಲಿಕ್ಕಾಗಿ ವ್ಯಾಕರಣವನ್ನೂ ರಚಿಸಿರುತ್ತಾರೆ. ಕನ್ನಡದ ಯಾವುದೇ ಅಕ್ಷರ, ಪದಪ್ರಯೋಗ, ವಾಕ್ಯ ಹೇಗಿದ್ದರೆ ಸರಿ ? ಹೇಗಾದರೆ ತಪ್ಪು ?—ಎಂಬುದನ್ನು ನಿಶ್ಚಯಪಡಿಸಿದ್ದಾರೆ. ಬಲುಮಟ್ಟಿಗೆ ಅವು ಇಂದೂ ಗ್ರಾಹ್ಯಗಳಾಗಿವೆ.

ಕನ್ನಡದಲ್ಲಿ ಮೊತ್ತಮೊದಲ ಉಪಲಬ್ಧ ಗ್ರಂಥ—ಲಕ್ಷಣ ಗ್ರಂಥ—'ಕವಿರಾಜ ಮಾರ್ಗ'. ಇದರಲ್ಲಿ ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದ ಅಂಶಗಳು, ಮುಖ್ಯವಾಗಿ ಶುದ್ಧಾಶುದ್ಧ ಪ್ರಯೋಗ ವಿಷಯಗಳು ಇವೆ. ಅನಂತರ, ಎರಡನೆಯ ನಾಗವರ್ಮನು

(1403) ರಚಿಸಿದ 'ಕರ್ಣಾಟಕ ಭಾಷಾಭೂಷಣ' ; ಕನ್ನಡ ವ್ಯಾಕರಣವನ್ನು ಸಂಸ್ಕೃತ ಸೂತ್ರಗಳಲ್ಲಿ ಪ್ರತಿಪಾದಿಸುವ ಗ್ರಂಥ. ಇವನ 'ಕಾವ್ಯಾವಲೋಕನ'ದಲ್ಲಿ ಬರುವ 'ಶಬ್ದಸ್ಮೃತಿ' ಕಂದಪದ್ಯಾತ್ಮಕ ಸೂತ್ರಗಳಿಂದಲೂ ಕವಿಪ್ರಯೋಗದ ಉದಾಹರಣ ಗಳಿಂದಲೂ ಕೂಡಿ ವ್ಯಾಕರಣಕ್ಕೆ ಕೈಗನ್ನಡಿಯಂತಿದೆ. ಕೇಶಿರಾಜನ 'ಶಬ್ದಮಣಿ ದರ್ಪಣ'ವು ಕನ್ನಡಕ್ಕೆ ಅಷ್ಟಾಧ್ಯಾಯೀ ವ್ಯಾಕರಣಗ್ರಂಥವಾಗಿದೆ. ಭಟ್ಟಾಕಲಂಕದೇವನ (1604) 'ಕರ್ಣಾಟಕ ಶಬ್ದಾನುಶಾಸನ' ಎಂಬುದು ಸಂಸ್ಕೃತದ ಸೂತ್ರ ವೃತ್ತಿ ವ್ಯಾಖ್ಯಾನಗಳೊಂದಿಗೆ ಕನ್ನಡ ವ್ಯಾಕರಣವನ್ನು ವಿವರಿಸುತ್ತದೆ. ಈ ವ್ಯಾಕರಣ ಗ್ರಂಥಗಳಲ್ಲಿ ನಿರೂಪಿಸಲಾಗುವುದು ಹಳಗನ್ನಡ ವ್ಯಾಕರಣವೆನಿಸಿದರೂ ಸುಮಾರು 90 ಪ್ರತಿಶತ ಅಂಶಗಳು ಹೊಸಗನ್ನಡಕ್ಕೂ ಅನ್ವಯಿಸುವಂತಿವೆ. ಮಾತ್ರವಲ್ಲ ; ಕನ್ನಡ ಭಾಷಾಭ್ಯಾಸಕ್ಕೆ ಅನಿವಾರ್ಯವೆನಿಸುವಂತಹ ಮಾರ್ಗದರ್ಶಿಗಳಾಗಿವೆ. ಆಧುನಿಕ ವಿದ್ವಾಂಸರನೇಕರು, ಮುಖ್ಯವಾಗಿ, ವಿದ್ಯಾರ್ಥಿಗಳಿಗಾಗಿ ಆಗಾಗ ರಚನೆಮಾಡಿರುವ ವ್ಯಾಕರಣ ಪುಸ್ತಕಗಳು ಅನೇಕವಾಗಿವೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾದ 'ಕನ್ನಡ ಕೈಪಿಡಿ' ವಿದ್ಯಾರ್ಥಿಗಳಿಗಾಗಿ ರಚಿತವಾದ ಲಾಕ್ಷಣಿಕ ಕೃತಿ. ಇದು ವ್ಯಾಕರಣ ಭಾಗವನ್ನೂ ಒಳಗೊಂಡಿದೆ. ತೀ. ನಂ. ಶ್ರೀಯವರ 'ಮಧ್ಯಮ ವ್ಯಾಕರಣ' (1947), ಟಿ. ಕೇಶವಭಟ್ಟರ 'ಭಾಷಾದೀಪಿಕೆ' (1956), ಚನ್ನಪ್ಪ ಎರೆಸೀಮೆಯವರ 'ವ್ಯಾಕರಣ ದರ್ಪಣ', ವಿದ್ವಾನ್ ಎನ್. ರಂಗನಾಥ ಶರ್ಮರ 'ಹೊಸಗನ್ನಡ ವ್ಯಾಕರಣ' (1977), ಡಾ॥ ಟಿ. ವಿ. ವೆಂಕಟಾಚಲ ಶಾಸ್ತ್ರಿಯವರ 'ಹೊಸಗನ್ನಡದ ವ್ಯಾಕರಣ' (1990)—ಇವು ಇತ್ತೀಚೆಯ ವ್ಯಾಕರಣ ರಚನೆಗಳಲ್ಲಿ ಕೆಲವಾಗಿ ಹೊಸಗನ್ನಡದ ಅವಶ್ಯಕತೆಯನ್ನು ಪೂರೈಸುವ ಉದ್ದೇಶದ ಕೃತಿಗಳಾಗಿವೆ. ಕನ್ನಡಕ್ಕೆ ವ್ಯಾಕರಣ ಎಷ್ಟು ಅವಶ್ಯವೆಂಬುದನ್ನು ಇವು ನಿರೂಪಿಸುವಂತಿರುವುದು ಅಭಿಮಾನದ ಸಂಗತಿ.

ಭಾಷೆಗೆ ವ್ಯಾಕರಣ ಅದೆಷ್ಟು ಮುಖ್ಯ ಉಪಯುಕ್ತ ಮತ್ತು ಅವಶ್ಯವೆಂಬುದನ್ನು ರಸವತ್ತಾಗಿ ನಿರೂಪಿಸುವ ಕವಿಸೂಕ್ತಿಗಳು ವಿಪುಲವಾಗಿವೆ. ವಿದ್ಯಾರ್ಥಿಯಾದ ಮಗನಿಗೆ ಓರ್ವ ತಂದೆಯು ಹೃತ್ಪೂರ್ವಕವಾದ ಉಪದೇಶ ಹೀಗಿದೆ—

> ಯದ್ಯಪಿ ಬಹುನಾಧೀಷೇ ತಥಾಪಿ ಪಠ ಪುತ್ರ ವ್ಯಾಕರಣಂ
> ಸ್ವಜನಃ ಶ್ವಜನೋ ಮಾಭೂತ್ ಸಕಲಂ ಶಕಲಂ ಸಕೃತ್ ಶಕೃತ್

ಎಲೈ ಮಗನೇ, ನೀನು ನಿನ್ನ ವ್ಯಾಸಂಗವಿಷಯಗಳಲ್ಲಿ ಹೆಚ್ಚೇನೂ ಕಲಿಯದಿದ್ದರೆ ಬಾಧೆಯಿಲ್ಲ. ಆದರೆ, ವ್ಯಾಕರಣವನ್ನು ಕಲಿಯಲೇ ಬೇಕು. ವ್ಯಾಕರಣದಿಂದ ಉಚ್ಚಾರಣೆಯು ದೋಷವಿಲ್ಲದಾಗುವುದು. 'ಸ್ವಜನ' (ನಮ್ಮ ಜನ) ಎಂಬುದು

'ಶ್ವಜನ' (ನಾಯಿ ಅಥವಾ ನಾಯಿಯಂತಹ ಜನ) ಎಂದಾಗದಿರಲಿ. 'ಸಕಲ' (ಎಲ್ಲಾ) ಎಂಬುದು 'ಶಕಲ' (ತುಂಡು, ಚೂರು) ಎಂದಾಗದಿರಲಿ. 'ಸಕೃತ್' (ಒಂದು ಬಾರಿ) ಎಂಬುದು 'ಶಕೃತ್' (ಮಲ, ಸೆಗಣಿ) ಆಗದಿರಲಿ. ಉಚ್ಚಾರಣೆ ಸ್ವಲ್ಪ ವ್ಯತ್ಯಸ್ತವಾದರೆ ಅರ್ಥವೇ ಬೇರೆಯಾಗುವುದೆಂಬುದಕ್ಕೆ 'ಇಂದ್ರ ಶತ್ರುರ್ವರ್ಧಸ್ವ' ಎಂಬ ಉಕ್ತಿಯನ್ನು ಹೇಳಲಾಗಿದೆ. ಇಂದ್ರನನ್ನು ಕೊಲ್ಲುವ ಮಗ'ನಾಗಬೇಕೆಂಬ ಕಾಂಕ್ಷೆಯಿಂದ ತ್ವಷ್ಟ್ರ ಪ್ರಜಾಪತಿ ಉಚ್ಚರಿಸಿದ ಈ ಮಾತು 'ಇಂದ್ರನು ಕೊಲ್ಲುವ ಮಗ'ನಾಗಬೇಕೆಂದಾಯಿತು. ಅದರಂತೆ ಹುಟ್ಟಿದ ವೃತ್ರನೆಂಬ ದುರುಳ ರಾಕ್ಷಸನು ಇಂದ್ರನಿಂದ ಹತನಾದನು—ಎಂಬ ಐತಿಹ್ಯವಿದೆ.

ವ್ಯಾಕರಣವನ್ನು ಕಲಿಯದೆ, ಇತರೆಯನ್ನು ಕಲಿಯುವುದು ನಿಷ್ಪ್ರಯೋಜಕವೆಂದು ಹೇಳಲಾಗಿದೆ—

ಅವ್ಯಾಕರಣಮಧೀತಂ
ಭಿನ್ನದ್ರೋಣ್ಯಾ ತರಂಗಿಣೀತರಣಂ
ಔಷಧಮಪಥ್ಯಸಹಿತಂ
ತ್ರಯಮಿದಮಕೃತಂ ವರಂ ನ ಕೃತಂ

ಅಂದರೆ—ವ್ಯಾಕರಣ ಕಲಿಯದೆ ಮಾಡುವ ಅಧ್ಯಯನ, ಒಡೆದ ದೋಣಿಯಲ್ಲಿ ಹೊಳೆದಾಟುವುದು, ಅಪಥ್ಯಮಾಡಿಕೊಂಡು ಮದ್ದು ತೆಗೆದುಕೊಳ್ಳುವುದು—ಈ ಮೂರನ್ನು ಮಾಡದಿರುವುದು ಒಳ್ಳೆಯದು ; ಮಾಡುವುದು ಒಳ್ಳೆಯದಲ್ಲ. ವ್ಯಾಕರಣವನ್ನು ಜ್ಞಾನನಿಧಿಯೆನಿಸುವ ವೇದದ ಮುಖವೆಂದೂ ವಿದ್ಯಾಮಾತೆಯ ಮನೆಯೆಂದೂ ಹೇಳಲಾಗಿದೆ.—

ಯೋ ವೇದ ವೇದವದನಂ ಸದನಂ ಹಿ ಸಮ್ಯಕ್
ಬ್ರಾಹ್ಮ್ಯಾ : ಸ ವೇದಮಪಿ ವೇದ ಕಿಮನ್ಯಶಾಸ್ತ್ರಂ
ಯಸ್ಮಾದತ : ಪ್ರಥಮಮೇತದಧೀತ್ಯ ಧೀಮಾನ್
ಶಾಸ್ತ್ರಾಂತರೇಷು ಭವತಿ ಶ್ರವಣೇಽಧಿಕಾರೀ

ಅಂದರೆ—ವೇದದ ಮುಖವೂ ಸರಸ್ವತಿಗೆ ಸರಿಯಾದ ಮನೆಯೂ ಆಗಿರುವ ವ್ಯಾಕರಣವನ್ನು ಯಾವನು ತಿಳಿದಿರುವನೋ ಅವನು ವೇದವನ್ನರಿತವನೇ ಸರಿ. ಹೀಗಿರುವಾಗ ಬೇರೆ ಶಾಸ್ತ್ರವಿಷಯವೇನಿದೆ ? ಏಕೆಂದರೆ, ಅವನು ಮೊದಲು ವ್ಯಾಕರಣವನ್ನು ಕಲ್ತು ಬುದ್ಧಿವಂತನಾಗಿ ಬೇರೆ ಶಾಸ್ತ್ರಗಳನ್ನು ಕಲಿಯಲು ಅರ್ಹನಾಗುತ್ತಾನೆ. ಈ ಅಭಿಪ್ರಾಯವನ್ನು ಇನ್ನೊಂದೆಡೆ ಸರಳವಾಗಿ ಹೀಗೆ ಹೇಳಿದೆ—

ಸರ್ವೇಷಾಂ ವ್ಯವಹಾರಣಾಂ ಮೂಲಂ ಶಬ್ದಾರ್ಥನಿರ್ಣಯ :
ಸ ಚ ವ್ಯಾಕರಣಾದೇವ ಮುನಿಭಿ : ತೇನ ತತ್ಕೃತಂ

ಅಂದರೆ-ಮನುಷ್ಯನ ಎಲ್ಲ ವ್ಯವಹಾರಗಳಿಗೂ ಮೂಲವಾದುದು ಭಾಷೆಯ ಮುಖ್ಯಾಂಶವಾಗಿರುವ ಶಬ್ದ-ಅರ್ಥಗಳ ನಿರ್ಣಯ. ಆ ನಿರ್ಣಯವು ಆಗುವುದು ವ್ಯಾಕರಣದಿಂದಲೇ. ಆದುದರಿಂದ ಪಾಣಿನಿಯಂತಹ ಮುನಿಗಳು ಅದನ್ನು ರಚಿಸಿರುತ್ತಾರೆ. ವೈಯಾಕರಣರು ಇತರ ವಿದ್ವಾಂಸರಿಗಿಂತ ವಿಶೇಷ ಗೌರವಪಾತ್ರರು.

ತ್ರಿವಿಕ್ರಮಪಂಡಿತನು ತನ್ನ 'ವಿಶ್ವಗುಣಾದರ್ಶ' ಕಾವ್ಯದಲ್ಲಿ ವೈಯಾಕರಣರನ್ನು ಮಹಾಭರಣರೆಂದೂ (ಜಗತ್ತಿಗೆ ಭೂಷಣಪ್ರಾಯರೆಂದೂ) ಪಂಡಿತ ಜನಗಣನೆಯಲ್ಲಿ ಪ್ರಥಮ ಸ್ಥಾನಾರ್ಹರೆಂದೂ ಹೇಳಿರುವುದು ಉಲ್ಲೇಖಾರ್ಹವಾಗಿದೆ—

ಕೃತದುರಿತನಿರಾಕರಣಂ
ವ್ಯಾಕರಣಂ ಚತುರಧೀರಧೀಯಾನಃ
ಬುಧಜನಗಣನಾವಸರೇ
ಕನಿಷ್ಠಿಕಾಯಾಂ ಪರಂ ಜಯತಿ

ಅಂದರೆ—ವ್ಯಾಕರಣವು ಪಾಪವನ್ನು ದೂರಮಾಡುವಂತಹದು—ಸಾರಸ್ವತ ಪಾಪಗಳಿಂದ ಮುಕ್ತವಾದುದು. ಅಂತಹ ವ್ಯಾಕರಣವನ್ನು ಕಲ್ತ ಚಾತುರ್ಯಶೀಲ ಮತಿವಂತನು ವಿದ್ವಾಂಸರನ್ನು ಲೆಕ್ಕಮಾಡುವಾಗ ಕಿರುಬೆರಲಿನವ(ಪ್ರಥಮ) ನಾಗುತ್ತಾನೆ—ಎಂದಿಲ್ಲಿ ಹೇಳಿದೆ. ಕನ್ನಡಕ್ಕೆ ವ್ಯಾಕರಣ ಬೇಡವೆನ್ನುವವರು ಲಕ್ಷಿಸಬೇಕಾದ ಅಂಶವಿದು.

ವ್ಯಾಕರಣಪರಿಜ್ಞಾನವೆಂಬುದು ಪಾಂಡಿತ್ಯ ಪ್ರತಿಭೆಗಳಿಗೆ ಜೀವಾತುವಾಗಿರುತ್ತದೆ. ಅದು ಇಲ್ಲದವನ ಬದುಕು ಬಡಕಲು ; ನ್ಯೂನತರ. ಇದಕ್ಕೊಂದು ಇತಿಹಾಸ ಕಥನವಿದೆ—ಶಾಲಿವಾಹನನೆಂಬ ರಾಜನು ಹೊಸತಾಗಿ ವರಿಸಿದ ರಾಣಿಯೊಂದಿಗೆ ಜಲಕೇಳಿಯಾಡುತ್ತ ಆಕೆಯ ಮುಖಕ್ಕೆ ನೀರೆರಚಿದನು. ಆಗ ಆಕೆ ಸಂಸ್ಕೃತದಲ್ಲಿ 'ಮೋದಕಂ ದೇಹಿ ಮುಖೇ' (ಮುಖೇ ಉದಕಂ ಮಾ ದೇಹಿ)—ಮುಖಕ್ಕೆ ನೀರೆರಚಬೇಡಿ—ಎಂದಳು. ಆ ಮಾತಿಗೆ ರಾಜನು 'ಮುಖೇ ಮೋದಕಂ ದೇಹಿ'—ಬಾಯಿಗೆ ಕಡುಬನ್ನು ಕೊಡಿ—ಎಂದು ಅರ್ಥ ಮಾಡಿಕೊಂಡು ಕಡುಬನ್ನು ತರಿಸಿದನು ! ತನ್ನನ್ನು ವರಿಸಿದ ರಾಜನು ವ್ಯಾಕರಣವರಿತು ಅರ್ಥಮಾಡಿಕೊಳ್ಳಲಾರದವನೆಂದು ಆಕೆಗೆ ತಿಳಿಯಿತು. ಮುಂದೆ, ಶರ್ವವರ್ಮನೆಂಬ ವೈಯಾಕರಣನು ಕಾತಂತ್ರ ವ್ಯಾಕರಣವನ್ನು ರಚಿಸಿ, ಶಾಲಿವಾಹನನಿಗೆ ಕಲಿಸಿ, ಅವನನ್ನು ಬುದ್ಧಿವಂತನನ್ನಾಗಿ ಮಾಡಿದನೆಂದು ತಿಳಿದು ಬರುತ್ತದೆ. (ಕನ್ನಡದಲ್ಲಿ ಕಾವ್ಯಾವಲೋಕನವನ್ನೂ

ಸಂಸ್ಕೃತದಲ್ಲಿ ಕರ್ಣಾಟಕ ಭಾಷಾಭೂಷಣವೆಂಬ ವ್ಯಾಕರಣ ಕೃತಿಯನ್ನೂ ರಚಿಸಿದ ನಾಗವರ್ಮನಿಗೆ 'ಅಭಿನವ (ಇದಾನೀಂತನ) ಶರ್ವವರ್ಮ' ಎಂಬ ಬಿರುದು ಬಂದುದು ಈ ಶರ್ವವರ್ಮನ ಹಿರಿಮೆಯ ದ್ಯೋತಕವೆನಿಸುವುದು.)

ವ್ಯಾಕರಣಜ್ಞಾನವು ಮನುಷ್ಯನಿಗೆ ಲೌಕಿಕೋನ್ನತಿಗೆ ಮಾತ್ರವೆ ಅಲ್ಲ, ಮೋಕ್ಷಕ್ಕೂ ಸಾಧನವಾದುದೆಂದು ಹೇಳಲಾಗಿದೆ. (ಮೋಕ್ಷಸಾಧಕ ದರ್ಶನ ಶಾಸ್ತ್ರಗಳಲ್ಲಿ ವ್ಯಾಕರಣವೂ ಒಂದು ಎಂಬುದನ್ನು ಹಿಂದೆಯೇ ಹೇಳಿದೆ)

ವ್ಯಾಕರಣಾತ್ ಪದಸಿದ್ಧಿಃ
ಪದಸಿದ್ಧೇರರ್ಥನಿರ್ಣಯೋ ಭವತಿ
ಅರ್ಥೇ ತತ್ವಜ್ಞಾನಂ
ತತ್ವಜ್ಞಾನಾತ್ ಪರಂ ಶ್ರೇಯಃ

ಈ ಆರ್ಯಾಛಂದಸ್ಸಿನ ಪದ್ಯದ ರೂಪವು ಶಬ್ದಮಣಿದರ್ಪಣದಲ್ಲಿ ಕಂದಪದ್ಯದಲ್ಲಿ ಹೀಗಿದೆ—

ವ್ಯಾಕರಣದಿಂದೆ ಪದಮಾ
ವ್ಯಾಕರಣದ ಪದದಿನರ್ಥಮರ್ಥದೆ ತತ್ತ್ವಾ
ಲೋಕಂ ತತ್ತ್ವಾಲೋಕದಿ
ನಾಕಾಂಕ್ಷಿಪ ಮುಕ್ತಿಯಕ್ಕುಮದೆ ಬುಧರ್ಗೆ ಫಲಂ

ಆಧುನಿಕ ವಿದ್ವಾಂಸರ ಮತ

ಈವರೆಗಿನ ಪ್ರತಿಪಾದನೆಯಂತೆ, ಯಾವ ವಿದ್ಯಾಭ್ಯಾಸಕ್ಕೂ ಜೀವನೋತ್ಕರ್ಷ ಸಾಧನೆಗೂ ಭಾಷಾಭ್ಯಾಸವೇ ಮೂಲ. ಭಾಷಾಭ್ಯಾಸದ ನೆಲೆನಿಂತಿರುವುದು ಆ ಭಾಷೆಯ ವ್ಯಾಕರಣದಲ್ಲಿ. ಈ ಬಗೆಯ ಪರಿಜ್ಞಾನ ಪರಂಪರೆ ಹಿಂದಿನಿಂದಲೇ ಪ್ರಸ್ತುತವೆನಿಸಿ ಪ್ರಚಲಿತಗೊಂಡು ಬಂದಿದೆ. ವ್ಯಾಕರಣಕ್ಕೆ ಅನನ್ಯ ಪ್ರಾಶಸ್ತ್ಯ ಹಾಗೂ ಅನಿವಾರ್ಯತೆ ಸಂದಿದೆ. ಇದನ್ನರಿತ ವಿದ್ವಾಂಸರು ವಿಚಾರವುಕ್ಕಿ ವ್ಯಾಕರಣ ಕೃತಿಗಳನ್ನು ರಚಿಸುತ್ತ ಬಂದಿದ್ದಾರೆ ; ವ್ಯಾಕರಣಸಮೀಕ್ಷೆಗಳೂ ನಡೆಯುತ್ತ ಬಂದಿವೆ. ಆದರೆ, ಆಧುನಿಕ ಕಾಲವು ಕನ್ನಡಕ್ಕೆ ಸಂಬಂಧಪಟ್ಟಂತೆ, ತನ್ನ ವೈಚಾರಿಕತೆಯ ಸೋಗಿನ ಪರಚುಕೊಂಬೆಗಳನ್ನು ಹರಡುತ್ತ ಬಂದಂತೆಲ್ಲ ವ್ಯಾಕರಣ ಪ್ರಾಶಸ್ತ್ಯದ ಮೇಲೆ ನೆರಳುಗತ್ತಲೆಯನ್ನು ಬೀಳಿಸುತ್ತಿದೆ. ಕನ್ನಡವ್ಯಾಕರಣವನ್ನು ಮುಸುಕು ಗೊಳಿಸುತ್ತಿದೆ ! ಭಾಷಾಶಾಸ್ತ್ರದ ಲಾಕ್ಷಣಿಕವಿಚಾರಗಳು ವ್ಯಾಕರಣವನ್ನು ತುಳಿದು ಹಾಕುತ್ತಿವೆ. ಭಾಷೆಯ ಬೆಳವಣಿಗೆ, ಮಾರ್ಪಾಡು, ಸಹಜತೆಗಳ ಹೆಸರಿನಲ್ಲಿ ವ್ಯಾಕರಣ

ದೋಷಗಳು ಇದ್ದರೂ ಕಾಣದಾಗುತ್ತಿವೆ. ಕಂಡು ಬಂದರೂ ಗಣನೆಗೆ ಬಾರದಾಗುತ್ತಿವೆ. ಭಾಷಾಶಾಸ್ತ್ರವು ಭಾಷಾಪ್ರಯೋಗದ ತಪ್ಪೊಪ್ಪುಗಳನ್ನು ಲಕ್ಷಿಸುವುದಿಲ್ಲ. ಪರಿವರ್ತನೆಯು ಮತ್ತು ಪ್ರಕಾರಗಳ ಲಾಕ್ಷಣಿಕತೆಯಲ್ಲಿ ತಪ್ಪುಗಳನ್ನು ಮುಚ್ಚಿ ಹಾಕುತ್ತದೆ. ಪ್ರಯೋಗ ವ್ಯತ್ಯಾಸವೆಂದು, ಸಹಜತೆಯೆಂದು ಸಮರ್ಥಿಸಿಕೊಳ್ಳುತ್ತದೆ. ಇದಕ್ಕಾಗಿ ಉದಾಹರಣೆಗಳನ್ನೂ ಕೊಡುತ್ತದೆ. ಇದರಿಂದ ಈ ಆಧುನಿಕ ಕಾಲದಲ್ಲಿ ವ್ಯಾಕರಣದ ಬಗೆಗೆ ಕನ್ನಡದಲ್ಲಿ ತೀರಾ ಅವಜ್ಞೆಯುಂಟಾಗಿ ಬೆಳೆದುಹೋಗಿದೆ !

ಈ ತಿರಸ್ಕಾರಕ್ಕೆ ಹಾಗೂ ವ್ಯಾಕರಣದ ಅಲಕ್ಷ್ಯಕ್ಕೆ ಬೆಂಬಲ ಕೊಡುವ ಸೂಕ್ತಿಗಳು, ಕಥನಗಳು, ಕವಿವಾಣಿಗಳೂ ಇಂಥವರಿಗೆ ದೊರಕುತ್ತದೆ. ಸುಮಾರು ಏಳನೆಯ ಶತಮಾನದಲ್ಲಿದ್ದ ಶ್ರೀ ಶಂಕರಾಚಾರ್ಯರು ಭಕ್ತಿ ನೀತಿಬೋಧಕವಾದ 'ಮೋಹ ಮುದ್ಗರ'ದಲ್ಲಿ ಹೀಗೆಂದಿದ್ದಾರೆ—

'ಸಂಪ್ರಾಪ್ತೇ ಸನ್ನಿಹಿತೇ ಕಾಲೇ ನಹಿ ನಹಿ ರಕ್ಷತಿ ಡುಕುರುಞ್ ಕರಣೇ ।। ಭಜ ಗೋವಿಂದಂ'

ಈ ಮಾತಿಗೆ ಅರ್ಥಮಾಡುವ ಹೆಚ್ಚಿನವರೂ 'ಮರಣಕಾಲ ಸಮೀಪಿಸಿದಾಗ ವ್ಯಾಕರಣ ನಿನ್ನನ್ನು ರಕ್ಷಿಸುವುದಿಲ್ಲ' ಎಂದು ಅರ್ಥ ಹೇಳುವರು. ವ್ಯಾಕರಣವೆಂಬುದು ಬೇಡವಾದುದೆಂಬುದಕ್ಕೆ ಶಂಕರಾಚಾರ್ಯರಿಂದ ಸಮರ್ಥನೆ ಪಡೆಯುವರು. ಆಗ ಇಲ್ಲೊಂದು ಪ್ರಶ್ನೆ ಉದ್ಭವಿಸುತ್ತದೆ. ಭಾರತೀಯ ದರ್ಶನಶಾಸ್ತ್ರಗಳಲ್ಲಿ ಪಾಣಿನೀಯವೂ ಒಂದಾಗಿರುವಾಗ, ಅಲ್ಲಿಯ ವ್ಯಾಕರಣ ಪ್ರಕ್ರಿಯೆಯನ್ನು ಉಲ್ಲೇಖಿಸಿ, ಜ್ಞಾನಿಗಳಾದ ಶಂಕರರು ಆ ಅರ್ಥದಲ್ಲಿ ಈ ಮಾತನ್ನು ಹೇಳಿರಬಹುದೆ ? ಎಂಬುದು. ವಾಸ್ತವವಾಗಿ ಇದರ ಅರ್ಥ 'ಡೂ ಕೃಞ್ ಕರಣೇ' ಎಂಬ ಶುದ್ಧಪಾಠವನ್ನು 'ಡುಕುರುಞ್ ಕರಣೇ' ಎಂಬ ಅಪಪಾಠವಾಗಿ ಉಚ್ಚರಿಸುವುದು ಸಲ್ಲದು ಎಂದೇ ಆಗಿರುತ್ತದೆ. ಹೊಳೆನರಸೀಪುರದ ಶ್ರೀ ಸಚ್ಚಿದಾನಂದ ಸರಸ್ವತೀ ಸ್ವಾಮಿಗಳು 'ವ್ಯಾಕರಣದ ಅಪಪಾಠ ನಿನ್ನನ್ನು ರಕ್ಷಿಸದು' ಎಂತಲೆಲ್ಲ ವ್ಯಾಖ್ಯಾನ ಮಾಡಿರುತ್ತಾರೆ.

'ಪ್ರಯೋಗಶರಣಾಃ ವೈಯಾಕರಣಾಃ' ಎಂಬ ಸೂಕ್ತಿಯೂ ಪ್ರಸಿದ್ಧವಾದುದು. ಪ್ರಯೋಗವನ್ನು ಆಶ್ರಯಿಸಿಯೇ ವ್ಯಾಕರಣಸೂತ್ರ (ಲಕ್ಷಣ ನಿರೂಪಣೆ) ಇರುತ್ತದೆ. ಇದನ್ನು ಊರುಗೋಲಾಗಿಟ್ಟುಕೊಂಡಿರುವ ವ್ಯಾಕರಣ ವಿರೋಧಿಗಳು ಹೀಗೆನ್ನುವರು— ಭಾಷೆ ಮತ್ತು ಸಾಹಿತ್ಯರೂಪ ಇವೆರಡೂ ನಿಂತ ನೀರಲ್ಲ. ಬೆಳೆಯುತ್ತ ಮಾರ್ಪಡುತ್ತ ಮುಂದುವರಿಯುತ್ತವೆ. ಅವನ್ನು ವ್ಯಾಕರಣ ಮರ್ಯಾದೆಗೆ ಒಳಪಡಿಸುವುದೆಂದರೆ— ಬೆಳೆಯದಂತೆ ಮಾಡುವುದಾಗುತ್ತದೆ. ಭಾಷೆಯನ್ನೂ ಸಾಹಿತ್ಯವನ್ನೂ ಅವುಗಳಷ್ಟಕ್ಕೇ ಹೋಗಲು ಬಿಡಬೇಕು. ಶಾಸ್ತ್ರಬಂಧನದಲ್ಲಿ ಅವನ್ನಿಡಬಾರದು. ಯಾವುದೋ ಕಾಲದಲ್ಲಿ ಹುಟ್ಟಿಬಂದ ವ್ಯಾಕರಣವನ್ನು ಮುಂದೆ ತಂದು ತಡೆಯೊಡ್ಡಬಾರದು—

ಎಂದು ವಾದಿಸುವವರು ಇದ್ದಾರೆ. ಈ ವಿಚಾರದಲ್ಲಿ ಇನ್ನೂ ಮುಂದುವರಿದು— ಕನ್ನಡಕ್ಕೆ ವ್ಯಾಕರಣ ಅನಾವಶ್ಯಕ. ಅದನ್ನು ಕಲಿಸಬೇಕಾಗಿಲ್ಲ. ವ್ಯಾಕರಣವನ್ನೇನೂ ಕಲಿಯದ ನಿರಕ್ಷರರು ಕೂಡ ಮಾತಾಡುವಾಗ ವ್ಯಾಕರಣ ಶುದ್ಧವಾಗಿಯೇ ಮಾತಾಡುತ್ತಾರೆ. ಯಾರೊಬ್ಬರೂ 'ರಾಮನು ಬಂದನು, ಸೀತೆ ಹೋದಳು' ಎನ್ನುತ್ತಾರಲ್ಲದೆ, ರಾಮನು ಬಂದಳು ಅಥವಾ ಬಂತು ಎನ್ನುವುದಿಲ್ಲ. ಸೀತೆ ಹೋದನು ಎಂದೂ ಹೇಳುವುದಿಲ್ಲ. ಹಾಗೆ ಯಾರೂ ಬರೆಯುವುದೂ ಇಲ್ಲ. ಮಾತಿನಲ್ಲಿ, ಬರಹದಲ್ಲಿ ಅರ್ಥ ಸ್ಪಷ್ಟವಾದರೆ ಸಾಕು, ಅದೇ ವ್ಯಾಕರಣಶುದ್ಧ ಭಾಷೆ—ಹೀಗೆನ್ನುವವರಿದ್ದಾರೆ. ಇದೇ ವರ್ಗದಲ್ಲಿ ಇನ್ನು ಕೆಲವರು—ಹಳಗನ್ನಡಕ್ಕೆ ಆ ಹಳಗನ್ನಡ ವ್ಯಾಕರಣ ಬೇಕಾಗಬಹುದು. ಹೊಸಗನ್ನಡಕ್ಕೆ ವ್ಯಾಕರಣ ಬೇಡ : ಆ ಹಳಗನ್ನಡ ವ್ಯಾಕರಣ ಬೇಡವೇ ಬೇಡ'—ಎನ್ನುವರು. ಹೊಸಗನ್ನಡ ವ್ಯಾಕರಣವೆಂಬುದು ಹಳಗನ್ನಡ ವ್ಯಾಕರಣಕ್ಕಿಂತ ಭಿನ್ನವಾಗಿರದೆ, ಅದರ ತಳಪಾಯದಲ್ಲಿಯೇ ಮೇಲೆದ್ದು, ಅವುಗಳ ಪಾರಿಭಾಷಿಕಗಳನ್ನು ಬಳಸಿಕೊಂಡು ಮೆರೆಯುತ್ತಿವೆಯೆಂಬುದನ್ನು ಇಂಥವರು ಲಕ್ಷಿಸುವುದಿಲ್ಲ.

ಕನ್ನಡವನ್ನು ಐಚ್ಛಿಕವಾಗಿ ತೆಗೆದುಕೊಂಡು ವಿಶೇಷಾಧ್ಯಯನ ಮಾಡಲು ವಿಶ್ವವಿದ್ಯಾಲಯಗಳು ಆಸ್ಪದಮಾಡುತ್ತಿರುವುದು ನಿಜ. ಹಿಂದೆ, ವಿಶೇಷಾಧ್ಯಯನಕ್ಕಾಗಿ ವ್ಯಾಕರಣ, ಛಂದಸ್ಸು, ಅಲಂಕಾರ, ರಸಾದಿ ಗ್ರಂಥಗಳ ಪೂರ್ಣಭಾಗವೇ ಪಠ್ಯವಾಗಿರುತ್ತಿತ್ತು. ಅವುಗಳೊಂದಿಗೆ ಪಂಪ, ರನ್ನ, ರುದ್ರಭಟ್ಟ, ರಾಘವಾಂಕ ಮುಂತಾದ ಅಯ್ದು ಕವಿಗಳ ಕಾವ್ಯಗಳನ್ನು ಪೂರ್ಣವಾಗಿ ಅಧ್ಯಯನಕ್ಕೆ ಇಡಲಾಗುತ್ತಿತ್ತು. (ಉದಾ : ಮದ್ರಾಸು ವಿಶ್ವವಿದ್ಯಾಲಯದಲ್ಲಿ ವಿದ್ವಾನ್ ಮಾಡಿಕೊಂಡ ಈ ಲೇಖಕನಿಗೆ (1941, 1942) ವಿದ್ವಾನ್ ಪ್ರಥಮಕ್ಕೆ ವ್ಯಾಕರಣವಾಗಿ 'ಶಬ್ದಮಣಿ ದರ್ಪಣ' ಪೂರ್ತಿ, ಅಂತಿಮ ಪರೀಕ್ಷೆಗೆ 'ಶಬ್ದಾನುಶಾಸನ' ಪೂರ್ತಿ ಪಠ್ಯಭಾಗವಾಗಿದ್ದವು.) ಆದರೆ ಈಗೀಗ ಕಾವ್ಯಗಳಿಂದ ಭಾಗಗಳನ್ನು ಮಾತ್ರ ಆರಿಸಲಾಗುತ್ತಿದೆ. ವ್ಯಾಕರಣ ಛಂದೋಲಂಕಾರಾದಿಗಳನ್ನು ರುಚಿಗೆ ತಕ್ಕಷ್ಟು ಮಾತ್ರ ಇಟ್ಟುಕೊಳ್ಳುವಂತೆ ತೋರುತ್ತದೆ. ಇದು ವಿದ್ಯಾರ್ಥಿಗಳಿಗೆ ಭಾರವಾಗಬಾರದೆಂಬ ಉದ್ದೇಶದಿಂದಲೇ ಇರಬಹುದು. ಎಂ.ಎ. ತರಗತಿಗೆ ಶಬ್ದಮಣಿದರ್ಪಣವೇ ಬೇಡವೆಂದು ತಿಳಿಯುವ ವಿಶ್ವವಿದ್ಯಾಲಯವೂ ನಮ್ಮ ರಾಜ್ಯದಲ್ಲಿದೆ. ವಾಸ್ತವವಾಗಿ ಶಬ್ದಮಣಿ ದರ್ಪಣವನ್ನು ಎಂ. ಎ. ಕನ್ನಡವಾಗಿ ಪ್ರಥಮ ಪರೀಕ್ಷೆಗೂ ಶಬ್ದಾನುಶಾಸನವನ್ನು ಅಂತಿಮ ಪರೀಕ್ಷೆಗೂ ಪಠ್ಯವಾಗಿ ಇಡಬೇಕಾಗಿತ್ತು ಎಂಬುದು ಈ ಲೇಖಕನ ಅಭಿಪ್ರಾಯ. ಹೀಗೆ ಕನ್ನಡದಲ್ಲಿ ಪಠ್ಯಾಂಶ ತೆಳುವಾಗಲು ಕಾರಣ ಸ್ಪಷ್ಟ. ವಿದ್ಯಾರ್ಥಿಗಳಿಗೆ ಕಷ್ಟವಾಗಬಾರದು, ಹೆಚ್ಚು ಮಂದಿ ತೇರ್ಗಡೆಗೊಳ್ಳಬೇಕು ಎಂಬುದೇ.

ವ್ಯಾಕರಣದ ಬಗೆಗೆ ಅನೇಕ ರೀತಿಯ ಕೆಡೆನುಡಿಗಳನ್ನು ಆಡಲಾಗುತ್ತಿದೆ— ವ್ಯಾಕರಣ ಒಂದು ಶುಷ್ಕಶಾಸ್ತ್ರ, ಕಬ್ಬಿಣದ ಕಡಲೆ. ವ್ಯಾಕರಣವಿರುವುದು ಕಲ್ತು

ಮರೆಯುವುದಕ್ಕೆ, ವ್ಯವಹಾರಕ್ಕಲ್ಲ, ಅದು ಭಾಷೆಗೆ ಕಾಲ್ತೊಡಕು, ಅದನ್ನಿಟ್ಟಿರುವುದು ಪರೀಕ್ಷೆಗಾಗಿ ಮಾತ್ರ, ಅನುಸರಣೆಗಲ್ಲ. ಆದುದರಿಂದ ಪರೀಕ್ಷೆಗಳಲ್ಲಿ ವ್ಯಾಕರಣದ ತಪ್ಪಿಗಾಗಿ, ಕಾಗುಣಿತ ಸರಿಯಲ್ಲದುದಕ್ಕಾಗಿ ಅಂಕಗಳನ್ನು ಕಳೆಯುವುದು ತಪ್ಪು. ವಿದ್ಯಾರ್ಥಿಗೆ ಉತ್ತರ ಗೊತ್ತಿದೆಯೋ ಎಂದು ನೋಡಿದರೆ ಸಾಕು, ಅಂಕಗಳನ್ನು ಧಾರಾಳ ಕೊಡಬಹುದು. ಹಿಂದೀ, ಸಂಸ್ಕೃತಗಳನ್ನು ತೆಗೆದುಕೊಂಡವರು ಹೆಚ್ಚು ಅಂಕಗಳನ್ನು ಪಡೆಯುತ್ತಾರೆ, ಹೆಚ್ಚು ಮಂದಿ ತೇರ್ಗಡೆಯೂ ಆಗುತ್ತಾರೆ. ಕನ್ನಡದಲ್ಲಿ ಹೆಚ್ಚು ಮಂದಿ ತೇರ್ಗಡೆಯಾಗುವಂತೆ ಮಾಡಬೇಕು. ಇಂತಹ ಅಭಿಪ್ರಾಯಗಳು ಈಗೀಗ ಮನೆಮಾತಾಗಿರುವುದು ಕನ್ನಡದ ದೌರ್ಭಾಗ್ಯವೇ ಸರಿ.

ವಿಚಾರಶೀಲರು ಸ್ವಲ್ಪ ಆಚೀಚೆಗೆ—ಇತರ ಭಾಷೆಗಳ ಕಡೆಗೆ, ಅವು ತಮ್ಮ ವ್ಯಾಕರಣವನ್ನು ಧಿಕ್ಕರಿಸಿವೆಯೋ ಎಂಬೆಡೆಗೆ ಏಕೆ ನೋಡುವುದಿಲ್ಲ ? ಸಂಸ್ಕೃತ, ಹಿಂದೀ, ಇಂಗ್ಲಿಷ್ ಇವನ್ನು ಕಲಿಯುವುದೆಂದರೆ, ಹೆಜ್ಜೆ ಹೆಜ್ಜೆಗೂ ವ್ಯಾಕರಣವೇ ಅವಕ್ಕೆ ಊರುಗೋಲಾಗಿರುತ್ತದೆ. ಸಂಸ್ಕೃತ ಕಲಿಯಬೇಕಾದರೆ, ಪ್ರಾರಂಭದಲ್ಲಿಯೇ ಲಿಂಗ, ವಚನ, ವಿಭಕ್ತಿಗಳು ಬೇರೆಬೇರೆ ಅಂತ್ಯಾಕ್ಷರಗಳಿಗನುಗುಣವಾಗಿ ಮಾರ್ಪಡುವ ವ್ಯಾಕರಣವನ್ನೇ ಓದಬೇಕಾಗುತ್ತದೆ. ಓದಿದರೆ ಸಾಕೆ ? ಕಂಠ ಪಾಠಮಾಡಬೇಕಾಗುತ್ತದೆ. ಇನ್ನು ಸಂಧಿ, ಸಮಾಸ, ಕೃದಂತ, ಕ್ರಿಯಾರೂಪಗಳ ವೈವಿಧ್ಯವನ್ನು ತಿಳಿಯಲೇಬೇಕಾಗುತ್ತದೆ. ಸಂಸ್ಕೃತ ಕಲಿಯುವುದೆಂದರೆ, ಅದರ ವ್ಯಾಕರಣ ಕಲಿಯುವುದೇ ಆಗಿರುತ್ತದೆ. ಇನ್ನು ಹಿಂದೀ ಭಾಷೆಯನ್ನು ನೋಡಿದರೆ, ಆ ಭಾಷೆಯನ್ನು ವ್ಯಾಕರಣದೊಂದಿಗೇ ಕಲಿಯಬೇಕಾಗುತ್ತದೆ. ವಾಕ್ಯಗಳ ಕೊನೆಗೆ ಬರುವ ಹೈ, ಹೈಂ, ಹುಂ, ಹೋ ಎಂಬ ವಾಕ್ಯಪೂರ್ಣಕಗಳು, ಕೋ, ಸೇ, ಕಾ, ಕೀ, ಕೇ ಪ್ರತ್ಯಯಗಳು, ನೇ ಪ್ರಯೋಗ, ಲಿಂಗನಿರ್ಣಯ ವಿಚಾರ (ಹಿಂದಿಯಲ್ಲಿ ನಪುಂಸಕ ಲಿಂಗವಿಲ್ಲ) ಇಂತಹ ವ್ಯಾಕರಣ ವಿಷಯಗಳು ಭಾಷಾಭ್ಯಾಸದೊಂದಿಗೇ ಅವಿನಾಭಾವದಿಂದ ಕೂಡಿರುತ್ತವೆ. ವ್ಯಾಕರಣವನ್ನು ಮೂಲೆಯಲ್ಲಿ ಕಟ್ಟಿಟ್ಟು ಹಿಂದೀಭಾಷೆಯನ್ನು ಕಲಿಸಲು ಅಥವಾ ಕಲಿಯಲು ಸಾಧ್ಯವೇ ಇಲ್ಲ. ಇನ್ನು ಇಂಗ್ಲಿಷ್ ಕಲಿಯಬೇಕಾದರೆ, ಇಂತಿಂತಹ ಶಬ್ದಕ್ಕೆ ಇಂತಿಂತಿಹ ಅಕ್ಷರಗಳು, ಇಂತಿಂತಹ ಉಚ್ಚಾರಣೆ ಎಂಬುದು ಪೂರ್ವನಿಶ್ಚಿತ ವ್ಯಾಕರಣ ವಿಷಯವಾಗಿದೆ. Put, But, Cycle, Psychology, Church, Charity, Character, See, Sea, I, Eye, Ear, Year ಇಂತಹ ಉಚ್ಚಾರಭೇದಗಳು ಇಂಗ್ಲಿಷಿನಲ್ಲಿ ಅಸಂಖ್ಯ. ಶಬ್ದರೂಪ, ವಾಕ್ಯರೂಪ, ಲಿಂಗ, ವಚನ, ವಿಭಕ್ತಿ, ಕಾಲ ಮುಂತಾದ ವ್ಯಾಕರಣವೇ ಇಂಗ್ಲಿಷಿನ ಜೀವಾಳವಾಗಿದೆ.

ಕನ್ನಡಕ್ಕೆ ವ್ಯಾಕರಣವು ತ್ಯಾಜ್ಯವಲ್ಲ, ಉಪಾದೇಯ, ಅನಿವಾರ್ಯವೆಂಬುದು ಯೋಚಿಸಿದರೆ ಹೊಳೆಯದಿರದು. ಶಬ್ದಮಣಿ ದರ್ಪಣದ ಒಂದು ಕಂದಪದ್ಯದಲ್ಲಿ ವ್ಯಾಕರಣದ ಅನಿವಾರ್ಯತೆಯನ್ನು ಹೀಗೆ ತಿಳಿಸಲಾಗಿದೆ—

ಜನಮಂಗೀಕರಿಪುದು ನೆ
ಟ್ಟನೆ ಸಂಬಂಧಾಭಿಧೇಯ ಶಕ್ಯಾನುಷ್ಠಾ
ನ ನಿಜೇಷ್ಟಸಿದ್ಧಿಗಳ್ ನೆಲ
ಸಿ ನಿಂದ ಕಾರಣದೆ ಶಬ್ದಮಣಿದರ್ಪಣಮಂ (ಪೀಠಿಕೆ : 7)

ಕನ್ನಡ ಭಾಷೆಗೆ ದಾರಿತೋರಿಸುವ ವ್ಯಾಕರಣದಲ್ಲಿ (ಶಬ್ದಮಣಿದರ್ಪಣದಲ್ಲಿ) ನೆಲಸಿನಿಂತಿರುವ ನಾಲ್ಕು ಅಂಶಗಳಿವು : (1) ಸಂಬಂಧ—ಪ್ರಕೃತಿ ಪ್ರತ್ಯಯ ಸಂಬಂಧ, ವಿಶೇಷ್ಯ ವಿಶೇಷಣ ಸಂಬಂಧ, ಲಿಂಗ ವಚನ, ವಿಭಕ್ತಿ ಸಂಬಂಧ, ಕಾಲ ಕ್ರಿಯಾ ಸಂಬಂಧ—ಇವುಗಳ ಪರಿಜ್ಞಾನವಿಲ್ಲದಿದ್ದರೆ ಭಾಷಾಪ್ರಯೋಗವೇ ಅಸಾಧ್ಯ. (2) ಅಭಿಧೇಯ—ಎಂದರೆ ಅರ್ಥ. ಸಂಬಂಧವು ಸರಿಯಾದಾಗ ಅರ್ಥವು ಸ್ಫುಟ ವಾಗುವುದು. (3) ಶಕ್ಯಾನುಷ್ಠಾನ—ಉದ್ದೇಶಿತವಾದ ಅರ್ಥ ಬರಬೇಕಾದರೆ, ಆ ಆ ಪದವಾಕ್ಯ ಸ್ವರೂಪ ಹೇಗಿರಬೇಕೋ ಹಾಗೆ ರೂಪಿಸಿಕೊಳ್ಳುವುದು ಶಕ್ಯಾನುಷ್ಠಾನವೆನಿ ಸುತ್ತದೆ. (4) ಈ ಮೂರು ಅಂಶಗಳಿಂದ ವಾಕ್ಪ್ರಯೋಗದ ಇಷ್ಟಸಿದ್ಧಿ (ಕಾರ್ಯ ಈಡೇರಿಕೆ) ಯಾಗುವುದು. ಇಲ್ಲಿ ಹೇಳಲಾದ ನಾಲ್ಕು ವಿಷಯಗಳು ವ್ಯಾಕರಣ ವಿಷಯಗಳೇ ಆಗಿವೆ. ಕನ್ನಡಕ್ಕೆ ವ್ಯಾಕರಣವೇಕೆ, ನಾವು ಮಾತಾಡುವ ಬರೆವ ಕನ್ನಡ ವ್ಯಾಕರಣ ಬದ್ಧವಾಗಿಯೇ ಇದೆ ಎನ್ನುವವರು ಮೇಲಿನ ಸೂತ್ರಪದ್ಯವನ್ನು ಅರ್ಥ ಮಾಡಿಕೊಂಡು ತಂತಮ್ಮ ವಾಕ್ಪ್ರಯೋಗಗಳನ್ನು ಒರೆಹಚ್ಚಲು ಸಿದ್ಧರಿದ್ದರೆ ಸಾಕು. ವಾಸ್ತವವಾಗಿ ಅಂಥವರು ಪ್ರಯೋಗಿಸುವ ಶಬ್ದ, ಪದ, ವಾಕ್ಯಗಳಲ್ಲಿ ಅಪ್ರಾಮಾಣ್ಯಕ್ಕೆ (ವ್ಯಾಕರಣದೋಷಗಳಿಗೆ) ಮಿತಿಯುಂಟೆ ? ಅವರ ಪ್ರಯೋಗಗಳಲ್ಲಿ ಕಂಡುಬರುವ ಕಾಗುಣಿತದ ದೋಷ, ಸಂಧಿ, ಸಮಾಸ, ವಚನ, ವಿಭಕ್ತಿದೋಷಗಳಿಗೆ ಮಿತಿಯಿದೆಯೆ ? ವಿಶೇಷ್ಯ ವಿಶೇಷಣ ದೋಷಗಳು ಕಡಮೆಯೆ ? ಹೇಗೊ ದಕ್ಕುತ್ತದೆ, ಕನ್ನಡದಲ್ಲಿ ನಡೀತದೆ ಎಂಬುದೇ ಅವರ ಧೋರಣೆ ಎಂದರೆ ತಪ್ಪೇನು ? ಎಲ್ಲವಕ್ಕೂ ಅವರವರ ಕೃತಿಗಳಿಂದ ತಪ್ಪುಗಳನ್ನು ಆಯ್ದು ತೋರಿಸಿಕೊಡುವುದೆಂದರೆ ಅದೊಂದು ಪುಸ್ತಕವೇ ಆದೀತು. ಅಷ್ಟೇ ಅಲ್ಲ, ಮೂಕೊರೆಯನಿಗೆ ಕನ್ನಡಿ ತೋರಿಸಿದಂತಾಗಿ ಅಂಥವರಿಂದ ಬಯ್ಯಿಸಿಕೊಳ್ಳುವುದಾದೀತು. ಆದುದರಿಂದ ಪಾತ್ರರನ್ನು ಯಾರನ್ನೂ ಉಲ್ಲೇಖಿಸದೆ, ಕೆಲವು ಉದಾಹರಣೆಗಳನ್ನು ಮಾತ್ರಕೊಟ್ಟು ಈ ಬರೆಹವನ್ನು ಪೂರ್ತಿಗೊಳಿಸಲಾಗು ವುದು.

(1) ವ್ಯಾಕರಣವನ್ನು ಅಲಕ್ಷಿಸುವ ಅಪಪ್ರಯೋಗಗಳು. (ಕಂಸದೊಳಗೆ ಶುದ್ಧರೂಪವಿದೆ) : ಕೈನ, ಕೈನಲ್ಲಿ, ಮೇನಲ್ಲಿ, ಮುಂಬಯಿನಲ್ಲಿ (ಕೈಯ, ಕೈಯಲ್ಲಿ, ಮೇಯಲ್ಲಿ, ಮುಂಬಯಿಯಲ್ಲಿ). ಪುಸ್ತಕಾನ (ಪುಸ್ತಕವನ್ನು). ಅಲ್ಲಿ ಅಂಗಡೀನೂ ಇಲ್ಲ (ಅಲ್ಲಿ ಅಂಗಡಿಯೂ ಇಲ್ಲ). ನೆಪರುರವರು, ಅರಸುರವರು (ನೆಪರು ಅವರು–ನೆಪರು

ವವರು, ಅರಸು ಅವರು— (ಅರಸುವವರು). — ಇವೆಲ್ಲ ಪದಮಧ್ಯಸಂಧಿ ದೋಷಗಳು.

ಕೆಳಗಿನವು ಅಪಶಬ್ದ ಪ್ರಯೋಗಗಳು : ದುಂಬಿ (ತುಂಬಿ), ಭುವಿ (ಬುವಿ, ಭೂಮಿ) ದಿಸೆ (ದೆಸೆ, ದಿಶೆ), ನನಸು, ಮನಸು, ತಪಸು (ನೆನಸು, ಮನಸ್ಸು, ಮನ, ತಪಸ್ಸು ತಪ), ನನ (ನನ್ನ), ಮೊರೆಹೋಗು (ಮರೆಹೋಗು), ಆಳ್ವಿಕೆ (ಅಳಿಕೆ, ಆಳುವಿಕೆ), ದುರಾಸೆ, ನಿರಾಸೆ (ದುರಾಶೆ, ನಿರಾಶೆ). ನಿಮ್ಮಗಳ (ನಿಮ್ಮ), ಒಗ್ಗಟ್ಟು (ಒಕ್ಕಟ್ಟು) —ಇತ್ಯಾದಿ.

(2) ಕರ್ತೃ ಕ್ರಿಯಾ ಸಂಬಂಧದೋಷ (ವಚನದೋಷ) (ಕಂಸದಲ್ಲಿ ಶುದ್ಧ ರೂಪವಿದೆ). ಜನ ಬರುತ್ತಾರೆ (ಜನ ಬರುತ್ತದೆ). ಅಧ್ಯಕ್ಷರು ತನ್ನ ಮಾತನ್ನು ಮುಂದು ವರೆಸಿದರು (ಅಧ್ಯಕ್ಷರು ತಮ್ಮ ಮಾತನ್ನು ಮುಂದುವರಿಸಿದರು). ಸರಕಾರ ಅಜ್ಞೆ ಮಾಡಿದರು (ಸರಕಾರ ಆಜ್ಞೆ ಮಾಡಿತು. ಸರಕಾರದವರು ಆಜ್ಞೆ ಮಾಡಿದರು). ಭಾರತದಲ್ಲಿ ಈಗ ಪ್ರತಿಯೊಂದು ಜಾತಿಯೂ ಪ್ರತ್ಯೇಕತೆಗಾಗಿ ಹೋರಾಡುತ್ತಿದ್ದಾರೆ. (ಭಾರತದಲ್ಲಿ ಈಗ ಪ್ರತಿಯೊಂದು ಜಾತಿಯೂ ಪ್ರತ್ಯೇಕತೆಗಾಗಿ ಹೋರಾಡುತ್ತಿದೆ). ಜಾತಿಯವರೂ ಹೋರಾಡುತ್ತಿದ್ದಾರೆ—ಎನ್ನಬಹುದು.

(3) ವಿಶೇಷ್ಯ ವಿಶೇಷಣ ಸಂಬಂಧದ ದೋಷ—

1. ನಗರದಲ್ಲಿ ಅಕ್ರಮವಾಗಿ ಕಟ್ಟಿದ ಮನೆಗಳನ್ನು ಮಾನವೀಯ ದೃಷ್ಟಿಯಿಂದ ಕೆಡವುತ್ತಿರುವುದನ್ನು ನಿಲ್ಲಿಸಲಾಯಿತು (ನಗರದಲ್ಲಿ ಅಕ್ರಮವಾಗಿ ಕಟ್ಟಿದ ಮನೆಗಳನ್ನು ಕೆಡವುತ್ತಿರುವುದನ್ನು ಮಾನವೀಯ ದೃಷ್ಟಿಯಿಂದ ನಿಲ್ಲಿಸಲಾಯಿತು.)

2. ಪರಕೀಯರ ದಾಳಿಗೆ ಒಳಗಾಗಿ ಸಮೃದ್ಧವಾಗಿದ್ದ ವಿಜಯನಗರ ಪತನ ಗೊಂಡಿತು (ಸಮೃದ್ಧವಾಗಿದ್ದ ವಿಜಯನಗರ ಪರಕೀಯರ ದಾಳಿಗೆ ಒಳಗಾಗಿ ಪತನ ಗೊಂಡಿತು).

3. ನಾಲ್ಕನೆಯ ಮಕ್ಕಳ ಯೋಗಕ್ಷೇಮ ಶಿಬಿರ (ಮಕ್ಕಳ ನಾಲ್ಕನೆಯ ಯೋಗ ಕ್ಷೇಮ ಶಿಬಿರ)

4. ತುಲಾಸಂಕ್ರಮಣಕಾಲದಲ್ಲಿ ತಲಕಾವೇರಿಯಲ್ಲಿ ಒಂದು ಕೊಳವಿದೆ. ಅದರಲ್ಲಿ ತೀರ್ಥ ಉದ್ಭವಿಸುತ್ತದೆ. (ತಲಕಾವೇರಿಯಲ್ಲಿ ಒಂದು ಕೊಳವಿದೆ. ಅದರಲ್ಲಿ ತುಲಾ ಸಂಕ್ರಮಣಕಾಲದಲ್ಲಿ ತೀರ್ಥ ಉದ್ಭವಿಸುತ್ತದೆ)

ಸಾಂಕೇತಿಕವಾಗಿ ಕೆಲವೇ ಉದಾಹರಣಗಳನ್ನಿಲ್ಲಿ ಕೊಡಲಾಗಿದೆ. ಪ್ರಚಲಿತ ಕನ್ನಡ ಪುಸ್ತಕಗಳಲ್ಲಿ, ಪತ್ರಿಕೆಗಳಲ್ಲಿ, ಕತೆ ಕಾದಂಬರಿಗಳಲ್ಲಿ, ಇಂಥವು ಎಷ್ಟೋ ಇವೆ. ಕನ್ನಡ ವ್ಯಾಕರಣವನ್ನು ಕಡೆಗಣಿಸುತ್ತಿರುವ ಪರಿಣಾಮವಿದು. (ಇನ್ನಷ್ಟು ವಿವರಕ್ಕಾಗಿ ಇದೇ ಲೇಖಕನ 'ಭಾಷಾದೀಪಿಕೆ' 1956, ಈಗ ಪುನರ್ಮುದ್ರಣಗೊಳ್ಳುತ್ತಿದ್ದು, ಆಸಕ್ತರು ಅದರಲ್ಲಿ ಕಾಣಬಹುದು).

ಅಕ್ಷರಗಳ ಜೋಡಣೆಯ ಘಟಕವಾಗಿ ಪದಗಳು, ಪದಗಳ ವಿವಿಕ್ತತೆಯ ಸಮಷ್ಟಿಯಾಗಿ ವಾಕ್ಯಗಳು ಇರುವುದೂ ವ್ಯಾಕರಣವಿಷಯವೇ ಆಗಿರುತ್ತದೆ. ಇದನ್ನು ಲೇಖಕರು, ಮುದ್ರಕರು, ಓದುಗರು ಸರಿಯಾಗಿ ತಿಳಿದಿದ್ದರೆ ಮಾತ್ರ ಕೇಶಿರಾಜನೆಂದಂತೆ 'ವ್ಯಾಕರಣದ ಪದದಿಂ ಅರ್ಥಂ' ಎಂಬ ಉಕ್ತಿ ಸಾರ್ಥಕವಾಗುವುದು. ಅದು ತಪ್ಪಿದರೆ, ಅನರ್ಥಕ ! ಉದಾ : 'ಶ್ರೀವನಿತೆಯರಸನೆ' ಎಂಬುದನ್ನು 'ಶ್ರೀವನಿತೆಯ' ಎಂಬಲ್ಲಿ ಎಡೆಬಿಟ್ಟು 'ರಸನೆ' ಎಂಬುದನ್ನು ಬೇರೆಯಾಗಿಟ್ಟು 'ಲಕ್ಷ್ಮೀದೇವಿಯ ನಾಲಗೆ' ಎಂದು ಅರ್ಥ ಮಾಡಿದರೆ ಹೇಗಾದೀತು ? ಹಾಗೆಯೇ 'ಬಸವರಾಜ ರಗಳೆ' ಎಂಬುದನ್ನು 'ಬಸವರಾಜರ ಗಳೆ' ಎಂದು ಬರೆದರೆ ಓದಿದರೆ ತಪ್ಪಾಗದೆ ? ಇಂತಹ ವಿವೇಕಜಾಗೃತಿಗೆ ವ್ಯಾಕರಣವೇ ಉತ್ತಮ ಸಾಧನ. ಕನ್ನಡಕ್ಕೆ, ಅದರಲ್ಲಿಯೂ ಹೊಸಗನ್ನಡಕ್ಕೆ, ವ್ಯಾಕರಣ ಅವಶ್ಯವಿಲ್ಲವೆನ್ನುವುದು ಕನ್ನಡಕ್ಕೆ ದ್ರೋಹವಷ್ಟೇ ಅಲ್ಲ ; ಕನ್ನಡದ ಕೊಲೆಗಡುಕತನ ವೆಂದರೆ ತಪ್ಪಲ್ಲ ! ಕನ್ನಡವನ್ನು ಜಾನಪದಗೊಳಿಸುವುದೂ ಹಾನಿಕರ.

ಕನ್ನಡದ ಜಾನಪದರೂಪ ಇಲ್ಲವೇ ವ್ಯಾವಹಾರಿಕರೂಪ ಪ್ರಚಲಿತವಾಗಿರುವುದು ತಪ್ಪಲ್ಲ. ಅದು ಹಾಗೆ ಇರಬೇಕಾದುದೇ ಸರಿ. ಆದರೆ, ಗ್ರಾಂಥಿಕ ರೂಪವನ್ನು ಕೆಡಿಸಿ, ಜಾನಪದಗೊಳಿಸುವುದು ಬೇಕಾಗಿಲ್ಲ. ಗ್ರಾಂಥಿಕ ಭಾಷೆ ಮಾರ್ಗಸಾಹಿತ್ಯಕ್ಕೆ ಅವಶ್ಯವಾಗಿ ಬೇಕು. ಜಾನಪದರು ಕೂಡ ತಿದ್ದಿಕೊಳ್ಳುವಂತೆ ಆಗಬೇಕು. ಹಾಗೆ ಆಗಬೇಕಾದರೆ, ಕನ್ನಡದ ವ್ಯಾಕರಣ ಸೂಕ್ಷ್ಮವನ್ನು ಅನುಲಕ್ಷಿಸಲೇಬೇಕಾಗುತ್ತದೆ. ವ್ಯಾಕರಣ ಎಂದೊಡನೆ ಕನ್ನಡ ಭಾಷೆಗೆ ಎಲ್ಲಿಂದಲೋ ಹೊರಳಿಸಿ ಇಟ್ಟ ಬಂಡೆಗಲ್ಲೆಂದು ಭಾವಿಸುವುದು ಸರಿಯಲ್ಲ. ಕನ್ನಡದ ವ್ಯಾಕರಣ ಎನ್ನುವಾಗ, ಎಲ್ಲ ಅಕ್ಷರಗಳ ಸ್ಪಷ್ಟವಾದ ಉಚ್ಚಾರಣೆ, ನಿರ್ದಿಷ್ಟ ಲಿಪಿರೂಪದಲ್ಲಿ ಅವನ್ನು ಬರೆಯುವುದು, ಶಬ್ದರಚನೆ, ಪದಸ್ವರೂಪ, ವಾಕ್ಯರಚನೆ ಇವೆಲ್ಲ ವ್ಯಾಕರಣವಲ್ಲದೆ ಮತ್ತೇನು ? ಕನ್ನಡದಲ್ಲಿ ಸಂಸ್ಕೃತವೂ ಇರುವುದರಿಂದ ಕನ್ನಡದ ಸಂಧಿಯೊಂದಿಗೆ ಸಂಸ್ಕೃತ ಸಂಧಿಗಳ ಪರಿಚಯ ಕನ್ನಡಕ್ಕೆ ಅನಿವಾರ್ಯ. ಸಮಾಸಗಳು, ಅವುಗಳಲ್ಲಿ ಅರಿಸಮಾಸ ಪರಿಚಯ, ಕೃತ್ತದ್ಧಿತ ಅವ್ಯಯಗಳು, ಕರ್ತೃ ಕರ್ಮ ಕ್ರಿಯಾ ರೂಪಗಳು, ನಾಮವಿಭಕ್ತಿ, ಅಖ್ಯಾತ ವಿಭಕ್ತಿಗಳು ಮತ್ತು ಇವನ್ನು ಪ್ರಯೋಗಿಸುವ ವಿಧಾನ, ಲಿಂಗ ವಚನ ಪುರುಷ ಕಾಲ ಪ್ರಯೋಗ ಇವೆಲ್ಲ ಕನ್ನಡದಲ್ಲಿ ಪ್ರಾಥಮಿಕ ಪರಿಚಯಾಂಶಗಳಾಗಿವೆ.

ಇಂತಹ ಪ್ರಾಥಮಿಕ ವ್ಯಾಕರಣದಲ್ಲಿಯೇ ಆಧುನಿಕ ಲೇಖಕರ, ಅಧ್ಯಾಪಕರ, ಕವಿಗಳ ಭಾಷಾ ಪ್ರಯೋಗಗಳು ಕುಂಟುವುದನ್ನು ಹಲವೆಡೆ ಕಾಣುವಂತಾಗಿದೆ. ಪಠ್ಯ ಪುಸ್ತಕಗಳಲ್ಲಿ, ಕತೆ ಕಾದಂಬರಿಗಳಲ್ಲಿ, ಪತ್ರಿಕೆಗಳಲ್ಲಿ, ಪ್ರಬಂಧರಚನೆಗಳಲ್ಲಿ, ಧರ್ಮ ಸಂಸ್ಕೃತಿ ಸಾಹಿತ್ಯವಿಮರ್ಶೆಗಳಲ್ಲಿ ಹಾಗೂ ಭಾಷಣಗಳಲ್ಲಿ ಕನ್ನಡದ ವ್ಯಾಕರಣ ದೋಷಗಳು—ಕೆಲವರಲ್ಲಿ ಹೆಚ್ಚು, ಕೆಲವರಲ್ಲಿ ಕಡಮೆ, ಎದ್ದು ಕಾಣುವುದು ಸ್ವಾಭಾವಿಕವೇ ಆಗಿದೆ. ಅನೇಕ ವ್ಯಾಕರಣದೋಷಗಳು ಅವೆಷ್ಟು ಪ್ರಚುರವಾಗಿವೆ

ಯೆಂದರೆ, ಅವು ಸರಿಯಲ್ಲವೆಂಬ ಕಲ್ಪನೆಯೇ ಅವರಿಗಾಗದಷ್ಟು ಅವರ ರಕ್ತಗತವಾಗಿ ಹೋಗಿದೆ ! ಈಗೀಗ ಎಷ್ಟೋ ಕಡೆ ಮಕ್ಕಳಿಗೆ ಕನ್ನಡ ಭಾಷಾಬೋಧನೆ ಮಾಡುವವರೂ ಶುದ್ಧವಾದ ಕನ್ನಡದಲ್ಲಿ ಪಾಠವಿವರಣೆ ಮಾಡುವುದಿಲ್ಲ ; ಇದಕ್ಕೆ ಪರಿಹಾರವಿಲ್ಲವೆ ? ಇದೆ.

ಅದಕ್ಕಾಗಿ ಪ್ರಾಥಮಿಕ ಹಂತದಿಂದಲೇ ಕನ್ನಡ ಭಾಷಾಭ್ಯಾಸದ ಒಟ್ಟೊಟ್ಟಿಗೆ ವ್ಯಾಕರಣದ ಅಭ್ಯಾಸವೂ ಇರಬೇಕು. ಸಾಹಿತ್ಯ ರಚನೆಗಳು ವ್ಯಾಕರಣಶುದ್ಧವಾಗುವಂತೆ ನೋಡಿಕೊಳ್ಳಬೇಕು. ಅದಕ್ಕಾಗಿ ಕವಿಗಳು, ಲೇಖಕರು ಸ್ವತಃ ಎಷ್ಟೇ ಪಾರಂಗತ ಪರಿಣಿತರಾಗಿದ್ದರೂ ತಪ್ಪೆಸಗುವುದು ಮನುಷ್ಯ ಸ್ವಭಾವ ಎಂದರಿತುಕೊಂಡು, ಅಂತಹ ತಪ್ಪುಗಳನ್ನು ಹೋಗಾಡಿಸಲಿಕ್ಕಾಗಿ ಇತರ ವಿದ್ವಾಂಸರ ನೆರವು ಪಡೆಯಬೇಕು ; ತಿದ್ದಿಸಬೇಕು. ಯಾವುದೇ ಕೃತಿಯನ್ನು ಮುದ್ರಣಗೊಳ್ಳುವ ಮುಂಚೆ ಇತರರಿಂದ ತಿದ್ದಿಸುವುದು ಯಾವು ತಪ್ಪೂ ಅಲ್ಲ, ಅಪಮಾನವಲ್ಲ, ಮರ್ಯಾದೆ. ಪೂರ್ವಕವಿಗಳಲ್ಲಿ ರನ್ನ, ದುರ್ಗಸಿಂಹ, ರುದ್ರಭಟ್ಟ, ಅಂಡಯ್ಯ ಮುಂತಾದ ಮಾರ್ಗಕವಿಗಳು ತಮ್ಮ ಕಾವ್ಯಗಳನ್ನು ಇತರರಿಂದ ತಿದ್ದಿಸಿಕೊಂಡಿರುವುದಾಗಿ ಅಭಿಮಾನದಿಂದ ಹೇಳಿಕೊಂಡಿದ್ದಾರೆ.

ಮಾರ್ಗಕಾವ್ಯಗಳನ್ನು ಛಂದೋವ್ಯಾಕರಣ ಶುದ್ಧತೆಯಿಂದ ದೇಸಿ ಒಡಂಬಡುವಂತೆ ರಚನೆ ಮಾಡುವುದು ಪ್ರಾಚೀನಪದ್ಧತಿ. ಆದಿಕವಿ ಪಂಪನು ತನ್ನ ಕಾವ್ಯಗಳಲ್ಲಿ ಅವೆರಡೂ 'ಪೊದಳ್ದಿಸೆವಂತೆ' ರಚಿಸಿದ್ದೇನೆಂದು ಹೇಳಿಕೊಂಡಿದ್ದಾನೆ. 'ದೇಸಿ' ಅಥವಾ 'ದೇಸೆ' ಎಂದರೆ ಇಲ್ಲಿ ಜಾನಪದ ಭಾಷೆ ಎಂದು ಅರ್ಥವಲ್ಲ, ಜಾನಪದದಲ್ಲಿ ಸಮೃದ್ಧವಾಗಿರುವ ಶಬ್ದಸಂಪತ್ತು, ಜೀವನಾನುಭವ, ನಡೆವಳಿ, ಸಂಸ್ಕೃತಿ ಇವನ್ನೆ ದೇಸಿ ಎಂದುದೆಂದು ತಿಳಿಯಬೇಕು. ವ್ಯಾಕರಣವನ್ನು ಮೀರದಿರುವ ದೇಸಿ ಮಾರ್ಗಕವಿಗಳದು. ಜಾನಪದ ಸಾಹಿತ್ಯವು ವ್ಯಾಪ್ತಿಯಲ್ಲಿ ಪರಿಮಿತ. ಬದುಕಿನ ಸುಖ ದುಃಖ, ಬೇನೆ ಬೇಸರ, ಕೆಳೆ ಹಗೆ, ನೋವು ನಲಿವುಗಳ ಚಿತ್ರಣಗಳು ಜಾನಪದಸಾಹಿತ್ಯದಲ್ಲಿ ಸಮೃದ್ಧವಾಗಿರುವುದು ನಿಜ. ಅಂತಹ ಜಾನಪದಸಾಹಿತ್ಯಕ್ಕೆ ಛಂದೋವ್ಯಾಪ್ತಿ ಮತ್ತು ವ್ಯಾಕರಣಾನುಸರಣೆ, ರಸಾಲಂಕಾರ ವರ್ಣನೆ, ಕಾವ್ಯಗುಣಗಳು ಸೀಮಿತ. ಮಾರ್ಗಸಾಹಿತ್ಯದಲ್ಲಿ ಇವೆಲ್ಲ ಸಮೃದ್ಧ. ಭಾಷೆಗೆ ಏಕರೂಪತೆ ಇರುವುದರಿಂದ ಸಮಾಜದ ಏಕತೆಗೆ ಮಾರ್ಗ ಸಾಹಿತ್ಯ ಹೆಚ್ಚು ಸಹಕಾರಿ. ಈ ಏಕರೂಪತೆಯ ಸಾಧನ ವ್ಯಾಕರಣ. ಕನ್ನಡ ನಾಡಿನ ವಿದ್ಯಾಲಯಗಳಲ್ಲಿ ಅಧ್ಯಯನ, ಅಧ್ಯಾಪನ, ಗ್ರಂಥರಚನೆ, ಭಾಷಣ ಇವೆಲ್ಲ ವ್ಯಾಕರಣ ಶುದ್ಧವಾಗಿರಬೇಕು. ಅದಕ್ಕಾಗಿ ಕನ್ನಡದ ವ್ಯಾಕರಣದ ಅನುಸರಣೆ ಅವಶ್ಯ ಮತ್ತು ಅನಿವಾರ್ಯ.

ಪ್ರೊ. ಕೆ. ಕೃಷ್ಣಮೂರ್ತಿಯವರ "ಅಲಂಕಾರಶಾಸ್ತ್ರೀ ಕಾವ್ಯ ವೈವಿಧ್ಯವಾದ ವಿಮರ್ಶಃ" ಒಂದು ಪರಿಚಯ

ಎಸ್. ರಂಗನಾಥ್

ಕಾವ್ಯವನ್ನು ಸರಿಯಾಗಿ ಓದಿ ಅರ್ಥಮಾಡಿಕೊಳ್ಳಲು ಅಲಂಕಾರಶಾಸ್ತ್ರದ ಹಿನ್ನೆಲೆ ಅತ್ಯಗತ್ಯ. ಅಲಂಕಾರಶಾಸ್ತ್ರಕ್ಕೆ ಪ್ರೊಫೆಸರ್ ಕೆ. ಕೃಷ್ಣಮೂರ್ತಿಯವರ ಕೊಡುಗೆ ಅಪಾರ. ಈ ಹಿನ್ನೆಲೆಯಲ್ಲಿ ಅವರ ಕೃತಿ "ಅಲಂಕಾರಶಾಸ್ತ್ರೀ ಕಾವ್ಯವೈವಿಧ್ಯವಾದ ವಿಮರ್ಶ :" ಕೃತಿಯನ್ನು ಪರಿಚಯಿಸುವ ದೃಷ್ಟಿಯಿಂದ ಈ ಲೇಖನ. 1950ರಲ್ಲಿ ನವೀನಂ ರಾಮಾನುಜಾಚಾರ್ಯ ಬಹುಮಾನವನ್ನು ಪಡೆದ ಈ ಕೃತಿಯನ್ನು ಅನಂತರ 1955ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಪುಸ್ತಕ ರೂಪದಲ್ಲಿ ಪ್ರಕಟಿಸಿತು.

ಈ ಕೃತಿಯನ್ನು ಗ್ರಂಥ ಉಪಕ್ರಮ, ಕಾವ್ಯಶಬ್ದ ನಿರ್ವಚನ, ಸದಸತ್ಕಾವ್ಯ ವಿವೇಚನಾ, ಕಾವ್ಯ ಪ್ರಕಾರ ಪರಿಕ್ಷಣಾ, ಪ್ರತಿಭಾದಿ ತಾರತಮ್ಯಕೃತ ಕಾವ್ಯವೈವಿಧ್ಯ, ಉತ್ತಮ ಮಧ್ಯಮಾದಿಕಾವ್ಯ ವ್ಯವಸ್ಥಾಪನಾ, ಭಾರತೀಯ ಕಾವ್ಯಮೀಮಾಂಸೆಯೊಂದಿಗೆ ಅರಿಸ್ಟಾಟಲನ ಕಾವ್ಯಮೀಮಾಂಸೆಯ ತುಲನಾತ್ಮಕ ಪರೀಕ್ಷಣ, ಪಾಶ್ಚಾತ್ಯ ಹಾಗೂ ಈಗಿನ ವಿದ್ವಾಂಸರ ಕಾವ್ಯವೈವಿಧ್ಯತೆಯ ತುಲನಾತ್ಮಕ ಸಮೀಕ್ಷೆ, ಸಂಸ್ಕೃತ ಕಾವ್ಯ ವೈವಿಧ್ಯತೆಯ ಬಗ್ಗೆ ಕೆಲವು ಸೂಚನೆಗಳು ಎಂಬುದಾಗಿ ಒಂಭತ್ತು ಅಧ್ಯಾಯಗಳನ್ನಾಗಿ ವಿಂಗಡಿಸಲಾಗಿದೆ. ಈ ವಿಷಯಗಳ ಬಗ್ಗೆ ಮಾಹಿತಿಯನ್ನು ಪೀಠಿಕಾ ಅಧ್ಯಾಯದಿಂದಲೇ ಗಮನಿಸಬಹುದು :

> "ಪ್ರಥಮಂ ಪೂರ್ವಸೂರೀಣಾಂ ಕಾವ್ಯವೈವಿಧ್ಯನಿರ್ಣಯಮ್
> ದ್ವಿತೀಯಸ್ತು ಪರಿಚ್ಛೇದಃ ಪುರಾಣ ಮತದೀಪಕಃ
> ಸದಸತ್ಕಾವ್ಯ ವೈವಿಧ್ಯ ವಿವೇಚನ ಪರಾಯಣಃ
> ತೃತೀಯೇ ತು ಪರಿಚ್ಛೇದೇ ಸರ್ವೇ ತೇ ಸಂಪರೀಕ್ಷಿತಾಃ

ಕಾವ್ಯಜಾತೇಃ ಪ್ರಕಾರಾ ಯೇ ಪೂರ್ವಾಚಾರ್ಯೈಃ ನಿರೂಪಿತಾಃ
ಪ್ರತಿಭಾದಿ ಪ್ರಭೇದಾಚ್ಚ ಯದ್ವೈವಿಧ್ಯಂ ಪ್ರಜಾಯತೇ
ಕವಿಕರ್ಮಣಿ ತಚ್ಚಾಪಿ ಚತುರ್ಥೇ ಸೂಪಪಾದಿತಮ್
ಆನಂದವರ್ಧನೇನೋಕ್ತಂ ಯದ್ವಿಭಾಗಮನುತ್ತಮಮ್
ಉತ್ತಮಂ ಮಧ್ಯಮಂ ಚಿತ್ರಂ ಪಂಚಮೇ ತತ್ಪ್ರಪಂಚಿತಮ್
ಪಾಶ್ಚಾತ್ಯ ಕಾವ್ಯತತ್ವಾನಾಂ ಪಿತೃಪ್ರಾಯೇಣ ವೈ ತಥಾ
ಅರಿಸ್ಟಾಟ್ಲೇನ ನಿರ್ದಿಷ್ಟೈಃ ಸಿದ್ಧಾಂತೈಃ ಸಹ ತೋಲನಮ್
ಮತಾನಾಂ ಭಾರತೀಯಾನಾಂ ಷಷ್ಠೇಧ್ಯಾಯೇ ಪ್ರಕಲ್ಪಿತಮ್
ಸಪ್ತಮೇ ಸಂಸ್ಕೃತೇ ಸಿದ್ಧಾಃ ಕಾವ್ಯಬಂಧಾ ನವೈಃ ಸಹ
ನಾನಾ ಪ್ರಕಾರಕೈಃ ಕಾವ್ಯೈಃ ತುಲಯಿತ್ವಾ ವಿವೇಚಿತಾಃ
ಅಂತೇ ಖಲೂಪದಿಷ್ಟಾನಿ ಸೂಚನಾನಿ ಯಥಾಮತಿ
ಸಂಸ್ಕೃತೇ ಕಾವ್ಯಮಾರ್ಗಸ್ಯ ಫಲಯೋಗಾಯ ಭೂಯಸೇ"[1]

ಈ ಪೀಠಿಕಾ ಅಧ್ಯಾಯದಿಂದಲೇ ಅವರಿಗೆ ನವೀನಂ ರಾಮಾನುಜಾಚಾರ್ಯ ಬಹುಮಾನ ಸಂದ ವಿಷಯವೂ ಅರಿವಾಗುತ್ತದೆ: "ಯೇನ ರಾಮಾನುಜಾಚಾರ್ಯಾಣಾಂ ಪಾರಿತೋಷಕಮ್ ಅಸ್ಮಿಂಶ್ಚ ವತ್ಸರೇ ಮಹ್ಯಂ ಪ್ರದತ್ತಂ"[2]

ಈ ಕೃತಿಯು ಎಲ್ಲ ವಾಚಕರಿಗೂ ಹೃದ್ಯವಾಗಿ ಅರ್ಥವಾಗುವ ದೃಷ್ಟಿಯಿಂದಲೇ ಲಲಿತವಾದ ಸಂಸ್ಕೃತ ಶಬ್ದಗಳಿಂದ ರಚಿಸಲ್ಪಟ್ಟಿತೆಂದು ತಾವೇ ತಮ್ಮ ಪೀಠಿಕೆಯಲ್ಲಿ ಬರೆದಿದ್ದಾರೆ :

"ಲಲಿತ ಸಂಸ್ಕೃತ ಶಬ್ದ ವಿನಿರ್ಮಿತಂ
ಸಕಲ ವಾಚಕಹಾರಿ ಭವೇದಿದಮ್"[3]

ಉಪೋದ್ಘಾತ ರೂಪವಾದ ಪ್ರಥಮಾಧ್ಯಾಯದಿಂದ ಗ್ರಂಥವು ಪ್ರಾರಂಭವಾಗುತ್ತದೆ. ಮಂಗಳಾಚರಣೆ ಮಾಡಿ ಕಾವ್ಯವನ್ನು ಅಥವಾ ಕೃತಿಯನ್ನು ಪ್ರಾರಂಭಿಸುವುದು ಶಿಷ್ಟರ ಸಂಪ್ರದಾಯ. ಈ ಸಂಪ್ರದಾಯವನ್ನು ಅನುಸರಿಸಿ ಪ್ರೊ. ಕೃಷ್ಣಮೂರ್ತಿಯವರು ವಿದ್ಯಾಧಿದೇವತೆಯಾದ ಸರಸ್ವತಿಯನ್ನು ಸ್ತುತಿಸುವುದರ ಮುಖಾಂತರ ಕೃತಿಯನ್ನು ಪ್ರಾರಂಭಿಸಿದ್ದಾರೆ.

---

1. ಅಲಂಕಾರಶಾಸ್ತ್ರೇ ಕಾವ್ಯವೈವಿಧ್ಯವಾದ ವಿಮರ್ಶ:—ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು—1955, ಪುಟ-viii-ix
2. ಅದೇ ಗ್ರಂಥ, ಪುಟ-vii.
3. ಅದೇ ಗ್ರಂಥ, ಪುಟ-ix

"ಯಾ ದುರ್ಗಾಪಿ ನ ದುರ್ಗೇವ ಕವಿದೋಗ್ಧೃಭಿರನ್ವಹಮ್ ।
ಹೃದಿ ನಃ ಸನ್ನಿಧತ್ತಾಂ ಸಾ ಸೂಕ್ತಿಧೇನುಃ ಸರಸ್ವತೀ ॥"4

ಈ ಮಂಗಳಾಚರಣೆಯು ಶಬ್ದ ಹಾಗೂ ಅರ್ಥಾಲಂಕಾರಗಳಿಂದ ತುಂಬಿ ಎಲ್ಲ ವಾಚಕರಿಗೂ ಹೃದ್ಯವಾಗಿದೆಯೆಂಬುದು ನಿರ್ವಿವಾದ.

ದೇವತಾಸ್ತುತಿಯಾದ ಬಳಿಕ ಗುರುನಮನವು ಸುಂದರವಾಗಿ ಮೂಡಿಬಂದಿದೆ :

ವಿವಿಧ ವಿಷಯ ಪೂರ್ಣಂ ವಿಸ್ತೃತಂ ಕಾವ್ಯಶಾಸ್ತ್ರಂ
ವಿರಹಿತಬಹುಯತ್ನೋ ಲೀಲಯಾ ವೇತ್ತು ವಿಜ್ಞಃ ।
ಇತಿ ಸುಕಲಿತಚೇತಾಃ ಕೌಶಲಂ ಕರ್ತುಕಾಮೋ
ಗುರುಚರಣರಜೋಹಂ ಕರ್ಣಧಾರೀ ಕರೋಮಿ ॥5

ಹಲವಾರು ವಿಷಯಗಳಿಂದ ಕೂಡಿರುವ ವ್ಯಾಪಕವಾದ ಕಾವ್ಯಶಾಸ್ತ್ರವನ್ನು ಸುಲಭವಾಗಿ ಸಾಮಾನ್ಯರಿಗೆ ಅರಿವಾಗುವಂತೆ ತಿಳಿಸಲು ತಮಗೆ ಅನುಗ್ರಹಿಸಲೆಂದು ಗುರುಗಳಿಗೆ ನಮಸ್ಕರಿಸುತ್ತೇನೆಂದು ಹೇಳಿರುವುದು ಅವರ ವಿದ್ಯೆಗೆ ಅನುಗುಣವಾದ ವಿನಯವನ್ನು ಪ್ರತಿಪಾದಿಸುತ್ತದೆ. ಇದೇ ವಿನಯವೇ ಮೂರ್ತಿವೆತ್ತಂತೆ ಇದೆ ಮುಂದಿನ ಶ್ಲೋಕ.

"ಸಂತ್ಯಜ್ಯ ದೋಷಂ ಗುಣ ಏವ ದೃಷ್ಟಿ :
ವಿಧೀಯತಾಂ ಇತ್ಯಫಲಂ ವಚೋ ಮೇ
ವಿಹಾಯ ನೀರಂ ಸಕಲೋಪಿ ಹಂಸ :
ಪಯಃ ಪ್ರಗೃಹ್ಣಾತಿ ಉಪದೇಶತಃ ಕಿಮ್"6

ಹಂಸವು ಹಾಲನ್ನು ಮಾತ್ರ ಸ್ವೀಕರಿಸಿ ನೀರನ್ನು ತ್ಯಜಿಸುವಂತೆ ಓದುಗರೂ ಸಹ ಈ ಕೃತಿಯಲ್ಲಿರುವ ಗುಣವನ್ನು ಮಾತ್ರ ಸ್ವೀಕರಿಸಿ ದೋಷವನ್ನು ತ್ಯಜಿಸಬೇಕೆಂಬುದು ಆಶಯ.

ಎರಡನೇ ಅಧ್ಯಾಯದಿಂದ ಹಿಡಿದು ಒಂಭತ್ತನೇ ಅಧ್ಯಾಯದವರೆಗೆ ಅಧ್ಯಾಯದ ಪ್ರಾರಂಭದಲ್ಲಿ ಕೊಟ್ಟಿರುವಂತಹ ನುಡಿಮುತ್ತುಗಳೇ ಆ ಅಧ್ಯಾಯದಲ್ಲಿ ಪ್ರತಿಪಾದಿತವಾಗುವ ವಿಷಯದ ದೃಷ್ಟಿಯಿಂದ ಅತ್ಯಂತ ಸಮಂಜಸ ಹಾಗೂ ಔಪತ್ಯಪೂರ್ಣವಾಗಿದೆ.

ಎರಡನೇ ಅಧ್ಯಾಯದಲ್ಲಿ ಕಾವ್ಯ ಸ್ವರೂಪದ ಬಗ್ಗೆ ವಿವೇಚಿಸುವಾಗ ಕಾವ್ಯಶಬ್ದದ ನಿರ್ವಚನವು ಅಭಿನವಗುಪ್ತ, ಮಮ್ಮಟ, ಭಟ್ಟತೌತ, ರಾಜಶೇಖರ, ಜಿನಸೇನ, ಮಹಾಮಹೋಪಾಧ್ಯಾಯ ಕೋಲಾಚಲ ಮಲ್ಲಿನಾಥಸೂರಿ ಮುಂತಾದವರ ದೃಷ್ಟಿಯಿಂದ ನಿರೂಪಿಸಲಾಗಿದೆ. ಈ ಅಧ್ಯಾಯದ ಪ್ರಾರಂಭದಲ್ಲಿ ಕೊಟ್ಟಿರುವ ನುಡಿ ಮುತ್ತು :

---

4. ಅದೇ ಗ್ರಂಥ, ಪುಟ-1
5. ಅದೇ ಗ್ರಂಥ, ಪುಟ-1
6. ಅದೇ ಗ್ರಂಥ, ಪುಟ-2

"ಕವಿಃ ಕರೋತಿ ಕಾವ್ಯಾನಿ ಲಾಲಯತ್ಯುತ್ತಮೋ ಜನಃ
ವೃಕ್ಷಃ ಪ್ರಸೂತೇ ಪುಷ್ಪಾಣಿ ಮರುದ್ವಹತಿ ಸೌರಭಮ್"7

ಕವಿಯು ಕಾವ್ಯವನ್ನು ಬರೆದರೆ ಉತ್ತಮ ಜನರು ಅದನ್ನು ಆಸ್ವಾದಿಸುತ್ತಾರೆ. ಹೇಗೆಂದರೆ ಮರಗಳು ಬಿಟ್ಟಂತಹ ಹೂಗಳ ಪರಿಮಳವನ್ನು ಗಾಳಿಯು ಎಲ್ಲ ಕಡೆ ಹರಡುವಂತೆ. ಮೂರನೆಯ ಅಧ್ಯಾಯದಲ್ಲಿ ಸತ್ ಕಾವ್ಯ ಹಾಗೂ ಅಸತ್ ಕಾವ್ಯದ ವಿವೇಚನೆಯು ಮನೋಜ್ಞವಾಗಿ ಮೂಡಿದೆ. ಸತ್ ಕಾವ್ಯದ ನಿರೂಪಣೆಯು ಕಾವ್ಯ ಕೌತುಕ, ಕಾವ್ಯಪ್ರಕಾಶ ಮೊದಲಾದ ಗ್ರಂಥಗಳಲ್ಲಿ ಕಂಡು ಬಂದಿರುವಂತೆ ಹಾಗೂ ಭಾಮಹ, ದಂಡಿ, ವಾಮನ, ರುದ್ರಟ, ಮೊದಲಾದವರ ಅಭಿಪ್ರಾಯಗಳನ್ನು ವಿವೇಚಿಸಲಾಗಿದೆ :

"ನಾನೃಷಿ : ಕವಿರಿತ್ಯುಕ್ತಂ ಋಷಿಶ್ಚ ಕಿಲ ದರ್ಶನಾತ್8

ಋಷಿಯಲ್ಲದವನನ್ನು ಕವಿಯೆಂದು ಹೇಳಲಾಗುವುದಿಲ್ಲ ಯಾರು ಸಾಕ್ಷಾತ್ತಾಗಿ ಕಂಡವನೋ ಅವನೇ ಋಷಿ.

"ಧರ್ಮಾರ್ಥಕಾಮಮೋಕ್ಷೇಷು ವೈಚಕ್ಷಣ್ಯಂ ಕಲಾಸು ಚ
ಪ್ರೀತಿಂ ಕರೋತಿ ಕೀರ್ತಿಂ ಚ ಸಾಧುಕಾವ್ಯನಿಬಂಧನಮ್"9

ಸತ್ಕಾವ್ಯವು ಪುರುಷಾರ್ಥಗಳ ಬಗ್ಗೆ, ಕಲೆಗಳ ಬಗ್ಗೆ ಪ್ರೀತಿಯನ್ನು ಉಂಟು ಮಾಡಿ ಕೀರ್ತಿಯನ್ನು ತಂದು ಕೊಡುವಂತಿರಬೇಕು.

ಕೊನೆಯದಾಗಿ ನಿರ್ಣಯಾತ್ಮಕವಾಗಿ ಹೇಳಬೇಕಾದರೆ ಸತ್ಕಾವ್ಯವೆಂದರೆ ಯಾವುದೂ ದೋಷಗಳಿಲ್ಲದೆ, ಗುಣಗಳಿಂದ ಕೂಡಿದ್ದು, ಅಲಂಕಾರಗಳಿಂದ ಭೂಷಿತವಾಗಿ ರಸಗಳಿಂದ ಕಂಗೊಳಿಸುತ್ತಿರುತ್ತದೆಯೋ ಅದೇ ಸತ್ಕಾವ್ಯ :

"ದೋಷವಿದೂರಂ, ಸಗುಣಂ, ಸಾಲಂಕಾರಂ,
ಸರಸಂ ಚ ಕಾವ್ಯಂ ಸತ್."10

7. ಅದೇ ಗ್ರಂಥ, ಪುಟ–3
8. ಅದೇ ಗ್ರಂಥ, ಪುಟ–7
9. ಅದೇ ಗ್ರಂಥ, ಪುಟ–8
10. ಅದೇ ಗ್ರಂಥ, ಪುಟ–10

ಶ್ರುತಿಗೂ ಅನುಗುಣವಾಗಿಲ್ಲದೆ, ಅಶ್ಲೀಲವಾದ ವರ್ಣನೆಗಳಿಂದ ಕೂಡಿರುವುದೇ ಅಸತ್ಕಾವ್ಯ :

ಶ್ರುತಿದುಷ್ಟ ಅಶ್ಲೀಲಾದಿ ಕಾವ್ಯದೋಷದುಷ್ಟಮೇವ ಕಾವ್ಯಮಸತ್"11

"ಕಾವ್ಯ ಪ್ರಕಾರ ಪರೀಕ್ಷಣಂ' ಎಂಬುದು ನಾಲ್ಕನೆಯ ಅಧ್ಯಾಯ. ಸತ್ಕಾವ್ಯಗಳ ಬಗ್ಗೆ ಮೊದಲನೆಯ ವಿಂಗಡಣೆಯೆಂದರೆ ಪ್ರಸಿದ್ಧವಾದ :–

I (i) **ಪುರಾಣ ಇತಿಹಾಸಾದಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆದಿರುವ ಕೃತಿಗಳು** : ಉದಾಹರಣೆಗೆ ರಘುವಂಶ ಹಾಗೂ ಕಿರಾತಾರ್ಜುನೀಯ.

(ii) **ಕವಿಯ ಪ್ರತಿಭೆಯಿಂದ ಹೊರಹೊಮ್ಮಿರುವ ಕೃತಿಗಳು** : ಕಾದಂಬರಿಯೇ ಮೊದಲಾದವುಗಳು.

(iii) **ಭಗವದ್ ಭಕ್ತಿಯನ್ನು ಪ್ರೇರೇಪಿಸುವಂತಹ ಸ್ತೋತ್ರಗಳು** : ಸೂರ್ಯಶತಕ, ಚಂಡೀಶತಕ ಮೊದಲಾದವುಗಳು.

II **ಭಾಮಹನ** ಪ್ರಕಾರ ಶ್ರವ್ಯಕಾವ್ಯದ ಪ್ರಕಾರಗಳೆಂದರೆ ಗದ್ಯ ಹಾಗೂ ಪದ್ಯಗಳು :–"ಶಬ್ದಾರ್ಥೌ ಸಹಿತೌ ಕಾವ್ಯಂ, ಗದ್ಯಂ ಪದ್ಯಂ ಚ ತತ್ ದ್ವಿಧಾ"12

III ಭಾಷೆಯ ಭೇದದಿಂದ ಕಾವ್ಯವು ಸಂಸ್ಕೃತ, ಪ್ರಾಕೃತ, ಹಾಗೂ ಅಪಭ್ರಂಶಗಳೆಂದು ಮೂರು ವಿಧ :–"ಸಂಸ್ಕೃತಂ ಪ್ರಾಕೃತಂ ಚಾನ್ಯದಪಭ್ರಂಶ ಇತಿ ತ್ರಿಧಾ"13

IV ಇನ್ನೊಂದು ಬಗೆಯ ಕಾವ್ಯ ವಿಭಾಗಕ್ರಮವೆಂದರೆ ಗದ್ಯ, ಪದ್ಯ ಹಾಗೂ ಮಿಶ್ರ ಎಂಬುದಾಗಿ :

"ಪದ್ಯಂ ಗದ್ಯಂ ಚ ಮಿಶ್ರಂ ಚ ತತ್ ತ್ರಿಧೈವ ವ್ಯವಸ್ಥಿತಮ್"14

V ರುದ್ರಟನು ಕಥಾ, ಆಖ್ಯಾಯಿಕಾ ಎಂಬುದಾಗಿ ಕಾವ್ಯವನ್ನು ವಿಭಜಿಸುತ್ತಾನೆ : "ಸಂತಿ ದ್ವಿಧಾ ಪ್ರಬಂಧಾ : ಕಾವ್ಯಕಥಾ ಆಖ್ಯಾಯಿಕಾದಯ : ಕಾವ್ಯೇ"15

---

11. ಅದೇ ಗ್ರಂಥ, ಪುಟ-10
12. ಅದೇ ಗ್ರಂಥ, ಪುಟ-14
13. ಅದೇ ಗ್ರಂಥ, ಪುಟ-14
14. ಅದೇ ಗ್ರಂಥ, ಪುಟ-15
15. ಅದೇ ಗ್ರಂಥ, ಪುಟ-15

VI ಅಗ್ನಿ ಪುರಾಣದಲ್ಲಿಯೂ ಸಹ ಗದ್ಯ, ಪದ್ಯ, ಮಿಶ್ರ, ಎಂಬುದಾಗಿ ಕಾವ್ಯವನ್ನು ವಿಂಗಡಿಸಲಾಗಿದೆ.

"ಗದ್ಯಂ, ಪದ್ಯಂ, ಚ ಮಿಶ್ರಂ ಚ ಕಾವ್ಯಾದಿ ತ್ರಿವಿಧಂ ಸ್ಮೃತಂ"16

ಭರತನು ಹೇಳಿರುವಂತೆ **ಪಂಚ ಸಂಧಿಗಳ ವರ್ಣನೆ :** ಮುಖ, ಪ್ರತಿಮುಖ, ಗರ್ಭ, ಅವಮರ್ಶ ಹಾಗೂ ನಿರ್ವಹಣ. **ಮಂಗಳಾ ಚರಣೆಯ ವಿಂಗಡಣೆ :** ಆಶೀ : ಪೂರ್ವಕವಾಗಿರುವುದು, ನಮಸ್ಕಾರಾತ್ಮಕವಾದುದು, ವಸ್ತುನಿರ್ದೇಶಾತ್ಮಕವಾದುದು. **ನಾಯಕರ ವಿಂಗಡಣೆ** ಧೀರೋದ್ಧತ, ಧೀರಲಲಿತ ಹಾಗೂ ಧೀರಶಾಂತ.

ನಿದರ್ಶನ, ಆಖ್ಯಾನ, ಪ್ರವಹ್ವಿಥಾ, ಖಂಡಕಥಾ, ಸಕಲಕಥಾ, ಉಪಕಥಾ, ಮುಕ್ತಕ, ಕಲಾಪಕ, ಕೋಶ, ಈ ಎಲ್ಲ ವಿಭಾಗಗಳ ಬಗ್ಗೆಯೂ ಸಹ ಈ ಅಧ್ಯಾಯದಲ್ಲಿ ನಿಷ್ಕೃಷ್ಟವಾಗಿ ಹಾಗೂ ನಿರ್ದುಷ್ಟ ವಾಗಿ ವಿವೇಚಿಸಲಾಗಿದೆ.

ಅನಂತರ ವೈದರ್ಭೀರೀತಿಯ ದಶಗುಣಗಳು, ಕಾವ್ಯದ ಪ್ರಶಂಸೆಯ ಬಗ್ಗೆ ವಾಮನ, ರುದ್ರಟ, ಆನಂದವರ್ಧನ, ಜಗನ್ನಾಥ, ದಂಡಿ ಮೊದಲಾದವರ ಅಭಿಪ್ರಾಯಗಳನ್ನು ಕ್ರೋಢೀಕರಿಸಲಾಗಿದೆ.

ಈ ಅಧ್ಯಾಯಕ್ಕೆ ಕೊಟ್ಟಿರುವ ನುಡಿಮುತ್ತು :

"ಅಪಾರೇ ಕಾವ್ಯಸಂಸಾರೇ ಕವಿರೇವ ಪ್ರಜಾಪತಿಃ
ಯಥಾಸ್ಮೈ ರೋಚತೇ ವಿಶ್ವಂ ತಥೇದಂ ಪರಿವರ್ತತೇ"17

(ಅಪಾರವಾದ ಈ ಕಾವ್ಯಪ್ರಪಂಚಕ್ಕೆ ಕವಿಯೇ ಸೃಷ್ಟಿಕರ್ತ. ಅವನಿಗೆ ಇಷ್ಟ ಬಂದ ರೀತಿಯಲ್ಲಿ ಅವನು ಅದನ್ನು ಮಾರ್ಪಡಿಸಿಕೊಳ್ಳುತ್ತಾನೆ) ಸಹ ಅತ್ಯಂತ ಮನೋಜ್ಞವಾಗಿದೆ.

ಐದನೆಯ ಅಧ್ಯಾಯವು "ಪ್ರತಿಭೆಯ" ಪ್ರಾಮುಖ್ಯತೆಯನ್ನು ಸಿದ್ಧಪಡಿಸಲು ಹೊರಟಿದೆ. ಭಾಮಹನ ಪ್ರಕಾರ ಪ್ರತಿಭೆಯಿದ್ದವನು ಮಾತ್ರ ಕಾವ್ಯವನ್ನು ಬರೆಯಬಲ್ಲನು :

"ಕಾವ್ಯಂ ತು ಜಾಯತೇ ಜಾತು ಕಸ್ಯಚಿತ್ ಪ್ರತಿಭಾವತಃ"18

16. ಅದೇ ಗ್ರಂಥ, ಪುಟ-16
17. ಅದೇ ಗ್ರಂಥ, ಪುಟ-11
18. ಅದೇ ಗ್ರಂಥ, ಪುಟ-25

ದಂಡಿಯ ಪ್ರಕಾರ ಪ್ರತಿಭೆಯು ನೈಸರ್ಗಿಕವಾಗಿ ಬಂದಿರಬೇಕು.

"ನೈಸರ್ಗಿಕೀ ಚ ಪ್ರತಿಭಾ"19

ರುದ್ರಟನ ಪ್ರಕಾರ ಪ್ರತಿಭೆಯು ಎರಡು ವಿಧವಾಗಿರುತ್ತದೆ:- "ಜನ್ಮಸಿದ್ಧವಾದ ಪ್ರತಿಭೆ," "ಶಾಸ್ತ್ರಾಭ್ಯಾಸದಿಂದ ಬರುವ ಪ್ರತಿಭೆ".

ಕಾವ್ಯಮೀಮಾಂಸೆಯಲ್ಲಿ ರಾಜಶೇಖರನು "ಪ್ರತಿಭಾ" ಪದಕ್ಕೆ ಈ ರೀತಿ ಲಕ್ಷಣ ಕೊಡುತ್ತಾನೆ :

"ಯಾ ಶಬ್ದಗ್ರಾಮಮರ್ಥಸಾರ್ಥಂ ಅಲಂಕಾರ ತಂತ್ರಮುಕ್ತಿಮಾರ್ಗಮನ್ಯದಪಿ ತಥಾವಿಧಮಧಿಹೃದಯಂ ಪ್ರತಿಭಾಸಯತಿ ಸಾ ಪ್ರತಿಭಾ"20.

ಮತ್ತೆ ಆ ಪ್ರತಿಭೆಯು "ಸಹಜ", "ಆಹಾರ್ಯ" ಹಾಗೂ "ಔಪದೇಶಿಕೀ" ಎಂಬುದಾಗಿ ಮೂರು ವಿಧ ಎಂಬುದಾಗಿ ರಾಜಶೇಖರನ ಅಭಿಪ್ರಾಯ.

ಪ್ರತಿಭಾವಂತರಾದ ಕವಿಗಳು ಮೂವರು. "ಸಾರಸ್ವತರು", "ಆಭ್ಯಾಸಿಕರು" ಹಾಗೂ "ಔಪದೇಶಿಕರು :"

"ಪ್ರತಿಭಾವಂತ : ಕವಯಶ್ಚ ತ್ರಯಃ ಸಾರಸ್ವತ, ಆಭ್ಯಾಸಿಕ, ಔಪದೇಶಿಕಶ್ಚ"21

ಪ್ರತಿಭಾವಂತರಾದ ಕವಿಗಳು "ಶಾಸ್ತ್ರಕವಿಗಳು", "ಕಾವ್ಯಕವಿಗಳು" ಹಾಗೂ "ಉಭಯಕವಿಗಳು" ಎಂಬುದಾಗಿ ಮೂರು ವಿಧ, ಶಾಸ್ತ್ರಕವಿಗಳಲ್ಲಿ ಮತ್ತೆ ಮೂರು ವಿಧ : ಯಾರು ಶಾಸ್ತ್ರವನ್ನು ಬಲ್ಲವರೋ, ಯಾರು ಶಾಸ್ತ್ರದಲ್ಲಿ ಕಾವ್ಯವನ್ನು ಹೊಂದಾಣಿಸುವರೋ, ಅವರು. ಕಾವ್ಯಕವಿಗಳಲ್ಲಿ ಎಂಟು ಬಗೆ : "ರಚನಾಕವಿ", "ಶಬ್ದಕವಿ", "ಅರ್ಥಕವಿ", "ಅಲಂಕಾರಕವಿ", "ಉಕ್ತಿಕವಿ", "ರಸಕವಿ", ಹಾಗೂ "ಶಾಸ್ತ್ರಾರ್ಥಕವಿ" ಎಂಬುದಾಗಿ.

ಅನಂತರ ಇದೇ ಅಧ್ಯಾಯದಲ್ಲಿ ಪಾಕಶಬ್ದದ ನಿರ್ವಚನೆ ಹಾಗೂ ವಿಭಾಗಗಳನ್ನು ನಿರೂಪಿಸಲಾಗಿದೆ. ಈ ಎಲ್ಲ ಅಂಶಗಳಲ್ಲೂ ಸಹ ಪ್ರೊ. ಕೃಷ್ಣಮೂರ್ತಿಯವರ ನಿರ್ದುಷ್ಟ ವಿವೇಚನೆ, ನಿಕಷಮತಿ ಹಾಗೂ ಪ್ರತಿಭೆಯನ್ನು ಕಾಣಬಹುದಾಗಿದೆ.

---

19) ಅದೇ ಗ್ರಂಥ, ಪುಟ-25
20) ಅದೇ ಗ್ರಂಥ, ಪುಟ-25
21) ಅದೇ ಗ್ರಂಥ, ಪುಟ-26

ಆರನೆಯ ಅಧ್ಯಾಯವು ಉತ್ತಮ, ಮಧ್ಯಮಾದಿ ಕಾವ್ಯ ವಿವೇಚನೆಗಾಗಿ ಹೊರಟಿದೆ.

ಆನಂದವರ್ಧನನ ಪ್ರಕಾರ ಧ್ವನಿಪ್ರಸ್ಥಾನಕ್ಕೆ ಅನುಗುಣವಾದಂತೆ ಕಾವ್ಯವನ್ನು "ಧ್ವನಿ", "ಗುಣೀಭೂತವ್ಯಂಗ್ಯ", ಹಾಗೂ "ಚಿತ್ರ" ಎಂಬುದಾಗಿ ವಿಭಜಿಸಲಾಗಿದೆ.

ಈ ಅಧ್ಯಾಯದಲ್ಲಿ ಅಲಂಕಾರಶಾಸ್ತ್ರ ಹಾಗೂ ವೇದಾಂತಶಾಸ್ತ್ರಗಳ ನಡುವೆ ತಂದಿರುವ ಹೊಂದಾಣಿಕೆ ಅದ್ಭುತವಾಗಿ ಮೂಡಿಬಂದಿದೆ. ಉದಾಹರಣೆಗೆ ವಸ್ತು, ಅಲಂಕಾರ ರಸ, ಎಂಬ ತ್ರಿಮಾತ್ರಕವಾದ ಧ್ವನಿಯನ್ನು ಸತ್, ಚಿತ್, ಆನಂದ ದೊಡನೆ ಸಮೀಕರಿಸಿರುವುದು ; ವಿವಕ್ಷಿತ, ಅವಿವಕ್ಷಿತ ಧ್ವನಿಯನ್ನು ಸ್ವರೂಪ, ತಟಸ್ಥ ಲಕ್ಷಣಗಳೊಡನೆ ಸಮೀಕರಿಸುವುದು, ಮುಂತಾದುವುಗಳು ಕೇವಲ ಈ ದಿಸೆಯಲ್ಲಿ ದಿಕ್ಸೂಚಿ ಮಾತ್ರ.

ಅನಂತರ ಮಮ್ಮಟ, ಹೇಮಚಂದ್ರ, ವಿಶ್ವನಾಥ, ವಿದ್ಯಾಧರ, ವಿದ್ಯಾನಾಥರ ಪ್ರಕಾರ ಧ್ವನಿ, ಗುಣೀಭೂತವ್ಯಂಗ್ಯ ಹಾಗೂ ಚಿತ್ರ ಹೇಗೆ ಉತ್ತಮ, ಮಧ್ಯಮ, ಅಧಮ ಎಂಬುದಾಗಿ ಹೆಸರು ಪಡೆಯುತ್ತದೆಯೆಂದು ನಿರೂಪಿಸಲಾಗಿದೆ. ಆದರೆ ಜಗನ್ನಾಥನ ಪ್ರಕಾರ ಕಾವ್ಯವು ನಾಲ್ಕು ವಿಧ : "ಉತ್ತಮೋತ್ತಮ" "ಉತ್ತಮ", "ಮಧ್ಯಮ" ಹಾಗೂ "ಅಧಮ" ಎಂಬುದಾಗಿ.

ಏಳನೆಯ ಅಧ್ಯಾಯ ತುಲನಾತ್ಮಕ ಕಾವ್ಯಮೀಮಾಂಸೆಯ ದೃಷ್ಟಿಯಿಂದ ಅತಿ ಉಪಯುಕ್ತವಾದ ಅಧ್ಯಾಯ. ಇಲ್ಲಿ ಪ್ರಾಚೀನ ಭಾರತೀಯ ಕಾವ್ಯಮೀಮಾಂಸೆ ಹಾಗೂ ಪಾಶ್ಚಾತ್ಯ ಅರಿಸ್ಟಾಟಲನ ಕಾವ್ಯಮೀಮಾಂಸೆಯ ಬಗ್ಗೆ ಇರುವ ಸಾಮ್ಯ ವೈಶಮ್ಯಗಳನ್ನು ತೋರಿಸಲಾಗಿದೆ.

ಸಾಮ್ಯಾಂಶಗಳು :

1) ಭಾರತೀಯ ಕಾವ್ಯಮೀಮಾಂಸೆಯ ಪ್ರಕಾರ ಮಹಾಕಾವ್ಯದಲ್ಲಿ ಕನ್ಯಾಹರಣ, ಯುದ್ಧ, ಯಜ್ಞ, ಸಾಹಸ, ವೀರ್ಯ, ವಿಜಯ ಮೊದಲಾದ ವಸ್ತುಗಳಿರಬೇಕು. ಅರಿಸ್ಟಾಟಲನೂ ಸಹ ಮಹಾಕಾವ್ಯದಲ್ಲಿ ನಾಯಕನ ಗುಣಗಳನ್ನು ಹೇಳುವಾಗ ಮೇಲಿನ ಸಾಹಸ, ವೀರ್ಯ, ವಿಜಯ ನಾಯಕನಿಗಿರಬೇಕೆಂದು ಬೋಧಿಸುತ್ತಾನೆ.

2) ಮಹಾಪುರುಷರ ಬಗ್ಗೆ ವರ್ಣನೆಯು ಇರಬೇಕೆಂದು ಹೇಳಿರುವ ಅಂಶ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಮಹಾಕಾವ್ಯದ ಬಗ್ಗೆ ಹೇಳಿರುವಂತೆಯೇ ಅರಿಸ್ಟಾಟಲನೂ ಸಹ ಹೇಳುತ್ತಾನೆ.

3) ಅರಿಸ್ಟಾಟಲನು ಹೇಳಿರುವ ವಿನೋದಾತ್ಮಕ ನಾಟಕಗಳು, ಗೀತಕಾವ್ಯಗಳು ಭಾರತೀಯ ಪರಂಪರೆಯಲ್ಲಿಯೂ ಬಂದಿದೆ.

ವೈಷಮ್ಯಗಳು :

1) ಭಾರತೀಯ ಕಾವ್ಯಮೀಮಾಂಸೆಯ ಪ್ರಕಾರ ದುರಂತ ನಾಟಕಕ್ಕೆ ಹೆಚ್ಚಾಗಿ ಪ್ರಾಮುಖ್ಯತೆಯನ್ನು ಕೊಟ್ಟಿಲ್ಲ, ಆದರೆ ಅರಿಸ್ಟಾಟಲನ ಪ್ರಕಾರ ದುರಂತವೇ, ಮಹಾ ನಾಟಕವೆಂಬುದಾಗಿ ಪರಿಗಣಿಸಬೇಕು.

2) ಭಾರತೀಯರ ಪ್ರಕಾರ ಪರಲೋಕ, ಜನ್ಮಾಂತರದಲ್ಲಿ ನಂಬಿಕೆ, ಕರ್ಮ ಫಲಗಳಲ್ಲಿ ವಿಶ್ವಾಸ ಕಂಡು ಬಂದರೆ ಪಾಶ್ಚಾತ್ಯರು ಕರ್ಮತತ್ತ್ವವನ್ನು ಒಪ್ಪದೆ, ಭೋಗದಲ್ಲೇ ಆಸಕ್ತಿ ಉಳ್ಳವರಾಗಿದ್ದರು.

3) ಅಲಂಕಾರ ಶಾಸ್ತ್ರದ ಪ್ರಕಾರ ಲೋಕೋತ್ತರವಾದ ಸ್ವಭಾವವುಳ್ಳ ಒಬ್ಬ ವ್ಯಕ್ತಿಯು ಇರಲೇಬೇಕು, ಆದರೆ ಪಾಶ್ಚಾತ್ಯರ ಪ್ರಕಾರ ಇದು ಸಾಧ್ಯವೇ ಇಲ್ಲ.

4) ಪುರುಷನು ಮಾಡಿದ ಕರ್ಮವೇ ಸಂಚಿತ, ಆಗಾಮಿ ರೂಪದಿಂದ ದೈವತ್ವವಾಗಬಹುದೆಂಬುದು ಭಾರತೀಯರ ಅಭಿಪ್ರಾಯವಾದರೆ ವಿದೇಶೀಯರ ಪ್ರಕಾರ ಪುರುಷನಿಗೆ ಪ್ರತಿಬಂಧಕವಾದುದು ದೈವ.

ಈ ಅಧ್ಯಾಯದ ಪ್ರಾರಂಭದಲ್ಲಿ ಕೊಟ್ಟಿರುವ ನುಡಿ ಮುತ್ತು "ದೇಶೇ ದೇಶೇ ಮತಿರ್ಭಿನ್ನಾ"-ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಬುದ್ಧಿ ವ್ಯತ್ಯಾಸವಾಗಿರುತ್ತದೆಂಬುದು, ಅಧ್ಯಾಯದಲ್ಲಿ ಪ್ರತಿಪಾದಿತವಾಗಿರುವ ವಿಷಯದ ದೃಷ್ಟಿಯಿಂದ ಅತ್ಯಂತ ಸಮಂಜಸವಾಗಿದೆ.

ಎಂಟನೆಯ ಅಧ್ಯಾಯದಲ್ಲಿ ಹಿಂದಿನ ಕವಿಗಳ ಕಾವ್ಯಕ್ಕೂ, ಇಂದಿನ ಕವಿಗಳ ಕಾವ್ಯಕ್ಕೂ ಇರುವ ಸಾಮ್ಯ, ವೈಷಮ್ಯಗಳನ್ನು ನಿರೂಪಿಸಲಾಗಿದೆ.

1) ಹಿಂದಿನ ಕವಿಗಳಿಗೆ ಪ್ರೀತಿಯನ್ನು ಹುಟ್ಟಿಸುವುದು, ಶಾಶ್ವತ ಕೀರ್ತಿಯ ಬಗ್ಗೆ ಹಂಬಲವಿದ್ದರೆ ಇಂದಿನ ಕವಿಗಳಿಗೆ ಅವುಗಳ ಬಗ್ಗೆ ಅಷ್ಟು ಆಸೆ ಇಲ್ಲ.

2) ಹಿಂದಿನ ಕವಿಗಳು ಉದಾತ್ತ ಧ್ಯೇಯವನ್ನಿಟ್ಟುಕೊಂಡು ಕಾವ್ಯರಚನೆ ಮಾಡುತ್ತಿದ್ದರೆ, ಇಂದಿನ ಕವಿಗಳಿಗೆ ಧ್ಯೇಯ ಉದಾತ್ತವಾಗಿರಬೇಕಾಗಿಲ್ಲ.

3) ಹಿಂದೆ ಸಹೃದಯತೆಯುಳ್ಳವರೂ, ಬಹುಶಾಸ್ತ್ರ ಪರಿಣತರೂ ಮಾತ್ರ ಕಾವ್ಯದಲ್ಲಿ ತೊಡಗುತ್ತಿದ್ದರು. ಆದರೆ ಈಗ ಅಂತಹ ಕ್ರಮವೇನೂ ಜಾರಿಯಲ್ಲಿಲ್ಲ.

ಅನಂತರ ಕವಿಗಳಲ್ಲಿ ನಾಲ್ಕು ರೀತಿ ಎಂಬುದಾಗಿ ಪ್ರೊ. ಕೃಷ್ಣಮೂರ್ತಿಯವರ ಅಭಿಪ್ರಾಯ : ಉದಾತ್ತರು, ಉದ್ಧತರು, ಪ್ರೌಢರು, ವಿನೀತರು, ಎಂಬುದಾಗಿ.

ಕಾಳಿದಾಸನ ಮಾಳವಿಕಾಗ್ನಿಮಿತ್ರ ನಾಟಕದ ಪ್ರಸ್ತಾವನೆಯಲ್ಲಿ ಬರುವ ನುಡಿ ಮುತ್ತನ್ನು ಈ ಅಧ್ಯಾಯದ ಪ್ರಾರಂಭದಲ್ಲಿ ಕೊಟ್ಟಿರುವುದು ಅವರ ಅಂತಿಮ ನಿರ್ಧಾರದ ಸಾಬೀತಾಗುತ್ತದೆ. ಯಾವ ಕಾವ್ಯವನ್ನೂ ಸಹ ಪೂರ್ವಾಗ್ರಹದಿಂದ ನೋಡಬಾರದು. ಹಳೆಯದೆಲ್ಲ ಸರಿಯಲ್ಲ, ಹೊಸದೆಲ್ಲಾ ತಪ್ಪೂ ಅಲ್ಲ.

"ಪುರಾಣಮಿತ್ಯೇವ ನ ಸಾಧು ಸರ್ವಂ
ನ ಚಾಪಿ ಕಾವ್ಯಂ ನವಮಿತ್ಯವದ್ಯಮ್ ।
ಸಂತಃ ಪರೀಕ್ಷ್ಯಾನ್ಯತರದ್ಭಜಂತೇ
ಮೂಢಃ ಪರಪ್ರತ್ಯಯನೇಯ ಬುದ್ಧಿಃ"22

ಕೊನೆಯ ಅಧ್ಯಾಯದಲ್ಲಿ ಸಂಸ್ಕೃತ ಭಾಷೆಯ ಏಳ್ಗೆಗೆ ಕೆಲವು ಸೂಚನೆಗಳನ್ನು ಕೊಡಲಾಗಿದೆ. ಸಂಸ್ಕೃತ ಭಾಷೆಯ ಬೆಳವಣಿಗೆಗಾಗಿ ಪ್ರಯತ್ನಿಸಬೇಕು. ಸಂಸ್ಕೃತ ಭಾಷೆಯ ಪ್ರಸಾರ ಮಾಡುವ ದೃಷ್ಟಿಯಿಂದ ಚಿಕ್ಕ ಕಾವ್ಯಗಳನ್ನಾದರೂ ತಪ್ಪದೆ ಬರೆಯಬೇಕು. ಹೊಸ ಹೊಸ ವೈಜ್ಞಾನಿಕ, ಮನಃಶಾಸ್ತ್ರ, ರಾಜ್ಯಶಾಸ್ತ್ರ ಮೊದಲಾದವುಗಳ ಬಗ್ಗೆ ಸಂಸ್ಕೃತದಲ್ಲಿ ಕಾವ್ಯರಚನೆ ನಡೆಯಬೇಕು. ಬೇರೆ ಭಾಷೆಗಳಲ್ಲಿರುವ ಉತ್ತಮವಾದ ಕೃತಿಗಳನ್ನು ಸಂಸ್ಕೃತಕ್ಕೆ ಭಾಷಾಂತರಿಸಬೇಕು.

ಈ ಕೃತಿಯಲ್ಲಿ ಉಪಕ್ರಮ-ಉಪಸಂಹಾರಗಳಲ್ಲಿ ಏಕವಾಕ್ಯತೆಯಿದ್ದು, ಸಮಗ್ರ ಅಲಂಕಾರಶಾಸ್ತ್ರದ ಪ್ರಮುಖ ವಿಷಯಗಳ ಬಗ್ಗೆ ಪ್ರಮುಖ ಆಲಂಕಾರಿಕರ ಅಭಿಪ್ರಾಯಗಳು ಅಭಿವ್ಯಕ್ತವಾಗಿದ್ದು, ಓದುಗರಿಗೆ ಸುಲಭವಾಗಿ ಓದಲು ಕೊಟ್ಟಂತಹ ಪ್ರೊಫೆಸರ್ ಕೃಷ್ಣಮೂರ್ತಿಗಳು ನಿಜಕ್ಕೂ ಸಹ ಅಭಿನಂದ್ಯರು ಹಾಗೂ ಅಭಿವಂದ್ಯರು.

---

22) ಅದೇ ಗ್ರಂಥ, ಪುಟ-46

ಶ್ರೀ ಚಾಮುಂಡಿಕಾ ಲಘು ನಿಘಂಟು
ಒಂದು ಪರಿಶೀಲನೆ

ಜಿ. ಅಶ್ವತ್ಥನಾರಾಯಣ

ಕನ್ನಡದಲ್ಲಿ ಸುಮಾರು 80 ನಿಂಘಂಟುಗಳ ಪಟ್ಟಿ ಸಿಗುತ್ತವೆ. ಇವುಗಳಲ್ಲಿ ಕೆಲವು ಪ್ರತಿಗಳು ಸಿಕ್ಕಿಲ್ಲ. ಮತ್ತೆ ಹಲವಾರು ಪ್ರಕಟವಾಗಿಲ್ಲ. ಹಸ್ತಪ್ರತಿಗಳಲ್ಲೇ ಇವೆ. ಈ ನಿಘಂಟುಗಳಲ್ಲಿ ದ್ವಿಭಾಷಾ ಮತ್ತು ಬಹು ಭಾಷಾ ನಿಘಂಟುಗಳಿವೆ. ಈ ಎಲ್ಲ ನಿಘಂಟುಗಳನ್ನು ಪ್ರಾಚೀನ ನಿಘಂಟುಗಳು ಮತ್ತು ಆಧುನಿಕ ನಿಘಂಟುಗಳೆಂದು ವರ್ಗೀಕರಿಸಬಹುದಾಗಿದೆ. 20ನೇ ಶತಮಾನದಲ್ಲಿ ಪ್ರಕಟವಾದವು ಆಧುನಿಕ ನಿಘಂಟುಗಳೆನ್ನಬಹುದು. 20ನೇ ಶತಮಾನದ ಮುಂಚೆ ರಚಿತವಾದ ಹಾಗೂ ಪ್ರಕಟವಾದ ನಿಘಂಟುಗಳನ್ನು ಪ್ರಾಚೀನ ನಿಘಂಟುಗಳೆನ್ನಬಹುದು. ಇದೊಂದು ಸ್ಥೂಲ ವರ್ಗೀಕರಣ ಅಷ್ಟೆ.

ಕನ್ನಡದಲ್ಲಿ ಕಂಡು ಬರುವ ಪ್ರಾಚೀನ ನಿಘಂಟುಗಳನ್ನು ಹಳಗನ್ನಡ ನಿಘಂಟುಗಳನ್ನು ಸಂಪಾದಿಸಿರುವ ಶ್ರೀ ಎನ್. ಬಸವಾರಾಧ್ಯರು ಹೀಗೆ ವರ್ಗೀಕರಿಸಿದ್ದಾರೆ[1] :

1. ಸಂಸ್ಕೃತ ಶಬ್ದಗಳಿಗೆ ಪರ್ಯಾಯ ಶಬ್ದಗಳನ್ನು ಸೂಚಿಸಿರುವ ನಿಘಂಟುಗಳು
2. ಸಂಸ್ಕೃತ ಶಬ್ದಗಳಿಗೆ ಕನ್ನಡ ಟೀಕಿರುವ ನಿಘಂಟುಗಳು
3. ವೈದ್ಯ ನಿಘಂಟುಗಳು
4. ಕನ್ನಡ ನಿಘಂಟುಗಳು
5. ಟೀಕಿರುವ ಕನ್ನಡ ನಿಘಂಟುಗಳು

ಶ್ರೀ ಚಾಮುಂಡಿಕಾ ಲಘು ನಿಘಂಟು 2ನೇ ವರ್ಗಕ್ಕೆ ಸೇರಿದ ನಿಘಂಟುಗಳಲ್ಲಿ ಒಂದಾಗಿದೆ.

ಈಗ ಉಪಲಬ್ಧ ಟೀಕುಗಳಲ್ಲಿ ಸಂಸ್ಕೃತ ನಿಘಂಟುಗಳ ಟೀಕುಗಳೇ ಅತ್ಯಂತ ಪ್ರಾಚೀನವಾದುವು. ಕ್ರಿ.ಶ. 14ನೇ ಶ. ದ ಆದಿ ಭಾಗದಲ್ಲಿ ಅಮರ ಕೋಶಕ್ಕೆ ರಚಿತವಾದ ನಾಚಿರಾಜನ ಟೀಕೇ ಪ್ರಾಚೀನವಾದುದೆಂದು ಭಾವಿಸಲಾಗಿದೆ.2 ಈ ಪರಂಪರೆಯಲ್ಲಿ ಹಲವಾರು ಅಮರಕೋಶದ ಕನ್ನಡ ಟೀಕುಗಳು ಬಂದಿದ್ದು ಅವುಗಳಲ್ಲಿ ಶ್ರೀ ಎನ್. ರಂಗನಾಥ ಶರ್ಮರದು ಈಚಿನ ಪ್ರಕಟನೆ ಎನ್ನಬಹುದು. (ಕಾವ್ಯಾಲಯ ಪ್ರಕಟನೆ?), ಪ್ರಕಟಿತ ವರ್ಷ 1975— (3 ಭಾಗಗಳು)

ಅಮರಕೋಶದ ಮಾದರಿಯಲ್ಲೇ ಸಂಸ್ಕೃತದಲ್ಲಿ ರಚಿತವಾಗಿ ಕನ್ನಡಟೀಕು ಇರುವ ಹಲವಾರು ನಿಘಂಟುಗಳು ಕನ್ನಡದಲ್ಲಿವೆ. ಅವುಗಳಲ್ಲಿ ಬಹಳ ಉಪಯುಕ್ತವೂ ಪ್ರಕಟಿತವೂ ಆಗಿರುವ ನಿಘಂಟುಗಳಲ್ಲಿ ಶ್ರೀ ಚಾಮುಂಡಿಕಾ ಲಘು ನಿಘಂಟು ಸಹ ಒಂದಾಗಿದೆ. ಇದನ್ನು ರಚಿಸಿದವರು ಮುಮ್ಮಡಿ ಕೃಷ್ಣರಾಜ ಒಡೆಯರು (ಕಿ.ಶ. 1794 –1868 ಇವರ ಕಾಲ)3. ಇದರ ರಚನೆಯ ಕಾಲದ ಬಗ್ಗೆ ನಿಖರವಾದ ಮಾಹಿತಿ ಇಲ್ಲ. 19ನೇ ಶತಮಾನದ ಪೂರ್ವಾರ್ಧದಲ್ಲಿ ರಚಿತವಾಯಿತು ಎನ್ನಬಹುದು. ಇದರ ರಚನೆ ಕುರಿತು ಶ್ರೀನಿವಾಸ ಹಾವನೂರರು 'ಇದರ ರಚನೆ 1826' ಎಂದರೆ4, ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಭಾಗ 1 ರಲ್ಲಿ ರಚನಾ ಕಾಲ 1850 ಎಂದಿದೆ. ಎನ್. ಬಸವಾರಾಧ್ಯರು ಇದರ ಕಾಲ ಕ್ರಿ. ಶ. 1848 ಎಂದಿದ್ದಾರೆ. ಕರ್ನಾಟಕ ಕವಿ ಚರಿತ್ರಕಾರರು ತಮ್ಮ ಕವಿ ಚರಿತ್ರೆಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ರಚಿತವೆಂದು 51 ಗ್ರಂಥಗಳ ಪಟ್ಟಿಯನ್ನು ಕೊಟ್ಟಿದ್ದಾರೆ5 ; ಅದರಲ್ಲಿ ಚಾಮುಂಡಿಕಾ ಲಘು ನಿಘಂಟಿನ ಪ್ರಸ್ತಾಪವೇ ಇಲ್ಲ. ಆದರೆ ಎಸ್. ಶಿವಣ್ಣನವರ ಕವಿಚರಿತ್ರೆಯ ಅನುಕ್ತ ಕೃತಿ ಸೂಚಿಯಲ್ಲಿದೆ ಇದರ ಉಲ್ಲೇಖ.

ಇದರ ಬಗ್ಗೆ ಸ್ವಲ್ಪ ಮಟ್ಟಿಗೆ ಮಾಹಿತಿ ನಮಗೆ ಸಿಗುವುದು ಶ್ರೀನಿವಾಸ ಹಾವನೂರರ ಹೊಸಗನ್ನಡ ಅರುಣೋದಯ ಗ್ರಂಥದಲ್ಲೇ6. ಅವರು ತಿಳಿಸಿರುವಂತೆ 1859ರ ಶಾಸನದಲ್ಲಿ 'ಸಮಸ್ತ ಪ್ರಶಸ್ತ ವಸ್ತು ಸುಬೋಧಕ ಶ್ರೀಚಾಮುಂಡಿಕಾ ಲಘು ನಿಘಂಟು' ಎಂದು ಹೇಳಲಾಗಿದೆ. ಸುಮಾರು ಕ್ರಿ. ಶ. 1842ರ ಸುಮಾರಿಗೆ ಅರಮನೆಯಲ್ಲಿ ಸ್ಥಾಪಿಸಲಾದ ಕಲ್ಲಿನ ಅಚ್ಚುಕೂಟದಲ್ಲಿ ಅನೇಕ ಕನ್ನಡ (ಮರಾಠಿ ಸಹ) ಪುಸ್ತಕಗಳು ಸಚಿತ್ರವಾಗಿ ಮುದ್ರಿತವಾದವು ಅವುಗಳಲ್ಲಿ ಚಾಮುಂಡಾ ಲಘು ನಿಘಂಟು ಸಹ ಒಂದಾಗಿದೆ. ಇದರ ರಚನೆ 1826 ಎಂದೂ ಮುದ್ರಣ ಸುಮಾರು 1850 ಎಂದೂ ಹೇಳಲಾಗಿದೆ (ಪು. 173). ಇದರ ವಸ್ತುವನ್ನು ಕುರಿತು ಹೀಗೆ ಹೇಳಿದ್ದಾರೆ "ಕ್ರಿ. ಶ. 1826 ರಷ್ಟು ಹಿಂದೆ ರಚಿತವಾದ ಚಾಮುಂಡಾ ಲಘು ನಿಘಂಟು 152 ಶ್ಲೋಕಗಳ ಪ್ರತ್ಯೇಕವಾದ ಕೃತಿ. ಅದರಲ್ಲಿ ದೇವತೆಗಳು, ಆಯುಧಗಳು, ಅವರ ವಾಹನ ಮೃಗ ಇತ್ಯಾದಿಗಳ ನಾಮಾವಳಿ ಇದೆ. ಈ ಕೃತಿಯ ಆರಂಭ. ಅಥವಾ ಅಂತ್ಯದಲ್ಲಿ ಮುಮ್ಮಡಿ

ಅವರ ವೈಭವಯುಕ್ತ ಗದ್ಯವಿಲ್ಲ. ಅದಕ್ಕೆ ಕನ್ನಡ ಟೀಕೆಯೂ ಇದೆ. ಮೂಲ ಕೃತಿಯನ್ನು ಮುಮ್ಮಡಿಯವರೇ ರಚಿಸಿದ್ದು ಟೀಕೆಯನ್ನು ಕಾರ್ಕಲ ಜೋಯ್ಸನೆಂಬುವನು ಕ್ರಿ. ಶ. 1848 ರಲ್ಲಿ ಬರೆದಂತೆ (ಪ್ರತಿಮಾಡಿದಂತೆ) ಮೈ ಅ. ಸಂಗ್ರಹಾಲಯದ ಕೈಬರಹದ ಪ್ರತಿಯಲ್ಲಿ ಉಲ್ಲೇಖಿಸಲಾಗಿದೆ."

ಮೇಲಿನ ಹೇಳಿಕೆ ಬಗ್ಗೆ ಸ್ವಲ್ಪ ಪರಿಶೀಲಿಸಬೇಕಾದ ಸಂಗತಿಗಳಿವೆ. ಮೊದಲನೆಯದಾಗಿ ಆರಂಭ ಅಥವಾ ಅಂತ್ಯದಲ್ಲಿ ಮುಮ್ಮಡಿ ಅವರ ವೈಭವಯುಕ್ತ ಗದ್ಯವಿಲ್ಲ ಎಂದಿದ್ದಾರೆ. ಆದರೆ ಇದು ನಿಜವಲ್ಲ. ಪ್ರಾರಂಭದಲ್ಲಿ ಇಲ್ಲದಿದ್ದರೂ ಅಂತ್ಯದಲ್ಲಿ ಇದೆ. ಇದನ್ನು ಅಚ್ಚಾದ ಎರಡು ಮುದ್ರಣಗಳಲ್ಲೂ7 ಕಾಣಬಹುದಾಗಿದೆ. "ಗದ್ಯ॥ ಕುಂಡಲಿಶಯು ಖಂಡ ಪರಶು ಪುಂಡರೀಕ ಭವಾಖಂಡಲ ಪ್ರಮುಖ ನಿಖಿಲ ಸುರವರ ಪರಿಭವ ಪರಿಣತ ಪ್ರಚಂಡ ಬಲ ಚಂಡಮುಂಡವಿಖಂಡನ ನಿಪುಣ ಕೋದಂಡಕಾಂಡ ಮಂಡಲಾಗ್ರಧರ........ ಗೋತ್ರ ಸುಚರಿತ್ರ ಚಾಮರಾಜ ಮಹಾರಾಜಪುತ್ರ ನರಪತಿ ಬಿರುದ ಮಹೀಶೂರ ಪುರವರಾಧೀಶ ಶ್ರೀ ಕೃಷ್ಣರಾಜ ಒಡೆಯರವರಿಂದ ರಸಿಕಜನಾನಂದಕರವಾಗಿ ವಿರಚಿತವಾದ ಚಾಮುಂಡಿಕಾ ಲಘು ನಿಘಂಟೆಂಬ ನವೀನಕೋಶದೊಳ್ ಮೂರು ಪ್ರಕರಣಕ್ಕಂ ಮಂಗಳಶ್ರೀ" ಎಂದಿದೆ.

ಇದರ ರಚನಾ ಕಾಲದ ಬಗ್ಗೆ ಆಧುನಿಕರಲ್ಲಿ ಭಿನ್ನಾಭಿಪ್ರಾಯ ಇರುವಂತೆ ಇದರ ಹಸ್ತಪ್ರತಿಗಳ ಉಲ್ಲೇಖಗಳಲ್ಲೂ ಪಾಠಭೇದಗಳು ಕಂಡು ಬರುತ್ತದೆ. ಮೋ ಪ್ರತಿಯಲ್ಲಿ ಹೀಗಿದೆ. (ವಿವರಗಳಿಗೆ ಟಿಪ್ಪಣಿ ನೋಡಿ. ಈ ಲೇಖನವನ್ನು ಬರೆಯುವಲ್ಲಿ ಪರಿಷತ್ತಿನ ಪ್ರಕಟನೆ 1956 ರದನ್ನು ಮೋ ಪ್ರತಿಯೆಂದೂ ಅರಮನೆಯ ಕಲ್ಲಚ್ಚಿನಪ್ರತಿ 1884 ರದನ್ನು ಚ ಪ್ರತಿಯೆಂದು ಸಂಕೇತಿಸಲಾಗಿದೆ)

॥ಸೀಸಪದ್ಯ॥ ಶ್ರೀ ಬಾಣ ಮುನಿಚಂದ್ರರೆಸೆವ ಸಂಖ್ಯೆಯು ಸಂದ ।
ಶಾಲಿವಾಹ ಶಕಾಬ್ದ ಸಹಿತವಾದ । **ಷಣ್ಮಂಶಿ ವತ್ಸರ**
ಶರ್ಮದ ಫಾಲ್ಗುನ । ಪೂರ್ಣಿಮಾ ಭೃಗುವಾರ ಪೂರ್ಣಮಾದ ।
ಶುಭವಾಸರದಲೀ ವಸುಂಧರಾಧಿಪ ಕೃಷ್ಣ। ರಾಜೇಂದ್ರ ಭೂಪಾಲ
ರಚನೆಗೈದ । ಋತುವಹ್ನಿನೇತ್ರೇಂದು ವಿತತ ಸುಖ್ಯ ಪದಾರ್ಥ ।
ನಾಮದ (?) ಮುನಿವೇದ ನಳಿನವೈರಿ ।

॥ಗೀತೆ॥ ಸಂಖ್ಯ ಸುಶ್ಲೋಕ ಸಮುದಯ ಸಾಂದ್ರ ಚಂಡಿ
ಕಾ ಲಘುನಿಘಂಟಿನಲಿ ಜನರ್ಗಳ (?) ಚವೈತು
ರಹಿತಮಾಗಿ ಮುಖ್ಯ ಪದಾರ್ಥ ರಾಜಿಯಿಹುದು
ನಿಂತುದ ಮಹಾನಿಘಂಟಿನೊಳ್ ನೀವು ನೋಡಿ ॥೧೫೩॥

ಎಂದಿದೆ. ಆದರೆ ರಚನಾಕಾಲದ ವಿವರ ಚ ಪ್ರತಿಯಲ್ಲಿ ಬೇರೆ ರೀತಿ ಇದೆ.

ಚ ಪ್ರತಿ

॥ಸೀಸ॥ ಶ್ರೀಬಾಣಮುನಿ ಚಂದ್ರರಸೆವ ಸಂಖ್ಯೆಯು ತೋರ್ಪ
ಶಾಲೀವಾಹನ ಶಕಾಬ್ದ ಸಹಿತವಾದ ।
ದುರ್ಮುಖಿ ವತ್ಸರ ಶರ್ಮದ ವೈಶಾಖ ।
ಪೂರ್ಣಿಮಾ ರವಿವಾರ ಪೂರ್ಣಮಾದ

ಶುಭವಾಸರದಲಿ ವಸುಂಧರಾಧಿಪ ಕೃಷ್ಣ ।
ರಾಜೇಂದ್ರ ಭೂಪಾಲ ರಚನೆಗೈದ
ಕಾರ್ಯೇಭಲೋಕೇಂದು ಕಲಿತ ಸಂಖ್ಯಪದಾರ್ಥ
ನಾಮದ ರಸಶಾಸ್ತ್ರ ನಳಿಸವ್ವೈರಿ ॥

ಗೀತೆ. ಸಂಖ್ಯ ಸುಶ್ಲೋಕ ಸಮುದಯಸಾಂದ್ರ ಚಂಡಿ
ಕಾ ಲಘು ನಿಘಂಟಿನಲ್ಲಿ ಜನರ್ಗಳ ಚವ್ವೆತು
ರಹಿತಮಾಗಿ ಮುಖ್ಯ ಪದಾರ್ಥ ರಾಜ ಇಹುದು
ನಿಂತುದ ಮಹಾನಿಘಂಟಿನೋಳ್ ನೀವು ನೋಡಿ

ಇದಾದನಂತರ ಚಪ್ರತಿಯಲ್ಲಿ ಗದ್ಯದಲ್ಲಿ ಹೀಗೆ ಹೇಳಿದೆ "ಶಾಲೀವಾಹನ ಶಕ ವರುಷಂಗಳು 1758 ನೇ ವರ್ತಮಾನವಾದ ದುರ್ಮುಖಿ ನಾಮ ಸಂವತ್ಸರದ ವೈಶಾಖ ಶುದ್ಧ 15 ಭಾನುವಾರದಲ್ಲೂ ಲೋಕೋಪಕಾರಾರ್ಥವಾಗಿ ಮುಖ್ಯವಾಗಿ ಪ್ರಸಿದ್ಧವಾದಂಥಾ ಪದಾರ್ಥ ಭೇದಗಳು ಶ್ರೀಮತ್ಕೃಷ್ಣರಾಜ ಮಹಾರಾಜ ಕಂಠೀರವರಿಂದ ವಿರಚಿತವಾದ ಶ್ರೀ ಚಾಮುಂಡಾ ಲಘು ನಿಘಂಟೆಂಬ..."

ಮತ್ತೊಂದು ಸಂಗತಿ ಇಲ್ಲಿ ಉಲ್ಲೇಖವಾಗಿದೆ. ಈಗ ಲಭ್ಯವಾಗಿರುವುದು ಲಘು ನಿಘಂಟು. ಇದರ ಆಕರಕೃತಿಯಾಗಿ ಮಹಾನಿಘಂಟು ಇದೆ ಎಂಬ ಸೂಚನೆ ಈ ಮುಕ್ತಾಯದ ಗದ್ಯದಲ್ಲಿದೆ. ಇದು ಗಮನಾರ್ಹ ಸಂಗತಿ. ಮಹಾನಿಘಂಟಿನೋಳ್ ನೀವು ನೋಡಿ ಎಂದು ಮೋ ಪ್ರತಿಯಲ್ಲೂ "ನಿಂತ ಪದಾರ್ಥಗಳು ನಾಮಭೇದಗಳೂ ಮುಂತಾದ ವಿಶಿಷ್ಟವೂ ಈ ಚಾಮುಂಡಾ ಮಹಾನಿಘಂಟಿನಲ್ಲಿ ಬುದ್ಧಿವಂತರಾದವರು ನೋಡಿ ತಿಳಿದುಕೊಳ್ಳತಕ್ಕದ್ದು" ಎಂದಿದೆ. ಆದ್ದರಿಂದ ಈ ಬಗ್ಗೆ ಅನ್ವೇಷಣೆ ನಡೆಯಬೇಕು. ಈಗ ಅಚ್ಚಾದ 2 ಪ್ರತಿಗಳ ಆಧಾರಪ್ರತಿಗಳು ಒಂದೇ ಅಲ್ಲ ಎಂಬುದೂ ಅವುಗಳ ಪರಿಶೀಲನೆಯಿಂದ ತಿಳಿದುಬಂದಿರುವ ಸಂಗತಿಯಾಗಿದೆ.8

ಕನ್ನಡದಲ್ಲಿ ಇದುವರೆಗೆ ಪ್ರಕಟವಾದ ಎಲ್ಲಾ ಹಸ್ತಪ್ರತಿಸೂಚಿಗಳೂ ಗ್ರಂಥ-ಲೇಖಸೂಚಿಗಳೂ ಪತ್ರಿಕಾಲೇಖನ ಸೂಚಿಗಳೂ ಮತ್ತು ಸಾಹಿತ್ಯ ಚರಿತ್ರೆ ಗ್ರಂಥಗಳೂ, ನಿಘಂಟು ಕುರಿತ ಲೇಖನಗಳೂ, ಪರಿಷತ್ತಿನಿಂದ ಪ್ರಕಟವಾದ ಮೋಟಗಾನಹಳ್ಳಿ

ಸುಬ್ರಹ್ಮಣ್ಯಶಾಸ್ತ್ರಿ ಮತ್ತು ಎಲ್. ಗುಂಡಪ್ಪನವರಿಂದ ಸಂಪಾದಿತವಾದ ಅಚ್ಚಾದ ಪ್ರತಿಯನ್ನೇ ಉಲ್ಲೇಖಿಸಿದೆ. 1884ರಲ್ಲಿ ಅಚ್ಚಾದ (ಈ ಪ್ರತಿ ನನ್ನಲ್ಲಿದೆ. ಇದನ್ನು ಪರಿಷ್ಕರಿಸಿ ಮುದ್ರಣಕ್ಕೆ ಸಿದ್ಧಮಾಡಿದೆ) ಕಲ್ಲಚ್ಚಿನ ಪ್ರತಿ ವಿಷಯ ಒಬ್ಬಿಬ್ಬರಿಗೆ ತಿಳಿದಿದ್ದರೂ (ಶ್ರೀ ಎಸ್. ಶಿವಣ್ಣನವರು ಶ್ರೀ ಟಿ. ವಿ. ವೆಂಕಟಾಚಲಶಾಸ್ತ್ರಿಯವರೂ ಈ ಬಗ್ಗೆ ಪ್ರಸ್ತಾಪಿಸಿದ್ದಾರೆ) ಇದನ್ನು ಕುರಿತ ಯಾವಲೇಖನವೂ ನನ್ನ ಗಮನಕ್ಕೆ ಬಂದಿಲ್ಲ. ಈ ಹಿನ್ನೆಲೆಯಲ್ಲಿ 'ಮೋ' ಪ್ರತಿಗಿಂತ ಹೆಚ್ಚಿನ ಮಾಹಿತಿ ಇರುವ ಈ ಪ್ರತಿಯಲ್ಲಿರುವ ಕೆಲವು ಸಂಗತಿಗಳನ್ನು ಇಲ್ಲಿ ಪ್ರಸ್ತಾಪಿಸಿದ್ದೇನೆ.

ಪರಿಷತ್ ಪ್ರಕಟನೆಯ ಪ್ರತಿಯ 'ಅರಿಕೆಯಲ್ಲಿ' ಹೇಳಿರುವ ಮಾತುಗಳಿವು : "ಈ ನಿಘಂಟುವನ್ನು ಒಂದೇ ಒಂದು ಮಾತೃಕೆಯ ಆಧಾರದಿಂದ ಸಿದ್ಧಪಡಿಸಿದೆ...ಪ್ರತಿ ಮಾಡುವುದರಲ್ಲಿ ತಲೆದೋರಬಹುದಾದ ಅಕ್ಷರ ಸ್ಖಾಲಿತ್ಯ ಮೊದಲಾದ ಸಣ್ಣಸಣ್ಣ ತಪ್ಪುಗಳನ್ನು ಮಾತ್ರ ತಿದ್ದಲಾಗಿದೆ. ಇಷ್ಟುಹೊರತು ಮತ್ತೇನೂ ಮಾರ್ಪಾಟು ಮಾಡದೆ ಗ್ರಂಥವನ್ನು ಇದ್ದಂತೆಯೇ ಪ್ರಕಟಿಸಿದೆ. ಕಡೆಯಲ್ಲಿ ಸಂಸ್ಕೃತ ಮತ್ತು ಕನ್ನಡ ಪಟ್ಟಿಕೆ ಯೊಂದನ್ನು ಕೊಟ್ಟಿದೆ." ಮೇಲ್ಕಂಡ ಉಲ್ಲೇಖದಿಂದ ಸಂಪಾದಕರು 1884 ರಲ್ಲಿ ಅಚ್ಚಾದ ಪ್ರತಿಯನ್ನಾಗಲೀ ಅದರ ಆಕರವಾದ, ಅಥವಾ ಬೇರೆ ಪ್ರತಿಯನ್ನಾಗಲೀ ನೋಡಿಲ್ಲ ಎಂಬುದು ಸ್ಪಷ್ಟ. ಇದರ ಫಲವಾಗಿ ತಾವು ಬಳಸಿದ ಕೈಯಲ್ಲಿ ಮಾಡಿದ ದಪ್ಪ ಕಾಗದದ ಪುಸ್ತಕದ ಪ್ರತಿಯಲ್ಲಿರುವ ಲೋಪದೋಷಗಳನ್ನು ನಿವಾರಿಸಲು ಆಗಲಿಲ್ಲ. ಪ್ರತಿಯ ಸ್ವರೂಪವನ್ನು ತೌಲನಿಕವಾಗಿ ವಿವೇಚಿಸಲು ಆಗಲಿಲ್ಲ.

ಆದ ಕಾರಣ ಚ ಪ್ರತಿ ಆಧಾರದಿಂದ ಪರಿಷತ್ ಪ್ರಕಟನೆಗೆ ಪೂರಕವಾಗಿ ಕೆಲವು ಸಂಗತಿಗಳನ್ನು ಇಲ್ಲಿ ತಿಳಿಸಿ ಕೊರತೆಗಳನ್ನು ತುಂಬ ಬಹುದಾಗಿವೆ.

ಮೊದಲನೆಯದಾಗಿ, ಮೋ ಪ್ರಕಟನೆಯಲ್ಲಿ ಮಂಗಳ ಶ್ಲೋಕ ಇಲ್ಲ. ಚ ಪ್ರತಿಯಲ್ಲಿ ಮಂಗಳ ಶ್ಲೋಕವೂ ಆ ಮೊದಲು ವಿವರಣೆಯೊಂದೂ ಇವೆ.

"ಶ್ರೀ ಕೃಷ್ಣರಾಜ ಮಹಾರಾಜ ಕಂಠೀರವ ವಿರಚಿತ ಚಾಮುಂಡಾ ಲಘು ನಿಘಂಟಿನಲ್ಲಿ ದೇವತೆಗಳು ಮೊದಲಾದವರು ಹಸ್ತದಲ್ಲಿ ಧರಿಸುವ ಆಯುಧಗಳು, ಹಸ್ತವಿಶೇಷಗಳು, ಮೃಗಗಳ ನಾಮಾವಳಿ ಶ್ಲೋಕ ವ್ಯಾಖ್ಯಾನ ಸಹಾ ವಿವರಿಸಲ್ಪಟ್ಟಿವೆ."

ಈ ವಿವರಣೆಯ ಅನಂತರ ಈ ಶ್ಲೋಕವಿದೆ.

ಕಲ್ಯಾಣೈಕ ನಿದಾನಂ ಕಲಯೆ ಕಂದರ್ಪಕೋಟಿ ಲಾವಣ್ಯಂ ।
ಚಂಡಾದಿಭೇದ ಶೌಂಡಂ ಚಾಮುಂಡಾಖ್ಯಂ ಮಹಃಪರಂಭಾವೆ ॥

ಮೊದಲಿನ ವಿವರಣೆಯನ್ನು ಈಚಿನವರು ಸೇರಿಸಿಸಬೇಕು ಮುದ್ರಣ ಕಾಲದಲ್ಲಿ.

ಇನ್ನು "ಪ್ರತಿಮಾಡುವುದರಲ್ಲಿ ಆದ ಸಣ್ಣಪುಟ್ಟ ತಪ್ಪುಗಳನ್ನು ಹಲವಾರು ಕಡೆ ಸಂಪಾದಕರು ತಿದ್ದಿದ್ದರೂ ಎಷ್ಟೋಕಡೆ ತಪ್ಪುಗಳು ಹಾಗೇ ಉಳಿದಿವೆ. ಬಹುಶಃ ಅಚ್ಚಿನ ತಪ್ಪುಗಳೂ ಆಗಿರಬಹುದು ಇವು. ಉದಾಹರಣೆಗೆ ಪುಟ 11 ರಲ್ಲಿ ಶ್ಲೋಕ 58 ರಲ್ಲಿ "ಹೇಮ ಚಂಪಕ ಪುನ್ನಾಗ ವಕುಳಾಲೋದ್ರ ಮುಷ್ಕಕಾ ಎಂದಿದೆ. ಟೀಕೆಯಲ್ಲಿ ಮುಷ್ಠಿಕಃ=ಬೆಟ್ಟಮಾವು ಎಂದು ಅರ್ಥೈಸಿದ್ದಾರೆ. ಚ ಪ್ರತಿ ಪ್ರಕಾರ ಮುಷ್ಕಿಕಃ ಇರಬೇಕು.

ಪದ-ಅರ್ಥದ ದೃಷ್ಟಿಯಿಂದ ಪಾಠಭೇದಗಳೂ ಸಾಕಷ್ಟಿವೆ.

26ನೇ ಶ್ಲೋಕದಲ್ಲಿ **ನೋ** ಪ್ರತಿಯಲ್ಲಿ **ಕುಬ್ಜಾ** ಜೋ ಮಾಲಬಿಲಕೃದ್ಧರಿಣೀ ಭಾಗಜೋ ಮೃಗಃ......ಎಂದಿದ್ದಾರೆ. **ಚ**ಪ್ರತಿಯಲ್ಲಿ ಕೇಶಾಜೋ ಮಾಲಬಿಲ...... ಎಂದಿದೆ. ಟೀಕೆಯಲ್ಲಿ ಕುಬ್ಜಾಜ=ಕಂಚೀಆಡು ಎಂದು **ನೋ** ಪ್ರತಿಯಲ್ಲಿ, ಕೇಶಾಜಃ =ಕೂದಲ ಆಡು ಎಂದು **ಚ** ಪ್ರತಿಯಲ್ಲಿಹೇಳಿದೆ. **ಚ** ಪ್ರತಿಯಲ್ಲಿ **ನೋ** ಪ್ರತಿಗಿಂತ ಉತ್ತಮ ಪಾಠಗಳಿವೆ. ಉದಾ : **ನೋ** ಪ್ರತಿಯ ಶ್ಲೋಕ **47**ರಲ್ಲಿ ಇರುವೆಗಳಲ್ಲಿರುವ ಜಾತಿಗಳನ್ನು ಕುರಿತುಹೀಗೆ ಹೇಳಿದೆ : ಬೃಹತ್ ಪಿಪೀಲಿಕಾ ರಕ್ತಾದಂಶೀ ರಕ್ತ ಪಿಪೀಲಿಕಾ": **ಚ**ಪ್ರತಿಪಾಠ"ಬೃಹತ್ ಪಿಪೀಲಿಕಾ ರಕ್ತದಂಶಿ ಪಕ್ಷ ಪಿಪೀಲಿಕಾ".

ನೋ ಪ್ರತಿ ಟೀಕೆ : ಬೃಹತ್ ಪಿಪೀಲಿಕಾ=ಕಟ್ಟಿರುವೆ
ರಕ್ತಾ (ಪಿಪೀಲಿಕಾ)=ಕೆಂಪಿರು(ವೆ)
ದಂಶೀ ರಕ್ತಪಿಪೀಲಿಕಾ (ಕೆಂಜಿಗ)

ಚ ಪ್ರತಿ ಟೀಕೆ : ಬೃಹತ್ ಪಿಪೀಲಿಕಾ=ದೊಡ್ಡ ಇರುವೆ
ರಕ್ತ ಪಿಪೀಲಿಕಾ=ಕೆಂಪಿರುವೆ
ದಂಶೀ ಪಿಪೀಲಿಕಾ=ಕೆಂಜಿಗ
ಪಕ್ಷಪಿಪೀಲಿಕಾ=ರೆಕ್ಕೆ ಇರುವೆ

ಸಂಪಾದಕರು ಇನ್ನು ಹಲವು ಎಡೆಗಳಲ್ಲಿ ಊಹಾ ಪಾಠಗಳನ್ನು ಹಾಕಿದ್ದಾರೆ **ನೋ** ಪ್ರತಿಯಲ್ಲಿ. ಆದರೆ ಚ ಪ್ರತಿ ಆಧಾರದಿಂದ ಅವುಗಳನ್ನು ಬಿಡಬಹುದಾಗಿದೆ. ಉದಾಹರಣೆಗೆ 14ನೇ ಶ್ಲೋಕ (ಪ್ರಥಮ ಪ್ರಕರಣದಲ್ಲಿ) ಉತ್ತರಪಾದ ಹೀಗಿದೆ :

ನೋ ಪ್ರತಿ : ಚಿತಾಪ್ರಾಜ್ಞ [ಪ್ರ] ಮೋದಾಯ ಜೀಯಾದಾಯುಧ ಮಾಲಿಕಾ.

ಚಪ್ರತಿ : ರಚಿತಾ ಪ್ರಾಜ್ಞಮೋದಾಯ ಜೀಯಾದಾಯುಧ ಮಾಲಿಕಾ,

ಟೀಕೆಯಲ್ಲಿ ಕನ್ನಡ ಅರ್ಥದ ಪದಗಳಲ್ಲಿ ಅಲ್ಲಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಇವುಗಳ ಶುದ್ಧರೂಪ ಅಥವಾ ಮೂಲರೂಪವನ್ನು ನಿರ್ಣಯಿಸಬೇಕಾಗುತ್ತದೆ.

1. ಶ್ಯೇನಪ್ಪಟಕಮರ್ದನಃ = ಕುರಮುರೀ ಹಕ್ಕಿ ಶಿಖರಾ? (ಮೋ ಪ್ರತಿ ಶ್ಲೋಕ 38)
ತುರಮುರೀ ಹಕ್ಕಿ ಶಿಖರ (ಚ ಪ್ರತಿ II-24 ಶ್ಲೋಕ)

2. ಕಾಯಮಾನಃ = ಚಪ್ಪರದವರೆ, ನಿಷ್ಪಾವಃ = ಅವರೆ (ಮೋ ಪ್ರತಿ ಶ್ಲೋಕ 104)
ಕಾಯಮಾನ ನಿಷ್ಪಾವಃ = ಚಪ್ಪರದವರೆ (ಚಪ್ರತಿ III-50 ಶ್ಲೋಕ)

3. ವನ್ಯೋರ್ವಾರುಕಃ = ಕಾಡುಸಂತೆ
ಕರ್ಕಟಿಃ = ಸಂತೆ } ನೋ ಪ್ರತಿ ಸ್ಲೋಕ112

ವನ್ಯೋರ್ವಾರುಕಃ = ಕಾಡುಸೌತೆ
ಕರ್ಕಟಿಃ = ಸೌತೆ } ಚ ಪ್ರತಿ III-62 ಶ್ಲೋಕ

ಉಳಿದ ತರಕಾರಿ ಹೆಸರಿನ ನಡುವೆ 'ಸಂತೆ' ಪದ ಬರುವ ಸಂಭವವಿಲ್ಲ. ಸೌತೆ ಹೆಚ್ಚು ಸಂಭವನೀಯ ಪದವಾಗಿದೆ.

ಈ ಕೋಶದಲ್ಲಿ ಟೀಕಾಕಾರರು ಕೊಟ್ಟಿರುವ ಕನ್ನಡ ಪದಗಳು ಅಪೂರ್ವ ದೇಸೀ ಪದಗಳಾಗಿದ್ದು ನಾವಿಂದು ಬಳಸುವ ಮತ್ತು ಬಳಕೆಯಿಂದ ಬಿಡುತ್ತಿರುವ ಪದಗಳನ್ನೆಲ್ಲ ಕಾಣಬಹುದಾಗಿದೆ. ಅಷ್ಟೇ ಅಲ್ಲದೆ ಇಲ್ಲಿ ಒಂದೊಂದರಲ್ಲೂ ಹೇಳುವ ಪ್ರಭೇದಗಳು ಅಚ್ಚರಿಯನ್ನುಂಟು ಮಾಡುತ್ತವೆ. ಇತ್ತೀಚೆಗೆ ವಿಜ್ಞಾನ ಲೇಖನಗಳನ್ನು ಬರೆಯುವ ವಿದ್ವಾಂಸ ಮಿತ್ರರೊಬ್ಬರು ಲವಣ, ಪಾಷಾಣಗಳ ವೈವಿಧ್ಯವನ್ನು ಕುರಿತು ಹೇಳಿರುವುದನ್ನು ಕಂಡು ದಂಗಾದರು. ಇವುಗಳನ್ನು ವೈಜ್ಞಾನಿಕವಾಗಿ ಗುರುತಿಸುವ ಅಗತ್ಯವಿದೆ ಎಂದರು. ಏಕೆಂದರೆ ಇಂಗ್ಲಿಷಿನಲ್ಲಿ ಅನೇಕ ವಸ್ತು ವೈವಿಧ್ಯಗಳು ಕಂಡು ಬರುತ್ತವೆ. ಅವುಗಳನ್ನು ಅನುವಾದಿಸಲು ಇಂಥ ಕೋಶಗಳ ಅಗತ್ಯವಿದೆಯೆಂದರು.

ನವಪಾಷಾಣಗಳನ್ನು ಈ ನಿಘಂಟುಕಾರ ಹೇಳುತ್ತಾನೆ. ಶ್ಲೋಕ 13ರ ಟೀಕೆ ಪ್ರಕಾರ 1. ಶಂಖ, 2. ಸ್ಫಟಿಕ, 3. ಸೌವೀರ, 4. ಪುಂಡರೀಕ, 5. ವರಂದಸ 6. ಮಹಾಗೌರೀ, 7. ರಕ್ತ, 8. ಮೂಷಿಕ, 9. ಚಿತ್ರ ಪಾಷಾಣಗಳನ್ನು ಹೇಳ ಲಾಗಿದೆ. ಕನ್ನಡದ ನಿಘಂಟುಗಳಲ್ಲಿ ಈ ವಿವರಗಳಿಲ್ಲ. (ನೋಡಿ ಕಸಾಪ ನಿಘಂಟು 9) ಶ್ರೀವತ್ಸ ನಿಘಂಟಿನಲ್ಲಿ (10) ಪ್ರಭೇದಗಳನ್ನು ಹೇಳಿರುವುದಾದರೂ ಅದಕ್ಕೂ ಇದಕ್ಕೂ ಸಂಬಂಧವೇ ಇಲ್ಲ. ಇಂಥ ನಿದರ್ಶನಗಳು ನೂರಾರು ದೊರಕುತ್ತವೆ ಈ ನಿಘಂಟಿನಲ್ಲಿ.

ಪರಿಷತ್ತಿನ ಪ್ರಕಟನೆಯಲ್ಲಿ ಎರಡನೇ ಪ್ರಕರಣವು **36** ಶ್ಲೋಕ ಒಳಗೊಂಡಿದೆ. ಆದರೆ **ಚ** ಪ್ರತಿಯಲ್ಲಿ **14** ಶ್ಲೋಕಗಳು ಅಧಿಕವಾಗಿವೆ. ಇವು ಪರಿಷತ್ ಪ್ರಕಟನೆಯ ಹಸ್ತಪ್ರತಿಯಲ್ಲಿ ಬಿಟ್ಟು ಹೋಗಲು ಕಾರಣ ತಿಳಿಯದು; ಬಹುಶಃ ಅವರಿಗೆ ಪ್ರತಿ

ಮಾಡಲು ದೊರೆತ ಪ್ರತಿ ಹಾಗೆಯೇ ಇತ್ತೋ ಏನೋ ! ಏನೇ ಆದರೂ ಈ 14 ಶ್ಲೋಕಗಳು ಮತ್ತು ಅದರ ಟೀಕೆ ತುಂಬ ಉಪಯುಕ್ತ ವಿವರಗಳನ್ನು ಒಳಗೊಂಡಿವೆ. ಅವುಗಳ ಟೀಕೆಯನ್ನು ಇಲ್ಲಿ ಚಪ್ರತಿಯಿಂದ ಉದ್ಧರಿಸಿದೆ.

II ಪ್ರಕರಣ

ಶ್ಲೋಕ 35

ಏಧನುಃ = ಕಪ್ರಶೆಟ್ಟಿ
ಕೃಷ್ಣಮೃಜ್ಜಂತುಃ = ಎರೇ ಹುಳು
ಕಂಬಳಕ್ರಿಮಿಃ = ಕಂಬಳ ಹುಳು
ಭೂನಾಗಃ = ಮಣ್ಣುಜಿಲ್ಲೀ
ದೀರ್ಘಶಲಭಃ = ಹಸಿರು ಪ್ಯಾಯಿ
ದಾರುಮತ್ಕಣಃ = ಮರತಿಗಣೆ

ಶ್ಲೋಕ 36

ಶಾರಕೂರ್ಮಃ = ಪಗಡೇ ಚಾರೀ ಆಮೆ
ಕ್ಷೀರ ಕೂರ್ಮಃ = ಹಾಲಾಮೆ
ಶಿಲಾ ಕೂರ್ಮಃ = ಕಲ್ಲಾಮೆ
ಪುಚ್ಛ ಕ್ರಿಮಿಃ = ಬಾಲ ಹುಳು
ನಿಷ್ಪಾವಕ್ರಿಮಿಃ = ಅವರೇ ಹುಳು
ರೇಖಾ ಪಿಪೀಲಿಕಾ = ಕಟ್ಟಿರುವೆ
ದಂಡಮಕರಃ = ಕೋಲು ಮೊಸಳೆ
ರಕ್ತವೃಶ್ಚಿಕಃ = ಕೆಂಜೇಳು

ಶ್ಲೋಕ 37

ಕರ್ಕಃ = ಬಿಳೀ ಕುದುರೆ
ವಿನೀತಃ = ಸ್ವಾರೀ ಕುದುರೆ
ಕಾಂಭೋಜಃ = ಕಚ್ಚೀ ಕುದುರೆ
ಜವನಃ = ಜೂಜಿನ ಕುದುರೆ
ಬಾಹ್ಲೀಕಃ = ಕಾಟೇವಾಡು ಕುದುರೆ
ಯಯುಃ = ಅಶ್ವಮೇಧ ಕುದುರೆ
ರಥ್ಯಃ = ಗಾಡೀ ಕುದುರೆ
ಅಜಾನೇಯಃ = ಪಟ್ಟಕ್ಕೆ ಲಕ್ಷಣವಾದ ಕುದುರೆ
ಕುಬ್ಜಾಶ್ವಃ = ಟಾಕಣ
ಪಾರಶೀಕಃ = ತುರಕೀ ಕುದುರೆ
ವನಾಯುಜಃ = ಜಂಗ್ಲೀಕಾಡು ಕುದುರೆ

ಶ್ಲೋಕ 38
ದ್ವೀಪಾಶ್ವಃ = ವಿಲಾಯಿತಿ ಕುದುರೆ
ಆರವಟ್ಟಜಃ = ಅರಬ್ಬೀ ಕುದುರೆ
ಸ್ಥೌರೀ = ಕಂಟ್ಲೆ ತಟ್ಟು
ಕಿಶೋರಃ = ಮರಿ ಕುದುರೆ
ಬಡಬಾ = ಹೆಣ್ಣು ಕುದುರೆ
ಹಯಃ = ಸಾದಾ ಕುದುರೆ
ಯೂಥಪಃ = ಸಲಗ ಆನೆ
ಕಲಭ = 30 ವರ್ಷದ ಆನೆ
ವಿಕ್ಕಃ = 20 ವರ್ಷದ ಆನೆ
ಪೋತಃ = 10 ವರ್ಷದ ಆನೆ
ಕುಬ್ಜೇಭಃ = ಗುಂನಾನೆ
ಕುಂಜರಃ = 60 ವರ್ಷದ ಆನೆ

ಶ್ಲೋಕ 39
ಉದ್ವಾಂತಃ = ಮದ ಇಳಿದ ಆನೆ
ಬಾಲಃ = 5 ವರ್ಷದ ಆನೆ
ಜಾಪವಾಹ್ಯಃ = ಪಟ್ಟದ ಆನೆ
ಚತುರ್ದಂತಃ = 4 ಕೊಂಬಿನ ಆನೆ
ಮದೋತ್ಕಟಃ = ಮದ್ದಾನೆ
ಊರ್ಧ್ವಾಗ್ರದಂತಃ = ಪಲಕದಂತ ಆನೆ
ಸಂಕೀರ್ಣಃ = ಮಿಶ್ರಜಾತಿ ಆನೆ
ದ್ವೀಪದಂತಾವಳಿಃ = ದ್ವೀಪಾಂತರ ಆನೆ
ಮೃಗಃ = ಸಹ್ಯಪರ್ವತ ಕರ್ನಾಟದೇಶದ ಆನೆ

ಶ್ಲೋಕ 40
ನಿರ್ದಂತಃ = ಮಕಣಾ ಆನೆ
ಕರಿಣೀ = ಹೆಣ್ಣಾನೆ
ಶ್ವೇತಪೀಲುಃ = ಬಿಳಿ ಆನೆ
ಗಂಭೀರ ವೇದೀ = ಯುದ್ಧದಲ್ಲಿ ಹಿಮ್ಮೆಟ್ಟದ ಆನೆ
ಏಕದಂತಃ = ಒಂಟಿ ಕೊಂಬಿನ ಆನೆ
ಭದ್ರಃ = ಹಿಮವತ್ ಪರ್ವತದ ಆನೆ
ಮಂದ್ರಃ = ವಿಂಧ್ಯ ಪರ್ವತದ ಆನೆ

ಶ್ಲೋಕ 41
ಕ್ರೀಡೋಕ್ಷಃ = ಕೌಲೇ ಬಸವ
ಆರ್ಷಭ್ಯಃ = ಹಿಡಾ ಬಡೀ ತಕ್ಕದ್ದು
ನಸ್ಯೋತಃ = ಮೂಗುರಾಣಿ ಹಾಕಿದ್ದು
ಜರದ್ಗವಃ = ಮುದಿ ಎತ್ತು
ಬಲೀವರ್ದಃ = ಸ್ವಾರೀ ಹೋರೀ
ಉಕ್ಷಾ = ಏರು ಉಳುವ ಎತ್ತು
ದುಮ್ಯಃ = ತಿದ್ದಿದ ಹೋರಿ
ಸೌರಭೇಯಃ = ಕಟ್ಟು ಹೋರಿ
ಷಂಡಃ = ಹಿಡಾ ಬಡದ್ದು
ಧೌರೇಯಃ = ಹೇರುವ ಎತ್ತು
ತೂಬರಃ = ಬೋಳೆತ್ತು

ಶ್ಲೋಕ 42
ಮಹೋಕ್ಷಃ = ಗುಜರಾತಿ ಎತ್ತು
ಶಾಕಟಃ = ಗಾಡೀ ಎತ್ತು
ಯುಗ್ಯಃ = ಉಳುವ ಎತ್ತು
ಕಕುದ್ಮಾನ್ = ದೊಡ್ಡ ಹಿರುಳು ಎತ್ತು
ಗೋಪತಿಃ = ಮಂದೇ ಹೋರಿ
ಇಟ್ಚರಃ = ಬಸವ ಬಿಟ್ಟದ್ದು
ಭದ್ರಃ = ಹಲ್ಲಿಕ್ಕಿದ ಎತ್ತು
ಇತ್ವರಃ = ಜಂನಿಗೆ ಬಿಟ್ಟದ್ದು
ವತ್ಸತರಃ = ಪಡ್ಡ ಹೋರಿ
ಪೃಷ್ಠಭಸ್ತ್ರಃ = ವಿಭೂತೀಚೀಲದ್ದು
ಅಧ್ವದರ್ಶಕಃ = ಸಲಗ ಎತ್ತು

ಶ್ಲೋಕ 43
ಸಯಾಂಸವಿಾನಾ = ವರ್ಷಂಗತೀ
ಷಷ್ಠೌಹೀ = ಎಳೇಗಬ್ಬ
ಕುಬ್ಜಾ = ಕಂಚೀಹಸು
ಸ್ವಸ್ತನ ಪಾಯಿನೀ = ತನ್ನ ಮೊಲೆ ತಾನೇ ಉಣ್ಣುವುದು
ವೃಪಸರ್ಯಾ = ಬೆದೆಗೆ ಬರುವ ಕಡಸು
ಧೇನುಃ = ಆಗತಾನೇ ಈದದ್ದು.

ಉಸ್ರಾ = ಮೊಂಡ ಹಸು
ಗೃಷ್ಟಿಃ=ಪರದುಯಿೀದುದು
ದ್ರೋಣದುಘಾ = ಹೆಚ್ಚು ಹಾಲು ಕೊಡುವುದು
ಅರ್ಜುನೀ = ಪೂರಾಡಿ

ಶ್ಲೋಕ 44 ಸುಕರಾ = ಸಾಧು ಹಸು
ಸರಧಿನೀ = ಗೂಳೀ ತೆಕ್ಕೊಂಡದ್ದು
ವೇಹತ್ = ಗರ್ಭ ನಿಲ್ಲದೇ ಇರುವುದು
ಶೃಂಗಿಣೀ = ಸೂಜಿಗೊಂಬು
ರೋಹಿಣೀ =ಕೊಲ್ಲೀ ಹಸು
ವಶಾ =ಹುಟ್ಟುಗೊಡ್ಡೀ
ಸಾಸ್ನಾವತೀ = ಗೋಕಾಯಿ ಹಸು
ಬಷ್ಕಯಣೀ = ಬಿಡಿಸಿಕೊಂಡ ಹಸು
ಕಪಿಲಾ = ಕಪಿಲೇ ಹಸು
ಕ್ಷೀರಶೃಂಗಿಕಾ = ಹಾಲು ಕೋಂಬಿನ ಹಸು

ಶ್ಲೋಕ 45 ದೀರ್ಘಶೃಂಗೀ = ಜಲ್ಲೀಗೊಂಬು,
ಜಲಲಶೃಂಗೀ = ಅಲ್ಲಾಡುವ ಕೊಂಬು
ನೈಚಕೀ = ಮೆತ್ತೆಗಾಲು
ಲಂಬಕರ್ಣಿಕಾ = ಕಿವೀ ಉದ್ದ ಹಸು
ವಿವತ್ಸದೋಗ್ರ್ಧೀ = ಕೈಸೋರೇ ಕೊಡುವುದು
ಧವಳಾ = ಬಿಳಿ ಹಸು
ಧೂಮಧೇನು = ಹೋಗೇಹಸು
ಅಶೃಂಗಿಕಾ = ಬೋಳಹಸು

ಶ್ಲೋಕ 46 ಕಡಂಗರೀಯಃ = ತೊಂಡುಮೇಯುವ ಹಸು
ಪೀನೋಧ್ನೀ = ದಪ್ಪಕೆಚ್ಚಲು ಹಸು
ಸುವ್ರತಾ = ಬೇಕಾದಾಗ ಹಾಲುಕೊಡೋದು
ಅಘ್ನೀ=ಕಳ್ಳಸೊರೆ
ವರೇಷ್ಟುಕಾ=ಶಾನೇಯಾದುದ್ದು
ಕೃಷ್ಣಾ =ಕರೀಹಸು
ಅಪತೋಕಾ=ಕರದುಹಾಕುವುದು

ಶ್ಲೋಕ 47

ಶ್ವಕ್ಷೀಜಃ = ಕರಡಿಯಿಂದ ಹುಟ್ಟಿದ ನಾಯಿ
ಕೇಶಭೃದ್ ವಾನರಃ = ಕೂದಲ ಕಪಿ
ಕೃಷ್ಣವಾನರಃ = ಕರೀಕಪಿ
ಪೀತ ವಾನರಃ = ಹಳದೀ ಕಪಿ
ರಕ್ತವಾನರಃ = ಕೆಂಪುಕಪಿ
ಪೀತ ವಿಸಾರಃ = ಹಳದೀ ಮೀನು
ಕೃಷ್ಣ ವಿಸಾರಹಃ = ಕರೀಮೀನು
ಹರಿದ್ವರ್ಣವಿಸಾರಃ = ಹಸಿರು ಮೀನು
ಖರ್ವಸೂಕರಃ = ಕೂರ್ಮ ಹಂದೀ

ಶ್ಲೋಕ 48

ಪಂಚಸ್ತನಾಢ್ಯ ಕುಬ್ಜಾಜಾ = 5 ಮೊಲೆ ಉಳ್ಳ ಕರಚೀ ಆಡು
ಪಂದನೀ = ಕಸ್ತೂರಿನಾಭೀ
ಗಂಧಚೇಳಿಕಾ = ಪುಣುಗು ಪುನುಗುಚಟ್ಟು ಸಹ
ರಕ್ತ ಚಂಚುಕ ಧೂಮ್ರಾಂಗ ಚಟಕಃ = ಕೆಂಪುಕೊಕ್ಕು ಹೊಗೆ ಬಣ್ಣದ ಬಣ್ಣಗುಬ್ಬಚ್ಚಿ, ನಕಲೆನವಲ್
ಮೃಗಘರ್ಮಜಂ = ಜವಾಜೀ

ಲಘುಚಾಮುಂಡಿಕಾ ನಿಘಂಟಿನ ಇತರ ಪ್ರತಿಗಳನ್ನು, ಚಾಮುಂಡಾ ಮಹಾ ನಿಘಂಟಿನ ಪ್ರತಿಗಳನ್ನು ಹುಡುಕಿ ಈಗಿರುವ ನಿಘಂಟುಗಳನ್ನು ಸಮೀಕ್ಷಿಸಿ ಈ ನಿಘಂಟಿನ ಪರಿಷ್ಕೃತ ರೂಪವನ್ನು ಬೆಳಕಿಗೆ ತಂದರೆ ಕನ್ನಡ ನಿಘಂಟಿನ ಕ್ಷೇತ್ರಕ್ಕೆ ಚಾಮುಂಡಾ ನಿಘಂಟು ಅನುಪಮ ಕೊಡುಗೆ ಆಗುತ್ತದೆ. ಸಂಶೋಧಕರ ಗಮನ ಇತ್ತ ಹರಿಯಲಿ ಎಂದು ಆಶಿಸುತ್ತೇನೆ.

ಆಕರಗ್ರಂಥ ಸೂಚಿ ಮತ್ತು ಟಿಪ್ಪಣಿಗಳು

1. ಹಳಗನ್ನಡ ನಿಘಂಟು ಸಂ : ಎನ್. ಬಸವರಾಧ್ಯ 1976 ಪ್ರ : ಡಿ. ವಿ. ಕೆ. ಮೂರ್ತಿ ಮೈಸೂರು vII ಪುಟ, ಪೀಠಿಕೆ.
2. ಅದೇ ಪುಟ vIII ಪೀಠಿಕೆ.
3. ಮುಮ್ಮಡಿ ಕೃಷ್ಣರಾಜ ಒಡೆಯರು ಸಂ: ಹಾಮಾನಾ 1970 ಮೈವಿವಿ ಪ್ರಸಾರಾಂಗ ಪ್ರಕಟನೆ, ಪುಟ 1 ಸ್ವಾಗತ ಲೇಖನ ಹಾಮಾನಾ.
4. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ಭಾಗ I ಪುಟ 490—491 'ಶ್ರೀ ಚಾಮುಂಡಿಕಾ ಲಘುನಿಘಂಟುರಿತಿ ಶೃತಃ' ಎಂದಿದೆ.
5. ಕರ್ನಾಟಕ ಕವಿಚರಿತ್ರೆ (3ನೇ ಭಾಗ) ಪುಟ 168 ಶ್ರೀ ಆರ್. ನರಸಿಂಹಾಚಾರ್ಯ

6. ಪೊಸಗನ್ನಡದ ಅರುಣೋದಯ, ಶ್ರೀನಿವಾಸ ಹಾವನೂರ 1974 ಪ್ರಕಟನೆ : ಮೈವಿವಿ ಕನ್ನಡ ಅಧ್ಯಯನ ಸಂಸ್ಥೆ (ಪುಟ 170, 173, 185)
7. ಶ್ರೀ ಚಾಮುಂಡಿಕಾ ಲಘು ನಿಘಂಟು 'ಮುದ್ರಕರು ಶ್ರೀ ಮನ್ಮರಾಜರವರ ಪರಿಪೋಷಿತ ಧರ್ಮಾಧಿಕಾರಿ ಚಕ್ರವರ್ತ್ಯಯ್ಯಂಗಾರರಿಂದ ತಾರಣಸಂವತ್ಸರ ಆಶ್ವಯುಜ ಬಹುಳ ದಶಮಿ ಸೋಮವಾರದೊಳ್ ಮೈಸೂರು ವಿದ್ಯಾತರಂಗಿಣಿ ಮುದ್ರಶಾಲೆಯಲ್ಲಿ ಸ್ಫುಟವಾಗಿ ಮುದ್ರಿಸಲ್ಪಟ್ಟು ಬೆಳಗುತ್ತಲಿದೆ' 1888 ಎಂಬ ಕಲ್ಲಚ್ಚಿನ ಪ್ರತಿ. ಇದನ್ನು ಈ ಲೇಖನದಲ್ಲಿ (ಚ) ಪ್ರತಿ ಎಂದು ಕರೆಯಲಾಗಿದೆ.

   ಕನ್ನಡ ಸಾಹಿತ್ಯ ಪರಿಷತ್ತಿನ ಪತ್ರಿಕೆಯಲ್ಲಿ (38 (1, 2) ಜೂನ್-ಡಿಸೆಂಬರ್ 1953 ಪುಟ 103–132 ಮತ್ತು ಸಂಪುಟ 39 (2) ಡಿಸೆಂಬರ್ 1954 ಪುಟ 1–22ರಲ್ಲಿ ಪ್ರಕಟವಾಗಿ ಆನಂತರ 1956 ರಲ್ಲಿ ಪರಿಷತ್ ಪತ್ರಿಕೆಯ ಮೇಲಚ್ಚು ಪ್ರಕಟನೆಯಾಗಿ 'ಶ್ರೀ ಚಾಮುಂಡಾ ಲಘು ನಿಘಂಟು ಎಂಬ ಹೆಸರಿನಲ್ಲಿ ಶ್ರೀ ಎಲ್. ಗುಂಡಪ್ಪ ಮತ್ತು ಎಂ. ಎಸ್. ಸುಬ್ರಹ್ಮಣ್ಯಶಾಸ್ತ್ರಿ ಅವರ ಸಂಪಾದಕತ್ವದಲ್ಲಿ 1956ರಲ್ಲಿ ಪ್ರಕಟವಾಗಿದೆ. ಇದನ್ನು ಮೇ ಪ್ರತಿ ಎಂದು ಕರೆದಿದೆ ಈ ಲೇಖನದಲ್ಲಿ.

8.

ಶ್ಲೋಕಗಳ ಸಂಖ್ಯೆ

ಮೇ ಪ್ರತಿ	ಚ ಪ್ರತಿ
ಪ್ರ. ಪ್ರಕರಣ (14)	ಪ್ರ. ಪ್ರಕರಣ (14)
ದ್ವಿತೀಯ ಪ್ರಕರಣ (36)	ದ್ವಿತೀಯ ಮುದ್ರಣ (50)
ತೃತೀಯ ಪ್ರಕರಣ (102)	ತೃತೀಯ ಮುದ್ರಣ (102)
ಒಟ್ಟು ಶ್ಲೋಕಗಳು (152)	ಒಟ್ಟು ಶ್ಲೋಕಗಳು (166)
ಒಟ್ಟು ಪದ ಅರ್ಥಗಳು (1236)	ಒಟ್ಟು ಪದ ಅರ್ಥಗಳು (1308)

9. ಕನ್ನಡ ನಿಘಂಟು, ಕಸಾಪ, ಪಾಷಾಣ ನೋಡಿ.
10. ಶ್ರೀವತ್ಸ ನಿಘಂಟು, ಸಂ. : ಟಿ. ವಿ. ವೆಂಕಟಾಚಲಶಾಸ್ತ್ರೀ, 1971, ಶಾರದಾ ಮಂದಿರ ಪ್ರಕಾಶನ, ಪಾಷಾಣ ನೋಡಿ.

'ಕುಂಭಿನೀ' ಶಬ್ದಾರ್ಥ ವಿಚಾರ

ಪ್ರೊ. ಗರ್ಗೇಶ್ವರೀ ವೆಂಕಟಸುಬ್ಬಯ್ಯ

ಶ್ರೀ ಟಿ. ಕೇಶವಭಟ್ಟರ "ಶ್ರೀ ಗುರುಚರಿತಾಮೃತ"ವೆಂಬ ಗ್ರಂಥದ ವಿಮರ್ಶೆಯಲ್ಲಿ, ವಿದ್ವಾನ್ ರಂಗನಾಥಶರ್ಮರು,

"ಭೂಮಿ ಎಂಬ ಅರ್ಥದಲ್ಲಿ ಕುಂಭಿನೀ ಎಂಬ ಪದವನ್ನು (೪-೨೬) ಕನ್ನಡ ಕಾವ್ಯಗಳಲ್ಲಿ ಪ್ರಯೋಗಿಸಿದ್ದುಂಟು. ಇದರ ಬಗೆಯೇನೆಂಬುದು ವಿಚಾರಣೀಯ. ಸಂಸ್ಕೃತ ಸಾಹಿತ್ಯದಲ್ಲಾಗಲೀ ಕೋಶದಲ್ಲಾಗಲಿ ಈ ಪದವನ್ನು ಇದುವರೆಗೆ ನಾನು ಕಂಡಿಲ್ಲ"—ಎಂದು ಹೇಳಿದ್ದಾರೆ.1

"ಕುಂಭಿನೀ-ಒಂದು ಟಿಪ್ಪಣಿ" ಎಂಬ ಲೇಖನದಲ್ಲಿ ಶ್ರೀ ಯು. ಕೃಷ್ಣಶರ್ಮರು :

"ಅಮರ ಕೋಶದಲ್ಲಾಗಲಿ ಶಬ್ದಾರ್ಥ ಕೌಸ್ತುಭದಲ್ಲಾಗಲಿ ಭೂಮಿ ಎಂಬ ಅರ್ಥದಲ್ಲಿ ಕುಂಭಿನೀ2 ಶಬ್ದ ಕಂಡು ಬರುವುದಿಲ್ಲ."—ಎಂದು ಹೇಳಿ, ಈ ಶಬ್ದ ಪ್ರಯೋಗವಿರುವ 'ಹೃದಯಾಮೃತ'ದ ಶ್ಲೋಕವೊಂದನ್ನು ಕೊಟ್ಟಿದ್ದಾರೆ.3

ಶ್ರೀ ಕೃಷ್ಣಶರ್ಮರ ಲೇಖನವನ್ನು ಗಮನಿಸಿದ ಶ್ರೀ ಸೀತಾರಾಮ ಜಾಗೀರ್‌ದಾರರು, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ಉದಾಹೃತವಾದ ಕ್ರಿ. ಶ. 1044ರ ಶಾಸನದಲ್ಲಿನ 'ಕುಂಭಿನಿ' ಪದಪ್ರಯೋಗದತ್ತ ಗಮನ ಸೆಳೆದು, ಅಮರ ಕೋಶದ (ಲೂಯಿರೈಸ್ ಆವೃತ್ತಿ) ಭೂಮಿವರ್ಗದಲ್ಲಿನ ಮೂರು ಶ್ಲೋಕಗಳನ್ನು ಕೊಟ್ಟು, ಅಲ್ಲಿ 'ಕುಂಭಿನೀ' ಶಬ್ದವಿದೆಯೆಂದಿದ್ದಾರೆ.4 ಆ ಶ್ಲೋಕಗಳಲ್ಲಿ ಮೂರನೆಯದು :

---

1. ಕರ್ನಾಟಕ ಲೋಚನ ; ಸಂಪುಟ 3 ; ಸಂಚಿಕೆ 2–ಡಿಸೆಂಬರ್ 1990, ಪುಟ 128
2. ಅಚ್ಚಾಗುವಾಗ 'ನೀ' ಎಂಬ ಅಕ್ಷರ ಬಿಟ್ಟು ಹೋಗಿದೆ.
3. ಕರ್ನಾಟಕ ಲೋಚನ ; ಸಂಪುಟ 4 ; ಸಂಚಿಕೆ 2–ಡಿಸೆಂಬರ್ 1991, ಪುಟ 57–59
4. ಕರ್ನಾಟಕ ಲೋಚನ ; ಸಂಪುಟ 5 ; ಸಂಚಿಕೆ 1–ಜೂನ್ 1992, ಪುಟ 55–57

ವಿಪುಲಾ ಗಹ್ವರೀ ಧಾತ್ರೀ ಗೌರಿಲಾ ಕುಂಭಿನೀ ಕ್ಷಮಾ ।
ಜಗತೀ ರತ್ನಗರ್ಭಾ ಚ ಭೂತ ಧಾತ್ರ್ಯಬ್ಧಿ ಮೇಖಲಾ ॥

ನನ್ನ ಬಾಲ್ಯದಲ್ಲಿ—ಸುಮಾರು 75 ವರ್ಷಗಳ ಹಿಂದೆ—ನಮ್ಮ ತಂದೆಯವರು ಬಾಯಿಪಾಠ ಮಾಡಿಸಿದ್ದ ಭೂಮಿವರ್ಗದಲ್ಲಿ ಈ ಶ್ಲೋಕವಿತ್ತು. ಆದರೆ ಅಮರಕೋಶದ ಕೆಲವು ಆವೃತ್ತಿಗಳಲ್ಲಿ ಈ ಶ್ಲೋಕವಿದ್ದರೂ, ಇತರ ಆವೃತ್ತಿಗಳಲ್ಲಿಲ್ಲ.

ಅಮರಕೋಶ ವ್ಯಾಖ್ಯಾನಗಳು

i) ಈಗ ಉಪಲಬ್ಧವಿರುವ ಅಮರಕೋಶ ವ್ಯಾಖ್ಯಾನಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದುದು ಭಟ್ಟಕ್ಷೀರಸ್ವಾಮಿಯ (ಇವನ ಕಾಲ ಕ್ರಿ.ಶ. 11ನೆಯ ಶತಮಾನದ ಉತ್ತರಾರ್ಧ) "ಅಮರಕೋಶೋದ್ಘಾಟನ". ಈ ವ್ಯಾಖ್ಯಾನಸಹಿತವಾಗಿ ಮುದ್ರಿತವಾದ ಅಮರಕೋಶದಲ್ಲಿ5 ಮೇಲಿನ ಶ್ಲೋಕ, ಸ್ವಲ್ಪ ವ್ಯತ್ಯಾಸದೊಡನೆ, ಪ್ರಕ್ಷಿಪ್ತಶ್ಲೋಕವಾಗಿ ಅಚ್ಚಾಗಿದೆ. ಇದಕ್ಕೆ ಕ್ಷೀರಸ್ವಾಮಿಯ ವ್ಯಾಖ್ಯಾನವಿಲ್ಲ. ಹಿಂದಿನ ಶ್ಲೋಕದ ವ್ಯಾಖ್ಯಾನದ ಕೊನೆಯಲ್ಲಿ "ಕ್ಷಮಾ ಇಲಾ ಚ ನಾನಾರ್ಥೇ' ಎಂದು ನಾನಾರ್ಥ ವರ್ಗವನ್ನು ನಿರ್ದೇಶಿಸಿದ್ದಾನೆ. ಆದುದರಿಂದ ಈ ಶ್ಲೋಕ ಕ್ಷೀರಸ್ವಾಮಿಯ ಮುಂದಿದ್ದ ಅಮರಕೋಶದಲ್ಲಿರಲಿಲ್ಲವೆಂಬುದು ಸ್ಪಷ್ಟ.

ii) ಮಹೇಶ್ವರ ಕೃತ "ಅಮರ ವಿವೇಕ" ವ್ಯಾಖ್ಯಾನ ಸಹಿತವಾಗಿ ಮುದ್ರಿತವಾದ6 ಅಮರಕೋಶದಲ್ಲಿಯೂ Poona Oriental Agency ಮುದ್ರಣ ದಲ್ಲಿರುವಂತೆಯೇ ಈ ಶ್ಲೋಕವಿದ್ದು, ಅದು ಕ್ಷೇಪಕಶ್ಲೋಕವಾಗಿ ಮುದ್ರಿತವಾಗಿದೆ. ಅಡಿಟಿಪ್ಪಣಿಯಲ್ಲಿ "ಇದಂ ಪದ್ಯಂ ತಾಲಪತ್ರ ಪುಸ್ತಕೇಽಪಿ ನಾಸ್ತಿ" ಎಂದಿದೆ. ಗ್ರಂಥದ ಸೂಚನೆಯಲ್ಲಿ ತಾಲಪತ್ರ ಪುಸ್ತಕದ ಲೇಖನಕಾಲ ಕ್ರಿ. ಶ. 1297 ಎಂದು ಹೇಳಿದೆ. ವ್ಯಾಖ್ಯಾನ ಭಾಗದಲ್ಲಿ "ವಿಪುಲೇತ್ಯೇಕಾದಶ ಭೂಮೇಃ" ಎಂಬ ವಾಕ್ಯವಿದೆ. ಆದರೆ ಈ ವಾಕ್ಯವನ್ನು ಅವತರಣ ಚಿಹ್ನೆಗಳ ಮಧ್ಯೆಕೊಟ್ಟು, ಅದರ ಮುಂದೆ ಕ್ಷೇಪಕ ಶ್ಲೋಕ ಸಂಖ್ಯೆಯಾದ 1ನ್ನು ಮುದ್ರಿಸಿರುವುದರಿಂದಲೂ, ಈ "ವಿಪುಲಾ xx" ಇತ್ಯಾದಿ ಶ್ಲೋಕದ ಯಾವ ಪದಕ್ಕೂ ವ್ಯಾಖ್ಯಾನದಲ್ಲಿ ವಿವರಣೆಯಿಲ್ಲದ್ದರಿಂದಲೂ, ಈ ವಾಕ್ಯ ಮೂಲ ವ್ಯಾಖ್ಯಾನದ ಭಾಗವಲ್ಲವೆನ್ನುವುದು ಸ್ಪಷ್ಟ.

---

5. Poona Oriental Book Agency ಯ 1941ರ ಮುದ್ರಣ. ಅಲ್ಲಿ ಅಚ್ಚಾಗಿರುವಂತೆ, ಶ್ಲೋಕದ ಉತ್ತರಾರ್ಧ : ಭೂತಧಾತ್ರೀ ರತ್ನಗರ್ಭಾ ಜಗತೀ ಸಾಗರಾಂಬರಾ.
6. Amarakosa with the commentary of Maheswara ; Bombay—Government Central Book Depot, 1886.

iii) ಅಡಯಾರ್ ಲೈಬ್ರರಿಯವರು ಮುದ್ರಿಸಿರುವ ಅಮರಕೋಶದಲ್ಲಿ7 ಲಿಂಗಯಸೂರಿಯ "ಅಮರಪದ ವಿವೃತಿ"—ಇದಕ್ಕೆ ಲಿಂಗಾಭಟ್ಟೀಯವೆಂಬ ಹೆಸರು ರೂಢಿಯಲ್ಲಿದೆ—ಮತ್ತು ಮಲ್ಲಿನಾಥನ (ಇವನು ಪಂಚಮಹಾಕಾವ್ಯಗಳ ವ್ಯಾಖ್ಯಾತೃ ಕೋಲಾಚಲ ಮಲ್ಲಿನಾಥನಿಗಿಂತ ಭಿನ್ನ) "ಅಮರಪದ ಪಾರಿಜಾತ"ವೆಂಬ ಎರಡು ವ್ಯಾಖ್ಯಾನಗಳಿವೆ. ಮೂಲದಲ್ಲಿ ಮೇಲಿನ ಎರಡು ಮುದ್ರಣಗಳಲ್ಲಿರುವಂತೆ, ಈ ಶ್ಲೋಕ ಕ್ಷೇಪಕವಾಗಿ ಮುದ್ರಿತವಾಗಿದೆ. ಈ ಶ್ಲೋಕಕ್ಕೆ ವ್ಯಾಖ್ಯಾನಗಳಿಲ್ಲ. ಅಮರ ಪದ ಪಾರಿಜಾತ ವ್ಯಾಖ್ಯಾನದಲ್ಲಿ,

"ಅನುಕ್ತಂ—ರತ್ನಗರ್ಭಾ ಘನಶ್ರೋಣಿರುರ್ವರಾ ಸಾಗರಾಂಬರಾ ।
ಮರ್ದರಾ ಗಹ್ವರೀ ಧಾತ್ರೀ ಭೂತಧಾತ್ರ್ಯಬ್ಧಿ ಮೇಖಲಾ ॥
ರತ್ನಸೂಃ **ಕುಂಭಿನೀ** ವಿಶ್ವಾ ಧಾರಿಣೀ ಗೌರ್ಗಿರಿಸ್ತನೀ ।"

ಎಂದಿದೆ.

iv) ರಾಯಮುಕುಟನ 'ಪದಚಂದ್ರಿಕಾ' ವ್ಯಾಖ್ಯಾನ ಸಹಿತವಾಗಿ ಮುದ್ರಿತವಾದ8 ಅಮರ ಕೋಶದಲ್ಲಿ ಮೂಲ ಮತ್ತು ವ್ಯಾಖ್ಯಾನಗಳೆರಡರಲ್ಲೂ ಕುಂಭಿನೀ ಶಬ್ದವಿರುವ ಶ್ಲೋಕವಿಲ್ಲ.

ಭೂಮಿಯ ಪರ್ಯಾಯಪದಗಳನ್ನು ಕೊಡುವ 2 ಶ್ಲೋಕಗಳನ್ನು ವ್ಯಾಖ್ಯಾನಿಸಿದ ಮೇಲೆ, ವ್ಯಾಖ್ಯಾಕಾರನು,

"ರತ್ನಗರ್ಭಾ ಸಾಗರಾಂಬರಾಽಬ್ಧಿ ಮೇಖಲಾ ರತ್ನವತೀ ವಿಪುಲಾ
ಮಧ್ಯಮಲೋಕ ಮರ್ತ್ಯಾದಯೋಽಪ್ಯತ್ರ"

ಎಂದು ಹೇಳಿದ್ದಾನೆ. ಇಲ್ಲಿಯೂ ಕುಂಭಿನೀ ಪದವಿಲ್ಲ.

ಭಾನುಜೀದೀಕ್ಷಿತನ "ರಾಮಾಶ್ರಮೀ" ವ್ಯಾಖ್ಯಾನದಲ್ಲಾಗಲೀ9 ಆಚಾರ್ಯ ಕೃಷ್ಣ

---

7. ಅಮರಕೋಶಃ ದಾಕ್ಷಿಣಾತ್ಯವ್ಯಾಖ್ಯೋಪೇತಃ (Vol. I)
The Adyar Library and Research centre, 1971.
8. ಪದಚಂದ್ರಿಕಾ. Sanskrit college, Calcutta, 1973. Vol. II
9. Namalinganusasana of Amarasimha with the commentary Vyakhya Sudha or Ramasrami of Bhanuji Dikshit. Nirnayasagar Press, Bombay, 1915.

ಮಿತ್ರನ ವ್ಯಾಖ್ಯಾನದಲ್ಲಾಗಲೀ10, ಇವುಗಳೊಡನೆ ಅಚ್ಚಾಗಿರುವ ಅಮರಕೋಶದ ಮೂಲಪಾಠಗಳಲ್ಲಿಯೇ ಆಗಲೀ 'ಕುಂಭಿನೀ' ಪದವಿಲ್ಲ.

ಅಮರ ಕೋಶದ ಬೇರೆ ವ್ಯಾಖ್ಯಾನಗಳಾವುವೂ ನನಗೆ ದೊರಕಲಿಲ್ಲ. ವೈಜಯಂತೀ, ಮೇದಿನೀ, ಹಲಾಯುಧ, ಶಾಶ್ವತ ಕೋಶಗಳಲ್ಲಿ ಕುಂಭಿನೀ ಪದ ಸಿಕ್ಕುವುದಿಲ್ಲ.

ಆಪ್ಟೆಯವರ ಸಂಸ್ಕೃತ-ಇಂಗ್ಲಿಷ್ ನಿಘಂಟು ಮತ್ತು ಮೋನಿಯರ್-ವಿಲಿಯಂಸ್‌ರ ಸಂಸ್ಕೃತ-ಇಂಗ್ಲಿಷ್ ನಿಘಂಟುಗಳಲ್ಲಿ ಕುಂಭಿನೀ ಶಬ್ದಕ್ಕೆ, The Earth (ಭೂಮಿ) ಎಂಬ ಅರ್ಥವನ್ನು ಹೇಳಿದ್ದರೂ ಎರಡರಲ್ಲಿಯೂ ಯಾವ ಪ್ರಯೋಗ ಗಳನ್ನೂ ಕೊಟ್ಟಿಲ್ಲ.

ವಾಚಸ್ಪತ್ಯ ಕೋಶದಲ್ಲಿ11 ಈ ವಿವರಗಳಿವೆ :

> ಕುಂಭಿನ್—ಪುಂ. ಸ್ತ್ರೀ, ಕುಂಭೋಽಸ್ತ್ಯಸ್ಯ ಇನಿ Ixxx
> ಕಲಶಧಾರಿಣಿ—ತ್ರಿ. ಸ್ತ್ರಿಯಾಂ ಙೀಪ್. "ಉದಕಂ ಕುಂಭಿನೀರಿವ,"
> ಋಗ್ವೇದ 1—191—14xx
> ಪೃಥಿವ್ಯಾಂ, 'ಗೌರಿಲಾ **ಕುಂಭಿನೀ** ಕ್ಷಮೇತಿ',ಮಾಘ-20,54 ಶ್ಲೋಕ ವ್ಯಾಖ್ಯಾನೇ ಮಲ್ಲಿನಾಥ ಧೃತ ಕೋಷಾತ್ ।

ಮಾಘನ ಶಿಶುಪಾಲವಧ ಕಾವ್ಯದ12 ಶ್ಲೋಕದಲ್ಲಿ ಬಂದಿರುವ 'ಇಲಾಧರಾಣಾಂ' ಎಂಬ ಶಬ್ದಕ್ಕೆ 'ಭೂಧರಾಣಾಂ' ಎಂಬ ಅರ್ಥವನ್ನು ಹೇಳಿ ಮಲ್ಲಿನಾಥನು, 'ಗೌರಿಲಾ ಕುಂಭಿನೀ ಕ್ಷಮಾ ಇತಿ ಕೋಷಃ' ಎಂದು ಆಧಾರವನ್ನು ಕೊಟ್ಟಿದ್ದಾನೆ.

ಮಲ್ಲಿನಾಥನು ಕೋಶಗಳ ಆಧಾರವನ್ನು ಹೇಳುವಾಗ "ಇತ್ಯಮರಃ", "ಇತಿಮೇದಿನೀ"—ಹೀಗೆ ಕೋಶಗಳ ಹೆಸರನ್ನು ಹೇಳಿರುತ್ತಾನೆ. ಇಲ್ಲಿ "ಇತ್ಯಮರಃ"

---

10. Amarakosa of Amarasimha with the commentary of Acharya Krishnamitra. Published by Dr. Satyadeva Misra, Lecturer, University of Malaya, Kualalumpur, 1972
11. ತೃತೀಯ ಸಂಸ್ಕರಣ, 1970, ಚೌಖಂಬಾ ಮುದ್ರಣ,
12. ಶಿಶುಪಾಲವಧಂ ; ನಿರ್ಣಯ ಸಾಗರ ಪ್ರೆಸ್, 1927.
    ಪೂರ್ಣಶ್ಲೋಕ ಇಂತಿದೆ :
    > ಉಪಮಾನಮಲಾಭಿ ಲೋಲ ಪಕ್ಷ ಕ್ಷಣ ವಿಕ್ಷಿಪ್ತ ಮಹಾಂಬುವಾಹಮತ್ತೈಃ ।
    > ಗಗನಾರ್ಣವ ಮಂತರಾ ಸುಮೇರೋಃ ಕುಲಜಾನಾಂ ಗರುಡ್ಯೈರಿಲಾಧರಾಣಾಂ ॥

ಎಂದು ಹೇಳದೆ "ಇತಿ ಕೋಷಃ" ಎಂದಿರುವುದರಿಂದ, "ಗೌರಿಲಾ ಕುಂಭಿನೀಕ್ಷಮಾ" ಎಂಬ ಶ್ಲೋಕಪಾದ ಮಲ್ಲಿನಾಥನಿಗೆ ಉಪಲಬ್ಧವಾಗಿದ್ದ ಅಮರಕೋಶದ್ದಲ್ಲ, ಬೇರಾವುದೋ ಅಜ್ಞಾತ ಕರ್ತೃಕ ಪ್ರಾಚೀನ ಕೋಶದ್ದಿರಬೇಕು ಎಂದು ವ್ಯಕ್ತವಾಗುತ್ತದೆ.

ಆದುದರಿಂದ "ವಿಪುಲಾಗಹ್ವರೀಧಾತ್ರೀ——" ಶ್ಲೋಕ ಅಮರಕೋಶದಲ್ಲಿ ಪ್ರಕ್ಷಿಪ್ತವೆಂದೂ, ಆದರೂ 'ಕುಂಭಿನೀ' ಪದಕ್ಕೆ ಭೂಮಿ ಎಂಬರ್ಥವಿರುವುದಕ್ಕೆ ಕೋಶಾಧಾರವಿದೆಯೆಂದೂ ತಿಳಿದು ಬರುತ್ತದೆ.

ಪ್ರಯೋಗಗಳು

i) ಕುಂಭಿನೀ ಶಬ್ದದ ಅತಿ ಪ್ರಾಚೀನ ಪ್ರಯೋಗವಿರುವುದು (ವಾಚಸ್ಪತ್ಯದಲ್ಲಿ ಉದ್ಧೃತವಾಗಿರುವ) ಋಗ್ವೇದದ ಪ್ರಥಮ ಮಂಡಲದ, ವಿಷಘ್ನೋಪನಿಷತ್ ಎಂದು ಪ್ರಸಿದ್ಧವಾದ, 191ನೆಯ ಸೂಕ್ತದಲ್ಲಿ. ಈ ಸೂಕ್ತದ 14ನೇ ಋಕ್ :

ತ್ರಿಃಸಪ್ತಮಯೂರ್ಯಃ ಸಪ್ತಸ್ವಸಾರೋ ಅಗ್ರುವಃ ।
ತಾಸ್ತೇ ವಿಷಂ ವಿ ಜಭ್ರಿರ ಉದಕಂ ಕುಂಭಿನೀರಿವ ॥

ಇದಕ್ಕೆ ವೇಂಕಟಮಾಧವವ್ಯಾಖ್ಯಾ[13]

ಏಕ ವಿಂಶತಿಃ ಮಯೂರ್ಯಃ, ಸಪ್ತ ಚ ಸ್ವಯಂ ಸರಂತ್ಯಃ ಗಂಗಾದ್ಯಾನದ್ಯಃ, ತಾಃ ಕೇ ಸರ್ಪ ! ವಿಷಂ ವಿವಿಧಂ ಹರಂತಿ, ಯಥಾ ಉದಕಂ **ಕುಂಭ ವತ್ಯಃ ಸ್ತ್ರಿಯಃ** ।

(ಎಲೈ ಸರ್ಪವೇ !) ಇಪ್ಪತ್ತೊಂದು ಹೆಣ್ಣು ನವಿಲುಗಳೂ, ಸ್ವಯಂ ಹರಿಯುವ ಆ (ಗಂಗಾದಿ) ಸಪ್ತನದಿಗಳೂ, ಕುಂಭಗಳನ್ನು ಹೊತ್ತ ಸ್ತ್ರೀಯರು ನೀರನ್ನು ತೆಗೆದುಕೊಂಡು ಹೋಗುವಂತೆ, ನಿನ್ನ ವಿವಿಧ ವಿಷವನ್ನು ತೆಗೆದುಕೊಂಡು ಹೋಗುತ್ತವೆ.)

ವೇಂಕಟಮಾಧವ ವ್ಯಾಖ್ಯಾನ ಸಾಯಣಭಾಷ್ಯಕ್ಕಿಂತ ಪ್ರಾಚೀನ.

ಸಾಯಣಭಾಷ್ಯ[14] ಭಾಗಃ

ತತ್ರ ದೃಷ್ಟಾಂತಃ । ಉದಕಂ **ಕುಂಭಿನೀಃ** ಕುಂಭಿನ್ಯಃ ಕುಂಭವತ್ಯಃ **ಕುಂಭೇನ ಜಲಹಾರಿಣ್ಯಃ** ಇವ। ತಾ ಯಥಾತದ್ಧರಂತಿ ತದ್ವತ್ ನದ್ಯೋ ಮಯೂರ್ಯಶ್ಚ ಅತಿ ಪ್ರಭೂತಂ ಹರಂತು ।

---

13. ಪ್ರಕಾಶಕರು : Vishveswaranand Vedic Research Institute, Hoshiarpur, 1963,
14. ಸಾಯಣಾಚಾರ್ಯ ವಿರಚಿತ ಮಾಧವೀಯ ವೇದಾರ್ಥಪ್ರಕಾಶ–ವೈದಿಕ ಸಂಶೋಧನ ಮಂಡಲ, ಪುಣೆ ; 1933

ಹೀಗೆ ಇಬ್ಬರು ಭಾಷ್ಯಕಾರರಂತೆಯೂ ಇಲ್ಲಿ ಕುಂಭಿನೀ ಶಬ್ದಕ್ಕೆ ಕುಂಭದಲ್ಲಿ ನೀರು ಹೊರುವ ಸ್ತ್ರೀಯರು ಎಂದರ್ಥ.

ii) ಮತ್ತೊಂದು ಪ್ರಯೋಗ ತಾಂಡ್ಯ ಮಹಾ ಬ್ರಾಹ್ಮಣದಲ್ಲಿ[15] ದೊರೆಯುತ್ತದೆ.

> ಪರಿ ಕುಂಭಿನ್ಯೋ ಮಾರ್ಜಾಲೀಯಂ ಯಂತೀದಂ ಮಧ್ವಿದಂ ಮಧ್ವಿತಿ
> ಸಘೋಷಾ ಏವ ತದ್ವಯೋ ಭೂತ್ವಾ ಸಹ ಸ್ವರ್ಗಂ ಲೋಕಂ
> ಯಂತಿ । (5–6–15)

[ಇದಂ ಮಧು ಇದಂ ಮಧು ಎಂಬ ಮಂತ್ರವನ್ನು ಹಾಡುತ್ತ ದಾಸಿಯರು ಮಾರ್ಜಾಲೀಯವೆಂಬ ಉಪವೇದಿಯ ಸುತ್ತ ನರ್ತಿಸುತ್ತಾರೆ. (ದೇಹಾವಸಾನದ ನಂತರ) ಇವರು ಪಕ್ಷಿಗಳಂತೆ (ಆಕಾಶಗಾಮಿಗಳಾಗಿ) ಸ್ವರ್ಗಲೋಕವನ್ನು ಸೇರುತ್ತಾರೆ.]

ಇದರ ಸಾಯಣಭಾಷ್ಯ ಭಾಗ

> ಇದಂ ಮಧ್ವಿದಂ ಮಧ್ವಿತಿ ಮಂತ್ರಂ ಶಂಸತ್ಯಃ ಪುನಃ ಪುನರ್ಗಾಯಂತ್ಯಃ
> **ಕುಂಭಿನ್ಯೋ ದಾಸ್ಯಃ** ಮಾರ್ಜಾಲೀಯಂ ಧಿಷ್ಣ್ಯಂ ಪರಿಯಂತಿ
> ಪರಿತೋ ನೃತ್ಯಂತೀತ್ಯರ್ಥಃ

ಇಲ್ಲಿಯೂ ಕುಂಭಿನೀ ಶಬ್ದಕ್ಕೆ ದಾಸಿ (ಕುಂಭದಾಸಿ) ಎಂದು ಅರ್ಥಮಾಡಿದ್ದಾರೆ. ಲೌಕಿಕ ಸಾಹಿತ್ಯದಲ್ಲಿ ಕುಂಭಿನೀ ಪದದ ಪ್ರಯೋಗ ನನಗೆ ದೊರಕಿಲ್ಲ.

ಶ್ರೀ ಕೃಷ್ಣಶರ್ಮರು ಉದಾಹರಿಸಿರುವ 'ಹೃದಯಾಮೃತ',[16] ಕ್ರಿ.ಶ. 1742ರಲ್ಲಿ ರಚಿತವಾಯಿತೆಂದು (ವರ್ಷಕಲ್ಯಬ್ಧದಲ್ಲಿದೆ) ಗ್ರಂಥಕರ್ತೃ ಜಗನ್ನಾಥ ಪಂಡಿತನೇ ಗ್ರಂಥಾಂತ್ಯದಲ್ಲಿ ಹೇಳಿದ್ದಾನೆ. ಅವನು ಭೂಮಿ ಎಂಬ ಅರ್ಥದಲ್ಲಿ ಕುಂಭಿನೀಪದ ಪ್ರಯೋಗವನ್ನು ಬೇರೆಲ್ಲಾದರೂ ಕಂಡಿದ್ದನೋ ಅಥವಾ ಕೋಶಾಧಾರ ಬಲದಿಂದ ಪ್ರಯೋಗಿಸಿದನೋ ತಿಳಿಯದು. ಜಗನ್ನಾಥಪಂಡಿತನು ತಂಜಾವೂರು ರಾಜರಿಂದ ಪರಿಪೋಷಿತನಾಗಿದ್ದುದರಿಂದ, ಅಲ್ಲಿ ಬಹು ಹಿಂದಿನಿಂದಲೂ ಇದ್ದ ಕನ್ನಡಿಗ ವಿದ್ವಾಂಸರ ಸಾಹಚರ್ಯದಿಂದ ಕನ್ನಡ ಗ್ರಂಥಗಳಲ್ಲಿ ಈ ಪದಪ್ರಯೋಗವನ್ನು ನೋಡಿರಲೂ ಬಹುದು.

---

15. ತಾಂಡ್ಯ ಮಹಾ ಬ್ರಾಹ್ಮಣ, ಸಾಯಣಭಾಷ್ಯ ಸಹಿತ.ಚೌಖಂಬಾ ಆವೃತ್ತಿ.
16. ಮೈಸೂರು ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಪ್ರಕಟನೆ, 1980

ಕುಂಭಿನೀ ಶಬ್ದದ ನಿಷ್ಪತ್ತಿ

ಕುಂಭ ಶಬ್ದಕ್ಕೆ 'ಇನಿ' ಪ್ರತ್ಯಯ ಸೇರಿದ ಸ್ತ್ರೀಲಿಂಗರೂಪ ಕುಂಭಿನೀ ಎಂದು ವಾಚಸ್ಪತ್ಯದಲ್ಲಿ ಹೇಳಿದೆಯಷ್ಟೆ. "ಅತ ಇನಿ ಠನೌ" (ಪಾ. 5-2-115) ಎಂಬ ಸೂತ್ರವನ್ನು ವಿವರಿಸುತ್ತಾ ಸಿದ್ಧಾಂತ ಕೌಮುದಿಯ ವ್ಯಾಖ್ಯಾನದಲ್ಲಿ ಬಾಲ ಮನೋರಮಾಕಾರನು "ಮತುಬಪಿ ಭವತಿ" ಎಂದು ಹೇಳಿದ್ದಾನೆ. "ತದಸ್ಯಾಸ್ತ್ಯಸ್ಮಿನ್ನಿತಿ ಮತುಪ್" (ಪಾ. 5-2-94) ಎಂಬ ಸೂತ್ರದಂತೆ ಕುಂಭೋಽಸ್ತ್ಯಸ್ಯಾಃ ಎಂದಾಗಲೀ ಕುಂಭೋಽಸ್ತ್ಯಸ್ಯಾಂ ಎಂದಾಗಲೀ ಕುಂಭಿನೀರೂಪ ಸಿದ್ಧಿಯಾಗುತ್ತದೆ. ಕುಂಭಿನೀ ಶಬ್ದಕ್ಕೆ ಭೂಮಿ ಎಂಬ ಅರ್ಥವಾಗಬೇಕಾದರೆ ಮೇಲಿನ ನಿರ್ವಚನದಲ್ಲಿ ಕುಂಭ ಎಂದರೆ ಏನೆಂಬ ಪ್ರಶ್ನೆ ಏಳುತ್ತದೆ.

ಈ ವಿಷಯದಲ್ಲಿ ನನಗೆ ತೋರಿದ ಕೆಲವು ವಿವರಣೆಗಳು :

(i) ಶ್ರೀ ಗೋಪಿನಾಥರಾಯರು ತಮ್ಮ ಮೂರ್ತಿಲಕ್ಷಣ ವಿಷಯಕ ಗ್ರಂಥದಲ್ಲಿ ಭೂದೇವಿಯು ವಿಷ್ಣುವಿನ ಪಾರ್ಶ್ವದಲ್ಲಿದ್ದಾಗ ದ್ವಿಭುಜಳಾಗಿರುವಂತೆಯೂ, ಸ್ವಯಂ ಪ್ರಧಾನ ದೇವತೆಯಾಗಿದ್ದಾಗ ಚತುರ್ಭುಜಳಾಗಿರುವಂತೆಯೂ ಪ್ರದರ್ಶಿತಳಾಗುತ್ತಾಳೆಂದು ಹೇಳಿ, ಚತುರ್ಭುಜಳಾದ ದೇವಿಯ ಲಕ್ಷಣವನ್ನು ಕೊಡುವ, ವಿಷ್ಣುಧರ್ಮೋತ್ತರ ಪುರಾಣದ ಈ ಶ್ಲೋಕಗಳನ್ನು ಕೊಟ್ಟಿದ್ದಾರೆ.17

ಶುಕ್ಲವರ್ಣಾ ಮಹೀ ಕಾರ್ಯಾ ದಿವ್ಯಾಭರಣಭೂಷಿತಾ ।
ಚತುರ್ಭುಜಾ ಸೌಮ್ಯವಪುಶ್ಚಂದ್ರಾಂಶು ಸದೃಶಾಂಬರಾ ॥
ರತ್ನಪಾತ್ರಂ ಸಸ್ಯಪಾತ್ರಂ ಪಾತ್ರಮೋಷಧಿ ಸಂಯುತಂ ।
ಪದ್ಮಂ ಕರೇ ಚ ಕರ್ತವ್ಯಂ ಭುವೋ ಯಾದವ ನಂದನ ॥
ದಿಗ್ಗಜಾನಾಂ ಚತುರ್ಣಾಂ ಚ ಕಾರ್ಯಾ ಪೃಷ್ಠಗತಾ ತಥಾ ।
ಸರ್ವೌಷಧಿಯುತಾ ದೇವೀ ಶುಕ್ಲವರ್ಣಾ ತತಃ ಸ್ಮೃತಾ ॥

(ಶ್ವೇತವರ್ಣ ಮತ್ತು ಸೌಮ್ಯ ರೂಪವನ್ನು ಹೊಂದಿ ಬೆಳದಿಂಗಳಿನಂತಿರುವ ವಸ್ತ್ರಗಳನ್ನು ಧರಿಸಿ, ದಿವ್ಯಾಭರಣ ಭೂಷಿತಳಾಗಿ ನಾಲ್ಕು ದಿಗ್ಗಜಗಳ ಬೆನ್ನಮೇಲೆ ಕುಳಿತಿರುವಂತೆ ಭೂದೇವಿಯ ಪ್ರತಿಮೆಯಿರಬೇಕು. ನಾಲ್ಕು ಕೈಗಳಲ್ಲಿ ರತ್ನಪಾತ್ರ' ಸಸ್ಯಪಾತ್ರ, ಓಷಧಿಪಾತ್ರ ಮತ್ತು ಪದ್ಮಗಳಿರಬೇಕು]

....

17. Elements of Hindu Iconogrphy—T. A. Gopinatha Rao, Reprint of 1914 Madras Edition by Motilal Banarsidass, Delhi 1985. Vol I ಪುಟಗಳು 375-6 ಮತ್ತು Appendix C ಪುಟ 139.

ಮೇಲಿನ ಶ್ಲೋಕಗಳು ವಿಷ್ಣುಧರ್ಮೋತ್ತರದ ತೃತೀಯಖಂಡದ ಭೂಮಿ ನಿರೂಪಣವೆಂಬ 61 ನೆಯ ಅಧ್ಯಾಯದಲ್ಲಿವೆ.

ಶ್ರೀ ಎಸ್. ಕೆ. ರಾಮಚಂದ್ರರಾಯರು ತಮ್ಮ ಪ್ರತಿಮಾ ಕೋಷದಲ್ಲಿ[18] ಮೇಲಿನ ಶ್ಲೋಕಗಳನ್ನು ಅನುವಾದ ಮಾಡುವಾಗ "ರತ್ನಪಾತ್ರ"ವನ್ನು Jewel Pot (ಎಂದರೆ ರತ್ನಕುಂಭ) ಎಂದು ಅನುವಾದ ಮಾಡಿದ್ದಾರೆ.

ಶಾರ್ಙ್ಗಧರನಾದ ವಿಷ್ಣುವಿಗೆ ಶಾರ್ಙ್ಗೀ ಮತ್ತು ಪಿನಾಕಧರನಾದ ಶಿವನಿಗೆ ಪಿನಾಕೀ ಎಂಬ ಹೆಸರುಗಳು ಬಂದಂತೆ, ಕುಂಭಧಾರಿಣಿಯಾದ ಭೂದೇವಿಗೆ ಕುಂಭಿನೀ ಎಂಬ ಹೆಸರಾಯಿತು.

(ii) ಭೂದೇವಿ ವಿಷ್ಣುವಿನ ಪತ್ನಿಯೆಂಬುದು ಪ್ರಸಿದ್ಧ. ವಿಷ್ಣು ಪತ್ನಿಯ ಸ್ಥಾವರರೂಪ ಭೂದೇವಿಯೆಂದೂ ಜಂಗಮರೂಪ ಶ್ರೀ ದೇವಿಯೆಂದೂ, ಶ್ರೀ ಭೂ ದೇವಿಯರೊಡನೆ ಇರುವ ವಿಷ್ಣು ಮೂರ್ತಿಯನ್ನೇ ನಿತ್ಯಪೂಜೆಯಲ್ಲಿಟ್ಟುಕೊಳ್ಳ ಬೇಕೆಂದೂ ಹಿರಿಯರು ಹೇಳಿದ್ದನ್ನು ಕೇಳಿದ್ದೇನೆ.

"ಅರ್ಚಿಷ್ಮಾನರ್ಚಿತಃ **ಕುಂಭೋ** ವಿಶುದ್ಧಾತ್ಮಾ ವಿಶೋಧನಃ" ಎಂದು ವಿಷ್ಣು ಸಹಸ್ರನಾಮ ಸ್ತೋತ್ರದಲ್ಲಿ ಹೇಳಿರುವಂತೆ, 'ಕುಂಭ' ವಿಷ್ಣುವಿನ ಹೆಸರುಗಳಲ್ಲೊಂದು. ಕುಂಭನನ್ನು (ಪತಿಯಾಗಿ) ಉಳ್ಳವಳು ಕುಂಭಿನೀ.

(iii) ಹಿಂದಿನ ಕಾಲದಲ್ಲಿ ಧನಕನಕಾದಿಗಳನ್ನು ಕುಂಭದಲ್ಲಿಟ್ಟು ಭೂಮಿಯಲ್ಲಿ ನಿಕ್ಷೇಪಮಾಡುವುದೂ, ಅಂತಹ ಕುಂಭಗಳು ಮುಂದೆ ಭೂಮಿಯನ್ನು ಅಗೆದವರಿಗೆ ಸಿಗುವುದೂ ಅಸಾಮಾನ್ಯವಾಗಿರಲಿಲ್ಲ.

ಕುಂಭಗಳನ್ನು ತನ್ನಲ್ಲಿ ಹೊಂದಿರುವವಳು ಕುಂಭಿನೀ.

ಮೇಲಿನ ವಿವರಣೆಗಳು ಎಷ್ಟುಮಟ್ಟಿಗೆ ಗ್ರಾಹ್ಯವೆಂಬುದನ್ನು ವಿದ್ವಾಂಸರು ನಿರ್ಣಯಿಸಬೇಕು.[19]

---

18. Pratima Kosha by S. K. Ramachandra Rao. Kalpataru Research Academy, Bangalore, Vol IV, 1991, ಪುಟ 199.
19. ಈ ಹಿಂದೆ ಗಮನಿಸಿರುವ ಲೇಖನದಲ್ಲಿ ಶ್ರೀ ಸೀತಾರಾಮ ಜಾಗೀರ್‌ದಾರರು, "ಸರ್ಪಕ್ಕೆ 'ಕುಂಭೀನಸಃ' ಎಂದು ಹೇಳಲಾಗುತ್ತದೆ. XX ಕುಂಭೀನಸವು ಹೊತ್ತದ್ದು ಕುಂಭಿನೀ" ಎಂದು ಹೇಳಿದ್ದಾರೆ. ಕುಂಭಿನೀ, ಕುಂಭೀನಸ ಈ ಎರಡು ಶಬ್ದಗಳೂ ಕುಂಭಿನೀ ಶಬ್ದ ದಿಂದ ಹುಟ್ಟಿದವುಗಳೇ ಹೊರತು, ಕುಂಭೀನಸದಿಂದ ಕುಂಭಿನೀ ಶಬ್ದ ಉತ್ಪನ್ನವಾಗುವುದು ಸಾಧ್ಯವಿಲ್ಲ.

ಭಾರತೀಯ ಸಂಗೀತದಲ್ಲಿ ಛಂದಸ್ಸು

ರಾ. ಸತ್ಯನಾರಾಯಣ

ಏಕ ವಿಜ್ಞಾನದಿಂದ ಅನೇಕ ವಿಜ್ಞಾನವುಂಟಾಗುತ್ತದೆ ಎಂದು ಉಪನಿಷತ್ತು ಹೇಳುವುದು ಪರಾವಿದ್ಯೆಯನ್ನು ಕುರಿತು. ಅಪರಾವಿದ್ಯೆಗಳ ವಿಷಯದಲ್ಲಿ ಅನೇಕ ವಿಜ್ಞಾನಗಳಿಂದ ಏಕ ವಿಜ್ಞಾನವುಂಟಾಗುತ್ತದೆ ಎಂಬುದೇ ಹೆಚ್ಚು ಸೂಕ್ತ. ಒಂದೇ ಶಾಸ್ತ್ರವನ್ನು ತಿಳಿದುಕೊಂಡರೆ ಏನೂ ತಿಳಿದಂತಾಗುವುದಿಲ್ಲ ; ಯಾವುದೇ ಶಾಸ್ತ್ರವು ಸಮೃದ್ಧವಾಗುವುದು ಅದರ ಅಂತರಶಾಸ್ತ್ರೀಯ ಹಾಗೂ ಶಾಸ್ತ್ರಾಂತರೀಯ ಸಂಬಂಧ-ಸಂಪರ್ಕಗಳ ಸಮೃದ್ಧಿಯಿಂದ.

ಈ ಮಾತು ಸಂಗೀತ ಶಾಸ್ತ್ರ ಛಂಧಃ ಶಾಸ್ತ್ರಗಳೆರಡಕ್ಕೂ ಅನ್ವಯಿಸುತ್ತದೆ. ಏಕೆಂದರೆ ಅವೆರಡರ ಹುಟ್ಟು, ಸಾಧನೆ ಮತ್ತು ಸಿದ್ಧಿಗಳು ಒಂದೇ ಅನುಭವ ಕ್ಷೇತ್ರದಲ್ಲಿ, ಸೌಂದರ್ಯಾನುಭವದಲ್ಲಿ, ಇವೆ. ಎರಡಕ್ಕೂ ಸೌಂದರ್ಯದ ಶುದ್ಧಾಕೃತಿಯ ಸಾಕ್ಷಾತ್ಕರಣವೇ ಧ್ಯೇಯ ಅಥವಾ ಸಾಧ್ಯ ; ಎರಡರ ತಂತ್ರಗಳೂ – ಉದಾ. ಧ್ವನಿ (ಭಾರ, ವೈಲಕ್ಷಣ್ಯ, ಅಲಂಕಾರ), ಕಾಕು – ಸಮಾನವಾಗಿವೆ. ಎರಡರ ಸಂಕೇತ ಸಾಮಗ್ರಿಗೂ ಶಬ್ದವೇ ಆಕರ ; ತಮ್ಮ ಪರಿಣಾಮಗಳಿಗಾಗಿ ಎರಡೂ ಸಂಕೇತಗಳ ಲಯಬದ್ಧ ('ರಿತ್ಮಿಕ್') ಚಲನಾತ್ಮಕ ಮಾದರಿಗಳನ್ನು ಆಶ್ರಯಿಸುತ್ತವೆ.

ಸಂಗೀತ ಶಾಸ್ತ್ರ ಹಾಗೂ ಛಂದಃಶಾಸ್ತ್ರಗಳಲ್ಲಿರುವ ಇಂತಹ ಇತರೇತರಾಶ್ರಯವನ್ನು ಭಾರತೀಯ ಸಂಗೀತ ಶಾಸ್ತ್ರ ಪ್ರವರ್ತಕರು ಚೆನ್ನಾಗಿ ತಿಳಿದಿದ್ದರು. ಇದನ್ನು ಸಂಗೀತ ಶಾಸ್ತ್ರದಲ್ಲಿ ಸ್ಪಷ್ಟವಾಗಿ ಗುರುತಿಸಬಹುದು.

ಛಂದಸ್ಸು ಎಂಬುದನ್ನು ಶಬ್ದದ್ರವ್ಯಕ್ಕೆ ಸೀಮಿತಗೊಳಿಸದೆ ಸೌಂದರ್ಯಾರ್ಥ ಸಂಕೇತಗಳ ನಿಯತಕಾಲಿಕ ಮತ್ತು ಅಥವಾ ನಿಯತ ದೇಶೀಯ ಪುನರಾವೃತ್ತಿಯಿಂದ ಉದ್ಭವಿಸುವ ಅರ್ಥದ ಮಾದರಿ ಎಂದು ವಿಸ್ತರಿಸಿದರೆ ಸಂಗೀತ, ನೃತ್ಯ, ಚಿತ್ರ, ಶಿಲ್ಪ, ವಾಸ್ತು ಮುಂತಾದ ಇತರ ಕಲೆಗಳಿಗೂ ಅನ್ವಯಿಸಬಹುದು. ದೇಶಕಾಲಗಳಲ್ಲಿ

ಸಂಭವಿಸುವ ಘಟನೆಗಳ ನಿಯತ ಪುನರಾವೃತ್ತಿಯಿಂದ ಗೋಚರಿಸುವ ಅರ್ಥದ ಮಾದರಿ ಎಂದಿಟ್ಟುಕೊಂಡರೆ ಜೈವಿಕ ಮತ್ತು ಭೌತಿಕ ವ್ಯಾಪಾರಗಳಿಗೂ ಇದನ್ನು ವಿಸ್ತರಿಸ ಬಹುದು.

ಛಂದಸ್ಸು ಮತ್ತು ಸಂಗೀತಗಳೆರಡೂ ಮಾನವನ ಸಮುದಾಯ ಪ್ರಜ್ಞೆಯ ಮೂಲಭೂತ ಅಭಿವ್ಯಕ್ತಿ ಪ್ರಕಾರಗಳು, ಆಯಾ ಸಾಮಾಜಿಕ ಸಾಂಸ್ಕೃತಿಕ ಅವಸ್ಥೆ, ಸಂದರ್ಭ, ವಿಕಾಸ ಮುಂತಾದವುಗಳನ್ನು ಅವಲಂಬಿಸಿ ಒಂದೊಂದು ಮಾನವ ಸಮಾಜ ದಲ್ಲಿಯೂ ಒಂದೊಂದು ವಿಶಿಷ್ಟರೂಪವನ್ನು ತಳೆಯುತ್ತವೆ. ಬುದ್ಧಿಪೂರ್ವಕ ವ್ಯವಸ್ಥೆಯಿಲ್ಲದಿರುವ ಅವಸ್ಥೆಯಲ್ಲಿ ಆಯಾ ಭಾಷೆಯ ಸಾಮುದಾಯಿಕ ಪ್ರಯೋಗದಲ್ಲಿ ಅಥವಾ ಇತರ ಸಾಂಜ್ಞಿಕ ಸಂಪರ್ಕಮಾಧ್ಯಮದಲ್ಲಿ ಇವುಗಳ ಪ್ರವೃತ್ತಿಗಳು ಅಡಕವಾಗಿರುತ್ತವೆ. ಬುದ್ಧಿಪೂರ್ವಕ ವ್ಯವಸ್ಥೆಯಿರುವಾಗ ಅವು ಸ್ವತಂತ್ರ ಕಲೆಗಳಾಗುತ್ತವೆ, ತಮ್ಮದೇ ಕಲ್ಪನೆ, ಪ್ರಮೇಯ, ವಿಧಾನ ಮತ್ತು ತಂತ್ರಗಳನ್ನು ಬೆಳೆಸಿಕೊಂಡು, ಆಯಾ ಶಾಸ್ತ್ರದ ಅಡಿಗಲ್ಲಿನ ಮೇಲೆ ನಿಲ್ಲುತ್ತವೆ. ಎರಡರಲ್ಲಿಯೂ ಮೂಲಭೂತ ಸಾದೃಶ್ಯ-ಸಂಬಂಧಗಳಿರುವುದರಿಂದ ಒಂದರಲ್ಲಿ ಇನ್ನೊಂದು ಹಾಸು ಹೊಕ್ಕಾಗಿ ಸೇರಿಕೊಂಡಿರುತ್ತದೆ.

ಭಾರತೀಯ ಸಂಗೀತವನ್ನು ಛಂದಸ್ಸು ಹೇಗೆ ಪ್ರಭಾವಗೊಳಿಸಿದೆ ಎಂಬುದರ ಅಭ್ಯಾಸವನ್ನು ಈ ಲೇಖನದಲ್ಲಿ ಅಲ್ಪವಾಗಿ ಕೈಗೊಳ್ಳಲಾಗಿದೆ.

೧. ಕಲ್ಪನೆಗಳು, ಪ್ರಮೇಯಗಳು

1. ಎಲ್ಲ ಸಂಸ್ಕೃತ ಸಂಗೀತ ಶಾಸ್ತ್ರಗ್ರಂಥಗಳೂ (ನೃತ್ಯ ಶಾಸ್ತ್ರಗಳನ್ನೂ ಒಳಗೊಂಡು), ಗದ್ಯರೂಪವಾದ ತಮ್ಮ ವ್ಯಾಖ್ಯಾನಗಳ ಹೊರತು, ಛಂದೋವೃತ್ತ ಗಳಲ್ಲಿಯೇ ರಚಿತವಾಗಿವೆ ; ಇದಕ್ಕೆ ಅಪವಾದವಿಲ್ಲ. (ಇತರ ಶಾಸ್ತ್ರಗಳ ಗ್ರಂಥಗಳಿಗೂ ಈ ಮಾತು ಬಹುಮಟ್ಟಿಗೆ ಅನ್ವಯಿಸುತ್ತದೆ.

2. ಲಘು, ಗುರು, ಪ್ಲುತ, ಮಾತ್ರಾಲಯ, ಪ್ರತ್ಯಯ (ನಷ್ಟ, ಉದ್ದಿಷ್ಟ, ಸಂಖ್ಯಾ, ಪ್ರಸ್ತಾರ) ಮುಂತಾದ ಪಾರಿಭಾಷಿಕ ಸಂಜ್ಞೆಗಳು ಎರಡೂ ಶಾಸ್ತ್ರಗಳಲ್ಲಿ, ಆದರೆ ಅರ್ಥಾಂತರಗಳಲ್ಲಿ, ಪ್ರಯುಕ್ತವಾಗುತ್ತವೆ. ಪ್ರತ್ಯಯವನ್ನೂ ಅದರ ಪ್ರಕಾರ ಗಳನ್ನೂ ಭರತ ಮುನಿಯು ಛಂದಃಶಾಸ್ತ್ರ ಪ್ರಸಕ್ತಿಮಾತ್ರದಲ್ಲಿಯೂ ಉಳಿದವುಗಳನ್ನು ಎರಡು ಶಾಸ್ತ್ರಗಳಲ್ಲಿಯೂ ಬಳಸಿದ್ದಾನೆ. ಮಾರ್ಗ, ದೇಶೀ ಎಂಬ ಸಂಜ್ಞೆಗಳೂ ಉಭಯಶಾಸ್ತ್ರ ಸಾಧಾರಣವಾಗಿವೆ : ಈಚೆಗೆ, ಸಂಗತಿ, ತಾಳ* ಎಂಬ ಸಂಜ್ಞೆಗಳೂ

*ಈ ಲೇಖನದಲ್ಲಿ ತಾಲ, ತಾಳ ಎಂಬ ಎರಡು ಶಬ್ದರೂಪಗಳನ್ನೂ ಯಾದೃಚ್ಛಿಕವಾಗಿ ಬಳಸಲಾಗಿದೆ,

ಅಷ್ಟೆ. ಲಘು, ಗುರು, ಪ್ಲುತ, ಮಾತ್ರಾ ಎಂಬವುಗಳು ಛಂದಃಶಾಸ್ತ್ರದಿಂದ ಪ್ರೇರಿತವಾಗಿ ಸಂಗೀತಶಾಸ್ತ್ರಕ್ಕೆ ಬಂದು ಸೇರಿಕೊಂಡಿರುವುದು ಸಂಭವನೀಯ. ಇವುಗಳ ಪರಸ್ಪರ ಪ್ರಮಾಣಗಳು ಎರಡರಲ್ಲಿಯೂ ಮೊದಮೊದಲು ಸಮಾನವಾಗಿಯೇ ಇದ್ದವು. ತಾಳ ಎಂಬ ಶಬ್ದವು ಸಂಗೀತ ಶಾಸ್ತ್ರದಿಂದ ಛಂದಃಶಾಸ್ತ್ರಕ್ಕೆ ಬಂದಿದೆ. ಛಂದಃಶಾಸ್ತ್ರದಲ್ಲಿ ತಾಳ-ಲಯ ಎಂಬ ಸಂಜ್ಞೆಗಳ ಬಳಕೆಯನ್ನು ಮುಂದೆ ಸಂಕ್ಷೇಪವಾಗಿ ವಿವೇಚಿಸಲಾಗುವುದು.

3. ಛಂದಃಶಾಸ್ತ್ರದ ಪ್ರಸ್ತಾರ ಕಲ್ಪನೆಯು ಸಂಗೀತಶಾಸ್ತ್ರವನ್ನು ಬಹುವಾಗಿ ಪ್ರಭಾವಗೊಳಿಸಿದೆ. ಛಂದಃಶಾಸ್ತ್ರದ ಪ್ರಸ್ತಾರ, ನಷ್ಟ, ಉದ್ದಿಷ್ಟ, ಸಂಖ್ಯಾನ, ಏಕದ್ವ್ಯಾದಿಲಗಕ್ರಿಯಾ, ಅಧ್ವಯೋಗ ಎಂಬ ಷಟ್‌ಪ್ರತ್ಯಯಗಳ ಪೈಕಿ ಕೊನೆಯ ಎರಡು ಸಂಗೀತ ಶಾಸ್ತ್ರದಲ್ಲಿಲ್ಲ ; ಉಳಿದ ನಾಲ್ಕು, ತಮ್ಮ ಮೂಲಭೂತ ಕಲ್ಪನೆ ಗಳಲ್ಲಿಯೇ ಇವೆ. ಅಲ್ಲದೆ ಪ್ರಸ್ತಾರ ಪ್ರಕಾರಗಳಾದ ಸೂಚೀ, ಮೇರು, ಪತಾಕ, ಸಮುದ್ರ, ವಿಪರೀತ, ಪಾತಾಲ, ಶಾಲ್ಮಲಿ, ವಿಪರೀತ ಶಾಲ್ಮಲಿ ಎಂಬ ಎಂಟರ ಪೈಕಿ, ಮೇರು, ಪಾತಾಲ, ವಿಪರೀತಗಳು ಅರ್ಥಾಂತರದಲ್ಲಿ ತಾಳಪ್ರಸ್ತಾರದಲ್ಲಿ ಕಾಣಿಸಿ ಕೊಳ್ಳುತ್ತವೆ, ಹೀಗಾಗಿ ದೇಶೀ ತಾಳ ಪ್ರಸ್ತಾರದಲ್ಲಿ ಮುಂದೆ ಹೇಳುವ 25 ವಿಧಗಳು ಸಂಗೀತಶಾಸ್ತ್ರದಲ್ಲಿ ಕಂಡು ಬರುತ್ತವೆ : ಪ್ರಸ್ತಾರ, ಸಂಖ್ಯಾ, ನಷ್ಟ, ಗುರುಮೇರು, ಉದ್ದಿಷ್ಟ, ಪಾತಾಲ, ದ್ರುತಮೇರು, ದ್ರುತಉದ್ದಿಷ್ಟ, ದ್ರುತನಷ್ಟ, ಲಘುಮೇರು, ಲಘು ಉದ್ದಿಷ್ಟ, ಲಘುನಷ್ಟ, ಗುರುಮೇರು ಗುರೂದ್ದಿಷ್ಟ, ಗುರುನಷ್ಟ, ಪ್ಲುತಮೇರು, ಪ್ಲುತೋದ್ದಿಷ್ಟ, ಪ್ಲುತನಷ್ಟ, ಸಂಯೋಗ ಮೇರುವಿನ ವಿವಿಧ ಪ್ರಕಾರಗಳು, ಖಂಡ ಮೇರು, ಮಾಲಾಪ್ರಸ್ತಾರ, ವಿಪರೀತ ನಷ್ಟೋದ್ದಿಷ್ಟ, ದ್ರುತಾಹಾರ ನಷ್ಟೋದ್ದಿಷ್ಟ, ಮಧ್ಯರೂಪೋಪರಿಸ್ಥಿತ ನಷ್ಟೋದ್ದಿಷ್ಟಗಳು, ಮಧ್ಯರೂಪಾಧಃಸ್ಥಿತ ನಷ್ಟೋದ್ದಿಷ್ಟಗಳು ಸರ್ವ ಪಾತಾಲ.

4. ಛಂದಃಶಾಸ್ತ್ರದ 'ಯತಿ'ಯು ಹೆಚ್ಚುಕಡಿಮೆ ಅದೇ ಅರ್ಥದಲ್ಲಿ ಸಂಗೀತ ಶಾಸ್ತ್ರದ ತಾಳದಲ್ಲಿಯೂ ಇದೆ. ಕ್ರಿಯಾ, ಮಾರ್ಗ, ಗ್ರಹ, ಪರಿವೃತ್ತ, ಲಯ ಮತ್ತು ಯತಿ ಎಂಬ ಆರನ್ನು ಸಂಗೀತಶಾಸ್ತ್ರವು ತಾಲಪ್ರತ್ಯಯ ಸಾಧನಕ್ಕೆಂದು ನಿರ್ಮಿಸಿಕೊಂಡು ಕ್ರಿ. ಶ. ಹದಿನಾಲ್ಕನೆಯ ಶತಮಾನದ ನಂತರ ಪರಿವೃತ್ತವನ್ನು ಬಿಟ್ಟು ಕಾಲ, ಕಲಾ, ಜಾತಿ, ಅಂಗ, ಪ್ರಸ್ತಾರ ಎಂಬ ಐದನ್ನು ಸೇರಿಸಿಕೊಂಡು, ಇವುಗಳ ಲಕ್ಷಣಗಳನ್ನು ಪರಿಷ್ಕರಿಸಿಕೊಂಡು, ತಾಳದಶಪ್ರಾಣಗಳನ್ನಾಗಿ ವ್ಯವಸ್ಥೆ ಗೊಳಿಸಿಕೊಂಡಿತು.

5. ಮಯರಜತಸಭನ ಎಂಬ ಗಣಾಷ್ಟಕವನ್ನು ಸಂಗೀತಶಾಸ್ತ್ರವು ದೇಶೀ ತಾಳಗಳನ್ನು ಹೆಸರಿಸುವಲ್ಲಿಯೂ ಅವುಗಳ ಲಕ್ಷಣವರ್ಣನೆಯಲ್ಲಿಯೂ ಬಳಸಿ ಕೊಳ್ಳುತ್ತದೆ. ಉದಾ. ರಗಣಮಠ್ಯ ಭಗಣಮಠ್ಯ ಇತ್ಯಾದಿ. ಮರಟಕ್ಕೇ ಜಗಣಃ

ಪ್ರೋಕ್ತಃ', 'ನಯೌ ಭಸೌ ಮಭೌ ಯಔ ಜ ಪಭೌ ತಪಂ ಜಗದ್ರುತೌ । ಪ್ಲುತಶ್ಚಾಂತೇ ಭವೇದ್ಯತ್ರ ಪೃಥ್ವೀಕುಂಡಲ ಸಂಜ್ಞಕೇ' ಇತ್ಯಾದಿ (ನರ್ತನನಿರ್ಣಯ, 1.178, 194)

6. ಗೇಯರಚನೆಗಳ ಕೆಲವು ಪ್ರಕಾರಗಳಲ್ಲಿ ವರ್ಣಗಣ, ಮಾತ್ರಾಗಣಗಳನ್ನು ಮಾತು ನಿರ್ಮಿತಿಗಾಗಿ ವಾಗ್ಗೇಯಕಾರರು ಬಳಸುತ್ತಾರೆ. ಇದನ್ನು ಮುಂದೆ ಪ್ರಸ್ತಾಪಿಸಿದೆ.

7. ಛಂದಃಶಾಸ್ತ್ರದಲ್ಲಿ ಇಂತಿಂತಹ ವರ್ಣಗಣವನ್ನು ಬಳಸಿದರೆ ಇಂತಿಂತಹ ಫಲವು ಲಭಿಸುವುದೆಂಬ ನಂಬುಗೆಯು ಗ್ರಂಥಪರಂಪರೆಯಿದೆ. ಇದನ್ನು ಸಂಗೀತ ಶಾಸ್ತ್ರದಲ್ಲಿ ಪ್ರಬಂಧರಚನೆಯ ಸಂದರ್ಭದಲ್ಲಿ ಹೇಳಿದೆ :

> ಮೋ ಭೂಮಿಃ ಶ್ರಿಯಮಾತನೋತಿ, ಯ ಜಲಂ, ಪೃಥ್ವೀಂ ರ
> ವಹ್ನಿರ್ಮೃತಿಮ್
> ಸೋ ವಾಯುಃ ಪರದೇಶಗಮನಂ ತ ವ್ಯೋಮ ಶೂನ್ಯಂ ಫಲಮ್ ।
> ಜಃ ಸೂರ್ಯೋ ರುಜಮಾದಧಾತಿ ವಿಪುಲಾಂ ಭೇಂದುರ್ಯಶೋನಿರ್ಮಲಂ
> ನೋ ನಾಕಃ ಸುಖ ಮಚ್ಯುತಂ ತದಖಿಲಂ ಜ್ಞೇಯಂ ಪ್ರಯತ್ನಾದ್
> ಬುಧೈಃ ॥
>
> (ಉದ್ಧೃತಿ, ಸಿಂಹಭೂಪಾಲ, ಸಂಗೀತ ಸುಧಾಕರ, ಶಾರ್ಙ್ಗದೇವನ ಸಂಗೀತ ರತ್ನಾಕರದ 4.58,59ಕ್ಕೆ ವ್ಯಾಖ್ಯಾನ, ಪು. 227)

ಪಂಡರೀಕವಿಠಲನು ನರ್ತನನಿರ್ಣಯದಲ್ಲಿ (3.2.15-28, ಪುಟ 97-98) ಗಣ ಯುಗ್ಮಗಳಿಗೂ ಫಲಗಳನ್ನು ಹೇಳುತ್ತಾನೆ : ಮನ-ಮಿತ್ರ, ಭಯ-ಭೃತ್ಯ, ಜತ-ಪುತ್ತ, ಉದಾಸೀನ ; ಉಳಿದ ಯುಗ್ಮಗಳು ಶತ್ರುಗಳು-ಮಿತ್ರವು ಮಂಗಲವನ್ನೂ ಭೃತ್ಯವು ಬಲವನ್ನೂ ಉದಾಸೀನವು ವ್ಯಾಧಿ, ಶತ್ರುನಾಯಕನಾಶನವನ್ನೂ ಮಿತ್ರ ಭೃತ್ಯವು ಜಯವನ್ನೂ ಭೃತ್ಯಮಿತ್ರವು ಸಂಸಿದ್ಧಿಯನ್ನೂ ಮಿತ್ರಶತ್ರುವು ಪೀಡನವನ್ನೂ ಶತ್ರುಮಿತ್ರವು ನಿಷ್ಫಲವನ್ನೂ ಉಂಟು ಮಾಡುತ್ತವೆ. ವರ್ಣಗಣಗಳು ಹಾಡಿನ ಮೊದಲಿನಲ್ಲಿದ್ದರೆ ಹೀಗೆ ಫಲಗಳನ್ನು ಕೊಡುತ್ತವೆ : ಮ-ಆಯುಸ್ಸು, ಯ-ತೇಜಸ್ಸು, ರ-ಅಪಕೀರ್ತಿ, ಸ-ಸೌಭಾಗ್ಯ, ತ-ಸುಂದರಿ, ಜ-ವ್ಯಾಧಿ, ಭ-ಮರಣ, ನ-ಶೂನ್ಯ. ಗೀತಾದಿಯಲ್ಲಿಟ್ಟ ನಕಾರವು ಲಕ್ಷ್ಮೀನಾಶನವನ್ನೂ ಹಕಾರವು ಯಶೋನಾಶವನ್ನೂ ಮಕಾರವು ಸರ್ವಾಪಹಾರವನ್ನೂ ಉಂಟು ಮಾಡುತ್ತವೆ; ಆದುದರಿಂದ ಅವುಗಳನ್ನು ಗೀತಾದಿಯಲ್ಲಿ ವರ್ಜಿಸಬೇಕು.

ಪಂಡರೀಕವಿಠಲನು (ಅಲ್ಲಿಯೇ) ಸದಾಶಿವ ಮತವನ್ನು ಅನುಸರಿಸಿ ಪ್ರತಿಯೊಂದು ವರ್ಣಕ್ಕೂ ಫಲಗಳನ್ನು ಹೀಗೆ ಬಿಡಿಬಿಡಿಯಾಗಿ ಹೇಳಿದ್ದಾನೆ :

ಅ-ಅಃ-ಉನ್ನತ ಸ್ಥಾನದಲ್ಲಿ ಶೋಭನ, ಕ-ಕೀರ್ತಿ, ಖ-ಸುಗಂಧದ್ರವ್ಯ, ಗ-ಗ್ರಾಮ, ಘ-ಶತ್ರುಭಯ, ಙ-ಲಕ್ಷ್ಮೀ, ಚ-ಶ್ರೇಷ್ಠವಾದ ಕುದುರೆ, ಛ-ಛತ್ರಿ, ಜ-ಸ್ತ್ರೀ, ಝ-ಬೇರೆಯವರ ಸಾವು, ಞ-ತನ್ನದೇ ಸಾವು, ಟ-ದನ, ಠ-ವಿಷ, ಡ-ದುಃಖ, ಢ-ಚಿನ್ನ, ಣ-ವಜ್ರದಂತೆ ಹೊಳೆಯುವ ಮುಖ, ತ-ಮುತ್ತು, ಥ-ಸಂಪತ್ತು, ದ-ಆಧ್ಯಾತ್ಮಿಕ ಸಂಪದ, ಧ-ಉನ್ನತ ಅಧಿಕಾರ, ನ-ನಷ್ಟ, ಪ-ಭಾರತೀ, ಫ-ಭೋಗ, ಮ-ಮೃತ್ಯು, ಯ-ರಾಜನಿಂದ ಮರಣ, ರ-ಶತ್ರುವಿನಿಂದ ಮರಣ, ಲ-ಪುತ್ರಜನನ, ವ-ಸಂಪತ್‌ಪ್ರಾಪ್ತಿ, ಶ-ಶೂನ್ಯ, ಷ-ರಾಜರುಗಳಲ್ಲಿ ಯುದ್ಧ, ಸ-ರಾಜಗೌರವ ಪ್ರಾಪ್ತಿ ಹ-ಯಶೋನಾಶ, ಕ್ಷ-ಮೋಕ್ಷ, ಶ್ರೀ-ಅತಿಶಯವಾದ ಮಂಗಲ.

ಗೇಯ ಪ್ರಬಂಧದ ಉದ್ಗ್ರಾಹ (ಧಾತುವಿನ, ಎಂದರೆ ನಾದಲಯಗಳ-ಪ್ರಾರಂಭ)ದಲ್ಲಿ ನ, ಗ, ರ ವರ್ಣಗಳನ್ನು ಬಿಡಬೇಕು; ದಕಾರವು ಸಂಪತ್ ಪ್ರದಾಯಕ. ಅದರ ಅಂತರಧಾತುವಿನಲ್ಲಿ (ಉಪಾಂತ್ಯಭಾಗ) ಸ, ತ, ಲಗಳನ್ನು ತ್ಯಜಿಸಬೇಕು, ಭಕಾರವು ಸಂಪತ್ತನ್ನು ಕೊಡುತ್ತದೆ: ಆಭೋಗದಲ್ಲಿ (ಹಾಡಿನ ಸಮಾಪನದ ಧಾತು) ಹ, ಟ, ಕಗಳು ನಿಷಿದ್ಧ; ಜಕಾರವು ಶ್ರೇಯಸ್ಕರ.

ಗಾಯಕ, ವಾಗ್ಗೇಯಕಾರ, ಕವಿಗಳು ನರಸ್ತುತಿ, ಪ್ರಭುವಿನ ಆಶ್ರಯಗಳಲ್ಲಿ ತೊಡಗಿರುತ್ತಿದ್ದ ಕಾಲದಲ್ಲಿ ಇಂತಹ ಕಟ್ಟಲೆಗಳು ಸಹಜವೇ. ಇಷ್ಟೊಂದು ನಿರ್ಬಂಧಗಳಿದ್ದರೂ ಉತ್ತಮವಾದ ಮಾತುರಚನೆಯನ್ನು ಮಾಡುವುದು ವಾಗ್ಗೇಯಕಾರನಿಗೆ ಒಂದು ಸವಾಲೇ ಆಗಿರುತ್ತಿತ್ತು. ಸಂಸ್ಕೃತ ಭಾಷೆಯ ರಚನೆಗಳಿಗಂತೂ ಇಂತಹ ಕಟ್ಟುಪಾಡುಗಳು ಇದ್ದೇ ಇರುತ್ತಿದ್ದವು. ದೇಶಭಾಷೆಗಳಿಗೆ ಇರುತ್ತಿದ್ದವೊ ಇಲ್ಲವೋ ತಿಳಿಯದು. ಗಣವರ್ಣಗಳ ಈ ವಿಧಿನಿಷೇಧಗಳು ನರಸ್ತುತಿಗೆ ಮಾತ್ರ ಅನ್ವಯಿಸುತ್ತವೆ: ಬೇರೆಡೆ ಅಲ್ಲ ಎಂದು ಪಂಡರೀಕವಿಠಲನು ನರ್ತನ ನಿರ್ಣಯದಲ್ಲಿ ಹೇಳಿದ್ದಾನೆ.

೨. ಛಂದೋನಿರ್ಯುಕ್ತ ಪ್ರಬಂಧಗಳು

ಪ್ರಾಚೀನ ಭಾರತೀಯ ಸಂಗೀತದಲ್ಲಿ ಕೆಲವು ವೇಳೆ ಇಂತಹ ಪ್ರಬಂಧವನ್ನು ಇಂತಹದೇ ರಾಗ, ತಾಳ, ಭಾಷೆ, ಛಂದಸ್ಸು ಅಥವಾ ರಸದಲ್ಲಿ ರಚಿಸಬೇಕೆಂಬ ನಿರ್ಯುಕ್ತಿಯಿರುತ್ತಿತ್ತು, ಇವುಗಳನ್ನು ನಿರ್ಯುಕ್ತ ಪ್ರಬಂಧಗಳೆಂದೂ, ಇಂತಹ ವಿಧಿ ಅಥವಾ ನಿಷೇಧಗಳಿರದಿದ್ದ ಗೇಯಪ್ರಬಂಧಗಳನ್ನು ಅನಿರ್ಯುಕ್ತಗಳೆಂದೂ ಕರೆಯಲಾಗುತ್ತಿತ್ತು. ಛಂದೋನಿರ್ಯುಕ್ತ ಪ್ರಬಂಧಗಳನ್ನಿಲ್ಲಿ ಸಂಕ್ಷೇಪವಾಗಿ ಪರಿಶೀಲಿಸಬಹುದು. ಇವುಗಳಲ್ಲಿ ಹಲವಕ್ಕೆ ಆಯಾ ಛಂದೋವೃತ್ತದ ಹೆಸರನ್ನೇ ಇಡಲಾಗುತ್ತಿತ್ತು.

1) ಏಲಾ

ಏಲಾ ಶುದ್ಧಸೂಡವೆಂಬ ಜಾತಿಯ ಎಂಟು ಪ್ರಬಂಧಗಳಲ್ಲಿ ಮೊದಲನೆಯದು,

ಶುದ್ಧ, ವಿಕೃತ, ಸಂಕೀರ್ಣ ಎಂಬ ಮೂರು ಜಾತಿಗಳಲ್ಲಿ, ಮಾತ್ರೈಲಾ ವರ್ಣೈಲಾ ಎಂಬ ಪ್ರಭೇದಗಳಲ್ಲಿ, ಕರ್ನಾಟೀ ಆಂಧ್ರೀ, ದ್ರಾವಿಡೀ, ಗೌಡೀ, ಲಾಟೀ ಎಂಬ ಭಾಷಾ ಅವಾಂತರ ಭೇದಗಳಲ್ಲಿ ಅದರ ಒಳಭೇದಗಳು ಒಟ್ಟು 356ರಷ್ಟಾಗುತ್ತವೆ. ಇದಕ್ಕೆ ದೊರೆತಿರುವಷ್ಟು ವಿಸ್ತಾರವಾದ ವರ್ಣನೆ ಬೇರೆ ಯಾವ ಪ್ರಬಂಧಕ್ಕೂ ಸಂಗೀತಶಾಸ್ತ್ರದ ಇತಿಹಾಸದಲ್ಲಿ ದೊರೆತಿಲ್ಲ.

ಏಲಾ ಎಂಬ ಛಂದೋವೃತ್ತವು ಸಂಸ್ಕೃತದಲ್ಲಿದೆ ; ಇದು ಪಾದಕ್ಕೆ 15 ವರ್ಣಗಳಿರುವ ಸಮಚತುಷ್ಪದೀ, 'ಸಭಜನಯ' ಎಂಬ ಗಣವಿನ್ಯಾಸವನ್ನೂ 5, 10ರಲ್ಲಿ ಯತಿಯನ್ನೂ ಹೊಂದಿದೆ. ಇದನ್ನು ಹೇಮಚಂದ್ರ, ಜಯಕೀರ್ತಿ ಮತ್ತು ಕೇದಾರಭಟ್ಟರು ವರ್ಣಿಸಿದ್ದಾರೆ ; ವೃತ್ತರತ್ನಾಕರದಲ್ಲಿ ಅತಿರೇಖಾ ಎಂದೂ ಛಂದಃಕೌಸ್ತುಭದಲ್ಲಿ ರೇಖಾ ಎಂದೂ ನಾಮಾಂತರಗಳಿವೆ. ಏಲಾ ಎಂಬ ಗೇಯಪ್ರಬಂಧಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ನಾಗವರ್ಮ, ಜಯಕೀರ್ತಿಗಳು ಏಳೆ ಎಂಬ ಕನ್ನಡ ಛಂದಸ್ಸನ್ನು ತ್ರಿಪದಿಗೆ ಸಂಬಂಧಿಸಿ ನಾಲ್ಕು ಕಾಮಗಣಗಳ ಒಂದು ಪಾದ, ಕಾಮ-ರತಿ-ಕಾಮ ಗಣಗಳ ವಿನ್ಯಾಸವಿರುವ ಎರಡನೆಯ ಪಾದ (ಎಂದರೆ 5 ಕಾಮಗಣ-ರತಿಗಣ-ಕಾಮಗಣ) ಎಂಬ ಲಕ್ಷಣವನ್ನು ಕೊಡುತ್ತಾರೆ. ಆರಾರು ಗಣಗಳಿರುವ ಮೂರು ಪಾದಗಳು ಎಂಬುದು ಏಲಾ ಗೇಯಪ್ರಬಂಧದ ಲಕ್ಷಣ ; ಕರ್ನಾಟೈಲಾದಲ್ಲಿಯೂ ಇದೇ ಮೂಲ ಲಕ್ಷಣವಿದೆ. ಆದುದರಿಂದ ಇವೆರಡಕ್ಕೂ ಸಂಬಂಧವಿರುವ ಹಾಗೆ ತೋರುವುದಿಲ್ಲ.

ಸಂಗೀತಶಾಸ್ತ್ರದಲ್ಲಿ ಏಲಾ ಪ್ರಬಂಧಕ್ಕೆ ಮೂಲ ಆಕರಗಳು ಮತಂಗನ ಬೃಹದ್ದೇಶೀ, ಚಾಲುಕ್ಯ ಸರ್ವಜ್ಞ ಸೋಮೇಶ್ವರನ ಅಭಿಲಷಿತಾರ್ಥಚಿಂತಾಮಣಿ (ಮಾನಸೋಲ್ಲಾಸ), ಜಗದೇಕಮಲ್ಲನ ಸಂಗೀತಚೂಡಾಮಣಿ, ನಾನ್ಯದೇವನ ಭರತ ಭಾಷ್ಯ (ಸರಸ್ವತೀ ಹೃದಯಾಲಂಕಾರಹಾರ) ಮತ್ತು ಶಾರ್ಙ್ಗದೇವನ ಸಂಗೀತ ರತ್ನಾಕರ. ನಂತರದ ಲಾಕ್ಷಣಿಕರು ಆಕರಸ್ಮರಣೆಯಿದ್ದು ಅಥವಾ ಇಲ್ಲದೆ ಹೆಚ್ಚು ಕಡಿಮೆ ಇವರುಗಳು ಕೊಡುವ ಲಕ್ಷಣಗಳನ್ನೇ ಆಶ್ರಯಿಸುತ್ತಾರೆ. ನಾನ್ಯದೇವ, ಸೋಮೇಶ್ವರರಲ್ಲಿ ಉದಾಹರಣೆಗಳೂ ದೊರೆಯುತ್ತವೆ. (ಸಂಸ್ಕೃತ ಭಾಷೆಯಲ್ಲಿ, ಸ್ವಂತ ರಚನೆಗಳು). ಸಂಗೀತ ರತ್ನಾಕರದಲ್ಲಿ ಏಲಾವರ್ಣನೆಯು ಲಕ್ಷಣ, ವೈವಿಧ್ಯ, ವರ್ಗೀಕರಣ, ವ್ಯವಸ್ಥೆಗಳಲ್ಲಿ ವ್ಯಾಪಕವಾಗಿಯೂ ಸಂಕ್ಷೇಪವಾಗಿಯೂ ಇದೆ. ಇದನ್ನು ಛಂದಸ್ಸಿನ ಪ್ರಸಕ್ತಿಯಿರುವಷ್ಟರ ಮಟ್ಟಿಗೆ ಇಲ್ಲಿ ಸಂಗ್ರಹಿಸಲಾಗುವುದು.

ಏಲೆಯಲ್ಲಿ ಗಣೈಲಾ, ಮಾತ್ರೈಲಾ, ವರ್ಣೈಲಾ, ದೇಶೈಲಾ ಎಂಬ ನಾಲ್ಕು ಪ್ರಮುಖ ಪ್ರಕಾರಗಳಿವೆ.

ವರ್ಣಗಣಗಳಿಂದಾದುದು ಗಣೈಲಾ, ಇದು ಶುದ್ಧಾ, ವಿಕೃತಾ ಮತ್ತು ಸಂಕೀರ್ಣಾ ಎಂದು ಮೂರು ವಿಧ. ಶುದ್ಧ ಗಣೈಲಾ ನಾಲ್ಕು : ನಾದಾವತೀ,

ಹಂಸಾವತೀ, ನಂದಾವತೀ, ಭದ್ರಾವತೀ. ಇವು ಉಳಿದೆಲ್ಲ ಗಣೈಲಾ ಒಳಭೇದಗಳಿಗೆ ಪ್ರಕೃತಿಗಳು. ಇವುಗಳ ಲಕ್ಷಣಗಳು ಹೀಗಿವೆ : ನಾದಾವತೀ-5ಭ, ನ ; ಹಂಸಾವತೀ 5 ರ, ಸ ; ನಂದಾವತೀ-5 ತ, ಜ ; ಭದ್ರಾವತೀ-5 ಮ, ಯ. ಈ ಗಣ ನಿಯಮವು ಏಳೆಯ ಮೂರು ಪಾದಗಳಲ್ಲಿ ಮೊದಲನೆಯ ಎರಡರಲ್ಲಿ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು ; ಮೂರನೆಯ ಪಾದದಲ್ಲಿ ಕಾಮಚಾರಕ್ಕೆ ಅವಕಾಶವಿದೆ. ಮೊದಲನೆಯ ಮೂರರಲ್ಲಿ ಗಣವಿಕಾರದಿಂದ, ಎಂದರೆ ಗುರುಲಘುಸ್ಥಾನ ಪಲ್ಲಟನದಿಂದ ವಿಕೃತ ಗಣೈಲಾಗಳು ಹುಟ್ಟುತ್ತವೆ. ಭದ್ರಾವತಿಯಲ್ಲಿ ಮಗಣವಿರುವುದರಿಂದ (ಗಗಗ) ವಿಕಾರವು ಸಾಧ್ಯವಿಲ್ಲ. ನಾದಾವತಿಯ ಭ ಗಣಕ್ಕೆ 'ಜ' ಅಥವಾ 'ಸ', ಹಂಸಾವತಿಯ ರಗಣಕ್ಕೆ 'ತ. ಅಥವಾ 'ಯ' ಮತ್ತು ನಂದಾವತಿಯ ತಗಣಕ್ಕೆ 'ಯ' ಅಥವಾ 'ರ' ಎಂಬ ಗಣಗಳು ವಿಕಾರ ಮಾಡಿದಾಗ ದೊರೆಯುತ್ತವೆ.

ನಾದಾವತೀ ಹಂಸಾವತೀ ಮತ್ತು ನಂದಾವತೀಗಳಲ್ಲಿರುವ 5ಭ, 5ರ ಮತ್ತು 5ತಗಳಲ್ಲಿ ಒಂದು, ಎರಡು, ಮೂರು, ನಾಲ್ಕು ಮತ್ತು 5 ಗಣಗಳನ್ನು ಕ್ರಮವಾಗಿ ವಿಕಾರಗೊಳಿಸುವುದರಿಂದ ವಿಕೃತಗಣೈಲಾಗಳು ವಾಸವೀ, ಸಂಗತಾ, ತ್ರೇತಾ, ಚತುರಾ ಬಾಣ ಎಂಬ ಅನ್ವರ್ಥಸಂಖ್ಯಾ ವಾಚಕ ನಾಮಗಳಲ್ಲಿ ಕ್ರಮವಾಗಿ ಉಂಟಾಗುತ್ತವೆ. ಗಣವಿಕಾರ ಸ್ಥಾನವನ್ನು ೧, ೨, ೩, ೪, ೫, ಎಂದು ಸೂಚಿಸಿದರೆ ಈ ಪ್ರಭೇದಗಳನ್ನು ಹೀಗೆ ಪಟ್ಟಿಮಾಡಬಹುದು.

I ವಾಸವೀ (ಒಂದು ಗಣವಿಕಾರ) : 1 ರಾಮಾ ೧) 2 ಮನೋರಮಾ ೨) 3 ಉನ್ನತಾ ೩) 4 ಶಾಂತಿ ೪) 5 ನಾಗರಾ ೫).

II ಸಂಗತಾ (ಎರಡು ಗಣಗಳ ವಿಕಾರ) : 6 ರಮಣೀಯಾ (೧,೨) 7 ವಿಷಮಾ (೧,೩) 8 ಸಮಾ (೧,೪) 9 ಲಕ್ಷ್ಮೀ (೧,೫) 10 ಕೌಮುದೀ (೨,೩) 11 ಕಾಮೋತ್ಸವಾ (೨,೪) 12 ನಂದಿನೀ (೨,೫) 13 ಗೌರೀ (೩,೪) 14 ಸೌಮ್ಯಾ (೩,೫) 15 ರತಿದೇಹಾ (೪,೫)

III ತ್ರೇತಾ (ಮೂರು ಗಣಗಳ ವಿಕಾರ) : 16 ಮಂಗಲಾ (೧,೨,೩) 17 ರತಿ ಮಂಗಲಾ (೧,೨,೪) 18 ಕಲಿಕಾ (೧,೨.೫) 19 ತನುಮಧ್ಯಾ (೧,೩,೪) 20 ವೀರಶ್ರೀ (೧,೩,೫) 21 ಜಯಮಂಗಲಾ (೧,೪,೫) 22 ವಿಜಯಾ (೨,೩,೪) 23 ರತ್ನಮಾಲಾ (೨,೩.೫) 24 ಗುರುಮಧ್ಯಾ (೨,೪,೫) 25 ರತಿಪ್ರಭಾ (೩,೪,೫)

IV ಚತುರಾ (ನಾಲ್ಕು ಗಣಗಳ ವಿಕಾರ) : 26 ಉತ್ಸವಪ್ರಿಯಾ (೨,೩,೪,೫) 27 ಮಹಾನಂದಾ (೧,೩,೪,೫) 28 ಲಹರೀ (೧,೨,೪,೫) 29 ಜಯಾ (೧,೨,೩,೫) 30 ಕುಸುಮಾವತೀ (೧,೨,೩,೪)

V ಬಾಣ (ಐದೂಗಣಗಳ ವಿಕಾರ) : 31 ಪಾರ್ವತೀಪ್ರಿಯಾ (೧,೨,೩,೪,೫)

ನಾದಾವತೀ, ಹಂಸಾವತೀ, ನಂದಾವತೀಗಳಲ್ಲಿ ಪ್ರತಿಯೊಂದಕ್ಕೂ ಈ ಐದು ಭೇದಗಳೂ 31 ಪ್ರಭೇದಗಳೂ ಇರುತ್ತವೆ. ಆದುದರಿಂದ ಗಣೈಲಾಗಳು ವಿಕೃತಿಯಲ್ಲಿ ಒಟ್ಟು 93 ದೊರೆಯುತ್ತವೆ. ಉದಾಹರಣೆಗೆ ನಂದಾವತೀ ತ್ರೇತಾ-ರತ್ನಮಾಲಾ (23) ಎಂಬುದರ ಗಣರಚನೆಯು ಭಜಜ ಭಜನ ಅಥವಾ ಭಸಸಭಸನ ಎಂದಿರುತ್ತದೆ. ಇವುಗಳಲ್ಲಿರುವ 'ಜ'-'ಸ' ಗಣಗಳನ್ನು ಅದಲು ಬದಲು ಮಾಡಿ ಭಜಜ ಭಸನ, ಭಜಸ ಭಸನ, ಭಸಜ ಭಸನ, ಭಸಸ ಭಜನ, ಭಸಜ ಭಜನ, ಭಜಸ ಭಜನ ಎಂಬ ಒಳಪ್ರಭೇದಗಳನ್ನು ಪಡೆಯಬಹುದಷ್ಟೆ. ಅಂತೆಯೇ ಹಂಸಾವತೀ-ಸಂಗತಾ-ಕಾಮೋತ್ಸವಾ (11) ಎಂಬುದರಲ್ಲಿ ಗಣವಿನ್ಯಾಸವು ರತರತರಸ ಅಥವಾ ರಯರಯರಸ ಎಂದಾಗುತ್ತದೆ. ಇವುಗಳಲ್ಲಿರುವ ತಗಣ-ಯಗಣಗಳನ್ನು ಪುನಃ ಅದಲು ಬದಲು ಮಾಡುವುದರಿಂದ ರತರಯರಸ, ರಯರತರಸ ಎಂಬ ಎರಡು ಒಳಭೇದಗಳು ದೊರೆಯುತ್ತವೆ. ಇದೇ ರೀತಿಯಲ್ಲಿ ನಂದಾವತೀ-ಚತುರಾ-ಲಹರೀ ಎಂಬ ಅವಾಂತರ ವಿಲಾಪ್ರಭೇದದ ಗಣರಚನೆಯು (28) ತಯತಯಯಜ ಅಥವಾ ತರತರರಜ ಎಂದಿರುತ್ತದೆ. ಇವುಗಳಲ್ಲಿರುವ ಯಗಣ-ರಗಣಗಳನ್ನು ಪರಸ್ಪರವಾಗಿ ಪುನಃ ಪಲ್ಲಟ ಗೊಳಿಸುವುದರಿಂದ ತರತಯಯಜ, ತಯತರಯಜ, ತರತರಯಜ, ತಯತರರಜ, ತರತಯರಜ ಎಂಬ ಬೇರೆ ಒಳಭೇದಗಳು ಹುಟ್ಟುತ್ತವೆ. ಇಂತಹ ಒಳಭೇದಗಳು ಮೇಲೆ ಹೇಳಿದ 93ರಲ್ಲಿ ಸೇರಿಲ್ಲ.

ಇವುಗಳೇ ಅಲ್ಲದೆ ನಾದಾವತೀ, ಹಂಸಾವತೀ ಮತ್ತು ನಂದಾವತಿಗಳ ವಾಸವೀ ಮತ್ತು ಸಂಗತಗಳಲ್ಲಿಯೂ ಗಣವಿಕಾರ ಪ್ರಸ್ತಾರವನ್ನು ಮಾಡುವುದರಿಂದ ಒಂದೊಂದರಲ್ಲಿಯೂ ಐದೈದರಂತೆ ಒಟ್ಟು ಹದಿನೈದು ವಿಕೃತೈಲಾಗಳು ಹೀಗೆ ದೊರೆಯುತ್ತವೆ. ನಾದಾವತೀ ವಾಸವಿಯ ಭಗಣವನ್ನು ಒಂದು ಜಗಣದಿಂದ ಪಲ್ಲಟ ಗೊಳಿಸಿದರೆ ಜಭಭಭಭನ ಭಜಭಭಭನ, ಭಭಜಭಭನ ಭಭಭಜಭನ ಭಭಭಭಜನ ಎಂಬ ಭೇದಗಳು ದೊರೆಯುತ್ತವೆ. ಈ ವಿಧಕ್ಕೆ ವಾಸವೀ ಸಾವಿತ್ರೀ ಎಂಬ ಸಮುಚ್ಚನಾಮವಿದೆ. ಬದಲು ಒಂದು ಸಗಣದಿಂದ ಪಲ್ಲಟಿಸಿದರೆ ಸಭಭಭಭನ ಭಸಭಭಭನ ಭಭಸಭಭನ ಭಭಭಸಭನ ಭಭಭಭಸನ ಎಂಬ ಭೇದಗಳು ದೊರೆಯುತ್ತವೆ. ಇವೆಲ್ಲಕ್ಕೂ ವಾಸವೀ ಪಾವನೀ ಎಂಬ ಸಮುಚ್ಚಯ ನಾಮವಿದೆ. ನಂದಾವತೀ ಸಂಗತಾದ 5 ಭಗಣಗಳನ್ನು ಇದೇ ರೀತಿಯಲ್ಲಿ ಎರಡೆರಡು ಜಗಣಗಳಿಂದ ಪಲ್ಲಟಿಸಿದರೆ ಜಜಭಭಭನ...ಭಭಭಜಜನ ಎಂಬ ಒಳಭೇದಗಳು ಹುಟ್ಟುತ್ತವೆ. ಇವಕ್ಕೆಲ್ಲ ಸಂಗತಾಸಾವಿತ್ರೀ ಎಂದು ಹೆಸರು. ಅದರ ಬದಲು ಭಗಣಗಳನ್ನು ಎರಡೆರಡು ಸಗಣಗಳಿಂದ ಪಲ್ಲಟಿಸಿದರೆ ಸಸಭಭಭನ... ಭಭಭಸಸನ ಎಂಬ ಒಳಭೇದಗಳು ಸಿಗುತ್ತವೆ. ಇವಕ್ಕೆಲ್ಲ ಸಂಗತಾ ಪಾವನೀ ಎಂದು ಹೆಸರು.ಹಾಗಲ್ಲದೆ ಎರಡೆರಡುಭಗಣಗಳನ್ನು ಜ-ಸ ಅಥವಾ ಸ-ಜಗಣಗಳಿಂದ ಪಲ್ಲಟಿಸಿದರೆ ಸಜಭಭಭಜನ ಜಸಭಭಭನ,...ಭಭಭಜಸನ ಭಭಭಸಜನ ಮುಂತಾದ ವಿಲಾಪ್ರಭೇದಗಳು

ದೂರೆಯುತ್ತವೆ. ಇವಕ್ಕೆ ಸಂಗತಾ ವಾತಸಾವಿತ್ರೀ ಎಂದು ಹೆಸರಿದೆ. ಹೀಗೆ ನಾದಾವತೀ ವಾಸವೀಸಾವಿತ್ರೀ, ನಾದಾವತೀವಾಸವೀಪಾವನೀ, ನಾದಾವತೀಸಂಗತಾಸಾವಿತ್ರೀ, ನಾದಾವತೀಸಂಗತಾಪಾವನೀ, ನಾದಾವತೀಸಂಗತಾವಾತಸಾವಿತ್ರೀ ಎಂಬ ಭೇದಗಳು ಉಂಟಾಗುತ್ತವೆ ; ಇದೇ ರೀತಿಯಲ್ಲಿ ಹಂಸಾವತೀವಾಸವೀವ್ಯೋಮಜಾ, ಹಂಸಾವತೀ ವಾಸವೀವಾರುಣೀ, ಹಂಸಾವತೀಸಂಗತಾವ್ಯೋಮಜಾ, ಹಂಸಾವತೀಸಂಗತಾವಾರುಣೀ, ಹಂಸಾವತೀಸಂಗತಾವ್ಯೋಮವಾರುಣೀ ; ನಂದಾವತೀವಾಸವೀವಹ್ನಿಜಾ, ನಂದಾವತೀ ವಾಸವೀವಾರುಣೀ, ನಂದಾವತೀಸಂಗತಾವಹ್ನಿಜಾ, ನಂದಾವತೀಸಂಗತಾವಾರುಣೀ, ನಂದಾವತೀಸಂಗತಾವಹ್ನಿವಾರುಣೀ ಎಂಬ ಇತರ ಹತ್ತು ವಿಧಗಳನ್ನು ಊಹಿಸಿಕೊಳ್ಳ ಬೇಕು. ಈ ಹದಿನೈದನ್ನು ಸೇರಿಸಿ ವಿಕೃತಗಣೈಲಾಗಳು ಒಟ್ಟು (93 + 15 =) 108 ಆಗುತ್ತವೆ.

ಮಾತ್ರಾಗಣಗಳಿಂದ ರಚಿತವಾದುದು ಮಾತ್ರೈಲಾ. ಇದು ಪ್ರಾಕೃತಛಂದೋಗಣ ಗಳಾದ ಛಪಚತದಗಳ ಪ್ರಸ್ತಾರಭೇದಗಳನ್ನು ರತಿ, ಕಾಮ, ಬಾಣ (=ಬ್ರಹ್ಮ, ವಿಷ್ಣು, ರುದ್ರ, =ಸೂರ್ಯ, ಚಂದ್ರ, ಇಂದ್ರ)ಗಣಗಳನ್ನೂ ಬಳಸಿಕೊಳ್ಳುತ್ತವೆ. ರತಿ, ಕಾಮ ಮತ್ತು ಬಾಣಗಣಗಳಿಂದ ರಚಿತವಾದವುಗಳಿಗೆ ರತಿಲೇಖಾ, ಕಾಮಲೇಖಾ, ಬಾಣಲೇಖಾ ಎಂದೂ ಈ ಗಣಗಳ ಮಿಶ್ರದಿಂದಾದುದಕ್ಕೆ ಚಂದ್ರಲೇಖಾ ಎಂದೂ ಹೆಸರು. ಇವುಗಳಲ್ಲಿ ಮೂರು ಮೂರು ಪಾದಗಳಿದ್ದು ಅವುಗಳಲ್ಲಿ ಕ್ರಮವಾಗಿ 11, 11, 10 ; 22, 22, 20 ; 33, 33, 30 ಮತ್ತು 44, 44, 40 ಎಂಬ ಮಾತ್ರಾವಿನಿಯೋಗವು ಕ್ರಮವಾಗಿ ಇರುತ್ತದೆ. ನಂದಿಮತಾನುಸಾರವಾಗಿ ಪ್ರಾಕೃತಛಂದೋಗಣಗಳಲ್ಲಿ ಬೇರೆ ನಾಲ್ಕು ಮಾತ್ರೈಲಾಗಳು ಹೀಗಿವೆ : ಇಂದುಮತೀ–5 ಛ,ಕ ; ಜ್ಯೋತಿಷ್ಮತೀ–5 ಪ,ಚ; ನಭಸ್ವತೀ–ಛ3ಚಪಛ, ವಸುಮತೀ–ದಪಚ3ಪಛತ. ಅರ್ಜುನಮತದಂತೆ ಶುದ್ಧ ಗಣೈಲಾಗಳಲ್ಲಿರುವ ವರ್ಣಗಣಗಳನ್ನು ಮಾತ್ರೆಗಳನ್ನಾಗಿ ಒಡೆದು ಅವುಗಳನ್ನು ಮೇಲೆ ಹೇಳಿದ ಛಪಚತದಗಳನ್ನಾಗಿ ಪುನರ್ವ್ಯವಸ್ಥೆ ಮಾಡಿ ಅದೇ ಹೆಸರಿನ ಮಾತ್ರೈಲಾಗಳನ್ನು ಪಡೆಯಲಾಗುತ್ತದೆ. ಹೀಗೆ ನಾದಾವತೀ ಮಾತ್ರೈಲಾದಲ್ಲಿ (5ಭ–ನ=23 ಮಾತ್ರೆ=) 5 ಚಗಣ, 3 ಲಘು ; ಹಂಸಾವತೀ ಮಾತ್ರೈಲಾದಲ್ಲಿ (5ರ–ಸ=29 ಮಾತ್ರೆ=) 7 ಚಗಣಲಘು ; ನಂದಾವತೀ ಮಾತ್ರೈಲಾದಲ್ಲಿ (5 ತ–ಜ=29 ಮಾತ್ರೆ=) 7 ಚಗಣ, ಲಘು (ಹಂಸಾವತೀ ನಂದಾವತೀ ಮಾತ್ರೈಲಾಗಳಲ್ಲಿ ಕಾಣುವ ಏಕರೂಪತೆ ತೋರಿಕೆಯದು ಮಾತ್ರ. ಅವುಗಳ ಪೂರ್ವರೂಪದಲ್ಲಿಯೂ, ಉತ್ತರರೂಪದಲ್ಲಿಯೂ ಚಗಣದ ಬೇರೆ ಬೇರೆ ಪ್ರಸ್ತಾರಗಳನ್ನು ಬಳಸುವುದರಿಂದಲೂ ಪೃಥಕ್ಕರಣವನ್ನು ಸಾಧಿಸಬೇಕು). ಭದ್ರಾವತೀ ಮಾತ್ರೈಲಾದಲ್ಲಿ (5 ಮ–ಯ=35 ಮಾತ್ರೆ=) 8 ಚಗಣ, 3 ಲಘು. ಅರ್ಜುನ ಮತದಲ್ಲಿ ನಾದಾವತೀ ಇತ್ಯಾದಿ ಹೆಸರುಗಳನ್ನೇ ತಳೆದ ನಾಲ್ಕು ವಿಚಿತ್ರೈಲಾಗಳೂ ಇವೆ. ಆಯಾ ಹೆಸರಿನ ಮಾತ್ರೈಲಾಗಳ ಪಾದದ ಮಾತ್ರಾ

ಸಂಖ್ಯೆಯನ್ನು (ಉದಾ : ನಾದಾವತೀ ಮಾತ್ರೈಲಾ = 23 ಮಾತ್ರೆಗಳು) ಒಂದರಿಂದ ಐದರವರೆಗೆ ಒಂದೊಂದಾಗಿ ಹೆಚ್ಚಿಸಿದಾಗ ಇವು ಹುಟ್ಟುತ್ತವೆ. ಹೀಗೆ ನಾದಾವತೀ ವಿಚಿತ್ರೈಲಾ ಪಾದಗಳಲ್ಲಿ 24, 25, 26, 27 ಅಥವಾ 28 ಮಾತ್ರೆಗಳು ; ಹಂಸಾವತೀ ವಿಚಿತ್ರೈಲಾ ಹಾಗೂ ನಂದಾವತೀ ವಿಚಿತ್ರೈಲಾ ಪಾದಗಳಲ್ಲಿ 30, 31, 32, 33, ಅಥವಾ 34 ಮಾತ್ರೆಗಳು ; ಭದ್ರಾವತಿ ವಿಚಿತ್ರೈಲಾ ಪಾದಗಳಲ್ಲಿ 36, 37, 38, 39 ಅಥವಾ 40 ಮಾತ್ರೆಗಳು. ಇವುಗಳೇ ಅಲ್ಲದೆ ಮತಾಂತರದಲ್ಲಿ ನಂದಿನಿ, ಚಿತ್ರಿಣೀ, ಚಿತ್ರಾ, ವಿಚಿತ್ರಾ ಎಂಬ ಬೇರೆ ನಾಲ್ಕು ಏಳೆಗಳನ್ನೂ ಸಂಗೀತ ಶಾಸ್ತ್ರವು ಲಕ್ಷಿಸುತ್ತದೆ. ರತಿಲೇಖೆಯೇ ಮೊದಲಾದ ಮಾತ್ರೈಲಾಗಳಲ್ಲಿ ಪಾದದ ಮಾತ್ರಾಸಂಖ್ಯಾನಿಯಮವನ್ನು ಪಾಲಿಸುತ್ತ ಸ್ವನಾಮಕ ಗಣಗಳ ಬದಲು ಬೇರೆ ಬೇರೆ (ಉದಾ : ಕಾಮ, ಬಾಣ)ಗಣಗಳನ್ನು ಸಂಯೋಜಿಸಿದರೆ ಇವು ಹುಟ್ಟುತ್ತವೆ. ಹೀಗೆ ರತಿಗಣವಿಲ್ಲದ ರತಿಲೇಖೆಯ ಪಾದಗಳಲ್ಲಿ 11, 11, 10 ಎಂಬಾ ಮಾತ್ರಾ ಪ್ರಮಾಣಗಳು ಬೇರೆಗಣಗಳಿಂದ ಏರ್ಪಟ್ಟಾಗ ನಂದಿನೀ ; ಕಾಮ ಲೇಖೆಯ ಪಾದಗಳಲ್ಲಿ ಕಾಮಗಣಗಳಿಲ್ಲದೆ ಬೇರೆ ಗಣಗಳಿಂದ 22, 22, 20 ಎಂಬ ಮಾತ್ರಾಪ್ರಮಾಣಗಳು ಏರ್ಪಟ್ಟರೆ ಚಿತ್ರಿಣೆ ; ಹೀಗೆಯೇ ಬಾಣಲೇಖೆಯಿಂದ ಚಿತ್ರಾ, ಚಂದ್ರಲೇಖೆಯಿಂದ ವಿಚಿತ್ರಾ. ಇವುಗಳಲ್ಲಿ ಒಂದು ವಿಶೇಷವಿದೆ—ರತಿಲೇಖೆ ಮತ್ತು ಕಾಮಲೇಖೆಗಳಲ್ಲಿ 10, 11, 11 ಮತ್ತು 20, 22, 22 ಎಂಬ ಮಾತ್ರಾಪ್ರಮಾಣದ ವ್ಯತ್ಯಸ್ತಕ್ರಮದಲ್ಲಿ ಹಾಡಬೇಕು.

ಹೀಗೆ, ರತಿಯೇ ಮೊದಲಾದ ಸ್ವನಾಮಕ ವಿಶಿಷ್ಟ ಗಣಗಳ ನಿಯತ ಪ್ರಯುಕ್ತಿಯಿಂದಲೂ ನಾದಾವತಿಯೇ ಮೊದಲಾದ ಗಣೈಲಾಗಳನ್ನು ಜಗಣಕ್ಕೆ ಏಕರೂಪವಾಗಿ ಪರಿವರ್ತಿಸಿಕೊಳ್ಳುವುದರಿಂದಲೂ, ಇಂತಹವುಗಳಲ್ಲಿ ಪಾದಮಾತ್ರಾ ಸಂಖ್ಯೆಯನ್ನು ಒಂದರಿಂದ ಐದರವರೆಗೆ ಹೆಚ್ಚಿಸಿಕೊಳ್ಳುವುದರಿಂದಲೂ, ಅನ್ಯಪ್ರಾಕೃತಗಣಗಳ ಪ್ರಯುಕ್ತಿಯಿಂದಲೂ, ಮಾತ್ರೈಲಾಗಳಲ್ಲಿ ಗಣನಿಯಮವನ್ನು ಬಿಟ್ಟು ಮಾತ್ರಾಸಂಖ್ಯಾ ನಿಯಮವನ್ನು ಮಾತ್ರ ಇಟ್ಟುಕೊಳ್ಳುವುದರಿಂದಲೂ ತಲಾ ನಾಲ್ಕರಂತೆ ಒಟ್ಟು ಇಪ್ಪತ್ತು ಮಾತ್ರೈಲಾಗಳು ಸಿದ್ಧಿಸುತ್ತವೆ.

ಮೂರನೆಯ ಏಲಾಪ್ರಕಾರವು ವರ್ಣೈಲಾ. ಇದರ ಪಾದಗಳಲ್ಲಿ ಗಣನಿಯಮ ಮಾತ್ರಾಸಂಖ್ಯಾ ನಿಯಮಗಳು ಇರದೆ ಇಷ್ಟಿಷ್ಟು ವರ್ಣಗಳಿರಬೇಕೆಂಬ ನಿಯಮವು ಮಾತ್ರ ಇರುತ್ತದೆ. ಆರರಿಂದ ಇಪ್ಪತ್ತೊಂಬತ್ತರವರೆಗೆ (ಸೇರಿಸಿಕೊಂಡು) ವರ್ಣಗಳನ್ನು ಪ್ರತಿಯೊಂದು ಪಾದದಲ್ಲಿಯೂ ಏಕೋತ್ತರವೃದ್ಧಿಯಿಂದ ಸಂಯೋಜಿಸಿದರೆ 24 ವರ್ಣೈಲಾಗಳು ಹೀಗೆ ಜನಿಸುತ್ತವೆ : 1 ಮಧುಕರೀ (6) 2 ಸುಸ್ವರಾ (7) 3 ಕರಣೀ (8) 4 ಸುರಸಾ (9) 5 ಪ್ರಭಂಜನೀ (10) 6 ಮದನವತೀ (11) 7 ಶಶಿನೀ (12) 8 ಪ್ರಭಾವತೀ (13) 9 ಮಾಲತೀ (14) 10 ಲಲಿತಾ (15) 11 ಭೋಗವತಿ (16)

12 ಕುಸುಮವತೀ (17) 13 ಕಾಂತಿಮತೀ (18) 14 ಕುಮುದಿನೀ (19) 15 ಕಲಿತಾ (20) 16 ಕಮಲಾ (21) 17 ವಿಮಲಾ (22) 18 ನಲಿನೀ (23) 19 ಕಾಲಿಂದೀ (24) 20 ವಿಪುಲಾ (25) 21 ವಿದ್ಯುಲ್ಲತಾ (26) 22 ವಿಶಾಲಾ (27) 23 ಸರಲಾ (28) 24 ತರಲಾ (29). ಇವುಗಳ ಪೈಕಿ ಕಾಂತಿಮತೀ...ತರಲಾ ಎಂಬ ಕೊನೆಯ ಹನ್ನೆರಡನ್ನು ಮಂಠ, ಕಂಕಾಲ, ದ್ವಿತೀಯ ಅಥವಾ ಪ್ರತಿ ತಾಲದ ಮಾತ್ರಾ ಪ್ರಮಾಣಕ್ಕೆ ಅನುಸಾರವಾಗಿ ಹಾಡುವುದೂ ಇತ್ತು. ಆಗ ಅವುಗಳಿಗೆ ವರ್ಣಮಾತ್ರೈಲಾ ಎಂಬ ಅನ್ವರ್ಥ ಹೆಸರನ್ನಿಡಲಾಗುತ್ತಿತ್ತು.

ನಾದಾವತೀ ಮೊದಲಾದ ಏಳೆಗಳನ್ನು ಅವುಗಳ ಭೇದ ಪ್ರಭೇದಗಳನ್ನು ಬೆರಕೆ ಮಾಡಿ ವಿವಿಧರೂಪ ಮತ್ತು ವಿವಿಧ ಪ್ರಮಾಣಗಳನ್ನುಳ್ಳ ಪಾದಗಳನ್ನು ಪಡೆದರೆ ಅಂತಹ ಏಳೆಗಳಿಗೆ ಸಂಕರೈಲಾ ಎಂಬ ಹೆಸರಿತ್ತು. ಇವು ಅಸಂಖ್ಯೇಯ, ಪ್ರಸಿದ್ಧಿವಿಧುರ ಎಂಬ ಮಾತನ್ನು ಶಾಙ್ಗ್ರದೇವನು ಹೇಳುತ್ತಾನೆ. ಜಗದೇಕಮಲ್ಲನ ಹೊರತು ಬೇರೆ ಲಾಕ್ಷಣಿಕರು ಇವನ್ನು ಲಕ್ಷಿಸುವುದಿಲ್ಲ.

ದೇಶ್ಯೈಲಾ ಏಳೆಯ ನಾಲ್ಕನೆಯ ಪ್ರಕಾರ. ದೇಶಭಾಷೆಗಳಾದ ಕರ್ನಾಟ, ಆಂಧ್ರ. ದ್ರಾವಿಡ, ಗೌಡ ಮತ್ತು ಲಾಟ ಭಾಷೆಗಳಲ್ಲಿ ರಚಿತವಾಗುವುದರಿಂದ ಐದುವಿಧ, ಈ ಹೆಸರು. ಇವುಗಳಲ್ಲಿ ಕರ್ನಾಟೈಲಾ ಪ್ರಧಾನವಾದುದು. ಇದರ ಆರು ಬಗೆಗಳನ್ನು ಶಾಙ್ಗ್ರದೇವನು ವರ್ಣಿಸುತ್ತಾನೆ :

1. ನಾದಾವತೀ ಮುಂತಾದ ಶುದ್ಧಗಣೈಲಾಗಳನ್ನು ಕನ್ನಡದಲ್ಲಿ ರಚಿಸಿ ಹಾಡಬೇಕು ; ಇವೇ (ಮತಾಂತರದಲ್ಲಿ) ಕರ್ನಾಟೈಲಾಗಳು.

2. ಈ ಏಳೆಗಳಲ್ಲಿ ಬೇರೆ ಗಣ, ಪ್ರಾಸ, ವಿನಿಯೋಗ ಮುಂತಾದ ಲಕ್ಷಣಾಂತರಗಳನ್ನು ಏರ್ಪಡಿಸಿದರೆ ಕನ್ನಡ ಏಳೆಗಳಾಗುತ್ತವೆ.

ಅ) ನಾದಾವತೀ ಸುಲೇಖಾ (ನಾದಾವತಿಯ ಪಾದಗಳಲ್ಲಿ ಗಣವಿನ್ಯಾಸ–5 ಭ,ನ ; ರತಿಲೇಖೆ=ಸುಲೇಖೆಯ ಮಾತ್ರಾ ವಿನ್ಯಾಸ–11, 11, 10) ; ಮೊದಲನೆಯ ಎರಡು ಪಾದಗಳಲ್ಲಿ ಪ್ರತಿಯೊಂದರಲ್ಲಿಯೂ ಎರಡು ಕಾಮಗಣಗಳು, ಕೊನೆಯಲ್ಲಿ ರತಿಗಣ ; ಆದ್ಯಂತಾನುಪ್ರಾಸ ; ಮೂರನೆಯ ಪಾದದಲ್ಲಿ ನಾಲ್ಕು ಕಾಮಗಣಗಳು, ಕೊನೆಯಲ್ಲಿ ರತಿಗಣ, ಆದಿಮಧ್ಯಪ್ರಾಸ.

ಆ) ಹಂಸಾವತೀಕಾಮಲೇಖಾ (ಹಂಸಾವತಿಯ ಪಾದಗಳಲ್ಲಿ ಗಣವಿನ್ಯಾಸ–5ರ, ಸ ; ಕಾಮಲೇಖೆಯ ಪಾದಗಳಲ್ಲಿ ಮಾತ್ರಾ ವಿನ್ಯಾಸ–22, 22, 20) ಮೊದಲನೆಯ ಎರಡು ಪಾದಗಳಲ್ಲಿ ಪ್ರತಿಯೊಂದರಲ್ಲಿಯೂ ನಾಲ್ಕು ನಾಲ್ಕು ಕಾಮಗಣಗಳು, ಆದಿಮಧ್ಯಪ್ರಾಸ ; ಮೂರನೆಯ ಪಾದದಲ್ಲಿ ಎಂಟು ಕಾಮಗಣಗಳು, ಆದಿಮಧ್ಯಾಂತ ಪ್ರಾಸ.

ಇ) ನಂದಾವತೀಸ್ಮರಲೇಖಾ (ನಂದಾವತಿಯ ಪಾದಗಳಲ್ಲಿ ಗಣವಿನ್ಯಾಸ–5 ತ ಜ ಸ್ಮರಲೇಖೆ ಎಂದರೆ ಕಾಮರೇಖೆಯ ಪಾದಗಳಲ್ಲಿ ಮಾತ್ರಾವಿನ್ಯಾಸ 33, 33, 30). ಮೂರು ಪಾದಗಳಲ್ಲಿ ಪ್ರತಿಯೊಂದರಲ್ಲಿಯೂ ನಾಲ್ಕು ನಾಲ್ಕು ಕಾಮಗಣಗಳು (ಆದುದರಿಂದ ಸ್ಮರಲೇಖಾ ಎಂಬ ಹೆಸರು), ಮಧ್ಯಾನುಪ್ರಾಸ.

ಈ) ಭದ್ರಾವತೀ ಭದ್ರಲೇಖಾ (ಭದ್ರಾವತಿಯ ಪಾದಗಳಲ್ಲಿ ಗಣರಚನೆ–5ಮ, ಜ) ಬಾಣಲೇಖೆಯ ರಚನೆಯು ಬಾಣಗಣಗಳಿಂದ ನಿರ್ಮಿತವಾದ 33, 33, 30 ಎಂಬ ಮಾತ್ರಾ ವಿನಿಯೋಗವುಳ್ಳ ಮೂರು ಪಾದಗಳಿಂದಾಗುತ್ತದೆ. ಮೂರು ಪಾದಗಳಲ್ಲಿಯೂ ಆರು ಕಾಮಗಣಗಳು ಕೊನೆಯಲ್ಲಿ ಬಾಣಗಣ, ಆದಿಮಧ್ಯಾಂತಪ್ರಾಸ.

3. ಮೇಲೆ ಹೇಳಿದ ನಾದಾವತೀ ಸುಲೇಖಾ ಇತ್ಯಾದಿ ನಾಲ್ಕು ಭೇದಗಳಲ್ಲಿ ಪ್ರತಿಯೊಂದರ ಮೂರು ಪಾದಗಳಲ್ಲಿಯೂ 5 ಕಾಮಗಣಗಳು, ರತಿಗಣ, ಕಾಮಗಣ ಎಂಬ ಗಣವಿನ್ಯಾಸವನ್ನು ಮಾಡಿದರೆ ಸುಲೇಖಾ (ರತಿಲೇಖಾ) ಛಂದಸ್ವತೀ ಇತ್ಯಾದಿ ಭೇದಗಳು ಹುಟ್ಟುತ್ತವೆ. ಹೀಗೆ ಹೇಳಿದ ಕಲ್ಲಿನಾಥನ ವಿವರಣೆಯನ್ನು ನಂತರದ ಲಾಕ್ಷಣಿಕರು ಒಪ್ಪಿಕೊಂಡಿದ್ದಾರೆ. ಸಿಂಹಭೂಪಾಲನ ಮತದಲ್ಲಿ ಕರ್ಣಾಟೈಲಾಗಳ ಮೂರು ಪಾದಗಳಲ್ಲಿ ಮೇಲೆ ಹೇಳಿದ ಗಣವಿನ್ಯಾಸವನ್ನು ಮಾಡಿದರೆ ಪರಸ್ಪರವಾದ ಛಂದಸ್ವತೀ ಏಳೆಗಳು ಹುಟ್ಟುತ್ತವೆ.

4. ಛಂದಸ್ವತೀ ಏಳೆಗಳಲ್ಲಿ ಬರುವ ಗಣ ಮತ್ತು/ಅಥವಾ ಮಾತ್ರೆಗಳಲ್ಲಿ ಹೆಚ್ಚುಕಡಿಮೆ ಮಾಡಿದರೆ ಅವುಗಳ ಆಭಾಸರೂಪದ ಏಲಾಭಾಸಗಳು ಉಂಟಾಗುತ್ತವೆ.

5. ಶಿಖಾಪದ : ಛಂದಸ್ವತೀ ಏಳೆಗಳ ಗಣ ಮಾತ್ರೆಗಳನ್ನು ಹೆಚ್ಚುಕಡಿಮೆ ಮಾಡಿ ಏಲಾಭಾಸಗಳನ್ನು ಪಡೆದಾಗ ಪಾದಾಂತ್ಯದಲ್ಲಿರುವ ಕಾಮಗಣವು ಮಾರ್ಪಟ್ಟು ಬೇರೆ ಮಾತ್ರಾಗಣವಾಗಬಹುದು. ಒಟ್ಟು ಪಾದಪ್ರಮಾಣವನ್ನು ಕಾಪಾಡಿಕೊಳ್ಳಲು ಮೂರನೆಯ ಪಾದದ ಕೊನೆಯಲ್ಲಿ ಇನ್ನೊಂದು ಪದವನ್ನು ಸೇರಿಸಿಕೊಳ್ಳಬಹುದು. ಇಂತಹ ಪದಕ್ಕೆ ಶಿಖಾಪದವೆಂದು ಹೆಸರು. ಹೀಗೆ ಶಿಖಾಪದವಿದ್ದರೆ ಅಂತಹ ಏಳೆಗಳಲ್ಲಿ ಮೇಲಾಪಕವನ್ನು (ತೃತೀಯ ಪಾದದಲ್ಲಿ ಉಚಿತವೆಂಬ ಸಂಜ್ಞೆಯಿರುವ ಹನ್ನೆರಡನೆಯ ಪದದಲ್ಲಿ ಎಂದಿನಂತೆ ಹಾಡದೆ) ಶಿಖಾಪದದ ನಂತರವೇ ಮೇಲಾಪಕ, ಧ್ರುವ, ಆಭೋಗಗಳನ್ನು ಹಾಡಬೇಕು. ಒಂದೊಂದು ಏಲಾಭಾಸಕ್ಕೂ ಪರಸ್ಪರವಾದ ಒಂದೊಂದು ಶಿಖಾಪದ ಏಳೆಯಿದೆ ; ಆದುದರಿಂದ ಇವು ನಾಲ್ಕಾಗುತ್ತವೆ. ಹೀಗೆ ಒಂದೊಂದು ಕರ್ನಾಟೈಲೆಗೂ ನಾಲ್ಕು ನಾಲ್ಕರಂತೆ ಒಟ್ಟು ಇಪ್ಪತ್ತು ಕನ್ನಡ ಏಳೆಗಳಾದವು.

ಇವಿಷ್ಟೂ ವರ್ಣಕಗಳು, ಎಂದರೆ ವರ್ಣಪ್ರಧಾನವಾದವುಗಳು. ಆರನೆಯ ಪ್ರಕಾರವು ವಸ್ತ್ವೈಲಾ. ಇದರಲ್ಲಿ ನಾಲ್ಕು ಪಾದಗಳಿರುತ್ತವೆ. ಈ ಲಕ್ಷಣವು ಛಂದಸ್ವತಿಗೂ ಉಂಟು. ಅದರ ನಾಲ್ಕನೆಯ ಪಾದವು ಆಯಾ ಕರ್ನಾಟೈಲಾ ಪ್ರಕಾರದಲ್ಲಿರುವ ಮೂರು

ಪಾದಗಳ ಲಕ್ಷಣಕ್ಕೆ ಅನುಸಾರವಾಗಿಯೇ ರಚಿತವಾಗಿರುತ್ತದೆ. ಈ ಪಾದಗಳಲ್ಲಿ ಮೊದಲನೆಯ ಎರಡು ಪ್ರಾಸರಹಿತವೂ ಮೂರನೆಯದು ಪ್ರಾಸಸಹಿತವೂ ಆಗಿದ್ದರೆ, ಎಲ್ಲ ಪಾದಗಳಲ್ಲಿಯೂ (ಮೊದಲನೆಯ ಎರಡು ಪ್ರಕಾರಗಳಲ್ಲಿ ಮೂರು ಮೂರು ಪಾದಗಳು, ಕಡೆಯ ಸಾಲು ಮೂರರಲ್ಲಿ ನಾಲ್ಕು ನಾಲ್ಕು ಪಾದಗಳು) ನಾಲ್ಕು ನಾಲ್ಕು ಯತಿಗಳೂ ಇದ್ದರೆ ಅದು ವಸ್ತ್ವೈಲಾ ಆಗುತ್ತದೆ. ಮೇಲೆ ಹೇಳಿದ ಇಪ್ಪತ್ತು ಕನ್ನಡೈಲಾಗಳಲ್ಲಿ ಪ್ರತಿಯೊಂದಕ್ಕೂ ಪರಸ್ಪರವಾದ ವಸ್ತ್ವೈಲಾ ಇರುತ್ತದೆ. ಆದುದರಿಂದ ಕನ್ನಡೈಲೆಗಳು ಒಟ್ಟು 40. ಇದೇ ರೀತಿಯಲ್ಲಿ ಆಂಧ್ರೈಲಾ, ದ್ರಾವಿಡೈಲಾ, ಗೌಡೈಲಾ ಮತ್ತು ಲಾಟೈಲಾಗಳಲ್ಲಿ, ಪ್ರತಿಯೊಂದರಲ್ಲಿಯೂ ನಲವತ್ತು ನಲವತ್ತು ಭೇದಗಳಿವೆ. ಇವುಗಳಲ್ಲಿ ವರ್ಣೈಲಾದಂತೆಯೇ ರಾಗ, ರಸ, ರೀತಿ, ವೃತ್ತಿ, ದೇವತೆ ಮೊದಲಾದ ಲಕ್ಷಣ ನಿಯಮಗಳಿಲ್ಲ. ಅವುಗಳಲ್ಲಿ ವ್ಯತ್ಯಾಸವು ಗಮಕ, ರಸ ಮತ್ತು ಪ್ರಾಸಗಳ ಪ್ರಯುಕ್ತಿ ಯಿಂದ ಏರ್ಪಡುತ್ತದೆ. ಕರ್ನಾಟೈಲಾದಲ್ಲಿ ಆದಿಮಧ್ಯಾಂತ ಪ್ರಾಸವು ವ್ಯಕ್ತಿತ್ವ ಬೋಧಕ ಲಕ್ಷಣ. ಲಾಟೈಲಾಗಳಲ್ಲಿ ರಸ ಪ್ರತೀತಿ ಹೆಚ್ಚು, ಪ್ರಾಸವು ಪಾದಾಂತ್ಯ ದಲ್ಲಿರುತ್ತದೆ ; ಗೌಡೀ ಏಲಾದಲ್ಲಿ ಪ್ರಾಸವೂ ಇಲ್ಲ ಗಮಕವೂ ಇಲ್ಲ. ಆಂಧ್ರದ ಏಳೆ ಗಳಲ್ಲಿ ರಸಭಾವಗಳು ಉತ್ಕಟವಾಗಿದ್ದು ನಾನಾಬಗೆಯ ರಾಗಾಂಶಗಳೂ ಗಮಕಾ ಲಪ್ತಿಯೂ ಇರುತ್ತವೆ. ದ್ರಾವಿಕರ ಏಳೆಗಳಲ್ಲಿ ಭಾವ ರಸಗಳ ಮಹಾಪೂರವೇ ಇರುತ್ತದೆ, ಪ್ರಾಸವಿರುವುದಿಲ್ಲ.

ಸಮಾ, ಸ್ರೋತೋವಹಾ, ಗೋಪುಚ್ಛಾ ಯತಿಗಳನ್ನು ಬೇರೆ ಬೇರೆಯಾಗಿ ಪ್ರಯೋಗಿಸುವುದರಿಂದ ರಮಣೀ, ಚಂದ್ರಿಕಾ, ಲಕ್ಷ್ಮೀ, ಪದ್ಮಿನೀ, ರಂಜನೀ, ಮಾಲತೀ ಮತ್ತು ಮೋಹಿನೀ ಎಂಬ ಬೇರೆ ಏಳು ವರ್ಣೈಲಾಗಳೂ ಇವೆ. ಆದರೆ ಇವುಗಳಲ್ಲಿನ ಪರಸ್ಪರ ವ್ಯತ್ಯಾಸಗಳು ಕೇವಲ ಸೂಕ್ಷ್ಮವಾದುದರಿಂದಲೂ, ಇವು ರೂಢಿಯಲ್ಲಿ ಅಪರೂಪವಾದುದರಿಂದಲೂ ನಂತರದ ಲಾಕ್ಷಣಿಕರು ವರ್ಣಿಸದೆ ಕೈಬಿಟ್ಟರು.

ಏಳೆಗಳ ಒಟ್ಟು ಸಂಖ್ಯೆ 356 : ಕಲ್ಲಿನಾಥನ ಪ್ರಕಾರ ಶುದ್ಧೈಲಾಗಳು 4, ವಿಕೃತೈಲಾಗಳು 108, ಮಾತ್ರೈಲಾಗಳು 20, ವರ್ಣೈಲಾಗಳು 24, ಕರ್ನಾಟೈಲಾ ಗಳು, 40 ಲಾಟೈಲಾಗಳು 40, ಆಂಧ್ರೈಲಾಗಳು 40, ದ್ರಾವಿಡೈಲಾಗಳು 40, ಗೌಡೈಲಾಗಳು 40 ; ಸಿಂಹಭೂಪಾಲನ ಪ್ರಕಾರ ಶುದ್ಧೈಲಾಗಳು 4, ವಿಕೃತೈಲಾಗಳು 108,ಮಾತ್ರೈಲಾಗಳು 20, ವರ್ಣೈಲಾಗಳು 24, ವರ್ಣಮಾತ್ರೈಲಾಗಳು 12, ಕರ್ನಾಟೈಲಾಗಳು 6, ಲಾಟೈಲಾ 1, ಆಂಧ್ರೈಲಾ 1, ಗೌಡೈಲಾ 1, ದ್ರಾವಿಡೈಲಾ 1 ಹೀಗೆ 178. ಇವುಗಳಲ್ಲಿ ಪ್ರತಿಯೊಂದಕ್ಕೂ ಪರಸ್ಪರವಾದ ಒಂದು ಛಂದಸ್ವತೀ, ಆದುದರಿಂದ ಒಟ್ಟು 356. ಇಬ್ಬರೂ ಶಾರ್ಙ್ಗದೇವನನ್ನು ಭಿನ್ನವಾಗಿ ಓದಿಕೊಂಡು ವ್ಯಾಖ್ಯಾನಿಸಿರುವುದರಿಂದ ಈ ಗಣನಾಭೇದವು ಉಂಟಾಗಿದೆ.

ಇನ್ನು ಉಳಿದ ಛಂದೋನಿರ್ಯುಕ್ತ ಪ್ರಬಂಧಗಳನ್ನು ಸಂಕ್ಷೇಪವಾಗಿ ಪರಿಶೀಲಿಸ ಬಹುದು. ಇವುಗಳಲ್ಲಿ ಬಹುಪಾಲು ಆಯಾ ಛಂದೋವೃತ್ತದಿಂದ ತಮ್ಮ ಹೆಸರನ್ನು ಪಡೆದಿವೆ.

2. ಢೆಂಕಿ ಪ್ರಬಂಧದಲ್ಲಿ ಛಂದೋವೃತ್ತವಿಲ್ಲದಿರುವ ಮುಕ್ತಾವಲಿ, ಒಂದು ಛಂದೋವೃತ್ತವಿರುವ ವೃತ್ತಬಂಧಿನೀ, ಎರಡಿರುವ ಯುಗ್ಮಿನೀ, ಅನೇಕ ವೃತ್ತಗಳಿರುವ ವೃತ್ತಮಾಲಾ ಎಂಬ ಭೇದಗಳಿವೆ. ಕಡೆಯ ಮೂರರಲ್ಲಿ ಪ್ರತಿಯೊಂದರಲ್ಲಿಯೂ ವರ್ಣ ವೃತ್ತಗಳಿಂದಾದ ವರ್ಣಿಕಾ, ಮಾತ್ರಾವೃತ್ತಗಳಿಂದಾದ ಮಾತ್ರಿಕಾ, ಗಣಗಳಿಂದಾದ ಗಣಿಕಾ ಎಂಬ ಮೂರು ಮೂರು ಪ್ರಭೇದಗಳಿವೆ. ಇದನ್ನು ತಾಲನಿರ್ಯುಕ್ತಿಯಲ್ಲೂ ತಾಲವಿಲ್ಲದೆಯೂ ಹಾಡಬಹುದು.

3. ಝೊಂಬಡ ಪ್ರಬಂಧವು ಗದ್ಯಜ, ಪದ್ಯಜವೆಂದು ಎರಡು ಬಗೆ. ಎರಡನೆ ಯದರಲ್ಲಿ, ಗಣನಿಯಮವಿದ್ದು ಪ್ರತಿಪಾದದಲ್ಲಿಯೂ ಕ್ರಮವಾಗಿ 4, 5, 6, 7, 8 ಗಣಗಳಿರುವ ಮಾತೃಕ, ಶ್ರೀಪತಿ, ಸೋಮ, ರುಚಿರ ಮತ್ತು ಸಂಗತ ಎಂಬ ಝೊಂಬಡ ಪ್ರಭೇದಗಳಿದ್ದವು. ಆದರೆ ಇವು ಅಪ್ರಸಿದ್ಧಗಳಾಗಿದ್ದವು. ಇದಕ್ಕೆ ತಾಲನಿಯಮವು ಇತ್ತು.

4. ರಾಸಕಪ್ರಬಂಧವನ್ನು ರಾಸತಾಲದಲ್ಲಿ ಹಾಡಬೇಕಾಗಿತ್ತು ; ರಾಸವೆಂಬ ಅಪಭ್ರಂಶ ವೃತ್ತಗಳೂ ಉಂಟಷ್ಟೆ. ರಾಸವಲಯವೆಂಬ ರಾಸಕವು ಗಣಗಳಿಂದಲೂ ಹಂಸತಿಲಕವು ವರ್ಣಗಳಿಂದಲೂ (ಆರು ಅಕ್ಷರಗಳಿಂದ ಮೂವತ್ತರವರೆಗೆ ಪಾದಗಳು ಏರ್ಪಡುವ 25 ಭೇದಗಳು), ರತಿರಂಗವು ಮಾತ್ರೆಗಳಿಂದಲೂ (ಪಾದಕ್ಕೆ 8 ಮಾತ್ರೆ ಗಳಿಂದ 60 ರವರೆಗೆ ಇರುತ್ತಿದ್ದ 53 ಭೇದಗಳು), ಮದನಾವತಾರ ರಾಸಕವು ಛಪಚತದ ಎಂಬ ಪ್ರಾಕೃತಗಣಗಳಿಂದಲೂ ಏರ್ಪಡುತ್ತಿದ್ದವು. ಆದರೆ ಇವೂ ಪ್ರಸಿದ್ಧ ವಿಧುರಗಳೇ ಆಗಿದ್ದವು.

5. ಕಂದವು ಆರ್ಯಾಗೀತಿ ಛಂದಸ್ಸಿನಲ್ಲಿ ರಚಿತವಾಗಿದೆ (ಸ್ಕಂಧಕ) : ಆರ್ಯಾದ ಎರಡು ಅರ್ಧಗಳಲ್ಲಿಯೂ ಎಂಟೆಂಟು ಚತುರ್ಮಾತ್ರಾ ಗಣಗಳಿದ್ದರೆ ಆರ್ಯಾಗೀತಿ ಯಾಗುತ್ತದೆ. ಅದರಲ್ಲಿ ಮೂವತ್ತು ಗುರುಗಳಿಂದ ಎರಡು ಗುರುಗಳವರೆಗೆ ಒಂದೊಂದ ನ್ನಾಗಿ ಭಂಗಗೊಳಿಸಿ (ಎರಡು ಲಘುಗಳನ್ನು ಪಡೆದರೆ) ಕ್ರಮವಾಗಿ ಬರುವ 1) ಪವನ (30 ನೆಯ ಗುರುವಿನ ಭಂಗ) 2. ರವಿ (29) 3. ಧನದ (28) 4. ಹವ್ಯವಾಹನ (27) 5. ಸುರನಾಥ (26) 6. ಸಮುದ್ರ (25) 7. ವರುಣ (24) 8. ಶಶಿ (23) 9. ಶೈಲ (22) 10. ಮಧು (21) 11. ಮಾಧವ (20) 12. ಮಕರಧ್ವಜ (19) 13. ಜಯಂತ (18) 14. ಮಧುಪ (17) 15. ಶುಕ (16) 16. ಸಾರಸ (15) 17. ಕೇಕಿ (14) 18. ಹರಿ (13) 19. ಹರಿಣಿ (12) 20. ಹಸ್ತೀ (11)

21. ಕಾದಂಬ (10) 22. ಕೂರ್ಮ (9) 23. ನಯ (8) 24. ವಿನಯ (7) 25. ವಿಕ್ರಮ (6) 26. ಉತ್ಸಾಹ (5) 27. ಧರ್ಮ (4) 28. ಅರ್ಥ (3) 29. ಕಾಮ (2) ಎಂಬ 29 ಭೇದಗಳಿವೆ.

6. ಹಯಲೀಲಾ ಪ್ರಬಂಧವು ಗದ್ಯಜಾ, ಪದ್ಯಜಾ ಎಂದು ಎರಡು ವಿಧ, ಹಯಲೀಲಾ ತಾಳದಲ್ಲಿ ನಿರ್ಯುಕ್ತ. ಸಾಮಾನ್ಯವಾಗಿ ಆರ್ಯಾ ಛಂದಸ್ಸಿನಲ್ಲಿಯೂ ('ಲಕ್ಷ್ಮೈತತ್ ಸಪ್ತಗಣಾ ಗೋಪೇತಾ ಭವತಿ ನೇಹ ವಿಷಮೇ ಜಃ । ಷಷ್ಠೋಽಯಂ ಲಘುಂ ವಾ ಪ್ರಥಮಾರ್ಧೇ ನಿಯತಮಾರ್ಯಾಯಾಃ।') ಮತಾಂತರದಲ್ಲಿ ಅಶ್ವಲಲಿತ (=ಹಯ ಲೀಲಾ) ಛಂದಸ್ಸಿನಲ್ಲಿಯೂ (ನ್‌ಜೌ ಭ್‌ಜೌ ಭಜೌ ಭ್‌ಲೌ ಗ್ರುದ್ರಾದಿತ್ಯಃ) ರಚಿತವಾಗುತ್ತದೆ, ಪದ್ಯಜಾ ಹಯಲೀಲಾ.

7. ದ್ವಿಪದೀ ಪ್ರಬಂಧವು ಶುದ್ಧಾ, ಖಂಡಾ, ಮಾತ್ರಾದಿ ಮತ್ತು ಸಂಪೂರ್ಣಾ ಎಂದು ನಾಲ್ಕು ವಿಧ ; ಕರುಣಾತಾಲದಲ್ಲಿ ಹಾಡತಕ್ಕದ್ದು. ಇವಕ್ಕೆಲ್ಲ ಪ್ರಕೃತಿಯು ಛಗಣ, 5ತಗಣ/5ಭಗಣ, ಗುರು ಎಂಬ ವಿನ್ಯಾಸವುಳ್ಳ ಪಾದ. ಇವುಗಳ ಪೈಕಿ ಶುದ್ಧಾ ದ್ವಿಪದಿಯು ಛ5ಭ (5ತ) ಗ ಎಂಬ ಪಾದರಚನೆಯುನ್ನು ಹೊಂದಿದೆ ; ಸಿಂಹ ಭೂಪಾಲನು ಛಜ 5 ಭಜಗ ಎಂಬ ಲಕ್ಷಣವನ್ನು ಹೇಳುತ್ತಾನೆ. ಖಂಡಾದಲ್ಲಿ ಮೇಲೆ ಹೇಳಿದ ಲಕ್ಷಣವುಳ್ಳ ಪಾದಗಳು ಎರಡೇ ಇರುತ್ತವೆ (ನಾಲ್ಕಲ್ಲ). ಮಾತ್ರಾದ್ವಿಪದಿಯಲ್ಲಿ ಆರನೆಯ ಸ್ಥಾನದಲ್ಲಿ ಜಗಣದ ಬದಲು ಗುರುವು ಮಾತ್ರ ಇರುತ್ತದೆ. ಸಂಪೂರ್ಣಾದಲ್ಲಿ ಶುದ್ಧಾದ್ವಿಪದಿಯ ಪಾದಾಂತ್ಯದಲ್ಲಿ ಒಂದು ಗುರುವು ಹೆಚ್ಚಾಗಿ ಇರುತ್ತದೆ. ಇವಲ್ಲದೆ. ಬೇರೆ ನಾಲ್ಕು ದ್ವಿಪದೀ ಪ್ರಭೇದಗಳನ್ನೂ ಶಾರ್ಙ್ಗದೇವನು ಲಕ್ಷಿಸುತ್ತಾನೆ : ಮಾನವೀ ದ್ವಿಪದಿಯ ಪ್ರತಿಯೊಂದು ಪಾದದಲ್ಲಿಯೂ ಒಂದು ಛಗಣವೂ ಎರಡು ತಗಣಗಳೂ ಇರುತ್ತವೆ. ಚಂದ್ರಿಕಾದ ಪ್ರತಿಯೊಂದು ಪಾದದಲ್ಲಿಯೂ ಎರಡು ಪಗಣಗಳು ಒಂದು ತಗಣ, ಲಘು, ಗುರು ಇರುತ್ತವೆ. ಧೃತಿಯ ಪ್ರತಿಯೊಂದು ಪಾದದಲ್ಲಿಯೂ ಒಂದು ಛಗಣ, ನಾಲ್ಕು ಚತುರ್ಮಾತ್ರಾ ಗಣಗಳು ಇರುತ್ತವೆ. ತಾರಾದ್ವಿಪದಿಯ ಪ್ರತಿಯೊಂದು ಪಾದದಲ್ಲಿಯೂ ಒಂದು ಛಗಣ, ನಾಲ್ಕು ಯಗಣ, ಒಂದು ಗುರು ಇರುತ್ತವೆ.

8. ಚಕ್ರವಾಲ ಪ್ರಬಂಧವು ಚಕ್ರವಾಲಯಮಕದಲ್ಲಿ ರಚಿತವಾಗಿರುತ್ತದೆ. ಅದು ಗದ್ಯ ಪದ್ಯವೆಂದು ಎರಡು ಬಗೆ.

9. ಕ್ರೌಂಚಪದ ಪ್ರಬಂಧವು ಸ್ವನಾಮಕ ಛಂದಸ್ಸಿನಲ್ಲಿ ('ಭ್ಮೌ ಸ್ಭೌ ನೌ ನೌ ಗ್ಯೌತೇಂದ್ರಿಯ ವಸ್ವೃಷಯಃ') ಪ್ರತಿ ತಾಲದಲ್ಲಿ, ಅಥವಾ ಒಮ್ಮೊಮ್ಮೆ ಛಂದಸ್ಸಿಲ್ಲದೆಯೋ ರಚಿತವಾಗುತ್ತದೆ.

10. ಆರ್ಯಾ ಪ್ರಬಂಧವು ಆರ್ಯಾ ಛಂದಸ್ಸಿನಲ್ಲಿ ('ಸ್ವರಾ ಅರ್ಧಂ ಚಾರ್ಯಾರ್ಧಂ, ಅತ್ರಾಯುಜ್ ನ ಜ್, ಷಷ್ಠೋಜ್ ನ್ಲೌವ್, ನ್ಲೌಚೇತ್ ಪದಂ ದ್ವಿತೀಯಾದಿ, ಸಪ್ತಮಂ ಪ್ರಥಮಾದಿ, ಅಂತ್ಯೇ ಪಂಚಮಃ, ಷಷ್ಠಶ್ಚಲ್.'), ತಾಲನಿಬದ್ಧವಾಗಿ,

ಇರುತ್ತದೆ. ಛಂದಃಶಾಸ್ತ್ರದಲ್ಲಿ ಹೇಳುವ ಪಥ್ಯಾದಿ 14 ಭೇದಗಳಲ್ಲದೆ, ವೃತ್ತದಲ್ಲಿರುವ 26 ಗುರುಗಳಲ್ಲಿ ಒಂದೊಂದನ್ನಾಗಿ ಭಂಗಗೊಳಿಸಿ ಲಘುಗಳನ್ನಾಗಿ ಮಾಡುವ 26 ಭೇದಗಳನ್ನು ಸಂಗೀತ ಶಾಸ್ತ್ರವು ಗುರುತಿಸುತ್ತದೆ : 1. ಲಕ್ಷ್ಮೀ (1) 2. ವೃದ್ಧಿ (2) 3. ಬುದ್ಧಿ (3) 4. ಲೀಲಾ (4) 5. ಲಜ್ಜಾ (5) 6. ಕ್ಷಮಾ (6) 7. ದೀರ್ಘಾ (7) 8. ಗೌರೀ (8) 9. ರಾಜೀ (9) 10. ಜ್ಯೋತ್ಸ್ನಾ (10) 11. ಛಾಯಾ (11) 12. ಕಾಂತೀ (12) 13. ಮಹೀ (13) 14. ಮತಿ (14) 15. ಕೀರ್ತಿ (15) 16. ಮನೋರಮಾ (16) 17. ರೋಹಿಣೀ (17) 18. ವಿಶಾಲಾ (18) 19. ವಸುಧಾ (19) 20. ಶಿವಾ (20) 21. ಹರಿಣೀ (21) 22. ಚಕ್ರಾ (22) 23. ಸಾರಸೀ (23) 24. ಕುರರೀ (24) 25. ಹಂಸೀ (25) 26. ವಧೂ (26) ಕಂಸಗಳಲ್ಲಿರುವ ಸಂಖ್ಯೆಯು ಎಷ್ಟೋ ಅಷ್ಟನೆಯ ಗುರುವು ಭಂಗವಾಗುತ್ತದೆ.

'ಛಂದೋ ಲಕ್ಷಣತೋ ಜ್ಞೇಯಾಃ ಶೇಷಾ ಭೂರಿತರಾ ಭಿದಾಃ' ಎಂದು ಆರ್ಯೆಯ ವಿಷಯದಲ್ಲಿ ಶಾರ್ಙ್ಗದೇವನು ಹೇಳಿರುವುದನ್ನಿಲ್ಲಿ ಸ್ಮರಿಸಬಹುದು (ಸಂಗೀತ ರತ್ನಾಕರ, 4–231)

11. ಗಾಥಾಪ್ರಬಂಧವು ಆರ್ಯಾ ಪ್ರಬಂಧದಂತೆಯೇ ಆದರೆ ಪ್ರಾಕೃತದಲ್ಲಿ ರಚಿತವಾಗಿರುತ್ತದೆ. ನಂದಿತಾಢ್ಯನು ಗಾಥಾ ಲಕ್ಷಣದಲ್ಲಿ ಹೇಳಿರುವ ಅನೇಕ ಗಾಥಾ ಪ್ರಭೇದಗಳನ್ನು ಸಂಗೀತಶಾಸ್ತ್ರವು ಲಕ್ಷಿಸಿಲ್ಲ.

12. ದ್ವಿಪಥ ಪ್ರಬಂಧವು ದೋಧಕ ವೃತ್ತದಲ್ಲಿ ('ದೋಧಕಂ ಭೌ ಭಗೌ ಗಿಶಿ.) (=ದ್ವಿಪಥ ವೃತ್ತದಲ್ಲಿ) ರಚಿತವಾಗುತ್ತದೆ. ತಾಲ ಸಹಿತ ಅಥವಾ ತಾಲ ರಹಿತ ಪ್ರಾಕೃತ ಭಾಷೆಯಲ್ಲಿ ನಿರ್ಮಿತವಾದ ಈ ವೃತ್ತವು ದೋಹಾ ಎಂಬ ಹೆಸರಿನಿಂದ, ಹಲವು ಪ್ರಭೇದಗಳಲ್ಲಿ ಪ್ರಸಿದ್ಧವಾಗಿದೆ. ಸಮ ಪಾದಗಳಲ್ಲಿ ಮತ್ತು ವಿಷಮ ಪಾದಗಳಲ್ಲಿ ಬರುವ ಮಾತ್ರಾ ಸಂಖ್ಯೆಯಿಂದ ಈ ಪ್ರಭೇದಗಳು ಏರ್ಪಟ್ಟಿವೆ. ಸಂಗೀತಶಾಸ್ತ್ರವು ಇಂತಹ ಒಂಬತ್ತನ್ನು ಲಕ್ಷಿಸುತ್ತದೆ. (ಮೊದಲನೆಯ ಸಂಖ್ಯೆ ವಿಷಮ ಪಾದಗಳಲ್ಲಿ ಮಾತ್ರಾ ಸಂಖ್ಯೆಯನ್ನೂ ಎರಡನೆಯದು ಸಮ ಪಾದಗಳ ಎಂದರೆ ಎರಡನೆಯ ಮತ್ತು ನಾಲ್ಕನೆಯ ಪಾದಗಳಲ್ಲಿರುವ ಮಾತ್ರಾ ಸಂಖ್ಯೆಯನ್ನು ನಿರ್ದೇಶಿಸುತ್ತದೆ) : 1. ಸಾರಸ 13–12 2. ಭ್ರಮರ 14–12 3. ಹಂಸ 15–13 4. ಕುರರ 13–14 5. ಚಂದ್ರಲೇಖಾ 15–12 6. ಕುಂಜರ 13–15 7. ತಿಲಕ 15–14 8. ಹಂಸಕ್ರೀಡಾ 13–16 9. ಶಿಖಾದ್ವಿಪಥ ಅಥವಾ ಮಯೂರ : ಮೇಲೆ ಹೇಳಿದ ದ್ವಿಪಥ / ದೋಹಾಗಳ ಅರ್ಧದ ಅಥವಾ ಪೂರ್ತಿಯ ಕೊನೆಯಲ್ಲಿ 5, 6 ಅಥವಾ 7 ಲಘುಗಳ ಒಂದು ಪದ (ಶಿಖಾ)ವನ್ನು ನಿರ್ಮಿಸುವುದು.

13. ಕಲಹಂಸ ಪ್ರಬಂಧವು ಸ್ವನಾಮಕ (? ಹಂಸಕ) ಛಂದಸ್ಸಿನಲ್ಲಿ ಝಂಪಾ ತಾಲದಲ್ಲಿ ನಿರ್ಮಿತವಾಗುತ್ತದೆ. ಹಂಸಾಖ್ಯ, ಹಂಸಾಸ್ಯ ಎಂಬ ನಾಮಾಂತರಗಳಿರುವ ಈ ವೃತ್ತಕ್ಕೆ 'ನಭಜಯ' ಎಂಬ, 12 ಅಕ್ಷರಗಳ ಪಾದದಲ್ಲಿ 2,4,6,7,10,12ರಲ್ಲಿ ಗುರುಗಳೆಂಬ ಅಥವಾ 3,4,6,7,10,12, ರಲ್ಲಿ ಗುರುಗಳೆಂಬ ಲಕ್ಷಣಾಂತರವು ದೊರೆಯುತ್ತದೆ. ಇದು ಗದ್ಯ, ಪದ್ಯ ಎಂದು ಎರಡು ವಿಧ.

14. ತೋಟಕವು ತೋಟಕ ಛಂದಸ್ಸಿನಲ್ಲಿ ('ಸಸಸಸ') ರಚಿತವಾಗುತ್ತದೆ.

15. ಧಟ (ಘಟ)ವೂ ಛಂದೋನಿರ್ಯುಕ್ತ ಪ್ರಬಂಧವೇ ; ಅದರ ಪಾದವು ದ್ವಿಪದಿಯ ಪಾದದ ಅರ್ಧದಷ್ಟಿರುತ್ತದೆ.

16. ವೃತ್ತ ಪ್ರಬಂಧವು ವೃತ್ತವೆಂದು ಹೆಸರುಳ್ಳ (ಹತ್ತು ಗುರು ಲಘು ಘಟಕಗಳಿಂದ ಪಾದವು ಏರ್ಪಡುವ) ವಿಶೇಷ ಛಂದೋವೃತ್ತದಲ್ಲಿ ರಚಿತವಾಗುತ್ತದೆ. ಯಾವುದಾದರೂ ತಾಲದಲ್ಲಿ ಹಾಡಬಹುದು. ವೃತ್ತವನ್ನು ಕೇದಾರಭಟ್ಟನು 'ನನಸಗಗು ರಚಿತಾ ವೃತ್ತಾ' ಎಂಬ ಲಕ್ಷಣಾಂತರದೊಡನೆ (3, 12) ಲಕ್ಷಿಸುತ್ತಾನೆ. ಸೋಮೇಶ್ವರನು ಮಾನಸೋಲ್ಲಾಸದಲ್ಲಿ (4, 16. 244, 245) 'ರಜರಜರಜಗಲ' ವೆಂಬ ಬೇರೆ ಲಕ್ಷಣವನ್ನು ಹೇಳುತ್ತಾನೆ. ಇದರಲ್ಲಿ ಬಹುವಾದ ಇತರ ಭೇದಗಳನ್ನು ಛಂದೋವಿಚಿತಿಯಲ್ಲಿ ಕೊಡಲಾಗಿದೆಯೆಂದು ಶಾರ್ಙ್ಗದೇವನು (4. 248) ಸೂಚಿಸುತ್ತಾನೆ.

17. ರಾಗಕದಂಬ ಪ್ರಬಂಧದಲ್ಲಿ 4 ರಾಗ-4 (ಅಥವಾ ಒಂದು) ತಾಲ 4 ವೃತ್ತಗಳಿಂದ ನಿರ್ಮಿತವಾದ ನಂದ್ಯಾವರ್ತ, ಉತ್ತರೋತ್ತರವಾಗಿ ಇವುಗಳ ಎರಡರಷ್ಟು ರಾಗ-ತಾಲ-ವೃತ್ತಗಳಿರುವ ಸ್ವಸ್ತಿಕ, ಅಬ್ಜಪತ್ರ, ಅಬ್ಜಗರ್ಭ, ಭ್ರಮರ ಮತ್ತು ಆಮ್ರೇಡಿತಗಳೆಂಬ ಭೇದಗಳಿವೆ. ರಾಗಗಳನ್ನು ಪ್ರತಿಯೊಂದು ವೃತ್ತಕ್ಕೆ ಒಂದರಂತೆಯೋ ಅಥವಾ ಅದರ ಪ್ರತಿಯೊಂದು ಪಾದಕ್ಕೆ ಬೇರೆ ಬೇರೆಯಾಗಿಯೋ ಸಂಯೋಜಿಸಬಹುದು ಸಿಂಹಭೂಪಾಲನಂತೆ ಅಬ್ಜಗರ್ಭವು ಅಬ್ಜಪತ್ರದಲ್ಲಿ ಅಂತರ್ಭಾವಗೊಳ್ಳುತ್ತದೆ. ಕಲ್ಲಿನಾಥನಂತೆ ಮೇಲೆ ಹೇಳಿದ ಲಕ್ಷಣಗಳಿಂದ ನಿರ್ದಿಷ್ಟವಾದ ಸ್ವಸ್ತಿಕವೇ ಅಬ್ಜಗರ್ಭ ಎಂಬ ಮತಾಂತರವಿದೆ.

18. ತ್ರಿಪದೀ ಪ್ರಬಂಧದಲ್ಲಿ 2, 2, 4, 3 ಗಣಗಳಿರುವ ನಾಲ್ಕು ಪಾದ ಗಳಿರುತ್ತವೆ. ಇವುಗಳಲ್ಲಿ ಕಾಮ ಕಾಮ।ಕಾಮ ಕಾಮ। ಕಾಮ ರತಿ। ಕಾಮ ಕಾಮ ಕಾಮ ರತಿ ಕಾಮ। ಎಂಬ ಗಣ ವಿನ್ಯಾಸವಿರುತ್ತದೆ. ಮೊದಲನೆಯ ಎರಡು ಪಾದ ಗಳನ್ನೂ ಸ್ವಲ್ಪ ಶೇಷವನ್ನು ಬಿಟ್ಟು ಮೂರನೆಯದನ್ನೂ ಮೊದಲು ಹಾಡಿ, ಆಮೇಲೆ ಮೂರನೆಯದನ್ನು ಪೂರ್ತಿ ಹಾಡಿ ಕೊನೆಯಲ್ಲಿ ನಾಲ್ಕನೆಯ ಪಾದವನ್ನು ಹಾಡುವುದು ಇದರ ಕ್ರಮ. ಇಂದಿಗೂ ಈ ಕ್ರಮವು ಉಳಿದು ಕೊಂಡಿದೆಯಷ್ಟೇ. ಇದು ಕನ್ನಡ ಭಾಷೆಯ ಪ್ರಬಂಧ, ತಾಲಹೀನ,

19. ಚತುಷ್ಪದೀ ಪ್ರಬಂಧವು 15–16–15–16 ಎಂಬ ಮಾತ್ರಾವಿನ್ಯಾಸವುಳ್ಳ ವೃತ್ತದಿಂದಾಗಿದೆ. ಪಾದಕ್ಕೆ 16, 21, 24 ಮಾತ್ರೆಗಳು (ಸೋಮೇಶ್ವರ, 4,16 283,) 7–8–7–8 (ಜಗದೇಕ ಮಲ್ಲ) ಎಂಬ ಮತಾಂತರಗಳಲ್ಲಿಯೂ, ನ್ಯೂನಾಧಿಕವಾಗಿ ಹದಿನೆಂಟು ಮಾತ್ರೆಗಳ ಪಾದಗಳು ಎಂಬ ಲಕ್ಷ್ಯಗಳಲ್ಲಿಯೂ ಅದು ಕಂಡು ಬರುತ್ತದೆ. ಎರಡು ಅರ್ಧಗಳಲ್ಲಿ ಭಿನ್ನ ಯಮಕಗಳುಂಟು. ಇದೂ ಕನ್ನಡದ ಪ್ರಬಂಧ.

20. ಷಟ್ಪದಿಯೂ ಕನ್ನಡದ ಪ್ರಬಂಧವೇ. ಇದರ ಆರು ಪಾದಗಳ ಪೈಕಿ 3,6ರಲ್ಲಿ ಮೂರು ಮೂರು ಗಣಗಳೂ ಉಳಿದವುಗಳಲ್ಲಿ ಎರಡೆರಡು ಗಣಗಳೂ ಇರುತ್ತವೆ. ಪಾದದಲ್ಲಿ ಎಂಟು ಮಾತ್ರೆಗಳಿರುವ ಶರಷಟ್ಪದಿಯ 1,2,4,6 ನೆಯ ಪಾದಗಳಲ್ಲಿ ಎರಡೆರಡು ಮಾತ್ರೆಗಳನ್ನು ಉತ್ತರೋತ್ತರವಾಗಿ ಹೆಚ್ಚಿಸಿದರೆ (18 ಮಾತ್ರಾ ಪ್ರಮಾಣವನ್ನು ಬಿಟ್ಟು), 3–6ನೆಯವುಗಳನ್ನು ಇದರ ಅರ್ಧದಷ್ಟು ಹೆಚ್ಚಿಸಿದರೆ, ಕ್ರಮವಾಗಿ ಕುಸುಮ ಭೋಗ, ಭಾಮಿನಿ, ಪರಿವರ್ಧಿನಿ ಮತ್ತು ವಾರ್ಧಕ ಷಟ್ಪದಿಗಳು ಜನಿಸುತ್ತವೆ. ಇವಲ್ಲದೆ ಛಂದಃ ಶಾಸ್ತ್ರದಲ್ಲಿ ತ್ರಿಪದಿ, ಚತುಷ್ಪದೀ ಮತ್ತು ಷಟ್ಪದಿಗಳ ಬಹು ಭೇದಗಳನ್ನು ವರ್ಣಿಸಿದೆ. ('ಭೇದಾ ವೇದ್ಯಾಸ್ತ್ರಿಪದ್ಯಾದೇಶ್ಛಂದೋಲಕ್ಷ್ಮಣಿ ಭೂಹುಃ ಸಂಗೀತ ರತ್ನಾಕರ, 4. 274) ಎಂದು ಶಾರ್ಙ್ಗದೇವನು ಹೇಳುತ್ತಾನೆ. ಅವನು ಲಕ್ಷಿಸುವ ಷಟ್ಪದಿಯ 3–6ನೆಯ ಪಾದಗಳ ಕೊನೆಯಲ್ಲಿ ಬಾಣಗಣವೂ ಉಳಿದ ಎಲ್ಲೆಡೆಗಳಲ್ಲಿ ಕಾಮಗಣಗಳೂ ಇರುತ್ತವೆ.

21. ವಸ್ತುಪ್ರಬಂಧದಲ್ಲಿ ಮೂರು ಭಾಗಗಳಿರುತ್ತವೆ, ಅದರ ಉದ್ಗ್ರಾಹದಲ್ಲಿ 15–12–15–12–15 ಮಾತ್ರೆಗಳಿರುವ 5 ಪಾದಗಳು ; ಧ್ರುವದಲ್ಲಿ ದೋಧಕ ವೃತ್ತದಿಂದ ('ಭೌ ಭ ಗೌ ಗಿ ತಿ') ಆದ ರಚನೆಯೂ ಆಭೋಗದಲ್ಲಿ ಬಿಡಿಯಾದ ಪದಗಳೂ ಇರುತ್ತವೆ.

22. ದಂಡಕ ಪ್ರಬಂಧವು ಸ್ವನಾಮಕ ಛಂದೋವೃತ್ತದಲ್ಲಿ ರಚಿತವಾಗುತ್ತದೆ. ದಂಡಕ ವೃತ್ತವು ಎರಡು ಬಗೆ. ಪ್ರತಿಯೊಂದು ಪಾದದಲ್ಲಿಯೂ ಎರಡು ನಗಣಗಳ ನಂತರ 7 ರಗಣಗಳಿರುವುದು ಪ್ರಕೃತಿ : ಇದಕ್ಕೆ ಚಂಡವೃಷ್ಟಿ ಪ್ರಯಾತವೆಂದು ಹೆಸರು. ಮೊದಲಿನ ಎರಡು ನಗಣಗಳ ಬದಲು 5, 7, 4, ಅಥವಾ 3 ಲಘ್ವಕ್ಷರಗಳಿದ್ದರೆ ಅಂತಹ ದಂಡಕಗಳಿಗೆ ಚಂಡ, ವಾತ, ಅಬ್ಧಿ ಅಥವಾ ಸಿಂಹವೆಂದು ಕ್ರಮವಾಗಿ ಹೆಸರು. ಏಳು ರಗಣಗಳ ಬದಲು 8, 9, 10, 11, 12, 13, 14 ರಗಣಗಳಿದ್ದರೆ ಅರ್ಣ, ಅರ್ಣವ, ವ್ಯಾಲ, ಜೀಮೂತ, ಲೀಲಾಕರ, ಉದ್ದಾಮ ಶಂಖ ಎಂಬ ಹೆಸರುಗಳು ಕ್ರಮವಾಗಿ ಬರುತ್ತವೆ, 15 ಅಥವಾ 16 ರಗಣಗಳಿದ್ದರೆ ಸಮುದ್ರ ಅಥವಾ ಭುಜಂಗವೆಂದು ಹೆಸರು. ದಂಡಕದಲ್ಲಿ ಬಹುವಾದ ಇತರ ಭೇದಗಳಿವೆ ; ಯಾವುದೇ ಸಂಖ್ಯೆಯ ಲಗ–ಯುಗ್ಮಗಳು (ಅನಂಗಶೇಖರ), ಗಲ–ಯುಗ್ಮಗಳು (ಅಶೋಕಪುಷ್ಪಮಂಜರೀ) 2ನಗಣ + ಪಂಚಮಾತ್ರಾಗಣಗಳು (ಉತ್ಕಲಿಕಾ), ನಗ + 13ರಗಣ (ಕಂಕೆಲ್ಲಿ),

ತಗಣಗಳು + ಗಗ (ಕಾಮಬಾಣ), ಸಗಣಗಳು (ಕುಸುಮಾಸ್ತರಣ), ನಗ + 12ರಗಣ (ಕೇಲಿ), 6ಲ + ಯಗಣಗಳು (ಚಂಡವೇಗ), 6ಲ + 11ರಗಣ (ಜೀಮೂತ), 6ಲ + 7ಯಗಣ (ಪ್ರಚಿತ), ಭಗಣಗಳು + ಗಗ (ಭುಜಂಗವಿಲಾಸ), ಬರಿಯ ರಗಣಗಳು (ಮತ್ತಮಾತಂಗ), ನಗ + ರಗಣಗಳು (ಮಾಲತೀ) ಇತ್ಯಾದಿ. ಜಗದೇಕ ಮಲ್ಲನು ಮತ್ತಮಾತಂಗ, ಲೀಲಾಕರ, ಸಿಂಹವಿಕ್ರಾಂತ, ಸಿಂಹವಿಕ್ರೀಡ, ಅನಂಗಶೇಖರ, ಪುಷ್ಪ ಮಂಜರೀ, ಕುಸುಮಾಸ್ತರಣ, ಉತ್ಸವ, ವಿಲಾಸ, ಮೃಗಾಂಕ, ಭುಜಂಗವಿಲಾಸ. ಚಿತ್ರ, ಚಿತ್ರಮಾಲಾ ಮುಂತಾದ ದಂಡಕಪ್ರಭೇದಗಳನ್ನು ಗಣ–ಮಾತ್ರಾ–ಉಭಯ–ವೃತ್ತ ಎಂಬ ಶಿರ್ಷಿಕೆಗಳಲ್ಲಿ ವರ್ಗಿಕರಿಸುತ್ತಾನೆ. ನಾಗವರ್ಮನು 2 ಗಣಗಳನಂತರ ರಗಣ ಗಳನ್ನು ಏಕೋತ್ತರ ಕ್ರಮದಿಂದ 999ರವರೆಗೆ ಹೆಚ್ಚಿಸಬಹುದೆನ್ನುತ್ತಾನೆ. ಇದನ್ನೆಲ್ಲ ಒಳಗೊಳ್ಳುವಂತೆ ಶಾರ್ಙ್ಗದೇವನು 'ತಸ್ಯ ಭೂರಿತರಾ ಭೇದಶ್ಛಂದೋಲಕ್ಷ್ಮಣಿ ಭಾಷಿತಾಃ' ಎನ್ನುತ್ತಾನೆ(4,281).

23. ಝಂಪಟ ಪ್ರಬಂಧವು ಸ್ವನಾಮಕಛಂದೋವೃತ್ತದಲ್ಲಿ ರಚಿತವಾಗುತ್ತದೆ. ಈ ಪ್ರಾಕೃತ ವೃತ್ತದಲ್ಲಿ ವಿವಿಧ ಸಂಖ್ಯೆಯ ಅಕ್ಷರಗಳಿರುವ ಮೂರು ಪಾದಗಳಿರುತ್ತವೆ. ಇದು ಗಾಥೆಯ ಪ್ರಭೇದ. ಪ್ರಬಂಧವನ್ನು ಕ್ರಿಡಾಕಾಲದಲ್ಲಿ ಹಾಡಬೇಕು.

24. ತ್ರಿಭಂಗಿ ಪ್ರಬಂಧವನ್ನು ತ್ರಿಭಂಗಿ ಕಾಲದಲ್ಲಿ, ತ್ರಿಭಂಗಿ ವೃತ್ತದಲ್ಲಿ ಅಥವಾ ಸ್ವರ, ಪಾಟ, ಪದ ಎಂಬ ತ್ರಿಭಂಗದಲ್ಲಿ ಹಾಡಬೇಕು. 'ತ್ರಿಭಂಗಿಃ ಸಗಣಾದ್ ಗುರುಃ', ಇದೂ ಗಾಥಾದ ಒಂದು ಒಳಭೇದ; ಅಥವಾ ಮೂರು ವೃತ್ತಗಳಲ್ಲಿ, ಬ್ರಹ್ಮ ವಿಷ್ಣು, ಮಹೇಶ್ವರ ಎಂಬ ತ್ರಿಮೂರ್ತಿಗಳ ಸ್ತುತಿಯಲ್ಲಿ ಹಾಡಬಹುದು.

25. ವದನವು ಪ್ರಾಕೃತಛಂದೋಗಣ ನಿರ್ಮಿತವಾದ ವೃತ್ತವನ್ನು ಒಳ ಗೊಂಡಿದೆ. ಅದು ನಾಲ್ಕು ವಿಧ : ವದನ–ಪ್ರತಿಯೊಂದು ಪಾದದಲ್ಲಿಯೂ ಛಪಛಪದ ಅಥವಾ ಛಪಪದ; ವಸ್ತುವದನ–ಛಛದಚತ; ಉಪವದನ–ಛಚದತ. ಛಂಧಃಶಾಸ್ತ್ರದಲ್ಲಿ ಇವುಗಳಿಗೆ ಲಕ್ಷಣಾಂತರವಿರುವುದು ಕಂಡು ಬರುತ್ತದೆ. ಉದಾಹರಣೆಗೆ ಹೇಮಚಂದ್ರ, ಸ್ವಯಂಭೂ, ರಾಜಶೇಖರ ಮತ್ತು ಕವಿದರ್ಪಣಕಾರರು ವದನವನ್ನು 16(6,4,4,2, = ಛಚಚದ) ಎಂದೂ ವಸ್ತುವದನವನ್ನು 24 (6, 4, 4, 4, 6 ಎಂದರೆ ಛಚಚಚಛ) ಎಂದೂ ಉಪವದನವನ್ನೂ 17 (6, 4, 4, 3 ಎಂದರೆ ಛಚಚತ) ಎಂದೂ ಲಕ್ಷಿಸುತ್ತಾರೆ.

26. ಚರ್ಚರಿ (ಚಚ್ಚರಿ) ಪ್ರಬಂಧವು ವಸಂತೋತ್ಸವದಲ್ಲಿ ಹಿಂದೋಲರಾಗ– ಚಚ್ಚರೀ ಅಥವಾ ಕ್ರಿಡಾಕಾಲದಲ್ಲಿ ಚಚ್ಚರೀಛಂದಸ್ಸಿನಲ್ಲಿ ಹಾಡಬೇಕಾದುದು. ಅದರ ಭಾಷೆ ಪ್ರಾಕೃತ, ಪ್ರತಿಯೊಂದರಲ್ಲಿಯೂ ಹದಿನಾರು ಮಾತ್ರೆಗಳಿರುವ ಹಲವು ಪಾದಗಳು ಅದರಲ್ಲಿರುತ್ತವೆ. ಅವರ ಎರೆಡೆರಡು ಪಾದಗಳಲ್ಲಿ ಪ್ರಾಸವಿರುತ್ತದೆ. ಕ್ರಿಡಾತಾಲಕ್ಕೆ

ಹೊಂದಿಕೊಳ್ಳುವ ಘತ್ತಾ (ಛತ್ತಾ ?) ಅಥವಾ ಬೇರೆ ಛಂದಸ್ಸಿನಲ್ಲಿಯಾದರೂ ಅದನ್ನು ರಚಿಸಬಹುದು. ಆಗ ಆಯಾ ಛಂದಸ್ಸಿನ ಹೆಸರೇ ಅದಕ್ಕೆ ಬರುತ್ತದೆ.

27. ಚರ್ಯಾಪ್ರಬಂಧವು ಅಧ್ಯಾತ್ಮವಿಷಯಕವಾದುದು, ಪದ್ಧಡೀ ಮೊದಲಾದ (ರಾಹಡೀ ಇತ್ಯಾದಿ) ಛಂದಸ್ಸುಗಳಲ್ಲಿ ರಚಿತವಾದುದು. ಪಾದಾಂತ ಪ್ರಾಸವಿರುತ್ತದೆ. ಛಂದಸ್ಸು ಪೂರ್ತಿಯಾಗಿದ್ದರೆ ಪೂರ್ಣವೆಂದೂ ಇಲ್ಲದಿದ್ದರೆ ಅಪೂರ್ಣವೆಂದೂ ಅದು ಇಬ್ಬಗೆಯಾಗಿರುತ್ತದೆ. ದ್ವಿತೀಯುವೇ ಮೊದಲಾದ ತಾಳಗಳಲ್ಲಿ ಅದು ನಿಬದ್ಧವಾಗಿರುತ್ತದೆ. ಸೋಮೇಶ್ವರನು ಇದರ ಎರಡೆರಡು ಪಾದಗಳಲ್ಲಿ ಪ್ರಾಸವಿರುತ್ತದೆ ಎನ್ನುತ್ತಾನೆ.

28. ಪದ್ಧಡೀ ಪ್ರಬಂಧವು ಸ್ವನಾಮಕಚ್ಛಂದಸ್ಸಿನಲ್ಲಿ ರಚಿತವಾಗುತ್ತದೆ. 'ಚರಣಾಂತ ಸಮಪ್ರಾಸಾ'. ಪದ್ಧಡೀ, ಪದ್ಧಡಿಕಾ, ಪದ್ಧಡಿಆ, ಪಜ್ಝಟಿಕಾ, ಪಜ್ಝಡಿಆ ಎಂದು ಮುಂತಾದ ಹೆಸರುಗಳಿರುವ ಈ ಪ್ರಾಕೃತಛಂದೋ ವೃತ್ತವು ಸಮಚತುಷ್ಪದೀ : 16 ಮಾತ್ರೆಗಳುಳ್ಳ ಪಾದವು ನಾಲ್ಕು ಚತುರ್ಮಾತ್ರಾಗಣಗಳಿಂದಾಗುತ್ತದೆ : ವಿಷಮ ಸ್ಥಾನದಲ್ಲಿ ಜಗಣವು ನಿಷಿದ್ಧ ; ಪಾದಾಂತ್ಯದಲ್ಲಿ ಜಗಣವೋ ನಾಲ್ಕು ಲಘುಗಳೋ ಇರಬಹುದು. ಅಂತ್ಯ ಪ್ರಾಸವಿರುತ್ತದೆ.

29. ರಾಹಡೀ ಎಂಬ ಪ್ರಬಂಧವೊಂದಿದೆ. ಇದು ಅದೇ ಹೆಸರಿನ ಛಂದೋ ವೃತ್ತದಲ್ಲಿ ರಚಿತವಾಗಬೇಕೆನ್ನಲು ಸಂಗೀತಶಾಸ್ತ್ರ ಗ್ರಂಥಗಳಲ್ಲಿ ಸೂಚನೆಯಿಲ್ಲ ; ರಾಹಡೀ ಎಂಬ ಹೆಸರಿನ ಛಂದಸ್ಸನ್ನು ಸಿಂಹ ಭೂಪಾಲನು ಸೂಚಿಸುತ್ತಾನಾದರೂ ಅದರ ಲಕ್ಷಣವು ನನಗೆ ದೊರೆತಿಲ್ಲ.

30. ಮಂಗಲಾಚಾರ ಪ್ರಬಂಧವು ಗದ್ಯಜ, ಪದ್ಯಜ, ಗದ್ಯಪದ್ಯಜ ಎಂದು ಮೂರು ವಿಧ, ನಿಃಸಾರು ತಾಲದಲ್ಲಿ ಹಾಡಬೇಕಾದುದು.

31. ಧವಲವೆಂಬುದು ಸಂಗೀತ ಶಾಸ್ತ್ರ ಛಂದಃ ಶಾಸ್ತ್ರಗಳೆರಡರಲ್ಲೂ ಪ್ರಸಿದ್ಧವಾದ ಬಂಧ. ಅದು ಸಂಗೀತ ಶಾಸ್ತ್ರದಲ್ಲಿ ಕೀರ್ತಿ, ವಿಜಯ ಮತ್ತು ವಿಕ್ರಮವೆಂದು ಮೂರು ವಿಧ. ಕೀರ್ತಿ ಧವಲದಲ್ಲಿ ನಾಲ್ಕು ಪಾದಗಳು ; 1–3 ಪಾದಗಳಲ್ಲಿ 2ಭಗಣ ; 2–4 ರಲ್ಲಿ ಇದಕ್ಕಿಂತ ಅಧಿಕವಾದ ಮಾತ್ರಾ ಪ್ರಮಾಣವನ್ನು ಕೊಡುವ ತಗಣಗಳು ಅಥವಾ ದಗಣಗಳು ; ಎಂದರೆ 1–3 ರಲ್ಲಿ 12 ಮಾತ್ರೆ ; 2–4 ರಲ್ಲಿ 14 ಮಾತ್ರೆ (4ತ + ದ, 2ತ + 4ದ) ಅಥವಾ 15 ಮಾತ್ರೆ (5ತ). ಸಂಗೀತಶಾಸ್ತ್ರದಲ್ಲಿ ಈ ಲಕ್ಷಣವು ಸರ್ವಸಮ್ಮತ. ಛಂದಃ ಶಾಸ್ತ್ರದಲ್ಲಿ ಕೀರ್ತಿ ಧವಲಕ್ಕೆ ಆರು ಪಾದಗಳಿರುವುದನ್ನು ಹೇಮಚಂದ್ರ, ರಾಜಶೇಖರ, ಕವಿದರ್ಪಣಕಾರ ಮುಂತಾದವರು ಲಕ್ಷಿಸುತ್ತಾರೆ. (ಹಾಡುಗಾರರು ಇದರ ಎರಡು ಪಾದಗಳನ್ನು ಬಿಟ್ಟುಬಿಟ್ಟಿದ್ದಾರೆ.)

ಚತುಷ್ಪದೀಧವಲವು ಛಂದಃ ಶಾಸ್ತ್ರದಲ್ಲಿ ಹಲವು ಪ್ರಕಾರಗಳಲ್ಲಿ ಪ್ರಸಿದ್ಧವಾಗಿದೆ. ವಿಷಮಪಾದ–ಸಮಪಾದಗಳ ಅನುಕ್ರಮದಲ್ಲಿ ಅವು ಹೀಗಿವೆ ; ಸ್ವಯಂಭೂ ಛಚತ–ಛಚ, ರಾಜಶೇಖರ 14, 16/17 ಮಾತ್ರೆಗಳು ; ಹೇಮಚಂದ್ರ : ಗುಣಧವಲ ಛ2ಚ,

ಛ2 ಚದ/ಛ2ಛತ ; ಭ್ರಮರ ಧವಲ ಛಚತ–ಘಚ ; ಅಮರಧವಲ ಛಚತ, ; ಘ2ಚ ಮಂಗಲ ಧವಲ ಮೊದಲೆರಡು ಪಾದಗಳಲ್ಲಿ ಛ3ಚದ, ಕೊನೆಯ ಎರಡರಲ್ಲಿ 5ಚದ.

ಷಟ್ಪದೀ ಧವಲಕ್ಕೆ ವಿಜಯವೆಂದು ಹೆಸರು. ಸಂಗೀತರತ್ನಾಕರಾದಿ ಗ್ರಂಥಗಳಲ್ಲಿ ಅದರ ಆರು ಪಾದಗಳಲ್ಲಿ ಮಾತ್ರಾ ವಿನಿಯೋಗವನ್ನು ಕ್ರಮವಾಗಿ ಹೀಗೆ ಹೇಳಿದೆ : 16 18/19 17/18 18/19 17/18, 18/19. ಛಂದಃ ಶಾಸ್ತ್ರದಲ್ಲಿ ಇದರ ಪ್ರಕಾರಾಂತರಗಳು ಹೀಗೆ ದೊರೆಯುತ್ತವೆ: ಸ್ವಯಂಭೂ (1–3) 3ಛ, (2–5) 2ಛ, (4–6) 2ಛ ಚ/ಪ ; ರಾಜಶೇಖರ : 14–8 16/17 14–8 16/17 ; ಹೇಮ ಚಂದ್ರ (1–4) 2ಛದ, (2–5) 4 ಚ (3–6) 2ಛಚ/2ಛಪ ; ಕವಿದರ್ಪಣ (1-2-3) 2 ಛದ / 2ಚ 2ಛಚ, (4-5-6) ಅದೇ ಆದರೆ 1–3ರಲ್ಲಿ ಅಂತ್ಯ ಪ್ರಾಸ.

ಅಷ್ಟಪದೀ ಧವಲಕ್ಕೆ ವಿಕ್ರಮವೆಂದು ಹೆಸರು. ಸಂಗೀತ ರತ್ನಾಕರಾದಿ ಗ್ರಂಥ ಗಳಲ್ಲಿ ಇದರ ಎಂಟು ಪಾದಗಳಲ್ಲಿ ಕ್ರಮವಾಗಿ ಗಣ (ಮಾತ್ರಾ) ವಿನಿಯೋಗವನ್ನು ಹೀಗೆ ಕೊಟ್ಟಿದೆ ; 3 ಚದ (14) 3ದ (6) 3ದ (6) 3ಚದ (14) 3ಚದ (14) 4ದ (8) 3ದ (6) 4ದ (8). ಛಂದಃಶಾಸ್ತ್ರಕಾರರು ಈ ಪ್ರಕಾರಗಳನ್ನು ಲಕ್ಷಿಸುತ್ತಾರೆ : ಸ್ವಯಂ ಭೂ (1–3) 3½ಚ, (2–4) 3ಚ, (5–7) 3ಚ- ಒಂದು ಮಾತ್ರೆ ಊನವಾಗಿ, (6) 3ಚ, (8) 2½ ಚ ; ಆದುದರಿಂದ, 14 12 14 12 11 12 11 10 ಎಂಬ ಮಾತ್ರಾ ವಿನಿಯೋಗ. ರಾಜಶೇಖರ : 14 12 14 12 11 10 11 10 ಎಂಬ ಮಾತ್ರ ವಿನಿಯೋಗ ; ಹೇಮಚಂದ್ರ : ಶ್ರೀಧವಲ (1–3) 3ಚ, (2–4) 2 ಚ (3) : ಯಶೋಧವಲ (1–3) 3ಚ, (2–4)3ಚ, (5–7) 2ಚತ, (6–8) 2ಚ 2ದ/3ಚ, ಎಂದರೆ 14 12 14 12 11 12 11 12 ಎಂಬ ಮಾತ್ರಾ ವಿನಿಯೋಗ. ಇವೆಲ್ಲ ಅಲ್ಲದೆ ರಾಜಶೇಖರನು ಮಂಗಲ ಪ್ರಬಂಧ ಪ್ರಭೇದಗಳಿಗೆ ಪರಸ್ಪರವಾದ ಉತ್ಸಾಹ, ಹೇಲಾ ಮುಂತಾದ ಧವಲಗಳನ್ನು ವರ್ಣಿಸುತ್ತಾನೆ.

32. ಮಂಗಲ ಪ್ರಬಂಧವನ್ನು ಮಂಗಲಚ್ಛಂದಸ್ಸಿನಲ್ಲಿಯೇ ರಚಿಸಬೇಕು. ಈ ವೃತ್ತವನ್ನು ಜಗದೇಕಮಲ್ಲನು 'ಪಂಚ ಚಕಾರಗಣಾಃ ಪ್ರತಿಪಾದಗತಾಶ್ಚೇನ್ಮಂಗಲ ಮಾಹುರಿದಂ ಸುಧಿಯಃ ಖಲು ವೃತ್ತಮ್' ಎಂದು ಲಕ್ಷಿಸುತ್ತಾನೆ. ಈ ಲಕ್ಷಣವನ್ನು ಕಲ್ಲಿನಾಥನು ಆಕರ ಸೂಚನೆಯಿಲ್ಲದೆ ಉದ್ಧರಿಸಿಕೊಂಡಿದ್ದಾನೆ. ಶ್ರೀ ಕಂಠನು (ರಸ ಕೌಮುದೀ, 396,97) ಚಗಣಗಳ ಬದಲು ಭಗಣಗಳನ್ನು ಇದಕ್ಕೆ ವಿಧಿಸುತ್ತಾನೆ. ಸ್ವಯಂಭೂ (1–2) ಛ2 ಚ, (3–4) 5 ಚ/4 ಪಗಳನ್ನು ಹೇಳುತ್ತಾನೆ. ಇದನ್ನು ಮಂಗಲ ತಾಲದಲ್ಲಿಯೂ ವಿವಾಹಾದಿ ಮಂಗಲ ಮಯ ಸನ್ನಿವೇಶಗಳಲ್ಲಿಯೂ ಹಾಡ ಬೇಕೆಂಬುದು ಸಂಗೀತಶಾಸ್ತ್ರ ನಿರ್ಯುಕ್ತಿ. ಅಪಭ್ರಂಶ ಭಾಷೆಗಳಲ್ಲಿ ದೇವತಾ ಸ್ತುತಿಗಾಗಿ

ಬಳಸಿದರೆ ಮಂಗಲಕ್ಕೆ ಫುಲ್ಲಡಕವೆಂದು ಹೆಸರು. ಮಂಗಲ ಪ್ರಬಂಧದಲ್ಲಿ ಉತ್ಸಾಹ, ಹೇಲಾ, ವದನ, ದೋಹಾಮಂಗಲ, ಧವಲ ಮಂಗಲ ಎಂಬ ಒಳಭೇದಗಳಿವೆ.

೩. ಛಂದಸ್ಸು ಮತ್ತು ಗೇಯಕೃತಿ

ಮೇಲೆ ಹೇಳಿರುವ ಗೇಯ ಪ್ರಬಂಧಗಳು ಪ್ರಾಚೀನ : ಕ್ರಿ.ಶ. 5–7ನೆಯ ಶತಮಾನದಿಂದ 15–16ನೆಯ ಶತಮಾನದವರೆಗೆ ಚೆನ್ನಾಗಿಯೂ ನಂತರದ ಸುಮಾರು 150 ವರ್ಷಗಳ ಕಾಲ ಮಸಕಾಗಿಯೂ ದಕ್ಷಿಣೋತ್ತರಭಾರತದಲ್ಲಿ ರೂಢಿಸಿದ್ದವು. ಇವುಗಳೆಲ್ಲ 'ಶಾಸ್ತ್ರೀಯ' ಸಂಗೀತದ ಹಾಡುಗಳು ಎಂದೇನೂ ಅಲ್ಲ. ಶಾಸ್ತ್ರೀಯ, ಲಘುಶಾಸ್ತ್ರೀಯ, ಸುಗಮ, ಜಾನಪದ ಮುಂತಾದ ವಿಶೇಷಣಗಳು ಭಾರತೀಯ ಸಂಗೀತಕ್ಕೆ ಬಂದು ಸೇರಿಕೊಂಡಿದ್ದು ಈ ಶತಮಾನದ ಮೊದಲನೆಯ ಪಾದದಲ್ಲಿ, ವಿಶೇಷವಾಗಿ ಬಾನುಲಿಯ ಪ್ರಭಾವದಿಂದ. ನಮ್ಮ ಸಂಗೀತ ಲಾಕ್ಷಣಿಕರು ಸಂಗೀತವನ್ನು ಅದರ ಸಮಗ್ರತೆಯಲ್ಲಿ ಕಂಡು ಹಾಗೆಯೇ ನಿರೂಪಿಸಿದ್ದಾರೆ. ಹೀಗಾಗಿ ಸಂಗೀತ ಶಾಸ್ತ್ರಗ್ರಂಥಗಳಲ್ಲಿ ರಾಜಾಸ್ಥಾನ, ದೇವಸ್ಥಾನ, ಮನೆ, ಹೊಲಗದ್ದೆಗಳಲ್ಲಿ ವಿದ್ವಾಂಸರು, ಹೆಂಗಸರು, ವಿರಕ್ತರು, ಶ್ರೀಸಾಮಾನ್ಯರು ನಗರಗಳಲ್ಲಿಯೂ ಗ್ರಾಮಗಳಲ್ಲಿಯೂ ಹಾಡಿ ಕೊಳ್ಳುತ್ತಿದ್ದ ಹಾಡುಗಳ ಲಕ್ಷಣನಿರೂಪಣೆಯಿದೆ. ಏಲಾ, ಢೇಂಕೀ ಇತ್ಯಾದಿ ಶುದ್ಧ ಸೂಡಗಳೂ ಧ್ರುವ ಮಂಠಾದಿ ಸಾಲಗೂಡಗಳೂ ವರ್ಣ ಮಾತೃಕಾದಿ ಆಲಿಕ್ರಮಗಳೂ ಇದ್ದಂತೆಯೇ ಆಧ್ಯಾತ್ಮವಿಷಯಕವಾದ ಚರ್ಯಾ, ದೇವತಾಸ್ತುತಿವಿಷಯಕವಾದ ಫುಲ್ಲಡಕ, ಮಾತೃಕಾ, ವಿವಾಹಾದಿ ಶುಭ ಸಂದರ್ಭ ಪ್ರಯೋಜ್ಯವಾದ ಮಂಗಲ, ಮಂಗಲಾಚಾರ, ಧವಲ, ವಸಂತೋತ್ಸವಗೇಯವಾದ ಚರ್ಚರೀ, ಕುಟ್ಟುವ, ಬೀಸುವ ಹಾಡುಗಳೂ ಇರುತ್ತಿದ್ದವು ; ಸಂಸ್ಕೃತ, ಪ್ರಾಕೃತ, ಕನ್ನಡ, ತೆಲುಗು, ತಮಿಳು, ಗುಜರಾತೀ, ಮರಾಠೀ, ಹಿಂದೀ, ಬಂಗಾಲೀ ಭಾಷೆಗಳ ಹಾಡುಗಳನ್ನೂ ಶಾಸ್ತ್ರಗ್ರಂಥಗಳು ವಿವಿಧ ಪ್ರಾಂತಗಳಲ್ಲಿ ವರ್ಣಿಸಿವೆ.

ಪ್ರಾಚೀನ ಭಾರತೀಯ ಸಂಗೀತದಲ್ಲಿ ಛಂದೋವೃತ್ತಗಳಲ್ಲಿ ರಚಿತವಾದ ಹಾಡುಗಳೂ ಇರುತ್ತಿದ್ದವು, ಹಾಗೆ ರಚಿತವಾಗದ ಹಾಡುಗಳೂ ಇರುತ್ತಿದ್ದವು. ಮೊದಲನೆಯ ವರ್ಗದ ಹಾಡುಗಳಲ್ಲಿ ಕೆಲವನ್ನು ಮೇಲೆ ಲಕ್ಷಿಸಿದೆ. ಇವಲ್ಲದೆ ಬೇರೆ ಛಂದೋಬದ್ಧವಾದ ಹಾಡುಗಳೂ ಇದ್ದಿರಬಹುದು. ಮಾತುಧಾತುಗಳೆರಡನ್ನೂ ರಚಿಸುವವನು ವಾಗ್ಗೇಯಕಾರ, ಇನ್ನೊಬ್ಬರ ಮಾತುಗಳಿಗೆ ಧಾತುವನ್ನೋ, ಧಾತುವಿಗೆ ಮಾತುಗಳನ್ನೋ ರಚಿಸುವವನು ಅಧಮ ವಾಗ್ಗೇಯಕಾರ, (ಮಾತುವೆಂದರೆ ಹಾಡಿನ ಮಾತುಗಳ ಅಂಶ, ಧಾತುವೆಂದರೆ ಗೇಯಾಂಶ). ವಾಗ್ಗೇಯಕಾರನಿಗೆ ಶಬ್ದಾನುಶಾಸನಜ್ಞಾನ, ಅಭಿಧಾನ ಪ್ರವೀಣತೆ, ಛಂದಃಪ್ರಭೇದವೇದಿತ್ವ, ಅಲಂಕಾರಕೌಶಲ, ಅಶೇಷಭಾಷಾ ವಿಜ್ಞಾನ, ಪ್ರಬಂಧಗಳಲ್ಲಿ ಪ್ರಗಲ್ಭತಾ, ಪದಾಂತರವಿದಗ್ಧತೆ ಮುಂತಾದ ಲಕ್ಷಣಗಳಿರಬೇಕು ಎಂದು

ಸಂಗೀತಶಾಸ್ತ್ರವು ವಿಧಿಸುತ್ತದೆ. ಹೀಗಾಗಿ ವಾಗ್ಗೇಯಕಾರನಿಗೆ ಛಂದೋವೃತ್ತಗಳಲ್ಲಿ ಗೇಯ ಪದ್ಯನಿರ್ಮಾಣಕೌಶಲವು ಮುಖ್ಯ ಅವಶ್ಯಕತೆಯಾಗಿರುತ್ತಿತ್ತು.

ಕರ್ನಾಟಕ ಸಂಗೀತದಲ್ಲಾಗಲಿ ಹಿಂದೂಸ್ಥಾನಿ ಸಂಗೀತದಲ್ಲಾಗಲಿ ಇಂದು ಪರಿಸ್ಥಿತಿಯು ಬೇರೆಯೇ ಆಗಿದೆ. ಕರ್ನಾಟಕ ಸಂಗೀತದಲ್ಲಿ ಈಗ ರೂಢಿಯಲ್ಲಿರುವ ಗೇಯ ಪ್ರಕಾರಗಳೆಂದರೆ ಗೀತ, ಸ್ವರಜತಿ, ಜತಿಸ್ವರ, ವರ್ಣ, ಕೃತಿ (ಕೀರ್ತನೆ), ಪಲ್ಲವಿ, ಪದ, ತಿಲ್ಲಾನ, ಜಾವಳಿ, ದೇವರನಾಮ, ಉಗಾಭೋಗ, ವಚನ, ಅಷ್ಟಪದಿ ಮತ್ತು ಶ್ಲೋಕ. ಇವುಗಳಲ್ಲಿ ಗೀತ, ಸ್ವರ ಜತಿಗಳು ಅಭ್ಯಾಸ ಗಾನಕ್ಕೂ ಜತಿಸ್ವರವು ನೃತ್ತಕ್ಕೂ ಸೇರಿದ್ದು. ವೃತ್ತನಾಮ, ಸುಳಾದಿ, ತರಂಗ, ದರುಗಳು ಇಂದು ಅಪರೂಪವಾಗಿವೆ. ಹಿಂದೂಸ್ಥಾನೀ ಸಂಗೀತದಲ್ಲಿ ಧ್ರುಪದ್ ಧಮಾರ್, ಖ್ಯಾಲ್, ಠುಮ್ರಿ, ಟಪ್ಪಾ, ತರಾನಾ, ಹೋರಿ, ಚತುರಂಗ್, ಸರ್‌ಗಮ್, ತಿರವಟ್, ಅಷ್ಟಪದೀ, ಗಜ್ಲ್, ಕಜರೀ, ಕೀರ್ತನ್, ಹಾಗೂ ಚೈತಿಗಳೆಂಬ ಗೇಯ ಪ್ರಕಾರಗಳಿದ್ದರೂ ಧ್ರುಪದ್, ಖ್ಯಾಲ್, ಠುಮ್ರಿ, ತರಾನಾ, ಟಪ್ಪಾ, ಗಜ್ಲ್‌ಗಳು ಮಾತ್ರ ಹೆಚ್ಚು ಪ್ರಚಲಿತವಾಗಿದ್ದು ಉಳಿದವುಗಳು ವಿರಳಪ್ರಯೋಗದಲ್ಲಿವೆ. ಈ ಎಲ್ಲ ಗೇಯ ಪ್ರಕಾರಗಳ ಪೈಕಿ ಛಂದೋವೃತ್ತಗಳಲ್ಲಿ ರಚಿತವಾದವುಗಳು ಅಷ್ಟಪದಿ, ಶ್ಲೋಕ, ಗಜ್ಲ್, ಕೀರ್ತನ್, ಕಜರೀ, ಚೈತೀ, ಠುಮ್ರಿಗಳು ಮಾತ್ರ.

ಛಂದೋನಿಬದ್ಧವಾದ ಅಥವಾ ಅಲ್ಲದ ಹಾಡುಗಳ ಗಾನಕ್ರಮವು ಹೇಗಿರುತ್ತದೆ?

ಗೇಯಪ್ರಬಂಧಗಳಲ್ಲಿ ಮಾತುಪ್ರಧಾನ, ಧಾತುಪ್ರಧಾನ ಎಂದು ಎರಡು ವಿಧ. ವಾಗರ್ಥವು ಪ್ರಸ್ತುತಿಯಲ್ಲಿ ಪ್ರಧಾನವಾದರೆ ಮಾತು ಪ್ರಧಾನ; ಗೇಯಾರ್ಥವು ಪ್ರಧಾನವಾದರೆ ಧಾತುಪ್ರಧಾನ. ವಾಗರ್ಥವು ಪ್ರಸನ್ನಗೋಚರವಾಗಬೇಕಾದರೆ ಅದರ ದ್ರವ್ಯವಾದ ವರ್ಣಗಳ ನಿಕಟಸಂಯೋಜನೆಯು ಅವಶ್ಯ. ವರ್ಣಗಳ ನಡುವೆ, ಪದಗಳ ನಡುವೆ ಅವಕಾಶವು ಹೆಚ್ಚಿದಷ್ಟೂ ಅರ್ಥದ ಪ್ರಸನ್ನ ಗೋಚರವು ಕಡಿಮೆಯಾಗುತ್ತ ಬರುತ್ತದೆ. ಛಂದೋಬದ್ಧರಚನೆಗಳಲ್ಲಿ ವಾಗರ್ಥಕ್ಕೆ ಛಂದಸ್ಸು ಪ್ರತೀತಗೊಳಿಸುವ ವರ್ಣಶಯ್ಯೆಯೂ ಶಬ್ದಸೌಂದರ್ಯವೂ ಭಾವಪುಷ್ಟಿಯಿಂದ ಬಲವನ್ನು ನೀಡುತ್ತವೆ. ಗೇಯತೆಯು ಇಲ್ಲಿ ವಾಹಕವಾಗಿದ್ದು ಗೌಣವಾಗಿರುತ್ತದೆ, ಪುಷ್ಟಿಯನ್ನೂ ಆಕರ್ಷಣೆಯನ್ನೂ ಒದಗಿಸುತ್ತದೆ. ಹೀಗೆ ಶ್ಲೋಕ, ಗಜ್ಲ್ ಮುಂತಾದವುಗಳಲ್ಲಿ ವಾಗಾರ್ಥಪ್ರಾಧಾನ್ಯವನ್ನು ಉಳಿಸಿಕೊಂಡು ಹಾಡಬೇಕಾದರೆ ಅದರ ಮಾತುಗಳಲ್ಲಿ ವರ್ಣಗಳ ನಡುವೆ ಧಾತುಸಂಯೋಜನೆಯು ಆದಷ್ಟು ಮಿತವಾಗಿರಬೇಕು; ಆಲಾಪ ಅಥವಾ ರಾಗವಿಸ್ತರಿಯೂ ಪದಗಳ ನಡುವೆ ಮಿತವಾಗಿಯೂ ಪಾದಾಂತ್ಯ, ಅರ್ಧಾಂತ್ಯ ಅಥವಾ ವೃತ್ತಾಂತ್ಯಗಳಲ್ಲಿ ಸಂದರ್ಭೋಚಿತವಾದಷ್ಟೂ ನಡೆಯಬೇಕು. ಈ ಮಾತು ಉಗಾಭೋಗ, ವಚನ ಮುಂತಾದ ರಚನೆಗಳಿಗೂ ಮಾತುಪ್ರಧಾನವಾದ ಆದರೆ ತಾಳನಿಬದ್ಧವಾದ ಸುಳಾದಿಯಂತಹ ರಚನೆಗಳಿಗೂ ಅನ್ವಯಿಸುತ್ತದೆ.

ಧಾತು ಪ್ರಧಾನರಚನೆಗಳಲ್ಲಿ ವರ್ಣಗಳ ನಡುವೆ, ಪದಗಳ ನಡುವೆ, ವಾಕ್ಯಗಳ ಅಥವಾ ವಾಕ್ಯಖಂಡಗಳ ನಡುವೆ ಧಾತು ಸಮೃದ್ಧಿಯಿರುತ್ತದೆ. ಒಂದು ವರ್ಣವನ್ನು ಒಂದೇ ಸ್ವರವು ಹ್ರಸ್ವವಾಗಿ ನಿರ್ವಹಿಸಿದರೆ ಅದು ದ್ರುತಲಯದ ರಚನೆ, ಮಾತು ಪ್ರಧಾನವಾದುದು. ಒಂದೊಂದು ವರ್ಣವನ್ನೂ ಎಷ್ಟೆಷ್ಟು ಸ್ವರಗಳು ಎಷ್ಟೆಷ್ಟು ದೀರ್ಘವಾಗಿ ನಿರ್ವಹಿಸುತ್ತವೆಯೋ ಅದು ಅಷ್ಟಷ್ಟು ವಿಲಂಬಲಯದ ರಚನೆ, ಅಷ್ಟಷ್ಟು ಧಾತುಪ್ರಧಾನವಾದುದು. ಗೇಯ ರಚನೆಗಳಲ್ಲಿ – ಧಾತು ಪ್ರಧಾನವಾಗಿರುವವು ಗಳಲ್ಲಿ ಸಹ–ವಾಗರ್ಥವು ಪ್ರಸನ್ನವಾಗಿ ಗೋಚರಿಸಿದರೆ ಅದು ಬಹುಶಃ ಅಪೇಕ್ಷಣೀಯವೇ, ಆದರೆ ಅನಿವಾರ್ಯವಲ್ಲ. ಅಂತಹ ರಚನೆಗಳಲ್ಲಿ ವಾಗರ್ಥವು ಸಾಮಾನ್ಯವಾಗಿ ಗೌಣ ; ಗೇಯಾರ್ಥ ಸ್ಫುರಣ ಸಂದರ್ಭದಲ್ಲಿ ವಾಗರ್ಥಕ್ಕೆ ಅಲ್ಪಸ್ವಲ್ಪ ಹಾನಿಯಾದರೂ ಅದು ಕ್ಷಮ್ಯವೇ ಎಂಬ ಇಂಗಿತವು ಸಹ ಸಂಗೀತಶಾಸ್ತ್ರದಲ್ಲಿ ದೊರೆಯುತ್ತದೆ. ಸಾಮಾನ್ಯ ಸಂಗೀತ ಪ್ರಯೋಕ್ತೃಗಳಲ್ಲಂತೂ ಈ ಭಾವನೆಯು ಹೆಚ್ಚು ಕಡಿಮೆ ಸ್ಪಷ್ಟವಾಗಿಯೇ ಇರುತ್ತದೆ. ಸಂಗೀತವಿದ್ವಾಂಸರಿಗೆ ಹಾಡಿನಲ್ಲಿ ಗೇಯಾರ್ಥವೇ ಮುಖ್ಯ ; ಅವರು ಹಾಡುಗಳ ವಾಗರ್ಥವನ್ನು ತಿಳಿದುಕೊಳ್ಳುವ, ತಿಳಿದುಕೊಂಡಿದ್ದರೂ ಅದನ್ನು ಪ್ರಕಟಗೊಳಿಸುವ ಪ್ರಯತ್ನವನ್ನು ಮಾಡುವುದು ತುಂಬಾ ಅಪರೂಪ. ಧಾತುವನ್ನೇ ಪ್ರಧಾನವೆಂದು ತಿಳಿದು ಅದಕ್ಕೆ ಮಾತು ಹಂದರ, ಅಥವಾ ನೆಪ, ಎಂಬ ಭಾವನೆಯಿರುವ ವಾಗ್ಗೇಯಕಾರರೂ ಇದ್ದಾರೆ. ಮಾತುವೇ ಪ್ರಧಾನವೆಂದೂ ತಿಳಿದು ಅದರ ಧಾತುವಿಗೆ ಗೌಣಸ್ಥಾನವನ್ನು ಕಲ್ಪಿಸುವ ವಾಗ್ಗೇಯಕಾರರೂ ಇದ್ದಾರೆ. ಎರಡಕ್ಕೂ ಸಮಪ್ರಾಧಾನ್ಯವನ್ನು ಕೊಡುವವರೂ ಇದ್ದಾರೆ. ಈ ಮೂರನೆಯ ವರ್ಗದವರು ಸಾಮಾನ್ಯವಾಗಿ ಉತ್ತಮ ವಾಗ್ಗೇಯಕಾರರು. ಪ್ರಯೋಕ್ತೃಗಳಲ್ಲಿ ಸಾಹಿತ್ಯಸಂಸ್ಕಾರವನ್ನು ಪಡೆದವರು ಕಡಿಮೆಯಾದುದರಿಂದಲೂ ಗೇಯಾರ್ಥದ ಆಕರ್ಷಣೆಯಿಂದಲೇ ಅದನ್ನು ಹೆಚ್ಚು ಆಶ್ರಯಿಸುವುದರಿಂದಲೇ ಸಂಗೀತದ ಶಿಕ್ಷಣ ಮತ್ತು ಕಛೇರಿಗಳಲ್ಲಿ ವಾಗರ್ಥವು ಅಮುಖ್ಯವಾಗಿರುವುದು ಸಾಮಾನ್ಯವಾಗಿದೆ.

ಈಗಿನ ವಾಗ್ಗೇಯ ಸಂಪದದಲ್ಲಿ ಛಂದೋಬದ್ಧ ರಚನೆಗಳು ಅಲ್ಪಸಂಖ್ಯಾತವೆಂಬುದನ್ನು ಈಗಾಗಲೇ ಸೂಚಿಸಿದೆ. ಹಿಂದೆ ಪಟ್ಟಿಮಾಡಿರುವ ಗೇಯ ಪ್ರಕಾರಗಳಲ್ಲಿ ಸ್ವರಜತಿ, ಪಲ್ಲವಿ, ತಿಲ್ಲಾನಗಳಲ್ಲಿನ ಮಾತುಗಳ ಸ್ಥಾನವು ಗೌಣ. ತಾನವರ್ಣದಲ್ಲಿ ಅದು ಮಿತವಾಗಿಯೂ ಪದವರ್ಣ, ಕೃತಿ (ಕೀರ್ತನೆ), ಪದ, ಜಾವಳಿ, ದೇವರನಾಮ, ಅಷ್ಟಪದಿ, ಸುಳಾದಿ, ವೃತ್ತನಾಮ ದರುಗಳಲ್ಲಿಯೂ ಧ್ರುಪದ್, ಧಮಾರ್, ಖ್ಯಾಲ್, ಠುಮ್ರಿಗಳಲ್ಲಿಯೂ ಅದು ಪ್ರಮುಖವಾಗಿರುತ್ತದೆ. ಇವುಗಳು ಛಂದೋವೃತ್ತಗಳಲ್ಲಿ ರಚಿತವಾಗುವಂತಹವಲ್ಲ. ಇವುಗಳ ರಚನೆಯು ಸಂಗೀತಕ್ಕೇ ವಿಶಿಷ್ಟವಾದ್ದುದು. ಕರ್ನಾಟಕ ಸಂಗೀತದ ಛಂದೋಹೀನ ಪ್ರಬಂಧಗಳು ಗದ್ಯಪದ್ಯಗಳಿಗೆ ಮಧ್ಯವರ್ತಿಯಾದ

ಬಂಧದಲ್ಲಿ, ಪ್ರಾಸಸಹಿತವಾಗಿ (ಸಾಮಾನ್ಯವಾಗಿ ಆದಿ-ದ್ವಿತೀಯಾಕ್ಷರ-ಪ್ರಾಸದಲ್ಲಿ ಕೆಲವು ವೇಳೆ ಮಧ್ಯಪ್ರಾಸ, ಅಂತ್ಯಪ್ರಾಸ, ಒಳಪ್ರಾಸ, ಅನುಪ್ರಾಸದಲ್ಲಿ), ಒಂದಕ್ಕಿಂತ ಹೆಚ್ಚು ಖಂಡಗಳಲ್ಲಿ ಇರುತ್ತವೆ. ಈ ಖಂಡಗಳಲ್ಲಿ ಮೊದಲನೆಯದು (ಪಲ್ಲವಿ) ಉಳಿದ ಖಂಡಗಳಲ್ಲಿ ಪ್ರತಿಯೊಂದರ ನಂತರವೂ ಪುನರುಕ್ತವಾಗಿ ಅದರ ಆಕಾಂಕ್ಷೆಯನ್ನು ವಾಗರ್ಥ ಗೇಯಾರ್ಥಗಳೆರಡರಲ್ಲೂ ಪೂರೈಸುತ್ತದೆ. ಎರಡನೆಯದು ಅನುಪಲ್ಲವಿ ; ಇದು (ಇದ್ದರೆ) ಪಲ್ಲವಿಗೂ ಉಳಿದ ಖಂಡ (ಚರಣ, ನುಡಿ)ಗಳಿಗೂ ವಾಗರ್ಥಗೇಯಾರ್ಥ ಗಳಲ್ಲಿ ಸೇತುಬಂಧವನ್ನು ಏರ್ಪಡಿಸುತ್ತದೆ. ಚರಣಗಳು ಸಾಮಾನ್ಯವಾಗಿ ಬೆಸಸಂಖ್ಯೆ ಯಲ್ಲಿದ್ದು ಪಲ್ಲವಿಯಲ್ಲಿ, ಉಕ್ತವಾದ ಮುಖ್ಯ ಸಾಹಿತ್ಯಭಾವವನ್ನು ಪೋಷಿಸಿ ವಿಸ್ತರಿಸುತ್ತವೆ ; ರಾಗ-ಲಯ ಭಾವಗಳಲ್ಲಿಯೂ ಅಷ್ಟೆ. (ಮೇಲೆ ಹೇಳಿದ ಬಹುತೇಕ ಪ್ರಬಂಧಗಳನ್ನು ಪಲ್ಲವಿ, ಅನುಪಲ್ಲವಿ-ಚರಣಗಳೆಂಬ ರೂಪಕ್ಕೇ ಇಳಿಸಬಹುದು). ಅಷ್ಟಪದಿಯಲ್ಲಿ ಪಲ್ಲವಿಯ ಕೆಲಸವನ್ನು ಮೊದಲನೆಯದರ ಬದಲು ಧ್ರುವಖಂಡವೆಂಬ ಎರಡನೆಯ ಖಂಡವು ಮಾಡುತ್ತದೆ.

ಪಲ್ಲವಿಯ ಗಾತ್ರವು ವಿಸ್ತರಿಸಿದ ಹಾಗೆಲ್ಲ ಈ ಅಧಿಕ ಪಙ್ಕ್ತಿಯನ್ನು/ಗಳನ್ನು ಪ್ರತ್ಯೇಕಿಸಿ ಅದನ್ನು ಅನುಪಲ್ಲವಿಯೆಂದು ಕರೆದಿರುವುದು ಸಂಭವ. ಪಲ್ಲವಿ-ಅನುಪಲ್ಲವಿ ಗಳಲ್ಲಿ ಒಂದೇ ಪ್ರಾಸವಿರುತ್ತದೆ ; ನುಡಿಗಳಲ್ಲಿ ಪ್ರತಿಯೊಂದಕ್ಕೂ ಬೇರೆ ಬೇರೆಯಾದ ಪ್ರಾಸವಿರುತ್ತದೆ. ಅಪರೂಪವಾಗಿ ಇಡೀ ರಚನೆಗೆ ಒಂದೇ ಪ್ರಾಸವಿರುವುದೂ ಉಂಟು. ಮೊದಮೊದಲು ಹುಟ್ಟಿಕೊಂಡ ತಾಳ್ಳಪಾಕಂ ಅನ್ನಮಯ್ಯ, ಭದ್ರಾಚಲ ರಾಮದಾಸ್, ಸಿಂಹಗಿರಿ, ನಿಜಗುಣಶಿವಯೋಗಿ ಮುಂತಾದವರ ಕೃತಿಗಳಲ್ಲಿ ಅನುಪಲ್ಲವಿಯಿಲ್ಲ. ಹರಿದಾಸರ ಪದ (ಕೀರ್ತನೆ)ಗಳಲ್ಲಿ ಪಲ್ಲವಿ-ಅನುಪಲ್ಲವಿ ಚರಣಗಳಲ್ಲಿ ಪಾದಸಂಖ್ಯೆ, ಪರಸ್ಪರ ಪ್ರಮಾಣ, ಪಾದದೈರ್ಘ್ಯ, ಪ್ರಾಸ, ಮುಡಿ, ವಡಿ, 'ಶಿಖಾಪದ' (?), ಪದ್ಮಗಣ ಮುಂತಾದ ವಿಷಯಗಳಲ್ಲಿ ವ್ಯಾಪಕವಾದ ಪ್ರಯೋಗಾತ್ಮಕ ಸಂಶೋಧನೆಗಳು ನಡೆದು ನಂತರದ ತ್ಯಾಗರಾಜಾದಿ ವಾಗ್ಗೇಯಕಾರರಿಗೆ ಮಾರ್ಗ ದರ್ಶನವನ್ನಿತ್ತಿವೆ.

ಔತ್ತರಾದಿ ಅಥವಾ ದಕ್ಷಿಣಾದಿಗೇಯರಚನೆಗಳಲ್ಲಿ ಪಾದ ಪ್ರಮಾಣವನ್ನು ಗಮನಿಸಬೇಕು. ಇದು ಯಾವುದೇ ರಚನೆಯ ಒಂದೊಂದು ಖಂಡದಲ್ಲಿಯೂ (ಉದಾ : ಆಸ್ಥಾಯಿ, ಅಂತರಾ, ಆಭೋಗ್/ಪಲ್ಲವಿ, ಅನುಪಲ್ಲವಿ, ಚರಣ) ಹೆಚ್ಚುಕಡಿಮೆ ಒಂದೇ ಪ್ರಮಾಣದಲ್ಲಿರುತ್ತದೆ, ಖಂಡದಿಂದ ಖಂಡಕ್ಕೆ, ಹಾಡಿನಿಂದ ಹಾಡಿಗೆ ಈ ಪ್ರಮಾಣವು ವ್ಯತ್ಯಾಸವಾಗುತ್ತದೆ ; ಒಂದೇ ಖಂಡದಲ್ಲಿಯೂ ಅದು ಬಹುವಾಗಿ ವ್ಯತ್ಯಾಸ ವಾಗುವುದೂ ಪದೇ ಪದೇ ಕಂಡುಬರುತ್ತದೆ. ಈ ಖಂಡಗಳ ಪರಸ್ಪರ ಪಙ್ಕ್ತಿಪ್ರಮಾಣ, ಅವುಗಳಲ್ಲಿ ಅಕ್ಷರಸಂಖ್ಯೆ, ನುಡಿಗಳಸಂಖ್ಯೆ ವ್ಯತ್ಯಾಸವಾಗುತ್ತದೆ; ಒಂದೇ ಖಂಡದಲ್ಲಿಯೂ ಅದು ಬಹುವಾಗಿ ವ್ಯತ್ಯಾಸವಾಗುವುದೂ ಪದೇ ಪದೇ ಕಂಡು ಬರುತ್ತದೆ. ಈ

ಖಂಡಗಳ ಪರಸ್ಪರ ಪಙ್ತ್ತಿಪ್ರಮಾಣ, ಅವುಗಳಲ್ಲಿ ಅಕ್ಷರಸಂಖ್ಯೆ, ನುಡಿಗಳ ಸಂಖ್ಯೆ ಮುಂತಾದವುಗಳನ್ನು ಅನುಸರಿಸಿ ಹರಿದಾಸರ, ಆಂಧ್ರದ ವಾಗ್ಗೇಯಕಾರರ ಹಾಗೂ ಸಂಗೀತ ತ್ರಿಮೂರ್ತಿಗಳ ಕೀರ್ತನೆಗಳಲ್ಲಿ ವಿವಿಧ ಮಾದರಿಗಳ ವರ್ಗಗಳನ್ನೇರ್ಪಡಿಸ ಬಹುದು. ಇದನ್ನು ಅನ್ಯತ್ರ (ಮ್ಯೂಸಿಕ್ ಆಫ್ ದಿ ಮಾಧ್ವ ಮಾಂಕ್ಸ್ ಆಫ್ ಕರ್ನಾಟಕ) ಮಾಡಿಯೂ ಇದ್ದೇನೆ. ಆದರೆ ಇಲ್ಲಿ ಮುಖ್ಯವಾದ ಅಂಶವೆಂದರೆ ಕೃತಿ, ಪದ, ಜಾವಳಿ, ದೇವರನಾಮ, ದರು, ಸುಳಾದಿ, ವೃತ್ತನಾಮಗಳಾಗಲಿ, ಖ್ಯಾಲ್, ಧ್ರುಪದ್, ಠುಮ್ರಿಗಳಾಗಲಿ ಛಂದೋವೃತ್ತಗಳಲ್ಲಿ ರಚಿತವಾದವುಗಳೂ ಅಲ್ಲ ; ಹಾಗೆಂದು ಅವುಗಳನ್ನೂ ಆಯಾ ವಾಗ್ಗೇಯಕಾರರು ಉದ್ದೇಶಿಸಿಯೂ ಇರಲಿಲ್ಲ. ಗೇಯಾರ್ಥಕ್ಕೆ ಇಲ್ಲಿ ಪ್ರಸಕ್ತಿಯಿರುವುದು ಪಾದದೈರ್ಘ್ಯಕ್ಕೆ ತಾಳಾವರ್ತದ ಅನ್ವಯ, ಛಂದೋ ಬಂಧಗಳಲ್ಲ.

ಗೇಯಪ್ರಬಂಧಗಳಲ್ಲಿ, ಮುಖ್ಯವಾಗಿ ಹರಿದಾಸರ ಕೀರ್ತನೆ, ಉಗಾಭೋಗ ಮತ್ತು ಸುಳಾದಿಗಳಲ್ಲಿ ಛಂದೋವೃತ್ತಗಳ ಮಾದರಿಗಳು ಗೋಚರಿಸುತ್ತವೆ ಎಂಬುದನ್ನು ಕೆಲವು ವಿದ್ವಾಂಸರು ತೋರಿಸಲೆಳಸಿದ್ದಾರೆ. ಉದಾ : ಟಿ. ಆರ್. ನಾಗರತ್ನರವರು ಕೀರ್ತನೆಗಳಲ್ಲಿ ಏಳ, ತ್ರಿಪದಿ, ಸಾಂಗತ್ಯ, ಸೀಸಪದ್ಯಗಳನ್ನೂ ಕೆ. ಶಿವರಾಮ ಐತಾಳರು ಮದನವತಿ, ದೊರೆಯಕ್ಕರ, ನಡುವಣಕ್ಕರ ಚೌಪಾದಿಗಳನ್ನು ಡಿ. ಎಸ್. ಕರ್ಕಿಯವರು ವಿವಿಧಲಯಗಳ ವಿವಿಧ ಷಟ್ಪದಿಗಳನ್ನೂ ಕಾಣುತ್ತಾರೆ. ಎಂ. ರಾಜಗೋಪಾಲಚಾರ್ಯರು ಯಕ್ಷಗಾನದ ಹಾಡುಗಳಲ್ಲಿ ಮತ್ತು ಕೀರ್ತನೆಗಳಲ್ಲಿ ಅರ್ಯಾ, ಯುಲಪದ, ಷಟ್ಪದಿ, ಸಾಂಗತ್ಯ, ದ್ವಿಪದಿ, ಚೌಪದಿ ಇತ್ಯಾದಿಗಳನ್ನೂ, ಕಪು. ಸೀತಾರಾಮ ಕೆದಿಲಾಯರು ಯಕ್ಷಗಾನದ ಕೃತಿಗಳಲ್ಲಿ ಶಾರ್ದೂಲವಿಕ್ರೀಡಿತ, ಮತ್ತೇಭವಿಕ್ರೀಡಿತ, ಮಾಲಿನೀ, ಸ್ರಗ್ಧರಾ, ಮಹಾಸ್ರಗ್ಧರಾ, ಉತ್ಪಲಮಾಲಾ, ಚಂಪಕಮಾಲಾ, ಭುಜಂಗವಿಜೃಂಭಿತ, ಮಲ್ಲಿಕಾಮಾಲಾ ಇತ್ಯಾದಿ ಅಕ್ಷರವೃತ್ತಗಳೂ ಕಂದ, ಷಟ್ಪದಿ, ದ್ವಿಪದಿ, 3, 4, 5,6 ಮಾತ್ರಾಗಣಗಳಿಂದಾದ ಪದ್ಯಗಳು, ಬ್ರಹ್ಮ, ವಿಷ್ಣು, ರುದ್ರಗಣ ಪ್ರಧಾನವಾದ ಹಾಡುಗಳು ಇತ್ಯಾದಿಗಳನ್ನೂ ಗುರುತಿಸಿ ತೋರಿಸಿದ್ದಾರೆ. ಕೆ. ಜಿ. ನಾರಾಯಣ ಪ್ರಸಾದರು ಹರಿದಾಸರ ಕೃತಿಗಳಲ್ಲಿ ಛಂದಸ್ಸಿನ ಅಧ್ಯಯನ ಮಾಡುವುದರ ಪ್ರಯೋಜನವನ್ನು—

1) ನಮ್ಮ ಛಂದಸ್ಸಿನ ಪ್ರವಾಹದಲ್ಲಿ ಅಜ್ಞಾತವಾಗಿರುವ ಎಷ್ಟೋ ಬಂಧಗಳನ್ನು ಕಂಡುಕೊಳ್ಳಬಹುದು.

2) ಅವನ್ನು ಹಾಡುವ ವಿಧಾನವನ್ನು ವಿಮರ್ಶಿಸಬಹುದು.

3) ಈಗ ಇಲ್ಲದ ಎಷ್ಟೋ ಹೊಸ ಬಂಧಗಳನ್ನು ರಚಿಸಲು ಮಾದರಿಗಳು ದೊರೆಯುತ್ತವೆ.

4) ಈವರೆಗೆ ರಚಿತವಾಗಿರುವ ಛಂದೋಬಂಧಗಳಲ್ಲಿ ಹಲವನ್ನು ಹಾಡುವ ರೀತಿಯನ್ನು ಕಂಡುಕೊಳ್ಳಬಹುದು ಎಂದು ನಾಲ್ಕು ಬಗೆಯಾಗಿ ಲೆಕ್ಕಿಸಿಕೊಂಡರೂ 'ಇಲ್ಲಿ ಗ್ರಾಂಥಿಕ ಸಾಹಿತ್ಯದ ಛಂದಸ್ಸಿನ ಬಿಗಿ, ನಿಷ್ಕೃಷ್ಟ ನಿಯಮಪಾಲನೆ ಕಂಡು ಬರುವುದಿಲ್ಲ. ಬದಲಾಗಿ ಸಂಗೀತದ ಛಂದಸ್ಸಿನ ಮಣಿತದ ಸ್ವಾತಂತ್ರ್ಯ ಹೆಚ್ಚಾಗಿ ಕಂಡು ಬರುತ್ತದೆ. ಹರಿದಾಸರು ಸಂಗೀತದ ಮಟ್ಟುಗಳಿಗೆ ತಲೆಬಾಗಿದಂತೆ ಸಾಹಿತ್ಯದ ಛಂದಸ್ಸಿಗೆ ವಿಶೇಷವಾಗಿ ತಲೆಬಾಗಲಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಹೀಗಾಗಿ ಹ್ರಸ್ವೀಕರಣ, ದೀರ್ಘೀಕರಣ ಮುಂತಾದ ಛದಃಸ್ವಾತಂತ್ರ್ಯಗಳು ಇಲ್ಲಿ ವಿಪುಲವಾಗಿ ಕಾಣಿಸಿಕೊಳ್ಳುತ್ತವೆ. ಆದರಿಂದಾಗಿ ಅಲ್ಲಿರಬಹುದಾದ ಛಂದೋಬಂಧ (ಸಾಹಿತ್ಯದ್ದು) ಯಾವುದು ಎಂಬುದನ್ನು ಗುರುತಿಸುವುದು ಕೂಡ ಕೆಲವೊಮ್ಮೆ ಕಷ್ಟವಾಗುತ್ತದೆ—ಎಂದೂ ಒಪ್ಪಿಕೊಳ್ಳುತ್ತಾರೆ. 'ಹರಿದಾಸರ ಕೃತಿಗಳಲ್ಲಿ ತಾಳಲಯವೇ ಪ್ರಧಾನ'ವೆಂಬುದು ಅವರಿಗೆ ತಿಳಿದಿದೆ ; ಮಾತ್ರಾಲಯ, ಅಂಶಲಯಗಳನ್ನು, ಅಂಶಬಂಧ, (ಚೌಪದಿ, ದ್ವಿಪದಿ, ಛಂದೋವತಂಸ, ನವಪದಿ, ಮದನಪತಿ, ಸಾಂಗತ್ಯ), ಮಾತ್ರಾಬಂಧ (ಉತ್ಸಾಹ, ಮಂದಾನಿಲ, ಲಲಿತ, ಭಾಮಿನಿಲಯಗಳು) ಮುಂತಾದವುಗಳಲ್ಲಿ ಸಾಮಿಪ್ಯವನ್ನು ಕಂಡು, ಅಲ್ಪ ವ್ಯತ್ಯಾಸಗಳಿಂದ ಹುಟ್ಟಬಹುದಾದ ಛಂದೋಬಂಧ ಗಳನ್ನು ಸೂಚಿಸುತ್ತಾರೆ. ಅವರ ಇಂತಹ ಕಾಣ್ಕೆಗಳು ಆಯಾ ರಚನೆಗಳಲ್ಲಿ ಏಕದೇಶಿಯ ವಾದವುಗಳು. ಗೇಯತೆಯ ಎಂದರೆ ಧಾತುವಿನ ದೃಷ್ಟಿಯಿಂದ ಯಾವ ಬದಲಾವಣೆಯನ್ನೂ ಒಳಗೊಳ್ಳುವುದಿಲ್ಲ. ಮಾತುಪ್ರಧಾನ ಪ್ರಬಂಧ ನಿರ್ಮಿತಿಯಲ್ಲಿ ಇಂತಹ ಸಲಹೆಗಳು ಆಧುನಿಕ ರಚಯಿತರಿಗೆ ಸ್ಫೂರ್ತಿಯನ್ನು ನೀಡಬಹುದು. ಆದರೆ ಹರಿದಾಸರ ಉಪಲಬ್ಧ ಕೀರ್ತನೆಗಳಲ್ಲಿ ನಿಯಮಾನುಸಾರವಾದ ಛಂದಃಪ್ರಕಾರಗಳಿವೆಯೆ, ಎಂಬುದನ್ನು ನಿರ್ಧರಿಸಲು ಸಹಾಯಕವಾಗುವುದಿಲ್ಲ.

ಈ ಎಲ್ಲ ವಿದ್ವಾಂಸರ ಪ್ರಯತ್ನಗಳನ್ನು ಮೆಚ್ಚಬೇಕಾದುದೇ ; ಉಪಲಬ್ಧ ವಾಗಿರುವ ವಿಶಾಲ ಸಾಮಗ್ರಿಯಲ್ಲಿ ಅವರು ಕಣ್ಣಿಟ್ಟು ಉದಾಹರಣೆಗಳನ್ನು ಹೆಕ್ಕಿ ತೆಗೆದಿದ್ದಾರೆ. ಟಿ. ಕೇಶವಭಟ್ಟರು ಹೇಳುವಂತೆ ನಿರ್ದಿಷ್ಟವಾದ ಛಂದೋಬಂಧವಿದ್ದರೆ ಅಂತಹ ಹಾಡಿಗೆ ತಾಳಾನ್ವಯವು ಸುಲಭವೂ ಸಾಧ್ಯವೂ ಆಗುತ್ತದೆ. ಆದರೆ ಮೇಲ್ಕಂಡ ವಿದ್ವಾಂಸರು ಕೊಡುವ ಉದಾಹರಣೆಗಳು ಬಹುಪಾಲು ಆಯಾ ಹಾಡುಗಳಲ್ಲಿ ಸಣ್ಣ ಸಣ್ಣ ಖಂಡಗಳಲ್ಲಿಮಾತ್ರ ಇರುವಂತಹವು;ಕವಿಯೂ ಆಗಿದ್ದ ವಾಗ್ಗೇಯಕಾರನಿಗೆ ಯಾದೃಚ್ಛಿಕ ವಾಗಿ ಸ್ಫುರಿಸಿದ ತುಣುಕುಗಳು ; ಇಡೀ ಕೀರ್ತನೆಯಲ್ಲಿ ಒಂದೇ ಛಂದಃಪ್ರಕಾರವು ಏಕರೂಪವಾಗಿ ಪ್ರಯೋಗವಾಗಿರುವುದು ಅತಿವಿರಳ. ಪುರಂದರದಾಸ, ಕನಕದಾಸರಂತಹ ಹರಿದಾಸರು ಷಟ್ಪದಿ, ಸಾಂಗತ್ಯ ಮುಂತಾದ ಛಂದೋವೃತ್ತಗಳಲ್ಲಿ ಬುದ್ಧಿಪೂರ್ವಕ ವಾಗಿಯೇ ಕಾವ್ಯರಚನೆಯನ್ನು ಮಾಡಿದ್ದಾರೆ. ತ್ಯಾಗರಾಜ, ಮೇಳತ್ತೂರು ವೆಂಕಟರಾಮ ಶಾಸ್ತ್ರಿ, ಶಹಜಿ, ತುಳಜ ಮುಂತಾದ ತೆಲುಗು ವಾಗ್ಗೇಯಕಾರರು ತಮ್ಮ ಗೇಯ

ನಾಟಕಗಳಲ್ಲಿ ಕೀರ್ತನೆಗಳ ಜೊತೆಜೊತೆಗೆ ಉತ್ಪಲಮಾಲಾ, ಚಂಪಕಮಾಲಾ, ಶಾರ್ದೂಲ ವಿಕ್ರೀಡಿತ, ಸೀಸ ಮುಂತಾದ ಛಂದೋವೃತ್ತಗಳಲ್ಲಿ ಪದ್ಯಗಳನ್ನು ರಚಿಸಿದ್ದಾರೆ. ಬಿಡಿಯಾದ ತಮ್ಮ ಕೃತಿಗಳಲ್ಲಿ ಛಂದೋಬಂಧಗಳನ್ನು ತಂದರೆ ಗೇಯತೆಯು ಕುಂಠಿತ ವಾಗುತ್ತದೆ ; ಇಡೀ ರಚನೆಗೆ ಅನ್ವಯಗೊಂಡ ತಾಳವು ಇಂತಹ ಬಂಧಗಳಿರುವೆಡೆ ಕುಂಟಬಹುದು ಎಂಬುದನ್ನು ತಿಳಿದಿದ್ದರು. 'ಸಂಗೀತದ ತಳಹದಿಯ ಮೇಲೆ ರಚಿತವಾಗಿರುವ ಕೀರ್ತನೆಗಳಲ್ಲಿ ವರ್ಣವೃತ್ತದ ಲಯಗಳನ್ನಾಗಲಿ ಮಾತ್ರಾವೃತ್ತದ ಸ್ವರೂಪವನ್ನಾಗಲಿ ನಿರ್ದೇಶಿಸುವುದು ಉಚಿತವಾಗಲಾರದು' ಎಂಬ ಜಿ. ವರದರಾಜರಾಯರ ಸೂಕ್ಷ್ಮದೃಷ್ಟಿಯ ನಿಲುವು ಸಂಗೀತಶಾಸ್ತ್ರದ ವಿಚಾರಕ್ಕೂ ಸಮ್ಮತವಾಗಿದೆ.

ಸುಳಾದಿಗಳಲ್ಲಂತೂ ಛಂದಸ್ಸಿನ ಮಾತು ದೂರವೇ ಉಳಿಯಿತು. ಏಕೆಂದರೆ ಅದರ ರಚನೆಯಲ್ಲಿ ಪಾದಸಂಖ್ಯಾನಿಯಮವನ್ನಾಗಲಿ ಪಾದಪ್ರಮಾಣ ನಿಯಮವನ್ನಾಗಲಿ ಯಾವ ಹರಿದಾಸರೂ ಅನ್ವಯಿಸಿರುವುದು ಕಂಡುಬರುವುದಿಲ್ಲ. ಹಲವು ವೇಳೆ ನುಡಿಯ ಪಙ್ತಿಗಳಲ್ಲಿ ಅಕ್ಷರಸಂಖ್ಯೆಯೂ ಅದಕ್ಕೆ ಅನ್ವಯವಾದ ತಾಳದ ಆವರ್ತಕ್ಕೆ ಅನ್ವಯ ವಾಗುವುದೇ ಇಲ್ಲ. ಇಲ್ಲಿ ತಾಳಾನ್ವಯ ಔಚಿತ್ಯವನ್ನು ದುರ್ಬಲಗೊಳಿಸುವ ಕೆಲವು ಅಂಶಗಳೆಂದರೆ ಸುಳಾದಿಯ ಒಂದೇ ನುಡಿಗೆ ಬೇರೆಬೇರೆ ತಾಳಗಳನ್ನು ಬೇರೆ ಬೇರೆ ಹಸ್ತಪ್ರತಿಗಳಲ್ಲಿ ಹೇಳಿರುವುದು, ಸಂಪಾದಕರು (ಅಥವಾ ಅವರಿಗೆ ನೆರವಾದ ಸಂಗೀತ ವಿದ್ವಾಂಸರು) ಹಸ್ತಪ್ರತಿಗಳಲ್ಲಿ ಸೂಚಿತವಾಗಿರುವ ತಾಳಗಳನ್ನು ಬಿಟ್ಟು ವೈಯಕ್ತಿಕ ರುಚಿಗೆ ಅನುಗುಣವಾದ ತಾಳಗಳನ್ನು ಸೂಚಿಸುವುದು ಇತ್ಯಾದಿ. ಸುಳಾದಿಯ ಕೆಲವು ನುಡಿಗಳಲ್ಲಿ ಗಮನಕಾಲಪ್ತಿಯಿರುವುದು ತಾಳಾನ್ವಯ ಸಂದರ್ಭದಲ್ಲಿ ನೆನಪಿಟ್ಟುಕೊಳ್ಳ ಬೇಕಾದ ಅಂಶ. ಹರಿದಾಸರ ಒಟ್ಟು ಎಂಟು ವೃತ್ತನಾಮಗಳು ಇಂದು ದೊರೆಯುತ್ತವೆ. ಪಲ್ಲವಿಯಾದ ನಂತರ ಒಂದು ವೃತ್ತ, ಒಂದು ನಾಮ (=ಪದ, ನುಡಿ) ಇಂತಹ (ಸಾಮಾನ್ಯವಾಗಿ ಎಂಟು) ಘಟಕಗಳು ಇದರಲ್ಲಿ ಇರುತ್ತವೆ. ನಾಮವಂತೂ ಇಲ್ಲಿ ಹಾಡಿನ ಚರಣವೇ, ಸರಿಸುಮಾರಾದ ಪಾದದೈರ್ಘ್ಯ, ಪಾದಸಂಖ್ಯೆ (ಸಾಮಾನ್ಯವಾಗಿ ನಾಲ್ಕು), ಆದಿ ಪ್ರಾಸ ಮುಂತಾದ ಲಕ್ಷಣಗಳಿರುತ್ತವೆ. ಆದರೆ ವೃತ್ತದ ವಿಶೇಷವೆಂದರೆ ಅದು ಕನ್ನಡದ ಸಮಚತುಷ್ಪದೀ ವೃತ್ತವಾದರೂ ನಾಲ್ಕು ಪಾದಗಳಲ್ಲಿಯೂ ಇಯತ್ತಾ ಪೂರ್ವಕವಾದ ಒಂದೇ ಪ್ರಮಾಣವಾಗಲಿ ಅಂಶಗಣ ಮಾತ್ರಾಗಣ ವಿನ್ಯಾಸವಾಗಲಿ ಇರದಿರುವುದು. ಆದುದರಿಂದ ವೃತ್ತನಾಮವೆಂಬ ಹೆಸರನ್ನು ಇಲ್ಲಿ ಸ್ಥೂಲವಾಗಿ ಮಾತ್ರ ಗ್ರಹಿಸಬೇಕು.

ಒಟ್ಟಿನಲ್ಲಿ ಹೇಳುವುದಾದರೆ ಹರಿದಾಸರ ಕೀರ್ತನೆ ಮೊದಲಾದವುಗಳಲ್ಲಿಯೂ ತ್ಯಾಗರಾಜಾದಿಗಳ ಕೃತಿಗಳಲ್ಲಿಯೂ ಛಂದೋ ಲಕ್ಷಣಗಳನ್ನು ಹುಡುಕಲೆಳಸುವುದು ಅವುಗಳ ಗೇಯಾರ್ಥದೃಷ್ಟಿಯಲ್ಲಿ ಪ್ರಯೋಜನಕರವಲ್ಲ.

ಇದಿಷ್ಟು ಕರ್ನಾಟಕ ಸಂಗೀತದ ಮಾತಾಯಿತು. ಹಿಂದೂಸ್ಥಾನೀ ಸಂಗೀತದಲ್ಲಿ ಛಂದೋವೃತ್ತಬದ್ಧ ರಚನೆಗಳನ್ನು ಗಾಯನಕ್ಕೆಂದು ನಿರ್ಮಿಸುವ ಪ್ರಯತ್ನವು-ಬಹುಶಃ ಸಂಗೀತಶಾಸ್ತ್ರೋಕ್ತ ಪ್ರಾಚೀನ ಗೇಯ ಪ್ರಬಂಧಗಳಿಂದ ಸ್ಫೂರ್ತಿಪಡೆದು ಕ್ರಿ.ಶ. 1892ರಷ್ಟು ಈಚೆಗೆ ನಡೆಯಿತು : ಮೌಲಾಬಕ್ಷ್‌ಘೀಸೆಖಾನರು ಬರೋಡದ ಮಹಾರಾಜ ಸಮಶೇರ ಬಹಾದ್ದೂರರ ಆಸ್ಥಾನ ವಿದ್ವಾಂಸರಾಗಿದ್ದು ಅವರ ಆಶ್ರಯದಲ್ಲಿ 'ಸಂಗೀತಾನುಸಾರ್ ಛಂದೋಮಂಜರಿ' ಎಂಬ ಸ್ವಾರಸ್ಯಪೂರ್ಣ ಗ್ರಂಥವೊಂದನ್ನು ಪ್ರಕಟಿಸಿದ್ದಾರೆ. ಇದರಲ್ಲಿ 58 ಹಾಡುಗಳಿವೆ. ಒಂದೊಂದೂ ಬೇರೆ ಬೇರೆ ಛಂದಸ್ಸಿನಲ್ಲಿದೆ. ಒಂದೊಂದು ಹಾಡೂ ಬೇರೆ ರಾಗ, ತಾಳಗಳಲ್ಲಿ ರಚಿತವಾಗಿದೆ. ಪ್ರತಿಯೊಂದು ಹಾಡನ್ನೂ (ಹಿಂದೂಸ್ಥಾನೀ ಸಂಗೀತದ ರಾಗತಾಳಗಳಲ್ಲಿ) ಸ್ವರಲಿಪಿಯಲ್ಲಿ ಕೊಟ್ಟಿದೆ. ಸ್ವಾರಸ್ಯವೆಂದರೆ ಪ್ರತಿಯೊಂದು ಹಾಡಿಗೂ ನಾಲ್ಕು ಪಾದಗಳು. ಇವುಗಳನ್ನು ಕ್ರಮವಾಗಿ ಸಂಸ್ಕೃತ, ಹಿಂದೀ, ಮರಾಠೀ ಮತ್ತು ಗುಜರಾತಿ ಭಾಷೆಗಳಲ್ಲಿ ಆಯಾ ಛಂದೋವೃತ್ತದ ನಿಯಮಗಳಿಗೆ ಅನುಸಾರವಾಗಿ, ನೀತಿಪರವಾದ ಭಕ್ತಿಪರವಾದ ಮಾತುಗಳಲ್ಲಿ ರಚಿಸಲಾಗಿದೆ. ಇದನ್ನು ಬರೋಡದ ರಾಜಕೀಯ ಶಾಲೆಗಳಲ್ಲಿ ಮಕ್ಕಳಿಗೆ ಕಲಿಸಲೆಂದು ರಚಿಸಿ ಪ್ರಕಟಿಸಲಾಯಿತೆಂದು ಮೌಲಾಬಕ್ಷರು ಹೇಳುತ್ತಾರೆ. ಮಕ್ಕಳಿಗೆ ಒಮ್ಮೆಗೇ ನಾಲ್ಕು ಭಾಷೆಗಳ, ವಿವಿಧ ಛಂದೋವೃತ್ತಗಳ ವಿವಿಧ ರಾಗ ತಾಳಗಳ ಬೋಧನೆಯ ಮೂಲಕ, ಸಾಮಾಜಿಕ ಆಧ್ಯಾತ್ಮಿಕ ಮೌಲ್ಯಗಳನ್ನೂ ಭಾವೈಕ್ಯವನ್ನು ಉಂಟುಮಾಡಲೆಳಸುವ ಈ ಪ್ರಯತ್ನವು ಇನ್ನೆಲ್ಲೂ ನಡೆದಿರುವುದು ಕಂಡುಬಂದಿಲ್ಲ. (ಮೈಸೂರಿನಲ್ಲಿ ಜಯರಾಯಾಚಾರ್ಯರು ಕನ್ನಡದಲ್ಲಿ ಹೆಣ್ಣುಮಕ್ಕಳಿಗೆ ಉಪಯುಕ್ತವೆನಿಸುವ ಹಾಡುಗಳನ್ನು ರಚಿಸಿ, ಹತ್ತೊಂಬತ್ತನೆಯ ಶತಮಾನದ ಮೂರನೆಯ ಪಾದದಲ್ಲಿ ಚಾಮರಾಜ ಒಡೆಯರ ಆಶ್ರಯದಲ್ಲಿ ಪ್ರಕಟಿಸಿದ್ದರು. ಆದರೆ ಇದರಲ್ಲಿ ಭಾಷೆ, ಛಂದಸ್ಸುಗಳ ವೈವಿಧ್ಯವಾಗಲಿ ಸ್ವರಲಿಪಿಯಾಗಲಿ ಇರಲಿಲ್ಲ.)

ಮೌಲಾಬಕ್ಷರ 'ಸಂಗೀತಾನುಸಾರ್ ಛಂದೋಮಂಜರಿ'ಯ ಪ್ರತಿಗಳು ಇಂದು ದುರ್ಲಭವಾಗಿವೆ. ಆದುದರಿಂದ ಸಂಗೀತಶಾಸ್ತ್ರ ಮತ್ತು ಛಂದಃಶಾಸ್ತ್ರದ ಇತಿಹಾಸಕಾರರ ಕುತೂಹಲವನ್ನು ತಣಿಸಲೆಂದು ಅದರಲ್ಲಿರುವ ಛಂದಸ್ಸು—ರಾಗ—ತಾಳಗಳ ಸಂಯೋಜನೆಯನ್ನು ಇಲ್ಲಿ ಪಟ್ಟಿಮಾಡಬಹುದು : 1) ವಿದ್ಯುನ್ಮಾಲಾ-ಝಂಜೋಟಿ-ಚತುರಶ್ರತ್ರಿಪುಟ 2) ಮಾಣವಕ-ಸಾರಂಗ-ಜಲದದಾದ್ರಾ 3) ಪ್ರಮಾಣಿಕಾ-ಪರಜ್-ಜಲದದಾದ್ರಾ 4) ಸಮಾನಿಕಾ-ದಿವ್ಯ ಹಿಂಡೋಲ್-ತಿಶ್ರಜಾತಿ ಏಕ 5) ಮಣಿಬಂಧ-ಶ್ರೀರಂಜನಿ-ಚತುರಶ್ರಜಾತಿ ಪ್ರತಿಧ್ರುವ 6) ಚಂಪಕಮಾಲಾ (ರುಕ್ಮಾವತೀ)-ಛಾಯಾ-ಚತುರಶ್ರಜಾತಿ ತೀನ್‌ತಾಲ್ 7) ಹಂಸೀ-ಯದುಕುಲ ಕಾಂಬೋಧೀ-ಮಿಶ್ರಗಾರಗೀ ಪಂಚಕ 8) ಮತ್ತಾ-ಕಾಲಂಗಡಾ-ಚ. ತೀನ್‌ತಾಲ್ 9) ಕಾಮದಾ-ಕೇದಾರಾ-

ಚ ತೀನ್‌ತಾಲ್ 10) ಶುದ್ಧಕಾಮದಾ (ವಿಬುಧ ವಂದಿತಾ)-ಪ್ರದೀಪಕ-ಚ ತೀನ್‌ತಾಲ್ 11) ಲಲಿತ-ಕಾಮೋದೀ-ಚ ತೀನ್‌ತಾಲ್ 12) ಇಂದ್ರವಜ್ರಾ-ನಟಭೈರವಿ-ಖಂಡ 13) ಉಪೇಂದ್ರವಜ್ರಾ-ಕಾಮೋದೀ-ಪ್ರತಿವರ್ಧನ 14) ಉಪಜಾತಿ-ಸಿಂಧುರಾ-ಸಂಕೀರ್ಣಜಾತಿ ಹಂಸನಾದ 15) ಶಾಲಿನೀ-ಕೇದಾರ-ಚ ಉಚ್ಛವ 16) ದೋಧಕ-ದರಬಾರೀ ಕಾನಡಾ- ಚ ತೀನ್‌ತಾಲ್ 17) ರಥೋದ್ಧತಾ-ಪುನ್ನಾಗವರಾಳಿ-ಚ ತೀನ್‌ತಾಲ್ 18) ಮೌಕ್ತಿಕಮಾಲಾ (ಸಾಂದ್ರಪದಾ)-ಶಂಕರಾ-ಚ ತೀನ್‌ತಾಲ್ 19) ಸ್ವಾಗತಾ-ಛಾಯಾ-ಚ ತೀನ್‌ತಾಲ್ 20) ಭ್ರಮರವಿಲಸಿತ-ಹಿಂಡೋಲ್-ಚ ತೀನ್‌ತಾಲ್ 21) ಭದ್ರಿಕಾ-ಕೌಸೀಕಾನಡಾ- ಚ ಆಡಾಚೌತಾಲ್ 22) ಭುಜಂಗಪ್ರಯಾತ-ಮಾಲಕೋಸ್-ಖಂಡಜಾತಿ ಏಕತಾಲ್ 23) ದ್ರುತವಿಲಂಬಿತ-ಸೋಹನೀ-ಚ ತೀನ್‌ತಾಲ್ 24) ಪ್ರಿಯಂವದಾ-ತ್ರಿವೇಣೀ-ಚ. ತೀನ್‌ತಾಲ್ 25) ವಂಶಸ್ಥ-ದೇವಗಾಂಧಾರ್-ಸಿಸ್ಸಾರುಕ 26) ಇಂದ್ರ (ಇಂದ್ರ) ವಂಶಾ-ನವರೋಜ್-ತ್ರಿಖಂಡವಜ್ರ 27) ತೋಟಕ-ದೇಶ್-ಚ ತೀನ್‌ತಾಲ್ 28) ಜಲೋದ್ಧತಗತಿ-ದಿನರೀ ಪೂರ್ಯಾ (ಪಂಥುವರಾಳಿ) - ಚ ತೀನ್‌ತಾಲ್ 29) ಸ್ರಗ್ವಿಣೀ-ಬಾಗೇಶ್ರೀ - ತಿಶ್ರಜಾತಿ ರೂಪಕ 30) ಪ್ರಮಿತಾಕ್ಷರಾ-ಅಸಾವರೀ-ಚ ಸವಾರೀ 31) ವೈಶ್ವದೇವಿ - ಬೇಹಾಗಡ-ವಿಜಯಾನಂದ 32) ಮಾಲತೀ -ವಸಂತ -ಚ ತೀನ್‌ತಾಲ್ 33) ಯೂಥಿಕಾ-ಮಧ್ಯಮಾವತೀ ಸಾರಂಗ್-ಮಿಶ್ರಗಜಲೀಲಾ 34) ಪ್ರಭಾವತೀ - ಪ್ರಭಾವತೀ - ಚತುರಶ್ರಜಾತಿ ಗಜಲೀಲಾ 35) ಮಂಜುಭಾಷಿಣೀ-ಮುಖಾರೀ-ವಸಂತ 36) ಪ್ರಹರ್ಷಿಣೀ-ಶಹನಾ-ಚತುರಶ್ರಜಾತಿ ಪ್ರತಿಮಂಠ 37) ಮತ್ತಮಯೂರೀ-ಶಾಮ-ಷಟ್ಪಿತಾಪುತ್ರಕ 38) ವಿಭಾವರೀ-ಪಿಲೂ-ಖಂಡಜಾತಿ ಆಡಾಚೌತಾಲ್ 39) ಮಧುಮಾಧವೀ (ಸಿಂಹೋನ್ನತಾ, ವಸಂತತಿಲಕಾ, ಉದ್ಧರ್ಷಣೀ)-ಯಮುನಾ ಕಲ್ಯಾಣ-ಲಕ್ಷ್ಮೀ 40) ಪ್ರಹರಣಕಲಿಕಾ-ಗಾರಾ-ಚ ತೀನ್‌ತಾಲ್ 41) ಅಸಂಬಾಧಾ-ಆರಭೀ-ಚತುರಶ್ರಜಾತಿ ಭಾನುಮತಿ 42) ಮಧ್ಯಕ್ಷಾಮಾ-ರೀತಿಗೌಲ-ಚತುರಶ್ರಜಾತಿ ಭಾನುಮತಿ 43) ಮಾಲಿನೀ-ಸೋರಠ್-ಖಂಡಜಾತಿ ಜಗಪಾಲ 44) ಚಾಮರ-ಪಹಾಡಿ (ಕಾಮೋದೀ) ದಿವ್ಯ ಸಂಕೀರ್ಣಜಾತಿ 45) ಪಂಚಚಾಮರ-ಶ್ರೀರಾಗ ಕರ್ನಾಟಕೀ ತ್ರಿಶ್ರಜಾತಿ ಏಕ 46) ಶಿಖರಿಣೀ-ಬಹಾರ್-ಮಿಶ್ರಜಾತಿಧ್ರುವ 47) ಪೃಥ್ವೀ-ಗೌರೀ-ಚತುರಶ್ರಜಾತಿ ಏಕ 48) ಹರಿಣೀ-ಕಾಮೋದ-ಮಿಶ್ರಜಾತಿ ಧ್ರುವ 49) ಮಂದಾಕ್ರಾಂತಾ-ವೇಗವಾಹಿನೀ-ಮಿಶ್ರಜಾತಿ ರೂಪಕ 50) ವಿಬುಧಪ್ರಿಯಾ (ಚಂಚರೀ-ಚರ್ಚರೀ)-ಅಸಾವರೀ-ಮಿಶ್ರಜಾ ಷಷ್ಟ 51) ಶಾರ್ದೂಲವಿಕ್ರೀಡಿತ-ಮುಖಾವರೀ-ಖಂಡಜಾತಿ ಏಕ 52) ಸ್ರಗ್ಧರಾ-ಹರಿಶ್ಚಂದ್ರಿಕಾ-ಚತುಶ್ರಪಂಚಕ 53) ಅಮೃತಧ್ವನೀ-ಭೈರವ್-ಖಂಡಚೌತಾಲ್ 54) ಮಂದಾರವಮಾಲಾ-ರವಿಚಂದ್ರಿಕಾ-ಸತ್ಯಸೇನಾ 55) ಉಮಾ (ಮದಿರಾ)-ಸಿಂಧುರಾ-

ದಿವ್ಯಮಣೀ 56) ಮದೀರಾ(ಶೋಭ, ಇಂದವಿಜೇ)-ಖಮಾಜ್-ಚ ತೀನ್‌ತಾಲ್ 57) ಮದಿರಾ (ಸವಾಈ)-ಖರಹರಪ್ರಿಯಾ-ಚ ತೀನ್‌ತಾಲ್ 58) ಸವಾಈ-ನಾಟ ಕುರುಜಿ-ಚಂದ್ರಕಾಂತಾ. ಈ ಪಟ್ಟಿಯಲ್ಲಿ ಕೆಲವು ಅಪ್ರಸಿದ್ಧ ಛಂದಸ್ಸುಗಳೂ ಕರ್ನಾಟಕ ಸಂಗೀತದ ರಾಗಗಳೂ ತಾಳಗಳೂ ಹಿಂದೂಸ್ಥಾನೀ ಸಂಗೀತದ ರಾಗಗಳಿಗೆ ಕರ್ನಾಟಕ ಸಂಗೀತದ ತಾಳಗಳೂ, ಕರ್ನಾಟಕ ಸಂಗೀತದ ರಾಗಗಳಿಗೆ ಹಿಂದೂಸ್ಥಾನೀ ಸಂಗೀತದ ತಾಳಗಳೂ ಇವೆಯೆಂಬುದನ್ನು ಗಮನಿಸಬೇಕು. ಇದು ಒಂದು ತೆರನಾದ ಸಂಗೀತ ಭಾವೈಕ್ಯ.

ಮೌಲಾಭಕ್ಷರು ಹಾಡುಗಳನ್ನು ಕೊಡುವಾಗ ಈ ಕ್ರಮವನ್ನು ಅನುಸರಿಸಿದ್ದಾರೆ : ಛಂದೋವೃತ್ತದ ಹೆಸರು, ಅದರ ಕ್ರಮಸಂಖ್ಯೆ, ವೃತ್ತದ ಗುಣವಿನ್ಯಾಸ, ಅದರ ಚರಣದಲ್ಲಿರುವ ಅಕ್ಷರ ಸಂಖ್ಯೆ-ಅದರ ಮಾತ್ರಾ ಸ್ವರೂಪ-ತಾಳದ ಲಘು ಮಾತ್ರಾ (=ಅಕ್ಷರ ಕಾಲ ಪ್ರಮಾಣ) ಆಯಾ ಛಂದೋವೃತ್ತದಲ್ಲಿ ನಿರ್ಮಿತವಾದ ಮಾತುಗಳು, ಸಂಸ್ಕೃತ- ಹಿಂದಿ -ಮರಾಠೀ - ಗುಜರಾತೀ ಎಂಬ ಭಾಷಾ ಕ್ರಮದ ಪಾದಗಳಲ್ಲಿ-ರಾಗದ ಹೆಸರು=ತಾಳದ ಹೆಸರು (ಲಘು ಜಾತಿ ಪೂರ್ವಕವಾಗಿ, ವಿಲಂಬ, ಮಧ್ಯ, ದ್ರುತ ಎಂಬ ಲಯವನ್ನು ಸೂಚಿಸಿ) - ಒಂದೊಂದು ವೃತ್ತಪಾದಕ್ಕೂ ಒಂದೊಂದು ಧಾತುಪಙ್ಕ್ತಿ - ಅದಕ್ಕೆ ಅಳವಡಿಸಿದ ನಾಲ್ಕು ಭಾಷೆಗಳ ಮಾತು ಪಙ್ಕ್ತಿಪಾದ - ಇಂತಹ ನಾಲ್ಕು ಪಙ್ಕ್ತಿ ಸಮುಚ್ಚಯಗಳು. ಇಂತಹ ಒಂದು ಉದಾಹರಣೆಯನ್ನಿಲ್ಲಿ ನೀಡಬಹುದು. (ಸ್ವರಲಿಪಿ ಚಿಹ್ನೆಗಳನ್ನು ಬಿಟ್ಟಿದೆ).

ಪಂಚಚಾಮರ (ನಾರಾಚ) 45

ಚರಣ ಅಕ್ಷರ್ 16, ಗಣ - ಜ, ರ, ಜ, ರ, ಜ, ಗ. ಮಾತ್ರಾ ಸ್ವರೂಪ್ 151· 515· 151· 515· 151· 5· ಮಾತ್ರಾ ಲಘು. 24

ಸಂ. ಸುರದ್ರುಮೂಲ ಮಂಡಪೇ ವಿಚಿತ್ರ ರತ್ನ ನಿರ್ಮಿತೇ । ಲಸದ್ವಿತಾನಭೂಷಿತೇ
ಸಲೀಲವಿಭ್ರಮಾಲಸಮ್ ।

ಸುರಾಂಗನಾಭವಲ್ಲವೀಕರ ಪ್ರಪಂಚಚಾಮರ । ಸ್ಫುರತ್ಸಮೀರಜೀವಿತಂ
ಸದಾಚ್ಯುತಂ ಭಜಾಮಿತಮ್ ॥

ಹಿಂ. ಗಭಸ್ತಿಪಾದದೀಧತಂ ಮಯೂಖರಶ್ಮಿಜಾನಿಯೆ । ಮರೀಚಿತೇಜ ಅರ್ಚಿಭಾ
ಪ್ರಭಾರುಪೀ ಬಖಾನಿಯೆ ।
ಘೃಣಿಂಕರಂದತೀವಿಭಾಸ ಉಸ್ರಅಂಶುಮಾನೆಯೆ । ಸುಧಾಮಜ್ಯೋತಿ
ಭಾನುಕೀರ್ಣದೀಪ್ತಗೋಪ್ರಮಾನಿಯೆ ॥

ಮ. ಅಜೂನಕೇಶತೂಮಚಿ ವಿಮುಕ್ತನಾಹಿ ಜಾಹಲೆ । ಕಶೀ ಕರೀಲ ಬದ್ಧ ಹೀ
ಅಧೀಂಚ ಬಾಣ ಆಪಲೀ
ಅಶಾಮದೀಯ ಉತ್ತರೆ ಮನಾಂತಘಾರ ಖೋಂಚಲೀ । ಜಣೂಗಮೆ
ತಿಲಾ ಉರೀ ಸುರೀ ಚಕಾಯ ಬೋಂಚಲೀ

ಗು. ಸುತಾರ ಸೈ ಲವಾರ ರಂಗರೇಜ ಮೋಚಿ ಆದಿ ತೇ । ಕರೇ ಮಜೂರಿ
ಮಾಸಮಾಹಿ ಏಕದೀಪ್ರತೀ ಹಿತೇ ।
ಗರೀಬ ಶಾಕ ವೇಚನಾರ ಆದಿ ಕಾಕ ವರ್ಷಮಾಂ । ದಿಯೇ ಸಹೂ ಗಜಾ
ಪ್ರಮಾಣ ರಾಜನೀ ಲಹೆ ಕ್ಷಮಾ ॥

ರಾಗ ಶ್ರೀರಾಗ ಕರ್ನಾಟಕೀ, ಮಿಶ್ರಜಾತಿ ಏಕ ತಾಲ್, ಮಾತ್ರಾ 3 ಮಧ್ಯಕಾಲ್.

	ಸ	ಗಾ ರಿ	ಸಾ ರಿ	ನಿ ಸ ನಿ	ನೀ ಪ	ನೀ ಸ	ರಿ ಮ ಪ	ಗ ರಿ ಗ	ರಿ ಸ
1	ಸು	ರ ದ್ರು	ಮೂ ಲ	ಮಂ ಡ	ಸೇ ವಿ	ಚಿ ತ್ರ	ರ ತ್ನ	ನಿ ರ್ಮಿ	ತೇ
2	ಗ	ಭ ಸ್ತಿ	ಪಾ ದ	ದೀ ಧ	ತಂ ಮ	ಯೂ ಷ	ರ ಶ್ಮಿ	ಜಾ ನಿ	ಯೆ
3	ಅ	ಜೂ ನ	ಕೇ ಶ	ತೂ ಮ	ಚಿ ವಿ	ಮು ಕ್ತ	ನಾ ಹಿ	ಜಾ ಹ	ಲೆ
4	ಸು	ತಾ ರ	ಸ್ಯೆ ಲ	ವಾ ರ	ರಂ ಗ	ರೇ ಜ	ಮೋ ಚಿ	ಆ ದಿ	ತೇ

	ಸ	ರೀ ಮ	ಪಾ ನಿ	ಪ ಮ ರಿ	ಗ ರಿ ಸ	ರಿ ಪ ಮ	ರಿ ಗ ರಿ	ನಿ ಗ ರಿ	ನೀ
1	ಲ	ಸ ದ್ದಿ	ತಾ ನ	ಭೂ ಷಿ	ತೇ ಸ	ಲೀ ಲ	ವಿ ಭ್ರ	ಮಾ ಲ	ಸಮ್
2	ಮ	ರೀ ಚಿ	ತೇ ಜ	ಅ ರ್ಚಿ	ಭಾ ಪ್ರ	ಭಾ ರು	ಪೀ ಬ	ಖಾ ನಿ	ಯೆ
3	ಕ	ಶೀ ಕ	ರೀ ಲ	ಬ ದ್ಧ	ಹೀ ಅ	ಧೀಂ ಚ	ಬಾ ಇ	ಅ ಪ	ಲೇ
4	ಕ	ರೇ ಮ	ಜೊ ರಿ	ಮಾ ಸ	ಮಾ ಹಿ	ಏ ಕ	ದೀ ಪ್ರ	ತೀ ಹಿ	ತೇ

	ಮ	ಪಾ ನಿ	ಸ ರಿ ಸ	ರಿ ಗ ರೀ	ಸಾ ರೀ	ನಿ ಸ ರಿ	ಗ ರಿ ಸ	ಸ ನಿ ಪ	ಧನಿ
1	ಸು	ರಾಂ ಗ	ನಾ ಭ	ವ ಲ್ಲ	ವೀ ಕ	ರ ಪ್ರ	ಪು ಜ	ಚಾ ಮ	ರ
2	ಘೃ	ಣಿಂ ಕ	ರಂ ದ	ತೀ ವಿ	ಭಾ ಸ	ಉ ಸ್ರ	ಅಂ ಶು	ಮಾ ನಿ	ಯೆ
3	ಅ	ಶಾ ಮ	ದೀ ಯ	ಉ ತ್ತ	ರೇಂ ಮ	ನಾಂ ತ	ಘಾ ರ	ಘೋಂ ಚ	ಲೀ
4	ಗ	ರೀ ಬ	ಶಾ ಕ	ವೀ ಚ	ನಾ ರ	ಆ ದಿ	ಕಾಂ ಕ	ಪ ರ್ಷ	ಮಾಂ

	ನಿ	ಸ ರಿ ಮ	ರಿ ಗ ರಿ	ಸ ನಿ ಪ	ಧ ನಿ ಪ	ಮ ಪ ಮ	ರಿ ಗ ರಿ	ಸ ನಿ ರಿ	ಸಾ
1	ಸ್ಫು	ರತ್ ಸ	ಮೊ ರ	ಜೀ ವಿ	ತಂ ಸ	ದಾ ಚ್ಯು	ತಂ ಭ	ಜಾ ಮಿ	ತವ್
2	ಸು	ಧಾ ಮ	ಜ್ಯೋ ತಿ	ಭಾ ನು	ಕೀ ರ್ಣ	ದೀ ಪ್ತ	ಗೋ ಪ್ರ	ಮಾ ನಿ	ಯೆ
3	ಜ	ಣೂ ಗ	ಮೆ ತಿ	ಲಾ ಉ	ರೀ ಸು	ರೀ ಜ	ಕಾ ಯ	ಬೋಂ ಚ	ಲೀ
4	ದಿ	ಯೋ ಸ	ಹೊ ಗ	ಜಾ ಪ್ರ	ಮಾ ಣ	ರಾ ಜ	ನೀ ಲ	ಹೆ ಕ್ಷ	ಮಾ

ಮೇಲೆ ಹೇಳಿರುವ 58 ಪ್ರಬಂಧಗಳೂ ಯಥಾಕ್ಷರ ಪ್ರಬಂಧಗಳು ; ಹ್ರಸ್ವಾಕ್ಷರ ವನ್ನು ಒಂದು ಸ್ವರವೂ ದೀರ್ಘಾಕ್ಷರವನ್ನೂ ದೀರ್ಘಸ್ವರವೋ ಎರಡು ಸ್ವರಗಳೋ ನಿರ್ವಹಿಸುತ್ತವೆ. ಶಾಲಾ ಮಕ್ಕಳಿಗಾಗಿ ರಚಿತವಾಗಿರುವುದರಿಂದ ಇದು ಸರಿಯೂ ಹೌದು. ಛಂದಸ್ಸಿಗೂ ಗೇಯತೆಗೂ ತಾಳಕ್ಕೂ ಇರುವ – ಬಹುಶಃ ಇರಬೇಕಾದ – ಸಂಬಂಧವನ್ನು ಈ ಹಾಡುಗಳು ಚೆನ್ನಾಗಿ ಸೂಚಿಸುತ್ತವೆ.

೪. ಛಂದಸ್ಸು ಮತ್ತು ತಾಳ

ಪ್ರಸ್ತುತ ಲೇಖನದ ಎರಡನೆಯ ಅಧಿಕರಣದಲ್ಲಿ ಉಲ್ಲೇಖಿಸಿರುವ 32 ಛಂದೋನಿರ್ಯುಕ್ತಗೇಯ ಪ್ರಬಂಧಗಳಲ್ಲಿ ಹಲವೂ ಮೂರನೆಯ ಅಧಿಕರಣದಲ್ಲಿ ಉಲ್ಲೇಖಿತವಾದ ಐವತ್ತೆಂಟು ಗೇಯ ಪ್ರಬಂಧಗಳೂ ತಾಳನಿರ್ಯುಕ್ತವಾಗಿವೆ ಯೆಂಬುದನ್ನು ಗಮನಿಸಬೇಕು. ಎರಡನೆಯ ಅಧಿಕರಣದಲ್ಲಿ ವಿವರಿಸಲಾಗಿರುವ ಕೆಲವಕ್ಕೆ ತಾಳಸಹಿತವಾಗಿರಬೇಕೆಂಬ ನಿಯಮವು ಮಾತ್ರ ಇದೆ ; ಉಳಿದವಕ್ಕೆ ಇಂತಿಂತಹ ತಾಳದಲ್ಲಿಯೇ ರಚಿತವಾಗಬೇಕು ಎಂಬ ವಿಶೇಷ ವಿಧಿಯಿದೆ. ಹಾಡಿನಲ್ಲಿರುವ ಮಾತುವಿನ ಛಂದಸ್ಸಿಗೂ ತಾಳಕ್ಕೂ ಇರುವ ಸಂಬಂಧವನ್ನು ಕುರಿತು ಈಗ ಸಂಕ್ಷೇಪವಾಗಿ ವಿವೇಚಿಸಬಹುದು.

ಪದ್ಯದಲ್ಲಿ ಛಂದಸ್ಸು ಮಾಡುವ ಕೆಲಸವನ್ನು ಸಂಗೀತದಲ್ಲಿ ತಾಳವು ನಿರ್ವಹಿಸುತ್ತದೆ ಎಂದು ಸ್ಥೂಲವಾಗಿ ಹೇಳಬಹುದು. ಒಂದೇ ಗೇಯ ಪ್ರಬಂಧವನ್ನು ತಾಳ ಛಂದಸ್ಸು ಗಳೆರಡೂ ಏಕಕಾಲದಲ್ಲಿ ಪರಸ್ಪರ ವಿರೋಧವಿಲ್ಲದೆ ನಿರ್ವಹಿಸಬಲ್ಲವೆ ?

ಛಂದಃಶಬ್ದಕ್ಕೆ ವೇದಮಂತ್ರ, ಆಹ್ಲಾದಗೊಳಿಸುವುದು, ಊರ್ಜಸ್ಸನ್ನು ಕೊಡು ವಂತಹದು, (ಪಾಪಗಳನ್ನೂ ದೋಷಗಳನ್ನೂ) ಆಚ್ಛಾದಿಸುವುದು ಎಂಬ ಅರ್ಥಗಳು ವೇದದಲ್ಲಿಯೂ, ವೃತ್ತಗಳು, ಅವುಗಳ ವರ್ಗಗಳು, ಪದ್ಯರಚನೆಗೆಂದು ಏರ್ಪಟ್ಟ ಶಾಸ್ತ್ರ (ಛಂದೋ ವಿಚಿತಿ), ಅಕ್ಷರಪರಿಮಿತಿ ('ಯದಕ್ಷರ ಪರಿಮಾಣಂ ತಚ್ಛಂದಃ'), ಇಚ್ಛೆ, ಸಂಕಲ್ಪ, ಸಂತೋಷ, ಆಶಯ ಎಂಬ ಲೌಕಿಕಾರ್ಥಗಳು ವ್ಯವಹಾರದಲ್ಲಿಯೂ ಇವೆ ; 1) 'ಕವಿ ಹೃದಯವು ಕಂಡುಕೊಂಡ ಅತಿಸೂಕ್ಷ್ಮವೂ ಆವೇಶಯುತವೂ ಆದ ಅನುಭವ ವಿಶೇಷಗಳನ್ನು ಸಹೃದಯನಿಗೆ ಹೃದಯ ಸಂವಾದವುಂಟಾಗುವಂತೆ ವ್ಯಕ್ತ ಪಡಿಸಲು ಇರುವಂತಹ ಸಮರ್ಥವಾದ ಮಾರ್ಗ 2) ಉಕ್ಕಿಂದವಾಗಿ ಹರಿಯುವ ಭಾವವನ್ನೂ ಭಾವನೆಗಳನ್ನೂ ನಿಯತವಾದ ಮಾತಿನ ಚೌಕಟ್ಟಿನಲ್ಲಿ ಪರಿಣಾಮಕಾರಿ ಯಾಗುವಂತೆ ಅಡಗಿಸುವ ವಿಧಾನ 3) ಕಾವ್ಯದ ಗೇಯಾಂಶವನ್ನೂ ನಾಟ್ಯಾಂಶವನ್ನೂ ಹಿಡಿದಿಡುವ ಕಟ್ಟು ; ಅದರ ಗತಿ ವಿಶೇಷಗಳಿಂದಾಗಿ ಸಂತೋಷವನ್ನೂ ವಿಸ್ಮಯದ ಅನುಭವವನ್ನೂ ನಾವು ಪಡೆಯುತ್ತೇವೆ 4) ಬಿಗಿಪು (Rigidity) ಮತ್ತು ಅಡಕ (Short Compass) ಗುಣಗಳಿಂದಾಗಿ ಶೈಲಿಯಲ್ಲಿ ಒಂದು ಬಿಕ್ಕಟ್ಟು, ಪದ

ಪ್ರಯೋಗದಲ್ಲಿ ಮತ್ತು ಅಭಿವ್ಯಕ್ತಿರೀತಿಯಲ್ಲಿ ಒಂದು ಆಯ್ಕೆ ಮತ್ತು ಅಚ್ಚುಕಟ್ಟು ಸಾಧಿತವಾಗುತ್ತವೆ ; ತನ್ಮೂಲಕವಾಗಿ ವ್ಯಕ್ತಿಯ-ವಿಶಿಷ್ಟ ಸಂಪನ್ನನಾದ ವ್ಯಕ್ತಿಯ-ಉಕ್ತಿಸಾರವನ್ನು ಸಂಗ್ರಹಿಸಿ ಇಟ್ಟಂತಾಗುತ್ತದೆ 5) ಸ್ಮರಣೆಗೆ ಸುಲಭವಾದ ಮಾರ್ಗ, ಈ ಮೂಲಕ ಶ್ರೇಷ್ಠವಾದ ಸಾಹಿತ್ಯವನ್ನು ಉಳಿಸಿಕೊಂಡು ಬರುವುದು ಸಾಧ್ಯವಾಗಿದೆ. ಶ್ರುತಿರೂಪದಲ್ಲಿ ಪ್ರಾಚೀನಕಾಲದ ಸಾಹಿತ್ಯ ಉಳಿದು ಬಂದಿರುವುದೇ ನಿದರ್ಶನ'-ಎಂದು ಛಂದಸ್ಸಿನ ಪ್ರಯೋಜನಗಳನ್ನು ಟಿ. ವಿ. ವೆಂಕಟಾಚಲಶಾಸ್ತ್ರಿಯವರು (ಕನ್ನಡ ಛಂದಃಸ್ವರೂಪ, ಪು. 6, 7) ಸಂಗ್ರಹಿಸುತ್ತಾರೆ.

ತಾಲ ಎಂಬುದು (ಭ್ವಾದಿಗಣ, ಚುರಾದಿ ಗಣಗಳಲ್ಲಿ ಉಭಯಪದಿಯಾದ) 'ತಲ್' ಧಾತುವಿಗೆ (=ಪ್ರತಿಷ್ಠಾನವನ್ನು ಉಂಟುಮಾಡು ನೆಲೆಗೊಳಿಸು, ಅಡಿಪಾಯವನ್ನು ಕಟ್ಟು, ನಿಗದಿಗೊಳಿಸು) ಘಞ್ ಪ್ರತ್ಯಯವನ್ನು (ಅಧಿಕರಣಾರ್ಥದಲ್ಲಿ) ಹಚ್ಚಿದಾಗ ನಿಷ್ಪನ್ನವಾಗುತ್ತದೆ. ಅಧಿಕರಣವೆಂದರೆ ಇಲ್ಲಿ ಆಧಾರ. ಹೀಗಾಗಿ ತಾಲವೆಂದರೆ ಆಧಾರ, ಪ್ರತಿಷ್ಠಾನ ಅಥವಾ ಅಪುಗಳನ್ನು ಉಂಟು ಮಾಡುವುದು ಎಂದು ಅರ್ಥ. ಅದು ಸಂಗೀತಕ್ಕೆ, ಎಂದರೆ ಗೀತವಾದಿತ್ರ ನರ್ತನಗಳಿಗೆ ಆಧಾರವನ್ನು, ತಲವನ್ನು ಉಂಟುಮಾಡುತ್ತದೆ. ಈ ಕಲೆಗಳಲ್ಲಿ ಒಂದೊಂದರಲ್ಲಿಯೂ ಪರಸ್ಪರವಾಗಿಯೂ ಕಾಲಸಾಮ್ಯವನ್ನೂ ಕ್ರಿಯಾಸಾಮ್ಯವನ್ನೂ ಉಂಟುಮಾಡುತ್ತದೆ. ಸಂಗೀತದಲ್ಲಿ ಅದು ಕಾಲಮಾಪನ ಸಾಧನ. ಸಂಗೀತದ ಮೂಲದ್ರವ್ಯವು ನಾದಲಯ-ಕಾಲ ಲಯಗಳಿಂದಾದುದು; ಈ ಸಂಕೀರ್ಣವು ಚಲನಶೀಲವಾದುದರಿಂದ ಕ್ರಿಯಾಶಕ್ತಿಯನ್ನು ಪಡೆಯುತ್ತದೆ. ಬಾಹ್ಯಜಗತ್ತಿನ ಎಲ್ಲ ಭೌತಿಕ ಘಟನೆಗಳಂತೆ ಅದೂ ಕಾಲ-ದೇಶಗಳ ಸಂಯುಕ್ತಘಟಕದಲ್ಲಿ ಕೆಲಸ ಮಾಡುತ್ತದೆ ; ಸ್ವರವು ದೇಶ ಸಂಬಂಧಿಯಾದುದು-ತಾಲವು ಕಾಲಸಂಬಂಧಿಯಾದುದು, ಕೆಲವು ನಿರಂತರತೆ ಮತ್ತು ಏಕಕಾಲಿಕತೆ ಎಂಬ ಎರಡು ಅಭಿವ್ಯಕ್ತಿ ರೀತಿಗಳಿಂದ ಬಾಹ್ಯಜಗತ್ತಿನ ಭೌತಿಕ ಘಟನೆಗಳಿಗೆ ಪ್ರತಿಷ್ಠಾನವನ್ನು ಉಂಟುಮಾಡಿ ಭೌತಿಕ ಜಗತ್ತಿಗೂ ಅಹಂ ಪ್ರಜ್ಞೆಗೂ ಸಂಬಂಧವನ್ನು ಏರ್ಪಡಿಸುತ್ತದೆ.ಅಂತೆಯೆ ತಾಲವು ಗಾನವಾದನ ನರ್ತನಗಳ ವಿವಿಧ ಘಟನೆಗಳಲ್ಲಿ ಕ್ರಮಶೀಲವಾದ ನಿರಂತರತೆಯನ್ನೂ ಅನೇಕ ಘಟನೆಗಳಲ್ಲಿ ಏಕಕಾಲಿಕತೆಯನ್ನು ಸ್ಫುರಿಸುತ್ತದೆ; ಗಾಯಕವಾದಕ ಶ್ರೋತೃಗಳಲ್ಲಿಯೂ ನರ್ತಕ-ಪ್ರೇಕ್ಷಕರಲ್ಲಿಯೂ ಕಾಲ ಸಾಮ್ಯವನ್ನು ಉಂಟುಮಾಡುತ್ತದೆ. ಈ ಕಲೆಗಳಲ್ಲಿ ಪ್ರತಿಯೊಂದರಲ್ಲಿಯೂ ಪ್ರತಿಯೊಂದು ಅಂಗದ ಪ್ರತಿಯೊಂದು ಅಂಶವನ್ನೂ ಕರಾರುವಕ್ಕಾಗಿ ಕಾಲದಲ್ಲಿ ಅಳೆಯುತ್ತದೆ.

ತಾಲವು ಗೀತಾದಿಗಳಲ್ಲಿ ಕಾಲಮಾಪನವನ್ನು ಹೇಗೆ ಸಾಧಿಸುತ್ತದೆ ? ತಾಲವು ನಿಯತವಾದ ಒಂದು ಕಾಲ ಪರಿಮಾಣವನ್ನು ಪ್ರಮಾಣ (Standard) ವೆಂದಿಟ್ಟುಕೊಂಡು ಈ ಪರಿಮಾಣವನ್ನು ನಿಯತವಾದ ಸ್ಥಾನಗಳಲ್ಲಿ ಘಾತ (ಒತ್ತು)ಗಳನ್ನೇರ್ಪ

ಡಿಸುವುದರಿಂದ ಒಳವಿಭಾಗಗಳನ್ನಾಗಿ ವಿಂಗಡಿಸಿಕೊಳ್ಳುತ್ತದೆ. ಇಂತಹ ಒಂದೊಂದು ಒಳವಿಭಾಗಕ್ಕೂ ಅಂಗವೆಂದು ಹೆಸರು. ಹಿಂದೆ ಭಾರತೀಯ ಸಂಗೀತದ ತಾಳಗಳಲ್ಲಿ ದ್ರುತ, ಲಘು, ಗುರು, ಪ್ಲುತ, ಹಂಸಪಾದ ಎಂಬ ಐದು ಅಂಗಗಳೂ ನಂತರದ ಕಾಲದಲ್ಲಿ ಅನುದ್ರುತ ಎಂಬ ಇನ್ನೊಂದು ಅಂಗವೂ ಇದ್ದವು. ಈಗ ಕರ್ನಾಟಕ ಸಂಗೀತದ ತಾಳಗಳಲ್ಲಿ ಅನುದ್ರುತ, ದ್ರುತ, ಲಘು ಎಂಬ ಮೂರು ಅಂಗಗಳು ಮಾತ್ರ ಇವೆ. ಅಂಗಗಳ ಸಂಖ್ಯೆ ಮತ್ತು ಕ್ರಮವು ಆಯಾ ತಾಳವನ್ನು ಉಳಿದವುಗಳಿಂದ ಪೃಥಕ್ಕರಿಸಿ ಅನನ್ಯ ಸದೃಶತೆಯನ್ನು ನೀಡುತ್ತವೆ. ಹೀಗೆ ನಿಯತವಾದ ಅಂಗಗಳು ನಿಯತಸಂಖ್ಯೆ ಮತ್ತು ನಿಯತಕ್ರಮದಲ್ಲಿ ಆಯಾ ನಿಯತಕಾಲ ಪರಿಮಾಣದಲ್ಲಿ ಅಡಕಗೊಂಡಿರುತ್ತವೆ. ಈ ಪರಿಮಾಣಕ್ಕೆ ತಾಲಾವರ್ತವೆಂದು ಹೆಸರು. ಏಕೆಂದರೆ ಗೀತಾದಿಗಳ ಆರಂಭದಿಂದ ಅಂತ್ಯದವರೆಗೆ ಈ ಪರಿಮಾಣವು ಎಡೆಬಿಡದೆ ಆವರ್ತಗೊಳ್ಳುತ್ತಲೇ ಇರುತ್ತದೆ. ಇದರಿಂದಲೇ ಗೀತಾದಿಗಳ ಕಾಲವನ್ನು ಅಳೆಯುವುದು. ತಾಳಾವರ್ತವು ಸುರುಳಿಯಾಕಾರದಲ್ಲಿ ನಿರಂತರವಾಗಿ ಮುನ್ನಡೆಯುತ್ತಿರುತ್ತದೆ, ಆದರೆ ನಿಯತಸ್ಥಾನಗಳಲ್ಲಿಟ್ಟ ನಿಯತಸಂಖ್ಯೆಯ ಘಾತಗಳ ಒಂದು ವಿಶಿಷ್ಟ ಮಾದರಿಯ ನಿಯತಕಾಲಿಕ ಪುನರಾವೃತ್ತಿಯಿರುತ್ತದೆ. ಆದುದರಿಂದ ವಿಶಾಲಾರ್ಥದಲ್ಲಿ ಇದನ್ನು ಒಂದು ಛಂದೋಮಾದರಿಯೆಂದು ಗ್ರಹಿಸಬಹುದು : ಕಡೆಯ ಪಕ್ಷ, ತಾಳ-ಛಂದಸ್ಸುಗಳಲ್ಲಿ ಒಂದು ಕಲ್ಪನಾ ಸಾದೃಶ್ಯವಂತೂ ಇದೆ. ಇಂತಹ ಸುರುಳಿ (ಸ್ಪೈರಲ್) ಪುನರಾವರ್ತನೆಯಿಂದಾಗಿ ಗೀತಾದಿಗಳ ಯಾವುದೇ ಒಂದು ಘಟನೆಯು ಎಷ್ಟನೆಯ ತಾಳಾವರ್ತದ ಯಾವ ಅಂಗದ ಯಾವ ಅಂಶದಲ್ಲಿದೆ ಎಂಬುದನ್ನು ಕರಾರುವಾಕ್ಕಾಗಿ ನಿಶ್ಚಯಿಸಬಹುದು, ಮತ್ತು ಅಂತಹ ಬೇರೆಬೇರೆ ಘಟನೆಗಳ ಏಕಕಾಲಿಕತೆಯ ಮೂಲಕ ಕಾಲಸಾಮ್ಯವನ್ನೂ ಕ್ರಿಯಾಸಾಮ್ಯವನ್ನೂ ನಿಶ್ಚಯಿಸಬಹುದು.

ಛಂದಸ್ಸಿಗಿಂತ ತಾಳದ ಕಲ್ಪನೆಯು ಹೆಚ್ಚು ಜಟಿಲವಾದುದು. ಭಾರತೀಯ ಸಂಗೀತಪದ್ಧತಿಯಲ್ಲಿ ತಾಳಕ್ಕೆ ಕಾಲ, ಮಾರ್ಗ, ಕ್ರಿಯಾ, ಅಂಗ, ಜಾತಿ, ಲಯ, ಕಳಾ, ಯತಿ, ಗ್ರಹ ಮತ್ತು ಪ್ರಸ್ತಾರ ಎಂಬ ಹತ್ತು ಪ್ರಾಣಗಳಿವೆ. ಇವುಗಳಲ್ಲಿ ಪ್ರತಿಯೊಂದಕ್ಕೂ ನಿರ್ದಿಷ್ಟವಾದ ಮೌಲ್ಯಗಳನ್ನು ಕೊಟ್ಟಾಗ ಇವುಗಳ ಸಂಕೀರ್ಣದಿಂದ ಆಯಾ ತಾಳದ ಪ್ರಾಯೋಗಿಕ ಸ್ವರೂಪವೂ ಕಾಲಪರಿಮಾಣವೂ ನಿರ್ಧಾರವಾಗುವುದು. ಇವುಗಳನ್ನು ಬೇರೆಡೆ (ಕರ್ನಾಟಕದಲ್ಲಿ ಕಲೆಗಳು : ಸಂಗೀತ, ಸಂಪುಟ 1, ಪು. 51–58) ವಿವರಿಸಿದ್ದೇನೆ.

ತಾಲದ ಕಲ್ಪನೆಯನ್ನು ಇಲ್ಲಿ ವಿವರಿಸಲು ಕಾರಣವೇನೆಂದರೆ ಛಂದಃಶಾಸ್ತ್ರವು ಸಂಗೀತಶಾಸ್ತ್ರದಿಂದ ಅದನ್ನು ಪಡೆದುಕೊಂಡಿದೆ ; ಅನೇಕ ಛಂದಃಶಾಸ್ತ್ರ ವಿದ್ವಾಂಸರು ಇಂದು ಅದನ್ನು ಘಾತ, ಛಂದೋಮಾದರಿಯ ಧಾಟಿ ಇತ್ಯಾದಿ ಅನ್ಯಾರ್ಥಗಳಲ್ಲಿ ಬಳಸು

ವುದು ಕಂಡು ಬರುತ್ತದೆ. ಹೀಗೆ ಮಾಡದೆ ಆಯಾ ಅರ್ಥಸಂದರ್ಭಕ್ಕೆ ಉಚಿತವಾದ ನಿಷ್ಕೃಷ್ಟವಾದ ಪದವನ್ನೋ ಪದಗಳನ್ನೊ, ಬಳಸಿದರೆ ಆಯಾ ಶಾಸ್ತ್ರಮರ್ಯಾದೆಯ ಉಲ್ಲಂಘನವೂ ಕಲ್ಪನಾಸಾಂಕರ್ಯವೂ ತಪ್ಪುತ್ತವೆ ಎಂದು ನಮ್ರವಾಗಿ ಸೂಚಿಸ ಬಯಸುತ್ತೇನೆ.

ಲಯದ ಕಲ್ಪನೆಯೂ ಎರಡು ಶಾಸ್ತ್ರಗಳಲ್ಲಿಯೂ ಸ್ವಲ್ಪಮಟ್ಟಿಗೆ ಬೇರೆ ಬೇರೆಯೇ ಆಗಿದೆ. ಛಂದಃಶಾಸ್ತ್ರದಲ್ಲಿ ಅದು ರಿದ್ಮ್ (Rhythm) ಎಂಬ ಶಬ್ದಕ್ಕೆ ಸಂವಾದಿ. 'ಆಂಗಿಕವಾದ ಚಲನೆಗಳಲ್ಲಿ, ಗೀತನೃತ್ಯಗಳಲ್ಲಿ, ಗದ್ಯಪದ್ಯಗಳಲ್ಲಿ ಗೋಚರಿಸುವ ನಿರ್ದಿಷ್ಟ ವಾದೊಂದು ಏರಿಳಿತ ಅಥವಾ ವಿನ್ಯಾಸ, ಪ್ರಮಾಣದೊಳಗಿನ ಸಮಕಟ್ಟು ಲಯವೆನಿಸು ತ್ತದೆ ಎಂದು ಸೂತ್ರಿಸಲಾಗಿದೆ...ಅಕ್ಷರಾನುಕ್ರಮಣಿ, ಪದಾನುಕ್ರಮಣಿಗಳು ಉಂಟು ಮಾಡುವ ನಿರೀಕ್ಷೆ, ಸಫಲತೆ, ಮುಂದೂಡುವಿಕೆ, ವಿಫಲತೆ, ವಿಸ್ಮಯ ಇವುಗಳ ನೆಯ್ಗೆಯೇ ಲಯವೆಂದು ಇಂತಹ ಸಂದರ್ಭಗಳಲ್ಲಿ ಹೇಳಬಹುದು ; ರಸಭಾವ ಸಮನ್ವಿತ ವಾದ ಗಾಯನದಿಂದಲೋ ವಾಚನದಿಂದಲೋ ಅದು ನಮ್ಮ ಅನುಭವಕ್ಕೆ ಬರುತ್ತದೆ... ಗಣಗಳ ನಡೆಯು ಕ್ರಮಾಗತವಾದ ಪರಂಪರೆಯಿಂದ ಬರುವ ಹಿತವಾದ ಅನುಭವವೇ ಲಯದ ಅಸ್ತಿತ್ವವನ್ನು ನಮ್ಮ ಗಮನಕ್ಕೆ ತರುತ್ತದೆ...ಈ ಕಾಲಮಾನ ಅಥವಾ ನಡೆಯ ನಿಲುಗಡೆಗಳನ್ನು ಅಳತೆಮಾಡುವ ಉದ್ದೇಶದಿಂಗಾಗಿಯೇ ಇಂಗ್ಲಿಷಿನ Metre ಎಂಬ ಮಾತು ಹುಟ್ಟಿದೆ ; ಬಲುಮಟ್ಟಿಗೆ Rhythm ಮಾತೂ ಇಂತಹುದೇ 'ಪ್ರವಾಹ', ಗೊತ್ತಾದ ಅಳತೆಯ ಹಾಗೂ ಸಮತೆಯ ಗತಿ ಎಂದು ಅದರ ಆಶಯ...ಲಯವು ವ್ಯವಸ್ಥಿತವಾಗಿ ಯೋಜನೆಗೊಂಡಾಗ ಸಿದ್ಧವಾಗುವ ರೂಪ ಛಂದಸ್ಸು...ಅಲ್ಲಿಗೆ 2 ತಾಳಗಳ ನಡುವಿನ ವಿಶ್ರಾಂತಿ, ಮೌನ, ಕಾಲದ ಅಂತರ ಲಯವೆನಿಸುವುದು' (ಟಿ. ವಿ. ವೆಂಕಟಾಚಲಶಾಸ್ತ್ರಿ, ಕನ್ನಡಛಂಧಃಸ್ವರೂಪ, ಪು. 7–12). ಹೀಗೆ ಲಯವು ಛಂದಃ ಶಾಸ್ತ್ರಪ್ರಸಕ್ತವಾದ ಎರಡು ಮುಖ್ಯಾರ್ಥಗಳನ್ನು ಹೊಂದಿದೆ : 1) ಆಘಾತ–ಅನಾ ಘಾತಗಳ, ಹ್ರಸ್ವದೀರ್ಘಗಳ, ಗಣಘಟಕಗಳ ನಿರ್ದಿಷ್ಟವಿನ್ಯಾಸ ಮತ್ತು ಇವುಗಳಿಂದ ಉದ್ಭವಿಸುವ ಮಾದರಿಯ ನಿಯತಕಾಲಿಕ ಪುನರಾವೃತ್ತಿ 2) 'ಕ್ರಿಯಾನಂತರವಿಶ್ರಾಂತಿಃ' 'ಲೀಙ್ ಶ್ಲೇಷಣೇ', 'ಲಯನಾಲ್ಲಯಃ' ಮುಂತಾದ ಸೂತ್ರಗಳು ಸೂಚಿಸುವ ಸಮ ಗತಿಯ ಪ್ರವಾಹ. ಎರಡನೆಯ ಅರ್ಥವು ಸಂಗೀತಶಾಸ್ತ್ರದಲ್ಲಿ ಬಳಕೆಯಾಗುತ್ತದೆ.

ಲಯವೆಂದರೆ ಒಂದು ಇನ್ನೊಂದರಲ್ಲಿ ಕಾಣದಂತೆ ಸೇರಿಹೋಗುವುದು, ವಿಶ್ರಾಂತಿ, ಅಂಟಿಕೊಳ್ಳುವುದು, ಆಲಂಗಿಸುವುದು ಇತ್ಯಾದಿ. ಸಂಗೀತಶಾಸ್ತ್ರದಲ್ಲಿ ತಾಳ ಪ್ರಾಣವಾದ ಲಯವನ್ನು ಮೇಲೆ ಸೂಚಿಸಿರುವಂತೆ, ತಾಲಕ್ರಿಯೆಗೆ ಅವ್ಯವಹಿತವಾಗಿರುವ ವಿಶ್ರಾಂತಿ, ಎಂದರೆ ಹಿಂದು ಮುಂದಿನ ಕಾಲಕ್ರಿಯೆಗಳ ನಡುವೆ ಇರುವ ಕಾಲಾವಕಾಶ ಎಂದು ನಿರೂಪಿಸಿದೆ. ಅವ್ಯವಹಿತವಾಗಿ ಎಂದರೆ ಅಂಟಿಕೊಂಡು, (ಶ್ಲೇಷಣೆ), ಎಡೆಬಿಡದೆ ಕಾಣದೆ ಸೇರಿಹೋಗುವುದು ಏಕೆಂದರೆ ಈ ಕಾಲಾವಕಾಶವು

ನಿಷ್ಕ್ರಿಯವಾದುದು. ಅದನ್ನು ಎರಡೂ ಕಡೆಗಳಲ್ಲಿ ಸಂಪುಟಗೊಳಿಸುವ ಕ್ರಿಯೆಗಳು ಮಾತ್ರ ಗೋಚರ ಸಾಧ್ಯ. ಈ ಕಾಲಾವಕಾಶವು ಕಾಲದ ಪ್ರತಿಯೊಂದು ವಿಭಾಗದಲ್ಲಿಯೂ ಎಂದರೆ ಯಾವುದೇ ಎರಡು ಹಿಂದುಮುಂದಿನ ಕಾಲ ಕ್ರಿಯೆಗಳ ನಡುವೆ ನಿಯತವಾಗಿ ಒಂದೇ ಪರಿಮಾಣದ್ದಾಗಿರುತ್ತದೆ. ಹೀಗೆ ಲಯವು ಆಯಾ ತಾಲಾವರ್ತದ ಒಟ್ಟು ಪರಿಮಾಣವನ್ನು ನಿಖರವಾಗಿ ನಿರ್ಧರಿಸುವುದಲ್ಲದೆ ಅದರ ಏಕರೂಪವಾದ ಸಾಮಾನ್ಯಗತಿಯನ್ನೂ ನಿರ್ಧರಿಸುತ್ತದೆ. ಇದನ್ನು ನದಿಯ ಸ್ವಾಭಾವಿಕ ಪ್ರವಾಹವೇಗಕ್ಕೆ ಹೋಲಿಸಿದರೆ ಅದರಲ್ಲಿ ಈಜುವುದು, ದೋಣಿ ಅಥವಾ ಹಡಗುಗಳು ಚಲಿಸುವುದು, ಮೀನು ಮತ್ತಿತರ ಜಲಚರಗಳು ಚಲಿಸುವುದು ಮುಂತಾದವುಗಳನ್ನು ಗೀತವಾದನ ನರ್ತನಗಳ ನಡೆ ಎಂದಿಟ್ಟುಕೊಳ್ಳಬಹುದು. ತಾಲವು ಉದ್ದವನ್ನು ಅಳೆಯುವ ಗಜಕಡ್ಡಿಯಾದರೆ ಲಯವು ಅದರಲ್ಲಿ ಅಂಗುಲದ ಹಾಗೆ. ಅಂಗಗಳಿಂದ ತಾಲದಲ್ಲಿ ಒಂದು ನಿರ್ದಿಷ್ಟ ಮಾದರಿಯು ಏರ್ಪಡುತ್ತದೆ. ಅದರ ಪ್ರತಿಯೊಂದು ಅಂಗದ ವಿಭಾಗದಲ್ಲಿಯೂ ಕಾಲಾವಕಾಶವು ಅಂಗುಲದ ಹಾಗೆ–ನಿಯತ ಪರಿಮಾಣವುಳ್ಳದ್ದಾಗಿರುತ್ತದೆ ಎಂಬ ವಿಶೇಷವನ್ನು ಈ ದೃಷ್ಟಾಂತವು ಗಮನಿಸುವುದಿಲ್ಲ. ತಾಲದ ಎಲ್ಲ ಒಳವಿಭಾಗಗಳಲ್ಲಿಯೂ ಇರುವ ನಿಯತವಾದ, ಸಮಾನವಾದ ಕಾಲಪರಿಣಾಮವೇ ಲಯ ಎಂಬುದನ್ನು 'ತಾಲಾಂತರಾಲವರ್ತೀ ಯಃಕಾಲೋ ಽಸೌ ಲಯ ನಾಲ್ಲಯಃ' ಎಂಬ ನಿರೂಪಣೆಯು ಹೇಳುತ್ತದೆ. (ಪರಮೇಶ್ವರನ 'ತಾಲಕಲಾ ವಿಲಾಸ', ಉದ್ಧೃತಿ ರಾಮಕೃಷ್ಣ ಕವಿ, ಭರತಕೋಶ, ಪು. 567). ಇದನ್ನೇ ಪೋಲೂರಿ ಗೋವಿಂದ ಕವಿಯೂ (ತಾಲದಶಪ್ರಾಣ ದೀಪಿಕಾ, ಪದ್ಯ 99, ಪು. 24) 'ನೃತ್ತಗೀತ–ವಾದ್ಯ ನಿರ್ಣೀತ ಗತುಲೊಕ್ಕ ಸಮಮುಗಾನು ನಡವಸಾಗೆನೇನಿಯದಿಯ ಲಯಯಟಂಚು ಸಾರ್ಯುಲು ದೆಲ್ಪುದುರು' ಎಂಬ ಮಾತುಗಳಲ್ಲಿ ಹೇಳಿದ್ದಾನೆ. ಲಯವು ದ್ರುತ, ಮಧ್ಯ ವಿಲಂಬಿತ ಎಂದು ಮೂರು ವಿಧ: ಇವು ಅನ್ವರ್ಥನಾಮಕಗಳು ಮತ್ತು ಪರಸ್ಪರ ಸಾಪೇಕ್ಷವಾದುವುಗಳು. ಸಂಗೀತಶಾಸ್ತ್ರದಲ್ಲಿ ಅತ್ಯಂತ ವೇಗವಾಗಿ ನಡೆಯುವ ತಾಳಕ್ರಿಯೆಗಳ ನಡುವಣ ಕಾಲಪರಿಮಾಣವನ್ನು ದ್ರುತವೆಂದೂ, ನಿಧಾನವಾಗಿರುವವಗಳ ನಡುವೆ ಇರುವುದನ್ನು ವಿಲಂಬ (ವಿಲಂಬಿತ) ಲಯವೆಂದೂ ಇವೆರಡರ ಮಧ್ಯವರ್ತಿಯಾದುದನ್ನು ಮಧ್ಯಲಯವೆಂದು ವ್ಯವಹರಿಸಲಾಗುತ್ತದೆ. ಕರ್ನಾಟಕ ಸಂಗೀತ ಆಧುನಿಕ ವ್ಯವಹಾರದಲ್ಲಿ ಒಂದು 'ಅಕ್ಷರಕಾಲ' (ಮಾತ್ರಾಕಾಲ, 'ಕಳೆ')ದಲ್ಲಿ ನಡೆಯುವ ಯಥಾಕ್ಷರ ಗೇಯ ಪ್ರಬಂಧವು ನಡೆಯುವ ವೇಗವನ್ನು ದ್ರುತವೆಂದೂ, ಎರಡರದನ್ನು ಮಧ್ಯಲಯವೆಂದೂ, ನಾಲ್ಕರದನ್ನು ವಿಲಂಬವೆಂದೂ ಕರೆಯುವ ರೂಢಿಯಿದೆ.

ಲಯಪ್ರಾಣವೂ ಕಾಲಪ್ರಾಣವೂ ಪರಸ್ಪರ ಸಾಪೇಕ್ಷವಾಗಿವೆ. ಆಯಾ ಕಾಲಾವರ್ತದಲ್ಲಿ ಪ್ರಮಾಣಭೂತವಾಗಿ ಪ್ರಯೋಕ್ತೃವು ಸ್ವೇಚ್ಛೆಯಿಂದ ಇಟ್ಟುಕೊಂಡ

ಲಯುವು ಮೊದಲನೆಯ ಕಾಲ. ಈ ವೇಗವು ಉತ್ತರೋತ್ತರವಾಗಿ ಎರಡರಷ್ಟು ಹೆಚ್ಚಿದರೆ ಎರಡನೆಯ (2), ಮೂರನೆಯ (4), ನಾಲ್ಕನೆಯ (8), ಐದನೆಯ (16), ಆರನೆಯ (32) ಇತ್ಯಾದಿ ಕಾಲಗಳು ಸಿದ್ಧಿಸುತ್ತವೆ. ಲಯದಲ್ಲಾದರೆ ತಾಲಾವರ್ತದ ಪ್ರಮಾಣವೇ ವ್ಯತ್ಯಾಸವಾಗುತ್ತದೆ : ಕಾಲಪ್ರಾಣದಲ್ಲಿ ಅದು ನಿಯತವಾಗಿರುತ್ತದೆ. ಕರ್ನಾಟಕ ಸಂಗೀತದಲ್ಲಿ (ಸರಳೆವರಿಸೆ, ಜಂಟಿವರಿಸೆ, ತಾಳಾಲಂಕಾರ ಮುಂತಾದ ಅಭ್ಯಾಸಗಾನಾಂಶಗಳ ಮತ್ತು ವರ್ಣ, ಪಲ್ಲವಿ ಎಂಬ ರಚನೆಗಳ ಮತ್ತು ಕೆಲವು ಕೃತಿಗಳಲ್ಲಿ ವಾಗ್ಗೇಯಕಾರನು ಇಟ್ಟಿರುವ ಮಧ್ಯಮ ಕಾಲದ ಪ್ರಸ್ತುತಿಯು ಕಾಲ ಪ್ರಾಣವು ಉತ್ತರೋತ್ತರವಾಗಿ ವ್ಯತ್ಯಾಸವಾಗುವುದಕ್ಕೂ ಹಿಂದೂಸ್ಥಾನೀ ಸಂಗೀತದಲ್ಲಿ ಛೋಟಾಖ್ಯಾಲ್ ಎಂಬ ಗೇಯರಚನೆಯನ್ನು ಪರಾಕಾಷ್ಠೆಗೆ ಒಯ್ಯುವಾಗ ಲಯವು ಉತ್ತರೋತ್ತರವಾಗಿ ಹೆಚ್ಚಾಗುವುದಕ್ಕೂ ಉದಾಹರಣೆಗಳು. ಹೀಗೆ ಲಯವೆಂಬುದು ಛಂದಃಶಾಸ್ತ್ರದಲ್ಲಿಯೂ ಸಂಗೀತಶಾಸ್ತ್ರದಲ್ಲಿಯೂ ಭಿನ್ನಾರ್ಥಗಳನ್ನು ಹೊಂದಿದೆ.

ಕಡೆಯದಾಗಿ, ಛಂದೋವೃತ್ತಗಳಲ್ಲಿ ರಚಿತವಾಗಿರುವ ಗೇಯ ಪ್ರಬಂಧಗಳನ್ನು ತಾಳವನ್ನೂ ಅನ್ವಯಿಸಿ ಹಾಡುವುದು ಹೇಗೆ ಎಂಬುದನ್ನು ಸ್ವಲ್ಪ ಪರಿಶೀಲಿಸ ಬಹುದು. ಸಂಗೀತಶಾಸ್ತ್ರದಲ್ಲಿ ಇಂತಹ ಗಾನಕ್ರಮವನ್ನು ಕುರಿತು ಒಂದು ಪರೋಕ್ಷ ಸೂಚನೆಯಿದೆ : ಇಂತಹ ಛಂದೋವೃತ್ತದಲ್ಲಿ ನಿರ್ಯುಕ್ತವಾದ ಪ್ರಬಂಧವನ್ನು ಇಂತಹ ತಾಳದಲ್ಲಿಯೋ ಅಥವಾ ಇಂತಹ ತಾಳಗಳಲ್ಲಿಯೋ ಹಾಡಬೇಕು ಅಥವಾ ಇಂತಿಂತಹ ತಾಳಗಳಲ್ಲಿ ಹಾಡಬಾರದು ಎಂಬ ವಿಧಿನಿಷೇಧಗಳಿವೆ. ಆಯಾ ಛಂದೋವೃತ್ತದ ಗಣಮಾತ್ರಾವಿನ್ಯಾಸಕ್ಕೆ ಸದೃಶವಾಗಿಯೋ ಸಮಾನಾಂತರವಾಗಿಯೋ ಅಂಗರಚನಾ ವಿನ್ಯಾಸವುಳ್ಳ ತಾಳವನ್ನು ಅಥವಾ ತಾಳಗಳನ್ನು ವಿಧಿಯಿಂದಲೂ ಇಲ್ಲದವುಗಳನ್ನು ನಿಷೇಧದಿಂದಲೂ ಸೂಚಿಸಲಾಗುತ್ತಿತ್ತು. ಕಡೆಯ ಪಕ್ಷ, ಆಯಾ ಛಂದೋವೃತ್ತದ ಪಾದಲ್ಲಿರುವ ಒಟ್ಟು ಮಾತ್ರಾಸಂಖ್ಯೆ, ಅದಕ್ಕೆ ಅನ್ವಯಗೊಂಡ ತಾಳಾವರ್ತದಲ್ಲಿರುವ ಒಟ್ಟು ಮಾತ್ರಾಸಂಖ್ಯೆ ಇವೆರಡರಲ್ಲಿ ಒಂದು ಇನ್ನೊಂದರ ಗುಣಕವಾಗಿರಬೇಕು. ಅಥವಾ ಬೇರೆ ಸರಳ ಸಂಬಂಧವನ್ನು ಪಡೆದಿರಬೇಕು ಎಂಬ ನಿಯಮವನ್ನು ನಮ್ಮ ಪೂರ್ವ ವಾಗ್ಗೇಯಕಾರರು ಇಟ್ಟುಕೊಂಡಿದ್ದ ಹಾಗೆ ಕಾಣುತ್ತದೆ. ಈ ಸಂದರ್ಭದಲ್ಲಿ ಶಾರ್ಙ್ಗದೇವನಿಂದ ಕೆಲವು ಉದಾಹರಣೆಗಳನ್ನು ನೀಡಬಹುದು : ಏಲಾ ಸಾಮಾನ್ಯ ಲಕ್ಷಣ : ಮಂಠ ದ್ವಿತೀಯ ಕಂಕಾಲಪ್ರತಿ ತಾಲೇಷು ಕಶ್ಚನ ತಾಲೋಽಸ್ಯಾಂ (4.40) ; ಹಾಡಬೇಕಾಗಿದ್ದ ಏಲಾಪ್ರಭೇದದ ಛಂದೋಗಣ ವಿನ್ಯಾಸಕ್ಕೆ, ಅದರ ಪಾದದ ಮಾತ್ರಾಪರಿಮಾಣಕ್ಕೆ ಅನುಕೂಲಿಸುವಂತೆ ಈ ನಾಲ್ಕು ತಾಳಗಳಲ್ಲಿ ಒಂದನ್ನು ಪ್ರಯೋಗಿಸಬಹುದಾಗಿತ್ತು. ಢೇಂಕೀ ಪ್ರಬಂಧವನ್ನು (ವೃತ್ತಬಂಧಿಸೀ, ಯುಗ್ಮಿನೀ ಮತ್ತು ವೃತ್ತಮಾಲಾ ಪ್ರಭೇದಗಳ ಮಾತುಗಳನ್ನು) ಢೇಂಕಿ ಅಥವಾ ಕಂಕಾಳ ತಾಳದ ಅಂಗರಚನಾ ವಿನ್ಯಾಸ ಅಥವಾ

ಮಾತ್ರಾ ಪರಿಮಾಣಕ್ಕೆ ಅನುಸಾರವಾಗಿ ನಿರ್ಮಿಸಬೇಕಾಗಿತ್ತು. (4. 146). ವರ್ತನೀ ಪ್ರಬಂಧಕ್ಕೆ ರಾಸವಲ್ಲದ ಯಾವ ತಾಲವಾದರೂ ಆಗಬಹುದು ; ವಿವರ್ತನಿಗೆ ಕಂಕಾಲ, ಪ್ರತಿಕಾಲ, ಕುಡುಕ್ಕ, ದ್ರುತಮಂಠಗಳಲ್ಲಿ ಒಂದನ್ನು ಆಯ್ದುಕೊಳ್ಳಬೇಕಾಗಿತ್ತು. (4.153, 154). ಝೊಂಬಡ ಪ್ರಬಂಧವನ್ನು ಈ ಹತ್ತು ತಾಲಗಳ ಪೈಕಿ ಯಾವುದಾದರೊಂದರಲ್ಲಿ ಹಾಡಬಹುದಾಗಿತ್ತು–ನಿಂಸಾರು, ಕುಡುಕ್ಕ, ತ್ರಿಪುಟ, ಪ್ರತಿಮಂಠ, ದ್ವಿತೀಯ, ಗಾರುಗಿ, ಯತಿಲಗ್ನ, ಅಡ್ಡತಾಲೀ, ಏಕತಾಲೀ (4. 156, 157); ಚರ್ಯಾಪ್ರಬಂಧ ; ಚಚ್ಚರೀಛಂದಸೇತ್ಯನ್ಯೇ ಕ್ರೀಡಾತಾಲೇನ ವೇತ್ಯಪಿ । ಘತ್ತಾದಿಛಂದಸಾ ವಾ ಸ್ಯಾಚ್ಛಂದೋಲಕ್ಷ್ಮೋದಿತಾಭಿಧಾ ॥ (4.291, 292) : ಇದರ ಮೇಲೆ ಸಿಂಹಭೂಪಾಲನು ಮಾಡುವ ವ್ಯಾಖ್ಯಾನವು ಗಮನಾರ್ಹ ವಾಗಿದೆ'...ಯದಾ ಕ್ರೀಡಾತಾಲೇನ ಪ್ರಯುಜ್ಯತೇ, ತದಾ ಘತ್ತಾದಿಚ್ಛಂದಃ ಪ್ರಯೋಕ್ತವ್ಯಮಿತ್ಯರ್ಥಃ । ತತ್ರಾದಿಶಬ್ದೇನ ಯತ್ ಕ್ರೀಡಾತಾಲ ಪ್ರಯೋಗಯೋಗ್ಯಂ ತತ್ ಛಂದೋ ಗೃಹ್ಯತೇ । ಘತ್ತಾಛಂದೋऽಪಿ ತಾದೃಶಮವಗಂತವ್ಯಮ್ । 'ಹೀಗೆ, ವೃತ್ತಯೋಗ್ಯ ತಾಲಗಳನ್ನೂ ತಾಲಯೋಗ್ಯ ವೃತ್ತಗಳನ್ನೂ ಗೇಯಪ್ರಬಂಧಗಳಲ್ಲಿ ಅನ್ವಯಿಸುತ್ತಿದ್ದುದು ಕಂಡುಬರುತ್ತದೆ. ಆದುದರಿಂದ ಇಂತಹ ಪ್ರಬಂಧಗಳನ್ನು ಯಥಾಕ್ಷರಗಳನ್ನಾಗಿ ಹಾಕಲಾಗುತ್ತಿತ್ತೆಂಬ ಅನುಮಿತಿಯು ಸಿದ್ಧವಾಗುತ್ತದೆ ; ಎಂದರೆ ಮಾತುವಿನ ಅಕ್ಷರಗಳಲ್ಲಿ ಹ್ರಸ್ವಕ್ಕೆ ಒಂದು ಸ್ವರವೂ ದೀರ್ಘಾಕ್ಷರಕ್ಕೆ ಎರಡೂ (ಪ್ರಾಯಶಃ) ಇರುತ್ತಿದ್ದು ಛಂದೋವೃತ್ತದ ಮಾತ್ರಾಪರಿಮಾಣವು ತಾಲಾವರ್ತದ ಮಾತ್ರಾ ಪರಿಮಾಣದೊಡನೆ ಸರಳ ಪೂರ್ಣಾಂಕಾನುಪಾತವನ್ನು ಹೊಂದಿರುತ್ತಿತ್ತು. ಈ ವಿಧಿಗೆ ಹಲವು ಅಪವಾದಗಳೂ ಇರುತ್ತಿದ್ದವೆಂಬುದನ್ನು ನೆನೆಯಬೇಕು.

ಇದರ ಈಚಿನ ನಿದರ್ಶನವು ಈ ಲೇಖನದ ಮೂರನೆಯ ಅಧಿಕರಣದಲ್ಲಿ ಉಲ್ಲೇಖಿಸಿರುವ ಮೌಲಾಬಕ್ಷ ಘೀಸೇಖಾನರ ಸಂಗೀತಾನುಸಾರೀಛಂದೋಮಂಜರಿಯಲ್ಲಿ ನ್ಯೂನಾಧಿಕ್ಯಗಳೊಡನೆ ಕಂಡು ಬರುತ್ತದೆ. (ಕೆಳಗೆ ಕೊಟ್ಟಿರುವ ಉದಾಹರಣೆಗಳಲ್ಲಿ ಈ ಕ್ರಮವನ್ನು ಅನುಸರಿಸಿದೆ : ಮೊದಲನೆಯ ಸಂಖ್ಯೆಯು ಪ್ರಬಂಧದ ಕ್ರಮಾಂಕ : ನಂತರ ಛಂದೋವೃತ್ತದ ಹೆಸರು ; ನಂತರದ ಸಂಖ್ಯೆ ಅದರ ಪಾದದ ಮಾತ್ರಾ ಪರಿಮಾಣ : ಕೊನೆಯ ಸಂಖ್ಯೆ ಆಯಾ ತಾಲಾವರ್ತದ ಮಾತ್ರಾ ಪರಿಮಾಣ) : 1. ವಿದ್ಯುನ್ಮಾಲಾ–8–16, 2. ಮಾಣವಕ–8–16, 3. ಪ್ರಮಾಣಿಕಾ 8-12, 6. ಚಂಪಕಮಾಲಾ–10–16, 7. ಹಂಸೀ–10-15, 12. ಇಂದ್ರವಜ್ರಾ-11–18, 19. ಸ್ವಗತಾ-11-16, 22. ಭುಜಂಗ ಪ್ರಯಾತ–12-20, 30, ಪ್ರಮಿತಾಕ್ಷರಾ–12–16, 36, ಪ್ರಮಿತಾಕ್ಷರಾ–13–20, 39. ವಸಂತ ತಿಲಕ–14–21, 45. ಪಂಚಚಾಮರ–16–24, 50. ಚರ್ಚರೀ–18–26, 47. ಶಾರ್ದೂಲವಿಕ್ರೀಡಿತ–19–30, 57. ಮದಿರಾ (ಸವಾಈ)–23–32.

ಇಂತಹವುಗಳಲ್ಲಿ ಒಂದೋ ಎರಡೋ ಅಕ್ಷರಗಳನ್ನು ಕುಗ್ಗಿಸುವುದರಿಂದ ಅಥವಾ ಹಿಗ್ಗಿಸುವುದರಿಂದ ತಾಳಾವರ್ತಕ್ಕೆ ಹೊಂದಿಸಲು ಸಾಧ್ಯವಾಗುತ್ತಿತ್ತು. ಈ ಆಕರದಲ್ಲಿ ನೀಡಿರುವ 58 ಪ್ರಬಂಧಗಳೂ ಯಥಾಕ್ಷರಗಳೆಂಬುದನ್ನು ಗಮನಿಸಬೇಕು.

ಭಾರತೀಯ ಸಂಗೀತದ ಮೇಲೆ ಛಂದಸ್ಸಿನ ಪ್ರಭಾವವು ತಕ್ಕಮಟ್ಟಿಗೆ ಆಗಿದೆ ; ಛಂದಃಶಾಸ್ತ್ರಜ್ಞರೂ ಸಂಗೀತ ಶಾಸ್ತ್ರಜ್ಞರೂ ಈ ವಿಷಯದಲ್ಲಿ ಅಭ್ಯಾಸಗಳನ್ನು ಕೈಗೊಂಡರೆ ಎರಡು ಶಾಸ್ತ್ರಗಳಿಗೂ ಅವುಗಳ ಪ್ರಯೋಗಗಳಿಗೂ ಪ್ರಯೋಜನವುಂಟು ಎಂಬುದು ನನ್ನ ನಂಬುಗೆ.

ಗ್ರಂಥಋಣ

ಸಂಗೀತಶಾಸ್ತ್ರ

ಸೋಮೇಶ್ವರ, ಚಾಲುಕ್ಯ ಸರ್ವಜ್ಞ-ಮಾನಸೋಲ್ಲಾಸ (ಅಭಿಲಷಿತಾರ್ಥ ಚಿಂತಾಮಣಿ) ಸಂ. ಶ್ರಿಂಗೊಂಡೇಕರ್, ಜಿ. ಕೆ. ಗಾಯಕವಾಡ್ ಓರಿಯಂಟಲ್ ಸೀರೀಸ್ 138, ಓರಿಯಂಟಲ್ ಇನ್‌ಸ್ಟಿಟ್ಯೂಟ್, ಬರೋಡ, 1961.

ಜಗದೇಕಮಲ್ಲ IV, ಚಾಲುಕ್ಯ-ಸಂಗೀತ ಚೂಡಾಮಣಿ, ಅಪ್ರಕಟಿತ, ಮೈಸೂರು ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನ ಹಸ್ತಪ್ರತಿಗಳು (ಮೈಸೂರು ವರಲಕ್ಷ್ಮೀ ಅಕಾಡೆಮಿಯಲ್ಲಿ ಪ್ರತಿ).

ಶಾರ್ಙ್ಗದೇವ, ಸಂಗೀತ ರತ್ನಾಕರ (ಪ್ರಬಂಧಾಧ್ಯಾಯ ಹಾಗೂ ತಾಲಾಧ್ಯಾಯ) ಸಂ. ಸುಬ್ರಹ್ಮಣ್ಯಶಾಸ್ತ್ರೀ, ಎಸ್. ಅಡ್ಯಾರ್ ಲೈಬ್ರರಿ, ಮದ್ರಾಸ್, ಸಂ. 2, 43, 1994, ಸಂ. 3, 78, 1951.

ಸಿಂಹಭೂಪಾಲ, ಸಂಗೀತ ಸುಧಾಕರ, ವ್ಯಾಖ್ಯಾನ, ಶಾರ್ಙ್ಗದೇವ, ಉಕ್ತಗ್ರಂಥ.

ಕಲ್ಲಿನಾಥ, ಸಂಗೀತ ಕಲಾನಿಧಿ, ವ್ಯಾಖ್ಯಾನ, ಶಾರ್ಙ್ಗದೇವ, ಉಕ್ತಗ್ರಂಥ.

ಪಂಡರೀಕವಿಠಲ, ನರ್ತನನಿರ್ಣಯ, (ಪುಂಡರೀಕ ಮಾಲಾದಲ್ಲಿ) ಸಂ. ಸತ್ಯನಾರಾಯಣ ರಾ., ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು, 1986.

ಶ್ರೀಕಂಠ, ರಸಕೌಮುದೀ, ಸಂ. ಜನಿ, ಎ.ಎನ್. ಗಾಯಕವಾಡ್ ಓರಿಯಂಟಲ್ ಸೀರೀಸ್ 143, ಓರಿಯಂಟಲ್ ಇನ್‌ಸ್ಟಿಟ್ಯೂಟ್, ಬರೋಡ, 1963.

ಗೋವಿಂದಕವಿ, ಪೋಲೂರಿ- ತಾಲದಶ ಪ್ರಾಣದೀಪಿಕಾ, ಸಂ. ವಾಸುದೇವ ಶಾಸ್ತ್ರೀ ಕೆ., ತಂಜಾವೂರು ಸರಸ್ವತೀ ಮಹಾಲ್ ಲೈಬ್ರರಿ ಸೀರೀಸ್ 13, ಸರಸ್ವತೀ ಮಹಾಲ್, ತಂಜಾವೂರು, 1950

ರಾಮಕೃಷ್ಣ ಕವಿ ಎಂ., (ಸಂಗ್ರಾಹಕ), ಭರತಕೋಶ, ಶ್ರೀ ವೆಂಕಟೇಶ್ವರ ಓರಿಯಂಟಲ್ ಸೀರೀಸ್, 30, ತಿರುಪತಿ, 1951

ಅಚ್ಯುತರಾಯ, ತಾಲಕಲಾಬ್ಧಿ, ಅಪ್ರಕಟಿತ, ಉದ್ಧೃತಿ, ರಾಮಕೃಷ್ಣ ಕವಿ, ಎಂ, ಉಕ್ತಗ್ರಂಥ

ಪರಮೇಶ್ವರ, ತಾಲಕಲಾ ವಿಲಾಸ, ಅಪ್ರಕಟಿತ, ಉದ್ಧೃತಿ, ಅದೇ ಗ್ರಂಥ

ಸತ್ಯನಾರಾಯಣ, ರಾ, ಕರ್ನಾಟಕದಲ್ಲಿ ಕಲೆಗಳು–ಸಂಗೀತ, ಸಂ. 1, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1983

Sathyanarayana, R., Suladis and Ugabhogas of Karnataka Music, Sri Varalakshmi Academy Publication series Sri Varalakshmi Academy of Fine Arts, Mysore, 1968.

Idem : Music of the Madhva monks of Karnataka, Jnana Jyoti Kala Mindira, Bangalore–1988.

ಮೌಲಾಬಕ್ಷ ಘೀಸೇಖಾನ್, ಸಂಗೀತಾನುಸಾರ್ ಛಂದೋಮಂಜರೀ (ಸಮವೃತ್ತ ಪುಸ್ತಕ್ ಪಹೆಲಾ), ವಕ್ಸಲ್ ಛಾಪಖಾನಾ, ಬಡೋಡಾ, ದೀನವತ್ಸಲ್ ಛಾಪಖಾನ್, ಮುಂಬಯಿ, 1892

ಛಂದಃಶಾಸ್ತ್ರ

ಕೇದಾರ ಭಟ್ಟ, ವೃತ್ತರತ್ನಾಕರ, ಸಂ. ಕಾಶೀನಾಥ ಪಾಂಡುರಂಗ ಪರಬ್, ನಿರ್ಣಯಸಾಗರ ಮುದ್ರಣಾಲಯ, ಬೊಂಬಾಯಿ 1890.

ಕೇದಾರಭಟ್ಟ, ವೃತ್ತರತ್ನಾಕರ, ಸಂ. ವೇಲಣಕರ್, ಎಚ್. ಡಿ. ಜಯದಾಮನ್, ಹರಿತೋಷಮಾಲಾ, ಬೊಂಬಾಯಿ, 1949.

ಜಯಕೀರ್ತಿ, ಛಂದೋನುಶಾಸನಂ, ಸಂ. ವೇಲಣಕರ್, ಎಚ್.ಡಿ., ಉಕ್ತಗ್ರಂಥ.

ಸ್ವಯಂಭೂ, ಸ್ವಯಂಭೂಛ್ಛಂದಸ್, ಸಂ. ವೇಲಣಕರ್, ಎಚ್.ಡಿ. ರಾಜಸ್ಥಾನ ಪುರಾತತ್ತ್ವ ಗ್ರಂಥ ಮಾಲಾ 37, ರಾಜಾಸ್ಥಾನ, ಪ್ರಾಚ್ಯ ವಿದ್ಯಾ ಪ್ರತಿಷ್ಠಾನ, ಜೋಧಪುರ, 1962 (ಮತ್ತು ಜರ್ನಲ್ ಆಫ್ ದಿ ಬಾಂಬೆ ಬ್ರಾಂಚ್ ಆಫ್ ರಾಯಲ್ ಏಷ್ಯಾಟಿಕ್ ಸೊಸೈಟಿ, 1935).

ಅಜ್ಞಾತ, ಕವಿದರ್ಪಣಂ, ಸಂ. ವೇಲಣಕರ್, ಎಚ್. ಡಿ., ರಾಜಸ್ಥಾನ ಪುರಾತತ್ತ್ವಗ್ರಂಥ ಮಾಲಾ 67, ರಾಜಸ್ಥಾನ ಪ್ರಾಚ್ಯವಿದ್ಯಾಪ್ರತಿಷ್ಠಾನ, ಜೋಧಪುರ, 1962.

ವಿರಹಾಂಕ, ವೃತ್ತಜಾತಿಸಮುಚ್ಚಯ, ಸಂ. ವೇಲಣಕರ್, ಎಚ್.ಡಿ., ಜರ್ನಲ್ ಆಫ್ ದಿ ಬಾಂಬೆ ಬ್ರಾಂಚ್ ಆಫ್ ರಾಯಲ್ ಏಷ್ಯಾಟಿಕ್ ಸೊಸೈಟಿ, 5, ಬೊಂಬಾಯಿ 1929, ಪುಟ 84-94 ; 8, 1932, ಪು. 1-28.

ರಾಜಶೇಖರ, ಛಂಧಃಶೇಖರ, ಸಂ. ವೇಲಣಕರ್, ಎಚ್. ಡಿ., ಸ್ವಯಂಭೂ ಛ್ಛಂದಸ್ (ಉಕ್ತ) ಅನುಬಂಧ, ಪು. 129-139.

ನಂದಿತಾಢ್ಯ, ಗಾಥಾ ಲಕ್ಷಣಂ, ಸಂ. ವೇಲಣಕರ್, ಎಚ್.ಡಿ., ಕವಿದರ್ಪಣಂ (ಉಕ್ತ)ಗೆ ಅನುಬಂಧ, ಪು. 97-98.

ವೆಂಕಟಾಚಲಶಾಸ್ತ್ರಿ, ಟಿ. ವಿ., ಕನ್ನಡ ಛಂದಃಸ್ವರೂಪ, ಡಿ. ವಿ. ಕೆ. ಮೂರ್ತಿ ಮೈಸೂರು, 1978

ನಾಗರತ್ನ, ಟಿ. ಎನ್., 'ಕೀರ್ತನೆಗಳ ಛಂದಸ್ಸು ಸಾಮಾನ್ಯಸ್ವರೂಪ', ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಛಂದಸ್ಸಿನ ಚರಿತ್ರೆ, (ಮೈಸೂರು ವಿಶ್ವವಿದ್ಯಾನಿಲಯ) ಸಂ. 2, ಸಂ. ನಾಯಕ, ಹಾಮಾ ಮತ್ತು ಕೃಷ್ಣಕುಮಾರ್, ಸಿ.ಪಿ., ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು 1980.

ವರದರಾಜರಾವ್, ಜಿ. (ಸಂ.), ಪೀಠಿಕೆ, ಶ್ರೀ ಪಾದರಾಜರ ಕೃತಿಗಳು, ಹರಿದಾಸ ಸಾಹಿತ್ಯಮಾಲೆ, ಕನ್ನಡ ಅಧ್ಯಯನ ಸಂಸ್ಥೆ,ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು 1973.

ಸೀತಾರಾಮಯ್ಯ, ಎಂ. ವಿ., 'ಕನ್ನಡ ಹಾಡಿನ ವಿಕಾಸ ಮತ್ತು ಲಯಸ್ವರೂಪ', ಚಿನ್ನದ ಬೆಳಸು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – 19.

ಶಿವರಾಮ ಐತಾಳ, ಕೆ., ಕನ್ನಡ ಛಂದಸ್ಸಿನ ಪರಿಚಯ, ಮೈಸೂರು, 1971.

ಕರ್ಕಿ, ಡಿ. ಎಸ್., ಕನ್ನಡ ಛಂದೋವಿಕಾಸ, ಧಾರವಾಡ, 1956.

ನಾರಾಯಣ ಪ್ರಸಾದ್ ಕೆ. ಜಿ., ಹರಿದಾಸರ ಕೃತಿಗಳ ಛಂದಸ್ಸು, ದಾಸಸಾಹಿತ್ಯ ದರ್ಶನ, ಸಂ. ಎಚ್ಚೆಸ್ಕೆ, ಮಂಗಳಭಾರತಿ ಪ್ರಕಾಶನ, ಮೈಸೂರು, 1984.

ಕೇಶವಭಟ್ಟ ಟಿ., ಯಕ್ಷಗಾನದಲ್ಲಿ ತಾಳ-ಛಂದಸ್ಸು-ಗಮಕ, ಯಕ್ಷಗಾನ ಮಕರಂದ, ಪೊಳಲಿ ಶಂಕರನಾರಾಯಣ ಶಾಸ್ತ್ರಿ ಸಂಸ್ಮರಣ ಗ್ರಂಥ, ಸಂ. ಮುಳಿಯ ಮಹಾಬಲಭಟ್ಟ, ಪೊಳಲಿ ಶಾಸ್ತ್ರಿ ಸ್ಮಾರಕ ಸಮಿತಿ, ಮಂಗಳೂರು, 1980

ರಾಜಗೋಪಾಲಾಚಾರ್ಯ ಎಂ., ಯಕ್ಷಗಾನ ಪ್ರಸಂಗಗಳ ಧಾಟಿ, ಯಕ್ಷಗಾನ ಮಕರಂದ (ಉಕ್ತ)

ಸೀತಾರಾಮ ಕೆದಿಲಾಯ ಕಪು., ಯಕ್ಷಗಾನ ಛಂದಸ್ಸು, ಯಕ್ಷಗಾನ ಮಕರಂದ (ಉಕ್ತ)

ಸರಸ್ವತಿಯು ತಪಸ್ಸಿಲ್ಲದ ನೈವೇದ್ಯಕ್ಕೆ
ಒಲಿಯುವಷ್ಟು ಸರಳೆಯಲ್ಲ
ದೊಡ್ಡ ಸಾಹಿತ್ಯವೆಂಬುದು ದೊಡ್ಡ ತಪಸ್ಸಿನ ಫಲ

ಡಿ.ವಿ.ಜಿ.

ಸರಳರಗಳೆ ಮಹಾಛಂದಸ್ಸುಗಳ ಹಾದಿಯಲ್ಲಿ ನಡೆದ ಛಂದಃಪ್ರಯೋಗಗಳು

ಡಾ॥ ಕೆ. ಜಿ. ನಾರಾಯಣ ಪ್ರಸಾದ್

ಕನ್ನಡ ಛಂದಸ್ಸಿನ ಇತಿಹಾಸದಲ್ಲಿ ಆಧುನಿಕ ಯುಗವು ಬಹಳ ಮಹತ್ತ್ವಪೂರ್ಣವಾದುದು. ಈ ಯುಗದಲ್ಲಿ ಬಳಕೆಯಾದ ಛಂದೋಬಂಧಗಳ ಸಂಖ್ಯೆ ಕೂಡ ಅಚ್ಚರಿ ಹುಟ್ಟಿಸುವಂತಿದೆ. ಇದರ ಹಿನ್ನೆಲೆಯಲ್ಲಿ ನಡೆದ ಪ್ರಯೋಗ ವೈವಿಧ್ಯ ಕೂಡ ಅಂತಹದೇ. ಇಂತಹ ಪ್ರಯೋಗಗಳಲ್ಲಿ, ರಗಳೆಯ ನೆಲಗಟ್ಟಿನ ಮೇಲೆ ನಡೆದ ಪ್ರಯೋಗಗಳು ಗಮನಾರ್ಹವಾಗಿವೆ. ಲಲಿತ ರಗಳೆಯು ಸರಳ ರಗಳೆಯಾಗಿ ಹತ್ತು ಹಲವು ಸೌಲಭ್ಯಗಳನ್ನೂ ಸೌಂದರ್ಯಾಂಶಗಳನ್ನೂ ಮೈಗೂಡಿಸಿಕೊಂಡಿತು. ಅದೇ ಮತ್ತಷ್ಟು ಪರಿಷ್ಕಾರಗೊಂಡು ಮಹಾಛಂದಸ್ಸಾಗಿ ರೂಪು ತಾಳಿ ಮಹಾಕಾವ್ಯವೊಂದರ ರಚನೆಗೆ ಮಾಧ್ಯಮವಾಯಿತು. ಈ ಮಹಾಛಂದಸ್ಸಿನ ಆವಿರ್ಭಾವವು ಆ ದಿಶೆಯಲ್ಲಿಯೇ ಇನ್ನೂ ಹಲವು ಪ್ರಯೋಗಗಳು ನಡೆಯಲು ದಾರಿದೀಪವಾಯಿತು. ಮಹಾಛಂದಸ್ಸನ್ನು ಕುರಿತು ಈಗಾಗಲೇ ಬೇರೊಂದೆಡೆ ವಿಚಾರ ಮಾಡಲಾಗಿದೆ.1 ಆದ್ದರಿಂದ, ಈಗ, ಅದೇ ದಾರಿಯಲ್ಲಿ ನಡೆದ ಇತರ ಪ್ರಯೋಗಗಳ ಬಗ್ಗೆ ವಿಚಾರ ಮಾಡುವುದು ಪ್ರಕೃತದ ಉದ್ದೇಶ. ಇಂತಹ ಪ್ರಯೋಗಗಳನ್ನು ಮಾಡಿದವರಲ್ಲಿ ವಿ. ಕೃ. ಗೋಕಾಕರು, ಸಂ. ಶಿ. ಭೂಸನೂರಮಠ ಅವರು ಮತ್ತು ಪು. ತಿ. ನರಸಿಂಹಾಚಾರ್ಯರು ಪ್ರಮುಖರು. ಇವರ ಪ್ರಯೋಗ ವೈವಿಧ್ಯಗಳನ್ನು ಕುರಿತು ಕ್ರಮವಾಗಿ ಈಗ ವಿಚಾರ ಮಾಡಬಹುದು.

೧. ವಿ. ಕೃ. ಗೋಕಾಕರು :

ಗೋಕಾಕರ 'ಭಾರತ ಸಿಂಧು ರಶ್ಮಿ'ಯು (೧೯೮೨) ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ'ನ ನಂತರ ಬಂದ ಮತ್ತೊಂದು ಆಧುನಿಕ ಕನ್ನಡ

ಮಹಾಕಾವ್ಯ. "ಹನ್ನೆರಡು ಕಾಂಡಗಳಲ್ಲಿ ಹರಡಿ ನಿಂತ ಈ ಕೃತಿ ಸುಮಾರು 24,000 ಪಙ್ತಿಗಳ ಸಂಕೀರ್ಣ ಛಂದಸ್ಸಿನಲ್ಲಿದೆ (ಸರಳ ರಗಳೆಯಿಂದ ಹದಗೊಳಿಸಿಕೊಂಡ ಒಂದು ವಿಧಾನ)"2 –ಎಂದು ಹೇಳುವುದರ ಮೂಲಕ ಗೋಕಾಕರು ತಮ್ಮ ಈ ಮಹಾಕಾವ್ಯದ ಛಂದಸ್ಸನ್ನು 'ಸಂಕೀರ್ಣ ಛಂದಸ್ಸು' ಎಂದು ಕರೆದಿದ್ದಾರೆ ; ಅಂತೆಯೇ ಇದು ಸರಳ ರಗಳೆಯ ನೆಲಗಟ್ಟಿನ ಮೇಲೆ ರೂಪಿತವಾದದ್ದು ಎಂಬುದನ್ನೂ ಒಪ್ಪಿಕೊಂಡಿದ್ದಾರೆ. ಅವರೇ ಮತ್ತೊಂದೆಡೆ ಇದರ ಲಕ್ಷಣವನ್ನು ಹೀಗೆ ನಿರೂಪಿಸಿದ್ದಾರೆ :

ಬೇತಾಳ – ಬೇಸೂರುಗಳ ನರ್ತನವೆ ತಾಳಲಯ ?
ಅಲ್ಲವದು ಮಾತ್ರಾ – ಅಕ್ಷರಗಣದ ಕಸರತ್ತು.
ಅಲ್ಲ ರಗಳೆ, ವಚನ, ವೃತ್ತಗಂಧಿ, ಸ್ವಚ್ಛಂದವದು.
ಯುಗ ಯುಗದಿ ಛಂದವಿಟ್ಟಿಹ ಹೆಜ್ಜೆ ಗುರುತಿಸುತ
ಕವಿಯಂತರಂಗವನನುಸರಿಸಿ ತಾನಗಳಿಹವು [ಪೀಠಿಕಾ ಸಂಧಿ, ಪು. xxix]

ಎಂದರೆ, ಇಲ್ಲಿಯ ತಾಳಲಯವು ನಿಯತ ತಾಳರಹಿತ ನಿಯತತಾನರಹಿತ ನರ್ತನವಲ್ಲ ; ಅಂತೆಯೇ ಮಾತ್ರಾಗಣ ಅಕ್ಷರಗಣಗಳ ಕಸರತ್ತೂ ಅಲ್ಲ. ಇದು ರಗಳೆಯೂ ಅಲ್ಲ, ವಚನವೂ ಅಲ್ಲ ; ವೃತ್ತಗಂಧಿಗದ್ಯವೂ ಅಲ್ಲ, ಸ್ವಚ್ಛಂದಛಂದವೂ ಅಲ್ಲ. ಛಂದಸ್ಸಿನ ವಿವಿಧ ಹೆಜ್ಜೆಗಳನ್ನು ಅನುಸರಿಸಿ ಇದರ ತಾನವಿದೆ ; ಇದು ಕವಿಯ ಅಂತರಂಗವನ್ನು ಅನುಸರಿಸಿ ಸಾಗುತ್ತದೆ ಎಂದರೆ ಮಹಾಛಂದಸ್ಸಿನ ಲಕ್ಷಣಗಳೇ ಇಲ್ಲಿಯೂ ಇವೆಯೆಂದ ಹಾಗಾಯಿತು. ಮೊದಲಿಗೆ ಇದರ ಲಕ್ಷಣಗಳನ್ನು ಗಮನಿಸಿ ಅನಂತರ ಇದಕ್ಕೂ ಅದಕ್ಕೂ ಇರುವ ವ್ಯತ್ಯಾಸಗಳನ್ನು ಗಮನಿಸಬಹುದು.

'ಭಾರತ ಸಿಂಧು ರಶ್ಮಿ'ಯ ಕೊನೆಗೆ 'ಈ ಕಾವ್ಯದ ಸಂಕೀರ್ಣಛಂದಸ್ಸು' ಎಂಬ ಶೀರ್ಷಿಕೆಯ ಅಡಿಯಲ್ಲಿ ಇದರ ಲಕ್ಷಣಗಳನ್ನು ಹೀಗೆ ಸಂಗ್ರಹಿಸಲಾಗಿದೆ :

೧. "ಸಂಕೀರ್ಣಛಂದಸ್ಸಿನ ಈ ಕೃತಿಯಲ್ಲಿ ಮೂಲ ತಳಹದಿಯೆಂದರೆ–ಮಾತ್ರೆ ಎಷ್ಟೇ ಇರಲಿ–ನಾಲ್ಕು ಗಣಗಳ ಒಂದು ಪಙ್ತಿ ಮಾತ್ರ. ಅದು ಸಂಕೀರ್ಣ ಛಂದಸ್ಸಿನ ರಚನಾಕ್ರಮದ ತಳಹದಿಯಾಗಬಲ್ಲದು. ನೂರಕ್ಕೆ ತೊಂಬತ್ತರೊಂಬತ್ತರಂತೆ ಈ ಕೃತಿಯಲ್ಲಿಯ ತಳಹದಿಯಾದ ಸಾಲು ಪಂಚಮಾತ್ರಾಗಣದ ಚಾತುರ್ಯವೇ ಆಗಿದೆ" [ಪು. ೭೫೭].

ಆದರೆ, ಹಲವೆಡೆ ೨೦ ರ ಕಟ್ಟನ್ನು ಮೀರಲಾಗಿದ್ದು, ಈ ಸಂಬಂಧದಲ್ಲಿ ಈ ಐದು ರಚನೆಗಳನ್ನಷ್ಟೇ ಬಳಸಲಾಗಿದೆ ;

(1) 6. 6. 6. 7 (25)
(2) 6. 6. 6. 6 (24)
(3) 5. 5. 5. 6. (21)
(4) 4. 4. 4. 5. (17)
(4) 4. 4. 4. 3. (15)

ಈ ಮೂಲ ತಳಪದಿಗಳ ಮೇಲೆ ಇವುಗಳ ಗಣಪರಿವೃತ್ತಿ ಗಣಪಲ್ಲಟಗಳ ಮೂಲಕ ಸಂಕೀರ್ಣ ಛಂದಸ್ಸನ್ನು ರೂಪಿಸಲಾಗಿದೆ. ಹೀಗೆ, "ಸಂಕೀರ್ಣತೆ ಇದ್ದರೂ ಬರಿ ನಾಲ್ಕು ಗಣಗಳು ಒಂದು ಪಙ್ತಿಯೊಳಗಿದ್ದುದರಿಂದ ಏಕಸೂತ್ರತೆಯೂ ಇದೆ" [ಪು. ೭೫೮].

೨. ಇದರಲ್ಲಿ ಆದಿ ಮಧ್ಯ ಅಂತ್ಯ ಪ್ರಾಸವೈವಿಧ್ಯಗಳನ್ನು ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳಲಾಗಿದೆ.

೩. ಗಣಪರಿವೃತ್ತಿಗಳನ್ನು ತರುವಲ್ಲಿ ೨, ೩, ೪, ೬, ೭ ರ ಗಣಗಳನ್ನು ಬಳಸಲಾಗುತ್ತದೆ. ಇವುಗಳ ಪೈಕಿ ೬, ೭ ರ ಬಳಕೆ ಹೆಚ್ಚು ; ೪ ರದ್ದು ಕಡಿಮೆ ; ೩ ರದ್ದು ಇನ್ನೂ ಕಡಿಮೆ ಮತ್ತು ೨ ರದ್ದು ಬಹಳ ವಿರಳ.

೪. (a) ಗಣಗಳಿಗೆ ಸರಿಯಾಗಿ ಪದಗಳನ್ನು ಹೊಂದಿಸುವುದು ಮತ್ತು ಗಣದಿಂದ ಗಣಕ್ಕೆ ಪದಗಳನ್ನು ಹರಿಯಬಿಡುವುದು.

(b) ಪಾದಾಂತಯತಿಯನ್ನು ತರುವುದು, ಪಾದಗಳನ್ನು ಹರಿಯಬಿಡುವುದು ಮತ್ತು ಪಾದ ಮಧ್ಯದಲ್ಲಿ ಒಂದು ಅಥವಾ ಹೆಚ್ಚು ಯತಿಗಳನ್ನು ತರುವುದು.

(c) ಸ್ವರಸಾಮ್ಯ ಮತ್ತು ವ್ಯಂಜನಸಾಮ್ಯಗಳನ್ನು ತರುವುದು ಇತ್ಯಾದಿ. ಇವನ್ನು ಗಮನಿಸಿದಾಗ ೨೦ ರ ಪಾದದ ಕಟ್ಟು ಇಲ್ಲಿ ಪ್ರಧಾನವೆಂಬುದು ಸ್ಪಷ್ಟವಾಗುತ್ತದೆ. ಇದು, ಮತ್ತು ಹೆಚ್ಚೂ ಕಡಿಮೆ ಲಲಿತಲಯವನ್ನೇ ತಂದಿರುವುದು ಹಾಗೂ ಪಾದಾಂತಯತಿಯನ್ನು ವಿರಳವಾಗಿಯಷ್ಟೇ ಮೀರಿರುವುದು–ಇವೆಲ್ಲ ಸರಳರಗಳೆಯ ಪ್ರಾಥಮಿಕ ರೂಪವನ್ನೇ ಪ್ರದರ್ಶಿಸುತ್ತವೆ. ಮಾದರಿಗೆ,

ಪಂಚಗೌ. ರೀ ಸೀಮೆ. ಯಲ್ಲಿ ಬೆಳೆ. ದಿದೆ ಸೋಮ. । ೫. ೫. ೫. ೫.
ಮೂಜವತ್. ಪರ್ವತದ. ತುಂಬೆಲ್ಲ. ಚಿಗುರಿಹುದು. । ೫. ೫. ೫. ೫.

ಸೋಮ ದೊಂ. ದಂಶವನು. ಬಿಡಿಸಿ ತಂ. ದೊಂದು ದಿನ । ೫. ೫. ೫. ೫.
ಆದರ ರಸ. ದೊಂದೆರಡು. ಹನಿಯ ರುಚಿ. ನೋಡಿದರು । ೫. ೫. ೫. ೫.
ನಾರದರು । ಮತ್ತೆ ಮ. ತ್ತದಕೆ ಜಿನು. ಗಿತು ಜಿಹ್ವೆ । ೫. ೫. ೫. ೫.
[I–ಪು. ೩೦]

೨೦ ರ ರಚನೆಯ ಪಾದಗಳಲ್ಲಿ ಗಣಪರಿವೃತ್ತಿ, ಅದರಲ್ಲೂ ಅನಿವಾರ್ಯಗಣ ಪರಿವೃತ್ತಿ, ಅತಿ ವಿರಳ. ಈ ಕಟ್ಟನ್ನು ಮೀರಿದ ಪಾದಗಳಲ್ಲಿ ಮಾತ್ರ ಅದು ಇದ್ದೇ ಇರುತ್ತದೆ. ಸುಮಾರು ೧೮ ರಿಂದ ೨೫ ಮಾತ್ರೆಗಳ ಪರಿಧಿಯಲ್ಲಿ ಪಾದದ ಉದ್ದವು ಏರುಪೇರಾಗುವುದು ಇಲ್ಲಿ ಕಂಡುಬರುತ್ತದೆ. ಮಾದರಿಗೆ,

೧. ಶುತುದ್ರೀ. ತೀರ. ವಾಸಿ. ತುರ್ವಶ. ರೆಡೆಗೆ. [II ಪು. ೧೩೦] ೫. ೩. ೩. ೪. ೩ [೧೮]
೨. ಭವಿಷ್ಯ. ನಿಜವಾಯ್ತು. ಮುಂದೆ ಕೃ. ಷ್ಣೇಕ್ಷಣೆಯು. [II ಪು.೨೦] ೪. ೫. ೫ ೫. [೧೯]
೩. ಅಡಿಯೆಡೆಗೆ. ಹಲ್ ಕಿರಿದು. ನುಡಿಯಿ ತೊಂ. ದು ಪಿಶಾಚಿ [I ಪು. ೨೦೭] ೫. ೫. ೫. ೫. [೨೦]
೪. ಕಣ್ಣೊರಸಿ. ಕೊಳುತಿರಲು. ಪರ್ವತ. ಶೃಂಗದ. ಸುತ್ತ [ಅದೇ] ೫. ೫. ೪. ೪ ೩. [೨೧]
೫. ಬೆಟ್ಟದ. ತುತ್ತ. ತುದಿಗೆ. ನಿಂದಿರಲು. ಮುಗಿಲಿಳಿಯುತಿರೆ [II ಪು. ೭] ೪. ೩. ೩. ೫. ೭. [೨೨]
೬. ಮನದನ್ನೆಯನು. ಗಾಥೇಯ. ಗೃಹಿಣಿಯನು. ವಿರಹಿಣಿಯನು [II ಪು. ೩೬] ೭. ೫. ೫. ೬ [೨೩]
೭. ಶಾಖೆಯ. ನೇರಿ. ವಿಶ್ವರಥ. ಮುದ್ದಿ. ಸಿದನದರ. ಕಪೋಲ. [II ಪು. ೮೯] ೪. ೩. ೫. ೩. ೫. ೪. [೨೪]
೮. ಕಿಮ್ ದೈವತ. ಕಿಮ್ ಪ್ರಭಾವ. ಕಿಮ್ ಕಾರಣ. ಕಿಮ್ ಕರ್ತವ್ಯ [II ಪು ೧೩] ೬. ೬. ೬. ೭. [೨೫]

ಈ ಕೃತಿಯಲ್ಲಿ ಕಂಡು ಬರುವ ಒಂದು ಗಮನಾರ್ಹ ಅಂಶವೆಂದರೆ ಮಧ್ಯೆ ಮಧ್ಯೆ ಸಂಸ್ಕೃತದ ಮಂತ್ರಭಾಗಗಳನ್ನು ತಂದಿರುವುದು. ಇದರಿಂದಾಗಿ ಇದು ವೈದಿಕ ಛಂದಸ್ಸನ್ನೂ ಒಳಗೊಳ್ಳುತ್ತದೆಯೆನ್ನಬೇಕು. ಆದರೆ ಈ ಭಾಗಗಳೆಲ್ಲ ಉದ್ಧೃತಗಳೇ ಹೊರತು ಗೋಕಾಕರು ರಚಿಸಿದವಲ್ಲವೆಂಬುದನ್ನು ಮರೆಯಬಾರದು. ಈ ಸಂಬಂಧದಲ್ಲಿ

ಗಮನಿಸಬೇಕಾದ ಅಂಶವೆಂದರೆ ಇಂತಹ ಭಾಗಗಳಿಗೆ ಕನ್ನಡ ಅನುವಾದವನ್ನು ಕೊಟ್ಟಿರುವುದು, ಮತ್ತು ಆ ಅನುವಾದಗಳಲ್ಲಿ ೨೦ ರ ಪಾದದ ಕಟ್ಟನ್ನು ೧೫, ೧೬, ೧೯, ೨೧ ಹೀಗೆ, ಬೇಕಾದಂತೆ ಮುರಿದಿರುವುದು. ಎಂದರೆ, ಇಂತಹ ಭಾಗಗಳಲ್ಲಿ ಮೂಲಪಾದ ರಚನೆಯಲ್ಲಿ ಅತಿಯಾದ ಏರುಪೇರುಗಳುಂಟಾಗುತ್ತವೆ. ಹೀಗಲ್ಲದೆ ಹತ್ತನೆಯ ಕಾಂಡವಾದ 'ತ್ರಿಶಂಕುವಿನ ಪ್ರಜ್ಞಾಕಾಂಡ' ಎಂಬುದರಲ್ಲಂತೂ ಮುಕ್ತಪದಿತನವನ್ನೇ ವಿಚಾರಲಾಗಿದೆ. ೧೩, ೧೭, ೨೦ ಹೀಗೆ ವಿವಿಧ ಅಳತೆಯ ಪಾದಗಳ ಸಮಚತುಷ್ಪದಿಗಳನ್ನೂ ಅಷ್ಟಪದಿಗಳನ್ನೂ ಅಲ್ಲಿ ಬಳಸಲಾಗಿದೆ. ಮುಕ್ತಪದಿಯಂತಹ ರಚನೆ ಬಂದಾಗ ಕೂಡ ನಿಯತವಾಗಿ ೨೦ ರ ಇಲ್ಲವೆ ೨೪ ರ ಪಾದಗಳನ್ನೇ ಉದ್ದಕ್ಕೆ ತರುವ ಪ್ರವೃತ್ತಿ ಕಂಡುಬರುತ್ತದೆ. ಹೀಗಾಗಿ ಚಂಪುವಿನಲ್ಲಿರುವ ಬಂಧವೈವಿಧ್ಯವನ್ನು—ಪಾದರಚನೆ ಸಂಯೋಜನೆಗಳ ಮೂಲಕ—ಇಲ್ಲಿಯೂ ತರಲಾಗುತ್ತದೆಯೆಂದು ಹೇಳಬಹುದು. ಸರಳರಗಳೆ ಮಹಾಛಂದಸ್ಸುಗಳ ವರ್ಗಕ್ಕಿಂತ ಈ ದೃಷ್ಟಿಯಲ್ಲಿ ಇದು ಭಿನ್ನವಾಗಿ ನಿಲ್ಲುತ್ತದೆ. ಅಲ್ಲಿ ಇಡೀ ಕೃತಿಯಲ್ಲಿ ಉದ್ದಕ್ಕೂ ಒಂದೇ ಛಂದಸ್ಸಿದ್ದು ಅದರೊಳಗೇ ವೈವಿಧ್ಯಗಳನ್ನು ಸಾಧಿಸಿದ್ದರೆ ಇಲ್ಲಿ ಛಂದಸ್ಸನ್ನೇ ಮೇಲಿಂದ ಮೇಲೆ ಬದಲಾಯಿಸುವ ಸ್ವಾತಂತ್ರ್ಯವನ್ನು ವಹಿಸಲಾಗಿದೆ.

ಇಷ್ಟಾದರೂ ಪಾದಾಂತಯತಿಯ ಬಳಕೆ ಮಾತ್ರ ಇಲ್ಲಿ ಬಹಳವಾಗಿದೆ. ಸರಳರಗಳೆ ಮಹಾಛಂದಸ್ಸುಗಳಲ್ಲಿ ಅದು ಇಷ್ಟು ಅಧಿಕಪ್ರಮಾಣದಲ್ಲಿರುವುದಿಲ್ಲವೆಂಬುದನ್ನು ಇಲ್ಲಿ ನೆನೆಯಬೇಕು. ಇನ್ನು ಪ್ರಾಸದ ಬಗ್ಗೆ ಹೇಳುವುದಾದರೆ, ಚೌಪದಿ ಅಷ್ಟಪದಿ ರಚನೆಗಳು ಬರುವೆಡೆಗಳಲ್ಲಂತೂ ಅಂತ್ಯಪ್ರಾಸದ ವಿವಿಧ ಪ್ರಕಾರಗಳು ಗೋಚರಿಸುತ್ತವೆ. ಉಳಿದೆಡೆಗಳಲ್ಲಿ ಅನುಪ್ರಾಸ ಗಣಾದಿಪ್ರಾಸ ಮುಂತಾದುವಷ್ಟೇ ಹೆಚ್ಚಾಗಿ ಕಂಡುಬರುತ್ತವೆ. ಆದಿಪ್ರಾಸದ ಬಳಕೆ ಮಾತ್ರ ಇಲ್ಲವೆನ್ನುವಷ್ಟು ವಿರಳ.

ಹಿಂದೆಯೇ ಸೂಚಿಸಿರುವಂತೆ ಗಣಪರಿವೃತ್ತಿ ವೈವಿಧ್ಯವು, ಸರಳರಗಳೆ ಮಹಾಛಂದಸ್ಸುಗಳಲ್ಲಿಯಂತೆಯೇ ಇಲ್ಲಿಯೂ ಅಧಿಕವಾಗಿದೆ. ಅದರಲ್ಲೂ ಅಧಿಕ ಮಾತ್ರೆಗಳು ಬರುವಲ್ಲಿ ಅನಿವಾರ್ಯವಾಗಿ ನಿಯತ ರೀತಿಯಿಂದ ಬರುತ್ತದೆ. ಇದರಲ್ಲಿ ಕೆಲವೊಮ್ಮೆ ನಿಯತ ರೀತಿಯ ಪರಿವರ್ತನೆಗಳು, ನಿಯತ ಲಯ ಛಾಯೆಗಳು, ಏರುಲಯ ಇಳಿಲಯಗಳು ಮುಂತಾದುವು ಕೂಡ ಕಾಣಿಸಿಕೊಳ್ಳುತ್ತವೆ. ಮಾದರಿಗೆ,

೧. ಸನಿಹಕೆ. ಸುಳಿಯೆ. ವಿಶ್ವರಥ. ತಾಯಿಯ. ಸಂಜ್ಞೆ.ಯನು ತಿಳಿದು (II ಪು ೨೩)
೪. ೩. ೫ । ೪. ೩. ೫. ಇಲ್ಲಿ ಮೊದಲ ಮೂರು ಗಣಗಳ ಸರಣಿಯು ಪುನರಾವರ್ತಿತವಾಗಿರುವುದನ್ನು ಗಮನಿಸಬೇಕು.

೨. ದಾಹ. ತೀರ. ದಂಥ. ದಾಹ. ಏನು. ಆ. ಹಾಹ. (II ಪು ೫೦೭)
೩.೩.೩.೩.೩.೩.೩.೩—ಉತ್ಸಾಹಲಯ

೩. ನಿತ್ಯವು. ಕುಣಿವಳು. ಕುಣಿಸುವ. ಳು. 1 ನಿತ್ಯವು. ದಣಿವಳು. ದಣಿಸುವ. ಳು. (II ಪು ೫೧೩) ೪.೪.೪ ಗು | ೪.೪.೪. ಗು—ಮಂದಾನಿಲಲಯು
೪. ಎಂದು. ಹಿಗ್ಗಿತು. ಭುಜ್ಯ. ಮೊದಲಿಗ. ನಾದ. ಪರಿವಾ.ರ (I ಪು ೮೪) ೩.೪.೩.೪.೩.೪. ಗು—ಭಾಮಿನೀಲಯು
೫. ವಿದ್ಯುದಾ. ಲಿಂಗನವ. ನಂಗುಲಿಯು. ತಂದಂತೆ. (I ಪು ೪೫೯) ೫.೫.೫.೫—ಲಲಿತಲಯು
೬. ತಿರೆಯಾಯಿತು. ಜ್ವಾಲಾಮುಖಿ. ಯೆಂಬೊಲು ತಿರು.ಗಿತು ಶಿಖಿಶಿಖಿ (II ಪು೫೦೭) ೬.೬.೬.೩—ಷಣ್ಮಾತ್ರಾಲಯು
೭. ನಮ್ಮೆಧಿರೆ. ಮನೋಧೈರ್ಯ. ಸ್ವಯಂಸ್ಫೂ.ರ್ತಾಭಿಕ್ರಮ (II ಪು ೨೨೭) ೫.೬.೫..೬—ಏರುಲಯು
೮. ಕಲ್ಪ. ಚಂದನ. ಸಂತಾನ. ಪಾರಿಜಾತ. ಮಂದಾರ (II ಪು ೨೧) ೩.೪.೫.೬.೫—ಮೊದಲ ನಾಲ್ಕು ಗಣಗಳಲ್ಲಿ ಏರುಲಯು
೯. ಒಬ್ಬೊಂಟಿಗ. ನೆನಬಹುದೆ. ಒಳಗಿಹ. ಸಾಕ್ಷಿ. ಪುರುಷನನು (II ಪು ೭) ೬.೫.೪.೩.೫—ಮೊದಲ ನಾಲ್ಕು ಗಣಗಳಲ್ಲಿ ಇಳಿಲಯು

ಇದೇ ರೀತಿ ವಿಷಮಗಣಗಳ, ತರಂಗಗಣಗಳ ಹಾಗೂ ಅನಾಗತಗಳ ಬಳಕೆ ಕೂಡ ಸಾಕಷ್ಟು ಕಡೆ ಕಂಡು ಬರುತ್ತದೆ. ಮಾದರಿಗೆ,

೧. ಎಂದರಂಗಿರಸರು : 1 **ಸಕಾಮ್ಯ**. ಯಜ್ಞವ. ನೊಂದ (I ಪು ೩೧) [ವಿಷಮಗಣ]
೨. **ನಿಗೂಢಗಳ.** ತವರಿ. ನಂತಿಹ. **ಪ್ರಪಂಚದೊಳು** (I ಪುಟ ೩೨) (ವಿಷಮಗಣ)
೩. ಶೂನ್ಯದೊಳು. **ಪರಾಭವ.** ಗೊಳಿಸದಿರ. ಅನ್ನು (I ಪು ೧೦೩) (ವಿಷಮಗಣ)
೪. **ತರಂಗ.**ಗಳ ಮೇಲೆ. ಹಂಸ ಪ.ಕ್ಷಿಗಳಂತೆ. (I ಪು ೮೩) (ತರಂಗಗಣ ೪>೫)
೫. ಚಿನ್ನಭದಿ. ಸೆಗೆದಿತ್ತು. **ತ್ರಿಶಂಕು.** ವಿನಜೀವ (I ಪು ೪೫೯) (ತರಂಗಗಣ)
೬. **ಮನುಷ್ಯ**. ವರ್ಷವದು. ದೇವಮಾ. ನವದಿನವು (I ಪು ೪೫) (ತರಂಗಗಣ)
೭. ಅ) ಶ್ವಿನಿಗಳಾ. ಗಮಿಸಿಲ್ಲ. ಭ್ರಮಿಸಿತ್ತು. ಬಿರುಗಾಳಿ (I ಪು ೮೫) (ಅನಾಗತ)
೮. ತ್ರಿ) ವಿಕ್ರಮನ. ತ್ರಿಪದಕಿದೆ. ನಾಂದಿ. ನಿನದನ. ಮಾತ್ತೆ (I ಪು ೧೦೩) (ಅನಾಗತ)
೯. ಪ್ರ) ಮದ್ವರೆಯು. ಕೈಹಿಡಿದು. ರುರುಚ್ಯವನ. ಋಷಿಪೌತ್ರ (II ಪು ೫೧) (ಅನಾಗತ)

ಗಣಗಳಿಗೆ ಪದಗಳನ್ನು ಹೊಂದಿಸುವ ಜಾಣ್ಮೆಯಂತೂ ಸರಳರಗಳೆ ಮಹಾ

ಛಂದಸ್ಸುಗಳಲ್ಲಿ ಕೂಡ ಕಂಡುಬರುವಂತಹದೇ. ಅದೇ ರೀತಿ ಸ್ವರಸಾಮ್ಯ ವ್ಯಂಜನ ಸಾಮ್ಯಗಳ ಬಳಕೆ ಕೂಡ. ಈ ಎಲ್ಲಕ್ಕಿಂತ ಭಿನ್ನವಾಗಿ ಅಲ್ಲಿಗೂ ಇಲ್ಲಿಗೂ ಇರುವ ಮತ್ತೊಂದು ವ್ಯತ್ಯಾಸವೆಂದರೆ ಪಾದವೃಂದರಚನೆಗೆ ಸಂಬಂಧಿಸಿದುದು. ಅಲ್ಲಿ ವೃಂದದ ಆದಿ ಅಂತ್ಯಗಳಲ್ಲಿ ಸಾಮಾನ್ಯವಾಗಿ ಊನಪಾದಗಳೇ ಬರುತ್ತಿದ್ದರೆ ಇಲ್ಲಿ ಅಂತಹದು ಅತಿವಿರಳ. ಎಂದರೆ ಹೆಚ್ಚಾಗಿ ಪೂರ್ಣಪಾದಗಳೇ ಬರುತ್ತವೆ.

ಈ ಎಲ್ಲ ಅಂಶಗಳನ್ನೂ ಗಮನಿಸಿದಾಗ, ಗೋಕಾಕರು BLANK VERSEನ ತಂತ್ರಗಳನ್ನು ಚೆನ್ನಾಗಿ ಬಲ್ಲವರು, ಅವನ್ನು ಚೆನ್ನಾಗಿ ಬಳಸಿಕೊಂಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಇಷ್ಟಾದರೂ, ಇದರಲ್ಲಿ ಮಹಾಛಂದಸ್ಸಿನ ಬನಿ ಕಾಣಿಸದೆಂಬುದು ಗಮನಾರ್ಹ. ಇದಕ್ಕೆ ಮುಖ್ಯ ಕಾರಣವೆಂದರೆ ಇಲ್ಲಿಯ ಭಾಷೆಯಲ್ಲಿರುವ ಗದ್ಯತನ. ಆಡುಮಾತಿನ ಧಾಟಿಯ ಬಳಕೆಯ ಪ್ರಯತ್ನ, ವಿಸಂಧಿಗಳು, ಶ್ರುತಿಕಷ್ಟಪದರಚನೆ (ಅದರಲ್ಲೂ ವ್ಯಂಜನಾಂತ ನಾಮಪದಗಳು ಬಂದಾಗ)—ಇವು ಇದಕ್ಕೆ ದಾರಿಮಾಡಿ ಕೊಟ್ಟಿದೆ. ಮಾದರಿಗೆ,

೧. ಮಧ್ಯಾಹ್ನ ರವಿಪ್ರಭೆಯಲ್ಲಿ ; **ನೆಫ್‌ಬ್ರಹ್ಮ** ನಿಲ್ಲಿದೋ (II ಪು ೭೭೪)
೨. ತಂದಿಹ **ಏಟ್ಲಸ್** ಹೆರಾಕ್ಲೀಜನಿಗೆ ಸ್ವರ್ಣಫಲ (II ಪು ೪೫)
೩. ಎಂಬೊಲೆಸೆದಿದೆ **ಶರ್ಯೂಣಾವತ್** ಮಹೋದಧಿಯು (I ಪು ೫)
೪. ಭಾವದಾವಿಷ್ಕರಣಕಿರುವ **ಅನ್ಯೃತ** ಮುಹೂರ್ತ (I ಪು ೫೪೧)

ಹೀಗಾಗಿ, ಈ ಸಂಕೀರ್ಣ ಛಂದಸ್ಸು ಮಹಾಛಂದಸ್ಸು ಏರಿದ ಎತ್ತರಕ್ಕೆ ಏರಲು ಸಾಧ್ಯವಾಗಿಲ್ಲ ; ಆದರೆ ಅದಕ್ಕಿಂತ ಭಿನ್ನವಾಗಿದ್ದು ಅದರ ಸಮೀಪವನ್ನಂತೂ ಸೇರಿದೆಯೆನ್ನಲು ಸಂಶಯವಿಲ್ಲ.

೨. ಸಂ. ಶಿ. ಭೂಸನೂರಮಠ ಅವರು

ತಮ್ಮ 'ಭವ್ಯಮಾನವ' (೧೯೬೩)ದಲ್ಲಿ ಬಳಸಿರುವ ಛಂದಸ್ಸಿಗೆ ಭೂಸನೂರಮಠ ಅವರು ಯಾವ ವಿಶಿಷ್ಟ ಹೆಸರನ್ನೂ ಕೊಟ್ಟಿಲ್ಲ. ಛಂದಸ್ಸಿಗಿಂತ ಅವರಿಗೆ ಕಾವ್ಯದ ಹರಿವು ಮುಖ್ಯವೆಂಬುದು ಅವರ ಈ ಮಾತಿನಿಂದ ಕೂಡ ಸ್ಪಷ್ಟವಾಗುತ್ತದೆ :

ಹಂಗೇಕೆ ಹರಿಯೇಕೆ ಕಟ್ಟುನಿಟ್ಟೇಕೆ ?
ವ್ಯಾಕರಣ ಛಂದಸ್ಸಲಂಕಾರ ಕವಿಸಮಯ
ಗಣಮಾತ್ರೆ ಪ್ರಾಸನಿಯತಿಯ ಭಂಗ ಭಯವೇಕೆ ?
ನೇಮ ನಿತ್ಯವ ಮೀರಿ ಕಾವ್ಯ ಹರಿಯಲಿ ತನ್ನ
ಸೀಮೆ ಸಂಬಂಧವನು ದಾಟಿ ದಿವ್ಯಕ್ಕೆ (ಭವ್ಯಮಾನವ, ಪು. ೬)

ಹೀಗೆಂದ ಮಾತ್ರಕ್ಕೆ ಇಲ್ಲಿಯದು ಸ್ವಚ್ಛಂದ ಛಂದವಲ್ಲ ; ಹೆಚ್ಚೂ ಕಡಿಮೆ ಸರಳರಗಳೆಯೇ ಆಗಿದೆ. ವಚನಗಳ ದಟ್ಟ ಪ್ರಭಾವ, ಆ ಮೂಲಕ ಉಂಟಾಗುವ ಪ್ರಾಸವೈವಿಧ್ಯಗಳು, ಹಲವು ಕಡೆ ಇದನ್ನು ಹರಿಹರನ ಲಲಿತರಗಳೆಯ ಕಡೆಗೆ ಕೊಂಡೊಯ್ಯುತ್ತದೆ. ಮಾದರಿಗೆ.

ಹಾಡಯ್ಯ. ಅಣ್ಣಯ್ಯ. ರಾಗವಿ.ಲ್ಲದೆ ಹಾಡು,
ಹಾಡಯ್ಯ. ಅಣ್ಣಯ್ಯ. ತಾಳವಿ.ಲ್ಲದೆ ಹಾಡು, (ಅದೇ ಪು. ೭೧೧)

ಆದರೆ, ಲಲಿತರಗಳೆಗಿಂತ ಇದು, ಪಾದರಚನೆ ದೃಷ್ಟಿಯಿಂದ ಬಹಳ ಭಿನ್ನವಾಗಿದೆ. ಅಲ್ಲಿ ನಿಯತವಾಗಿ ಇಪ್ಪತ್ತರ ಪಾದಗಳು ಬರುತ್ತಿದ್ದರೆ, ಇಲ್ಲಿ ಅವುಗಳ ಜೊತೆಗೆ, ಬೇಕೆಂದಲ್ಲಿ ಬೇಕೆಂದ ಪ್ರಮಾಣದಲ್ಲಿ ಊನಪಾದಗಳು, ಅದರಲ್ಲಿಯೂ ನಾಲ್ಕನೆಯ ಗಣವು ಊನವಾಗಿರುವಂತಹವು ವಿಶೇಷವಾಗಿ ಬರುತ್ತವೆ. ಮಾದರಿಗೆ

ಭುವನಾಂಶ. ರಂಗದೀ. ಮಾನಸಾ. ಕಾಶದೊಳು
ನಡೆದಿಹುದು. ನಡೆದಿಹುದ. ನಂತಕಾ. ಲ
ದೇವಾಸು. ರರಯುದ್ಧ. ಮಾನವಾ. ಸುರಯುದ್ಧ
ಮಾನವಗೆ. ಮಾನವಗೆ. ಮತ್ತೆಯು. ದ್ಧ
ತನ್ನೊಳಗೆ. ತನಗೆ ಮಾ. ನವ ಮಹಾ ಯುದ್ಧ
ಸುತ್ತಿದ ನಿ. ಸರ್ಗಪ್ರಕೃ. ತಿಗೆ ತನಗೆ. ಯುದ್ಧ. (ಅದೇ ಪು. ೩೫೫)

ಹೀಗಲ್ಲದೆ ಕೆಲವೆಡೆ ಚಿಕ್ಕ ಚಿಕ್ಕ ಪಾದಗಳು ಕೂಡ ಬರುವುದುಂಟು. ಮಾದರಿಗೆ,

ಅವರೇಕೆ. ಕೈ ಹಿಡಿದು. ಕಸಿಯ ಬಾ. ರದು ನನ್ನ.
ಹೆಂಡತಿಯ. ನನ್ನ ಸೊಮ್ಮು ಸಂ. ಪದವ
ನನ್ನಂತು. ಅನ್ಯರು
ಮಾನವನ. ಮಬ್ಬು. ಕಣ್ಣೊಳಗೆ. ಮುಸುಕಿ
ಕಾಣಲಿ. ಲ್ಲಾ ತಂದೇ. ನನ್ನಂತೆ. ಅನ್ಯರು
ತನ್ನಂತೆ. ಅನ್ಯರು. (ಅದೇ ಪು. ೪೮೨)

ವಾಕ್ಯವೃಂದಗಳ ಆರಂಭದಲ್ಲಿ ಹೆಚ್ಚೂ ಕಡಿಮೆ ನಿಯತವಾಗಿ ಊನಪಾದಗಳೇ ಬರುತ್ತವೆ ; ಜೊತೆಗೆ, ಹೆಚ್ಚಿನ ಸಂದರ್ಭದಲ್ಲಿ ಅವು ಸಂಬೋಧನೆಯ ರೂಪದಲ್ಲೇ ಇರುತ್ತವೆ.

ಇದೇ ರೀತಿ, ಕೆಲವೊಮ್ಮೆ ಇದು ವಚನಗಳ ಹತ್ತಿರಕ್ಕೆ ಕೂಡ ಸಾಗುತ್ತದೆ. ಆದ್ದರಿಂದ ಒಮ್ಮೆ ಲಲಿತರಗಳೆಯಂತೆ, ಒಮ್ಮೆ ಸರಳರಗಳೆಯಂತೆ, ಒಮ್ಮೆ ವಚನದಂತೆ, ಒಮ್ಮೆ ಇವೆಲ್ಲಕ್ಕಿಂತ ಭಿನ್ನವಾಗಿ, ಸಾಗುವುದು ಇಲ್ಲಿಯ ಪ್ರಧಾನ ಲಕ್ಷಣವೆನ್ನಬಹುದು. ಆ ಎಲ್ಲದರ ಸತ್ತ್ವವನ್ನೂ ಅಡಗಿಸಿಕೊಂಡ ವಿಶಿಷ್ಟ ರೂಪವಿದು.

ಒಟ್ಟಾರೆಯಾಗಿ, ನಡೆಯ ದೃಷ್ಟಿಯಿಂದ ಹೇಳುವುದಾದರೆ, ದೀರ್ಘೀಕರಣ ಬಹಳವಾಗಿದ್ದರೂ ಗಣಪರಿವೃತ್ತಿಯ ಪ್ರಮಾಣ ಇಲ್ಲಿ ಬಹಳ ಕಡಿಮೆ ; ಲಲಿತಲಯವೇ ಪ್ರಧಾನವಾಗಿ ಕಂಡುಬರುತ್ತದೆ ; ಜೊತೆಗೆ ಪಾದಾಂತಯತಿ ಕೂಡ ನಿಯತ. ಪಾದದ ಉದ್ದವನ್ನು ಪಲವೆಡೆ ಈ ಅಂತ್ಯಯತಿಯೇ ನಿರ್ಧರಿಸುತ್ತದೆ. ಆದ್ದರಿಂದ ಇದು ಸರಳ ರಗಳೆ ಅನಿಯತ ಪದಿಗಳು ಕಸಿಗೊಂಡ ರೂಪವೆಂದು ಹೇಳಬಹುದು. ಭಾವದ ಹರಿವಿಗೆ ತಕ್ಕಂತೆ ಛಂದಸ್ಸು ಮಣಿಯುತ್ತ ಹೋಗಿದೆ ; ಅಂತೆಯೇ ಭಾವವು ಪಂಚಮಾತ್ರಾ ಗಣಗಳ ಎರಕವಲ್ಲಿಯೇ ಮೂಡುತ್ತಾ ಬಂದಿದೆ. ಇದರಿಂದಾಗಿ ದೀರ್ಘೀಕರಣ, ಪದ್ಮಗಣ, ಮುಡಿಗಳ ಬಳಕೆಯೂ ಇದರಲ್ಲಿ ಸಾಕಷ್ಟು ಕಂಡು ಬರುತ್ತದೆ.

ಹಿಂದೆಯೇ ಹೇಳಿದಂತೆ ವಚನಗಳ ಪ್ರಭಾವ ಇಲ್ಲಿ ದಟ್ಟವಾಗಿರುವುದರಿಂದ ಪದವಿನ್ಯಾಸದಲ್ಲಿ ಪುನರಾವರ್ತನೆ, ಪ್ರಾಸವೈವಿಧ್ಯ ವಿಲಾಸ ಇವು ಎದ್ದು ಕಾಣುತ್ತವೆ. ಅದಕ್ಕೆ ಒಪ್ಪುವ ಭಾಷೆ ಕೂಡ ಬಳಕೆಯಾಗಿರುವುದರಿಂದ ಇಲ್ಲಿ ಪದ್ಯತನ ಹೆಚ್ಚಾಗಿದೆ. ಗೋಕಾಕರ ಕಾವ್ಯಕ್ಕಿಂತ ಈ ದೃಷ್ಟಿಯಿಂದ ಇಲ್ಲಿ ನಾದಮಾಧುರ್ಯ ಹೆಚ್ಚು.

೩. ಪು. ತಿ. ನರಸಿಂಹಾಚಾರ್ಯರು

ಸರಳರಗಳೆ ಮತ್ತು ಮಹಾಛಂದಸ್ಸುಗಳಿಂದ ಭಿನ್ನವಾದ, ಆದರೆ ಸರಳರಗಳೆಯ ನೆಲಗಟ್ಟಿನ ಮೇಲೆಯೇ ರೂಪಿತವಾದ, ಎರಡು ಛಂದೋರೂಪಗಳು ಪುತಿನ ಅವರ 'ಪಾಂಡವ ಪ್ರಸ್ಥಾನ'3, 'ಸ್ವರ್ಗಾರೋಹಣ ಪರ್ವ'4, 'ಲಕ್ಷ್ಮಣ ವಿಸರ್ಜನಂ'5 ಮತ್ತು 'ಸೀತೆ ತವರಿಗೆ ಸಂದುದು'6 ಎಂಬ ಕವನಗಳಲ್ಲಿ ಬಳಕೆಯಾಗಿವೆ. ಇವುಗಳ ಪೈಕಿ ಮೊದಲ ಮೂರರ ಛಂದೋರೂಪವು ಒಂದೇ ಬಗೆಯದು. ಅದರಲ್ಲಿ ಪಾದರಚನೆಯು ೨೦ಕ್ಕೆ ಬದಲು ೨೧ ಮಾತ್ರೆಗಳಿಂದಾಗಿರುತ್ತದೆ. ಮಧ್ಯೆ ಮಧ್ಯೆ ಬಹಳಷ್ಟು ಕಡೆ ೨೦, ೨೨ ಹಾಗೂ ೨೩ ಮತ್ತು ಬಹಳ ವಿರಳವಾಗಿ ೧೯ ಮಾತ್ರೆಗಳ ಪಾದರಚನೆಗಳೂ ಬಂದು ಅದರಲ್ಲಿ ವೈವಿಧ್ಯಕ್ಕೆಡೆ ಮಾಡಿವೆ. 'ಪಾಂಡವ ಪ್ರಸ್ಥಾನ'ದಲ್ಲಂತೂ ನಡುವೆ ೩೬ ಮತ್ತು ೩೨ ಮಾತ್ರೆಗಳ ೧೦ ಪಾದಯುಗ್ಮಗಳು ಒಟ್ಟಿಗೆ ಬರುತ್ತವೆ. ಗಣಪರಿವೃತ್ತಿಯನ್ನು, ಎರಡು ಕವನಗಳಲ್ಲೂ ಅಧಿಕವಾಗಿ ತರಲಾಗಿದೆ. ಅನಿವಾರ್ಯ ಗಣಪರಿವೃತ್ತಿಯ ಬಳಕೆಯು ಇಲ್ಲಿಯಷ್ಟು ಹೆಚ್ಚಿನ ಪ್ರಮಾಣದಲ್ಲಿ ಈ ಹಿಂದೆ ಮಹಾಛಂದಸ್ಸಿನಲ್ಲಿ ಕೂಡ ಆಗಿಲ್ಲವೆಂಬುದು ಗಮನಾರ್ಹ. ಇಪ್ಪತ್ತು ಮಾತ್ರೆಗಳ ಮೇಲೆ ಒಂದು ಮಾತ್ರೆ ಅಧಿಕವಾಗಿ ಬರುವುದೇ ಇದಕ್ಕೆ ಕಾರಣ. ಅಂತೂ ಗಣಪರಿವೃತ್ತಿಯ ಆಧಿಕ್ಯ ಮತ್ತು ಸ್ವಚ್ಛಂದಯತಿ

ಇವುಗಳಿಂದಾಗಿ ವೈವಿಧ್ಯಪೂರ್ಣನಡೆ ಇಲ್ಲಿ ಕಾಣಿಸಿಕೊಂಡಿದೆ. ಮಾದರಿಗೆ ಈ ಭಾಗವನ್ನು ನೋಡಬಹುದು :

ಆದೆ ತೆರದಿ ದೊರೆ. ಅಲ್ಲಲ್ಲಿ. ಕಂಡಾ. ರೂಗೆಟ್ಟ ೭.೫.೪.೫.
ಮೈಗಳುಂ. ಮರೆಯಾದು. ವೈ ॥ ಬಳಿಕ. ಬೀಸಿತು.
ಗಾಳಿ । ೫.೫.೨.೩.೪.೩.
ಸುಖಸ್ಪರ್ಶಂ । ಪುಣ್ಯ. ಗಂಧವಹಂ । ನಿರ್ಮಲಂ । ೭.೩.೬.೫
ದೇವ. ಸಮೀಪಸ್ಥಂ । ಅತೀವ. ಶೀತಲಂ ॥ ಮರುತ ೩.೭.೪.೫.೩
ನಿಂದ್ರಂ । ವಸುಗ. ಳಶ್ವಿನೀ. ಸುತರಂತೆ. ಸಾಧ್ಯರ್ । ೪.೩.೫.೫.೪
ರುದ್ರರುಂ. ಆದಿತ್ಯರಂ. ಮಿಕ್ಕೆಲ್ಲ. ಸುರರುಂ । ೫.೭.೫.೪
ನೆರೆದರಾ. ಯೆಡೆಯಲ್ಲಿ. ಸಿದ್ಧರ್. ಪರಮ. ಋಷಿಗಳ್ ॥ ೫.೫.೪.೩.೪
(ಸ್ವರ್ಗಾರೋಹಣ ಪರ್ವ)

ಇಂತಹ ವೈವಿಧ್ಯಪೂರ್ಣಗತಿಯಲ್ಲಿ ಬಹಳಷ್ಟು ಕಡೆ ಭಾಮಿನೀಲಯ ಕಾಣಿಸಿಕೊಳ್ಳುತ್ತದೆ. ಮಾದರಿಗೆ,

ಒಂದೆ. ಹಗಲೊಳು. ೩.೪.
ಸುಡುವೆ. ನಾನೀ. ಶತ್ರು. ಗಳನೆಂ. ದೊರೆದ. ನೀತಂ. ೩.೪.೩೪.೩.೪.
ಆದೊ. ಡಾತೆರ. ಗೈಯ. ಲಲ್ಲೀ. ಶೂರ. ಮಾನಿ. ೩.೪.೩.೪.೩.೪.
(ಪಾಂಡವ ಪ್ರಸ್ಥಾನ)

ಇದರ ಜೊತೆಗೆ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಸಪ್ತಮಾತ್ರಾಲಯ ಕೂಡ ಅಲ್ಲಲ್ಲಿ ಕಾಣಿಸಿಕೊಳ್ಳುವುದು.

ಶಾರ್ಙ್ಗ. ಚಾಪನಂ. ಕೀರ್ತಿಸುತ. **ರತ್ನಂಗಳಂ.**
ವಸ್ತ್ರಂಗಳಂ. ಗ್ರಾಮಂಗಳಂ. ಅಶ್ವಂಗಳಂ
ರಥಂಗಳಂ. ಹೇಂಗಳಂ... (ಪಾಂಡವ ಪ್ರಸ್ಥಾನ)

ಎಂಬಂತಹ ಕಡೆಗಳಲ್ಲಿ ಅದನ್ನು ಕಾಣಬಹುದು. ಇವೆಲ್ಲದರ ಜೊತೆಗೆ ಇಲ್ಲಿಯ ಭಾಷೆ ಕೂಡ ಮಹಾಛಂದಸ್ಸಿನ ಭಾಷೆಯನ್ನು ಸಮೀಪಿಸುತ್ತದೆ. ಇಷ್ಟಾದರೂ ಮಹಾಛಂದಸ್ಸಿನಲ್ಲಿ ಕಂಡು ಬರುವಂತಹ ಪುಟ್ಟ ದೊಡ್ಡ, ವಿವಿಧ ವಿಸ್ತಾರಗಳ ಘಟಕಗಳ ಹಿತವಾದ ಮಿಶ್ರಣವನ್ನು ಇದರಲ್ಲಿ ಕಾಣುವುದು ಸಾಧ್ಯವಿಲ್ಲ. ಇಲ್ಲಿಯ ಘಟಕಗಳೆಲ್ಲ ಸಾಮಾನ್ಯವಾಗಿ ಬಹಳ ವಿಸ್ತಾರವಾದವೇ ಆಗಿವೆ. ವೃಂದ

ವಿಂಗಡಣೆ ಕೂಡ ಅಷ್ಟಾಗಿ ಕಾಣಿಸದು. ಆದರೆ ಒಟ್ಟಾರೆ ಇಲ್ಲಿಯ ರಚನಾ ಕೌಶಲ ಮಾತ್ರ ಓಜಸ್ಸಿನಿಂದ ಕೂಡಿದ್ದು ಉತ್ತಮ ಮಟ್ಟದ್ದಾಗಿದೆ. ಮಹಾಛಂದಸ್ಸು 'ಮಹಾ' ಎಂಬ ವಿಶೇಷಣಕ್ಕೆ ಪಾತ್ರವಾಗುವುದು, ಭಾವಕ್ಕನುಗುಣವಾಗಿ ಮಣಿಯುತ್ತ ಸಾಗುವ ಆದರ ಗುಣದಿಂದ ; ಹಾಗಿಲ್ಲದಲ್ಲಿ ಅದು ಸರಳರಗಳೆಯೇ ಆಗುತ್ತದೆ ಎಂಬ ಅಂಶವನ್ನು ನೆನೆದಾಗ ಇಲ್ಲಿಯದು ತಂತ್ರವೈವಿಧ್ಯದಿಂದ ಕೂಡಿದ್ದರೂ ಮಹಾಛಂದಸ್ಸಿನಿಂದ ಹೇಗೆ ಭಿನ್ನವಾಗಿ ನಿಲ್ಲುತ್ತದೆ ಎಂಬುದನ್ನು ಅರಿಯಬಹುದು.

'ಸೀತೆ ತವರಿಗೆ ಸಂದುದು' ಕವನವ ಛಂದೋರೂಪವು ಮತ್ತೊಂದು ರೀತಿಯದು. ಇದರಲ್ಲಿ ಪಾದಗಳ ಉದ್ದವು ೪೮ ಮಾತ್ರೆಗಳವರೆಗೂ ವಿವಿಧ ಪ್ರಮಾಣದಲ್ಲಿ ಹೆಚ್ಚು ಕಡಿಮೆಯಾಗುತ್ತ ಹೋಗಿದೆ. ಈ ಹೆಚ್ಚೂ ಕಡಿಮೆಯಲ್ಲಿ ಯಾವ ವಿಶಿಷ್ಟ ಉದ್ದೇಶವೂ ಇಲ್ಲ ; ಸಾಮಾನ್ಯವಾಗಿ ವಾಕ್ಯ ಇಲ್ಲವೇ ವಾಕ್ಯಖಂಡ ಮುಗಿಯುವವರೆಗೆ ಕವಿಯು ತಮ್ಮಿಚ್ಛೆಗನುಸಾರವಾಗಿ ಪಾದವನ್ನು ಹಿಗ್ಗಿಸುತ್ತ ಹೋಗಿರುವುದಷ್ಟೇ ಇದಕ್ಕೆ ಕಾರಣ. ಇಂತಹ ಹಿಗ್ಗುವಿಕೆಯನ್ನು, ಬಹಳ ಕಡಿಮೆ ಪ್ರಮಾಣಹಲ್ಲಿ, ವಿನಾಯಕರ 'ಕೊನೆಯ ದಿನ' ಕವನದಲ್ಲಿಯೂ ಕಾಣುತ್ತೇವೆ. ಆದರೆ ಅಲ್ಲಿ ಅದು ಅಪವಾದವೆಂಬಂತೆ ಕಾಣಿಸಿಕೊಳ್ಳುತ್ತಿದ್ದರೆ ಇಲ್ಲಿ ಅದೇ ಲಕ್ಷಣವೇನೋ ಎಂಬಂತೆ ಕಾಣಿಸಿಕೊಂಡಿದೆ. ೨೦ ಮಾತ್ರೆಗಳ ಪಾದಗಳೇ ಇಲ್ಲಿ ಬಹಳ ವಿರಳ. ಅಂತಯೇ ೨೧ ಇಲ್ಲವೇ ೨೨ ಮಾತ್ರೆಗಳವು ಕೂಡ ಇಲ್ಲಿ ಪ್ರಧಾನವಾಗಿವೆಯೆನ್ನುವಂತಿಲ್ಲ. ಮಾದರಿಗೆ, ಈ ಭಾಗವನ್ನು ನೋಡಬಹುದು :

ವಾಲ್ಮೀಕಿ ಇಂತೊರೆಯೆ ಮರುನುಡಿದನಾ ರಾಘವಂ ೨೨
ಕೈಮುಗಿದು ನೋಡುತಾ ವರವರ್ಣಿನಿಯ ಜನದ ನಡುವೆ : ೨೩
ಓ ಮಹಾಭಾಗನೇ, ಧರ್ಮವನು ಬಲ್ಲವನೆ, ನಿನ್ನ ಮಾತಿದು ಸರಿ ; ೨೮
ಎನಗುಂಟು ವಿಶ್ವಾಸ ನಿನ್ನ ಕಲ್ಮಷವಿರದ ನುಡಿಗಳೊಳಗೆ, ೨೬
ಉಂಟೆನಗೆ ಪ್ರತ್ಯಯ ಪುರಾವೃತ್ತದೊಳು ವೈದೇಹಿಯ ೨೩
ಅಲ್ಲದೆ ಪ್ರಮಾಣಿಸುತ ಸುರರೆಡೆಯೊಳೀಕೆಯನು ಮನೆಹೊಗಿಸಿದೆ. ೨೬

(ಸೀತೆ ತವರಿಗೆ ಸಂದುದು)

ಇದರಲ್ಲಿ ೨೦ರ ಕಟ್ಟಿಗೆ ಒಳಪಟ್ಟು ನಡೆಯುವಂತಹ ಗಣಪರಿವೃತ್ತಿಯ ಕಟ್ಟುಪಾಡು ಅಷ್ಟಾಗಿ ಕಂಡು ಬರುವುದಿಲ್ಲ ; ಬದಲಿಗೆ ಭಾವಾನುಸಾರಿಯಾಗಿ ವಿವಿಧ ರೀತಿಯ ಗಣಗಳನ್ನು ಕೂಡಿಸುತ್ತ ಸುಲಲಿತ ಗತಿಯನ್ನು ಸಾಧಿಸಿರುವುದನ್ನು ಕಾಣುತ್ತೇವೆ. ಹೀಗೆ ಲಯವು ಭಾವಾನುಸಾರಿಯಾಗಿದ್ದರೂ ಅವರಲ್ಲಿ ಸ್ವಚ್ಛಂದತೆಯಿಲ್ಲವೆಂಬುದು ಗಮನಾರ್ಹ. ಲಲಿತಲಯದತ್ತಣಿನ ಕೇಂದ್ರಾಕರ್ಷಣೆಯು ಉದ್ದಕ್ಕೂ ಕಾಣಿಸುತ್ತದೆ.

ಪಂಚಮಾತ್ರಾ ಗಣಗಳು ಅಧಿಕವಾಗಿ ಬರುತ್ತವೆ. ಕೆಲವು ವೇಳೆ ಅವುಗಳ ಪರಿವೃತ್ತಿ ಗಣಗಳೂ ಕೆಲವೆಡೆ ತ್ರಿಪುಡೆಯ ನಡೆಯೂ ಕಾಣಿಸಿಕೊಳ್ಳುವುದುಂಟು. ಇದನ್ನು ಮೀರಿ, ಆದರೆ ಶ್ರುತಿಹಿತವಾದ ಗತಿಗೆ ಭಂಗ ಬರದಂತೆ, ಬೇರೆ ಬೇರೆ ಮೌಲ್ಯಗಳ ಗಣಗಳನ್ನು ಮೇಲಿಂದ ಮೇಲೆ ತರುವುದು ಮಾತ್ರ ಸ್ವಚ್ಛಂದತೆಯ ಛಾಯೆಗೆ ಕಾರಣವಾಗಿದೆ. ಒಟ್ಟಾರೆ, ಗಣ ಸಂಯೋಜನೆಯ ದೃಷ್ಟಿಯಿಂದ, ಮಹಾಛಂದಸ್ಸಿಗಿಂತ ಹೆಚ್ಚಿನ ಸ್ವಾತಂತ್ರ್ಯವು ಇಲ್ಲಿದೆಯೆನ್ನಬಹುದು. ಆದರೆ, ಘಟಕಗಳ ರಚನೆಯ ದೃಷ್ಟಿಯಿಂದ ಮಾತ್ರ 'ಪಾಂಡವ ಪ್ರಸ್ಥಾನ' ಮತ್ತು 'ಸ್ವರ್ಗಾರೋಹಣಪರ್ವ'ಗಳ ಛಂದೋರೂಪದಂತೆಯೇ ಇದೂ, ತನ್ನ ವಿಸ್ತಾರಘಟಕ ವಿನ್ಯಾಸದಿಂದಾಗಿ ಅದರಿಂದ ಭಿನ್ನವಾಗಿ ನಿಲ್ಲುತ್ತದೆ.

ಒಟ್ಟಾರೆಯಾಗಿ ಇದು ಕೂಡ, ಮೊದಲಿನದರಂತೆಯೇ ಉತ್ತಮವಾದ, ಆದರೆ ಅದಕ್ಕಿಂತ ಹೆಚ್ಚು ಕಲಾತ್ಮಕವಾದ ಮತ್ತು ಸರಳರಗಳೆ ಹಾಗೂ ಮಹಾಛಂದಸ್ಸುಗಳಿಗಿಂತ ಭಿನ್ನವಾದ, ಆದರೆ ಸರಳರಗಳೆಯಿಂದಲೇ ಜನ್ಯವಾದ ಛಂದೋರೂಪವೆನ್ನಬಹುದು. ಪಾದದ ನಿಯತ ಅಳತೆಯ ನಿರ್ಬಂಧವನ್ನು ಮೀರಿ, ಸರಳರಗಳೆಯಲ್ಲಿ ಪಾದದ ಪರಿಗಣನೆಗೆ ಮಹತ್ವ ಕೊಡದಿದ್ದರೂ ದೋಷವಿಲ್ಲವೆಂಬುದನ್ನು ಈ ರೂಪವು ಸ್ಪಷ್ಟಪಡಿಸುತ್ತದೆಯೆಂಬುದು ಗಮನಾರ್ಹ.

ಪುತಿನ ಅವರ ಈ ಪ್ರಯೋಗಗಳು ಮುಂದೆ ಅವರ 'ಶ್ರೀ ಹರಿಚರಿತೆ'ಯ ವಿಶಿಷ್ಟ ಛಂದೋರೂಪದ ಆವಿರ್ಭಾವಕ್ಕೆ ಪೂರ್ವಭೂಮಿಕೆಯನ್ನೊದಗಿಸಿದವು. ಅಲ್ಲಿಯ ಛಂದಸ್ಸು ಇವಕ್ಕಿಂತ ಭಿನ್ನವಾಗಿದ್ದರೂ ಇವುಗಳ ನೆಲಗಟ್ಟಿನ ಮೇಲೆಯೇ ರಚಿತವಾಗಿದೆಯೆಂಬುದನ್ನು ಮರೆಯಬಾರದು. ಅದರಲ್ಲೂ 'ಸರಯೂ ಪ್ರವೇಶ'7 ಎಂಬುದಂತೂ ೨೪ ಮಾತ್ರೆಗಳ ಪಾದಗಳಿಂದಾಗಿದ್ದು 'ಶ್ರೀ ಹರಿಚರಿತೆ'ಯ ಮೊದಲ ಹಂತವಾಗಿ ಕಾಣುತ್ತದೆ. ಆದರೆ, ಷಣ್ಮಾತ್ರಾಲಯ ಮತ್ತು ನಿಯತವಾದ ಪಾದಾಂತಯತಿಯ ಪಾಲನೆ ಇವುಗಳಿಂದಾಗಿ ಅದರಲ್ಲಿ ರಗಳೆಯತನ ಇನ್ನೂ ಹಾಗೆಯೇ ಉಳಿದಿದೆ. ಈ ರಗಳೆಯತನವನ್ನು ಹೋಗಲಾಡಿಸುವುದರ ಮೂಲಕವಾಗಿಯೇ 'ಶ್ರೀ ಹರಿ ಚರಿತೆ'ಯ ಛಂದಸ್ಸು ರೂಪುಗೊಂಡದ್ದು. ಸರಳರಗಳೆಯ ಪರಿಷ್ಕರಣ ಕಾರ್ಯದಲ್ಲಿ ಕೂಡ ಇಂತಹುದೇ ಕ್ರಿಯೆ ನಡೆದಿರುವುದನ್ನು ಇಲ್ಲಿ ನೆನೆಯಬಹುದು.

'ಶ್ರೀ ಹರಿಚರಿತೆ'ಯ 'ಅರಿಕೆ'ಯಲ್ಲಿ, ಅದರ ಛಂದಸ್ಸನ್ನು ಕುರಿತಂತೆ, "ಭೃಂಗಿ ನಡೆಯ ಭಾಮಿನೀ ವಾರ್ಧಕವೆಂದು ಕರೆಯಬಹುದಾದ ಈ ಒಂದು ಛಂದಸ್ಸು ಒಂದು ಹದಕ್ಕೆ ಬಂದು ರೂಪುಗೊಂಡಿರಲಿಲ್ಲ. ಇದೇ ಬಹಳ ಕಾಲ ಹಿಡಿಯಿತು"8— ಎಂದಿದ್ದಾರೆ. 'ಕೃತಜ್ಞತೆ'ಯಲ್ಲಿ ಡಿವಿಜಿ ಮೂರ್ತಿಯವರು ಇದನ್ನು 'ಬೃಹಚ್ಛಂದಸ್ಸಿನ ಕಾವ್ಯ'ವೆಂದು ಕರೆದಿದ್ದಾರೆ. ಪುತಿನ ಅವರೇ ಒಂದೆಡೆ, "ಬೃಹಚ್ಛಂದದ ಸಕಲ ಮಾತ್ರಾಗತಿಯ ಗಮಕಂ ಮೆರೆಯೆ"9 ಎಂದಿದ್ದಾರೆ.

ಆದ್ದರಿಂದ ಅವರಲ್ಲಿರುವುದು 'ಬೃಹಚ್ಛಂದಸ್ಸು'. ಇದರ ಲಕ್ಷಣವೇನು ? ಇದು ಸರಳರಗಳೆ ಮಹಾಛಂದಸ್ಸುಗಳಿಗಿಂತ ಹೇಗೆ ಭಿನ್ನವಾಗಿದೆ?– ಎಂಬುದು ವಿಚಾರಣೀಯ. ಮೇಲಿನ ಹೇಳಿಕೆಗಳಿಂದ ತಿಳಿದು ಬರುವ ಲಕ್ಷಣಗಳು ಇವು :

೧. ಇವರಲ್ಲಿ ಭೃಂಗಿ ನಡೆಯಿದೆ ; ಎಂದರೆ ಷಣ್ಮಾತ್ರಾಲಯವಿದೆ.
೨. ಇವರಲ್ಲಿ ಭಾಮಿನಿ ಮತ್ತು ವಾರ್ಧಕಲಯಗಳ ಮಿಶ್ರಣವಿದೆ.
೩. ಇವರಲ್ಲಿ ಸಕಲ ಮಾತ್ರಾಗತಿಯ ಗಮಕವಿದೆ.

ಈ ಬಗ್ಗೆ ವಿವರಿಸುವ ಮೊದಲು ಈ ಮಾದರಿ ಭಾಗಗಳನ್ನು ಗಮನಿಸಬಹುದು :

೧. ದಿಟ, । ಮನೆ ನೆನೆಯು. ಲಂಜಿಕೆ. ಯಹುದು.॥ ನಿನ್ನ. ಕೊಳಲಂ. ನೆನೆದು.
ನಿನ್ನ ಕಾಂ. ಬಾಸೆಯನು. ತಡೆದಿಡ. ಲಾಗ. ದೈತಂದೆ. ವೈ. ॥
ದಯೆಗೈದೆ. ದರ್ಶನ. ಸುಖವ. ಕಂಗಳಿಗೆ. ॥ ತವಿಸುತಿವೆ. ಕಿವಿ + →
ಯಾಲಿಸಲು. ಮುರಳೀ. ನಾದವನು. ॥ ನಮ್ಮೊ. ಳಕ್ಕರೆ. ಮಿಗಿಲು.
ನಮ್ಮವರಿಗದ. ಸಾಲಿಸಿ. ದಂದಿನಿಂ. ॥ ಕೊಳಲ. ತುಟಿಗೆತ್ತೆ + →
ನೀಂ. ಭಯಮೆಲ್ಲಿ. ಕಾತರ. ಮೆಲ್ಲಿ. ಕಾವಳಂ. ತಾನೆಲ್ಲಿ.
ನಮ್ಮೊ. ಮನದಿ. ।ಗೋಪಾಲ। ಬಾರಿಸು. ಕೊಳಲ. ನಮ್ಮತನ-→
ವೆಮ್ಮಂ. ಜಗುಳುವೊಲು. ನಸುಗಾಲ". ವೆಂದೊರೆಯೆ. ಗೆಳೆಯರುಂ.
(ಜನ್ನಿಗವೆಂಡಿರೌತಣಂ : ಸಾ. ೧೪೮–೧೫೫)

೨. ೫. ೪. ೩ ॥ ೩. ೪. ೩.
೫. ೫. ೪. ೩. ೬. ೨.
೬. ೪. ೩. ೫. ॥ ೬. ೨ + →
೫. ೪. ೫. ॥ ೩. ೪. ೩.
೭. ೪. ೬ ॥ ೩. ೫. + →
೨. ೫. ೪. ೩. ೫. ೬.
೪. ೩ । ೬ । ೪. ೩. ೫ →
೪. ೫. ೫. ೫. ೫.

೨. ನಿಃಕರಣ. ತಾನೆಂಬ. ನಿರ್ವೇದ. ಪಿಸಿತಿರವೆ. ಮೆರೆಗುಂ.
ಸತಲ. ಜೀವಾಧಾರ. ಜೀವಾದಿಮಂ. ಜೀವಿಸೆ. ತಾನು.
ತನ್ನಿಂ. ಬೇರೆತರ. ದಿರವಿಕೆಯ. ಜೈವಕ್ರಿ. ಯಾಕ್ರಮದ.

ಜೀವೌಘ. ವನು ಸೃಜಿಸೆ. ಸರ್ಗದ. ಶಕ್ತಿಯನೆ. ಚೋದಿಸುತ.
ಚರ ಸಮಸ್ತಕೆ. ಮಧುವೆರೆದು. ಪೋಷಿಸುತ. ನಿಂತಿಹುದಲಾ.

[ವಿಪಿನಾವಗಾಹನಂ : ಸಾ. ೫-೬]

೫. ೫. ೫. ೫. ೪
೩. ೬. ೭. ೪. ೩.
೪. ೫. ೫. ೫. ೫.
೫. ೫. ೪. ೫. ೫.
೭. ೫. ೫. ೭.

ಇದೇ ರೀತಿ ಕಾವ್ಯಕ್ಕೆ ಪ್ರಸ್ತಾರಹಾಕಿ ವಿಶ್ಲೇಷಿದಾಗ ತಿಳಿದು ಬರುವ ಸ್ಥೂಲ ಅಂಶಗಳು ಇವು :

೧. ಇಲ್ಲಿಯದು ಮುಕ್ತಪದಿ ರಚನೆ ; ಅಗತ್ಯಕ್ಕೆ ತಕ್ಕಂತೆ ಪಾದಸಂಖ್ಯೆಯಲ್ಲಿ ಹೆಚ್ಚು ಕಡಿಮೆಯುಂಟಾಗುತ್ತದೆ.
೨. ಮೂಲಪಾದವು ೨೪ ಮಾತ್ರೆಗಳಿಂದ ಕೂಡಿರುತ್ತದೆ.
೩. ಲಯದಲ್ಲಿ ಅಪಾರ ವೈವಿಧ್ಯಗಳನ್ನು ತರಲಾಗಿದೆ.
೪. ಅಧಿಕ ಮಾತ್ರೆಯ (ಸಾಮಾನ್ಯವಾಗಿ ೨) ಬಳಕೆಯಿದೆ.
೫. ಎಲ್ಲ ರೀತಿಯ ಮಾತ್ರಾಗಣಗಳನ್ನೂ ಬಳಸಲಾಗಿದೆ.
೬. ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವ ಗಣವಿನ್ಯಾಸವೆಂದರೆ ೩. ೪. ೫. ೩. ೪. ೫. ರದ್ದು.
೭. ಗಣಪಲ್ಲಟದಿಂದ ಹಲವು ವೈವಿಧ್ಯಗಳನ್ನು ಸಾಧಿಸಲಾಗಿದೆ.

ಇದನ್ನು ಗಮನಿಸಿದಾಗ ೬. ೬. ೬. ೬. =೨೪ ರ ಮೂಲರಚನೆಯಿದೆಯೆಂಬಲ್ಲಿ ಭೃಂಗಿನಡೆಯೆಂಬುದು ಸ್ಪಷ್ಟವಾಗುತ್ತದೆ ; ೩. ೪. ಬರುವಲ್ಲಿ ಭಾಮಿನೀ ಘಟಕ ; ೫ ಬರುವಲ್ಲಿ ವಾರ್ಧಕ ಘಟಕ–ಇವೆಯೆನ್ನಬಹುದು. ಹಾಗಾಗಿ ೩. ೪. ೫. ರದ್ದು ಇಲ್ಲಿಯ ಮೂಲ ಘಟಕವಾಗಿದ್ದು ಅದನ್ನೇ ಭಾಮಿನೀವಾರ್ಧಕವೆಂದು ಕರೆಯಲಾಗಿದೆ. ಆದರೆ, ಸರಳರಗಳೆಯಲ್ಲಿ ೫. ೫. ೫. ೫. ಮೂಲ ಹಂದರವಾಗಿದ್ದರೂ, ಅದನ್ನು ಆದಷ್ಟೂ ಮುರಿಯುವುದರಿಂದಲೇ ಹೇಗೆ ವೈವಿಧ್ಯವನ್ನು ಸಾಧಿಸಲಾಗುತ್ತದೆಯೋ ಅದೇ ರೀತಿ ಇಲ್ಲಿ ಈ ಮೂಲ ಘಟಕದ ಪುನರಾವರ್ತನೆ ಹಾಗೂ ಆಂತರಿಕ ರಚನೆಗಳನ್ನು ಆದಷ್ಟೂ ಮುರಿದು ಜೋಡಿಸುವುದರಿಂದಲೇ ವೈವಿಧ್ಯವನ್ನು ಸಾಧಿಸಲಾಗಿದೆ.

ಅದರಲ್ಲೂ ೬. ೬. ೬. ೬. ರ ರಚನೆಯನ್ನಂತೂ ಮೇಲ್ನೋಟಕ್ಕೆ ಕಾಣದಷ್ಟು ಮುರಿಯು ಲಾಗಿದೆ. ಗಣಪರಿವೃತ್ತಿ ವೈವಿಧ್ಯವನ್ನು ಈ ಹಿಂದಿನ ಉದಾಹರಣೆಗಳಲ್ಲೇ ಗುರುತಿಸ ಬಹುದು. ಹಾಗಿಲ್ಲದೆ ಕಡಿಮೆ ಪ್ರಮಾಣದಲ್ಲಿಯಾದರೂ ೩. ೪. ೫. ರ ಘಟಕಗಳ ಪುನರಾವರ್ತನೆ ಬರುವುದಕ್ಕೆ ಮಾದರಿಯಾಗಿ ಇವನ್ನು ನೋಡಬಹುದು :

೧. ಇಂತೆನ್ನ. ರಮಿಸಿದನು. ತಚ್ಚರಿತ. ದಿಂದಾಶು. ಶೋಷಂ. ೫. ೫. ೫. ೫. ೪.
ವಾಸು. ದೇವಂ. ಮಾಧವಂ. ಗೋಪ. ಗೋಪೀ. ವಲ್ಲಭಂ. ೩. ೪. ೫. ೩. ೪.೫.
[ನಿವೇದನಂ : ಸಾ. ೧–೨.]

೨. ಆದಿ. ನಡುಹೊಸ. ಕನ್ನಡದ. ಸಕ್ಕದದ. ಬೆರೆಕೆಯ. ರೀತಿ. ೩. ೪. ೫. ೫. ೪. ೩.
ಹೊಸಬಗೆ. ನಡೆಯ. ತೊಂತೊನ. ತಾನ. ಗತಿಗಮ. ಕದಛಂದ. ೪. ೩. ೫.
೩. ೪. ೫.
[ಅದೇ : ಸಾ. ೫೧–೫೨]

ಹೀಗಾಗಿ, ಇದು ಮಹಾಛಂದಸ್ಸಿನ ಮಾದರಿಯಲ್ಲಿಯೇ ರೂಪುಗೊಂಡ ಮತ್ತೊಂದು ಛಂದಸ್ಸು7 ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಇದನ್ನು ಬೃಹಚ್ಛಂದಸ್ಸೆಂದು ಕರೆದಿರುವುದು ಉಚಿತವಾಗಿದೆ. ಮಹಾಛಂದಸ್ಸಿನ ಆಳದಲ್ಲಿ ೨೦ ಮಾತ್ರೆಗಳ (೫. ೫. ೫. ೫.) ಪಾದವಿದ್ದರೆ ಇದರ ಆಳದಲ್ಲಿ ೨೪ ಮಾತ್ರೆಗಳ (೬. ೬. ೬. ೬.) ಪಾದವಿದೆ. ವೈವಿಧ್ಯಸಾಧನೆಯ ಮಾರ್ಗಗಳು ಹೆಚ್ಚುಕಡಿಮೆ ಎರಡರಲ್ಲೂ ಒಂದೇ ರೀತಿಯಿವೆ. ಆದರೆ ವೈವಿಧ್ಯದ ಪ್ರಮಾಣ ಮಾತ್ರ ಮಹಾಛಂದಸ್ಸಿನಲ್ಲೇ ಅಧಿಕವೆನ್ನ ಬೇಕು. ಸರಳರಗಳೆ ಮಹಾಛಂದಸ್ಸುಗಳಲ್ಲಿ ೩. ೪. ೩. ರ ಘಟಕಗಳು ಅಧಿಕವಾಗಿದ್ದರೆ ಇದರಲ್ಲಿ ೩. ೪. ೫ ರ ಘಟಕಗಳು ಅಧಿಕವಾಗಿವೆ.

ಈ ಅಂಶಗಳನ್ನೆಲ್ಲ ಗಮನಿಸಿದಾಗ ಪಾದದ ಉದ್ದದ (೨೦ > ೨೪) ದೃಷ್ಟಿಯಿಂದ ಮಾತ್ರ ಇದು ಸರಳರಗಳೆ ಮಹಾಛಂದಸ್ಸುಗಳ ವರ್ಗದಿಂದ ಭಿನ್ನವಾಗುತ್ತದೆಯೆಂದೂ ವೈವಿಧ್ಯಸಾಧನ ತಂತ್ರಗಳು ಮತ್ತು ಅವುಗಳ ಬಳಕೆ ಇವು ಮಾತ್ರ ಎರಡೂ ಕಡೆ ಸಮಾನವಾಗಿದೆಯೆಂದೂ ಹೇಳಬಹುದು.

ಒಟ್ಟು ನೋಟ :

ಹೀಗೆ, ಸರಳರಗಳೆಯ ರಚನಾವಿಧಾನದ, ಪರಿಷ್ಕರಣದ, ಹಾದಿಯನ್ನು ಹಿಡಿದು, ಅನಂತರದಲ್ಲಿ, ಪ್ರಮುಖ ಕವಿಗಳು ವಿವಿಧ ಪ್ರಯೋಗಗಳನ್ನು ಮಾಡಿದ್ದಾರೆ. ಗಣ ಪರಿವೃತ್ತಿ ಮುಂತಾದವುಗಳ ಮೂಲಕ ಲಯವೈವಿಧ್ಯ ಸಾಧಿಸುವುದಂತೂ ಹಳೆಯ ವಿಚಾರವೇ. ಆದ್ದರಿಂದ, ಅದರ ಜೊತೆಗೆ ಮತ್ತೊಂದು ಹೊಸದಾರಿಯನ್ನು ಹಿಡಿದು

ಮುನ್ನಡೆಯಲು ಇವರು ಪ್ರಯತ್ನಿಸಿದ್ದಾರೆ. ಅದೇ ಪಾದವಿನ್ಯಾಸದಲ್ಲಿ ಮೂಡಿಸಿರುವ ವೈವಿಧ್ಯ. ಗೋಕಾಕರು ಸರಳರಗಳೆಯ ತಳಹದಿಯ ಮೇಲೆ ನಿಂತು ಅತ್ತಿತ್ತ ಕೈಚಾಚಿದರೆ ಭೂಸನೂರಮಠ ಅವರು, ಸರಳರಗಳೆ ಅನಿಯತಪದಿಗಳ ಕಸಿಮಾಡಿದ್ದಾರೆ : ಪುತಿನ ಅವರು ೨೦ ರ ಕಟ್ಟನ್ನೇ ಬಿಟ್ಟು ಆಚೆ ಹೋಗಿದ್ದಾರೆ. ಅಂತೂ ಒಬ್ಬೊಬ್ಬರದು ಒಂದೊಂದು ವೈವಿಧ್ಯವನ್ನು ಸೃಷ್ಟಿಸಿದೆ.

ಆದರೆ ಛಂದಸ್ಸು ಎಷ್ಟೇ ವೈವಿಧ್ಯಮಯವಾಗಿದ್ದರೂ, ಅದರ ಮಹತ್ತು ಅಡಗಿರುವುದು, ಎಷ್ಟರ ಮಟ್ಟಿಗೆ ಅದು ಭಾವಾಭಿವ್ಯಕ್ತಿಗೆ ಪೋಷಕವಾಗಿದೆಯೆಂಬುದರಲ್ಲಿ. ಇದನ್ನು ನೆನೆದಾಗ, ಛಂದಸ್ಸಿನ ರಚನೆಗಿಂತ, ಅದನ್ನು ಬಳಸಿಕೊಳ್ಳುವ ರೀತಿಯಲ್ಲಿ ಕವಿಯು ಹೆಚ್ಚಿನ ಕೌಶಲವನ್ನು ಮೆರೆಯಬೇಕೆಂಬುದು ಸ್ಪಷ್ಟವಾಗುತ್ತದೆ.

ಅಡಿ ಟಿಪ್ಪಣಿಗಳು

1 ಕೆ. ಜಿ. ನಾರಾಯಣ ಪ್ರಸಾದ್ : 'ಮಹಾಛಂದಸ್ಸು', ಮಾನ, ಹಾಮಾನಾ ಅಭಿನಂದನ ಸಮಿತಿ, ಮೈಸೂರು' ೧೯೭೨, ಪು. ೩೨೩–೩೫೧.

2. ವಿ. ಕೃ. ಗೋಕಾಕ್ : 'ಪ್ರಸ್ತಾವನೆ', ಭಾರತ ಸಿಂಧು ರಶ್ಮಿ, ಸಂ. ೧, ಐ. ಬಿ ಎಚ್. ಪ್ರಕಾಶನ, ಬೆಂಗಳೂರು, ೧೯೮೨, ಪು. vi

3. ಪು. ತಿ. ನರಸಿಂಹಾಚಾರ್ : ಮಹಾ ಪ್ರಸ್ಥಾನ, ಶಾರದಾಮಂದಿರ, ಮೈಸೂರು, ೧೯೫೮, ಪು. ೨೨.

4. ಅದೇ, ಪು. ೩೫.

5. ಅದೇ, ಪು. ೫೬.

6. ಅದೇ, ಪು. ೪೭.

7. ಅದೇ, ಪು. ೬೧.

8. ಪುತಿನ : 'ಅರಿಕೆ', 'ಶ್ರೀ ಹರಿಚರಿತೆ', ಡಿವಿಕೆ ಮೂರ್ತಿ, ಮೈಸೂರು, ೧೯೮೮, ಪು. xx

9. ಶ್ರೀಹರಿಚರಿತೆ, ಪು. ೧.

ಜೈನಭಾರತ : ಕಥೆ ಮತ್ತು ಸ್ವರೂಪ

ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ

ಭಾರತೀಯ ಸಂಸ್ಕೃತಿಯ ಅಕ್ಷಯಭಂಡಾರವೆನ್ನಿಸಿದ ವ್ಯಾಸರ ಸಂಸ್ಕೃತ ಮಹಾಭಾರತ (ಕಿ. ಪೂ. ೪೦೦–ಕ್ರಿ. ಶ. ೪೦೦) ವಿಶಾಲ ಭರತಖಂಡದಲ್ಲಿ ಗಳಿಸಿದ ಪ್ರಖ್ಯಾತಿ ಜನಪ್ರಿಯತೆಗಳು ಜೈನಧರ್ಮೀಯರಾದ ಸಾಮಾನ್ಯರನ್ನೂ ಕವಿಗಳನ್ನೂ ಧರ್ಮ ಪ್ರಸಾರಕರಾದ ಆಚಾರ್ಯರನ್ನೂ ಸಮಾನವಾಗಿ ಆಕರ್ಷಿಸಿದುದು ಸಹಜವೇ ಆಗಿದೆ. ಮಹಾಭಾರತದ ಕಥೆ ವ್ಯಾಪ್ತಿಯ ದೃಷ್ಟಿಯಿಂದ ವಿಶ್ವದಷ್ಟೇ ವಿಶಾಲವಾದುದು ; ಕಾವ್ಯದೃಷ್ಟಿಯಿಂದ ಅತಿಶಯ ರೋಚಕವೂ ಉತ್ಸಾಹಜನಕವೂ ಆದುದು ; ಹಾಗೆಯೇ ಮೌಲ್ಯದೃಷ್ಟಿಯಿಂದ ಉನ್ನತ ಧ್ಯೇಯಾದರ್ಶಗಳನ್ನೂ ನೀತಿಪ್ರಪಣವಾದ ಜೀವನ ಪಾಠಗಳನ್ನೂ ನಿರೂಪಿಸುವಂತಹುದು. ಆದುದರಿಂದ ವೈದಿಕ ಧರ್ಮದ ಮೂಲವಾಗಿ ಪಲ್ಲವಿಸಿ ವಟವೃಕ್ಷವಾಗಿ ಬೆಳೆದು ಶತಶತಮಾನಗಳ ಜನಸಮುದಾಯಕ್ಕೆ ಆಪ್ತಗ್ರಂಥವಾಗಿ ಪರಿಣಮಿಸಿರುವ ಮಹಾಭಾರತವನ್ನು ಜೈನಧರ್ಮ ಸಹ ತನ್ನ ಸಾಹಿತ್ಯರಾಶಿಯಲ್ಲಿ ಸೇರಿಸಿಕೊಳ್ಳಲು ಇಷ್ಟಪಟ್ಟಿತು. ಆದರೆ ಈ ಧರ್ಮ ತಾನು ನಂಬಿಕೊಂಡು ಬಂದ ಸಂಪ್ರದಾಯ ಮತ್ತು ಆಚರಣೆಗಳಿಗೆ ಒಪ್ಪಿಗೆಯಾಗದಿರುವ ಅಂಶಗಳನ್ನು ತಕ್ಕ ಲೋಪ, ಆಗಮ ಮತ್ತು ಆದೇಶಗಳೊಂದಿಗೆ ಅಂಗೀಕರಿಸುವುದು ಅನಿವಾರ್ಯವಾಯಿತು. ಅಂತಹ ಅಂಶಗಳನ್ನು ಹುದುಗಿಸಿಕೊಂಡ ಕಥಾಭಾಗಗಳನ್ನೂ ವ್ಯಕ್ತಿಚರಿತ್ರೆಗಳನ್ನೂ ಆ ಬಗೆಯ ಪರೀಕ್ಷೆ ಮತ್ತು ಚಿಕಿತ್ಸೆಗಳಿಗೆ ಅದು ಆಮೂಲಾಗ್ರವಾಗಿಯೇ ಒಳಪಡಿಸಲು ಹಿಂಜರಿಯಲಿಲ್ಲ. ಇವುಗಳ ಪರಿಣಾಮವಾಗಿ ಉಂಟಾಗುವ ಕಥಾಸ್ವರೂಪ ಆಕರ್ಷಕವಾಗಿ ಉಳಿಯುವುದೇ, ಪಾತ್ರಪೋಷಣೆ ಉಚಿತ ರೀತಿಯಲ್ಲಿ ಇರುವುದೇ, ಸನ್ನಿವೇಶ ರಚನೆ ಹೃದ್ಯವಾಗಿ ನಿರ್ಮಾಣವಾಗುವುದೇ ಎನ್ನುವುದರ ಕಡೆಗೆ ಅವರು ಲಕ್ಷ್ಯಕೊಡಲಿಲ್ಲ. ಆ ವಿವೇಚನೆಯೇ ಅಪ್ರಸ್ತುತವೆಂದು ಅವರಿಗೆ ತೋರಿರಬೇಕು. ಕಥೆ ಪಾತ್ರಗಳ ವಿಷಯದಲ್ಲಿ ಕ್ರಾಂತಿಕಾರಕವಾದ ಬದಲಾವಣೆಗಳನ್ನು ಹೂಡಿ ಮೂಲಕೃತಿಯ ಜಾಡು

ಬದಲಿಸುವ ರೂಢಿ ವೈದಿಕಶ್ರದ್ಧೆಯ ಕವಿಗಳಲ್ಲಿಯೇ ನಾಟಕಕಾರರಲ್ಲಿಯೋ, ಅವರ ಕಣ್ಣೆದುರಿನಲ್ಲಿಯೇ ಪ್ರಚಲಿತವಿದ್ದುದನ್ನು ಅವರು ಬಲ್ಲವರಾಗಿದ್ದರು. ಹೀಗಾಗಿ ತಮ್ಮ ಧರ್ಮದ ಸಂಪ್ರದಾಯ ಆಚರಣೆಗಳಿಗೆ ಒಪ್ಪಿಗೆಯಾಗುವ ರೀತಿಯಲ್ಲಿ, ತಮಗೆ ಇಷ್ಟವಾಗುವ ರೀತಿಯಲ್ಲಿ, ಪ್ರಮಾಣ ಮತ್ತು ಹದದಲ್ಲಿ, ತಮಗೆ ಅಗತ್ಯವೆನ್ನಿಸಿದ ಬದಲಾವಣೆಗಳನ್ನು ಮೂಲ ಮಹಾಭಾರತದ ಕಥೆ ಪಾತ್ರಗಳಲ್ಲಿ ತಾವೂ ಮಾಡಿಕೊಂಡರು. ಈ ಮಹಾಕೃತಿ ಒಂದು ದೊಡ್ಡ ಜನಾಂಗದ ಅಮೂಲ್ಯವಾದ ಆಸ್ತಿಯಾಗಿರಬೇಕಾದರೆ, ತಮ್ಮನ್ನೂ ಅದರ ಹಕ್ಕುದಾರರಾಗಿ ಅವರು ತಿಳಿದುಕೊಂಡುದು ಒಪ್ಪತಕ್ಕುದೇ ಆಗಿದೆ. ಜನಪದದಲ್ಲಿ ರೂಢಮೂಲವಾಗಿ ಬಂದ ನಂಬಿಕೆಗಳು, ಆಚರಣೆಗಳು, ಸಾಹಿತ್ಯ ಮತ್ತು ಐತಿಹ್ಯಗಳು ಸಹ ಯಾವುದೋ ಒಂದು ವಾಹಿನಿಯಾಗಿ ಅವರು ತಿದ್ದಿರೂಪಿಸಿದ ಭಾರತಕಥೆಯಲ್ಲಿ, ಆ ಕಥೆಯ ಜೀವಾಳವಾದ ವ್ಯಕ್ತಿಗಳ ಶೀಲ ಸ್ವಭಾವಗಳ ಚಿತ್ರಣದಲ್ಲಿ ಸೇರಿಹೋದುವು. ಯಾವುದೇ ಧರ್ಮವಾಗಿರಲಿ, ಜನ ಸಾಮಾನ್ಯರ ಆಸೆ ಆಕಾಂಕ್ಷೆಗಳು, ಧ್ಯೇಯಾದರ್ಶಗಳು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಮಹಾಭಾರತದಂತಹ ಮಹಾಕೃತಿಯ ಪುನರ್ಭವಿಸಿದ ರೂಪಗಳನು ನಿರ್ಮಿಸುವಾಗ ಆ ರೂಪಗಳಲ್ಲಿ ತಮ್ಮ ಪ್ರಭಾವಗಳನ್ನು ಬೀರದಿರುವುದು ಸಾಧ್ಯವೇ ಇಲ್ಲ.

ಹೀಗೆ ಜೈನಭಾರತ ರೂಪ ತಳೆಯಿತು. ಆ ರೂಪವನ್ನು ಅದು ತಳೆಯುವುದರ ಹಿಂದೆ ಕೆಲಸಮಾಡಿರುವ ಜೈನ ಮನೋಧರ್ಮ ಯಾವುದು, ತತ್ತ್ವಗಳು ಯಾವುವು ಎನ್ನುವುದನ್ನು ನೋಡೋಣ :

"ಜೀವ ಚೈತನ್ಯಸ್ವರೂಪವಾದದ್ದು, ಶಾಶ್ವತವಾದದ್ದು. ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯ, ಅನಂತಸುಖಗಳಿಂದ ಕೂಡಿರುವುದು ಜೀವದ ಸ್ವಭಾವ. ಈ ಜೀವ ಅಜೀವದೊಡನೆ ಹೇಗೋ ಸೇರಿಕೊಂಡು ಕರ್ಮದ ಕಟ್ಟಿನಲ್ಲಿ ಸಿಕ್ಕಬಿದ್ದಾಗ ಈ ಅನಂತ ಜ್ಞಾನಾದಿಗಳ ಮೇಲೆ ಒಂದು ಆವರಣ ಕವಿದುಕೊಳ್ಳುತ್ತದೆ. ಆಗ ಜೀವ ತನ್ನ ನಿಜಸ್ವರೂಪವನ್ನು ಮರೆತು ಚತುರ್ಗತಿರೂಪವಾದ ಸಂಸಾರದಲ್ಲಿ ತೊಳಲುತ್ತಿರುತ್ತದೆ. ಶುಭಾಶುಭ ಕರ್ಮಗಳನ್ನು ಮಾಡಿ, ಮನುಷ್ಯನಾಗಿ, ದೇವತೆಯಾಗಿ, ತಿರ್ಯಕ್‌ಪ್ರಾಣಿಯಾಗಿ, ನಾರಕಿಯಾಗಿ ಮತ್ತೆ ಮತ್ತೆ ಹುಟ್ಟುತ್ತಲೇ ಇರುತ್ತದೆ. ಹೀಗೆ ಹುಟ್ಟುಸಾವುಗಳ ಚಕ್ರದಲ್ಲಿ ಸುತ್ತುತ್ತ ಮಿಥ್ಯಾಜ್ಞಾನ ಮೋಹಾದಿಗಳಿಂದ ಕರ್ಮದ ಕಟ್ಟನ್ನು ಗಟ್ಟಿಗೊಳಿಸುತ್ತ ಸಂಸಾರದಲ್ಲೆ ಸಿಕ್ಕಿ ತೊಳಲುತ್ತಿರುವಾಗ ಹಲವು ಪುಣ್ಯಕರ್ಮಗಳ ಫಲದಿಂದ ಕ್ರಮಕ್ರಮವಾಗಿ ಸಂಸಾರದ ತೊಡರುಗಳನ್ನು ಬಿಡಿಸಿಕೊಳ್ಳಬೇಕೆಂಬ ಬಯಕೆಯುಂಟಾಗುತ್ತದೆ. ಆ ಭವ್ಯಜೀವಿಗೆ ಕಾಲಲಬ್ಧಿ ದೊರೆತಾಗ, ಎಂದರೆ ಪಕ್ವಕಾಲ ಬಂದಾಗ ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್ ಚಾರಿತ್ರರೂಪವಾದ ರತ್ನತ್ರಯದಲ್ಲಿ ಮನಸ್ಸು ಹೋಗಲು ಅವಕಾಶವಾಗುತ್ತದೆ.

ರತ್ನತ್ರಯುವನ್ನಾಶ್ರಯಿಸಿದ ಜೀವಕ್ಕೆ ತತ್ತ್ವಸ್ವರೂಪ ಚೆನ್ನಾಗಿ ಗೊತ್ತಾಗುತ್ತದೆ. ಆ ಬಳಿಕ ಜೀವ ತನ್ನೆಡೆಗೆ ಹರಿದು ಬಂದು ಸಂಸಾರಕ್ಕೆ ಬಂಧಿಸುವ ಕರ್ಮಗಳನ್ನು ಬರಗೊಡದೆ ತಡೆದು ಆ ಮೊದಲೆ ಬಂದು ಮೈಗೂಡಿರುವ ಕರ್ಮವನ್ನು ತಪಸ್ಸಿನಿಂದ ನಿಶ್ಶೇಷವಾಗಿ ನಾಶಮಾಡಿ ಸಂಸಾರದ ಬಲೆಯಿಂದ ಬಿಡಿಸಿಕೊಂಡು ಬೇರೆಯಾಗುತ್ತದೆ. ಹೀಗೆ ಕರ್ಮಬಂಧನದಿಂದ ಬಿಡುಗಡೆ ಹೊಂದಿದ ಮುಕ್ತಾತ್ಮ ತನ್ನ ಸಹಜ ಸ್ವರೂಪ ವನ್ನು ಪಡೆದು ಅನಂತಜ್ಞಾನಾದಿಗಳಿಂದ ಬೆಳಗುತ್ತ ಶಾಶ್ವತವಾದ ಮೋಕ್ಷ ಸುಖದಲ್ಲಿ ಲೋಕಾಗ್ರದಲ್ಲಿ ನೆಲೆಗೊಳ್ಳುತ್ತದೆ."

ಈ ತಾತ್ತ್ವಿಕವಾದ ನೆಲೆಗಳನ್ನು ಹಿಡಿದು ಜೈನಭಾರತದ ಕಥೆ ಮೈದಳೆಯುತ್ತದೆ, ಪಾತ್ರಗಳು ಕ್ರಿಯಾಶೀಲವಾಗುತ್ತವೆ. ಈ ನೆಲೆಗಳಲ್ಲಿ ಕ್ರಮವಾಗಿ ಹೆಜ್ಜೆ ಹಾಕಿ ಸಾಗುವ ಸಮಸ್ತ ಪಾತ್ರ ಪ್ರಪಂಚವೂ ಜೈನಧರ್ಮದಲ್ಲಿ ಶ್ರದ್ಧೆಯುಳ್ಳ, ಲೋಕಾಗ್ರದಲ್ಲಿ ನೆಲೆಗೊಳ್ಳುವ ಗುರಿಯನ್ನು ಇಟ್ಟುಕೊಂಡು ಶುಭಾಶುಭಕರ್ಮಗಳ ಪರಿಣಾಮದಿಂದ ಬಿಡುಗಡೆ ಪಡೆಯುವ ಆದರ್ಶವನ್ನುಳ್ಳ ರೀತಿಯಲ್ಲಿ ಚಿತ್ರಿತವಾಗಬೇಕಾಗುತ್ತದೆ. ಹಾಗೆ ಆದರೆ ಮಾತ್ರ, ಕಥೆ ವಿಕಥೆಯಾಗದೆ ಧರ್ಮಕಥೆಯಾಗುವುದು ಶಕ್ಯ. ಇಂತಹ ಧರ್ಮ ಕಥೆಯಲ್ಲಿ ಬರುವ ಮಹಾಪುರುಷ ಪಾತ್ರಗಳು ಹೆಚ್ಚು ವಾಸ್ತವಿಕ, ಮಾನವೀಯ ಆದ ಅನುಭವವಿಶೇಷಗಳಿಂದ ನಡೆದುಕೊಂಡು ತಮ್ಮ ಊರ್ಧ್ವಗತಿಯ ಯಾತ್ರೆಯಲ್ಲಿ ಕ್ರಮಿಸುತ್ತಾರೆ. ಸನ್ನಿವೇಶಗಳು ಅದಕ್ಕೆ ಅನುಗುಣವಾಗಿ ಹೆಚ್ಚು ವಾಸ್ತವಿಕ, ಮಾನವೀಯ ಆದ ನೆಲೆಗಳಲ್ಲಿಯೇ ನಿರ್ಮಾಣವಾಗುತ್ತವೆಯಲ್ಲದೆ, ಅಲ್ಲಿ ಅತಿಮಾನುಷ, ದೈವಿಕ ಎಂಬವುಗಳಿಗೆ ಸಾಮಾನ್ಯವಾಗಿ ಪ್ರಾಶಸ್ತ್ಯವಿರುವುದಿಲ್ಲ. ಮಹಾಭಾರತ ಕಥೆ ಒಂದು ಲೌಕಿಕ ಕಥೆಯಾಗಿದ್ದು, ಪಾಪಕಾರ್ಯಗಳಿಗೆ ಶಿಕ್ಷೆಯಾಗುವ ಹಾಗೂ ಪುಣ್ಯ ಕಾರ್ಯಗಳಿಗೆ ಗೆಲವು ದೊರೆಯುವ ರೀತಿಯಲ್ಲಿ ಮೂಲ ಮಹಾಭಾರತದಲ್ಲಿ ನಿರ್ವಹಣೆ ಯಿದ್ದರೆ, ಪಾಪಕಾರ್ಯಗಳಿಗೆ ಪಶ್ಚಾತ್ತಾಪಗೊಂಡು, ಪಾಪಹೇತುವಾದ ಪರಹಿಂಸೆಗೆ ಬೆನ್ನುತಿರುಗಿಸಿ ವೈರಾಗ್ಯದತ್ತ ಮುಖವಾಗಿ ಮುನ್ನಡೆಯುವ ಒಂದು ಧಾರ್ಮಿಕ ಕಥೆಯಾಗಿ ಜೈನಭಾರತದಲ್ಲಿ ಅದರ ನಿರ್ವಹಣೆಯಿದೆ. ಅದರಿಂದ ಈ ಕಥೆಗೆ ತನಗೆ ತಾನೇ ಆದ ಮಹತ್ತ್ವವನ್ನು ಕೊಡದೆ ತೀರ್ಥಂಕರ ಚರಿತೆಯ ಭಾಗವಾಗಿ, ಅದಕ್ಕೆ ಅಧೀನವಾಗಿ ಬರುವಂತೆ ನೋಡಿಕೊಂಡಿದೆ.

ಜೈನಭಾರತದ ವ್ಯಕ್ತಿಗಳು ಆರಂಭದಲ್ಲಿ ಮಾನವಸಾಮಾನ್ಯವಾದ ಶೀಲಸ್ವಭಾವ ಗಳನ್ನು ಪ್ರಕಟಿಸತಕ್ಕವರು ; ಕಾಲಕ್ರಮದಲ್ಲಿ ಉತ್ತಮ ಮನಃಪರಿಪಾಕವನ್ನು ಗಳಿಸಿ ತಮ್ಮ ವ್ಯಕ್ತಿತ್ವಕ್ಕೆ ಘನತೆಯನ್ನು ತಂದುಕೊಳ್ಳುವವರು. ಹಳಗಾಲದ ರಾಜ ಮನೆ ತನಗಳ ಶ್ರೀಮಂತ ಸಂಸ್ಕೃತಿಗೆ ಅನುಗುಣವಾಗಿ ಹಲವು ಹೆಂಡಿರನ್ನು ಹೊಂದಿರುವವರು. ಹಾಗೆಯೇ ಧೀರೋದಾತ್ತ ಸ್ವಭಾವದಿಂದ ಕೂಡಿ ಔದಾರ್ಯ, ಶರಣಾಗತರಕ್ಷಣೆ, ಯುದ್ಧಪ್ರಿಯತೆಗಳನ್ನು ಮೆರೆಯುವವರು.

೨

ಜೈನಭಾರತದ ಮೊದಲ ಸುಳಿವು ಮಹಾಪುರಾಣಾಂತರ್ಗತವಾದ ೨೨ನೆಯ ನೇಮಿ ತೀರ್ಥಂಕರನ ಚರಿತೆಯ ಭಾಗವಾಗಿ ಸಂಕ್ಷೇಪರೂಪದಲ್ಲಿ ಕಂಡುಬರುತ್ತದೆ. ಅನಂತರದಲ್ಲಿ, ಸ್ವತಂತ್ರವಾಗಿ ರಚಿತವಾದ ಆ ತೀರ್ಥಂಕರನ ಚರಿತೆಯ ಅಥವಾ ಪುರಾಣದ ಭಾಗವಾಗಿ, ಸ್ವಲ್ಪವಿಸ್ತಾರದಲ್ಲಿ ಕಂಡುಬರುತ್ತದೆ. ಸಂಸ್ಕೃತಭಾಷೆಯ ಉಪಲಬ್ಧ ಮಹಾಪುರಾಣಗ್ರಂಥಗಳಲ್ಲಿ, ಗುಣಭದ್ರರ ಉತ್ತರಪುರಾಣಭಾಗದಲ್ಲಿ (೮೯೮) ಇದರ ಮೊದಲ ಸುಳಿವು (ಪರ್ವಗಳು ೭೦–೭೨) ; ಅನಂತರದಲ್ಲಿ ಮಲ್ಲಿಷೇಣ (೧೦೪೭), ಹೇಮಚಂದ್ರ (೧೦೮೯–೧೧೭೩) ಮೊದಲಾದವರ ರಚನೆಗಳಲ್ಲಿ. ಇವುಗಳಲ್ಲಿ ಗುಣಭದ್ರರು ದಿಗಂಬರ ಸಂಪ್ರದಾಯದ ಕಥೆಯನ್ನೂ ಹೇಮಚಂದ್ರ ಶ್ವೇತಾಂಬರ ಸಂಪ್ರದಾಯದ ಕಥೆಯನ್ನೂ ಹೇಳುವುದಾಗಿ ತಿಳಿದಿರುವುದರಿಂದ ಈ ಕಥೆಗೆ ಸಂಪ್ರದಾಯಭೇದಗಳಿರುವುದೂ ತಿಳಿದಂತಾಗಿದೆ. ಉಪಲಬ್ಧ ಪ್ರಾಕೃತ ಮಹಾಪುರಾಣಗಳಲ್ಲಿ ಶೀಲಾಂಕನ (೮೬೮) 'ಚಉಪ್ಪನ್ನ ಮಹಾಪುರಿಸ ಚರಿಯ'ದಲ್ಲಿ (ಪರ್ವಗಳು ೪೯–೫೧) ಇದರ ಮೊದಲ ಸುಳಿವು. ಇಲ್ಲಿಂದ ಮುನ್ನಡೆದರೆ, ಪುಷ್ಪದಂತನ (೯೫೯–೬೫) ಹಾಗೂ ಅಜ್ಞಾತಕಾಲಿಕನಾದ ಆಮ್ರನೆಂಬವನ ಮಹಾಪುರಾಣಗಳಲ್ಲಿ ಅದನ್ನು ಗಮನಿಸಬಹುದು. ಪುಷ್ಪದಂತನ ಕೃತಿ ಜಿನಸೇನ–ಗುಣಭದ್ರರ ಮಹಾಪುರಾಣದ ಕಥಾ ಸಂಪ್ರದಾಯವನ್ನು ಸಾಮಾನ್ಯವಾಗಿ ಅನುಸರಿಸುತ್ತದೆ ; ಆಮ್ರಕವಿಯದೂ ಬಹುಶಃ ಇದೇ ಸಂಪ್ರದಾಯವನ್ನು ಅನುಸರಿಸಿದ್ದು. ಶೀಲಾಂಕನ ಕೃತಿಯ ಹರಿವಂಶ ಪುರಾಣಭಾಗ, ಎಂದರೆ ನೇಮಿಕಥೆಯ ಭಾಗ, ಶ್ವೇತಾಂಬರ ಸಂಪ್ರದಾಯದಲ್ಲಿದೆ ಯೆಂದು ತಿಳಿಯಲಾಗಿರುವುದರಿಂದ ಇಲ್ಲಿಯೂ ಸಂಪ್ರದಾಯ ಭೇದಗಳಿರುವುದು ಕಾಣುತ್ತದೆ.

ಜೈನಭಾರತ ಕಥೆ ೬೩ ಶಲಾಕಾಪುರುಷರ ಚರಿತೆಯ ಒಂದು ಭಾಗವಾಗಿ, ಒಂದು ಮುಖ್ಯ ಕಥಾವಾಹಿನಿಯಾಗಿ ಮಹಾಪುರಾಣದೊಳಗೆ ಸೇರಿಹೋಗಿರುವುದು ಒಂದು ತೆರನಾದರೆ, ೬೩ ಶಲಾಕಾಪುರುಷರಲ್ಲಿ ಒಬ್ಬನಾದ ನೇಮಿನಾಥನ ಚರಿತೆಯ ಒಂದು ಭಾಗವಾಗಿ, ಇಲ್ಲಿಯೂ ಒಂದು ಮುಖ್ಯ ಕಥಾವಾಹಿನಿಯಾಗಿಯೇ, ತೀರ್ಥಂಕರ ಪುರಾಣದೊಳಗೆ ಸೇರಿಕೊಂಡು ಬಂದಿರುವುದು ಇನ್ನೊಂದು ತೆರ. ಇವೆರಡರಿಂದ ಬೇರೆಯಾಗಿ, ಆ ಮುಖ್ಯ ಕಥಾವಾಹಿನಿಯೇ ಸ್ವತಂತ್ರವಾದ ಕೃತಿವಸ್ತುವಾಗಿ ಪಾಂಡವ ಚರಿತ್ರಗಳೆಂಬ ಹೆಸರಿನಲ್ಲಿ ಪ್ರಸಿದ್ಧವಾಗಿರುವುದೂ ಇದೆ. ಇಂತಹವು ಜೈನಭಾರತಗಳೆಂಬ ಹೆಸರಿಗೆ ಚೆನ್ನಾಗಿ ಒಪ್ಪತಕ್ಕವು. ಇವುಗಳಲ್ಲಿ ಹಲವನ್ನು ಹೆಚ್. ಡಿ. ವೇಲಣಕರ್ ಅವರು ತಮ್ಮ 'ಜಿನರತ್ನಕೋಶ'ದಲ್ಲಿ ಪಟ್ಟಿಮಾಡಿದ್ದಾರೆ. 'ಪಾಂಡವಚರಿತ್ರ' ಎಂಬ ಹೆಸರಿನಲ್ಲಿ, ತಪಾಗಚ್ಛದ ವಿಜಯಗಣಿ ಮತ್ತು ದೇವ ವಿಜಯ ಗಣಿಗಳು, ದೇವ ಪ್ರಭ

ಸೂರಿ, ದೇವಭದ್ರ, ಶುಭವರ್ಧನಗಣಿ, ಹೇಮಚಂದ್ರ, ಶ್ರೀಭೂಷಣ, ಒಬ್ಬ ಅಜ್ಞಾತ ಕರ್ತೃ ಇವರು ರಚಿಸಿದ ಕೃತಿಗಳಿವೆ. 'ಪಾಂಡವಚರಿತ್ರೋದ್ಧಾರ'ದ ಕರ್ತೃ ಜಯಾನಂದ. 'ಪಾಂಡವ ಪುರಾಣ' ಎಂಬ ಹೆಸರಿನಲ್ಲಿ ಶುಭಚಂದ್ರ, ವಾದಿಚಂದ್ರ, ವಾದಿರಾಜರ ಮೂರು ಕೃತಿಗಳಿವೆ. ಚಂಪೂಮಂಡನವೆಂಬುದು ಮಂಡನ ಕವಿಯ ರಚನೆ. ಇವನ್ನು 'ಹರಿವಂಶ ಪುರಾಣ' ಎಂಬುದಕ್ಕೆ ಸಂವಾದಿಯಾಗಿ ಕುರುವಂಶ ಪುರಾಣಗಳೆಂದು ಬೇಕಾದರೆ ಕರೆಯಬಹುದು.

ದೇಶಭಾಷೆಗಳಲ್ಲಿ ಕನ್ನಡವನ್ನು ಲಕ್ಷಿಸುವುದಾದರೆ, ಏಕೈಕ ಕನ್ನಡ ಮಹಾಪುರಾಣವಾದ ಚಾವುಂಡರಾಯ ಕೃತವಾದ 'ಚಾವುಂಡರಾಯ ಪುರಾಣ'ದಲ್ಲಿಯೂ (೯೭೮), ಸ್ವತಂತ್ರ ನೇಮಿಚರಿತ್ರೆಗಳಾದ ಕರ್ಣಪಾರ್ಯನ (ಸು. ೧೧೬೦-೭೦) 'ನೇಮಿನಾಥ ಪುರಾಣ', ನೇಮಿಚಂದ್ರನ (ಸು. ೧೧೯೦-೧೨೦೦) 'ನೇಮಿನಾಥ ಪುರಾಣ', ಬಂಧುವರ್ಮನ (ಸು. ೧೨೦೦) 'ಹರಿವಂಶಾಭ್ಯುದಯ', ಮಹಾಬಲನ (೧೨೫೪) 'ನೇಮಿನಾಥ ಪುರಾಣ', ಮಂಗರಸನ (೧೫೦೮) 'ನೇಮಿಜಿನೇಶ ಸಂಗತಿ', ಸಾಳ್ವನ (ಸು. ೧೫೫೦) 'ನೇಮಿನಾಥ ಚರಿತ್ರ' (ಸಾಳ್ವಭಾರತ) ಇವುಗಳಲ್ಲಿಯೂ ಜೈನಭಾರತ ಕಥೆ ಸಹಜವಾಗಿಯೇ ಸ್ಥಾನಪಡೆದುಕೊಂಡಿದೆ. ಹೀಗೆ ಬಹುಸಂಖ್ಯೆಯಲ್ಲಿ ನೇಮಿಚರಿತ್ರೆಗಳನ್ನು ಕನ್ನಡ ಕವಿಗಳು ರಚಿಸಿರುವುದಕ್ಕೆ ಅವುಗಳಲ್ಲಿ ಅಂತರ್ಗತವಾಗಿ ಬರುವ ಭಾರತ ಕಥೆ, ಭಾಗವತ ಕಥೆಗಳ ರುಚಿ ಆಕರ್ಷಣೆಗಳನ್ನೂ ಕಾರಣವಾಗಿ ಹೇಳಬಹುದು.

ಈಗ ದೊರೆಯದಿರುವ ೧ನೆಯ ಗುಣವರ್ಮನ (ಸು. ೯೦೦) 'ಹರಿವಂಶ'ವೂ ಒಂದು ನೇಮಿಚರಿತ್ರೆಯೇ ಆಗಿದ್ದು, ಇಲ್ಲಿ ಸ್ಥಾನ ಪಡೆದಿರಬಹುದಾದ ಜೈನಭಾರತ ಕಥೆ ಈ ಸಂಪ್ರದಾಯದ ಭಾರತ ಕಥೆಗಳಿಗೆಲ್ಲ ಬಲುಮಟ್ಟಿಗೆ ಮೂಲಸ್ಥಾನದಲ್ಲಿರುವ ಪುನ್ನಾಟ ಸಂಘೀಯ ಜಿನಸೇನರ (೭೮೩) 'ಹರಿವಂಶ ಪುರಾಣ'ದ ನಿರೂಪಣೆಗೆ ಅನುಸಾರವಾಗಿಯೇ ಇದ್ದಿರಬಹುದು ; ಅನಂತರದ ಕನ್ನಡ ಕವಿಗಳು ಗುಣವರ್ಮನನ್ನು ತಾವೂ ಅನುಸರಿಸಿ ಮುನ್ನಡೆದಿರಬಹುದು. ಗುಣವರ್ಮನ ಕೃತಿಯ ಕೆಲವು ಆಯ್ದ ಪದ್ಯಗಳು ಪ್ರಾಚೀನ ಕನ್ನಡ ಸಾಹಿತ್ಯದ ಅಲಂಕಾರ ವ್ಯಾಕರಣ ಗ್ರಂಥಗಳಲ್ಲಿಯೂ ಕೆಲವು ಪದ್ಯಸಂಕಲನ ಗ್ರಂಥಗಳಲ್ಲಿಯೂ ಉದಾಹರಣಗಳಾಗಿ ಬಂದಿರುವಂತಿವೆ ; ಆದರೆ ಅವನ್ನು ನಿಖರವಾಗಿ ಗುರುತಿಸುವುದು ಕಷ್ಟದ ಕೆಲಸ. ಇತ್ತೀಚೆಯ ಜೈನಭಾರತ ಕೃತಿಯಾದ ಬ್ರಹ್ಮಣಾಂಕನ (ಸು. ೧೮೦೦) 'ಜಿನ ಭಾರತ', ಕವಿಯೇ 'ಕರ್ಣಾಟಕ ಭಾರತ' ಎಂಬುದಾಗಿ ಕರೆದಿರುವ ಒಂದು ಸ್ವತಂತ್ರ ಜೈನಭಾರತ ಕೃತಿ ; ೮೪ ಸಂಧಿಗಳ ಒಂದು ಷಟ್ಪದೀನಿಬದ್ಧ ರಚನೆ. ಇದನ್ನು ಈ ಹಿಂದೆ ಗಮನಿಸಿದ 'ಪಾಂಡವ ಚರಿತ್ರ'ದ ಮಾದರಿಯ ಕೃತಿಯೆನ್ನಬಹುದು. ಈ ಕವಿ ತನ್ನ ಕೃತಿಗೆ ಮಂಗರಸನ ಕೃತಿಯನ್ನು ಮಾದರಿಯಾಗಿಟ್ಟುಕೊಂಡಂತೆ ತೋರಿದರೂ, ವೈದಿಕ ಸಂಪ್ರದಾಯದ 'ಕುಮಾರವ್ಯಾಸ ಭಾರತ'ವೆಂಬ ಸುಪ್ರಸಿದ್ಧ ಕನ್ನಡ ಭಾರತದ ಪ್ರಭಾವಕ್ಕೆ ಒಳಗಾಗಿರುವುದೂ ಸ್ಪಷ್ಟವಾಗಿ

ಕಂಡುಬರುತ್ತದೆ. ಮಂಗರಸನ ಮೇಲೆ ಕರ್ಣಪಾರ್ಯ್ಯನ ಪ್ರಭಾವವೂ, ಕರ್ಣಪಾರ್ಯ್ಯನ ಮೇಲೆ ಪಂಪಭಾರತದ ಮೂಲಕವಾಗಿ ಪಂಪಕವಿಯ ಪ್ರಭಾವವೂ ಈಗ ತಿಳಿದು ಬಂದಿರುವ ಸಂಗತಿಯಾಗಿದೆ. ಕರ್ಣಪಾರ್ಯ್ಯನ ಕೃತಿಯಲ್ಲಿ ವೈದಿಕಭಾರತದ ಕಥಾಂಶಗಳು ದಟ್ಟೈಸಿವೆ.

೩

ನೇಮಿಕಥೆ—ಭಾರತಕಥೆಗಳ ಸಂಬಂಧವನ್ನು ಗುರುತಿಸಲು ಹೊರಟರೆ, ಎರಡೂ ನಿರೂಪಣೆಗಳು ಭಾಗಶಃ ಮೂಲಭಾರತದ ಕಥಾಂಶಗಳಿಗೆ ಸದೃಶವಾದವು, ಭಾಗಶಃ ವಿಸದೃಶವಾದವು ಎಂದು ವಿದಿತವಾಗುತ್ತದೆ. ವ್ಯಾಸರ ಜನನದ ಒಂದು ವಿಶೇಷ ಸಂದರ್ಭ, ಚಿತ್ರವೀರ್ಯ ವಿಚಿತ್ರವೀರ್ಯರ ಪ್ರಸ್ತಾಪ, ಧೃತರಾಷ್ಟ್ರ ಪಾಂಡು ವಿದುರರ ಜನನದಲ್ಲಿ ವ್ಯಾಸರು ನಿರ್ವಹಿಸಿದಪಾತ್ರ—ಇಂತಹವು ಜೈನಭಾರತದ ಕುರುವಂಶೋತ್ಪತ್ತಿ ಭಾಗದಲ್ಲಿ ಸಾಮಾನ್ಯವಾಗಿ ಕಂಡುಬರುವುದಿಲ್ಲ. ಇಲ್ಲಿ ಕಥೆ ಸಾಮಾನ್ಯ ರೀತಿಯಲ್ಲಿ ವಾಸ್ತವಿಕತೆಯ ನೆಲೆಗಟ್ಟಿನ ಮೇಲೆ ಬೆಳೆದು ನಿಲ್ಲುವ ಕ್ರಮಕ್ಕೆ ಅನುಸಾರವಾದುದು.

ಪುನ್ನಾಟಸಂಘೀಯ ಜಿನಸೇನಾಚಾರ್ಯ್ಯರ 'ಹರಿವಂಶ ಪುರಾಣ'ದಲ್ಲಿ, ನೇಮಿ ಜನಿಸಿದ ಹರಿವಂಶದರಸರ ಕಥೆ ೧೪ರಿಂದ ೧೮ನೆಯ ಸರ್ಗಗಳವರೆಗೆ ವಿಸ್ತಾರವಾಗಿ ಬಂದಿದೆ. ಈ ವಿಸ್ತಾರ 'ಉತ್ತರ ಪುರಾಣ'ದ ಸದೃಶ ಕಥಾಭಾಗದಲ್ಲಿಲ್ಲ. ಸಾಮ್ಯವಿರುವಂತೆಯೇ ವ್ಯತ್ಯಾಸವೂ ಉಂಟು. 'ಹರಿವಂಶ ಪುರಾಣ'ದಲ್ಲಿ ೪೫ರಿಂದ ಮುಂದಿನ ಸರ್ಗಗಳಲ್ಲಿ ಪಾಂಡವ ಚರಿತ್ರೆ ದಟ್ಟವಾಗಿ ಬರತೊಡಗುತ್ತದೆ. ಇಲ್ಲಿಯ ನಿರೂಪಣೆಯಂತೆ ಪಾಂಡು ಮತ್ತು ಪಾಂಡವರು ಶಾಂತಿ, ಕುಂಥು ಮತ್ತು ಅರನಾಥ ಈ ಮೂವರು ತೀರ್ಥಂಕರರು ಜನಿಸಿದ ಕುರುವಂಶದಲ್ಲಿ ಉತ್ಪನ್ನರಾದವರು. ಕುರುಜಾಂಗಲ ವಿಷಯದಲ್ಲಿಯ ಹಸ್ತಿನಪುರದಲ್ಲಿ ವೃಷಭದೇವನಿಗೆ ದಾನ ತೀರ್ಥ ಪ್ರವರ್ತಕರಾಗಿ ಖ್ಯಾತರಾದವರು, ಶ್ರೇಯಾಂಸ ಮತ್ತು ಸೋಮಪ್ರಭರು. ಇವರಲ್ಲಿ ಸೋಮಪ್ರಭನ ಮಗ ಜಯಕುಮಾರ; ಇವನ ಮಗ ಕುರು ; ಇವನ ಮಗ ಕುರುಚಂದ್ರ. ಹೀಗೆ ಆರಂಭವಾಗಿ ಅವಿಚ್ಛಿನ್ನವಾಗಿ ಕುರುವಂಶ ಬೆಳೆದುಬಂದಿತು. ರಾಜಪುತ್ರಿಯಾದ ಯೋಜನಗಂಧೆಯ ಪತಿ ಶಂತನುವಿಗೆ ಮಗ ಧೃತವ್ಯಾಸ; ಆಮೇಲೆ ಧೃತ ಧರ್ಮಾದಿಗಳು ; ಧೃತನ ಮಗ ಧೃತರಾಜನೆಂಬವನಿಗೆ ಅಂಬಿಕೆ ಅಂಬಾಲಿಕೆ ಮತ್ತು ಅಂಬೆ ಎಂಬ ಪತ್ನಿಯರಲ್ಲಿ ಧೃತರಾಷ್ಟ್ರ, ಪಾಂಡು ಮತ್ತು ವಿದುರರು ಮಕ್ಕಳಾಗಿ ಜನಿಸಿದರು. ಇವರಲ್ಲಿ ಧೃತರಾಷ್ಟ್ರನ ಪುತ್ರರು ದುರ್ಯೋಧನಾದಿಗಳು, ಪಾಂಡುವಿನ ಪುತ್ರರು ಯುಧಿಷ್ಠಿರಾದಿಗಳು. ಇದೇ ಕುರು ವಂಶದ ಉತ್ಪತ್ತಿ ವಿಚಾರ ಗುಣಭದ್ರರ

'ಉತ್ತರಪುರಾಣ'ದಲ್ಲಿ ಗಮನಾರ್ಹವಾಗಿ ಬೇರೆ ರೀತಿಯಲ್ಲಿರುವುದಕ್ಕೆ ಕಾರಣಗಳನ್ನು ಶೋಧಿಸಬೇಕಾಗಿದೆ. ಸಂಪ್ರದಾಯಭೇದ ಮುಖ್ಯ ಕಾರಣವಾಗಿರಬಹುದು. ಇಲ್ಲಿಯ ನಿರೂಪಣೆಯಂತೆ, ಹಸ್ತಿನಪುರದ ಶಕ್ತಿ-ಶತಕಿಯರೆಂಬ ರಾಜದಂಪತಿಗಳ ಪುತ್ರ ಪರಾಶರನು ಮತ್ಸ್ಯಕುಲೋತ್ಪನ್ನ ರಾಜಪುತ್ರಿ ಸತ್ಯವತಿಯನ್ನು ಮದುವೆಯಾಗಿ ವ್ಯಾಸನೆಂಬ ಮಗನನ್ನು ಪಡೆದನು. ವ್ಯಾಸನಿಗೆ ಸುಭದ್ರೆಯೆಂಬ ಪತ್ನಿಯಲ್ಲಿ ಧೃತರಾಷ್ಟ್ರ ಪಾಂಡು ಮತ್ತು ವಿದುರರೆಂಬ ಮಕ್ಕಳಾದರು.

ಮುಂದಿನ ಘಟ್ಟದಲ್ಲಿ ಹರಿವಂಶ-ಕುರುವಂಶಗಳ ನಡುವೆ ವೈವಾಹಿಕ ಸಂಬಂಧ ಏರ್ಪಟ್ಟಿತು. ಹರಿವಂಶದ ನರಪತಿವೃಷ್ಣಿಯ ಪುತ್ರಿ ಗಾಂಧಾರಿಯನ್ನು ಕುರುವಂಶದ ವ್ಯಾಸಸುಭದ್ರೆಯರ ಜೇಷ್ಠಪುತ್ರ ಧೃತರಾಷ್ಟ್ರನೂ ಅದೇ ಹರಿವಂಶದ ನರಪತಿವೃಷ್ಣಿಗೆ ಅಣ್ಣ ಅಂಧಕವೃಷ್ಣಿಯ ಪುತ್ರಿಯರಾದ ಕುಂತಿ ಮಾದ್ರಿಯರನ್ನು ಕುರುವಂಶದ ವ್ಯಾಸ-ಸುಭದ್ರೆಯರ ಎರಡನೆಯ ಮಗ ಪಾಂಡುವೂ ವಿವಾಹವಾದರು. ಹೀಗೆ ಗಾಂಧಾರಿಯೂ ಕುಂತಿ ಮಾದ್ರಿಯರೂ ಸೋದರ ಸಂಬಂಧಿಗಳೇ. ಈ ವಿವಾಹಾನುಬಂಧ ಮುಂದಿನ ಸಂತತಿಗೂ ಮುಂದುವರಿಯಿತು.

ಪಾಂಡವರಿಗೆ ಹೀಗೆ ತಮ್ಮ ಹಿರಿಯರಾದ ಧೃತರಾಷ್ಟ್ರ ಮತ್ತು ಪಾಂಡುರಾಜರ ಮೂಲಕ ಹರಿವಂಶದ ಅರಸರ ಸಂಬಂಧವುಂಟಾಯಿತಷ್ಟೆ. ಇಂತಹ ಸಂಬಂಧವಾದ ಮೇಲೆ ಹರಿವಂಶದ ನೇಮಿನಾಥ ಕೃಷ್ಣರ ಹಾಗೂ ಕುರುವಂಶದ ಕೌರವ ಪಾಂಡವರ ಸಂಬಂಧ ಸ್ಥಾನಮಾನಗಳು ಯಾವ ರೀತಿಯಲ್ಲಿ ಘಟಿಸಿದುವು ಎನ್ನುವುದನ್ನೂ ಲಕ್ಷಿಸಬಹುದು : ನೇಮಿನಾಥ ಕೃಷ್ಣರು ಒಂದೇ ಕುಟುಂಬದಲ್ಲಿ ದೊಡ್ಡಪ್ಪ (ಅಂಧಕವೃಷ್ಣಿ-ಸುಭದ್ರೆಯರ ಮೊದಲ ಮಗನಾದ ಸಮುದ್ರವಿಜಯ) ಚಿಕ್ಕಪ್ಪನ (ಅಂಧಕವೃಷ್ಣಿ-ಸುಭದ್ರೆಯರ ಕೊನೆಯ ಮಗನಾದ ವಸುದೇವ) ಮಕ್ಕಳು. ನೇಮಿನಾಥ ಕೃಷ್ಣನಿಗೆ ಹಿರಿಯ ದೊಡ್ಡಪ್ಪನ ಮಗನಾದರೂ ವಯಸ್ಸಿನಲ್ಲಿ ಕೃಷ್ಣನಿಗಿಂತ ಚಿಕ್ಕವನು (ಜನಸೇನಾಚಾರ್ಯರು ಬಲದೇವ-ರೇವತಿಯರ, ಕೃಷ್ಣ-ಸತ್ಯಭಾಮೆಯರ ವಿವಾಹ ವೃತ್ತಾಂತದ ಬಳಿಕ ನೇಮಿ ಜನನವನ್ನು ಕುರಿತಿದ್ದಾರೆ.) ಕೌರವ ಪಾಂಡವರು ನೇಮಿಗೆ ಎಷ್ಟರಮಟ್ಟಿಗೆ ಹಿರಿಕಿರಿಯರೆಂಬುದನ್ನು ನಿರ್ಣಯಿಸುವುದು ಕಷ್ಟ. ಅವರು ವಯಸ್ಸಿನಲ್ಲಿ ನೇಮಿಗೆ ಹಿರಿಯರಾಗಿದ್ದು, ಕೃಷ್ಣನ ಜತೆಯವರೋ ಆತನಿಗೆ ಸ್ವಲ್ಪ ಕಿರಿಯರೋ ಆಗಿದ್ದಿರಬಹುದು. ಅಂಧಕವೃಷ್ಣಿಯ ಪೌತ್ರರಾದ ಬಲದೇವ ಕೃಷ್ಣರೂ ನೇಮಿನಾಥನೂ ಒಂದು ಪಕ್ಷವಾಗಿ, ನರಪತಿವೃಷ್ಣಿಯ ಪೌತ್ರನಾದ ಕಂಸನೂ (ಉಗ್ರಸೇನ-ಪದ್ಮಾವತಿಯರ ಮಗ) ಅವನ ಮಾವನಾದ ಜರಾಸಂಧನೂ (ವಸುವಿನ ಪ್ರಪೌತ್ರ) ಒಂದು ಪಕ್ಷವಾಗಿ ಕುರುಕ್ಷೇತ್ರದಲ್ಲಿ ಭಯಂಕರವಾಗಿ ಕಾದಾಡಿದರು. ಈ ಕಾಳಗದಲ್ಲಿ ಅಂಧಕವೃಷ್ಣಿಯ ದೌಹಿತ್ರರಾದ ಪಾಂಡವರು ತಮ್ಮ ಸೋದರಮಾವ ಸಮುದ್ರವಿಜಯನ ನೇತೃತ್ವದ ಮೊದಲನೆಯ ಪಕ್ಷವನ್ನೂ ನರಪತಿವೃಷ್ಣಿಯ ದೌಹಿತ್ರರಾದ ಕೌರವರು ಎರಡನೆಯ

ಪಕ್ಷವನ್ನೂ ಕೂಡಿಕೊಂಡರು. ಹೀಗೆ ಹರಿವಂಶದ ಕಥೆಯ ಮಹೋದರದಲ್ಲಿ ಕುರುವಂಶದ ಮಹಾಕಥೆ ಸಹ ಒಂದು ಒಳಕಥೆಯಾಗಿ ಲೀನವಾಗಿ ಹೋಗಿದೆ.

ಕುರುಕ್ಷೇತ್ರದ ಮಹಾಸಂಗ್ರಾಮ ಮುಖ್ಯವಾಗಿ ಹರಿವಂಶದ ವೃಷ್ಣಿಸೋದರರ ಸಂತತಿಗಳ ನಡುವೆ ನಡೆದ ದಾಯಾದ್ಯ ಕಲಹವೇ ಸರಿ. ದ್ವಾರಾವತಿಯ ಯಾದವರಿಗೂ ಮಗಧದ ಮಾಗಧರಿಗೂ ನಡೆದ ಈ ಯುದ್ಧ ಜೈನಶ್ರದ್ಧೆಯ ಪ್ರಕಾರ ೨೨ನೆಯ ತೀರ್ಥಂಕರ ನೇಮಿನಾಥನ ಕಾಲದಲ್ಲಿ ತತ್ಕಾಲದ ವಾಸುದೇವನಾದ ಕೃಷ್ಣನಿಗೂ ಪ್ರತಿವಾಸುದೇವನಾದ ಜರಾಸಂಧನಿಗೂ ನಡೆಯಬೇಕಾಗಿದ್ದ ಯುದ್ಧವೇ ಆಗಿದ್ದಿತು. ಹರಿವಂಶ ಕುರುವಂಶದ ಅರಸರ ನಡುವಣ ಪ್ರಮುಖ ಘಟನೆಗಳಲ್ಲಿ, ಮೂಲ ಮಹಾಭಾರತದ ಕೃಷ್ಣನ ಸ್ಥಾನದಲ್ಲಿ ನೇಮಿನಾಥನು ಎಡೆಪಡೆದಿರುವುದು ಒಂದು ಪ್ರಚೋದಕ ಶಕ್ತಿಯಾಗಿಯೇ. ದ್ವಾರವತೀನಗರ ನಿರ್ಮಾಣ, ಯಾದವ ಮಾಗಧ ಪಕ್ಷಗಳ ಸಂಗ್ರಾಮ, ಸಂಗ್ರಾಮವೀರರ ಶಕ್ತಿಪರೀಕ್ಷೆ, ನಾಗಶಯ್ಯಾರೋಹಣ ಮುಂತಾದ ಅದ್ಭುತ ಕಾರ್ಯಗಳ ಸಾಧನೆ, ಹರಿವಂಶ ಕುರುವಂಶದ ಅರಸರಿಗೆ ಅವರ ಭವಾಂತರಗಳನ್ನು ನಿರೂಪಿಸಿದುದು ಹಾಗೂ ಅವರಿಗೆ ದೀಕ್ಷಾಗುರುವಾದುದು ಇತ್ಯಾದಿ ಪ್ರಕರಣಗಳಲ್ಲಿ ಆತನು ಮಹೋನ್ನತನಾಗಿ ನಿಂತು ವಿಸ್ಮಯಗೊಳಿಸುತ್ತಾನೆ.

೪

ಕುರುಜಾಂಗಲದ ದೇಶದ ಹಸ್ತಿನಪುರದಲ್ಲಿ ವೃಷಭನಾಥ ತೀರ್ಥಂಕರನ ದಾನ ತೀರ್ಥ ಪ್ರವರ್ತಕರಾದ ಶ್ರೇಯಾಂಸ ಸೋಮಪ್ರಭರೆಂಬವರಿದ್ದರು. ಇವರಲ್ಲಿ ಸೋಮಪ್ರಭನ ಮಗ ಜಯಕುಮಾರ ; ಜಯಕುಮಾರನ ಮಗ ಕುರು. ಇಲ್ಲಿಂದ ಮುಂದೆ ಕುರುವಂಶದಲ್ಲಿ ಹಲವರು ಅರಸರು ಆಳಿದರು. ಬಳಿಕ ಧೃತನೆಂಬವನ ಮಗ ಧೃತರಾಜನಿಗೆ ಅಂಬಿಕೆಯಿಂದ ಧೃತರಾಷ್ಟ್ರ, ಅಂಬಾಲಿಕೆಯಿಂದ ಪಾಂಡು ಮತ್ತು ಅಂಬೆಯಿಂದ ವಿದುರ ಮಕ್ಕಳಾಗಿ ಜನಿಸಿದರು. ಹಿರಿಯನಾದ ಭೀಷ್ಮನು ಧೃತರಾಜನ ಸೋದರ ರುಕ್ಮಣನಿಗೆ ರಾಜಪುತ್ರಿಯಾದ ಗಂಗೆಯಲ್ಲಿ ಜನಿಸಿದವನು (ಧೃತರಾಷ್ಟ್ರಾದಿಗಳೂ ಭೀಷ್ಮನೂ ಸೋದರ ಸಂಬಂಧಿಗಳು). ಧೃತರಾಷ್ಟ್ರನಿಗೆ ಗಾಂಧಾರಿಯಿಂದ ದುರ್ಯೋಧನಾದಿ ನೂರ್ವರು ಪುತ್ರರಾದರು ; ಪಾಂಡುವಿಗೆ ಕುಂತಿಯ ಕನ್ಯಾವಸ್ಥೆಯಲ್ಲಿ ಕರ್ಣನೂ ಆಕೆಯೊಂದಿಗೆ ವಿವಾಹಾನಂತರದಲ್ಲಿ ಯುಧಿಷ್ಠಿರ ಭೀಮಾರ್ಜುನರೂ ಮಾದ್ರಿಯಿಂದ ನಕುಲಸಹದೇವರೂ ಪುತ್ರರಾಗಿ ಜನಿಸಿದರು. ಪಾಂಡು ಮಾದ್ರಿಯರು ಜಿನಧರ್ಮದ ಪ್ರಸಾದದಿಂದ ಸ್ವರ್ಗವಾಸಿಗಳಾದ ಮೇಲೆ ಪಾಂಡವರೂ ಧಾರ್ತರಾಷ್ಟ್ರರೂ ರಾಜ್ಯವಿಷಯಕ್ಕೆ ಪರಸ್ಪರ ವಿರೋಧಿಗಳಾದರು. ಭೀಷ್ಮ ದ್ರೋಣರೂ

ವಿದುರನೂ ಮಂತ್ರಿಯಾದ ಶಕುನಿಯೂ ಮಧ್ಯಸ್ಥಗಾರರಾಗಿ ಅವರ ನಡುವೆ ರಾಜ್ಯವನ್ನು ಸಮಭಾಗವಾಗಿ ಹಂಚಿದರು.

ಇತ್ತ ದುರ್ಯೋಧನನಿಗೆ ಕರ್ಣನೊಂದಿಗೆ ಒಳ್ಳೆಯ ಸ್ನೇಹ ಘಟಿಸಿತು. ಜರಾಸಂಧ ನೊಂದಿಗೆ ಸೇವೆಯ ಭಾಗ್ಯ ಸಿಕ್ಕಿತು. ದ್ರೋಣರು ಕೌರವ ಪಾಂಡವರಿಬ್ಬರಿಗೂ ಸಮಭಾವದಿಂದ ಬಿಲ್ವಿದ್ಯೆ ಕಲಿಸಿದರು. ಸ್ವಲ್ಪ ಕಾಲದ ಮೇಲೆ, ಅರ್ಜುನನ ಪ್ರತಾಪ ಮತ್ತು ವಿದ್ಯೆಯ ಬಗೆಗೆ ಮತ್ಸರಗೊಂಡ ದುರ್ಯೋಧನಾದಿಗಳು ರಾಜ್ಯದ ಹಂಚಿಕೆಯಲ್ಲಿ ದೋಷವನ್ನು ಆರೋಪಿಸಲು ತೊಡಗಿದರು. ಐವರಿಗೂ ನೂರ್ವರಿಗೂ ರಾಜ್ಯಾರ್ಧದ ಹಂಚಿಕೆಯೇ ಅನ್ಯಾಯವೆಂದು ಭಾವಿಸಿದರು. ಪಾಂಡವರಿಗೆ ಈ ವಿಷಯ ತಿಳಿಯಿತು. ಭೀಮಸೇನಾದಿಗಳು ಕೆರಳಿದರು. ಆದರೆ ಶಾಂತಿಪ್ರಿಯನಾದ ಯುಧಿಷ್ಠಿರನು ಅವರಿಗೆ ಸಮಾಧಾನ ಹೇಳಿದನು.

ಕೆಲಕಾಲದ ಮೇಲೆ ಪಾಂಡವರು ಗಾಢನಿದ್ರೆಯಲ್ಲಿದ್ದಾಗ, ಕೌರವರು ಅವರ ಮನೆಗೆ ಬೆಂಕಿ ಹಾಕಿಸಿದರು. ಅವರು ಅಕಸ್ಮಾತ್ತಾಗಿ ನಿದ್ದೆ ತಿಳಿದೆದ್ದು ತಾಯಿಯೊಂದಿಗೆ ಸುರಂಗಮಾರ್ಗವಾಗಿ ಎಲ್ಲಿಗೋ ಹೊರಟುಹೋದರು. ಈ ಘಟನೆಯಿಂದ ಜನರಿಗೆ ದುರ್ಯೋಧನನ ಮೇಲೆ ದ್ವೇಷ ಹುಟ್ಟಿತು. ಕುಟುಂಬದ ಜನ ಪಾಂಡವರು ದಹಿಸಿ ಹೋದರೆಂದೇ ತಿಳಿದು, ಅವರಿಗೆ ಅಪರಕ್ರಿಯೆ ಜರುಗಿಸಿದರು.

ಪಾಂಡವರು ವೇಷ ಮರಸಿಕೊಂಡು ಗಂಗಾನದಿಯನ್ನು ದಾಟಿ ಪೂರ್ವದಿಕ್ಕಿನ ಕಡೆಗೆ ನಡೆದರು. ಮಾರ್ಗಮಧ್ಯದಲ್ಲಿ ಕೌಶಿಕನಗರಕ್ಕೆ ಬಂದು, ಅಲ್ಲಿಯ ರಾಜದಂಪತಿ ಗಳಾದ ವರ್ಣ–ಪ್ರಭಾವತಿಯರ ಪುತ್ರಿ ಕುಸುಮ ಕೋಮಲೆಯನ್ನು ಕಂಡು, ಆಕೆಯ ಆಸಕ್ತಿಯಂತೆ ಯುಧಿಷ್ಠಿರನು ಆಕೆಯನ್ನು ಮುಂದೆ ವರಿಸುವುದಾಗಿ ಸೂಚಿಸಿದ ಮೇಲೆ ಪ್ರಯಾಣ ಮುಂದುವರಿಸಿದರು. ಶ್ಲೇಷ್ಮಾಂತಕವನವನ್ನು ತಲುಪಿ ಅಲ್ಲಿ ತಪೋವನದಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಅಲ್ಲಿ ವಸುಂಧರಪುರದರಸ ವಿಂಧ್ಯಸೇನ ಮತ್ತು ಅವನ ಪತ್ನಿ ನರ್ಮದೆಗೆ ಹುಟ್ಟಿದ, ಯುಧಿಷ್ಠಿರನಿಗೆ ಕೊಡಲೆಂದಿದ್ದ ವಸಂತಸುಂದರಿಯೆಂಬವಳು, ಪಾಂಡವಮೃತಿಯ ವಾರ್ತೆಯಿಂದ ನಿರಾಶೆಗೊಂಡು ತಪಸ್ವಿನಿಯಾಗಿ ಕಾಲ ಕಳೆಯುತ್ತಿದ್ದಳು. ಕುಂತಿ ಆಕೆಯನ್ನು ಮಾತಾಡಿಸಿ ಭರವಸೆಯ ಮಾತು ಹೇಳಿದ ಮೇಲೆ, ಯುಧಿಷ್ಠಿರನ ಪ್ರಾಪ್ತಿಯನ್ನು ನಿರೀಕ್ಷಿಸುತ್ತ ಅದೇ ವನದಲ್ಲಿ ಇರತೊಡಗಿದಳು.

ಇತ್ತ ಸಮುದ್ರವಿಜಯನು ತನ್ನ ತಂಗಿಯನ್ನೂ ತಂಗಿಯ ಮಕ್ಕಳನ್ನೂ ದುರ್ಯೋಧನನು ಸುಟ್ಟು ಕೊಂದುಹಾಕಿದನೆಂಬ ಸುದ್ದಿಯಿಂದ ಕೆರಳಿದನು. ಕ್ರೋಧ ತಪ್ತನಾಗಿ ಕೌರವ ವಿನಾಶಕ್ಕೆ ಹೊರಟುಬಂದನು. ಆಗ ಜರಾಸಂಧನು ತಾನೇ ಬಂದು ಯಾದವರಿಗೂ ಕೌರವರಿಗೂ ಸಂಧಿ ಮಾಡಿಸಿ ಹೋದನು.

ಪಾಂಡವರು ವಿಪ್ರವೇಷದಲ್ಲಿ ಈಹಾಪುರಕ್ಕೆ ಬಂದು ತಲುಪಿದರು. ಅಲ್ಲಿ ಭೃಂಗ ರಾಕ್ಷಸನೆಂಬ ಒಬ್ಬ ನರಭಕ್ಷಕನನ್ನು ಭೀಮನು ವಧಿಸಿ ಜನರನ್ನು ಸಂತೋಷಪಡಿಸಿದನು.

ಮುಂದೆ ಸಾಗಿದ ಪಾಂಡವರು ತ್ರಿಶೃಂಗನಗರವನ್ನು ಮುಟ್ಟಿದರು. ಇಲ್ಲಿ ಪ್ರಚಂಡ ವಾಹನ-ವಿಮಲಪ್ರಭೆಯರೆಂಬ ರಾಜದಂಪತಿಗಳ ಹತ್ತು ಮಂದಿ ಪುತ್ರಿಯರನ್ನೂ ನಯನಸುಂದರಿಯೆಂಬ ವೈಶ್ಯಪುತ್ರಿಯನ್ನೂ ಯುಧಿಷ್ಠಿರನಿಗೆ ಮದುವೆಮಾಡಿ ಕೊಡುವುದೆಂದು ಹಿರಿಯರು ಆಲೋಚಿಸಿದರು ; ಆದರೆ ಪಾಂವವರ ಬಗ್ಗೆ ಅನ್ಯಥಾ ಸಮಾಚಾರ ಬಂದುದರಿಂದ ಅವರೆಲ್ಲ ಅಣುವ್ರತ ಧರಿಸಿ ಶ್ರಾವಕಿಯರಾಗಿ ಇರುತ್ತಿದ್ದರು. ಬ್ರಾಹ್ಮಣವೇಷದಲ್ಲಿದ್ದ ಪಾಂಡವರನ್ನು ಅವರು ಗುರುತಿಸುವುದಾಗಲಿಲ್ಲ.

ಪಾಂಡವರ ಪ್ರಯಾಣ ಈಗ ಚಂಪಾಪುರಿಗೆ ಬಂದಿತು. ಕರ್ಣನೆಂಬವನು ಇಲ್ಲಿಯ ದೊರೆ. ಭೀಮನು ಇಲ್ಲಿ ಮದೋದ್ಧತವಾದ ಮಹಾಗಜವನ್ನು ಅಂಕೆಗೆ ತಂದನು. ವೈದಿಶಪುರದಲ್ಲಿ ರಾಜದಂಪತಿಗಳಾದ ವೃಷಧ್ವಜ-ದಿಶಾವಲಿಯರ ಪುತ್ರಿ ದಿಶಾನಂದೆ ಯೆಂಬ ರಾಜಕುಮಾರಿ, ಭಿಕ್ಷಾರ್ಥಿಯಾಗಿ ರಾಜಮಂದಿರಕ್ಕೆ ಬಂದ ಭೀಮನಿಗೆ ಭಿಕ್ಷೆಯೆಂದು ಕೊಡಲ್ಪಟ್ಟಳು. ಆದರೆ ಆ ಭಿಕ್ಷೆಯನ್ನು ಸ್ವೀಕರಿಸಲು ತಾನು ಸ್ವತಂತ್ರ ನಲ್ಲವೆಂದು ತಿಳಿಸಿ ಭೀಮನು ಹಿಂದಿರುಗಿ ಬಂದು ಸೋದರರಿಗೆ ಸುದ್ದಿ ತಿಳಿಸಿದನು.

ಒಂದೂವರೆ ತಿಂಗಳ ಕಾಲ ವೈದಿಶಪುರದಲ್ಲಿಯೇ ಇದ್ದು, ಮುಂದೆ ಪಾಂಡವರು ನರ್ಮದಾ ನದಿಯನ್ನು ದಾಟಿ ವಿಂಧ್ಯಾಚಲವನ್ನು ಸೇರಿದರು. ಅಲ್ಲಿ ಸಂಧ್ಯಾಕಾರವೆಂಬ ನಗರದಲ್ಲಿ ಹಿಡಂಬ ವಂಶೋತ್ಪನ್ನನಾದ ಸಿಂಹ ಘೋಷನೆಂಬ ದೊರೆ ಇರುತ್ತಿದ್ದನು. ಅವನ ಪತ್ನಿ ಸುದರ್ಶನೆ. ಇವರ ಮಗಳು ಹೃದಯಸುಂದರಿ. ಈಕೆಯ ವಿಷಯದಲ್ಲಿ ಒಂದು ನಿಮಿತ್ತವಿತ್ತು. "ವಿಂಧ್ಯಾಚಲದ ಮೇಲೆ ಗದಾವಿದ್ಯೆಯನ್ನು ಸಿದ್ಧಿಮಾಡಿಕೊಳ್ಳುವ ವಿದ್ಯಾಧರನನ್ನು ಯಾವಾತನು ಕೊಲ್ಲುವನೋ, ಆತನೇ ಈಕೆಗೆ ಪತಿಯಾಗತಕ್ಕವನು" ಎಂಬುದೇ ಆ ನಿಮಿತ್ತ. ಭೀಮನು ಅದನ್ನು ನಿಜಮಾಡಿ ಹೃದಯಸುಂದರಿಯೊಂದಿಗೆ ಸಮಾಗಮ ಪಡೆದನು. ಹಿಡಂಬ ವಂಶೀಯನಾದ ಸಿಂಹಘೋಷನಿಗೆ ಸಂತಸ ವಾಯಿತು.

ಹೀಗೆ ನಾನಾ ದೇಶಗಳಲ್ಲಿ ಸಂಚರಿಸಿ ಹಸ್ತಿನಪುರಕ್ಕೆ ಮರಳಿದ ಪಾಂಡವರು, ದಾರಿ ನಡೆಯುತ್ತಿರುವಾಗ ಮಾಕಂದೀ ನಗರವನ್ನು ಸೇರಿದರು. ಅಲ್ಲಿಯ ರಾಜದಂಪತಿಗಳಾದ ದ್ರುಪದ-ಭೋಗವತಿಯರ ಪುತ್ರಿ ದ್ರೌಪದಿಗೆ ಸ್ವಯಂವರ ಏರ್ಪಡಿಸಲಾಗಿತ್ತು. ಹಲವು ಮಂದಿ ರಾಜಪುತ್ರರ ವಿರೋಧವನ್ನು ಕಟ್ಟಿಕೊಳ್ಳಲಾರದೆ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ದ್ರುಪದನು ಚಂದ್ರಕಯಂತ್ರ ಭೇದನದ ಏರ್ಪಾಡು ಮಾಡಿದ್ದನು. ಅಲ್ಲದೆ ಸುರೇಂದ್ರ ವರ್ಧನನೆಂಬ ವಿದ್ಯಾಧರ ರಾಜನೊಬ್ಬನು ತನ್ನ ಮಗಳಿಗೆ ಯೋಗ್ಯವರನನ್ನು ಗೊತ್ತು ಪಡಿಸಲೆಂದು ದ್ರುಪದನ ಅನುಮತಿಪಡೆದು ಅಲ್ಲಿಯೇ ಗಾಂಡೀವವೆಂಬ ಬಿಲ್ಲನ್ನು ತಂದು ಇರಿಸಿದ್ದು, ಅದನ್ನು ಹೆದೆಯೇರಿಸುವವನಿಗೆ ದ್ರೌಪದಿಯ ಜೊತೆಗೆ ತನ್ನ ಮಗಳನ್ನೂ ಕೊಡುವ ಹಾಗೆ ವ್ಯವಸ್ಥೆಮಾಡಿಸಿದ್ದನು. ದ್ರೋಣ ಕರ್ಣಾದಿಗಳಿಗೂ ದುರ್ಭೇಧ್ಯ

ವಾಗಿದ್ದ ಗಾಂಡೀವ ಧನುಸ್ಸಿಗೆ ಹೆದೆಯೇರಿಸಿ, ಚಂದ್ರಕವೇಧವೆಂಬ ಲಕ್ಷ್ಯವನ್ನು ಅರ್ಜುನನು ಭೇದಿಸಿದನು. ದ್ರೌಪದಿ ಅರ್ಜುನನಿಗೆ ವರಣಮಾಲೆ ಹಾಕಿದಳು. ಬೀಸುವ ಗಾಳಿಯು ಬಿರುಸಿಗೆ ಹಾರವು ಕಿತ್ತು ಸೂಸಿ ಅವನೊಂದಿಗೆ ಬಳಿಯೇ ನಿಂತಿದ್ದ ಪಂಚಪಾಂಡವರ ಮೇಲೂ ಹೋಗಿ ಬಿತ್ತು. ಅದನ್ನು ಕಂಡು ಅವಿವೇಕಿಗಳಾದ ಮನುಷ್ಯರು ಅವಳು ಐವರನ್ನೂ ವರಿಸಿದಳು ಎಂದು ಕೂಗಿ ಹೇಳಲು ಮೊದಲಿಟ್ಟರು. ಅರ್ಜುನನು ದ್ರೌಪದಿಯನ್ನು ತನ್ನ ತಾಯಿಯ ಬಳಿಗೆ ಕರೆದೊಯ್ದನು. ಆಶಾಭಂಗ ವಾದ ಶತ್ರುರಾಜಪುತ್ರರು ಕೆರಳಿ ಮೇಲೇರಿ ಬರಲು, ಅರ್ಜುನನೂ ಭೀಮ ದೃಷ್ಟ ದ್ಯುಮ್ನರೂ ಅವರನ್ನು ನಿಗ್ರಹಿಸಿದರು. ಅರ್ಜುನನು ಸ್ವನಾಮಾಂಕಿತ ಬಾಣದಿಂದ ದ್ರೋಣರ ಮಡಿಲಿಗೆ ಬಾಣಪ್ರಯೋಗಿಸಿದನು. ಭೀಷ್ಮದ್ರೋಣಾದಿಗಳಿಗೆ ಪಾಂಡವರ ಗುರುತುಸಿಕ್ಕಿ ಸಂತೋಷವಾಯಿತು.

ಈಗ ದುರ್ಯೋಧನನು ಪಾಂಡವರನ್ನು ಒಡಗೊಂಡು ಹಸ್ತಿನಪುರಕ್ಕೆ ಹೋದನು. ಕೌರವ ಪಾಂಡವರು ಸಮಾರ್ಧರಾಜ್ಯವನ್ನು ಹಂಚಿಕೊಂಡು ಮೊದಲಿನಂತೆ ಇರತೊಡಗಿ ದರು. ಅಜ್ಞಾತವಾಸದ ಸಮಯದಲ್ಲಿ ಯಾವ ಕನ್ಯೆಯರನ್ನು ಪಾಂಡವರು ಸಂದರ್ಶಿಸಿ ದ್ದರೋ, ಅವರನ್ನೆಲ್ಲ ಕರೆಸಿಕೊಂಡು ವಿವಾಹವಾದರು. ದ್ರೌಪದಿ ಅರ್ಜುನನ ಪತ್ನಿ ಯಾಗಿದ್ದು, ಅವಳ ಮೇಲೆ ಯುಧಿಷ್ಠಿರ ಭೀಮಸೇನರಿಗೆ ಸೊಸೆಯೆಂಬ ಭಾವವಿತ್ತು ; ಸಹದೇವ ನಕುಲರಾದರೋ ಆಕೆಯನ್ನು ತಾಯಿಗೆ ಸಮಾನಳಾಗಿ ತಿಳಿಯುತ್ತಿದ್ದರು. ದ್ರೌಪದಿಗೂ ಅವರ ವಿಷಯದಲ್ಲಿ ಮಾವಂದಿರೆಂಬ, ಮಯ್ದುಂದಿರೆಂಬ ಭಾವನೆಯಿತ್ತು.

ಹಸ್ತಿನಪುರದಲ್ಲಿ ಪಾಂಡವರ ಏಳಿಗೆಯನ್ನು ಕಂಡು ಕೌರವರಿಗೆ ಕರುಬುಂಟಾಯಿತು. ಶಕುನಿಯ ಉಪದೇಶದಂತೆ ದುರ್ಯೋಧನ ದ್ಯೂತದಲ್ಲಿ ಯುಧಿಷ್ಠಿರನನ್ನು ಗೆದ್ದನು. ೧೨ ವರ್ಷ ಕಾಲ ರಾಜ್ಯಕೋಶಗಳನ್ನು ತ್ಯಜಿಸಿ ಪಾಂಡವರು ನಗರವನ್ನು ಬಿಟ್ಟು ಹೊರಟರು ; ತಲೆಮರಸಿಕೊಂಡು ಹೆಸರು ಕೂಡ ಕೇಳಿಬರದಂಥ ಕಡೆ ಇದ್ದುಕೊಳ್ಳ ಬೇಕೆಂಬ ಮಾತಿನಂತೆ ಅವರು ಎಲ್ಲಿಗೋ ತೆರಳಿದರು. ದ್ರೌಪದಿ ಅರ್ಜುನನ್ನು ಅನು ಸರಿಸಿದಳು. ಹೀಗೆ ಹೊರಟವರು ಕಾಲಂಜನಾ ಎಂಬ ಕಾಡನ್ನು ಸೇರಿದರು. ಅಲ್ಲಿ ವಿದ್ಯಾಧರ ದಂಪತಿಗಳಾದ ಸುತಾರ–ಕುಸುಮಾವಲಿ ಎಂಬವರು ಶಾಬರವಿದ್ಯೆಯ ಬಲದಿಂದ ಕಿರಾತವೇಷಧರರಾಗಿ ಪರಸ್ಪರವಾಗಿ ಕ್ರೀಡಿಸುತ್ತಿದ್ದರು. ವಿದ್ಯಾಧರನು ಅರ್ಜುನನನ್ನು ಕಂಡು ಕೆರಳಿ ಅವನೊಂದಿಗೆ ಹೋರಾಟಕ್ಕಿಳಿದನು. ಬಾಹುಯುದ್ಧದಲ್ಲಿ ವಿದ್ಯಾಧರನ ಎದೆಯ ಮೇಲೆ ಅರ್ಜುನನು ಬಲವಾಗಿ ಹೊಡೆದಾಗ, ಕುಸುಮಾವಲಿ ಅವನಿಂದ ಪತಿಭಿಕ್ಷೆಯನ್ನು ಬೇಡಿ ಪಡೆದಳು.

ಈಗ ಸವಾರಿ ಮೇಘದಲನಗರಕ್ಕೆ ಬಂದಿತು. ಇಲ್ಲಿ ವೈಶ್ಯಪುತ್ರಿ ಚಾರುಲಕ್ಷ್ಮಿ ಯನ್ನು ಭಿಕ್ಷಾರ್ಥಿಯಾಗಿ ಹೋದ ಭೀಮಸೇನನು ನೈಮಿತ್ತಿಕರ ಆದೇಶದಂತೆ ಪ್ರಾಪ್ತ ಮಾಡಿಕೊಂಡನು. ಕೌಶಲ ದೇಶದಲ್ಲಿ ರಾಮಗಿರಿಯನ್ನು ಸೇರಿ, ರಾಮಚಂದ್ರ ನಿರ್ಮಿತ

ವಾದ ಜಿನಮಂದಿರದಲ್ಲಿ ಪಾಂಡವರು ಪೂಜೆ ಸಲ್ಲಿಸಿದರು. ಆ ಗಿರಿಯ ಮೇಲೆಯೇ ಅವರು ಹನ್ನೊಂದು ವರ್ಷ ಕಳೆದರು.

ಮುಂದೆ ಪಯಣಿಸಿ ಪಾಂಡವರು ವಿರಾಟನಗರಕ್ಕೆ ಬಂದರು. ಇಲ್ಲಿಯ ರಾಜ ದಂಪತಿಗಳು ವಿರಾಟ–ಸುದರ್ಶನೆಯರು. ಪಾಂಡವರು ಅಲ್ಲಿಯೇ ಅವ್ಯಕ್ತ ರೀತಿಯಲ್ಲಿರ ತೊಡಗಿದರು. ಒಮ್ಮೆ ಸುದರ್ಶನೆಯ ಸೋದರ ಕೀಚಕನು ತನ್ನ ಸೋದರಿಯನ್ನು ಕಾಣಲೆಂದು ಬಂದು, ಸೈರಂಧ್ರಿ ವೇಷದ ದ್ರೌಪದಿಯನ್ನು ಕಂಡು ಅವಳಲ್ಲಿ ಆಸಕ್ತ ನಾದನು. ಅನೇಕ ಉಪಾಯಗಳಿಂದ ಅವಳನ್ನು ಒಲಿಸಿಕೊಳ್ಳಲು ಯತ್ನಿಸಿದನು. ಅವಳು ಜಗ್ಗಲಿಲ್ಲ. ಕೀಚಕ ತನ್ನ ಧಾರ್ಷ್ಟ್ಯ ಬಿಡಲಿಲ್ಲ. ಇದರಿಂದ ಬೇಸತ್ತ ದ್ರೌಪದಿ ಭೀಮಸೇನನಿಗೆ ದೂರು ಮುಟ್ಟಿಸಿದಳು. ಅವನು ದ್ರೌಪದಿಯ ಮೂಲಕ ಕೀಚಕನಿಗೆ ಸಂಕೇತಮಾಡಿಸಿ, ತಾನೇ ಸೈರಂಧ್ರಿ ವೇಷದಲ್ಲಿ ಸಂಕೇತ ಸ್ಥಾನವನ್ನು ಸೇರಿ ಕಾಮುಕನಾದ ಕೀಚಕನನ್ನು ಹೊಡೆದು ಹಣ್ಣುಮಾಡಿ, ಕೊನೆಗೆ ದಯೆಯಿಂದ ಪ್ರಾಣಸಹಿತ ಬಿಟ್ಟನು. ಕೀಚಕನಿಗೆ ವಿರಕ್ತಿಯುಂಟಾಗಿ, ಅವನು ರತಿವರ್ಧನ ಮುನಿಗಳಲ್ಲಿ ಜಿನದೀಕ್ಷೆಗ್ರಹಿಸಿ ಭಾವ ಶುದ್ಧಿಯಿಂದಿರತೊಡಗಿದನು. ಕೀಚಕನ ತಮ್ಮಂದಿರು ವಿಷಯ ತಿಳಿದು ಸೈರಂಧ್ರಿಯ ಮೇಲೆ ಸೇಡು ತೀರಿಸಿಕೊಳ್ಳಲು ಬಗೆದರು ; ಆದರೆ ಭೀಮನಿಂದ ಹತರಾದರು. ಹೀಗಿರಬೇಕಾದರೆ, ಕೆಲಕಾಲದ ಮೇಲೆ ಕೀಚಕ ಮುನಿ ಒಮ್ಮೆ ಉಪವನ ಮಧ್ಯದಲ್ಲಿ ಯೋಗಾರೂಢನಾಗಿರುವಾಗ ಯಕ್ಷನೊಬ್ಬನು ಅವನನ್ನು ಪರೀಕ್ಷಿಸಲೆಂದು ದ್ರೌಪದಿಯ ವೇಷದಲ್ಲಿ ಅವನೆದುರು ಬಂದು, ಮಧುರಾಲಾಪದಿಂದ ಅವನನ್ನು ಮರಳುಮಾಡಲು ಯತ್ನಿಸಿದನು. ಆದರೆ ಆ ಯತ್ನ ಫಲಿಸಲಿಲ್ಲ, ಯಕ್ಷನ ಕೋರಿಕೆಯಂತೆ ಕೀಚಕಮುನಿ ಅವನಿಗೆ ತನ್ನ ಹಾಗೂ ದ್ರೌಪದಿಯ ಪೂರ್ವಭವಗಳನ್ನು ನಿರೂಪಿಸಿದನು ; ತಾನು ಪೂರ್ವಭವದಲ್ಲಿ ಕುಮಾರದೇವನೆಂಬ ವೈಶ್ಯನೂ ದ್ರೌಪದಿ ಮಕುಮಾರಿಕೆಯೆಂಬ ಹೆಸರಿನ ತನ್ನ ತಾಯಿಯೂ ಆಗಿದ್ದುದಾಗಿ ತಿಳಿಸಿದನು. ಯಕ್ಷನು ಆ ವಿವರಗಳನ್ನು ಕೇಳಿ, ಸಮ್ಯಕ್ತ್ವಗೊಂಡು ತೆರಳಿದನು.

ಗೋಗ್ರಹಣ ವೃತ್ತಾಂತವಾಯಿತು. ಭೀಮಾರ್ಜುನರು ತಮ್ಮ ಕೋಪಾಗ್ನಿಗೆ ಶತ್ರುಗಳನ್ನು ಆಹುತಿಮಾಡಿದರು. ಪಾಂಡವರು ತಮ್ಮ ಸಮಚಿತ್ತತೆ ಸೌಮನಸ್ಯಗಳನ್ನು ಬಿಟ್ಟುಕೊಡದೆ ತಮ್ಮ ತಂದೆ ಪಾಂಡುವಿನ ಭವನದಲ್ಲಿ, ಎಂದಿನಂತೆ ಹಸ್ತಿನಪುರದಲ್ಲಿ ಇರತೊಡಗಿದರು. ಕೌರವರ ಹೊಟ್ಟೆಕಿಚ್ಚು ಹೋಗಲಿಲ್ಲ. ಮತ್ತೆ ರಾಜ್ಯವಿಭಾಗದ ಏರ್ಪಾಡಿನಲ್ಲಿ ದೋಷವೆತ್ತಲು ನೋಡಿದರು. ಈಗಲೂ ಯುಧಿಷ್ಠಿರನು ತಮ್ಮಂದಿರ ಕೋಪವನ್ನು ಶಮನಗೊಳಿಸಿದನು. ಕೌರವರಿಗೆ ಅಹಿತವೆಣಿಸದೆ, ಮತ್ತೆ ತಾಯಿಯನ್ನೂ ಸೋದರರನ್ನೂ ಕರೆದುಕೊಂಡು, ದಕ್ಷಿಣಾಭಿಮುಖವಾಗಿ ಪ್ರಯಾಣಮಾಡಿದನು.

ಮಾರ್ಗಮಧ್ಯೆ ವಿಂಧ್ಯೆಗೆ ಪಾಂಡವರು ಬಂದರು. ಅಲ್ಲಿ ತಪಸ್ಸಿನಲ್ಲಿದ್ದ ವಿದುರ ನನ್ನು ಸಂದರ್ಶಿಸಿ, ಅವನಿಂದ ಜಿನಧರ್ಮದ ಉಪದೇಶವನ್ನು ಪಡೆದರು. ಮುಂದು

ವರಿದು, ಯಾದವರ ದ್ವಾರವತಿಗೆ ಬಂದರು. ಅಲ್ಲಿ ಸಮುದ್ರವಿಜಯಾದಿಗಳು ತಮ್ಮ ತಂಗಿಯನ್ನೂ ಸೋದರಳಿಯಂದಿರನ್ನೂ ನೋಡಿ ಹರ್ಷಿಸಿದರು. ಇಲ್ಲಿ ಕೆಲಕಾಲ ತಂಗಿದ ಪಾಂಡವರು ಕೃಷ್ಣನು ಏರ್ಪಡಿಸಿದ ಐದು ಉತ್ತಮ ಪ್ರಾಸಾದಗಳಲ್ಲಿ ಬೇರೆ ಬೇರೆಯಾಗಿ ಇರತೊಡಗಿದರು. ಕ್ರಮವಾಗಿ ಲಕ್ಷ್ಮೀಮತಿ, ಶೇಷವತಿ, ಸುಭದ್ರೆ, ವಿಜಯೆ ಮತ್ತು ರತಿ—ಇವರನ್ನು ಲಗ್ನವಾದರು.

ಹೀಗೆಯೇ ಇರುತ್ತಿರಬೇಕಾದರೆ, ಮಾಗಧರ-ಯಾದವರ ನಡುವೆ ಯುದ್ಧ ಘಟಿಸಿತು. ಜರಾಸಂಧ ಸಮುದ್ರವಿಜಯರ ಬಲಗಳು ಕುರುಕ್ಷೇತ್ರದ ಬಯಲಲ್ಲಿ ಬೀಡುಬಿಟ್ಟವು. ಕೌರವರು ಜರಾಸಂಧನ ಪಕ್ಷವನ್ನೂ ಪಾಂಡವರು ಸಮುದ್ರ ವಿಜಯಾದಿಗಳ ಪಕ್ಷವನ್ನೂ ವಹಿಸಿಕೊಂಡು ತಾವೂ ಯುದ್ಧಕ್ಕೆ ಅಣಿಯಾದರು. ಕುಂತಿಗೆ ಗಾಬರಿಯಾಯಿತು. ಅವಳು ಯುಧಿಷ್ಠಿರಾದಿಗಳ ಅನುಮತಿ ಪಡೆದು, ಕೂಡಲೇ ಪ್ರತಿಪಕ್ಷದಲ್ಲಿದ್ದ ಕರ್ಣನಲ್ಲಿಗೆ ಬಂದಳು. ಕುಂತೀ-ಕರ್ಣರ ಸಮಾಗಮ ವಾಯಿತು. ಕುಂತಿ ತಮ್ಮಿಬ್ಬರ ತಾಯಿ-ಮಗನ ಸಂಬಂಧವನ್ನೂ ಬಳಿಕಣ ಘಟನೆ ಗಳನ್ನೂ ಕರ್ಣನಿಗೆ ತಿಳಿಸಿದಳು. ಕರ್ಣನಿಗೆ ಮೊದಲೇ ಕಂಬಲ ವೃತ್ತಾಂತವೂ (ತನ್ನನ್ನು ವಸ್ತ್ರದಲ್ಲಿ ಸುತ್ತಿ ನದಿಯಲ್ಲಿ ತ್ಯಜಿಸಿದ್ದು) ತಾನು ಕುರುವಂಶಜನೆಂಬುದೂ ತಿಳಿದಿತ್ತು. ಈಗ ತಾನು ಕುಂತಿ-ಪಾಂಡುಗಳ ಪುತ್ರನೆಂಬುದು ನಿಶ್ಚಿತವಾಯಿತು. ತನ್ನ ಪತ್ನಿಯರೊಂದಿಗೆ ತಾಯಿಯನ್ನು ಸತ್ಕರಿಸಿದನು. ಕುಂತಿ ಕರ್ಣನನ್ನು ಉದ್ದೇಶಿಸಿ ಹೀಗೆ ಹೇಳಿದಳು : "ಹೇ ಪುತ್ರ, ಏಳು. ಎಲ್ಲಿ ನಿನ್ನ ಸೋದರರೂ ಕೃಷ್ಣ ಮೊದಲಾದ ಅನ್ಯ ಆತ್ಮೀಯರೂ ನಿನಗಾಗಿ ಉತ್ಕಂಠಿತರಾಗಿರುವರೋ ಅಲ್ಲಿಗೆ ನಡೆ. ಮಗೂ, ಈಗ ಭೂಮಿಯಲ್ಲಿ ನೀನೇ ಕುರುಗಳ ಸ್ವಾಮಿ. ನೀನು ಕೃಷ್ಣ ಬಲದೇವಾದಿಗಳಿಗೆ ಪ್ರಾಣ ಮಿತ್ರನಾಗಿದ್ದೀಯೆ. ನೀನು ರಾಜ. ನಿನ್ನ ತಮ್ಮ ಯುಧಿಷ್ಠಿರ ನಿನಗೆ ಛತ್ರಧಾರಿ, ಭೀಮನು ಚಾಮರಧಾರಿ, ಅರ್ಜುನ ಮಂತ್ರಿಮುಖ್ಯನು, ನಕುಲ ಸಹದೇವರು ಪ್ರತೀಹಾರಿಗಳು. ಇನ್ನು ತಾಯಿಯಾದ ನಾನು ನಿನ್ನ ಹಿತೋದ್ಯತೆ." ಈ ಮಾತಿನಿಂದ ಕರ್ಣನು ಭ್ರಾತೃಸ್ನೇಹಪರವಶನಾದರೂ ಹಿಂದೆ ಜರಾಸಂಧನು ತನಗೆ ಮಾಡಿದ ಉಪಕಾರಗಳನ್ನು ನೆನೆದು, "ಸ್ವಾಮಿಕಾರ್ಯವನ್ನು ತ್ಯಜಿಸಿ ಬಂಧುಕಾರ್ಯವನ್ನು ಹಿಡಿಯು ವುದು ಅನುಚಿತವಾದುದು" ಎಂದು ತನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸಿ, ಯುದ್ಧದಲ್ಲಿ ತಮ್ಮಂದಿರನ್ನು ಬಿಟ್ಟು ಅನ್ಯಯೋಧರೊಂದಿಗೆ ಯದ್ಧಮಾಡುವುದಾಗಿ ಆಕೆಗೆ ಭರವಸೆ ಯಿತ್ತನು ; ಅಲ್ಲದೆ ಯುದ್ಧಾನಂತರ ಜೀವಿಸಿದ್ದರೆ, ಸೋದರರನ್ನು ಕಾಣುವುದಾಗಿಯೂ ತಿಳಿಸಿ ಆಕೆಯನ್ನು ಬೀಳ್ಕೊಟ್ಟನು.

ಕುರುಕ್ಷೇತ್ರ ಸಂಗ್ರಾಮದಲ್ಲಿ ಜರಾಸಂಧ ಚಕ್ರವ್ಯೂಹವನ್ನೂ, ವಸುದೇವ ಗರುಡವ್ಯೂಹವನ್ನೂ ಹೂಡಿಕೊಂಡು ಸೈನ್ಯಸಹಿತ ನಿಂತರು. ಆ ಕಡೆ ಹಿರಣ್ಯನಾಭನೂ ಈ ಕಡೆ ಅನಾವೃಷ್ಟಿಯೂ ಸೇನಾಪತಿಗಳಾದರು. ಕೌರವರೊಂದಿಗೆ ಪಾಂಡವರು

ಕಾದಿದರು. ಈ ಕಾಳಗದಲ್ಲಿ ಯುಧಿಷ್ಠಿರ-ಶಲ್ಯ,ಭೀಮ-ದುಶ್ಶಾಸನ, ಸಹದೇವ-ಶಕುನಿ, ನಕುಲ-ಉಲೂಕ, ಅರ್ಜುನ-ದುರ್ಯೋಧನರ ನಡುವೆ ಉಗ್ರಕಾಳಗವಾಯಿತು. ಪಾಂಡವರು ಯುದ್ಧದಲ್ಲಿ ಹಲವರು ಧೃತರಾಷ್ಟ್ರಸುತರನ್ನು ಕೊಂದಿಕ್ಕಿದರು. ಕರ್ಣ ಕೃಷ್ಣನ ಕಡೆಯ ಅನೇಕರನ್ನು ಕೊಂದನು. ನೇಮಿನಾಥನೂ ಅರ್ಜುನ ಅನಾವೃಷ್ಟಿಗಳೂ ಚಕ್ರವ್ಯೂಹವನ್ನು ಭೇದಿಸಿದರು. ಮೂರನೆಯ ದಿನದ ಯುದ್ಧದಲ್ಲಿ ಕೃಷ್ಣನು ತನ್ನ ಚಕ್ರದಿಂದ ಜರಾಸಂಧನನ್ನು ವಧಿಸಿದನು. ಯಾದವರು ಜಯಶೀಲರಾದರು. ಜರಾಸಂಧನ ಪಕ್ಷದಲ್ಲಿದ್ದ ದುರ್ಯೋಧನ ದುಶ್ಶಾಸನರೂ ದ್ರೋಣರೂ ಸಂಸಾರದಲ್ಲಿ ವೈರಾಗ್ಯಗೊಂಡು ಯತಿಯಾದ ವಿದುರನ ಬಳಿಯಲ್ಲಿ ಜೀನದೀಕ್ಷೆಯನ್ನು ಗ್ರಹಣ ಮಾಡಿದರು. ಕರ್ಣ ಸಹ ಸುದರ್ಶನೋದ್ಯಾನದಲ್ಲಿ ದಮವರನೆಂಬ ಮುನಿಯಿಂದ ಜಿನದೀಕ್ಷೆಯನ್ನು ಹಿಡಿದನು.

ಪಾಂಡವರು ಈಗ ಎಂದಿನಂತೆ ಹಸ್ತಿನಪುರದಲ್ಲಿ ರಾಜ್ಯವಾಳತೊಡಗಿದರು. ಜನ ದುರ್ಯೋಧನಾದಿಗಳನ್ನು ಪೂರ್ತಿ ಮರೆತರು. ಹೀಗಿರಲು, ಒಮ್ಮೆ ನಾರದನ ದೆಸೆಯಿಂದ ಒಂದು ಅಚಾತುರ್ಯವಾಯಿತು. ಅವನು ದ್ರೌಪದಿ ತನ್ನ ಪ್ರಸಾಧನ ಕಾರ್ಯದಲ್ಲಿ ಮೈಮರೆತು ತನಗೆ ಆತಿಥ್ಯ ಮಾಡುವುದರಲ್ಲಿ ಉದಾಸೀನಳಾದಳೆಂದು ಕೋಪಿಸಿ, ಅವಳಿಗೆ ಅಪಮಾನವನ್ನು ಉಂಟು ಮಾಡಲು ಯೋಚಿಸಿದನು. ಪೂರ್ವಧಾತಕೀಖಂಡದ ಭರತಕ್ಷೇತ್ರದ ಕಡೆಗೆ ಗಗನಮಾರ್ಗದಲ್ಲಿ ಹೋಗಿ, ಅಲ್ಲಿ ಅಂಗದೇಶದ ಅಮರಕಂಕಾ ಪುರಿಯ ಅರಸ ಪದ್ಮನಾಭನನ್ನು ಕಂಡನು ; ಸ್ತ್ರೀ ಲೋಲನಾದ ಆತನ ಎದುರಿನಲ್ಲಿ ದ್ರೌಪದಿಯ ರೂಪವನ್ನು ವರ್ಣಿಸಿ ಆತನ ಉತ್ಸುಕತೆಯನ್ನು ಹೆಚ್ಚಿಸಿದನು. ಪದ್ಮನಾಭ ತಪಸ್ಸಿನಿಂದ ಪಾತಾಳಲೋಕದ ಸಂಗಮಕದೇವನನ್ನು ಆರಾಧಿಸಿದನು. ಆ ದೇವನು ದ್ರೌಪದಿಯನ್ನು ಪದ್ಮನಾಭನಲ್ಲಿಗೆ ಎತ್ತಿಕೊಂಡು ಬಂದು ಬಿಟ್ಟನು. ನಿದ್ದೆ ತಿಳಿದು ಎದ್ದಾಗ, ಆಕೆಗೆ ಬಲುಗಾಬರಿಯಾಯಿತು. ಪದ್ಮನಾಭನು ತನ್ನ ಪರಿಚಯವನ್ನು ತಿಳಿಸಿ ತನ್ನ ಅಭೀಷ್ಟವನ್ನು ಆಕೆಗೆ ಹೇಳಿದನು. ಆಕೆಯಾದರೋ ಖಿನ್ನಳಾಗಿ, ಅರ್ಜುನನ ದರ್ಶನವಾಗುವವರೆಗೆ ನಿರಶನ ವ್ರತವನ್ನು ಕೈಕೊಂಡು, ಅವನೊಬ್ಬನೇ ಬಿಚ್ಚುವಂತೆ ವೇಣೀಬಂಧವನ್ನು ಸಹ ಮಾಡಿಕೊಂಡಳು. ಕಾಮಪೀಡಿತನಾದ ಪದ್ಮನಾಭನಿಗೆ, ತನಗೆ ವೀರನಾದ ಪತಿ ಅರ್ಜುನನ ಹಾಗೂ ಅವನ ವೀರಸೋದರರ, ಬಲದೇವ ಕೃಷ್ಣರ ಸಹಾಯವುಂಟೆಂದೂ ಅದರಿಂದ ಅಸಾಯಕ್ಕೆ ಎಡೆಮಾಡದೆ ತನ್ನನ್ನು ಬಿಟ್ಟುಬಿಡಬೇಕೆಂದೂ ಎಚ್ಚರಿಕೆಯ ಮಾತು ಹೇಳಿದಳು. ಅವನು ಹಠ ಬಿಡಲಿಲ್ಲ. ದ್ರೌಪದಿ ಒಂದು ತಿಂಗಳ ಕಾಲಾವಕಾಶವನ್ನು ಕೇಳಿಕೊಂಡು ಪತಿಯ ದಾರಿ ಕಾಯು ತ್ತಿದ್ದಳು.

ಪಾಂಡವರು ದ್ರೌಪದಿಯ ಅಪಹರಣದಿಂದ ಭಯಭೀತರಾದರು. ಯಾದವ ರಲ್ಲಿಗೆ ಹೋಗಿ ಕೃಷ್ಣನಿಗೆ ಸುದ್ದಿ ಮುಟ್ಟಿಸಿದರು. ಹುಡುಕಾಟ ಯಶಸ್ವಿಯಾಗದೆ

ಇದ್ದಾಗ, ಅನ್ಯಕ್ಷೇತ್ರಕ್ಕೆ ಯಾವನಾದರೂ ಕ್ಷುದ್ರನಾದ ವ್ಯಕ್ತಿ ಕೊಂಡೊಯ್ದಿರಬೇಕು ಎಂದು ಚಿಂತಿಸಿದರು. ಕೃಷ್ಣನು ಸಭಾಮಂಟಪದಲ್ಲಿದ್ದಾಗ, ನಾರದನ ಸವಾರಿ ಬಂತು. ದ್ರೌಪದಿಯ ನೆಲೆಯನ್ನು ಆಕೆಯ ದುಃಸ್ಥಿತಿಗೆ ಕಾರಣನಾಗಿದ್ದ ಅವನೇ ತಿಳಿಸಿದನು. ಕೃಷ್ಣನು ಪಾಂಡವರೊಡಗೂಡಿ ಪೂರ್ವಧಾತಕೀಖಂಡಲ್ಲಿ ಅಮರಕಂಕಾಪುರಿಯನ್ನು ಸೇರಿ ನಗರದಲ್ಲಿ ಕೋಲಾಹಲವೆಬ್ಬಿಸಿದನು. ಈಗ ಪದ್ಮನಾಭನು ದ್ರೌಪದಿಗೆ ಶರಣಾಗಿ ಅಭಯಯಾಚನೆ ಮಾಡಿದನು ; ಅವಳ ಸೂಚನೆಯಂತೆ ಸ್ತ್ರೀವೇಷಧರಿಸಿ ತನ್ನ ಅಂತಃ ಪುರ ಸಹಿತ ಕೃಷ್ಣನಿಗೆ ಶರಣಾದನು. ಕೃಷ್ಣನು ಅವನಿಗೆ ಅಭಯನೀಡಿ, ಅವನನ್ನು ಸ್ವಸ್ಥಾನಕ್ಕೆ ಕಳಿಸಿದನು. ಅರ್ಜುನ ದ್ರೌಪದಿಯನ್ನು ಆಲಂಗಿಸಿ, ತನ್ನ ಕೈಗಳಿಂದಲೇ ಅವಳ ವೇಣೀಬಂಧವನ್ನು ಬಿಚ್ಚಿದನು. ಕೃಷ್ಣನೂ ಪಾಂಡವರೂ ಮಹಾಸಮುದ್ರವನ್ನು ದಾಟಿ, ಗಂಗೆಯನ್ನೂ ಉತ್ತರಿಸಿ, ಭರತಕ್ಷೇತ್ರದ ದಕ್ಷಿಣತಟಕ್ಕೆ ಬಂದು ಸೇರಿದರು. ಆಗ ಭೀಮಮಾಡಿದ ಒಂದು ಕೀಟಲೆಯ ಕೆಲಸದಿಂದ ಕೃಷ್ಣನಿಗೆ ಬೇಸರವಾಗಿ ಅವನು ಪಾಂಡವರನ್ನು ಹಳಿದು ಛೀಮಾರಿ ಹಾಕಿದನು. ಹಸ್ತಿನಪುರಕ್ಕೆ ಬಂದ ಮೇಲೆ ಸುಭದ್ರೆಯ ಮಗ ಆರ್ಯಸೂನುವಿಗೆ ರಾಜ್ಯವಿತ್ತು, ಪಾಂಡವರನ್ನು ಅಲ್ಲಿಂದ ಹೊರಡಿಸಿ, ತಾನು ದ್ವಾರಿಕೆಗೆ ಮರಳಿದನು.

ಯಾದವರ ಪಟ್ಟಣ ದ್ವಾರಿಕೆಯು ರೋಹಿಣಿಯ ಸೋದರ ದ್ವೈಪಾಯನ ಕುಮಾರನ ಕ್ರೋಧದಿಂದಾಗಿ ಭಸ್ಮವಾಗುವುದೆಂಬ ಒಂದು ನಿಮಿತ್ತ ನೇಮಿಯ ಮೂಲಕವೇ ಬಲದೇವ ಕೃಷ್ಣರಿಗೆ ತಿಳಿಯಿತು. ದ್ವೈಪಾಯನಕುಮಾರ ಮುನಿಯ ದೀಕ್ಷೆಗೊಂಡು, ೧೨ ನೆಯ ವರ್ಷಕ್ಕೆ ಆ ದುರಂತ ಘಟಿಸುವುದೆಂಬ ನಿಮಿತ್ತವನ್ನು ನಡೆಯಗೊಡದಿರಲು ಪೂರ್ವದೇಶದ ಕಡೆಗೆ ಹೊರಟು ಹೋದನು. ಆದರೆ ಭ್ರಾಂತಿ ವಶದಿಂದ ಅವಧಿ ಪೂರೈಸುವ ಮೊದಲೇ ದ್ವಾರಿಕೆಗೆ ಬರುವಂತಾಗಿ, ಮಧುಪಾನ ಮತ್ತರಾದ ಯಾದವ ರಾಜಕುಮಾರರ ಅಚಾತುರ್ಯದಿಂದ ಆ ದುರ್ಘಟನೆ ಜರುಗಿಯೇ ಹೋಯಿತು. ಇದೇ ನಿಮಿತ್ತದ ಭಾಗವಾಗಿ ವಸುದೇವಪುತ್ರ ಜರತ್ಕುಮಾರನ ಮೂಲಕ ಕೃಷ್ಣನ ಮರಣವೂ ಆಗಿಹೋಯಿತು. ಬಲದೇವನು ಅಪಾರವಾದ ದುಃಖಕ್ಕೆ ಗುರಿಯಾದನು. ಕೃಷ್ಣನು ಸಾಯುವಾಗ ಜರತ್ಕುಮಾರನಿಗೆ ದ್ವಾರಿಕೆಯಲ್ಲಿ ನಡೆದ ಘಟನೆಗಳನ್ನೆಲ್ಲ ಪಾಂಡವರಗೆ ತಿಳಿಸುವಂತೆ ಸೂಚಿಸಿದನು ; ಅವರು ವಂಶದ ಹಿತೈಷಿ ಗಳೆಂದೂ ಅವನಿಗೆ ರಕ್ಷೆಯಾಗತಕ್ಕವರೆಂದೂ ತಿಳಿಸಿ, ಗುರುತಿಗೆ ಕೌಸ್ತುಭರತ್ನವನ್ನಿತ್ತು ಕಳುಹಿದನು. ತಾನು ತೀರಿಕೊಂಡನು. ಇತ್ತ ಜರತ್ಕುಮಾರನು ಪಾಂಡವ ನಗರವಾದ ದಕ್ಷಿಣಮಧುರೆಗೆ ಬಂದು ಪಾಂಡವರಿಗೆ ಕಾಣಿಸಿಕೊಂಡು ನಡೆದುದನ್ನೆಲ್ಲ ನಿವೇದಿಸಿದನು. ಅವರು ಲೋಕ ಸ್ವರೂಪ ತಿಳಿದವರಾದುದರಿಂದ ಅವನನ್ನು ಮುಂದಿಟ್ಟುಕೊಂಡು ಬಲದೇವನನ್ನು ನೋಡಿ ಸಂತೈಸಲೆಂದು ದ್ವಾರಿಕೆಗೆ ಬಂದರು. ವನದಲ್ಲಿ ಕೃಷ್ಣನ ಮೃತ ದೇಹದೊಂದಿಗಿದ್ದ ಅವನನ್ನು ಕಂಡರು. ಕೃಷ್ಣನ ಮೃತಶರೀರಕ್ಕೆ ದಹನ ಸಂಸ್ಕಾರ

ಮಾಡುವಂತೆ ಪ್ರಾರ್ಥಿಸಿದರು. ಪ್ರತಿಯಾಗಿ ಆವನು ಕೃಷ್ಣನನ್ನು ಉಪಚರಿಸುವಂತೆ ತಿಳಿಸಿದನು. ಅದು ನಿರರ್ಥಕವೆಂದು ತಿಳಿದೂ ಅವನಿಗೆ ಸಮಾಧಾನವಾಗಲೆಂದು ಅವರು ಅವನ ಆಶಯದಂತೆಯೇ ನಡೆಯುತ್ತ, ಆ ವನದಲ್ಲಿ ವರ್ಷಾಕಾಲ ಕಳೆದರು. ಶರತ್ಕಾಲ ಬಂತು. ಕೊನೆಗೆ ಕೃಷ್ಣನ ಪೂರ್ವಭವದ ಸೋದರ ಸಿದ್ಧಾರ್ಥನೆಂಬ ಕಲ್ಪವಾಸಿಯಾದ ದೇವನಿಂದ ಬಲದೇವನ ಭ್ರಮೆ ಹರಿಯಿತು. ಕೃಷ್ಣನ ಮೃತಶರೀರಕ್ಕೆ ಸಂಸ್ಕಾರವಾಯಿತು. ಜರತ್ಕುಮಾರನಿಗೆ ರಾಜ್ಯವಿತ್ತು ಬಲದೇವನು ಮುನಿದೀಕ್ಷೆ ವಹಿಸಿದನು. ಪಾಂಡವರು ಹರಿವಂಶದ ಅರಸು ಜರತ್ಕುಮಾರನಿಗೆ ಹಲವರು ರಾಜಕನ್ಯೆಯರನ್ನು ತಂದಿತ್ತರು.. ತಾವೂ ತಮ್ಮ ಪುತ್ರರಿಗೆ ರಾಜ್ಯವೊಪ್ಪಿಸಿ, ನೇಮಿಯ ದರ್ಶನವನ್ನು ಪಡೆಯಲು ಪಲ್ಲವ ದೇಶಕ್ಕೆ ಹೋದರು. ಸಂಯಮದತ್ತ ಮನಸ್ಸಾಗಿದ್ದ ದ್ರೌಪದಿ ಮೊದಲಾದ ರಾಣಿಯರೂ ಸಂಸಾರದಲ್ಲಿ ವೈರಾಗ್ಯಗೊಂಡಿದ್ದ ಕುಂತಿಯೂ ಪಾಂಡವರನ್ನು ಹಿಂಬಾಲಿಸಿದರು. ಹೀಗೆ ಹೊರಟವರು ಪಲ್ಲವ ದೇಶದಲ್ಲಿ ವಿಹಾರಿಸುತ್ತ, ಆಗ ಅಲ್ಲಿಗೆ ಆಗಮಿಸಿದ್ದ ನೇಮಿಜಿನನ ಸಮವಸರಣದಲ್ಲಿ ಆ ಸ್ವಾಮಿಯನ್ನು ಸಂದರ್ಶಿಸಿದರು. ಆತನಿಂದ ಧರ್ಮಶ್ರವಣ ಮಾಡಿದ ಮೇಲೆ, ತಮ್ಮ ಪೂರ್ವಭವಗಳನ್ನು ತಿಳಿಯಲು ಕುತೂಹಲಿಗಳಾದರು. ನೇಮಿನಾಥನು ಅದನ್ನು ಅವರಿಗೆ ನಿರೂಪಿಸಿದನು.

ಅದರ ಪ್ರಕಾರ ; ಹಿಂದೆ ಸೋಮದತ್ತ ಸೋಮಿಲ ಮತ್ತು ಸೋಮಭೂತಿ ಎಂಬ ಹೆಸರಿನ ಮೂವರು (ಸೋಮದೇವ-ಸೋಮಿಲಾ ಎಂಬ ಬ್ರಾಹ್ಮಣ ದಂಪತಿಗಳ ಪುತ್ರರು) ಕುರುವಂಶದ ಮೇಘವಾಹನರಾಜನು ಆಳುತ್ತಿದ್ದ ಚಂಪಾ ನಗರಿಯಲ್ಲಿರುತ್ತಿದ್ದರು. ಇವರಿಗೆ ಕ್ರಮವಾಗಿ ಧನಶ್ರೀ, ಮಿತ್ರಶ್ರೀ ಮತ್ತು ನಾಗಶ್ರೀ ಎಂಬವರನ್ನು (ಅಗ್ನಿಭೂತಿ-ಅಗ್ನಿಲೆಯರೆಂಬವರ ಪುತ್ರಿಯರು) ಕೊಟ್ಟು ಮದುವೆಯಾಯಿತು. ಕಾಲಾಂತರದಲ್ಲಿ ಸೋಮದೇವನು ವೈರಾಗ್ಯಗೊಂಡು ಜಿನದೀಕ್ಷೆ ಗ್ರಹಿಸಿರಲು, ಆತನ ಪುತ್ರರು ಗೃಹಸ್ಥಧರ್ಮದಲ್ಲಿ ಆಸಕ್ತರಾಗಿರುತ್ತಿದ್ದರು. ಒಮ್ಮೆ ಧರ್ಮರುಚಿ ಎಂಬ ಮುನಿ ಭಿಕ್ಷೆಗಾಗಿ ಇವರ ಮನೆಗೆ ಬಂದಾಗ, ಕೊನೆಯವಳಾದ ನಾಗಶ್ರೀ ಸೇವೆಗೆ ಬೇಸರಿಸಿ ಮುನಿಗೆ ವಿಷಮಿಶ್ರಿತಾನ್ನವನ್ನು ಇಕ್ಕಿ ಅವನ ಸಾವಿಗೆ ಕಾರಣವಾದಳು. ಈ ದುಷ್ಕಾರ್ಯಕ್ಕೆ ನೊಂದು ಸೋಮದತ್ತಾದಿ ಸೋದರರು ವರುಣಗುರುಗಳಲ್ಲಿಯೂ ಧನಶ್ರೀ ಮಿತ್ರಶ್ರೀಯರು ಗುಣವತೀ ಆರ್ಯಿಕೆಯಲ್ಲಿಯೂ ಜಿನದೀಕ್ಷೆ ವಹಿಸಿದರು. ತಮ್ಮ ಕಾಲಾಂತ್ಯದಲ್ಲಿ ಅಚ್ಯುತಸ್ವರ್ಗದಲ್ಲಿ ಸಾಮಾನಿಕದೇವರಾಗಿ ಜನಿಸಿದರು. ಪಾಪಿಷ್ಠೆಯಾದ ನಾಗಶ್ರೀ ಪಂಚಮನರಕವಾಸಿಯಾಗಿ, ಸ್ವಯಂಪ್ರಭ ದ್ವೀಪದಲ್ಲಿ ದೃಷ್ಟಿವಿಷ ಸರ್ಪವಾಗಿ ತೃತೀಯನರಕವಾಸಿಯಾಗಿ, ತ್ರಸಸ್ಥಾವರ ಜನ್ಮದಲ್ಲಿ ನವೆಯುತ್ತಿರುವವಳಾಗಿ ಕೊನೆಗೊಮ್ಮೆ ಚಂಪಾಪುರಿಯಲ್ಲಿ ಚಂಡಾಲಕನ್ಯೆಯಾಗಿ ಜನಿಸಿದಳು. ಪುಣ್ಯವಿಶೇಷದಿಂದ ಈಕೆ ಒಮ್ಮೆ ಸಮಾಧಿಗುಪ್ತ ಮುನಿಯಲ್ಲಿ ಮಧು ಮಾಂಸಾದಿಗಳ ತ್ಯಾಗವನ್ನು ಸಂಕಲ್ಪಿಸಿದಳು. ತತ್ಫಲವಾಗಿ ಆ ನಗರದಲ್ಲಿ ಸುಬಂಧು-ಧನವತಿಯರೆಂಬ ವೈಶ್ಯದಂಪತಿ

ಗಳಿಗೆ ಸುಕುಮಾರಿಕೆಯೆಂಬ ಮಗಳಾದಳು. ಪೂರ್ವದ ಪಾಪಸಂಸ್ಕಾರದಿಂದಾಗಿ ಅವಳು ದುರ್ಗಂಧ ಶರೀರೆಯಾಗಿದ್ದಳು. ಬಂಧುಜನರ ಒತ್ತಾಯದಿಂದ ಜಿನದತ್ತನೆಂಬ ವೈಶ್ಯಪುತ್ರನು ಅವಳನ್ನು ಮದುವೆಯಾದರೂ ಅವಳ ದೇಹದ ವಾಸನೆಯಿಂದಾಗಿ ಅವಳಿಂದ ದೂರವಿರುತ್ತಿದ್ದನು. ಒಂದು ದಿನ ಅವಳು ಉಪವಾಸವಿದ್ದು, ಕ್ಷಾಂತಾ ಎಂಬ ಆರ್ಯಿಕೆಗೆ ಆಹಾರದಾನ ಮಾಡಿದಳು. ಆಕೆ ನಿರೂಪಿಸಿದ ವೈರಾಗ್ಯಹೇತುವಾದ ಒಂದು ಭವಾವಳಿ ವೃತ್ತಾಂತವನ್ನು ಕೇಳಿದ ಮೇಲೆ ತಾನು ಸಹ ವಿರಕ್ತೆಯಾಗಿ ಅದೇ ಆರ್ಯಿಕೆಯಲ್ಲಿ ದೀಕ್ಷೆಗೊಂಡಳು. ತಪಸ್ಸಿನಿಂದ ಅವಳ ಶರೀರ ಕ್ಷೀಣಿಸಿತು. ಒಮ್ಮೆ ಅದೇ ಊರಿನ ವಸಂತಸೇನೆ ಎಂಬ ಗಣಿಕೆ ಕಾಮಿಜನರಿಂದ ಸುತ್ತುವರಿದಿದ್ದುದನ್ನು ನೋಡಿ, ಅನ್ಯಜನ್ಮದಲ್ಲಿ ತನಗೂ ಅಂತಹ ಸೌಭಾಗ್ಯವು ದೊರೆಯಲೆಂದು ನಿದಾನಮಾಡಿದಳು ; ಆಯುರಂತ್ಯದಲ್ಲಿ ಸತ್ತು, ಆರಣ ಅಚ್ಯುತ ಕಲ್ಪಗಳಲ್ಲಿಯ ತನ್ನ ಪೂರ್ವಭವದ ಪತಿ ಸೋಮಭೂತಿದೇವನಿಗೆ ದೇವಿಯಾದಳು. ಸೋಮದತ್ತಾದಿಗಳು ಸ್ವರ್ಗಚ್ಯುತರಾದ ಮೇಲೆ ಪಾಂಡುವಿಗೆ ಕುಂತಿಯಲ್ಲಿ ಯುಧಿಷ್ಠಿರ ಭೀಮಸೇನ ಅರ್ಜುನರೆಂಬವರಾದರು ; ಧನಶ್ರೀ ಮಿತ್ರಶ್ರೀ ಜೀವರಾದ ಜೀವರು ಅದೇ ಪಾಂಡುವಿಗೆ ಮಾದ್ರಿಯಲ್ಲಿ ನಕುಲ ಸಹದೇವರಾದರು ; ನಾಗಶ್ರೀ ಚರ ಸುಕುಮಾರಿಕಾ ಜೀವದ ದೇವಿ ದ್ರುಪದ-ದೃಢರಥೆಯರಿಗೆ ದ್ರೌಪದಿಯೆಂಬ ಹೆಸರಿನ ಮಗಳಾಗಿ ಹುಟ್ಟಿದಳು. ಪೂರ್ವಭವ ಸ್ನೇಹದಿಂದ ದ್ರೌಪದಿ ಅರ್ಜುನರು ಒಂದಾದರು. ಯುಧಿಷ್ಠಿರ ಭೀಮಾರ್ಜುನರು ಇದೇ ಜನ್ಮದಲ್ಲಿ ಮೋಕ್ಷಕ್ಕೆ ಹೋಗುವರು ; ನಕುಲ ಸಹದೇವರು ಸರ್ವಾರ್ಥಸಿದ್ಧಿಗೆ ಸಲ್ಲುವರು ; ದ್ರೌಪದಿ ಆರಣಾಚ್ಯುತಕಲ್ಪಗಳಲ್ಲಿ ದೇವನಾಗಿ ಆ ಮೇಲೆ ಮನುಷ್ಯಭವ ಪಡೆದು ಮೋಕ್ಷಕ್ಕೆ ಸಲ್ಲುವಳು.

ಹೀಗೆ ಪಾಂಡವರು ತಮ್ಮ ಪೂರ್ವಭವ ಕಥನವನ್ನು ಆಲಿಸಿ ವೈರಾಗ್ಯಗೊಂಡು ನೇಮಿನಾಥನ ಬಳಿಯಲ್ಲಿ ಜಿನದೀಕ್ಷೆಗೊಂಡರು. ಕುಂತಿಯೂ ದ್ರೌಪದಿ ಸುಭದ್ರೆಯರೂ ರಾಜೀಮತಿ ಆರ್ಯಿಕೆಯ ಹತ್ತಿರ ತಪಸ್ಸಿಗೆ ನಿಂತರು. ರತ್ನತ್ರಯಗಳು ವ್ರತಸಮಿತಿಗಳು ಮುಂತಾದವುಗಳಿಂದ ಕೂಡಿ ಆತ್ಮಸ್ವರೂಪವನ್ನು ಧ್ಯಾನಿಸುತ್ತ ಪಾಂಡವಾದಿಗಳು ತಪಸ್ಸು ಮಾಡಿದರು. ಬಳಿಕ ಒಟ್ಟಾಗಿ ಪೃಥ್ವಿಯಲ್ಲಿ ವಿಹಾರಿಸುತ್ತಿದ್ದರು.

ಹಿಗಗಿರಲು, ನೇಮಿನಾಥನು ಉತ್ತರಾಪಥದಿಂದ ಸುರಾಷ್ಟ್ರ ದೇಶಕ್ಕೆ ಹೋಗಿ, ಅಲ್ಲಿಂದ ದಕ್ಷಿಣದಲ್ಲಿ ವಿಹಾರಿಸುತ್ತ, ಕೊನೆಗೆ ಊರ್ಜಯಂತಗಿರಿಯಲ್ಲಿ ನಿರ್ವಾಣ ಹೊಂದಿದನು. ಪಾಂಡವ ಮುನಿಗಳು ಆ ವಿಷಯವನ್ನು ತಿಳಿದು ಅಲ್ಲಿಗೆ ಬಂದು ತಾವೂ ಪ್ರತಿಮಾಯೋಗದಲ್ಲಿ ನಿಂತರು. ಅಲ್ಲಿಗೆ ಪಾಂಡವರು ಬಂದರೆಂಬ ಸುದ್ದಿ ತಿಳಿಯುತ್ತಲೂ ದುರ್ಯೋಧನನ ವಂಶದ ಕ್ಷುಯವರೋಧನನೆಂಬವನು ಅವರಿಗೆ ಉಪ ಸರ್ಗವನ್ನುಂಟು ಮಾಡಲೆಂದು ಬಂದನು. ತಪ್ತಲೋಹದ ಮುಕುಟಾದ್ಯಲಂಕಾರಗಳನ್ನು ಮಾಡಿಸಿ, ಅವನ್ನು ಚೆನ್ನಾಗಿ ಬೆಂಕಿಯಲ್ಲಿ ಕಾಯಿಸಿ, ಅವುಗಳನ್ನು ಅವರಿಗೆ ತೊಡಿಸಿದನು.

ಅವರು ಆ ದಾಹೋಪಸರ್ಗವನ್ನು ತಣ್ಣಗೆ ತಾಳಿಕೊಂಡರು. ಈಗ ಯುಧಿಷ್ಠಿರ ಭೀಮಾರ್ಜುನರು ಕರ್ಮಕ್ಷಯ ಮಾಡಿಕೊಂಡು ಮೋಕ್ಷಕ್ಕೆ ಸಂದರು. ನಕುಲ ಸಹದೇವರು ಸರ್ವಾರ್ಥಸಿದ್ಧಿಯಲ್ಲಿ ಹುಟ್ಟಿದರು.

ಈವರೆಗೆ ಪುನ್ನಾಟ ಸಂಘೀಯ ಜಿನಸೇನಾಚಾರ್ಯರ 'ಹರಿವಂಶ ಪುರಾಣ' ವನ್ನು ಆಧರಿಸಿ ಜೈನಭಾರತ ಕಥೆಯನ್ನು ಸಂಗ್ರಹಿಸಲಾಯಿತು. ಈ ಮೂಲದ ಭಾರತ ಕಥೆಯನ್ನು ಜೈನ ಸಂಪ್ರದಾಯದ ಪ್ರಮುಖ ಪ್ರತಿನಿಧಿಯನ್ನಾಗಿ ತಿಳಿಯಬಹುದು. ಇದು ಅತಿಪ್ರಾಚೀನವಾದುದು, ಕಾಲದ ದೃಷ್ಟಿಯಿಂದ ; ವಿಸ್ತಾರವಾದುದು, ಸಮಗ್ರವಾದುದು ಹಾಗೂ ಸನ್ನಿವೇಶರಚನೆ ಪಾತ್ರಪೋಷಣೆ ರಸನಿಷ್ಪಾದನಗಳ ನೆಲೆಯಲ್ಲಿ ಸ್ವಾರಸ್ಯಕರವಾದುದು, ಕಥೆಯ ದೃಷ್ಟಿಯಿಂದ. ಹಾಗೆಂದೇ ಮೇಲೆ ಈ ಮೂಲದ ಕಥೆಯ ಸಂಗ್ರಹವನ್ನೇ ಕೊಟ್ಟಿದೆ. ಆದರೆ ಕೆಲವು ಪ್ರಮುಖಘಟ್ಟಗಳಿಗೆ, ಅವುಗಳೊಳಗಿನ ಸಣ್ಣಪುಟ್ಟ ವಿವರಗಳಿಗೆ ಸಂಬಂಧಿಸಿದ ಹಾಗೆ, ಗುಣಭದ್ರರ ಮತ್ತು ಇತರರ ಮಹಾಪುರಾಣ ಗ್ರಂಥಗಳ ನಡುವೆ ವಸ್ತು ಮತ್ತು ಆನುಪೂರ್ವಿಗಳಲ್ಲಿ ಸಾಕಷ್ಟು ವ್ಯತ್ಯಾಸಗಳನ್ನು ಗಮನಿಸಬಹುದಾಗಿದೆ ; ಸಂಕ್ಷಿಪ್ತತೆಯಂತೂ ಅಲ್ಲಿಯ ಆವಶ್ಯ ಲಕ್ಷಣವಾಗಿದೆ. ಇದೇ ಮಾತು ಶ್ವೇತಾಂಬರ ಸಂಪ್ರದಾಯದ ಮಹಾಪುರಾಣಗಳಿಗೆ ಸಹ ಒಪ್ಪುತ್ತದೆ. ಪಾಂಡವ ಚರಿತ್ರೆಗಳೆಂಬ ಸ್ವತಂತ್ರ ಗ್ರಂಥ ಸಮುದಾಯಕ್ಕೆ ವಸ್ತು ವಿಸ್ತಾರ ಒಪ್ಪುತ್ತದೆಯೆನ್ನಬೇಕು. ಕನ್ನಡದಲ್ಲಿ ಚಾವುಂಡರಾಯ ಪುರಾಣವನ್ನು ಒಳಕೊಂಡ ಹಾಗೆ ಎಲ್ಲ ನೇಮಿಚರಿತ್ರೆಗಳಲ್ಲಿಯೂ ಜಿನಸೇನ ಗುಣಭದ್ರರ ರಚನೆಗಳೊಂದಿಗೆ ತುಲನೆ ಮಾಡಿ ನೋಡಿದಾಗ ಆಗಲಿ, ತಮ್ಮ ತಮ್ಮಲ್ಲಿಯೇ ಅವನ್ನು ಹೋಲಿಸಿ ನೋಡಿದಾಗ ಆಗಲಿ ಹೀಗೆಯೇ ವಸ್ತು ಮತ್ತು ಆನುಪೂರ್ವಿಗಳಲ್ಲಿಯ ವ್ಯತ್ಯಾಸಗಳನ್ನು ಗಮನಿಸಬಹುದಾಗಿದೆ ; ಈ ವ್ಯತ್ಯಾಸಗಳು ಲೋಪ ಆಗಮ ಆದೇಶಗಳೆಂಬ ಮೂರು ವಿಧಗಳಲ್ಲಿಯೂ ಇರುವುದು ಸಾಧ್ಯ. ಅಲ್ಲದೆ ಇವುಗಳ ವ್ಯಾಪ್ತಿ ಅಂಕಿತನಾಮಗಳಿಂದ ಹಿಡಿದು ಸನ್ನಿವೇಶಗಳ ಅಥವಾ ಮುಖ್ಯ ಕಥಾಘಟ್ಟಗಳ ತನಕ ಎನ್ನಬಹುದು. ಇವುಗಳ ವಿಸ್ತೃತ ಪರಿಶೀಲನೆ ಗಾಢವಾದ ಅಧ್ಯಯನದ ಸೀಮೆಗೆ ಸೇರಿದುದಾಗಿದೆ.

ಪಂಪ ರನ್ನರ ಕನ್ನಡ ಭಾರತಗಳು ವೈದಿಕ ಸಂಪ್ರದಾಯವನ್ನೇ ಬಲುಮಟ್ಟಿಗೆ ಅನುಸರಿಸಿದವು. ಆದರೆ ಇವುಗಳಲ್ಲಿ ವಿರಳವಾಗಿ ಜೈನಭಾರತದ ಸ್ಪಷ್ಟ, ಅಸ್ಪಷ್ಟ ಪ್ರಭಾವವನ್ನು ಗುರುತಿಸಬಹುದಾಗಿದೆ. ಮುಖ್ಯವಾಗಿ ಪಂಪಭಾರತದಲ್ಲಿ, ಕೃಷ್ಣನ ಪಾತ್ರದ ಮಹತ್ತ್ವ ತಗ್ಗಿರುವುದು, ದ್ರೌಪದಿ ಅರ್ಜುನನೊಬ್ಬನಿಗೇ ಪತ್ನಿಯೆಂಬುದು, ಕಥೆಯಲ್ಲಿ ಅರ್ಜುನನಿಗೆ ಪ್ರಾಶಸ್ತ್ಯ ಸಂದಿರುವುದು ಮೊದಲಾದ ಪ್ರಮುಖ ವ್ಯತ್ಯಾಸಗಳಲ್ಲಿಯೇ ಆ ಪ್ರಭಾವವನ್ನು ಗಮನಿಸಬಹುದು. ಕನಕಸ್ವಾಮಿ–ಕೀರ್ತಿಗೆಯ ಕಥೆಯಂತಹ ಸಣ್ಣ ವೃತ್ತಾಂತಗಳ ನಿರ್ವಹಣದಲ್ಲಿಯೂ ಇದನ್ನು ಗಮನಿಸಬಹುದು.

ಶ್ವೇತಾಂಬರ ಸಂಪ್ರದಾಯದ ಪ್ರಮುಖ ಪ್ರತಿನಿಧಿಯನ್ನಾಗಿ ಹೇಮಚಂದ್ರನ 'ತ್ರಿಷಷ್ಟಿ ಶಲಾಕಾಪುರುಷ ಚರಿತ್ರ' ವನ್ನು ಎಂದಿನಿಂದಲೂ ತಿಳಿಯುತ್ತ ಬಂದಿದೆ. ಇಲ್ಲಿ ಬರುವ ಕೌರವ-ಪಾಂಡವರ ಚರಿತ್ರೆಯ ಕಥಾಗತಿ ಕೆಲವು ಪ್ರಮುಖವಾದ ಘಟ್ಟಗಳ ಮಟ್ಟಿಗೆ ದಿಗಂಬರ ಸಂಪ್ರದಾಯದ ಕಥಾಗತಿಗೆ ಅನುಸಾರವಾಗಿಯೇ ಇರುವುದಾದರೂ ಒಂದೊಂದೂ ಘಟ್ಟದ ಆಂತರಿಕ ವಿವರಗಳಲ್ಲಿ ಗಮನಾರ್ಹವಾದ ವ್ಯತ್ಯಾಸಗಳನ್ನೂ ಕಾಣಬಹುದಾಗಿದೆ. ಕೆಲವು ಪ್ರಮುಖವಾದ ಘಟ್ಟಗಳೇ ಇಲ್ಲಿ ಲುಪ್ತವಾಗಿರುವುದು ಸಂಪ್ರದಾಯಗಳ ಪ್ರತ್ಯೇಕತೆಯನ್ನು ಎತ್ತಿ ತೋರಿಸುವ ಸಂಗತಿಯಾಗಿದೆ. ಈ ಸಂಪ್ರದಾಯದ ಕಥಾಸ್ವರೂಪದ ಪ್ರಮುಖ ವ್ಯತ್ಯಾಸಗಳನ್ನು ಮಾತ್ರ ಇಲ್ಲಿ ಎತ್ತಿ ತೋರಿಸಬಹುದಾಗಿದೆ.

ಮೊದಲನೆಯದು ಕೌರವ-ಪಾಂಡವರ ಜನನ ವಿಚಾರ : ವೃಷಭಸ್ವಾಮಿಯ ಮಗ ಕುರು ; ಆತನಿಂದಲೇ ಕುರುಕ್ಷೇತ್ರ ಎಂದು ಹೆಸರಾಯಿತು. ಕುರುವಿನ ಮಗ ಹಸ್ತಿ ; ಈತನಿಂದಲೇ ಹಸ್ತಿನಾಪುರ ಎಂದು ಹೆಸರು ಬಂತು. ಹಸ್ತಿಯ ಸಂತತಿಯಲ್ಲಿ ಅನಂತವೀರ್ಯ ಎಂಬುವನು ದೊರೆಯಾದನು. ಅವನಿಂದ ಕೃತವೀರ್ಯ ಮತ್ತು ಅನಂತರ ಚಕ್ರಭೃತ್ ಸುಭೂಮ. ಆ ಬಳಿಕ ಎಷ್ಟೋ ಮಂದಿ ಆಗಿ ಹೋದರು. ಶಾಂತನುವಿಗೆ ಗಂಗೆಯಿಂದ ಭೀಷ್ಮ ಹುಟ್ಟಿದನು ; ಸತ್ಯವತಿಯಿಂದ ಚಿತ್ರಾಂಗದ ಚಿತ್ರವೀರ್ಯರೆಂಬವರು ಜನಿಸಿದರು. ಚಿತ್ರವೀರ್ಯನ ಪತ್ನಿಯರಾದ ಅಂಬಿಕಾ ಅಂಬಾಲಿಕಾ ಮತ್ತು ಅಂಬೆಯರಲ್ಲಿ ಕ್ರಮವಾಗಿ ಧೃತರಾಷ್ಟ್ರ, ಪಾಂಡು ಮತ್ತು ವಿದುರರೆಂಬ ಮಕ್ಕಳು ಹುಟ್ಟಿದರು.

ಧೃತರಾಷ್ಟ್ರ ಪ್ರಭುವಾದನು. ಅವನಿಗೆ ಗಂಧಾರದ ದೊರೆ ಸುಬಲನ ಪುತ್ರ ಶಕುನಿಯ ೮ ಮಂದಿ ಸೋದರಿಯರನ್ನು ಕೊಟ್ಟು ಲಗ್ನವಾಯಿತು. ಗಾಂಧಾರಿಯಲ್ಲಿ ದುರ್ಯೋಧನಾದಿಗಳು ಹುಟ್ಟಿದರು. ಪಾಂಡುವಿಗೆ ಸಮುದ್ರವಿಜಯಾದಿ ದಾಶಾರ್ಹಕ ಸೋದರಿಯಾದ ಕುಂತಿಯಿಂದ ಯುಧಿಷ್ಠಿರ ಭೀಮಾರ್ಜುನರೂ ಶಲ್ಯನ ಸೋದರಿ ಮಾದ್ರಿಯಿಂದ ನಕುಲ ಸಹದೇವರೂ ಮಕ್ಕಳಾಗಿ ಜನಿಸಿದರು.

ಈ ನಿರೂಪಣೆಯಲ್ಲಿ ಕುರುವಂಶದ ಮೂಲಪುರುಷನನ್ನಾಗಿ ವೃಷಭಸ್ವಾಮಿಯನ್ನೇ ಹೇಳಿರುವುದು, ಧೃತರಾಷ್ಟ್ರಾದಿಗಳು ಚಿತ್ರವೀರ್ಯನ ಪುತ್ರರೆಂದು ಗುರುತಿಸಿರುವುದು ಇಂತಹ ಮುಖ್ಯ ವ್ಯತ್ಯಾಸಗಳನ್ನು ಗಮನಿಸಬೇಕು. ಮೂಲಭಾರತಕ್ಕೆ ಹತ್ತಿರವಾಗುವ ಕೆಲವಂಶಗಳು ಇಲ್ಲಿವೆ. ಆದರೆ ಬಹುದೂರ ಈ ಸಾದೃಶ್ಯವನ್ನು ಎಳೆಯುವಂತಿಲ್ಲ.

ದ್ರೌಪದಿಯ ಸ್ವಯಂವರ : ಒಮ್ಮೆ ದ್ರುಪದನ ದೂತನೊಬ್ಬನು ಕಾಂಪಿಲ್ಯ ನಗರದಿಂದ ಬಂದು ಪಾಂಡುವನ್ನು ಸಂದರ್ಶಿಸಿ, ದ್ರುಪದ ಪುತ್ರಿ ದ್ರೌಪದಿಯ ಸ್ವಯಂವರಕ್ಕೆ ಆತನು ಸಪುತ್ರಕನಾಗಿ ಬರಬೇಕೆಂದು ಆಹ್ವಾನವನ್ನಿತ್ತನು. ಅಲ್ಲಿಗೆ ದಶಾರ್ಹರೂ ಕರ್ಣ ಸುಯೋಧನಾದಿಗಳೂ ಶಿಶುಪಾಲನೂ ಆಹ್ವಾನಿತರಾಗಿದ್ದರು. ಸ್ವಯಂವರ

ಏರ್ಪಾಡಾಯಿತು. ಶುಚಿರ್ಭೂತೆಯೂ ಅಲಂಕೃತೆಯೂ ಆಗಿ ಸ್ವಯಂವರಮಂಟಪಕ್ಕೆ ಬಂದ ದ್ರೌಪದಿಗೆ ಅಲ್ಲಿಯ ರಾಜಪುತ್ರರನ್ನು ಪರಿಚಯಿಸಲಾಯಿತು. ಆಕೆ ಪಾಂಡವರಲ್ಲಿಗೆ ಬಂದಾಗ ಆಕರ್ಷಿತಳಾಗಿ, ಸ್ವಯಂವರಮಾಲೆಯನ್ನು ಪಾಂಡವರೈವರ ಕೊರಳಿಗೆ ಏಕಕಾಲದಲ್ಲಿ ಬೀಳುವ ಹಾಗೆ ಎಸೆದಳು. ಅದರಿಂದ ದೊರೆಮಕ್ಕಳು ಅಚ್ಚರಿಪಟ್ಟರು. ಆ ವೇಳೆಗೆ ಒಬ್ಬ ಚಾರಣಮುನಿ ಅಲ್ಲಿಗೆ ಬಂದನು. ಕೃಷ್ಣನು ಮೊದಲಾಗಿ ಅಲ್ಲಿಯ ರಾಜಪುತ್ರರು ದ್ರೌಪದಿ ಐವರನ್ನು ವರಿಸಲು ಸಾಧ್ಯವೇ ಎಂದು ಪ್ರಶ್ನಿಸಿದರು. ಆಗ ಆ ಮುನಿ ಅದು ಅವಳ ಪೂರ್ವಭವದ ಕರ್ಮಫಲವೆಂದು ತಿಳಿಸಿ, ಆಕೆಯ ಪೂರ್ವಭವಗಳನ್ನು ನಿರೂಪಿಸಿದನು.

ದ್ರೌಪದಿಯ ಪೂರ್ವಭವಗಳು ಪಾಂಡವರೈವರ ಪೂರ್ವಭವಗಳೊಡಗೂಡಿ ಸಾಕಷ್ಟು ಕಥಾವ್ಯತ್ಯಾಸಗಳೊಂದಿಗೆ ಹರಿವಂಶ ಮತ್ತು ಉತ್ತರಪುರಾಣಗಳಲ್ಲಿ ನೇಮಿನಾಥ ಪ್ರಣೀತವಾಗಿ ಕೌರವ–ಪಾಂಡವರ ಕಥಾಂತ್ಯದಲ್ಲಿ ಬಂದಿದ್ದರೆ, ಹೇಮಚಂದ್ರನ ಈ ಭಿನ್ನ ಸಂಪ್ರದಾಯದ ಕಥೆಯಲ್ಲಿ ಸ್ವಯಂವರ ಭಾಗಕ್ಕೆ ಹೊಂದಿಕೊಂಡೇ ಬಂದಿರುವುದು ಪ್ರಮುಖ ಕಥಾಸಂವಿಧಾನದ ವ್ಯತ್ಯಾಸವಾಗಿದೆ. ಅಲ್ಲದೆ ಕುರುಕುಲೋತ್ಪತ್ತಿಯ ಬಳಿಕ ಬರಬೇಕಾಗಿದ್ದ ಪಾಂಡವ–ಕೌರವರ ಬಾಲ್ಯ, ವಿದ್ಯಾಭ್ಯಾಸ, ರಾಜ್ಯದ ಹಂಚಿಕೆ, ಕೌರವರ ಅಸಹನೆ, ಲಾಕ್ಷಾಗೃಹ ದಹನದ ಸಂದರ್ಭ, ಪಾಂಡವರ ಪ್ರಯಾಣವಿವರ ಇವಾವುವೂ ಹೇಮಚಂದ್ರನ ಕೃತಿಯ ಈ ಭಾಗದಲ್ಲಿ ಬರುವುದಿಲ್ಲ ಎನ್ನುವುದು ಬಹುಮುಖ್ಯ ಕಥಾಲೋಪವೆಂದೇ ಹೇಳಬೇಕು. ದ್ರೌಪದಿಯ ಸ್ವಯಂವರ ಸಂದರ್ಭದ ವಿವರಗಳಲ್ಲಿ ಪಣದ ಏರ್ಪಾಡು ಇಲ್ಲಿ ಕಾಣಿಸುವುದೇ ಇಲ್ಲ ಎನ್ನುವುದನ್ನೂ ದ್ರೌಪದಿ ಇಷ್ಟಪಟ್ಟು ಪಾಂಡವರೈವರಿಗೂ ಮಾಲೆ ಸೂಡಿದಳು ಎನ್ನುವುದನ್ನೂ ಅತ್ಯಂತ ಗಮನಾರ್ಹವಾದವು ಎಂದು ತಿಳಿಯಬಹುದು. ಇದು ದಿಗಂಬರ ಸಂಪ್ರದಾಯದಲ್ಲಿ ಖಚಿತವಾಗಿ ನಿರೂಪಿತವಾಗಿರುವ ಅರ್ಜುನ–ದ್ರೌಪದಿಯರ ವಿಶಿಷ್ಟ ದಾಂಪತ್ಯದ ನಿಲುವಿಗೆ ವಿರುದ್ಧವಾಗಿರುವುದು ಸ್ವಾರಸ್ಯಕರವಾದ ಕಥಾಂಶವಾಗಿದೆ.

ದ್ರೌಪದಿಯ ಪೂರ್ವಭವ ವೃತ್ತಾಂತಗಳು : ದ್ರೌಪದಿಯ ಸ್ವಯಂವರ ಸಮಯದಲ್ಲಿಯೇ ಅಲ್ಲಿಗೆ ಬಂದ ಚಾರಣ ಮುನಿಯನ್ನು ಕೃಷ್ಣಾದಿಗಳು ಪ್ರಶ್ನಿಸಲಾಗಿ, ಆಕೆ ಐವರನ್ನು ವರಿಸುವಂತಾದುದು ಆಕೆಯ ಪೂರ್ವ ಜನ್ಮಗಳ ಕರ್ಮಫಲವೆಂಬುದಾಗಿ ಆತ ಆರಂಭದಲ್ಲಿಯೇ ತಿಳಿಸಿ, ಬಳಿಕ ಆ ಜನ್ಮಗಳ ಕಥನವನ್ನು ನೀಡಿದನು.

ಚಂಪಾನಗರದಲ್ಲಿ ಸೋಮದೇವ ಸೋಮಭೂತಿ ಸೋಮದತ್ತರೆಂಬ ಮೂವರು ಬ್ರಾಹ್ಮಣಕುಮಾರರಿದ್ದರು. ಅವರಿಗೆ ಅನುಕ್ರಮವಾಗಿ ನಾಗಶ್ರೀ, ಭೂತಶ್ರೀ ಮತ್ತು ಯಕ್ಷಶ್ರೀ ಎಂಬವರು ಪತ್ನಿಯರು. ಆತ್ಮೀಯರಾಗಿದ್ದ ಅವರು ಸರದಿಯಂತೆ

ಒಬ್ಬೊಬ್ಬರ ಮನೆಯಲ್ಲಿ ಒಂದೊಂದು ದಿನ ಊಟಮಾಡುತ್ತಿದ್ದರು. ಒಂದು ದಿನ ಸೋಮದೇವನ ಸರದಿ ಬಂತು. ನಾಗಶ್ರೀ ಬೇರೆ ಅಡುಗೆಗಳ ಜೊತೆಗೆ ಕಹಿಸೋರೆಯ ಪದಾರ್ಥವನ್ನೂ ಮಾಡಿದಳು. ಸ್ವಲ್ಪ ರುಚಿ ನೋಡಿ ಕಹಿಯೆಂದು ತಿಳಿದಾಗ ಅದನ್ನು ಬೇರೆಯಿಟ್ಟು ಉಳಿದ ಅಡುಗೆಗಳನ್ನು ಬಂದವರಿಗೆಲ್ಲ ಬಡಿಸಿ ಕಳಿಸಿಕೊಟ್ಟಳು. ಅಂದು ಆಚಾರ್ಯ ಧರ್ಮಘೋಷರ ಶಿಷ್ಯ ಧರ್ಮರುಚಿ ತನ್ನ ಮಾಸೋಪವಾಸದ ಪಾರಣೆಯ ಸಲುವಾಗಿ ನಾಗಶ್ರೀಯ ಮನೆಗೆ ಬಂದನು. ನಾಗಶ್ರೀ ಆತನಿಗೆ ತೆಗೆದಿಟ್ಟ ಕಹಿಸೋರೆಯ ಪದಾರ್ಥವನ್ನು ಬಡಿಸಿದಳು. ಅಪರಿಚಿತವಾಗಿದ್ದ ಆ ಅಡುಗೆಯನ್ನು ತನ್ನ ಗುರುಗಳ ಗಮನಕ್ಕೆ ಆ ಮುನಿ ತಂದಾಗ, ಅವರು ಅದರ ವಾಸನೆ ನೋಡಿ ಅದನ್ನು ತ್ಯಜಿಸಿ ಪರಿಚಿತವಾದ ಅಡುಗೆಯನ್ನಷ್ಟೇ ಸ್ವೀಕರಿಸುವಂತೆ ತಿಳಿಸಿದರು. ಧರ್ಮರುಚಿಯ ಕೈಯಿಂದ ಕೆಳಗೆಬಿದ್ದ ಆ ಕಹಿ ಪದಾರ್ಥದ ಒಂದು ಹನಿಗೆ ಮುಸುರಿದ ಇರುವೆಗಳೆಲ್ಲ ಸತ್ತುವು. ಇದರಿಂದ ಚಿಂತಿತನಾದ ಆ ಮುನಿ, ಜೀವಹಾನಿಯನ್ನು ತಡೆಯಲು ತಾನೇ ಆ ನಿಷೇಧಿತ ಪದಾರ್ಥವನ್ನೆಲ್ಲ ತಿಂದು ಸತ್ತನು ; ಸರ್ವಾರ್ಥಸಿದ್ಧಿ ವಿಮಾನದಲ್ಲಿ ಅಹಮಿಂದ್ರನಾಗಿ ಹುಟ್ಟಿದನು. ಧರ್ಮರುಚಿಯ ಮೃತಿ ಗುರುಗಳಿಗೆ ಶಿಷ್ಯರಿಂದ ತಿಳಿಯಿತು. ಇದು ನಾಗಶ್ರೀಯ ಕಾರ್ಯ ಎಂದು ಅವರು ಅರಿತುಕೊಂಡರು. ಮುನಿಗಳೂ ಆರ್ಯಿಕೆಯರೂ ಕ್ರುದ್ಧರಾಗಿ ಸೋಮದೇವಾದಿಗಳ ಗಮನಕ್ಕೆ ಈ ವಿಷಯವನ್ನು ತಂದರು. ಅವರು ನಾಗಶ್ರೀಯನ್ನು ಮನೆಯಾಚೆಗೆ ಅಟ್ಟಿದರು. ಆಕೆ ಅಲ್ಲಿ ಇಲ್ಲಿ ಅಲೆಯುತ್ತ ರೋಗಿಷ್ಠೆಯಾಗಿ ಅತಿವಿಪನ್ನಾವಸ್ಥೆಯಲ್ಲಿ ಸತ್ತಳು. ಬಳಿಕ ಬೇರೆ ಬೇರೆ ನರಕಗಳಲ್ಲಿ ಸತ್ತು ಹುಟ್ಟಿ, ಕರ್ಮ ಸವೆದು, ಚಂಪಾನಗರದ ಸಾಗರದತ್ತ-ಸುಭದ್ರೆಯರೆಂಬ ವೈಶ್ಯದಂಪತಿಗಳಿಗೆ ಸುಕುಮಾರಿಕೆಯೆಂಬ ಮಗಳಾಗಿ ಹುಟ್ಟಿದಳು.

ಸುಕುಮಾರಿಕೆ ಪ್ರಾಪ್ತವಯಸ್ಕಳಾಗಿ ಒಂದು ದಿನ ಮನೆಯ ಮಾಳಿಗೆಯಲ್ಲಿ ಚೆಂಡಾಡುತ್ತಿದ್ದಾಗ ಅದೇ ಊರಿನ ಜಿನದತ್ತನೆಂಬ ಒಬ್ಬ ಧನಿಕ ವ್ಯಾಪಾರಿಯ ಕಣ್ಣಿಗೆ ಬಿದ್ದಳು. ತನ್ನ ಮಗನಿಗೆ ಅವಳು ತಕ್ಕ ವಧುವೆಂದು ಅವನಿಗೆ ತೋರಿತು. ಜಿನದತ್ತನು ಸಾಗರದತ್ತನನ್ನು ಕಂಡು ಅವನಲ್ಲಿ ಆ ವಿಷಯ ಪ್ರಸ್ತಾಪಿಸಿದನು. ಅವನು "ಮನೆಯಳಿಯನಾಗಿ ಜಿನದತ್ತನ ಮಗ ಸಾಗರ ಇರಲು ಒಪ್ಪಿಕೊಂಡರೆ ಆಗಬಹುದು" ಎಂದನು. ಅದು ಹಾಗೆಯೇ ಆಯಿತು. ಆದರೆ ಮಲಗುವ ಮನೆಯಲ್ಲಿ ಸುಕುಮಾರಿಕೆಯ ಸ್ಪರ್ಶ ಸಾಗರನಿಗೆ ಕೆಂಡ ಮುಟ್ಟಿದಂತೆಯೇ ಆಯಿತು. ಅವಳು ನಿದ್ರಿಸುವ ಸಮಯದಲ್ಲಿ ಅವನು ಹೇಗೋ ತನ್ನ ಮನೆಗೆ ಹೋಗಿಬಿಟ್ಟನು. ಎಚ್ಚತ್ತ ಸುಕುಮಾರಿಕೆ ಪತಿಯನ್ನು ಕಾಣದೆ ಅತ್ತಳು. ಪರಿಚರ್ಯೆಯವಳಿಂದ ಮಾರನೆಯ ಬೆಳಗ್ಗೆ ಆಕೆಯ ತಂದೆ ತಾಯಿಗಳಿಗೆ ನಡೆದ ವಿಷಯ ತಿಳಿಯಿತು. ವೈಶ್ಯ ಸಾಗರದತ್ತನು ಜಿನದತ್ತನನ್ನು ತರಾಟೆಗೆ ತೆಗೆದುಕೊಂಡನು. ಜಿನದತ್ತನು ಮಗನಿಗೆ ತಿಳಿವಳಿಕೆ ಹೇಳಿ, ಮಾವನ ಮನೆಗೆ ಮರಳುವಂತೆ ತಿಳಿಸಿದನು ; ಆದರೆ ಮಗ ಸಾಗರನು "ಬೆಂಕಿಗೆ ಬೇಕಾದರೆ ಬಿದ್ದೇನು,

ಸುಕುಮಾರಿಕೆಯ ಸಹವಾಸ ನನ್ನಿಂದ ಆಗದು" ಎಂದು ಖಂಡಿತವಾಗಿ ನುಡಿದನು. ನಿರಾಶೆಗೊಂಡು ಹಿಂದಿರುಗಿದ ಸಾಗರದತ್ತನು, ಮಗಳಿಗೆ ಮರುಮದುವೆ ಮಾಡುವುದಾಗಿ ಭರವಸೆ ಕೊಟ್ಟನು. ಹಾಗೆಯೇ ಒಮ್ಮೆ ಚಿಂದಿಯುಟ್ಟ ದರಿದ್ರ ಭಿಕ್ಷುಕನೊಬ್ಬನನ್ನು ಬೀದಿಯಲ್ಲಿ ಕಂಡು, ಬರಮಾಡಿಕೊಂಡು, ಶುಚಿರ್ಭೂತನನ್ನಾಗಿ ಮಾಡಿ ಅವನಿಗೆ ತನ್ನ ಮಗಳನ್ನಿತ್ತು ಅವಳೊಂದಿಗೆ ನೆಮ್ಮದಿಯಿಂದಿರುವಂತೆ ತಿಳಿಸಿದನು. ಆದರೆ ಅವನಿಗೂ ಮಲಗುವ ಮನೆಯಲ್ಲಿ ಸಾಗರನಿಗಾದ ಅನುಭವವೇ ಆಯಿತು. ಅವನು ತನ್ನ ಬಟ್ಟೆಗಳನ್ನು ತೊಟ್ಟು ಓಡಿಹೋದನು. ವಿಷಯ ತಿಳಿದಾಗ ತಂದೆ ಮಗಳನ್ನು ಸಂತೈಸಿ, "ಇವೆಲ್ಲ ಪೂರ್ವಾರ್ಜಿತ ಕರ್ಮಫಲಗಳಲ್ಲದೆ ಬೇರೆಯಲ್ಲ. ದಾನ ಧರ್ಮಗಳನ್ನು ಮಾಡುತ್ತ ಮನೆಯಲ್ಲಿ ತೃಪ್ತಿಯಿಂದಿರು" ಎಂದು ಹೇಳಿದನು. ಆಕೆ ಹಾಗೆಯೇ ನಡೆಯುತ್ತಿದ್ದಳು.

ಒಮ್ಮೆ ಆರ್ಯೆ ಗೋಪಾಲಿಕಾ ಎಂಬವಳಿಗೆ ಆಕೆ ಸತ್ಕಾರಮಾಡಿ, ಅವಳಿಂದ ಧರ್ಮದ ಉಪದೇಶವನ್ನು ಪಡೆದು ವ್ರತಧಾರಣೆ ಮಾಡಿದಳು. ಅವಳೊಂದಿಗೆ ಉಪವಾಸದ ವಿಧಿಗಳನ್ನು ಆಚರಿಸುತ್ತ ಇರತೊಡಗಿದಳು. ಆರ್ಯಿಕೆಯರಿಗೆ ಮೀಸಲಾದುದೆಂದು ಹೇಳಿದರೂ ಕೇಳದೆ ಸೂರ್ಯಾತಪನ ಯೋಗವನ್ನಾಚರಿಸಿ, ಸೂರ್ಯನತ್ತ ನೋಡುತ್ತಿರುವಾಗ ದೇವದತ್ತೆಯೆಂಬ ಗಣಿಕೆ ಐವರು ವಿಟಪುರುಷರಿಂದ ಸೇವಿತಳಾಗಿ ಅಲ್ಲಿ ಸಾಗುವುದು ಕಂಡಿತು. ಆ ಭೋಗವನ್ನು ತಾನೂ ಬಯಸಿ ನಿದಾನದಿಂದ ಮಡಿದಳು. ಸೌಧರ್ಮಕಲ್ಪದಲ್ಲಿ ದೇವತೆಯಾಗಿ ಹುಟ್ಟಿ ಭೂಮಿಗೆ ಬಿದ್ದ ಮೇಲೆ ದ್ರೌಪದಿಯಾದಳು. ಅವಳು ಹಾಗೆ ಹಿಡಿದ ನಿದಾನದ ಫಲವಾಗಿಯೇ ಐವರಿಗೆ ಪತ್ನಿಯಾದಳು.

ಈವರೆಗೆ ಬಂದಿರುವ ನಿರೂಪಣೆ ದಿಗಂಬರ ಸಂಪ್ರದಾಯದ ನಿರೂಪಣೆಗೆ ಒಂದು ರೀತಿಯಲ್ಲಿ ಸದೃಶವಾಗಿಯೇ ಇದ್ದರೂ ವಿವರಗಳಲ್ಲಿಯೂ ವ್ಯಕ್ತಿನಾಮಗಳಲ್ಲಿಯೂ ವಿಪುಲವಾಗಿ ವ್ಯತ್ಯಾಸಗಳನ್ನು ಕಾಣಬಹುದಾಗಿದೆ. ಕೆಲಮಟ್ಟಿಗೆ ಕಥಾಪುಷ್ಟಿ ಶ್ವೇತಾಂಬರ ಸಂಪ್ರದಾಯದ ನಿರೂಪಣೆಯಲ್ಲಿದೆ. ಆದರೆ ಪಾಂಡವರ ಭವಸಂಬಂಧವು ಇಲ್ಲಿ ಅಸ್ಪಷ್ಟವಾಗಿಯೇ ಇರುವುದು ಅಷ್ಟರಮಟ್ಟಿನ ಕೊರತೆ ಎನ್ನಬೇಕು.

ಪಾಂಡವರ ದ್ವಾರಕಾಗಮನ: ಈ ಭಾಗದಲ್ಲಿ ಪಾಂಡವ-ದ್ರೌಪದಿಯರ ವಿವಾಹದ ಸಂಪೂರ್ತಿ, ಬಳಿಕ ಯುಧಿಷ್ಠಿರನಿಗೆ ರಾಜ್ಯವೊಪ್ಪಿಸಿ ಪಾಂಡುವಿನ ಮರಣ, ಮಾದ್ರಿಯ ಸಹ ಮರಣ, ಕೌರವರ ಅಸಹನೆ, ದ್ಯೂತದಲ್ಲಿ ಪಾಂಡವ ಪರಾಜಯ ಮತ್ತು ಅವಿಧೇಯತೆ ಕಾರಣವಾಗಿ ಅವರ ಉಚ್ಚಾಟನೆ ಇತ್ಯಾದಿಗಳ ಕ್ಷಿಪ್ರಗತಿಯ ಕಥಾಗತಿಯಿದ್ದು, ಅಂತ್ಯದಲ್ಲಿ ಪಾಂಡವರು ದ್ವಾರಕೆಗೆ ಬಂದು ಸಮುದ್ರವಿಜಯಾದಿ ದಶಾರ್ಹರ, ಎಂದರೆ ತಮ್ಮ ತಾಯಿಯ ಸೋದರರ ಆಶ್ರಯದಲ್ಲಿ ವಾಸ್ತವ್ಯ ಹೂಡಿದರೆಂಬುದಾಗಿ ನಿರೂಪಣೆಯಿದೆ.

ಈ ಬಂಧು ಸಮಾಗಮ ಸಾಮಾನ್ಯ ವಿವರಗಳಿಂದ ಕೊಂಚ ಬೆಳೆದಿದ್ದರೂ ವಸ್ತುವಿನ ದೃಷ್ಟಿಯಿಂದ ವಿಶೇಷವೇನಿಲ್ಲ. ಆ ಮೊದಲಿನ ಕಥಾಂಶಗಳಲ್ಲಿ ದ್ರೌಪದೀಪರಿಣಯದ ಬಳಿಕ ಪಾಂಡುವಿನ ಮರಣವನ್ನು ಹೇಳಿರುವುದು, ದ್ಯೂತದಲ್ಲಿ ದ್ರೌಪದಿ ಪಣವಾಗಿಡಲ್ಪಟ್ಟು ದುರ್ಯೋಧನನಿಂದ ಭೀಮನ ಭಯಕ್ಕೆ ಅವಳು ಹಿಂದಕ್ಕೆ ಒಪ್ಪಿಸಲ್ಪಟ್ಟಳು ಎಂದಿರುವುದು, ಪಾಂಡವರು ಉಚ್ಚಾಟನೆಯಿಂದ ವನಾಂತರಕ್ಕೆ ತೆರಳಿದರೇದು ಬಂದಿರುವುದು ಗಮನಾರ್ಹವಾದ ಕಥಾವ್ಯತ್ಯಾಸಗಳಾಗಿವೆ. ಆದರೆ ವನವಾಸ ಅಜ್ಞಾತವಾಸದ ವಿವರಗಳೇನೂ ಇಲ್ಲ. ಒಟ್ಟಿನಲ್ಲಿ ಕಥೆಯ ವಿವರಗಳು ವಿಸ್ತಾರವಾಗಿಲ್ಲ ; ಗಂಭೀರವಾಗಿಯೂ ಇಲ್ಲ. ಹರಿವಂಶ-ಉತ್ತರಪುರಾಣಗಳಲ್ಲಿಯ ನಿರೂಪಣೆಗೇ, ಇರುವುದರಲ್ಲಿ ಮೆಚ್ಚುಗೆ ಸಲ್ಲಬೇಕು.

ಕೃಷ್ಣ-ಜರಾಸಂಧ ಸಂಗ್ರಾಮ : ಕೌರವ ಪಾಂಡವರು ಕ್ರಮವಾಗಿ ಮಾಗಧ ಯಾದವರ ಪಕ್ಷನನ್ನು ಕೂಡಿಕೊಂಡು ಪರಸ್ಪರವಾಗಿ ಹೋರಾಡಿದರೆಂಬ ನಿರೂಪಣೆ ದಿಗಂಬರ ಸಂಪ್ರದಾಯದ ಕಥೆಯಲ್ಲಿ ಬಂದಿರುವಂತೆಯೇ ಇಲ್ಲಿಯೂ ಬಂದಿದೆ. ಹೋರಾಟದ ಸಾಮಾನ್ಯ ವಿವರಗಳಿಗೂ ಕೊರತೆಯಿಲ್ಲ. ಅರ್ಜುನನ ವೀರಾತಿಶಯವನ್ನು ಇಲ್ಲಿಯೂ ಎತ್ತಿ ಹಿಡಿದಿದೆ ಅಲ್ಲಿಯ ಹಾಗೆಯೇ ಇಲ್ಲಿಯೂ ಭೀಮ-ದುಶ್ಶಾಸನ, ಸಹದೇವ-ಶಕುನಿ, ನಕುಲ-ಉಲೂಕ, ಅರ್ಜುನ-ದುರ್ಯೋಧನ, ಯುಧಿಷ್ಠಿರ-ಶಲ್ಯರ ಕಾಳಗದ ಸಂದರ್ಭಗಳು ವರ್ಣಿತವಾಗಿವೆ. ಸ್ವಾರಸ್ಯದ ಕಥಾ ವ್ಯತ್ಯಾಸವೆಂದರೆ, ದಿಗಂಬರ ಸಂಪ್ರದಾಯದ ಕಥೆಯಲ್ಲಿ ದುರ್ಯೋಧನ ಕರ್ಣ ಮೊದಲಾದ ಪ್ರಮುಖ ಪ್ರತಿಪಕ್ಷಯೋಧರು ಯುದ್ಧಾಂತ್ಯದಲ್ಲಿ ವೈರಾಗ್ಯಗೊಂಡು ಜಿನದೀಕ್ಷೆಯನ್ನು ಸ್ವೀಕರಿಸಿದರು ಎಂಬುದಾಗಿದ್ದರೆ ಈ ಶ್ವೇತಾಂಬರ ಸಂಪ್ರದಾಯದ ಕಥೆಯಲ್ಲಿ ಮೂಲಭಾರತದ ಕಥಾಗತಿಗೆ ಅನುಸಾರವಾಗಿ ಕರ್ಣನು ಅರ್ಜುನನಿಂದ, ದುರ್ಯೋಧನ ದುಶ್ಶಾಸನರು ಭೀಮನಿಂದ ಹತರಾದರೆಂದು ಹೇಳಿರುವುದೇ ಆಗಿದೆ.

ದ್ರೌಪದಿಯ ಅಪಹರಣ ಮತ್ತು ವಿಮೋಚನ : ಪೂರ್ವಧಾತಕೀ ಖಂಡದ ಭರತಕ್ಷೇತ್ರದ ಅಮರ ಕಂಕಾಪುರಿಯ ಅರಸ ಪದ್ಮನಾಭ ದ್ರೌಪದಿಯನ್ನು ಪಾತಾಳ ಲೋಕದ ದೇವನೊಬ್ಬನ ನೆರವಿನಿಂದ ಅಪಹರಿಸಿ, ಬಳಿಕ ಕೃಷ್ಣನಿಂದಾಗಿ ಹೆದರಿ ಪಾಂಡವರಿಗೆ ಅವಳನ್ನು ಒಪ್ಪಿಸಿದನೆಂಬ ಒಂದು ಜೈನವಿಶಿಷ್ಟವಾದ ಪ್ರಕರಣ ಸಾಕಷ್ಟು ವಿಸ್ತಾರದಲ್ಲಿ ಉಭಯ ಸಂಪ್ರದಾಯದ ಕಥೆಗಳಲ್ಲಿಯೂ ಕಂಡುಬರುತ್ತದೆ. ಮೂಲ ಭಾರತದಲ್ಲಿ ಇಂತಹ ಕಥೆ ಬರುವುದಿಲ್ಲ. ಈ ಕಥೆ ಉಭಯ ಸಂಪ್ರದಾಯಗಳಲ್ಲಿಯೂ ಬಲುಮಟ್ಟಿಗೆ ಸಮಾನವಾಗಿಯೇ ಇದೆ. ಹೇಮಚಂದ್ರನು ತನ್ನ ಮಹಾಪುರಾಣದಲ್ಲಿ ಕೆಲಭಾಗವನ್ನು ವಿಸ್ತರಿಸಿರುವಂತಿದೆ. ಮುಖ್ಯವಾಗಿ ಕೃಷ್ಣ ಮತ್ತು ಪಾಂಡವರು

ಸುಸ್ಥಿತನೆಂಬ ದೇವತೆಯ ನೆರವಿನಿಂದ ಪೂರ್ವಧಾತಕೀ ಖಂಡವನ್ನು ಪ್ರವೇಶಿಸುವ ಮುನ್ನ ಸಾಗರೋತ್ತರಣ ಮಾಡಿದ್ದು, ಪದ್ಮನಾಭನಲ್ಲಿಗೆ ದಾರುಕನೆಂಬ ದೂತನನ್ನು ಸಂಧಾನಕ್ಕೆ ಕಳಿಸಿದ್ದು, ಸಂಧಾನವು ಭಗ್ನವಾಗಿ ಮೊದಲು ಪದ್ಮನಾಭನೊಂದಿಗೆ ಪಾಂಡವರು ಹೋರಾಡಿ ಪರಾಜಿತರಾಗಿ ಹಿಂದಿರುಗಿದ್ದು, ಕೃಷ್ಣನಿಗೂ ಪದ್ಮನಾಭನಿಗೂ ಉಗ್ರವಾದ ಕಾಳಗ ಜರುಗಿದ್ದು ಮತ್ತು ಪದ್ಮನಾಭನು ಸೋತದ್ದು ಇತ್ಯಾದಿ ವಿವರಗಳಲ್ಲಿ ಅದನ್ನು ಗಮನಿಸಬಹುದು. ಅರ್ಜುನ ದ್ರೌಪದಿಯ ವೇಣೀ ಬಂಧವನ್ನು ಬಿಚ್ಚಿ ಆಕೆಯ ಪ್ರತಿಜ್ಞೆ ಪೂರೈಸುವಂತೆ ಮಾಡಿದನೆಂಬ ಒಂದು ಉಚಿತವಾದ ಕಥಾಂಶ ಹೇಮಚಂದ್ರನ ನಿರೂಪಣೆಯಲ್ಲಿಲ್ಲ. ಅಲ್ಲದೆ ಇಲ್ಲಿ ಪಾಂಡವರನ್ನು ಕೃಷ್ಣ ಉಚ್ಚಾಟಿಸಿದ ಮೇಲೆ ಹಸ್ತಿನಪುರದ ಒಡೆತನವನ್ನು ಸುಭದ್ರೆಯ ಮಗ ಆರ್ಯಸೂನುವಿಗೆ ಅವನು ಕೊಟ್ಟನು ಎಂದಿಲ್ಲ ; ಸುಭದ್ರೆಯ ಮೊಮ್ಮಗ ಪರೀಕ್ಷಿತನಿಗೆ ಕೊಟ್ಟನೆಂದಿದೆ.

ಪಾಂಡವರು ಸಂಸಾರಬಂಧನಗಳಿಂದ ಮುಕ್ತರಾದುದು : ದ್ವಾರಾವತೀ ದಹನ ಮತ್ತು ಕೃಷ್ಣನ ಮೃತಿಯ ಅನಂತರದ ಈ ಭಾಗ ಶ್ವೇತಾಂಬರ ಸಂಪ್ರದಾಯದ ಹೇಮಚಂದ್ರನ ಕಥೆಯಲ್ಲಿ ಬಹುಸಂಕ್ಷೇಪವಾಗಿದೆ. ಕೃಷ್ಣ ತನ್ನ ಮೃತಿಯ ಸಮಯ ದಲ್ಲಿ ಜರತ್ಕುಮಾರನಿಗೆ/ಜರಾಕುಮಾರನಿಗೆ ನೀಡಿದ ಸೂಚನೆಗಳು ಪಾಂಡವರಿಗೆ ಮುಟ್ಟಿ ಅವರ ಶೋಕಿಸಿದರೆಂಬುದು ಉಭಯ ಸಮಾನ ಕಥಾಂಶ ;. ಆದರೆ ಪಾಂಡವರು ಜರತ್ಕುಮಾರನನ್ನು ಒಡಗೊಂಡು ದ್ವಾರಾವತಿಗೆ ಬಂದು ಬಲದೇವನನ್ನು ಸಂತೈಸಲು ಯತ್ನಿಸಿದ ಸಂಗತಿ ಶ್ವೇತಾಂಬರ ಸಂಪ್ರದಾಯದ ಕಥೆಯಲ್ಲಿಲ್ಲ. ಅವರು ನೇಮಿ ಕಳಿಸಿದ ಧರ್ಮಘೋಷ ಮುನಿಯಿಂದ ದೀಕ್ಷೆಗೊಂಡರೆಂದೂ ದ್ರೌಪದಿಯೂ ಅವರೊಂದಿಗೆ ದೀಕ್ಷಿತಳಾದಳೆಂದೂ ಇಲ್ಲಿ ಉಕ್ತವಾಗಿದೆ. ಬಳಿಕ ನೇಮಿಯನ್ನು ಸಂದರ್ಶಿಸಲು ಹೊರಟು, ಹಸ್ತಕಲ್ಪ ನಗರಕ್ಕೆ ಬಂದರೆಂದೂ ಅಲ್ಲಿಗೆ ದ್ವಾದಶಯೋಜನ ಸಮೀಪದ ಪರ್ವತದಲ್ಲಿ ನೇಮಿಯನ್ನು ಸಂದರ್ಶಿಸಿದ ಬಳಿಕ ಮಾಸೋಪವಾಸವನ್ನು ಪೂರೈಸಲೆಂದಿದ್ದಾಗ ನೇಮಿ ಮುಕ್ತನಾದ ವಿಚಾರ ತಿಳಿದು ದುಃಖಿತರಾದರೆಂದೂ ಇಲ್ಲಿ ನಿರೂಪಣೆಯಿದೆ. ದಿಗಂಬರ ಸಂಪ್ರದಾಯದ ಆಕರಗಳಲ್ಲಿರುವಂತೆ ಸಾಕ್ಷಾತ್ತಾಗಿ ನೇಮಿನಾಥನಿಂದಲೇ ತಮ್ಮ ಪೂರ್ವಭವಗಳನ್ನು ಕೇಳಿ ತಿಳಿದರೆಂಬ ವಿಚಾರ ಇಲ್ಲಿ ಬರುವುದಿಲ್ಲ. ವಿಮಲಾದ್ರಿಯಲ್ಲಿ ಅವರು ಪ್ರಾಯೋಪಗಮನ ಮಾಡಿದರು ; ದ್ರೌಪದಿ ಬ್ರಹ್ಮಲೋಕಕ್ಕೆ ಹೋದಳು. ಇಲ್ಲಿ ದುರ್ಯೋಧನನ ವಂಶದ ದೊರೆ ಪಾಂಡವರಿಗೆ ಒಡ್ಡಿದ ಉಪಸರ್ಗದ ಕಥಾಂಶವೇ ಇಲ್ಲದಿರುವುದು ಗಮನಾರ್ಹ.

ಇಲ್ಲಿಯೇ ಪಾಂಡವ ಚರಿತ್ರಗಳೆಂಬ ಗ್ರಂಥವರ್ಗದ ಪ್ರತಿನಿಧಿಯಾಗಿ ವಿಜಯಕೀರ್ತಿಭಟ್ಟಾರಕನ ಶಿಷ್ಯ ಶುಭಚಂದ್ರನು ರಚಿಸಿದ 'ಪಾಂಡವ ಪುರಾಣ'

(೧೫೫೧) ಎಂಬ ಗ್ರಂಥವನ್ನು ಲಕ್ಷಿಸಿ ಕೆಲವು ಮಾತುಗಳನ್ನು ಹೇಳಬಹುದು: ಇಲ್ಲಿ ಕಥೆ ಸಾಮಾನ್ಯವಾಗಿ ವಿವಿಧ ಸಂಪ್ರದಾಯ ಸಮ್ಮಿಶ್ರವಾದುದು, ಆಖ್ಯಾನೋಪಾಖ್ಯಾನಗಳ ಹರವಿನಿಂದ ವಿಸ್ತೃತವಾದುದು. ಬಹುಮಟ್ಟಿಗೆ ಪುನ್ನಾಟಸಂಘೀಯ ಜೀನಸೇನಾಚಾರ್ಯರ ಹರಿವಂಶ ಪುರಾಣದ ವಸ್ತು ವಿನ್ಯಾಸಕ್ಕೆ ಸದೃಶವಾದ ವಸ್ತುವಿನ್ಯಾಸವನ್ನುಳ್ಳುದು ; ಆದರೆ ಮೂಲ ಮಹಾಭಾರತವನ್ನು ಒಳಕೊಂಡ ಹಾಗೆ ಉತ್ತರಪುರಾಣವನ್ನು ದೇವ ಪ್ರಭ ಸೂರಿಯ ಶ್ವೇತಾಂಬರ ಸಂಪ್ರದಾಯದ 'ಪಾಂಡವ ಚರಿತ್ರ' (ಸು. ೧೩ನೆಯ ಶ.) ದಲ್ಲಿಯ ಕಥಾ ಘಟ್ಟಗಳನ್ನೂ ಗಮನಿಸಿರುವಂತೆ ತಿಳಿಯಲಾಗಿದೆ. ಸ್ವೀಕೃತ ಭಾಗಗಳು ಸೂಕ್ತ ವ್ಯತ್ಯಾಸಗಳೊಂದಿಗೆ ಒಳಹೊಕ್ಕಿರುವುದೂ ಉಂಟು. ಪಾಂಡವಕುಮಾರರ ಜನನ, ಭೀಷ್ಮ ಪ್ರತಿಜ್ಞೆ, ಕುರುಪುತ್ರರ ಶಸ್ತ್ರಶಿಕ್ಷೆಯ ಪರೀಕ್ಷಣ ಪ್ರಸಂಗ, ಪಾಂಡುವಿನ ವಿರಕ್ತಿ, ಭೀಮ-ದುರ್ಯೋಧನರ ಪರಸ್ಪರ ದ್ವೇಷ, ಕಾಡಬೇಡನ (ಏಕಲವ್ಯನ) ವಿದ್ಯಾಭ್ಯಾಸ ಮತ್ತು ಗುರುದಕ್ಷಿಣೆಯನ್ನು ಸಮರ್ಪಿಸಿದ್ದು, ಲಾಕ್ಷಾಗೃಹದಹನ ವ್ಯತಿಕರ, ಹಿಡಿಂಬೆ ಯೊಂದಿಗೆ ಭೀಮನ ವಿವಾಹ, ಬಕವಧೆ, ಖಾಂಡವವನ ದಹನ, ಘೋಷಯಾತ್ರಾ ಪ್ರಸಂಗದ ದುರ್ಯೋಧನಾಪಮಾನ, ನಿಷಿದ್ಧ ಜಲಪಾನದಿಂದ ಪಾಂಡವ ಮೃತಿ, ಕೀಚಕ ವಧೆ, ಗೋಗ್ರಹಣ, ಅಭಿಮನ್ಯು-ಉತ್ತರೆಯ ವಿವಾಹ, ಕುರುಕ್ಷೇತ್ರ ಸಂಗ್ರಾಮದ ಅರ್ಜುನ ಅಭಿಮನ್ಯು ಮೊದಲಾದವರ ಪೌರುಷವರ್ಣನೆ-ಈ ಕೆಲವು ಘಟ್ಟಗಳನ್ನು ಗಮನಿಸಿದರೆ ಇದು ವಿದಿತವಾಗುತ್ತದೆ. ನೇಮಿನಾಥ ಚರಿತ್ರಗಳಿಗಿಂತ ಈ ಪಾಂಡವ ಚರಿತ್ರಗಳೇ ದಿಟವಾಗಿ ಮಹಾಭಾರತದ ಗುಣಗಾತ್ರಗಳಲ್ಲಿವೆ.

'ಹರಿವಂಶ ಪುರಾಣ'ದಲ್ಲಿ ಕಾಮುಕನಾದ ಕೀಚಕ ಭೀಮನಿಂದ ಹತನಾಗುವುದಿಲ್ಲ, ವೈರಾಗ್ಯ ತಳೆಯುತ್ತಾನೆ ಎಂಬುದಾಗಿದ್ದರೆ, 'ಪಾಂಡವಪುರಾಣ'ದಲ್ಲಿ ಅವನು ಹತನಾದ ನೆಂದೇ ವರ್ಣಿಸಿದೆ. ಹರಿವಂಶ ಪುರಾಣ ಮಾರ್ಗದ ಕೃತಿಗಳಲ್ಲಿ ದ್ಯೂತಾನಂತರದ ದ್ರೌಪದಿಯ ಅಪಮಾನ ಪ್ರಸಂಗ ಬರುವಂತೆ ತೋರುವುದಿಲ್ಲ : 'ಪಾಂಡವಪುರಾಣ'ದಲ್ಲಿ ದ್ರೌಪದಿಯನ್ನು ಆಕೆಯ ಅಂತಃಪುರದಲ್ಲಿ ಕಚಗ್ರಹಣ ಮಾಡಿ ಅಪಮಾನಿಸಿದನೆಂದಿದೆ. ದೇವಪ್ರಭ ಸೂರಿಯಾದರೋ, ದುಃಶ್ಶಾಸನನಿಂದ ಆಕೆಯ ವಸ್ತ್ರಾಪಹರಣವಾಯಿತೆಂದೂ ಆದರೆ ಆಕೆಯ ದೈವಪ್ರಭಾವದಿಂದ ಆಕೆಗೆ ವಸ್ತ್ರಪರಂಪರೆಯೇ ಒದಗಿ ಬಂದು ಆಕೆ ಹೆಚ್ಚಿನ ಅಪಮಾನದಿಂದ ಪಾರಾದಳೆಂದೂ ನಿರೂಪಿಸಿದ್ದಾನೆ. ಹರಿವಂಶ ಪುರಾಣಾದಿ ಗಳಲ್ಲಿರುವಂತೆ ಪಾಂಡವ ಪುರಾಣಗಳಲ್ಲಿ ದುರ್ಯೋಧನಾದ್ಯರು ಕುರುಕ್ಷೇತ್ರಯುದ್ಧದ ಕೊನೆಗೆ ಜಿನದೀಕ್ಷೆಯನ್ನು ಗ್ರಹಿಸಿದರೆಂದು ಹೇಳಿಲ್ಲ. ಪ್ರತಿಯಾಗಿ ಈ ಪಾಂಡವ ಪುರಾಣ ಗಳಲ್ಲಿ ದೃಷ್ಟಾರ್ಜುನ (ಧೃಷ್ಟದ್ಯುಮ್ನ) ನಿಂದ ದ್ರೋಣರ, ಅರ್ಜುನನಿಂದ ಕರ್ಣನ, ಭೀಮನಿಂದ ದುರ್ಯೋಧನ ಮತ್ತು ಆತನ ಸೋದರರ, ಅಶ್ವತ್ಥಾಮನಿಂದ ದ್ರುಪದನ ಕೊಲೆಯಾಯಿತೆಂದೇ ಮಹಾಭಾರತದಲ್ಲಿರುವಂತೆ ನಿರೂಪಿಸಿದೆ. ಹೇಮಚಂದ್ರನಂತಲ್ಲದೆ, ಶುಭಚಂದ್ರ ಪಾಂಡವರಿಗೆ ದಾಹೋಪಸರ್ಗ ಉಂಟಾಯಿತು ಎಂಬುದನ್ನು ಹೇಳದೆಬಿಟ್ಟಿಲ್ಲ.

ಮೂಲ ಮಹಾಭಾರತದ ಆಕೃತಿಯ ಜೊತೆಗಿಟ್ಟು ನೋಡಿದಾಗ ಜೈನಭಾರತದ ಆಕೃತಿ ತೀರ ಸಣ್ಣದು ಎನ್ನಬೇಕು. ಅಲ್ಲಿಯ ಆಖ್ಯಾನೋಪಾಖ್ಯಾನಗಳು ಎಷ್ಟೋ ಇಲ್ಲಿ ಕಂಡು ಬರುವುದಿಲ್ಲ ; ಮುಖ್ಯ ಹಾಗೂ ಗೌಣ ಕಥೆಗೆ ಹೊಂದಿಕೊಂಡು ಬರುವ ವಿವಿಧ ಸಂದರ್ಭ ಸನ್ನಿವೇಶಗಳಿಗೆ ಇಲ್ಲಿ ಅವಕಾಶವಿಲ್ಲ, ಬಹುಸಂಖ್ಯೆಯ ಪಾತ್ರಗಳಿಗೆ ಸ್ಥಾನವಿಲ್ಲ. ವಸ್ತು ಮತ್ತು ಪಾತ್ರಗಳಿಗೆ ಅಲ್ಲಿ ಸಂದಿರುವ ಮಹತ್ತ್ವವಾಗಲಿ ವ್ಯಾಪ್ತಿಯಾಗಲಿ ಪರಿಣಾಮ ವೈಭವವಾಗಲಿ ಇಲ್ಲಿ ಕಂಡುಬರುವುದಿಲ್ಲ ; ಆ ಪ್ರಮಾಣದ ವರ್ಣನೆ, ಉಪದೇಶ, ಶಾಸ್ತ್ರವಿಚಾರಗಳು ಇಲ್ಲಿಲ್ಲ.

ಕಥೆಯ ದೃಷ್ಟಿಯಿಂದ, ಪಾಂಡು–ಮಾದ್ರಿಯರ ರುದ್ರ ಮರಣಕ್ಕೆ ಕಾರಣವಾದ ಕಿಂದಮ ಮುನಿ ಶಾಪ ಮತ್ತು ಅದಕ್ಕೆ ಅನುಸಾರವಾಗಿ ಘಟಿಸಿದ ಮರಣ, ದ್ರೋಣ, ದ್ರುಪದ ಸಂವಾದ, ವ್ಯಾಯಾಮರಂಗದಲ್ಲಿ ಕುರುಬಾಲಕರ ಶಸ್ತ್ರಶಿಕ್ಷೆಯ ಪ್ರದರ್ಶನ, ಸುಭದ್ರಾಹರಣ ಮತ್ತು ಖಾಂಡವ ದಹನ ಭಾಗಗಳೂ (ಆದಿಪರ್ವ), ರಾಜಸೂಯ ಯಾಗ ಮತ್ತು ತದಂಗವಾಗಿ ಜರಾಸಂಧ ವಧೆ, ಶಿಶುಪಾಲವಧೆ, ಕಪಟದ್ಯೂತದಲ್ಲಿ ಯುಧಿಷ್ಠಿರನು ಸೋದರರರನ್ನೂ ಪತ್ನಿಯನ್ನೂ ಸೋಲುವುದು, ದ್ರೌಪದೀ ವಸ್ತ್ರಾಪಹರಣ ಭಾಗಗಳೂ (ಸಭಾಪರ್ವ), ಕಿರಾತಾರ್ಜುನೀಯ, ಅರ್ಜುನೋರ್ವಶೀಯ, ಸೌಗಂಧಿಕಾಹರಣ, ಅಜಗರ ಪ್ರಸಂಗ, ಘೋಷಯಾತ್ರೆ, ಯಕ್ಷಪ್ರಶ್ನೆ ಇವುಗಳೂ (ಅರಣ್ಯಪರ್ವ), ಕೃಷ್ಣರಾಯಭಾರ, ವಿದುರಾತಿಥ್ಯ, ಕೃಷ್ಣನಿಂದ ಕರ್ಣಭೇದ ನೀತಿ ಈ ಸಂದರ್ಭಗಳೂ (ಉದ್ಯೋಗ), ಭೀಷ್ಮ ದ್ರೋಣಾದಿ ವೀರರ ಸೇನಾಧಿಪತ್ಯದ ಕುರುಕ್ಷೇತ್ರದ ಬಹು ಸಂಗ್ರಾಮ ವಿವರಗಳೂ (ಯುದ್ಧ ಪಂಚಕ) – ಜೈನ ಭಾರತದಲ್ಲಿ ನಿರೂಪಿತವಾಗದಿರುವ ಗಮನಾರ್ಹ ಮೂಲಭಾರತ ಕಥಾ ಘಟ್ಟಗಳಾಗಿವೆ. ಆದರೆ ಕೆಲವೇ ಕೆಲವು ಕಥಾಘಟ್ಟಗಳಿಗೆ ಜೈನ, 'ಪಾಂಡವಚರಿತ್ರಗಳಲ್ಲಿ ಸಾಮಾನ್ಯ ರೀತಿಯಿಂದ ಅವಕಾಶ ದೊರೆತಿದೆ. ಮೂಲದ ಯುದ್ಧಪರ್ವ ಪಂಚಕದ ಕೆಲವು ಸಾಮಾನ್ಯಾಂಶಗಳನ್ನು ಮಾತ್ರ ಜೈನ ಭಾರತದಲ್ಲಿ ಕಾಣಬಹುದಲ್ಲದೆ, ಅಲ್ಲಿಯ ವಿಸ್ತಾರ ವೈಭವ ಪರಿಣಾಮ ರಮಣೀಯತೆಗಳಿಗೆ ಇಲ್ಲಿ ಅವಕಾಶವೇ ಇಲ್ಲ.

ಮೂಲ ಭಾರತದ ಬಕನ ಕಥೆಯನ್ನು ಭೃಂಗ ರಾಕ್ಷಸನ ವಧೆಯೂ, ಕಿರಾತಾರ್ಜುನೀಯ ಪ್ರಸಂಗವನ್ನು ಸಂತಾರ–ಕುಸುಮಾವಲಿಯರೆಂಬ ವಿದ್ಯಾಧರ ದಂಪತಿಗಳ ಸಮಾಗಮ ವೃತ್ತಾಂತವೂ ಕ್ಷೀಣವಾಗಿ ನೆನಪಿಗೆ ತರುತ್ತವೆ ; ಹಾಗೆಯೇ ಜಯದ್ರಥನು ದ್ರೌಪದಿಯನ್ನು ಅಪಹರಿಸಿ ಭಂಗಪಟ್ಟ ವನಪರ್ವದ ಪ್ರಕರಣವನ್ನು ಅಮರಕಂಕಾಪುರಿಯ ಪದ್ಮನಾಭನು ದ್ರೌಪದಿಯನ್ನು ಅಪಹರಿಸಿ ಭಂಗಪಟ್ಟ ವೃತ್ತಾಂತ ಕೆಲಮಟ್ಟಿಗೆ ನೆನಪಿಸುತ್ತದೆ. ಇಂತಹ ಇನ್ನೂ ಒಂದೆರಡು ಸಂದರ್ಭಗಳು ಇರಬಹುದು. ಯುದ್ಧಪರ್ವಗಳು ಜೈನಭಾರತದಲ್ಲಿ ಪ್ರಾಧಾನ್ಯವಿಲ್ಲದೆ ಲುಪ್ತವಾಗಿರುವುದಕ್ಕೆ ಯುದ್ಧ

ಪ್ರಸಕ್ತಿ ಇಲ್ಲಿ ಯಾದವ-ಮಾಗಧರ ನಡುವೆ ನಡೆಯುವುದೂ ಕೌರವ-ಪಾಂಡವರಿಗೆ ಇಲ್ಲಿ ಪ್ರಾಮುಖ್ಯವಿಲ್ಲದಿರುವುದೂ ಮುಖ್ಯಕಾರಣವೆನ್ನಬೇಕು. ಹೀಗಾಗಿ ಗೀತೋಪದೇಶ, ಅಭಿಮನ್ಯುವಧೆ, ಸೈಂಧವ ವಧೆ, ಭೀಮ ದುರ್ಯೋಧನರ ಗದಾ ಯುದ್ಧ ಇಂತಹ ವೈಭವಪೂರ್ಣ ಕಥಾಘಟ್ಟಗಳೇ ಜೈನ ಭಾರತದಲ್ಲಿ ಇಲ್ಲವಾಗಿದೆ.

ಇನ್ನು ಪಾತ್ರಗಳ ದೃಷ್ಟಿಯಿಂದ ಹೇಳಬಹುದಾದ ಮಾತುಗಳು ಎಂದರೆ ಕೃಷ್ಣನಿಗೆ ಮೂಲಭಾರತದಲ್ಲಿಯ ಪ್ರಾಶಸ್ತ್ಯ ಇಲ್ಲಿ ಇಲ್ಲದಿದ್ದರೂ, ನೇಮಿನಾಥನ ಜೊತೆಗೆ ಅವನದೂ ಮಹನೀಯ ಪಾತ್ರವೇ ಎನ್ನುವುದರಲ್ಲಿ ಸಂಶಯವಿಲ್ಲ. ಯಾದವ ಪಕ್ಷದಲ್ಲಿ ಪಾಂಡವರ ಚಟುವಟಿಕೆಗಳಲ್ಲಿ ಆತನ ಮಾರ್ಗದರ್ಶನ ಗಮನಾರ್ಹವಾದುದು; ಆದರೆ ಪ್ರಭಾವದ ದೃಷ್ಟಿಯಿಂದ ಸರ್ವಾಧಿಕವಾದುದೇನಲ್ಲ. ಪಾಂಡವಕೌರವರ ಶೀಲ ಸ್ವಭಾವಗಳು ಇಲ್ಲಿಯೂ ಮೂಲಭಾರತದಲ್ಲಿರುವ ಹಾಗೆಯೇ ; ಆದರೆ ಆ ಪ್ರಖರತೆ ತೀಕ್ಷ್ಣತೆಗಳಿಲ್ಲ. ಜೈನದೃಷ್ಟಿಗೆ ಅನುಸಾರವಾಗಿ ಇವರ ಭವಾವಳಿಗಳನ್ನು ನಿರೂಪಿಸಿರುವುದೂ ಕುರುಕ್ಷೇತ್ರ ಸಂಗ್ರಾಮದ ಕೊನೆಗೆ ಇವರು ಜಿನದೀಕ್ಷೆ ಗ್ರಹಿಸಿದರೆಂದು ಕಲ್ಪಿಸಿರುವುದೂ ಜೈನಭಾರತದ ಅತ್ಯಂತ ಗಮನಾರ್ಹವಾದ ಆಯಾಮಗಳಾಗಿವೆ. ಕರ್ಣನ ಜನನ ಮತ್ತು ಸ್ವಾಮಿಭಕ್ತಿಯ ವಿಷಯದಲ್ಲಿ ಬಲುಮಟ್ಟಿಗೆ ಮೂಲನಿಷ್ಠೆ ಕಂಡುಬರುವುದು ಸ್ವಾರಸ್ಯಕರ. ಆದರೆ ಇಲ್ಲಿ ಅವನ ಬದುಕಿನ ಕಷ್ಟಗಳಿಗೆ, ಧರ್ಮ ಸಂಕಟಗಳಿಗೆ ಕಾರಣವಾದ ಸೂತತ್ವಕ್ಕೆ ನಿಷ್ಕೃತಿ ದೊರೆತು, ಅವನೊಬ್ಬ ರಾಜಕುಮಾರ ನಾಗಿಯೇ ಹುಟ್ಟಿ ರಾಜಕುಮಾರನಾಗಿಯೇ ಬೆಳೆಯುವ ಸಾತ್ತ್ವಿಕ ವ್ಯಕ್ತಿಯಾಗಿದ್ದಾನೆ. ಭೀಷ್ಮ ದ್ರೋಣಾದ್ಯರಾದ ಹಿರಿಯರಿಗೆ ಇಲ್ಲಿ ತಕ್ಕ ಸ್ಥಾನಮಾನಗಳಿಲ್ಲದೆ, ಭೀಮ-ದುರ್ಯೋಧನರ ಬದ್ಧವೈರವೆಂಬುದೇ ಇಲ್ಲದೆ ಅಷ್ಟರ ಮಟ್ಟಿಗೆ ಜೈನ ಭಾರತ ಬಣ್ಣಗುಂದಿದೆ, ನಿಸ್ಸಾರವಾಗಿದೆ. ದ್ರೌಪದಿಯ ಜನನ ಜೈನದೃಷ್ಟಿಗೆ ಅನುಸಾರವಾಗಿ ಬೇರೆ ರೀತಿಯಲ್ಲಿದೆ ; ಭವಾವಳಿಯ ಹಿನ್ನೆಲೆಯಲ್ಲಿದೆ. ದ್ರೌಪದಿಯ ಪರವಾದ ಕೀಚಕನ ವ್ಯಾಮೋಹಕ್ಕೆ ಅವರಿಬ್ಬರ ಪೂರ್ವಭವಾನುಬಂಧವೇ ಕಾರಣವೆಂಬ ಜೈನದೃಷ್ಟಿಯ ಮಾರ್ಪಾಡಿನಿಂದ ಕೀಚಕನ ಪಾತ್ರಕ್ಕೆ ಒಂದು ಬಗೆಯಲ್ಲಿ ರೂಪ ಪರಾವರ್ತನೆ ಯುಂಟಾಗಿದೆ. ಮೂಲಭಾರತದಲ್ಲಿ ಆತನ ಅಸಮರ್ಥನೀಯವಾದ ಮಹಸೀಯತೆ ಯನ್ನು ವ್ಯಾಸರು ವರ್ಣಿಸಿರುವುದಕ್ಕೆ ಅನುಗುಣವಾಗಿದೆ.

ಜೈನಭಾರತದಲ್ಲಿ ಯುಧಿಷ್ಠಿರನಂತಹ ಸಾತ್ತ್ವಿಕ ಪಾತ್ರವನ್ನು ಚಿತ್ರಿಸುವಾಗ ಆಗಲಿ, ದುರ್ಯೋಧನ ಕೀಚಕರಂತಹ ನೀಚಪಾತ್ರಗಳನ್ನು ಚಿತ್ರಿಸುವಾಗ ಆಗಲಿ, ಪ್ರವರ್ತಿಸುವ ಮಾನವೀಯ ಹಾಗೂ ಪತಿತೋದ್ಧಾರದ ದೃಷ್ಟಿ ಹೃದಯಂಗಮ ವಾದುದು. ಯಾವುದೇ ಮಾನವಜೀವಿ ಮೂಲತಃ ಪರಿಶುದ್ಧನು, ಉದಾತ್ತನು. ಆದರೆ ಅರಿಷಡ್ವರ್ಗಗಳ ಅಪ್ರತಿಹತವಾದ ಪ್ರಭಾವಕ್ಕೆ ಸಿಕ್ಕು ಹಲವು ಜನ್ಮಗಳವರೆಗೆ ನಡೆಯುವುದು ಅವನ ಪ್ರಾಪ್ತಿ, ಅವನ ದೌರ್ಬಲ್ಯ. ಕೊನೆಗೆ ಕಾಲಪಕ್ವವಾದಾಗ, ತಕ್ಕ

ಗುರುವಿನ ಉಪದೇಶ ದೊರೆತು ಅವನು ರತ್ನತ್ರಯಗಳ ಸಾಧನೆಯಿಂದ ತನ್ನ ಎಲ್ಲ ದುಃಖಗಳನ್ನೂ ದೋಷಗಳನ್ನೂ ಮೆಟ್ಟಿ ಮುಕ್ತನಾಗುತ್ತಾನೆ. ಕಾಲ ಪಕ್ವವಾಗುವವರೆಗೆ, ತಕ್ಕ ಗುರು ಲಭಿಸುವವರೆಗೆ, ಆ ಜೀವದ ಹೋರಾಟ ಪ್ರತಿಹೋರಾಟಗಳು ನಿರಂತರವಾಗಿ ಸಾಗಿರುತ್ತವೆ ; ಒಳಿತು ಕೆಡುಕುಗಳ ಫಲಗಳನ್ನು ಭೋಗಿಸುವುದು ನಡೆದೇ ಇರುತ್ತದೆ. ಕರ್ಮಫಲಗಳನ್ನು ಅನುಭವಿಸುವ ವ್ಯಕ್ತಿ ತನ್ನ ಉದ್ಧಾರವನ್ನು ತಾನೇ ಕಂಡುಕೊಳ್ಳಬೇಕಲ್ಲದೆ, ಯಾವುದೇ ದೈವಿಕ ಶಕ್ತಿಯೂ ಅಲೌಕಿಕ ಘಟನೆಯೂ ಅದನ್ನು ಆತನಿಗೆ ಕಾಣಿಸಲಾರವು. ಈ ಹಿನ್ನೆಲೆಯಲ್ಲಿಯೇ ಜೈನಭಾರತದ ಸನ್ನಿವೇಶಗಳೂ ಪಾತ್ರಗಳೂ ರೂಪುಗೊಳ್ಳುತ್ತವೆ, ವಿಕಾಸಗೊಳ್ಳುತ್ತವೆ. ಹೀಗಾಗಿ ಇಲ್ಲಿ ಪೌರಾಣಿಕತೆಗಿಂತ ಮಿಗಿಲಾಗಿ ವಾಸ್ತವತೆಯೂ ದೈವಿಕತೆಗಿಂತ ಮಿಗಿಲಾಗಿ ಮಾನವೀಯತೆಯೂ ಪ್ರಸ್ಫುಟಗೊಳ್ಳುವಂತೆ ಚಿತ್ರಣವಿರುತ್ತದೆ. ಆದರೂ ಜೈನಪುರಾಣಗಳೆಂಬವು ತಮ್ಮದೇ ಆದ ಕಥಾಗತಿಯ ಚೌಕಟ್ಟಿನಲ್ಲಿ, ಪಾತ್ರಗಳ ಸ್ವಭಾವ ವಿಷ್ಕರಣದಲ್ಲಿ, ಒಂದು ಗೊತ್ತಾದ ಎರಕದಲ್ಲಿ ಹಾಕಿದ ರಚನೆಗಳಾಗಿರುವುದರಿಂದ ಅವುಗಳು ಒಂದು ವಿಧದ ಕಥಾಕೋಶಗಳಾಗಿ ಪರಿಣಮಿಸಿವೆ ಮಾನವೀಯ ಭಾವನೆಗಳು, ಮೌಲ್ಯಗಳಿಂದ ತುಂಬಾ ಹೃದಯಂಗಮ ಕಾವ್ಯಗಳಾಗಿ ಪರಿಣಮಿಸಿಲ್ಲವೇನೋ ಎನಿಸುತ್ತದೆ.

ಮಹರ್ಷಿಗಳಿಗೆ ವಿಧೇಯರಾದ ನಾವು ಅವರು ತೋರಿಸಿರುವ ದಾರಿಯಲ್ಲಿ ಕಾವ್ಯವನ್ನು ಕುರಿತು ಒಂದು ಲಘುಸಂಹಿತೆಯನ್ನು ರೂಪಿಸಿಕೊಂಡರೆ ಅಪಚಾರವಾಗ ಲಾರದು :

ಅಥಾಧಿಕಾವ್ಯಮ್ । ವಿಪ್ರತಿಭಾ ಪೂರ್ವರೂಪಮ್
ಶ್ರೋತೃಹೃದಯಮುತ್ತರ ರೂಪಮ್ । ರಸಾನುಭೂತಿಃ
ಸಂಧಿಃ । ವಾಕ್ಕೌಶಲಮ್ ಸಂಧಾನಮ್ ।
ಇತ್ಯಧಿ ಕಾವ್ಯಮ್ ॥

ಡಿ.ವಿ.ಜಿ.

ಪಂಪ ಭಾರತ ಅಥವಾ ವಿಕ್ರಮಾರ್ಜುನ ವಿಜಯಂ

ಡಾ|| ಕೆ. ಕುಶಾಲಪ್ಪ ಗೌಡ

ಗೌರೀ ಶಂಕರ ಪರ್ವತ ಶ್ರೇಣಿಯ ಉತ್ತುಂಗ ಶಿಖರಗಳಂತೆ ಭಾರತೀಯ ಸಂಸ್ಕೃತಿಯಲ್ಲಿ ರಾಮಾಯಣ ಮತ್ತು ಮಹಾಭಾರತಗಳು. ಇವುಗಳಿಂದ ನಾನಾ ಭಾಷೆಗಳಿಗೆ ಹರಿದ ಸಾಹಿತ್ಯ ಗಂಗೆ ಆ ಭಾಷೆಗಳಲ್ಲಿ ಸಾಹಿತ್ಯ ಕೃಷಿಯನ್ನು ಸಮೃದ್ಧಗೊಳಿಸಿತು. ದಕ್ಷಿಣ ಭಾರತದಲ್ಲಿ ತಮಿಳುನಾಡು ಮತ್ತು ಕೇರಳಗಳಲ್ಲಿ ರಾಮಾಯಣಕ್ಕೆ ಪ್ರಾಶಸ್ತ್ಯ ದೊರೆತರೆ, ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಕವಿಗಳಿಗೆ ಸಂಕೀರ್ಣ ಮಾನವ ಸಂಘರ್ಷವನ್ನು ತೋರುವ ಮಹಾಭಾರತದ ಕಥಾವಸ್ತು ಪ್ರಿಯವಾಯ್ತು. ರಾಜ್ಯದ ಲೋಭ, ವೈಯಕ್ತಿಕವಾದ ಮದ, ಮಾತ್ಸರ್ಯಗಳು, ಕೈಯೆತ್ತಿದರೆ ವಿವಿಧ ರಾಜ ಪಂಗಡಗಳೊಳಗೆ ನಡೆಯುತ್ತಿದ್ದ ಯುದ್ಧಗಳು 10ನೇ ಶತಮಾನದ ತತ್ಕಾಲೀನ ಕಾಲ ಘಟ್ಟದ ವೀರ ಯುಗದಲ್ಲಿ ಸರ್ವಸಾಧಾರಣವಾಗಿದ್ದವುಗಳು. ಮಹಾಭಾರತದ ಘಟನೆಗಳ ಪ್ರತಿಬಿಂಬವೋ ಎನ್ನುವಂತಿದ್ದುದರಿಂದ ಕವಿಗಳಿಗೆ ಬಹುಶಃ ಮಹಾಭಾರತದ ಕಥಾ ವಸ್ತುವನ್ನು ತಮ್ಮ ಪ್ರಥಮ ಆಯ್ಕೆಯಾಗಿ ಮಾಡಿಕೊಳ್ಳಲು ಕಾರಣವಾಗಿರಬಹುದು. ಹಾಗೆಂದಾಗ, ಕರ್ನಾಟಕ, ಆಂಧ್ರಗಳಲ್ಲಿ ಮಾತ್ರ ಈ ಪರಿಸ್ಥಿತಿಯಿದ್ದುದೇ? ಉಳಿದೆಡೆಗಳಲ್ಲಿ ಇರಲಿಲ್ಲವೇ ? ಎಂಬ ಪ್ರಶ್ನೆಯೂ ಏಳಬಹುದು. ಈ ದೃಷ್ಟಿಯಲ್ಲಿ ಈ ಪ್ರಶ್ನೆ ಇನ್ನೂ ಜಟಿಲವಾಗುತ್ತದೆ. ಸಮರ್ಥವಾದ ರಾಜಮನೆತನದ ಆಸಕ್ತಿ, ಹಾಗೂ ಕವಿಯ ಮನೋಧರ್ಮ ಕಾರಣವಾಗಿ ಕಥಾವಸ್ತುವಿನ ಆಯ್ಕೆ ಹಾಗೂ ಕೃತಿಯ ಮೈದಳೆಯುವಿಕೆ ನಡೆಯುತ್ತದೆ – ಎನ್ನಬಹುದು.

ಕನ್ನಡದಲ್ಲಿ ಸಹ್ಯಾದ್ರಿಯ ಶೃಂಗಗಳಂತೆ ಭಾರತವನ್ನಾಧರಿಸಿ ಎರಡು ಕೃತಿಗಳು ಗಗನಚುಂಬಿಗಳಾಗಿ ತಲೆಯೆತ್ತಿದುವು. 'ಪಸರಿಪ ಕನ್ನಡಕ್ಕೊಡೆಯನೊರ್ವನೆ ಪಂಪಂ' ಎಂಬ ಕನ್ನಡದ ಆದಿ ಮಹಾಕವಿ ಪಂಪ, ತಾನು ಮತದಿಂದ ಜೈನನಾದರೂ, ವೈದಿಕ ಕಾವ್ಯದ ರಚನೆ ಮಾಡಿದ. ಇನ್ನೊಬ್ಬ ಕುಮಾರವ್ಯಾಸ ಬಿರುದಾಂಕಿತ ಗದುಗಿನ

ನಾರಣಪ್ಪ. ಈತ ಮಹಾಭಾರತದ ವ್ಯಕ್ತಿ ವ್ಯಕ್ತಿಗಳ ಸಂಘರ್ಷದ ತುಮುಲವನ್ನು ಭಗವದ್-ಲೀಲೆಯಾಗಿ, ಕೃಷ್ಣಕಥೆಯಾಗಿ ರೂಪಿಸಿದ. ಪಂಪನ ಕಾಲಕ್ಕೆ ಕನ್ನಡದಲ್ಲಿ ಮಹಾಭಾರತದ ಕತೆ ಇನ್ನೂ ಮೈದಳೆದಿರಲಿಲ್ಲ.

ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತ ಭಾ
ರತಮನಪೂರ್ವಮಾಗೆ ಸಲೆ ಪೇೞ್ದ ಕವೀಶ್ವರರಿಲ್ಲ ವರ್ಣಕಂ ।
ಕತೆಯೊಳೊಡಂಬಡಂ ಪಡೆಯೆ ಪೇೞ್ದೊಡೆ ಪಂಪನೆ ಪೇೞ್ಗುಮೆಂದು ಪಂ
ಡಿತರೆ ತಗುಳ್ದು ಬಿಚ್ಚಟಿಸೆ ಪೇೞಲೊಡರ್ಚಿದೆನೀಪ್ರಬನ್ಧಮಂ ॥

ಹೆಸರಿಗೆ ತಕ್ಕಂತೆ ಮಹಾಭಾರತದ ಕತೆ ವಿಶಾಲವಾದುದು. ಅದನ್ನು ರೂಪುಗೆಡಿಸದೆ ಕನ್ನಡದಲ್ಲಿ ಇದುವರೆಗೆ ಯಾರೂ ಹೇಳಿಲ್ಲ. ವರ್ಣಕ ಲಕ್ಷಣವನ್ನೊಳಗೊಂಡು ಅದನ್ನು ಹೇಳಲು ಪಂಪನೊಬ್ಬನೇ ಸಮರ್ಥ ಎಂದು ಪಂಡಿತರೆಲ್ಲರೂ ಸೇರಿ ಉದ್ಘೋಷಿಸುತ್ತಿರಲು ಈ ಪ್ರಬಂಧವನ್ನು ಹೇಳಲು ಮನಸ್ಸು ಮಾಡಿದೆ ಎಂದು ಪಂಪ ಹೇಳಿಕೊಂಡಿದ್ದಾನೆ. ದ್ರೌಪದಿಯ ಏಕಪತಿತ್ವ, ಅರಿಕೇಸರಿಯ ಬಿರುದುಗಳನ್ನು ಅರ್ಜುನನಿಗೆ ಆರೋಪಿಸಿದುದು, ದುರ್ಯೋಧನನಲ್ಲಿಗೆ ಸಂಧಿಗೆ ಬಂದ ಶ್ರೀಕೃಷ್ಣ 'ಚಳುಕ್ಯಕುಳ ತಿಳಕನಪ್ಪ ವಿಜಯಾದಿತ್ಯಂಗೆ ಗೋವಿಂದಂ ಮುಳಿಯೆ" ಎಂಬಲ್ಲಿಂದ 'ನಿನಗೆ ಸೆಣಸಲೆಂತು ಮನಂ ಬಂದುದು' ಎಂಬಲ್ಲಿ ವರೆಗೆ, ಕರ್ಣಾವಸಾನ ಮಾಡುವ ಪ್ರತಿಜ್ಞೆಯನ್ನು ಧರ್ಮರಾಯನೆದುರು ಮಾಡುವ ಸಂದರ್ಭದಲ್ಲಿ ಅರ್ಜುನ, 'ನರಸಿಂಹನಿಗೂ ಜಾಕಬ್ಬರಸಿಗೆ ಹುಟ್ಟಿ, ಅರಿಕೇಸರಿ ಎಂಬ ಬಿರುದನ್ನು ಪಡೆದು' ಎಂಬ ಮಾತನ್ನಾಡುವುದು, ಮುಂತಾದೆಡೆಗಳಲ್ಲಿ ಆಭಾಸವಾದಂತಾಗಿದೆ ; ಮತ್ತೆ ಸಾಂಪ್ರದಾಯಿಕವಾದ ವೇಶ್ಯಾವಾಟಿಕೆಯ ವರ್ಣನೆ ಮುಂತಾದವುಗಳಲ್ಲಿ ಕತೆಯ ಮೈಗೆಟ್ಟಿದೆ ಎಂದು ವಿದ್ವಾಂಸರು ಹೇಳಿದ್ದಾರೆ. ಆದರೆ ಒಟ್ಟು ಕಾವ್ಯದ ರಸಪ್ರತೀತಿಯಲ್ಲಿ ಈ ಗೌಣ ವಿಷಯಗಳನ್ನು ಮರೆತುಬಿಡಬಹುದು ಎನ್ನಲಡ್ಡಿಯಿಲ್ಲ.

ಪಂಪ ತನ್ನ ಕವಿತಾ ಶಕ್ತಿಯನ್ನು ಅರಿತವನು. ಹೀಗಿದ್ದೂ ಆವನು ತನ್ನ ಕಾವ್ಯವನ್ನು ಪರೀಕ್ಷಿಸುವವನಿಗೇಂಟೆದೆಯೋ ? ಪಡೆಯೆಡೆಯ ಕಡು ಒಡವರು ಕೊಡಲು ತಾನು ಕವಿಚಕ್ರವರ್ತಿ ಪದವಿಯನ್ನು ಪಡೆದುದೇ ?-ಎಂದು ಮುಂತಾಗಿ ಧಾರ್ಷ್ಟ್ಯದಿಂದ ಕವಿ ರನ್ನ ಕೇಳಿದಂತೆ ಕೇಳಲಿಲ್ಲ. ತನ್ನ ಸಹಜ ವಿನಯವನ್ನೇ ಮೆರೆಯುತ್ತಾನೆ. ತನ್ನ ಅರಸ ಚಕ್ರವರ್ತಿಯಾಗಿರದಿದ್ದುದರಿಂದ ಅವನಿಗೆ ಕವಿಚಕ್ರವರ್ತಿ ಎಂಬ ಬಿರುದೇನೋ ಸಿಗಲಿಲ್ಲವಾದರೂ, ಆ ಬಿರುದಿಗಿಂತ ಹೆಚ್ಚಿನ ಶೋಭೆ ಅವನದಾಗಿದೆ. 'ವ್ಯಾಸ ಮುನೀಂದ್ರ ರುಂದ್ರ ವಚನಾಮೃತ ವಾರ್ಧಿಯನೀಸುವೆನ್, ಕವಿವ್ಯಾಸನೆನ್ ಎಂಬ ಗರ್ವ ಮೆನಗಿಲ್ಲ...ಗರ್ವಮೆ ದೋಷಂ, ಅೞ್ತಿಗಂ ದೋಷಮೆ ? ಕಾಣಿನ್ ; ಎನ್ನಜೀವ

ಮಾಟ್ಕೆಯೆ ಪೇಟ್ವಿನ್' ಎಂಬ ಮಾತುಗಳು ಅವನ ವ್ಯಕ್ತಿತ್ವವನ್ನು ಎತ್ತರಕ್ಕೇರಿಸುತ್ತವೆ. ತನ್ನ ಶಕ್ತಿಸಾಮರ್ಥ್ಯಗಳಲ್ಲಿ ನಂಬಿಕೆಯಿರುವವನು ತನ್ನ ಹೆಗ್ಗಳಿಕೆಯನ್ನು ತಾನೇ ಹೇಳಿಕೊಳ್ಳುವುದಿಲ್ಲ. ಪಂಪನಿಗೆ ಆ ನಂಬಿಕೆಯಿದೆ.

ಕಾವ್ಯಗುಣಾನ್ವಿತವಾದ ಪಂಪನ ಎರಡು ಕೃತಿಗಳಾದ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯಗಳು ಮುನ್ನಿನ ಕಬ್ಬಮನೆಲ್ಲಮನಿಕ್ಕಿ ಮೆಟ್ಟಿದುವು ಎಂಬ ಮಾತು (14–59) ಸತ್ಯ ಸ್ಥಿತಿಯನ್ನೇ ಸಾರುತ್ತಿದೆಯೆನಿಸುತ್ತದೆ. ಕಾರಣ, ಪಂಪನಿಗಿಂತ ಹಿಂದಣ ಕಾವ್ಯಕೃತಿಗಳು ಯಾವುವೂ ನಮಗೆ ಸಿಕ್ಕಿಲ್ಲ.

ಪಂಪ ಭಾರತ ವ್ಯಾಸಭಾರತದ ಪುನರವತಾರವಲ್ಲ. ವ್ಯಾಸಮಹಾಭಾರತವು ಪಂಚಮ ವೇದವೆಂಬ ಖ್ಯಾತಿಗೊಳಪಟ್ಟು, ವೈದಿಕ ಸಂಪ್ರದಾಯದಲ್ಲಿ ಅಲೌಕಿಕ ನೆಲೆಗೇರಿದರೆ, ಜೈನ ಕವಿಯಾದ ಪಂಪನಲ್ಲಿ ಅದು ಲೌಕಿಕ ಕಾವ್ಯವಾಗಿದೆ. ವ್ಯಾಸ ಭಾರತದಲ್ಲಿ ಕಥಾನಾಯಕನಾರು ಎಂಬ ಪ್ರಶ್ನೆ ನಮ್ಮನ್ನು ಕಾಡಿ, ಒಬ್ಬೊಬ್ಬರಿಗೆ ಒಂದೊಂದು ರೀತಿ ಕಂಡರೆ ಪಂಪ, ಅರ್ಜುನನೇ ನಾಯಕನೆಂದು, ತನ್ನ ರಾಜನನ್ನೂ ಆತನೊಡನೆ ಸಮೀಕರಿಸಿ ಚಿತ್ರಿಸಿದ್ದಾನೆ. ಅಲ್ಲದೆ ತನ್ನ ಸಮಕಾಲೀನ ರಾಜಕೀಯ ಹಾಗೂ ಸಾಮಾಜಿಕ ನಡವಳಿಕೆಗಳ ಧ್ವನಿಯನ್ನು ತುಂಬಿದ್ದಾನೆ. ಹೀಗಾಗಿ ಅದು ಕನ್ನಡಿಗರ ಜೀವನಕ್ಕೆ ಹತ್ತಿರವಾಗಿ, ಅವರ ಜೀವನದ ಜೀವಂತ ಪ್ರತಿಬಿಂಬವಾಗಿ, ಕೈಯೊಳಗೆ ಬರುತ್ತದೆ. ಮಹಾಭಾರತದಂತೆ ಅಲೌಕಿಕತೆಯ ದೂರದ ದೊರಕದ ಗುರಿಯಾದಂತೆನಿಸುವುದಿಲ್ಲ.

ಚಾಳುಕ್ಯ ಎರಡನೆ ಅರಿಕೇಸರಿ ತನ್ನ ದೊರೆ ಮತ್ತು ಗೆಳೆಯ. ಸಾಮಂತ ರಾಜನಾಗಿದ್ದರೂ, ಅರ್ಜುನ ಮಾಡಿದಂತೆ ಆ ಕಾಲದ ರಾಜಕೀಯ ಕ್ಷೇತ್ರದಲ್ಲಿ ಅನೇಕ ಶೌರ್ಯ, ಪರಾಕ್ರಮಗಳನ್ನು ಮೆರೆದವನು. ಅವನು ಪಂಪನ ಪಾಂಡಿತ್ಯ, ಮತ್ತು ಕವಿತಾ ಶಕ್ತಿಗಳನ್ನು ಕೇಳಿ, ನೋಡಿ, ಮೆಚ್ಚಿ, ಆತನನ್ನು ಪ್ರೀತಿಯಿಂದ ತನ್ನ ಅಸ್ಥಾನಕ್ಕೆ ಬರಮಾಡಿಕೊಂಡನು. ತನ್ನ ಹೆಸರನ್ನು ಉಳಿಸುವಂತಹ ಕೃತಿಯನ್ನು ರಚಿಸುವಂತೆ ಪಂಪನನ್ನು ಕೇಳಿಕೊಂಡನು. ಕರ್ಣ ದುರ್ಯೋಧನರ ಗಾಢ ಮೈತ್ರಿ, ಪಂಪ ಮತ್ತು ಅರಿಕೇಸರಿಯರ ನಡುವಣ ಮೈತ್ರಿಯ ಪ್ರತಿಚ್ಛಾಯೆಯಾಗಿರಬಹುದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಪಂಪ ಕೇವಲ ಕವಿಯಾಗಿ ಮಾತ್ರ ಉಳಿಯಲಿಲ್ಲ. ಅವನು ಕಲಿಯೂ ಆಗಿ, ತನ್ನ ಅರಸ ಮಾಡುತ್ತಿದ್ದ ಯುದ್ಧಗಳಲ್ಲಿ ಹೋರಾಡಿ, ಜಯಶೀಲನಾಗಿದ್ದನು. ಅವನು ಅರಸನಿಂದ ಪಡೆದುದಕ್ಕಿಂತಲೂ ಹೆಚ್ಚು ಅರಸನಿಗೆ ಹಾಗೂ ಕನ್ನಡ ಜನತೆಗೆ ಕೊಟ್ಟಿದ್ದಾನೆ. ಕನ್ನಡ ಸಾರಸ್ವತ ಲೋಕವನ್ನು ಎಂದಿಗೂ ತನಗೆ ಋಣಿಯಾಗಿಸಿದ್ದಾನೆ.

ಕವಿತೆ ನೆಗಟ್ತ್ತಿಯುಂ ನಿಱಿಸೆ ಜೋಡಿದ ಪಾಟಿ ನಿಜಾಧಿನಾಥನಾ
ಹವದೊಳರಾತಿನಾಯಕರ ಪಟ್ಟನೆ ಪಾಱಿಸೆ ಸಂದ ಪೆಂಪು ಭೂ ॥
ಭುವನದೊಳಾಗಳುಂ ಬೆಳಗೆ ಮಿಕ್ಕಭಿಮಾನದ ಮಾತು ಕೀರ್ತಿಯುಂ
ವಿವರಿಸೆ ಸಂದನೇಂ ಕಲಿಯೊ ಸತ್ಕವಿಯೋ ಕವಿತಾಗುಣಾರ್ಣವಂ ॥ 14–50

ಅಲ್ಲದೆ "ಪಂಪಂ ಧಾತ್ರೀ ವಳಯ ನಿಳಿಂಪಂ, ಚತುರಂಗ ಬಳ ಭಯಂಕರಣಂ ನಿಷ್ಕಂಪಂ..." (14–49) ಎಂಬ ಮಾತೂ ಬಂದಿರುವುದು ಅವನ ಧೈರ್ಯ, ಪರಾಕ್ರಮಗಳಿಗೆ ದ್ಯೋತಕವಾಗಿದೆ.

ಇಂತಹ ಪಂಪನಿಗೆ ಅರಿಕೇಸರಿ ಅನೇಕ ಹೊನ್ನು ಹೆಣ್ಣುಗಳನ್ನಿತ್ತು, ಅಗ್ರಹಾರವನ್ನಿತ್ತು, ಸತ್ಕರಿಸಿದನೆಂದು ಪಂಪನಿಂದಲೇ ತಿಳಿಯುತ್ತದೆ. ತನ್ನ ಮಿತ್ರನಾದ ರಾಜ ಮಾಡಿದ ಸಾಹಸಕಾರ್ಯಗಳನ್ನು ಈತ ತನ್ನ ಮಹಾಕಾವ್ಯದಲ್ಲಿ ಏಕೀಭವಿಸಿ ವರ್ಣಿಸಿದುದರಿಂದ ಅದು ಸಮಸ್ತ ಭಾರತವಾಯ್ತು. 'ಸಮಸ್ತ' ಎಂಬ ಪದವನ್ನಿಟ್ಟು ಕೊಂಡು, ಮಹಾಭಾರತದ ಪ್ರಧಾನ ನಾಯಕರಿಗೆಲ್ಲ ಪಂಪನ ಕಾಲದ ಸಮಕಾಲೀನ ನಾಯಕರಿಗಿದ್ದಾರೆ ಎಂಬುದನ್ನು ಶ್ರಮಪಟ್ಟು ಮುಳಿಯ ತಿಮ್ಮಪ್ಪಯ್ಯನವರು ಪ್ರತಿಪಾದಿಸಿದುದನ್ನು ವಿದ್ವಾಂಸರು ಒಪ್ಪುವುದಿಲ್ಲ. ವ್ಯಕ್ತಿಗಳು ಹೀಗೆ ಇದರಲ್ಲಿ ಸಮಷ್ಟೀ ಕೃತವಾಗಿಲ್ಲವಾದರೂ, ಘಟನೆಗಳು ಆಗಾಗ ಅಲ್ಲಲ್ಲಿ ತೂರಿಕೊಂಡು ಬರುತ್ತವೆಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ರಾಜಪೋಷಿತನಾದರೂ, ಮೈತ್ರಿಗೆ ಕಟ್ಟು ಬಿದ್ದರೂ, ಪಂಪ ತನ್ನ ವ್ಯಕ್ತಿತ್ವವನ್ನು ಮಾರಿಕೊಳ್ಳಲಿಲ್ಲ. ಸ್ವಾಭಿಮಾನವನ್ನು ಬಿಡದೆ, ತಾನೇ ತಾನಾಗಿ ವಿಜೃಂಭಿಸುತ್ತಾನೆ. 'ಅವಿವೇಕಿಗಳೆಂಬರ್ ಭೂಪರ್', ರಾಜ ಮತ್ತು ಮದಾನ್ವಿತ ಬೀಜ ಸಂಜಾತರಾದ ಅವರು ತೊತ್ತಿನ ಮೊಲೆ ಹಾಲನ್ನುಂಡವರಲ್ಲವೇ ? ಎಂದು ಕೆರಳಿ ಕೇಳುವ ಸನ್ನಿವೇಶವೂ ಅವನ ಕಾವ್ಯದಲ್ಲಿ ಬರುತ್ತದೆ. ಜೈನನಾಗಿ ವೈರಾಗ್ಯವನ್ನು ಬೋಧಿಸುವ ಜೈನ ಪುರಾಣದ ಕರ್ತೃವಾದರೂ, ಅವನು ಜೀವನದ ಸುಖೋಪ ಭೋಗಗಳ ಕಡೆಗೆ ಮುಕ್ತ ಮನಸ್ಸಿನವನಾಗಿದ್ದಾನೆ. ಪ್ರಕೃತಿ ಪ್ರೇಮ, ಮಾನವ ಸ್ವಭಾವದ ನಿಕಟ ಪರಿಚಯ, ಲೋಕಾನುಭವ, ಪಾಂಡಿತ್ಯ, ರಸಿಕತೆ, ಇವೆಲ್ಲವೂ ಪರಿಪಾಕಗೊಂಡು, ಅವೆಲ್ಲ ಉತ್ತಮ ಸಂಗೀತ ಕಲಾವಿದ ನಡೆಸುವ ಸಂಗೀತ ಕಚೇರಿಯಲ್ಲಿ ನಾದ ಮಾಧುರ್ಯವನ್ನೊದಗಿಸುವ ಪಕ್ಕವಾದ್ಯಗಳಂತೆ ಅವನ ಕಾವ್ಯದಲ್ಲಿ ಝೇಂಕರಿಸುತ್ತವೆ. ಪಂಪ ಸಹಜ ಕವಿ. ಉತ್ತುಂಗ ಶಿಖರಗಳನ್ನು, ಗಿರಿ, ವನ, ಕಾನನ, ಉಪವನಗಳನ್ನು, ನದಿ, ಝರಿ, ಕಾಲುವೆಗಳನ್ನು, ಗಿಳಿ, ಕೋಗಿಲೆ, ಮರಿದುಂಬಿಗಳನ್ನು, ಆನೆಗಳನ್ನು, ನಳನಳಿಸುವ ಮಾವಿನಮರ, ಕಂಪು ಸೂಸುವ ಬಿರಿದ ಮಲ್ಲಿಗೆಗಳುಳ್ಳ ಮಲ್ಲಿಗೆ ಬಳ್ಳಿ ಗಳನ್ನು, ಮುಗಿಲು ಮಳೆಗಳನ್ನು, ಮಿಂಚು ಮೊಳಗುಗಳನ್ನು, ಇಂದ್ರಚಾಪಗಳಂತೆಯೇ

ಇಂದ್ರಗೋಪಗಳನ್ನು ಕಂಡರೂ ಸರಿಯೆ, ಅವನ ಹೃದಯಮಯೂರ ಗರಿಗೆದರಿ ನೃತ್ಯ ಮಾಡಲು ತೊಡಗುತ್ತದೆ. ರನ್ನನಂತಹ ಶಕ್ತಿಕವಿಯು ಗದಾಯುದ್ಧ ಕಾವ್ಯದಿಂದ ಗದಾಯುದ್ಧ ಪ್ರಸಂಗದ ಕತೆಯ ಹಂದರವನ್ನು ಕಳಚಿಬಿಟ್ಟರೆ, ಆತ ಯುದ್ಧ ಮಾಡುತ್ತಿರುವಾಗ ಆಯುಧಗಳನ್ನೆಲ್ಲ ಕಳಕೊಂಡ ಬರಿಗೈಯ ಯೋಧನಂತೆ ನಿಲ್ಲುತ್ತಾ, ಸತ್ವಹೀನತೆಯನ್ನು ತೋರುವಂತಾಗುತ್ತದೆ. ಆದರೆ ಪಂಪ ಹಾಗಲ್ಲ. ಮಹಾಭಾರತದ ಕಥಾಂಶವನ್ನೆಲ್ಲ ಅವನ ಕೃತಿಯಿಂದ ಸೋಸಿ ತೆಗೆದರೂ, ಸಹಜ ಕವಚಾಯುಧಗಳುಳ್ಳ ಕರ್ಣನಂತೆ ಕಾವ್ಯ ಗುಣದಿಂದ ಶೋಭಿಸುತ್ತಾನೆ.

ತ್ಯಾಗ, ಭೋಗ, ಅಕ್ಕರ, ಗೇಯಗಳ ಗೋಷ್ಠಿ ಮುಂತಾದವುಗಳ ಅಲಂಪಿನಿಂಪುಗಳನ್ನು ಅನುಭವಿಸಿದ ಅವನ ಜೀವನವೇ ಕಾವ್ಯೋತ್ತೇಜಕವಾಗಿತ್ತೆಂದು ತೋರುತ್ತದೆ. ಲೋಕದಲ್ಲಿ ಉಳ್ಳ ಮೆಯ್ಯೊಗವನ್ನು ಸರಿಯಾಗಿ ಅನುಭವಿಸಿದನೆಂದು ಮುಚ್ಚುಮರೆಯಿಲ್ಲದೆ ಹೇಳಿದ ಅವನ ಮಾತಿನಿಂದ ತಿಳಿಯಲವಕಾಶವಿದೆ. ಸಾಮಾನ್ಯವಾಗಿ ಕವಿಗಳು ತಮ್ಮ ಕಾವ್ಯವನ್ನು ಓದುವವರಿಗೆ, ಕೇಳುವವರಿಗೆ ಗಂಗಾದಿ ತೀರ್ಥಸ್ನಾನ ಫಲ, ಜ್ಯೋತಿಷ್ಟೋಮಯಾಗ ಫಲ ಮುಂತಾದ ಪುಣ್ಯಗಳು ದೊರೆಯಲಿ ಎಂದು ಫಲಾಶಂಸೆ ಮಾಡಿದರೆ, ಪಂಪ :

> ಕರಮುಟ್ಕಿರ್ತು ಸಮಸ್ತ ಭಾರತ ಕಥಾ ಸಂಬಂಧಮಂ ಬಾಜಿಸಲ್
> ಬರೆಯಲ್ ಕೇಳಲೊಡರ್ಚುವಂಗಮಿದಱೊಳ್ ತನ್ನಿಷ್ಟಮಪ್ಪನ್ನಮು ।
> ತ್ತರಮಕ್ಕುಂ ಧೃತಿ, ತುಷ್ಟಿ, ಪುಷ್ಟಿ, ವಿಭವಂ, ಸೌಭಾಗ್ಯಮಿಷ್ಟಾಂಗನಾ
> ಸುರತಂ ಕಾಂತಿಯುಗುಂತಿ ಶಾಂತಿ, ವಿಭವಂ, ಭದ್ರಂ ಶುಭಂ ಮಂಗಳಂ ॥

ಎಂದು ನವೀನವಾಗಿ ಹೇಳಿರುವುದು ಅವನ ಜೀವನ ದೃಷ್ಟಿಗೆ ಹಿಡಿದ ಕನ್ನಡಿಯಂತಿದೆ.

ಪಂಪ ಭಾರತದ ಭಾಷೆ

ಕವಿಗಳು ತಮಗೆ ಸಮಕಾಲೀನವಾದ ತಿರುಳ್ಗನ್ನಡದಲ್ಲಿಯೇ ಕಾವ್ಯ ಬರೆಯಬೇಕೆಂದು ಕವಿರಾಜ ಮಾರ್ಗಕಾರ ಆಶಿಸಿದ್ದ. ಆತ ಪುಲಿಗೆರೆ, ಕೊಪಣನಗರ, ಒಂಕುಂದ ಮತ್ತು ಕಿಸುವೊಳಲುಗಳ ನಡುವಣ ಪ್ರದೇಶದಲ್ಲಿದ್ದ ಪ್ರಚಲಿತ ಕನ್ನಡವನ್ನೇ ತಿರುಳ್ಗನ್ನಡವೆಂದು ಗುರುತಿಸಿದ್ದಾನೆ. ಪಂಪ ಆಸ್ಥಾನ ಕವಿಯಾಗಿ ವಿಜೃಂಭಿಸಿದುದು ಹೈದರಾಬಾದಿನ ಸಮೀಪದ ವೆಂಗಿ ಪಳುವಿನ ಲೆಂಬುಳಪಾಟಕ ಎಂಬ ಪ್ರದೇಶದಲ್ಲಿ. ಇದು ಈಗ ಆಂಧ್ರಪ್ರದೇಶದಲ್ಲಿದೆ. ಹಿಂದೆಯೂ ಅಲ್ಲಿ ತೆಲುಗಿಗೆ ಪ್ರಾಶಸ್ತ್ಯವಿದ್ದಿರಬಹುದು. ಪಂಪನ ತಮ್ಮ ಜಿನವಲ್ಲಭ ಬರೆಸಿದ ಪಂಪನ ಕುರಿತಾದ ತ್ರಿಭಾಷಾ ಶಾಸನದಲ್ಲಿ ಮೂರು ಕಂದ ಪದ್ಯಗಳು ತೆಲುಗಿನಲ್ಲಿಯೂ ಇವೆ. ಒಂದೇ ವಿಷಯವನ್ನು ಕುರಿತು ಸಂಸ್ಕೃತ, ಕನ್ನಡ ಮತ್ತು ತೆಲುಗಿನಲ್ಲಿ, ಆದರೆ ಕನ್ನಡ ಲಿಪಿಯಲ್ಲಿ, ಈ ಶಾಸನವನ್ನು

ಬರೆಯಲಾಗಿದೆ. ಪಂಪ ತನ್ನ ಕಾವ್ಯದಲ್ಲಿ ಪುಲಿಗೆರೆಯ ತಿರುಳ್ ಕನ್ನಡವನ್ನು ಬಳಸಿದ್ದೇನೆ ಎಂದಿದ್ದಾನೆ.

ರಾಜಾದ್ರಾಜಕಮೆನಿಸಿದ
ಸಾಜದ ಪುಲಿಗೆಱೆಯ ತಿರುಳ ಕನ್ನಡದೊಳ್ ನಿ
ರ್ವ್ಯಾಜದೆಸಕದೊಳೆ ಪುದಿದೊಂ
ದೋಜೆಯ ಬಲದಿಸಿಯ ಕವಿತೆ ಪಂಪನ ಕವಿತೇ ॥ 14-58

ವೃತ್ತಗಳು, ಕಂದಗಳು, ಕೆಲವೇ ಕೆಲವು ರಗಳೆಗಳನ್ನು ಉಪಯೋಗಿಸಿ, ಸಂದರ್ಭಕ್ಕೆ ಸರಿಯಾಗಿ ಛಂದಸ್ಸನ್ನು ಹಾಗೂ ಭಾಷೆಯ ಧ್ವನಿಶಕ್ತಿಯನ್ನು ಸಮರ್ಥ ರೀತಿಯಲ್ಲಿ ಪಂಪ ಬಳಸಿಕೊಂಡಿದ್ದಾನೆ. ಅಚ್ಚದೇಸಿ ರೂಪಗಳೊಡನೆ ದೀರ್ಘಸಂಸ್ಕೃತ ಪದಗಳೂ ಲಾಸ್ಯವಾಡುತ್ತವೆ. ಹೀಗೆ ಧ್ವನಿ ರಮ್ಯತೆಯನ್ನು ಮಾಡುವುದಲ್ಲದೆ ಕೆಲವು ವೇಳೆ ಪಾತ್ರಗಳಿಗನುಸರಿಸಿ ಭಾಷೆಯ ಬಳಕೆಯಾಗುತ್ತದೆ. ಬಹುಶಃ ಈ ಗುಣ ಕನ್ನಡ ಕವಿಗಳಲ್ಲಿ ಪಂಪನಲ್ಲಿ ಮಾತ್ರ ಕಂಡು ಬರುವ ವಿಶೇಷ ಲಕ್ಷಣವಾಗಿದೆ. ಇದಕ್ಕೆ ಉದಾಹರಣೆಯಾಗಿ ಸರ್ವನಾಮದ ಬಳಕೆಯನ್ನು ಪರಿಶೀಲಿಸಬೇಕು.

ದಕ್ಷಿಣ ಕನ್ನಡವನ್ನು ಬಿಟ್ಟು ಉಳಿದ ಕರ್ನಾಟಕದ ಭಾಗಗಳಲ್ಲಿ ಮಧ್ಯಮ ಪುರುಷ ಸರ್ವನಾಮವನ್ನು ಉಪಯೋಗಿಸುವಾಗ ಎರಡು ರೀತಿಯ ಪ್ರಯೋಗವಾಗುವುದಿದೆ. ಉದಾ : ತಂದೆ ತನ್ನ ಮಗ ಇಲ್ಲವೇ ಮಗಳೊಡನೆ, ಅವರ (ಅಂದರೆ ಮಕ್ಕಳ) ತಾಯನ್ನು ಕುರಿತು ಹೇಳುವಾಗ ಮಕ್ಕಳನ್ನುದ್ದೇಶಿಸಿ :

"ರಾಮು, ನಿಮ್ಮ ಅಮ್ಮನಿಗೆ ಇದನ್ನು ಕೊಡು" ಅಥವಾ
"ಸೀತಾ, ನಿಮ್ಮ ಅಮ್ಮ ಏನು ಮಾಡುತ್ತಾಳೆಂದು ನೋಡು"

ಎಂದೇ ಹೇಳುವುದು ರೂಢಿ. ಇಲ್ಲಿ ತನ್ನ ಮಕ್ಕಳನ್ನುದ್ದೇಶಿಸಿ ಹೇಳುವಾಗ ಪ್ರಯೋಗ ವಾಗುವ ಗೌರವ ಬಹುವಚನ (ನಿಮ್ಮ) ಮಕ್ಕಳಿಗೆ ತಂದೆ ತೋರಿಸುವ ಗೌರವವೂ ಅಲ್ಲ, ಹಾಗೆಯೇ ಅವರ ತಾಯಿಯಾದ ತನ್ನ ಹೆಂಡತಿಗೆ ಆತ ತೋರಿಸುವ ಗೌರವವೂ ಅಲ್ಲ. ಆದರೆ ಮಕ್ಕಳು ತಾಯಿಯೆಡೆಗೆ (ಆದರೆ ಅವುಗಳು ತಾಯನ್ನು ಏಕವಚನದಿಂದಲೇ ಕರೆಯುತ್ತಿದ್ದರೂ ಕೂಡ) ತೋರಿಸಬೇಕಾದ ಗೌರವ ಹೀಗೆ ವ್ಯಕ್ತವಾಗುವುದು ವಾಡಿಕೆ. ಪಂಪ ಭಾರತದಲ್ಲಿ ಈ ತರದ ಪ್ರಯೋಗಗಳು ಬಂದಿವೆ :

'ಪಿಡಿದುಯ್ದುದಂಗಡ ನಿಮ್ಮಣ್ಣನ ಸುಯೋಧನನ್' ಎಂದು ಯುಧಿಷ್ಠಿರ ಅರ್ಜುನನಿಗೆ (7-37), 'ನಿಮಣ್ಣನಪ್ಪಣುವನೆನಾನಪ್ಪೆನ್' ಎಂದು ಹನುಮಂತ ಭೀಮನಿಗೆ (8-33 ಗದ್ಯ) ಹೇಳುವ ಪ್ರಯೋಗಗಳು ಬಂದಿವೆ.

ಹಿರಿಯರನ್ನು ಗೌರವ ಬಹುವಚನದಿಂದ ಕರೆಯುವ ಸಂಪ್ರದಾಯವನ್ನು ಸರ್ವತ್ರ ಪಂಪ ಭಾರತದಲ್ಲಿ ಕಾಣುತ್ತೇವೆ. ಕುಮಾರವ್ಯಾಸನಲ್ಲಿ ಇದೆಲ್ಲ ಅಸ್ತವ್ಯಸ್ತ. ಸಾಮಾನ್ಯ ಸಾಮಾಜಿಕ ನಡವಳಿಕೆಯಲ್ಲಿ ಈ ಗೌರವ ಬಹುವಚನವನ್ನು ಕ್ರಮವಾಗಿ ಬಳಸಿದರೂ, ಕಲಹದ ಕಾವಿನಲ್ಲಿ ಅದನ್ನೆಲ್ಲ ಬಿಟ್ಟು, ಏಕವಚನಕ್ಕೆ ಹಾರುವುದು ಇಂದಿಗೂ ಕಂಡು ಬರುವ ವಿಷಯ. ಆದರೆ ಪಂಪನ ಸುಸಂಸ್ಕೃತತೆ ಅದಕ್ಕೆಡೆಗೊಡದೆ ಯುದ್ಧಾವಸರದಲ್ಲಿ, ಮರ್ಮಾಘಾತವಾದ ಮೂದಲಿಕೆ, ಕೈದುಗಳ ತಾಕಲಾಟ ನಡೆಯ ಬೇಕಾದಲ್ಲೂ, ಈ ಹಿರಿಯ ಕಿರಿಯ ಶ್ರೇಣಿಯನ್ನು ಎಚ್ಚರಿಕೆಯಿಂದ ಕಾಯ್ದುಕೊಂಡಿದೆ. ಭೀಷ್ಮನೊಡನೆ ಪ್ರಾಣಾಂತಿಕ ಯುದ್ಧ ಮಾಡುವ ಶ್ವೇತಕೇತು ಕುಲವೃದ್ಧನಾದ ಭೀಷ್ಮನನ್ನು ಬಹುವಚನದಿಂದ, ಭೀಷ್ಮ ಅವನನ್ನು ಏಕವಚನದಿಂದ ಕರೆಯುವುದನ್ನು ಕಾಣುತ್ತೇವೆ.

ಇದೆಂತೊ ನಿಮ್ಮ ಪೆರ್ಮಾತಿನ ಬೀರಂ 10—118
ನಿಮ್ಮೊಳ್ ವಲಂ ತಱಿಸಂದಿಱಿಯಲ್ಕೆ 10—119
ಕಾಗೆವೊಲಿಂತು ಬಿಲ್ಗಂಜುವಿರೆ 10—122

ಎಂದು ಮರ್ಯಾದೆಯ ಎಲ್ಲೆಯನ್ನು ಮೀರದೆ ಶ್ವೇತಕೇತು ಭೀಷ್ಮನನ್ನು ಮೂದಲಿಸುತ್ತಾನೆ.

ದ್ರೌಪದಿಗೆ ರಾಜಸಭೆಯಲ್ಲಾದ ಅವಮಾನದ ಸಂದರ್ಭದಲ್ಲಿ ಮಾತ್ರ ಕೋಪಾವಿಷ್ಟನಾಗಿ ಭೀಮ ಹಿರಿಯರಾದವರನ್ನೂ ಏಕವಚನದಲ್ಲೇ ಕರೆದು ತನ್ನ ಕೋಪದ ಪರಾಕಾಷ್ಠೆಯನ್ನು ಪ್ರಕಟಮಾಡುತ್ತಾನೆ. ಹೀಗೆ ಸನ್ನಿವೇಶಕ್ಕನುಗುಣವಾಗಿ ಭಾಷೆಯ ಪ್ರಯೋಗವನ್ನು ಪಂಪ ಮಾಡುತ್ತಾನೆ. ಕೆಳಗಿನದು ಭೀಮನ ಮಾತು :

ಸುರಸಿಂಧು ಪ್ರಿಯಪುತ್ರ ಕೇಳ್ ಕಳಶಜಾ ನೀಂ ಕೇಳ್ ಕೃಪಾ ಕೇಳ ಮಂ
ದರದಿಂದಂಬುಧಿಯಂ ಕಲಂಕಿದಸುರಪ್ರಧ್ವಂಸಿಯವೋಲ್ ಬಾಹು ಮಂ ।
ದರದಿಂ ವೈರಿಬಲಾಬ್ಧಿ ಘೂರ್ಣಿಸೆ ಬಿಗುರ್ತೀ ಕೌರವರ್ ಕೂಡೆ ನೂ
ರ್ವರುಮಂ ಕೊಲ್ವೆನಿದೆನ್ನ ಪೂಣ್ಕೆ ನುಡಿದೆಂ ನಿಮ್ಮೀ ಸಭಾಮಧ್ಯದೊಳ್ ॥ 7-15

ಉತ್ತಮ ಪುರುಷ ಬಹುವಚನ (ನಾವು, ಎಮ್ಮ) ಪ್ರಯೋಗವನ್ನು ಏಕವ್ಯಕ್ತಿಗಳು ಎರಡು ರೀತಿಯಿಂದ ಪಂಪ ಭಾರತದಲ್ಲಿ ಮಾಡುವುದು ಕಂಡುಬರುತ್ತದೆ. ಬ್ರಾಹ್ಮಣರು, ಋಷಿಗಳು ತಮ್ಮ ಕುಲ ಮತ್ತು ಅಂತಸ್ತಿನ ಕಾರಣದಿಂದ ತಮ್ಮನ್ನು ಕುರಿತು ಹೇಳುವಾಗ ಯಾವಾಗಲೂ ಉತ್ತಮ ಪುರುಷ ಬಹುವಚನ ರೂಪವನ್ನೇ ಬಳಸುತ್ತಾರೆ. ಕ್ಷಾತ್ರ

ಪಾತ್ರಗಳಾದ ಭೀಷ್ಮ ಮುಂತಾದವರು ವಿನಯ ಪ್ರದರ್ಶನಕ್ಕೆ ಈ ಬಹುವಚನವನ್ನು, ದರ್ಪಪ್ರದರ್ಶನಕ್ಕೆ ಏಕವಚನವನ್ನು ಬಳಸುವುದು ಕಂಡುಬರುತ್ತದೆ.*

ಛಂದಸ್ಸಿನಲ್ಲಿ ಒಮ್ಮೆ ಕಂದ, ಒಮ್ಮೆ ವೃತ್ತ, ಒಮ್ಮೆ ವಚನ, ಒಮ್ಮೆ ರಗಳೆ ಎಂಬ ವೈವಿಧ್ಯವನ್ನು ತೋರುವಂತೆ ಭಾಷೆಯಲ್ಲೂ ಒಮ್ಮೆ ಅಚ್ಚ ದೇಸಿ, ಒಮ್ಮೆ ತದ್ಭವ, ಒಮ್ಮೆ ಸಂಸ್ಕೃತದ ಲಲಿತ ಪದ ಸಮೂಹ, ಇನ್ನೊಮ್ಮೆ ಕ್ಲಿಷ್ಟ, ಪರುಷ ದೀರ್ಘ ಸಮಾಸಗಳನ್ನೂ ಸಂದರ್ಭಕ್ಕೆ ತಕ್ಕಂತೆ ತಂದು, ಅರ್ಥಕ್ಕೆ ಧ್ವನಿಪುಷ್ಟಿಯನ್ನೂ ತುಂಬ ಬಲ್ಲವನು ಪಂಪ.

ಚಾಳುಕ್ಯ ವಂಶಾವಳಿಯನ್ನು ಅದರ ಪ್ರಮುಖ ರಾಜರನ್ನೆಲ್ಲ ಕ್ರಮವಾಗಿ ಸರಳವಾಗಿ ವರ್ಣಿಸುತ್ತ ಬರುತ್ತಾನೆ. ತನ್ನ ಕಥಾನಾಯಕನಾದ ಅರಿಕೇಸರಿಯನ್ನು ಅರ್ಜುನನೊಡನೆ ಹೋಲಿಸಿ ಹೇಳಬೇಕಾದ ಸಂದರ್ಭ ಬರುತ್ತದೆ. ಅವನ ಶೌರ್ಯ, ಪರಾಕ್ರಮ, ಸಾಹಸ ವೀರ್ಯಗಳು ವ್ಯಕ್ತವಾಗುವ ಸಂದರ್ಭದಲ್ಲಿ, ಮಿಂಚು ಹರಿದಂತೆ, ಗುಡುಗು ಮೊಳಗಿದಂತೆ ಒಮ್ಮಿಂದೊಮ್ಮೆಗೆ ಸಂಸ್ಕೃತನಿಬಿಡ ಪದಗಳು ಕಿಡಿಗೆದರುತ್ತವೆ. ಇದನ್ನು ಕೇಳಿದಾಗ, ಯಕ್ಷಗಾನದಲ್ಲಿ ಹಿರಿಯ ಪಾತ್ರಗಳು ರಂಗಪ್ರವೇಶ ಮಾಡುವ ಸಂದರ್ಭದಲ್ಲಿ ಒಮ್ಮಿಂದೊಮ್ಮೆ ಚೆಂಡೆಯ ಲಯಬದ್ಧ ಮೊಳಗುವಿಕೆಯನ್ನು ಕೇಳಿಸಿದಂತಾಗುತುತ್ತದೆ.

ಎನೆ ಸಂದುಂ ವೀರ ವೈರಿ ಕ್ಷಿತಿಪ ಗಜ ಘಟಾಟೋಪ ಕುಂಭಸ್ಥಳೀ ಭೇ
ದನನುಗ್ರೋದ್ಭಾಸಿ ಭಾಸ್ವದ್ಭುಜ ಪರಿಘನನಾರೂಢ ಸರ್ವಜ್ಞನಂ ವೈ ।
ರಿನರೇಂದ್ರೋದ್ದಾಮ ದರ್ಪೋದ್ದಳನನೆ ಕಥಾನಾಯಕಂ ಮಾಡಿ ಸಂದ
ರ್ಜುನನೊಳ್ ಪೋಲ್ವೀ ಕಥಾಭಿತ್ತಿಯನನುನಯದಿಂ ಪೇೞಲೆಂದೆತ್ತಿಕೊಂಡೆಂ ॥ 1–51

ಅದೇ ರೀತಿ ಸಮುದ್ರವನ್ನು ಕುರಿತು ಹೇಳುವಾಗ ಅಲೆಯ ಮೇಲೆ ಅಲೆಯೇರುವಂತೆ "ಸಮುನ್ಮಿಷದ್ವಿವಿಧ ರತ್ನಮಾಲಾ ಪ್ರಭಾಭೀಲಾರುಣ ಜಲಪ್ಲಾವಿಳ ವಿಳೋಳ ವೀಚೀರಯ ಪ್ರದಾರಿತ ಕುಳಾಚಲೋದಧಿ ಪರೀತಮಾಗಿರ್ದ..." ಎಂದು ಮುಂತಾಗಿ ಸಂಸ್ಕೃತದ ವಿಜೃಂಭಣೆ ಕಂಡು ಬರುತ್ತದೆ.

ಇನ್ನು ನಾಡಿನ ವರ್ಣನೆಯನ್ನು ಮಾಡುವಾಗ ದೇಸೀ ಪದಗಳು ಕುಣಿಯುತ್ತ ಮಣಿಯುತ್ತ ಬಳುಕುತ್ತ ಕುಲುಕುತ್ತ ಮನಮೋಹಿಸುತ್ತವೆ.

---

*ಈ ವಿಷಯದಲ್ಲಿ ಹೆಚ್ಚಿನ ಮಾಹಿತಿಗ ನನ್ನ ಲೇಖನ ('ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಬರುವ ಗೌರವ ಸೂಚಕ ಸರ್ವನಾಮಗಳ ಪ್ರಯೋಗಗಳು' ಸಾಧನೆ 15–16, 3–4, 1–2, ಜುಲೈ–ಡಿಸೆಂಬರ್ 1986, ಜನವರಿ–ಜೂನ್ 1987) ವನ್ನು ನೋಡಬಹುದು.

'ಜಲಜಲಸ್ತೋಟ್ಕುತಿರ್ಪ ಪರಿಕಾಲ್...
'ಬೆಳಿದೆರಗಿರ್ದ ಕೆಯ್ದೊಲಸೆ...'
ಮಿಡಿದೊಡೆ ತನಿಗರ್ವು ರಸಂ
ಬಿಡುವುವು ಬಿರಿದೊಂದು ಮುಗುಳ ಕಂಪಿನೊಳೆ ಮೊಗಂ ।
ಗಿಡುವುವು ತುಂಬಿಗಳಟ್ಕಿಮೆ
ಪಡುವುವು ಕುಡಿದೊಂದು ಪಣ್ಣ ರಸದೊಳೆ ಗಿಳಿಗಳ್ ॥ ೧–೫೬

'ರಸ' ವೆಂಬ ಕಿರಿಯ ಸಂಸ್ಕೃತ ಪದವೊಂದನ್ನು ಬಿಟ್ಟರೆ .ಅಲ್ಲಿ ಎಲ್ಲವೂ ಅಚ್ಚಗನ್ನಡ ಪದಗಳೇ.

ತನ್ನ ಮಂಚದ ಕಾಲಿಗೆ ದ್ರುಪದನನ್ನು ಕಟ್ಟಿಸಿ, ಹಿಂದೆ ತನಗೆ ಅವನು ಮಾಡಿದ್ದ ಅವಮಾನಕ್ಕೆ ಪ್ರತೀಕಾರ ಮಾಡುವ ಮಾತಾಡಿ, ಮತ್ತೆ ದ್ರೋಣ ಅವನ ತಲೆಗೆ ಒದೆಯುತ್ತಾನೆ. ಆ ಕಾಲೆತ್ತಿ ಒದೆಯುವ ನೋಟವೂ, ಆ ಶಬ್ದವೂ ನಮ್ಮ ಕಣ್ಣು ಮತ್ತು ಕಿವಿಗಳಿಗೆ ವೇದ್ಯವಾಗುವಂತೆ ಪಂಪ ಧ್ವನಿಸುತ್ತಾನೆ.

ಆದಿ ಕ್ಷತ್ರಿಯರೇ ನೀ
ಮಾದಿತ್ಯನನಿಳಿಪ ತೇಜರಿರ್ ಪಾರ್ವನ ಕಾಲ್ ।
ಮೋದೆ ನಡುತಲೆಯುಲಿರ್ಪುದು
ಮಾದುದು ನಿಮಗೆಂದು ನುಡಿದು ಕಾಯ್ಪಿನೊಳೊದೆದಂ ॥ 2–64

ಮೊದಲಿಗೆ, ಆದಿ ಕ್ಷತ್ರಿಯರೇ ಎಂದು ಕರೆಯುವಲ್ಲಿಯ ದೀರ್ಘ ಕಾಕುವನ್ನು ಗಮನಿಸ ಬೇಕು. ಅಂತ್ಯದ ಸಾಲಿನಲ್ಲಿರುವ ಕಾಯ್ಪಿನೊಳ್ ಎಂಬಲ್ಲಿಯ 'ಕಾ'ವನ್ನು ಸ್ವಲ್ಪ ಎಳೆದು ಮತ್ತೆ ಶಬ್ದವನ್ನು ಪೂರ್ತಿ ಮಾಡಿ ಸ್ವಲ್ಪ ವಿಳಂಬಿಸಿ ಮುಂದಿನ ಒದೆದಂ ಎಂಬ ಪದವನ್ನು ಉಚ್ಚರಿಸಿದರೆ, ಕಾಲನ್ನು ಹಾಗೆ ಎಳೆದುಕೊಂಡು ಮೇಲೆತ್ತಿದಂತೆ ಮತ್ತೆ ಧೊಪ್ಪೆಂದು ಒದೆದ ಶಬ್ದ ಕೇಳಿಸಿದಂತೆ ಭಾಸವಾಗುತ್ತದೆ. ನಮ್ಮ ಕಣ್ಣೆದುರೇ ನಡೆಯುವ ತ್ರಿಗಾತ್ರ ನಾಟಕವನ್ನು ನೋಡುತ್ತೇವೆಯೋ ಎಂದಾಗುತ್ತದೆ.

ಕರ್ಣ ಮತ್ತು ಘಟೋತ್ಕಚರಿಗಾದ ಯುದ್ಧದ ತುಮುಲವನ್ನು ಉತ್ಸಾಹವೃತ್ತ ದಲ್ಲಿ ತುಂಬ ಪರಿಣಾಮಕಾರಿಯಾಗಿ ಪಂಪ ವರ್ಣಿಸಿದುದು ಹೀಗಿದೆ :

ಎಚ್ಚೊಡಸುರನಿಟ್ಟ ಬೆಟ್ಟನೊಂದು ವಜ್ರ ಶರದಿನಾ
ರ್ದೆಚ್ಚು ದಿತಿಜನೆಚ್ಚ ಸಿಡಿಲ ಶರಮನುದಕ ಬಾಣದಿಂ ।
ದೆಚ್ಚು ದನುತನೂಜನೆಚ್ಚ ವಾರ್ಧಿಗನಲ ಬಾಣದಿಂ
ದೆಚ್ಚು ನಚ್ಚುಗಿಡಿಸೆ ಕೊಂಡು ಶೂಲಮಂ ಘಟೋತ್ಕಚಂ ॥ ೧೦–೧೩

ಇಂತಹ ಹಲವು ಉದಾಹರಣೆಗಳು ಪಂಪ ಭಾರತದಲ್ಲಿ ಹೆಜ್ಜೆಹೆಜ್ಜೆಗೂ ದೊರೆಯುತ್ತವೆ. ಶಬ್ದ ಸಂಯೋಜನೆಯಿಂದಲೇ ಧ್ವನಿಸಾಮರಸ್ಯವನ್ನು ಹೇಗುಂಟು ಮಾಡಬಲ್ಲನೆಂಬುದಕ್ಕೆ ಕುರುಕ್ಷೇತ್ರದ ರಣಾಂಗಣದಲ್ಲಿ ಅತ್ಯಂತ ತೀವ್ರ ವೇಗದಿಂದ ಸಂಚರಿಸುವ ಅರ್ಜುನನ ರಥದ ವರ್ಣನೆಯೊಂದು ಉತ್ತಮ ಉದಾಹರಣೆಯಾಗಿದೆ.

ಚಟುಳಿತ ಚಕ್ರನೇಮಿ ಪರಿವರ್ತನ ಘಟ್ಟನ ಘಾತ ನಿರ್ಭರ
ಸ್ಫುಟಿತ ಧರಾತಳಂ ವಿಜಯನುಗ್ರರಥಂ ಪರಿದತ್ತು ದಲ್ ಘಟಾ ।
ಘಟಿತ ಹಟದ್ವಿರೋಧಿ ರುಧಿರಪ್ಲವಲಂಪಟ ಸಂಕಟೋತ್ಕಟಂ
ಕಟಕಟ ಘಾತ ನಾಕತಟ ಸಂಕಟ ಸಂಗರ ರಂಗಭೂಮಿಯೊಳ್ ॥ 11–146

ರಥ ಓಡುತ್ತಿರುವಾಗ ವಿವಿಧ ರೀತಿಯ ಶಬ್ದಗಳಾಗುತ್ತವೆ. ಆದರೂ ಎತ್ತರ ತಗ್ಗುಗಳಲ್ಲಿ ಓಡುತ್ತಿರುವಾಗ ನಮಗೆ ಎಲ್ಲಕ್ಕಿಂತ ಹೆಚ್ಚಾಗಿ ಕೇಳಿಸುವುದು ಕಟ ಕಟ ಶಬ್ದವೇ. ಅದನ್ನು ಪಂಪ ಈ ಪದ್ಯದಲ್ಲಿ ಸೆರೆ ಹಿಡಿದಿದ್ದಾನೆ.

ವೀರ-ರೌದ್ರಗಳಿಗೆ ಅನುಗುಣವಾಗಿ ಈ ರೀತಿಯ ಪದವಿನ್ಯಾಸಗಳನ್ನು ಅಳವಡಿಸಿದರೆ, ಶೃಂಗಾರ ಭಾವವ್ಯಂಜಕವಾಗಿ ಲಲಿತಪದ ಸಮೂಹಗಳನ್ನು ಬಳಸುತ್ತಾನೆ :

ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರವಾದ ಮಾನಸರೆ ಮಾನಸರ್ ಅಂತವರಾಗಿ ಪುಟ್ಟಲೇ ।
ನಾಗಿಯುಮೇನೊ ತೀದರ್ಪುದೆ ತೀರದೊಡಂ ಮಱಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್ ॥ ೪–೨೯

ಇನ್ನು ಉನ್ನತವಾದ ಪರ್ವತ ಶೃಂಗಗಳನ್ನು ವರ್ಣಿಸುವಾಗ, ಗಂಭೀರ ವಿಷಯ ಗಳನ್ನು ಹೇಳಬೇಕಾದಾಗ ಸಂಸ್ಕೃತ ಪದಗಳು ನಿರರ್ಗಳವಾಗಿ ಬರುತ್ತವೆ. ಮತ್ತೆ ದೇವತಾ ಸ್ತುತಿ ಮಾಡುವ, ರಾಜಾಶೀರ್ವಾದ ಮಾಡುವ ಸಂದರ್ಭದಲ್ಲಿ ಇಡೀ ಪದ್ಯವೇ ಸಂಸ್ಕೃತವಾಗುವುದೂ ಇದೆ. ಹೀಗೆ ಹಿತ, ಮಿತ, ಮೃದು ಗಂಭೀರ ವಚನ ರಚನಾ ನೈಪುಣ್ಯದಲ್ಲಿ ಪಂಪ ಸಿದ್ಧಿಯನ್ನು ಪಡೆದಿದ್ದಾನೆ, ಎಲ್ಲರಿಗಿಂತ ಮಿಗಿಲಾಗಿದ್ದಾನೆ.

ಪಂಪ ಮತ್ತು ಪ್ರಕೃತಿ

ರಾಮಾಯಣ ಮತ್ತು ಮಹಾಭಾರತ ಕಾವ್ಯಗಳು ಪ್ರಕೃತಿ ಮತ್ತು ಮಾನವ ರೊಡನೆ ನೇರ ಸಂಪರ್ಕವನ್ನೊದಗಿಸುತ್ತವೆ. ಕಾರಣ, ರಾಜರಾಗಿ ಜನ್ಮವೆತ್ತಿದವರಾದರೂ,

ಅವುಗಳ ಕಥಾನಾಯಕರು ದೀರ್ಘಕಾಲದ ಅರಣ್ಯವಾಸ ಮಾಡಬೇಕಾದ ಸಂದರ್ಭ ಪೊದಗುತ್ತದೆ. ಇದರಿಂದ ಕವಿಗಳಿಗೆ ಅರಣ್ಯ ವರ್ಣನೆ ಮಾಡುವುದಕ್ಕೆ ಬೇಕಾದಷ್ಟು ಅವಕಾಶವಾಗುತ್ತದೆ. ಪಂಪನಂತೂ ವಿಶೇಷವಾದ ಪ್ರಕೃತಿ ಪ್ರೇಮಿ. ಆದುದರಿಂದ ಅಲ್ಲಲ್ಲಿ ಅವನ ಪ್ರಕೃತಿಯ ವರ್ಣನೆ ಕಾರಂಜಿಯಂತೆ ಪುಟಿಯುತ್ತದೆ. ಕುರುಜಾಂಗಣ ವಿಷಯವನ್ನು ವರ್ಣಿಸುವ ಸಂದರ್ಭದಲ್ಲಿ ಕರ್ನಾಟಕದ ಮಲೆನಾಡ ಸೆರಗಿನ ಯಾವುದೋ ಪ್ರವೇಶವನ್ನು ವರ್ಣಿಸುವಂತೆ ಕಾಣಿಸುತ್ತದೆ.

'ಕಾಲುವೆಯಲ್ಲಿ ಜಲಜಲನೆ ಹರಿಯುವ ನೀರು, ಅದರಲ್ಲಿ ಅರಳಿದ ನೆಯ್ದಿಲೆಯ ಹೊಸ ಹೂವು, ಆ ಹೊಸತಾಗಿ ಅರಳಿದ ನೆಯ್ದಿಲೆಯ ಕಂಪನ್ನು ಹೀರಿಕೊಂಡು ಬೆಳೆದ ಹೊಂಬಣ್ಣದ ಕದಿರುಗಳಿಂದ ತೂಗಿ ತೊನೆಯುವ ಶಾಲಿವನ, ಅಂದರೆ ಬತ್ತದ ಗದ್ದೆಗಳು ; ಅದಕ್ಕೆ ಎರಗುವ ಗಿಳಿವಿಂಡುಗಳು ; ಇವೆಲ್ಲವುಗಳಿಂದ ಒಪ್ಪಿ ಆ ದೇಶಾಂತರ ವನ್ನು ಐಶ್ವರ್ಯ ಲಕ್ಷ್ಮಿಯೇ ಮೆಚ್ಚಿ ನೋಡುತ್ತಿದ್ದಾಳೆ ಎಂಬಂತಿದೆ'.

'ಬೆಳೆದೊರಗಿದ ಕೆಯ್ವೊಲಗಳನ್ನು ಸುತ್ತಿ ಅರಳಿದ ಹೂವುಗಳಿದ್ದ ಕೊಳ ಗಳಿದ್ದುವು ; ಆ ಹೂಗೊಳಗಳನ್ನು ಬಳಸಿ ವಿಚಿತ್ರವಾದ ನಂದನಾವಳಿಗಳಿದ್ದುವು ; ನಂದನಾವಳಿಗಳನ್ನು ಬಳಸಿ ಮದಾಳಿ ಸಂಕುಲಗಳಿದ್ದುವು ; ಇದು ನೋಡಲು ಭೂಕಾಂತೆ ತನ್ನ ಕೂದಲನ್ನು ಬಿಚ್ಚಿ ಹರಡಿರುವಳೋ ಎಂಬಂತೆ ಇತ್ತು.'

'ವಿಚಿತ್ರ ಪತ್ರ ಫಲ ಪುಷ್ಪಗಳಿಂದ ಕೂಡಿದ ಅಡವಿ ಸೊಕ್ಕಿದ ಆನೆಗಳನ್ನು ಬೆಳೆಸುತ್ತದೆ ; ದೇವಮಾತೃಕ ಅಂದರೆ, ಮಳೆ ನೀರಿಂದ ಬೆಳೆ ಬೆಳೆಯುವ ಗದ್ದೆಗಳಲ್ಲಿ ಗಂಧಶಾಲಿ ಬತ್ತ ಬೆಳೆಯುತ್ತದೆ ; ಸುಂದರವಾದ ನಂದನವನಗಳು ವಿಯೋಗಿ ಜನರಿಗೆ ಪ್ರೇಮವನ್ನು ಬೆಳೆಸುತ್ತವೆ. ಆ ನಾಡಿನ ಬೆಳೆಯೆಲ್ಲವೂ ಇನಿದಾದ ಬೆಳೆಯೇ' ಎಂದು ಕೈವಾರಿಸುತ್ತಾನೆ.

'ಹಣ್ಣು ಹೂವುಗಳು ಎಂದೂ ಇಲ್ಲದಾಗವು. ಮಲ್ಲಿಗೆಯೂ, ಸಿಹಿ ಮಾವೂ ಎಂದೂ ಇಲ್ಲದಾಗವು ಅಲ್ಲಿ ; ಎಂದಾಗ, ಸಂಸಾರ ಸಾರ ಸರ್ವಸ್ವದ ಫಲ ಇನ್ಯಾವುದಿದೆ ? ರಸ ತುಂಬಿದ ಕಬ್ಬಿಗೆ ಇಷ್ಟು ಮಿಡಿದರೆ ಸಾಕು, ರಸ ಸೂಸುತ್ತದೆ. ಒಂದೇ ಒಂದು ಹೂವಿನ ಬಂಡು ಸಾಕು, ತುಂಬಿಯು ಹೊಟ್ಟೆತುಂಬಿ ಮುಖ ತಿರುಗಿಸುವಂತೆ ಮಾಡಲು. ಒಂದೇ ಒಂದು ಹಣ್ಣಿನ ರಸವನ್ನು ಹೊಟ್ಟೆ ತುಂಬ ಕುಡಿದ ಗಿಳಿಗೆ ಅಜೀರ್ಣವುಂಟಾಗುತ್ತದೆ. ಸುತ್ತಲೂ ರಸದ ತೊರೆಗಳು ; ಮುತ್ತು ಮಾಣಿಕ್ಯಗಳ ಹಲವು ಆಗರಗಳು, ಸುತ್ತಲೂ ಮದೋನ್ಮತ್ತ ಮದಕರಿಗಳಿರುವ ವನಗಳೇ ಎಂದಾಗ, ಆ ನೆಲದ ಸಿರಿಯನ್ನು ಏನೆಂದು ವರ್ಣಿಸಲಿ ?' ಎನ್ನುತ್ತಾನೆ ಪಂಪ ಸಹಜವಾಗಿ.

ಬನವಾಸಿಯ ವರ್ಣನೆಯಂತೂ ಹೃನ್ಮನಗಳನ್ನು ಸೂರೆಗೊಳ್ಳುತ್ತದೆ. ಕ್ಲಿಷ್ಟ

ಪದಗಳನ್ನೊಂದೂ ಸೇರಿಸದೆ, ಕನ್ನಡದ ನಲ್ನುಡಿಗಳನ್ನು ಪೋಣಿಸಿ, ನಾಡ ಸೊಬಗನ್ನು ಬಣ್ಣಿಸುತ್ತಾನೆ :

ಸೊಗಯಿಸಿ ಬಂದ ಮಾವುರನೆ ತಳ್ತಲೆವಳ್ಳಿಯೆ ಪೂತ ಜಾತಿ ಸಂ
ಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರೊಳ್ಮೊಗಂ ।
ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ ನೋಟಿಪ್ಪೊಡಾವ ಬೆ
ಟ್ಟುಗಳೊಳಂ ನಂದನವನಂಗಳೊಳಂ ಬನವಾಸಿ ದೇಶದೊಳ್॥ 4–28

ಈ ವನ ಸೌಂದರ್ಯದ ಸುಖಾಸ್ವಾದನ ಮಾಡುತ್ತ ಅಂದು ಪ್ರೇಮಿಗಳು, ಬೆಟ್ಟುಗಳಲ್ಲಿ, ನಂದನವನಗಳಲ್ಲಿ ಅಲೆದಾಡುತ್ತಿದ್ದ ಆ ಸುಂದರ ಸನ್ನಿವೇಶ ಕವಿಯನ್ನೆಂತೋ ಹಾಗೆ ನಮ್ಮನ್ನೂ ಪರವಶಗೊಳಿಸುವಂತಿದೆ. 'ಮನುಷ್ಯನಾದವನು ತ್ಯಾಗ ಭೋಗಗಳಿಗೆ, ಅಕ್ಷರಗೋಷ್ಠಿ, ಗೇಯ ಗೋಷ್ಠಿಗಳ ಅಲಂಪಿನ ಇಂಪುಗಳಿಗೆ ಆಗರವಾಗಿರಬೇಕು. ಹಾಗಾಗುವಂತೆ ಹುಟ್ಟಲು ಎಲ್ಲರಿಗೂ ಆ ಪುಣ್ಯವಿರಲಾರದು. ಅಂತಹ ಮನುಷ್ಯರಾಗಿ ಹುಟ್ಟದಿದ್ದರೂ ಸರಿ, ಕೊನೆಗೆ ಮರಿದುಂಬಿಯಾಗಿ ಅಥವಾ ಕೋಗಿಲೆಯಾಗಿಯಾದರೂ ಬನವಾಸಿ ದೇಶದಲ್ಲಿ ಹುಟ್ಟಿದರೆ ಸಾಕು'–ಎಂದು ಹೃದಯ ತುಂಬಿ ಕವಿ ಹಾರೈಸಿದುದರಲ್ಲಿ ಬನವಾಸಿಯ ಹಿರಿಮೆ, ಅದರ ಮೇಲಣ ಅಭಿಮಾನ ವ್ಯಕ್ತವಾಗುತ್ತದೆ. ವನಗಳನ್ನು ನಾಶ ಮಾಡಿ, ಹೊಳೆಗಳನ್ನು ಬತ್ತಿಸಿ, ವನ್ಯ ಜೀವಿಗಳನ್ನು, ಜಲಚರಗಳನ್ನು ನಿರ್ನಾಮ ಮಾಡಿದ ನಮ್ಮ ಈಗಣ ಜನರು ಎಂತಹ ಬರಡು ಬಡವರು ಎಂಬುದನ್ನು ಖೇದದಿಂದ ನೆನೆಯಬೇಕಾಗಿದೆ.

ತೆಂಕಣ ಗಾಳಿ ಸೋಂಕಿದೊಡಂ ಒಳ್ನುಡಿಗೇಳ್ದೊಡಮಿಂಪನಾಳ್ದ ಗೇ
ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಂ ಆದ ಕೆಂದಲಂ ।
ಪಂ ಗೆಡೆಗೊಂಡೊಡಂ ಮಧುಮಹೋತ್ಸವಮಾದೊಡಮೇನ
ನೆಂಬೆನಾರಂಕುಸವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ॥ 4–30

ಶತಶೃಂಗ, ಇಂದ್ರಕೀಲ ಪರ್ವತಗಳನ್ನು ವರ್ಣಿಸುವಾಗ ಅವುಗಳ ಪರಿಸರದ ಭವ್ಯತೆಗನುಸರಿಸಿ, ಸಂಸ್ಕೃತ ಭೂಯಿಷ್ಠ ಶೈಲಿ ಕಂಗೊಳಿಸುತ್ತದೆ. ಕೆಳಗಿನ ಪದ್ಯ ಶತಶೃಂಗ ಪರ್ವತದ ವರ್ಣನೆ :

ತುಂಗ ವನ್ಯ ಮತಂಗಜ ದಂತಾಘಾತ ನಿಪಾತಿತ ಸಲ್ಲಕೀ
ಭಂಗಮಂ ಮಣಿ ಮೌಕ್ತಿಕ ನೀಳ ಸ್ಥೂಳ ಶಿಲಾಪ್ರವಿಭಾಸಿಕ್ಷಿತೋ ।

ತ್ತುಂಗಮಂ ಮುನಿ ಮುಖಿ ಮುಖಾಂಭೋಜೋದರ ನಿರ್ಗತ ಮಂತ್ರ ಪೂ
ತಾಂಗಮಂ ನೃಪನೆಯ್ದಿದನುದ್ಯಚ್ಛೃಂಗಮನಾ ಶತಶೃಂಗಮಂ ॥ 1—115

ಮುಂದೆ ಗದ್ಯದಲ್ಲಿ ಅಲ್ಲಿಯ ಋಷ್ಯಾಶ್ರಮವನ್ನು, ಪ್ರಕೃತಿ ಧರ್ಮಕ್ಕೆ ವಿರುದ್ಧವಾಗಿ, ಎಲ್ಲೆಲ್ಲಿಯೂ ಹಿಂಸೆ ವೈರಗಳಿಲ್ಲದೆ ಇರುವ ಶಾಂತ ವಾತಾವರಣವಿರುವುವನ್ನು ಹೃದಯಂಗಮವಾಗಿ ವರ್ಣಿಸುತ್ತಾನೆ. ಕವಿಯ ಮಾತಿನಲ್ಲಿ ಹೈಮಾಚಳ ಹಾಗೂ ಇಂದ್ರಕೀಲದ ವರ್ಣನೆಯನ್ನು ಕೇಳುವುದೇ ಸೊಗಸು.

ವಿದಳತ್ಕುಂದ ಶಶಾಂಕ ಶಂಖಧವಳಂ ಗಂಧೇಭ ದಾನಾಂಬು ಪೂ
ರ್ಣದರೀ ಸುಂದರ ಕಂದರಂ ಮೃಗಪತಿ ಪ್ರಧ್ವಾನ ಗರ್ಜದ್ಗುಹಂ ।
ಮದಿರೋನ್ಮತ್ತ ನಿಳಿಂಪ ಕಿಂಪುರುಷ ಕಾಂತಾರಬ್ಧ ಸಂಗೀತಮೊ
ಪ್ಪಿದುದಲ್ತೇ ಸುರ ಸಿದ್ಧ ದಂಪತಿ ರತಿಶ್ರೀ ರಮ್ಯ ಹೈಮಾಚಳಂ ॥ 7-72

ಇದು ಹೈಮಾಚಳದ ವರ್ಣನೆಯಾದರೆ ಇಂದ್ರಕೀಲದ ಭವ್ಯತೆ ಹೀಗೆ ಗೋಚರಿಸುತ್ತದೆ.

ಸಾಳ ತಮಾಳ ಕಾನನ ಭರೋದ್ಧತ ಸಿಂಧುರ ಕಂಠಗರ್ಜನಾ
ಭೀಳಮನಂಬರೇಚರ ವಧೂ ಕರಪಲ್ಲವ ಸಂಚಳಲ್ಲತಾಂ
ದೋಳಮನಾಶ್ರಿತಾದ್ರಿ ನದ ಕೂಳಮನತ್ಯಧರೀ ಕೃತಾನ್ಯ ಕು
ತ್ಕೀಳಮನಿಂದು ಕಾಂತ ಸುಸಲೀಳಮನೆಯ್ದಿದನಿಂದ್ರಕೀಳಮಂ ॥ 7-76

ಇಲ್ಲಿ ವಿಭಕ್ತಿ ಪ್ರತ್ಯಯ ಮತ್ತು ಕ್ರಿಯಾಪದ ಮಾತ್ರ ಕನ್ನಡ. ಉಳಿದೆಲ್ಲವೂ ಸಂಸ್ಕೃತ ಪದಗಳು.

ಋತುವರ್ಣನೆ

ವಸಂತಾಗಮನವನ್ನು ಕವಿ ಎರಡು ಸಲ ವರ್ಣಿಸುತ್ತಾನೆ. ಶತಶೃಂಗ ಪರ್ವತದ ಋಷ್ಯಾಶ್ರಮದಲ್ಲಿ ಅರಳಿದ ಆದಿಮುರ್ತ್ತೆ, ಹೊಸ ಮಲ್ಲಿಗೆ, ಕಂಪನ್ನು ಒತ್ತುತ್ತಿರುವ ತೆಂಕಣ ಗಾಳಿ, ಪೂ ಬಿಟ್ಟ ಮಾವಿನ ಮರ, ಕುಕಿಲುವ ಕೋಗಿಲೆ, ಮೊರೆಯುವ ತುಂಬಿ, ಚಿಗುರಿದ ವನರಾಜಿ ಎಂದು ಕವಿಸಂಪ್ರದಾಯದಂತಾದರೂ, ಸೊಗಸಾಗಿಯೇ ಪಂಪ ವರ್ಣಿಸುತ್ತಾನೆ. 'ವಿರಹಿಗಳ ಮೃತ್ಯುವನ್ನು ಮಿದಿಯದಿದ್ದರೆ–ಅಂದರೆ ವಿರಹಿಗಳನ್ನು ಕಡೆಗಾಣಿಸದಿದ್ದರೆ ನನ್ನ ಕೋಪ ಸ್ವಲ್ಪವೂ ತಣಿಯದು' ಎಂದು ಮನ್ಮಥ ಇಲ್ಲಿ ಹಲ್ಲು ಕಡಿಯುತ್ತಿದ್ದಾನೆ. ಈ ನಂದನವನಕ್ಕೆ ಪ್ರವೇಶಿಸದಿರಿ ಎಂದು

ಕೋಗಿಲೆಗಳು ಸಾರುತ್ತಿವೆ ಎಂಬಿತ್ಯಾದಿಯಾಗಿ ಸಹಜವಾಗಿ ಹೇಳಿದರೂ, ಅದು ಮುಂದೆ ಸ್ವಲ್ಪ ಕಾಲದಲ್ಲೆ ನಡೆಯಲಿರುವ ಪಾಂಡು ಮಾದ್ರಿಯರ ದುರಂತದ ಧ್ವನಿಯಾಗಿ ಸ್ಫುರಿಸುತ್ತದೆ.

ಎರಡನೆಯ ಸಲ ವಸಂತ ಮಾಸದ ವರ್ಣನೆ ಬರುವುದು ಅರ್ಜುನ–ಸುಭದ್ರೆಯರಿಗೆ ಅಭಿಮನ್ಯು ಹುಟ್ಟಿದ ಮೇಲಣ ಸುಖಮಯ ಸನ್ನಿವೇಶದಲ್ಲಿ. ಇಲ್ಲಿಯೂ ಮಲ್ಲಿಗೆ ಸಂಪಗೆಗಳ ಪರಿಮಳ ಬರುತ್ತದೆ. ಮೊದಲು ಭೂಮಿಯಲ್ಲಿ ಶಿಶಿರ ರಾಜನ ಆಡಳಿತವಿತ್ತು. ಈಗ ಅವನ ಆಳ್ವಿಕೆಯ ಅವಸಾನವಾಯ್ತು. ಕಾಮದೇವ ಈ ನೆಲವನ್ನೆಲ್ಲ ಮಧುವಿಗೆ (ವಸಂತನಿಗೆ) ಕೊಟ್ಟಿದ್ದಾನೆ. ಇದೋ ನೋಡಿ, ಆಜ್ಞಾಪತ್ರ ಎಂದು ಮಾವಿನ ಎಳೆ ಚಿಗುರುಗಳನ್ನು ಕಚ್ಚಿಕೊಂಡು ಹಾರುವ ಗಿಳಿಗಳು ತೋರಿಸುತ್ತವೆಯೋ ಎಂಬಂತೆ ಕಂಡು ಬಂತು, ಎಂದಿತ್ಯಾದಿಯಾಗಿ ವರ್ಣಿಸುತ್ತಾನೆ. ಆ ಕಾಲದ ರಾಜಕೀಯ ರೀತಿ ನೀತಿಯ ಒಂದು ಚಿತ್ರ ಬಹುಶಃ ಇಲ್ಲಿ ಕಾಣಿಸುತ್ತದೆ. ಮಾವಿನ ಮರದ ಮೇಗಣ ಹಸಿರು ತಳಿರುಗಳು, ಕೆಳಗಿರುವ ಕೆಂದಳಿರುಗಳನ್ನೂ ಪಂಪ ಸೂಕ್ಷ್ಮವಾಗಿ ಗಮನಿಸಿದ್ದಾನೆ. ಅದು ವಿಯೋಗಿಗಳ ಅಳ್ಳೆದೆಯನ್ನು ಆಡಿಸಲೆಂದು ಕೆಂಪು ಹಾಸಿದಂತೆ ಕಾಣುತ್ತಿತ್ತೆಂದು ಪಂಪ ಭಾವಿಸುತ್ತಾನೆ. ಮಲ್ಲಿಗೆ ಕ್ರಮಕ್ರಮವಾಗಿ ಅರಳುವುದನ್ನು ಹೇಳಲು ಒಂದು ವೃತ್ತವನ್ನೇ ಇಡಿಯಾಗಿ ಮೀಸಲಿಟ್ಟಿದ್ದಾನೆ :

ಪರೆಯೆ ಪಸುರ್ಪು ಬೆಳ್ಪಡರೆ ಬಲ್ಮುಗುಳೊಳ್ ಪೊರೆದೋರೆ ತೆಂಬೆರಲ್
ಪೊರೆವೊರೆಯಂ ಸಡಿಲ್ಚೆ ನಡು ಪೊಂಗಿರೆ ಮಲ್ಲಿಗೆಗಳ್ ಬಸಂತದೊಳ್ ।
ಬಿರಿದೊಡೆ ನಲ್ಲರಂ ನೆನೆದ ನಲ್ಲರ ಮೆಲ್ಲೆರ್ದೆಗಳ್ ಬಸಂತದೊಳ್
ಬಿರಿದುವದೆಂತೊ ಮಲ್ಲಿಗೆಗೆ ನಲ್ಲರ ಮೆಲ್ಲೆರ್ದೆ ವೇಳೆಗೊಂಡುದೋ ॥ ೫–೩೩

ಮೊದಲು ಹಸುರೇ ಆವರಿಸಿದ್ದುದು ಮರೆಯಾಗಿ, ಅಲ್ಲಿ ಬೆಳ್ಪು ತುಂಬಿಕೊಂಡು, ಮುಗುಳು ಬಲಿತು, ಪೊರೆದೋರುತ್ತಿರಲು, ತೆಂಕಣ ಗಾಳಿ ಮೆಲ್ಲನೆ ಅದರ ಪೊರೆಯನ್ನು ಸಡಿಲಿಸಿತು. ನಡು ಬೀಗಿಕೊಂಡಿದ್ದ ಮಲ್ಲಿಗೆಗಳು ವಸಂತ ಕಾಲದಲ್ಲಿ ಬಿರಿದಾಗ, ಅಗಲಿದ ನಲ್ಲರನ್ನು ನೆನೆದ ನಲ್ಲರ ಮೆಲ್ಲೆದೆಗಳೂ ಅವುಗಳೊಡನೆ ಬಿರಿದುವು. ಅದು ಹೇಗೆ ಮಲ್ಲಿಗೆ ಬಿರಿಯುವ ವೇಳೆಯನ್ನು ನಲ್ಲರ ಎದೆಗಳು ಕಾದುಕೊಂಡಿದ್ದುವೋ ಎಂದು ಪಂಪ ಉದ್ಗರಿಸುತ್ತಾನೆ.

ಮಳೆಗಾಲದ ವರ್ಣನೆಯಲ್ಲಿ ದೆಸೆ ಪಸುರೇರಿತು, ನೀಲವಾದ ಮುಗಿಲುಗಳು ಆಕಾಶವನ್ನು ತುಂಬಿದುವು ; ಕರಿಯ ಮುಗಿಲುಗಳಿಂದ ಆಕಾಶ, ನವಿಲುಗಳಿಂದ ಕಾಡುಗಳು, ಮೊಳೆತ ಹುಲ್ಲಿನಿಂದ ಧರಣಿ ಶೋಭಿಸಿತು ; ಹೊಸ ಪ್ರೇಮಿಗಳ

ಎದೆಯನ್ನು ಕಲಕಿತು ಎಂದೂ, ಮತ್ತೆ ನವಿಲುಗಳಿಂದ, ಇಂದ್ರ ಗೋಪಗಳಿಂದ, ಆಲಿಕಲ್ಲುಗಳಿಂದ ಕಾಮಕಾಂತೆ ತನ್ನ ಇಚ್ಛೆಯಂತೆ ವರ್ಣಮಯ ಸರವನ್ನು ತೊಟ್ಟು ಕೊಂಡಂತಾಯ್ತೆಂದೂ ವರ್ಣಿಸುತ್ತಾನೆ. ಮಳೆಗಾಲದಲ್ಲಿ ತೋರುವ ಇಂದ್ರಗೋಪ ಎಂಬ ಜೀವಿಯನ್ನು ಪಂಪ ಬಹಳ ಮೆಚ್ಚಿಕೊಂಡಂತೆ ತೋರುತ್ತದೆ. ಮುಂದಿನ ಪದ್ಯದಲ್ಲಿ ಅದು ಮೊದಲಿಗೇ ಉಕ್ತವಾಗುತ್ತದೆ. ಅಮರೇಂದ್ರಗೋಪದ, ಹಸುರು ಚಿಮ್ಮುವ ಎಳೆಹುಲ್ಲುಗಳ, ಕಾರ್ಮುಗಿಲುಗಳ, ಕಿರಿದಾಗಿ ಕೊಂಕಿ ಹರಿಯುವ ಹೊನಲುಗಳ, ಕೆಂಪು, ಹಸುರು, ಕಪ್ಪು, ಬಿಳುಪು ಬಣ್ಣಗಳು, ಅದರ ಜತೆಗೆ ಕಂಡು ಬರುವ ಕಾಮನಬಿಲ್ಲು, ಹೀಗೆ ಭೂಮಿಯಲ್ಲೂ ಆಕಾಶದಲ್ಲೂ ಕಂಡು ಬರುವ ವಿವಿಧ ವರ್ಣಸಂಯೋಜನೆಯ ಬೆರಗನ್ನು ಅನುಭವಿಸುತ್ತಾ ಕವಿ ಇದೇನು ಪ್ರಣಯದ ತಾಪವನ್ನುಂಟುಮಾಡಿತೋ–ಕಾಮನ ಕಾರ್ಮುಕದಂತೆ, ಕಾರ್ಮುಕಂ ಅಂದರೆ ಮಳೆಗಾಲ ಎಂದು ಗಗನಗಾಮಿಯಾದ ಮನಸ್ಸನ್ನು ಭೂಮಿಗೆ ಮನುಷ್ಯಜೀವನದ ಒಳಮಿಡಿತಕ್ಕೆ ತಂದಿಳಿಸುತ್ತಾನೆ.

ಶರತ್ಕಾಲದ ಆಗಮನವನ್ನು ಕವಿ ಹಿತವಾಗಿ ವರ್ಣಿಸುತ್ತಾನೆ. ಬಾಳನ್ನು ಹುಳಿಯಲ್ಲಿ ತೊಳೆದಂತೆ ಕಾಣುವ ನೀಲಾಕಾಶವೆಂಬ ಭಾವಗರ್ಭಿತ ಮಾತು ಮನ ಸೆಳೆಯುತ್ತದೆ. ಅಂತಹ ಆಕಾಶ ಮಂಡಲವನ್ನು ಆವರಿಸಿದ ಬೆಳ್ಮುಗಿಲುಗಳು ವಿಸ್ತಾರ ವಾಗಿ ಕಾಣುವ ದಿಕ್ಕುಗಳು, ಶಾಲಿವನದ ಗಂಧದಿಂದ ಅಂಧವಾದ ಅಳಿಸಮೂಹಗಳು, ಹೀಗೆ ಒಮ್ಮಿಂದೊಮ್ಮೆಗೆ ಶರತ್ಕಾಲವು ಲೋಕಕ್ಕೆ ಕಣ್ಣು ಬರುವಂತೆ ಬಂತು ಎನ್ನುತ್ತಾನೆ ಕವಿ.

ಮುಖ್ಯ ಕಥೆಯನ್ನು ವೇಗವಾಗಿ ಕೊಂಡೊಯ್ಯಬೇಕಾಗಿರುವುದರಿಂದ ಹರಿಹರ ಕವಿ ಮಾಡಿದಂತೆ ವಿಸ್ತಾರದ ವರ್ಣನೆಗೆ ಕುಳಿತುಕೊಳ್ಳದೆ, ತಕ್ಕಷ್ಟು ಹಿತ ಮಿತವಾದ ವರ್ಣನೆಯನ್ನು ಮಾಡಿ ಕವಿ ಮುಂದುವರಿಯುತ್ತಾನೆ.

ಪಂಪನ ಸಾಮಾಜಿಕ, ಧಾರ್ಮಿಕ ಮತ್ತು ಜೀವನ ದೃಷ್ಟಿ

ಪಂಪಭಾರತವು ಲೌಕಿಕ ಕಾವ್ಯವೆಂದು ಪಂಪನಿಂದ ರೂಪುಗೊಂಡಿರುವುದರಿಂದ ಇಲ್ಲಿ ಆಧ್ಯಾತ್ಮಿಕ ಅಥವಾ ಅಪೌರುಷೇಯ ವಿಷಯಕ್ಕೆ ಎಡೆಯಿಲ್ಲ. ಕೌರವ ಪಾಂಡವರ ಕಥೆಯಾದುದರಿಂದ, ಮೂಲಕಥೆಯಲ್ಲಿ ಎರಕವಾಗಿರುವ ಅನ್ಯಾಯ ಮೋಸಗಳಿಗೆ ಹಾಗೂ ದುಷ್ಟಶಕ್ತಿಗಳಿಗೆ ಸೋಲುಂಟಾಗಿ, ಕೊನೆಗೆ ಸತ್ಯಪಾಲಕರು, ನ್ಯಾಯಮಾರ್ಗಿಗಳು ವಿಜಯಿಗಳಾಗುವುದು—ಎಂಬಂತಹ ಧರ್ಮನೀತಿ ಇಲ್ಲೂ ಇದೆ. ಒಟ್ಟಿನಲ್ಲಿ ಇದು ಪೌರುಷ ಪ್ರಧಾನತೆಯನ್ನು ದೃಷ್ಟಿಯಲ್ಲಿಟ್ಟುಕೊಂಡ ಕಥೆಯಾಗಿದೆ. ಆದುದರಿಂದ ಇದಕ್ಕಿಂತ ಹೆಚ್ಚು ಇಲ್ಲಿ ಪಂಪನ ಧಾರ್ಮಿಕ ದೃಷ್ಟಿಯನ್ನು ಕುರಿತು ಹೇಳಲು ಸಾಧ್ಯ ವಾಗುವುದಿಲ್ಲ. ಪಂಪನೇ ಲೌಕಿಕ ಮತ್ತು ಆಗಮಿಕವೆಂಬ ವಿಭಾಗೀಕರಣವನ್ನು

ಘ್ರುವೀಕರಿಸಿ, ಆಗಮಿಕ ಕೃತಿಯಾಗಿ ಪ್ರತ್ಯೇಕವಾಗಿ ಆದಿಪುರಾಣವೆಂಬ ಜೈನಮತಾನು ಸಾರವಾದ ಕೃತಿಯನ್ನು ಬರೆದಿದ್ದಾನೆ. ಪಂಪನ ವಿಷಯದ ಒಟ್ಟು ಅಧ್ಯಯನದಲ್ಲಿ ಇದನ್ನೂ ಸೇರಿಸಿ ಹೇಳ ಬಹುದಾದರೂ, ಪಂಪಭಾರತದ ಕಡೆಗೆ ಕೇಂದ್ರೀಕೃತವಾದ ಇಲ್ಲಿ ಅದಕ್ಕೆಡೆಯಾಗುವುದಿಲ್ಲ.

ಸಾಮಾಜಿಕವಾಗಿ ಹಲವು ಸ್ತರಗಳಿಂದ ಕೂಡಿದ್ದ ಜನ ಸಮೂಹ. ಇದು ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ನಡೆದು ಬಂದಿದೆ. ಜಾತಿಯಲ್ಲಿ ಉತ್ತಮ—ಅಧಮ ಎಂಬ ಭೇದಗಳಿದ್ದರೂ, ಅಧಿಕಾರ ಮತ್ತು ಹಣ, ಇವೆರಡು ಯಾರಲ್ಲೇ ಇರಲಿ, ಅವರನ್ನು ಎಲ್ಲ ಜಾತಿಯವರೂ ಆಶ್ರಯಿಸುತ್ತಿದ್ದರು. ಗುಡ್ಡಗಾಡು ವಾಸಿಯಾಗಿ, ತುಡುಗುತನ ಮಾಡಿ ಪ್ರಭಾವಶಾಲಿಯಾಗಿ, ರಾಜನೆನ್ನಿಸಿಕೊಂಡವನನ್ನು ಸೂರ್ಯ ವಂಶ ಸಂಜಾತ, ಚಂದ್ರವಂಶ ಸಂಜಾತನೆಂದು ಎಲ್ಲಿಲ್ಲದ ಕತೆ ಕಟ್ಟಿ, ಹಾಡಿ, ಹೊಗಳಿ, ಆಶ್ರಯಿಸಿದವರಿಗೇನೂ ಕೊರತೆಯಿಲ್ಲ—ನಮ್ಮ ಇತಿಹಾಸದಲ್ಲಿ.

ಜಾತಿಯ ವಿಷಯದಲ್ಲಿ ಪಂಪನಲ್ಲಿ ದ್ವಂದ್ವವೇರ್ಪಟ್ಟಂತಿದೆ. ಅವನ ಪೂರ್ವಜರು ವೈದಿಕ ಬ್ರಾಹ್ಮಣರು ; ಯಜ್ಞಯಾಗಾದಿಗಳನ್ನು ಮಾಡುತ್ತಿದ್ದವರು. ಪಂಪನ ತಂದೆ ಜೈನ ಮತ ಸ್ವೀಕಾರ ಮಾಡಿದ. ಆ ಸಂದರ್ಭವನ್ನು ಕುರಿತು ; "ಜಾತಿಯೊಳೆಲ್ಲ ಮುತ್ತಮದ ಜಾತಿಯ ವಿಪ್ರಕುಲ..." ಎಂದು ಹೇಳಿ, ಆತನ ತಂದೆ ಜೈನಧರ್ಮವನ್ನು ಅಂಗೀಕರಿಸಿದುದರಿಂದ, "ತಜ್ಜಾತಿಯನುತ್ತರೋತ್ತರಮೆ ಮಾಡಿ..." ಎಂದಿರುವು ದರಿಂದ ತನ್ನ ಬ್ರಾಹ್ಮಣ ಕುಲದ ಮೇಲೆ ಅಭಿಮಾನ ಇರುವಂತಿದೆ.

'ಮಾನವ ಜಾತಿ ತಾನೊಂದೆ ವಲಂ' ಎಂದು ಸಾರಿದ ವಿಶ್ವಮಾನವಚೇತನನಾದ ಪಂಪ ಮೇಲಿನಂತೆ ಆದೇಕೆ ಹೇಳಿದ ?—ಎಂಬುದು ಸೋಜಿಗವಾಗಿದೆ. ಮಾತ್ರವಲ್ಲದೆ ಕುಲದ ಚರ್ಚೆ ಪಂಪ ಭಾರತದಲ್ಲಿ ಕೆಲವೆಡೆಗಳಲ್ಲಿ ತುಂಬ ಪ್ರಖರವಾಗಿದೆ. ತುಂಬ ಉದಾರವಾದ ಕ್ರಾಂತಿಕಾರಕ ಭಾವನೆಗಳನ್ನು ಕುಲದ ವಿಷಯವಾಗಿ ಆತ ವ್ಯಕ್ತಪಡಿಸಿದ್ದಾ ನಾದರೂ, ಅವನಿಗೆ ತನ್ನ ಜನ್ಮವಾಸನೆ ಹೋಗಿರಲಿಲ್ಲವೇ ? ಎಂದು ಯೋಚಿಸ ಬೇಕಾಗುತ್ತದೆ. ಆದರೆ ಮೇಲಿನ ಮಾತುಗಳು ಅವನ ತಂದೆಗಿದ್ದ ಅಭಿಪ್ರಾಯವನ್ನು ಅವನು ವ್ಯಕ್ತಪಡಿಸಿದನೇನೋ ಎಂದು ಸಮಾಧಾನ ಪಡಬಹುದು. ಕಾರಣ ತನ್ನ ಪೂರ್ವಜ ಮಾಧವ ಸೋಮಯಾಜಿ ಮಾಡುತ್ತಿದ್ದ ಹೋಮದ ಹೊಗೆ ದಿಕ್ಕು ದಿಕ್ಕಿಗೂ ಹಬ್ಬಿತ್ತು. ದಿಗಂಗನೆಗೆ ಮಾಟದ ಕುರುಳು ಎನಿಸಿತ್ತು. ಆದರೆ ಪಂಪನ ದೃಷ್ಟಿಯಲ್ಲಿ, ಇದರಿಂದ ಬೆಳ್ಳಗಿದ್ದ ಆತನ ಯಶಸ್ಸನ್ನು ಕರಿದು ಮಾಡಿಕೊಂಡ ಎಂದು ಸ್ಪಷ್ಟವಾಗಿ ಹೇಳುತ್ತಾನೆ.

ಕುಲದ ವಿಚಾರವಾಗಿ ಧಿಕ್ಕಾರಕ್ಕೊಳಗಾಗಿ ನಲುಗಿದವನು ಕರ್ಣ. ಶಸ್ತ್ರವಿದ್ಯಾ ಪರೀಕ್ಷಾ ಕಾಲದಲ್ಲಿ ಅರ್ಜುನನನ್ನು ಸೆಣಸಾಟಕ್ಕೆ ಕರೆದಾಗ ದ್ರೋಣ ಮತ್ತು ಕೃಪರು ಮುಂದೆ ಬಂದು 'ನಿನ್ನ ತಂದೆ ತಾಯಿಯರು ಯಾರೆಂದು ನಿನಗೆ ಗೊತ್ತೆ ?' ಎಂದು

ಪ್ರಶ್ನಿಸಿ ಅವನು ನಾಚುವಂತೆ ಮಾಡುತ್ತಾರೆ. ಪರಾಕ್ರಮಿಯಾಗಿ ಏನೆಲ್ಲ ಸಾಧಿಸಿಯೂ ಅವೆಲ್ಲ ಗಣನೆಗೆ ಬಾರದಂತೆ ಕುಲದ ಮಾತು ತಡೆಯಿತು. ಆಗ ಪಂಪ ದುರ್ಯೋಧನ ನಿಂದ ಕ್ರಾಂತಿಕಾರಕವಾದ ಈ ಮಾತನ್ನು ಹೇಳಿಸುತ್ತಾನೆ.

ಕುಲಮೆಂಬುದುಂಟೆ ಬೀರಮೆ
ಕುಲಮಲ್ಲದೆ ? ಕುಲಮನಿಂತು ಪಿಕ್ಕದಿರಿಂ ನೀ ।
ಮೊಲಿದೆಲ್ಲಿ ಪುಟ್ಟಿ ಬಳೆದಿರೊ
ಕುಲಮಿರ್ದುದೆ ಕೊಡದೊಳಂ ಶರಸ್ತಂಬದೊಳಂ ? ॥

ಗುರುಗಳಬ್ಬರಿಗೂ ಪ್ರತಿ ಸವಾಲು ಹಾಕಿ, ಅವರ ಬಾಯಿ ಮುಚ್ಚಿಸುತ್ತಾನೆ ದುರ್ಯೋಧನ. ಕರ್ಣನಿಗೆ ಅಂಗ ರಾಜ್ಯದ ಪಟ್ಟ ಕಟ್ಟಿ ಆತನನ್ನು ತನ್ನ ಗೆಳೆಯ ನನ್ನಾಗಿಸಿಕೊಳ್ಳುತ್ತಾನೆ.

ಇಂತಹ ದುರ್ಯೋಧನನೇ ವಿದುರನನ್ನು "ತೊತ್ತುಟ್ಟಿ" ಅಂದರೆ "ತೊತ್ತಿನ ಮಗ" ಎಂದು ಕರೆದು ಬಿಡುವ ಸಂದರ್ಭವೂ ಬರುತ್ತದೆ-ಕೃಷ್ಣ ಸಂಧಾನದ ಮಾತೆತ್ತು ತ್ತಿರುವಾಗ (9-58).

ಕರ್ಣ ಬಹುಕಾಲ ತನ್ನ ಹೀನ ಕುಲವನ್ನು ಕುರಿತು ಬೇರೆಯವರು ಮೂದಲಿಸಿ ದಾಗೆಲ್ಲ ಪ್ರತಿಮಾತೆತ್ತುತ್ತಿರಲಿಲ್ಲ. ಭೀಷ್ಮನಿಗೆ ಸೇನಾಧಿಪತ್ಯದ ಪಟ್ಟವನ್ನು ಕಟ್ಟಿದಾಗ, ಆತನಿಗೆ ಸಹಜವಾಗಿ ಆ ಮುದುಕನ ಮೇಲೆ ಸಂಶಯ ಬಂತು—ಈ ಹಣ್ಣು ಮುದುಕ ಏನು ಯುದ್ಧ ಮಾಡಿಯಾನು ? ಎಂದು. ಆ ಕಾರಣದಿಂದ ಸ್ವಲ್ಪ ದುಡುಕಿ, ಆದರೆ ಮರ್ಯಾದೆಯ ಎಲ್ಲೆಯನ್ನು ಮೀರದೆ, ಮಾತಾಡಿಬಿಡುತ್ತಾನೆ. ಅದಕ್ಕೇ ಕಾದಿದ್ದವ ನೆಂಬಂತೆ ಒಡನೆಯೆ ದ್ರೋಣ 'ಕುಲಮಂ ನಾಲಗೆ ತುಬ್ಬುವವೋಲುಚಿದೆ ನೀಂ ಕಡೆ ನುಡಿವೈ' ಎಂದು ಆಗ ಆತನ ಕುಲವನ್ನೇ ಅವಹೇಳನ ಮಾಡುತ್ತಾನೆ.

ಈಗಾಗಲೇ ಕೃಷ್ಣ ಮತ್ತು ಕುಂತಿಯರಿಂದ ಕರ್ಣನಿಗೆ ತನ್ನ ಜನ್ಮವೃತ್ತಾಂತ ತಿಳಿದು ಬಂದಿತ್ತು. ಆದರೆ ಆ ಗುಟ್ಟನ್ನು ಹೊರಗೆ ಹೇಳಲಾರ. ದ್ರೋಣನ ಮಾತಿಗೆ ಸಿಟ್ಟು ಭುಗಿಲೆದ್ದು.

ಕುಲಮನೆ ಮುನ್ನಮುಗ್ಗಡಿಪಿರೇಂ ಗಳ ನಿಮ್ಮ ಕುಲಂಗಳಾಂತು ಮಾ
ರ್ಮಲೆವನನಟ್ಟಿ ತಿಂಬುವೆ ? ಕುಲಂ ಕುಲಮಲ್ತು ; ಚಲಂ ಕುಲಂ : ಗುಣಂ ।
ಕುಲಂ ; ಅಭಿಮಾನಮೊಂದೆ ಕುಲಂ ; ಅಣ್ಮೆ ಕುಲಂ ; ಬಗೆವಾಗಳೀಗಳೀ
ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟು ಮಾಡುಗುಂ ॥ ೧೦-೨೦

—ಎನ್ನುತ್ತಾನೆ.

ಅಶ್ವತ್ಥಾಮನಂತೂ ಕರ್ಣನನ್ನು ವಿೞಂಗುಲಿಗ ಎಂದೇ ಮತ್ತೆ ಮತ್ತೆ ಜರೆದು ಕರೆದು ಭಂಗಿಸುತ್ತಾನೆ. ಹೀಗೆ ಎಲ್ಲರೂ ಕರ್ಣನ ಕುಲವನ್ನು ಹೀಗಳೆಯುವವರೇ ಆಗಿದ್ದರೂ, ಭೀಷ್ಮ ಆತನನ್ನೆಂದೂ ಕುಲದ ನೆಲೆಯಿಂದ ಜರೆಯಲಿಲ್ಲ. ಮಾತ್ರವಲ್ಲ, ಅವನ ವಿಶೇಷ ಗುಣವನ್ನು ಮನಗಂಡು ವಾತ್ಸಲ್ಯಪೂರ್ವಕ ಕೊಂಡಾಡುತ್ತಾನೆ. ಕುಲದ ಮಾತೆತ್ತುವವರೆಲ್ಲ 'ಜಾತಿಯೊಳುತ್ತಮ ಜಾತಿಯೆಂಬ'ವಿಪ್ರ ಕುಲದವರೆಂದು ಪಂಪ ಚಿತ್ರಿಸಿದ್ದಾನೆ. ಆ ಮೇಲೆ ಕ್ಷತ್ರಿಯ ಕುಲಜರಿಗೂ ಕುಲದ ಹೆಮ್ಮೆ ತುಂಬ ಇತ್ತು. ಶಿಶುಪಾಲ ಕೃಷ್ಣನನ್ನು ಗೋವಳ ಎಂದು ಹೀಯಾಳಿಸುತ್ತಾನೆ. ದುರ್ಯೋಧನನೂ ಆ ಮಾತನ್ನು ಎತ್ತುತ್ತಾನೆ. ಮುಂದೆ ಶಲ್ಯನೂ ಅರ್ಜುನನ ಸಾರಥಿಯಾದ ಕೃಷ್ಣನನ್ನು ಗೋವಳಿಗ ಎಂಬ ತಾತ್ಸಾರ ದೃಷ್ಟಿಯ ಮಾತಾಡುತ್ತಾನೆ. ಹೀಗೆ ಜಾತಿಯ ಭೂತ ಅಂದಿಗೂ ಇಂದಿನಂತೆಯೇ ಇತ್ತು ಎಂಬುದು ಪಂಪನಿಂದ ತಿಳಿಯುತ್ತದೆ.

ಜೀವನ ದೃಷ್ಟಿ :

ತೆಂಕಣ ಗಾಳಿಯ ಸೋಂಕು, ಒಂದು ಒಳ್ಳೆಯ ಮಾತು, ಇಂಪಾದ ಸಂಗೀತ, ಅರಳಿದ ಮಲ್ಲಿಗೆ, ಸ್ತ್ರೀ ಸುಖ, ಅಕ್ಷರ ಗೋಷ್ಠಿ, ಗೇಯಗೋಷ್ಠಿ, ಮಧುಮಹೋತ್ಸವ, ಇದೆಲ್ಲದರಲ್ಲೂ ಪಂಪನ ದೇಹ, ಮನಸ್ಸುಗಳು ಸುಖಿಸಿದ್ದುವು. ಕಾಡು—ನಾಡಿನ ರಮ್ಯ ನೋಟಗಳು ಅವನ ಮನಸ್ಸನ್ನು ಸೂರೆಗೊಳ್ಳುತ್ತಿದ್ದುವು. ಸ್ನೇಹ, ಪ್ರೀತಿ, ಪ್ರಣಯಗಳು ಅವನ ಬಾಳ ಹಣತೆಗೆ ತೈಲಧಾರೆಗಳಂತಿದ್ದುವು. ಹೀಗಿದ್ದೂ ವಿಲಾಸ ಜೀವನದಲ್ಲಿ ಮೈಮರೆಯದೆ, ಕರ್ತವ್ಯಪರಾಯಣನಾಗಿ, ಕವಿಯೂ ಕಲಿಯೂ ಆಗಿ ಮೆರೆದು, ತುಸು ಅರಸನಿಂದ ಪಡೆದ ಧನ ಕನಕಗಳಿಗೆ ಪ್ರತಿಫಲವನ್ನು ಅವನು ಕೊಟ್ಟುದಕ್ಕಿಂತ ಹೆಚ್ಚಾಗಿಯೇ ಸಲ್ಲಿಸಿದನು. ತ್ಯಾಗ ಭೋಗಗಳ ಸಮನ್ವಯ ಜೀವನ ದಲ್ಲಿರಬೇಕೆಂಬ ಆದರ್ಶವನ್ನು ತೋರಿದನು.

ಪಂಪ ಚಿತ್ರಿಸಿದ ಮುಖ್ಯ ಪಾತ್ರಗಳು

ಪಂಪನೇ ಭಾರತವು ಲೋಕಪೂಜ್ಯವಾಗುವುದಕ್ಕೆ ಕಾರಣಕರ್ತರಾದ ಪಾತ್ರಗಳನ್ನು ಒಂದು ಪದ್ಯದಲ್ಲಿ ಸಂಗ್ರಹವಾಗಿ ಕೊಟ್ಟಿದ್ದಾನೆ.

ಚಲದೊಳ್ ದುರ್ಯೋಧನಂ, ನನ್ನಿಯೊಳಿನತನಯಂ, ಗಂಡಿನೊಳ್ ಭೀಮಸೇನಂ
ಬಲದೊಳ್ ಮದ್ರೇಶನತ್ಯುನ್ನತಿಯೊಳಮರ ಸಿಂಧೂದ್ಭವಂ ಚಾಪವಿದ್ಯಾ ।
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ ನಿ
ರ್ಮಲ ಚಿತ್ತಂ ಧರ್ಮಪುತ್ರಂ ಮಿಗಿಲಿವರ್ಗಳಿನೀ ಭಾರತಂ ಲೋಕಪೂಜ್ಯಂ ॥ ೧೪-೬೪

ದುರ್ಯೋಧನ ಹುಟ್ಟಿದಾಗಲೇ ಉತ್ಪಾತಗಳು ತೋರಿದುವಂತೆ. ಆಗ ಅವನನ್ನು ಬಿಸುಡಬೇಕೆಂದು ವಿದುರ ಬೋಧಿಸಿದರೂ, ಧೃತರಾಷ್ಟ್ರನ ಪುತ್ರವ್ಯಾಮೋಹ ಹಾಗೆ ಮಾಡದೆ ಅವನನ್ನು ಉಳಿಸಿಕೊಂಡಿತು. ವಿಧಿಯ ನಿಯಮವನ್ನು ಮೀರಲು ಯಾರಿಂದಲೂ ಸಾಧ್ಯವಿಲ್ಲ. ಹಾಗೆ ಎಳವೆಯಲ್ಲೆ ಬಿಸುಟು ನೀರುಪಾಲು ಮಾಡಿದರೂ ಕರ್ಣ ಉಳಿದುಕೊಳ್ಳಲಿಲ್ಲವೇ ?

ಬಾಲ್ಯದಲ್ಲೆ ತಂದೆಯನ್ನು ಕಳಕೊಂಡ ಮಕ್ಕಳೆಂದು ಪಾಂಡವರಿಗೆ ಭೀಷ್ಮಾದಿಗಳು ಹೆಚ್ಚಿನ ಸಲಿಗೆ ಮತ್ತು ಪ್ರೀತಿಯನ್ನು ತೋರಿಸುತ್ತಿದ್ದುದರಿಂದ, ಅವರ ಬಗ್ಗೆ ದುರ್ಯೋಧನಾದಿಗಳಿಗೆ ಮತ್ಸರವು ಹೆಚ್ಚಲು ಕಾರಣವಾಯ್ತು. ವಿದ್ಯಾಭ್ಯಾಸ ಕಾಲದಲ್ಲಿ ದ್ರೋಣಾಚಾರ್ಯರು ಅರ್ಜುನನ ವಿಚಾರದಲ್ಲಿ ಅತ್ಯಂತ ಪಕ್ಷಪಾತಿಗಳಾದುದರಿಂದ ಇದು ಇನ್ನಷ್ಟು ವೃದ್ಧಿಯಾಯ್ತು. ಅರ್ಜುನನಿಗೆ ಸಮಾನನಾದ ಪ್ರತಿಸ್ಪರ್ಧಿ ಕರ್ಣ ಎಂದರಿತವನೇ, ದುರ್ಯೋಧನ ಬೇಗನೆ ಅವನ ಗೆಳೆತನವನ್ನು ಸಂಪಾದಿಸಿಕೊಂಡ. ಶಕುನಿಯ ತಂತ್ರ, ಕರ್ಣನ ಬಲ, ಇವೆರಡರಿಂದ ಪಾಂಡವರನ್ನು ನಿರ್ನಾಮ ಮಾಡಬಹುದೆಂದು ಚಲ ಹಿಡಿದು ಅವನು ಮಾಡಿದ ಕಾರ್ಯವೆಲ್ಲವೂ ಕೊನೆಗೆ ಅವನ ನಾಶಕ್ಕೆ ಕಾರಣವಾಯ್ತು. ಆದರೆ ಎಂತಹ ಸಂಕಟ ಕಾಲದಲ್ಲೂ ಅವನು ಎದೆಗುಂದಲಿಲ್ಲ. ಬಂಧುಮಿತ್ರರೆಲ್ಲ ಹತರಾದ ಮೇಲೆ ಅವನಿಗೆ ನೆಲದಾಸೆಯಿರಲಿಲ್ಲ. ಕೇವಲ ಪ್ರತೀಕಾರ ಮಾಡುವ ಛಲವೊಂದನ್ನೇ ಕಡೆತನಕ ಹಿಡಿದು ಜೀವ ಬಿಟ್ಟ. ಚರಮಗೀತೆಯಲ್ಲಿ ಪಂಪ ಅವನಿಗೆ ಮೊದಲ ಸ್ಥಾನವನ್ನು ಕೊಟ್ಟಿದ್ದಾನೆ.

ತನ್ನ ತಾಯಿ ಮಾಡಿದ ತಪ್ಪಿನಿಂದ ಇಡೀ ಜೀವಮಾನವನ್ನು ದಾರುಣವಾದ ಅವಮಾನದಿಂದ ಕಳೆದವನು ಕರ್ಣ. ಶಸ್ತ್ರಾಸ್ತ್ರ ವಿದ್ಯೆಯನ್ನು ಪರಶುರಾಮನಿಂದಲೇ ಕಪಟವೇಷದಿಂದಲಾದರೂ ಕಲಿತುಕೊಳ್ಳಬೇಕೆಂಬಷ್ಟು ತೀವ್ರ ವಿದ್ಯಾಕಾಂಕ್ಷಿಯಾಗಿದ್ದ ಆತನ ಆಸೆ ಕೊನೆಗಾಲದಲ್ಲಿ ಫಲಿಸದಾಯ್ತು. ಇಂದ್ರ ಕಳುಹಿಸಿದ ವಜ್ರಕೀಟಗಳು ಆತನ ತೊಡೆಗಳನ್ನು ಕೊರೆಯುತ್ತಿದ್ದುವು. ತನ್ನ ತೊಡೆಯ ಮೇಲೆ ತಲೆಯಿಟ್ಟು ಮಲಗಿ ನಿದ್ರಿಸುತ್ತಿದ್ದ ಗುರುವಿಗೆ ನಿದ್ರಾಭಂಗವಾದೀತೆಂದು ಹೆದರಿ ಮಿಸುಕದೆ ಕುಳಿತ ಅವನ ಮನಸ್ಥೈರ್ಯವನ್ನು ಮೆಚ್ಚಬೇಕು. ಆದರೆ ನೆತ್ತರಿನಿಂದ ನಾಂದ ಜಟೆಯೇ ಪರಶುರಾಮನನ್ನು ಎಚ್ಚರಗೊಳ್ಳುವಂತೆ ಮಾಡಿತು. ಕೋಪಗೊಂಡ ಆತ, ಬ್ರಾಹ್ಮಣನೆಂದು ತನ್ನನ್ನು ವಂಚಿಸಿದನೆಂದು ಶಾಪವನ್ನು ಕೊಟ್ಟುಬಿಟ್ಟ. ಹತಾಶನಾದ ಕರ್ಣ ಮತ್ತೆ ಹಸ್ತಿನಾವತಿಯಲ್ಲಿ ದ್ರೋಣ ಸ್ಥಾಪಿಸಿದ ಗುರುಕುಲದಲ್ಲಿ ಅಭ್ಯಾಸವನ್ನು ಮುಂದುವರಿಸಿದ. ಅರ್ಜುನನಿಗೆ ಸರಿಸಮಾನನಾಗಿಯೇ ಕೌಶಲವನ್ನು ಮೆರೆದ. ಅವನ ವ್ಯಕ್ತಿತ್ವ ಉನ್ನತಿಗೇರುವುದು ಕೃಷ್ಣ ತನ್ನ ಕುಲವೃತ್ತಾಂತವನ್ನು ತಿಳಿಸಿದಾಗ ; ಕುಂತಿ ತನ್ನ ಮಗನೆಂದು ಒಪ್ಪಿಕೊಂಡು ಪಾಂಡವ ಪಕ್ಷಕ್ಕೆ ಆತ ಬರಬೇಕೆಂದು ಕರೆದಾಗ. ಕೃಷ್ಣ, ದುರ್ಯೋಧನನಿಗೆ ಕರ್ಣ ಯಾರೆಂದು ಗೊತ್ತಿದ್ದೂ ಅವನ ಸ್ವಾರ್ಥಕ್ಕಾಗಿ, ಅವನ

ಚಲವನ್ನು ಈಡೇರಿಸುವುದಕ್ಕೆ, ಮುಳ್ಳಿನಿಂದಲೇ ಮುಳ್ಳನ್ನು ತೆಗೆಯುವಂತೆ ಆತನನ್ನು ಉಪಯೋಗಿಸಿಕೊಳ್ಳಲು ಆತನಿಗೆ ಸ್ನೇಹ ತೋರಿದನೆಂದು ಛೇದಿಸುತ್ತಾನೆ. ಆಗ ಕರ್ಣ, ಅವನು ತನಗೆ ಮಾಡಿದ ಉಪಕಾರವನ್ನೇ ನೆನೆದು, ಅದನ್ನು ಮರೆತು, ಬಾಂಧವ್ಯದ ನೆವದಿಂದ ಪಾಂಡವರ ಪಕ್ಷಕ್ಕೆ ಸೇರಿದರೆ ನೀವೇ ಹೇಸುವಿರಲ್ಲವೆ ? ಎನ್ನುತ್ತಾನೆ.

ಕೌರವನಿಗೆ ಕರ್ಣನ ಅಗತ್ಯ ಎಷ್ಟಿತ್ತೋ ಅಷ್ಟೇ ಅಗತ್ಯ ಕರ್ಣನಿಗೂ ಇತ್ತು. ಕಾರಣ ಎಲ್ಲ ಕಡೆಯಿಂದಲೂ ಅವನನ್ನು 'ಕುಲ ಹೀನ' 'ಕುಲ ಹೀನ' ಎಂದು ಜರೆಯುತ್ತಿದ್ದಾಗ, ಆತ ಅವರೆಲ್ಲರ ಬಾಯಿ ಮುಚ್ಚಿಸುವಂತೆ ಅವನನ್ನು ಪದವಿ ಪುರಸ್ಕಾರಗಳನ್ನಿತ್ತು ಸತ್ಕರಿಸಿದನು. ಮಾತ್ರವಲ್ಲ, ದುರ್ಯೋಧನನ ಅಂತಃಪುರದವರೆಗೂ ಕರ್ಣನಿಗೆ ಪ್ರವೇಶವಿತ್ತು. ಒಂದು ಸಂದರ್ಭದಲ್ಲಿ ಭಾನುಮತಿ ನೆತ್ತವನ್ನಾಡಿ ಸೋತಳು. ಸೋಲಿನ ಪಣವನ್ನು ಕೊಡಬೇಕೆಂದು ಕಾಡುವಾಗ ಮುತ್ತಿನ ಲಂಬಣ ಅಂದರೆ ಹಾರ ತುಂಡಾಗಿ ಮುತ್ತುಗಳು ಚದರಿ ಬಿದ್ದುವು. ಭಾನುಮತಿಗೆ, ಅಂತೆಯೆ ಕರ್ಣನಿಗೆ ಭಯವಾಯ್ತು, ಮರ್ಯಾದೆಯ ಎಲ್ಲೆಯನ್ನು ಮೀರಿಬಿಟ್ಟೆವೋ ಎಂದು. ಆದರೆ ದುರ್ಯೋಧನ ಒಂದಿಷ್ಟೂ ಹೇವರಿಸದೆ, ಇವನ್ನು ಹೆಕ್ಕುವುದು ತಪ್ಪೆ ? ಹೇಳಿ ಎಂದ. ಅಂತಹ ಭೂಪೋತ್ತಮನನ್ನು ಬಿಸುಟು ನಿಮ್ಮೊಡನೆ ಸೇರಿದರೆ ನಾನು ಬೇಡನಲ್ಲನೇ ?—ಎನ್ನುತ್ತಾನೆ ಕರ್ಣ.

ಇಲ್ಲಿ ಭಾನುಮತಿ ನೆತ್ತವನ್ನಾಡಿದ್ದು ಯಾರೊಡನೆ ಎಂದು ತಿಳಿಯುವುದಿಲ್ಲ–ಮುತ್ತಿನ ಲಂಬಣಕ್ಕೆ ಕೈ ಹಾಕಿದವನು ಕರ್ಣನೇ ಆಗಿರಬೇಕೆಂದು ತೋರುತ್ತದೆ. ಅಂತೂ ಈ ಪದ್ಯ ಬಿಡಿ ವಜ್ರದಂತ ಕಾಂತಿಯುಕ್ತವಾಗಿದೆ.

ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾ
ಡುತ್ತಿರೆ ಲಂಬಣಂ ಪಱಿಯೆ ಮುತ್ತಿನ ಕೇಡನೆ ನೋಡಿ ನೋಡಿ ಬ ।
ಳ್ಕುತ್ತಿರೆ ಯೇವವಣಮಿಲ್ಲದಿವನಾಯ್ವುದೊ ತಪ್ಪದೆ ಪೇಱಿಮೆಂಬ ಭೂ
ಪೋತ್ತಮನಂ ಬಿಸುಟ್ಟಿರದೆ ನಿಮ್ಮೊಳ್ ಪೊಕ್ಕೊಡೆ ಬೇಡನಲ್ಲನೇ ॥

ಇದು ಪಂಪನ ಸ್ವಯಂ ಕಲ್ಪಿತ ಸನ್ನಿವೇಶ. ಕರ್ಣ, ದುರ್ಯೋಧನರ ಗಾಢ ಮೈತ್ರಿಯ, ಹಾಗೆಯೇ ಕರ್ಣನ ಉನ್ನತ ವ್ಯಕ್ತಿತ್ವದ ದ್ಯೋತಕ. ಮುಂದೆ ಆತನ ಧರ್ಮ ಸಂಕಟದ ಒಳತೋಟಿಗಳನ್ನು ಪಂಪ ಬಹಳ ಸುಂದರವಾಗಿ ಚಿತ್ರಿಸಿದ್ದಾನೆ. ಕೌರವನಿಗೆ ಸೋಲು ಖಂಡಿತವೆಂದು ಅವನ ಮನಸ್ಸಿಗೆ ಖಚಿತವಾಗುತ್ತದೆ. ತನ್ನ ಅರಸನಿಗಿಂತ ಮೊದಲೇ ಯುದ್ಧದಲ್ಲಿ ತಾನು ಸಾಯಬೇಕೆಂದು ನಿರ್ಧರಿಸಿಕೊಳ್ಳುತ್ತಾನೆ. ಸೂರ್ಯನಿಗೆ ಅರ್ಘ್ಯ ಕೊಡಲೆಂದು ಗಂಗಾನದಿಗೆ ಬಂದಾಗ ಹುರಿಗಣೆಯನ್ನು ಬೇಡಲು ಬಂದ ತಾಯಿ ಕುಂತಿಯನ್ನು ಬಹಳ ಪ್ರೀತಿ ಗೌರವಗಳಿಂದ ಕಂಡು ಆಕೆಯ ಬಯಕೆಯನ್ನು

ಸಲಿಸುತ್ತಾನೆ. ಪಾಂಡವ ಪಕ್ಷಕ್ಕೆ ಬರಬೇಕೆಂದು ಆಕೆ ಎಷ್ಟು ಹೇಳಿದರೂ ಕೇಳದೆ, ಇಷ್ಟರವರೆಗೆ ಬೆಸ್ತನೆಂಬ ಹೀಯಾಳಿಕೆಗೊಳಗಾಗಿಯೂ ನನ್ನ ಗುಣವನ್ನು ನಾನು ಬಿಡಲಿಲ್ಲ. ಈಗ ನಿಮ್ಮ ಮಗನೆಂದ ಮೇಲೆ ನಾನು ಅದನ್ನು ಬಿಡುತ್ತೇನೆಯೇ ? ಎನ್ನುತ್ತಾನೆ. ಆಗಾಗ ಲೋಭಕ್ಕೆ ವಶವಾಗಿ, ಪಕ್ಷಾಂತರ ಮಾಡಿ, ದೇಶವನ್ನು ಸೂರೆಯಾಡುವ ರಾಜಕಾರಣಿಗಳು ಇಂತಹ ಆದರ್ಶವನ್ನು ಬೋಧಿಸುವ ಸಾಹಿತ್ಯದ ಸ್ವಲ್ಪ ಪರಿಚಯುವನ್ನಾದರೂ ಹೊಂದಿರುತ್ತಿದ್ದರೆ ಎಂದೆನಿಸುತ್ತದೆ.

ಭೀಷ್ಮನಿಗೆ ಸೇನಾಧಿಪತ್ಯದ ಪಟ್ಟವನ್ನು ಕಟ್ಟಿದಾಗ ದುಡುಕಿ ಮಾತಾಡಿದರೂ, ಮತ್ತೆ ಅದಕ್ಕೆ ಪಶ್ಚಾತ್ತಾಪಪಟ್ಟು ಶರಶಯ್ಯಾಗತನಾದ ಆತನಲ್ಲಿಗೆ ಏಕಾಂಗಿಯಾಗಿ ಬಂದು ವಿನಯ ಪೂರ್ವಕ ಕ್ಷಮೆ ಯಾಚಿಸುತ್ತಾನೆ. ಧರ್ಮರಾಯನಂತೆ ಎಲ್ಲರೆದುರಿಗೆ ಲೋಕರಂಜನೆಗೆ ಹಾಗೆ ಮಾಡದೆ ತನ್ನ ಉನ್ನತ ಹೃದಯ ಸಂಸ್ಕಾರವನ್ನು ಮೆರೆಯುತ್ತಾನೆ. ಪಾಂಡವ ಕೌರವರ ಲೆಕ್ಕದಲ್ಲಿ ನೀನೂ ನನಗೆ ಮೊಮ್ಮಗನೇ ಎಂದು ಭೀಷ್ಮನೂ ವಾತ್ಸಲ್ಯದ ಮಾತಾಡುತ್ತಾನೆ. ಶಲ್ಯನನ್ನು ಸಾರಥಿ ಮಾಡಿಕೊಂಡು ಕಾದು ಎಂದು ಆದೇಶಿಸುತ್ತಾನೆ.

ಅತುಳ ಪರಾಕ್ರಮದಿಂದ ಹೋರಾಡಿ ಕೊನೆಗೆ ಯುದ್ಧದಲ್ಲಿ ಪ್ರಾಣ ನೀಗುತ್ತಾನೆ. ಪಂಪನ ಮನಸ್ಸು ಕರ್ಣನಿಗೆ ಸೂರೆ ಹೋಗಿದೆ. ಆದುದರಿಂದ ಅಂತ್ಯದಲ್ಲಿ ಲೋಕೋತ್ತರವಾದ ಚರಮಗೀತೆಯನ್ನು ಕರ್ಣನಿಗಾಗಿ ಹಾಡಿದ್ದಾನೆ :

ನೆನೆಯದಿರಣ್ಣ ಭಾರತದೊಳಿಂ ಪೆಜರಾರುಮನೊಂದೆ ಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ ದೊರೆ, ಕರ್ಣನೇಱು ಕ ।
ರ್ಣನ ಕಡು ನನ್ನಿ ಕರ್ಣನಳವಂಕದ ಕರ್ಣನ ಚಾಗವೆಂದು ಕ
ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ॥ 12-217

ಕರ್ಣನಿಂದಲೆ ಭಾರತವು ಕರ್ಣರಸಾಯನವಾಯ್ತೆಂಬ ಮಾತನ್ನು ಪಂಪ ಸಾರ್ಥಕಗೊಳಿಸಿದ್ದಾನೆ.

ಭೀಷ್ಮ, ದ್ರೋಣ ಮುಂತಾದವರಿಗೆಲ್ಲ ತಕ್ಕ ಪ್ರಾಶಸ್ತ್ಯವನ್ನು ಕೊಟ್ಟು ಭಾರತವು ಲೋಕ ಪೂಜ್ಯವಾಗಲು ಕಾರಣೀಭೂತರಾದವರೆಂದು ಕೊಂಡಾಡುತ್ತಾನೆ. ಆದರೆ ಕೃಷ್ಣನನ್ನು ಈ ಸಾಲಿಗೆ ಸೇರಿಸದಿರುವುದೊಂದು ಕೊರತೆಯೆಂಬುದು ಕೆಲವು ವಿಮರ್ಶಕರ ಅಭಿಪ್ರಾಯ. ಕೃಷ್ಣನೆಂದರೆ ಪುರುಷೋತ್ತಮ, ಅವತಾರಿ ಪುರುಷ, ಅಸುರ ಪ್ರಧ್ವಂಸಿ, ಅರ್ಜುನನ ಹಲವು ಜನ್ಮಗಳ ಗೆಳೆಯ ; ಶಿಶುಪಾಲನಂಥವರು ಅವನನ್ನು ಅವಹೇಳನ ಮಾಡುತ್ತಾರೆ. ತಾನು ಪ್ರತ್ಯಕ್ಷ ಯುದ್ಧ ಮಾಡದಿದ್ದರೂ, ಖಾಂಡವವನ ದಹನ, ರಾಜಸೂಯ ಹಾಗೂ ಕೊನೆಗೆ ಮಹಾಭಾರತ ಯುದ್ಧದಲ್ಲಿ ಪಾಂಡವ ಸಹಾಯನಾಗಿ,

ಸೂತ್ರಧಾರಿಯಾಗಿ ಅವರ ವಿಜಯಕ್ಕೆ ಕಾರಣನಾಗುತ್ತಾನೆ. ಅರ್ಜುನನ ನಿರ್ವೇದ, ಮತ್ತು ಗೀತೋಪದೇಶ ಪ್ರಸಂಗವನ್ನು ಚುಟುಕಾಗಿ ಒಂದೇ ಪದ್ಯದಲ್ಲಿ ಪಂಪ ಮುಗಿಸಿ ಬಿಡುತ್ತಾನೆ. ವಿಶ್ವರೂಪದರ್ಶನವನ್ನು 'ದಿವ್ಯರೂಪಮಂ ತೋಱಿ' ಎಂದು 'ಒವದೆ ಕೊಲ್ವಡೆ ನೀನುಮೆನ್ನ ಕಜ್ಜದೊಳ್ ಎಸಗು' ಎಂದು ಗೀತಾ ಸಾರವನ್ನು ಒಂದೇ ಮಾತಿನಲ್ಲಿ ಪಂಪ ಮುಗಿಸಿ ಬಿಡುತ್ತಾನೆ. ವಿಶ್ವರೂಪ ದರ್ಶನದ ಇನ್ನೊಂದು ಪ್ರಸಂಗ ಬರುವುದು ದುರ್ಯೋಧನನ ಸಭೆಯಲ್ಲಿ—ಕೃಷ್ಣ ಸಂಧಾನಕ್ಕೆ ಹೋದಾಗ.

> ಮೂಱಡಿಮಾಡಿದಂದು ನೆಲಸೆಲ್ಲಮನಾ ಬಲಿಗಾದ ರೂಪಮಂ
> ತೋಱಿದನೀ ಜಗತ್ರಯಮನೊರ್ಮೆಯೆ, ನುಂಗುವ ಕಾಲ ರೂಪಮಂ ।
> ತೋಱಿದನಂತೆ ರೌದ್ರತರ ರೂಪಮನೊರ್ಮೆಯೆ ವಿಶ್ವರೂಪಮಂ
> ತೋಱಿದನೆರ್ದರಂ ನೆಱೆಯೆ ಮೋಹಿಸಿ ವೈಷ್ಣವದಿಂ ಮುರಾಂತಕಂ॥ 9-60

ಈ ವರ್ಣನೆಗಳು ಸೊಗಸಾಗಿದ್ದರೂ, ನಮಗೆ ಕುಮಾರವ್ಯಾಸನಲ್ಲಾಗುವ ಕಾವು ಉಂಟಾಗುವುದಿಲ್ಲ. ಕಾರಣ, ಪಂಪನಿಗೂ ಕೃಷ್ಣನ ವಿಷಯ ಹೇಳುವಾಗ ಅಂತಹ ಕಾವೇರುವುದಿಲ್ಲ.

ಕೃಷ್ಣನ ಸಮರ್ಥ ರಾಜಕಾರಣ ಹಾಗೂ ಆತನ ಮಾತುಗಾರಿಕೆಯ ಸೊಗಸು ಮೈದೋರುವುದು ಅತ ಪಾಂಡವರ ದೂತನಾಗಿ ಸಂಧಾನಕ್ಕೆ ಹೋದಾಗ. ಪಾಂಡವ ಪಕ್ಷಪಾತಿಯಾದ ವಿದುರನ ಮನೆಯಲ್ಲಿ ನಿಂತು, ಮರುದಿನ ದುರ್ಯೋಧನನ ಓಲಗಕ್ಕೆ ಕೃಷ್ಣ ಬರುತ್ತಾನೆ. ಲೋಕ ಗುರುವಾದ ಆತ ತನ್ನಲ್ಲಿಗೆ ಬರುವುದು ತನಗೆ ಹೆಮ್ಮೆಯೆಂದು ಕೊಂಡ ದುರ್ಯೋಧನ ಅವನನ್ನು ಯೋಗ್ಯರೀತಿಯಿಂದ ಗೌರವಿಸುತ್ತಾನೆ. ಕುಮಾರ ವ್ಯಾಸ ಮಾಡಿದಂತೆ ನಾಟಕೀಯ ಘಟನೆಗಳನ್ನು ತಾರದೆ ಒಳ್ಳೆಯ ಸುಸಂಸ್ಕೃತ ರೀತಿ ಯಿಂದಲೇ ಗಾಂಭೀರ್ಯಕ್ಕೆ ಚ್ಯುತಿಯಿಲ್ಲದಂತೆ ಪಂಪ ವರ್ಣಿಸಿದ್ದಾನೆ. ಕೌರವ ಕೃಷ್ಣನನ್ನು ವಿನಯಪೂರ್ವಕ ಗೌರವ ಸಂಬೋಧನೆಯಿಂದಲೇ ಕರೆದು ಬಂದ ಕಾರ್ಯವೇನೆಂದು ವಿಚಾರಿಸುತ್ತಾನೆ.

ಅದಕ್ಕೆ ತಕ್ಕಂತೆ ದುರ್ಯೋಧನನ ಗುಣ, ಶೀಲ, ವಿನಯಗಳನ್ನು ಕೃಷ್ಣ ಕೊಂಡಾಡುತ್ತಾನೆ. ಏನೋ ಕೆಟ್ಟ ಕಾಲದಲ್ಲಿ ಆಗಬಾರದುದು ಆಗಿ ಹೋಯ್ತು. ಮನಃಕ್ಲೇಶವುಂಟಾದರೂ, ಕಾಯ್ದ ಬೆಣ್ಣೀರ್ ಮನೆಸುಡುತ್ತದೆಯೆ ? ನೀವು ಇತ್ತಂಡದವರೂ ಸೇರಿ ಬಾಳಿದರೆ ಮತ್ತೆ ನಿಮಗೆ ಎಣೆ ಯಾರು ? ಅವರು ವನವಾಸದಲ್ಲಿ ಪಟ್ಟ ಬವಣೆಗಳೆಲ್ಲವೂ ನೀನು ಕರುಣಿಸಿ ಭೂಮಿಯನ್ನು—ಅದು ಬೇಕು, ಇದು ಬೇಕು ಎಂದು ಕೇಳುವವರಲ್ಲ—ಐದು ಗ್ರಾಮಗಳನ್ನಾದರೂ ಕೊಟ್ಟರೆ ಎಲ್ಲವನ್ನೂ ಮರೆತು ಬಿಡುತ್ತಾರೆ ಎಂದು ಹಿತವಚನ ಹೇಳುತ್ತಾನೆ.

ಇಷ್ಟನ್ನು ಕೇಳಿದ್ದೇ ತಡ, ದುರ್ಯೋಧನ ಕೆರಳಿ ಕೃಷ್ಣನನ್ನು ದೀರ್ಘವಾಗಿ ಜರೆಯುತ್ತಾನೆ. ಮತ್ತೆ ಸುಮ್ಮನೆ ಬಳಲಿಸಬೇಡ, ಬಂದ ದಾರಿ ಹಿಡಿದು ಹೋಗು ಎಂದು ಎರಡು ಮಾತಿಗೆ ಎಡೆಯಿಲ್ಲದಂತೆ ನುಡಿಯುತ್ತಾನೆ. ಆಗ ಮುರಾಂತಕನು ಅಂತಕನಂತೆ ಕೋಪಗೊಂಡು, ರಾವಣನ ಗತಿಯೇ ನಿನಗೂ ಆಗುತ್ತದೆ. ಪಾಂಡವರಲ್ಲಿ ಸೆಣಸಲು ನಿಮ್ಮಲ್ಲಿ ಎಲ್ಲಿದೆ ಸಾಮರ್ಥ್ಯ? ಎಂದು ಪಾಂಡವರ ಒಬ್ಬೊಬ್ಬರ ಶೌರ್ಯವನ್ನು ಶಕ್ತಿಯುತವಾಗಿ ವರ್ಣಿಸುತ್ತಾನೆ. ಭೀಮನ ಪ್ರತಿಜ್ಞೆ, ಅರ್ಜುನನ ಸಾಹಸಗಳನ್ನು ವರ್ಣಿಸುತ್ತಾನೆ. 'ಅವರಿಂದ ಉಪಕಾರ ಹೊಂದಿದವನು ನೀನು. ಚಿತ್ರಾಂಗದ ಸೆರೆಹಿಡಿದೊಯ್ಯುವಾಗ ನಿನ್ನ ಸೆರೆ ಬಿಡಿಸಿ ತಂದ ವೀರನಿಗೆದುರಾಗಿ ಮಲೆತು ನಿಲ್ಲುವುದು ನಿಜವಾಗಿ ನೀತಿಯೆ ಸರಿ, ಸುಯೋಧನಾ' ಎಂದು ಹಂಗಿಸುತ್ತಾನೆ. ಹೀಗೆ ಈ ಪ್ರಸಂಗವೆಲ್ಲ ಅತ್ಯಂತ ನಾಟಕೀಯವಾಗಿ, ನಮ್ಮ ಕಣ್ಣೆದುರೇ ನಡೆಯುವಂತಿದೆ. ಮುಂದಿನ ಪದ್ಯದಲ್ಲಿ ಪ್ರಖರ ತೇಜಸ್ಸಿನಿಂದ ಕಣ್ಣು ಕೋರೈಸುತ್ತಿದೆ :

ಗುರುವಿಲ್ಲಾ ಕರ್ಣನಿಲ್ಲಾ ಗುರುವಿನ ಮಗನಿಲ್ಲಾ ಕೃಪಾಚಾರ್ಯನಿಲ್ಲಾ
ಕುರುರಾಜಾ ನಿನ್ನ ತಮ್ಮಂದಿರೊಳಿನಿಬರೊಳಾರಿಲ್ಲ ಗಾಂಗೇಯನಿಲ್ಲಾ ।
ಮರುಳೇ ಗಾಂಡೀವಿ ಯಾರೆಂದೆಣಿಕೆಗಳೆವೆ ಗಂಧರ್ವರುಯ್ದಂದು ನಿನ್ನಂ
ಕರುವಿಟ್ಟಂತಿರ್ದುದಿಲ್ಲಾ ನೆರೆದ ಕುರುಬಲಂ? ತಂದವಂ ಪಾರ್ಥನಲ್ಲಾ ॥ ೯–೫೫

ತೀರ ಇತ್ತೀಚೆಗಷ್ಟೇ ನಡೆದ ಗೋಗ್ರಹಣ ಪ್ರಸಂಗದಲ್ಲಾದುದು ಮರೆತು ಹೋಯ್ತೆ ಇಷ್ಟು ಬೇಗ? ಛಿ: ಮರೆತರೆ, ನಾಳೆಯೆ ಗಾಂಡೀವ ನಿರ್ಘೋಷವನ್ನು ಕೇಳದಿರುವಿರೆ?—ಎಂದು ಎಲ್ಲರನ್ನೂ ಅವಹೇಳನ ಮಾಡುತ್ತಾನೆ. ಇನ್ನು ಯುದ್ಧ ಪ್ರಾಯ್ತೆಂದರೆ ಏನಾದೀತು? ಹಗೆಗಳ ಒಕ್ಕಲಿನಲ್ಲಿ ಓಕೊಳ್ಳಲು ಒಂದೇ ಒಂದು ಜೀವವೂ ಉಳಿಯುವುದಿಲ್ಲ.

ಸುರಿವ ಸರಲ್ ನರಲ್ವ ಭಟರ್ ಎತ್ತೆಮುರುಳ್ವ ದಟಿಂ, ಪೊರಳ್ವ ಸಿಂ
ದುರಘಟಿ ಬರ್ಪ ನೆತ್ತರ ಕಡಲ್ ಕುಣಿವಟ್ಟೆಗಳಾಜಿಯೊಳ್ ಭಯಂ ।
ಕರತರಮಪ್ಪಿನಂ ಪಗೆವರೊಕ್ಕಲೊಳೋವೆನಲೊರ್ವರಿಲ್ಲದ
ತಿರೆ ತವೆ ಕೊಲ್ಗುಮಂತುಮರಿಕೇಸರಿಗಿದಿರಾಂತು ಬರ್ದುಂಕಲಕ್ಕುಮೇ॥ ೯–೫೭

ಬಲಿಷ್ಠನಾದವನಿಗೆ ತಾನು ಬಲಿಷ್ಠನೆಂದು ನಂಬಿಕೆಯಿರುವವರೆಗೆ ಬಲವಿರುತ್ತದೆ. ಅವನು ದುರ್ಬಲನೆಂಬ ಭಾವ ಬಂತೆಂದರೆ ಆತನ ಬಲ ಕುಂದುತ್ತದೆ. ಕೃಷ್ಣ ಆ ಬಲಿಷ್ಠರನ್ನು ಭಂಗಿಸಿ ಮಾತಾಡಿ ಅವರನ್ನು ದುರ್ಬಲಗೊಳಿಸಿದ. ಈ ಜಾಣ್ಮೆ

ಮತ್ತಾರಿಗೂ ಇರಲಿಲ್ಲವೆನ್ನಬಹುದು. ಈ ಮುಖಭಂಗದಿಂದ ಕಣ್ಣು ಕಾಣದಂತಾದ ದುರ್ಯೋಧನ ತೋಟ್ಟುಟ್ಟಿಯು ಮನೆಯು ಕೂಟು ನಿನ್ನನ್ನು ಈ ರೀತಿ ನುಡಿಯಿಸಿತೆನ್ನುತ್ತಾನೆ. ಮತ್ತೆ ಕೃಷ್ಣನ ಮೇಲೆ ಕತ್ತಿ ಹಿರಿದು ಹಾಯುತ್ತಾನೆ. ಅಷ್ಟರಲ್ಲಿ ಕೃಷ್ಣ ವಿಶ್ವರೂಪ ತೋರಿ, ಹಾಗೆಯೇ ಕರ್ಣನನ್ನೂ ಭೇದಿಸಿ ಹಿಂದೆ ಬರುತ್ತಾನೆ. ಯುದ್ಧದಲ್ಲಿ ಬಂದೊದಗಿದ ಎಲ್ಲ ಸಂದಿಗ್ಧಗಳನ್ನು ಉಪಾಯದಿಂದ ನಿವಾರಿಸಿ ಪಾಂಡವರು ಜಯಿಸುವಂತೆ ಮಾಡಿದ ಮಹಾಪುರುಷನಾಗಿದ್ದಾನೆ. ಇಷ್ಟರ ಮಟ್ಟಿಗೆ ಆತನನ್ನು ಪಂಪ ಚಿತ್ರಿಸಿಯೂ, ಭಾರತವು ಲೋಕಪೂಜ್ಯವಾಗುವುದಕ್ಕೆ ಕಾರಣರಾದ ವ್ಯಕ್ತಿಗಳ ಸಾಲಿನಲ್ಲಿ ಈ ಪುರುಷೋತ್ತಮನನ್ನು ಸೇರಿಸಲಿಲ್ಲ. ದೇವರು ಎಂದೂ ಪ್ರತ್ಯಕ್ಷನಾಗದೆ ಮಾನವನಿಂದ ತನ್ನ ಕಾರ್ಯವನ್ನು ಮಾಡಿಸಿಕೊಳ್ಳುತ್ತಾನೆ. ಹಾಗೆಯೇ ಶ್ರೀಕೃಷ್ಣ ಪ್ರತ್ಯಕ್ಷವಾಗಿ ಮಹಾಭಾರತ ಯುದ್ಧದಲ್ಲಿ ಭಾಗಿಯಾಗದೆ, ಆ ರಂಗಕ್ಕೆ ಉಳಿದವರನ್ನು ಬಿಟ್ಟು ತಾನು ಹಿನ್ನೆಲೆಯಲ್ಲಿ ನಿಂತನೆಂಬುದನ್ನು ಪಂಪ ಧ್ವನಿಸುತ್ತಾನೋ ಎನ್ನುವಂತಿದೆ, ಕೃಷ್ಣನ ಬಗೆಗಿನ ಅವನ ಮೌನ.

ಸಮಾರೋಪ ಪದ್ಯದಲ್ಲಿ ಹೇಳಿರುವಂತೆ ಇತರ ಪಾತ್ರಗಳನ್ನೆಲ್ಲ ಪಂಪ ಅದ್ಭುತವಾಗಿಯೇ ಚಿತ್ರಿಸಿದ್ದಾನೆ. ಆ ವಿಚಾರವನ್ನೆಲ್ಲ ಇಲ್ಲಿ ಎತ್ತಿ ಹೇಳಲು ಅವಕಾಶವಿಲ್ಲ. ಕುರುಕ್ಷೇತ್ರದ ಕದನಕ್ಕೆ ಮೂಲ ಭೂತ ಕಾರಣರು ಇಬ್ಬರು, ಭೀಮ ಮತ್ತು ದ್ರೌಪದಿ. ರಾಜಸಭೆಯಲ್ಲಿ ಯಾವ ಸ್ತ್ರೀಗೂ ಆಗಬಾರದಂತಹ ಅವಮಾನ, ವನವಾಸದ ಬವಣೆ, ಅಜ್ಞಾತವಾಸದಲ್ಲಿ ಕೀಚಕನ ಕೀಟಲೆ, ಹೀಗೆ ದ್ರೌಪದಿ ಪಡಬಾರದ ಕಷ್ಟವನ್ನು ಅನುಭವಿಸಿದವಳು. ವೈರಿಯಾದ ದುಶ್ಶಾಸನನ ನೆತ್ತರಿಂದ ತನ್ನ ತಲೆಕೂದಲನ್ನು ನಾಂದಿ, ಆತನ ಹಲ್ಲ ಹಣಿಗೆಯಿಂದ ತಲೆ ಬಾಚಿಸಿಕೊಂಡು ತನ್ನ ಪ್ರತಿಜ್ಞೆಯನ್ನು ಭೀಮನಿಂದ ನೆರವೇರಿಸಿಕೊಂಡವಳು. ಅವಳ ಸಂಕಟವನ್ನು ಪರಿಹರಿಸಿದ ಭೀಮ ಅವಳ ಶ್ರೀಮುಡಿಗೆ ವೈರಿಯ ಕರುಳನ್ನು ಮುಡಿಸಿ :

ಇದಱೊಳ್ ಶ್ವೇತಾತಪತ್ರಸ್ಥಗಿತ ದಶದಿಶಾಮಂಡಳಂ ರಾಜಚಕ್ರಂ
ಪುದಿದಟ್ಟುಕ್ಕಿಡಿತ್ತಡಂಗಿತ್ತಿದಱೊಳ್ ಕುರುರಾಜಾನ್ವಯಂ ಮತ್ತತಾಪ।
ಕ್ಕಿದಱಿಂದಂ ನೋಡಗುರ್ವುರ್ವಿದುದಿದುವೆ ಮಹಾಭಾರತಕ್ಕಾದಿಯಾಯ್ತು
ಬ್ಜದಳಾಕ್ಷೀ ಪೇೞ ಸಾಮಾನ್ಯಮೆ ಬಗೆಯೆ ಭವತ್ಕೇಶಪಾಶ ಪ್ರಪಂಚಂ॥ 12-156

ಎಂದು ಕೇಳುತ್ತಾನೆ. ಆದರೆ ಇಂತಹ ದ್ರೌಪದಿಗೆ ಪಟ್ಟದ ರಾಣಿಯಾಗುವ ಅವಕಾಶ ಪಂಪ ಕೊಡಲಿಲ್ಲ. ಅರ್ಜುನನೊಡನೆ ಸುಭದ್ರೆ ಪಟ್ಟಕ್ಕೇರುತ್ತಾಳೆ. ಇದೊಂದು ವಿಷಯದಲ್ಲಿ ಪಂಪನನ್ನು ಸಮರ್ಥಿಸಲು ಸಾಧ್ಯವಿಲ್ಲದಾಗಿದೆ.

ಒಟ್ಟಿನಲ್ಲಿ ನವರಸ ಭರಿತವಾದ ಈ ಕಾವ್ಯ ಅದರ ರಚನೆಯಾದಂದಿನಿಂದಲೂ ಕನ್ನಡಿಗರ ಹೆಮ್ಮೆಯ ಕಾವ್ಯವಾಗಿ ಉಳಿದು ಬಂದಿದೆ. ಸಂಕುಚಿತ ಮತದ ಎಲ್ಲೆಯನ್ನೂ ದಾಟಿ ಪಂಪನ ಕಾವ್ಯ ಪ್ರಭಾವಶಾಲಿಯಾಗಿದೆ. ಇಂತಹ ರಸಪಾಕವನ್ನು ಸವಿಯಲು ಕನ್ನಡಿಗರು ತೆರೆದ ಮನಸ್ಸಿನಿಂದ ಸಿದ್ಧರಾಗಿರಬೇಕಾದುದು ಅಗತ್ಯ. ಆದರಿಂದ ಅವರಿಗೆ ನಿಶ್ಚಯವಾಗಿಯೂ ಧೃತಿ, ತುಷ್ಟಿ, ಪುಷ್ಟಿ, ವಿಭವ, ಸೌಭಾಗ್ಯ, ಕಾಂತಿಯುಗುಂತಿ, ಶಾಂತಿ, ಭದ್ರಂ, ಶುಭಂ, ಮಂಗಳಂ ಉಂಟಾಗುವುದು—ಎಂಬುದು ಪಂಪನ ಆಶಯ.

ಮೂರ್ತಿ ಪೂಜೆಯನ್ನು ಭಾಗವತರು ಸಾಧಕನಿಗೋಸ್ಕರ ಹೇಳಿದೆ. ಆದರೆ ಸಾಧಕನು ಸರ್ವಭಾವಗಳಲ್ಲಿಯೂ ಪರಮಾತ್ಮನು ಇದ್ದಾನೆಂಬ ದೃಢವಾದ ನಿಲುವನ್ನು ತಳೆದು ಚಿತ್ತಸ್ಥೈರ್ಯ ಸಂಪಾದನೆಗಾಗಿ ಮೂರ್ತಿಯನ್ನು ಪೂಜಿಸತಕ್ಕದ್ದು. ಹಾಗಿಲ್ಲದೆ ಮೂರ್ತಿಯೊಂದೇ ದೇವರೆಂಬ ಭಾವನೆಯನ್ನು ತಳೆದರೆ ಆ ಪೂಜೆಯು ವಿಡಂಬನೆಯೇ ಸರಿ.

—ಶ್ರೀ ಎನ್. ರಂಗನಾಥ ಶರ್ಮಾ

ಈ ಕಾಲಕ್ಕೆ ಶ್ರೀರಾಮನ ಪ್ರಸ್ತುತತೆ

ಸುಜನಾ

ಶ್ರೀರಾಮಚಂದ್ರ ಭಾರತೀಯ ಜೀವನ ವಿಕಾಸದ ಅತ್ಯಂತ ಪ್ರಮುಖ ಘಟ್ಟದಲ್ಲಿ ಬಂದುದು ಮಾತ್ರವಲ್ಲದೆ ಅತ್ಯತಿಶಯವಾದ ಏರುವೆಯನ್ನು ತಂದುಕೊಡುತ್ತಾನೆ. ರಾವಣವಧೆಯೆ ಅವನ ಜೀವಿತೋದ್ದೇಶವೆಂದು ತಿಳಿಯುವುದರಿಂದ ಅವನ ಮಹತ್ತಮ ಸಾಧನೆಯು ಮರೆಯಾಗುತ್ತದೆ. ಹಾಗಾದರೆ ಆ ಮಹತ್ತಮವಾದ ಕೊಡುಗೆ ಯಾವುದು ? ಶ್ರೀ ಪು ತೀ ನರಸಿಂಹಾಚಾರ್ಯರ 'ಅಹಲ್ಯೆ' ಎಂಬ ಬಹು ಮನೋಜ್ಞ ವಾದ ಕಾವ್ಯನಾಟಕದಲ್ಲಿ ಬರುವ ಒಂದು ಪ್ರಸಂಗದಿಂದ ಇದು ಧ್ವನಿತವಾಗುತ್ತದೆ. ನಾಟಕದ ಕಡೆಯ ಅಂಕವಾದ ಉತ್ತರಾಂಕದಲ್ಲಿ ವಿಶ್ವಾಮಿತ್ರರೊಡನೆ ರಾಮ ಲಕ್ಷ್ಮಣರು ಗೌತಮರ ಆಶ್ರಮ ಪ್ರವೇಶಿಸುವ ಚಿತ್ರ ಬರುತ್ತದೆ, ಆಶ್ರಮದ ಸುತ್ತೂ ಬೆಳೆದಿದ್ದ ಎತ್ತರವಾದ ಮರಗಳಿಂದ ಕೂಡಿದ ಕಾಡನ್ನು ನೋಡಿ ಲಕ್ಷ್ಮಣ ಪರವಶನಾಗುತ್ತಾನೆ. ಆದರೆ ಶ್ರೀರಾಮನಿಗೆ ಆ ಕಾಡು ಮಿಥಿಲೆಗೆ ಹತ್ತಿರದಲ್ಲಿದ್ದೂ ನಿರ್ಜನವಾಗಿರುವುದನ್ನು ಕಂಡಾಗ, ಮಿಗಿಲಾಗಿ ಆ ಆಶ್ರಮದ ಎಲೆವನೆ ನೆಲಕ್ಕೆ ಕುಸಿದು ಇರುವುದನ್ನು ಗಮನಿಸಿದಾಗ ಕಸಿವಿಸಿಯಾಗುತ್ತದೆ. ಆ ಕಾಡಿನ ಗಿಡಮರದೆಲೆಯ ಮೊರೆತದಲ್ಲಿ ತಪ್ತಾತ್ಮರ ನಿಡುಸುಯ್ಯಲು ಕೇಳಿಬರುತ್ತದೆ. ಕೋಗಿಲೆಯ ಕುಕಿಲಿನಲ್ಲಿ ದುಃಖಿಗಳ ಆಕ್ರಂದನವೆ ಕೇಳಿಬರುತ್ತದೆ ಆ ಪೊದೆಗಳ ಮರೆಯಲ್ಲಿ ಯಾರೋ ತಮ್ಮನ್ನು ಕಾಪಾಡು ಕಾಪಾಡು ಎಂದು ಮೊರೆಯಿಡುತ್ತಿರುವಂತೆ ಕೇಳಿಬರುತ್ತದೆ. ಇವನ ಈ ಸಂವೇದನೆ ಯನ್ನು ಕೇಳಿದ ಲಕ್ಷ್ಮಣನ ತರ್ಕ ಬುದ್ಧಿ ಸುಲಭ ಉತ್ತರ ಕಂಡುಕೊಂಡು ಸತ್ಯವನ್ನು ಕಂಡೆನೆಂದು ಭಾವಿಸಿ ಕಾಣದೆ ಹೋಗುತ್ತದೆ. ತಾಟಕೆಯನ್ನು ಕೊಂದಾಗಿನಿಂದಲೂ ರಾಮ ತನ್ನ ಚಿತ್ತ ಸ್ವಾಸ್ಥ್ಯವನ್ನು ಕೊಂಚ ಕಳೆದುಕೊಂಡಿರುವಂತೆ ಅವನಿಗೆ ತೋರುತ್ತದೆ. ಅದಕ್ಕೂ ಮಿಗಿಲು ಲಕ್ಷ್ಮಣನ ನಿರಾಶ್ಚರ್ಯಕ್ಕೆ ಕಾರಣವೇನೆಂದರೆ ಆ ಕಾಡಿನಲ್ಲಿ ಕುಸಿದಿರುವ ಎಲೆವನೆಗಳು ದಿನವೂ ಕಾಣುವ ಸಾಮಾನ್ಯ ನೋಟವಾಗಿದೆ,

ಅದಕ್ಕೇಕೆ ಚಿಂತಿಸಬೇಕು, ಎಂಬುದೇ ಅವನ ಸುಲಭ ಪರಿಹಾರ ಸಿದ್ಧಿಯ ತೃಪ್ತಿ ಪಡೆದ ಬುದ್ಧಿಯ ವಾದ. ಕಾಡಿನ ಎತ್ತರವಾದ ಮರಗಿಡಗಳನ್ನು ಕಂಡು ಭಾವುಕನಾಗಿ ವಿಜೃಂಭಿಸಿದ ಅವನು ಆ ಕುಸಿತದ ಎಲೆವನೆಗೆ ಯಾವ ಸ್ಪಂದನವೂ ಇಲ್ಲದವನಾಗುತ್ತಾನೆ. ಹೀಗಿರುವಾಗ ಅವನಿಗೆ ತಪ್ತಾತ್ಮರ ಆರ್ತನಾದ ಹೇಗೆ ತಾನೆ ಕೇಳೀತು. ಆದ್ದರಿಂದಲೇ ಲಕ್ಷ್ಮಣ ಈ ಮಾತನ್ನು ಹೇಳುತ್ತಾನೆ :

> "ಕುಸಿದೆಲೆವನೆ ಈ ಕಾಡೊಳದೇಂ ನಿತ್ಯದ ನೋಡ,
> ಅದಕೀ ಪರಿ ಪರಿಭಾವಿಸೆ ಅದು ಹುಸಿಬಗೆಯಾಟ".

'ಅಹಲ್ಯೆ' : ಉತ್ತರಾಂಕ, ದೃಶ್ಯ ೩, ಪುಟ ೧೦೧

ಆದರೆ ರಾಮನಿಗೆ ಅದು ಹೇಗೆ ಸಾಧ್ಯವಾಯಿತು ? ಅವನು "ಮರುಕದಿಂದ", "ಸ್ನಾತಾಂತರಂಗದಿಂದ" ತಪ್ತರ ಆರ್ತಧ್ವನಿ ಕೇಳುತ್ತಾನೆ ; ಲೋಕ ಸಂಭ್ರಮದ ನಾನಾ ರಾವಗಳಲ್ಲಿ ಕೇಳಿಸದ ಆ ಆಕ್ರಂದನವನ್ನು ಕೇಳುತ್ತಾನೆ. ಆದರಿಂದಾಗಿ ಆರ್ತರ ಉದ್ಧಾರಕ್ಕೆ ತಕ್ಕವನಾಗುತ್ತಾನೆ. ಕುಸಿದ ಮನೆಗಳು, ಎಲೆವನೆಗಳು ಲಕ್ಷ್ಮಣನಿಗೆ ಸಾಮಾನ್ಯವಾಗಿವೆ. ಅವು ಒಂದಲ್ಲ. ಒಂದೊಂದೂ ಒಂದೊಂದು ಕಾರಣಕ್ಕಾಗಿ ಕುಸಿದಿವೆಯೋ ? ಅಥವಾ ಗೌತಮಾಶ್ರಮ ಕುಸಿದಿರುವ ಕಾರಣಕ್ಕಾಗಿಯೆ ಕುಸಿದಿವೆಯೆ ? ಎರಡೂ ಸಾಧ್ಯವಾದರೂ ಎರಡನೆಯ ಕಾರಣವೆ ಸಾಧು. ಶ್ರೀರಾಮ ಬಂದ ಸಂದರ್ಭದಲ್ಲಿ, ಆ ಯುಗದಲ್ಲಿ, ಎಷ್ಟೆಲ್ಲ ಸಂಸಾರಗಳು ಉರುಳಿಹೋಗಿದ್ದುವೊ ! ಸ್ವಯಂ ಇಂದ್ರನೇ ಮಹರ್ಷಿ ಪತ್ನಿಯನ್ನು ಕಾಮಿಸುವುದಾದರೆ ಹಾಗೂ ಆಕೆಯೂ ದೇವರಾಜ ಕುತೂಹಲೆಯಾದರೆ, ಸಾಮಾನ್ಯರ ಸಂಸಾರಗಳು ಏನಾಗಿದ್ದಾವು ? ಅದೇ ಕಾಲದಲ್ಲಿ ಜಮದಗ್ನಿ ಋಷಿಯ ಪತ್ನಿಯನ್ನು ವರ ಬಲಿಷ್ಠನಾದ ಕಾರ್ತವೀರ್ಯಾರ್ಜುನ ಕಾಮಿಸುತ್ತಾನೆ. ಆಶ್ಚರ್ಯವೆಂದರೆ ಆ ಋಷಿ ಪತ್ನಿಯೂ ಮೋಹಿತೆಯಾಗಿರುತ್ತಾಳೆ. ಇದರ ಪರಿಣಾಮ ? ಭಯಂಕರ. ಪರಶುರಾಮ ದಾರಿತಪ್ಪಿದ ತಾಯಿಯನ್ನೆ ತಂದೆಯ ಮಾತಿನಂತೆ ಕೊಂದು ಬದುಕಿಸಿಕೊಳ್ಳುತ್ತಾನೆ ; ಆ ದುರಾತ್ಮ ಕ್ಷತ್ರಿಯನನ್ನೂ ಕೊಲ್ಲುತ್ತಾನೆ. ಕಾರ್ತವೀರ್ಯಾರ್ಜುನನಿಗೆ ಹತ್ತಲ್ಲ ನೂರ ತಲೆ, ಇನ್ನೂರು ತೋಳು. ಅಂದರೆ ಕ್ಷಾತ್ರಾಧಿಕಾರ ಅವನಲ್ಲಿ ವಿಪುಲವಾಗಿತ್ತು. ಅವನು ಎಲ್ಲಕ್ಕೂ Head of the Dept. ಯಾವುದಕ್ಕೂ ತಲೆ ಹಾಕಬಲ್ಲ, ಯಾವುದರ ಮೇಲೂ ಕೈ ನೀಡಬಲ್ಲ. ಅಧಿಕಾರ ಶಕ್ತಿ ಹೆಚ್ಚಿ ಇವನೂ ಕೆಟ್ಟ. ಪೂಜೆ ಹೆಚ್ಚಿ, ಶಕ್ತಿ ಹೆಚ್ಚಿ ಇಂದ್ರನೂ ವೃಷಣ ಕಳೆದು ಕೊಳ್ಳುತ್ತಾನೆ. Creativity ಕಳೆದುಕೊಳ್ಳುತ್ತಾನೆ. ಕಾರ್ತವೀರ್ಯನ ಆ ತೋಳನ್ನೂ ಆ ತಲೆಯನ್ನೂ ಪರಶುರಾಮ ಕತ್ತರಿಸಿದರೆ ಇಂದ್ರನನ್ನು ಗೌತಮಶಾಪ ನಷ್ಟ ವೃಷಣ ನನ್ನಾಗಿ ಮಾಡುತ್ತದೆ. ತನ್ನ ತಾಯಿಯ ಶೀಲ ಭಂಗಮಾಡಿದವನನ್ನು ಕೊಲ್ಲುವುದರಿಂದ

ಪರಶುರಾಮನ ಕೋಪ ಆರಲಿಲ್ಲ. ಇಡೀ ಕ್ಷತ್ರಿಯ ವಂಶವನ್ನೆ ಗಂಡುಸುಳಿ ಇಲ್ಲದಂತೆ ಮಾಡಿದನೆಂದು ವ್ಯಾಸಭಾರತದಲ್ಲಿ ಭೀಷ್ಮರು ಹೇಳುತ್ತಾರೆ. ಅಷ್ಟೇ ಅಲ್ಲ, ಕ್ಷತ್ರಿಯ ಸ್ತ್ರೀಯರು 'ಬ್ರಾಹ್ಮಣ' ಸಂಪರ್ಕದಿಂದ ಮಕ್ಕಳನ್ನು ಪಡೆಯುತ್ತಾರಂತೆ. ದಶರಥ ನಂಥವರು ಸದಾ 'ಕಂಕಣ' ಕಟ್ಟಿಕೊಂಡಿದ್ದು ಅವನ ಕೋಪದಿಂದ ಪಾರಾಗುತ್ತಾರೆ. ದಶರಥ ಮುನ್ನೂರು ಹೆಂಡಿರನ್ನು ಮದುವೆಯಾಗುತ್ತಾನೆ. ಉಳಿದಂತೆ ಕ್ಷತ್ರಿಯ ಪೀಳಿಗೆ ನಾಶವಾಯಿತು. ಅಂತೆ ಗೌತಮಶಾಪದಿಂದ ಇಂದ್ರಸತ್ತ್ವ ಮೊದಲಿನಂತೆ ಇರದಾಯಿತು. ವೇದ ಪಾರಮ್ಯ ಬೇರೊಂದು ಜ್ಞಾನಾನುಭವ ಅವಸ್ಥೆಗೆ ಎಡೆಮಾಡಿ ಕೊಟ್ಟಿತು. ಇದರಿಂದ ಉಪನಿಷತ್ತು ಬಂದವು ; ಗೀತೆ ಬಂದಿತು. ಆದರೆ ಕ್ಷತ್ರಿಯ ಕುಟುಂಬಗಳು ಪರಶುರಾಮನ ಕೋಪಕ್ಕೆ ತುತ್ತಾಗಿ ಕುಸಿದುಹೋದವು. ಇದಿಷ್ಟೆ ಸಾಲದೆಂದು ರಾವಣನಂಥ ವರಬಲ್ಲಿಷ್ಠರು ಇಂದ್ರಾದಿಗಳನ್ನು ಗೆಲ್ಲುವಷ್ಟರಿಂದಲೇ ತೃಪ್ತವಾಗದೆ ಇಂದ್ರಿಯ ಕಾಮಗಳ ಪ್ರಭು ಆಗ ಹೋಗುತ್ತಾನೆ. ಅವನಿಂದಲೂ ಲೋಕದ ಸಾಂಸಾರಿಕ ಪ್ರೀತಿ ತಲ್ಲಣಗೊಂಡಿರುತ್ತದೆ.

ಶ್ರೀ ರಾಮ ಬರುವುದು ಇಂಥ ಅವಸ್ಥೆಯಲ್ಲಿ– ಕುಸಿದ ದಾಂಪತ್ಯಗಳ, ಒಡೆದ ಬಾಳುಗಳ ಉದ್ಧಾರಕನಾಗಿ, ಯಾವ ಉಪನ್ಯಾಸವನ್ನೂ ಕೊಡ ಹೋಗದೆ ರಾಮಚಂದ್ರ ಸಂಸಾರ ಜೀವನ ಶುದ್ಧಿಯನ್ನು ಸಾಧಿಸ ಹೊರಡುತ್ತಾನೆ. ಅಹಲ್ಯಾ ಪ್ರಸಂಗವಾದ ಕೆಲವು ದಿನಗಳಲ್ಲೆ ಸೀತಾದೇವಿಯೊಡನೆ ಮದುವೆಯಾಗುತ್ತದೆ. ಆಗ ಹೇಗಿದ್ದಿದಬೇಕು ಅವನ ಪರಿಸ್ಥಿತಿ ! ಸಂಸಾರಗಳ ಕುಸಿತಕ್ಕೆ ನಾನಾ ಕಾರಣ ಉಂಟು. ಟಾಲ್‌ಸ್ಟಾಯ್ ಮಹಾಕಾದಂಬರಿಕಾರನ ಪ್ರಸಿದ್ಧ ವಾಕ್ಯ–ಅನ್ನಾ ಕೆರ್ನಿನಾ ಕಾದಂಬರಿಯ ಪ್ರಾರಂಭ ವಾಕ್ಯ ಹೇಳುವಂತೆ ''All happy families are alike, but those unhappy are unhappy in thir own ways''. ರಾಮನ ಆ ತಾರುಣ್ಯದಲ್ಲೆ ಅದು ಹೊಳೆದಿರಬೇಕು. ಇದಕ್ಕೆ ಪೋಷಕವಾಗಿ ಅವನ ಸಂವೇದನಶೀಲ ಹೃದಯಕ್ಕೆ ತನ್ನ ತಂದೆಯ ದೊಡ್ಡ ಸಂಸಾರವು ನಾನಾ ಅರ್ಥವನ್ನು ಹೊಳೆಸಿರಬೇಕು. ಹೆಣ್ಣು ಗಂಡಿನ ಪ್ರೀತಿ ಹೋಳಾಗಿ ಚೂರಾಗಿ ಹೋಗದೆ, ಉಂಡೆಯಾಗಿ ಅನ್ಯೋನ್ಯರಿಗೆ ದಕ್ಕಬೇಕಾದರೆ ಏನು ಮಾಡಬೇಕು ? ಅವನಿಗೆ ತೋರಿದುದು ಏಕ ಪತ್ನೀವ್ರತ ; ಪಾತಿವ್ರತ್ಯದ ಲಾಭಕ್ಕೆ ಅದೇ ಪೂರ್ವ ಅಗತ್ಯ. ಅಂತೆ, ರಾಮ ಸೀತೆಯೊಬ್ಬಳನ್ನು ಕೈಹಿಡಿದ ; ಅವನ ತಮ್ಮಂದಿರೆಲ್ಲ ಯಾವ ಘೋಷಣೆಯೂ ಮಾಡದೆ ಅದನ್ನೆ ಅನುಸರಿಸಿದರು. ಮಾಯೆಯ ಮೂರು ಮುಖಗಳಾದ ಹೆಣ್ಣು, ಹೊನ್ನು ಮಣ್ಣುಗಳಲ್ಲಿ ಕಡೆಯ ಎರಡನ್ನು ಕಮ್ಯುನಿಸಂ, ಸೋಷಿಯಲಿಸಂಗಳು ಸಮವಿತರಣ ಮಾಡಲು ಅಥವಾ ಯಾರ ಅಧೀನ ದಲ್ಲೂ ಇರದೆ ರಾಷ್ಟ್ರದ ಅಧೀನದಲ್ಲಿರುವಂತೆ ಮಾಡಲು ವ್ರತಗೊಂಡು ಹತಾಶವಾಗಿವೆ. ಆದರೆ ಕಾಮದ ಜೀವನದಲ್ಲಿ ಮಾತ್ರ ಸಮಾನ ಭೋಗ ಸಾಧನೆ ಯಾರ ಆದರ್ಶವೂ

ಆಗಲಿಲ್ಲ. ರಾಮ ಆ ಅಸಾಧಾರಣ ಸಾಧನೆ ಮಾಡುತ್ತಾನೆ. ಭೂಮಿ ಕಾಣಿ, ಆಸ್ತಿ ಪಹಿವಾಟು ಇಲ್ಲದೆ ಮನುಷ್ಯ ಹೊಟ್ಟೆ ಬಟ್ಟೆಗಷ್ಟೆ ಶ್ರಮಿಸುತ್ತ ಬದುಕಬಹುದು. ಆದರೆ ಕಾಮ ಜೀವನ ತೃಪ್ತಿಯಿಲ್ಲದೆ, ಸಂತಾನವಿಲ್ಲದೆ ಹೇಗಿರಬಲ್ಲ ? ನೂರಾರು ಹೆಂಡಿರನ್ನು ಶಕ್ತರು ಮದುವೆಯಾದಾಗ ನತದೃಷ್ಟರಾದ ನೂರಾರು ಜನ ದಾಂಪತ್ಯ ಜೀವನವಿಲ್ಲದೆ ಬರುಗನಸುಗರಾಗಿ ಬದುಕು ನೂಕಬೇಕಾಗುತ್ತದೆ. ಸಾಹಸಿಗಳು ಆ ಭಾರ ಸಂಸಾರಗಳು ಬಿರುಕು ಬಿಡವುದನ್ನೇ ಕಾಯಬಹುದು. ಇದರ ಜೊತೆಗೆ ಸಾಂಸಾರಿಕ ದಾಂಪತ್ಯವೂ ಸದಾ ಬಲಿಷ್ಠರ ಕಾಟಕ್ಕೆ ಬಲಿಯಾಗುವ ಭಯವಿದ್ದರೆ ಹೇಗೆ ? ಶ್ರೀ ರಾಮ ಬಂದದ್ದು ಇಂಥ ಹೊತ್ತಿನಲ್ಲಿ. ಅಮೇಧ್ಯಮಯ ಪಂಕದಲ್ಲಿ ಭೂಮಿಯನ್ನು ಹಿರಣ್ಯಾಕ್ಷ ಬೈಚಿಟ್ಟಾಗ ಆ ಆವರಣದಲ್ಲಿ ಹಿತವಾಗಿ ಬದುಕಬಲ್ಲ ವರಾಹದ ರೂಪದಲ್ಲೇ ಉದ್ಧಾರಕ ಚೈತನ್ಯ ಮೂಡಿ ಬಂದಿತೆನ್ನುತ್ತಾರೆ. ಶ್ರೀರಾಮ ಸಂಸಾರ ಜೀವನವನ್ನು ದುಃಖಾವಮಾನ ಪಂಕದಿಂದ ಮೇಲೆತ್ತುವ ಮಹಾ ಸತ್ತ್ವನಾಗುತ್ತಾನೆ. (ಆದರೆ ಅವನ ವಂಶದ ಅಗ್ನಿವರ್ಣ ಮತ್ತೆ ಯಾವ ಕೆಸರಿಗೆ ಆ ಸಂಸಾರ ಜೀವನವನ್ನು ಕೆಡವುತ್ತಾನೆ ! ಇದೇ ಸಾಕ್ಷಿ, ಉದ್ಧಾರ ಎಂಬುದು ಸ್ಥಿರವಾಗಲು ಎಷ್ಟು ಕಂಟಕಗಳಿವೆ ಎಂಬುದಕ್ಕೆ.)

ಕೇವಲ ಹೆಣ್ಣುಗಂಡಿನ ದಾಂಪತ್ಯವಷ್ಟನ್ನೆ ಮೇಲೆತ್ತಿದುದಷ್ಟೆ ರಾಮನ ಸಾಧನೆ ಯಲ್ಲ. ಇಡೀ ಕುಟುಂಬ ಜೀವನ, ಅದಕ್ಕೂ ಮಿಗಿಲು ಸಮಾಜ ಜೀವನ, ಲೋಕ ಜೀವನ, ಅವನಿಂದಾಗಿ ದಿವ್ಯಸ್ತರಕ್ಕೆ ಏರಿತು. ತಂದೆ ತಾಯಿಗೆ ಮಗನಾಗಿ, ಸತಿಗೆ ಪತಿಯಾಗಿ, ಕಿರಿಯ ಸೋದರರಿಗೆ ಹಿರಿಯಣ್ಣನಾಗಿ, ಸ್ನೇಹ ನೀಡಿದವರಿಗೆ ಒಳ್ಳೆಗೆಳೆಯ ನಾಗಿ, ದ್ವೇಷಿಸುತ್ತ ನಿಂತವರಿಗೆ ಒಳ್ಳೆ ಶತ್ರುವಾಗಿ, ಪ್ರಜೆಗಳಿಗೆ ಒಳ್ಳೆಯ ರಾಜನಾಗಿ ಆದರ್ಶವಾಗಿಯೆ ಉಳಿಯುತ್ತಾನೆ. ಅವನು ತಾನೊಬ್ಬನೆ ಮೇಲೇರದೆ ತನ್ನ ಜೊತೆ ಯಲ್ಲಿ ತನ್ನ ಸುತ್ತಮುತ್ತಣ ಜೀವಿಗಳನ್ನೆಲ್ಲಾ ಮೇಲೆತ್ತುತ್ತಾನೆ ! ಅವರು ತನಗೆ ತಕ್ಕವ ರೆಂಬಂತೆ ಮಾಡಿಕೊಳ್ಳುತ್ತಾನೆ.

ಹಿಮಾಲಯ ಪರ್ವತ ಕೆಲವು ಕೋಟಿ ವರ್ಷಗಳ ಹಿಂದೆ ಸಾಗರದಡಿ ಇತ್ತಂತೆ. ದಖನ್ ಭೂ ಭಾಗ ಉತ್ತರಕ್ಕೆ ಸರಿದು ಹೋಗುತ್ತ ಹೋಗುತ್ತ ಮಡಿಕೆಯಾಗಿ ಈ ಪರ್ವತ-ಕಾಯ ಮೇಲೆ ಬಂತಂತೆ. ಆಶ್ಚರ್ಯವೆಂದರೆ ಹೀಗೆ ಮೇಲೆ ಬಂದ ಪರ್ವತ ಪಂಕ್ತಿ ಗೌರೀಶಂಕರ ಎವರೆಸ್ಟ್ ಶಿಖರಗಳನ್ನು ಮಾತ್ರವಲ್ಲ, ಅವಕ್ಕೆ ತಮ್ಮಂದಿರಾಗ ಬಹುದಾದ ಅನೇಕ ಶಿಖರಗಳನ್ನೂ, ಪರಿವಾರದವರಾಗುವ ಗಿರಿ ಪಂಕ್ತಿಗಳನ್ನೂ ತನ್ನೊಡನೆ ಮೇಲಕ್ಕೆ ತಂದಿತು. ಶ್ರೀರಾಮ ತನ್ನೊಡನೆ ಒಂದು ಸಮೂಹವನ್ನೇ ಹೀಗೆ ಮೇಲೆತ್ತಿದ : ಮೇಲೆತ್ತಿ ತಂದ. ಅವನು ತಂದನೊ, ಅವರೇ ಮೇಲೆದ್ದು ಬಂದರೊ ಎಂಬ ವಾದ ಬರಬಹುದು. ಪರ್ವತ ಪಂಕ್ತಿಯಾಗಬೇಕಾದರೆ ನಾನಾ ಸಂವಾದಿಯಾದ ಶಿಖರಗಳಿರಬೇಕು ತಾನೆ ? ತುಂಗ ಶಿಖರದ ಜೊತೆಯಲ್ಲಿ ಬಾರದ ಸಹೋದರ ಶಿಖರಗಳು ತಾವೂ ನಷ್ಟಗೊಳ್ಳುತ್ತವೆ, ನಿಮ್ನಗಿರಿಗಳಾಗಿಯೆ ಉಳಿದುಕೊಳ್ಳುತ್ತವೆ. ಅದರಿಂದ

ಪರ್ವತ ಪಂಕ್ತಿಯನ್ನು ಪರಿಮಿತವಾದ ಪರ್ವತವಾಗಿಸಿದಂತೆ ಆಗುತ್ತದೆ. ಆದರೆ ರಾಮನ ಸುತ್ತ ಬಂದ ಮಾನವ ಬಾಂಧವ್ಯ ಅವನ ಎತ್ತರವನ್ನು ನುಂಗಿಕೊಳ್ಳು ವಂತಹದಾಗಿರಲಿಲ್ಲ. ಹಾಗೆ ನೋಡಿದರೆ ಶ್ರೀಕೃಷ್ಣನ ಸಾಂಸಾರಿಕ ಬಾಂಧವ್ಯ ಅವನ ಎತ್ತರಕ್ಕೆ ಸಂವಾದಿಯಾಗಿತ್ತೆನ್ನ ಬರದು. ಬಲರಾಮನನ್ನು ಲಕ್ಷಣ ಭರತರಿಗೆ ಹೋಲಿಸ ಬಾರದು. ಭಕ್ತರು ಸೃಷ್ಟಿಸಿದ ರಾಧಾಗೋಪಿಯರನ್ನು ಬಿಟ್ಟರೆ ಅವನ ಪಟ್ಟದ ಮಹಿಷಿ ಯರಾರೂ ಸೀತಾದೇವಿಯ ಪಾತ್ರ ವೈಪುಲ್ಯವನ್ನು ತೋರುತ್ತಾರೆ ? ರಾಜಮಹಾರಾಜರ, ಇತ್ತೀಚಿನ ದಿನಗಳಲ್ಲಿ ಶ್ರೀಮಂತ ಸಾಹೇಬರ ಮನೆಯ ಅಮ್ಮಣ್ಣಿಯರ ವೈಭವೀಕರಣ ವಾಗಿ ಅವರು ತೋರುತ್ತಾರೆ. ಶ್ರೀಕೃಷ್ಣನ ಮಕ್ಕಳು ? ನಿಜಕ್ಕೂ ಕೃಷ್ಣ ಸಾಂಸಾರಿಕ ವಾಗಿ ಸುಖಿಯೆ ? ಅವನ ಉಜ್ಜ್ವಲ ತೇಜಕ್ಕೆ ಯಾವ ಪ್ರಭಾವಳಿ ದೊರೆಯಿತು ? ರಾಮನದು ಆದರ್ಶ ಸಂಸಾರವೆ ? ಕೃಷ್ಣನದೆ ? ಶ್ರೀರಾಮನ ಸಂಸಾರ ಮರ್ತ್ಯ ಮರ್ತ್ಯದ ಆದರ್ಶವಾಗುಳಿಯುತ್ತದೆ. ಆದರೆ, ಕೃಷ್ಣನ ಎತ್ತರಕ್ಕೆ ಸಂವಾದಿಯಾದ ಬಾಂಧವ್ಯವಿತ್ತೆಂದು ಹೇಳುವುದು ಕಷ್ಟ. ಶ್ರೀರಾಮನನ್ನು ನೆನೆದರೆ ಸೀತೆಯ, ಲಕ್ಷ್ಮಣ ಭರತರ, ದಶರಥ ಕೌಸಲ್ಯೆ ಸುಮಿತ್ರೆ ಕೈಕೆಯರ, ಆಂಜನೇಯನ ನೆನಪೆಲ್ಲ ಒಟ್ಟಿಗೆ ಬರುತ್ತದೆ. ಇವರೆಲ್ಲ ಒಂದು ಕುಟುಂಬ. ಆದರೆ ಕೃಷ್ಣನನ್ನು ನೆನೆದಾಗ ಇತ್ತೀಚಿನ ರಾಧೆಯ ನೆನಪಾಗುವಂತೆ ರುಕ್ಮಿಣೀ ಸತ್ಯಭಾಮೆಯ ನೆನಪಾಗುವುದೆ ? ಬಲರಾಮ ಅಕ್ರೂರ ಸಾತ್ಯಕಿಯ ನೆನಪಾಗುವುದೆ ? ಶ್ರೀರಾಮನಲ್ಲಿ ಸಂಸಾರ ಸಂಯಮ ಕಂಡರೆ ಕೃಷ್ಣನಲ್ಲಿ ವ್ಯಕ್ತಿ ಸ್ವಾತಂತ್ರ್ಯದ ಒಲವು ಹೆಚ್ಚಿದೆ. ಹಾಗಾಗಿ ರಾಮಕೃಷ್ಣರು ಕಂಡುಕೊಂಡ ಧರ್ಮದ ಅರ್ಥದ ಹೊಳಹೂ ಬೇರೆ ಬೇರೆ. ತನ್ನ ತ್ಯಾಗದಿಂದ ಶ್ರೀರಾಮ ತನ್ನ ಸಂಸಾರದ ಇತರರಲ್ಲಿ ತ್ಯಾಗ ಪ್ರೇಮಗಳನ್ನು ಜಾಗ್ರತಗೊಳಿಸುತ್ತಾನೆ. ಒಂದು ವೇಳೆ ಅವನೇನಾದರೂ ರಾಜ್ಯ ಲುಬ್ಧನಾಗಿದ್ದರೆ ? ಕಾಡಿಗೆ ಹೋಗಲು ಹಿಂಜರಿದಿದ್ದರೆ ? ಲಕ್ಷ್ಮಣ ವಾದಕ್ಕೆ ಮೌನಸಮ್ಮತಿ ಸೂಚಿಸಿದ್ದರೆ ? ಅವನು ಪಿತೃಭಕ್ತನಾಗಿ ಕಾಡಿಗೆ ಹೋದ ಎನ್ನುವುದು ಒಂದು ಅಂಶ ; ತಂದೆಯನ್ನು ಸತ್ಯವಾಕ್ ಆಗಿ ಉಳಿಸಬೇಕು ಎನ್ನುವುದು ಮತ್ತೊಂದು ಅಂಶ ; ಯಾರಿಗೂ ಅಸಮಾಧಾನ ತರುವ ರಾಜ್ಯಲಾಭ ಶ್ರೇಯವಲ್ಲ ಎನ್ನುವುದು ಪ್ರಧಾನ ಕಾರಣ–ಅವನು ಕಾಡಿಗೆ ಹೊರಡಲು. ಹೀಗವನು ಮಹಾತ್ಮೆ ಯನ್ನು ತೋರಿದ ಮೇಲೂ ಉಳಿದವರು ಅನುಸಾರಿಗಳಾಗಿರದಿದ್ದರೆ ? ಆಗ ರಾಮಪಾತ್ರ ಒಂಟಿ ಶಿಖರವುಳ್ಳ ಪರ್ವತದಂತಾಗುತ್ತಿತ್ತು. ಆದರೆ ನಮ್ಮ ಪುಣ್ಯ, ಹಲವು ಔದಾರ್ಯಗಳ ಸಂವಾದ ದೊರೆತು ತುಂಬುಗಾನವಾಗುತ್ತಾನೆ. ಮಹಾವಾದ್ಯ ಮೇಳವಾಗುತ್ತಾನೆ. ಹಲವಂಟು ಬಿಳಲುಗಳನ್ನು ಬಿಟ್ಟು ಅವುಗಳ ಮೇಲೆ ಹೆಚ್ಚು ಭಾರ ಬಿಡುತ್ತ ಮತ್ತೂ ದೀರ್ಘನಿಬಿಡವಾಗಿ ಬೆಳೆಯುತ್ತ ಹೋಗುವ ಮಹಾವಟವೃಕ್ಷ ವಾಗುತ್ತಾನೆ ಶ್ರೀರಾಮ. ಆದರೆ ಭವ್ಯವಿಭವದಿಂದ ಕಂಗೊಳಿಸುವ ಮಹಾಶ್ವತ್ಥ ವೃಕ್ಷದಂತೆ ವಿಜೃಂಭಿಸುತ್ತಾನೆ ಶ್ರೀಕೃಷ್ಣ. ಕೃತಜ್ಞ ಎಂದು ವಾಲ್ಮೀಕಿಗಳು ಶ್ರೀರಾಮ

ನನ್ನು ವರ್ಣಿಸುತ್ತಾರೆ. ಶ್ರೀ ವಿಷ್ಣು ಸಹಸ್ರನಾಮದಲ್ಲಿ ಈ ಮಾತನ್ನು ಭಗವಂತನಿಗೆ ಬಳಸಲಾಗಿದೆ. ಈ ಭಗವದ್ಗುಣವನ್ನು ಪಡೆದ ಶ್ರೀರಾಮ ತನ್ನ ಸಹಚರರಲ್ಲೆಲ್ಲ ಅದೇ ಗುಣವನ್ನು ಎಚ್ಚರಿಸುತ್ತಾನೆ. ಅದರಿಂದಾಗಿ ಅವನು ಅದ್ಭುತ ಸಮೂಹಗಾನ ವಾಗುತ್ತಾನೆ.

ಈ ಅಸಾಧಾರಣ ಗೋಷ್ಠಿಗಾನ ಶ್ರುತಿ ತಪ್ಪದ ಹಾಗೆ ತಾನು ಶ್ರುತಿಬದ್ಧವಾಗಿರು ತ್ತಾನೆ, ಅದೇ ಅವನ ಧರ್ಮ. ಸಮಷ್ಟಿಯ ಮೇಳ ಶ್ರುತಿ ಬದ್ಧವಾಗಿರುವಂತೆ ಮಾಡಲು ಎಲ್ಲರೂ ಅವರವರ ಧರ್ಮ ಪಾಲನೆ ಮಾಡುವುದು ಅಗತ್ಯ ಎಂಬ ಅರಿವನ್ನು ಎಲ್ಲರಲ್ಲೂ ಉದ್ಬೋಧಿಸುತ್ತಾನೆ. (ವರ್ಣಾಶ್ರಮ ಧರ್ಮಗಳ ಪಾಲಕನಾಗಿದ್ದ ಎನ್ನುವುದು ಮುಖ್ಯವಲ್ಲ. ಅದಷ್ಟೇ ಆದರೆ ರಾಮಚಂದ್ರ ಇಂದಿಗೆ ಹೇಗೆ ಬಂದಾನು ?) ಈ ಶ್ರುತಿಗೆ ಸೇರದವರನ್ನು ಕರ್ತವ್ಯವಶನಾಗಿ ನಿಗ್ರಹಿಸುತ್ತಾನೆ. ಅದೂ, ಸಮಷ್ಟಿಧರ್ಮದ ಶ್ರುತಿಯು ಭಂಗವಾಗಬಾರದೆಂಬುದಕ್ಕಾಗಿ. ಧರ್ಮವನ್ನು ಹೇಳಿಸಿಕೊಂಡು ಆಚರಿಸ ಬೇಕಿಲ್ಲ. ತಂತಾನೆ ಸಹಜವಾಗಿ ನಡೆಯಬೇಕಾದುದದು. ರಾಮನಿಗೇನೂ ತಂದೆ ರಾಜ್ಯತ್ಯಾಗ ಮಾಡೆಂದು ಕೇಳಲಿಲ್ಲ. ಚಿಕ್ಕಮ್ಮನಿಂದ ತಂದೆಯ ಮಾತನ್ನು ತಿಳಿದ ಅವನು ತಾನಾಗಿಯೆ ಅದರ ಪಾಲನಕ್ಕಾಗಿ ಸಂತೋಷದಿಂದ ವನವಾಸಕ್ಕೆ ತೆರಳುತ್ತಾನೆ. ಸೀತಾ ಲಕ್ಷ್ಮಣರಾದರೂ ಕರೆಸಿಕೊಂಡು ಅವನೊಡನೆ ಕಾಡಿಗೆ ತೆರಳುವುದಿಲ್ಲ. ಭರತ ನಾದರೂ ಹೆದರಿಕೊಂಡಾಗಲಿ ಜನ ಪ್ರತಿಭಟನೆ ಕಂಡಾಗಲಿ ರಾಜ್ಯಾಧಿಪತ್ಯವನ್ನು ಒಪ್ಪದೆ ರಾಮನನ್ನು ಕರೆತರಲು ಕಾಡಿಗೆ ತೆರಳುವುದಿಲ್ಲ. ಸ್ವಯಂ ಪ್ರೇರಿತನಾಗಿ ಹಾಗೆ ಮಾಡುತ್ತಾನೆ. ಹೀಗೆ ರಾಮ ಎಲ್ಲರ ಅಂತಶ್ಶಿವವನ್ನೂ ಜಾಗ್ರತಗೊಳಿಸುತ್ತಾನೆ. ಜಟಾಯುವಿನಂತಹವನಲ್ಲೂ ಆ ಜಾಗೃತಿ ಉಂಟಾಗುತ್ತದೆ. ಬರಿದೆ ಶ್ರುತಿ ತಪ್ಪಿದವರನ್ನು ನಿಗ್ರಹಿಸುವಾಗಲೂ ಹಿಂಸಕನಾಗದೆ ಸಾರ್ದ್ರವಾಗಿಯೆ ವರ್ತಿಸುತ್ತಾನೆ. ತಾಟಕೆಯನ್ನು ಕೊಲ್ಲುವಾಗಲೂ ತನಗೆ ಉತ್ಸಾಹವಿಲ್ಲ ಎನ್ನುತ್ತಾನೆ. ರಾವಣನಂಥ ತನ್ನ ಕೇಂದ್ರ ವೈರಿಯನ್ನು ಕೊಂದ ಮೇಲೆ, "ಸತ್ತ ಮೇಲೆ ವೈರವಿಲ್ಲ" ಎಂದು ನುಡಿಯುತ್ತಾನೆ. ಇವನ ಜೊತೆ ಪರಶುರಾಮನನ್ನು ಹೋಲಿಸಿ. ಮತ್ತೆ ಕ್ಷತ್ರಿಯನನ್ನು ತನ್ನ ತಾಯ ಶೀಲ ಭಂಗ ಮಾಡಿದುದಕ್ಕಾಗಿ ಕೊಂದು ಸಮಾಧಾನಗೊಂಡನೆ ? ಆ ಯುಗದ ಕ್ಷತ್ರಿಯ ಕುಲವನ್ನೇ ಉತ್ತರಿಸಿ ಹಾಕಿ ಬಿಟ್ಟ. ಕಡೆಗೆ ರಾಮನ ಮೇಲೂ ಎರಗಿ ಬರುತ್ತಾನೆ. ತನ್ನ ಎಲ್ಲೆ ಮೀರುತ್ತಾನೆ. ನಿಗ್ರಹಿಸಲೆಂದು ಕರ್ತವ್ಯಗೊಂಡವನು ಮಿತಿ ಮೀರಿ ತಾನೆ ನಿಗ್ರಹಾರ್ಹನಾಗುತ್ತಾನೆ. ಕ್ಷತ್ರಿಯ ನಾಶಕ್ಕೆ ತೊಡಗಿದವನು ಅದೇ ಕ್ಷತ್ರಿಯೋದ್ಭವನಾದ ಮಹಾ ಪುರುಷನಿಂದ ತೇಜೋಭಂಗಗೊಂಡು ತನ್ನ ಸತ್ತ್ವವನ್ನೂ ಅವನಿಗೆ ಒಪ್ಪಿಸ ಬೇಕಾಗುತ್ತದೆ. ಆ ಕ್ಷತ್ರಿಯ ಪರಿಷ್ಠನಾದರೂ ಇವನ ಮಾನಭಂಗ ಮಾಡದೆ ಸಂಯಮ ತೋರುತ್ತಾನೆ.

ಹೀಗೆ ಶ್ರೀರಾಮ ಹಲವೊಂದು ಆದರ್ಶಗಳನ್ನು ಅನಾಯಾಸವಾಗಿ ಬಾಳಿ

ತೋರಿಸುತ್ತಾನೆ. ಅವನ ಆಗಮನ ಈ ಎಲ್ಲವನ್ನೂ ಸಾಧಿಸುವ ಹರಿಬವನ್ನು ಪೂರೈಸ ಬೇಕಿತ್ತು. ಇವನಿಗೆ ರಾಜ್ಯ ಬಿಡುವುದೆಷ್ಟು ಸುಲಭವೊ ಅಷ್ಟೇ ಸುಲಭ ಭೋಗ ಬಿಡುವುದೂ ಕೂಡ. ರಾವಣನನ್ನು ಕೊಂದು ಅವನ ರಾಜ್ಯವನ್ನು ವಿಭೀಷಣನಿಗೆ ಬಿಟ್ಟ ಮೇಲೆ ಅಯೋಧ್ಯೆಗೆ ಶೀಘ್ರವಾಗಿ ಹಿಂತಿರುಗಬೇಕಿದ್ದುದರಿಂದ ಪುಷ್ಪಕ ವಿಮಾನ ವೇರಿ ಬರುತ್ತಾನೆ. ಆದರೆ ಅದನ್ನು ತನ್ನಲ್ಲಿರಿಸಿಕೊಳ್ಳಬೇಕೆಂಬ ಲೋಭ ಹುಟ್ಟಿತೆ ಅವನಲ್ಲಿ ? ಅದೇ ಪುಷ್ಪಕವನ್ನು ರಾವಣ ತನ್ನ ಅಣ್ಣ ಕುಬೇರನನ್ನು ಸೋಲಿಸಿ ಬಲಾತ್ಕಾರದಿಂದ ಅವನಿಂದ ತಂದಿದ್ದ (ಹೀಗೆಂದು ವಿಭೀಷಣನೆ ಶ್ರೀರಾಮನಿಗೆ ಹೇಳು ತ್ತಾನೆ.). ಆದರೆ ಅದೇ ವಿಮಾನದ ಬಗ್ಗೆ ಅವನಿಗೆ ಮೋಹ-ಲೋಭ ಹುಟ್ಟಿತೆ ? (ಆ ವಿಮಾನದಲ್ಲಿ ಸೀತಾ ಲಕ್ಷ್ಮಣರೊಡನೆ ಕುಳಿತ ರಾಮ ಸುಗ್ರೀವಾದಿ ವಾನರ ಸೇನೆ ಎಲ್ಲವನ್ನೂ, ವಿಭೀಷಣನನ್ನೂ ಅಯೋಧ್ಯೆಗೆ ಕರೆದುಕೊಂಡು ಹೋದ. ಅತ್ಯತಿಶಯ ವಾದುದೆಂದರೆ ಕಿಷ್ಕಿಂಧೆ ಮೇಲೆ ಹಾರುತ್ತಿದ್ದಾಗ ಸೀತಾದೇವಿ ಪ್ರಣಯ ಭಾವದಿಂದ ರಾಮನನ್ನು ಕೇಳಿಕೊಳ್ಳುತ್ತಾಳೆ. ವಾನರ ಸಮಸ್ತರ ಮಡದಿಯರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಬೇಕೆಂದು. ಏನೆಂಥ ಸಹಾನುಭೂತಿ ! ಕಪಿ ವೀರರೂ ತಮ್ಮ ಮಡದಿಯರನ್ನೂ ಕೂಡಿಕೊಂಡು ತಮ್ಮೊಡನೆ ಬರಲಿ, ಅಗಲಿರುವುದು, ಆತಂಕದಿಂದ ಕುದಿಯುತ್ತಿರುವುದು ಬೇಡ, ಎಂಬ ಸ್ನಿಗ್ಧಭಾವ ಸೀತಾದೇವಿಯನ್ನು ಮಾನವತೆಯ ಸತೀತ್ವದ ಆರಾಧ್ಯದೈವವನ್ನಾಗಿ ಮಾಡುತ್ತದೆ. ಇದೇ ರೀತಿ ರಾಮ ತೋರುವ ಇತರರ ದಾಂಪತ್ಯ ಪ್ರೇಮದ ಬಗೆಗಿನ ಆಸಕ್ತಿಯನ್ನೂ ನೋಡಬಹುದು. ವಾಲಿಯ ವಧೆಯಾದ ಮೇಲೆ ರಾಮ ಕೂಡಲೆ ಸೀತೆಯನ್ನು ಹುಡುಕಿಕೊಡಬೇಕೆಂದು ಒತ್ತಾಯಿ ಸದೆ, ಸತೀದೂರನಾಗಿದ್ದ ಸುಗ್ರೀವ ಆಕೆಯೊಡನೆ ವಿಶ್ರಾಂತಿ ಪಡೆಯಲಿ ಎಂದು ಹೇಳು ತ್ತಾನೆ. ತಾನು ಸತೀ ದೂರನಾಗಿರುವುದರಿಂದ ಆತನಿಗೆ ಆ ಸಹಾನುಕಂಪೆ ಬಂತೆಂದು ಮಾತ್ರ ಹೇಳಬಹುದೆ ? ದಾಂಪತ್ಯದ ಐಕ್ಯವನ್ನು ಸೀತಾರಾಮರು ಹೇಗೆ ಆರಾಧಿಸು ತ್ತಾರೆ ! ನಂದಿಗ್ರಾಮದಲ್ಲಿ ವಿಮಾನದಿಂದಿಳಿದೊಡನೆಯೆ ಶ್ರೀರಾಮ ಪುಷ್ಪಕವನ್ನು ಕುರಿತು 'ಪುಷ್ಪಕ' ! ನೀನಿನ್ನು ಹೊರಡಬಹುದು ! ಕುಬೇರನನ್ನು ಸೇರಿ ಅವನ ವಾಹನವಾಗಿರು!' ಎನ್ನುತ್ತಾನೆ. ತನ್ನವರನ್ನು ಕೂರಿಸಿಕೊಂಡು ವಿಹಾರ ಮಾಡಿಸುವತನಕವಾದರು ಇಟ್ಟುಕೊಳ್ಳಬಹುದಿತ್ತಲ್ಲ ! ನಿರ್ಲೋಭದ ಪರಾಕಾಷ್ಠೆ ಇದು. ಆ ವಿಮಾನ ಇನ್ನು ವಿಭೀಷಣನಿಗೂ ಕೂಡದು. ಒಡವೆ ಒಡೆಯನನ್ನು ಸೇರಬೇಕು, ಉಳಿದವರಲ್ಲಿದ್ದರೆ ಇಲ್ಲದ ಕಾಮನೆಗಳೆಲ್ಲ ಹುಟ್ಟಿಕೊಂಡಾವು.

ಹೀಗೆ ರಾಮನಿಗೆ ತ್ಯಾಗ, ನಿರ್ಲೋಭ ಹುಟ್ಟುಗುಣ. ಈ ತ್ಯಾಗ ವ್ಯಕ್ತಿಫಲಾ ಪೇಕ್ಷೆಯಿಂದ ಪ್ರೇರಿತವಾದಂತುದಲ್ಲ. ತನಗಿಂತಲೂ ವ್ಯಾಪಕವಾದ ಕುಟುಂಬದ ಸಮಷ್ಟಿಯ ಹಿತವನ್ನು ಲಕ್ಷಿಸಿದುದರಿಂದ ಹುಟ್ಟಿಕೊಂಡಂತಹುದು ಸೀತಾದೇವಿಯನ್ನು ಕಾಡಿಗೆ ಕಳಿಸುವ ತೀರ್ಮಾನವೂ ಇದರಿಂದಲೆ ಪ್ರೇರಿತವಾದದ್ದು. ರಾಮನಿಗೆ ಸೀತೆಯ

ಪಾವಿತ್ರ್ಯದ ಬಗ್ಗೆ ಸಂದೇಹವಿಲ್ಲ. ಆದರೆ ಪುರದಲ್ಲಿ ಜನಪದದಲ್ಲಿ ಜನ ಸೀತೆ ರಾವಣ ಲಂಕೆಯಲ್ಲಿದ್ದುದನ್ನೇ ಕುರಿತು ಆಡಿಕೊಳ್ಳುತ್ತಾರಂತೆ. (ಲಕ್ಷ್ಮೀಶ ಕವಿ ಆ ಪಾಪವನ್ನು ಅಗಸನೊಬ್ಬನ ತಲೆಗೆ ಕಟ್ಟಿದ. ಪ್ರಾಯಶಃ ಆ ಕಾಲಕ್ಕೆ ಜನರ ಭಾವನೆಯೂ ಅದಾಗಿ ರಬಹುದು. ಆದರೆ ಆ ನತದೃಷ್ಟ ಜಾತಿಯ ಜನ ಆ ಪಾಪದ ಕೊಳೆ ಬಟ್ಟೆಯನ್ನಿನ್ನೂ ತೊಳೆಯಲಾಗಿಲ್ಲ.) ಇದರಿಂದ ತನ್ನ ಕೀರ್ತಿಗೆ ಚ್ಯುತಿ ಬಂತೆಂದೂ ಅದನ್ನು ನೇರ್ಪಡಿಸಲೂ ತಾನು ಸೀತೆಯನ್ನು ಬಿಡುವುದಾಗಿ ನಿರ್ಧರಿಸುತ್ತಾನೆ. ಇಲ್ಲಿ ಕೀರ್ತಿ ವ್ಯಕ್ತಿ ಮಿತ ವಾದುದಲ್ಲ. ರವಿವಂಶದ ರಾಜ, ದಾಶರಥಿ, ಪಟ್ಟಾಭಿಷೇಕ್ತ ರಾಜ ಎಂಬೆಲ್ಲ ಕಾರಣ ವನ್ನೂ ರಕ್ಷಿಸಿಕೊಳ್ಳಬೇಕಿದೆ. ರವಿವಂಶದ ಕುಡಿ ಹೊತ್ತ ಸೀತೆಯ ಚಾರಿತ್ರ್ಯದ ಬಗೆಗೆ ಜನವೆ ಆಡಿಕೊಳ್ಳುವ ದುರಂತ ಬಂದರೆ ನಾಳೆ ಆ ಮಕ್ಕಳು ರಾಜರಾದಾಗ ಏನಾದೀತು? ರಾಜ ಶಾಸನದಿಂದ ಸಂದೇಹವನ್ನು ನಿರ್ಮೂಲನ ಮಾಡಬರುವುದೆ ? ಏನು ಮಾಡು ವುದು ? ರಾಮನಿಗೆ ಆ ತನ್ನ ಕೀರ್ತಿಯನ್ನು—ಕುಲದ ಕೀರ್ತಿಯನ್ನು ಎತ್ತಿ ಹಿಡಿಯ ಬೇಕು ಎನ್ನಿಸುತ್ತದೆ. ಸೀತೆಯ ಚಾರಿತ್ರ್ಯದ ಬಗೆಗೆ ಸಂದೇಹವಿಲ್ಲ. 'ಅಂತರಾತ್ಮಾ ಚ ವೇತ್ತಿ ಸೀತಾಂ ಶುದ್ಧಾಂ ಯಶಸ್ವಿನೀಂ". "ನನ್ನ ಅಂತರಾತ್ಮ ತಿಳಿದಿದೆ' ಸೀತೆಯ ಶುದ್ಧಿಯನ್ನೂ ಯಶೋವಂತಿಕೆಯನ್ನು. ಆದರೆ ಮಹತ್ತರವಾದ ಜನಾಪವಾದದಿಂದ ನನಗೆ ಅತೀವ ದುಃಖವಾಗಿದೆ. ಪೌರಾಪವಾದ ತುಂಬಾ ದೊಡ್ಡದು. ಅಕೀರ್ತಿ ವಂತ ಅಧಮ ಲೋಕಕ್ಕೆ ಹೋಗುತ್ತಾನೆ. ಅಪಕೀರ್ತಿಯಿರುವ ತನಕವೂ ತಪ್ಪಿದ್ದಿಲ್ಲ. ಅಂಥವನನ್ನು ದೇವತೆಗಳೂ ನಿಂದಿಸುತ್ತಾರೆ. ಲೋಕದಲ್ಲಿ ಕೀರ್ತಿಗೆ ಪೂಜೆ. ಮಹಾತ್ಮ ರೆಲ್ಲ ಕೀರ್ತಿಗಾಗಿಯೆ ದುಡಿಯುತ್ತಾರೆ. ತಮ್ಮಂದಿರೆ, ಪುರುಷಪುಂಗವರೆ, ಅಪವಾದ ಭೀತಿಗಾಗಿ ಪ್ರಾಣವಾದರೂ ತೆತ್ತೇನು ; ನಿಮ್ಮನ್ನೂ ಬಿಟ್ಟೇನು. ಇನ್ನು ಜಾನಕಿಯನ್ನು ಬಿಡೆನೆ ?" ಉತ್ತರ ಕಾಂಡದಲ್ಲಿ ಬರುವ ಸೀತಾ ಪರಿತ್ಯಾಗ ಪ್ರಸಂಗದಲ್ಲಿ ರಾಮ ಆಡುವ ಮಾತಿದು. ಇಲ್ಲಿ ಸ್ಪಷ್ಟವಾಗಿದೆ, ರಾಮನಿಗೆ ಸೀತೆಯ ಪಾತಿವ್ರತ್ಯದಲ್ಲಿ ಸಂದೇಹವಿಲ್ಲ. ತನ್ನ ಕೀರ್ತಿ–ತಾನು ಇಕ್ಷ್ವಾಕುವಂಶದವನೆನ್ನುವ ಕೀರ್ತಿಯೂ ಇದೆ–ತನ್ನ ಪ್ರಾಣಕ್ಕಿಂತ ದೊಡ್ಡದು. ಅಪಕೀರ್ತಿ ಇರುವ ತನಕ ದುರ್ಗತಿ ತಪ್ಪಿದ್ದಲ್ಲ. ಸೀತೆ ರಾಮಸತಿ ಮಾತ್ರವಲ್ಲ. ರವಿವಂಶವನ್ನು ಮುನ್ನಡೆಸುವ ತಾಯಿಯೂ ಅಹುದು. ಅವಳ ಬಗೆಗಿನ ಸಂದೇಹ ನಾಳೆ ಕುಲಕ್ಕೆ ಹತ್ತುವ ದುರ್ಗತಿ. ಆದ್ದರಿಂದ ಸೀತೆಯನ್ನು, ಗರ್ಭಿಣಿ ಯನ್ನು ತ್ಯಜಿಸುತ್ತಾನೆ. ಅಂದರೆ ತನ್ನ ಪ್ರೇಮವನ್ನಷ್ಟೆ ಅಲ್ಲ, ತನ್ನ ಕುಲ ಸಂತಾನ ವನ್ನು ತ್ಯಜಿಸುವ ಮೂಲಕ ರಾಜ್ಯಾಧಿಪತ್ಯದ ತನ್ನ ಹಕ್ಕನ್ನೆ ಅಷ್ಟರ ಮಟ್ಟಿಗೆ ಬಿಟ್ಟು ಕೊಡುತ್ತಾನೆ. ಸೀತೆಯನ್ನೆ, ಅಂದರೆ ರಾಮನನ್ನೆ ಶಂಕಿಸಿದ ಜನ ಅವರ ಮಗನನ್ನು ನಿಶ್ಶಂಕೆಯಿಂದ ಒಪ್ಪುತ್ತಾರೆಯೆ ? ಬರಿದೆ ರಾಜ್ಯ ಲೋಭದಿಂದ ಅಕೀರ್ತಿಯನ್ನು ಹೊರಬೇಕಾಗುತ್ತದೆ. ಜನರು ಸಂದೇಹ ಪಡದಿರುವಂತೆ ಮಾಡಲು ರಾಜ ನಿರಂಕುಶ ಪ್ರಭುವಾಗಿ ಕ್ರೂರವಾಗಿ ಜನವಾಣಿಯನ್ನು ಹಿಸುಕಿ ಹಾಕಬೇಕಾಗುತ್ತದೆ. ಮಿಗಿಲಾಗಿ

ಚಾರಿತ್ರ್ಯವನ್ನು ವಾದ ಮಾಡಿ, ಮತಕ್ಕೆ ಹಾಕಿ ಸ್ಥಾಪಿಸುವಂತಿಲ್ಲ. ವ್ಯಕ್ತಿ ಶೀಲದ ಬಗೆಗೇ ಈ ಕಷ್ಟವಾಗಿರುವಾಗ ಮಹಾವಂಶದ ಮಹಾರಾಣಿಯ ಶೀಲ ಶಂಕಿತವಾದಾಗ ಏನು ಮಾಡಬೇಕು ? ಸೀತೆಯನ್ನು ಬಿಡುವಾಗ ಕಣ್ಣೀರಿಟ್ಟಿದ್ದಾನೆ ರಾಮ. ತಮ್ಮಂದಿರಿಗೆ ಮುಖಕೊಟ್ಟು ಮಾತಾಡಲೂ ಶಕ್ತನಲ್ಲ. ಸಾಮಾನ್ಯ ಪ್ರಜೆ ಆಗಿದ್ದರೆ ಬೇರೆಯ ವಿಷಯ. ಜಾರಿದವರೂ ಪ್ರೀತಿವಂತರಾಗಿದ್ದಾಗ ಔದಾರ್ಯದಿಂದ ಕ್ಷಮಿಸಬಹುದು. ಅದಕ್ಕೆ ಜನಾಭಿಪ್ರಾಯ ಬೇಕಿಲ್ಲ. ಅಲ್ಲಿ ಕೀರ್ತಿಯ ಮಾತಾಡುವುದು ವೈಯಕ್ತಿಕ ಖಯಾಲಿಯಾಗುತ್ತದೆ. ಆದರೆ ಸೀತಾರಾಮರ ಸಂದರ್ಭದಲ್ಲಿ ಜನಾಭಿಪ್ರಾಯಕ್ಕೆ ಮನ್ನಣೆಯುಂಟು. ಅವರು ಒಪ್ಪದೆ ಇದ್ದರೆ ಮುಂದಿನ ರಾಜ ಹೇಗೆ ಸುಖವಾಗಿದ್ದಾನು? ಇದೆಲ್ಲ ಕಾರಣಕ್ಕಾಗಿ ರಾಮ ತ್ಯಾಗ ಮಾಡುತ್ತಾನೆ ; ಹಾಗೆನ್ನಲು ಒಪ್ಪದಿದ್ದರೆ ನಷ್ಟ ಗೊಳ್ಳುತ್ತಾನೆ ಎನ್ನಬಹುದು. ಪ್ರಿಯ ಸತಿಯನ್ನೂ, ಪಟ್ಟದ ರಾಣಿಯನ್ನೂ ಔರಸ ಪುತ್ರರನ್ನೂ ಇಮ್ಮುಖ ಭವಿಷ್ಯದ್ ರಾಜ್ಯಾಧಿಪತ್ಯವನ್ನೂ ತ್ಯಜಿಸಿಬಿಟ್ಟ. ಆಧುನಿಕರ ದೃಷ್ಟಿಯಲ್ಲಿ ಹುಚ್ಚಾಗಬಹುದು ; ಅಂತಹ ದೃಷ್ಟಿಗೆ ರಾಜ್ಯತ್ಯಾಗವೂ ಹುಚ್ಚೇ ಆಗುತ್ತದೆ. ಒಂದು ವೇಳೆ ತಾನೂ ಸೀತೆಯ ಜೊತೆಗೆ ಕಾಡಿಗೆ ಹೋಗಿದ್ದರೆ ? ಅದರಿಂದ ಬಂದ ಅಪವಾದವೇನೂ ಹೋಗುತ್ತಿರಲಿಲ್ಲ. 'ಎಂಥ ಮನುಷ್ಯನಯ್ಯ, ಅಂಥಾ ಹೆಂಡತಿಯ ಜೊತೆಯೆ ಹೋಗಿಬಿಟ್ಟನಲ್ಲ' ಎಂದು ಕೊಂಡಾರು ಜನ. ಹಾಗೂ ರಾಜ್ಯತ್ಯಾಗ ಮಾಡುವುದು ಆಗ ಕಾಮದಿಂದ ಎಂದಾಗುತ್ತದೆ. ಮತ್ತೆ ರಾಜ್ಯವನ್ನು ಅನಾಯಕ ಮಾಡಿದಂತಾಗುತ್ತದೆ. ಈಗ ಸೀತೆಯನ್ನು ಬಿಡುವ ಮೂಲಕ ತನ್ನ ಮೇಲೆ ಇಮ್ಮುಖದ ಶಿಕ್ಷೆಯನ್ನು ವಿಧಿಸಿಕೊಂಡಂತಾಯಿತು. ತಾನು ಸಂದೇಹ ಪಡದಿರುವ ಪ್ರಿಯ ಸತಿಯನ್ನು ಕಳೆದುಕೊಳ್ಳುವುದರ ಜೊತೆಗೆ ಗರ್ಭಸ್ಥವಾದ ತನ್ನ ಮಕ್ಕಳನ್ನೆ ತ್ಯಜಿಸಿಬಿಡಬೇಕಾದ ಕ್ರೂರಕರ್ಮಕ್ಕೆ ತೊಡಗಬೇಕಾಗುತ್ತದೆ. ಹಾಗೂ ತನ್ನ ಸಂತತಿಯನ್ನು ರಾಜತ್ವದಿಂದ ಗಡೀಪಾರು ಮಾಡಿದಂತಾಗುತ್ತದೆ. ಆ ಮಕ್ಕಳು ಸಾಯದೆ ಬೆಳೆದು ಬದುಕಿದರೂ ತನಗೂ ತನ್ನ ರಾಜ್ಯಕ್ಕೂ ಸಂಬಂಧವಿಲ್ಲದಂತೆ ಇರಬೇಕಾಗುತ್ತದೆ. ಇಷ್ಟೆಲ್ಲ ಘೋರ ಶಿಕ್ಷೆಯನ್ನು ರಾಮಚಂದ್ರ ತನಗೂ ಕೊಟ್ಟುಕೊಳ್ಳುತ್ತಾನೆ.

ಇಂಥ ಶ್ರೀರಾಮಚಂದ್ರನನ್ನು ವಾಲ್ಮೀಕಿ ಮಹರ್ಷಿಗಳು ಲೋಕಕ್ಕೆ ನೀಡಿದ್ದಾರೆ. ಅವರ ಕಾವ್ಯ ಬ್ರಹ್ಮನೇ ಹೇಳಿದಂತೆ ಪರ್ವತಗಳೂ ನದಿಗಳೂ ಇರುವತನಕ ಭೂಮಿಯಲ್ಲಿರುತ್ತದೆ, ಎನ್ನುವ ಮಾತು ಈತನಕ ಸತ್ಯವಾಗಿದೆ. ನಾಳೆ ಪರ್ವತಗಳಿಗೆ ಈಗಿನ ಔನ್ನತ್ಯವೆ ಇದ್ದೀತೆಂಬ ಯಾವ ಧೈರ್ಯವಿದೆ ? ಪರ್ವತಗಳು ಕುಬ್ಜಗೊಳ್ಳುವುದು ತಪ್ಪದಿದ್ದರೆ ನದಿಗಳು ತೆಳ್ಳೆಯಾಗುವುದು ತಪ್ಪುವುದಿಲ್ಲ ! ನದಿಗಳನ್ನು ಕಾಪಾಡಿಕೊಳ್ಳಲು ಗಿರಿಗಳನ್ನು ಲೋಹ ಲೋಭಕ್ಕಾಗಿ, ವ್ಯವಸಾಯ ಕಾಮನೆಯಿಂದಾಗಿ ಕಡಿದು ಕೆಡಿಸದೆ ಇರಬೇಕು. ವಾಲ್ಮೀಕಿ ರಾಮಾಯಣ ಮಾನವೋನ್ನತ ಆದರ್ಶಗಳ ಭಂಡಾರವನ್ನು ಶ್ರೀರಾಮಾದಿ ಪಾತ್ರಗಳಲ್ಲಿ ನೀಡಿದೆ. ಆದರೆ ಯಾವ ಮಹಾಪುರುಷರೂ ಕಾಲ ದೇಶ

ಮಿತವಾದ ಒಂದು ಯುಗದಲ್ಲಿ ಕೆಲಸ ಮಾಡುವುದರಿಂದ ಅವರ ವರ್ತನ, ಸಾಧನ, ಜೀವನ ಮೌಲ್ಯಗಳು ಕೆಲವಾದರೂ ಆ ಯುಗ ನಿರ್ದೇಶಿತವಾಗಿಯೂ ಇರಬೇಕಾಗುತ್ತದೆ. ಮಹಾಭಾರತ ಕಾವ್ಯದಲ್ಲಿಯಂತೂ ಚಿತ್ರಿತವಾಗಿರುವ ಮೂರು ನಾಲ್ಕು ತಲೆಮಾರಿನ ಕಥೆಯಲ್ಲಿ ಇದು ಸ್ಪಷ್ಟವಾಗಿ ಕಾಣುತ್ತದೆ. ಜನ ವ್ಯಾಸ ಭಾರತವನ್ನು ನಿತ್ಯ ಪಾರಾಯಣ ಮಾಡುವ ಪದ್ಧತಿಯಿರುವಂತೆ ತಿಳಿಯುವುದಿಲ್ಲ. ರಾಮಾಯಣವನ್ನಂತೂ ಮೇಲು ವರ್ಗದ ಸಂಪ್ರದಾಯಸ್ಥರು ನಿತ್ಯಪಾರಾಯಣ ಮಾಡುವ ಧಾರ್ಮಿಕ ಪದ್ಧತಿಯಿದೆ. ಇದೊಂದು ರೀತಿಯಲ್ಲಿ ಶ್ರೀರಾಮ ಪೂಜೆಯೆ. ನಿತ್ಯರಾಮನನ್ನು ನಿತ್ಯ ಪೂಜಿಸ ಬೇಕಾದುದೆ ಸರಿ. ಆದರೆ ಕಾಲಾನುವರ್ತಿಯಾಗಿ ಕೆಲವೊಮ್ಮೆ ನಡೆದುಕೊಂಡ ರಾಮಚಂದ್ರನ ವರ್ತನವನ್ನೂ ಪಠಿಸಿದಂತೆ ಆಚರಿಸಬರುವುದೆ ?

ಬೆನ್ನ ಹಿಂದೆ ನಿಂತು ರಾಮಚಂದ್ರ ವಾಲಿಯನ್ನು ವಧಿಸುತ್ತಾನೆ. ಅದಕ್ಕೆ ವಾಲಿ ಮಾಡುವ ಆಕ್ಷೇಪ ಹೀಗಿದೆ. "ನಾನು ಇನ್ನೊಬ್ಬನೊಡನೆ ಯುದ್ಧದಲ್ಲಿ ಮುಳುಗಿ ಮೈಮರೆತಿರುವಾಗ, ರಾಮ ನನ್ನ ಮೇಲೆ ಬಾಣ ಬಿಡುವುದಿಲ್ಲವೆಂದೇ ತಿಳಿದಿದ್ದೆ. ಇದೆಲ್ಲ ನಿನ್ನನ್ನು ಪ್ರತ್ಯಕ್ಷ ಕಂಡು ತಿಳಿಯದೆ ಮಾಡಿಕೊಂಡಿದ್ದ ಕಲ್ಪನೆ. ನೀನಿಷ್ಟು ಕೀಳು ಮಟ್ಟದವನೆಂದೂ ಧರ್ಮದ ಹೆಸರಿನಲ್ಲಿ ದೊಂಬರಾಟ ಆಡುವವನೆಂದೂ ತಿಳಿದಿರಲಿಲ್ಲ. ಹುಲ್ಲು ಮುಚ್ಚಿದ ಬಾವಿ ನೀನು ; ಬೂದಿ ಮುಚ್ಚಿದ ಕೆಂಡ ; ಸಾಧು ವೇಷದ ಪಾಪ, ಧರ್ಮ ಹೊದೆದುಕೊಂಡ ಕುಟಿಲನೆಂದು ತಿಳಿದಿರಲಿಲ್ಲ. ನಿನ್ನ ನಾಡಿಗೇನಾದರೂ ಒಂದು ಅಪರಾಧ ಮಾಡಿದ್ದೆನೆ ? ಅವಮಾನ ಮಾಡಿದ್ದೆನೆ ? ಏನು ಕಾರಣ ಕೊಂದೆ ? ನನ್ನ ಪಾಡಿಗೆ ನಾನಿದ್ದೆ ; ಈ ವಾನರನನ್ನೇಕೆ ಹೀಗೆ ಮರೆಸಿ ಕೊಂದೆ ? ......ಈ ಶಕ್ತಿಯನ್ನೇಕೆ ರಾವಣನ ಮೇಲೆ ತೋರಲಿಲ್ಲ ? ಎದುರು ನಿಂತು ಯುದ್ಧ ಮಾಡಿದ್ದರೆ ನೀನೀವೇಳೆಯಲ್ಲಿ ಯಮಪುರಿಯಲ್ಲಿರುತ್ತಿದ್ದೆ. ......ರಾವಣನ ಕಾರಣ ನನ್ನನ್ನು ಕೊಂದೆಯ ? ಅವನನ್ನು ಉರುಳು ಬೀರಿ ಎಳೆ ತರುತ್ತಿದ್ದೆನಲ್ಲ ! ರಾಜ್ಯ ಸುಗ್ರೀವನಿಗೆ ಸೇರಬೇಕೆಂಬುದೇನೋ ಸರಿ. ಅದಕ್ಕೆ ನೀನು ನನ್ನನ್ನು ಮರೆ ನಿಂತು ಕೊಲ್ಲಬೇಕೆ ?" ಎನ್ನುತ್ತಾನೆ.

ಶ್ರೀ ರಾಮನ ಉತ್ತರ ಇದು. "ಜ್ಞಾನಿಗಳಿಂದ ಧರ್ಮಸೂಕ್ಷ್ಮ ತಿಳಿಯದೆ ಹೀಗಾಡುತ್ತಿರುವೆ ನೀನು. ಕಪಿಯ ಚಾಪಲ್ಯ ತಿಳಿ. ಈ ಭೂಮಿಯೆಲ್ಲ ಪರ್ವತಾರಣ್ಯ ಸಹಿತವಾಗಿ ಇಕ್ಷ್ವಾಕುವಂಶದವರಿಗೆ ಸೇರಿದೆ. ಮೃಗ ಪಕ್ಷಿ ಮನುಷ್ಯರೆಲ್ಲರನ್ನೂ ನಿಗ್ರಹಿಸುವ ಅನುಗ್ರಹಿಸುವ ಅಧಿಕಾರವೆಲ್ಲ ಅವರಿಗೇ ಸೇರಿದ್ದು. ಭರತ ಇದನ್ನೆಲ್ಲ ಪಾಲಿಸುತ್ತಿದ್ದಾನೆ. ಅವನು ಧರ್ಮಕಾಮಾರ್ಥಗಳನ್ನು ತಿಳಿದವನು, ಸತ್ಯಸಂಧ, ಋಜುಬುದ್ಧಿ, ನಯವಿನಯ ಸತ್ಯ ಯಾರಲ್ಲಿ ನೆಲೆಗೊಂಡಿವೆಯೋ, ಯಾರು ಪ್ರತ್ಯಕ್ಷ ಶೌರ್ಯವಂತರೋ, ದೇಶಕಾಲಗಳನ್ನು ತಿಳಿದಿರುವರೋ ಅವರೇ ರಾಜರಾಗುತ್ತಾರೆ. ಅಂತಹವನು ಭರತ. ಅವನ ಧರ್ಮಕೃತಾದೇಶವನ್ನು ಪಾಲಿಸಲು ನಾನು ಭೂಮಿ

ಯನ್ನೆಲ್ಲ ಸುತ್ತುತ್ತಿರುವೆ. ಧರ್ಮಾಭಿವೃದ್ಧಿಯಾಗಲೆಂದು ನಾವು ಅನೇಕ ರಾಜರು ಭೂಮಿಯನ್ನು ಸಂಚರಿಸುತ್ತಿದ್ದೇವೆ. ಸ್ವಧರ್ಮದಲ್ಲಿ ನೆಲೆಗೊಂಡಿರುವ ನಾವು ಭರತನ ಅಣತಿಯನ್ನು ಪುರಸ್ಕರಿಸಿ ಧರ್ಮಭ್ರಷ್ಟನನ್ನು ನಿಗ್ರಹಿಸುತ್ತಿದ್ದೇವೆ. ನೀನು ಧರ್ಮಕ್ಕೆ ಹಾನಿಯುಂಟುಮಾಡಿದ್ದಿ. ಕಾಮತಂತ್ರನಾಗಿ ರಾಜಮಾರ್ಗ ತಪ್ಪಿರುವೆ. ತಂದೆ, ಅಣ್ಣ, ಗುರುಗಳನ್ನು ಧರ್ಮಮಾರ್ಗಿಯಾದವನು ತಂದೆಯೆಂದೆ ತಿಳಿಯಬೇಕು. ಹಾಗೆಯೆ ಪುತ್ರ, ಗುಣಶಾಲಿ ಶಿಷ್ಯ, ತಮ್ಮ–ಇವರನ್ನು ಮಗನಂತೆಯೆ ನೋಡಿಕೊಳ್ಳಬೇಕು. ಧರ್ಮವಿದೆಂದು ತಿಳಿಯುವುದಾದರೆ, ಸಜ್ಜನರ ಧರ್ಮ ಸೂಕ್ಷ್ಮ, ಪರಮ ದುರ್ಜ್ಞೇಯ; ಎಲ್ಲರ ಹೃದಯದಲ್ಲಿರುಪಾತನೊಬ್ಬನಿಗೇ ಶುಭಾಶುಭ ವಿವೇಕವಿರುತ್ತದೆ. ನೀನು ಚಪಲಿ, ಚಪಲ ಚಿತ್ತದ ಕಪಿಗಳ ಸಲಹೆಯನ್ನು ಕೇಳುವ ನಿನಗೆ ತಿಳಿಯದು; ಕುರುಡನನ್ನು ಹುಟ್ಟು ಕುರುಡ ನಡೆಸಿದಂತೆ ಆಗಿದೆ......ನೀನು ಸನಾತನ ಧರ್ಮವನ್ನು ಮೀರಿ ತಮ್ಮನ ಹೆಂಡತಿಯೊಡನೆ ಬಾಳಿದೆ. ತಮ್ಮ ಬದುಕಿರುವಾಗಲೆ ಹೀಗೆ ಕಾಮವಶಿಯಾದೆ. ಆಕೆ ನಿನಗೆ ಸೊಸೆಯಲ್ಲವೆ ? ಪಾಪ ಮಾಡಿದೆ. ಅದಕ್ಕಾಗಿ ಈ ಶಿಕ್ಷೆ. ಧರ್ಮಕ್ಕೆದುರು ನಡೆದವನಿಗೆ ಮರಣ ದಂಡನೆ; ಬೇರೆ ಶಿಕ್ಷೆಯಿಲ್ಲ. ಈ ಭೂಮಿಯ ಒಡೆಯನಾದ ಭರತನ ಆಜ್ಞೆಯಂತೆ ನಡೆದಿರುವೆ. ಸುಗ್ರೀವಸ್ನೇಹ ಲಕ್ಷ್ಮಣಸಖ್ಯದಷ್ಟೆ ದೃಢ. ಆತನ ಮಡದಿಯನ್ನೂ ರಾಜ್ಯವನ್ನೂ ಕೊಡಿಸಿಕೊಡುವ ಪ್ರತಿಜ್ಞೆ ಮಾಡಿದ್ದೆ, ಪಾವಕ ಸಾಕ್ಷಿಯಾಗಿ. ಈ ಎಲ್ಲ ಧರ್ಮ ಸಮ್ಮತವಾದ ಮಹತ್ ಕಾರಣದಿಂದ ನಿನ್ನನ್ನು ದಂಡಿಸುವ ಅಗತ್ಯ ಒದಗಿತು. ನೀನಾದರೂ ಧರ್ಮಪರನಾಗಿದ್ದರೆ ಇದನ್ನೆ ಮಾಡುತ್ತಿದ್ದೆ. ಮನುವಿನ ಚಾರಿತ್ರ್ಯವತ್ಸಲವಾದ ಎರಡು ಶ್ಲೋಕವುಂಟು. 'ರಾಜದಂಡಕ್ಕೆ ಗುರಿಯಾದವನ ಪಾಪಕರ್ಮವೂ ನೀಗುತ್ತವೆ. ಅಂಥವರು ಪುಣ್ಯವಂತರಾಗಿ ಸ್ವರ್ಗ ಹೊಂದುತ್ತಾರೆ. ಪಾಪಿಯನ್ನು ದಂಡಿಸದ ರಾಜನಿಗೆ ಪಾಪ ಸುತ್ತಿಗೊಳ್ಳುತ್ತದೆ. ಪ್ರಾಯಶ್ಚಿತ್ತದಿಂದ ಪಾಪ ಪರಿಹಾರಗೊಳ್ಳುತ್ತದೆ.' ವ್ಯಥೆ ಪಡಬೇಡ. ವಧೆ ಧರ್ಮ ವಿಹಿತವಾಗಿದೆ. ಇದರಲ್ಲಿ ನಾವು ಸ್ವತಂತ್ರರಲ್ಲ. ಮತ್ತೊಂದು ಕಾರಣವುಂಟು, ಕೇಳು : ಇದನ್ನು ಕೇಳಿದರೆ ನೀನು ಕೋಪಿಸಿಕೊಳ್ಳಲಾರೆ. ನೀನು ನಿಂದಿಸಿದೆ; ನನಗೆ ವ್ಯಥೆಯಿಲ್ಲ, ಕೋಪವಿಲ್ಲ. ಕಪಿಗಳನ್ನು ಬಲೆ ಹಗ್ಗ ಎಸೆದು ಹಾಗೂ ಮೋಸದಿಂದ ಕೊಲ್ಲುತ್ತಾರೆ. ಎದುರು ನಿಂತೋ ಮರೆಯಲ್ಲಿದ್ದೋ ಸೆರೆಹಿಡಿಯುತ್ತಾರೆ. ಓಡುತ್ತಿರಲಿ, ನಂಬಿ ನಿಂತಿರಲಿ ಮೃಗಗಳನ್ನು ಕೊಲ್ಲುತ್ತಾರೆ. ಅವು ಮೈಮರೆತೊ, ಎಚ್ಚತ್ತೊ ಸಿಕ್ಕಲಿ ಮಾಂಸಾರ್ಥಿ ಗಳು ಅವನ್ನು ಕೊಲ್ಲುತ್ತಾರೆ. ಇದರಲ್ಲಿ ದೋಷವಿಲ್ಲ. ಧರ್ಮ ಕೋವಿದರಾದ ರಾಜರ್ಷಿಗಳು ಇಂತೆಯೆ ಮಾಡಿದ್ದಾರೆ. ನಾನು ನಿನ್ನನ್ನು ಹೊಡೆದಿರುವೆ. ನೀನೋ ಕೋತಿ. ದುರ್ಲಭವಾದ ಧರ್ಮವನ್ನು ಜೀವನದ ಶುಭವನ್ನು ರಾಜರೇ ಪ್ರಜೆಗಳಿಗೆ ಸಂಪಾದಿಸಿಕೊಡುತ್ತಾರೆ. ಆದ್ದರಿಂದ ಅವರನ್ನು ಹಿಂಸಿಸುವುದಾಗಲಿ ದೂಷಿಸುವು ದಾಗಲಿ ಸಲ್ಲ; ಅವರಿಗೆ ಅಪ್ರಿಯ ನುಡಿಯಕೂಡದು. ರಾಜರೆಂದರೆ ನೆಲದ ಮೇಲೆ

ನಡೆದಾಡುವ ದೇವತೆಗಳು. ಧರ್ಮ ತಿಳಿಯದೆ ನೀನು ಎಗರಾಡುತ್ತಿರುವೆ. ತಂದೆ ಮುತ್ತಾತರಿಂದ ಬಂದ ಧರ್ಮದಲ್ಲಿ ನಾನು ನೆಲೆಗೊಂಡಿರುವೆ" ಎಂದು.

ಈ ಮಾತುಗಳನ್ನು ಕೇಳಿದ ವಾಲಿ ಪಶ್ಚಾತ್ತಾಪಗೊಂಡ. ರಾಮನಲ್ಲಿ ತಪ್ಪಿಲ್ಲವೆಂದು ತಿಳಿಯಿತು. ಕೈಮುಗಿದು ಕ್ಷಮೆ ಕೋರಿದ. ಕ್ಷಮಿಸಿ ಉದ್ಧರಿಸಬೇಕೆಂದು ಬೇಡಿದ. ಇಲ್ಲಿ ವಿಷಯವಿಷ್ಟೆ. ರಾಮನ ಈ ಧರ್ಮ ಸೂಕ್ಷ್ಮವನ್ನು ಆಧುನಿಕರು ಒಪ್ಪುವರೆ ? ಪ್ರಾಣಿಗಳನ್ನು ಕೊಲ್ಲಲೂ ಪ್ರತಿಬಂಧಕಗಳಿರುವ ಈ ಕಲಿಕಾಲದಲ್ಲಿ ಶ್ರೀರಾಮನ ಈ ವಾದವನ್ನು ಸಾರ್ವಕಾಲಿಕ ಧರ್ಮವೆಂದು ಒಪ್ಪ ಬರುವುದೆ ? ಶ್ರೀರಾಮನ ಈ ಮೇಲಿನ ಮಾತುಗಳಲ್ಲಿ ಅವನ ಸಾರ್ವಕಾಲಿಕವಾದ ಗುಣಮೌಲ್ಯಗಳು ಕಾಣುತ್ತವೆಯೆ ? ಎಂಬ ಪ್ರಶ್ನೆ ಮೂಡುವುದು ಸಹಜ. ಶ್ರೀರಾಮ ಸುಗ್ರೀವನಿಗೆ ಭಾಷೆಯಿತ್ತಂತೆ—ಅಗ್ನಿ ಸಾಕ್ಷಿಕವಾಗಿ ಮಾತಿತ್ತಂತೆ ವಾಲಿಯನ್ನೇನೋ ಕೊಲ್ಲುತ್ತಾನೆ. ಪ್ರಶ್ನೆ ಅದಲ್ಲ. ಆದರೆ ಕೊಲ್ಲುವುದು ನೇರ ಯುದ್ಧದಲ್ಲಲ್ಲ, ಬೆನ್ನ ಹಿಂದೆ ನಿಂತುಕೊಂಡು ಭಯಂಕರ ಬಾಣ ಬಿಡುವ ಮೂಲಕ ಏಕೆ ? ಸಪ್ತ ಸಾಲ ವೃಕ್ಷಗಳನ್ನು ಒಂದೇ ಬಾಣದಿಂದ ಭೇದಿಸಿ ; ಸತ್ತ ದುಂದುಭಿಯ ಬೃಹದ್ ದೇಹವನ್ನು ತನ್ನ ಕಾಲ ಹೆಬ್ಬೆರಳ ಸನ್ನೆಯಿಂದ ಯೋಜನ ದೂರ ಚಿಮ್ಮಿ, ವಾಲಿಯ ಸಾಹಸವನ್ನೂ ಮೀರಿಸಿದ ಶ್ರೀರಾಮ ಅವನನ್ನೇಕೆ ನೇರ ಯುದ್ಧದಲ್ಲಿ ಕೊಲ್ಲುವುದಿಲ್ಲ ? ವಾಲಿ-ಸುಗ್ರೀವರು ದ್ವಂದ್ವ ಯುದ್ಧದಲ್ಲಿ ತೊಡಗಿದಾಗ ತಾನು ಮರೆನಿಂತುಕೊಂಡೂ ಏಕೆ ಬಾಣ ಬಿಡಲಾಗಲಿಲ್ಲ ಅವನಿಗೆ ? ಇಬ್ಬರೂ ಆಕಾರದಲ್ಲಿ, ರೂಪದಲ್ಲಿ, ಚಟುಲ ಸಾಹಸದಲ್ಲಿ ಒಂದೇ ಬಗೆಯಾಗಿ ಕಂಡು ಭ್ರಮೆ ಮೂಡಿಸಿದ್ದರಿಂದ ತನಗೆ ವಾಲಿಯನ್ನು ಕೊಲ್ಲಲು ಕಷ್ಟವಾಯಿತೆನ್ನುವುದು ಶ್ರೀರಾಮನ ಬಾಣ ವಿದ್ಯಾಪಾರಂಗತೆಯನ್ನೇ ಶಂಕಿಸುವಂತೆ ಮಾಡುತ್ತದೆ. ವಾಲಿಯಿಂದ ಬೇರೆಂದು ತೋರಲು ಸುಗ್ರೀವನ ಕೊರಳಿಗೆ ಗಜಪುಷ್ಪ ಮಾಲೆಯನ್ನು ತೊಡಿಸ ಬೇಕಾದ ಸ್ಥಿತಿಗೆ ಬರಬೇಕೆ ರಾಮ ಎನಿಸೀತು. ಹೀಗಿದ್ದ ಮೇಲೆ ಮರೆಯಲ್ಲಿ ನಿಂತು ಕೊಲ್ಲುವುದರಲ್ಲಿ ಅಸಹಜತೆಯೇನೂ ಇಲ್ಲ ಎಂದೇ ಎನ್ನಿಸಬಹುದು. ಇದೆಲ್ಲ ಮುಖ್ಯವಲ್ಲ. ತಾನು ಹೀಗೆ ನೇರವಾಗಿ ಕೊಲ್ಲದುದಕ್ಕೆ ಶ್ರೀರಾಮ ವಾಲಿಗೆ ಕೊಡುವ ಕಾರಣ ಮಾತ್ರ ಈಗಿನವರೆಗೆ ನುಂಗಲಾರದ ತುತ್ತು. ಸೀತಾದೇವಿಯನ್ನು ಹುಡುಕಿ ತರಲು ನೆರವಾಗೆಂದು ಸುಗ್ರೀವನ ಆಶ್ರಯ ಬೇಡಿ ಬರುವ ರಾಮಚಂದ್ರ ಅವನನ್ನು ಕೇವಲ ಕೋತಿಯೆಂದು ಬಗೆದನೆ ?1 'ವಾನರೇಂದ್ರ' 'ಹರಿಯೂಥಪ' ಎಂದೆಲ್ಲ ಅವನನ್ನು ಸಂಬೋಧಿಸುತ್ತಾನೆ. ಲಕ್ಷ್ಮಣ. ಶ್ರೀರಾಮ ಅವನನ್ನು ಬಿಗಿದಪ್ಪಿಕೊಂಡು ನೀನು ನನ್ನ ಸ್ನೇಹಿತನಾದೆ ಎನ್ನುತ್ತಾನೆ. ಇವರಿಬ್ಬರನ್ನೂ ಕೂಡಿಸಿದ ಬಂಧ ಯಾವುದು ? ಸಮಾನ ದುಃಖ, ಸಮಾನ ಹಿತ ಎಂದಷ್ಟೇ ಹೇಳಬೇಕೆ ? ಇದಕ್ಕೆ ವಿರುದ್ಧವಾದ ವಾಲಿಯಲ್ಲಿ ರಾಮನಿಗೆ ವೈರ ಬಂದದು ಸಹಜ. ಆದ್ದರಿಂದ ಹೇಗೋ ಕೊಂದ. ಮೋಸದಿಂದ ತನ್ನನ್ನು ಕೊಂದುದಕ್ಕೆ ವಾಲಿ ಅವನನ್ನು ಛೇಡಿಸಿದಾಗ ಶ್ರೀರಾಮ ಹಲವು ಕಾರಣ ನೀಡಿ ತನ್ನನ್ನು

ಸಮರ್ಥಿಸಿಕೊಳ್ಳುತ್ತಾನೆ. ಕೋತಿಯನ್ನು ಹೇಗಾದರೂ ಕೊಲ್ಲಬಹುದು ; ರಾಜರ್ಷಿಗಳು ದುರ್ಲಭ ಧರ್ಮವನ್ನು ಜನರಿಗೆ ತೋರಿ ಕೊಡುವವರು, ಹೀಗೇ ಮಾಡುತ್ತಾರೆ — ಎನ್ನುವ ಶ್ರೀರಾಮನ ಧರ್ಮವನ್ನು ಈ ಯುಗಕ್ಕೆ ನಾಟಿ ಹಾಕ ಬಂದೀತೆ ? ನೀನು ತಮ್ಮನ ಹೆಂಡತಿಯೊಡನೆ ಸಂಸಾರ ಮಾಡಿದೆ. ಅವನು ಬದುಕಿರುವಾಗಲೆ—ಎನ್ನುವ ರಾಮ, ವಾಲಿ ಸತ್ತನೆಂದು ತಾನೆ ರಾಜ್ಯಭಾರ ಮಾಡ ಹೊರಟ ಸುಗ್ರೀವನ ವರ್ತನಕ್ಕೆ ಯಾವ ಶಿಕ್ಷೆಯನ್ನು ಯೋಜಿಸುತ್ತಾನೆ ? ಸುಗ್ರೀವ ವಾಲಿ ವೃತ್ತಾಂತವನ್ನು ಗುಟ್ಟಾಗಿಯೆ ಇಟ್ಟನಂತೆ.2

ಮಂತ್ರಿಗಳು ಅದನ್ನು ಹೇಗೊ ತಿಳಿದುಕೊಂಡರಂತೆ. ಹೀಗೆ ಸತ್ಯ ಮರೆಮಾಚಿ ರಾಜನಾದ ಸುಗ್ರೀವ ಅಣ್ಣನ ಹೆಂಡತಿಯನ್ನು ಹೇಗೆ ಕಂಡ ? ಜೊತೆಯಲ್ಲಿ ಬಾಳಿದನೆ ? ವಾಲಿವಧೆಯ ಅನಂತರ ಅತಿ ವ್ಯಾಕುಲೆಯಾದ ಆ ತಾರೆ ಗಂಡನೊಡನೆ ಪ್ರಾಯೊಪವೇಶಕ್ಕೆ ಧಾವಿಸುತ್ತಾಳೆ. ಶ್ರೀರಾಮನೆ ತಡೆಯುತ್ತಾನೆ. ಆದರೆ ಸುಗ್ರೀವ ಅವಳ ಕೂಡೆ ಆಮೇಲೆ ಬಾಳುತ್ತಾನೆ. ಇದಕ್ಕೆಲ್ಲ ಶ್ರೀರಾಮ ಸಮ್ಮತಿಯಿತ್ತೆ ? ಜೀವಂತವಾಗಿರುವಾಗಲೆ ಸಹೋದರ ಸತಿಯೊಡನೆ ಬಾಳಿದರೆ ಪಾಪ ಎಂದಾದರೆ, ವಾಲಿ ಸತ್ತನೆಂದು ಭಾವಿಸಿ ತಾನು (ಸುಗ್ರೀವ) ರಾಜನಾಗುವುದು, ಆ ವಾಸ್ತವಾಂಶವನ್ನು ತಾನು ಮಂತ್ರಿಗಳಿಗೂ ಹೇಳದೆ ಗುಟ್ಟಾಗಿಟ್ಟಿರುವುದು ಎಂಥ ಪಾಪ ?

ಶ್ರೀರಾಮನ ಪ್ರಧಾನ ಗುಣಗಳಿಗೆ ಈ ವರ್ತನ ಸಂವಾದಿಯಾಗಿದೆಯೆ ? ಆ ಕಾಲದ ಧರ್ಮಕ್ಕೆ ಬದ್ಧನಾಗಿ ರಾಮ ನಡೆದ. ಮನುವಿನ ಮಾತನ್ನು ಉದ್ಧರಿಸಿ, ಧರ್ಮಪಾಲನದಲ್ಲಿ ತಾನು ಸ್ವತಂತ್ರನಲ್ಲ ಎಂದೇನೊ ರಾಮಚಂದ್ರ ಹೇಳುತ್ತಾನೆ. 'ಧರ್ಮಂ' ನಿಹಿತಂ ಗುಹಾಯಾಂ' ಎಂಬ ವ್ಯಾಸರ ಧರ್ಮರಾಯನ ಮಾತನ್ನಷ್ಟೆ ಹೇಳಿ ಸುಮ್ಮನಾಗಬೇಕು. ಧರ್ಮದಲ್ಲಿ ಸ್ಥಿರಾಂಶವೊಂದುಂಟು, ಚರಾಂಶವೊಂದುಂಟು ; ಸಾರ್ವಕಾಲಿಕ ಧರ್ಮವೊಂದುಂಟು, ಸಾಮಯಿಕ ಧರ್ಮವೊಂದುಂಟು. ಇದನ್ನು ಸ್ವಾಮಿ ವಿವೇಕಾನಂದರು ಹೇಳುತ್ತಲೆ ಇರುತ್ತಾರೆ. ನಮಗೆ ಯಾವ ರಾಮ ಬೇಕು ? ಒಂದು ಸ್ಥಿರಧರ್ಮವನ್ನು ಒಪ್ಪಿಕೊಳ್ಳುತ್ತ, ಅದರೊಡನಿರುವ ತತ್ಕಾಲೀನ ಧರ್ಮವನ್ನೂ—ನಮ್ಮ ಕಾಲ ಒಪ್ಪದುದನ್ನೂ—ಒಪ್ಪಿಕೊಳ್ಳಬೇಕೆ ? ಇಲ್ಲವೆ, ತಿರಸ್ಕಾರ ಯೋಗ್ಯವಾದ ತಾತ್ಕಾಲಿಕ ಧರ್ಮದೊಡನೆ ಚಿರಕಾಲಿಕ ಧರ್ಮವನ್ನೂ ಎಸೆಯಬೇಕೆ ? ಶ್ರೀರಾಮ ಸ್ವೀಕರಣ ಈ ಪ್ರಶ್ನೆಯನ್ನು ತರುತ್ತದೆ. ಇಂಥ ಸಂಕಟಕರ ಕ್ಲೇಶಗಳು ಇನ್ನೂ ಕೆಲವುಂಟು. ಅದರಲ್ಲಿ ಶಂಬೂಕ ಪ್ರಸಂಗ ಅತಿ ಮಹತ್ವದ ಪ್ರಸ್ತುತ ಪ್ರಾಮುಖ್ಯದ್ದಾಗಿದೆ;

ವಾಲ್ಮೀಕಿ ರಾಮಾಯಣದ ಉತ್ತರ ಕಾಂಡದ ೭೩, ೭೪, ೭೫, ೭೬ನೆಯ ಸರ್ಗಗಳಲ್ಲಿ ಬರುವ ಈ ಶಂಬೂಕ ಪ್ರಸಂಗದ ಕಥೆ ಹೀಗಿದೆ. "ಶ್ರೀರಾಮನ ರಾಜ್ಯದಲ್ಲಿ ಬ್ರಾಹ್ಮಣನೊಬ್ಬ ತನ್ನ ಹದಿನಾಲ್ಕು ವರ್ಷದ ಮಗನನ್ನು ಕಳೆದುಕೊಂಡು ಅರಮನೆಯ

ಮುಂದೆ ಬಂದು ಗೋಳಿಡುತ್ತಾನೆ. ತನ್ನ ಮಗನ ಅಕಾಲ ಮರಣಕ್ಕೆ ರಾಮನ ದುಷ್ಕೃತ್ಯವೆ ಕಾರಣವೆಂದೂ ಆ ಬ್ರಹ್ಮಹತ್ಯಾ ದೋಷ ರಾಜನನ್ನು ತಿಂದು ಹಾಕುತ್ತದೆಂದೂ ನಿಂದಿಸುತ್ತಾನೆ. ಇದನ್ನು ಕೇಳಿಸಿಕೊಂಡ ಶ್ರೀರಾಮ ತನ್ನ ಅಷ್ಟ ಮಂತ್ರಿಗಳನ್ನು ಸಲಹೆ ಕೇಳುತ್ತಾನೆ. ಆಗ ನಾರದನೆಂಬ ಮಂತ್ರಿ ಯುಗಧರ್ಮವನ್ನು ತಿಳಿಸುತ್ತಾನೆ. 'ಕಲಿಯುಗದಲ್ಲಿ ಮಾತ್ರ ತಪಸ್ಸು ಮಾಡಬಹುದಾದ ಹಾಗೂ ಉಳಿದ ಯುಗಗಳಲ್ಲಿ ತಪಸ್ಸೇ ಮಾಡಬಾರದ ಶೂದ್ರನೊಬ್ಬ ರಾಮರಾಜ್ಯದ ಎಲ್ಲೆಯಲ್ಲಿ ಮಹಾತಪಸ್ಸು ಮಾಡುತ್ತಿದ್ದಾನೆ. ಇದರಿಂದ ಬ್ರಾಹ್ಮಣ ಬಾಲಕ ಅಕಾಲದಲ್ಲಿ ಸತ್ತು, ಅಧರ್ಮವಾಗಿದೆ. ಈ ಪಾಪ ಆ ನಾಡಿನ ಜನರನ್ನು ಕೇಡಿಗೂ ರಾಜನನ್ನು ನರಕಕ್ಕೂ ದೂಡುತ್ತದೆ. ದುಷ್ಕೃತ್ಯವನ್ನು ತಡೆದರೆ ಧರ್ಮದ ಬೆಳಸಾಗುತ್ತದೆ' ಎನ್ನುತ್ತಾನೆ. ನಾರದನ ಆ 'ಅಮೃತಮಯ' ವಾಕ್ಯವನ್ನು ಕೇಳಿದ ರಾಮಚಂದ್ರ ಪುಷ್ಪಕವನ್ನೇರಿ ರಾಜ್ಯದ ನಾಲ್ಕೂ ದಿಕ್ಕುಗಳನ್ನು ಶೋಧಿಸುತ್ತಾನೆ. ರಾಜ್ಯದ ದಕ್ಷಿಣ ದಿಕ್ಕಿನ ಶೈವಲ ಪರ್ವತದ ಉತ್ತರ ಮಗ್ಗುಲಲ್ಲಿದ್ದ ಸರೋವರ ತೀರದಲ್ಲಿ ತಲೆಕೆಳಗಾಗಿ ಮಹಾ ತಪಸ್ಸು ಮಾಡುತ್ತಿದ್ದ ತಪಸ್ವಿಯೊಬ್ಬನನ್ನು ಕಂಡ ರಾಮಚಂದ್ರ ಅವನ ಕುಲಗೋತ್ರ ಕೇಳುತ್ತಾನೆ. 'ಧನ್ಯ ನೀನು, ಸುವ್ರತ ! ಯಾವ ಜಾತಿ ನಿನ್ನದು, (ಕಸ್ಯಾಂ ಯೋಸ್ಯಾಂ) ಹೇ ! ತಪೋವೃದ್ಧ ? ನೀನು ದೃಢ ವಿಕ್ರಮ ! ಕುತೂಹಲದಿಂದ ಕೇಳುತ್ತಿರುವೆ, ನಾನು ದಶರಥ ರಾಮ. ನಿನ್ನ ಬಯಕೆಯೇನು ? ಸ್ವರ್ಗವೋ, ಬೇರೇನಾದರೊ ? ಯಾವುದಕ್ಕಾಗಿ ಈ ಸುದುಷ್ಕರ ತಪಸ್ಸು ? ತಿಳಿಯ ಬಯಸುವೆ. ಬ್ರಾಹ್ಮಣನೊ ? ಕ್ಷತ್ರಿಯನೊ ? ವೈಶ್ಯ ? ಶೂದ್ರನೊ ? ಸತ್ಯ ಹೇಳು ! (ಸತ್ಯವಾಗ್ಭವ)' ಅದಕ್ಕೆ ಆ ಋಷಿ, 'ಶೂದ್ರಯೋನಿಯಲ್ಲಿ ಹುಟ್ಟಿದವ ನಾನು ! ಶಂಬೂಕ ಎಂದು ನನ್ನ ಹೆಸರು. ರಾಮ ! ಮಹಾಶಯ ! ಸಶರೀರವಾಗಿ ದೇವತ್ವ ಬಯಸಿ ಈ ಉಗ್ರ ತಪಸ್ಸು ಕೈಗೊಂಡಿರುವೆ. ಸುಳ್ಳಾಡುತ್ತಿಲ್ಲ, ನಾನು ಶೂದ್ರನೆಂದು ತಿಳಿ !' ಹೀಗವನು ಮಾತಾಡುತ್ತಿರುವಾಗಲೆ ಶ್ರೀರಾಮ ತನ್ನ ಒರೆಯಿಂದ ವಿಮಲವಾದ ಸುರುಚಿರ ಖಡ್ಗವನ್ನೆಳೆದು ಅವನ ತಲೆಯನ್ನು ಕತ್ತರಿಸಿಬಿಟ್ಟನು. ಶೂದ್ರ ಸಾಯಲು ಇಂದ್ರಾಗ್ನಿಯೆ ಮೊದಲಾದ ದೇವತೆಗಳು 'ಸಾಧು ! ಸಾಧು' ಎಂದು ಕಾಕುತ್ಸ್ಥನನ್ನು ಹೊಗಳಿದರು. ವಾಯುದೇವ ಹೂಮಳೆಗರೆದ. ಎಲ್ಲರೂ 'ಸತ್ಯ ಪರಾಕ್ರಮ'ನಾದ ರಾಮನನ್ನು ಸುಪ್ರೀತ'ರಾಗಿ ನೋಡುತ್ತಾ ಹೀಗೆಂದರು : 'ಸೌಮ್ಯ ! ದೇವತೆಗಳ ಕಾರ್ಯ ಮಾಡಿರುವೆ ನೀನು. ವರ ಏನು ಬೇಕು ಕೇಳು, ಅರಿಂದಮ ! ಸ್ವರ್ಗ ಭಾಜನನಲ್ಲ ಶೂದ್ರ ! ಇದನ್ನು ನೀನು ನಡೆಸಿಕೊಟ್ಟೆ !' ಇದಕ್ಕೆ ರಾಮ ಕೈಮುಗಿದು ಸಮಾಧಾನ ದಿಂದ ಇಂದ್ರನನ್ನು ನೋಡಿ 'ದೇವತೆಗಳು ಪ್ರಸನ್ನರಾದರೆ ಈ ಬ್ರಾಹ್ಮಣ ಕುಮಾರ ಬದುಕಲಿ' ಎಂದು ಕೇಳುತ್ತಾನೆ. ಅದಕ್ಕೆ ಇಂದ್ರ 'ನೀನು ಶೂದ್ರನನ್ನು ಕೊಂದ ಮುಹೂರ್ತದಲ್ಲೆ ಆ ಬಾಲಕ ಜೀವಂತವಾದ' ಎನ್ನುತ್ತಾನೆ.

ಇದು ಶಂಬೂಕ ಪ್ರಸಂಗದ ದಾರುಣ ಕಥೆ. ಈ ಕಥೆಯನ್ನು ಕುರಿತು ಡಿ.ವಿ.ಜಿ. ಅವರು ವ್ಯಾಖ್ಯಾನಿಸುತ್ತಾರೆ : "ಹೀಗೆ ಶ್ರೀ ಸೀತಾ ವಿವಾಸನ ವಿಷಯದಲ್ಲಿಯು ಶಂಬೂಕ ವಧೆಯ ವಿಷಯದಲ್ಲಿಯೂ ಶ್ರೀರಾಮನು ಅನುಸರಿಸಿದ್ದು ಪ್ರಜಾಭಿಪ್ರಾಯವನ್ನು. ಅದು ಡೆಮಾಕ್ರೆಸಿ (Democracy)—ಪ್ರಜಾಪ್ರಭುತ್ವ. ಇದನ್ನು ನಾವು ಗಮನಿಸಬೇಕು. ಗ್ರೀಸ್ ದೇಶದಲ್ಲಿ ಪ್ರಜಾಪ್ರಭುತ್ವವು ಸಾಕ್ರಟೀಸ್ (Socrates) ತತ್ತ್ವಜ್ಞನನ್ನು ನುಂಗಿತು. ಅದಕ್ಕಿಂತ ಎಷ್ಟೋ ಸಹಸ್ರ ವರ್ಷಗಳ ಹಿಂದೆ ಅಯೋಧ್ಯೆಯಲ್ಲಿ ಪ್ರಜಾಪ್ರಭುತ್ವವು ಸೀತಾದೇವಿಯನ್ನು ಗಡಿಪಾರು ಮಾಡಿಸಿತು ; ಶಂಬೂಕನಿಗೆ ಮೃತ್ಯುವನ್ನು ತಂದಿತು. ಅಲ್ಲಿಂದೀಚೆಗೆ ನಮ್ಮ ದೇಶದಲ್ಲಿ ಡೆಮಾಕ್ರೆಸಿ ಪುನಃ ಪ್ರಬಲಿಸುತ್ತಿದೆ. ಆದಕಾರಣ ಸತ್ತ್ವಾಭಿಮಾನಿಗಳು ಜಾಗ್ರತೆಯಿಂದಿರ ಬೇಕಾದದ್ದು."

ನಮ್ಮ ಯುಗ ರಾಮಚಂದ್ರನನ್ನು ಹೇಗೆ ಸ್ವೀಕರಿಸಿಕೊಳ್ಳುತ್ತದೆ ? ಮರೆಯ ಬಾರದು. ಶ್ರೀರಾಮ ಕಥೆ ಸಾಕ್ರಟೀಸ್ ವೃತ್ತಾಂತದಂತೆ ಕೇವಲ ಚರಿತ್ರೆಯಲ್ಲ. ನಾನಾಕಾಲದ ಕವಿಗಳ ಭಕ್ತರ ಸಂತರ ಮನಸ್ಸಿನಲ್ಲಿ ಹಲವಂದವಾಗಿ ರೂಪಗೊಂಡು ಶ್ರೀರಾಮಚಂದ್ರ ಬೆಳೆದು ಬಂದಿದ್ದಾನೆ. ಗ್ರೀಕ್ ಮಹಾಕಾವ್ಯಗಳ ವೀರರಂತೆ ಕೇವಲ ಪಠ್ಯ-ಪಾಠ್ಯ ಪಾತ್ರವಾಗಿ ಉಳಿದಿಲ್ಲ. ಶ್ರೀರಾಮ ದೇವರ ಅವತಾರವಾಗಿ, ದೇವರಾಗಿ ಬೆಳೆದಿದ್ದಾನೆ. ಆ ಕಾಲದಿಂದೀಕಾಲದ ತನಕ ಮೂಡಿಬಂದ ಚಿತ್ರಣ ನೋಡಿದರೆ ತಿಳಿದೀತು. ರಾಮಾಯಣವನ್ನು ನಿತ್ಯ ಪಾರಾಯಣ ಮಾಡುವವರೂ ಇದ್ದಾರೆ. ಹೀಗಿರುವಾಗ, ಸಾರ್ವಕಾಲಿಕ ರಾಮನನ್ನು ನಿತ್ಯರಾಮನನ್ನು ಸ್ವೀಕರಿಸಬೇಕೆ ? ಅಥವಾ ಒಂದು ಯುಗದ ಸಾಮಾಜಿಕ ಅನಿವಾರ್ಯಗಳನ್ನು ನಡೆಸಿಕೊಟ್ಟ, ಆದರೆ ಲೋಕೋತ್ತರ ಮಾನವೀಯತೆಯ ದೃಷ್ಟಿಯಿಂದಾಗಲಿ, ವರ್ತಮಾನದ-ಸರ್ವರಿಗೂ ಸಮಾನಾವಕಾಶದ ಯುಗದ ದೃಷ್ಟಿಯಿಂದಾಗಲಿ ಕೆಲವೊಂದು ತಿರಸ್ಕಾರ ಯೋಗ್ಯ ಕಾರ್ಯವನ್ನು ಮಾಡುವ ಇಕ್ಕಟ್ಟಿಗೆ ಸಿಲುಕಿದ ಮಹಾಪುರುಷನ ಪ್ರಮಾದವನ್ನು ಸ್ವೀಕರಿಸಬೇಕೆ ? ಹಾಗೆಯೆ ಸ್ವೀಕರಿಸಬೇಕು ಎಂದುಕೊಂಡಾಗ ದಕ್ಷಿಣದ ದ್ರಾವಿಡ ಕಳಗಂ ಶ್ರೀರಾಮನನ್ನೆ ತಿರಸ್ಕರಿಸುವ ದುರಂತಕ್ಕೆ ಹೋಯಿತು. ಲೋಕತಾರಕವಾಗಿರುವ ಶ್ರೀರಾಮ ಕಥೆಯನ್ನು ಶ್ರೀರಾಮ ಪಾತ್ರ ಸಮಷ್ಟಿಯ ಆದರ್ಶವನ್ನು ಬಿಟ್ಟು ಬಾಳ ಬಂದೀತೆ ? ಲೋಕೋದ್ಧಾರಕ ಶಕ್ತಿ ಆಯಾ ಕಾಲದ ಅಗತ್ಯಕ್ಕೆ ತಕ್ಕ ರೂಪ ಪಡೆದು ಸಂಭವಿಸುತ್ತದೆ. ನಮ್ಮ ಅವತಾರಗಳ ಕಥೆ ಇದನ್ನೆ ಹೇಳುತ್ತದೆ. ಜಗತ್ತೆಲ್ಲ ಜಲಮಯವಾಗಿದ್ದಾಗ ಉದ್ಧಾರಕ ಶಕ್ತಿ ಮೀನಾಗಿಯೆ ಮೈದಾಳಬೇಕು. ಅಮೇಧ್ಯಮಯವಾದಾಗ ವರಾಹನಾಗಿಯೆ ಬರಬೇಕು ; ರಾಮನಾಗಿಯೂ ಬಂದರಾಗದು. ಅಷ್ಟೇ ಅಲ್ಲ, ಅವತಾರನಾದ ಪರಶುರಾಮ ತುಂಬಾ ಅತಿಗೆ ಹೋದಾಗ ಅವನನ್ನು ತಿದ್ದುಪ

ಅವತಾರವಾಗಿ ರಾಮ ಬರುತ್ತಾನೆ. ಈ ಮಾತು ಲೋಕ ತಾರಕವಾದ ಶ್ರೀರಾಮ ಕಥೆಯ ವಿಷಯದಲ್ಲೂ ಸತ್ಯ.

"ಯುಗಯುಗದಿ ಸಂಭವಿಪೆನೆಂಬ ಭಗವದ್ದಿವ್ಯಮಾ
ವಚನಮೇಂ ನರರೂಪ ಮಾತ್ರಕ್ಕೆ ಮುಡಿಪೆ, ಪೇಳ್ ?
ನರಸಿಂಹ ಮತ್ಸ್ಯ ಕೂರ್ಮಾದಿ ಚರಮಾ ಲೀಲೆಗೇಂ
ಪೊರತೆ ಈ ಕೃತಿ ರೂಪಮಾ ಭಗವದಾವಿರ್ಭಾವ
ಬಹುರೂಪ ಸೂತ್ರತೆಗೆ ?"

–ಶ್ರೀ ರಾಮಾಯಣ ದರ್ಶನಂ : ಶ್ರೀ ಸಂಪುಟ
'ಅಭಿಷೇಕ ವಿರಾಡ್ ದರ್ಶನಂ' ಪಂಕ್ತಿ ೨೨೩–೨೭, ಪುಟ ೮೭೪

ರಾಮರಾಜ್ಯದ ಆದರ್ಶವನ್ನು ಮಹಾತ್ಮಾ ಗಾಂಧೀಜಿಯವರು ಕಾಣುತ್ತಿದ್ದರು. ಆ ರಾಮರಾಜ್ಯ ಶಂಬೂಕವಧಾ ಪ್ರಸಂಗವನ್ನು ಒಳಗೊಂಡು, ಶ್ರೀ ಸೀತಾ ವಿವಾಸನ ಕಥೆಯನ್ನೂ ಒಳಗೊಂಡು ಬರುವುದಾದರೆ ? ವಾಲ್ಮೀಕಿ ರಾಮಾಯಣದ ಶಂಬೂಕ ಕಥಾ ಪ್ರಸಂಗದಲ್ಲೆ ನಾರದರು ಅಪ್ಪಣೆ ಕೊಡಿಸುತ್ತಾರೆ, ಕಲಿಯುಗದಲ್ಲಿ ಶೂದ್ರನಿಗೆ ತಪಸ್ಸಿನ ಹಕ್ಕಿದೆಯೆಂದು. ಇದು ಕಲಿಯುಗ !3 ಈ ಯುಗದ ರಾಮರಾಜ್ಯದಲ್ಲಿ ಶಂಬೂಕ ವಧೆ ಹೇಗೆ ಸಾಧ್ಯ ? ಸ್ತ್ರೀಪುರುಷ ಸಮಾನತೆಯನ್ನು ಸಾಧಿಸುತ್ತಿರುವ ಈ ಯುಗ ಹೇಗೆ ಸೀತಾ ವಿವಾಸನವನ್ನು ಸ್ವೀಕರಿಸೀತು, ತನ್ನ ಆದರ್ಶ ರಾಮರಾಜ್ಯದಲ್ಲಿ ? ಕಾವ್ಯವನ್ನು ಕಾವ್ಯವಾಗಿ ಓದುವುದು ಆನಂದ ಪಡುವುದು ಒಂದು ರೀತಿ. ಅದನ್ನು ಜೀವನಾದರ್ಶವಾಗಿ ಆರಾಧಿಸುವುದು ಮತ್ತೊಂದು ರೀತಿ. ಶ್ರೀರಾಮಾಯಣ ಈ ಮತ್ತೊಂದು ರೀತಿಗೆ ಸೇರಿದೆ. ಆದ್ದರಿಂದಲೆ ಅದರ ಸಾರ್ವಕಾಲಿಕ ಮೌಲ್ಯಗಳ ಆರಾಧನೆ ಅಬಾಧಿತವಾಗಿ ನಡೆಯಲೋಸುಗವಾಗಿಯೆ ಅದರಲ್ಲಿ ಪ್ರಾಸಂಗಿಕವಾಗಿ ಬಂದಿರುವ ಆ ಸಾಮಾಜಿಕಾವರಣದ ತತ್ಕಾಲೀನ ಇಂದಿಗೂ ನ್ಯಾಯವನ್ನು ತರುವ— ಅವಾಹಿಸುವ-ಬಗ್ಗೆ ಎಚ್ಚರವಿರಬೇಕಾಗುತ್ತದೆ. ಶ್ರೀ ರಾಮ ಪ್ರವಾಹವೊಂದು ಈಗ ರಾಷ್ಟ್ರವ್ಯಾಪಿಯಾಗಿ ಪ್ರವಹಿಸುತ್ತ ಕ್ರಾಂತಿಯನ್ನೇ ಮಾಡುತ್ತಿದೆ. ಮತಧರ್ಮಗಳ ವಲಯದಲ್ಲಿ ವಿಪ್ಲವ ಮಾಡಿರುವಂತೆ ಹಿಂದೂ ಸಮಾಜದ ಒಳಗೇ ಸಾಮಾಜಿಕ ತಲ್ಲಣಕ್ಕೆ ಎಡೆಗೊಡುವ ಭಯವಿದೆ. ಮಗನಾಗಿ, ಸಹೋದರನಾಗಿ, ಪತಿಯಾಗಿ, ಮಿತ್ರನಾಗಿ, ಪ್ರಭುವಾಗಿ, 'ಆದರ್ಶ ಶತ್ರು'ವಾಗಿ ಅದ್ಭುತವಾಗಿ ಬೆಳೆದು ನಿಂತಿರುವ ರಾಮ, ನಮ್ಮ ಈ ಯುಗದ ಸಡಿಲಿದ ಮಾನವ ಸಂಬಂಧಗಳ-ಅಲುಗಿದ ಸಾಂಸಾರಿಕ ಸಂಬಂಧಗಳ, ಬಳಲಿದ ದಾಂಪತ್ಯ ಸಂಬಂಧಗಳ ಸಂದರ್ಭದಲ್ಲಿ ತಾರಕ ಮಂತ್ರವಾಗಿ ಬರುತ್ತಾನೆ. ಹಾಗೆ ಬಾರದೆ ಶಂಬೂಕ ನ್ಯಾಯದ ಹಳೆಯ ರಾಜನಾಗಿಯೆ

ಬರಬೇಕೆಂದಾದರೆ ಭಾರತೀಯ ಸಮಾಜ, ಅದರಲ್ಲೂ ಹಿಂದೂ ಸಮಾಜ ದಾರುಣ ದುರಂತವನ್ನು ಕಾಣಬೇಕಾದೀತೊ ಏನೊ ಎಂಬ ಭಯ ಗಾಢವಾಗಿದೆ. ಆಗ, ಈಗ ತಾನೆ ಬಿಡುಗಡೆಯ ಆವೇಶದಲ್ಲಿ ದಾರಿತಪ್ಪುತ್ತಲೆ ಮುನ್ನಡೆಯುತ್ತಿರುವ ಶೂದ್ರಾದಿ ದಲಿತ ವರ್ಗ ರಾಮನಿಂದಲೆ ವಂಚಿತವಾಗುವ ದುರ್ಯೋಗ ಬರಬಹುದು. ಕಮ್ಯುನಿಸಮ್ಮಿನ ಸೋಲಿನಿಂದಾಗಿ ಮುಕ್ತ ಮಾರುಕಟ್ಟೆಯ ಹೆಸರಿನಲ್ಲಿ ಜೀವನವೆ ಮಾರುಕಟ್ಟೆಗಾಗಿ ಎಂದಾಗುವ ಅಪಾಯವಿದೆ. ಹೇರಾಸೆಯ ಜನರಲ್ಲಿ ಸುಲಭ ಶ್ರೀಮಂತಿಕೆಯ ಕನಸು ಹೆಮ್ಮರವಾಗುತ್ತಿದೆ. ಈಗ ತಾನೆ ಮೊದಲ ಬಾರಿಗೆ ಶಕ್ತಿ ರೂಢಿಸಿಕೊಳ್ಳುತ್ತಿದ್ದ ದುರ್ಬಲರು ಅತಿದುರ್ಬಲರಾಗುತ್ತಾರೆ. ಶ್ರೀಮಂತಿಕೆಯ ಲೋಭ ಜೀವನ ವಿಧಾನ ವಾಗುತ್ತದೆ. ಹೀಗಿರುವಾಗ ಭಾರತೀಯ ಸಂದರ್ಭದಲ್ಲಿ ಸಾಮಾಜಿಕವಾಗಿ ದಲಿತ ರಾದವರು ವಿಪ್ಲವಗೊಳ್ಳುತ್ತಾರೆ. ಇಂಥ ಸಂದರ್ಭದಲ್ಲಿ ಹಳೆಯ ರಾಮರಾಜ್ಯ ಏನು ಮಾಡಬಲ್ಲದು ? ಶ್ರೀರಾಮನನ್ನು ಸರ್ವೋದಯ ವಿರೋಧಿಯಾಗಿ ಬಳಸಿಕೊಳ್ಳ ದಂತಾಗಬೇಕಾದರೆ ಅವನ ನಿತ್ಯ ಕಲ್ಯಾಣಾದರ್ಶ ಗುಣಗಳನ್ನು ಸ್ವೀಕರಿಸುವ ಯತ್ನ ವಾಗಬೇಕು. ಅಂಥ ರಾಮನನ್ನು ವಾಲ್ಮೀಕಿಗಳ ರಾಮಾಯಣವಷ್ಟೆ ನೀಡದಿರಬಹುದು. ಭಕ್ತರ ಸಂತರ ಹಾಡುಗಳೂ, ಆಮೇಲಣ ರಾಮಾಯಣಗಳೂ, ರಾಮಕಥಾ ಚಿತ್ರಗಳೂ ನೀಡಬಹುದು. ಸಮಷ್ಟಿ ರೂಪನಾದ ಶ್ರೀರಾಮ ಸಮಷ್ಟಿ ಸೃಷ್ಟಿಯಾಗಿ ಬರುತ್ತಾನೆ ಆಗ. ಅವನು ಸಮಷ್ಟಿಯ ಬದುಕಿನಲ್ಲಿ ಆಮೇಲೆ ಇಳಿದು ಬರಬೇಕು.

ಶ್ರೀ ಸೀತಾರಾಮ

ಮಾನವ ಮನೋಭೂಮಿಯನು ದಿವ್ಯ
ನೆಲೆಗೇರಿಸಿದ ಮಹಾತ್ಮ,
ತಂದೆ ಸೀತಾರಾಮ ;
ದೇವಗಂಗೆಯ ಇಳಿಸಿ
ಕರಲು ನೆಲಕೆಲ್ಲ ಹರಿಸಿ
ಬರಲು ಹೊಲಗಳನೆಲ್ಲ
ನಿತ್ಯ ಶ್ಯಾಮಲ ಸಸ್ಯ ವತ್ಸಲವೆನಿಸಿ
ಬೆಲೆ ತಂದೆ ಬರಡು ನೆಲಕೆ,
ತಾಯ್ತನವನೂಡಿಸಿದೆ ಬಂಜೆ ಜಲಕೆ
ವ್ಯಸ್ತ ವಮೌಲ್ಯದ ಜಗಕೆ
ಸ್ವಸ್ಥ ಜೀವನದ ದಿವ್ಯಮಾನವ
ನೆಲೆಯಿತ್ತ ದೇವ ಪುರುಷ !

ವಿಸ್ತರಿಸಿ ಮನುಜ ಮಿತಿಗಳ, ಅಲ್ಲಿ
ದೇವ ನಿರ್ಮಿತಿಯ ನೀ ನೆಲೆಗೊಳ್ಳಿಸಿದೆ :
ವ್ಯಕ್ತಿಮಿತನಲ್ಲ ನೀ, ಸಂಸಾರಮಿತ ಪರಮಾತ್ಮನು
ಬಾನತ್ತ ಬೆಳೆದ ನೆಲ ತನ್ನೊಡನೆ
ಸುತ್ತು ನೆಲವನ್ನೆಲ್ಲ ಮೇಲೆತ್ತಿತು ;
ಮಟ್ಟ ನೆಲವನ್ನೆಲ್ಲ ತುಂಗ ಸಮಶೃಂಗವೆನ್ನಿಸಿತು ;
ಹಳ್ಳಕೊಳ್ಳವನೆಲ್ಲ ನಿಮ್ನ ಸಾಗರವೆನಿಸಿ ಅಡಿಗೊತ್ತಿತು ;
ಗಿರಿಸ್ತನಂಭಯುವೆನಿಸಿ ಹಾಲೂಡಿ ಬೆಳಸಿತು !

ಇಂದು ಕೃಷಿಭೂಮಿ ವಿಸ್ತರಣ ಲಾಭರು,
ವನ್ಯ ಸಂಪನ್ನಿಧಿಯ ಲೋಭ ಲೋಲುಪರು,
ಘಟ್ಟಗಿರಿ ಕಂದರ ಸಮಸ್ತ ಭೂಮಿಯನು
ಸಮತಲಗೊಳಿಸುವಾತುರರು,
ಮೇರು ಭೂಮಾನ ದಂಡಕ್ಕೆ ಕೊಡಲಿ ಬೀಸಿರುವರು.—
ಕೋಡಗಳು ಕಡಿದು ಕಂದರವ ತುಂಬಲೆಳೆಸಿರುವರು
ಸಾಗರೋದ್ಭವೆ ಮೇರು
ಸಾಗರದ ತಳಕಿಳಿಯುವಳೆ ಮತ್ತೆ ?
ತೆಳ್ಳೆ ಹೋಗುವುದೆ ಗಂಭೀರ ಶರಧಿ ?
ಕುಗ್ಗಿಕೊಳ್ಳುವುದೆ ಸಸ್ಯಶಾಮಲ ಭೂಮಿ ಪರಿಧಿ ?
ಮತ್ತೆ, ನೀನವತರಿಸಬೇಕೇನು
ಭೂಮಿ ಭರ್ತಾರ ಹರಿವರಾಹ ಕತದಿ ?

ಅಡಿಟಿಪ್ಪಣಿಗಳು :

1. ಶ್ರೀರಾಮ ಲಕ್ಷ್ಮಣರನ್ನು ಆಂಜನೇಯ ಮೊದಲ ಬಾರಿ ಕಂಡು ಅವರೊಡನೆ ಮಾತನಾಡಿದಾಗ, ಲಕ್ಷ್ಮಣ ಸುಗ್ರೀವನಲ್ಲಿ ತಾವು ಆಶ್ರಯ ಬೇಡಿ ಬಂದಿರುವುದಾಗಿ ತಿಳಿಸುತ್ತಾನೆ :
"ಸುಗ್ರೀವಂ ವಾನರೇಂದ್ರಂ ತು ರಾಮಃ ಶರಣಮಾಗತಃ''
''ಶೋಕಾಭಿಭೂತೇ ರಾಮೇ ತು ಶೋಕಾರ್ತೇ ಶರಣಂ ಗತೇ । ಕರ್ತುಮರ್ಹತಿ ಸುಗ್ರೀವಃ ಪ್ರಸಾದಂ ಹರಿಯೂಥಪಃ॥'' (ಶ್ರೀರಾಮನು ಸುಗ್ರೀವನ ಶರಣುಬಂದಿದ್ದಾನೆ. ಶೋಕ ಪೀಡಿತನಾದ ರಾಮ ಶರಣಾಗಿದ್ದಾನೆ ; ಶೋಕಾರ್ತನಾದ ಇವನಿಗೆ ಸುಗ್ರೀವ ಪ್ರಸನ್ನನಾಗಲಿ.) ಶ್ರೀಮದ್ ವಾಲ್ಮೀಕಿ ರಾಮಾಯಣ, ಕಿಷ್ಕಿಂಧಾ ಕಾಂಡ, ಸರ್ಗ : ೪, ಶ್ಲೋಕ : ೨೩, ೨೪

2. ಶೋಕಾರ್ತಶ್ಚೋದಕಂ ಕೃತ್ವಾ ಕಿಷ್ಕಿಂಧಾಮಾಗತಃ ಸಖೇ ॥
ಗೂಹಮಾನಸ್ಯ ಮೇತತ್ತ್ವಂ ಯತ್ನತೋ ಮಂತ್ರಿಭಿಃ ಶ್ರುತ ॥
ಶ್ರೀಮದ್ ವಾಲ್ಮೀಕಿ ರಾಮಾಯಣ : ಕಿಷ್ಕಿಂಧಾಕಾಂಡ ಸರ್ಗ ೯, ಶ್ಲೋಕ ೧೯

3. ಸಾಮಾಜಿಕ ನ್ಯಾಯ ಒದಗಿಸಲು ರೂಪಿತವಾಗಿರುವ ಮೀಸಲಾತಿಗಳು ಚಿರಕಾಲಿಕವೆ ? ತಪಸ್ಸಿನ ಸ್ವಾಮ್ಯ ಈಗ ಸಾಧ್ಯವೆ ? ಕೆಲವೊಂದು ವರ್ಗಕ್ಕೇ ಮೀಸಲೆಂದಿದ್ದ ಸಂಸ್ಕೃತಾಧ್ಯಯನವನ್ನು ಎಲ್ಲರಿಗೂ ಕಡ್ಡಾಯ ಮಾಡಬೇಕೆಂದು ಈ ಯುಗದಲ್ಲಿ ಕೂಗು ಕೇಳುತ್ತಿದೆ- ಅದೂ ಹಿಂದೆ ವಿಧಿ ನಿಷೇಧ ಹೇರಿದ್ದವರ ಕಡೆಯಿಂದಲೆ. ಹೀಗಿರುವಾಗ ನಾವು ಯಾವ ರಾಮರಾಜ್ಯದ ಕನಸು ಕಾಣುತ್ತಿದ್ದೇವೆ ? ಕಲಿಯುಗದ ರಾಮರಾಜ್ಯದಲ್ಲಿ ಶಂಬೂಕ ವಧೆಯಲ್ಲಿ, ಆ ತಪಸ್ವಿಯು ಪುರಸ್ಕಾರವಾಗಬೇಕಾಗುತ್ತದೆ. ಈ ದೃಷ್ಟಿಯಿಂದ ಶ್ರೀಕುವೆಂಪು ಅವರ ಶೂದ್ರ ತಪಸ್ವಿ ಮಹತ್ತರ ಕೊಡುಗೆಯಾಗಿದೆ. ಮಿಗಿಲಾಗಿ ಅವರ ಶ್ರೀರಾಮಾಯಣ ದರ್ಶನಂ ಮಹಾಕಾವ್ಯ ಸರ್ವೋದಯ ಕೇಂದ್ರನಾದ ಶ್ರೀರಾಮನ ಅದ್ಭುತ ಚಿತ್ರ ನೀಡುತ್ತದೆ.

ಕವಿಗಿರುವ ಪ್ರಶ್ನೆ ತನ್ನ ಕಲ್ಪನೆಯೂ ವಾಕ್ಯೂ ಕೃತಕ ಹೌದೆ ಅಲ್ಲವೆ—ಎಂಬುದಲ್ಲ. ಸಹಜತೆಯ ಭ್ರಾಂತಿ ಅವುಗಳಿಂದ ಓದುಗನಲ್ಲಿ (ನೋಟಕನಲ್ಲಿ) ಉಂಟಾಗುತ್ತದೆಯೆ, ಇಲ್ಲವೆ—ಎಂಬುದು. ಕವಿ ನಮಗೆ ಒದಗಿಸಬೇಕಾದದ್ದು ಸತ್ಯದ ಬಾಹ್ಯ ಚಿತ್ರವನ್ನಲ್ಲ ; ಸತ್ಯದ ಅಂತಶ್ಚಿತ್ರವನ್ನು. ಅವನು ತೋರಿಸುವ ಘಟನೆ ನಮಗೆ ಸಾಧ್ಯ, ಸಂಭಾವ್ಯ ಎನ್ನಿಸಬೇಕು.

—ಡಿ.ವಿ.ಜಿ.

ಎಂ. ಆರ್. ಶ್ರೀಯವರ ಗ್ರಂಥಸಂಪಾದಿತ ಕೃತಿಗಳು

ವೈ. ಸಿ. ಭಾನುಮತಿ

ಅಲ್ಲಮ, ಬಸವ, ಚೆನ್ನಬಸವರು ವೀರಶೈವಧರ್ಮದ ಆಧಾರ ಸ್ತಂಭಗಳು. ಇವರನ್ನು ಕುರಿತ ಗ್ರಂಥಗಳು ವೀರಶೈವೇತರರಲ್ಲಿಯೂ ಆದರಣೀಯವಾಗಿವೆ. ವಚನ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿದ ಎಂ. ಆರ್. ಶ್ರೀಯವರು ವೀರಶೈವ ತತ್ತ್ವ ಸಿದ್ಧಾಂತಗಳಿಗೆ ಒಲವು ತೋರಿದ್ದು ಸಹಜ. ಪ್ರಭುದೇವ ಬಸವಣ್ಣ ಚನ್ನಬಸವಣ್ಣರಲ್ಲಿ ತಮ್ಮ ಆದರ್ಶವನ್ನು ಕಂಡುಕೊಳ್ಳಲು ಯತ್ನಿಸಿದ್ದರ ಫಲವೆ ಭಕ್ತಿಭಂಡಾರಿ ಬಸವಣ್ಣ, ಪ್ರಭು ಲೀಂಗಲೀಲೆಯ ಸಂಗ್ರಹ ಮತ್ತು ಚನ್ನಬಸವ ಪುರಾಣ ಸಂಗ್ರಹ ಕೃತಿಗಳು.

ಪ್ರಾಚೀನ ಕೃತಿರಾಶಿಯಲ್ಲಿ ಉತ್ತಮವಾದಂಥ ಕಾವ್ಯವನ್ನು ಆರಿಸಿ ಅದರ ರಸಘಟ್ಟಿಯಾದ ಭಾಗವನ್ನು ಸಹೃದಯರಿಗೆ ಒದಗಿಸುವ, ವಿದ್ಯಾರ್ಥಿಗಳಿಗೆ ಪಠ್ಯವಾಗಿ ಇಡುವ ಒಂದು ಕ್ರಮ ಹಿಂದಿನಿಂದಲೂ ರೂಢಿಯಲ್ಲಿದೆ. ಕೃತಿ ಉತ್ತಮವಾಗಿರಬೇಕು, ನಿಗದಿತ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸಲು ಅನುವಾಗಬೇಕು ಎಂಬ ಉದ್ದೇಶವೆ ಸಂಗ್ರಹಗಳಿಗೆ ನಾಂದಿಯಾಯಿತು. ಹಳಗನ್ನಡ ಕಾವ್ಯಸಂಗ್ರಹಗಳ ಇತಿಹಾಸದಲ್ಲಿ ಎ ಆರ್ ಕೃ ಅವರು 1931 ರಲ್ಲಿ ಪ್ರಕಟಿಸಿದ ಹರಿಶ್ಚಂದ್ರ ಕಾವ್ಯ ಸಂಗ್ರಹವೆ ಮೊದಲನೆಯದು. ಅನಂತರ ಟಿ. ಎಸ್. ವೆಂಕಣ್ಣಯ್ಯನವರು 1933 ರಲ್ಲಿ 'ಕರ್ನಾಟಕ ಕಾದಂಬರೀ ಸಂಗ್ರಹ'ವನ್ನು ಹೊರತಂದರು. ಮೂರನೆಯದೇ 1934 ರಲ್ಲಿ ಪ್ರಕಟವಾದ ಎಂ. ಆರ್. ಶ್ರೀಯವರ ಪ್ರಭುಲಿಂಗಲೀಲೆಯ ಸಂಗ್ರಹ. ಹೀಗೆ ಕಾವ್ಯ ಸಂಗ್ರಹಗಳು ಸಾಲಾಗಿ ಹೊರಬರಲು ಕಾರಣರಾದವರು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರಕಟನ ಸಮಿತಿಯ ಅಧ್ಯಕ್ಷರಾಗಿದ್ದ ಆಚಾರ್ಯ ಬಿ. ಎಂ. ಶ್ರೀಯವರು. ಇವರ ಕಾಲಕ್ಕಾಗಲೆ ಪ್ರಾಚೀನ ಸಾಹಿತ್ಯವನ್ನು ಅಭ್ಯಾಸ ಮಾಡುವವರ ಸಂಖ್ಯೆ ಕ್ಷೀಣಿಸುತ್ತ ಬಂದಿತ್ತು. ಪರಿಸ್ಥಿತಿಯನ್ನರಿತ ಶ್ರೀಯವರು ಕನ್ನಡ ಸಾಹಿತ್ಯವನ್ನು ಅಭಿವೃದ್ಧಿಪಡಿಸುವ ಯೋಜನೆಯಲ್ಲಿ ಕಾವ್ಯ ಸಂಗ್ರಹಗಳ ಪ್ರಕಟಣೆಯನ್ನು ಸೇರಿಸಿದರು.

ಪ್ರಭುಲಿಂಗಲೀಲೆಯ ಸಂಗ್ರಹದ ಮುನ್ನುಡಿಯಲ್ಲಿ ಕಾವ್ಯ ಸಂಗ್ರಹಗಳ ಸ್ವರೂಪ, ಸಂಗ್ರಾಹಕ ಸಂಪಾದಕನಿಗಿರಬೇಕಾದ ಅರ್ಹತೆಯನ್ನು ಬಿ. ಎಂ. ಶ್ರೀ ಅವರು ಸ್ಪಷ್ಟ ಪಡಿಸಿದ್ದಾರೆ—"ಒಂದು ಕಾವ್ಯದ ಸೊಬಗನ್ನು ಒಬ್ಬ ಕವಿಯ ಕವಿತಾ ಶಕ್ತಿಯನ್ನು ತಿಳಿಯಬೇಕಾದರೆ ಕಾವ್ಯವನ್ನು ಸಂಪೂರ್ಣವಾಗಿ ಓದಬೇಕು. ಇಲ್ಲ, ಉತ್ತಮ ಭಾಗಗಳನ್ನಾದರೂ ನೋಡಬೇಕು. ಈ ಸಮಷ್ಟಿದೃಷ್ಟಿ ಸಾಧ್ಯವಾಗುವಂತೆ ಪಾಠಕ್ಕೆ ಪ್ರಮಾಣ ಅತಿಮೀರದಂತೆ ಕಾವ್ಯಗಳನ್ನು ಅದರದರ ಸ್ವಭಾವಕ್ಕೆ ಉಚಿತವಾಗಿ ಸಂಗ್ರಹಿಸಿದರೆ ವಿದ್ಯಾರ್ಥಿಗಳಿಗೂ ಜನಸಾಮಾನ್ಯಕ್ಕೂ ಹಿತಕರವೂ ಪ್ರಯೋಜನಕರವೂ ಆಗಬಹುದೆಂಬ ನಂಬಿಕೆಯಿಂದ ಈ ಸಂಗ್ರಹವನ್ನು ಮಾಡುತ್ತದೆ. ಇದರಲ್ಲಿ ಮುಖ್ಯ ಗಮನ ಕಥಾಸರಣಿ ಕೆಡಬಾರದು. ಒಟ್ಟು ಕಥೆಯ ಸ್ವಾರಸ್ಯಕ್ಕೆ ಪಾತ್ರನಿರೂಪಣಕ್ಕೆ ಭಂಗ ಬರಬಾರದು. ಅವಶ್ಯವಾದ ವರ್ಣನೆಯ ಮತ್ತು ವಿವರಣೆಯ ಸಾರ ಬಿಟ್ಟು ಹೋಗಬಾರದು. ಎಲ್ಲಕ್ಕಿಂತ ಪ್ರಧಾನವಾದದ್ದು ಕವಿಯ ವ್ಯಕ್ತಿತ್ವಕ್ಕೆ ಆತನ ವಿಶೇಷ ಪ್ರತಿಭೆಗೆ ಲೋಪ ಬರಕೂಡದು. ಇಷ್ಟನ್ನೂ ಸಾಧಿಸುವುದು ಸಂಗ್ರಹಕಾರನ ಕರ್ತವ್ಯ." ಇಂಥ ಉನ್ನತ ಆದರ್ಶವನ್ನಿಟ್ಟುಕೊಂಡು ಮೈಸೂರು ವಿಶ್ವವಿದ್ಯಾನಿಲಯವು ಮೇಲಿನ ಸಂಗ್ರಹಗಳನ್ನು ಹೊರತಂದಿತು. ಈಗ ಸಂಗ್ರಹವೆಂದರೆ ಮೊದಲೇ ಪರಿಷ್ಕೃತಗೊಂಡು ಪ್ರಕಟವಾಗಿರುವ ಕೃತಿಯೊಂದರ ಕೆಲವು ಭಾಗಗಳನ್ನು ತೆಗೆದು ಹಾಕುವುದಷ್ಟೇ ಆಗಿದೆ. ಆದರೆ ಪ್ರಭುಲಿಂಗಲೀಲೆಯ ಸಂಗ್ರಹ ತರುವ ಕಾಲಕ್ಕೆ ಈ ಕಾವ್ಯದ ಒಂದು ಮಾರುಕಟ್ಟೆ ಆವೃತ್ತಿ ಬಂದಿತ್ತೆ ಹೊರತು ಪರಿಷ್ಕೃತ ಆವೃತ್ತಿ ಪ್ರಕಟವಾಗಿರಲಿಲ್ಲವೆಂಬುದನ್ನು ಗಮನಿಸಬೇಕು. ಆ ತಲೆಮಾರಿನ ವಿದ್ವಾಂಸರಿಗೆ ಒಂದು ಪ್ರಾಚೀನ ಕಾವ್ಯ ಸಂಗ್ರಹ ವೆಂದರೆ ಕೃತಿ ಸಂಪಾದನೆಯಷ್ಟೇ ಶ್ರಮಸಾಧ್ಯವಾದುದಾಗಿತ್ತು. ಹಸ್ತಪ್ರತಿಗಳ ಸಂಗ್ರಹ ದಿಂದ ಮೊದಲುಗೊಂಡು ಪ್ರತಿಮಾಡುವಿಕೆ ಪಾಠಾಂತರ ಸಂಕಲನ ಪಾಠಪರಿಷ್ಕರಣದ ವರೆಗೆ ಎಲ್ಲ ಹಂತಗಳನ್ನು ಕ್ರಮಿಸಬೇಕಾಗುತ್ತಿತ್ತು.

ಪ್ರಭುಲಿಂಗಲೀಲೆ ಸಂಗ್ರಹವನ್ನು ಎಂ. ಆರ್. ಶ್ರೀ. ಮತ್ತು ಎಂ. ಎಸ್. ಬಸವ ಲಿಂಗಯ್ಯ ಸಂಯುಕ್ತವಾಗಿ ಪ್ರಕಟಿಸಿದ್ದಾರೆ. ಪೀಠಿಕಾಭಾಗದಲ್ಲಿ ಎಂ. ಆರ್. ಶ್ರೀ ಯವರ ಹೆಸರೇ ಕಂಡುಬರುವುದರಿಂದ ಕೃತಿಯಲ್ಲಿ ಇವರ ಸ್ಪರ್ಶವೇ ಎದ್ದು ಕಾಣುತ್ತದೆ. ಪ್ರಸ್ತುತ ಸಂಗ್ರಹ ಪ್ರಕಟವಾದಂದಿನಿಂದ ಈವರೆಗಿನ ಸುಮಾರು ಅರವತ್ತು ವರ್ಷದ ಅವಧಿಯಲ್ಲಿ ನಾಲ್ಕು ಮುದ್ರಣಗಳನ್ನು ಕಂಡಿದೆ.* ಇದು ಪಠ್ಯವಾಗಿದ್ದುದರಿಂದ ಹಲವು ತಲೆಮಾರಿನ ಓದುಗರು ಅಭ್ಯಾಸ ಮಾಡಿದ್ದಾರೆ. ಇದರ ಪ್ರಯೋಜನ ಪಡೆದಿದ್ದಾರೆ. ಈ ಸಂಗ್ರಹದ ಸಂಪಾದನೆಯಲ್ಲಿ ನಾಲ್ಕು ಪ್ರತಿಗಳನ್ನು ಬಳಸಿಕೊಳ್ಳ ಲಾಗಿದೆ. ಇವುಗಳಲ್ಲಿ ಮೂರು ಓಲೆ ಪ್ರತಿ, ಒಂದು ಮುದ್ರಿತ ಅಶುದ್ಧ ಪ್ರತಿ ಎಂದು

---

* 1934, 1957, 1970, 1985

ಹೇಳಲಾಗಿದೆ. ಎಂ. ಆರ್. ಶ್ರೀ ಯವರಿಗೆ ಪೂರ್ವದಲ್ಲಿ ಉಂತಕಲ್ಲು ಗಿರಿಮಲ್ಲಯ್ಯ ಎಂಬವರು 1884 ರಲ್ಲಿ ಪ್ರಭುಲಿಂಗಲೀಲೆಯನ್ನು ಚನ್ನಪಟ್ಟಣದಿಂದ ಪ್ರಕಟಿಸಿದ್ದರು. ಇದು ಸಂಗ್ರಹಕಾರರು ಹೇಳಿರುವ ಮುದ್ರಿತಪ್ರತಿ ಆಗಿರಲೂ ಸಾಕು. ಮಡಿಕೇರಿ ಯಿಂದ ಬಿ. ಎನ್. ಕೃಷ್ಣಮೂರ್ತಿಗಳು ಕಳಿಸಿದ ಓಲೆಪ್ರತಿಯು ಪಾಠಗಳು ಶುದ್ಧ ವಾಗಿದ್ದುವೆಂದು ಹೇಳಿರುವುದರಿಂದ ಈ ಪ್ರತಿಯನ್ನು ಮೂಲಮಾತೃಕೆಯಾಗಿ ಸ್ವೀಕರಿಸಿ ರುವಂತೆ ತೋರುತ್ತದೆ. ಮೈಸೂರು ಓರಿಯಂಟಲ್ ಲೈಬ್ರರಿಯ ಹಸ್ತಪ್ರತಿ ಭಂಡಾರ ದಲ್ಲಿದ್ದ ಪ್ರಭುಲಿಂಗಲೀಲೆಯ ಹಲವಾರು ಹಸ್ತಪ್ರತಿಗಳ ಪೈಕಿ ಎರಡು ಓಲೆಪ್ರತಿಗಳನ್ನು ಮಾತ್ರ ನೋಡಿದ್ದಾರೆ. ಪಾಠಸಮಸ್ಯೆ ಸಂದೇಹಗಳು ತಲೆದೋರಿದ ಕಡೆ ಮದ್ರಾಸ್ ಓರಿಯಂಟಲ್ ಲೈಬ್ರರಿ ಮತ್ತು ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿಸಂಸ್ಥೆಯ ಹಸ್ತಪ್ರತಿಗಳನ್ನು ಪರಿಶೀಲಿಸಿ ಬಳಸಿಕೊಂಡಿರುವುದು ಕಂಡುಬರುತ್ತದೆ. "ಕವಿಯ ಆಶಯವನ್ನೇ ಮುಖ್ಯವಾಗಿ ಲಕ್ಷ್ಯದಲ್ಲಿಟ್ಟುಕೊಂಡು ಸಾಧ್ಯವಾದ ಮಟ್ಟಿಗೂ ಶುದ್ಧ ಪಾಠವನ್ನೆ ಈ ಪುಸ್ತಕದಲ್ಲಿ ಕೊಡಲಾಗಿದೆ"—ಎಂದು ಸಂಪಾದಕರು ಹೇಳಿರುವಲ್ಲಿ ಆತ್ಮವಿಶ್ವಾಸ ವ್ಯಕ್ತವಾಗಿದೆ. ಆದರೆ ತಾವು ಆಧರಿಸಿದ ಹಸ್ತಪ್ರತಿಗಳ ಕ್ರಮಸಂಖ್ಯೆ ಯನ್ನಾಗಲಿ, ಅವುಗಳಿಗೆ ಸಂಕೇತವನ್ನಾಗಲಿ, ಹಸ್ತಪ್ರತಿಗಳ ಪರಸ್ಪರ ಸಂಬಂಧವನ್ನಾಗಲಿ ಸೂಚಿಸದಿರುವುದರಿಂದ ಗ್ರಂಥಸಂಪಾದನೆಯ ಪೂರ್ಣವಿವರಗಳು ದೊರೆಯದೆ ಹೋಗಿವೆ. ಅಡಿಟಿಪ್ಪಣಿಯಲ್ಲಿ ಪಾಠಾಂತರಗಳನ್ನು ಸೂಚಿಸಿಲ್ಲ. ಪಾಠಾಂತರಗಳಿಂದ "ವಿದ್ಯಾರ್ಥಿಗಳಿಗೂ ಸಾಮಾನ್ಯರಾದ ಓದುಗರಿಗೂ ಹೆಚ್ಚು ಪ್ರಯೋಜನವಾಗುವುದಿಲ್ಲ" ವೆಂಬ ಧೋರಣೆ ಸಂಪಾದಕರದು. ಈ ಕಾರಣದಿಂದಾಗಿ ಪ್ರಭುಲಿಂಗಲೀಲೆ ಸಂಗ್ರಹವು ಅಂತಃಸ್ಸತ್ವದಿಂದ ಪಂಡಿತ ಆವೃತ್ತಿಯಾಗಿದ್ದರೂ ಹೊರನೋಟಕ್ಕೆ ಜನಪ್ರಿಯ ಆವೃತ್ತಿ ಯಂತೆ ತೋರುತ್ತದೆ.

ಪ್ರಭುಲಿಂಗಲೀಲೆಯ ಮೂಲಕಾವ್ಯದಲ್ಲಿ ೨೫ ಗತಿ ೧೧೧೧ ಪದ್ಯಗಳಿವೆ. ಸಂಗ್ರಹ ದಲ್ಲಿ ಇದನ್ನು ೧೪ ಗತಿ ೪೭೩ ಪದ್ಯಗಳಿಗೆ ಇಳಿಸಲಾಗಿದೆ. ಹೀಗೆ ಮಾಡುವಾಗ ಮೂಲಕಥೆಯ ಓಟಕ್ಕೆ, ಕಥಾನಾಯಕನ ಹಿರಿಮೆಗೆ, ಕವಿಯ ಉದ್ದೇಶಕ್ಕೆ ಭಂಗಬಾರ ದಂತೆ ನೋಡಿಕೊಳ್ಳಲಾಗಿದೆ. ಇಲ್ಲಿನ ೧೪ ಗತಿಗಳಲ್ಲಿ ಪಾರ್ವತಿಯ ಪ್ರತಿಜ್ಞೆ, ಮಾಯಾದೇವಿಯ ಬಾಲ್ಯ, ಅಲ್ಲಮನ ವೃತ್ತಾಂತ, ಮಾಯೆಯ ಮೋಹ, ಅಲ್ಲಮನ ತಿರಸ್ಕಾರ, ಬಸವಾದಿಗಳ ಅವತಾರ, ಮಹಾದೇವಿಯಕ್ಕನ ವಿರಕ್ತಿ, ಗೊಗ್ಗಯ್ಯ ಮುಕ್ತಾಯಕ್ಕ ಸಿದ್ಧರಾಮರ ಉದ್ಧಾರ, ಬಸವಣ್ಣ ಗೋರಕ್ಷಾದಿಗಳಿಗೆ ಉಪದೇಶ, ಶೂನ್ಯ ಸಿಂಹಾಸನಾರೋಹಣ, ಪಾರ್ವತಿಯ ಪ್ರಸನ್ನತೆ ಇವೇ ಮೊದಲಾದ ಮುಖ್ಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪಠ್ಯಭಾಗ ಸಿದ್ಧವಾಗಿದೆ. ಸಮಗ್ರಕಾವ್ಯದ ಪಕ್ಕದಲ್ಲಿಟ್ಟು ಸಂಗ್ರಹವನ್ನು ನೋಡಿದಾಗ ಸ್ವಾರಸ್ಯಕರವಾದ ಯಾವೊಂದು ಭಾಗವೂ ಬಿಟ್ಟುಹೋಗದಿರುವುದು ಅಚ್ಚರಿಯನ್ನುಂಟುಮಾಡುತ್ತದೆ. ಪದ್ಯಗಳ ಆಯ್ಕೆಯಲ್ಲಿ

ಎಚ್ಚರದ ಮನಸ್ಸೊಂದು ಕೆಲಸ ಮಾಡಿರುವುದು ಉದ್ದಕ್ಕೂ ಕಂಡುಬರುತ್ತದೆ. ಮೂಲ ಕಾವ್ಯದಲ್ಲಿ 'ಸತ್ತವರ ಕಥೆಯಲ್ಲ' ಎಂಬ ಪ್ರಸಿದ್ಧ ಪದ್ಯಕ್ಕೆ ಮೊದಲು—

ಕಾಳಗದ ಕಥೆಯಲ್ಲಿ ವಿಷಯಗ
ಳೇಳಿಗೆಯ ವಿಧಿಯಲ್ಲ ಹೊಟ್ಟೆಯ
ಹೂಳಲಿಕೆ ಹಿಂಸೆಯನು ಮಾಡುವ ಹೊಲಬು ತಾನೆಲ್ಲ
ಕಾಳಗವು ಕರುಣದಲಿ ಸುರತದ
ಕೀಲು ಕುಂಡಲಿಯಲ್ಲಿ ತೃಪ್ತಿಯ
ದಾಳಿ ಗಗನದೊಳೆಂದು ಪೇಳುವುದೀ ಸುಬೋಧೆಯಲಿ

ಎಂಬ ಪದ್ಯ ಬರುತ್ತದೆ. ಈ ಪದ್ಯದ ಮುಖ್ಯ ಆಶಯ ಮಹಾಭಾರತ ರಾಮಾಯಣ ಗಳ ನಿಂದನೆ. ಚಾಮರಸನು ಈ ಕೃತಿಗಳನ್ನು ನೋಡಿರುವ ದೃಷ್ಟಿ ಕೂಡ ಇಲ್ಲಿ ವ್ಯಕ್ತ ವಾಗಿದೆ. ಆದುದರಿಂದ ಸಂಗ್ರಹಕಾರರು ಮೇಲಿನ ಪದ್ಯವನ್ನು ಕೈಬಿಟ್ಟು, ಕಾವ್ಯದ ಬಗೆಗೆ ಕವಿಯ ಧೋರಣೆಯನ್ನು ಬಿಂಬಿಸುವ 'ಸತ್ತವರ ಕಥೆಯಲ್ಲ....' ಪದ್ಯವನ್ನು ಉಳಿಸಿಕೊಂಡಿದ್ದಾರೆ.

ಚಾಮರಸ ತನ್ನ ಕೃತಿಯಲ್ಲಿ ಅಲ್ಲಮನ ಜೀವಿತದೊಡನೆ ನಿಕಟಸಂಬಂಧ ಹೊಂದಿದ್ದ ಕೆಲವೇ ಶಿವಶರಣರನ್ನು ಮಾತ್ರ ಪ್ರಸ್ತಾಪಿಸಿದ್ದಾನೆ. ಇವರಲ್ಲಿ ಬಸವಣ್ಣ, ಮಡಿವಾಳ ಮಾಚಿದೇವ, ಸಂಗನಬಸವ, ಸಿದ್ಧರಾಮರ ಜನನ ಸಂಗತಿಯನ್ನು ನಿರೂಪಿಸುವ ಪದ್ಯಗಳು ಬರುತ್ತವೆ. ಸಂಗ್ರಹದಲ್ಲಿ ಮಡಿವಾಳ ಮಾಚಿದೇವ ಮತ್ತು ಸಂಗನ ಬಸವನಿಗೆ ಸುಬಂಧಿಸಿದ ಪದ್ಯಗಳನ್ನು ಸ್ವೀಕರಿಸಿಲ್ಲ. ಇವು ತೀರಾ ಸಂಕ್ಷಿಪ್ತವಾಗಿರುವು ದಲ್ಲದೆ ಅಲ್ಲಮನ ಕಥೆಯ ಮುಂದಿನ ಭಾಗದಲ್ಲಿ ಮಾಚಿದೇವ ಹಾಗೂ ಸಂಗನ ಬಸವರ ಪ್ರಸಕ್ತಿ ಇಲ್ಲದಿರುವುದರಿಂದ ಸಂಗ್ರಹಕಾರರು ಆ ಪದ್ಯಗಳನ್ನು ಬಿಟ್ಟಿರುವುದು ಸೂಕ್ತ ವಾಗಿದೆ. ವರ್ಣನಾಭಾಗಗಳಲ್ಲಿ ಮೂಲದ ಎಲ್ಲ ಪದ್ಯಗಳನ್ನೂ ಉಳಿಸಿಕೊಳ್ಳಲಾಗಿಲ್ಲ. ಇದು ಅನಿವಾರ್ಯವೂ ಹೌದು.

ಪ್ರಭುಲಿಂಗಲೀಲೆಯ ಸಂಗ್ರಹದ ಪಾಠನಿರ್ಣಯ ಮಾಡುವಾಗ ಎಂ. ಆರ್. ಶ್ರೀ. ಯವರು ಪಾಠಗಳನ್ನು ಲಾಟರಿ ಎತ್ತಿದಂತೆ ಮಾಡಿಲ್ಲ. ಪಾಠವನ್ನು ಅನುಭವಿಸಿ, ಆಸ್ವಾದಿಸಿ, ಜವಾಬ್ದಾರಿಯನ್ನು ಹೊತ್ತುಕೊಂಡು ಕವಿಮನೋಧರ್ಮಕ್ಕನುಗುಣವಾಗಿ ತೀರ್ಮಾನ ತೆಗೆದುಕೊಂಡಿದ್ದಾರೆ. ನಿದರ್ಶನಕ್ಕೆ ಒಂದು ಪದ್ಯ-

ಬಿಡು ಮರುಳೆ ಮನೆಯೇನು ಮಠವೇ
ನಡವಿಯೇನೂರೇನು ಬೇಙೂಂ
ದೆಡೆಗಳುಂಟೇ ಸರ್ವಗತನಾದ ಮಹಾತ್ಮಂಗೆ

ನುಡಿದುದೇ ಶಿವತತ್ವದಾಗಮ
ನಡೆದುದೇ ಶಿವಮಾರ್ಗ ಶರಣರ
ತೊಡಕು ತಾನೀ ಪರಿ ಕಣಾ ರಾಮಯ್ಯ ಕೇಳೆಂದ ೩೦೨

ಇಲ್ಲಿ ಬರುವ ಶರಣರ ತೊಡಕು ಎಂಬ ಪಾಠಕ್ಕೆ ಪ್ರತಿಯಾಗಿ ಶಿ. ಶಿ. ಬಸವನಾಳರು ತಮ್ಮ ಆವೃತ್ತಿಯಲ್ಲಿ ಇತರ ಹಸ್ತಪ್ರತಿಗಳಲ್ಲಿ ಕಂಡುಬರುವಂಥ 'ಶರಣರ ಬೆಡಗು' ಪಾಠವನ್ನು ಸ್ವೀಕರಿಸಿದ್ದಾರೆ. ಈ ಪಾಠವನ್ನು ಒಪ್ಪಿಕೊಂಡಿರುವುದಕ್ಕೆ, ಯಾವ ರೀತಿ ಗ್ರಹಿಸಿದರೆಂಬುದಕ್ಕೆ ಬಸವನಾಳರಲ್ಲಿ ಸೂಚನೆಗಳಿಲ್ಲ. ಎಂ. ಆರ್. ಶ್ರೀಯವರು ಬೆಡಗು ಪಾಠವನ್ನು ನೋಡಿರಬೇಕು. ಕ್ಲಿಷ್ಟಪಾಠವೇ ಸ್ವೀಕಾರಾರ್ಹವಾದ ಪಾಠ ಎಂಬ ಆಧಾರದ ಮೇಲೆ ತೊಡಕುಪಾಠವನ್ನು ಅಂಗೀಕರಿಸಿರುವರಲ್ಲದೆ ಅರ್ಥಕೋಶದಲ್ಲಿ ಆ ಪದವನ್ನು ಸಂಗ್ರಹಿಸಿ, ಗೊಡವೆ, ವಿಚಾರ ಎಂಬ ಅರ್ಥಗಳನ್ನು ಕೊಟ್ಟು ಸಮರ್ಥಿಸಿಕೊಂಡಿದ್ದಾರೆ. ಇದು ಎಂ. ಆರ್. ಶ್ರೀಯವರ ಪಾಠನಿರ್ಣಯದ ಪರಿ.

ಮಾಯೆಯನ್ನು ತಿರಸ್ಕರಿಸುವ ಸಂದರ್ಭದಲ್ಲಿ ಬರುವ "ಮನಸು ಸಂಚಲವಾದ ಮಾಯಾಂಗನೆಯದೇನಸು ಮುಟ್ಟಿ ಮಾಡಿದಡಿನಿತು ನಿಶ್ಚಲವಾಗಲಱಿಯದು" ಎಂಬ ಪದ್ಯದ 'ನಿಶ್ಚಲ' ಪಾಠಕ್ಕೆ ಬದಲಾಗಿ ಬಸವನಾಳರು 'ಸಂಚಲ' ಪಾಠವನ್ನು ಇಟ್ಟುಕೊಂಡಿದ್ದಾರೆ. ಸಂಚಲಕ್ಕೆ ವಿರುದ್ಧ ನಿಶ್ಚಲ. ಎಂ.ಆರ್.ಶ್ರೀ. ಸ್ವೀಕರಿಸಿರುವ ನಿಶ್ಚಲ ಪಾಠ ಸನ್ನಿವೇಶಕ್ಕೆ ಅನುಗುಣವಾಗಿದೆ.

ಸಂಪಾದಿತ ಗ್ರಂಥಗಳಿಗೆ ಪಾಠಾಂತರ ಕೊಡುವುದರಲ್ಲಿ ಒಬ್ಬೊಬ್ಬ ಸಂಪಾದಕರದೂ ಒಂದೊಂದು ಕ್ರಮ. ಆರ್. ಸಿ. ಹಿರೇಮಠ, ಆರ್. ಎಸ್. ಪಂಚಮುಖಿ ಮೊದಲಾದವರು ಒಂದು ಕೃತಿಗೆ ಸಿಕ್ಕುವ ಎಲ್ಲ ಪಾಠಗಳನ್ನು ಕೊಡುತ್ತ ಹೋಗಿದ್ದಾರೆ. ಇವರಲ್ಲಿ ಸಮಾನಾಂತರ ಶಬ್ದಗಳು ಅಕ್ಷರಸ್ಖಾಲಿತ್ಯಗಳು ಕೂಡ ಪಾಠಾಂತರಗಳಾಗಿ ಸೇರಿವೆ. ಹೀಗೆ ಇದ್ದ ಪಾಠವನ್ನೆಲ್ಲ ಕೊಡುವುದು ಓದುಗನನ್ನು ಗೊಂದಲಪುರಕ್ಕೆ ಅಟ್ಟುವಂಥ ಕೆಲಸ. ಶಿ. ಶಿ. ಬಸವನಾಳರು 1956 ರಲ್ಲಿ ಲಿಂಗಾಯಿತ ವಿದ್ಯಾಭಿವೃದ್ಧಿ ಸಂಸ್ಥೆ ಮೂಲಕ ಹೊರತಂದ ಪ್ರಭುಲಿಂಗಲೀಲೆಯ ಆವೃತ್ತಿಯಲ್ಲಿ ಕೆಲಮಟ್ಟಿಗೆ ಪಾಠಾಂತರಗಳನ್ನು ಸೂಚಿಸಿದ್ದಾರೆ. ಎಂ. ಆರ್. ಶ್ರೀ ಅವರ ತರುವಾಯದಲ್ಲಿ ವೀ. ರಂ. ಕೊಪ್ಪಳ, ವೀರಭದ್ರಪ್ಪ ಹಾಲಭಾವಿ, ಶಿ. ಶಿ. ಬಸವನಾಳ, ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ, ಎಸ್. ವಿದ್ಯಾಶಂಕರ—ಈ ವಿದ್ವಾಂಸರಿಂದ ಪ್ರಭುಲಿಂಗಲೀಲೆಯ ಹಲವು ಆವೃತ್ತಿಗಳು ಬಂದಿವೆ. ಇವರೆಲ್ಲ ಎಂ. ಆರ್. ಶ್ರೀಯವರ ಪಾಠಗಳನ್ನೆ ಬಹುಪಾಲು ಸ್ವಿಕರಿಸಿದ್ದಾರೆ. ಹೀಗೆ ಕವಿಗೆ ಸಮೀಪವಾದ ಪಾಠಗಳನ್ನೆ ನೀಡಿದ್ದು, ಸರ್ವಸಮ್ಮತವಾಗಿಯೂ ಇರುವುದು ಇವರ ಪಾಠಗಳ ಅಧಿಕೃತತೆಯನ್ನು ತೋರಿಸುತ್ತದೆ.

ಗ್ರಂಥಸಂಪಾದನೆಯ ಅಂತಿಮಘಟ್ಟ ಕವಿಕಾವ್ಯ ವಿಮರ್ಶೆಯ ಭಾಗ. ಎಂ. ಆರ್ ಶ್ರೀಯವರು ಪ್ರಸ್ತುತ ಕೃತಿಗೆ ಸುದೀರ್ಘವಾದ ಪೀಠಿಕೆ ಬರೆದು ಈ ವಿಷಯದಲ್ಲಿ ತಮಗಿರುವ ಆಳವಾದ ಅರಿವು ಪಾಂಡಿತ್ಯಗಳನ್ನು ಪ್ರದರ್ಶಿಸಿದ್ದಾರೆ. ಸುಮಾರು 63 ಪುಟಗಳ ವಿಸ್ತಾರವಾದ ಪೀಠಿಕೆಯಲ್ಲಿ ಚಾಮರಸನ ಕೃತಿಯ ವೈಶಿಷ್ಟ್ಯವೇ ಅಲ್ಲದೆ ಅಲ್ಲಮನಿಗೆ ಸಂಬಂಧಿಸಿದ ಅನೇಕ ಸಂಗತಿಗಳನ್ನು ಕೂಡಿಸಿಕೊಟ್ಟಿದ್ದಾರೆ. ಕರ್ತೃ, ಕವಿ ಕಾಲ ವಿಚಾರ, ಅಲ್ಲಮನ ಇತಿವೃತ್ತ, ಕಥಾಸಾರ, ಅಲ್ಲಮನ ಚರಿತ್ರೆಯಲ್ಲಿ ಕಂಡು ಬರುವ ಮಾರ್ಪಾಟುಗಳು, ಕಾವ್ಯ ವಿಮರ್ಶೆ, ವೀರಶೈವತತ್ತ್ವ, ಪ್ರಭುಲಿಂಗಲೀಲೆಯ ರಹಸ್ಯಾರ್ಥ, ಭಾಷಾಂತರಗಳು ಇವೇ ಮುಂತಾದ ಅನೇಕ ವಿಷಯಗಳನ್ನು ಪೀಠಿಕೆಯಲ್ಲಿ ಚರ್ಚಿಸಿದ್ದಾರೆ. ಕಾವ್ಯದಲ್ಲಿ ಎಲ್ಲಿಯೂ ಕವಿ ತನ್ನನ್ನು ಹೆಸರಿಸಿಕೊಳ್ಳದಿರುವುದನ್ನು ಸಂಗ್ರಹಕಾರರು ಗುರುತಿಸಿದ್ದಾರೆ. ಪ್ರಭುಲಿಂಗಲೀಲೆಯ ಕೆಲವು ಹಸ್ತಪ್ರತಿಗಳ ಆರಂಭ ದಲ್ಲಿ ನಾಲ್ಕು ಕಂದ ಒಂದು ವೃತ್ತ ಬರುತ್ತದೆ. ಇದರಲ್ಲಿ ಕವಿಯ ನಾಮ ನಿರ್ದೇಶವಿರು ವುದನ್ನು ಸಂಗ್ರಹಕಾರರು ಗಮನಿಸಿ, ಅವು ಪ್ರಕ್ಷಿಪ್ತ ಪದ್ಯಗಳೆಂದು ತೀರ್ಮಾನಿಸಿ ಪರಿಶಿಷ್ಟ ಭಾಗದಲ್ಲಿ ಕೊಟ್ಟಿರುವುದು ಸಮಂಜಸವಾಗಿದೆ. ತರುವಾಯದಲ್ಲಿ ಬಂದ ಸುಂಕಾಪುರ ಅವರು ಈ ಪದ್ಯಗಳು ಅನಂತರದ ಸೇರ್ಪಡೆಯೆಂದು ತಿಳಿದೂ ಪಠ್ಯದಲ್ಲಿ ಸೇರಿಸಿದ್ದಾರೆ. ಬಾಹ್ಯಸಾಕ್ಷಿಗಳಿಂದ ಪ್ರಭುಲಿಂಗಲೀಲೆಯ ಕರ್ತೃತ್ವ ಸ್ಪಷ್ಟವಾಗುವುದನ್ನು ಎಂ. ಆರ್. ಶ್ರೀ ತೋರಿಸಿಕೊಟ್ಟಿದ್ದಾರೆ. ಕವಿಕಾಲವನ್ನು ನಿರ್ಧರಿಸುವಾಗ ಇತರ ವಿದ್ವಾಂಸರ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಪ್ರೌಢದೇವರಾಯನ ಕಾಲದ ನೂರೊಂದು ವಿರಕ್ತರಲ್ಲಿ ಚಾಮರಸನೂ ಒಬ್ಬನಾಗಿದ್ದನೆಂಬುದರ ಆಧಾರದ ಮೇಲೆ ಈತನ ಕಾಲ ಕ್ರಿ. ಶ. ೧೪೩೦ ಇದ್ದಿರಬಹುದೆಂದು ಊಹಿಸಿದ್ದಾರೆ. ಈ ಕಾಲ ನಿರ್ಣಯಕ್ಕೆ ವಿದ್ವಾಂಸರ ಸಮ್ಮತಿಯೂ ದೊರೆತಿದೆ. ಎಂ. ಆರ್. ಶ್ರೀ. ವೀರಶೈವ ಕಾವ್ಯಗಳ ತಳಹದಿಯ ಮೇಲೆ. ಅಲ್ಲಮನ ಜೀವನ ವೃತ್ತವನ್ನು ರೇಖಿಸಲು ಯತ್ನಿಸಿ ಬಸವಣ್ಣನಿಗಿಂತ ಅಲ್ಲಮ ಹೇಗೆ ಭಿನ್ನನೆಂಬುದನ್ನು ನಿರೂಪಿಸಿದ್ದಾರೆ.

ಪ್ರಭುಲಿಂಗಲೀಲೆಯಲ್ಲಿ ಅಲ್ಲಮನ ಸಾಧಕ ಜೀವನದ ಉತ್ತರಾರ್ಧವನ್ನು ಮಾತ್ರ ಕಾಣುತ್ತೇವೆಯೆ ಹೊರತು ಅದರ ಪೂರ್ವದ ತೊಳಲಾಟವಾಗಲಿ ದ್ವಂದ್ವವಾಗಲಿ ಗೋಚರಿಸುವುದಿಲ್ಲವೆಂಬ ಅಂಶ ಕೂಡ ಮುಖ್ಯವಾದದ್ದು. ಅಲ್ಲಮನ ವ್ಯಕ್ತಿತ್ವದ ದೃಷ್ಟಿಯಿಂದ ಚಾಮರಸ ಮಾಡಿಕೊಂಡ ಮಾರ್ಪಾಟುಗಳು ಬಹು ಬೆಲೆಯುಳ್ಳವಾಗಿವೆ. ಹರಿಹರನಲ್ಲಿ ಅಲ್ಲಮನಿಗೆ ವೈರಾಗ್ಯ ಉಂಟಾಗುವುದು ಕಾಮಲತೆಯ ಮರಣಾನಂತರ. ಚಾಮರಸನ ಅಲ್ಲಮ ಮಾಯೆಯ ಮೋಹಕ್ಕೆ ಒಳಗಾಗದೆ ದೃಢತೆಯನ್ನು ತೋರಿದ್ದ ರಿಂದ ಆ ಬಳಿಕದ ಶೂನ್ಯಸಂಪಾದನೆಗಳಲ್ಲಿ, ವೀರಶೈವ ಕಾವ್ಯಗಳಲ್ಲಿ ಅಲ್ಲಮನ ವ್ಯಕ್ತಿತ್ವಕ್ಕೆ ನೂತನ ಆಯಾಮ ಒದಗಿತೆಂಬುದನ್ನು ಎಂ. ಆರ್. ಶ್ರೀ. ವಿವರವಾಗಿ ವಿಶ್ಲೇಷಿಸಿದ್ದಾರೆ. ಅಲ್ಲಮನ ಕಾಲದ ಕರ್ನಾಟಕದ ಧಾರ್ಮಿಕಸ್ಥಿತಿಗತಿಗಳನ್ನು ತಿಳಿಯ

ಲ್ಲೋಸಗ ಆ ಕಾಲದಲ್ಲಿ ನಡೆದ ವೀರಶೈವ ಮತೋದ್ಧಾರ ಕಾರ್ಯಗಳನ್ನು ಸ್ಥೂಲವಾಗಿ ಪರಿಚಯಿಸಿದ್ದಾರೆ. ಕಥಾಸಾರದ ಅಡಿಟಿಪ್ಪಣಿಯಲ್ಲಿ ಪ್ರಭುದೇವರ ರಗಳೆ, ಶಿವತತ್ತ್ವ ಚಿಂತಾಮಣಿ, ಪ್ರಭುದೇವರ ಪುರಾಣ, ಮಹಾದೇವಿಯಕ್ಕನ ರಗಳೆ, ಮಹಾದೇವಿ ಯಕ್ಕನ ಪುರಾಣ, ಸಿಂಗಿರಾಜಪುರಾಣ, ಚೆನ್ನಬಸವ ಪುರಾಣ, ಶೂನ್ಯಸಂಪಾದನೆ ಇವೇ ಮೊದಲಾದ ವೀರಶೈವಕೃತಿಗಳಲ್ಲಿ ಕಂಡುಬರುವಂಥ ಭಿನ್ನ ಅಂಶಗಳನ್ನು ಗುರುತಿಸಿ ರುವುದು ತೌಲನಿಕ ಅಧ್ಯಯನಕ್ಕೆ ದಿಕ್ಸೂಚಿಯಾಗಿದೆ. ಕಥಾಬೆಳವಣಿಗೆ, ಸನ್ನಿವೇಶ ನಿರ್ಮಾಣ, ಪಾತ್ರಪೋಷಣೆ, ವರ್ಣನೆ, ಶೈಲಿ ಮುಂತಾದ ಅಂಶಗಳನ್ನು ದೃಷ್ಟಿಯಲ್ಲಿಟ್ಟು ಕೊಂಡು ಕಾವ್ಯವಿಮರ್ಶೆಮಾಡಿ ಇದೊಂದು ಉತ್ತಮ ರಸಕಾವ್ಯವೆಂಬುದನ್ನು ಎಂ. ಆರ್. ಶ್ರೀ. ಸ್ಪಷ್ಟಪಡಿಸಿದ್ದಾರೆ. ಇಲ್ಲಿನ ವರ್ಣನೆಗಳು ಹಿತಮಿತವಾಗಿದ್ದು ಕವಿಯಶೈಲಿಯಲ್ಲಿ ಕುಮಾರವ್ಯಾಸ ಸ್ಮರಣೆಗೆ ಬಂದರೂ ಈತನ ಶಕ್ತಿ ಚಾಮರಸನಿಗೆ ಇಲ್ಲವೆಂಬ ಅರಿವು ಸಂಪಾದಕರಿಗಿದೆ. ಪ್ರಭುಲಿಂಗಲೀಲೆಯು ಇತರ ವೀರಶೈವ ಪುರಾಣಗಳಿಗಿಂತ ಭಿನ್ನವೆಂಬುದನ್ನು ಎಂ.ಆರ್.ಶ್ರೀ. ಗುರುತಿಸಿದ್ದರೂ ಅದಾವ ಕಾರಣ ದಿಂದಲೊ ಈ ಕಾವ್ಯವನ್ನು ವೀರಶೈವ ಪುರಾಣಗಳ ಗುಂಪಿಗೆ ಸೇರಿಸಿಬಿಟ್ಟಿದ್ದರು. ಮುಂದೆ ಈ ಕುರಿತು ವಿದ್ಯಾಶಂಕರ ಅವರು ಚರ್ಚಿಸಿ ಪ್ರಭುಲಿಂಗಲೀಲೆಯು ಪುರಾಣಗಳ ಸಾಲಿಗೆ ಒಳಪಡುವುದಿಲ್ಲವೆಂಬುದನ್ನು ಸಾಬೀತುಪಡಿಸಿದರು.

ಪ್ರಭುಲಿಂಗಲೀಲೆಯ ಸಂಗ್ರಹದಲ್ಲಿ ಬರುವ ತಾತ್ತ್ವಿಕಾಂಶಗಳನ್ನು ಅರ್ಥಮಾಡಿ ಕೊಳ್ಳಲು ವೀರಶೈವ ಸಿದ್ಧಾಂತದ ಸ್ಥೂಲಪರಿಚಯ ಮಾಡಿಕೊಟ್ಟಿರುವುದು ಉಪಯುಕ್ತ ವಾಗಿದೆ. ಇಲ್ಲಿ ಬರುವ ಅಂಕಿತನಾಮಗಳಲ್ಲಿ, ಕೆಲವೊಂದು ಸನ್ನಿವೇಶಗಳಲ್ಲಿ ಕೂಡ ತಾತ್ತ್ವಿಕಾಂಶವನ್ನು ಕಾಣುವ ಸಂಗ್ರಹಕಾರರು ಈ ನಿಟ್ಟಿನಲ್ಲಿ ತಮಗಿರುವ ತಜ್ಞತೆಯನ್ನು ಪೀಠಿಕೆಯಲ್ಲಿ ಬಳಸಿಕೊಂಡಿದ್ದಾರೆ. ಕನ್ನಡ ಪ್ರಭುಲಿಂಗಲೀಲೆಯ ಪ್ರಭಾವದಿಂದ ಮರಾಠಿ ತಮಿಳು ತೆಲುಗು ಸಂಸ್ಕೃತ ಭಾಷೆಗಳಲ್ಲಿ ರಚಿತವಾಗಿರುವ ಕೃತಿಗಳ ಸಾಮಾನ್ಯ ಪರಿಚಯವೂ ಪೀಠಿಕೆಯಲ್ಲಿ ಲಭ್ಯವಿದೆ. ಆ ಬಳಿಕ ಪರಿಶಿಷ್ಟ ಭಾಗದಲ್ಲಿ ಪ್ರಕ್ಷಿಪ್ತ ಪದ್ಯಗಳು ಮತ್ತು ಹರಿಹರನ ಪ್ರಭುದೇವರ ರಗಳೆಯನ್ನು ಕೊಡಲಾಗಿದೆ. ಅನಂತರ ಪ್ರಭುಲಿಂಗಲೀಲೆಯ ಕೆಲವೊಂದು ಸನ್ನಿವೇಶಗಳನ್ನು ಇತರ ವೀರಶೈವ ಕಾವ್ಯಗಳೊಂದಿಗೆ ತುಲನಾತ್ಮಕ ಅಭ್ಯಾಸ ಮಾಡಲಾಗಿದೆ.

ಪ್ರಾಚೀನ ಕಾವ್ಯಾಭ್ಯಾಸಕ್ಕೆ ಟಿಪ್ಪಣಿಗಳ ಅವಶ್ಯಕತೆಯನ್ನು ಮನಗಂಡು ಎಂ.ಆರ್.ಶ್ರೀ ಯವರು ಅನುಬಂಧ ಭಾಗದಲ್ಲಿ ತಾತ್ತ್ವಿಕ ವಿವರಗಳನ್ನು ಬೇಡುವ ೪೧ ಪದ್ಯಗಳಿಗೆ ಟಿಪ್ಪಣಿಯನ್ನೂ ಶಬ್ದಕೋಶವನ್ನೂ ಒದಗಿಸಿದ್ದಾರೆ. ಒಂದು ಸಂಪಾದಿತ ಕೃತಿಗೆ ಟಿಪ್ಪಣಿ ಹೇಗಿರಬೇಕೆಂಬುದಕ್ಕೆ ಇದೊಂದು ಮಾದರಿಯಾಗಿದೆ. ಹೀಗೆ ಪಠ್ಯಭಾಗ ಸಂಗ್ರಹವಾಗಿದ್ದರೂ ಪೂರಕ ಸಾಮಗ್ರಿ ಸಮೃದ್ಧವಾಗಿದೆ. ವೀರಶೈವ ಸಾಹಿತ್ಯ

ಲೋಕವನ್ನು ಅನಾವರಣಗೊಳಿಸುವಂತಿದೆ. ಒಟ್ಟಿನಲ್ಲಿ ಪ್ರಭುಲಿಂಗಲೀಲೆ ಆದರ್ಶ ಸಂಗ್ರಹಗಳಲ್ಲಿ ಒಂದಾಗಿದ್ದು ಇಂದಿಗೂ ತನ್ನ ಘನತೆಯನ್ನು ಉಳಿಸಿಕೊಂಡಿದೆ.

ಎಂ.ಆರ್.ಶ್ರೀಯವರು ಚನ್ನಬಸವ ಪುರಾಣ ಸಂಗ್ರಹವನ್ನು ಸಿದ್ಧಪಡಿಸಿದ ಕಾಲ ಖಚಿತವಾಗಿ ತಿಳಿಯದು. ಈ ಕೃತಿಯನ್ನು ಕನ್ನಡ ಸಾಹಿತ್ಯ ಪರಿಷತ್ತು 1976ರಲ್ಲಿ ಸಂಗ್ರಹಕಾರರ ಮರಣೋತ್ತರ ಪ್ರಕಟಿಸಿತು. ಚನ್ನಬಸವಪುರಾಣವನ್ನು ಮೊಟ್ಟ ಮೊದಲಿಗೆ ಶಿಲಾಮುದ್ರಣದಲ್ಲಿ ಬೆಳಕಿಗೆ ತಂದವನು ಮೋಗ್ಲಿಂಗ್. ಆ ಬಳಿಕ ಈ ಕಾವ್ಯಕ್ಕೆ ಸಂಬಂಧಿಸಿದಂತೆ ಐದು ಮಾರುಕಟ್ಟೆ ಆವೃತ್ತಿಗಳು ಹೊರಬಂದವು. ಶಿ. ಶಿ. ಬಸವನಾಳರು 1934ರಲ್ಲಿ ಒಂದು ಮುದ್ರಿತ ಪ್ರತಿ, ಐದು ಕಾಗದದ ಪ್ರತಿ, ಮೂರು ತಾಳೆ ಪ್ರತಿಗಳೆನ್ನು ಬಳಸಿಕೊಂಡು ಚನ್ನಬಸವ ಪುರಾಣವನ್ನು ಸಂಪಾದಿಸಿ ಕೊಟ್ಟರು. ಇದನ್ನು ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಸುಂದರವಾಗಿ ಪ್ರಕಟಿಸಿತು. ಮೋಗ್ಲಿಂಗ್‌ನಿಂದ ಆರಂಭವಾಗಿ ಇತ್ತೀಚಿನ ಎಂ. ಚಂದ್ರಶೇಖರ ಅವರ ಗದ್ಯಾನುವಾದ ವನ್ನೊಳಗೊಂಡ ಆವೃತ್ತಿಯವರೆಗೆ ಚನ್ನಬಸವಪುರಾಣದ ಹಲವು ಆವೃತ್ತಿಗಳು ಬಂದರೂ ಇದರ ಸಂಗ್ರಹಕ್ಕೆ ಕೈಹಾಕಿದವರು ಎಂ.ಆರ್.ಶ್ರೀ ಒಬ್ಬರೇ. ಆದರೆ ಗ್ರಂಥ ಸಂಪಾದನೆಯು ಶಾಸ್ತ್ರೀಯ ಶಿಸ್ತಾಗಿ ರೂಪುಗೊಳ್ಳುವ ಮುನ್ನವೇ ಬಂದ ಇವರ ಪ್ರಭುಲಿಂಗಲೀಲೆ ಸಂಗ್ರಹದಲ್ಲಿ ಕಂಡುಬರುವ ಅವಧಾನ ಕ್ರಮಬದ್ಧತೆ ಚನ್ನಬಸವ ಪುರಾಣ ಸಂಗ್ರಹದಲ್ಲಿ ಕಂಡುಬರುವುದಿಲ್ಲ.

ವಿರೂಪಾಕ್ಷ ಪಂಡಿತನ ಚನ್ನಬಸವಪುರಾಣ ೨೯೦೦ ವಾರ್ಧಕ ಷಟ್ಪದಿಗಳುಳ್ಳ ಒಂದು ಬೃಹದಾರಣ್ಯ. ಇಲ್ಲಿ ಶಿವನ ಪಂಚವಿಂಶತಿ ಲೀಲೆಗಳು, ರಾಜನೀತಿ, ಮಹಾಭಾರತ, ರಾಮಾಯಣ, ಶರಣರ ಆಖ್ಯಾನಗಳು, ಚೋಳರಾಜರ ವೃತ್ತಾಂತ, ಸಾನಂದ ಮುನಿಯ ಕಥೆ, ಪಿಂಡೋತ್ಪತ್ತಿ, ಕರಣಹಸಿಗೆ, ಮಠಸ್ಥಾಪನೆಯ ವಿಚಾರ, ಹರಿಹರ ರಾಘವಾಂಕ ಹಾಗೂ ವಿರಕ್ತರ ಕಥೆಗಳು, ಐತಿಹಾಸಿಕ ಅಂಶಗಳು ಬರುತ್ತವೆ. ಇಷ್ಟೆಲ್ಲ ಸಂಗತಿಗಳನ್ನು ಗರ್ಭೀಕರಿಸಿಕೊಂಡ ಈ ಪುರಾಣ ಕಾವ್ಯವನ್ನು ಎಂ.ಆರ್.ಶ್ರೀ. ೩೯೭ ಪದ್ಯಗಳಲ್ಲಿ ಸಂಗ್ರಹಿಸಿರುವುದು ದಟ್ಟ ಅರಣ್ಯವನ್ನು ಕಡಿದು ಪುಟ್ಟ ಉದ್ಯಾನವನ್ನು ಮಾಡಿದಂತಾಗಿದೆ.

ಚನ್ನಬಸವಪುರಾಣದಂಥ ಕೃತಿಗಳನ್ನು ಸಂಗ್ರಹಿಸುವಾಗ ಕಥೆಗೆ ಪ್ರಾಶಸ್ತ್ಯ ನೀಡಿದರೆ ಕವಿಯ ಆಶಯಕ್ಕೆ ಧಕ್ಕೆಯುಂಟಾಗುತ್ತದೆ. ಕವಿ ವೀರಶೈವ ಧರ್ಮದ ಸ್ವರೂಪವನ್ನು ಜನರ ಸಮೀಪಕ್ಕೆ ಕೊಂಡೊಯ್ಯುವ ಸಲುವಾಗಿ ಇಂಥ ಕೃತಿಗಳನ್ನು ರಚಿಸಿರುತ್ತಾನೆ. ಚನ್ನಬಸವಪುರಾಣ ಎಂಬುದು ವೀರಶೈವ ಧರ್ಮದ ಪ್ರಚಾರ ಮಾಧ್ಯಮವಾಗುತ್ತದೆಯೆ ಹೊರತು ಕವಿಯ ಧ್ಯೇಯವಲ್ಲ. ಹೀಗೆ ತರುವ ಸಂಗ್ರಹಗಳು ಕವಿಯ ಮನೋಧರ್ಮಕ್ಕೆ, ಧೋರಣೆಗಳಿಗೆ ಒಂದು ರೀತಿಯಲ್ಲಿ ವಿರುದ್ಧವಾದದ್ದೆ. ಎಂ.ಆರ್.ಶ್ರೀ. ಚೆನ್ನಬಸವನ ಜೀವನ ವಿವರ, ನಂದಿವಾಹನಲೀಲೆ, ದಕ್ಷಾಧ್ವರ ಧ್ವಂಸ,

ಗಿರಿಜಾಕಲ್ಯಾಣ, ತಾರಕಾಸುರ ಸಂಹಾರ, ಅಂಧಕಾಸುರ ವಧೆ, ಗಂಗಾಧರ ಲೀಲೆ, ಷಟ್ಸ್ಥಲ ನಿರೂಪಣೆಯ ಭಾಗಗಳನ್ನು ಮಾತ್ರ ಸೇರಿಸಿ ಸಂಗ್ರಹವನ್ನು ಸಿದ್ಧಪಡಿಸಿದ್ದಾರೆ. ಹೀಗೆ ಕಥಾವಸ್ತುವಿಗೆ ಮೊದಲೇ ಒಂದು ಲಕ್ಷ್ಮಣರೇಖೆ ಎಳೆದು ಸಂಗ್ರಹ ಕಾರ್ಯಕ್ಕೆ ತೊಡಗಿರುವುದರಿಂದ ಲೀಲೆಯಲ್ಲಿ ಕಂಡುಬರುವ ಸಮಗ್ರತೆ ಪುರಾಣದಲ್ಲಿ ಇಲ್ಲ. ಇದು ಒಂದು ಮಿತಿಗೆ ಒಳಪಟ್ಟಿದೆ. ಗ್ರಂಥಸಂಪಾದನೆಗೆ ಸಂಬಂಧಿಸಿದಂತೆ ಹಿಂದಿನ ಕೃತಿಯಲ್ಲಿ ಒದಗಿಸಿದಷ್ಟು ಮಾಹಿತಿಯನ್ನು ಪುರಾಣದಲ್ಲಿ ನೀಡದಿರುವುದರಿಂದ ಈ ಕಾರ್ಯದಲ್ಲಿ ಇವರು ಎಷ್ಟು ಪ್ರತಿಗಳನ್ನು ಬಳಸಿದರು, ಪಾಠನಿರ್ಣಯದಲ್ಲಿ ಅನುಸರಿಸಿದ ಕ್ರಮಗಳೇನೆಂಬುದು ವೇದ್ಯವಾಗುವುದಿಲ್ಲ. ಲೀಲೆಯಲ್ಲಿ ಪಾಠಾಂತರಗಳನ್ನು ನಮೂದಿಸದಿದ್ದರೂ ಪುರಾಣದಲ್ಲಿ ಪಾಠಾಂತರಗಳನ್ನು ಕೊಡಲು ಯತ್ನಿಸಿದ್ದಾರೆ. ಹಸ್ತಪ್ರತಿಗಳಿಗೆ ಸಂಕೇತಾಕ್ಷರಗಳನ್ನು ಸೂಚಿಸಿಲ್ಲ. ಆದುದರಿಂದ ಈ ಕಾರ್ಯ ಸಮರ್ಪಕವಾಗಿ ಆಗಿಲ್ಲ. ಎರಡು ಹಸ್ತಪ್ರತಿಯಿಂದ ಭಿನ್ನಪಾಠಗಳನ್ನು ಸಂಗ್ರಹಿಸಿದಂತೆ ಕಂಡು ಬರುತ್ತದೆ. ಒಟ್ಟಾರೆ ಮೂರು ಹಸ್ತಪ್ರತಿಗಳನ್ನು ಬಳಸಿಕೊಂಡಿರುವ ಸಾಧ್ಯತೆಯಿದೆ.

ಪಾಠಪರಿಷ್ಕರಣದಲ್ಲಿ ಎಂ.ಆರ್.ಶ್ರೀ. ಯಾವುದೊ ಒಂದು ಪ್ರತಿಯ ಪಾಠಗಳಿಗೆ ಆದ್ಯತೆ ನೀಡಿರುವಂತಿದೆ. ಉದಾಹರಣೆಗೆ—"ಎಂದಿಗೀ ಶಿವತತ್ವ ಷಟ್ಸ್ಥಲಂ ಸಕಲಗಣ ವೃಂದಕ್ಕೆ ಸಾಧ್ಯಮಹುದಲ್ಲಿ ಬೋಧಿಸುವರಾರೆಂದು ಕೃಪೆಯಿಂ ನಿರೂಪಿಸವೇಳ್ಕು ಮೆಮಗೆಂದು ನಂದಿಕೇಶಂ ನುಡಿದನು" (೩೪) ಎಂಬಲ್ಲಿ 'ನಂದಿಕೇಶಂ ನುಡಿದನು' ಎನ್ನುವಲ್ಲಿ 'ನಂದಿಕೇಶ್ವರಂ ನುಡಿಯಲು' ಎಂಬ ಪಾಠಾಂತರವಿದೆ. ಅರ್ಥದ ದೃಷ್ಟಿಯಿಂದ ಎರಡೂ ಸಮಾನ. ಆದರೆ ಮುಂದಿನ ಪದ್ಯ 'ಎಲೆ ನಂದೀಶ ಕೇಳ್' ಎಂದು ಆರಂಭಗೊಳ್ಳುವುದರಿಂದ ಅಡಿಟಿಪ್ಪಣಿಯ ಪಾಠವೇ ಸಮಂಜಸವಾಗಿದೆ. ಪದ್ಯ ೬೮ರಲ್ಲಿ 'ಸತ್ಕುಮಾರಂಗೆರಗಿ' ಎಂಬ ಪಾಠವನ್ನು ಸ್ವೀಕರಿಸಿದ್ದಾರೆ. ಆದರೆ ಅಡಿಟಿಪ್ಪಣಿಯಲ್ಲಿ ಕೊಟ್ಟಿರುವ 'ತತ್ಕುಮಾರಂಗೆರಗಿ' ಎಂಬ ಪಾಠವೇ ಸಂದರ್ಭಕ್ಕೆ ಯುಕ್ತವಾಗಿದೆ. ಪದ್ಯ ೧೧೮ರಲ್ಲಿ ಉಕ್ತವಾಗಿರುವ 'ಕಡಂಬ'ಕ್ಕೆ, 'ಮಡಂಬ' ಎಂದು ಪಾಠಾಂತರವಿದೆ. ಈ ಪದ್ಯದ ಮೊದಲ ಐದು ಸಾಲುಗಳಲ್ಲಿ ಗ್ರಾಮ, ನಗರ, ಪತ್ತನ, ಖರ್ವಡ ಎಂಬ ಶಬ್ದಗಳು ಬರುವುದರಿಂದ ಮುಂದಿನದು 'ಮಡಂಬ' ಎಂದಾಗಬೇಕೆ ಹೊರತು 'ಕಡಂಬ' ವೃಕ್ಷವಲ್ಲ. ಇಷ್ಟೆಲ್ಲ ಉತ್ತಮ ಪಾಠಗಳಿದ್ದೂ ಸಂಗ್ರಹಕಾರರು ಅಪಪಾಠಗಳಿಗೆ ಮೊರೆ ಹೊಕ್ಕಿರುವುದು ಆಶ್ಚರ್ಯವನ್ನುಂಟು ಮಾಡುತ್ತದೆ. ಮತ್ತೊಂದು ಕಡೆ 'ನೆಂದೊಡೀ ಕಾರ್ಯಾರ್ಥ-' (೧೦೦) ಎಂಬ ಪಾಠಕ್ಕೆ ಅಡಿಟಿಪ್ಪಣಿಯಲ್ಲಿ 'ನೆನ್ನದೀ ಕಾರ್ಯಾರ್ಥ' ಎಂಬ ಭಿನ್ನಪಾಠ ಕೊಟ್ಟು ಪಕ್ಕದಲ್ಲಿ Can it be ನೆನ್ನದಿರ್' ಎಂದು ಸೂಚಿಸಿದ್ದಾರೆ. ಹೀಗೆ ಸಂಗ್ರಹಕಾರರು ತಮ್ಮ Referenceಗಾಗಿ ಹಾಕಿಕೊಂಡ ಅಂಶಗಳೂ ಇಲ್ಲಿ ಎಡೆಪಡೆದಿವೆ.

ಎಂ.ಆರ್.ಶ್ರೀಯವರು ಲೀಲೆಯಂತೆ ಚನ್ನಬಸವಪುರಾಣ ಸಂಗ್ರಹಕ್ಕೂ ೫೪ ಪುಟಗಳಷ್ಟು ದೀರ್ಘವಾದ ವಿದ್ವತ್ಪೂರ್ಣವಾದ ಪೀಠಿಕೆಯನ್ನು ಬರೆದಿದ್ದಾರೆ. ಪಠ್ಯಭಾಗ ಅಪೂರ್ಣವೆನಿಸಿದರೂ ಪೀಠಿಕಾಭಾಗದಲ್ಲಿ ಸಂಪೂರ್ಣ ಕಾವ್ಯ ಅಧ್ಯಯನಕ್ಕೆ ಒಳಪಟ್ಟಿದೆ. ಶಿ. ಶಿ. ಬಸವನಾಳರ ಆವೃತ್ತಿಯಲ್ಲಿ ಕೂಡ ದೊಡ್ಡದಾದ ಪೀಠಿಕೆಯಿದೆ. ಆದರೆ ಅವರಲ್ಲಿ ಕಥಾಸಾರವೇ ಪೀಠಿಕೆಯ ಬಹುಭಾಗವನ್ನು ಆಕ್ರಮಿಸಿದೆ. ಎಂ.ಆರ್.ಶ್ರೀ ಅವರ ಪೀಠಿಕೆ ಹಾಗಾಗದೆ ತೌಲನಿಕ ದೃಷ್ಟಿಯಿಂದ ಕೂಡಿದ್ದು ವಿಮರ್ಶಾತ್ಮಕವಾಗಿ ಬಂದಿದೆ. ಆರಂಭದಲ್ಲಿ ಕವಿ ಕಾಲ ವಿಚಾರ ಕಥಾಸಾರವನ್ನು ಕೊಟ್ಟು ವಿರೂಪಾಕ್ಷ ಪಂಡಿತನ ತತ್ಪೂರ್ವದಲ್ಲಿ ಚನ್ನಬಸವನ ಚರಿತ್ರೆ ರಚಿತವಾಗದಿರುವುದಕ್ಕೆ ಈತನ ಜನನ ವಿಚಾರದಲ್ಲಿಯ ಜಟಿಲತೆಯೆ ಕಾರಣವಾಗಿರಬೇಕೆಂದು ಊಹಿಸಿದ್ದಾರೆ. ಅಂದಿನಿಂದ ಇತ್ತೀಚಿನ 'ಮಾರ್ಗ' ಕೃತಿಯವರೆಗೆ ಈ ವಿಚಾರ ವಿವಾದಕ್ಕೊಳಗಾಗಿರುವಂಥದ್ದು. ಎಂ.ಆರ್.ಶ್ರೀ. ಚನ್ನಬಸವನ ಜನನದ ಬಗ್ಗೆ ಬೇರೆ ಬೇರೆ ಕೃತಿಗಳಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಪರಿಶೀಲಿಸಿದ್ದಾರೆ. ಈಶ್ವರನ ಚಿಕ್ಕಳಾಮೃತ ಪ್ರಸಾದದಿಂದ ಕಲ್ಯಾಣದಲ್ಲಿ ಜನಿಸಿದ ಚನ್ನಬಸವನು ಬಸವಣ್ಣ ಐಕ್ಯನಾಗುವ ಕಾಲಕ್ಕೆ ೧೨ ವರ್ಷದ ಬಾಲಕನಾಗಿದ್ದನೆಂಬ ವಿರೂಪಾಕ್ಷ ಪಂಡಿತನ ಹೇಳಿಕೆಯನ್ನು ಪ್ರಶ್ನಿಸಿದ್ದಾರೆ. ಇವರು ಸಿಂಗಿರಾಜ ಪುರಾಣಕಾರನನ್ನು ಬೆಂಬಲಿಸುತ್ತ ಚನ್ನಬಸವಣ್ಣ ಬಾಗೇವಾಡಿಯಲ್ಲಿ ಜನಿಸಿದ, ಆತನ ತಂದೆ ಶಿವದೇವ, ವೀರಶೈವ ಕವಿಗಳು ಅಲೌಕಿಕ ವಾತಾವರಣವನ್ನುಂಟು ಮಾಡಲೋಸುಗ ನಾಗಲಾಂಬಿಕೆಯನ್ನು ದೂರಿಗೆ ಗುರಿಪಡಿಸಿದರೆಂದು ಅಭಿಪ್ರಾಯ ತಳೆಯುತ್ತಾರೆ. ಈ ಸಮನ್ವಯದ ಅಭಿಪ್ರಾಯವನ್ನೆ ವೀರಶೈವಧರ್ಮೀಯರು ಒಪ್ಪುತ್ತಾರೆ.

ಅನ್ಯವಿಷಯ ಬಾಹುಳ್ಯದಿಂದಾಗಿ ಚನ್ನಬಸವಪುರಾಣದಲ್ಲಿ ಕಥಾನಾಯಕನ ಜೀವನ ಚರಿತ್ರೆಗೆ ತಕ್ಕಷ್ಟು ಪ್ರಾಶಸ್ತ್ಯ ದೊರಕಲಿಲ್ಲವೆಂದು ಸಂಗ್ರಾಹಕರು ಗುರುತಿಸಿದ್ದಾರೆ. ಶಿವತತ್ತ್ವ ಚಿಂತಾಮಣಿ, ವೀರಶೈವಾಮೃತ ಮಹಾಪುರಾಣ ಮತ್ತು ಚನ್ನಬಸವ ಪುರಾಣಗಳು ಸಮಾನಾಂತರ ರೇಖೆಯಲ್ಲಿ ಸಾಗುವ ಕೃತಿಗಳು. ಎಂ.ಆರ್.ಶ್ರೀ. ಈ ಕಾವ್ಯಗಳನ್ನು ತೌಲನಿಕವಾಗಿ ವಿವೇಚಿಸಿ ವಸ್ತುವಿನ್ಯಾಸದಲ್ಲಿ ಸಾಮ್ಯತೆಯಿದ್ದರೂ ಕಾವ್ಯ ದೃಷ್ಟಿಯಿಂದ ಚನ್ನಬಸವ ಪುರಾಣವೆ ಉತ್ತಮವಾಗಿದೆಯೆಂದು ನಿರ್ಣಯಿಸಿದ್ದಾರೆ. ಇಡೀ ಕಾವ್ಯ ಚನ್ನಬಸವನು ಸಿದ್ಧರಾಮನಿಗೆ ಸಂಬೋಧಿಸಿದಂತಿರುವುದರಿಂದ ಸಿದ್ಧರಾಮನ ಪಾತ್ರ ಕೂಡ ಮಹತ್ವ ಪಡೆದಿದೆ. ಸಿದ್ಧರಾಮನಿಗೆ ದೀಕ್ಷೆಯಾಗಿತ್ತೆ ಇಲ್ಲವೆ ಎಂಬುದು ಇಂದು ತೀರ್ಮಾನವಾದ ಸಂಗತಿಯಾಗಿದೆ. ಆದರೆ ಎಂ.ಆರ್.ಶ್ರೀ. ಅವರ ಕಾಲದಲ್ಲಿ ಇದು ಸಾಕಷ್ಟು ಕೋಲಾಹಲವನ್ನುಂಟುಮಾಡಿತ್ತು. ಆಗ ನಡೆದ ಸಂಗತಿಗಳೆಲ್ಲ ಎಂ.ಆರ್.ಶ್ರೀಯವರ ಸ್ಮರಣೆಯಲ್ಲಿದ್ದಿರಬೇಕು. ಆದುದರಿಂದ ಪೀಠಿಕೆಯಲ್ಲಿ ಈ ಪ್ರಸಂಗವನ್ನು ವಿಶೇಷವಾಗಿ ಎತ್ತಿಕೊಂಡಿದ್ದಾರೆ. ಸಿದ್ಧರಾಮನಿಗೆ ದೀಕ್ಷೆಯಾದ ವಿಚಾರ

೧೫೦೦ರಿಂದ ಈಚೆಗೆ ರಚಿತವಾದ ಕೃತಿಗಳಲ್ಲಿ ಮಾತ್ರ ಪ್ರಸ್ತಾಪಿತವಾಗಿದೆಯೆಂದು ನಿರೂಪಿಸಿರುವುದು ಸರಿಯಾಗಿದೆ. ಆದರೆ ಚಾಮರಸನು ತನ್ನ ಕಾವ್ಯದಲ್ಲಿ ದೀಕ್ಷಾ ಪ್ರಕರಣವನ್ನು ಕೈಬಿಟ್ಟಿರುವುದಕ್ಕೆ ಕವಿ ಆತನಿಗೆ ದೀಕ್ಷೆಯಾಗಿತ್ತೆಂದು ತಿಳಿದಿದ್ದನೆಂದು ಸಂಗ್ರಹಕಾರರು ಹೇಳಿರುವುದು ದೂರಾನ್ವಯದ ಮಾತಾಗುತ್ತದೆ.

ವಿರೂಪಾಕ್ಷಪಂಡಿತ ತನ್ನ ಕಾವ್ಯದಲ್ಲಿ ಚನ್ನಬಸವಣ್ಣನ ವಚನಗಳನ್ನು ಸೂಕ್ತವಾಗಿ ಬಳಸದಿರುವುದನ್ನು ಗಮನಿಸಿಯೊ ಏನೊ ಎಂ.ಆರ್.ಶ್ರೀ. ತಮ್ಮ ಪೀಠಿಕೆಯಲ್ಲಿ ಆತನ ಮನೋಧರ್ಮವನ್ನು ಬಿಂಬಿಸುವಂಥ ವಚನಗಳನ್ನು ಯಥೇಚ್ಛವಾಗಿ ಉದ್ಧರಿಸಿ ಆ ವ್ಯಕ್ತಿತ್ವದ ಪರಿಚಯ ಮಾಡಿಕೊಟ್ಟಿದ್ದಾರೆ. "ತನು ಮನ ಬಳಲದೆ ಉದ್ದಂಡ ವೃತ್ತಿಯಲ್ಲಿ ಧನವಗಳಿಸಿ" ಎಂಬ ವಚನವನ್ನು ಉಲ್ಲೇಖಿಸಿ "ಸಮಾಜದಲ್ಲಿ ಪ್ರತಿಯೊಬ್ಬನೂ ಉತ್ಪಾದಕನಾಗಿದ್ದು ಹಣವನ್ನು ಸಂಪಾದಿಸಿ ದೇಶದ ಸಂಪತ್ತನ್ನು ಹೆಚ್ಚಿಸಬೇಕೆಂಬ ದೊಡ್ಡ ಆರ್ಥಿಕ ತತ್ತ್ವ ಚೆನ್ನಬಸವಣ್ಣನ ವಚನಗಳಲ್ಲಿ ಕಂಡುಬರುತ್ತದೆ" ಎಂದಿರುವಲ್ಲಿ ಎಂ.ಆರ್.ಶ್ರೀ ಅವರ ವಿಮರ್ಶೆಯಲ್ಲಿನ ಒಳನೋಟಗಳನ್ನು ಗುರುತಿಸ ಬಹುದು.

ಚನ್ನಬಸವ ಪುರಾಣ ಸಂಗ್ರಹಕ್ಕೆ ದೀರ್ಘವಾದ ಪೀಠಿಕೆಯಿದ್ದರೂ ಇದು ಅಪೂರ್ಣವಾಗಿರುವಂತೆ ಭಾಸವಾಗಿರುತ್ತದೆ. ಸಂಗ್ರಾಹಕರು ಕವಿಯ ಶೈಲಿ ಇತ್ಯಾದಿ ಹೇಳಿದ ಬಳಿಕ ಇನ್ನೇನು ಪೀಠಿಕೆ ಮುಗಿತಾಯಕ್ಕೆ ಬಂದಿತೆನ್ನುವಷ್ಟರಲ್ಲಿ ಮತ್ತೊಮ್ಮೆ ದೀಕ್ಷಾಪ್ರಕರಣವನ್ನು ಎತ್ತಿಕೊಳ್ಳುತ್ತಾರೆ. ಇಂಥ ನ್ಯೂನತೆಗಳಿದ್ದರೂ ಕೃತಿಯನ್ನು ಕುರಿತಂತೆ ಮೌಲಾಯುತವಾದ ವಿಮರ್ಶೆ ನಡೆದಿದೆ. ಈ ಸಂಗ್ರಹದ ಕಥಾಸಾರವನ್ನು ಆರ್. ಎಸ್. ರಾಮರಾವ್, ಟಿ. ಆರ್. ಮಹಾದೇವಯ್ಯನವರು ಬರೆದು ಹಿನ್ನುಡಿಯಲ್ಲಿ ಪ್ರಕಟಿಸಿದ್ದಾರೆ. ಕಡೆಯಲ್ಲಿ ಕೊಟ್ಟಿರುವ ಅರ್ಥಕೋಶ ಉಪಯುಕ್ತವಾಗಿದೆ.

ಎಂ.ಆರ್.ಶ್ರೀಯವರ ಎರಡೂ ಸಂಪಾದಿತ ಕೃತಿಗಳನ್ನು ಒಟ್ಟಾರೆ ನೋಡಿದಾಗ ಪ್ರಭುಲಿಂಗಲೀಲೆಯ ಸಂಗ್ರಹದಲ್ಲಿ ಕಂಡು ಬರುವ ಸುಸಂಬದ್ಧತೆ ಚನ್ನಬಸವ ಪುರಾಣ ಸಂಗ್ರಹದಲ್ಲಿ ಇಲ್ಲವಾಗಿದೆ. ಮೊದಲ ಕೃತಿ ಎಂ.ಆರ್.ಶ್ರೀಯವರ ಕಣ್ಣಳತೆಯಲ್ಲಿ ಪ್ರಕಟವಾದುದರಿಂದ ಅವರ ಸಂಪಾದನ ಸಾಮರ್ಥ್ಯದ ಎಲ್ಲ ಅಂಶಗಳನ್ನು ಒಳಗೊಳ್ಳಲು ಸಾಧ್ಯವಾಯಿತು. ಎರಡನೆಯ ಕೃತಿ ಅವರ ಕಾಲಾಂತರದಲ್ಲಿ ಮುದ್ರಿತವಾದ ಕಾರಣ ಕೆಲವೊಂದು ಅರೆಕೊರೆಗಳು ಉಳಿಯುವಂತಾಯಿತು. ಅವರು ಬದುಕಿರುವಾಗಲೇ ಚನ್ನಬಸವಪುರಾಣ ಸಂಗ್ರಹವು ಪ್ರಕಟವಾಗಿದ್ದರೆ ಇನ್ನಷ್ಟು ಪರಿಷ್ಕರಣಗೊಳ್ಳು ತ್ತಿದ್ದುವರಲ್ಲಿ ಸಂದೇಹವಿಲ್ಲ. ಪ್ರಾಚೀನ ಕಾವ್ಯಗಳನ್ನು ಮೂಲ ಪಾಠಕ್ಕೆ ಸನಿಹವಾದ ರೀತಿಯಲ್ಲಿ ಸಂಪಾದಿಸಿ ಅವುಗಳ ವ್ಯಾಸಂಗಕ್ಕೆ ಅಗತ್ಯವಾದ ಪ್ರಸ್ತಾವನೆ ಟಿಪ್ಪಣಿ

ಅರ್ಥಕೋಶ ಮೊದಲಾದ ಪರಿಕರಗಳನ್ನೆಲ್ಲ ಎಂ.ಆರ್.ಶ್ರೀ ಒದಗಿಸಿದ್ದಾರೆ. ಬಿ.ಎಂ.ಶ್ರೀ, ಎ.ಆರ್.ಕೃ, ಎಂ.ಆರ್.ಶ್ರೀ ಇಂಥ ವಿದ್ವಾಂಸರದು ಶತಶತಮಾನದಿಂದ ಬಂದ ಪಂಡಿತ ವರ್ಗದಿಂದ ಭಿನ್ನವಾಗಿ ನಿಲ್ಲುವಂಥ ಮನೋಧರ್ಮ. ಇವರಿಗೆ ಪಾಶ್ಚಾತ್ಯ ಶಿಕ್ಷಣ ಪ್ರಾಪ್ತವಾದುದರಿಂದ ವಸ್ತುವನ್ನು ವಿನೂತನ ದೃಷ್ಟಿಕೋನದಿಂದ ತೂಗಿ ನೋಡುವ, ಬೆಲೆ ಕಟ್ಟುವ ಶಕ್ತಿ ಸಾಧ್ಯವಾಯಿತು. ಈ ಮೂಲಕ ಪ್ರಾಚೀನ ಕನ್ನಡ ಕೃತಿಗಳ ಅಧ್ಯಯನಕ್ಕೆ ಉತ್ತಮ ವೇದಿಕೆ ನಿರ್ಮಾಣವಾಯಿತು.

ನಮ್ಮ ಕನ್ನಡ ಬೆಳೆಯಲು ವಿಪುಲವಾಗಿ ಹೊಸ ಶಬ್ದಗಳೂ ಅರ್ಥವತ್ತಾದ ವಿಶೇಷಗಳೂ ಬೇಕಾಗಿವೆ. ಬೆಳವಣಿಗೆ ಸಹಜವೂ ಸುಂದರವೂ ಆರೋಗ್ಯಕರವೂ ಆಗಬೇಕಲ್ಲದೆ, ರೋಗ ರೂಪವಾದ ವಿಕಾರವಾಗಬಾರದು. ಭಾಷೆಯ ಸೌಂದರ್ಯವನ್ನೂ ಆರೋಗ್ಯವನ್ನೂ ನೋಡಿಕೊಳ್ಳತಕ್ಕದ್ದು ವ್ಯಾಕರಣವಲ್ಲದೆ ಇನ್ನಾವುದು ?

—ಶ್ರೀ ಎನ್. ರಂಗನಾಥ ಶರ್ಮಾ

ಧೀರೋದಾತ್ತ ದುಷ್ಯಂತ

ಟಿ. ಎನ್. ಪದ್ಮನಾಭನ್

ಸಂಸ್ಕೃತ ಕಾವ್ಯರಾಶಿಯಲ್ಲಿ ಮಹಾಕವಿ ಕಾಳಿದಾಸನ ಶಾಕುಂತಲ ನಾಟಕದ ಸ್ಥಾನ ಬಹಳ ದೊಡ್ಡದು. ಈ ನಾಟಕವು ಭರತ ಖಂಡಕ್ಕೆ ಮಾತ್ರವಲ್ಲದೆ ಸಕಲ ಜಗತ್ತಿಗೂ ಮಾನ್ಯವಾದದ್ದು. ಇದರಲ್ಲಿಯ ಅತ್ಯಂತ ಶ್ರೇಷ್ಠವಾದ ಕಾವ್ಯಗುಣವನ್ನು ಗ್ರಹಿಸದ ಪಂಡಿತರಿಲ್ಲ. ಇಲ್ಲಿಯ ರಸ ನಿರೂಪಣೆ ಅನನ್ಯ ಸಾಧಾರಣವಾದದ್ದು. ಭಾವ ಪರಿಪೋಷಣೆ ಹೃದಯಂಗಮವಾದದ್ದು ಮತ್ತು ಇಲ್ಲಿ ಬರುವ ವಿಚಾರಮಂಥನ ಸಾರ್ವಕಾಲಿಕವಾದದ್ದು. ಶಾಕುಂತಲ ನಾಟಕವು ಸರ್ವಜನಗ್ರಾಹ್ಯವಾಗಿರುವುದು ಇವಿಷ್ಟರಿಂದ ಮಾತ್ರವಲ್ಲ. ಚಾರಿತ್ರ್ಯ ಮತ್ತು ಸದ್ವರ್ತನೆಗಳಿಂದ ಬೆಳಗುವ ಪಾತ್ರಗಳ ಸೃಷ್ಟಿ ಕಾವ್ಯದ ಮೌಲ್ಯವನ್ನು ಹೆಚ್ಚಿಸಿದೆ. ಶಾಕುಂತಲ ನಾಟಕವನ್ನು ಒಂದು ಧರ್ಮಗ್ರಂಥವೆಂದು ಹೇಳುವುದುಂಟು. ಈ ಧರ್ಮಗ್ರಂಥದಲ್ಲಿ ಕವಿಯು ಮೂರು ದೊಡ್ಡ ಪಾತ್ರಗಳನ್ನು ನಿರ್ಮಿಸಿದ್ದಾನೆ. ಈ ಪಾತ್ರತ್ರಯದಲ್ಲಿ ದುಷ್ಯಂತ ಚಕ್ರವರ್ತಿಯ ಪಾತ್ರ ಒಂದು.

ದುಷ್ಯಂತನು ಶಾಕುಂತಲ ನಾಟಕದ ನಾಯಕ. ಆತನನ್ನು ಧೀರೋದಾತ್ತ ನಾಯಕನೆಂದು ಕರೆದಿದ್ದಾರೆ. 'ಸಾಹಿತ್ಯ ದರ್ಪಣ'ದ ಪ್ರಕಾರ ಧೀರೋದಾತ್ತ ನಾಯಕನು ಅವಿಕತ್ಥನನೂ ಅತಿಗಂಭೀರನೂ ಕ್ಷಮಾಶೀಲನೂ ಮಹಾಸತ್ತ್ವನೂ ಮತ್ತು ದೃಢವ್ರತನೂ ಆಗಿರುವವನು. ಈ ಧೀರೋದಾತ್ತ ಗುಣಗಳು ದುಷ್ಯಂತನಲ್ಲಿ ಸಂಪೂರ್ಣವಾಗಿ ಅಭಿವ್ಯಕ್ತವಾಗಿವೆ. ಸತ್ತ್ವಸಂಪನ್ನತೆಯಿಂದ ದುಷ್ಯಂತ ಚಕ್ರವರ್ತಿಯ ಧೀರೋದಾತ್ತತೆಗೆ ಶೋಭೆಯನ್ನುಂಟುಮಾಡಿರುವ ಸಂದರ್ಭಗಳು ನಾಟಕದಲ್ಲಿ ಹಲವಾರುಂಟು. ಅವುಗಳಲ್ಲಿ ಕೆಲವನ್ನು ನೋಡೋಣ.

ಯಥಾರ್ಥ ಜ್ಞಾನ ನಿಷ್ಠೆ :

ಶಕುಂತಲೆಯು ಪರಮೇಷ್ಠಿಯ ಸೃಷ್ಟಿ ಕೌಶಲದ ಅತ್ಯಂತ ದೆಶೆ. ಆಕೆಯು ಸರ್ವಾಂಗ ಸೌಂದರ್ಯದಿಂದ ಶೋಭಿಸುತ್ತಾ ಕಣ್ವಾಶ್ರಮದಲ್ಲಿ ಸಖಿಯರೊಡನೆ

ಅನಸೂಯೆ ಮತ್ತು ಪ್ರಿಯಂವದೆಯರೊಂದಿಗೆ ಆಶ್ರಮದ ತರುಲತೆಗಳಿಗೆ ಜಲಸೇಚನೆ ಮಾಡುತ್ತಿರುವಾಗ ಮೃಗಯಾರ್ಥವಾಗಿ ಹೊರಟು ಒಂದು ಜಿಂಕೆಯು ಬೆನ್ನಟ್ಟಿ ಬಂದ ದುಷ್ಯಂತ ಮಹಾರಾಜನ ಕಣ್ಣಿಗೆ ಕಾಣಿಸಿಕೊಳ್ಳುತ್ತಾಳೆ. ಪ್ರಥಮ ದರ್ಶನದಲ್ಲೇ ಆಕೆಯ ಲೋಕೋತ್ತರವಾದ ರೂಪಲಾವಣ್ಯಗಳಿಗೆ ದುಷ್ಯಂತನ ಮನಸ್ಸು ಸೋಲುತ್ತದೆ. ಆಕೆಯನ್ನು ಪರಿಗ್ರಹಿಸಬೇಕೆಂಬ ತೀವ್ರಾಭಿಲಾಷೆ ಆತನಲ್ಲಿ ರೂಢಮೂಲವಾಗುತ್ತದೆ. ದುಷ್ಯಂತನು ಸಾಮ್ರಾಜ್ಯಾಧೀಶ್ವರನು. ಆದ್ದರಿಂದ ಸಾಮ್ರಾಜ್ಯದ ಸಮಸ್ತ ಸಂಪತ್ತಿಗೂ ಪ್ರಭು. ತನ್ನ ಅಭೀಷ್ಟ ಸಾಧನೆಗೆ ಬೇಕಾದ ಎಲ್ಲಾ ಸಾಧನ ಸಂಪತ್ತನ್ನೂ ಹೊಂದಿರುವವನು. ಆದರೂ ಆತನು ಉಚ್ಛೃಂಖಲ ವೃತ್ತಿಯನ್ನಾಶ್ರಯಿಸದೆ ವಿಚಾರಮಗ್ನನಾಗುತ್ತಾನೆ. ಶಕುಂತಲೆಯು ನಿಜವಾಗಿಯೂ ಬ್ರಾಹ್ಮಣ ಕನ್ಯೆಯೆ ? ಹಾಗಿದ್ದಲ್ಲಿ ಆಕೆಯು ಕ್ಷತ್ರಿಯ ಪರಿಗ್ರಹಕ್ಕೆ ಯೋಗ್ಯಳಲ್ಲವಲ್ಲಾ ; ಆಕೆಯ ಆಕೃತಿ ವಿಶೇಷವನ್ನು ಗಮನಿಸಿದರೆ ನಿಸ್ಸಂಶಯವಾಗಿ ಕ್ಷತ್ರಿಯ ಸಂಜಾತಳೆಂದು ಕಾಣುತ್ತಾಳೆ ; ಇದು ಸತ್ಯಾಂಶವಾದರೆ ಆಕೆಯು ಕುಲಪತಿಗಳಾದ ಕಣ್ವ ಋಷಿಗಳ ಆಶ್ರಮದಲ್ಲಿದ್ದುಕೊಂಡು ಆಶ್ರಮದ ಕಠೋರ ಜೀವನವನ್ನಂಗೀಕರಿಸುವುದಕ್ಕೆ ಕಾರಣವಾದರೂ ಏನಿರಬಹುದು ? ಸಂದರ್ಭದ ಯಥಾರ್ಥ ತತ್ತ್ವವೇನು ? ಇವೇ ಮೊದಲಾದ ವಿಚಾರ ತರಂಗಗಳು ದುಷ್ಯಂತನ ಮನಸ್ಸನ್ನು ಕಲಕುತ್ತವೆ. ಶಕುಂತಲೆಯನ್ನು ವಶಪಡಿಸಿಕೊಳ್ಳಲು ಆತನಿಗೆ ಪ್ರಭುತ್ವವಿದ್ದರೂ ಔಚಿತ್ಯದ ಪ್ರಶ್ನೆ ಆತನನ್ನು ಚಿಂತೆಗೆ ಈಡುಮಾಡುತ್ತದೆ. ಕೊನೆಗೆ ತನ್ನ ಅಂತಃಕರಣ ಪ್ರವೃತ್ತಿಯು ಸತ್ಯಾಂಶವನ್ನು ಕಂಡುಕೊಳ್ಳುತ್ತದೆ. ಅದರೂ ಅಂತರಂಗಕ್ಕೆ ಋಜುವಾತಾದ ಜ್ಞಾನವು ಅನಸೂಯೆ ಮತ್ತು ಪ್ರಿಯಂವದೆಯರ ಶಕುಂತಲಾ ಜನ್ಮವೃತ್ತಾಂತ ಕಥನದಿಂದ ಪರಿಪುಷ್ಟವಾದ ನಂತರವೇ ಆಕೆಯನ್ನು ಹೊಂದುವುದರಲ್ಲಿ ಮನಸ್ಸು ಬದ್ಧಾದರವಾಗುವುದು. ಇದು ಆರ್ಯವಂಶೋತ್ಪನ್ನನಾದ ದುಷ್ಯಂತ ಮಹಾರಾಜನ ಯಥಾರ್ಥ ಜ್ಞಾನನಿಷ್ಠೆ.

ಆರ್ಜವ :

ಶಕುಂತಲೆಯನ್ನು ಕ್ಷತ್ರಿಯವಿಹಿತವಾದ ಗಾಂಧರ್ವ ವಿವಾಹದಿಂದ ಪರಿಗ್ರಹಿಸಿದ್ದಾಗಿದೆ. ಆಶ್ರಮ ಭೂಮಿಯಲ್ಲಿ ಆಕೆಯ ಸಾಹಚರ್ಯೆಯಲ್ಲಿ ಸ್ವಲ್ಪ ಕಾಲ ಕಳೆದ ನಂತರ ಅನತಿ ಕಾಲದಲ್ಲಿಯೇ ಅರಮನೆಗೆ ಕರೆಯಿಸಿಕೊಳ್ಳುವುದಾಗಿ ಆಶ್ವಾಸನವನ್ನಿತ್ತು ಅಭಿಜ್ಞಾನಕ್ಕಾಗಿ ಆತ್ಮನಾಮಾಂಕಿತವಾದ ಅಂಗುಳೀಯಕವನ್ನು ತೊಡಿಸಿ ತನ್ನ ಅರಮನೆಗೆ ಹಿಂದಿರುಗಿದ್ದಾನೆ. ಸೋಮ ತೀರ್ಥಕ್ಕೆ ಹೋಗಿದ್ದ ಭಗವಾನ್ ಕಣ್ವ ಮುನಿಗಳು ದುಷ್ಯಂತ ರಾಜನೊಂದಿಗೆ ಸೇರಿ ಸುಶಿಷ್ಯ ಪರಿದತ್ತವಾದ ವಿದ್ಯೆಯಂತೆ ಶೋಭಿಸುತ್ತಿದ್ದ ಮಗಳನ್ನು ಅನುನಯುಗೊಳಿಸಿ ಸಕಲ ಸಂಭ್ರಮಗಳೊಂದಿಗೆ ಶಾರ್ಙ್ಗರವ, ಶಾರದ್ವತ ಮತ್ತು ಗೌತಮಿಯರ ಜತೆಯಲ್ಲಿ ದುಷ್ಯಂತನ ಅರಮನೆಗೆ

ಕಳುಹಿಸುತ್ತಾರೆ. ಸಾಮ್ರಾಟ್ ದುಷ್ಯಂತನನ್ನು ಕೂಡಲು ಹೊರಟಿರುವ ಗರ್ಭಿಣಿ ಶಕುಂತಲೆಯ ಮನಸ್ಸು ಭವಿತವ್ಯದ ಸುಖಸಂತೋಷಗಳ ಭವ್ಯ ಸೌಧಾರಾಮಗಳನ್ನು ನಿರ್ಮಿಸುತ್ತಿದೆ. ಆದರೆ ದೈವತಂತ್ರ ವಿಪರೀತವಾಗಿ ಪರಿಣಮಿಸಿದೆ. ದೂರ್ವಾಸರ ಶಾಪದ ಪ್ರಭಾವದಿಂದ ದುಷ್ಯಂತನ ಮನಸ್ಸಿಗೆ ವಿಸ್ಮೃತಿಯುಂಟಾಗಿದೆ. ಈ ಕಾರಣದಿಂದ ತಾನು ಶಕುಂತಲೆಯಲ್ಲಿ ಮಾಡಿದ ಪೂರ್ವಸಂಬಂಧದ ಸ್ಮೃತಿ ಆತನಿಗೆ ಅಳಿಸಿಹೋಗಿದೆ. ಈ ಸ್ಥಿತಿಯಲ್ಲಿರುವ ಆತನ ಬಳಿಗೆ "ರೂಪ ಧರಿಸಿದ ಸತ್ಕ್ರಿಯೆ"ಯೋ ಎಂಬಂತೆ ತೇಜಸ್ಸಿನಿಂದ ಕೂಡಿರುವ ಶಕುಂತಲೆಯನ್ನು ಕರೆತಂದು ಆಕೆಯನ್ನು ಪರಿಗ್ರಹಿಸುವಂತೆ ಕಣ್ವ ಶಿಷ್ಯರು ಕಾಶ್ಯಪರ ಸಂದೇಶದ ಮೂಲಕ ಒಪ್ಪಿಸುತ್ತಾರೆ. ಆಪನ್ನಸತ್ವಳಾದ ಆಕೆಯನ್ನು ನೋಡುತ್ತಲೇ ದುಷ್ಯಂತನಲ್ಲಿ ಉಂಟಾಗುವ ಭಾವನೆಗಳಾದರೂ ಏನು ?

ಇದಮುಪನತ ಮೇವಂ ರೂಪಮಕ್ಲಿಷ್ಟಕಾಂತಿ
ಪ್ರಥಮ ಪರಿಗೃಹೀತಂ ಸ್ಯಾನ್ನವೇತಿ ವ್ಯವಸ್ಯನ್
ಭ್ರಮರ ಇವ ವಿಭಾತೇ ಕುಂದಮಂತಸ್ತುಷಾರಂ
ನಚಖಲು ಪರಿಭೋಕ್ತುಂ ನೈವ ಶಕ್ನೋಮಿಹಾತುಂ.

ಅಪ್ರಯತ್ನವಾಗಿ ಪ್ರಾಪ್ತವಾಗಿರುವ ಈಕೆಯು ನಿಷ್ಕಳಂಕವಾದ ರೂಪರಾಶಿಯಾಗಿದ್ದಾಳೆ. ಆದರೆ ಆಕೆಯಲ್ಲಿ ಮಾಡಿದ ಪೂರ್ವಸಂಬಂಧದ ನೆನಪು ರಾಜನಿಗೆ ಬರುತ್ತಿಲ್ಲ. ರೂಪು ಆಕೆಯನ್ನು ಅಂಗೀಕರಿಸುವಂತೆ ಮನಸ್ಸನ್ನು ಪ್ರೇರಿಸುತ್ತದೆ. ಪೂರ್ವ ಸಂಬಂಧದ ವಿಸ್ಮೃತಿಯಿಂದ ಮನಸ್ಸು ಪರಪರಿಗ್ರಹಪರಾಙ್ಮುಖವಾಗಿದೆ. ಹಿಮಾಚ್ಛಾದಿತವಾದ ಕಮಲ ಪುಷ್ಪದ ಮಧುವನ್ನು ಅನುಭವಿಸಲೂ ಆರದ ಆದರೆ ಬಿಡಲೂ ಆರದ ಭ್ರಮರದಂತೆ ಪರಿತಾಪ ಪಡುತ್ತಾನೆ. ಮನಸ್ಸು ಬೇಕೆಂದರೂ ಅಂತರಂಗ ಪ್ರಮಾಣವಿಲ್ಲದೆ ಆಕೆಯನ್ನು ಅಂಗೀಕರಿಸಲು ಆತನು ಸಮ್ಮತಿಸುವುದಿಲ್ಲ. ಇದು ಆತನ ಋತಪ್ರಜ್ಞೆ. ಸತ್ಯಾಂಶಗೋಚರವಾಗದಿರಲಾಗಿ ಆಕೆಯನ್ನು ತ್ಯಜಿಸುವುದೇ ಸರಿಯೆಂಬ ನಿರ್ಣಯಕ್ಕೆ ಬರುತ್ತಾನೆ. ತನ್ನವಳೆಂಬುದಕ್ಕೆ ಅಂತರಂಗ ಪ್ರಮಾಣವಿಲ್ಲದ್ದರಿಂದ ಆಕೆಯು ಪರನಾರಿಯಾಗುತ್ತಾಳೆ. ಪರನಾರೀ ಪರಿಗ್ರಹವು ಪಾಪಪ್ರಸಂಗವಾಗುತ್ತದೆ. ಒಂದು ವೇಳೆ ಕಣ್ವ ಶಿಷ್ಯರು ಹೇಳುವಂತೆ ಆಕೆಯು ತನ್ನವಳಾಗಿದ್ದು ಆಕೆಯನ್ನು ನಿರಾಕರಿಸಿದರೆ ಸ್ವದಾರ ತ್ಯಾಗವೂ ಪಾಪಕರ್ಮವಾಗುತ್ತದೆ. ಈ ರೀತಿಯಾಗಿ ಸಂದರ್ಭವು ಜಟಿಲವಾಗಿ ತಾನು ಆಚರಿಸಬೇಕಾದ ಧರ್ಮವಾವುದೆಂದು ಆತನ ಮನಸ್ಸು ಸಂಕಟಪಡುತ್ತದೆ. ಕೊನೆಗೆ ಪರಸ್ತ್ರೀ ಸ್ಪರ್ಶದ ಪಾತಕಕ್ಕಿಂತ ಸ್ವದಾರಾ ಪರಿತ್ಯಾಗದ ಪಾತಕವನ್ನೇ ಅಂಗೀಕರಿಸುತ್ತಾನೆ.

"ದಾರತ್ಯಾಗೀ ಭವಾಮ್ಯಾಹೋ ಪರಸ್ತ್ರೀ ಸ್ಪರ್ಶಪಾಂಸುಲಃ"

ಇದು ಆತನ ಸ್ವಭಾವ. ಅಂತರಾತ್ಮ ಪ್ರಮಾಣವನ್ನೇ ಸದಾ ಅಂಗೀಕರಿಸುವ ನೇರವಾದ ಮಾರ್ಗ ಆತನದು.

ಕರ್ತವ್ಯಪ್ರಜ್ಞೆ :

ರಾಜ್ಯಭಾರ ದೀಕ್ಷಿತನಾದ ದುಷ್ಯಂತನಿಗೆ ರಾಜಕಾರ್ಯ ನಿರ್ವಹಣೆಯೇ ಆದ್ಯ ಕರ್ತವ್ಯ. ಆತನ ಕಾಲದ ಬಹುಭಾಗವು ಪ್ರಜಾ ರಕ್ಷಣಾ ಕಾರ್ಯಗಳಿಗೇ ಮೀಸಲು. ಆತನ ಲೋಕತಂತ್ರಾಧಿಕಾರವು ಅವಿಶ್ರಾಂತವಾದದ್ದು. ಕಾಶ್ಯಪ ಸಂದೇಶಹಾರಿಗಳಾಗಿ ಆಶ್ರಮ ಪ್ರದೇಶದಿಂದ ಋಷಿ ಜನರು ಬಂದಿರುವ ಸಮಾಚಾರ ತಿಳಿಯುತ್ತಲೇ ಆತನು ಮಾಡುವ ಯೋಚನೆಯಾದರೂ ಏನು ?

ಕಿಂತಾವದ್ವ್ರತಿನಾಮುಪೋಢತಪಸಾಂ ವಿಘ್ನೈಸ್ತಪೋದೂಷಿತಂ ।
ಧರ್ಮಾರಣ್ಯಚರೇಷು ಕೇನಚಿದುತ ಪ್ರಾಣಿಷ್ವಸಚ್ಚೇಷ್ಟಿತಂ ।
ಆಹೋ ಸ್ವಿತ್ಪ್ರಸವೋ ಮಮಾಪ ಚರಿತೈರ್ವಿಷ್ಟಂಭಿತೋವೀರುಧಾಂ ।
ಇತ್ಯಾರೂಢ ಬಹುಪ್ರತರ್ಕಮಪರಿಚ್ಛೇದಾಕುಲಂ ಮೇ ಮನಃ ॥

ವ್ರತನಿಷ್ಠರ ತಪಸ್ಸಿಗೆ ಭಂಗವುಂಟಾಯಿತೆ ? ಆಶ್ರಮ ಭೂಮಿಯಲ್ಲಿ ವಾಸಿಸುವ ಪ್ರಾಣಿಗಳ ವಿಷಯದಲ್ಲಿ ಯಾರಿಂದಲಾದರೂ ಅಸಭ್ಯ ವರ್ತನೆ ನಡೆಯಿತೆ ? ನನ್ನದೇ ಆದ ಯಾವುದಾದರೂ ಅಪಚಾರದಿಂದ ಬಳ್ಳಿಗಳಲ್ಲಿ ಪುಷ್ಪೋದಯವೇನಾದರೂ ನಿಂತು ಹೋಗಿರಬಹುದೇ ? ಈ ತೆರನಾದ ತರ್ಕವು ಆತನ ಮನಸ್ಸನ್ನು ಆಕ್ರಮಿಸುತ್ತದೆ. ರಾಜ್ಯದಲ್ಲಿ ಎಲ್ಲಿ ಯಾವ ಅನ್ಯಾಯ ನಡೆದರೂ ಅದು ರಾಜನ ಅಜಾಗರೂಕತೆಯಿಂದ, ಧರ್ಮಭ್ರಂಶದಿಂದ, ಕರ್ತವ್ಯಲೋಪದಿಂದ ಎಂದು ಭಾವಿಸಿದ್ದವನು ದುಷ್ಯಂತ ಚಕ್ರವರ್ತಿ. ರಾಜಧರ್ಮವನ್ನು ಸರ್ವದಾ ನಿರ್ವಹಿಸುವ ಅತ್ಯಂತ ಉನ್ನತವಾದ ಕರ್ತವ್ಯ ಪ್ರಜ್ಞೆ ಆತನದು.

ಆತನ ಪ್ರಜಾಕ್ಷೇಮ ತತ್ಪರತಾ ಬುದ್ಧಿಗೆ ಮತ್ತೊಂದು ನಿದರ್ಶನ. ಧನಮಿತ್ರನೆಂಬ ವರ್ತಕನು ಸಮುದ್ರಯಾನ ಮಾಡುತ್ತಿರುವಾಗ ಹಡಗು ಮುಳುಗಿ ಮೃತನಾದನೆಂದೂ, ಆತನು ಅನಪತ್ಯನಾದುದರಿಂದ ಆತನ ಅರ್ಥಸಂಚಯವೆಲ್ಲವೂ ರಾಜನ ಧನಾಗಾರಕ್ಕೆ ಸೇರತಕ್ಕದ್ದೆಂದೂ ಅಮಾತ್ಯನಿಂದ ವಿಜ್ಞಾಪನೆ ಬರುತ್ತದೆ. ವರ್ತಕನು ಬಹುಧನವಂತನಾಗಿದ್ದುದರಿಂದ ಆತನಿಗೆ ಬಹು ಪತ್ನಿಯರಿರಬಹುದಾದ ಸಾಧ್ಯತೆ

ಇದೆಯೆಂದೂ ಇದನ್ನು ವಿಚಾರಿಸಿ ಅವರಲ್ಲಿ ಯಾರಾದರೂ ಗರ್ಭಿಣಿಯಾಗಿದ್ದರೆ ವರ್ತಕನ ಧನ ಸಂಚಯಕ್ಕೆ ಆ ಗರ್ಭಸ್ಥ ಶಿಶುವೇ ಉತ್ತರಾಧಿಕಾರಿ ಎಂದೂ ಹೇಳಿ ರಾಜನು ಧನದ ಪ್ರಶ್ನೆಯನ್ನು ತೀರ್ಮಾನಿಸುತ್ತಾನಾದರೂ ಆ ಧನಿಕನ ವಿಯೋಗದಿಂದ ಆತನ ಸಂಬಂಧಿಗಳಿಗೆ ಆಗಿರಬಹುದಾದ ದುಃಖವನ್ನು ಕುರಿತು ಯೋಚಿಸುತ್ತಾನೆ. ಅಂತಹ ವಿಯೋಗ ತಪ್ತರಿಗೆ ರಾಜನೇ ಆಧಾರ ಸ್ಥಂಭ ಎಂದು ಭಾವಿಸುತ್ತಾನೆ.

ಯೇನ ಯೇನ ವಿಯುಜ್ಯಂತೇ ಪ್ರಜಾಃ ಸ್ನಿಗ್ಧೇನ ಬಂಧುನಾ ।
ಸ ಸ ಪಾಪಾದೃತೇ ತಾಸಾಂ ದುಷ್ಯಂತ ಇತಿ ಘುಷ್ಯತಾಂ ॥

ಪ್ರಜಾವರ್ಗದಲ್ಲಿ ಯಾರಾದರೂ ಬಂಧು ವಿಯೋಗವನ್ನು ಹೊಂದಿದರೆ ಅಂತಹ ಬಂಧುವಿನ ಸ್ಥಾನದಲ್ಲಿ ತಾನಿದ್ದುಕೊಂಡು ವಿಯೋಗತಪ್ತರ ರಕ್ಷಣಾಭಾರವನ್ನು ತಾನೇ ನೋಡಿಕೊಳ್ಳುವುದಾಗಿ ಘೋಷಿಸುವಂತೆ ದುಷ್ಯಂತನು ಆಜ್ಞಾಪಿಸುತ್ತಾನೆ. ಪ್ರಜೆಗಳ ಸುಸ್ಥಿತಿ ರಾಜನ ಜವಾಬ್ದಾರಿಗೆ ಸೇರಿದ್ದು. ಅದನ್ನು ಸರ್ವಪ್ರಯತ್ನದಿಂದಲೂ ಸಾಧಿಸತಕ್ಕದ್ದು ರಾಜನ ಹೊಣೆ ಎಂಬುದನ್ನು ಅರಿತು ಆಚರಿಸಿದವನು ದುಷ್ಯಂತ ಮಹಾರಾಜನು.

ಪರಮಾರ್ಥದೃಷ್ಟಿ :

ಶಾಕುಂತಲ ನಾಟಕದ ವಸ್ತು ಶೃಂಗಾರ. ಆದರೆ ಇಲ್ಲಿಯ ಶೃಂಗಾರದ ಸ್ವರೂಪ ಅಸಾಮಾನ್ಯವಾದದ್ದು. ಸಂಭೋಗ ಮತ್ತು ವಿಪ್ರಲಂಭಗಳು ಶೃಂಗಾರದ ಎರಡು ಪ್ರಕಾರಗಳು. ಇವೆರಡನ್ನೂ ಮೀರಿದ ಮೂರನೇ ಬಗೆಯಾದ ಶೃಂಗಾರವೊಂದುಂಟು. ಅದೇ ಧಾರ್ಮಿಕಶೃಂಗಾರ. ಶೃಂಗಾರವು ಸಂಭೋಗ ಮತ್ತು ವಿಪ್ರಲಂಭಗಳಲ್ಲಿಯೇ ಉಳಿಯಬಾರದು. ಅದು ಧಾರ್ಮಿಕ ಶೃಂಗಾರದಲ್ಲಿ ಫಲಿಸಬೇಕು. ಶೃಂಗಾರಕ್ಕೆ ಧರ್ಮವು ದಾರಿದೀಪವಾಗಬೇಕು. ಈ ಶೃಂಗಾರ ತ್ರೈವಿಧ್ಯವನ್ನು ನಾವು ದುಷ್ಯಂತನಲ್ಲಿ ಕಾಣುತ್ತೇವೆ. ಶೃಂಗಾರದ ಪರಿಪೂರ್ಣ ದೆಶೆ ಧಾರ್ಮಿಕ ಶೃಂಗಾರವಾದರೂ ಅದು ಕೇವಲ ಪ್ರಾಪಂಚಿಕವಾದದ್ದು ಎಂಬುದನ್ನು ದುಷ್ಯಂತನು ಮರೆಯಲಿಲ್ಲ. ಯಾವುದು ಪ್ರಾಪಂಚಿಕವೋ ಅದಕ್ಕೆ ಶಾಶ್ವತತೆ ಇಲ್ಲ. ನಶ್ವರ ವಸ್ತುಗ್ರಹಣವು ಜೀವೋನ್ನತಿಗೆ ಪ್ರತಿಬಂಧಕ. ಆದುದರಿಂದ ಆತ್ಮ ಶ್ರೇಯೋಭಿಲಾಷಿಯಾದವನು ಲೋಕವನ್ನು ಗೌರವಿಸುತ್ತಾ ಲೋಕಾತೀತದ ಅಸ್ತಿತ್ವವನ್ನು ಕಂಡುಕೊಳ್ಳುತ್ತಾನೆ. ದುಷ್ಯಂತನು ಈ ಪ್ರವೃತ್ತಿಯುವನು. ಆತನು ಲೋಕ ಮತ್ತು ಲೋಕಾತೀತಗಳ ತಾರತಮ್ಯವನ್ನರಿತವನು. ಅಸತ್ತಿನಿಂದ ಸತ್ತಿಗೆ ಆತನ ಗತಿ. ಲೋಕ ಮತ್ತು ದಾರಾ ಪುತ್ರಾದಿಗಳಿಂದ ದೊರೆಯುವ ಆನಂದಕ್ಕಿಂತ ಮಿಗಿಲಾದ ಆನಂದವೊಂದಿದೆ. ಅದು

ಅಕ್ಷಯವಾದದ್ದು, ಅನ್ಯೂನವಾದದ್ದು, ಅಚ್ಛಿದ್ರವಲ್ಲದ್ದು ಮತ್ತು ಪರಿಪೂರ್ಣವಾದದ್ದು. ಈ ಪರಿಪೂರ್ಣವಾದ ಆನಂದದ ಲಾಭವೇ ಮಾನವನು ಸಂಪಾದಿಸಬೇಕಾದ ವಸ್ತುಗಳಲ್ಲಿ ಅತ್ಯಂತ ಶ್ರೇಷ್ಠವಾದದ್ದು. ಈ ರೀತಿಯಾದ ಆಧ್ಯಾತ್ಮಿಕಜ್ಞಾನ ದುಷ್ಯಂತ ಚಕ್ರವರ್ತಿಯದು.

ಶಕುಂತಲೆಯನ್ನು ನಿರಾಕರಿಸಿದಂದಿನಿಂದ ಆಕೆಯನ್ನು ಪುನಃ ಪಡೆಯುವವರೆಗೂ ನಾವು ದುಷ್ಯಂತನಲ್ಲಿ ನೋಡುವುದು ಪಶ್ಚಾತ್ತಾಪ ಮತ್ತು ತೀವ್ರವಾದ ದುಃಖಗಳನ್ನು; ಅಪ್ರಯತ್ನದಿಂದ ತಾನಾಗಿಯೇ ಪ್ರಾಪ್ತವಾದ ಸಾಕ್ಷಾತ್ ಲಕ್ಷ್ಮಿಯನ್ನೇ ನಿರಾಕರಿಸಿದ ತನಗೆ ಯಾವ ಮಂಗಳ ತಾನೆ ಉಂಟಾದೀತು ಎಂಬ ನಿರಾಶಾಭಾವನೆಯನ್ನು, ಆದರೆ ಯಾರನ್ನು ತನ್ನ ಭಾಗ್ಯದೇವತೆ ಎಂದು ಭಾವಿಸಿದ್ದನೋ ಆ ಶಕುಂತಲೆಯನ್ನು ಪರಮ ಪಾವನವಾದ ಮಾರೀಚಾಶ್ರಮದಲ್ಲಿ ಹೊಂದಿದ ನಂತರ ದುಷ್ಯಂತನ ಹೃದಯ ಮಾರೀಚರಿಂದ ಆಶೀರ್ವಾದ ರೂಪವಾಗಿ ಬೇಡುವುದಾದರೂ ಏನನ್ನು ?—ಜನ್ಮರಾಹಿತ್ಯದ ಅಖಂಡಾನಂದವನ್ನು.

ಮಮಾಪಿ ಚ ಕ್ಷಪಯತು ನೀಲಲೋಹಿತಃ
ಪುನರ್ಭವಂ ಪರಿಗತಶಕ್ತಿರಾತ್ಮಭೂಃ

ಸರ್ವಶಕ್ತನಾದ ಪರಮೇಶ್ವರನು ಪುನರ್ಜನ್ಮವನ್ನು ಕಳೆಯಲಿ ಎಂಬ ಪರಮಾರ್ಥದ ಲಾಭವನ್ನು ಅಪೇಕ್ಷಿಸುತ್ತಾನೆ. ಇದು ದುಷ್ಯಂತನ ಹೃದಯ ಮತ್ತು ಆತನ ಪರತತ್ತ್ವ ನಿಷ್ಠೆ.

ಈ ರೀತಿಯಾಗಿ ಶಾಕುಂತಲ ನಾಟಕದಲ್ಲಿ ದುಷ್ಯಂತನ ಪಾತ್ರಪೋಷಣೆ ಕ್ರಮಕ್ರಮವಾಗಿ ನಡೆದಿದೆ. ಪ್ರಥಮಾಂಕದಲ್ಲಿ ಕಾಣುವ ಶೃಂಗಾರಿ ದುಷ್ಯಂತನು ಲೋಕಾನುಭವದಿಂದ ಪರಿಪಕ್ವಗೊಂಡು ಅಂತ್ಯದಲ್ಲಿ ವೈರಾಗ್ಯಮೂರ್ತಿಯಾಗುತ್ತಾನೆ. ಆತನ ಧರ್ಮಪರತೆ, ಸತ್ಯ ನಿಷ್ಠೆ, ಪ್ರಜಾವಾತ್ಸಲ್ಯ, ಗುರು ಭಕ್ತಿ ಇತ್ಯಾದಿ ಗುಣಗಳು ಆತನ ಶೀಲ ಸೌಭಾಗ್ಯಕ್ಕೆ ಹೆಗ್ಗುರುತುಗಳು. ಶಾಕುಂತಲ ನಾಟಕದಲ್ಲಿ ಇದೊಂದು ಅಪೂರ್ವವಾದ ಪಾತ್ರ ಸೃಷ್ಟಿ.

ಕರಕಂಡು ಕಥೆಯ ಕಥಾಪರಂಪರೆಗಳು

ಡಾ. ಸರಸ್ವತಿ ವಿಜಯಕುಮಾರ್

ಶ್ರಮಣ ಪರಂಪರೆಯಲ್ಲಿ ಪ್ರಮುಖವಾದ ಬೌದ್ಧ-ಜೈನ ಪರಂಪರೆಗಳಲ್ಲಿ ಕರಕಂಡುವಿಗೆ ವಿಶಿಷ್ಟವಾದ ಸ್ಥಾನವಿರುವುದು ಕಂಡುಬರುತ್ತದೆ.

ಬೌದ್ಧ ಧರ್ಮದಲ್ಲಿ ಹಾಗೂ ಜೈನಧರ್ಮದ ಶ್ವೇತಾಂಬರ ಪರಂಪರೆಯಲ್ಲಿ ಕರಕಂಡುವನ್ನು 'ಪ್ರತ್ಯೇಕ ಬುದ್ಧ'ನೆಂದು ಕರೆದು ಮನ್ನಿಸಲಾಗಿದೆ. ಬೌದ್ಧರ ಪ್ರಕಾರ 'ಪ್ರತ್ಯೇಕ ಬುದ್ಧ' ಎಂದರೆ ತನಗೆ ತಾನೇ ಬೋಧಿಯನ್ನು ಗಳಿಸಿದವನು, ಉಪದೇಶಕನಲ್ಲ. ಗಡ್ಡ-ತಲೆ-ಮೀಸೆಗಳನ್ನು ಬೋಳಿಸಿ, ಸಂಸಾರ-ಸಂಘಗಳಿಂದ ದೂರವಿದ್ದು ಹಳದಿ ವಸ್ತ್ರಧಾರಿಯಾಗಿ ಹಿಮಾಲಯದ ನಂದಮೂಲ ಗುಹೆಯಲ್ಲಿರುವವನು.[1] ಇವರು ನಾಲ್ಕು ಮಂದಿ ಪ್ರತ್ಯೇಕ ಬುದ್ಧರನ್ನು ಹೆಸರಿಸಿದ್ದಾರೆ. ಕರಕಂಡು, ದುರ್ಮುಖ, ನಮಿ ಮತ್ತು ನಗ್ನಜಿತ. ಇವರು ರಾಜ್ಯವನ್ನು ತೊರೆದು ಪಾಪರಹಿತರಾದವರು. ಇವರು ಪ್ರತಿಯೊಬ್ಬರೂ ಅಗ್ನಿಯಂತೆ ಪ್ರಜ್ವಲಿಸಿ ದೇವಸಮಾನವಾದ ರೀತಿಯನ್ನು ತೋರಿರುವರೆಂದು ಕೀರ್ತಿಸಿ, ಈ ಲೌಕಿಕ ಆಮಿಶಗಳನ್ನು ತೊರೆದು ಅವರಂತೆ ಆಗುವ ಆಶಯವನ್ನು ವ್ಯಕ್ತಪಡಿಸಲಾಗಿದೆ.[2]

ಮೇಲೆ ಹೇಳಿರುವ ನಾಲ್ಕು ಮಂದಿ ಪ್ರತ್ಯೇಕ ಬುದ್ಧರನ್ನು ಶ್ವೇತಾಂಬರ ಪರಂಪರೆಯು ಮಾನ್ಯ ಮಾಡುತ್ತದೆಯಾದರೂ ಪ್ರತ್ಯೇಕ ಬುದ್ಧರೆಂದರೆ ಯಾರು ಎಂಬ ವ್ಯಾಖ್ಯಾನವನ್ನು ಅದು ನೀಡುವುದಿಲ್ಲ. ಆದರೆ 'ಕಳಿಂಗದಲ್ಲಿ ಕರಕಂಡು ; ಪಾಂಚಾಲದಲ್ಲಿ ದುರ್ಮುಖ, ವಿದೇಹದಲ್ಲಿ ನಮಿರಾಜ ; ಗಾಂಧಾರದಲ್ಲಿ ನಗಯಿ ಎಂಬ ರಾಜರು ತಮ್ಮ ತಮ್ಮ ಪುತ್ರರನ್ನು ರಾಜ್ಯದಲ್ಲಿ ಸ್ಥಾಪಿಸಿ, ಜೈನಧರ್ಮದ ಅನುಸಾರ ಪ್ರವ್ರಜ್ಯೆಯನ್ನು ಕೈಗೊಂಡರು' ಎಂಬ ಉಲ್ಲೇಖವು ಲಭಿಸುತ್ತದೆ.[3]

ದಿಗಂಬರ ಪರಂಪರೆಯಲ್ಲಿ ಪ್ರತ್ಯೇಕ ಬುದ್ಧರ ಹೆಸರು ಕಂಡುಬಾರದಿದ್ದರೂ ಅವರ ಮಹಿಮೆಯ ಉಲ್ಲೇಖವು ಕಂಡುಬರುತ್ತದೆ. ಜಯಸೇನನ ಪ್ರತಿಷ್ಠಾಪಾಠದಲ್ಲಿ

ಈ ಮಹಾತ್ಮರನ್ನು ಅಗ್ರಪಂಕ್ತಿಯಲ್ಲಿ ಸೇರಿಸಲಾಗಿದೆ. ಅನ್ಯೋಪದೇಶವಿಲ್ಲದೆ ಸಂಯಮದ ಉನ್ನತ ನೆಲೆಯನ್ನು ತಲುಪಿದವರು ಮತ್ತು ಪ್ರತ್ಯೇಕ ಬುದ್ಧ ಶುದ್ಧಿಯನ್ನು ಪಡೆದವರು ಇವರು. ಇವರನ್ನು ಅಲ್ಪ ಸ್ಮರಿಸಿದರೂ ಪಾಪನಾಶವಾಗುತ್ತದೆ ಎಂದು ಹೇಳಿ ಮಾನ್ಯ ಮಾಡಿದ್ದಾರೆ—

"ಅನ್ಯೋಪದೇಶವಿರಹೇsಪಿ ಸುಸಂಯಮಸ್ಯ ಚಾರಿತ್ರ ಕೋಟಿ
ವಿಧಯ : ಸ್ವಯಮುದ್ಭವಂತಿ1
ಪ್ರತ್ಯೇಕ ಬುದ್ಧಮತಯ : ಖಲು ತೇ ಪ್ರಶಸ್ಯಾಸ್ತೇಷಾಂ
ಸ್ಮರಣತೋಮಮ ಪಾಪನಾಶ : 11 (672)

ಮತ್ತೆ ಕೆಲವೆಡೆ ಅಂಗಪೂರ್ವಗಳ ರಚನೆಯಲ್ಲಿ ಇವರಿಗೆ ಸ್ಥಾನವನ್ನು ಕೊಟ್ಟು ಗೌರವಿಸಿರುವುದು ಕಂಡುಬರುತ್ತದೆ.4

ಕರಕಂಡುವನ್ನು ಐತಿಹಾಸಿಕ ಪುರುಷನೆಂದೂ ಮಾನ್ಯಮಾಡಲಾಗಿದೆ. ಬೌದ್ಧರು, ಈತನು ಬುದ್ಧನಿಗಿಂತಲೂ ಹಿಂದೆ ಇದ್ದವನೆನ್ನುತ್ತಾರೆ. ಜೈನರು ಈತನು ಭಗವಾನ್ ಪಾರ್ಶ್ವತೀರ್ಥಂಕರ ಹಾಗೂ ಮಹಾವೀರ ತೀರ್ಥಂಕರರ ಮಧ್ಯಕಾಲೀನ ಐತಿಹಾಸಿಕ ಪುರುಷನೆಂದು ಪರಿಗಣಿಸುತ್ತಾರೆ. ಕ್ರಿ. ಪೂ. 500ಕ್ಕೂ ಹಿಂದೆ ಇದ್ದಿರಬಹುದಾದ ವ್ಯಕ್ತಿ ಎಂದು ಮಾನ್ಯ ಮಾಡಲಾಗಿದೆ.5

ಕರಕಂಡುವಿನ ಕಥಾ ಸಾಹಿತ್ಯ ವಿಸ್ತಾರ ಸಾಕಷ್ಟು ವಿಸ್ತೃತ ರೀತಿಯಲ್ಲಿ ದೊರೆಯುತ್ತದೆ. ಅವುಗಳು ಹೀಗೆ ಕಂಡುಬರುತ್ತವೆ-

ಬೌದ್ಧ ಪರಂಪರೆ :

1) ಬೌದ್ಧರ ಕರಕಂಡುವಿನ ಕಥೆಯು 'ಕುಂಭಕಾರ ಜಾತಕ'ದ ಕಥೆಯೊಳಗೆ ಬರುತ್ತದೆ.

ಶ್ವೇತಾಂಬರ ಪರಂಪರೆ :

2) ಉತ್ತರಾಧ್ಯಯನ ಸೂತ್ರದಲ್ಲಿ (18ನೇ ಅಧ್ಯಾಯ, 46ನೇ ಸೂತ್ರ) ಕರಕಂಡುವನ್ನು ಕಳಿಂಗದ ರಾಜನೆಂದು ಹೇಳಲಾಗಿದೆ. ಮಗನಿಗೆ ಪಟ್ಟವನ್ನು ಕಟ್ಟಿ ಮುನಿಯಾದ ಉಲ್ಲೇಖವು ಬರುತ್ತದೆ.6

3) ಶಾಂತಿಸೂರಿಯು (ಕಾಲ—ಕ್ರಿ. ಶ. 1043) ಉತ್ತರಾಧ್ಯಯನ ಸೂತ್ರದ ವ್ಯಾಖ್ಯಾನ ಗ್ರಂಥವಾದ ಶಿಷ್ಯಹಿತಾ ಗ್ರಂಥದಲ್ಲಿ ಸಾಕಷ್ಟು ವಿಸ್ತಾರವಾದ ಕಥಾ ಭಾಗವನ್ನು ನೀಡಿದ್ದಾನೆ. ಕಥಾಭಾಗವು ಪ್ರಾಕೃತದಲ್ಲಿದೆ.

4) ದೇವೇಂದ್ರಗಣಿ (ನೇಮಿಚಂದ್ರಸೂರಿ) (ಕಾಲ—1073) ಉತ್ತರಾಧ್ಯಯನ ಸೂತ್ರದ ವ್ಯಾಖ್ಯಾನಗ್ರಂಥವಾದ 'ಸುಖಬೋಧಾ'ದಲ್ಲಿ ಕರಕಂಡುವಿನ ಕಥೆಯನ್ನು ನೀಡಿದ್ದಾನೆ. ಗ್ರಂಥ ಪ್ರಶಸ್ತಿಯ ಪ್ರಕಾರ ಅಣಹಿಲ ಪಟ್ಟಣ (ಅನಹಿಲ) ದಲ್ಲಿ ಕ್ರಿ. ಶ. 1073 ರಲ್ಲಿ ಈ ಗ್ರಂಥವನ್ನು ಪೂರೈಸಿದ್ದಾನೆ. ಕಥಾಭಾಗವು ಪ್ರಾಕೃತವಲ್ಲಿದೆ.

5) ಅಮ್ರದೇವ ಸೂರಿಯು (ಕಾಲ—1134, ಭಾಷೆ—ಪ್ರಾಕೃತ) 'ಸುಖಬೋಧಾ' ಗ್ರಂಥದ ಟೀಕೆಯಾದ 'ಆಖ್ಯಾನ ಮಣಿಕೋಶ'ದಲ್ಲಿ ಈ ಕಥೆಯನ್ನು ನಿರೂಪಿಸಿದ್ದಾನೆ.

6) ಚಾರಿತ್ರವಿಜಯನ ಶಿಷ್ಯ (ಕಾಲ ? : ಹೆಸರು : ?) (ಭಾಷೆ—ಸಂಸ್ಕೃತ) ಪ್ರತ್ಯೇಕ ಬುದ್ಧ ಚರಿತ್ರೆಯನ್ನು ಪದ್ಯದಲ್ಲಿ ರಚಿಸಿದ್ದಾನೆ.

7) ಶುಭ ಶೀಲ ಗಣಿಯು (ಕಾಲ—1452) ತನ್ನ ಕಥಾಕೋಶದಲ್ಲಿ ಕರಕಂಡುವಿನ ಕಥೆಯನ್ನು ಹೇಳಿದ್ದಾನೆ.

8) ಸಮಯಸುಂದರ ಉಪಾಧ್ಯಾಯನು (ಕಾಲ ಕ್ರಿ. ಶ. 17ನೆಯಶ.) (ಭಾಷೆ-ಹಿಂದಿ) 'ಕರಕಂಡು ಚೌಪಈ'ಯನ್ನು ಬರೆದಿದ್ದಾನೆ.

ದಿಗಂಬರ ಪರಂಪರೆ :

9) ಹರಿಷೇಣನು (ಕಾಲ. ಕ್ರಿ. ಶ. 10ಶ.) (ಭಾಷೆ—ಸಂಸ್ಕೃತ) ಬೃಹತ್ಕಥಾಕೋಶದಲ್ಲಿ 430 ಶ್ಲೋಕವಿಸ್ತಾರದಲ್ಲಿ ಈ ಕಥೆಯನ್ನು ನಿರೂಪಿಸಿದ್ದಾನೆ.

10) ಶ್ರೀಚಂದ್ರನು (ಕಾಲ ಕ್ರಿ. ಶ. 10-11ನೆಯ ಶ.) (ಭಾಷೆ-ಅಪಭ್ರಂಶ) 'ಕಥಾಕೋಶ'ದಲ್ಲಿ ಕರಕಂಡುವಿನ ಕಥೆಯನ್ನು ಹೇಳಿದ್ದಾನೆ. 35ನೇ ಅಧಿಕಾರದಲ್ಲಿ 64 ಗಾಥೆಗಳಲ್ಲಿ ಈ ಕಥೆ ಬರುತ್ತದೆ.

11) ಕನಕಾಮರನು (ಕಾಲ. ಕ್ರಿ. ಶ. 11ನೆಯ ಶ.) (ಭಾಷೆ-ಅಪಭ್ರಂಶ) ಸವಿಸ್ತಾರವಾಗಿ 'ಕರಕಂಡು ಚರಿಉ' ಕಾವ್ಯವನ್ನು ಬರೆದಿದ್ದಾನೆ.

12) ರಾಮಚಂದ್ರ ಮುಮುಕ್ಷುವು (ಕಾಲ-ಸುಮಾರು ಕ್ರಿ. ಶ. 11ನೆಯ ಶ) (ಭಾಷೆ-ಸಂಸ್ಕೃತ) ಪುಣ್ಯಾಸ್ರವ ಕಥಾಕೋಶವನ್ನು ಬರೆದಿದ್ದಾನೆ. ಇದರಲ್ಲಿ ಕರಕಂಡುವಿನ ಕಥೆ ಬರುತ್ತದೆ.

13) ಶ್ರೀ ಪ್ರಭನು (ಕಾಲ : ಕ್ರಿ. ಶ. 12ನೆಯ ಶ.) ಆರಾಧನಾ ಕಥಾ ಪ್ರಬಂಧದಲ್ಲಿ ರಾಜಶ್ರೀ ಕಥಾನಕದಲ್ಲಿ ಕರಕಂಡುವಿನ ಉಲ್ಲೇಖವನ್ನು ಮಾಡಿದ್ದಾನೆ. ಇದೊಂದು ಗದ್ಯ ಕೃತಿ.

14) ಬಂಧುವರ್ಮನು (ಕಾಲ : ಕ್ರಿ. ಶ. ಸುಮಾರು 13ನೆಯ ಶ.) (ಭಾಷೆ-ಕನ್ನಡ) 'ಜೀವಸಂಬೋಧನೆಯಲ್ಲಿ ಪೂಜಾಫಲದ ಕಥೆಯಲ್ಲಿ ಧನದತ್ತ ಗೋಪಾಲನ

ಕಥೆಯನ್ನು ಉದಾಹರಿಸಿ, ಆ ಗೋಪಾಲನು ಪೂಜೆಯ ಫಲದಿಂದ ರಾಜನ ಮಗನಿಗೆ 'ಕರಿಕಂಡು' ಎಂಬ ಮಗನಾದನೆಂದು ಉಲ್ಲೇಖಿಸಿದ್ದಾನೆ.

15) ನಾಗರಾಜನು (ಕಾಲ : ಕ್ರಿ. ಶ. 1331) (ಭಾಷೆ-ಕನ್ನಡ) ಪುಣ್ಯಾಸ್ರವದಲ್ಲಿ ಪೂಜಾಫಲವನ್ನು ವಿವರಿಸುವಾಗ ಈ ಕಥೆಯನ್ನು ನಿರೂಪಿಸಿದ್ದಾನೆ. ಇದು ಗದ್ಯ ಪ್ರಧಾನವಾದ ಹಳಗನ್ನಡ ಶೈಲಿಯ ಚಂಪೂಕಾವ್ಯವಾಗಿದೆ.

16) ರಯಧುವು (ಕಾಲ : ಕ್ರಿ. ಶ. 15ನೆಯ ಶ.) (ಭಾಷೆ-ಪ್ರಾಕೃತ) ಕರಕಂಡು ಚರಿತೆಯನ್ನು ಬರಿದಿದ್ದಾನೆ.

17) ಜಿನೇಂದ್ರ ಭೂಷಣ ಭಟ್ಟಾರಕನು (ಕಾಲ—1676) (ಭಾಷೆ—ಪ್ರಾಕೃತ)ಕರಕಂಡು ಚರಿತೆಯನ್ನು ಬರೆದಿದ್ದಾನೆಂದು ಹೇಳಲಾಗಿದೆ.

18) ನಮಿದತ್ತನ 'ಅರಾಧನಾ ಕೋಶ'ದಲ್ಲಿ (ಭಾಷೆ—ಸಂ) ಕರಕಂಡನ ಕಥೆ ಇದೆ.

19. ನೇಮಿದತ್ತನ ಮೇಲಿನ ಕೃತಿಯನ್ನು ಆಧರಿಸಿ 'ಕರಕಂಡಸ್ವಾಮಿಕೇ ಕಥಾ' ವನ್ನು ಹಿಂದಿ ಭಾಷೆಯಲ್ಲಿ ಪದ್ಯ ರೂಪದಲ್ಲಿ ಬರೆಯಲಾಗಿದೆ.

20. ಶ್ರೀದತ್ತ ಪಂಡಿತನು (ಕಾಲ ? ಭಾಷೆ ?) ಕರಕಂಡು ಚರಿತೆಯನ್ನು ಬರೆದಿರುವುದಾಗಿ ತಿಳಿದುಬರುತ್ತದೆ.

ಸಂಸ್ಕೃತ, ಪ್ರಾಕೃತ, ಕನ್ನಡ ಮತ್ತು ಹಿಂದಿ ಭಾಷೆಗಳಲ್ಲಿ ವಿಸ್ತೃತವಾದ ರೀತಿಯಲ್ಲಿ ಕರಕಂಡುವಿನ ಸಾಹಿತ್ಯ ಧಾರೆಯನ್ನು ನಾವು ಕಾಣಬಹುದಾಗಿದೆ. ಕೆಲವೆಡೆ ನಾಮಮಾತ್ರವಾಗಿ ಬಂದರೆ ಮತ್ತೆ ಕೆಲವೆಡೆ ಇತರ ವಿಷಯಾಂತರ್ಗತವಾಗಿ ಸಮಾವೇಶವಾಗಿ ಬಂದಿದೆ. ಅಷ್ಟೇ ಅಲ್ಲದೆ, ಸ್ವತಂತ್ರ ಕೃತಿಗಳಲ್ಲಿಯೂ ಕರಕಂಡುವಿನ ಕಥೆ ಮೂಡಿ ಬಂದು ಅದರ ಜನಪ್ರಿಯತೆಯನ್ನು ಸಾರುತ್ತದೆ.

ಈಗ ವಿವಿಧ ಕಥಾಪರಂಪರೆಗಳಲ್ಲಿ ಕಂಡುಬರುವ ಕರಕಂಡುವಿನ ಕಥೆಯನ್ನು ಅವುಗಳ ಸಾದೃಶ್ಯ – ವೈಸಾದೃಶ್ಯಗಳೊಂದಿಗೆ ಪರಿಶೀಲಿಸಬಹುದಾಗಿದೆ.

ಬೌದ್ಧ ಪರಂಪರೆ[8] :

ಬೋಧಿಸತ್ವನು ತನ್ನ ಜನ್ಮಗಳಲ್ಲೊಂದರಲ್ಲಿ ಕುಂಬಾರನ ಮನೆಯಲ್ಲಿ ಜನ್ಮವೆತ್ತಿದನು. ಅದೇ ಸಮಯದಲ್ಲಿ ಕಳಿಂಗದ ದಂತೀಪುರದ ನಗರದ ರಾಜ ಕರಂಡುವು[9] ತನ್ನ ಪರಿವಾರ ಸಮೇತನಾಗಿ ಉದ್ಯಾನವನಕ್ಕೆ ಹೋದನು. ಅಲ್ಲಿ ಸಿಹಿಯಾದ ಹಣ್ಣಿನಿಂದ ತುಂಬಿದ ಮಾವಿನ ಮರವನ್ನು ನೋಡಿ ಆನೆಯ ಮೇಲೆ ಕುಳಿತಂತೆಯೇ ಒಂದು ಮಾವಿನ ಹಣ್ಣಿನ ಗೊಂಚಲನ್ನು ಕಿತ್ತುಕೊಂಡನು. ಒಂದು ಬಂಡೆಯ ಮೇಲೆ ಕುಳಿತು, ತನ್ನ ವಿಶೇಷ ಪರಿಚಾರಕರಿಗೂ ಹಂಚಿ ತಾನೂ ತಿಂದನು. ಇದಾದ ನಂತರ ಅಮಾತ್ಯರು ಮತ್ತು ಗೃಹಸ್ಥರು ಆ ವೃಕ್ಷದ ಎಲ್ಲಾ ಕಾಯಿ ಹಣ್ಣುಗಳನ್ನು ಕಿತ್ತು

ತಿಂದರು. ಅವರ ಧಾಳಿಯಿಂದಾಗಿ ಆ ಮರ ತನ್ನ ಹಸಿರು ಸಮೃದ್ಧಿಯನ್ನು ಕಳೆದು ಕೊಂಡಿತು. ಸಾಯಂಕಾಲ ಹಿಂದಿರುಗುವ ಸಂದರ್ಭದಲ್ಲಿ ರಾಜನು ಆ ವೃಕ್ಷದ ಶೋಭೆ ಮರೆಯಾದುದನ್ನು ಕಂಡನು. ಕಾಯಿ ಬಿಡದ ಪಕ್ಕದಲ್ಲಿದ್ದ ಮಾವಿನ ಮರವು ಇನ್ನೂ ಹಸಿರು ಸಮೃದ್ಧಿಯಿಂದ ನಳನಳಿಸುತ್ತಿತ್ತು. ರಾಜ ತನ್ನ ಮನದಲ್ಲಿ ಗೃಹಸ್ಥ ಧರ್ಮವು ಈ ಫಲಬಿಟ್ಟ ವೃಕ್ಷಕ್ಕೆ ಸಮಾನವಾಗಿದೆ. ಅದರಿಂದ ದುರ್ಗತಿಯುಂಟಾಗುತ್ತದೆ, ಆದರೆ ಪ್ರವ್ರಜ್ಯೆ, ಆ ಫಲಹೀನ ವೃಕ್ಷದ ಸಮಾನವಿದೆ. ಅದಕ್ಕೆ ಅನಿಷ್ಟ ಒದಗುತ್ತದೆಂಬ ಭಯವಿಲ್ಲ. ನಾನೂ ಕೂಡ ಅದರಂತೆಯೇ ಆಗುತ್ತೇನೆ ಎಂದು ಚಿಂತಿಸಿ, ರಾಜ್ಯಭಾರ ವನ್ನು ತ್ಯಜಿಸಿ ಶ್ರಮಣವೇಷಧಾರಿಯಾಗಿ ಪ್ರತ್ಯೇಕ ಬುದ್ಧ ಪದವನ್ನು ಪ್ರಾಪ್ತಿಮಾಡಿ ಕೊಂಡು ಉತ್ತರ ಹಿಮವಂತದ ನಂದಮೂಲ ಗುಹೆಗೆ ಹೊರಟು ಹೋದನು.

ಶ್ವೇತಾಂಬರ ಪರಂಪರೆಯ ಕಥೆ :

ಚಂಪಾನಗರಿ. ದಧಿವಾಹನನೆಂಬ ರಾಜ, ಚೇಟಕ ರಾಜನ ಮಗಳು, ಪದ್ಮಾವತಿ ಆತನ ರಾಣಿ. ಆಕೆಗೆ ಒಮ್ಮೆ ತಾನು ರಾಜನ ವೇಷ ಧರಿಸಿ ಆನೆಯ ಮೇಲೆ ಕುಳಿತು ವನೋದ್ಯಾನಗಳಲ್ಲಿ ವಿಹರಿಸಬೇಕೆಂದೂ ಹಾಗೆ ಸಂಚರಿಸುವಾಗ ರಾಜನಿಂದಲೇ ಛತ್ರವನ್ನು ಹಿಡಿಸಿಕೊಳ್ಳಬೇಕೆಂದೂ ಬಯಕೆ ಆಯಿತು. ರಾಜ ಹಾಗೇ ಮಾಡಿದನು. ವರ್ಷ ಋತುವಿನ ಪ್ರಾರಂಭಕಾಲ. ಮಳೆಗಾಲದ ಆ ಹಸಿಮಣ್ಣಿನ ವಾಸನೆಯನ್ನು ಸೇವಿಸಿದ ಆನೆಗೆ ವನದ ಸ್ಮರಣೆಯುಂಟಾಯಿತು. ಅದು ಓಡಲು ಪ್ರಾರಂಭಿಸಿತು. ಪರಿಚಾರಕರಿಗೆ ಅದನ್ನು ಹಿಂಬಾಲಿಸಲಾಗಲಿಲ್ಲ. ಕಾಡಿಗೆ ಪ್ರವೇಶಿಸಿದಾಗ ಮುಂದಿದ್ದ ಒಂದು ವಟವೃಕ್ಷವನ್ನು ಕಂಡು ರಾಜನು ರಾಣಿಗೆ – 'ಆ ವಟವೃಕ್ಷದ ಹತ್ತಿರ ಆನೆ ಹೋಗುತ್ತಿದ್ದಂತೆಯೇ ಕೊಂಬೆಯನ್ನು ಹಿಡಿದುಕೊ' ಎಂದು ಪಾರಾಗುವ ಉಪಾಯ ಸೂಚಿಸಿದ. ಕುಶಲನಾದ ರಾಜ ಹಾಗೆ ಮಾಡಿದ. ಆದರೆ ರಾಣಿಯಿಂದ ಹಾಗೆ ಮಾಡ ಲಾಗಲಿಲ್ಲ. ರಾಜ ಉದಾಸೀನನಾದ ; ದಿಗ್ಭ್ರಾಂತನಾದ. ಅನಂತರ ಚಂಪಾನಗರಕ್ಕೆ ತೆರಳಿದ. ಈ ಕಡೆ ನಿರ್ಜನ ವನದಲ್ಲಿ ಮುನ್ನಡೆದ ಆನೆ ಒಂದು ಕೆರೆಯನ್ನು ಪ್ರವೇಶಿಸಿ, ಕ್ರೀಡಿಸಲು ಪ್ರಾರಂಭಿಸಿತು. ಆಗ ರಾಣಿಯು ನಿಧಾನವಾಗಿ ಇಳಿದು ಕೆರೆಯಿಂದ ಹೊರಗೆ ಬಂದಳು. ವನರಾಶಿಯ ಮಧ್ಯೆ ನಿಂತ ಅವಳು ದಿಗ್ಭ್ರಾಂತಳಾದಳು. ಅನಂತರ ತನ್ನ ಕರ್ಮಪರಿಪಾಕದ ಬಗೆಗೆ ಧರ್ಮ ಚಿಂತನೆ ಮಾಡತೊಡಗಿದಳು. ಮುಂದೆ ಯಾವುದೋ ಒಂದು ದಿಕ್ಕನ್ನು ಹಿಡಿದು ಸಾಗತೊಡಗಿದಳು. ಮುಂದುವರಿದಂತೆ ಅವಳಿಗೆ ಒರ್ವ ತಪಸ್ವಿಯು ಕಂಡುಬಂದನು. ಅವನು ರಾಣಿಗೆ ಧೈರ್ಯವನ್ನು ಹೇಳಿ, ವನಫಲಗಳನ್ನು ಆಹಾರವಾಗಿತ್ತು ದಂತೀಪುರದ ಸಮೀಪಕ್ಕೆ ಬಿಟ್ಟನು. ನಗರಕ್ಕೆ ತಲುಪಿದ ಅವಳು ಸಾಧ್ವಿಯರ ಜೊತೆ ಸೇರಿ ಪ್ರವ್ರಜ್ಯೆಯನ್ನು ಸ್ವೀಕರಿಸಿದಳು. ಅವರಿಗೆ ಅವಳು ತಾನು ಗರ್ಭವತಿಯೆಂಬ ವಿಚಾರವನ್ನು ತಿಳಿಸಲಿಲ್ಲ. ಗುಪ್ತರೀತಿಯಲ್ಲಿ ಅವಳು ಪ್ರಸವಿಸಿದಳು.

ಕಂಬಳಿಯನ್ನು ಸುತ್ತಿ ನಾಮಮುದ್ರಾಂಕಿತ ಮಾಡಿ ಆ ಮಗುವನ್ನು ಸ್ಮಶಾನದಲ್ಲಿ ಹಾಕಿದಳು. ಸ್ಮಶಾನದ ರಕ್ಷಕನು ಅದನ್ನು ಪಡೆದು ತನ್ನ ಹೆಂಡತಿಗೆ ಕೊಟ್ಟನು. ಮಗುವಿಗೆ 'ಅಪಕೀರ್ಣ'ನೆಂದು ಹೆಸರಿಟ್ಟರು. ಪದ್ಮಾವತಿ ಸ್ಮಶಾನ ರಕ್ಷಕನ ಹೆಂಡತಿಯೊಂದಿಗೆ ಮೈತ್ರಿ ಬೆಳೆಸಿಕೊಂಡಳು. ಕೆಲವು ಆರ್ಯಿಕೆಯರಿಗೆ ಅವಳು ಗರ್ಭಧರಿಸಿದ್ದು ತಿಳಿದಿತ್ತು. ಅವರು ಮಗುವಿನ ಬಗೆಗೆ ಕೇಳಿದಾಗ 'ಅದು ಸತ್ತುಹುಟ್ಟಿತ್ತಾದ್ದರಿಂದ ಅದನ್ನು ಎಸೆದೆ' ಎಂದಳು. ಈ ಕಡೆ ಹುಡುಗನು ದೊಡ್ಡವನಾದನು. ಅವನು ಆಟವಾಡುವ ಸಮಯದಲ್ಲಿ 'ನಾನು ನಿಮ್ಮ ರಾಜ, ನನಗೆ ಕರವನ್ನು ನೀಡಿ' ಎಂದು ಹೇಳುತ್ತಿದ್ದನು. ಹೀಗಿರುವಲ್ಲಿ ಒಮ್ಮೆ ಅವನಿಗೆ ಒಣಕಜ್ಜಿ ಉಂಟಾಯಿತು. ಅದನ್ನು ಕೆರೆಯುವಂತೆ ತನ್ನ ಸ್ನೇಹಿತರಿಗೆ ಹೇಳುತ್ತಿದ್ದನು. ಅಂದಿನಿಂದ ಅವನನ್ನು ಕರಕಂಡು ಎಂದು ಕರೆಯುತ್ತಿದ್ದರು. ಆತನಿಗೆ ತನ್ನ ಆರ್ಯಿಕೆ ಮಾತೆಯಲ್ಲಿ ವಿಶೇಷ ಸ್ನೇಹವಿತ್ತು. ಆಕೆಯೂ ಕೂಡ ತನ್ನ ಭಿಕ್ಷಾವೃತ್ತಿಯಲ್ಲಿ ದೊರೆತ ಮೋದಕಾದಿಗಳನ್ನು ಹುಡುಗನಿಗೆ ತಂದು ನೀಡುತ್ತಿದ್ದಳು.

ಬಾಲಕ ಬೆಳೆದು ದೊಡ್ಡವನಾದನು. ಅವನು ಸ್ಮಶಾನದ ರಕ್ಷಣೆ ಮಾಡಲು ಪ್ರಾರಂಭಿಸಿದ ಸಮಯದಲ್ಲಿ ಅಲ್ಲಿಗೆ ಇಬ್ಬರು ಮುನಿಗಳು ಬಂದರು. ಅಲ್ಲಿ ಬಿದಿರು ಮೆಳೆಯಲ್ಲಿ ಒಂದು ದಂಡವನ್ನು ನೋಡಿದರು. ದಂಡ ಲಕ್ಷಣವನ್ನು ತಿಳಿದಿದ್ದ ಮುನಿಯು ಇದನ್ನು ಪಡೆದವನು ರಾಜನಾಗುವನು. ಆದರೆ ಇದು ಇನ್ನೂ ನಾಲ್ಕು ಅಂಗುಲ ಬೆಳೆಯಬೇಕು ಎಂದು ತಿಳಿಸಿದನು. ಈ ಮಾತನ್ನು ಕರಕಂಡು ಕೇಳಿಸಿ ಕೊಂಡನು. ಹಾಗೇ ಓರ್ವ ದ್ವಿಜನೂ ಕೂಡ ಕೇಳಿಸಿಕೊಂಡನು. ದ್ವಿಜನು ಭೂಮಿಯ ಕೆಳಗೆ ನಾಲ್ಕು ಅಂಗುಲ ಅಗೆದು ಆ ಬಿದಿರನ್ನು ಕತ್ತರಿಸಿಕೊಂಡನು. ದ್ವಿಜನು ನ್ಯಾಯಾಲಯದಲ್ಲಿ ಈ ಮಾತನ್ನು ಎತ್ತಿದಾಗ, ಕರಕಂಡು 'ಈ ದಂಡ ತನ್ನ ಸ್ಮಶಾನದಲ್ಲಿ ಬೆಳೆದುದಾಗಿರುವುದರಿಂದ ಇದು ತನಗೆ ಸೇರಿದ ದಂಡ' ಎಂದ. ಅಲ್ಲದೆ ನ್ಯಾಯಾಧೀಶನಿಗೆ ಈ ದಂಡದ ಮಹಿಮೆಯಿಂದ ತಾನು ರಾಜನಾಗುವುದಾಗಿ ಹೇಳಿದ. ನ್ಯಾಯಾಧೀಶನು ನಗುತ್ತಾ 'ಒಳ್ಳೆಯದು, ನೀನು ರಾಜನಾದಾಗ ಬ್ರಾಹ್ಮಣನಿಗೆ ಒಂದು ಗ್ರಾಮವನ್ನು ಕೊಡು' ಎಂದು ಹೇಳಿದ. ಕರಕಂಡು ಒಪ್ಪಿದ. ದ್ವಿಜನು ತನ್ನ ಅನ್ಯಜನರೊಂದಿಗೆ ಬಂದು ಕರಕಂಡುವನ್ನು ಕೊಂದು ದಂಡವನ್ನು ಅಪಹರಿಸುವ ಆಲೋಚನೆಯಲ್ಲಿರುವನೆಂದು ತಿಳಿದು ಮಾತಂಗನು ಕುಟುಂಬದೊಡನೆ ಕಾಂಚನಪುರಕ್ಕೆ ಬಂದನು. ಸಂತಾನ ಭಾಗ್ಯವಿಲ್ಲದ ಅಲ್ಲಿಯ ರಾಜ ಸತ್ತ. ರಾಜನನ್ನು ಆರಿಸಲು ಕುದುರೆಯೊಂದನ್ನು ಬಿಡಲಾಯಿತು. ಅದು ನಗರದ ಹೊರಗೆ ಮಲಗಿದ್ದ ಕರಕಂಡು ವಿನ ಬಳಿಗೆ ಬಂದು ಪ್ರದಕ್ಷಿಣೆ ಮಾಡಿ ಅಲ್ಲಿಯೇ ನಿಂತಿತು. ನಾಗರಿಕರು ಹರ್ಷಗೊಂಡು ಆನಂದಭೇರಿಯನ್ನು ಬಾರಿಸಿದರು. ಆಕಳಿಸುತ್ತಾ ಎದ್ದ ಕರಕಂಡು ವಿಶ್ವಾಸದಿಂದ ಕುದುರೆಯನ್ನೇರಿ ನಗರಾಭಿಮುಖವಾಗಿ ಹೊರಟ. ಆದರೆ ಅವನನ್ನು ಮಾತಂಗನೆಂದು

ತಿಳಿದು ಊರಿನ ಜನ ನಗರದೊಳಗೆ ಬಿಡಲಿಲ್ಲ. ಆಗ ಕರಕಂಡು ದಂಡರತ್ನವನ್ನು ಕೈಗೆ ತೆಗೆದುಕೊಂಡ. ಜ್ವಲಿಸುವ ಅದನ್ನು ಕಂಡು ಜನ ಭೀತರಾದರು. ಆಗ ಅವನು ವಾಟಧಾನಕದ ಹರಿಕೇಶಿಗಳನ್ನು ಬ್ರಾಹ್ಮಣರನ್ನಾಗಿ ಮಾಡಿದರು.

ಕರಕಂಡು ರಾಜನಾದ ಸಂದರ್ಭವನ್ನು ತಿಳಿದು ದಂಡಕ್ಕಾಗಿ ವ್ಯಾಜ್ಯವಾಡಿದ್ದ ಬ್ರಾಹ್ಮಣನು ಬಂದು ಚಂಪಾನಗರದಲ್ಲಿ ತನಗೊಂದು ಗ್ರಾಮವನ್ನು ಕೊಡಬೇಕೆಂದು ಕೇಳಿಕೊಂಡನು. ಆಗ ಕರಕಂಡು ದಧಿವಾಹನನ ಹೆಸರಿನಲ್ಲಿ ಒಂದು ಪತ್ರವನ್ನು ಬರೆದು ಒಂದು ಗ್ರಾಮವನ್ನು ಈತನಿಗೆ ಕೊಡಬೇಕೆಂದೂ ಅದಕ್ಕೆ ಬದಲಾಗಿ ತಾನು ಒಂದು ಗ್ರಾಮವನ್ನೋ ನಗರವನ್ನೋ ಕೊಡುವುದಾಗಿ ತಿಳಿಸಿದನು. ಇದರಿಂದ ಕೋಪಗೊಂಡ ದಧಿವಾಹನ ಗ್ರಾಮವನ್ನು ಕೊಡಲು ನಿರಾಕರಿಸಿದನು. ಕೋಪ ಗೊಂಡ ಕರಕಂಡು ಚಂಪಾನಗರವನ್ನು ಮುತ್ತಿದನು. ಯುದ್ಧ ಪ್ರಾರಂಭವಾಯಿತು. ಸಾಧ್ವಿ ಪದ್ಮಾವತಿಗೆ ಈ ವಿಷಯ ತಿಳಿದು ಗಣಮುಖ್ಯಸ್ಥೆಯ ಅನುಮತಿ ಪಡೆದು ಚಂಪಾನಗರಕ್ಕೆ ಬಂದಳು. ಸಕಲ ವೃತ್ತಾಂತಗಳನ್ನೂ ತಿಳಿಸಿದಳು. ದಧಿವಾಹನನು ರಾಜ್ಯವನ್ನಿತ್ತು ಪ್ರವರ್ಜಿತನಾದನು.

ಕರಕಂಡು ಶ್ರೇಷ್ಠ ಶಾಸಕನೆನಿಸಿದನು. ಅವನು ಗೋವುಗಳ ಪ್ರೇಮಿಯಾಗಿದ್ದನು. ಒಂದು ಕರು ಆತನಿಗೆ ಅತ್ಯಂತ ಪ್ರಿಯವಾಗಿತ್ತು. ಆ ಕರುವಿನ ತಾಯಿಯ ಹಾಲನ್ನು ಕರೆಯದೆ, ಅದರ ಕರುವಿಗೇ ಕುಡಿಸಲು ಹಾಗೂ ಇತರ ಗೋವುಗಳ ಹಾಲನ್ನೂ ಕೊಡಲು ಹೇಳಿದನು. ಆ ಕರು ಬೆಳೆದು ಪ್ರಚಂಡವಾದ ವೃಷಭವಾದುದನ್ನು ರಾಜ ನೋಡಿದನು. ಕೆಲವು ವರ್ಷಗಳ ನಂತರ ಆ ರಾಜನು ಆ ವೃಷಭವನ್ನು ನೋಡಲು ಬಂದಾಗ, ಅದು ಕ್ಷೀಣವಾಗಿತ್ತು, ಇತರ ಕರುಗಳೂ ಅದನ್ನು ಬೆದರಿಸುತ್ತಿದ್ದವು. ಇದನ್ನು ಕಂಡು ಕರಕಂಡು ರಾಜ ದುಃಖಿತನಾದ. ಅವನು ಸಂಸಾರದ ಅಧ್ರುವ, ಅನಿತ್ಯತೆಗಳನ್ನು ಚಿಂತಿಸಿದ. ಇಷ್ಟಜನ ಸಂಗವು ಚಿರಸ್ಥಾಯಿಯಾದುದಲ್ಲ ಎಂದು ಚಿಂತಿಸುತ್ತ ಕರಕಂಡು ಪ್ರತ್ಯೇಕ ಬುದ್ಧನಾದ. ಅವನು ಪಂಚಮುಷ್ಟಿಗಳಲ್ಲಿ ಕೇಶಲುಂಚನವನ್ನು ಮಾಡಿಕೊಂಡು ಶ್ರಮಣನಾಗಿ ವಿಹರಿಸತೊಡಗಿದ.10

ದಿಗಂಬರ ಪರಂಪರೆ–11

ಹರಿಷೇಣನ ಬೃಹತ್ಕಥಾ ಕೋಶವು (ಕಾಲ ಕ್ರಿ. ಶ. ಸು. 932) ದಿಗಂಬರ ಪರಂಪರೆಯಲ್ಲಿ ಬೆಳೆದು ಬಂದಿರುವ ಕರಕಂಡುವಿನ ಕಥೆಗೆ ಆಧಾರವಾಗಿರುವಂತೆ ಕಂಡು ಬರುತ್ತದೆ. ಇದರಲ್ಲಿ ಕರಕಂಡುವಿನ ಪೂರ್ವಭವದಿಂದ ಕಥೆ ಪ್ರಾರಂಭವಾಗಿ ಅನ್ಯರ ಭವಾಂತರ ಕಥೆಗಳೂ ವರ್ಣಿತವಾಗಿವೆ. 430 ಶ್ಲೋಕವಿಸ್ತಾರದಲ್ಲಿ ಕಥೆಯು ವರ್ಣಿತವಾಗಿದೆ. ಅಲ್ಲಿ ಬರುವ ಕಥೆಯನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ :

ಕಥಾಪ್ರಸಂಗವು ಪ್ರಾರಂಭವಾಗುವುದಕ್ಕಿಂತ ಮುಂಚೆ ಸುಮಾರು 100 ಶ್ಲೋಕ

ಗಳಲ್ಲಿ ದಕ್ಷಿಣಾಪಥದ ಪರ್ವತದ ವರ್ಣನೆ, ಅಲ್ಲಿ ಜಿನಾಲಯಗಳನ್ನು ಕಟ್ಟಿಸಿದ ವರ್ಣನೆ ಬರುತ್ತದೆ. ಲಂಕಾಪುರದ ರಾಜ ಸೂರ್ಯಪ್ರಭನೆಂಬುವನು ಮಲಯಪರ್ವತದಲ್ಲಿ ಜಿನಾಲಯವನ್ನು ಕಟ್ಟಿಸಿ ವಿದ್ಯಾಧರರೊಡಗೂಡಿ ಪೂಜೆಯನ್ನು ಸಲ್ಲಿಸಿದನು. ವಿಜಯಾರ್ಧಪರ್ವದಲ್ಲಿ ಸುವೇಗ—ಅತಿವೇಗರೆಂಬ ಅಣ್ಣ-ತಮ್ಮಂದಿರಿದ್ದರು. ಅವರು ಚೈತ್ಯಗಳನ್ನು ವಿಶೇಷವಾಗಿ ಪೂಜಿಸುತ್ತಾ ದಕ್ಷಿಣಾಪಥಕ್ಕೆ ಬಂದು ಮಲಯ ಪರ್ವತದ ಭೂತಿ ಪರ್ವತವೆಂಬಲ್ಲಿ ಪ್ರತಿಮೆಗಳನ್ನು ಸ್ಥಾಪಿಸಿದರು. ಪಾರ್ಶ್ವನಾಥ ಪ್ರತಿಮೆಯನ್ನು ನೋಡಿ ವಿಜಯಾರ್ಧದಲ್ಲೂ ಅದನ್ನು ಸ್ಥಾಪನೆ ಮಾಡಬೇಕೆಂದು ಚಿಂತಿಸಿದರು. ಆದರೆ ಕಲಿಕಂಡವೆಂಬಲ್ಲಿ ಮೂರ್ತಿ ನಿಂತಿತು. ಅದರ ಸುತ್ತ ವಲ್ಮೀಕವು ಬೆಳೆಯಿತು. ಅಲ್ಲಿ ತೇರಾ ಎಂಬ ಪಟ್ಟಣವಿತ್ತು. ಸುವೇಗ-ಅತಿವೇಗರು ಅಲ್ಲಿ ಜಿನಾಲಯಗಳನ್ನು ಕಟ್ಟಿಸಿದರು. ಕಾಲಕ್ರಮದಲ್ಲಿ ಸುವೇಗನು ಬಿಳಿ ಆನೆಯಾಗಿ ಹುಟ್ಟಿಪೂರ್ವಭವ ಸ್ಮರಣೆಯಿಂದ ವಲ್ಮೀಕಕ್ಕೆ ಪೂಜೆಯನ್ನು ಸಲ್ಲಿಸುತ್ತಿದ್ದನು. ವಿಜಯಾರ್ಧ ಪರ್ವತದ ದಕ್ಷಿಣಾಪಥದಲ್ಲಿ ಚಕ್ರವಾಲ ಎಂಬ ಪುರ. ಅಲ್ಲಿ ನೀಲ ಮಹಾನೀಲರಿದ್ದರು. ವಿದ್ಯಾಧರರಿಂದ ಸೋತು, ಇವರು ತೇರಾನಗರಿಗೆ ಬಂದರು. ಇವರಿಗೆ ಆ ಊರಿನ ಧಾರಾ ಮತ್ತು ಶಿವ ಎಂಬ ಬೇಡರಿಂದ ಬಿಳಿ ಆನೆಯೊಂದು ಪ್ರತಿನಿತ್ಯ ವಲ್ಮೀಕವನ್ನು ಪೂಜಿಸುವ ಸಂಗತಿಯು ತಿಳಿದುಬಂತು. ಅವರೂ ಸಹ ಆ ವಲ್ಮೀಕವನ್ನು ಪೂಜಿಸಿದರು. ಷಡೋಪವಾಸವನ್ನು ಕೈಗೊಂಡರು. ದೇವತೆಯು ದರ್ಶನ ನೀಡಿ ಇವರ ವೃತ್ತಾಂತವನ್ನು ತಿಳಿದುಕೊಂಡಳು. ಅಲ್ಲಿಯ ಸಹಸ್ರಸ್ತಂಭ ದೇವಾಲಯದಲ್ಲಿ ಕರಕಂಡುವು ವಲ್ಮೀಕದಲ್ಲಿರುವ ಪಾರ್ಶ್ವಮೂರ್ತಿಯನ್ನು ಸ್ಥಾಪಿಸಿದಾಗ, ಆ ಮೂರ್ತಿಯ ದರ್ಶನದಿಂದ ಇವರಿಗೆ ಮರಳಿ ರಾಜ್ಯಪ್ರಾಪ್ತಿ ಆಗುವುದೆಂದು ತಿಳಿಸಿದಳು. ಅದರಂತೆಯೇ ಆಯಿತು. ಆನೆಯು ಸಲ್ಲೇಖನವನ್ನು ಧರಿಸಿ ಸ್ವರ್ಗಪ್ರಾಪ್ತಿ ಮಾಡಿಕೊಂಡಿತು.

ತೇರಾಪುರದಲ್ಲಿ ಧನದತ್ತನೆಂಬ ಶ್ರೇಷ್ಠಿ. ಆತನಲ್ಲಿ ಧನಪಾಲಕನೆಂಬ ಗೋಪಾಲಕನಿದ್ದನು. ಒಮ್ಮೆ ಸರೋವರದಲ್ಲಿ ಸುಂದರವಾದ ತಾವರೆಯು ಲಭ್ಯವಾಯಿತು. ನಾಗದೇವತೆಯು ಅದನ್ನು ಲೋಕದಲ್ಲಿ ಪ್ರಧಾನರಾದವರಿಗೆ ನೀಡಬೇಕೆಂದು ಹೇಳಿದಳು. ಆತನು ತನ್ನ ಒಡೆಯನೇ ಸರ್ವಶ್ರೇಷ್ಠನೆಂದು ಭಾವಿಸಿದನು. ಅನಂತರ ಶ್ರೇಷ್ಠಿಯು ಅದನ್ನು 'ರಾಜನಿಗೆ ಒಪ್ಪಿಸೋಣ' ಎಂದನು. ರಾಜನು ಅದನ್ನು 'ಮುನಿಗಳಿಗೆ ಅರ್ಪಿಸೋಣ' ಎಂದನು. ಆ ಮುನಿಗಳು ಜಿನೇಂದ್ರನಿಗೆ ಅರ್ಪಿಸಲು ತಿಳಿಸಿದರು. ಆ ಗೋಪಾಲಕನು ಆ ಪುಷ್ಪವನ್ನು ಅತ್ಯಂತ ಭಕ್ತಿಯಿಂದ ಜಿನನಿಗೆ ಅರ್ಪಿಸಿದನು.

ಭರತಕ್ಷೇತ್ರದಲ್ಲಿ ಶ್ರಾವಸ್ತಿಯೆಂಬ ನಗರ. ಅಲ್ಲಿ ನಾಗದತ್ತನೆಂಬ ಶ್ರೀಮಂತ. ಅವನ ಹೆಂಡತಿ ನಾಗದತ್ತಾ ಎಂಬುವಳು. ಇವರ ಮನೆಯಲ್ಲಿ ಬ್ರಾಹ್ಮಣನೊಬ್ಬನಿದ್ದನು. ನಾಗದತ್ತನು ವೈರಾಗ್ಯಪರನಾಗಿ, ತಪಸ್ಸನ್ನು ಆಚರಿಸಿ ಸತ್ತು ಸ್ವರ್ಗದಲ್ಲಿ ದೇವನಾದನು. ಅಲ್ಲಿಂದ ಚ್ಯುತನಾಗಿ ಚಂಪಾನಗರದಲ್ಲಿ ವಸುಪಾಲ ಮತ್ತು ವಸುಮತಿಯರ ಮಗನಾಗಿ

ಹುಟ್ಟಿದನು. ಮನೋಹರನಾದ ಇವನು ದಂತಿವಾಹನನೆಂದು ಹೆಸರಾದನು. ನಾಗದತ್ತೆಳ ಮನೆಯಲ್ಲಿ ವಾಸವಾಗಿದ್ದ ಬ್ರಾಹ್ಮಣನು ಕಾಲಕ್ರಮದಲ್ಲಿ ಮೃತನಾಗಿ ಕಲಿಂಗ ದೇಶದ ದಂತಿಪುರವೆಂಬ ಅಡವಿಯಲ್ಲಿ 'ನರ್ಮದಾ ತಿಲಕ' ವೆಂಬ ಆನೆಯಾಗಿ ಹುಟ್ಟಿದನು. ಒಮ್ಮೆ ಯಾವನೋ ಒಬ್ಬ ಆ ಆನೆಯನ್ನು ದಂತಿ ರಾಜನ ಸಮೀಪಕ್ಕೆ ತಂದುಬಿಟ್ಟನು.

ತಾಮ್ರಲಿಪ್ತ ಪುರದಲ್ಲಿ ವಸುಮಿತ್ರನೆಂಬ ಮಹಾಧನಿಕನಾದ ವೈಶ್ಯನಿದ್ದನು. ನಾಗದತ್ತೆಯು ಸಂಸಾರಸಾಗರದಲ್ಲಿ ಒದ್ದಾಡಿ ಈತನಿಗೆ ಹೆಂಡತಿಯಾದಳು. ಇವರಿಗೆ ಇಬ್ಬರು ಪುತ್ರಿಯರು—ಧನವತಿ ಮತ್ತು ಧನಶ್ರೀ. ಧನವತಿಯನ್ನು ಅದೇ ಊರಿನ ಧನಪಾಲ ಶ್ರೇಷ್ಠಿಗೆ ಕೊಟ್ಟು ಮದುವೆ ಮಾಡಿದರು. ಕೌಶಾಂಬೀ ನಗರದ ವಸುದತ್ತ ವೈಶ್ಯನಿಗೆ ಧನಶ್ರೀಯನ್ನು ಕೊಟ್ಟು ಮದುವೆ ಮಾಡಿದರು. ವಸುದತ್ತನು ಶ್ರಾವಕನಾಗಿದ್ದನು. ಧನಶ್ರೀ ಶ್ರಾವಿಕೆಯಾಗಿದ್ದಳು.

ಕಾಲಕ್ರಮದಲ್ಲಿ ವಸುಮಿತ್ರನು ಸತ್ತನು. ಆಗ ನಾಗದತ್ತೆಯು ಅತ್ಯಂತ ಶೋಕದಿಂದ ಕೌಶಾಂಬಿ ನಗರಕ್ಕೆ ಬಂದಳು. ಧನಶ್ರೀ ತನ್ನ ತಾಯಿಯನ್ನು ಸಮಾಧಾನಗೊಳಿಸಿದಳು. ಅವಳನ್ನು ಮುನಿಯ ಸಮೀಪಕ್ಕೆ ಕರೆದುಕೊಂಡು ಹೋದಳು. ಮುನಿಗಳು ನಾಗದತ್ತಳಿಗೆ ರಾತ್ರಿ ಭೋಜನತ್ಯಾಗದ ವ್ರತವನ್ನು ಕೊಟ್ಟರು. ಅನಂತರ ಅವಳು ತನ್ನ ಮಗಳಾದ ಧನವತಿಯ ಮನೆಗೆ ಹೋದಳು. ಅಲ್ಲಿ ವ್ರತಭ್ರಷ್ಟಳಾದಳು. ಹೀಗೆ ಅವಳು ನಾಲ್ಕು ಬಾರಿ ವ್ರತಭ್ರಷ್ಟಳಾದಳು.

ಶುಭಾಶುಭ ಕರ್ಮಗಳಿಂದ ಕೂಡಿದ ನಾಗದತ್ತಳು ಕೌಶಾಂಬಿಯ ನಗರದ ರಾಜ ವಸುಪಾಲನಿಗೂ ಆತನ ಪತ್ನಿ ವಸುಮತಿಗೂ ಮಗಳಾಗಿ ಹುಟ್ಟಿದಳು. ಆಕೆ ಗರ್ಭದಲ್ಲಿರುವಾಗ ವಸುಮತಿಯು ದುಃಖದಾಯಕವಾದ ಶ್ವಾಸರೋಗದಿಂದ ಪೀಡಿತಳಾದಳು. ಅವಳು ಹುಟ್ಟಿದ ಕೂಡಲೇ ರತ್ನಕಂಬಳಿಯಲ್ಲಿ ಅವಳನ್ನು ಸುತ್ತಿ ಪೆಟ್ಟಿಗೆಯಲ್ಲಿಟ್ಟು ನರ್ಮದಾ ನದಿಯಲ್ಲಿ ತೇಲಿಬಿಟ್ಟರು. ಪೆಟ್ಟಿಗೆಯು ದೋಣಿಯಂತೆ ತೇಲುತ್ತಾ ಗಂಗಾ ನದಿಯನ್ನು ಸೇರಿ ಅಂಗಕ ದೇಶವನ್ನು ತಲುಪಿತು.

ಚಂಪಾನಗರದ ರಾಜ ದಂತಿವಾಹನ. ಅವನ ಹೆಂಡತಿ ವಸುಮಿತ್ರ. ಚಂಪಾ ನಗರಿಯ ಸಮೀಪದಲ್ಲಿ ಕುಸುಮಪುರ. ಅಲ್ಲಿಯ ಮಾಲೆಗಾರ ಕುಂದದಂತ. ಆತನ ಹೆಂಡತಿ ಕುಂದದಂತಿಕಾ. ಕುಂದದಂತನು ಬೆಳಗ್ಗೆ ಗಂಗಾನದಿಯ ಸಮೀಪಕ್ಕೆ ಹೋದಾಗ ನದಿಯಲ್ಲಿ ಪೆಟ್ಟಿಗೆಯನ್ನು ನೋಡಿ ಅದನ್ನು ದಡಕ್ಕೆ ತಂದು ಅದರಲ್ಲಿ ಮಗುವನ್ನು ಕಂಡು ಸಂತೋಷದಿಂದ ಮನೆಗೆ ತೆಗೆದುಕೊಂಡು ಹೋದನು. ತನ್ನ ಹೆಂಡತಿಗೆ ಕೊಟ್ಟನು. ಪದ್ಮಾವತಿಯೆಂದು ಹೆಸರಿಟ್ಟು ಅವಳನ್ನು ಬೆಳೆಸಿದನು. ಅವಳು ಅತ್ಯಂತ ಸುಂದರಿಯಾಗಿ ಬೆಳೆದಳು. ರಾಜ ದಂತಿವಾಹನನು ಒಮ್ಮೆ ಇವಳನ್ನು ನೋಡಿ ಮೋಹಗೊಂಡು ಇವಳನ್ನು ಮದುವೆಯಾದನು. ಕುಂದದಂತನಿಂದ ಪೆಟ್ಟಿಗೆಯ ವಿಚಾರವನ್ನು ತಿಳಿದು ಪೆಟ್ಟಿಗೆಯಲ್ಲಿದ್ದ ಮುದ್ರೆ ಮತ್ತು ರತ್ನಗಂಬಳಿಯ ಸಹಾಯದಿಂದ

ಪದ್ಮಾವತಿಯು ಕೌಶಾಂಬಿಯ ವಸುಪಾಲ ಮತ್ತು ವಸುಮತಿಯರ ಮಗಳೆಂದು ತಿಳಿದನು.

ಪದ್ಮಾವತಿಯು ಗರ್ಭದಲ್ಲಿ, ಜಿನಪೂಜೆಯನ್ನು ಮಾಡಿದ ಗೋಪಾಲಕನು ಜನಿಸಿದನು. ಅವನು ಗರ್ಭದಲ್ಲಿದ್ದಾಗ ಪದ್ಮಾವತಿಯು ಕೃಶಳಾಗತೊಡಗಿದಳು. ಆಗ ರಾಜನು ನಿನಗೆ ಯಾವುದರಲ್ಲಿ ಆಸೆಯಾಗಿದೆ ಹೇಳೆಂದು ಕೇಳಿದನು, ಪದ್ಮಾವತಿಯು ನರ್ಮದಾತಿಲಕವೆಂಬ ಆನೆಯ ಮೇಲೆ ಪುರುಷವೇಷವನ್ನು ಧರಿಸಿ ಚಂಪಾನಗರಿಯನ್ನು ಸುತ್ತುಹಾಕಿ ಬರಬೇಕೆಂದು ತನಗೆ ಬಯಕೆಯಾಗಿದೆ ಎಂದು ಸೂಚಿಸಿದಳು. ಹಾಗೆ ಮಾಡುವಾಗ ಆಕಾಶದಲ್ಲಿ ವಾಯುವೇಗನೆಂಬ ಅಲಂಕೃತನಾದ ನಭಶ್ಚರನು ಕಾಣಿಸಿಕೊಂಡನು. ಮೇಘ ಗರ್ಜನೆ ಶುರುವಾಯಿತು. ಮಿಂಚು ಸಿಡಿಲುಗಳಿಂದ ಭಾರಿ ಮಳೆ ಶುರುವಾಯಿತು. ಆ ಸಮಯದಲ್ಲಿ ನರ್ಮದಾತಿಲಕವು ಪೂರ್ವಸ್ಮರಣೆಯನ್ನು ಹೊಂದಿ ಕಾಡಿನ ಮುಖವಾಗಿ ಓಡತೊಡಗಿತು.

ಪದ್ಮಾವತಿಯು ರಾಜನನ್ನು ಕುರಿತು, 'ನನ್ನಿಂದಾಗಿ ನಿನಗೆ ತೊಂದರೆಯುಂಟಾಗುತ್ತಿದೆ. ನಿನಗೆ ಆಪತ್ತು ಬಂದರೆ, ನೀನು ನಾಶವಾದರೆ ಇಡೀ ಭೂಮಂಡಲವೇ ನಾಶವಾಗುತ್ತದೆ. ಆದ್ದರಿಂದ ನೀನು ಆನೆಯಿಂದ ಪಾರಾಗು' ಎಂದು ಹೇಳಿದಳು. ಹಾಗೆಯೇ ರಾಜನು ಮರದ ರೆಂಬೆಯನ್ನು ಹಿಡಿದುಕೊಂಡು ಇಳಿದನು. ದೇವಿಯ ಗುಣವನ್ನು ಸ್ಮರಿಸುತ್ತಾ ಮನೆಗೆ ಹೋದನು.

ಆನೆಯು ದಂತಿಪುರದ ಅಡವಿಯನ್ನು ತಲುಪಿ, ಅಲ್ಲಿಂದ ಒಂದು ಸರೋವರವನ್ನು ಪ್ರವೇಶಿಸಿತು. ಪದ್ಮಾವತಿಯು ಆನೆಯಿಂದ ಇಳಿದು ದಡವನ್ನು ಸೇರಿದಳು. ಅಲ್ಲಿ ಶತಭಟನೆಂಬ ಮಾಲೆಕಾರನು ಅವಳನ್ನು ನೋಡಿ, ತನ್ನ ಮನೆಗೆ ಕರೆದುಕೊಂಡು ಹೋದನು. ಮಾಲೆಕಾರನು ವ್ಯಾಪಾರಕ್ಕೆ ಹೋದಾಗ ಪದ್ಮಾವತಿಯನ್ನು ಅವನ ಹೆಂಡತಿಯು ಮನೆಯಿಂದ ಹೊರಗೆ ಹಾಕಿದಳು. ಅವಳು ಮಹಾಭಯವೆಂಬ ಸ್ಮಶಾನಕ್ಕೆ ಹೋದಳು. ಅಲ್ಲಿ ಸರ್ವಾಂಗಸುಂದರನಾದ ಮಗನನ್ನು ಪಡೆದಳು.

ಬಾಲದೇವನೆಂಬ ಖೇಚರನು ಮಾತಂಗ ರೂಪದಿಂದ ಅಲ್ಲಿದ್ದು, ತಾನು ಮಗುವನ್ನು ರಕ್ಷಿಸುವುದಾಗಿ ಹೇಳಿದನು. ಅಲ್ಲದೆ ತನ್ನ ಪೂರ್ವಕಥೆಯನ್ನು ಹೇಳಿದನು.

ಈ ಭರತಕ್ಷೇತ್ರದ ಜಂಬೂ ದ್ವೀಪದಲ್ಲಿ ವಿಜಯಾರ್ಧವೆಂಬ ಪರ್ವತ. ಅದರ ದಕ್ಷಿಣ ಶೃಂಗಗಳಲ್ಲಿ ಮಣಿಪ್ರಸಾದ ಭೂಷಿತವಾದ ವಿದ್ಯಾಧರರ ಆವಾಸಸ್ಥಾನವಿದೆ. ಅಲ್ಲಿಯ ರಾಜ ವಿದ್ಯುತ್‌ಪ್ರಭ. ಅವನ ಹೆಂಡತಿ ವಿದ್ಯುಲ್ಲೇಖಾ. ಅವನ ಮಗ ಬಾಲದೇವ. ಆತನ ಪ್ರಿಯತಮೆ ಹೇಮಮಾಲಾ. ಬಾಲದೇವನು ಊರು ಸುತ್ತುತ್ತಾ ಕಲಿಂಗ, ಆಂಧ್ರ ಮೊದಲಾದ ದೇಶಗಳಲ್ಲಿ ಸಂಚರಿಸುತ್ತಿರುವಾಗ ರಾಮಗಿರಿಯ ಹತ್ತಿರ ಆತನ ವಿಮಾನವು ನಿಂತಿತು. ಕೆಳಗಡೆ ಒಬ್ಬ ಮುನಿಯು ನಿಂತಿದ್ದನು. ತನ್ನ ವಿಮಾನದ ಚಾಲನೆಗೆ ಭಂಗವನ್ನು ತಂದ ಮುನಿಯ ಬಗೆಗೆ

ಬಾಲದೇವ ಕುಪಿತನಾದನು. ಆ ಮುನಿಗಳ ಧ್ಯಾನಕ್ಕೆ ಭಂಗವನ್ನು ತಂದನು. ಆ ಮುನಿಯು ಬಾಲದೇವನನ್ನು ಕುರಿತು, 'ನಿನಗೆ ಸರ್ವವಿದ್ಯೆಗಳು ನಷ್ಟವಾಗಲಿ' ಎಂದು ಶಾಪವನ್ನು ಕೊಟ್ಟನು. ಬಾಲದೇವನು ಅತ್ಯಂತ ದೀನತೆಯಿಂದ ತನ್ನ ಶಾಪವು ಯಾವಾಗ ನಾಶವಾಗುತ್ತದೆ ಎಂದು ಕೇಳಿದಾಗ, 'ಕಲಿಂಗ ದೇಶದ ರಾಜ ದಂತಿವಾಹನನ ಪತ್ನಿ ಪದ್ಮಾವತಿಯು ಸ್ಮಶಾನದಲ್ಲಿ ಗಂಡುಮಗುವನ್ನು ಪಡೆಯುತ್ತಾಳೆ. ಆ ಮಗು ಭೂಮಂಡಲಕ್ಕೆ ಅಧಿಪತಿಯಾಗುತ್ತದೆ. ಆ ಮಗುವನ್ನು ಮನೆಗೆ ಕರೆದುಕೊಂಡು ಹೋಗಿ ಬೆಳೆಸು. ಆಗ ನಿನಗೆ ವಿದ್ಯಾಪ್ರಾಪ್ತಿಯಾಗುತ್ತದೆ' ಎಂದು ಹೇಳಿದನು. ಆ ಬಾಲದೇವನೇ ತಾನು ಎಂಬುದಾಗಿ ಮಾತಂಗನು ತಿಳಿಸಿದನು. ಹೀಗೆ ಹೇಳಿ ಪದ್ಮಾವತಿಯ ಮಗುವನ್ನು ತೆಗೆದುಕೊಂಡು ತನ್ನ ಮನೆಗೆ ಹೋಗಿ ಹೆಂಡತಿಗೆ ಕೊಟ್ಟು ಮಗುವನ್ನು ಬೆಳೆಸಿದನು. ಪದ್ಮಾವತಿಯು ಸ್ಮಶಾನವನ್ನು ತೊರೆದು ದಂತಿಪುರಕ್ಕೆ ಹೋಗಿ ಸಂನ್ಯಾಸಿಯಾದಳು. ನಂತರ ಮಗುವಿಗೆ ಕರ್ಕಂಡನೆಂದು ಹೆಸರಿಟ್ಟರು.

ಹೀಗಿರುವಲ್ಲಿ ಇಬ್ಬರು ಯತಿಗಳು ಸಂಘದೊಂದಿಗೆ ಸ್ಮಶಾನಕ್ಕೆ ಬಂದರು. ಅಲ್ಲಿ ಮನುಷ್ಯನ ಒಂದು ಬುರುಡೆಯ ಬಾಯಿಯಿಂದ ಒಂದು, ಕಣ್ಣುಗಳಿಂದ ಎರಡು, ಹೀಗೆ ಮೂರು ಬಿದಿರು ಹುಟ್ಟಿರುವುದನ್ನು ಕಂಡರು. ಈ ಬಿದಿರು ಕೋಲುಗಳು ಯಾರ ಛತ್ರ, ಧ್ವಜ, ಅಂಕುಶಗಳಲ್ಲಿ ಸೇರುತ್ತವೆಯೋ ಅವನು ರಾಜನಾಗುತ್ತಾನೆ ಎಂದು ಆ ಮುನಿಗಳು ತಿಳಿಸಿದರು. ಅದನ್ನು ಕೇಳಿ ರಾಜ್ಯವನ್ನು ಹೊಂದುವ ಆಸೆಯಿಂದ ಆ ಮೂರು ಬಿದಿರುಗಳನ್ನು ಒಬ್ಬ ಬ್ರಾಹ್ಮಣ ಕಡಿದು ತೆಗೆದುಕೊಂಡು ಹೋಗುವಾಗ ಸ್ಮಶಾನದಲ್ಲಿ ಕರ್ಕಂಡನು ಅವನನ್ನು ತಡೆದು ಬಿದಿರುಗಳನ್ನು ಅವನಿಂದ ತೆಗೆದುಕೊಂಡನು. ಆ ಬ್ರಾಹ್ಮಣನು ಆ ಬಿದಿರಿನ ಮಹತ್ತ್ವವನ್ನು ಕರ್ಕಂಡನಿಗೆ ತಿಳಿಸಿದನು. ನೀನು ಇವುಗಳಿಂದ ರಾಜನಾದಾಗ ತನ್ನನ್ನು ಮಂತ್ರಿಯನ್ನಾಗಿ ಮಾಡಿಕೊ ಎಂದು ಹೇಳಿ ಹೊರಟು ಹೋದನು.

ದಂತಿಪುರಾಧೀಶನಾದ ಬಲವಾಹನ ರಾಜನು ಪುತ್ರಹೀನನಾಗಿ ಸತ್ತನು. ಪಟ್ಟದ ಆನೆಯನ್ನು ನಾನಾ ರೀತಿಯಿಂದ ಅಲಂಕರಿಸಿ ಅದರ ಸೊಂಡಿಲಿನಲ್ಲಿ ಒಂದು ಹಾರವನ್ನು ಕೊಟ್ಟು ಅದನ್ನು ಬಿಟ್ಟರು. ಅದು ನಗರವನ್ನೆಲ್ಲಾ ಸುತ್ತಾಡಿ, ಕೊನೆಗೆ ಸ್ಮಶಾನಕ್ಕೆ ಬಂದು ಕರ್ಕಂಡನಿಗೆ ಹಾರವನ್ನು ಹಾಕಿತು. ಕರ್ಕಂಡನನ್ನು ಗೌರವ ಆದರಗಳಿಂದ ಅರಮನೆಗೆ ಕರೆದುಕೊಂಡು ಬಂದರು. ಪಟ್ಟವನ್ನು ಕಟ್ಟಿದರು. ಕರ್ಕಂಡರಾಜನು ದೇವೇಂದ್ರನಂತೆ ರಾಜ್ಯವಾಳುತ್ತಿದ್ದನು.

ಈ ಕಡೆ ಬಾಲದೇವನಿಗೆ ಮಹಾವಿದ್ಯಾ ಪ್ರಾಪ್ತಿಯಾಯಿತು. ಅವನು ಪ್ರಜೆಗಳಿಗೆ ಕರ್ಕಂಡ ಮಹಾರಾಜನ ಜನ್ಮವೃತ್ತಾಂತವನ್ನು ತಿಳಿಸಿ ತನ್ನ ಲೋಕಕ್ಕೆ ಹೋದನು. ಕರ್ಕಂಡ ಮಹಾರಾಜನು, ಮೂರು ಬಿದಿರುಗಳಿಂದ ಛತ್ರಿ ಮೊದಲಾದುವುಗಳನ್ನು ಮಾಡಿಸಿ ಸುಮತಿ ಬ್ರಾಹ್ಮಣನನ್ನು ಕರೆಸಿ ಅವನನ್ನು ಮಂತ್ರಿಯಾಗಿ ಮಾಡಿಕೊಂಡನು,

ಪದ್ಮಾವತಿಯು ಮಗನ ಮೇಲಿನ ಪ್ರೀತಿಯಿಂದ ಕಳಿಂಗ ದೇಶಕ್ಕೆ ಬಂದು ಹೋಗುತ್ತಿದ್ದಳು.

ಅಂಗದೇಶದ ರಾಜನಾದ ದಂತಿವಾಹನನು ಕಲಿಂಗದ ರಾಜನಾದ ಕರ್ಕಂಡ ರಾಜನಿಗೆ ಸೈನ್ಯಸಮೇತ ಬಂದು ಶರಣಾಗುವಂತೆ ದೂತರಿಂದ ಹೇಳಿಕಳಿಹಿಸಿದನು. ಕರ್ಕಂಡರಾಜನು ಅದನ್ನು ತಿರಸ್ಕರಿಸಿ, ದೂತನಿಗೆ ಅವಮಾನ ಮಾಡಿ ಕಳುಹಿಸಿದನು. ದಂತಿರಾಜನು ಕರ್ಕಂಡರಾಜನೊಂದಿಗೆ ಯುದ್ಧಕ್ಕೆ ಬಂದನು.

ಪದ್ಮಾವತಿಯು ತನ್ನ ಗಂಡನಾದ ದಂತಿವಾಹನನ್ನು ಸಮೀಪಿಸಿ, ಪೂರ್ವ ವೃತ್ತಾಂತವನ್ನೆಲ್ಲಾ ನೆನಪಿಸಿ ಕರ್ಕಂಡ ಮಹಾರಾಜ ಬೇರೆ ಯಾರೂ ಅಲ್ಲ, ತಮ್ಮ ಮಗನೇ ಎಂದು ಹೇಳಿದಳು. ಕರ್ಕಂಡರಾಜನು ತನ್ನ ತಾಯಿಯಿಂದ, ದಂತಿವಾಹನನು ತನ್ನ ತಂದೆ ಎಂಬುದಾಗಿ ತಿಳಿದನು. ದಂತಿರಾಜನು ತನ್ನ ಮಗನಿಗೆ ಸಮಸ್ತ ರಾಜ್ಯಕೋಶ ಗಳನ್ನೂ ನೀಡಿ ವೈರಾಗ್ಯದಿಂದ ತಪಸ್ಸಿಗೆ ತೆರಳಿದನು.

ಎಲ್ಲಾ ರಾಜರೂ ಕರ್ಕಂಡ ಮಹಾರಾಜನಿಗೆ ಅಧೀನರಾಗಿದ್ದರು. ಆದರೆ ಚೇಟ, ಚೋಳ, ಪಾಂಡ್ಯರಾಜರು ಅವನಿಗೆ ತಲೆಬಾಗಲಿಲ್ಲ. ದೂತರಿಂದ ಹೇಳಿಸಿದಾಗಲೂ, ಜಿನನನ್ನು ಬಿಟ್ಟು ಬೇರೆ ಯಾರಿಗೂ ತಾವು ತಲೆಬಾಗುವುದಿಲ್ಲವೆಂದು ತಿಳಿಸಿದರು.

ಕೋಪಗೊಂಡ ಕರ್ಕಂಡರಾಜನು ಸೈನ್ಯಸಮೇತನಾಗಿ ಅವರೊಂದಿಗೆ ಯುದ್ಧಕ್ಕೆ ಹೊರಟನು. ತೇರಾ ಎಂಬ ನಗರವನ್ನು ತಲುಪಿದಾಗ ಶಿವನೆಂಬ ಬೇಡನು ಅವನನ್ನು ಸ್ವಾಗತಿಸಿ ವಂದಿಸಿ ಸತ್ಕರಿಸಿದನು. ಅರಣ್ಯ ಪ್ರದೇಶದ ಆಶ್ಚರ್ಯಗಳೇನು ? ಎಂದು ಕೇಳಿದಾಗ, ಶಿವನು ರಾಜನಿಗೆ ಹೀಗೆ ಹೇಳಿದನು—'ಇಲ್ಲಿಂದ ದಕ್ಷಿಣದ ಭಾಗದಲ್ಲಿ ಸಹಸ್ರ ಸ್ತಂಭವುಳ್ಳ ಜಿನಾಲಯವಿದೆ. ಅದರ ಮೇಲೆ ಚೂಡಾಮಣಿಯಂತೆ, ದೇವತಾ ರಕ್ಷಿತವಾದ ವಲ್ಮೀಕವಿದೆ. ಒಂದು ದೊಡ್ಡದಾದ ಬಿಳಿ ಆನೆಯು ಅದಕ್ಕೆ ಅಭಿಷೇಕ ಮಾಡುತ್ತದೆ.' ಇದನ್ನು ಕೇಳಿ ರಾಜನು ಅಲ್ಲಿಗೆ ಹೋಗಿ ಸಹಸ್ರ ಸ್ತಂಭವುಳ್ಳ ಜಿನಾಲಯವನ್ನು ನೋಡಿ ಉಪವಾಸವಿದ್ದು ಅದಕ್ಕೆ ಪೂಜೆಯನ್ನು ಸಲ್ಲಿಸಿದನು. ಜಿನಸಿಂಹಾಸನದಲ್ಲಿ ಗ್ರಂಥಿಯೊಂದನ್ನು ಕಂಡನು. ಪ್ರತಿಮಾ ಲಕ್ಷಣ ಜ್ಞಾನವುಳ್ಳ ಉಪಾಧ್ಯಾಯನನ್ನು ಕರೆಸಿ, ಅಲ್ಲಿ ಜಲವಾಹಿಯೊಂದು ಇದೆಯೆಂದು ತಿಳಿದುಕೊಂಡನು. ಅದನ್ನು ಭೇದಿಸಿದರೆ ಅದರಿಂದ ದೇವಾಲಯವು ಜಲಪೂರಿತವಾಗುವುದೆಂದೂ ಅವರು ಹೇಳಿದರು. ಈ ಮಾತನ್ನು ಆಲಕ್ಷಿಸಿ ರಾಜನು ಗ್ರಂಥಭಂಗವನ್ನು ಮಾಡೆಂದು ಒತ್ತಾಯ ಮಾಡಿದಾಗ, ಅದರಂತೆ ಉಪಾಧ್ಯಾಯನು ಗ್ರಂಥಭಂಗ ಮಾಡಿದನು. ಅದರಿಂದ ಜಲವುಕ್ಕಿ ಇಡೀ ಆಯತನವೇ ಜಲಾವೃತವಾಯಿತು. ರಾಜನು ದುಃಖಿತನಾಗಿ ಉಪವಾಸ ವ್ರತವನ್ನು ಕೈಗೊಂಡನು. ಒಬ್ಬ ನಾಗಕುಮಾರನು ಬಂದು, 'ಹಿಂದೆ ನೀಲ– ಮಹಾನೀಲರೆಂಬ ಅಣ್ಣ ತಮ್ಮಂದಿರು ವಿಜಯಾರ್ಧ ಪರ್ವತದಲ್ಲಿದ್ದರು. ಅವರು ಇಲ್ಲಿಗೆ ಬಂದು ಈ ಜಿನಾಲಯವನ್ನು ಕಟ್ಟಿಸಿದರು. ಮಹಾನೀಲನ ಖೇಚರ ಮಿತ್ರನು ಇಲ್ಲಿಗೆ

ಬಂದು ಜಿನಾಲಯದಲ್ಲಿ ಜಿನನಿಗೆ ನಮಸ್ಕರಿಸಿದನು. ನಂತರ ಅವನು ಬಂದು ವಲ್ಮೀಕದಲ್ಲಿ ಮೂರ್ತಿಯನ್ನು ಸ್ಥಾಪಿಸಿದನು. ಕೆಳಗೆ ಹೋಗಿ ಪಾರ್ಶ್ವನಾಥನ ದರ್ಶನ ಮಾಡಿ ಪುನಃ ಮೇಲೆ ಬಂದು ಮೂರ್ತಿಯನ್ನು ತೆಗೆದುಕೊಳ್ಳಲು ಹೋದಾಗ ಮೂರ್ತಿಯು ನಿಶ್ಚಲವಾಗಿತ್ತು. ಅದಕ್ಕೆ ಆಯತನವನ್ನು ಕಟ್ಟಿ ಅವನು ಹೊರಟು ಹೋದನು. ಈಗ ನೀರಿನಿಂದ ಆವೃತವಾದ ಇದನ್ನು ಏನು ಮಾಡಲೂ ಸಾಧ್ಯವಿಲ್ಲ' ಎಂದು ಹೇಳಿ ಅಂತರ್ಧಾನನಾದನು. ಆನೆಯು ಸರ್ವವೂ ಜಲಾವೃತವಾದುದನ್ನು ತಿಳಿದು ಪರ್ವತದ ಮೇಲಕ್ಕೆ ಹೋಗಿ ಸಮಾಧಿಯನ್ನು ಹೊಂದಿ ದೇವನಾಗಿ ಜನಿಸಿತು.

ರಾಜನು ಕಲ್ಲುಕುಟಿಗರನ್ನು ಕರೆಸಿ ಕೆಳಭಾಗದಲ್ಲಿ ಉತ್ತಮವಾದ ಜಿನಾಲಯವನ್ನು ನಿರ್ಮಿಸಿದನು. ನಂತರ ಪೂಜೆಯನ್ನು ಮಾಡಿ ದ್ರವಿಡ ದೇಶಕ್ಕೆ ಹೋದನು. ಅಲ್ಲಿಯ ರಾಜರು ಯುದ್ಧಕ್ಕೆ ಬಂದರು. ಯುದ್ಧದಲ್ಲಿ ಚೇಟಕಾದಿ ಮೂರು ರಾಜರನ್ನು ಸೆರೆ ಹಿಡಿದನು. ಅವರ ತಲೆಯನ್ನು ತನ್ನ ಕಾಲಿನಿಂದ ಒದ್ದಾಗ ಅವರ ತಲೆಯಲ್ಲಿ ಜಿನ ಮೂರ್ತಿಯನ್ನು ಕಂಡು ಬಹಳ ವಿಷಾದಪಟ್ಟನು. ಪಾಂಡ್ಯರಾಜನೊಂದಿಗೆ ಇತರ ರಾಜರೂ ಮಕ್ಕಳಿಗೆ ರಾಜ್ಯವನ್ನು ಒಪ್ಪಿಸಿ ಜೈನ ದಿಗಂಬರರಾದರು. ಸಮಸ್ತ ದ್ರವಿಡ ದೇಶವನ್ನು ವಶಪಡಿಸಿಕೊಂಡು ಚಂಪಾಪುರಿಗೆ ಹಿಂದಿರುಗಿದನು. ತನ್ನ ಮಗನಾದ ವಸುಪಾಲನಿಗೆ ರಾಜ್ಯವನ್ನು ವಹಿಸಿ ವರ್ಧಮಾನ ಜಿನೇಂದ್ರ ತೀರ್ಥದಲ್ಲಿ, ವೀರಸೇನ ಗುರುವಿನ ಸಮೀಪದಲ್ಲಿ ಸ್ವರ್ಗ ಮೋಕ್ಷದಾಯಕವಾದ ತಪಸ್ಸನ್ನು ಆಚರಿಸಿದನು.

ಮೇಲೆ ನಿರೂಪಗೊಂಡಿರುವ ಕತೆಗಳು ಬೌದ್ಧ ಹಾಗೂ ಜೈನಪರಂಪರೆಗಳ ಕಥಾ ಮಾದರಿಗಳಾಗಿವೆ. ಇವುಗಳಲ್ಲಿ ಬೌದ್ಧ ಪರಂಪರೆಯಲ್ಲಿ ಬರುವ ಕಥೆಯು ಹರವು ಅತ್ಯಲ್ಪ. ಕರಕಂಡುವಿನ ಹೆಸರು ಮತ್ತು ಆತನ ತಂದೆ ತಾಯಿಗಳ ಹೆಸರು—ಇವುಗಳು ಎಲ್ಲೆಡೆಯಲ್ಲಿಯೂ ಒಂದೇ ಆಗಿವೆ. ರಾಜ್ಯವನ್ನು ತೊರೆದು ಅವನು ಜ್ಞಾನಿಯಾದನೆಂಬ ಅಂಶವೊಂದನ್ನು ಬಿಟ್ಟರೆ ಉಳಿದಂತೆ ಕತೆಯಲ್ಲಿ ಯಾವ ಹೋಲಿಕೆಯೂ ಕಂಡು ಬರುವುದಿಲ್ಲ.

ಶ್ವೇತಾಂಬರ-ದಿಗಂಬರ ಪರಂಪರೆಗಳಲ್ಲಿ ಮೂಡಿ ಬಂದಿರುವ ಕಥಾವಿನ್ಯಾಸ ಗಳಲ್ಲಿ ಕಂಡುಬರುವ ಕೆಲವು ವ್ಯತ್ಯಾಸಗಳು :

ಕಥಾ ಪೀಠಿಕೆಯಲ್ಲಿ ದಿಗಂಪ.ಯಲ್ಲಿ ತೇರಾಪಟ್ಟಣದ ಜಿನಾಲಯಗಳ ವೃತ್ತಾಂತ ಶ್ವೇತಾಂಪ.ಯಲ್ಲಿ ಕಂಡುಬರುವುದಿಲ್ಲ. ದಿಗಂಪ.ಯಲ್ಲಿ ಕರಕಂಡುವಿನ ಪೂರ್ವಜನ್ಮದ ಕಥೆ ಹಾಗೂ ಆತನ ತಂದೆ-ತಾಯಿಗಳ, ಬಂಧುಗಳ ಜನ್ಮಾಂತರದ ಕಥೆಯು ಹೆಣೆದು ಕೊಂಡು, ಶ್ವೇತಾಪ. ಗಿಂತ ಜಡಿಲವಾಗಿ ಕಂಡುಬರುತ್ತದೆ. ದಿಗಂಪ ಯಲ್ಲಿ ಕಥನದಲ್ಲಿ ಜೈನಪುರಾಣ ಸಂಪ್ರದಾಯದ ರೋಚಕತೆಯನ್ನು ಕಾಣುತ್ತೇವೆ. ಪದ್ಮಾವತಿ ವಿವಾಹ ಮಾಡಿಕೊಂಡು ಬೀಳಾಗ, ಅರಮನೆಯಲ್ಲಿ ಆಕೆ ಮಾತಂಗ ಕನ್ಯೆಯೆಂದು ಅವಮಾನ

ಮಾಡಿದ ಪ್ರಸಂಗ, ಧಾಡೀವಾಹನನ ಹಿರಿಯ ಪತ್ನಿಯ ವಿವರ ದಿಗಂಪ. ಯಲ್ಲಿ ಕಂಡು ಬರುವುದಿಲ್ಲ.

ರಾಜ ಧಾಡೀವಾಹನನು, ಓಡುತ್ತಿದ್ದ ಆನೆಯಿಂದ ತಪ್ಪಿಸಿಕೊಂಡ ರೀತಿ ದಿಗಂಪ. ಯಲ್ಲಿ ಅಷ್ಟಾಗಿ ಸಮಂಜಸವಾಗಿ ಕಂಡುಬರುವುದಿಲ್ಲ. ರಾಣಿ ಮರದ ರೆಂಬೆಯನ್ನು ಹಿಡಿದು ಇಳಿದು ಬಿಡು ಎಂದ ಕೂಡಲೆ ರಾಜ ಹಾಗೆಯೇ ಮಾಡಿ, ರಾಣಿಯ ಗುಣಗಳನ್ನು ನೆನೆಯುತ್ತ ಹಿಂತಿರುಗಿದನು ಎಂಬಲ್ಲಿ ಧಾಡೀವಾಹನನ ಪಾತ್ರದ ಘನತೆ ಇಳಿದಿದೆ. ಆದರೆ ಶ್ವೇತಾಂಪ. ಯ ಕತೆಯಲ್ಲಿ ಈ ಸನ್ನಿವೇಶ ಸ್ವಲ್ಪ ಭಿನ್ನ ರೀತಿಯಲ್ಲಿ ಕಂಡು ಬರುತ್ತದೆ. ಒಟ್ಟಾಗಿ ಇಬ್ಬರೂ ರೆಂಬೆ ಹಿಡಿದು ಆನೆಯಿಂದ ತಪ್ಪಿಸಿಕೊಳ್ಳಬೇಕೆಂಬ ಯೋಜನೆಯಲ್ಲಿ ರಾಜ ಮಾತ್ರ ಸಫಲನಾಗುವ ಅಂಶ ಬರುತ್ತದೆ.

ಮಾತಂಗನ ವೃತ್ತಾಂತ, ಮಾಲೆಕಾರನ ವಿಷಯ ಇವು ಶ್ವೇತಾಂಪಯಲ್ಲಿ ಕಂಡುಬರುವುದಿಲ್ಲ. ಅಲ್ಲದೆ ಕರಕಂಡುವಿನ ವಿವಾಹ, ದಿಗ್ವಿಜಯ, ತೇರಾಪಟ್ಟಣದಲ್ಲಿ ಕಟ್ಟಿಸಿದ ದೇವಾಲಯದ ವಿಚಾರಗಳೂ ಶ್ವೇತಾಂಪ. ಯಲ್ಲಿ ಕಂಡುಬರುವುದಿಲ್ಲ. ಕರಕಂಡುವನ್ನು ಚಾರಿತ್ರಿಕ ವ್ಯಕ್ತಿಯೆಂದು ಗುರುತಿಸಿಕೊಳ್ಳುವಲ್ಲಿ ತೇರಾಪಟ್ಟಣದ ಗುಹದೇವಾಲಯಗಳು ಪುಷ್ಟಿಯನ್ನು ನೀಡುತ್ತವೆ.[12]

ಮೇಲೆ ಹೇಳಿರುವ ಕೆಲವು ವ್ಯತ್ಯಾಸಗಳನ್ನು ಬಿಟ್ಟರೆ, ಕಥೆಯ ಮುಖ್ಯ ಚೌಕಟ್ಟು ಒಂದೇ ಆಗಿರುವುದನ್ನು ಕಂಡುಕೊಳ್ಳಬಹುದಾಗಿದೆ.

ಕರಕಂಡು ಚರಿತ್ರೆಯನ್ನು ನಿರೂಪಿಸುವ ಇತರ ಕೆಲವು ದಿಗಂಬರ ಪರಂಪರೆಯ ಕೃತಿಗಳು :

ಕರಕಂಡು ಕಥೆಯ ವಿಸ್ತಾರವನ್ನು ಈ ಹಿಂದೆಯೇ ಗುರುತಿಸಲಾಗಿದೆ. ಈ ಕಥೆಯಲ್ಲಿ ಕಂಡುಬರುವ ಸ್ವಾರಸ್ಯಕರವಾದ ಕೆಲವು ಅಂಶಗಳು ಹಾಗೂ ಕಥಾನಾಯಕನ ಕೆಲವು ಹಿರಿಮೆಗಳು ವಿವಿಧ ಕವಿಗಳಿಗೆ ಸ್ಫೂರ್ತಿಯನ್ನು ನೀಡಿದಂತೆ ಕಂಡುಬರುತ್ತದೆ. ಹಾಗೆ ಬಂದಿರುವ ಕಾವ್ಯರಾಶಿಯಲ್ಲಿ ಕವಿ ಕನಕಾಮರನ 'ಕರಕಂಡ ಚರಿಉ', ಶ್ರೀಷೇಣನ 'ಕಹಕೋಸು'ವಿನಲ್ಲಿ ಕಂಡುಬರುವ 'ಕರಕಂಡು ಚರಿತೆ', ನಾಗರಾಜನ 'ಪುಣ್ಯಾಸ್ರವ'[13] ದಲ್ಲಿ ಬರುವ ಕರಕಂಡು ಮಹಾರಾಜನ ಕಥೆಯನ್ನು ಇಲ್ಲಿ ಪರಿಶೀಲಿಸಲಾಗಿದೆ.

ಮುನಿ ಕನಕಾಮರನ 'ಕರಕಂಡ ಚರಿಉ' ವಿಸ್ತೃತವಾದ ಸ್ವತಂತ್ರ ಕಾವ್ಯ. ಸಂಧಿ ಬಂಧ ಕಾವ್ಯ ಶೈಲಿಯಲ್ಲಿ 10 ಸಂಧಿಗಳಲ್ಲಿ ರಚಿತವಾಗಿರುವ ಈ ಕೃತಿ ಕರಕಂಡುವಿನ ಕಥೆಯನ್ನು ಸ್ವತಂತ್ರವಾಗಿ ನಿರೂಪಿಸುವ ಪ್ರಥಮ ಕೃತಿಯಾಗಿ ಕಂಡುಬರುತ್ತದೆ.

ಗ್ರಂಥದ ಪ್ರತಿಯೊಂದು ಸಂಧಿಯಲ್ಲಿಯ ಕೊನೆಯಲ್ಲಿ ಗ್ರಂಥಕಾರನ ಹೆಸರನ್ನು ಕನಕಾಮರನೆಂದು ಹೇಳಿದೆ, ಅಲ್ಲದೆ ಪ್ರಾರಂಭ ಮತ್ತು ಅಂತ್ಯದಲ್ಲಿ ತನ್ನ ಗುರು ಪಂಡಿತ

ಮಂಗಲದೇವನೆಂದು ಹೇಳಿದ್ದಾನೆ (1-2) ಕೊನೆಯ ಪ್ರಶಸ್ತಿ ಪದ್ಯದಲ್ಲಿ ತಾನು ಬ್ರಾಹ್ಮಣ ವಂಶದ ಚಂದ್ರ ಋಷಿ ಗೋತ್ರದಲ್ಲಿ ಉತ್ಪನ್ನನಾದವನೆಂದೂ, ವೈರಾಗ್ಯ ಪರನಾಗಿ ದಿಗಂಬರ ಮುನಿಯಾದನೆಂದೂ ಹೇಳಿಕೊಂಡಿದ್ದಾನೆ. ಮುನಿಯಾದ ಈತ ತನ್ನ ಸಂಚಾರ ಕಾಲದಲ್ಲಿ 'ಆಸಾಇನು' ನಗರಕ್ಕೆ ಬಂದು ಈ ಗ್ರಂಥ ರಚನೆಯನ್ನು ಮಾಡಿರುವುದಾಗಿ ಹೇಳಿದ್ದಾನೆ. ಅಲ್ಲದೆ ಈತನ ಕಾಲನಿರ್ಣಯಕ್ಕೆ ಸಹಾಯಕವಾಗುವಂತೆ ವಿಜಯಪಾಲ, ಭೂಪಾಲರಾಜ, ಕರ್ಣ ರಾಜರನ್ನು ಸಹ ಹೆಸರಿಸಿದ್ದಾನೆ.

ಮೇಲಿನ ಮಾಹಿತಿಗಳು ಕವಿಯ ಮಾತುಗಳಿಂದಲೇ ದೊರೆಯುವಂಥವು. ಆದರೂ ಕವಿ ತನ್ನ ಕಾಲ, ತನ್ನ ಮೊದಲಿನ ಹೆಸರು, ತಂದೆ-ತಾಯಿ ಮೊದಲಾದ ವಿಚಾರವಾಗಿ ಹೇಳಿಕೊಂಡಿಲ್ಲ. ಈತನು ಮೂವರು ರಾಜರನ್ನು ಹೆಸರಿಸಿರುವ ಆಧಾರದಿಂದ ವಿದ್ವಾಂಸರು ಕ್ರಿ.ಶ. 11ನೆಯ ಶತಮಾನದ ಮಧ್ಯಭಾಗದಲ್ಲಿ ಈತನು ಕಾವ್ಯರಚನೆ ಮಾಡಿರಬೇಕೆಂದು ಗುರುತಿಸಿದ್ದಾರೆ.14

ಚಂಪಾನಗರದ ರಾಜ ಧಾಡೀವಾಹನ ಪದ್ಮಾವತಿಯನ್ನು ಕಂಡು ವಿವಾಹವಾದುದು, ಗರ್ಭವತಿಯಾದ ಪದ್ಮಾವತಿಯ ಬಯಕೆ, ಮದಗಜವನ್ನೇರಿದ ದಂಪತಿಗಳು ಬೇರ್ಪಟ್ಟುದು, ಪದ್ಮಾವತಿ ಕಾಡುಪಾಲಾದುದು, ಮಾಲೆಗಾರನ ಮನೆ ಸೇರಿ ಅಲ್ಲಿ ಆತನ ಪತ್ನಿಯ ಕೋಪಕ್ಕೆ ಒಳಗಾಗಿ ಸ್ಮಶಾನ ಸೇರಿದುದು, ಮಗುವನ್ನು ಪಡೆದ ಸಂದರ್ಭದಲ್ಲಿ ಶಾಪಗ್ರಸ್ತನಾದ ವಿದ್ಯಾಧರ ಮಾತಂಗನೊಬ್ಬನು ಮಗುವನ್ನು ತೆಗೆದುಕೊಂಡುದು, ಮಾತಂಗನ ಕತೆ, ಪದ್ಮಾವತಿ ವ್ರತಧಾರಿಯಾದುದು, ಕರಕಂಡುವನ್ನು ಮಾತಂಗ ಬೆಳೆಸಿದುದು, ಮಾತಂಗ ಕರಕಂಡುವಿಗೆ ಬುದ್ಧಿವಾದ ರೂಪದ ಕಥೆಗಳನ್ನು ಹೇಳುತ್ತಿದ್ದುದು, ಬಿದುರಿನ ಪ್ರಸಂಗ, ದಂತಿಪುರದ ರಾಜನ ಸಾವು, ಕರಕಂಡು ರಾಜನಾದ ಪ್ರಸಂಗ, ಚಂಪಾನಗರಾಧೀಶನೊಂದಿಗೆ ಯುದ್ಧ, ಪದ್ಮಾವತಿ ಬಂದು ಯುದ್ಧವನ್ನು ತಡೆದು ರಹಸ್ಯ ಭೇದಿಸಿದುದು, ರಾಜ ಮಗನಿಗೆ ರಾಜ್ಯವಿತ್ತು ವೈರಾಗ್ಯಪರನಾಗಿ ತಪಸ್ಸಿಗೆ ಹೋದುದು, ಚೋಳ, ಚೇರ, ಪಾಂಡ್ಯರಾಜರನ್ನು ಜಯಿಸಲು ಹೋದುದು, ಮಾರ್ಗದಲ್ಲಿ ಆತನ ಪತ್ನಿ ಮದನಾವಳಿಯನ್ನು ವಿದ್ಯಾಧರನೊಬ್ಬನು ಅಪಹರಿಸಿದ್ದು, ಕರಕಂಡುವಿನ ದುಃಖ, ನರವಾಹನನ ಕಥನದಿಂದ ಸಮಾಧಾನ, ತೇರಾಪುರ ನಗರದ ವೃತ್ತಾಂತ, ಸಿಂಹಲದ್ವೀಪಕ್ಕೆ ಬರದು ರಾಜಪುತ್ರಿ ರತಿವೇಗೆಯೊಂದಿಗೆ ವಿವಾಹ ವಾದುದು, ವಿದ್ಯಾಧರನು ಕರಕಂಡುವನ್ನು ಅಪಹರಿಸಿದ್ದು, ರತಿವೇಗೆಯ ದುಃಖ, ವಿದ್ಯಾಧರಿಯೊಂದಿಗೆ ಕರಕಂಡುವಿನ ವಿವಾಹ, ರತಿವೇಗೆಯೊಂದಿಗೆ ಸೇರಿದುದು, ಚೇರಾದಿ ರಾಜರನ್ನು ಸೋಲಿಸಿದುದು, ಅವರ ತಲೆಯನ್ನು ಮೆಟ್ಟಲು ಹೋದಾಗ, ಕಿರೀಟದಲ್ಲಿ ಜಿನ ಪ್ರತಿಮೆಯನ್ನು ಕಂಡು ತನ್ನ ಕೃತ್ಯಕ್ಕೆ ಪಶ್ಚಾತ್ತಾಪಗೊಂಡುದು, ಕರಕಂಡು ಹಿಂದಿರುಗುವಾಗ ತೇರಾಪುರದ ಬಳಿ ಮದನಾವಳಿಯನ್ನು ವಿದ್ಯಾಧರನು ಒಪ್ಪಿಸಿದುದು, ಚಂಪಾನಗರಕ್ಕೆ ಕರಕಂಡು ಹಿಂದಿರುಗಿದುದು, ಪುತ್ರಶೋಕ ಸಂತಪ್ತೆಯಾಗಿದ್ದ ತಾಯಿ

ಯೋರ್ವಳ ಹಾಹಾಕಾರವನ್ನು ಕೇಳಿ ಸಂಸಾರದ ಅನಿತ್ಯತೆಯನ್ನು ನೆನೆದು ವೈರಾಗ್ಯ ಪರನಾದುದು, ಮುನಿಗಳಿಂದ ತನ್ನ ಹಾಗೂ ತನ್ನ ಬಂಧುಗಳ ಭವಾಂತರ ಕಥೆಗಳನ್ನು ಕೇಳಿ ವೈರಾಗ್ಯ ಮತ್ತಷ್ಟು ದೃಢಪಟ್ಟುದು, ತಪಸ್ಸನ್ನು ಕೈಗೊಂಡು ಸರ್ವಾರ್ಥಸಿದ್ಧಿ ಯನ್ನು ಪ್ರಾಪ್ತಿಮಾಡಿಕೊಂಡುದು, ಈ ಕಥಾ ಘಟ್ಟಗಳನ್ನು ಒಳಗೊಂಡು, ಕನಕಾಮರ ನಲ್ಲಿ ಕರಕಂಡುವಿನ ಕಥೆ ವಿಸ್ತಾರವಾಗಿ ಬರುತ್ತದೆ.

ಕವಿ, ತನ್ನ ಕೃತಿಯ ಆಕರವನ್ನು ಹೇಳದಿದ್ದರೂ 'ಬೃಹತ್ಕಥಾ ಕೋಶ'ವು ಆಕರವಾಗಿರುವಂತೆ ಕಂಡುಬರುತ್ತದೆ. 'ಬೃಹತ್ಕಥಾಕೋಶ'ದ ಕಥೆಗೂ ಕನಕಾಮರನ 'ಕರಕಂಡ ಚರಿಉ' ಕಥೆಗೂ ಹೆಚ್ಚು ಸಾಮ್ಯ ಇರುವುದನ್ನು ಕಾಣುತ್ತೇವೆ.

ತೇರಾಪುರದ ಪ್ರಸಂಗ, ಕರಕಂಡುವಿನ ಜನ್ಮಾಂತರದ ಕಥೆ, ಧಾಡೀವಾಹನ ಪದ್ಮಾವತಿಯರ ಜನ್ಮಾಂತರದ ಕಥೆ ಈ ವೃತ್ತಾಂತಗಳೆಲ್ಲವೂ ಬೃಹಕೋ.ದಲ್ಲಿರುವಂತೆಯೇ ಕಂಡು ಬರುತ್ತವೆ. ಸ್ಥಾನವೊಂದು ವ್ಯತ್ಯಾಸವಾಗುತ್ತದೆಯಷ್ಟೇ. ಬೃಹಕೋ.ದ ಪ್ರಾರಂಭದಲ್ಲಿ ಈ ವೃತ್ತಾಂತಗಳು ಕಂಡು ಬಂದರೆ, ಕನಕಾಮರನಲ್ಲಿ ಅವು ಕೊನೆಯ ಭಾಗದಲ್ಲಿ, ಕರಕಂಡುವಿನ ವೈರಾಗ್ಯ ಸನ್ನಿವೇಶದಲ್ಲಿ ನಿರೂಪಿತವಾಗಿವೆ.

ಕಥಾಘಟ್ಟಗಳಲ್ಲಿ ಸಾಮ್ಯವಿರುವಂತೆ, ಅಲ್ಲಲ್ಲಿ ವ್ಯತ್ಯಾಸಗಳೂ ಕಂಡು ಬರುತ್ತವೆ. ಉದಾಹರಣೆಗೆ, ಧರ್ಮಪ್ರಕ್ರಿಯೆಗಳಿಗೆ ಚ್ಯುತಿ ಬಾರದಂತೆ ಕವಿ ಮಾಡಿಕೊಂಡಿರುವ ಸೂಕ್ಷ್ಮ ವ್ಯತ್ಯಾಸ ಗಮನಾರ್ಹವಾದುದು. ಬೃಹಕೋ.ದಲ್ಲಿ ಮಗುವನ್ನು ಮಾತಂಗ ವಿದ್ಯಾಧರನಿಗೆ ಒಪ್ಪಿಸಿ ಪದ್ಮಾವತಿ ಪ್ರವ್ರಜ್ಯೆಯನ್ನು ಸ್ವೀಕರಿಸಿದಳೆಂಬ ವಿಷಯ ಬರುತ್ತದೆ. ಅಷ್ಟೇ ಅಲ್ಲ, ಮಾತಂಗನ ಮನೆಗೆ ಹೋಗಿ ತಿಂಡಿ ತಿನಿಸುಗಳನ್ನು ಕೊಡುತ್ತಿದ್ದಳೆಂಬ ವಿಷಯ ಹಾಗೂ ಕರಕಂಡು ಕಲಿಂಗದೇಶದ ರಾಜನಾಗಿದ್ದಾಗ ಮಗನ ಮೇಲಿನ ಪ್ರೀತಿಯಿಂದ ಬಂದುಹೋಗುತ್ತಿದ್ದಳೆಂಬ ವಿಷಯ ಬರುತ್ತವೆ. ಶ್ವೇತಾಂಪ.ಯಲ್ಲಿ ನಿರೂಪಿತವಾಗಿರುವ ಕಥೆಯಲ್ಲಿಯೂ ಆಕೆ ತಾನು ಗರ್ಭಿಣಿ ಯಾದುದನ್ನು ಮರೆಮಾಡಿ ಪ್ರವ್ರಜ್ಯೆಯನ್ನು ಸ್ವೀಕರಿಸಿದಳೆಂಬ ವಿಚಾರವು ಬರುತ್ತದೆ. ಪಡೆದ ಮಗುವನ್ನು ಸ್ಮಶಾನದಲ್ಲಿ ಹಾಕಿದಳು ಎಂಬಂತಹ ಕೆಲವು ವಿಚಾರಗಳಿವೆ. ಮುನಿ ಆಚಾರಕ್ಕೆ ಧಕ್ಕೆ ಬರುವ ಈ ಕೆಲವು ಅಂಶಗಳಿಗೆ ಪರಿಹಾರ ಕಂಡುಕೊಂಡವನಂತೆ ಕನಕಾಮರನು ಆಕೆ ವ್ರತಗಳನ್ನು ಕೈಗೊಂಡಳೆಂದು ಮಾತ್ರ ಹೇಳಿದ್ದಾನೆ. (ವಲು ಲಣಯಉ ತಾವಿ ತುರಂತಿಯ ಏ ತಹೋ ಪಾಸಿ ಮಣೆಂದಹೋ. 1-6)

ಕನಕಾಮರನ ಕೃತಿ ಸ್ವತಂತ್ರ ಕೃತಿ. ಆದ್ದರಿಂದ ಕಥೆಯ ಹರವನ್ನು ಬೆಳೆಸಲು ಹಲವಾರು ಉಪಕಥೆಗಳನ್ನು ತಂದಿದ್ದಾನೆ. ಮಾತಂಗನು ಕರಕಂಡುವಿಗೆ ಬೋಧಿಸಿದ ನಾಲ್ಕು ನೀತಿಕಥೆಗಳು, ಅಂದಿನ ಕಾಲದಲ್ಲಿ ಪ್ರಚಲಿತವಿದ್ದ ಜನಪದ ಕಥೆಯಿಂದ ತೆಗೆದುಕೊಂಡಂತೆ ಕಂಡು ಬರುತ್ತವೆ. ಹಾಗೆಯೇ ಕಾಳಿದಾಸನ 'ರಘುವಂಶ', ಸೋಮದೇವನ 'ಕಥಾಸರಿತ್ಸಾಗರ' ಕ್ಷೇಮೇಂದ್ರನ 'ಬೃಹತ್ಕಥಾ ಮಂಜರಿ', ಬುದ್ಧ

ಸ್ವಾಮಿಯ 'ಬೃಹತ್ಕಥಾ ಶ್ಲೋಕ ಸಂಗ್ರಹ', ಬಾಣನ 'ಕಾದಂಬರಿ' ಮೊದಲಾದವುಗಳಲ್ಲಿ ಬರುವ ಕಥೆಗಳೊಂದಿಗೆ ಇವು ಹೋಲುತ್ತವೆಂದು ಹೀರಾಲಾಲ್ ಜೈನ್‌ರವರು ತಿಳಿಸಿದ್ದಾರೆ.15 ಅವಾಂತರ ಕಥೆಗಳಿಂದಾಗಿ ಈ ಕಾವ್ಯದ ಗಾತ್ರ ಹಿಗ್ಗಿದೆ. ಬೇರೆಡೆಯಿಂದ ಕಥಾಸರಕುಗಳನ್ನು ಎಳೆದು ತಂದು ಇಲ್ಲಿ ಅಳವಡಿಸಿಕೊಂಡು ಹೊಸತನವನ್ನು ತರಲು ಯತ್ನಿಸಿದ್ದಾನೆ. ಕರಕಂಡುವಿನ ವಿವಾಹ ವರ್ಣನೆಯೂ ಸಹ ವಿಸ್ತಾರವಾಗಿ ಬಂದಿದೆ.

ಕವಿ ಕನಕಾಮರನು ಉತ್ಕೃಷ್ಟವಾದ ಕವಿಯಲ್ಲದಿದ್ದರೂ ಕಡೆಗಣಿಸುವ ಕವಿಯಲ್ಲ. ಅಲ್ಲಲ್ಲಿಯೇ ಅವನು ತೋರುವ ನಿರೂಪಣಾ ವಿಧಾನ ವರ್ಣನೆಯಲ್ಲಿ ಮೂಡಿಸುವ ದೃಶ್ಯವಿನ್ಯಾಸ, ಛಂದಸ್ಸಿನ ಮಾಧುರ್ಯ ಮೆಚ್ಚುವಂತಹವು.

ಉದಾಹರಣೆಗೆ, ಅಂತಹ ಒಂದು ಕಡವಕವನ್ನು ಪರಿಶೀಲಿಸಬಹುದಾಗಿದೆ :

ಪಡಂತ ದಿವಿಸರ ಸಾಮಸರೇಣ ಮಿಲಾವಿಯ ದೇವಣಿಕಾಯ ಪರೇಣ ।
ಸಸಂಖ ಸಡಿ,ಡಿಮ ಕಾಹಲಿತೂರ ಪವಜ್ಜಿಉ ಮದ್ದಲು ಮೇಇಣಿಪೂರು ।
ಘರಾಉ ವಿಣಿಗ್ಗಉ ವಾರಣು ತುಂಗು ವಿಲಾಸಿಣಿಗೇಹಹೋ ಣಾ ಇ ಭುಜಂಗು ।
ಲುಲಾವಿಯ ಸುಂಡು ಚಲಾವಿಯ ಕಣ್ಣು ವಿಲೋಲಸುಲೋಯಣು ಉಜ್ಜಲವಣ್ಣು ।
ಸ ಪುಣ್ಣಉ ಕುಂಭು ಕರೇಣ ಕರಂತು ಛಣಿಂದು ವ ಪವ್ವಯ ಸಿಂಗು ಸರಂತು ।
ಪುರಮ್ಮಿ ಘರೇಣ ಘರಾಇಂ ಲಹಂತು ಸಮುಣ್ಣಇ ತೋವಿ ಸಮುಗ್ಗ ವಹಂತು ।
ಭಮೇವಿಣು ಪಟ್ಟಣು ಚಚ್ಚರವಂತು ಗಓಗಉ ಬಾಹಿರಿ ದೂರೇ ಭಮಂತು ।
ಮಸಾಣಹೋ ಮಜ್ಝೇ ಅಉವ್ವಉಮಾರು ಗವಿಣ ತರಂತವಿ ದಿಟ್ಠು ಕುಮಾರು ।
ಸುಸೋಹಣು ಕುಂಭು ಸಿರೇಣ ಣವಿಣ ಶಿರಮ್ಮಿ ವಿರೇಇಉ ತಾಸುಗವಿಣ ।

ಛತ್ತಾ : ಸೋ ದೆಕ್ಕಿವಿ ಲೋಯಹಿಂ ಸಿರು ಧುಣಿಉ ಹಾ ಹಾ ರಉ ಗಗರುಯಉ ಘೋಸಿಯಉ ಕಿಂ ಕೀಯಉ ಏಏ ಕರಿವರಿಣ ಮಾಯಂಗಹೋ ಕಲಸು ಣವೇಸಿಯಉ ॥ (2–20)

ದ್ವಿಜಶ್ರೇಷ್ಠರು ಸಾಮವೇದವನ್ನು ಸ್ವರದೊಡನೆ ಓದಲಾರಂಭಿಸಿದರು.16 ಆ ಶ್ರೇಷ್ಠ ಮಂತ್ರಿಯಿಂದ ದೇವಗಣವು ಸೇರಿಸಲ್ಪಟ್ಟಿತು. ಶಂಖ ಡಿಂಡಿಮದೊಡನೆ ಕಹಳೆ ಮತ್ತು ತೂರ್ಯ ಹಾಗೆಯೇ ಮದ್ದಲೆವಾದನ ಪ್ರಾರಂಭವಾಯಿತು. ಮೇದಿನಿ ಅದರಿಂದ ತುಂಬಿತು. ಆ ಆನೆಯು ತನ್ನ ಸೊಂಡಿಲನ್ನು ತಿರುಗಿಸುತ್ತಿದ್ದಿತು. ಕಿವಿಯನ್ನು ಚಲಿಸುತ್ತಿದ್ದಿತು. ವಿಶೇಷ ಬಣ್ಣವುಳ್ಳ ಆ ಆನೆಯು ಪೂರ್ಣಕುಂಭವನ್ನು ಪರ್ವತ ಶೃಂಗದ ಮೇಲೆ ಚಲಿಸುತ್ತಿರುವ ಪೂರ್ಣ ಚಂದ್ರನೇ ಎನ್ನುವಂತೆ ಸೊಂಡಿಲಿನಲ್ಲಿ ಧರಿಸಿದ್ದಿತು. ಪಟ್ಟಣದಲ್ಲಿ ಮನೆಯಿಂದ ಮನೆಯನ್ನು ದಾಟುತ್ತಾ ಸಮುಗ್ರವಾದ ಉನ್ನತಿಯನ್ನು ಹೊಂದಿದ್ದಾಗಿ, ಚೌಕಗಳನ್ನುಳ್ಳ ಪಟ್ಟಣವನ್ನು ಸಂಚರಿಸಿ ಹೊರಗಡೆ

ದೂರದಲ್ಲಿ ಸಂಚರಿಸುತ್ತಾ ಹೋಯಿತು. ಸ್ಮಶಾನದ ಮಧ್ಯೆ ಅಪೂರ್ವ ಮನ್ಮಥ ನಂತಿದ್ದ ಕುಮಾರನನ್ನು ಒಮ್ಮೆಗೇ ಶೀಘ್ರವಾಗಿ ಆನೆಯು ನೋಡಿತು. ಬಾಗಿಸಲ್ಪಟ್ಟ ತಲೆಯಿಂದ ಸಂಶೋಧನವಾದ ಕುಂಭವು ಅವನ ತಲೆಯ ಮೇಲೆ ಆನೆಯಿಂದ ಸುರಿಸಲ್ಪಟ್ಟಿತು.

ಘತ್ತಾ : ಅದನ್ನು ಕಂಡು ಜನರು ತಲೆ ಕೊಡವಿದರು. ದೊಡ್ಡದಾದ ಹಾಹಾಕಾರ ಘೋಷ ಹೊರಟಿತು—'ಈ ಕರಿರಾಜನಿಂದ ಇದೇನು ಮಾಡಲ್ಪಟ್ಟಿತು ? ಮಾತಂಗನ ಮೇಲೆ ಕಲಶವಿರಿಸಿತು ;

ಮೇಲಿನ ಕಡವಕವು ಚಿತ್ರಗತ ಶೈಲಿಯಾಗಿದೆ. ಕುಂಭವನ್ನು ಹಿಡಿದು ಹೊರಟ ಗಂಭೀರವಾದ ಆನೆಯ ಚಿತ್ರಣ, ಮಾತಂಗನಿಗೆ ಹಾರವನ್ನು ಹಾಕಿದಾಗ ಪುರಜನರು ತೋರಿದ ಪ್ರತಿಕ್ರಿಯೆ ಇವು ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿದೆ. ನಾಲ್ಕು ಮಾತ್ರೆಗಳ ಲಯವಿನ್ಯಾಸ, ದೃಷ್ಟಾಂತಾಲಂಕಾರದ ಬಳಕೆ, ಇವು ಒಂದೊಂದೂ ಕಡವಕವನ್ನು ಸ್ವಾರಸ್ಯಪೂರ್ಣಗೊಳಿಸಿದೆ.

ಈ ಕಾವ್ಯದಲ್ಲಿ ಅಲ್ಲಲ್ಲಿಯೇ ಕರ್ಮ ಪರಿಪಾಕದ ಅಧ್ರುವಾದಿ ಅನುಪ್ರೇಕ್ಷೆಗೆ ಸಂಬಂಧಿಸಿದ ವಿಚಾರಗಳು ಕಂಡು ಬರುತ್ತವೆ.

ಶ್ರೀಚಂದ್ರನ 'ಕಹಕೋಸು' ಅಪಭ್ರಂಶ ಭಾಷೆಯಲ್ಲಿದೆ. ಕಾಲ ಕ್ರಿ.ಶ. 11ನೆಯ ಶತಮಾನ. 'ಮೂಲಾರಾಧನೆಯ ಗ್ರಂಥದ ಮಧ್ಯೆ ಮಧ್ಯೆ ಬರುವ ಗಾಥೆಗಳಲ್ಲಿ ಸುಂದರ ಮನೋರಂಜಕ ಧರ್ಮ–ಅರ್ಥ–ಕಾಮ–ಮೋಕ್ಷ ಪುರುಷಾರ್ಥ ಸಂಬಂಧಿ ಕಥೆಗಳ ಉಲ್ಲೇಖಗಳಿವೆ. ತಾನು ಆ ಗಾಥೆಗಳನ್ನು ಮೊದಲಲ್ಲಿ ಹೇಳಿ ಅನಂತರ ಕಥೆಗಳನ್ನು ಹೇಳುತ್ತೇನೆಂದು ಹೇಳಿದ್ದಾನೆ. ಪ್ರಶಸ್ತಿಪದ್ಯದಲ್ಲಿ ಭವ್ಯರ ಪ್ರಾರ್ಥನೆಯಿಂದ ಓರ್ವ ಪೂರ್ವಾಚಾರ್ಯನಿಂದ ವಿರಚಿತವಾದ ಕೃತಿಯ ಜ್ಞಾನವನ್ನು ಪಡೆದು ಈ ಕಥಾಕೋಶದ ರಚನೆ ಮಾಡಿರುವುದಾಗಿ ಹೇಳಿದ್ದಾನೆ. ಈ ಮಾತು ಗಳಿಂದಾಗಿ ಹರಿಷೇಣನ 'ಬೃಹತ್ಕಥಾಕೋಶ' ಈತನ ಕೃತಿಗೆ ಅಧಾರವಾಗಿರಬೇಕೆಂದು ಊಹಿಸಬಹುದಾಗಿದೆ.

'ಕಹಕೋಸು'ವಿನಲ್ಲಿ ಒಟ್ಟು 50 ಸಂಧಿಗಳಿವೆ. ಸಂಧಿ 16, 17, 18 ರಲ್ಲಿ ಕರಕಂಡುವಿನ ಕಥೆ ಬರುತ್ತದೆ.

ಚಂಪಾಪುರದ ರಾಜ ಧಾಡಿವಾಹನ ಕುಸುಮಪುರಕ್ಕೆ ಹೋದಾಗ ಪದ್ಮಾವತಿ ಯನ್ನು ಭೇಟಿಯಾದುದು, ಇವಳು ಗರ್ಭದಲ್ಲಿರುವಾಗ ಅನೇಕ ಕಷ್ಟಪರಂಪರೆಗಳು ಒದಗಿಬಂದ ಕಾರಣ ಅಶುಭವೆಂದು ಒಗೆದು ಕೌಶಾಂಬಿಯ ರಾಜ ವಸುಪಾಲ ಮತ್ತು ರಾಣಿ ವಸುಮತಿಯರು, ಮಗು ಹುಟ್ಟಿದ ಕೂಡಲೆ ಅದನ್ನು ಗಂಗೆಯಲ್ಲಿ ತೇಲಿಬಿಟ್ಟ ವಿಚಾರ, ಪದ್ಮಾವತಿಯನ್ನು ಧಾಡೀವಾಹನ ಮದುವೆಯಾದುದು, ನೀಚಕುಲದವಳೆಂದು

ಅಂತಃಪುರದಲ್ಲಿ ಈಕೆಗೆ ಮನ್ನಣೆ ದೊರೆಯದಿದ್ದುದು, ದುಃಖಿಗೊಂಡ ಪದ್ಮಾವತಿ ದೀಕ್ಷೆ ತೆಗೆದುಕೊಳ್ಳಲು ಹೋದಾಗ ರಾಣಿ ವಸುದತ್ತೆ ಆಕೆಯನ್ನು ಸಮಾಧಾನಗೊಳಿಸಿ ಅರಮನೆಗೆ ಕರೆದುಕೊಂಡು ಹೋದುದು, ವಸುದತ್ತೆ ದೀಕ್ಷಿತಳಾದುದು, ಈ ವಿಚಾರ ಗಳು ಬರುತ್ತವೆ. ಉಳಿದಂತೆ ಕಥೆ ಬೃಹತ್ ಕೋಶಕ್ಕೆ ಹೊಂದಿಕೆಯಾಗುತ್ತದೆ.

ಮೇಲಿನ ಕೆಲವು ವಿಚಾರಗಳು ಶ್ವೇತಾಂಪಯಲ್ಲಿ ಮಾತ್ರ ಕಂಡುಬರುವ ವಿಚಾರ ವಾಗಿವೆ. ಹೀಗಾಗಿ 'ಕಹಕೋಸು'ವಿನಲ್ಲಿ ಮಿಶ್ರನಡೆಯನ್ನು ಕಾಣಬಹುದಾಗಿದೆ.

ಕನ್ನಡದಲ್ಲಿ ಬರುವ 'ಕರಕಂಡು ಮಹಾರಾಜ'ನ ಕಥೆ ಕವಿ ನಾಗರಾಜನಿಂದ ಪುಣ್ಯಾಸ್ರವ ಕಾವ್ಯದಲ್ಲಿ ನಿರೂಪಿತವಾಗಿದೆ. ನಾಗರಾಜ ಕವಿ ಸಂಸ್ಕೃತದಿಂದ ಕನ್ನಡಿಸಿ ಈ ಕೃತಿಯನ್ನು ಬರೆದಿರುವುದಾಗಿ ಹೇಳಿದ್ದಾನೆ—

"ಮುನ್ನಂ ಸಂಸ್ಕೃತದಿಂದ
ತ್ಯನ್ನತಿವೆತ್ತಿರಲು ಕೇಳ್ದು ಸಗರದನಗರಂ
ಕನ್ನಡಿಸನೆ ನಾಗೇಂದ್ರಂ
ಕನ್ನಡಿಸಿದನೊಲಿದು ನೋಡಿ ಪುಣ್ಯಾಸ್ರವಮಂ" (1-33)

ರಾಮಚಂದ್ರ ಮುಮುಕ್ಷುವಿನ ಸಂಸ್ಕೃತದ 'ಪುಣ್ಯಾಸ್ರವ ಕಥಾಕೋಶ'ವು ನಾಗರಾಜನ ಕೃತಿಗೆ ಆಕರವಾಗಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ.17 ರಾಮಚಂದ್ರ ಮುಮುಕ್ಷುವು ತಾನು ಕಥೆಗಳನ್ನು ತೆಗೆದುಕೊಂಡಿರುವ ಆಕರಗಳನ್ನು ಹೇಳುತ್ತಾ ಬೃಹತ್ಕಥಾಕೋಶವನ್ನು ಹೆಸರಿಸಿದ್ದಾನೆ. ಇಲ್ಲಿ ಬರುವ ಕರಕಂಡು ಮಹಾರಾಜನ ಕಥೆಯ ಮೂಲ 'ಬೃಹತ್ಕಥಾಕೋಶ' ಎಂಬುದನ್ನು ಗುರುತಿಸಿಕೊಳ್ಳಬಹುದಾಗಿದೆ. ಅಲ್ಲಲ್ಲಿಯೇ ಕೆಲವು ವ್ಯತ್ಯಾಸಗಳೂ ಕಂಡು ಬರುತ್ತವೆ.

ಕವಿ ನಾಗರಾಜನು ಶ್ರಾವಕರ ಷಟ್ಕರ್ಮಗಳಲ್ಲಿ ಒಂದಾದ ಪೂಜಾವಿಧಿಯ ಮಹತ್ತ್ವವನ್ನು ತಿಳಿಸುವಾಗ ಈ ಕಥೆಯನ್ನು ಹೇಳಿದ್ದಾನೆ.

ಕಥೆಯ ಪ್ರಾರಂಭ ನೇರವಾಗಿ ಕರಕಂಡುವಿನ ಪೂರ್ವಜನ್ಮದ ಹಾಗೂ ಪದ್ಮಾವತಿ ಮೊದಲಾದವರ ಜನ್ಮಾಂತರದ ಕಥೆಯಿಂದ ಪ್ರಾರಂಭವಾಗುತ್ತದೆ. ತೇರಾನಗರದ ಜಿನಾಲಯದ ವಿಷಯವನ್ನು ಕಥೆಯ ಕೊನೆಯ ಭಾಗದಲ್ಲಿ ವರ್ಣಿಸಿದ್ದಾನೆ.

ಕವಿ ಅಲ್ಲಲ್ಲಿಯೇ ವರ್ಣನಾಂಶಗಳನ್ನು ಅಳವಡಿಸಿಕೊಂಡಿದ್ದಾನೆ. ಅಲ್ಲದೆ ಮೂಲಕ್ಕೆ ಹೋಲಿಸಿದರೆ ಅಲ್ಲಲ್ಲಿಯೇ ಕೆಲವು ವ್ಯತ್ಯಾಸಗಳು ಕಂಡುಬರುತ್ತವೆ. ಅವುಗಳನ್ನು ಹೀಗೆ ಗುರುತಿಸಬಹುದಾಗಿದೆ.

ಪದ್ಮಾವತಿಯು ಗರ್ಭದಲ್ಲಿದ್ದಾಗ ವಸುಮತಿಯು ದುಃಖದಾಯಕವಾದ ಶ್ವಾಸ ರೋಗದಿಂದ ಪೀಡಿತಳಾದ ಕಾರಣ ಆ ಮಗುವನ್ನು ನದಿಯಲ್ಲಿ ಬಿಡಲಾಯಿತು ಎಂದು

ಬೃಹಕೋದಲ್ಲಿ ಬಂದರೆ, ನಾಗರಾಜ ಪುಣ್ಯಾಸ್ರವದಲ್ಲಿ ಆ ಮಗು ಕುಮುಹೂರ್ತದಲ್ಲಿ ಹುಟ್ಟಿದುದರಿಂದ ಹಾಗೆ ಮಾಡಲಾಯಿತೆಂಬ ಅಂಶ ಬರುತ್ತದೆ.

ರಾಜ ದಂತಿವಾಹನನು ಪದ್ಮಾವತಿಯನ್ನು ಬಿಟ್ಟು ಅರಮನೆಗೆ ತಲುಪಿದ ಪ್ರಸಂಗದಲ್ಲಿ, ಕವಿ ಮಾಡಿಕೊಂಡಿರುವ ವ್ಯತ್ಯಾಸ ಸಮಂಜಸವೆನಿಸದು. ಮೂಲದಲ್ಲಿ ಕಾಣುವ ಪ್ರಕರಣಕ್ಕಿಂತ. ಹದಗೆಟ್ಟಂತೆ ಇಲ್ಲಿ ಕಂಡುಬರುತ್ತದೆ. ಬೃಹಕೋಶದಲ್ಲಿ ಪದ್ಮಾವತಿಯ ಕೋರಿಕೆಯ ಮೇರೆಗೆ ಅವನು ಮದಿಸಿದ ಆನೆಯ ಮೇಲಿನಿಂದ ಇಳಿದು ಹೇಗೋ ತಪ್ಪಿಸಿಕೊಂಡನೆಂದಿದ್ದರೆ, ಇಲ್ಲಿ ಆ ವಿಚಾರವೂ ಇಲ್ಲ. ಇದ್ದಕ್ಕಿದ್ದಂತೆ ಆನೆಯಿಂದ ಇಳಿದು ಊರಿಗೆ ತೆರಳಿ, ನಂತರ ಪದ್ಮಾವತಿಯನ್ನು ನೆನೆದು ದುಃಖಿತ ನಾದನೆಂಬ ವಿಚಾರ ಬರುತ್ತದೆ.

ವಿದ್ಯಾಧರನ ವಿದ್ಯೆ ಮರೆಯಾಗುವ ಪ್ರಸಂಗದಲ್ಲಿ ಕವಿ ತೋರಿರುವ ಧೋರಣೆ ಇತರೆಡೆಗಳಿಗಿಂತ ಭಿನ್ನವಾಗಿ ಕಂಡುಬರುತ್ತದೆ. ಮುನಿಗಳು ನೀಡಿದ ಶಾಪದಿಂದಾಗಿ ವಿದ್ಯಾಧರನು ತನ್ನ ವಿದ್ಯೆಗಳನ್ನು ಕಳೆದುಕೊಂಡು ಮಾತಂಗನಾದನೆಂಬ ವಿಷಯದ ಬದಲು, ಧರಣೇಂದ್ರ—ಪದ್ಮಾಪತಿಯರು ಬಂದು ಮುನಿಗಳ ಉಪಸರ್ಗವನ್ನು ಪರಿಹರಿಸಿ ವಿದ್ಯಾಧರನ ವಿದ್ಯೆಯನ್ನು ಮರೆಮಾಡಿ, ಮುಂದೆ ವಿದ್ಯೆ ಮರಳಿಬರಬೇಕಾದರೆ ಸ್ಮಶಾನದಲ್ಲಿ ಹುಟ್ಟುವ ಕರಕಂಡುವಿನ ಪೋಷಣೆಯನ್ನು ಮಾಡಬೇಕು ಎಂದು ಸೂಚಿಸುತ್ತಾರೆ. ರಾಗ-ದ್ವೇಷಗಳಿಂದ ದೂರವಾಗಲು ವೀತರಾಗ ಸಾಧನೆಯಲ್ಲಿ ನೆಲೆಸಿನಿಂತ ಜೈನಮುನಿಗಳು ಶಾಪವನ್ನು ನೀಡಿದರೆಂಬ ವೃತ್ತಾಂತದಲ್ಲಿರುವ ಅಸಾಧುತ್ವವನ್ನು ಮರೆ ಮಾಡಲೆಂಬಂತೆ, ಧರಣೇಂದ್ರ ಪದ್ಮಾವತಿಯರ ವೃತ್ತಾಂತ ತಂದಿದ್ದಾನೆ. ತನ್ಮೂಲಕ ಯಕ್ಷ-ಯಕ್ಷಿಯರ ಬಗೆಗೆ ನೆಲೆನಿಂತಿರುವ ಜಾನಪದೀಯ ನಂಬಿಕೆಯನ್ನೂ ಪ್ರತಿಪಾದಿಸಿದ್ದಾನೆ.

ಬೃಹತ್ಕೋಶದಲ್ಲಿ ಪದ್ಮಾವತಿ ಪ್ರವ್ರಜ್ಯೆಯನ್ನು ಸ್ವೀಕರಿಸಿದ ಮೇಲೂ ಆ ಪ್ರವ್ರಜ್ಯೆಗೆ ಚ್ಯುತಿ ಬರುವ ಕೆಲವು ಪರಿಗ್ರಹಗಳಿಗೆ ಬೆನ್ನಂಟಿಕೊಂಡಿರುವುದು ಕಂಡುಬರುತ್ತದೆ. ಆದರೆ, ಪುಣ್ಯಾಸ್ರವದಲ್ಲಿ ಆಕೆ ಶ್ರಾವಕ ವ್ರತವನ್ನು ಧರಿಸಿದಳೆಂದು ಹೇಳಿ ಆ ದೋಷವನ್ನು ಕವಿ ದೂರವಾಗಿಸಿದ್ದಾನೆ.

ದಂತಿಪುರದ ರಾಜ ಸಂತಾನ ಹೀನನಾಗಿ ಸತ್ತಾಗ, ರಾಜನನ್ನು ಹುಡುಕಲು ಆನೆಯೊಂದಕ್ಕೆ ಹಾರವನ್ನು ಕೊಟ್ಟು ಮುಂದೆ ಬಿಟ್ಟರೆಂದು ಬೃಹಕೋಶದಲ್ಲಿ ಬಂದರೆ, ಇಲ್ಲಿ ಹಾರದ ಬದಲಾಗಿ 'ಕುಂಭ'ದ ವೃತ್ತಾಂತ ಬರುತ್ತದೆ. (ಕನಕಾಮರನ ಕರಕಂಡ ಚರಿಉ'ವಿನಲ್ಲಿಯೂ ಹೀಗೆಯೇ ಇದೆ.)

ಪದ್ಮಾವತಿ-ಧಾಡೀವಾಹನರ ಪುನರ್ಮಿಲನ ಪ್ರಸಂಗದಲ್ಲಿ ಅವರು ರಾಜ್ಯವನ್ನು ಮಗನಿಗೆ ಒಪ್ಪಿಸಿ ತಪಸ್ಸಿಗೆ ತೆರಳಿದರೆಂದು ಬೃಹಕೋ.ದಲ್ಲಿದ್ದರೆ, ಪುಣ್ಯಾಸ್ರವದಲ್ಲಿ

ಅವರು ಇಷ್ಟ ವಿಷಯವನ್ನು ಅನುಭವಿಸುತ್ತಿದ್ದರೆಂದಿದೆ. ಅವರ ವೈರಾಗ್ಯದ ಪ್ರಸಂಗ ಬರುವುದಿಲ್ಲ.

ಈ ಕೆಲವು ವ್ಯತ್ಯಾಸಗಳನ್ನು ಬಿಟ್ಟರೆ ಉಳಿದಂತೆ ಕವಿ ಮೂಲಕ್ಕೆ ಹೆಚ್ಚು ಋಣಿಯಾಗಿದ್ದಾನೆ. ಅಲ್ಲಲ್ಲಿ ಕವಿ ವರ್ಣನಾಂಶಗಳನ್ನು ಅಳವಡಿಸಿದ್ದಾನೆ. ಪದ್ಮಾವತಿಯ ರೂಪವಿಶೇಷದ ವರ್ಣನೆ, ಕುಸುಮಾವಳಿ ಪದ್ಮಾವತಿಯನ್ನು ಕಂಡ ಪ್ರಸಂಗ ಇತ್ಯಾದಿ ಭಾಗಗಳು ಉದಾಹರಣೆಯಾಗಿವೆ.

ಕವಿಗೆ ಇಲ್ಲಿ ಪೂಜಾಮಹತ್ತ್ವವನ್ನು ಸಾರುವುದೇ ಮುಖ್ಯವಾದ ಅಂಶ. ಅದನ್ನು ಕತೆಯ ಆದಿ ಅಂತ್ಯಗಳಲ್ಲಿ ಸ್ಪಷ್ಟಪಡಿಸಿದ್ದಾನೆ. ಕತೆಯನ್ನು ಕೊನೆಗೊಳಿಸುತ್ತಾ, ಹೀಗೆ ಹೇಳಿದ್ದಾನೆ. “ಗೋಪಾಲನೊಂದು ಪೂವಿಂ ಜಿನರನರ್ಚಿಸಿ ಪಿರಿದಪ್ಪ ರಾಜ್ಯವಿಭೂತಿಯಂ ಪಡೆದನೆಂದೊಡೆ ತ್ರಿಕರಣ ಶುದ್ಧಿಯಿಂ ಪೂಜಿಸಿದವರ ಮಹಿಮೆಯನೇನೆಂಬೆನ್...” ಎಂದು ಪೂಜಾಫಲವನ್ನು ಕೊಂಡಾಡಿದ್ದಾನೆ.

ಕರಕಂಡುವಿನ ಕಥಾಪರಂಪರೆಗಳು ಕರಕಂಡುವಿನ ಜನಪ್ರಿಯತೆಯನ್ನು ಸಾರುತ್ತವೆ. ಕಥಾ ರೋಚಕ ಪ್ರಸಂಗಗಳೇ ಅಲ್ಲದೆ ಐತಿಹಾಸಿಕ ವಿಚಾರಗಳನ್ನೂ ತನ್ನಲ್ಲಿ ಅಡಗಿಸಿಕೊಂಡಿದೆ ಎನ್ನಬಹುದಾದ ಈ ಕಥಾಪರಂಪರೆ ಒಂದು ವಿಶಿಷ್ಟವಾದ ಸಾಹಿತ್ಯ ಮೌಲ್ಯವನ್ನು ಪಡೆದುಕೊಂಡಿದೆ.

* * * *

ಶ್ವೇತಾಂಬರ ಪರಂಪರೆ — ಶ್ವೇತಾಂಪ
ದಿಗಂಬರ ಪರಂಪರೆ — ದಿಗಂಪ
ಬೃಹತ್ಕಥಾ ಕೋಶ — ಬೃಹಕೋ

ಅಡಿಟಿಪ್ಪಣಿಗಳು

1) ‘ಓರೋಪಿತ ಕೇಸಮಸ್ಸು ಕಾಸಾವವಸ್ಥ ಪಟಿಚ್ಛನ್ನ ಕುಲೇ ವಾ ಗಣೇವಾ
ಆಲಗ್ಗಾ ಪಾತಚ್ಛನ್ನವಲಾಹಕರಾಹು ಮುತ್ತಾ ಚಂದಮಂಡಲ ಪಟಿ ಭಾಗಾ
ಹಿಮವತಿ ನಂದಮೂಲಪಬ್ಭಾರೇ ವಸಂತಿ, ಏವರೂಪದೇವ
ಪಚ್ಚೇಕ ಬುದ್ಧಾ’ —3 (ಕುಂಭಕಾರ ಜಾತಕ—Vol.III)
ಹೀರಾಲಾಲ್ ಜೈನ್‌ರವರು ‘ಕರಕಂಡ ಚರಿಉ’ವಿನಲ್ಲಿ ನೀಡಿರುವ ಉದ್ಧರಣೆ ಹಾಗೂ ಅನುವಾದದ ಸಹಾಯದಿಂದ ಇದನ್ನು ನೀಡಲಾಗಿದೆ. ಸಂ. ಹೀರಾಲಾಲ್ ಜೈನ್, ‘ಕರಕಂಡ ಚರಿಉ’ ಭಾರತೀಯ ಜ್ಞಾನಪೀಠ ಪ್ರಕಾಶನ, 1964.

2) ಕರಕಂಡು ನಾಮ ಕಲಿಂಗಾನಂ ಗಂಧಾರಾನಂ ಚ ನಗ್ಗಈ ।
ನಿಮಿರಾಜಾ ವಿದೇಹನಾಂ ಪಂಚಾಲಾನಂ ಚ ದಮ್ಮುಖೋ ।
ಏತೇ ರಟ್ಠಾನಿ ಹಿತ್ವಾನಿ ಪಬ್ಬಜಿಂಸು ಅಕಿಂಚನಾ ॥
ಸಬ್ಬೇವಿಮೋ ದೇವಸಮಾ ಸಮಾಗತಾ । ಅಗ್ಗೀ ಯಥಾ ಪಜ್ಜಲಿತೋ ತಥೋವಿಮೋ ॥
ಅಹಂಪಿ ಏಕೋ ಚರಿಸ್ಸಾಮಿ ಭಗ್ಗವಿ । ಹಿತ್ವಾನ ಕಾಮಾನಿ ಯಥೋಧಿಕಾನಿ 3 ॥
(ಕುಂಭಕಾರ ಜಾತಕ—Vol.III)

3) ಕರಕಂಡು ಕಲಿಂಗೇಸು ಪಂಚಾಲೇಸು ಯ ದುಮ್ಮುಹೋ
ನಮೀರಾಯಾ ವಿದೇಹೇಸು ಗನ್ಧಾರೇಸು ಯ ನಗ್ಗಈ ।
ಏ ಏ ನರಿಂದ ವಸಭಾ ನಿಕ್ಖಂತಾ ಜಿಣಸಾಸಣೆ
ಪ್ರುತ್ತೇ ರಜ್ಜೇ ಠವೇಊಣಂ ಸಾಮಣ್ಣೇ ಪಜ್ಜುವಟ್ಟಿಯಾ
(ಉತ್ತರಾಧ್ಯಯನ ಸೂತ್ರ, ಸಂಜಯಿಜ್ಜಂ—46-47)

4) ಸುತ್ತಂ ಗಣಧರಗಥಿದಂ ತಹೇವ ಪತ್ತೇಯ ಬುದ್ಧ ಕಹಿಯಂ ಚ ।
ಸುದ ಕೇವಲಿಣಾ ಕಹಿಯಂ ಅಭಿಣ್ಣ ದಸಪುವ್ವಿಗಥಿದಂ ಚ ॥
—ಮೂಲಾರಾಧನಾ (ಭಗವತೀ ಆರಾಧನಾ) ಗಾಥೆ 33

ಯಾವುದನ್ನು ಗಣಧರರು ರಚಿಸಿರುವರೋ, ಪ್ರತ್ಯೇಕಬುದ್ಧರು ಹೇಳಿರುವರೋ ಅಥವಾ ಶ್ರುತಕೇವಲಿಗಳು ಹೇಳಿರುವರೋ ಅಥವಾ ಅಭಿನ್ನದಶಪೂರ್ವಿಗಳು ರಚಿಸಿರುವರೋ ಅದು ಸೂತ್ರವಾಗಿದೆ.
ಅಂಗಪೂರ್ವ ಪ್ರಕೀರ್ಣಾನಿ ರಚಿತಾನಿ ಗಣಾಧಿಪೈಃ
ಪ್ರತ್ಯೇಕ ಬುದ್ಧ ಯೋಗೀಂದ್ರೈಃ ಶ್ರುತಕೇವಲೀಭಿರ್ಮುದಾ
(ಸಂಸ್ಕೃತದ ಸುಕುಮಾರ ಚರಿತ್ರೆಯ ಹಸ್ತಪ್ರತಿಯೊಂದರಲ್ಲಿ ಈ ಪದ್ಯವಿರುವುದಾಗಿ ಹೀರಾಲಾಲ್ ಜೈನ್‌ರವರು ಉಲ್ಲೇಖಿಸಿದ್ದಾರೆ.)

5) ಹೀರಾಲಾಲ್ ಜೈನ್ ಸಂ. 'ಕರಕಂಡ ಚರಿಉ' ಮುನ್ನುಡಿ ಪು. 47

6) ನೋಡಿ. ಅಡಿಟಿಪ್ಪಣಿ 3

7) ಈ ಪಟ್ಟಿಯನ್ನು ಶ್ರೀ ಹೀರಾಲಾಲ್ ಜೈನ್‌ರವರಿಂದ ಸಂಪಾದಿತವಾಗಿರುವ ಕರಕಂಡ ಚರಿಉ ಗ್ರಂಥದ ಮುನ್ನುಡಿಯ ಆಧಾರದಿಂದ ಕೊಡಲಾಗಿದೆ. ಇಲ್ಲಿ ಸೂಚಿತವಾಗಿಲ್ಲದಿರುವ ಕೆಲವು ಆಕರಗಳನ್ನು ಈ ಪಟ್ಟಿಯಲ್ಲಿ ಸೇರಿಸಲಾಗಿದೆ. ಆಮ್ರದೇವಸೂರಿಯ 'ಆಖ್ಯಾನ ಮಣಿ ಕೋಶ' (ಪ್ರಾಕೃತ) ಹರಿಷೇಣನ 'ಬೃಹತ್ಕಥಾಕೋಶ', ನಾಗರಾಜನ ಪುಣ್ಯಾಸ್ರವದ ಕರಕಂಡುವವಲ್ಲಿ ನೀಡುವ ಮಹಾರಾಜನ ಕಥೆ (ಕನ್ನಡ). ಬಂಧುವರ್ಮನು 'ಜೀವ ಸಂಬೋಧನೆ'ಯಲ್ಲಿ ನೀಡುವ ಉಲ್ಲೇಖ, ಇವುಗಳನ್ನು ಸೇರಿಸಲಾಗಿದೆ. ಇವುಗಳಲ್ಲಿ ಹರಿಷೇಣನ ಬೃಹತ್ಕಥಾಕೋಶದ ಉಲ್ಲೇಖವನ್ನು ಮತ್ತು ಬಂಧುವರ್ಮನ

ಉಲ್ಲೇಖವನ್ನು ಶ್ರೀ ಶುಭಚಂದ್ರರವರು ಜೈನ ಸಂಸ್ಕೃತಿ ಮತ್ತು ಸಾಹಿತ್ಯ ಎಂಬ ಗ್ರಂಥದಲ್ಲಿ ನೀಡಿದ್ದಾರೆ

8) ಕುಂಭಕಾರ ಜಾತಕದಲ್ಲಿ ಬರುವ ಕಥೆಯನ್ನು ಹೀರಾಲಾಲ್ ಜೈನ್‌ರವರು ಕನಕಾಮ್ರನ 'ಕರಕಂಡ ಚರಿಉ' ಗ್ರಂಥದ ಪ್ರಸ್ತಾವನೆಯಲ್ಲಿ ನೀಡಿದ್ದಾರೆ

9) 'ಕರಂಡ, ಕರಕಂಡ ಎಂಬ ಪಾಠಾಂತರವೂ ಲಭಿಸುತ್ತದೆ

10) 'ಕರಕಂಡ ಚರಿಉ' ಪ್ರಸ್ತಾವನೆಯಿಂದ ಸಂಗ್ರಹಿಸಲಾಗಿದೆ

11) ಹರಿಷೇಣನ ಬೃಹತ್ಕಥಾಕೋಶದ ಆಧಾರದಿಂದ ಈ ಕಥೆಯನ್ನು ಸಂಗ್ರಹಿಸಲಾಗಿದೆ. ಡಾ॥ ಆ. ನೇ. ಉಪಾಧ್ಯೆ (ಸಂ) ಬೃಹತ್ಕಥಾಕೋಶ, ಭಾರತೀಯ ವಿದ್ಯಾಭವನ, ಬಾಂಬೆ 1943

12) ಶ್ರೀ ಹೀರಾಲಾಲ್ ಜೈನ್‌ರವರು ಕರಕಂಡ ಚರಿಉವಿನ ಪ್ರಸ್ತಾವನೆಯಲ್ಲಿ ಇದರ ಚಾರಿತ್ರಿಕ ಅಂಶಗಳ ಬಗೆಗೆ ವಿವರವನ್ನು ನೀಡಿದ್ದಾರೆ.

13) ಶ್ರೀ ಶುಭಚಂದ್ರರವರು 'ಜೈನ ಸಾಹಿತ್ಯ ಮತ್ತು ಸಂಸ್ಕೃತಿ : ಕೆಲವು ಅಧ್ಯಯನಗಳು' ಗೀತಾ ಬುಕ್ ಹೌಸ್, ಮೈಸೂರು. ಪು. 68ರಲ್ಲಿ 'ಈ ಜನಪ್ರಿಯ ಕಥೆ ಕನ್ನಡದಲ್ಲಿ ಏಕೆ ಬರಲಿಲ್ಲ ಎಂಬುದು ಪ್ರಶ್ನೆಯಾಗಿದೆ ಎಂದು ಹೇಳಿದ್ದಾರೆ. ಕನ್ನಡದಲ್ಲಿಯೂ ಈ ಕತೆ ಬಂದಿರುವುದು ಗಮನಾರ್ಹ

14) ಹೀರಾಲಾಲ್ ಜೈನ್ (ಸಂ) 'ಕರಕಂಡ ಚರಿಉ' ಪ್ರಸ್ತಾವನೆ. ಪು. 10, 11, 12

15) ಅದೇ

16) ಕವಿ ಕನಕಾಮರ ಜೈನ ಮುನಿಯಾಗುವ ಮುನ್ನ ವೈದಿಕವಂಶಜನಾಗಿದ್ದವನು. ವೈದಿಕ ಪರಂಪರೆಯಿಂದ ಪ್ರಭಾವಿತವಾದ ಅಂಶ ಇಲ್ಲಿ ಕಂಡುಬರುತ್ತದೆ

17) Dr. A. N. Upadhye, 'Punyasrava Katha Kosha' Introduction, pp. 29—30

ಕವಿ ಲೀಲಾಶುಕ : ಕೆಲವು ಸಂಗತಿಗಳು

ಸೀತಾರಾಮ ಜಾಗೀರ್‌ದಾರ್

ಭಾರತೀಯ ಸಾಹಿತ್ಯದಲ್ಲಿ ಸ್ತೋತ್ರಸಾಹಿತ್ಯಕ್ಕೊಂದು ವಿಶಿಷ್ಟಸ್ಥಾನ. ಅದು ಭಕ್ತಿರಸವನ್ನು ಹೊತ್ತುಕೊಂಡು ಹರಿಯುತ್ತದೆ. ಈ ಮಹಾನದಿಗೆ ನೂರಾರು ಏಕೆ ಸಹಸ್ರಾರು ಸ್ರವಂತಿಗಳು ಹರಿದು ಬಂದು ಸೇರಿವೆ. ಆದರೆ ಎಲ್ಲವಕ್ಕೂ ಒಂದೇ ಬಗೆಯ ಸೊಬಗಿಲ್ಲ. ಕೆಲವಂತೂ ಕೇವಲ ಶುಷ್ಕ ಪ್ರವಾಹಗಳು. ಧಾರ್ಮಿಕ ದೃಷ್ಟಿಯಿಂದ ಪೂಜನೀಯವಾಗಿರಬಹುದು, ಆದರೆ ಅವುಗಳಲ್ಲಿ ಕಾವ್ಯಗುಣ ವಿರಳ. ಈ ವಿರಳ ಸಂಖ್ಯೆಯಲ್ಲಿಯೆ ಮಹತ್ವದ ಕೆಲವು ಕೃತಿಗಳಿವೆ. ಇಂತಹ ಉತ್ತಮ ಕೃತಿಗಳಲ್ಲಿ ಲೀಲಾಶುಕನ 'ಕೃಷ್ಣ ಕರ್ಣಾಮೃತ'ವೂ ಒಂದು. ಲೀಲಾಶುಕನ ಬಗೆಗೆ ಸದ್ಯ (—ಕಾಲ, ದೇಶ, ಆರಾಧ್ಯದೇವತೆ–ಹೀಗೆ ಯಾವುದರ ಬಗೆಗೂ) ಸರಿಯಾದ ಸಂಗತಿಗಳು ಖಚಿತ ಖಚಿತವಾಗಿ ತಿಳಿದುಬಂದಿಲ್ಲ. ಈ ಸಂಗತಿಗಳನ್ನು ಇನಿತು ವಿವೇಚಿಸುವುದು, ವಿವರಿಸುವುದು, ಈ ಲೇಖನದ ಗುರಿ.

I

ಲೀಲಾಶುಕ ಅಥವಾ ಬಿಲ್ವಮಂಗಲನು ಹನ್ನೊಂದನೆಯ ಶತಮಾನದಲ್ಲಿ 'ಕೃಷ್ಣ ಕರ್ಣಾಮೃತ' ಅಥವಾ 'ಕೃಷ್ಣಲೀಲಾಮೃತ' ಕೃತಿಯನ್ನು ಸೃಜಿಸಿದನು1. 'ಲೀಲಾ ಶುಕ' ವ್ಯಕ್ತಿಯ ಹೆಸರೋ ಕಾವ್ಯನಾಮವೋ ಆಗಿರಬೇಕು. ಅವನ ಹೆಸರು ಬೇರೆ ಇದ್ದರೂ ಇರಬಹುದು2. 'ಬಿಲ್ವಮಂಗಲ' ಎಂಬುದು ಸ್ಥಳವನ್ನು ಸೂಚಿಸುತ್ತದೆ.

---

1. A History of Sanskrit Literature (A. B. Keith), P. 218 (1956)
2. 'ಶ್ರೀ ಕೃಷ್ಣಕರ್ಣಾಮೃತಂ' ('ಶ್ರೀನಿವಾಸ : ಮಾಸ್ತಿ ವೆಂಕಟೇಶ ಅಯ್ಯಂಗಾರ್') ಪು. v

ಈ ಸ್ಥಳ ಎಲ್ಲಿ ಇದ್ದಿತು ಎಂಬುದು ಸದ್ಯ ತಿಳಿದಿಲ್ಲ. ಕವಿಯು ಕಾಲ ಕುಲಶೇಖರ ಆಳ್ವಾರರ ಅನಂತರ ಹಾಗೂ ಕ್ಷೇಮೇಂದ್ರನ 'ಔಚಿತ್ಯ ವಿಚಾರ ಚರ್ಚಾ' ರಚನೆಗಿಂತ ಮೊದಲು ಎಂದು ಹೇಳಬಹುದು. ಮುಕುಂದಮಾಲೆಯ ಪದ್ಯ—

ಹೇ ಗೋಪಾಲಕ ಹೇ ಕೃಪಾಜಲನಿಧೇ ಹೇ ಸಿಂಧುಕನ್ಯಾಪತೇ
ಹೇ ಕಂಸಾಂತಕ ಹೇ ಗಜೇಂದ್ರ ಕರುಣಾಪಾರೀಣ ಹೇ ಮಾಧವ
ಹೇ ರಾಮಾನುಜ ಹೇ ಜಗತ್ತ್ರಯಗುರೋ ಹೇ ಪುಂಡರೀಕಾಕ್ಷ ಮಾಂ
ಹೇ ಗೋಪೀಜನನಾಥ ಪಾಲಯ ಪರಂ ಜಾನಾಮಿ ನ ತ್ವಾಂ ವಿನಾ ॥

ಇದು 'ಕೃಷ್ಣಕರ್ಣಾಮೃತ'ದಲ್ಲಿ ತದ್ವತ್ ಉದ್ಧೃತಗೊಂಡಿದೆ3. ಕ್ಷೇಮೇಂದ್ರನು ಅದ್ಭುತರಸಕ್ಕೆ ಉದಾಹರಣೆಯಾಗಿ 'ಕೃಷ್ಣಕರ್ಣಾಮೃತ' ಕಾವ್ಯದ ಪದ್ಯ (ಆ. II–65)

ಕೃಷ್ಣೇನಾಂಬ ಗತೇನ ರಂತುಮಧುನಾ ಮೃದ್ಭಕ್ಷಿತಾ ಸ್ವೇಚ್ಛಯಾ
ತಥ್ಯಂ ಕೃಷ್ಣಕ ಏವಮಾಹ ಮುಸಲೀ ಮಿಥ್ಯಾಂಬ ಪಶ್ಯಾನನಂ
ವ್ಯಾದೇಹೀತಿ ವಿದಾರಿತೇ ಚ ವದನೇ ದೃಷ್ಟ್ವಾ ಸಮಸ್ತಂ ಜಗತ್
ಮಾತಾ ಯಸ್ಯ ಜಗಾಮ ವಿಸ್ಮಯಪದಂ ಪಾಯಾತ್ಸ ನಃ ಕೇಶವಃ ॥ II 65

ಎಂಬುದನ್ನು ಕೊಟ್ಟಿದ್ದಾನೆ4.

ಕ್ಷೇಮೇಂದ್ರನು ಕ್ರಿ. ಶ. 1037 ರಲ್ಲಿ ಭಾರತಮಂಜರಿಯನ್ನೂ ಹಾಗೂ ಕ್ರಿ.ಶ. 1066 ರಲ್ಲಿ ದಶಾವತಾರ ಚರಿತೆಯನ್ನೂ ರಚಿಸಿರುವನು. ಆದುದರಿಂದ ಲೀಲಾಶುಕನು ಕ್ಷೇಮೇಂದ್ರನಕ್ಕಿಂತಲೂ ಪೂರ್ವದಲ್ಲಿ ಇದ್ದನು. ಆದುದರಿಂದ ಆತನನ್ನು ಹಲವರು ಪರಿಗಣಿಸಿರುವಂತೆ ಜಯದೇವನ ಅನಂತರದ ಕವಿಯೆಂದು ಪರಿಗಣಿಸುವುದು ಸೂಕ್ತವಲ್ಲ. ಕ್ರಿ. ಶ. 1037 ಕ್ಕೂ ಮುಂಚೆ ಇದ್ದಿರಬಹುದು. ಕುಲಶೇಖರ ಆಳ್ವಾರರ ಕಾಲ ಸುಮಾರು ಒಂಬತ್ತನೆಯ ಶತಮಾನದ ಆರಂಭ. ಅವರು ಕೇರಳದ ತಿರುವಾಂಕೂರಿನ ರಾಜರಾಗಿದ್ದರುಯೆಂದು ತಿಳಿದು ಬರುತ್ತದೆ5. ಲೀಲಾಶುಕನ ಒಂದು ಪದ್ಯಬಂಧ ಈ ದಿಶೆಯಲ್ಲಿ ಇನಿತು ಬೆಳಕನ್ನು ಚೆಲ್ಲುತ್ತದೆ :

---

3. ಅದೇ. ಪುಟ. ೮೮, ಪದ್ಯ – ೧೦೮
4. ಅ) ಕನ್ನಡ ಔಚಿತ್ಯ ವಿಚಾರ ಚರ್ಚೆ (ಸಂ. ಡಾ. ಕೆ. ಕೃಷ್ಣಮೂರ್ತಿ) ಪು. ೨೯
   ಆ) ಶ್ರೀ ಕೃಷ್ಣ ಕಥೆಯ ಉಗಮ ಮತ್ತು ವಿಕಾಸ (ಡಾ. ಪ್ರಧಾನ ಗುರುದತ್ತ) ಪು.೨೦೯
5. ಆಳ್ವಾರುಗಳು (ಪ್ರೊ. ಎಂ. ಯಾಮುನಾಚಾರ್ಯ) ಪು. ೧೫ (ಮೂ. ಮು. 1974)

ಪ್ರೇಮುದಂಚ ಮೇ ಕಾಮುದಂ ಚಮೇ (ರಯುಜಗ)
ವೇದನಂ ಚ ವೇ ವೈಭವಂ ಚ ಮೇ
ಜೀವನಂ ಚ ಮೇ ಜೀವಿತಂ ಚ ಮೇ
ದೈವತಂ ಚ ಮೇ ದೇವ ನಾಪರಂ ॥ I. 99

ಈ ಬಗೆಯು (ರಯುಜಗ) ಬಂಧ ಸದ್ಯ ಸ್ವಯಂಭೂ ಕವಿಯು 'ಸ್ವಯಂಭೂ ಛಂದಸ್' ಗ್ರಂಥದಲ್ಲಿ ಮಾತ್ರ ಮೊದಲ ಬಾರಿಗೆ ಶಾಸ್ತ್ರಗ್ರಂಥದಲ್ಲಿ ಪ್ರಕಟಗೊಂಡಿದೆ. ಇದರ ಹೆಸರು 'ಪಂಕ್ತಿಕಾ'6. ಸ್ವಯಂಭೂ ಕವಿಯೂ ಭೀಮಾ ತೀರದ ವ್ಯಕ್ತಿಯೆ ಆದುದರಿಂದ ಆ ಭಾಗದಲ್ಲಿ ಆ ಛಂದೋಬಂಧ ಬಳಕೆಯಲ್ಲಿ ಇದ್ದಿತೆಂದು ತೋರುತ್ತದೆ. ಅದು ಕವಿಯ ಮನೋಮುಕುರದಲ್ಲೂ ಮೂಡಿನಿಂತಿದೆಯೆಂದು ತೋರುತ್ತದೆ. ಏಕೆಂದರೆ ಲೀಲಾಶುಕ ಪಂಢರಪುರದ ವಿಠ್ಠಲ ಭಕ್ತ. ಪಂಢರಪುರ, ಭೀಮಾತೀರದ ತೀರ್ಥ.

II

ಲೀಲಾಶುಕ ಕವಿಯ ಸ್ಥಳದ ಬಗೆಗೆ ಇವನು ಯಾವ ಪ್ರಾಂತದವನೊ ತಿಳಿಯದು ಎಂದಿದ್ದಾರೆ ಮಾಸ್ತಿಯವರು[7]. ಮಲೆಯಾಳದಲ್ಲಿ, ಅಲ್ಲಿಗಿಂತ ಹೆಚ್ಚಾಗಿ ಆಂಧ್ರದಲ್ಲಿ 'ಶ್ರೀ ಕೃಷ್ಣಕರ್ಣಾಮೃತ' ಬಹಳ ಪ್ರಚಾರದಲ್ಲಿದೆಯೆನ್ನುತ್ತಾರೆ. ಶ್ರೀಯುತರು ಅವನನ್ನೂ ಆಂಧ್ರದವನೆಂದು ಊಹಿಸಿದ್ದಾರೆ. ಈ ಸಂಬಂಧದಲ್ಲಿ ನಮಗೆ ಕೆಳಗಿನ ಎರಡು ಪದ್ಯಗಳು ಕಿಂಚಿತ್ ಹೊಸ ಬೆಳಕನ್ನು ಚೆಲ್ಲುತ್ತವೆ :

ಸ್ಯಂದನೇ ಗರುಡ ಮಂಡಿತ ಧ್ವಜೇ
ಕುಂಡಿನೇಶ ತನಯಾಧಿರೋಪಿತಾ
ಕೇನಚಿನ್ನವ ತಮಾಲಪಲ್ಲವ
ಶ್ಯಾಮಲೇನ ಪುರುಷೇಣ ನೀಯತೇ ॥ ಆ II33
ಮಾ ಯಾತಪಾಂಥಾಃ ಪಥಿಭೀಮರಥ್ಯಾಃ
ದಿಗಂಬರಃ ಕೋಽಪಿ ತಮಾಲನೀಲಂ
ವಿನ್ಯಸ್ತ ಹಸ್ತೋಽಪಿ ನಿತಂಬ ಬಿಂಬೇ
ಧೂರ್ತಃ ಸಮಾಕರ್ಷತಿಚಿತ್ತವಿತ್ತಂ ॥ ಆ II34

---

6. ಸ್ವಯಂಭೂ ಛಂದಃ (ಸಂ. ಎಚ್. ಡಿ. ವೇಲಣಕರ್). ಪು. 121 (1962)
7. ಶ್ರೀಕೃಷ್ಣಕರ್ಣಾಮೃತ, ಪೂರ್ವೋಕ್ತ, ಪು. 5

ಇವೆರಡೂ ಮುಕ್ತಕಗಳು. ಈ ಇಡಿ ಕಾವ್ಯವೇ ಮುಕ್ತಕ ಸಂಗ್ರಹವೆನ್ನಬಹುದು. ಮೊದಲ ಪದ್ಯ 'ತಮಾಲಪಲ್ಲವ ನೀಲವರ್ಣದ ಪುರುಷ ಗರುಡಧ್ವಜದ ರಥದಲ್ಲಿ ಕುಂಡಿನೇಶನ ತನಯೆಯನ್ನು (ರುಕ್ಮಿಣಿಯನ್ನು)8 ವರಿಸಿಕೊಂಡು—ಕರೆದುಕೊಂಡು ಹೋಗುತ್ತಿದ್ದಾನೆ' ಎಂದು ವಿವರಿಸಿದರೆ ಎರಡನೆಯ ಪದ್ಯ '(ಯಾತ್ರಿಕರೆ) ಪಾಂಥರೆ ಭೀಮರಥಿಯ ದಾರಿಯಲ್ಲಿ ಬರಬೇಡಿ–ನಡೆದಾಡಬೇಡಿ–ಏಕೆಂದರೆ ತಮಾಲನೀಲ ವ್ಯಕ್ತಿ ನಿತಂಬದ ಮೇಲೆ ಕೈ ಇಟ್ಟುಕೊಂಡಿರುವವನು (ಸೊಂಟದ ಮೇಲೆ ಕೈ ಇಟ್ಟುಕೊಂಡು ನಿಂತಿರುವ ವಿಠ್ಠಲ) ಧೂರ್ತನು ನಿಮ್ಮ ಚಿತ್ತವೆಂಬ ವಿತ್ತವನ್ನು ಅಪಹರಿಸುತ್ತಾನೆ ! ಎಂದು ಭೀಮರಥಿಯ (ಭೀಮಾನದಿಯ) ದಡದಲ್ಲಿರುವ ದೇವತೆಯನ್ನು ವಿವರಿಸುತ್ತದೆ. ಭೀಮರಥಿಯ ದಡದಲ್ಲಿ ಇದ್ದ ಈ ಕ್ಷೇತ್ರದ ಬಗ್ಗೆ ಭಗವಾನ್ ಶ್ರೀ ಶಂಕರಾಚಾರ್ಯರು ಹೀಗೆ ಹೇಳಿದ್ದಾರೆ :

ಮಹಾಯೋಗಪೀಠೇತಟೇ ಭೀಮರಥ್ಯಾಂ
ವರಂ ಪುಂಡರೀಕಾಯ ದಾತುಂ ಮುನೀಂದ್ರೈಃ
ಸಮಾಗತ್ಯ ತಿಷ್ಠಂತಮಾನಂದಕಂದಂ
ಪರಬ್ರಹ್ಮಲಿಂಗಂ ಭಜೇ ಪಾಂಡುರಂಗಂ ॥

ಲೀಲಾಶುಕ ಈ ದೇವತೆಯನ್ನು 'ರಂಗಾವತಾರಿ' ಎಂದೂ ಹೇಳಿದ್ದಾನೆ :

ಮಲ್ಲೈಃ ಶೈಲೇಂದ್ರಕಲ್ಪಃ ಶಿಶುರಿತರಜನೈಃ ಪುಷ್ಪಚಾಪೋಽಂಗನಾಭಿಃ
ಗೋಪೈಸ್ತು ಪ್ರಾಕೃತಾತ್ಮಾ ದಿವಿ ಕುಲಿಶಭೃತಾ ವಿಶ್ವಕಾಯೋಽಪ್ರಮೇಯಃ
ಕ್ರುದ್ಧಃ ಕಂಸೇನ ಕಾಲೋ ಭಯಚಕಿತದೃಶಾ ಯೋಗಿಭಿರ್ಧ್ಯೇಯ ಮೂರ್ತಿಃ
ದೃಷ್ಟೋ **ರಂಗಾವತಾರೇ** ಹರಿರಮರಗಣಾನಂದಕೃತ್ ಪಾತು ಯುಷ್ಮಾನ್ ॥

ಪಾಂಡುರಂಗ, ವಿಠ್ಠಲ ಹಾಗೂ ರಖುಮಾದೇವಿ (ರುಕ್ಮಿಣಿ/ಲಕ್ಷ್ಮೀ) ಇವರ ಉಲ್ಲೇಖನದಿಂದ ಆತ ಈ ದೇವಾಲಯವನ್ನು ಚೆನ್ನಾಗಿ ಬಲ್ಲವನಾಗಿದ್ದನೆಂದೂ ಆ ದೇವತೆಗಳ ಪರಮಭಕ್ತನೆಂದೂ ವ್ಯಕ್ತವಾಗುತ್ತದೆ.

ಮರಾಠೀ ವಿಶ್ವಕೋಶ 'ಭಾರತೀಯ ಸಂಸ್ಕೃತಿಕೋಶ'ದಲ್ಲಿ ಕವಿ ಬಿಲ್ವಮಂಗಲ ಲೀಲಾಶುಕ ಕೃಷ್ಣಾವೇಣ್ಣಾ ನದೀತೀರದ ಗ್ರಾಮದವನೆಂದು ಬರೆದಿದೆ.9 ಆತನ

---

8. ಪುರಾಣನಾಮ ಚೂಡಾಮಣಿ (ಬೆನಗಲ್ ರಾಮರಾವ್ ಮತ್ತು ಪಾನ್ಯಂ ಸುಂದರಶಾಸ್ತ್ರಿ) ಪು. ೧೧೦ (ಮೂ. ಮು. ೧೯೭೭)
9. ಭಾರತೀಯ ಸಂಸ್ಕೃತಿಕೋಶ (ಸಂ : ಮಹದೇವ ಶಾಸ್ತ್ರಿ). ಭಾಗ-೬

ತಾಯಿಯ ಹೆಸರು ನೀಲಿ/ನೀರಿ10 ಎಂದೂ ತಂದೆಯ ಹೆಸರು ದಾಮೋದರ ಎಂದೂ ನಮೂದಿಸಿದೆ. ದೇವಗಿರಿಯ ಸೇಉಣ ದೊರೆ ರಾಮಚಂದ್ರನ ನೇಊರಗಾವ ಶಿಲಾಲೇಖದಲ್ಲಿ ನಾಸಿಕಜಿಲ್ಲೆಯಲ್ಲಿ ಅದು ಇರುವುದಾಗಿ ತಿಳಿದು ಬರುತ್ತದೆ. ಮತ್ತೆ ಈ ನೇಊರಗಾಂವ್ ಸ್ಥಳದಿಂದ ಅದರ ದಕ್ಷಿಣದಲ್ಲಿ 'ಬಿಲ್ವಗ್ರಾಮ' ಎಂಬ ಒಂದು ಊರು ಇದ್ದುದಾಗಿಯೂ ತಿಳಿದು ಬರುತ್ತದೆ.11 ಇವುಗಳಿಂದ ಲೀಲಾಶುಕನ ಊರು ಈ ಪ್ರಾಂತದಲ್ಲಿ ಇದ್ದುದಾಗಿ ಹೇಳಬಹುದು. ಕವಿಯ ಆರಾಧ್ಯದೇವತೆಯ ಆಧಾರ ದಿಂದ ಆತ ಪಂಢರಪುರದಲ್ಲಿಯ ವಿಠ್ಠಲ ಅಥವಾ ಕೃಷ್ಣನನ್ನು ಮನಸಾ ಪೂಜಿಸಿದ ವ್ಯಕ್ತಿ.

ಲೀಲಾಶುಕ ಕವಿಯ ಸ್ಥಳ ಪ್ರಾಚೀನ ಕರ್ನಾಟಕ ಎಂದು ಈಗ ಹೇಳಿದರೆ ತಪ್ಪಾಗದು. ಏಕೆಂದರೆ ಇಂದಿನ ಮಹಾರಾಷ್ಟ್ರ ಅರ್ಥಾತ್ ಮರಾಠೀ ಪ್ರಾಂತ ಅಸ್ತಿತ್ವಕ್ಕೆ ಬಂದದ್ದು ಕ್ರಿ. ಶ. 11ನೆಯ ಶತಮಾನದ ಅನಂತರ. 'ಬಾಗವಾಣಿ' ಮಹಾರಾಷ್ಟ್ರ ವ್ಯಾಪಿಸಿ ಮರಾಠೀ ಆಯಿತು. 'ಮಹಾರಾಷ್ಟ್ರ' ಮರಾಠೀ ಭಾಷೆಹುಟ್ಟುವುದಕ್ಕಿಂತ ಮುಂಚೆಯೆ ಅಸ್ತಿತ್ವದಲ್ಲಿದ್ದಿತು12 ಮಹಾರಾಷ್ಟ್ರವೆಂದ ಕೂಡಲೇ ಆದು ಮರಾಠೀ ದೇಶ ಎಂದೇ ಆಗಬೇಕಿಲ್ಲ. ಪ್ರಾರಂಭದಲ್ಲಿ ದೊಡ್ಡ ರಾಷ್ಟ್ರವೆಂದರ್ಥ ಅಷ್ಟೇ.

ಸುತ್ತಮುತ್ತಣ ಪ್ರದೇಶ, ಕವಿಯ ಮನೋಮುಕುರದಲ್ಲಿ ಮೊದಲು ಮೂಡಿ ತನ್ನ ಮುದ್ರೆಯನ್ನು ಅಚ್ಚೊತ್ತುತ್ತದೆ ; ಕಾವ್ಯದಲ್ಲಿ ತನ್ಮೂಲಕ ಪ್ರತಿಫಲಿಸಿ ನಿಲ್ಲುತ್ತದೆ. ನೀಲಬಣ್ಣದ ಅತಸಿ ಹೂ ಹೊಲತುಂಬ ಅರಳಿ ನಿಂತು ನೋಡುವವನ ಕಣ್ಮನಗಳನ್ನು ತುಂಬಿ ಆನಂದವನ್ನು ಉಂಟುಮಾಡುತ್ತದೆ. ಪರಮಾತ್ಮನಾದ ವಿಷ್ಣುವಿನ ಮೈ ಬಣ್ಣ ನೀಲವೆಂಬುದನ್ನು ನೆನೆದ ಭಕ್ತನ ಮನಸ್ಸು ಆ ಹೂವಿನ ಬಣ್ಣದೊಂದಿಗೆ ಹೋಲಿಸಿ ಬಿಡುತ್ತದೆ. ಶ್ರೀ ಕುವೆಂಪು ಅವರ ಕಾವ್ಯದಲ್ಲಿ ಮಲೆನಾಡಿನ ಪ್ರಕೃತಿ ಒಡಮೂಡಿ ನಿಂತಂತೆ.

---

10. ನೀಲಿ ನೀರಿ ನೀರಾ – ಇದೊಂದು ನದಿಯ ಹೆಸರು. ಹೆಣ್ಣುಮಕ್ಕಳಿಗೆ ನದಿಗಳ ಹೆಸರನ್ನು ಇಡುವುದು ಲೋಕರೂಢಿ. ಮಹಾರಾಷ್ಟ್ರದಲ್ಲಿ 'ನೀರಾ' ಎಂಬ ನದಿಯೂ ಇದೆ.
11. 'ಮಹಾರಾಷ್ಟ್ರವ ಗೋವೇ ಶಿಲಾಲೇಖ–ತಾಮ್ರಪಟಾಂಚೀ ವರ್ಣನಾತ್ಮಕ ಸಂದರ್ಭ ಸೂಚೀ' (ಡಾ. ಎಸ್. ಬಿ, ದೇವ) ಪು. 228
12. ಅ) ಐಹೊಳೆಯ ಶಿಲಾಶಾಸನ (ಇಮ್ಮಡಿ ಪುಲಿಕೇಶಿಯ ಮಂತ್ರಿ ರವಿಕೀರ್ತಿಯದು) ಎಪಿ. ಇಂ. ಸಂ. 6, 1–9

    ಆ) Sources of Karnataka History (Dr. S. Srikantha Sastri) P.p. 40–43

ಅತ್ಯಂತ ಬಾಲಮತಸೀಕುಸುಮ ಪ್ರಕಾಶಂ
ದಿಗ್ವಾಸಸಂ ಕನಕಭೂಷಣ ಭೂಷಿತಾಂಗಂ
ವಿಸ್ರಸ್ತ ಕೇಶಮರುಣಾಧರಮಾಯತಾಕ್ಷಂ
ಕೃಷ್ಣಂ ನಮಾಮಿ ಶಿರಸಾ ವಸುದೇವಸೂನುಂ ॥

ಶೈವಾ ವಯಂ ನ ಖಲು ತತ್ರ ವಿಚಾರಣೀಯಂ
ಪಂಚಾಕ್ಷರೀ ಜಪಪರಾ ನಿತರಾಂ ತಥಾಪಿ
ಚೇತೋ ಮದೀಯಮತಸೀ ಕುಸುಮಾವಭಾಸಂ
ಸ್ಮೇರಾನನಂ ಸ್ಮರತಿ ಗೋಪವಧೂ ಕಿಶೋರಂ ॥

'ಅತಸೀಕುಸುಮ' ಪ್ರಯೋಗ ಕವಿಯು ಪಂಢರಪುರದಲ್ಲಿಯೂ ಆ ಭಾಗದ ನೆಲದಲ್ಲಿಯೂ ಇದ್ದುದನ್ನು ಸೂಚಿಸಿದರೆ 'ಶೈವಾವಯಂ ನ ಖಲು ತತ್ರ ವಿಚಾರಣೀಯಂ' ಆತ ಶೈವ ಎಂಬುದನ್ನೂ ಸೂಚಿಸುತ್ತದೆ. ಭಾಗವತ ಸಂಪ್ರದಾಯದ ಶೈವರು ಶಿವನನ್ನು ಆರಾಧಿಸಿ ದಂತೆ ವಿಷ್ಣುವನ್ನೂ ಆರಾಧಿಸುತ್ತಾರೆ. ಆದುದರಿಂದ ಆತನ ವಿಷ್ಣುವಿನ ಆರಾಧನೆ— ಧ್ಯಾನವಿಧಾನ – ಇವೂ ಗಮನಾರ್ಹವಾಗಿವೆ. ಕವಿಯು ಸ್ಮಾರ್ತಭಾಗವತವೆಂಬ ಸಂಪ್ರ ದಾಯದವನೆಂಬುದು ಸ್ಪಷ್ಟ. ಪಾಂಡುರಂಗವಿಠ್ಠಲನ ಸುತ್ತಮುತ್ತಲಲ್ಲಿ ಈ ಸಂಪ್ರದಾಯ ಸಾಕಷ್ಟು ಪ್ರಚಲಿತವಿರುವ ಪಂಥ. ಆ ಪ್ರದೇಶದಲ್ಲಿ ಈಗಲೂ ಈ ಪಂಥವನ್ನು ಕಾಣಬಹುದು. ಆದುದರಿಂದ ಕವಿ ಲೀಲಾಶುಕನು ಪಂಢರಪುರದ—ಭೀಮರಥಿಯ— ನೆಲಜಲದ ಪರಿಸರದಲ್ಲಿ ಬಾಳಿಬದುಕಿದ ಭಕ್ತಶಿರೋಮಣಿ.

III

ಚಿಂತಾಮಣಿರ್ಜಯತಿ ಸೋಮಗಿರಿರ್ಗುರುರ್ಮೇ
ಶಿಕ್ಷಾಗುರುಶ್ಚ ಭಗವಾನ್ ಶಿಖಿಪಿಂಛಮೌಲಿಃ
ಯತ್ಪಾದಕಲ್ಪತರುಪಲ್ಲವ ಶೇಖರೇಷು
ಲೀಲಾಸ್ವಯಂವರರಸಂ ಲಭತೇ ಜಯಶ್ರೀಃ ॥

ಈ ಪದ್ಯವನ್ನು ಆಧರಿಸಿ ಕವಿಗೆ 'ಸೋಮಗುರು' ಹಾಗೂ 'ಶಿಖಿಪಿಂಛಮೌಲಿ' ಎಂಬ ಇಬ್ಬರು ಗುರುಗಳಿದ್ದುದಾಗಿ ನಂಬಿಕೆ ಇದೆ. ಮತ್ತೆ 'ಚಿಂತಾಮಣಿ' ಎಂಬ ವೇಶ್ಯೆ ಇದ್ದಳೆಂದು ಒಂದು ಕಟ್ಟುಕಥೆಯಿದೆ. ಈ ಪದ್ಯದಲ್ಲಿನ 'ಚಿಂತಾಮಣಿ' ಖಂಡಿತವಾಗಿಯೂ 'ಸೋಮಗುರು' 'ಭಗವಾನ್ ಶಿಖಿಪಿಂಛಮೌಲಿ' ಇವರನ್ನು ವರ್ಣಿಸುವ ಪದ— ವಿಶೇಷಣ. ಅರ್ಥಾತ್ ಪೂರನೆಯ ವ್ಯಕ್ತಿಯನ್ನು ಇಲ್ಲಿ ಸೂಚಿಸಲು ಬರುವುದೇ

ಇಲ್ಲ. 'ದೇವಾನಾಂ ಪ್ರಿಯ' ಎಂದರೆ 'ದೇವರಿಗೆ ಪ್ರಿಯ'. ಇದಕ್ಕೆ ಪ್ರತಿಯಾಗಿ 'ಮೂರ್ಖರು' ಎಂಬ ಅರ್ಥ ಹುಟ್ಟಿದ ಹಾಗೆ[13] ಹುಟ್ಟಿದೆ ! ಮಾಸ್ತಿಯವರು ಇದನ್ನು ಸಮರ್ಥವಾಗಿಯೆ ಖಂಡಿಸಿದ್ದಾರೆ.[14]

'ಶಿಖಿಪಿಂಛಮೌಲಿ', ಈ ಬಗ್ಗೆ ಎರಡು ಮಾತುಗಳು ಅವಶ್ಯ. 'ಚಿಂತಾಮಣಿ', ಈ ಶಬ್ದ 'ಶಿಕ್ಷಾಗುರುಶ್ಚ ಭಗವಾನ್ ಶಿಖಿಪಿಂಛಮೌಲಿ' ಎಂಬುದಕ್ಕೂ ಅನ್ವಯವಾಗುತ್ತದೆ. ಇಲ್ಲಿನ ಶಿಖಿಪಿಂಛಮೌಲಿಯನ್ನು ಒಬ್ಬ ಮನುಷ್ಯನೆನ್ನುವುದಕ್ಕಿಂತ 'ಪರಮಾತ್ಮನಾದ ಶ್ರೀ ಕೃಷ್ಣ' ಎಂದು ವಿವರಿಸುವುದು ಹೆಚ್ಚು ಸೂಕ್ತವೆಂದು ನನಗೆ ತೋರುತ್ತದೆ. ಕಾವ್ಯದ ತುಂಬ ಶಿಖಿಪಿಂಛ ಮೌಲಿಯಾದ ಕೃಷ್ಣನನ್ನು ಕಾಣಬಹುದು. ಪರೀಕ್ಷಿಸಲು ಕೆಲವನ್ನು ಇಲ್ಲಿ ನಿರೂಪಿಸಬಹುದು :

ಆಂದೋಲಿತಾಗ್ರ ಭುಜಮಾಕುಲನೇತ್ರ ಲೀಲಂ
ಆರ್ದ್ರಸ್ಮಿತಂ ಚ ವದನಾಂಬುಜ ಚಂದ್ರ ಬಿಂಬಂ
ಶಿಂಜಾನ ಭೂಷಣ ಶತಂ ಶಿಖಿಪಿಂಛಮೌಲಿ
ಶೀತಂ ವಿಲೋಕನರಸಾಯನಮಭ್ಯುಪೈತಿ ॥ I–69

[ತೂಗಾಡುವ ತೋಳು, ಆಕುಲಿತನೇತ್ರ ಲೀಲೆ, ರಸಭರಿತ ಸ್ಮಿತ, ಕಮಲದಂತೆ ಅರಳಿದ ಮುಖ ಚಂದ್ರ, ಝಣ ಝಣಿಸುವ ಭೂಷಣಶತ, ನವಿಲುಗರಿಯ ಕಿರೀಟ ತೊಟ್ಟು ತಂಪನ್ನು ನೀಡುವ ರಸಾಯನವು ಸಮ್ಮುಖಕೆ ಸಾರಿದೆ–ಬಂದಿದೆ.]

ಶೃಂಗಾರ ರಸ ಸರ್ವಸ್ವಂ ಶಿಖಿಪಿಂಛವಿಭೂಷಣಂ
ಅಂಗೀಕೃತ ನರಾಕಾರಮಾಶ್ರಯೇ ಭುವನಾಶ್ರಯಂ ॥ I–91

[ಶೃಂಗಾರ ರಸ ಸರ್ವಸ್ವನಾಗಿ ನವಿಲಗರಿಯನ್ನು ಆಭರಣವನ್ನಾಗಿ ಮಾಡಿಕೊಂಡು ನರಾಕಾರವನ್ನು ಅಂಗೀಕರಿಸಿರುವ ಭುವನಾಶ್ರಯದೈವವನ್ನು (ನಾನು) ಆಶ್ರಯಿಸುತ್ತೇನೆ.]

---

13. ಭಾವಕನತಿರಸಿಕಂ ಸಂ । ಭಾವಿತನಭ್ಯಸ್ತ ಶಾಸ್ತ್ರನನ್ವಿತಸೆನಿಪಾ
ದೇವಂಗೆ ವಿಷಯಮಿಲ್ಲದೆ । ದೇವಾನಾಂ ಪ್ರಿಯರ್ಗೆ ವಿಷಯಮೇ ಸತ್ಕಾವಂ॥
1) ಜನ್ನನ ಯಶೋಧರ ಚರಿತೆ (ಪ್ರೊ. ಕ. ವೆಂ. ರಾಘವಾಚಾರ್) ಪು. ೧೧೮
2) ಯಶೋಧರ ಚರಿತೆಯ ಪ್ರಕಾಶಿಕೆ
(ಪ್ರೊ। ಎಚ್. ಎಂ. ಶಂಕರನಾರಾಯಣರಾವ್) ಪು. ೧೪

14. 'ಶ್ರೀಕೃಷ್ಣಕರ್ಣಾಮೃತ' ಮುನ್ನುಡಿ ಪುಟ–vi

ಅಭಿನವ ನವನೀತ ಸ್ನಿಗ್ಧಮಾಪೀತ ದುಗ್ಧಂ
ದಧಿಕಣ ಪರಿದಿಗ್ಧಂ ಮುಗ್ಧಮಂಗಂ ಮುರಾರೇಃ
ದಿಶತು ಭುವನ ಕೃಚ್ಛ್ರಚ್ಛೇದಿ ತಾಪಿಂಛಗುಚ್ಛ
ಚ್ಛವಿ ನವಶಿಖಿಪಿಂಛಾ ಲಾಂಛಿತಂ ಪಾಂಛಿತಂ ನಃ ॥ II-1

[ಹೊಸದಾಗಿ ತೆಗೆದ ಬೆಣ್ಣೆಯು ಸ್ನಿಗ್ಧವಾಗಿ ಸವರಿರಲು, ಹಳದಿಯಾದ ಹಾಲು ಇನಿತು ಹತ್ತಿರಲು, ಮತ್ತೆ ಮೊಸರಿನ ಕಣ ಮೆತ್ತಿರಲು, ತಮಾಲದ ಗೊಂಚಲಂತೆ ಗೋಚರಿಸುವ ಹಾಗೂ ಹೊಸ ನವಿಲಗರಿಯ ಲಾಂಛನವನ್ನು ಹೊಂದಿದ ಮುರಾರಿಯ ಮುಗ್ಧ ಮೈಯ್ಯು ಇಷ್ಟಾರ್ಥವನ್ನು ನಮಗೆ ನೀಡಲಿ.]

ವಿಹಾಯ ಕೋದಂಡಶರಾ ಮುಹೂರ್ತಂ
ಗೃಹಾಣ ಪಾಣೌ ಮಣಿಚಾರುವೇಣುಮ್
ಮಯೂರಬರ್ಹಂ ಚ ನಿಜೋತ್ತಮಾಂಗೇ
ಸೀತಾಪತೇ ತ್ವಾಂ ಪ್ರಣಮಾಮಿ ಪಶ್ಚಾತ್ ॥ III 94

[ಸೀತಾಪತಿಯೇ, ಮುಹೂರ್ತಕಾಲ ಕೋದಂಡಶರಗಳನ್ನು ಬಿಟ್ಟು ಕರದಲ್ಲಿ ಮಣಿಗಳಿಂದ ಸುಂದರವಾದ ವೇಣುವನ್ನೂ ಮತ್ತು ತಲೆಯಲ್ಲಿ ನವಿಲಗರಿಯನ್ನೂ ಧರಿಸು. ಆಮೇಲೆ ನಾನು ನಿನಗೆ ನಮಸ್ಕರಿಸುತ್ತೇನೆ.]

ಹಾಗೆಯೆ ಇನ್ನೂ ಅನೇಕ- 'ಜಯತುಗುಹ ಶಿಖೀಂದ್ರ ಪಿಂಛಮೌಳಿ' 'ಸ್ಮಿತಸ್ನುತ ಸುಧಾಧರಾ ಮದಶಿಖಂಡಿಬರ್ಹಾಂಕಿತಾ' 'ಜೀಯಾದಸೌ ಶಿಖಿ ಶಿಖಂಡಕೃತಾವತಂಸಾ' 'ಲಸದ್‌ಬರ್ಹಾಪೀಡಂ' 'ಮಾಲಾಬರ್ಹ' 'ಬರ್ಹಿಶಿಖಾವತಂಸಾಃ' 'ಬರ್ಹಾವತಂಸ ಪ್ರಿಯಂ' 'ಪಿಂಛಾಚೂಡಾ' 'ಪಿಂಛಗ್ರಥನ ಸುವಿಲಸತ್ಕುಂತಲಂ' 'ಮೌಳಿಶ್ಚಂದ್ರಕ ಭೂಷಣಾ' ಮುಂತಾಗಿ ಹತ್ತಾರು ಉದಾಹರಣೆಗಳಿಂದ 'ಶಿಖಿಪಿಂಛಮೌಲಿ' ಎಂದರೆ ಭಗವಾನ್ ಶ್ರೀ ಕೃಷ್ಣನೆಂದು ನಿರ್ಣಯಿಸಲು ಸಾಧ್ಯವಾಗುತ್ತದೆ. ಆದುದರಿಂದ 'ಸೋಮಗುರು' ಎಂಬವರೊಬ್ಬರೇ ಆ ಪದ್ಯದಲ್ಲಿ ಗುರುಗಳು ಎಂದು ನಿರ್ಧಾರವಾಗುತ್ತದೆ.

IV

ಮಾತರ್ನಾತಃ ಪರಮನುಚಿತಂ ಯತ್ಖಲಾನಾಂಪುರಸ್ತಾತ್
ಅಸ್ತ್ರಾಶಂಕಂ ಜಠರಪಿಠರೀ ಪೂರ್ತಯೇ ನರ್ತಿತಾಸಿ
ತತ್‌ಕ್ಷಂತವ್ಯಂ ಸಹಜಸರಲೇ ವತ್ಸಲೇ ವಾಣಿ ಕುರ್ಯಾಂ
ಪ್ರಾಯಶ್ಚಿತ್ತಂ ಗುಣಗಣನಯಾ ಗೋಪವೇಷಸ್ಯ ವಿಷ್ಣೋಃ ॥ II 4

ಈ ಪದ್ಯವನ್ನು ಓದಿದ ಕೂಡಲೇ ಎರಡು ಸಂಗತಿಗಳು ತಟ್ಟನೆ ಅವತರಿಸಿ ನಿಲ್ಲುತ್ತವೆ :

1) ಕವಿಯು ಪೂರ್ವದಲ್ಲಿ ತನ್ನ ಹೊಟ್ಟೆ ಪಾಡಿಗಾಗಿ ಸರಸ್ವತಿಯನ್ನು ದುಡಿಸಿಕೊಂಡನು. ತತ್ ಪ್ರಾಯಶ್ಚಿತ್ತವೆಂದು ಈಗ 'ಗೋಪವೇಷದ ವಿಷ್ಣುವನ್ನು -ಅವನ ಗುಣಗಾಣನವನ್ನು ಹಾಡುತ್ತಿದ್ದಾನೆ (ರಚಿಸುತ್ತಿದ್ದಾನೆ).

2) 'ಗೋಪವೇಷಸ್ಯ ವಿಷ್ಣೋಃ' ಎಂಬುದು ಕಾಳಿದಾಸನ ವಿದ್ಯಾರ್ಥಿಗೆ ಕೂಡಲೇ ಅವನ ಪದ್ಯವನ್ನು ನೆನಪಿಗೆ ತರುತ್ತದೆ :

ರತ್ನಚ್ಛಾಯಾವ್ಯತಿಕರ ಇವ ಪ್ರೇಕ್ಷ್ಯಮೇತತ್ಪುರಸ್ತಾ
ದ್ವಲ್ಮೀಕಾಗ್ರಾತ್ಪ್ರಭವತಿ ಧನುಃ ಖಂಡಮಾಖಂಡಲಸ್ಯ
ಯೇನ ಶ್ಯಾಮಂ ವಪುರತಿತರಾಂ ಕಾಂತಿಮಾಪತ್ಸ್ಯತೇ ತೇ
ಬರ್ಹೇಣೇವ ಸ್ಫುರಿತರುಚಿನಾ ಗೋಪವೇಷಸ್ಯ ವಿಷ್ಣೋಃ ॥15

ಕಾಳಿದಾಸನ ಪ್ರಭಾವ ಲೀಲಾಶುಕನ ಮೇಲೆ ವಿಶೇಷವಾಗಿ ಆಗಿದೆ. ಎರಡೂ ಮಂದಾಕ್ರಾಂತ ವೃತ್ತಗಳ ಬಂಧ ; ತುಂಬ ಸೊಗಸಾಗಿ ರೂಪುಗೊಂಡು ನಿಂತಿವೆ. ಎರಡೂ ಬೇಡಿಕೆಗಳೇ. ಕಾಳಿದಾಸನ ಯಕ್ಷ ಮೇಘವನ್ನು ಬೇಡಿಕೊಂಡರೆ ಕವಿ ಲೀಲಾ ಶುಕನು ಸಹಜ ಸರಲ ಸ್ವಭಾವದ ಸರಸ್ವತಿಯನ್ನು ಬೇಡಿಕೊಂಡಿದ್ದಾನೆ. ತನ್ನ ತಪ್ಪನ್ನು ತಿಳಿಯಪಡಿಸಿದ್ದಾನೆ.

ಆಶ್ಚರ್ಯದ ಸಂಗತಿಯೆಂದರೆ ಲೀಲಾ ಶುಕನನ್ನು ಜನತೆ 'ಕಾಳಿದಾಸ' ಎಂದೇ ಕರೆಯಿತು. ಶ್ಯಾಮಲಾಸ್ತುತಿಯೊಂದನ್ನು "ಕಾಳಿದಾಸಕೃತ ಶ್ಯಾಮಲಾ ಸ್ತೋತ್ರ" ಎಂದೇ ಹೇಳಲಾಗುತ್ತದೆ.16

ಮಾಣಿಕ್ಯವೀಣಾಮುಪಲಾಲಯಂತೀಂ
ಮದಾಲಸಾಂ ಮಂಜುಲ ವಾಗ್ವಿಲಾಸಾಮ್
ಮಾಹೇಂದ್ರ ನೀಲದ್ಯುತಿಕೋಮಲಾಂಗೀಂ
ಮಾತಂಗಕನ್ಯಾಂ ಸತತಂ ಸ್ಮರಾಮಿ ॥

---

15. ಕನ್ನಡ ಕಾಳಿದಾಸ ಮಹಾಸಂಪುಟ (ಪ್ರೊ. ಎಸ್. ವಿ. ಪರಮೇಶ್ವರ ಭಟ್ಟ) ಪು. ೬೫೫

16. ನಿತ್ಯೋಪಯುಕ್ತ ದೇವ ಎ ಸ್ತೋತ್ರಗಳು (ಲೇ. ಕೆ. ನಾಗರಾಜರಾವ್) ಪು. 11-12 (ನಾಲ್ಕನೆಯ ಮುದ್ರಣ, 1990)

ಚತುರ್ಭುಜೇ ಚಂದ್ರಕಲಾವತಂಸೇ
ಕುಚೋನ್ನತೇ ಕುಂಕುಮರಾಗ ಶೋಣೇ
ಪುಂಡ್ರೇಕ್ಷು ಪಾಶಾಂಕುಶ ಪುಷ್ಪಬಾಣ
ಹಸ್ತೇ ನಮಸ್ತೇ ಜಗದೇಕಮಾತಾ ॥

ಮಾತಾ ಮರಕತಶ್ಯಾಮಾ ಮಾತಂಗೀ ಮದಶಾಲಿನೀ
ಕಟಾಕ್ಷಯತು ಕಲ್ಯಾಣೀ ಕದಂಬವನವಾಸಿನೀ ॥
ಜಯ ಮಾತಂಗ ತನಯೇ ಜಯನೀಲೋತ್ಪಲದ್ಯುತೇ
ಜಯ ಸಂಗೀತರಸಿಕೇ ಜಯ ಲೀಲಾಶುಕ ಪ್ರಿಯೇ ॥

ವಾಸ್ತವದಲ್ಲಿ ಇದು 'ಮೇಘದೂತ' ಇತ್ಯಾದಿ ಕಾವ್ಯಗಳನ್ನು 'ಅಭಿಜ್ಞಾನ ಶಾಕುಂತಲ' ಇತ್ಯಾದಿ ನಾಟಕಗಳನ್ನೂ ಬರೆದ ಕಾಳಿದಾಸ ಕವಿಯ ಕೃತಿಯಲ್ಲ. 'ಲೀಲಾಶುಕ' ಎಂಬ ಮುದ್ರಿಕೆ ಇರುವುದರಿಂದ 'ಲೀಲಾಶುಕ' ಬಿಲ್ವಮಂಗಲನದು. ಇದರಿಂದ ನಿರ್ಣಯ ವಾಗುವ ಸಂಗತಿಯೆಂದರೆ ಲೀಲಾಶುಕನಿಗೆ 'ಕಾಳಿದಾಸ' ಎಂಬ ಬಿರುದು ಸಂದಿತ್ತು. ಆ ಹೆಸರಿನಿಂದಲೂ ಆತ ಪ್ರಸಿದ್ಧನಾಗಿದ್ದನು.

V

ಕಾಳಿದಾಸನ ಹಾಗೆ ಕವಿ ಲೀಲಾಶುಕನೂ ದೊಡ್ಡ ಛಂದೋವಿದನಾಗಿದ್ದನು. ಕೃಷ್ಣ ಕರ್ಣಾಮೃತದ 331 ಪದ್ಯಗಳಲ್ಲಿ ಆತನು ಬಳಸಿದ ವಿವಿಧ ಛಂದೋ ಬಂಧಗಳ ವಿವರ ಹೀಗಿದೆ : ಸಮವೃತ್ತಗಳು—

1) ಅನುಷ್ಟುಭ್ (ಶ್ಲೋಕ), 2) ಅಪರವಕ್ತ್ರ, 3) ಅವಿತಥ, 4) ಇಂದ್ರವಜ್ರ, 5) ಉಪಜಾತಿ, 6) ಉಪೇಂದ್ರವಜ್ರ, 7) ಕನಕಪ್ರಭಾ, 8) ತೋಟಕ, 9) ದ್ರುತ ವಿಲಂಬಿತ, 10) ಪೃಥ್ವೀ, 11) ಪಂಕ್ತಿಕಾ, 12) ಪ್ರಮಿತಾಕ್ಷರ, 13) ಪ್ರಹರ್ಷಿಣಿ, 14) ಭುಜಂಗಪ್ರಯಾತ, 15) ಮಂದಾಕ್ರಾಂತ, 16) ಮಾಲಿನಿ, 17) ರಥೋದ್ಧತಾ, 18) ರುಚಿರಾ 19) ವಂಶಸ್ಥ, 20) ವಸಂತ ತಿಲಕ, 21) ವಸುಧರಾ, 22) ವಿಬುಧ ಪ್ರಿಯಾ, 23) ಶಾರ್ದೂಲ ವಿಕ್ರೀಡಿತ, 24) ಶಾಲಿನಿ, 25) ಶಿಖರಿಣಿ, 26) ಸುರಭಿ, 27) ಸ್ರಗ್ಧರಾ, 28) ಸ್ರಗ್ವಿಣಿ, 29) ಸ್ವಾಗತ, 30) ಹರಿಣಿ

ಅರ್ಧಸಮ ವೃತ್ತಗಳು—

1) ಪುಷ್ಪಿತಾಗ್ರ 2) ವಿಬೋಧಿತಾ 3) ಸುಬೋಧಿತಾ

ಮಾತ್ರಾವೃತ್ತಗಳು-

1) ಆರ್ಯಾ 2) ಉಪಗೀತಿ 3) ಗೀತಿ.

ಇವುಗಳಲ್ಲಿ ಶಾರ್ದೂಲ ವಿಕ್ರೀಡಿತ (62 ಪದ್ಯಗಳು) ಮತ್ತು ವಸಂತತಿಲಕ (55 ಪದ್ಯಗಳು). ವೃತ್ತಗಳು ಹೆಚ್ಚಾಗಿ ಪ್ರಯೋಗಗೊಂಡಿವೆ. ಪ್ರತಿ ಪದ್ಯ ಆಯಾ ಛಂದೋಬಂಧಕ್ಕೆ ಅನುಗುಣವಾದ ರೀತಿಯಲ್ಲಿ ಓಡುತ್ತವೆ. ಇನ್ನೊಂದು ದೃಷ್ಟಿಯಿಂದಲೂ ಇವನ್ನು ಗುರುತಿಸಬಹುದು. ಈ ಸ್ತುತಿ ಪದ್ಯಗಳು ಎರಡು, ಮೂರು, ನಾಲ್ಕು, ಐದು ಆರು, ಏಳು, ಎಂಟು ಹಾಗೂ ಹತ್ತು ಪದ್ಯಗಳ (ದ್ವಿಕ, ತ್ರಿಕ, ಚತುಷ್ಕ, ಪಂಚಕ, ಷಟ್ಕ ಸಪ್ತಕ, ಅಷ್ಟಕ ಹಾಗೂ ದಶಕ) ಗುಚ್ಛಗಳೂ ಆಗಿವೆ. ಉದಾಹರಣೆಗೆ 'ಯಾಸಾಂ ಗೋಪಾಂಗನಾನಾಂ ಲಸದಸಿತತರಾಲೋಲ ಲೀಲಾ ಕಟಾಕ್ಷಾ' ಹಾಗೂ 'ಯದ್ವೇಣು ಶ್ರೇಣಿರೂಪಸ್ಥಿತ ಸುಷಿರ ಮುಖೋದ್ಗೀರ್ಣ ನಾದಪ್ರಭಿನ್ನಾ' ಇದೊಂದು ದ್ವಿಕ[17]. ಹೀಗೆಯೇ-

ಅಂಗನಾಮಂಗನಾಮಂತರೇ ಮಾಧವೋ (ರರರರ ಗಣಗಳು)
ಮಾಧವಂ ಮಾಧವಂಚಾಂತರೇಣಾಂಗನಾ
ಇತ್ಥಮಾಕಲ್ಪಿತೇ ಮಂಡಲೇ ಮಧ್ಯಗಃ
ಸಂಜಗೌ ವೇಣುನಾ ದೇವಕೀನಂದನಃ ॥ II 35

ಇತ್ಯಾದಿಯಾಗಿ 'ಸ್ರಗ್ವಿಣಿ' ವೃತ್ತದಲ್ಲಿ ಬರೆಯಲ್ಪಟ್ಟಿರುವ ಅಷ್ಟಕ[18] ಮುಂತಾಗಿ ಪದ್ಯ ಗುಚ್ಛಗಳನ್ನು ಗುರುತಿಸಬಹುದು.

VI

ಕೃಷ್ಣಕರ್ಣಾಮೃತವನ್ನು ಓದಿದ ಭಾಗವತಕವಿ ರುದ್ರಭಟ್ಟ ತನ್ನ ಕಾವ್ಯ ಜಗನ್ನಾಥ ವಿಜಯದಲ್ಲಿ ಅಲ್ಲಿನ ಪದ್ಯಗಳಲ್ಲಿ ಕೆಲವನ್ನು ಯಥಾವತ್ತಾಗಿ ಅನುವಾದ ಮಾಡಿಕೊಂಡಿದ್ದಾನೆ :

ಕೃ. ಕ : ಶಂಭೋ ಸ್ವಾಗತಮಾಸ್ಯತಾಮಿತ ಇತೋ ವಾಮೇನ ಪದ್ಮಾಸನ
ಕ್ರೌಂಚಾರೇ ಕುಶಲಂ ಸುಖಂ ಸುರಪತೇ ವಿತ್ತೇಶ ನೋದೃಶ್ಯಸೇ

17. ಪೂರ್ವೋಕ್ತ 'ಕೃಷ್ಣ ಕರ್ಣಾಮೃತ' ಪು. ೮೪
18. ಅದೇ. ಪು. 60-62

ಇತ್ಥಂ ಸ್ವಪ್ನಗತಸ್ಯ ಕೈಟಭಜಿತಃ ಶ್ರುತ್ವಾ ಯಶೋದಾ ಗಿರಃ
ಕಿಂ ಕಿಂ ಬಾಲಕ ಜಲ್ಪಸೀತಿ ರಚಿತಂ ಧೂಧೂ ಕೃತಂ ಪಾತು ನಃ ॥19

II 59

ಜ. ವಿ. : ವನಜಜ ಬನ್ನಿಮಿತ್ತ ಹರ ಕುಳ್ಳಿರಿಮುನ್ನತ ಪೀಠದೊಳ್ ಪದಾ
ವನತಿಯಿನೇಟ್ ಮಹೇಂದ್ರ ದಿವಿಜರ್ ಪುಗೇ ಬಾರಿಸವೇಡೆನುತ್ತೆಮು
ನ್ನಿನ ನಿಜಲೀಲೆಯೋಲಗದ ಪೆರ್ಮೆಯ ಮಾತನದೊರ್ಮೆ ಸುಪ್ತಿಯೊಳ್
ಕನವರಿಸುತ್ತುಮಿರ್ಪ ಹರಿ ಗೋಪಿಗೆ ವಿಸ್ಮಯಮಂ ನೆಗಟ್ಚಿದಂ ॥ 3-59

ಕೃ. ಕ. : ಕಾಲಿಂದೀ ಪುಲಿನೋದರೇಷು ಮುಸಲೀ ಯಾವದ್ಗತಃ ಖೇಲಿತುಂ
ತಾವತ್ಕರ್ಬುರಿಕಾ ಪಯಃ ಪಿಬ ಹರೇ ವರ್ಧಿಷ್ಯತೇ ತೇ ಶಿಖಾ
ಇತ್ಥಂ ಬಾಲತಯಾ ಪ್ರತಾರಣಪರಾಃ ಶ್ರುತ್ವಾ ಯಶೋದಾಗಿರಃ
ಪಾಯಾನ್ನಃ ಸ್ವಶಿಖಾಂ ಸ್ಪೃಶನ್ಪ್ರಮುದಿತಃ ಕ್ಷೀರೇsರ್ಧಪೀತೇ ಹರಿಃ ॥

II 61

ಜ. ವಿ. : ಶಕಟವಿಮರ್ದನಾ ಮುಸಲಿ ಬಾರದ ಮುನ್ನಮೆ ನಮ್ಮ ಹೇಮಘಂ
ಟಿಕೆ ಘಣಿಲೆಂಬ ನಂದಿನಿಯು ಪಾಲಿದೆ ನೀ ಕುಡಿಯಲ್ಕೆ ನಿನ್ನ ಜೆಂ
ಡಿಕೆ ಬಳೆದಪ್ಪುದೆಂದಬಲೆ ನಂಬಿಸೆ ಪಾಲ್ಗುಡಿದೀಗಳಬ್ಬೆ ಜೆಂ
ಡಿಕೆಯೆನಿತುದ್ದವಾದುದೆನುತಂ ಬೆಸಗೊಳ್ವ ಮುಕುಂದನೊಪ್ಪುಗುಂ ॥ 52

ಕೃ. ಕ. : ಕೃಷ್ಣೇನಾಂಬ ಗತೇನ ರಂತುಮಧುನಾ ಮೃದ್ಭಕ್ಷಿತಾ ಸ್ವೇಚ್ಛಯಾ
ತಥ್ಯಂ ಕೃಷ್ಣ ಕ ಏವಮಾಹ ಮುಸಲೀ ಮಿಥ್ಯಾಂಬ ಪಶ್ಯಾನನಂ
ವ್ಯಾದೇಹೀತಿ ವಿದಾರಿತೇ ಚ ವದನೇ ದೃಷ್ಟ್ವಾ ಸಮಸ್ತಂ ಜಗತ್
ಮಾತಾ ಯಸ್ಯ ಜಗಾಮ ವಿಸ್ಮಯಪದಂ ಪಾಯಾತ್ಸ ನಃ ಕೇಶವಃ ॥20

(2-65)

---

19. ಅದೇ. ಪು. 68 ಪದ್ಯ-59

20. ಈ ಪದ್ಯ ಚಂದಕ ಕವಿಯದೆಂದು ಕ್ಷೇಮೇಂದ್ರನ ಔಚಿತ್ಯ ವಿಚಾರದಲ್ಲಿ ಬರೆದಿದೆ. ಲೀಲಾ ಶುಕನ ಮೂಲ ಹೆಸರು 'ಚಂದಕ' ಎಂದಿರಬಹುದು. 'ಕೃಷ್ಣಕರ್ಣಾಮೃತ' ಇತ್ಯಾದಿ ಭಕ್ತಿ ಭರಿತ ಕಾವ್ಯವನ್ನು ಸೃಜಿಸುವುದಕ್ಕಿಂತ ಮುಂಚೆ ಅವನು ತನ್ನ ಕಾವ್ಯಶಕ್ತಿಯನ್ನು ಲೌಕಿಕ ಕಾವ್ಯವನ್ನು ಬರೆಯಲು ಅಥವಾ ಇನ್ನೇತರದೂ ಬಗೆಯಲ್ಲಿ ಭಕ್ತ್ಯೇತರ ಸಾಹಿತ್ಯವನ್ನು ಸೃಜಿಸಲು ಬಳಸಿದುದು ಸ್ಪಷ್ಟವಿದೆ (ಕೃ. ಕ. II-4). ಈ ಬಗ್ಗೆ ಮೇಲೆ ಸ್ವಲ್ಪ ಸಂಗತಿ ಈಗಾಗಲೇ ನೀಡಿರುವೆ.

ಜ. ವಿ. : ಹರಿ ನೀಂ ಮಣ್ದಿಂದೆ, ತಿನ್ದೆಂ ಜನನಿ, ಪುಸಿದನೆಮ್ಮಗ್ರಜಂ, ತೋಱುವಕ್ರಾಂ
ತರಮೋ, ನೋಡೆಂದು ಬಾಯಂ ತೆಱೆವುದುಮದಱೊಳ್
ವಾರ್ಧಿಯೇೞುಂ ಕುಲೋರ್ವೀ
ಧರವೇೞುಂ ದ್ವೀಪವೇೞುಂ ಬೆರಸು ಜಗಮನೀರೇೞುಮಂ ಕೂಡೆ ಕಂಡ
ಚ್ಚರಿವಟ್ಟಿಂ ಮುಚ್ಚು ಮುಚ್ಚಾನನಮನೆನುತುಮಾ ಕಾಂತೆ ವಿಭ್ರಾಂತೆ
ಯಾದಳ್ ॥
(3-63)

ಕೃ. ಕ : ರಾಮೋ ನಾಮ ಬಭೂವ ಹುಂ ತದಬಲಾ ಸೀತೇತಿ ಹುಂ ತೌ ಪಿತುಃ
ವಾಚಾ ಪಂಚವಟೀವನೇ ವಿಹರತಸ್ತಾಮಾಹರದ್ರಾವಣಃ
ನಿದ್ರಾರ್ಥಂ ಜನನೀ ಕಥಾಮಿತಿ ಹರೇರ್ಹುಂಕಾರತಃ ಶೃಣ್ವತಃ
ಸೌಮಿತ್ರೇ ಕ್ವ ಧನುರ್ಧನುರ್ಧನುರಿತಿ ವ್ಯಗ್ರಾಗಿರಂ ಪಾತುನಃ॥ (II-72)

ಜ. ವಿ. : ಕತೆಯಂ ಕೇಳಿಲೆಕಂದ ಹುಂ ರಘುಜನೆಂಬಂ ಹುಂ ಸಕಾಂತಂ ವನ
ಸ್ಥಿತನಾದಂ ಗುರುಪೇೞ್ ಹುಂ ದಶಶಿರಂ ಕೊಂಡುಯ್ದನಾ ರಾಮನಾ
ಸತಿಯಂ ತಾನೆನೆ ಪೂರ್ವಮಂ ನೆನೆಯುತುಂ ಹುಂ ಕೊಳ್ಳದುತ್ಕೋಪ ಹುಂ
ಕೃತಿಯಂ ಮಾಡುತುಮೌಂಡುಗರ್ಚಿ ಕಿಸುಗಣ್ಬಟ್ಟಚ್ಯುತಂ ರಂಜಿಕುಂ ॥
(3-61)

ಇಬ್ಬರ ಪದ್ಯಗಳನ್ನು ಓದಿದಾಗ ಅನುಕರಣೆ ಇದ್ದುದು ಸ್ಪಷ್ಟವಿದ್ದರೂ ಎರಡನ್ನೂ ಒಂದೇ ಎಂದು ಹೇಳಲು ಹಿಂದೇಟು ಹಾಕಬೇಕಾಗುತ್ತದೆ. ಎರಡರ ಜಾಯಮಾನ - ಬರವಣಿಗೆಯ ಬಗೆತ – ಛಂದೋ ರಚನಾ ಭೇದ, ಹಲವು ಬಗೆಯ ವ್ಯತ್ಯಾಸಗಳಿಗೆ ಕಾರಣವಾಗಿದೆ.

VII

ಮಾಸ್ತಿಯವರು ಪ್ರಕಟಿಸಿರುವ ಕೃಷ್ಣಕರ್ಣಾಮೃತದಲ್ಲಿ 'ಕೃಷ್ಣ ಕರ್ಣಾಮೃತ'ದ ಪದ್ಯಗಳೆಂದು ಬೇರೆಡೆ ಹೇಳಿರುವುವು ಕಾಣುತ್ತಿಲ್ಲ. ಆ ಮೂರು ಪದ್ಯಗಳು ಹೀಗಿವೆ :

ಅರ್ಧೋನ್ಮೀಲಿತ ಲೋಚನಸ್ಯ ಪಿಬತಃ ಪರ್ಯಾಪ್ತಮೇಕಂ ಸ್ತನಂ
ಸದ್ಯಃ ಪ್ರಸ್ನುತ ದುಗ್ಧ ದಿಗ್ಧಮಪರಂ ಹಸ್ತೇನ ಸಂಮಾರ್ಜತಃ
ಮಾತ್ರಾಙ್ಗುಲಿ ಲಾಲಿತಸ್ಯ ಚಿಬುಕೇ ಸ್ಮೇರಾಯಮಾಣೇ ಮುಖೇ
ವಿಷ್ಣೋಃ ಕ್ಷೀರಕಣಾಃ ಬುಧಾನುಧವಲಾ ದಂತದ್ಯುತಿಃ ಪಾತು ವಃ ॥

[ಅರೆತೆರೆದ ಕಣ್ಣಿನಿಂದ ತಾಯಿಯ ಒಂದು ಮೊಲೆಯನ್ನು ಹೊಟ್ಟೆತುಂಬ ಕುಡಿದ ಒಡನೆಯೇ ಹಾಲು ಸೋರುತ್ತಿರುವ ಇನ್ನೊಂದನ್ನು ಕೈಯಿಂದ ಸವರುತ್ತಿರುವಾಗ ಬೆರಳುಗಳನ್ನು ತಾಯಿ ಮುದ್ದಿಸಲು ಮುಗುಳ್ನಗೆ ಬೀರುವ ಬಾಲಕೃಷ್ಣನ ಕ್ಷೀರಧವಲ ವಾದ ದಂತದ್ಯುತಿ ನಮ್ಮನ್ನು ಕಾಪಾಡಲಿ.][21]

ಕೃಷ್ಣ ತ್ವಂ ನವಯುವ್ವನೋऽಸಿ ಚಪಲಾಃ ಪ್ರಾಯೇಣ ಗೋಪಾಂಗನಾಃ
ಕಂಸೋಭೂಪತಿರಬ್ಜನಾಲಭಿದುರಗ್ರೀವಾವಯಂ ಗೋದುಹಃ
ತದ್ಯಾಚೇऽಞ್ಜಲಿನಾ ಭವಸ್ತ್ವಮಧುನಾ ವೃಂದಾವನಂ ಮದ್ವಿನಾ
ಮಾಯಾಸೀರಿತಿ ಗೋಪನಂದವಚಸಾ ನಮ್ರೋಹರಿಃ ಪಾತು ವಃ ॥22

["ಕೃಷ್ಣ, ಇದೀಗ ನೀನು ನವಯುವ್ವನಲ್ಲಿರುವೆ, ಗೋಪಾಂಗನೆಯರು ಪ್ರಾಯಃ ಚಪಲರು, ಭೂಪತಿಯಾದರೋ ಕಂಸ ! ಗೋಪಾಲಕರಾದರೋ ಅಜ್ಜನಾಳದಂತೆ ಕೃಶಕಂಠರು – ಶಕ್ತಿ ಹೀನರು ; (ಆದುದರಿಂದ) ಕೈಮುಗಿದು ಕೇಳುತ್ತೇನೆ ನನ್ನನ್ನು ಬಿಟ್ಟು ವೃಂದಾವನ (ಕಾಡಿಗೆ) ಹೋಗಬೇಡ" ಎಂದ ಮಾತಿಗೆ ನಮ್ರನಾದ ಹರಿಯು ನಮ್ಮನ್ನು ಕಾಪಾಡಲಿ.]

ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ
ಅರ್ಹನ್ನಿತ್ಯಥ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ
ಸೋऽಯಂ ನೋವಿಧಧಾತು ವಾಂಛಿತಫಲಂ ಶ್ರೀದೇನಕೀನಂದನಃ ॥23

[ಯಾರನ್ನು ಶೈವರು 'ಶಿವ' ಎಂದು, ವೇದಾಂತಿಗಳು 'ಬ್ರಹ್ಮ' ಎಂದು, ಬೌದ್ಧರು 'ಬುದ್ಧ' ಎಂದು, ಪ್ರಮಾಣಪಟುಗಳೆಂದೆನಿಸಿದ ನೈಯಾಯಿಕರು 'ಕರ್ತ' ಎಂದು ಜೈನರು 'ಅರ್ಹನ್' ಎಂದು ಮಿಮಾಂಸರು 'ಕರ್ಮ' ಎಂದು ಉಪಾಸಿಸು ತ್ತಾರೋ ಆ ದೇವಕೀನಂದನನು ನಮ್ಮ ವಾಂಛಿತಫಲವನ್ನು ನೀಡಲಿ.]

---

21. ಡಾ. ಕೆ. ಕೃಷ್ಣಮೂರ್ತಿ 'ಸಂಸ್ಕೃತ ಕಾವ್ಯ' ಪು. 266 (1958) ; ಇಲ್ಲಿನ ಅನುವಾದವೂ ಅವರದೇ.
22. Dr. A. B. Keith "A History of Sanskrit Literature" p. 218 (1956)
23. ಬಿ. ರಜನೀಕಾಂತರಾವ್ "ವಾಗ್ಗೇಯಕಾರಲೋ ಅನ್ನಮಾಚಾರ್ಯುನಿ ಸ್ಥಾನಮು" 'ತಾಳ್ಲಪಾಕ ಅನ್ನಮಾಚಾರ್ಯ ಜಯಂತಿ ಉತ್ಸವ ಸಂಚಿಕೆ' ಪು. 53

ಈ ಮೂರೂ ಪದ್ಯಗಳು ಬಹು ಸುಂದರವಾಗಿವೆ. ಸುಸಂಪಾದಿತ ಕೃತಿ ನಮಗೆ ದೊರೆಯುತ್ತಿಲ್ಲವಾದುದರಿಂದ ಸದ್ಯ ಹೀಗೆ ಹೀಗೆ ಎಂದು ಈ ಪದ್ಯಗಳ ಬಗ್ಗೆ ಹೇಳಲು ಬರುವುದಿಲ್ಲ. ಅವು ತಮ್ಮಷ್ಟಕ್ಕೆ ಜಗದಗಲ ವ್ಯಾಪಿಸಿ ನಿಂತಿವೆ. ಕೊನೆಯದು ಬೇಲೂರಿನ ಒಂದು ಶಾಸನದಲ್ಲಿ ಕ್ರಿ.ಶ. 1397ರಲ್ಲಿಯೇ ಶಿಲಾತಳಾಕ್ಷರವಾಗಿ ನಿಂತಿದೆ.[24] ವಿಶಾಲ ಮನೋಭಾವದ ಬೇಕನ್ ದೀಪವಾಗಿದೆ.

VIII

ಕವಿ ಲೀಲಾಶುಕ 'ಬಿಲ್ವಮಂಗಲ' ಎಂದೂ ಪ್ರಸಿದ್ಧಿಯನ್ನು ಹೊಂದಿದ್ದನು. ಆತನಿಗೆ 'ಚಂದಕ' ಎಂಬ ಹೆಸರೂ ಇದ್ದಿರಬಹುದು. ಆತ ಪಂಢರಪುರದ ಪಾಂಡುರಂಗನ ಭಕ್ತ. ವೈಷ್ಣವ ಸಂತ ಹಾಗೂ ಕರ್ನಾಟಕದ ಹರಿದಾಸಪಂಥ ಇವುಗಳ ಮೇಲೆ ಸಾಕಷ್ಟು ಪ್ರಭಾವ ಬೀರಿದ್ದಾನೆ.[25] ಭಾರತದಾದ್ಯಂತ ಆತ ಯಾತ್ರೆಯನ್ನು ಗೈದಿದ್ದಾನೆ. ಬದರಿ ಕ್ಷೇತ್ರದ ನಾರಾಯಣನನ್ನು ಇಂದಿಗೂ "ಯಂ ಶೈವಾ ಶಿವ ಇತಿ.........ತ್ರೈಲೋಕ್ಯ ನಾಥೋಹರಿಃ" ಎಂದು ಆತನ ಪದ್ಯದಿಂದ ಸ್ತುತಿಸಲಾಗುತ್ತದೆ. ಕೂಲಂಕಶ ಸಂಶೋಧನೆ ಆಗಬೇಕು. ಕಾಳಿದಾಸನ ಹಾಗೇ ಆತನೂ ದೊಡ್ಡ ಕವಿ. ವಿಶ್ವಮಾನವನಾದ. ಸುಂದರ ಕಾವ್ಯ ಶೃಂಖಲೆಯನ್ನು ಸೃಜಿಸಿದ, ಅವನಿಗೆ ಆ ಬಿರುದು ಬಂದಿದ್ದರೆ ಅದರಲ್ಲೇನು ಅಚ್ಚರಿಪಡುವಂತಹುದಿಲ್ಲ. ರಾಹುಲ ಸಂಕೃತ್ಯಾಯನರ ಮಾತಿನಲ್ಲಿ ಹೇಳುವುದಾದರೆ ನಮ್ಮ ಜನ ಅವನನ್ನು ಮರೆತಿದ್ದಾರಲ್ಲ ; ಅದು ಅಚ್ಚರಿ.

---

24. Ep. Car. Vol. IX (1990) No. 144, Pp· 98 & 612
25. ಇದು ಇನ್ನೊಂದು ಲೇಖನದ ವಿಷಯ

'ಮಾಘೇ ಸನ್ತಿ ತ್ರಯೋ ಗುಣಾಃ'

ಡಾ|| ಬಿ. ಚನ್ನಕೇಶವ

ಸಂಸ್ಕೃತದ ಮಹಾಕವಿಗಳಾದ ಕಾಳಿದಾಸ, ಭಾರವಿ, ದಂಡಿ ಮತ್ತು ಮಾಘ ಇವರ ಶೈಲಿಯ ಪ್ರಧಾನ ಲಕ್ಷಣವನ್ನು ಗುರ್ತಿಸುವ ಅಜ್ಞಾತ ಕರ್ತೃಕ ಶ್ಲೋಕವೊಂದು ಜನಜನಿತವಾಗಿದೆ—

ಉಪಮಾ ಕಾಳಿದಾಸಸ್ಯ ಭಾರವೇರರ್ಥ ಗೌರವಮ್ ।
ದಂಡಿನ : ಪದಲಾಲಿತ್ಯಂ ಮಾಘೇ ಸನ್ತಿ ತ್ರಯೋ ಗುಣಾಃ ॥1

"ಕಾಳಿದಾಸ ಉಪಮೆಗೂ, ಭಾರವಿ ಅರ್ಥ ಗೌರವಕ್ಕೂ, ದಂಡಿ ಪದಲಾಲಿತ್ಯಕ್ಕೂ ಪ್ರಸಿದ್ಧರಾಗಿದ್ದರೆ ಮಾಘನಲ್ಲಿ ಈ ಮೂರೂ ಗುಣಗಳು ಕೂಡಿಕೊಂಡಿವೆ."

ಈ ಶ್ಲೋಕದ ಬೆಳಕಿನಲ್ಲಿ ಹೇಳುವುದಾದರೆ ಉತ್ತಮವಾದ ಶೈಲಿಯು ಮುಖ್ಯವಾಗಿ ಮೂರು ಗುಣಗಳಿಂದ ಕೂಡಿರುತ್ತದೆ—1) ಅದು ಉಪಮಾದಿ ಅಲಂಕಾರಗಳಿಂದ ಕೂಡಿರುತ್ತದೆ, 2) ಅದು ಒಳ್ಳೆಯ ಅರ್ಥಗಳಿಂದ ಕೂಡಿರುತ್ತದೆ ಮತ್ತು 3) ಅದು ಸುಲಲಿತವಾದ ಪದಗಳಿಂದ ಕೂಡಿರುತ್ತದೆ.2

ಮಾಘನಲ್ಲಿ ಈ ಮೂರೂ ಗುಣಗಳು ಎಷ್ಟರ ಮಟ್ಟಿಗೆ ಮೇಳೈಸಿವೆಯೆಂಬುದನ್ನು ಪರೀಕ್ಷಿಸೋಣ.

1) ಅಲಂಕಾರಗಳು :

ಮಾಘನ ಶೈಲಿ ಬಹುವಾಗಿ ಅಲಂಕಾರ ಪ್ರಾಯವಾದುದು. ಅವನು ಅಲಂಕಾರಗಳ ಪ್ರಯೋಗದಲ್ಲಿ ಕಾಳಿದಾಸ ಮತ್ತು ಭಾರವಿಯರನ್ನು ಮೀರಿಸಿದ್ದಾನೆಂಬುದರಲ್ಲಿ ಸ್ವಲ್ಪವೂ ಸಂಶಯವಿಲ್ಲ.3 ಮಾಘನು ಹೆಚ್ಚಾಗಿ ಉಪಯೋಗಿಸಿರುವ ಅಲಂಕಾರಗಳೆಂದರೆ

ಉಪಮಾ, ಉತ್ಪ್ರೇಕ್ಷಾ, ಅತಿಶಯೋಕ್ತಿ, ಅರ್ಥಾಂತರನ್ಯಾಸ, ರೂಪಕ, ಶ್ಲೇಷ, ವಿರೋಧಾಭಾಸ ಸ್ವಭಾವೋಕ್ತಿ ಮತ್ತು ಕಾವ್ಯಲಿಂಗ.

ಉಪಮಾ

'ಉಪಮಾ ಕಾಳಿದಾಸಸ್ಯ' ಶ್ಲೋಕವು ತಿಳಿಸುವಂತೆ ಮಾಘನ ಕೆಲವು ಉಪಮೆಗಳು ಕಾಳಿದಾಸನ ಉಪಮೆಗಳಷ್ಟೇ ಸುಂದರವಾಗಿವೆ.

ಪತತ್ಪತಂಗ ಪ್ರತಿಮಸ್ತಪೋನಿಧಿಃ ಪುರೋಽಸ್ಯಯಾವನ್ನ ಭುವಿ ವ್ಯಲೀಯತ ।
ಗಿರೇಸ್ತಡಿತ್ವಾನಿವ ತಾವದುಚ್ಚಕೈರ್ಜವೇನ ಪೀಠಾದುದತಿಷ್ಠದಚ್ಯುತಃ ॥
—ಶಿಶು. 1.12

ದೇವತೆಗಳ ಸಂದೇಶವನ್ನು ಹೊತ್ತ ನಾರದನು ವಸುದೇವನ ಮನೆಯಲ್ಲಿದ್ದ ಶ್ರೀಕೃಷ್ಣನನ್ನು ನೋಡಲು ಅಂತರಿಕ್ಷದಿಂದ ಇಳಿದು ಬರುತ್ತಿದ್ದಾಗಿನ ವರ್ಣನೆಯಿದು— "ಅಂತರಿಕ್ಷದಿಂದ ಭೂಮಿಗೆ ಇಳಿದು ಬರುತ್ತಿರುವ ಮಹಾತೇಜಸ್ವಿಯಾದ ನಾರದನು ಸಾಕ್ಷಾತ್ ಸೂರ್ಯದೇವನೇ ಅಂತರಿಕ್ಷದಿಂದ ಭೂಮಿಗೆ ಬೀಳುತ್ತಿರುವಂತೆ ಕಾಣುತ್ತಿದ್ದನು. ಅವನು ಭೂಮಿಗೆ ಕಾಲಿಡುತ್ತಿರುವಂತೆಯೇ ಕೃಷ್ಣನು ಗಿರಿಯತಟದಿಂದ ಮೇಲೆದ್ದು ಬರುವ ಮೇಘದಂತೆ ತನ್ನ ಆಸನದಿಂದ ಧಿಗ್ಗನೆ ಮೇಲೆದ್ದನು."

ಇದರಲ್ಲಿ ಎರಡು ಸುಂದರವಾದ ಉಪಮೆಗಳಿವೆ. ಭೂಮಿಗೆ ಇಳಿದು ಬರುತ್ತಿರುವ ಮಹಾತೇಜಸ್ವಿಯಾದ ನಾರದನನ್ನು ಬೀಳುತ್ತಿರುವ ಸೂರ್ಯನಿಗೂ ಮತ್ತು ಮೇಘಶ್ಯಾಮನಾದ ಕೃಷ್ಣನು ಉನ್ನತವಾದ ತನ್ನ ಆಸನದಿಂದ ಮೇಲೇಳುವುದನ್ನು ಶಿಖರದ ಮೇಲೆ ಕಾಣಿಸಿಕೊಳ್ಳುವ ಮೇಘಕ್ಕೂ ಹೋಲಿಸಲಾಗಿದೆ. 'ಪತತ್ಪತಂಗ'ದ ಕಲ್ಪನೆಯಂತೂ ಬಹಳ ಮನೋಹರವಾಗಿದೆ.4

ತ್ವಯಿ ಭೌಮಂಗತೇ ಜೇತುಮರೌತ್ಸೀತ್ ಸಪುರೀಮಿಮಾಮ್ ।
ಪ್ರೋಕ್ಷಿತಾರ್ಯಮಣಂ ಮೇರೋರಂಧಕಾರ ಸ್ತಟೀಮಿವ ॥
—ಶಿಶು. 2.39

"ನೀನು ನರಕಾಸುರನನ್ನು ಸಂಹರಿಸಲು ಹೋಗಿದ್ದಾಗ ಆ ಶಿಶುಪಾಲನು ದ್ವಾರಕೆಯನ್ನು, ಸೂರ್ಯನು ಮರೆಯಾದ ಮೇಲೆ ಮೇರು ಪರ್ವತವನ್ನು ಕತ್ತಲೆಯು ಮುತ್ತುವಂತೆ ಮುತ್ತಿದನು."

ಸೂರ್ಯನಿಲ್ಲದಾಗ ಕತ್ತಲೆಯು ಪ್ರತಾಪ ತೋರುವಂತೆ ಶ್ರೀಕೃಷ್ಣನಿಲ್ಲದಾಗ ಶಿಶುಪಾಲನ ಪ್ರತಾಪ. ಕತ್ತಲೆಯು ಸೂರ್ಯನ ಮುಂದೆ ಹೇಗೆ ನಿಲ್ಲಲಾರದೋ ಅಂತೆಯೇ ಶಿಶುಪಾಲನು ಶ್ರೀಕೃಷ್ಣನ ಸಮ್ಮುಖದಲ್ಲಿ ನಿಲ್ಲಲಾರ. ಇಲ್ಲಿ ದ್ವಾರಕೆಯನ್ನು ಮೇರುವಿಗೂ ಕೃಷ್ಣನನ್ನು ಸೂರ್ಯನಿಗೂ ಮತ್ತು ಶಿಶುಪಾಲನನ್ನು ಕತ್ತಲೆಗೂ ಹೋಲಿಸಿರುವುದು ಬಹಳ ಉಚಿತವೂ ಮನೋಹರವೂ ಆಗಿದೆ.

ತೀರ್ತ್ವಾ ಜವೇನೈವ ನಿತಾಂತದುಸ್ತರಾಂ ನದೀಂ ಪ್ರತಿಜ್ಞಾಮಿವ ತಾಂ ಗರೀಯಸೀಂ ।
ಶೃಂಗೈರಪಸ್ಕೀರ್ಣ ಮಹತ್ತಟೀಭುವಾಂ ಅಶೋಭ ತೋಚ್ಚೈರ್ನದಿತಂ ಕಕುದ್ಮತಾಂ ॥

—ಶಿಶು. 12.74

ಶ್ರೀಕೃಷ್ಣನು ಪರಿವಾರ ಮತ್ತು ಸೇನಾ ಸಮೇತನಾಗಿ ಯಮುನಾ ನದಿಯನ್ನು ದಾಟಿ ಇಂದ್ರಪ್ರಸ್ಥದ ಕಡೆಗೆ ಬರುವುದಾಗಿನ ಮಾತಿದು. ಅವನೊಡನಿದ್ದ ಗಜ, ಅಶ್ವ, ವೃಷಭ ಮುಂತಾದ ಪ್ರಾಣಿಗಳೂ ಯಮುನಾ ನದಿಯನ್ನು ಈಜಿ ದಾಟುತ್ತವೆ: ಎತ್ತುಗಳು ನದಿಯನ್ನು ದಾಟುವುದನ್ನು ಕವಿ ಈ ರೀತಿಯಾಗಿ ವರ್ಣಿಸುತ್ತಾನೆ— "ಅತ್ಯಂತ ಕಠಿಣವಾದ ಪ್ರತಿಜ್ಞೆಯನ್ನು ಮಾಡಿ ಮುಗಿಸಿದವರಂತೆ ದುಸ್ತರವಾದ ಯಮುನಾ ನದಿಯನ್ನು ದಾಟಿದ ಎತ್ತುಗಳು ಕೊಂಬುಗಳಿಂದ ಉನ್ನತವಾದ ದಡವನ್ನು ಕೆದಕುತ್ತಾ ಉತ್ಸಾಹದಿಂದ ಘೀಳಿಡುತ್ತಿದ್ದುದು ಬಹಳ ಮನೋಹರ ವಾಗಿದ್ದಿತು."

ದುಸ್ತರವಾದ ಪ್ರತಿಜ್ಞೆಯನ್ನು ಮಾಡಿ ಮುಗಿಸಿದವರು ಸಂತೋಷಾಧಿಕ್ಯದಿಂದ ಕೇಕೆ ಹಾಕುತ್ತಾ ಕುಣಿದಾಡುವಂತೆ ವಿಶಾಲವಾದ ಯಮುನಾ ನದಿಯನ್ನು ದಾಟಿದ ಎತ್ತುಗಳು ವಿಜಯೋತ್ಸಾಹದಿಂದ ಘೀಳಿಡುತ್ತಾ ತಮ್ಮ ಕೊಂಬುಗಳಿಂದ ದಡವನ್ನು ಕೆದಕುವುದು ಸಹಜ ಸೌಂದರ್ಯದಿಂದ ಕೂಡಿದೆ. ಇಲ್ಲಿ ಸುಂದರವಾದ ಉಪಮೆ ಮತ್ತು ಸ್ವಭಾವೋಕ್ತಿ ಒಂದರೊಡನೊಂದು ಸಂಕೀರ್ಣಗೊಂಡಿವೆ.

ಸಂಭೃತೋಪಕರಣೇನ ನಿರ್ಮಲಾಂ ಕರ್ತುಮಿಷ್ಟಿಮಭಿವಾಂಛತಾ ಮಯಾ ।
ತ್ವಂ ಸಮೀರಣ ಇವ ಪ್ರತೀಕ್ಷಿತಃ ಕರ್ಷಕೇಣ ವಲಜಾನ್ಪುಪೂಷತಾ ॥

—ಶಿಶು. 14.7

"ರಾಜಸೂಯ ಯಾಗವನ್ನು ಮಾಡಲು ಸಕಲ ಸಲಕರಣೆಗಳೊಡನೆ ಸಿದ್ಧನಾಗಿರುವ ನಾನು ಧಾನ್ಯವನ್ನು ತೂರಿ ಶುದ್ಧಗೊಳಿಸಲು ಸಿದ್ಧನಾಗಿರುವ ಕೃಷಿಕನು ಗಾಳಿಯನ್ನು ಎದುರು ನೋಡುವಂತೆ ನಿನ್ನ ಆಗಮನವನ್ನೇ ಎದುರು ನೋಡುತ್ತಿರುವೆನು."

ರಾಜಸೂಯಯಾಗದಲ್ಲಿ ಭಾಗವಹಿಸಲು ಇಂದ್ರಪ್ರಸ್ಥಕ್ಕೆ ಬಂದ ಶ್ರೀಕೃಷ್ಣನನ್ನು ಎದುರುಗೊಳ್ಳುವಾಗ ಧರ್ಮರಾಜನು ಹೇಳುವ ಮಾತುಗಳಿವು. ಏನೆಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದ್ದರೂ ಗಾಳಿಯು ಇಲ್ಲದಿದ್ದರೆ ಹೇಗೆ ಕೃಷಿಕನ ಶ್ರಮವೆಲ್ಲ ವ್ಯರ್ಥವಾಗುತ್ತದೆಯೋ ಅದರಂತೆ ಶ್ರೀಕೃಷ್ಣನಿಲ್ಲದಿದ್ದಲ್ಲಿ ಧರ್ಮಜನ ಎಲ್ಲ ಯಾಗ ಸಿದ್ಧತೆಗಳೂ ವ್ಯರ್ಥ. ಧಾನ್ಯವನ್ನು ತೂರಲು ಹೊರಟ ರೈತನಿಗೆ ಗಾಳಿ ಹೇಗೆ ಸರ್ವ ಪ್ರಧಾನವೋ ಅದರಂತೆ ರಾಜಸೂಯವನ್ನು ಮಾಡಲು ಹೊರಟ ಧರ್ಮರಾಜನಿಗೆ ಶ್ರೀಕೃಷ್ಣ ಸರ್ವಪ್ರಧಾನ. ಧರ್ಮಜನ ಯಾಗ ಸಂಪೂರ್ಣವಾಗಿ ಶ್ರೀ ಕೃಷ್ಣನನ್ನೇ ಆಧರಿಸಿದೆ ಎಂಬುದನ್ನು ಮಾಘನು ಒಂದು ಸುಂದರವಾದ ಉಪಮೆಯ ಮೂಲಕ ಬಹಳ ಅರ್ಥವತ್ತಾಗಿ ಹೇಳಿದ್ದಾನೆ. ಮಾಘನು ಇಲ್ಲಿ ಜನ ಸಾಮಾನ್ಯರ ಜೀವನಕ್ಕೆ ಸಂಬಂಧಿಸಿದ ವಿಷಯವನ್ನು ಉಪಮಾನವನ್ನಾಗಿ ಆರಿಸಿಕೊಂಡಿರುವುದು ಇದರ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸಿದೆ.

> ಪುರಪಿವ ಶಾರ್ಙ್ಗಿಣಿ ಸವೈರಮಥ ಪುನರಮುಂ ತದರ್ಚಯಾ ।
> ಮನ್ಯುರಭಜದವಗಾಢತರಃ ಸಮದೋಷಕಾಲ ಇವ ದೇಹಿನಂ ಜ್ವರಃ ॥
>
> —ಶಿಶು. 15.2

"ಮುಂಚೆಯೆ ಶ್ರೀಕೃಷ್ಣನ ಮೇಲೆ ದ್ವೇಷ ಕಾರುತ್ತಿದ್ದ ಶಿಶುಪಾಲನನ್ನು ಕೃಷ್ಣನಿಗೆ ಸಂದ ಅಗ್ರಪೂಜೆಯು ಮತ್ತಷ್ಟು ಕೆರಳಿಸಿತು. ಇದು ಹೇಗೆಂದರೆ ಮುಂಚೆಯೇ ದುರ್ವಿಧಿಪೀಡಿತನೂ ಅಪಥ್ಯಸೇವಿಯೂ ಆದವನನ್ನು ಜ್ವರವು ಆಕ್ರಮಿಸುವಂತೆ."

ಇಲ್ಲಿ ಶ್ರೀಕೃಷ್ಣದ್ವೇಷಿಯಾದ ಶಿಶುಪಾಲನ ಕೋಪವನ್ನು ದುರ್ವಿಧಿಪೀಡಿತನೂ ಅಪಥ್ಯಸೇವಿಯೂ ಆದವನ ಜ್ವರಕ್ಕೆ ಹೋಲಿಸಿರುವುದು ಬಹಳ ಉಚಿತವಾಗಿದೆ. ಇಂತಹ ಜ್ವರಪೀಡಿತನು ನಾಶ ಹೊಂದುವಂತೆ ಶಿಶುಪಾಲನೂ ಶೀಘ್ರದಲ್ಲೇ ನಾಶ ಹೊಂದುತ್ತಾನೆನ್ನುವುದನ್ನು ಮಾಘನು ಬಹಳ ಚೆನ್ನಾಗಿ ಧ್ವನಿಸಿದ್ದಾನೆ.

ಅತಿಶಯೋಕ್ತಿ :

> ಕಶ್ಚಿನ್ಮೂರ್ಛಾಮೇತ್ಯ ಗಾಢ ಪ್ರಹಾರಃ ಸಿಕ್ತಃ ಶಿತೈಃ ಶೀಕರೈರ್ವಾರಣಸ್ಯ ।
> ಉಚ್ಛ್ವಾಸ ಪ್ರಸ್ಥಿತಾ ತಂ ಜಿಘೃಕ್ಷುಃ ವ್ಯರ್ಥಾಕೂತಾನಾಕನಾರೀ ಮುಮೂರ್ಚ್ಛ ॥
>
> —ಶಿಶು. 18.58

"ಗಾಢ ಪ್ರಹಾರದಿಂದ ಮೂರ್ಛೆಹೋದ ವೀರನೊಬ್ಬನು ಆನೆಯೊಂದು ಸಿಂಪಡಿಸಿದ ನೀರಿನ ಹನಿಗಳ ಶೈತ್ಯೋಪಚಾರದಿಂದ ಎಚ್ಚೆತ್ತನು. ಆದರೆ ಅವನನ್ನು

ಪಡೆಯಲು ಕಾತರಳಾಗಿದ್ದ ಸುರಸುಂದರಿಯೊಬ್ಬಳು ಇದನ್ನು ನೋಡಿ ವಿಫಲ ಮನೋರಥಳಾಗಿ ಮೂರ್ಛೆ ಹೋದಳು."

ಯುದ್ಧವರ್ಣನೆಯಲ್ಲಿ ಬರುವ ಶ್ಲೋಕವಿದು. ರಣಭೂಮಿಯಲ್ಲಿ ವೀರ ಮರಣವನ್ನಪ್ಪುವ ಯೋಧನನ್ನು ಸ್ವರ್ಗಲೋಕದಲ್ಲಿ ಸುರಸುಂದರಿಯರು ಓಲೈಸುತ್ತಾರೆಂಬುದು ಕವಿಗಳ ಕಲ್ಪನೆ. ಇಲ್ಲಿ ನಾಕನಾರಿಯು ವೀರನು ತನಗೆ ದೊರೆಯದೇ ಹೋದನಲ್ಲಾ ಎಂಬ ದುಃಖಾಧಿಕ್ಯದಿಂದ ಮೂರ್ಛೆ ಹೋದಿದಳೆಂದು, ಅವಳು ಮೂರ್ಛೆ ಹೊಂದದೇ ಇದ್ದರೂ, ಚಿತ್ರಿಸಿರುವುದರಿಂದ ಇದು ಅಸಂಬಂಧಾತಿಶಯೋಕ್ತಿಯ ಪ್ರಸಂಗವಾಗಿದೆ.

ನಿಲಯಃ ಶ್ರಿಯಃ ಸತತಮೇತದಿತಿ ಪ್ರಥಿತಂ ಯದೇವ ಜಲಜನ್ಮತಯಾ ।
ದಿವಸಾತ್ಯಯಾದಪಿ ಮುಕ್ತಮಹೋ ಚಪಲಾಜನಂ ಪ್ರತಿ ನ ಚೋದ್ಯಮದಃ ॥
—ಶಿಶು. 9.16

ಸೂರ್ಯಾಸ್ತದ ವರ್ಣನೆಯಲ್ಲಿ ಬರುವ ಶ್ಲೋಕವಿದು. "ಸೂರ್ಯಾಸ್ತದ ಸಮಯದಲ್ಲಿ ಲಕ್ಷ್ಮಿಯು ಕಮಲಗಳನ್ನು 'ತ್ಯಜಿಸಿ' ಕಮಲಗಳು ಲಕ್ಷ್ಮಿಯು ಶಾಶ್ವತವಾದ ವಾಸಸ್ಥಾನ"5 ಎಂಬ ಮಾತನ್ನು ಸುಳ್ಳಾಗಿಸಿದಳು. ಏನಾಶ್ಚರ್ಯ ! ಅಥವಾ ಚಂಚಲೆಯರಾದ ಸ್ತ್ರೀಯರ ವಿಷಯದಲ್ಲಿ ಇದೇನೂ ಆಶ್ಚರ್ಯದ ಸಂಗತಿಯಲ್ಲ.

ಇದೇನಿದು ! ದೇವತೆಗಳೂ ಉಪಕಾರ ಮಾಡಿದವರಿಗೆ ಕೃತಘ್ನರಾಗುತ್ತಾರಲ್ಲ ! ಲಕ್ಷ್ಮಿಯು ದೇವತೆಯಾದರೂ ಸ್ತ್ರೀ ತಾನೆ. ಸ್ತ್ರೀಯರು ಸ್ವಭಾವದಿಂದಲೇ ಚಂಚಲೆಯರು. ಸ್ತ್ರೀ ಸಹಜವಾದ ಈ ಚಂಚಲತೆಯನ್ನು ಲಕ್ಷ್ಮಿಯಾದರೂ ಹೇಗೆ ಬಿಟ್ಟಾಳು ? ಸಾಯಂಕಾಲದಲ್ಲಿ ಕಮಲಗಳು ಬಾಡಿದವು ಎಂಬ ಸಾಮಾನ್ಯ ಸಂಗತಿಯನ್ನು ಕವಿಯು ಈ ರೀತಿಯಾಗಿ ಹೇಳಿದ್ದಾನೆ. ಲಕ್ಷ್ಮಿಯು ಸಂಧ್ಯಾಕಾಲದಲ್ಲಿ ಕಮಲಗಳನ್ನು ತ್ಯಜಿಸಿದಳು ಎಂದು ಲಕ್ಷ್ಮಿಗೂ ಕಮಲಗಳಿಗೂ ಸಂಬಧವಿಲ್ಲದೇ ಇದ್ದರೂ ಸಂಬಂಧ ಕಲ್ಪಿಸಿರುವುದರಿಂದ ಅತಿಶಯೋಕ್ತಿಯೂ, ಚಪಲಾ (ಚಂಚಲೆಯಾದ ಸ್ತ್ರೀ ಮತ್ತು ಲಕ್ಷ್ಮಿ)6 ಎಂಬಲ್ಲಿ ಶ್ಲೇಷೆಯೂ ಮತ್ತು 'ಚಪಲಾಜನಂ ಪ್ರತಿ ನ ಚೋದ್ಯಮದಃ ಎಂಬಲ್ಲಿ ಅರ್ಥಾಂತರನ್ಯಾಸವೂ ಸುಂದರವಾಗಿ ಮೇಳೈಸಿವೆ.

ಉತ್ಪ್ರೇಕ್ಷಾ :

ಉಪಮಾಲಂಕಾರವನ್ನು ಬಿಟ್ಟರೆ ಸಾಮಾನ್ಯವಾಗಿ ಕವಿಗಳು ಹೆಚ್ಚಾಗಿ ಉಪಯೋಗಿಸುವ ಅಲಂಕಾರವೆಂದರೆ ಉತ್ಪ್ರೇಕ್ಷೆ. ಮಾಘನೂ ಈ ಮಾತಿಗೆ ಹೊರತಲ್ಲ. ವರ್ಣನಾ ಪ್ರಧಾನವಾದ ಶಿಶುಪಾಲವಧದಲ್ಲಿ ಒಂದಕ್ಕಿಂತ ಒಂದು ಚೆನ್ನಾಗಿರುವ

ಹತ್ತಾರು, ನೂರಾರು ಉತ್ಪ್ರೇಕ್ಷಾ ಶ್ಲೋಕಗಳು ದೊರೆಯುತ್ತವೆ. ದ್ವಾರಕಾನಗರದ ವರ್ಣನೆಯ ಸಂದರ್ಭದಲ್ಲಿ ಬರುವ ಕೆಳಗಿನ ಶ್ಲೋಕಗಳನ್ನು ನೋಡಿ—

ಮಧ್ಯೇ ಸಮುದ್ರಂ ಕಕುಭಃ ಪಿಶಂಗೀರ್ಯಾ ಕುರ್ವತೀ ಕಾಂಚನವಪ್ರಭಾಸಾ ।
ತುರಂಗಕಾನ್ತಾಮುಖಹವ್ಯವಾಹಜ್ವಾಲೇವ ಭಿತ್ವಾ ಜಲಮುಲ್ಲಲಾಸ ॥
—ಶಿಶು. 3.33

"ಸಮುದ್ರದ ಮಧ್ಯೆ ತನ್ನ ಸುವರ್ಣ ಪ್ರಾಕಾರಗಳ ಕಾಂತಿಯಿಂದ ದಿಕ್ಕುಗಳನ್ನೆಲ್ಲ ಹೊಂಬಣ್ಣಗೊಳಿಸುತ್ತಾ ಶೋಭಿಸುತ್ತಿರುವ ದ್ವಾರಕೆಯು ಸಮುದ್ರದ ಮಧ್ಯದಿಂಡ ಮೇಲೆದ್ದು ಬಂದಿರುವ ವಡವಾಗ್ನಿಯೋ ಎಂಬಂತೆ ಬೆಳಗಿತು."

ಸುವರ್ಣ ಪ್ರಾಕಾರಗಳಿಂದ ಉಜ್ಜ್ವಲವಾದ ದ್ವಾರಕೆಯನ್ನು ಸಮುದ್ರದ ಮಧ್ಯದಿಂದ ವಡವಾಗ್ನಿಯು ಮೇಲೇಳುತ್ತಿದೆಯೋ ಎಂಬಂತೆ ಕಾಣುತ್ತಿತ್ತು ಎಂದು ಕವಿಯು ಬಹಳ ರಮಣೀಯವಾಗಿ ಉತ್ಪ್ರೇಕ್ಷಿಸಿದ್ದಾನೆ.7

ತ್ವಷ್ಟು ; ಸದಾಭ್ಯಾಸಗೃಹೀತ ಶಿಲ್ಪ ವಿಜ್ಞಾನ ಸಂಪತ್ಪ್ರಸರಸ್ಯ ಸೀಮಾ ।
ಅದೃಶ್ಯತಾದರ್ಶತಲಾಮಲೇಷು ಛಾಯೇವ ಯಾ ಸ್ವರ್ಜಲಧೇರ್ಜಲೇಷು॥
–ಶಿಶು. 3.35

"ವಿಶ್ವಕರ್ಮನ ನಿರಂತರವಾದ ಅಭ್ಯಾಸದಿಂದ ಪ್ರಾಪ್ತವಾದ ಶಿಲ್ಪವಿಜ್ಞಾನದ ಸೀಮಾ ರೂಪವಾದ ದ್ವಾರಕೆಯು ದರ್ಪಣತಲದಂತೆ ನಿರ್ಮಲವಾದ ಸಮುದ್ರದಲ್ಲಿ ಪ್ರತಿಬಿಂಬಿತವಾದ ಸ್ವರ್ಗವೋ ಎಂಬಂತೆ ಕಾಣುತ್ತಿತ್ತು."

ದ್ವಾರಕೆಯು ಸಮುದ್ರದ ನಡುವೆ ಇರುವ ಒಂದು ನಗರಿಯಲ್ಲ, ಅದು ಸಮುದ್ರದಲ್ಲಿ ಸ್ವರ್ಗದ ಪ್ರತಿಫಲನ ಮಾತ್ರ ಎಂದು ಕವಿಯು ಉತ್ಪ್ರೇಕ್ಷಿಸಿರುವುದು ಬಹಳ ಸುಂದರವಾಗಿದೆ.

ಇದೇ ಸಂದರ್ಭದಲ್ಲಿ ಬರುವ ದ್ವಾರಕಾನಗರದ ಸುಂದರಿಯರ ಒಂದು ವರ್ಣನೆಯ ವೈಖರಿಯನ್ನು ನೋಡಿ–

ಸ್ಫುರತ್ತುಷಾರಾಂಶುಮರೀಚಿ ಜಾಲೈ : ವಿನಿಹ್ನುತಾಃ ಸ್ಫಾಟಿಕಸೌಧ ಪಂಕ್ತೀಃ ।
ಆರುಹ್ಯನಾರ್ಯಃ ಕ್ಷಣದಾಸು ಯತ್ರನಭೋಗತಾ ದೇವ್ಯ ಇವ ವ್ಯರಾಜನ್ ॥
–ಶಿಶು. 3. 43

"ಸ್ಫಟಿಕ ಶಿಲೆಗಳಿಂದ ರಚಿತವಾದ ದ್ವಾರಕೆಯ ಸೌಧಗಳ ಉಪ್ಪರಿಗೆಗಳ ಮೇಲೆ ನಿಂತ ರಮಣಿಯರು ಬೆಳದಿಂಗಳು ಚೆಲ್ಲಿದ ರಾತ್ರಿಗಳಲ್ಲಿ ಅಂತರಿಕ್ಷದ ದೇವವನಿತೆಯ ರಂತೆ ಕಾಣುತ್ತಿದ್ದರು."

ಬೆಳದಿಂಗಳು ಚೆಲ್ಲಿದ ರಾತ್ರಿಗಳಲ್ಲಿ ಬಿಳಿ ಸ್ಫಟಿಕದಿಂದ ನಿರ್ಮಿತವಾದ ಸೌಧಗಳು ಕಣ್ಣಿಗೆ ಕಾಣಿಸದೇ (ಎರಡೂ ಒಂದೇ ರೀತಿ ಬೆಳ್ಳಗಿರುವುದರಿಂದ) ಬರೀ ಸುಂದರಿಯರು ಮಾತ್ರ ಕಾಣುತ್ತಿದ್ದುದರಿಂದ ಅವರು ಅಂತರಿಕ್ಷದಲ್ಲಿ ಸಂಚರಿಸುವ ದೇವಾಂಗನೆಯರಂತೆ ಕಾಣುತ್ತಿದ್ದರೆಂಬ ಮಾಘನ ಕಲ್ಪನೆ ನಿಜಕ್ಕೂ ರೋಚಕವಾಗಿದೆ. ಇಲ್ಲಿರುವ ಉತ್ಪ್ರೇಕ್ಷೆ ಯೊಡನೆ 'ಸ್ಫಟಿಕ ಸೌಧಗಳೂ ಬೆಳದಿಂಗಳೂ ಏಕರೂಪತೆಯನ್ನು ಹೊಂದಿದ್ದವು' ಎಂದು ಹೇಳಿರುವುದರಿಂದ ಉಂಟಾಗಿರುವ ಸಾಮಾನ್ಯಾಲಂಕಾರವನ್ನೂ[8] ಗಮನಿಸ ಬಹುದಾಗಿದೆ.

ಶ್ರೀಕೃಷ್ಣನ ಸೇನಾನಿವೇಶ (Camp)ವನ್ನು ವರ್ಣಿಸುವಾಗ ಬರುವ ಒಂದು ಶ್ಲೋಕದ ಉತ್ಪ್ರೇಕ್ಷಾಲಂಕಾರವು ಬಹಳ ಸೊಗಸಾಗಿದೆ.

ತ್ರಾಸಾಕುಲಃ ಪರಿಪತನ್ಪರಿತೋನಿಕೇತಾನ್
ಪುಂಭಿರ್ನಕೈಶ್ಚಿದಪಿ ಧನ್ವಿಭಿರನ್ವಬಂಧಿ ।
ತಸ್ಥೌ ತಥಾಪಿ ನಮೃಗಃ ಕ್ವಚಿದಂಗನಾನಾಮ್
ಆಕರ್ಣ ಪೂರ್ಣನಯನೇಷು ಹತೇಕ್ಷಣಶ್ರೀಃ॥[9] ಶಿಶು. 5.29

"ಭಯದಿಂದ ಸೇನಾನಿವೇಶದ ಸುತ್ತಲೂ ಓಡುತ್ತಿರುವ ಆರಳೆಯನ್ನು ಯಾವೊಬ್ಬ ಯೋಧನೂ ಧನುಸ್ಸನ್ನು ಹಿಡಿದು ಬೆಂಬತ್ತಲಿಲ್ಲ. ಆದರೂ ಆ ಆರಳೆಯು ನಿಲ್ಲಲೇ ಇಲ್ಲ. ಏಕೆಂದರೆ ಅದರ ಕಣ್ಣುಗಳು ಅಲ್ಲಿದ್ದ ಸುಂದರಿಯರ ಕರ್ಣಾಂತವಾದ ನಯನೇಷುಗಳಿಂದ ವಿದ್ಧವಾಗಿದ್ದವು."

ಸೇನಾಶಿಬಿರದ ಜನಗಳ ಗಲಾಟೆಯಿಂದ ಭಯಗೊಂಡು ಓಡಿದ ಜಿಂಕೆಯನ್ನು ಕವಿ ಈ ರೀತಿಯಾಗಿ ಸುಂದರಿಯರ ಕಣ್ಣುಗಳ ಸೌಂದರ್ಯದಿಂದ ತನ್ನ ಕಣ್ಣುಗಳು ಸೋಲಿಸಲ್ಪ ಟ್ಟುದರಿಂದ ಭಯಗೊಂಡು ಓಡುತ್ತಿದೆ ಎಂದು ಉತ್ಪ್ರೇಕ್ಷಿಸಿ ಸುಂದರಿಯರ ಕಣ್ಣುಗಳ ಅಲೌಕಿಕ ಸೌಂದರ್ಯವನ್ನು ಸೂಚಿಸಿದ್ದಾನೆ.

ಅರ್ಥಾಂತರ ನ್ಯಾಸ

ಪ್ರಾಯಃ ಉಪಮೆಯನ್ನು ಬಿಟ್ಟರೆ ಮಾಘನು ಉಪಯೋಗಿಸಿರುವ ಅಲಂಕಾರ ಗಳಲ್ಲಿ ಹೆಚ್ಚು ಸೌಂದರ್ಯ ಪ್ಲಾವಿತವಾಗಿರುವುದು ಅವನ ಅರ್ಥಾಂತರನ್ಯಾಸಗಳೇ. ಮಾಘನು ಅರ್ಥಾಂತರನ್ಯಾಸದ ಬಳಕೆಯಲ್ಲಿ ಮಹಾನಿಪುಣನೆಂಬುದರಲ್ಲಿ ಸ್ವಲ್ಪವೂ

ಸಂಶಯವಿಲ್ಲ. ಉಪಮೆಯಂತೆಯೇ ಈ ಒಂದು ಅಲಂಕಾರದ ವಿಷಯದಲ್ಲಿಯೂ ಮಾಘನನ್ನು ಕಾಳಿದಾಸನಿಗೆ ಧಾರಾಳವಾಗಿ ಹೋಲಿಸಬಹುದು.

ಸಾಮಾನ್ಯವಾಗಿ ಅರ್ಥಾಂತರನ್ಯಾಸವು ಒಂದು ಸೂಕ್ತಿಯನ್ನೊ, ಸಂದೇಶವನ್ನೊ ಒಳಗೊಂಡಿರುತ್ತದೆ. ಅದರಂತೆ ಮಾಘನ ಅರ್ಥಾಂತರನ್ಯಾಸಗಳೂ ಒಳ್ಳೊಳ್ಳೆಯ ಸೂಕ್ತಿಗಳಿಂದ ಕೂಡಿವೆ.

ಪ್ರತಿಕೂಲಮುಪಗತೇ ಹಿ ವಿಧೌ ವಿಫಲತ್ವಮೇತಿ ಬಹುಸಾಧನತಾ ।
ಅವಲಂಬನಾಯ ದಿನಭರ್ತುರಭೂನ್ನ ಪತಿಷ್ಯತಃ ಕರಸಹಸ್ರಮಪಿ ॥

–ಶಿಶು 9.6

"ವಿಧಿಯು ವಿಪರೀತವಾದರೆ ಎಷ್ಟು ಸಾಧನಗಳಿದ್ದರೂ ಪ್ರಯೋಜನ ವಾಗುವುದಿಲ್ಲ. ಬೀಳುತ್ತಿರುವ (ಮುಳುಗುತ್ತಿರುವ) ಸೂರ್ಯನಿಗೆ ಸಾವಿರ ಕೈ (ಕಿರಣ) ಗಳಿದ್ದರೂ ಅವು ಆಧಾರವಾಗಲಿಲ್ಲ."

ಬೀಳುವವರಿಗೆ ಒಂದೆರಡು ಕೈಗಳೇ ಆಧಾರವಾಗಬಲ್ಲವು. ಆದರೆ ಸೂರ್ಯನಿಗೆ ಸಾವಿರ ಕರಗಳಿದ್ದರೂ ಅವನು ಮುಳುಗುವುದು ತಪ್ಪಲಿಲ್ಲ. ಎಷ್ಟು ಸಾಧನಗಳಿದ್ದರೇನು? ವಿಧಿಯ ಮುಂದೆ ಯಾರದ್ದೂ ನಡೆಯುವುದಿಲ್ಲ.[10]

ರಜನೀಮವಾಪ್ಯ ರುಚಿಮಾಪ ಶಶೀ ಸಪದಿ ವ್ಯಭೂಷಯದಸಾವಪಿ ತಾಂ ।
ಅವಿಲಂಬಿತ ಕ್ರಮಮಹೋ ಮಹತಾಮಿತರೇತ ರೋಪ ಕೃತಿಮಚ್ಚರಿತಂ ॥

–ಶಿಶಿ 9.33

"ರಾತ್ರಿಯನ್ನು ಪಡೆದ ಚಂದ್ರನು ಅದರಿಂದ ಶೋಭೆಯನ್ನು ಹೊಂದಿದನು. ಮತ್ತೆ ಚಂದ್ರಮನು ಪ್ರತಿಯಾಗಿ ರಾತ್ರಿಯಶೋಭೆಯನ್ನು ಹೆಚ್ಚಿಸಿದನು. ಮಹಾತ್ಮ ರಾದವರು ಸ್ವಲ್ಪವೂ ವಿಲಂಬವಿಲ್ಲದಂತೆ ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡುವ ಕ್ರಮ ಬಹಳ ಆಶ್ಚರ್ಯಕರವಾಗಿದೆ".

ಮಾಘನು ಈ ಶ್ಲೋಕದಲ್ಲಿ ಚಂದ್ರ ಮತ್ತು ರಾತ್ರಿಯ ಉದಾಹರಣೆಯಿಂದ ಮಹಾತ್ಮರ ಸ್ವಭಾವವನ್ನು ಬಹಳ ಚೆನ್ನಾಗಿ ವರ್ಣಿಸಿದ್ದಾನೆ. ಈ ಶ್ಲೋಕದಲ್ಲಿ ಅರ್ಥಾಂತರನ್ಯಾಸವಿಲ್ಲದೆ ಮತ್ತೊಂದು ಅಲಂಕಾರವನ್ನು ಗಮನಿಸಬೇಕು. ಚಂದ್ರಮ ಮತ್ತು ರಾತ್ರಿಗಳು ಅನ್ಯೋನ್ಯವಾಗಿ ಶೋಭೆಯನ್ನು ಹೆಚ್ಚಿಸಿದಂತೆ ವರ್ಣಿಸಿರುವುದರಿಂದ ಇಲ್ಲಿ ಅನ್ಯೋನ್ಯಾಲಂಕಾರವೂ[11] ಇದೆ.

ಕುಮುದವನಮಪಶ್ರಿ ಶ್ರೀಮದಂಭೋಜಖಂಡಮ್
ತ್ಯಜತಿ ಮುದಮುಲೂಕಃ ಪ್ರೀತಿಮಾಂಶ್ಚಕ್ರವಾಕಃ ।
ಉದಯಮಹಿಮರಶ್ಮಿರ್ಯಾತಿ ಶೀತಾಂಶುರಸ್ತಮ್
ಹತವಿಧಿವಿಲಸಿತಾನಾಂ ಹೀ ವಿಚಿತ್ರೋ ವಿಪಾಕಃ ॥ ಶಿಶು 11.64

"ಕನ್ನೈದಿಲೆಗಳು ಒಂದೆಡೆ ಕಾಂತಿಹೀನವಾಗಿ ಬಾಡುತ್ತಿದ್ದರೆ ಮತ್ತೊಂದೆಡೆ ಕಮಲಗಳು ಸೊಬಗಿನಿಂದ ಅರಳುತ್ತಿವೆ. ರಾತ್ರಿ ಕಳೆದು ಬೆಳಕು ಹರಿಯುತ್ತಿರುವುದರಿಂದ ಗೂಬೆಗಳು ಖಿನ್ನವಾಗಿದ್ದರೆ ಚಕ್ರವಾಕಗಳು ಸಮಾಗಮ ಸುಖವನ್ನು ನೆನಸಿಕೊಂಡು ಸಂತೋಷಪಡುತ್ತಿವೆ. ಸೂರ್ಯನು ಉದಯಿಸುತ್ತಿದ್ದರೆ ಚಂದ್ರನು ಮುಳುಗುತ್ತಿದ್ದಾನೆ. ಈ ದುಷ್ಟವಿಧಿಯ ರೀತಿ ನೀತಿಗಳು ಬಹಳ ವಿಚಿತ್ರವಾಗಿವೆ !"[12]

ಕುಮುದ-ಅಂಭೋಜ, ಉಲೂಕ-ಚಕ್ರವಾಕ ಮತ್ತು ಅಹಿಮರಶ್ಮಿ-ಶೀತಾಂಶು ಇವುಗಳ ಸಾಮ್ಯ ಮತ್ತು ವೈಷಮ್ಯಗಳ ಆಧಾರದಿಂದ 'ಹತವಿಧಿ ವಿಲಸಿತಾನಾಂ ಹೀ ವಿಚಿತ್ರೋ ವಿಪಾಕಃ' ಎಂದು ಮಾಘನು ಮಂಡಿಸಿರುವ ಅರ್ಥಾಂತರವು ಬಹಳ ಸುಂದರವೂ ಅರ್ಥಗರ್ಭಿತವೂ ಆಗಿದೆ. ವಿಧಿಯ ಲೀಲೆಗಳನ್ನು ಬಲ್ಲವರ್ಯಾರು ! ?

ರೂಪಕ :

ಧರ್ಮರಾಜನ ಆಹ್ವಾನವನ್ನು ಮನ್ನಿಸಿ ಅವನು ಮಾಡುವ ರಾಜಸೂಯ ಯಾಗಕ್ಕೆ ಹೋಗುವುದು ಸರಿಯೋ ಅಥವಾ ನಾರದ ಮಹರ್ಷಿಯ ಮೂಲಕ ಇಂದ್ರನು ಕಳುಹಿಸಿರುವ ಸಂದೇಶವನ್ನು ಆದರಿಸಿ ಲೋಕಕಂಟಕನಾದ ಶಿಶುಪಾಲನನ್ನು ಸಂಹರಿಸಲು ಅವನ ಮೇಲೆ ದಂಡೆತ್ತಿ ಹೋಗುವುದು ಸರಿಯೋ ಎಂದು ಚರ್ಚಿಸಲು ಸಭಾಗೃಹದಲ್ಲಿ ಮಂತ್ರಾಲೋಚನೆಯಲ್ಲಿ ತೊಡಗಿರುವ ಶ್ರೀ ಕೃಷ್ಣ, ಬಲರಾಮ ಮತ್ತು ಉದ್ಧವರನ್ನು ಕವಿಯು ಈ ರೀತಿ ವರ್ಣಿಸುತ್ತಾನೆ-

ಜಾಜ್ವಲ್ಯಮಾನಾ ಜಗತಃ ಶಾಂತಯೇ ಸಮುಪೇಯುಷೀ ।
ವ್ಯದ್ಯೋತಿಷ್ಟ ಸಭಾವೇದ್ಯಾಮಸೌ ನರಶಿಖಿತ್ರಯೀ ॥ -ಶಿಶು. 2.3

"ಜಗತ್ತಿನ ಶಾಂತಿಗಾಗಿ ಸಭೆಯೆಂಬ ವೇದಿಯಲ್ಲಿ ಸೇರಿರುವ ಮನುಷ್ಯರೂಪದ ಜಾಜ್ವಲ್ಯಮಾನವಾದ ಅಗ್ನಿತ್ರಯವು ಕಂಗೊಳಿಸಿತು."

ಜಗತ್ತಿನ ಶಾಂತಿಗಾಗಿ ಸಂಧುಕ್ಷಿಸಿದ ಆಹವನೀಯ, ದಕ್ಷಿಣ ಮತ್ತು ಗಾರ್ಹಪತ್ಯವೆಂಬ ಮೂರು ಅಗ್ನಿಗಳು ಯಜ್ಞವೇದಿಯಲ್ಲಿ ದೇದೀಪ್ಯಮಾನವಾಗಿ

ಶೋಭಿಸುವಂತೆ ಶ್ರೀಕೃಷ್ಣ, ಬಲರಾಮ ಮತ್ತು ಉದ್ಧವರು ಸಭಾಗೃಹದಲ್ಲಿ ಶೋಭಿಸಿದರು. ಇಲ್ಲಿ ಕವಿಯು ಶ್ರೀಕೃಷ್ಣ, ಬಲರಾಮ ಮತ್ತು ಉದ್ಧವರನ್ನು ಯಜ್ಞವೇದಿಯಲ್ಲಿ ಜಾಜ್ವಲಿಸುವ ಅಗ್ನಿತ್ರಯ ಎಂದು ಬಹಳ ಉಚಿತವಾಗಿ ರೂಪಿಸಿದ್ದಾನೆ. 'ಸಭಾವೇದಿ' (ಸಭೆಯೆಂಬ ಅಗ್ನಿಕುಂಡ) ಮತ್ತು 'ನರಶಿಖಿತ್ರಯೀ' (ಮನುಷ್ಯ ರೂಪದ ಅಗ್ನಿತ್ರಯ) ಎಂಬಲ್ಲಿ ಬಹಳ ಸುಂದರವಾದ ರೂಪಕವಿದೆ.

ಇದರಂತೆಯೇ ಧರ್ಮರಾಜನ ರಾಜಸೂಯ ಯಾಗದ ಸಂದರ್ಭದಲ್ಲಿಯೂ ಮಾಘನು ಒಂದು ಮನೋಹರವಾದ ರೂಪಕವನ್ನು ಕೊಡುತ್ತಾನೆ-

ಸಪ್ತತಂತುಮಧಿಗಂತುಮಿಚ್ಛತಃ ಕುರ್ವನುಗ್ರಹಮನುಜ್ಞಯಾ ಮಮ ।
ಮೂಲತಾಮುಪಗತೇ ಪ್ರಭೋ ತ್ವಯಿ ಪ್ರಾಪಿ ಧರ್ಮಮಯವೃಕ್ಷತಾ ಮಯಾ॥
-ಶಿಶು. 14.6

"ಹೇ ಕೃಷ್ಣ, ರಾಜಸೂಯಯಾಗವನ್ನು ಮಾಡಲು ಉದ್ಯುಕ್ತನಾದ ನನಗೆ ಅನುಮತಿಯನ್ನು ಕೊಟ್ಟು ಹರಸು. ಎಲೈ ಪ್ರಭುವೇ, ನೀನು ಪ್ರಧಾನ ಮೂಲವಾಗಿರುವುದರಿಂದ ನಾನು ಧರ್ಮರೂಪಿ ವೃಕ್ಷವಾಗಿ ಬೆಳೆದಿದ್ದೇನೆ."

'ನಾನು ಧರ್ಮರಾಜನೆನಿಸಿಕೊಳ್ಳಲು ನೀನೇ ಪ್ರಧಾನ ಕಾರಣ' ಎಂದು ಯುಧಿಷ್ಠಿರನು ಕೃಷ್ಣನಿಗೆ ಬಹಳ ವಿನೀತನಾಗಿ ಭಕ್ತಿ ಭಾವದಿಂದ ಹೇಳುತ್ತಾನೆ. ಇಲ್ಲಿ ಯುಧಿಷ್ಠಿರನನ್ನು ಧರ್ಮರೂಪಿ ವೃಕ್ಷವೆಂದೂ, ಆ ವೃಕ್ಷಕ್ಕೆ ಕೃಷ್ಣನೇ ತಾಯಿ ಬೇರೆಂದೂ ಬಹಳ ಚೆನ್ನಾಗಿ ರೂಪಿಸಲಾಗಿದೆ.

ಶ್ಲೇಷ

ಮಾಘನು ಶಬ್ದಾಲಂಕಾರಗಳಲ್ಲಿ ಯಮಕ, ಅನುಪ್ರಾಸಗಳನ್ನಲ್ಲದೆ ಶಬ್ದಶ್ಲೇಷೆಯನ್ನೂ ವಿಪುಲವಾಗಿ ಉಪಯೋಗಿಸುತ್ತಾನೆ. ಕೇವಲ ಶಬ್ದಶ್ಲೇಷೆಯನ್ನಲ್ಲದೆ ಮಾಘನು ಕೆಲವೊಮ್ಮೆ ಬಹಳ ಸುಂದರವಾದ ಅರ್ಥಶ್ಲೇಷೆಯನ್ನೂ ಉಪಯೋಗಿಸುತ್ತಾನೆ. ಶ್ಲೇಷೆಯನ್ನು ಮಾಘನ ಶೈಲಿಯ ಒಂದು ವಿಶಿಷ್ಟ ಲಕ್ಷಣವೆಂದೇ ಪರಿಗಣಿಸಬಹುದು. ಮಹಾಕೋಶಜ್ಞನೂ, ವೈಯಾಕರಣನೂ ಆದ ಮಾಘನಿಗೆ ಇದು ಸಹಜವಾಗಿಯೇ ಇದೆ. ಹಾಗೆ ನೋಡಿದರೆ ಶ್ಲೇಷೆ ಸಾಮಾನ್ಯವಾಗಿ ಸಂಸ್ಕೃತದ ಎಲ್ಲಾ ಕವಿಗಳಲ್ಲೂ ಕಂಡು ಬರುವ ಒಂದು ಸಾಧಾರಣವಾದ ಅಲಂಕಾರ.

ಏತಸ್ಮಿನ್ನಧಿಕಪಯಃ ಶ್ರಿಯಂ ವಹನ್ತ್ಯಃ
ಸಂಕ್ಷೋಭಂ ಪವನಭುವಾ ಜವೇನ ನೀತಾಃ ।

ವಾಲ್ಮೀಕೇರರಹಿತ ರಾಮಲಕ್ಷ್ಮಣಾನಾಮ್
ಸಾಧರ್ಮ್ಯಂ ದಧತಿ ಗಿರಾಂ ಮಹಾ ಸರಸ್ಯಃ ॥ ಶಿಶು. 4.59

"ಈ ರೈವತಕ ಪರ್ವತದಲ್ಲಿ ಅಧಿಕ ಜಲಸಂಪತ್ತಿನಿಂದ ಕೂಡಿರುವ, ಜೋರಾಗಿ ಬೀಸುವ ಗಾಳಿಯಿಂದ ಕ್ಷೋಭೆಗೊಳ್ಳುವ, ತಮ್ಮ ಪ್ರಿಯಕರರೊಡನೆ ಕ್ರೀಡಿಸುತ್ತಿರುವ ಸಾರಸ ಪಕ್ಷಿಗಳನ್ನುಳ್ಳ ದೊಡ್ಡ ದೊಡ್ಡ ಸರೋವರಗಳು ; ಸುಗ್ರೀವಾದಿ ಅನೇಕ ಕಪಿಗಳಿಂದ ಕೂಡಿರುವ, ಸೀತೆಯನ್ನುಳ್ಳ (ಅಥವಾ ಗುಣಾಲಂಕಾರಾದಿ ಶೋಭೆಗಳಿಂದ ಕೂಡಿರುವ), ಮಹಾವೇಗಶಾಲಿಯಾದ ಹನುಮಂತನ ಸಾಹಸಗಳಿಂದ ಕೂಡಿರುವ ಮತ್ತು ರಾಮಲಕ್ಷ್ಮಣರ ವರ್ತನೆಗಳಿಂದ ತುಂಬಿರುವ ವಾಲ್ಮೀಕಿಯ ವಚನಗಳ ಸಾಧರ್ಮ್ಯವನ್ನು ಪಡೆಯುತ್ತಿವೆ."

ಈ ಶ್ಲೋಕದಲ್ಲಿ ಪ್ರತಿ ಪಾದದಲ್ಲಿಯೂ ಎರಡೆರಡು ಅರ್ಥಗಳಿರುವುದರಿಂದ ಅರ್ಥಶ್ಲೇಷೆಯೂ ಮತ್ತು ಪ್ರತಿ ಪಾದದಲ್ಲಿಯೂ ಪದಭಂಗದಿಂದ ಎರಡೆರಡು ಅರ್ಥಗಳು ಪ್ರತೀತವಾಗುವುದರಿಂದ ಶಬ್ದಶ್ಲೇಷೆಯೂ ಹಿತಮಿತವಾಗಿ ಮೇಳೈಸಿವೆ. ಇಲ್ಲಿ ಶ್ಲೇಷೆಯು ಪ್ರಕೃತವಾದ ರೈವತಕ ಪರ್ವತಕ್ಕೂ ಮತ್ತು ಅಪ್ರಕೃತವಾದ ವಾಲ್ಮೀಕಿ ವಚನಕ್ಕೂ ಸಂಬಂಧಿಸಿದೆ. ಇವೆರಡಕ್ಕೂ ಹೇಳಿರುವ ಸಾದೃಶ್ಯವು ಅಷ್ಟು ಮುಖ್ಯವಲ್ಲವಾದುದರಿಂದ ಉಪಮೆಯು ಇಲ್ಲಿ ಗೌಣವಾಗಿದೆ.

ಅಸಕೃದ್ಗೃಹೀತ ಬಹುದೇಹಸಂಭವಸ್ತದಸೌ ವಿಭಕ್ತನವಗೋಪುರಾಂತರಮ್ ।
ಪುರುಷಃ ಪುರಂ ಪ್ರವಿಶತಿ ಸ್ಮ ಪಂಚಭಿಸ್ಸಮಮಿಂದ್ರಿಯೈರಿವ ನರೇಂದ್ರಸೂನುಭಿಃ ॥
ಶಿಶು. 13.28

"ತನ್ನ ಕರ್ಮಗಳಿಗೆ ತಕ್ಕಂತೆ ಅನೇಕ ಜನ್ಮಗಳನ್ನು ಎತ್ತುವ ಜೀವನು ನವದ್ವಾರಗಳನ್ನುಳ್ಳ ಬೇರೆ ಬೇರೆ ಶರೀರಗಳನ್ನು ಪಂಚೇಂದ್ರಿಯಗಳೊಡನೆ ಪ್ರವೇಶಿಸುವಂತೆ ಲೋಕೋದ್ಧಾರಕ್ಕಾಗಿ ಅನೇಕ (ಮತ್ಸ್ಯ ಕೂರ್ಮ ವರಾಹಾದಿ) ಜನ್ಮಗಳನ್ನು ಎತ್ತಿದ ಪುರಾಣಪುರುಷನು (ಹರಿಯು) ಹೊಸದಾಗಿ ನಿರ್ಮಿಸಿರುವ ಬೇರೆ ಬೇರೆ ಒಂಬತ್ತು ದ್ವಾರಗಳನ್ನುಳ್ಳ ಇಂದ್ರಪ್ರಸ್ಥ ಪುರವನ್ನು ಪಂಚಪಾಂಡವರೊಡನೆ ಪ್ರವೇಶಿಸಿದನು."13

ಇಲ್ಲಿ ಶ್ಲೇಷೆಯು ಪ್ರಕೃತವಾದ ಹರಿ (ಪುರುಷ) ಮತ್ತು ಇಂದ್ರಪ್ರಸ್ಥ (ಪುರ) ಗಳಿಗೂ ಅಪ್ರಕೃತವಾದ ಜೀವ (ಪುರುಷ) ಮತ್ತು ಶರೀರ (ಪುರ)ಗಳಿಗೂ ಅನ್ವಯಿಸುತ್ತದೆ. ಜೀವನು ಪಂಚೇಂದ್ರಿಯಗಳೊಡನೆ ನವದ್ವಾರಗಳನ್ನುಳ್ಳ ಶರೀರಾಂತರವನ್ನು ಪ್ರವೇಶಿಸುವಂತೆ ಶ್ರೀ ಕೃಷ್ಣನು ಪಂಚ ಪಾಂಡವರೊಡನೆ ನವದ್ವಾರಗಳನ್ನುಳ್ಳ ಇಂದ್ರಪ್ರಸ್ಥ ಪುರವನ್ನು ಪ್ರವೇಶಿಸಿದನು ಎಂದು ಹೇಳಿದಾಗ ಶ್ಲೇಷೆ

ಯೊಡನೆ ಅದರಿಂದಲೇ ಅನುಪ್ರಾಣಿತವಾದ ಉಪಮಾಲಂಕಾರವು ಸೇರಿಕೊಂಡಿರುವುದನ್ನು ಗಮನಿಸಿ.

ಸ್ವಭಾವೋಕ್ತಿ :

ಶಿಶುಪಾಲ ವಧದ ಸೇನಾ ನಿವೇಶವನ್ನು ವರ್ಣಿಸುವ ಐದನೆಯ ಸರ್ಗ ಮತ್ತು ಪ್ರಯಾಣ ವರ್ಣನೆಯುಳ್ಳ 12ನೆಯ ಸರ್ಗಗಳು ವಿಶೇಷವಾಗಿ ಸ್ವಭಾವೋಕ್ತಿ ಅಲಂಕಾರದಿಂದ ಕೂಡಿವೆ.

ಕ್ಷಿಪ್ತಂ ಪುರೋ ನ ಜಗೃಹೇ ಮುಹುರಿಕ್ಷುಕಾಂಡಮ್
ನಾಪೇಕ್ಷತೇ ಸ್ಮ ನಿಕಟೋಪಗತಾಂ ಕರೇಣುಮ್ ।
ಸಸ್ಮಾರ ವಾರಣಪತಿಃ ಪರಿಮೀಲಿತಾಕ್ಷಮ್
ಇಚ್ಛಾವಿಹಾರ ವನವಾಸ ಮಹೋತ್ಸವಾನಾಮ್ ॥ ಶಿಶು. 5.50

"ಮದ್ದಾನೆಯೊಂದು ಮುಂದೆ ಚೆಲ್ಲಿದ್ದ ಕಬ್ಬನ್ನು ತಿನ್ನಲಿಲ್ಲ, ಬಳಿಗೆ ಹೋದ ಹೆಣ್ಣಾನೆಯನ್ನೂ ಅಪೇಕ್ಷಿಸಲಿಲ್ಲ. ಅದು ಕೇವಲ ಕಣ್ಣು ಮುಚ್ಚಿಕೊಂಡು ಅರಣ್ಯದಲ್ಲಿ ಸ್ವೇಚ್ಛೆಯಿಂದ ವಿಹರಿಸುತ್ತಿದ್ದ ದಿನಗಳನ್ನು ನೆನಸಿಕೊಂಡಿತು".

ಸ್ವಚ್ಛಂದಚಾರಿಯಾದ ಆನೆಗೆ ನಿರ್ಬಂಧದಲ್ಲಿ ಏನು ಮಾಡಿದರೂ ಭೋಗದಲ್ಲಿ ಪ್ರವೃತ್ತಿಯುಂಟಾಗಲಿಲ್ಲ. ಸ್ವಾತಂತ್ರ್ಯಪ್ರಿಯವಾದ ಆನೆಯ ಚಿತ್ರಣ ಸಹಜ ಸುಂದರವಾಗಿದೆ. ಆನೆಯು ಕಬ್ಬನ್ನಾಗಲೀ ಹೆಣ್ಣಾನೆಯನ್ನಾಗಲೀ ಅಪೇಕ್ಷಿಸಲಿಲ್ಲವೆಂಬುದಕ್ಕೆ ಸಮರ್ಥಕವಾಗಿ ಅದು ಕಣ್ಮುಚ್ಚಿ ವನದಲ್ಲಿ ಕಳೆದ ದಿನಗಳ ಸ್ವೇಚ್ಛಾವಿಹಾರವನ್ನು ನೆನಸಿಕೊಳ್ಳುತ್ತಿತ್ತು ಎಂಬುದನ್ನು ಕಾರಣವಾಗಿ ಹೇಳಿರುವುದರಿಂದ ಇಲ್ಲಿ ವಾಕ್ಯಾರ್ಥಹೇತುಕ ಕಾವ್ಯಲಿಂಗಾಲಂಕಾರವೂ ಇದೆ.

ಪ್ರೀತ್ಯಾ ನಿಯುಕ್ತಾನ್ ಲಿಹತೀಃ ಸ್ತನಂಧಯಾನ್
ನಿಗೃಹ್ಯ ಪಾರೀಮುಭಯೇನ ಜಾನುನೋಃ ।
ವರ್ಧಿಷ್ಣುಧಾರಾಧ್ವನಿರೋಹಿಣೀಃ ಪಯಃ
ಚಿರಂ ನಿದಧ್ಯೌ ದುಹತಃ ಸ ಗೋದುಹಃ ॥ ಶಿಶು. 15.40

"ಎಡಗಾಲಿನ ಬಳಿ ಕಟ್ಟಿರುವ ಕರುವನ್ನು ಪ್ರೀತಿಯಿಂದ ನೆಕ್ಕುತ್ತಿರುವ ಮತ್ತು ಚೆನ್ನಾಗಿ ಸ್ವರ ಬಿಡುತ್ತಿರುವ (ವರ್ಧಿಷ್ಣುಧಾರಾ) ಹಸುಗಳನ್ನು ತಮ್ಮ ಎರಡು

ಮುಂಡಿಗಳ ನಡುವೆ ಹಾಲಿನ ಪಾತ್ರೆಯನ್ನು ಹಿಡಿದುಕೊಂಡು ಕರೆಯುತ್ತಿರುವ ಗೋವಳರನ್ನು ಕೃಷ್ಣನು ಸೆಟ್ಟ ಕಣ್ಣುಗಳಿಂದ ಬಹಳ ಕಾಲ ನೋಡಿದನು."

ಹಾಲು ಕರೆಯುವ ಗೊಲ್ಲನ ಈ ಚಿತ್ರಣ ಸ್ವಾಭಾವಿಕವಾಗಿರುವುದಲ್ಲದೆ ಸುಂದರವಾಗಿಯೂ ಇದೆ.

ವಿರೋಧಾಭಾಸ

ಆನಂದಂ ವಧತಿ ಮುಖೇ ಕರೋದಕೇನ ಶ್ಯಾಮೂ14ಯಾ ದಯಿತತಮೇನ ಸಿಚ್ಯಮಾನೇ ।
ಈರ್ಷ್ಯಾನ್ಯಾ ವದನಮಸಿಕ್ತಮಪ್ಯನಲ್ಪಸ್ವೇದಾಂಬುಸ್ನಪಿತಮಜಾಯತೇ ತರಸ್ಯಾಃ ॥

—ಶಿಶು. 8.36

"(ಜಲಕ್ರೀಡೆಯ ಸಮಯದಲ್ಲಿ) ಪ್ರಿಯತಮನು ತನ್ನ ಸವತಿಯ ಮುಖವನ್ನು ಕರೋದಕದಿಂದ ಸಿಂಪಡಿಸುತ್ತಿರಲು ಆನಂದಾತಿರೇಕದಿಂದ ಅರಳುತ್ತಿರುವ ಅವಳ ಮುಖವನ್ನು ನೋಡಿದ ಒಬ್ಬ ಯುವತಿಯ ಮುಖವು ಅಸಿಕ್ತವಾಗಿದ್ದರೂ ಈರ್ಷ್ಯಾಕೋಪದಿಂದುಂಟಾದ ಬೆವರಿನ ಹನಿಗಳಿಂದ ಸಿಕ್ತವಾದದ್ದಾಯಿತು.'15

ಇಲ್ಲಿ ಅಸಿಕ್ತವಾದರೂ ಸಿಕ್ತವಾದದ್ದಾಯಿತು ಎಂದು ಹೇಳಿರುವುದರಿಂದುಂಟಾಗುವ ವಿರೋಧವನ್ನು ಈರ್ಷ್ಯಾಕೋಪದಿಂದುಂಟಾದ ಬೆವರಿನ ಹನಿಗಳಿಂದ ಸಿಕ್ತದ್ದಾಯಿತು ಎಂದು ಕಾರಣವನ್ನು ಕೊಟ್ಟು ಪರಿಹರಿಸಿರುವುದರಿಂದ ವಿರೋಧವು ಕೇವಲ ಆಭಾಸ ಮಾತ್ರವಾಗಿದೆ.

ಸತ್ಯವೃತ್ತಮಪಿ ಮಾಯಿನಂ ಜಗದ್ವೃದ್ಧಮಪ್ಯುಚಿತನಿದ್ರಮರ್ಭಕಮ್ ।
ಜನ್ಮ ಬಿಭ್ರತಮಜಂ ನವಂ ಬುಧಾ ಯಂ ಪುರಾಣ ಪುರುಷಂ ಪ್ರಚಕ್ಷತೇ ॥

—ಶಿಶು. 14.70

"ಸತ್ಯ ವೃತ್ತನಾದರೂ ಮಾಯಾವಿಯಾದ, ಜಗದ್ವೃದ್ಧನಾದರೂ ಯೋಗ ನಿದ್ರೆಯಿಂದ ಮಲಗಿರುವ ಮಗುವಾದ, ಜನ್ಮವುಳ್ಳವನಾದರೂ ಅಜನಾದ' ನೂತನನಾದರೂ ಬುಧರಿಂದ ಪುರಾಣಪುರುಷನೆಂದು ಕರೆಯಲ್ಪಡುವ ವಿಷ್ಣುವೇ ಇವನು."

ರಾಜಸೂಯ ಯಾಗದ ಸಂದರ್ಭದಲ್ಲಿ ಭಕ್ತ್ಯಾಧಿಕ್ಯದಿಂದ ಭೀಷ್ಮನು ಮಾಡುವ ಕೃಷ್ಣನ ಈ ವರ್ಣನೆ ಸುಂದರವಾದ ನಾಲ್ಕು ವಿರೋಧಾಭಾಸಗಳಿಂದ ಕೂಡಿದ್ದು ಚೇತೋಹಾರಿಯಾಗಿದೆ.

ಸತ್ಯವೃತ್ತ ಆದರೂ ಮಾಯಾವಿ, ಜಗದ್ವೃದ್ಧ ಆದರೂ ಮಗು, ಜನ್ಮವುಳ್ಳವನು ಆದರೂ ಅಜ, ನೂತನ ಆದರೂ ಪುರಾಣ ಎಂಬಲ್ಲಿ ಉಂಟಾಗುವ ವಿರೋಧವು ಭಗವದ್ವಿಷಯವಾದ್ದರಿಂದ ಕೇವಲ ಆಭಾಸಮಾತ್ರವಾಗಿದೆ.

ಕಾವ್ಯಲಿಂಗ :

ಮುಗ್ಧತ್ವಾದವಿದಿತ ಕೈತವ ಪ್ರಯೋಗಾ ಗಚ್ಛಂತ್ಯಸ್ಸಪದಿ ಪರಾಜಯಂ ತರುಣ್ಯಃ ।
ತಾ ಕಾಂತೈಸ್ಸಹ ಕರಪುಷ್ಕರೇರಿತಾಂಬು ವ್ಯಾತ್ಯುಕ್ಷೀಮಭಿಸರಣಗ್ಲಹಾಮದೀವ್ಯನ್ ॥
–ಶಿಶು 8.32

ಜಲಕ್ರೀಡಾವರ್ಣನೆಯಲ್ಲಿ ಬರುವ ಶ್ಲೋಕವಿದು. "ಕಪಟವನ್ನರಿಯದ ಮುಗ್ಧರಾದ ಯುವತಿಯರು ತಮ್ಮ ಕಾಂತರೊಡನೆ 'ಸೋತವರು ತಾವಾಗಿಯೇ ಇನ್ನೊಬ್ಬರ ಬಳಿ ಸಾರಬೇಕು (ಸ್ವಯಮಭಿಗಮನ)' ಎಂಬ ಪಣದೊಡನೆ ಕೈನಿಂದ ಹೊಡೆದು ಹೊಡೆದು ನೀರನ್ನೆರಚುವ ದ್ಯೂತ ಕ್ರೀಡೆಯನ್ನಾಡಿ ಸೋತರು".

ಬಲಾಧಿಕರಾದ ಪುರುಷರೊಡನೆ ಜಲತಾಡನ ಕ್ರೀಡೆಯಲ್ಲಿ ಅಬಲೆಯರು ಗೆಲ್ಲುವುದುಂಟೆ ? ಜಲಕ್ರೀಡೆಯಲ್ಲಿ 'ಸ್ವಯಮಭಿಗಮನ'ವೇ ಪಣವೆಂಬ ಮಾಘನ ಕಲ್ಪನೆ ಬಹು ಸುಂದರವಾಗಿದೆ. ಪ್ರೇಮಿಗಳಿಗೆ ಇದಕ್ಕಿಂತ ಉತ್ತಮವಾದ ಪಣವಾವುದು ?

ಇಲ್ಲಿ ಯುವತಿಯರ ಪರಾಜಯಕ್ಕೆ ಅವರು ಕೈತವವನ್ನು ತಿಳಿಯುವರಾಗಿದ್ದುದೇ ಕಾರಣ ಎಂದು ಹೇಳಿರುವುದರಿಂದ ಪದಾರ್ಥಹೇತುಕ ಕಾವ್ಯಲಿಂಗಾಲಂಕಾರವಾಗುತ್ತದೆ.

ಕಿಮಿವಾಖಿಲಲೋಕ ಕೀರ್ತಿತಂ ಕಥಯತ್ಯಾತ್ಮಗುಣಂ ಮಹಾಮನಾಃ ।
ವದಿತಾ ನ ಲಘೀಯಸೋಽಪರಃ ಸ್ವಗುಣಂ ತೇನ ವದತ್ಯಸೌ ಸ್ವಯಮ್ ॥
–ಶಿಶು. 16.31

"ಲೋಕವೆಲ್ಲವೂ ಕೊಂಡಾಡುತ್ತಿರುವ ತನ್ನ ಗುಣಗಳನ್ನು ಮಹಾತ್ಮನಾದವನು ತಾನೆ ಏಕೆ ಹೇಳಿಕೊಳ್ಳುತ್ತಾನೆ ? ನೀಚನಾದವನ ಗುಣಗಳನ್ನು ಹೊಗಳುವವರು ಯಾರೂ ಇಲ್ಲದಿರುವುದರಿಂದ ಅವನು ತಾನೇ ತನ್ನ ಗುಣಗಳನ್ನು ಹೊಗಳಿಕೊಳ್ಳುತ್ತಾನೆ".

ರಾಜಸೂಯ ಯಾಗದಲ್ಲಿ ಕೃಷ್ಣನಿಗೆ ಅಗ್ರಪೂಜೆ ಸಂದ ಬಳಿಕ ಅವನ ಬಳಿಗೆ ಬಂದು ತನ್ನ ಸ್ವಾಮಿಯಾದ ಶಿಶುಪಾಲನನ್ನು ಪ್ರಶಂಸಿಸುತ್ತಾ ಕೃಷ್ಣನನ್ನು

ಹೀಯಾಳಿಸಲು ತೊಡಗುವ ದೂತನನ್ನು ಕುರಿತು ಕೃಷ್ಣನ ಸಹಚರನಾದ ಸಾತ್ಯಕಿಯು ಹೇಳುವ ಮಾತುಗಳಿವು. ಮಹಾತ್ಮನಾದ ಶ್ರೀಕೃಷ್ಣನ ಗುಣಗಳು 'ಅಖಿಲಲೋಕ ಕೀರ್ತಿತ'ವಾದ್ದರಿಂದ ಅದನ್ನು ಅವನು ಹೇಳಿಕೊಳ್ಳಬೇಕಾದ ಅಗತ್ಯವಿಲ್ಲ. ಅದೇ ನೀಚನಾದ ಶಿಶುಪಾಲನ ಗುಣಗಳನ್ನು ಹೊಗಳುವವರು ಯಾರೂ ಇಲ್ಲದ್ದರಿಂದ ಅವನು ತನ್ನನ್ನು ತಾನೆ ಹೊಗಳಿಕೊಳ್ಳುತ್ತಾನೆ ಎಂದು ಇದರ ತಾತ್ಪರ್ಯ. ಇಲ್ಲಿ ಪೂರ್ವಾರ್ಧದಲ್ಲಿ ಮಹಾತ್ಮನು ತನ್ನನ್ನು ತಾನೆ ಹೊಗಳಿಕೊಳ್ಳಬೇಕಾದ ಅಗತ್ಯವಿಲ್ಲವೆಂಬುದಕ್ಕೆ 'ಅಖಿಲ ಲೋಕಕೀರ್ತಿತಂ' ಎಂಬುದನ್ನು ಕಾರಣವನ್ನಾಗಿ ಕೊಟ್ಟಿರುವುದರಿಂದ ಪದಾರ್ಥ ಹೇತುಕವಾದ ಕಾವ್ಯಲಿಂಗವೂ, ಉತ್ತರಾರ್ಧದಲ್ಲಿ ನೀಚನು ತನ್ನನ್ನು ತಾನೆ ಹೊಗಳಿಕೊಳ್ಳುತ್ತಾನೆ ಎನ್ನುವುದಕ್ಕೆ 'ವಿದಿತಾ ನ ಲಘೀಯಸೋऽಪರಃ' (ನೀಚನನ್ನು ಹೊಗಳುವವರು ಯಾರೂ ಇಲ್ಲ) ಎಂಬುದನ್ನು ಕಾರಣವಾಗಿ ಕೊಟ್ಟಿರುವುದರಿಂದ ವಾಕ್ಯಾರ್ಥ ಹೇತುಕ ಕಾವ್ಯಲಿಂಗವೂ ಹೀಗೆ ಎರಡು ಪಾದಗಳಲ್ಲಿಯೂ ಕಾವ್ಯಲಿಂಗಾಲಂಕಾರವಿದೆ. ಇದಲ್ಲದೆ ಶ್ರೀಕೃಷ್ಣನು ಮಹಾತ್ಮ ಮತ್ತು ಶಿಶುಪಾಲನು ನೀಚ ಎಂಬ ಪ್ರಸ್ತುತ ವಿಷಯವನ್ನು ಇಲ್ಲಿ ಅಪ್ರಸ್ತುತವಾದ ಮಹಾತ್ಮ ಮತ್ತು ನೀಚರ ಗುಣಗಳನ್ನು ತಿಳಿಸುವ ಮೂಲಕ ಸೂಚಿಸಿರುವುದರಿಂದ ಕಾವ್ಯಲಿಂಗದೊಡನೆ ಅಪ್ರಸ್ತುತ ಪ್ರಶಂಸಾ ಅಲಂಕಾರವೂ ಸಹ ಸೇರಿದೆ.

೩ ಅರ್ಥಗೌರವ :

'ಭಾರವೇರರ್ಥಗೌರವಂ' – ಅರ್ಥಗೌರವಕ್ಕೆ ಭಾರವಿ ಪ್ರಸಿದ್ಧನೆಂದು ಮೇಲೆ ಉದಾಹರಿಸಿದ 'ಉಪಮಾಕಾಲಿದಾಸಸ್ಯ' ಶ್ಲೋಕವು ಹೇಳುವುದಾದರೂ ಮಾಘನಾಗಲೀ ಈ ಗುಣದಲ್ಲಿ ಭಾರವಿಗಿಂತ ಕೀಳೆಂದು ಹೇಳಲಾಗದು. ಶಿಶುಪಾಲವಧದಲ್ಲಿ ಬಹಳ ಅರ್ಥವತ್ತಾದ ಹತ್ತಾರು, ನೂರಾರು ಶ್ಲೋಕಗಳನ್ನು ನೋಡಬಹುದು. ದಿಗ್ದರ್ಶನಾರ್ಥ ಒಂದೆರಡು ಉದಾಹರಣೆಗಳನ್ನು ನೋಡೋಣ.

ಹರತ್ಯಘಂ ಸಂಪ್ರತಿ ಹೇತುರೇಷ್ಯತಃ ಶುಭಸ್ಯ ಪೂರ್ವಾಚರಿತೈಃ ಕೃತಂ ಶುಭೈಃ ।
ಶರೀರಭಾಜಾಂ ಭವದೀಯದರ್ಶನಂ ವ್ಯನಕ್ತಿ ಕಾಲತ್ರಿತಯೇಽಪಿ ಯೋಗ್ಯತಾಮ್ ॥
–ಶಿಶು. 1.26

"ನಿಮ್ಮ ದರ್ಶನವು ಈಗ ಪಾಪವನ್ನು ಹೋಗಲಾಡಿಸುತ್ತದೆ, ಮುಂದಿನ ಶುಭಕ್ಕೆ ಸೂಚಕವಾಗಿದೆ ಮತ್ತು ಹಿಂದೆ ಮಾಡಿದ ಶುಭ ಕಾರ್ಯಗಳ ಫಲವಾಗಿದೆ. ನಿಮ್ಮಂತಹ ಮಹಾತ್ಮರ ದರ್ಶನವು ಮನುಷ್ಯರಿಗೆ ತ್ರಿಕಾಲಗಳ ಶುಭ ಸೂಚಕವಾಗಿದೆ".

ನಾರದ ಮುನಿಯನ್ನು ಸ್ವಾಗತಿಸುತ್ತಾ ಸಾಕ್ಷಾತ್ ಶ್ರೀಕೃಷ್ಣನು ಹೇಳುವ ಮಾತುಗಳಿವು. ತ್ರಿಕಾಲಜ್ಞಾನಿಯಾದ ನಾರದ ಮಹರ್ಷಿಯ ದರ್ಶನಮಾತ್ರದಿಂದ ಯಾರು ತಾನೆ ಪುನೀತರಾಗುವುದಿಲ್ಲ ? ಶ್ರೀಕೃಷ್ಣನು ಸಾಕ್ಷಾತ್ ಪರಮಾತ್ಮನ ಅವತಾರವೇ ಆದರೂ ಮನುಷ್ಯರೂಪದಲ್ಲಿರುವುದರಿಂದ ಶಿಷ್ಟಾಚಾರವನ್ನು ಪಾಲಿಸಿ ಮನುಷ್ಯ ಲೋಕಕ್ಕೆ ಮಾರ್ಗದರ್ಶನ ಮಾಡಬೇಕಾಗಿದೆ. ಶ್ರೀಕೃಷ್ಣನ ನಡವಳಿಕೆ ಸಜ್ಜನರೆಲ್ಲರಿಗೂ ಅನುಕರಣೀಯವಾದದ್ದು.

ಸಂಪದಾ ಸುಸ್ಥಿರಂ ಮನ್ಯೋ ಭವತಿ ಸ್ವಲ್ಪಯಾಪಿ ಯಃ ।
ಕೃತಕೃತ್ಯೋ ವಿಧಿರ್ಮನ್ಯೇ ನ ವರ್ಧಯತಿ ತಸ್ಯ ತಾಮ್ ॥
–ಶಿಶು 2.32

"ಅಲ್ಪ ಸಂಪತ್ತಿನಿಂದಲೇ ಯಾವನು ಸ್ವಸ್ಥನೆಂದು ತಿಳಿಯುತ್ತಾನೋ ವಿಧಿಯು ತನ್ನ ಕೆಲಸವಾಯಿತೆಂದು ಅಂತಹವನ ಸಂಪತ್ತನ್ನು ಹೆಚ್ಚಿಸುವುದಿಲ್ಲ."

ಪೌರುಷಹೀನನಾದವನಿಗೆ ವಿಧಿಯು ಸಹಾಯ ಮಾಡುವುದಿಲ್ಲ. ಪುರುಷ ಪ್ರಯತ್ನಕ್ಕೆ ದೈವವೂ ಸಹಾಯಮಾಡುತ್ತದೆ. ಆದ್ದರಿಂದ ಯಾವಾಗಲೂ ಇಷ್ಟು ಸಾಕು ಎಂದು ಕೈಕಟ್ಟಿ ಕೂರದೆ ನಮ್ಮ ಪ್ರಯತ್ನವನ್ನು ನಾವು ಮಾಡುತ್ತಲೇ ಇರಬೇಕು ಎಂದು ಹೇಳುವ ಈ ಶ್ಲೋಕ ಬಹಳ ಅರ್ಥಪೂರ್ಣವಾಗಿದೆ.

ರೈವತಕ ಪರ್ವತದ ವರ್ಣನೆಯ ಸಂದರ್ಭದಲ್ಲಿ ಬರುವ ಈ ಕೆಳಗಿನ ಶ್ಲೋಕವನ್ನು ನೋಡಿ—

ಅಪಶಂಕಮಂಕ ಪರಿವರ್ತನೋಚಿತಾಃ
ಚಲಿತಾಃ ಪುರಃ ಪತಿಮುಪೈತುಮಾತ್ಮಜಾಃ ।
ಅನುರೋದಿತೀವ ಕರುಣೇನ ಪತ್ರಿಣಾಮ್
ವಿರುತೇನ ವತ್ಸಲತಯೈಷ ನಿಮ್ನಗಾಃ ॥ ಶಿಶು. 4.47

"ತೊಡೆಯ ಮೇಲೆ ಯಥೇಚ್ಛವಾಗಿ ಆಡಿ ಬೆಳೆದ ಮಗಳನ್ನು ಪತಿಯ ಮನೆಗೆ ಕಳುಹಿಸುವಾಗ ವಿಯೋಗದುಃಖದಿಂದ ಅಳುವಂತೆ, ನಿರಾತಂಕವಾಗಿ ತನ್ನಂಕದಲ್ಲಿ ಚಲಿಸುವ ನದಿಯು ಸಮುದ್ರವನ್ನು ಸೇರಲು ಮುಂದೆ ಮುಂದೆ ಹೋಗುತ್ತಿರಲು ರೈವತಕ ಪರ್ವತವು ವಿಯೋಗ ದುಃಖದಿಂದ ಪಕ್ಷಿಗಳ ಕಲರವರೂಪದಲ್ಲಿ ಅಳುತ್ತಿದೆಯೋ ಎಂಬಂತೆ ತೋರುತ್ತದೆ."

ಸಮುದ್ರಕ್ಕೆ ಹರಿಯುವ ನದಿಯನ್ನು ಪತಿಯ ಮನೆಗೆ ಹೋಗುವ ಹೆಣ್ಣು ಮಗಳಿಗೂ, ರೈವತಕವನ್ನು ಮಗಳ ವಿಯೋಗದಿಂದ ರೋದಿಸುವ ಹೆಣ್ಣಿನ ತಂದೆಗೂ ಹೋಲಿಸಿರುವುದು ಮನೋಹರವಾಗಿದೆ. ಪಕ್ಷಿರುತವನ್ನು ಕವಿಯು ಪರ್ವತದ ರೋದನ ವನ್ನಾಗಿ ಉತ್ಪ್ರೇಕ್ಷಿಸಿದ್ದಾನೆ. ತೊಡೆಯಮೇಲೆ ಆಡಿ ಬೆಳೆಯುವ ಮಗಳನ್ನು ಗಂಡನ ಮನೆಗೆ ಕಳುಹಿಸುವಾಗ ಸಂಸಾರಿಗಳು ಎಷ್ಟು ದುಃಖವನ್ನನುಭವಿಸುತ್ತಾರೆಂಬುದನ್ನು ಮಾಘನು ಬಹಳ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾನೆ.17

3) ಪದಲಾಲಿತ್ಯ :

'ಉಪಮಾ ಕಾಳಿದಾಸಸ್ಯ' ಶ್ಲೋಕವು ಮಾಘನನ್ನು ಪದಲಾಲಿತ್ಯದ ವಿಷಯದಲ್ಲಿ ದಂಡಿಗೆ ಹೋಲಿಸುತ್ತದೆಯಾದರೂ ಉಳಿದೆರಡು ಗುಣಗಳಾದ 'ಉಪಮಾ' (ಅಲಂಕಾರಗಳು) ಮತ್ತು 'ಅರ್ಥ ಗೌರವಗಳ' ದೃಷ್ಟಿಯಿಂದ ನೋಡಿದರೆ ಮಾಘನಲ್ಲಿ ಪದಲಾಲಿತ್ಯವು ವಿರಳವೆಂದೇ ಹೇಳಬೇಕು. ಸಾಮಾನ್ಯವಾಗಿ ಈ ಗುಣವು ಯಮಕಾನುಪ್ರಾಸಾದಿ ಶಬ್ದಾಲಂಕಾರಗಳನ್ನು ಆಶ್ರಯಿಸಿರುವಂತಹುದು. ಮಾಘನು ಈ ಶಬ್ದಾಲಂಕಾರಗಳನ್ನು ಸಾಕಷ್ಟು ಪ್ರಮಾಣದಲ್ಲಿ ಉಪಯೋಗಿಸಿಯೂ ಇದ್ದಾನೆ. ಆದರೂ ಪದಲಾಲಿತ್ಯವು ಮಾಘನಲ್ಲಿ ವಿರಳವೆಂದು ಹೇಳಲು ಕಾರಣವೇನೆಂದರೆ ಅವನು ಈ ಶಬ್ದಾಲಂಕಾರಗಳನ್ನು ಕೇವಲ ಪಾಂಡಿತ್ಯ ಪ್ರದರ್ಶನಕ್ಕೆ ಉಪಯೋಗಿಸಿ ಕೊಂಡಿರುವುದು. ಆದ್ದರಿಂದಲೇ ಯಮಕಗಳ ಪ್ರದರ್ಶನಕ್ಕೆ ಮೀಸಲಾಗಿರುವ 4 ಮತ್ತು 6ನೇ ಸರ್ಗಗಳು, ಪ್ರತ್ಯೂಷ ವರ್ಣನೆಗೆ ಮೀಸಲಾಗಿರುವ 11ನೇ ಸರ್ಗ ಮತ್ತು ಚಿತ್ರ ಕಾವ್ಯಗಳಿಗೆ ಮೀಸಲಾಗಿರುವ 19ನೇ ಸರ್ಗ ಇವಿಷ್ಟರಲ್ಲಿ ಮಾತ್ರ ಶಬ್ದಾಲಂಕಾರಗಳ ಪ್ರಾಚುರ್ಯವು ಕಂಡುಬರುತ್ತದೆ. ಉಳಿದಂತೆ ಇವು ವಿರಳವೇ. ಮತ್ತೊಂದು ಗಮನಿಸ ಬೇಕಾದ ವಿಷಯವೆಂದರೆ ಮಾಘನ ಕೆಲವು ಯಮಕಾನುಪ್ರಾಸಗಳು ಕೇವಲ ಪಾಂಡಿತ್ಯ ಪ್ರದರ್ಶನಕ್ಕಾಗಿ ಪ್ರಯತ್ನ ಪೂರ್ವಕವಾಗಿ ರಚಿತವಾಗಿರುವುದರಿಂದ ಅವುಗಳಲ್ಲಿ ಸಹಜತೆಯಿಲ್ಲದಿರುವುದು. ಉಪಮೆ ಮತ್ತು ಅರ್ಥಗೌರವಗಳ ವಿಷಯದಲ್ಲಿ ಮಾಘನನ್ನು ಕಾಳಿದಾಸನಿಗೆ ಧಾರಾಳವಾಗಿ ಹೋಲಿಸಬಹುದಾದರೂ ಪದಲಾಲಿತ್ಯದ ವಿಷಯದಲ್ಲಿ ಮಾತ್ರ ಅವನು ಕಾಳಿದಾಸನನ್ನು ಸರಿದೂಗಲಾರ. ಮಾಘನದು ಗೌಡೀಶೈಲಿ. ಕಾಳಿದಾಸನದು ವೈದರ್ಭೀಶೈಲಿ. ವೈದರ್ಭೀಶೈಲಿಯಲ್ಲಿ ಕಂಡುಬರುವ ಸಹಜ ಸುಂದರವಾದ ಪದಗಳ ಜೋಡಣೆ ಸಮಾಸಭೂಯಿಷ್ಠವಾದ ಗೌಡೀಶೈಲಿಯಲ್ಲಿ ಎಂದಿಗೂ ಕಂಡು ಬರುವುದಿಲ್ಲ.

ಮಾಘನ ಶೈಲಿಯ ಪದಾಲಾಲಿತ್ಯಕ್ಕೆ ಒಂದೆರಡು ಉದಾಹರಣೆಗಳನ್ನು ನೋಡಿ—

ರಾಜೀವ ರಾಜೀವಶಲೋಲ ಭೃಂಗಮ್
ಮುಷ್ಣಂತ ಮುಷ್ಣಂ ತತಿಭಿಸ್ತರೂಣಾಮ್ ।
ಕಾಂತಾಲಕಾಂತಾ ಲಲನಾಸ್ಸುರಾಣಾಮ್
ರಕ್ಷೋಭಿರಕ್ಷೋಭಿತಮುದ್ವಹಂತಮ್ ॥ ಶಿಶು. 4.9

"ಪದ್ಮಪಂಕ್ತಿಗಳಲ್ಲಿ ಆಡುತ್ತಿರುವ ದುಂಬಿಗಳಿಂದ ಕೂಡಿರುವ, ದಟ್ಟವಾಗಿ ಬೆಳೆದಿರುವ ಮರಗಳಿಂದ ಬೇಸಿಗೆಯ ಬೇಗೆಯನ್ನು ಹೋಗಲಾಡಿಸುವ, ಸುಂದರವಾದ ಮುಂಗೂದಲುಗಳಿಂದ ಶೋಭಿಸುತ್ತಾ ರಾಕ್ಷಸರ ಉಪಟಳವಿಲ್ಲದೆ ವಿಹರಿಸುತ್ತಿರುವ ದೇವರಮಣಿಯರನ್ನುಳ್ಳ (ರೈವತಕ ಪರ್ವತವನ್ನು ಶ್ರೀಕೃಷ್ಣನು ಕಂಡನು)."

ರೈವತಕ ಪರ್ವತದ ವರ್ಣನೆಯ ಸಂದರ್ಭದಲ್ಲಿ ಬರುವ ಈ ಶ್ಲೋಕವು 'ಸಮಸ್ತ ಪಾದಾದಿಯಮಕ'ದಿಂದ ರಮಣೀಯವಾಗಿದೆ.18

ಇದೇ ಸಂದರ್ಭದಲ್ಲಿ ಬರುವ ಮತ್ತೊಂದು ಶ್ಲೋಕವನ್ನು ನೋಡಿ—

ಇಹಮುಹುರ್ಮುದಿತೈಃ ಕಲಭೈ ರವಃ
ಪ್ರತಿದಿಶಂ ಕ್ರಿಯತೇ ಕಲಭೈರವಃ ।
ಸ್ಫುರತಿಚಾನುವನಂ ಚಮರೀಚಯಃ
ಕನಕರತ್ನಭುವಾಂ ಚ ಮರೀಚಯಃ ॥ ಶಿಶು. 4.60

"ಈ ರೈವತಕ ಪರ್ವತದಲ್ಲಿ ಆನೆಯ ಮರಿಗಳು ಯಥೇಚ್ಛವಾಗಿ ವಿಹರಿಸುತ್ತಾ ಭಯಂಕರವಾಗಿ ಘೀಳಿಡುತ್ತವೆ. ಕಾಡಿನ ಸುತ್ತಲೂ ಹಿಂಡು ಹಿಂಡಾಗಿ ಓಡಾಡುವ ಚಮರೀ ಮೃಗಗಳು ಕಣ್ಣಿಗೆ ಆನಂದವನ್ನುಂಟುಮಾಡುತ್ತವೆ. ಸುವರ್ಣ ಮತ್ತು ರತ್ನಗಳಿಂದ ಕೂಡಿರುವ ಇದರ ಭೂ ಪ್ರದೇಶದಿಂದ ಕಣ್ಣು ಕೋರೈಸುವಂತೆ ಕಿರಣಗಳು ಸೂಸುತ್ತವೆ."

ಮೇಲಿನ ಶ್ಲೋಕಕ್ಕೆ ತದ್ವಿರುದ್ಧವಾಗಿ ಈ ಶ್ಲೋಕದ ಪ್ರತಿಪಾದದ ಕೊನೆಯಲ್ಲೂ ಸುಂದರವಾದ ಯಮಕದಿಂದ ಅಂದರೆ 'ಸಮಸ್ತ ಪಾದಾಂತಯಮಕ'ದಿಂದ ಕೂಡಿದೆ. ಇದರ ಜೊತೆಗೆ ಇಲ್ಲಿ ಪರ್ವತದ ಸಮೃದ್ಧಿಯನ್ನು ವರ್ಣಿಸಿರುವುದರಿಂದ 'ಉದಾತ್ತ'ವೆಂಬ ಅರ್ಥಾಲಂಕಾರವೂ ಸಹ ಇದೆ.

ನವ ಪಲಾಶ ಪಲಾಶವನಂ ಪುರಃ
ಸ್ಫುಟಪರಾಗ ಪರಾಗತ ಪಂಕಜಮ್ ।

ಮೃದುಲತಾಂತಲತಾಂತಮಲೋಕಯತ್
ಸ ಸುರಭಿಂ ಸುರಭಿಂ ಸುಮನೋಭರೈಃ ॥ ಶಿಶು. 6.2

"ನವ ಪಲ್ಲವಗಳಿಂದ ಕೂಡಿದ ಪಲಾಶ (ಮುತ್ತುಗ ಮರ) ವನವನ್ನುಳ್ಳ, ಪರಾಗಗಳಿಂದ ತುಂಬಿ ಚೆನ್ನಾಗಿ ಅರಳಿರುವ ಕಮಲಗಳನ್ನುಳ್ಳ, ಬಿಸಿಲಿನ ಝಳಕ್ಕೆ ಸ್ವಲ್ಪ ಕಂದಿರುವ ಚಿಗುರುಗಳನ್ನುಳ್ಳ ಮತ್ತು ಪುಷ್ಪಗಳ ಸುವಾಸನೆಯಿಂದ ಕೂಡಿರುವ (ವಸಂತ ಋತುವನ್ನು ಶ್ರೀಕೃಷ್ಣನು ನೋಡಿದನು.)"

ಈ ಶ್ಲೋಕದಲ್ಲಿ ಪ್ರತಿಪಾದದಲ್ಲಿಯೂ ಮೊದಲಿನ ಎರಡು ಅಕ್ಷರಗಳಾದ ಬಳಿಕ ಅಕ್ಷರತ್ರಯಾವೃತ್ತಿರೂಪ ಯಮಕವಿರುವುದರಿಂದ ಇದು ಪಠಿಸಲು ಬಹಳ ಸುಶ್ರಾವ್ಯ ವಾಗಿದೆ. ಇದು 'ಸಮಸ್ತಪಾದ ಮಧ್ಯಯಮಕ'ಕ್ಕೆ ಉದಾಹರಣೆ.

ಬಂಧ ವೈಷಮ್ಯ ರಹಿತವಾದ ಪದಗುಂಫನದಿಂದ ಕೂಡಿರುವುದರಿಂದ 'ಸಮತಾ' ಎಂಬ ಗುಣ ವಿಶೇಷದಿಂದ ಕೂಡಿರುವ ಕೆಳಗಿನ ಶ್ಲೋಕವನ್ನು ನೋಡಿ—

ಮಧುರಯಾ ಮಧುಬೋಧಿತ ಮಾಧವೀಮಧು ಸಮೃದ್ಧಿ ಸಮೇಧಿತಮೇಧಯಾ ।
ಮಧುಕರಾಂಗನಯಾ ಮುಹುರುನ್ಮದಧ್ವನಿಭೃತಾ ನಿಭೃತಾಕ್ಷರಮುಜ್ಜಗೇ ॥19
—ಶಿಶು. 6.20

"ವಸಂತ ಕಾಲದಲ್ಲಿ ವಿಕಸಿತವಾಗಿರುವ ಮಾಧವೀ ಕುಸುಮಗಳ ಮಧುಪಾನದಿಂದ ಮತ್ತವಾಗಿರುವ ಮಧುಕರಿಗಳು ಮತ್ತೇರಿಸುವಂತೆ ಮತ್ತೆ ಮತ್ತೆ ಜೋರಾಗಿ ಝೇಂಕರಿಸಲು ಪ್ರಾರಂಭಿಸಿದವು."

ಈ ಶ್ಲೋಕವು ಅನುಪ್ರಾಸದಿಂದಾಗಿ ಅತಿಮನೋಹರವಾಗಿದೆ.

ವಿಕಚ ಕಮಲ ಗಂಧೈರಂಧಯುನ್ ಭೃಂಗಮಾಲಾಃ
ಸುರಭಿತ ಮಕರಂದಂ ಮಂದಮಾವಾತಿ ವಾತಃ ।
ಪ್ರಮುದ ಮದನಮಾದ್ಯ ದ್ಯೌವನೋದ್ದಾಮರಾಮಾ
ರಮಣರಭಸಖೇದ ಸ್ವೇದ ವಿಚ್ಛೇದ ದಕ್ಷಃ ॥20 ಶಿಶು. 11.19

"ಕಾಮೋನ್ಮತ್ತರಾದ ಏರುಂಜವ್ವನೆಯರು ತಮ್ಮ ರಮಣರೊಡನೆ ಮಾಡಿದ ರತಿಕ್ರೀಡೆಯ ರಭಸದಿಂದ ಉಂಟಾದ ಸ್ವೇದಬಿಂದುಗಳನ್ನು ಹೋಗಲಾಡಿಸುವಲ್ಲಿ ದಕ್ಷವಾದ, ಅರಳಿದ ಕಮಲಗಳ ಸೌರಭದಿಂದ ದುಂಬಿಗಳನ್ನು ಮತ್ತೇರಿಸುವ ಮತ್ತು ಪುಷ್ಪಗಳ ಮಕರಂದವನ್ನು ಸುಗಂಧಯುಕ್ತವಾಗಿ ಮಾಡುವ ಪ್ರಭಾತ ಮಾರುತವು ಮಂದವಾಗಿ ಚಲಿಸುತ್ತಿದೆ."

ಪ್ರತ್ಯೂಷವರ್ಣನೆಯಲ್ಲಿ ಬರುವ ಬಹಳ ಸುಂದರವಾದ ಶ್ಲೋಕವಿದು. ಕವಿಯು ಇದರಲ್ಲಿ ಉಷಃಕಾಲದ ಶೈತ್ಯ, ಮಾಂದ್ಯ ಮತ್ತು ಸೌರಭ್ಯಗಳಿಂದ ಕೂಡಿದ ಮಾರುತವನ್ನು ವರ್ಣಿಸುತ್ತಾನೆ.

* * * *

'ಮಾಘೇ ಸನ್ತಿ ತ್ರಯೋಗುಣಾಃ' ಎಂಬ ಪ್ರಶಂಸೆಯು ಯಾರೋ ಮಾಘನ ಅಭಿಮಾನಿಯಾದ ಸಹೃದಯನೊಬ್ಬನ ಮಾತೆಂಬುದರಲ್ಲಿ ಸಂಶಯವಿಲ್ಲ. ಆದರೂ ಅವನ ಮಾತಿನಲ್ಲಿ ತಥ್ಯವಿಲ್ಲದಿಲ್ಲ. ಕಾಳಿದಾಸನ ಉಪಮೆಗಳು ಬಹಳ ಸುಂದರವೆಂದ ಮಾತ್ರಕ್ಕೆ ಅವನಲ್ಲಿ ಅರ್ಥಗೌರವವಾಗಲೀ ಪದಲಾಲಿತ್ಯವಾಗಲೀ ಇಲ್ಲವೆಂದು ಅರ್ಥ ಮಾಡಲಾಗದು. ಇದರಂತೆಯೇ ದಂಡಿ ಮತ್ತು ಭಾರವಿ ಯಾವುದೋ ಒಂದು ಗುಣದಲ್ಲಿ ವಿಶಿಷ್ಟರು ಎಂದ ಮಾತ್ರಕ್ಕೆ ಉಳಿದ ಗುಣಗಳು ಅವರಲ್ಲಿ ಇಲ್ಲವೇ ಇಲ್ಲವೆಂದರ್ಥವಲ್ಲ. ಮೇಲೆ ಹೇಳಿದ ಎಲ್ಲಾ ಗುಣಗಳೂ ಎಲ್ಲಾ ಕವಿಗಳಲ್ಲೂ ಸಾಕಷ್ಟು ಪ್ರಮಾಣದಲ್ಲಿ ಕಂಡು ಬರುತ್ತವೆ. ಇಲ್ಲಿ ಸಹೃದಯ ವಿಮರ್ಶಕನು ಆಯಾಯಾ ಕವಿಗಳ ಪ್ರಧಾನ ಗುಣಗಳನ್ನು ಗುರುತಿಸುತ್ತಿದ್ದಾನೆಂಬುದು ಸ್ಪಷ್ಟವಿದೆ. ಹಾಗೆ ನೋಡಿದರೆ ಮೇಲೆ ಹೇಳಿದ ಎಲ್ಲಾ ಗುಣಗಳಲ್ಲೂ ಕಾಳಿದಾಸನು ಉಳಿದ ಕವಿಗಳಿಗಿಂತ ಎತ್ತರದಲ್ಲಿ ನಿಲ್ಲುತ್ತಾನೆಂಬುದರಲ್ಲಿ ಸಂಶಯವಿಲ್ಲ. ಆದ್ದರಿಂದ ಈ ಶ್ಲೋಕವನ್ನು ಸರಿಯಾದ ಹಿನ್ನೆಲೆಯಲ್ಲಿ ನೋಡಿದಾಗ ಮಾತ್ರ ನಮಗೆ ಅದರ ಮರ್ಮವು ತಿಳಿಯುತ್ತದೆ.

ಅಡಿಟಿಪ್ಪಣಿಗಳು :

1) 'ದಂಡಿನ : ಪದಲಾಲಿತ್ಯಂ' ಗೆ ಬದಲಾಗಿ 'ನೈಷಧೇ ಪದಲಾಲಿತ್ಯಂ' ಎಂದು ಹೇಳುವ ವಾಡಿಕೆಯೂ ಇದೆ. ಈ ಶ್ಲೋಕದಲ್ಲಿ ಬರುವ ಕಾಳಿದಾಸ, ಭಾರವಿ, ದಂಡಿ ಮತ್ತು ಮಾಘ ಎಂಬ ಹೆಸರುಗಳು ಕಾಲಾನುಕ್ರಮವನ್ನು ಸೂಚಿಸುವಂತಿರುವುದನ್ನು ಗಮನಿಸಿ.

2) ಸ್ವತಃ ಮಾಘನೂ ಕೆಲವೆಡೆ ಇಂತಹುದೇ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವುದನ್ನು ನೋಡಬಹುದು.

ಬಹ್ವಪಿ ಸ್ವೇಚ್ಛಯಾ ಕಾಮಂ ಪ್ರಕೀರ್ಣಮಭಿಧೀಯತೇ ।
ಅನುಜ್ಝಿತಾರ್ಥ ಸಂಬಂಧಃ ಪ್ರಬಂಧೋ ದುರುದಾಹರಃ ॥ ಶಿಶು. 2.73

"ಸ್ವೇಚ್ಛೆಯಿಂದ ಅಸಂಗತವಾಗಿ ಏನನ್ನಾದರೂ ಹೇಳಬಹುದು. ಆದರೆ ಅರ್ಥ ಗರ್ಭಿತವಾದ ಪ್ರಬಂಧವನ್ನು ರಚಿಸುವುದು ಕಷ್ಟ.

ನೋಡಿ – ಶಿಶು. 2.74, 83, 86 ಮತ್ತು 4. 17

3) ಕ್ರಿ. ಶ. 7–8ನೇ ಶತಮಾನದವನಾದ ಮಾಘನು ಶಿಶುಪಾಲವಧದಲ್ಲಿ ಒಟ್ಟು 62 ಅರ್ಥಾಲಂಕಾರಗಳನ್ನು ಉಪಯೋಗಿಸಿದ್ದಾನೆ. ಪ್ರಪ್ರಥಮವಾಗಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಅಲಂಕಾರಗಳನ್ನು ಉಪಯೋಗಿಸಿರುವ ಕವಿಯೆಂದರೆ ಮಾಘನೊಬ್ಬ. ಮಾಘನ ಕಾಲದ ಲಾಕ್ಷಣಿಕರೂ ಇಷ್ಟೊಂದು ಅಲಂಕಾರಗಳನ್ನು ಹೇಳಿಲ್ಲ. ಕ್ರಿ.ಶ. 9ನೇ ಶತಮಾನದವರೆಗಿನ ಆಲಂಕಾರಿಕರಲ್ಲಿ ನಮಗೆ ಕಂಡು ಬರುವುದು ಸುಮಾರು 40 ಅಲಂಕಾರಗಳು ಮಾತ್ರ.

4) ದಂಡಿ (ಕಾವ್ಯಾದರ್ಶ. 2. 38) ಮುಂತಾದ ಕೆಲವು ಪ್ರಾಚೀನಾಲಂಕಾರಿಕರು ಇದನ್ನು 'ಅಭೂತೋಪಮೆ' ಎಂದು ಗುರ್ತಿಸುತ್ತಾರಾದರೂ ಇಲ್ಲಿ ಉಪಮಾನವು ಅಸಿದ್ಧವಾದುದಾದ್ದರಿಂದ ನವೀನಾಲಂಕಾರಿಕರು ಇದನ್ನು ಸ್ವರೂಪೋತ್ಪ್ರೇಕ್ಷೆಯಲ್ಲಿ ಪರಿಗಣಿಸುತ್ತಾರೆ.

5) ಲಕ್ಷ್ಮೀಃ ಪದ್ಮಾಲಯಾ–ಅಮರಕೋಶ

6) 'ಚಪಲಾ ಕಮಲಾವಿದ್ಯುತ್ಪುಂಶ್ಚಲೀ ಪಿಪ್ಪಲೀಷುಚ' – ವಿಶ್ವಕೋಶ.

7) 'ಜ್ವಾಲೇವ' ಎಂಬಲ್ಲಿ 'ಇವ' ಶಬ್ದವು ಉತ್ಪ್ರೇಕ್ಷಾ ಸೂಚಕವೇ ಹೊರತಾಗಿ ಉಪಮಾ ಸೂಚಕವಲ್ಲ. ಇಂತಹ ಜ್ವಾಲೆಯು ಅಸಿದ್ಧವಾದುದರಿಂದ ಅದು ಉಪಮಾನವಾಗಲಾರದು. 'ಇವ' ಶಬ್ದದಿಂದಲೂ ಕೆಲವೊಮ್ಮೆ ಉತ್ಪ್ರೇಕ್ಷೆಯು ಸೂಚಿಸಲ್ಪಡುತ್ತದೆಂಬುದನ್ನು ಸ್ವತಃ ದಂಡಿಯೇ ಹೇಳಿದ್ದಾನೆ–

ಮನ್ಯೇ ಶಂಕೇ ಧ್ರುವಂ ನೂನಂ ಪ್ರಾಯ ಇತ್ಯೇವಮಾದಿಭಿಃ ।
ಉತ್ಪ್ರೇಕ್ಷಾ ವ್ಯಜ್ಯತೇ ಶಬ್ದೈರಿವಶಬ್ದೋಽಪಿ ತಾದೃಶಃ ॥
ಕಾವ್ಯಾದರ್ಶಕ 2.234.

8) ಸಾಮಾನ್ಯಂ ಯದಿ ಸಾದೃಶ್ಯಾದ್ವಿಶೇಷೋ ನೋಪಲಕ್ಷ್ಯತೇ ।
ಚಂದ್ರಾಲೋಕ 5–146

9) ಇದನ್ನು ಧ್ವನ್ಯಾಲೋಕದಲ್ಲಿ ಉತ್ಪ್ರೇಕ್ಷಾಧ್ವನಿಯ ಉದಾಹರಣೆಯಾಗಿ ಕೊಡಲಾಗಿದೆ. ನೋಡಿ–ಧ್ವನ್ಯಾಲೋಕ 2. 27ರ ಅಡಿಯಲ್ಲಿ. ಈ ಶ್ಲೋಕದಲ್ಲಿ ಉತ್ಪ್ರೇಕ್ಷಾ ಸೂಚಕಗಳಾದ ಇವ, ನೂನಂ, ಖಲು, ಮನ್ಯೇ ಇತ್ಯಾದಿ ಯಾವ ಶಬ್ದವೂ ಇಲ್ಲದಿರುವುದರಿಂದ ಉತ್ಪ್ರೇಕ್ಷೆಯು ಸಾಕ್ಷಾದನುಕ್ತವಾಗಿ ಕೇವಲ ಗಮ್ಯ ಮಾತ್ರವಾಗಿದೆ. ಆದ್ದರಿಂದಲೇ ಆನಂದ ವರ್ಧನನು – 'ಉತ್ಪ್ರೇಕ್ಷಾ ಸಾಕ್ಷಾದನುಕ್ತಾಪಿ ವಾಕ್ಯಾರ್ಥ ಸಾಮರ್ಥ್ಯಾದನುರಣನ ರೂಪಾ ಲಕ್ಷ್ಯತೇ. ನಚೈವಂ ವಿಧೇ ವಿಷಯೇ ಇವಾದಿಶಬ್ದ ಪ್ರಯೋಗಮಂತರೇಣಾ ಸಂಬದ್ಧತೈವೇತಿ ಶಕ್ಯತೇ ವಕ್ತುಂ, ಗಮಕತ್ವಾತ್' (2.27) ಎಂದು ಹೇಳುತ್ತಾನೆ.

10) ಸಾಹಿತ್ಯ ದರ್ಪಣಕಾರನು ಈ ಶ್ಲೋಕವನ್ನು ವರ್ಣಶ್ಲೇಷೆಯ ಉದಾಹರಣೆಯಾಗಿ ಕೊಟ್ಟಿದ್ದಾನೆ. ವಿಶ್ವನಾಥನು ಈ ಶ್ಲೋಕದ 'ವಿಧೌ' ಶಬ್ದದಲ್ಲಿ ಬಹಳ ಸೊಗಸಾದ ವರ್ಣ ಶ್ಲೇಷೆಯನ್ನು ತೋರಿಸುತ್ತಾನೆ. 'ವಿಧೌ' ಅನ್ನುವ ರೂಪವು 'ವಿಧಿ' ಮತ್ತು 'ವಿಧು' ಈ ಎರಡೂ ಶಬ್ದಗಳ ಸಪ್ತಮೀ ಏಕವಚನವಾಗುತ್ತದೆ. ಮಲ್ಲಿನಾಥನು ಕೇವಲ 'ವಿಧಿ' ಶಬ್ದದ ರೂಪವಾಗಿ ಗ್ರಹಿಸಿ ಅರ್ಥ ಹೇಳಿದ್ದರೆ ವಿಶ್ವನಾಥನು 'ವಿಧು' ಶಬ್ದ ರೂಪವಾಗಿಯೂ

ಪರಿಗಣಿಸಿ ವಿವರಿಸುತ್ತಾನೆ. ಅವನ ಪ್ರಕಾರ ವಿಧುವು ಅಂದರೆ ಚಂದ್ರನು ವಿಪರೀತನಾದರೂ ಬಹು ಸಾಧನತೆಯು ವ್ಯರ್ಥವಾಗುತ್ತದೆ. ಏಕೆಂದರೆ ಜ್ಯೋತಿಷಶಾಸ್ತ್ರದ ಪ್ರಕಾರ ಚಂದ್ರನು ವಾಮಭಾಗದಲ್ಲಿ ಅಥವಾ ಪೃಷ್ಠಭಾಗದಲ್ಲಿದ್ದರೆ ಅದು ಅಶುಭ—

ಸಂಮುಖೇಹ್ಯರ್ಥಲಾಭಾಯ ದಕ್ಷಿಣೇ ಸುಖಸಂಪದಃ ।
ಪೃಷ್ಠತೋ ಮರಣಂಚೈವ ವಾಮೇ ಚಂದ್ರೇ ಧನಕ್ಷಯಃ ॥

ಇಲ್ಲಿ ವಿಧುವು ವಿಪರೀತನಾಗುವುದೆಂದರೆ ವಾಮಪಾರ್ಶ್ವದಲ್ಲಿ ಅಥವಾ ಪೃಷ್ಠಭಾಗದಲ್ಲಿರುವುದೆಂದರ್ಥ. ಸೂರ್ಯಾಸ್ತದ ಸಮಯದಲ್ಲಿ ಚಂದ್ರನು ಪೃಷ್ಠಭಾಗದಲ್ಲಿರುವುದರಿಂದ ಸೂರ್ಯನಿಗೆ ಮರಣ (ಅಸ್ತ) ತಪ್ಪಿದ್ದಲ್ಲ.
ನೋಡಿ—ಸಾಹಿತ್ಯದರ್ಪಣ 10-11-12, ವೃತ್ತಿ.

11) ಅನ್ಯೋನ್ಯಂ ನಾಮ ಯತ್ರ ಸ್ಯಾದುಪಕಾರಃ ಪರಸ್ಪರಮ್ ।
ತ್ರಿಯಾಮಾ ಶಶಿನಾಭಾತಿ ಶಶೀಭಾತಿ ತ್ರಿಯಾಮಯಾ ॥ ಚಂದ್ರಾಲೋಕ 5.93
ಜಯದೇವನೂ ಮಾಘನ ಉದಾಹರಣೆಯನ್ನೆ ಕೊಟ್ಟಿರುವುದನ್ನು ಗಮನಿಸಿ.

12) ಪ್ರಭಾತ ವರ್ಣನೆಯ ಅದ್ಭುತವಾದ ಈ ಶ್ಲೋಕದಿಂದ ಬಹುವಾಗಿ ಸಂತುಷ್ಟನಾದ ಭೋಜರಾಜನು ಮಾಘಕವಿಗೆ ಮೂರು ಲಕ್ಷ ಹೊನ್ನುಗಳನ್ನು ಕೊಟ್ಟನೆಂದು ಭೋಜಪ್ರಬಂಧದ ಕಥೆಯೊಂದು ತಿಳಿಸುತ್ತದೆ.

13) ಪುರದ್ವಾರಂ ತು ಗೋಪುರಂ—ಅಮರಕೋಶ
ಪುರಂ ಪುರಿ ಶರೀರೇ ಚ—ವಿಶ್ವಕೋಶ
ಇಂದ್ರಪ್ರಸ್ಥಪುರಕ್ಕೆ ಅನ್ವಯಿಸುವಂತೆ 'ಗೋಪುರ'ವೆಂದರೆ 'ಊರ ಬಾಗಿಲು' ಮತ್ತು ಶರೀರಕ್ಕೆ ಅನ್ವಯಿಸುವಂತೆ 'ದ್ವಾರ ಮಾತ್ರ' ವೆಂದರ್ಥ.

ಜೀವನು ಮುಕ್ತಿಯನ್ನು ಹೊಂದುವವರೆಗೂ ಲಿಂಗಶರೀರ ಅಥವಾ ಸೂಕ್ಷ್ಮ ಶರೀರದೊಡನೆ ದೇಹಾಂತರಗಳನ್ನು ಹೊಂದುತ್ತಿರುತ್ತಾನೆ. ಅವನಿಗೆ ಕೊನೆಯವರೆಗೂ ಅಂದರೆ ಮುಕ್ತನಾಗುವವರೆಗೂ ಲಿಂಗಶರೀರ ಮತ್ತು ಅದರೊಡನಿರುವ ಪಂಚೇಂದ್ರಿಯಗಳ ಸಂಪರ್ಕ ತಪ್ಪುವುದಿಲ್ಲ. 'ಜೀವೋಹಿ ದೇಹಾದ್ದೇಹಾಂತರಂ ಪೂರ್ವೇಂದ್ರಿಯೈಸ್ಸಹ ಪ್ರವಿಶತಿ. ಲಿಂಗ ಶರೀರಸ್ಯಾನ ಪಾಯಾತ್' – ಮಲ್ಲಿನಾಥ, 13.28 ವ್ಯಾಖ್ಯಾನ.

ನವದ್ವಾರಗಳೆಂದರೆ – 'ನೇತ್ರೇ ನಾಸಿಕೇ ಕರ್ಣೌ ಮುಖಂ ಚೇತಿ ಸಪ್ತ ಶಿರೋಗತಾನಿ ಅಧೋಗತೇ ದ್ವೇ ಪಾಯೂಪಸ್ಥರೂಪೇ ಇತ್ಯೇವಂ ನವದ್ವಾರಾಣಿ', ಭಗವದ್ಗೀತೆ 5.13, ಶ್ರೀಧರೀಯವ್ಯಾಖ್ಯಾನ.

ಮಾಘನ ಈ ಶ್ಲೋಕಗಳನ್ನು ಭಗವದ್ಗೀತೆಯ ಕೆಳಗಿನ ಎರಡು ಶ್ಲೋಕಗಳೊಡನೆ ಹೋಲಿಸಿ-

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿ ಗೃಹ್ಣಾತಿ ನರೋಽಪರಾಣಿ ।
ತಥಾ ಶರೀರಾಣಿ ವಿಹಾಯ ಜೀರ್ಣಾನ್ಯನ್ಯಾನಿ ಸಂಯಾತಿ ನವಾನಿ ದೇಹೀ ॥
ಭಗ. 2.22

ಸರ್ವಕರ್ಮಾಣಿ ಮನಸಾ ಸನ್ಯಸ್ಯಾಸ್ತೇ ಸುಖಂ ವಶೀ ।
ನವದ್ವಾರೇ ಪುರೇ ದೇಹೀ ನೈವಕುರ್ವನ್ನ ಕಾರಯನ್ ॥ ಭಗ 5.13

14) ಶ್ಯಾಮಾಯೌವನಮಧ್ಯಸ್ಥಾ – ಉತ್ಪಲಕೋಶ. ನಡುಯೌವನದ ಯುವತಿಯೆಂದರ್ಥ.

15) 'ನೀರೊಳಗಿರ್ದುಂ ಬೆಮರ್ತನ್ (ಗದಾ 7.22)' ಅನ್ನುವ ರನ್ನನ ಬಹಳ ಪ್ರಸಿದ್ಧವಾದ ಕಲ್ಪನೆಯು ಮಾಘನ ಈ ಶ್ಲೋಕದಿಂದ ಪ್ರಭಾವಿತವಾಗಿರುವಂತೆ ತೋರುತ್ತದೆ. ಮಾಘನ ಸುಂದರಿಯು ಈರ್ಷ್ಯಾ–ಉನ್ಮತ್ತಳಾಗಿ ನೀರಿನಲ್ಲಿದ್ದೂ ಬೆವರಿದ್ದರೆ ರನ್ನನ ದುರ್ಯೋಧನನು ಕ್ರೋಧೋನ್ಮತ್ತನಾಗಿ ನೀರಿನಲ್ಲಿದ್ದೂ ಬೆವರುತ್ತಾನೆ.

16) 'ಸ್ಫುಟತಾ ನ ಪದೈರಪಾಕೃತಾ ನ ಚ ನ ಸ್ವೀಕೃತಮರ್ಥಗೌರವಮ್'. –ಕಿರಾತ. 2.27 ಭಾರವಿಯ ಈ ಮಾತು 'ಭಾರವೇರರ್ಥಗೌರವಂ' ಅನ್ನುವ ಉದ್ಗಾರಕ್ಕೆ ಪ್ರೇರಕವಾಗಿರಬಹುದು. ಭಾರವಿಯು ಇದೇ ರೀತಿಯ ಅಭಿಪ್ರಾಯವನ್ನು ಇನ್ನೂ ಕೆಲವು ಕಡೆ ವ್ಯಕ್ತಪಡಿಸುತ್ತಾನೆ.
ನೋಡಿ – ಕಿರಾತ. 1.3, 11.40, 14.5.

17) ಹೋಲಿಸಿ – ಅಭಿಜ್ಞಾನ ಶಾಕುಂತಲ, 4.6, 12.

18) ಅನುಕ್ರಮವಾಗಿ 4 ಪಾದಗಳ ಪ್ರಾರಂಭದಲ್ಲೂ ಇರುವ 'ರಾಜೀವ ರಾಜೀವ', 'ಮುಷ್ಣಂತ ಮುಷ್ಣಂತ', 'ಕಾಂತಾಲ ಕಾಂತಾಲ' ಮತ್ತು 'ರಕ್ಷೋಭಿ ರಕ್ಷೋಭಿ' ಯಮಕಗಳನ್ನು ಗಮನಿಸಿ.

19) ಸಾಹಿತ್ಯ ದರ್ಪಣದಲ್ಲಿ ಈ ಶ್ಲೋಕವನ್ನು ಪಾಂಚಾಲೀ ಶೈಲಿಗೆ ಉದಾಹರಣೆಯನ್ನಾಗಿ ಕೊಡಲಾಗಿದೆ. ನೋಡಿ – ಸಾಹಿ.ದ. 9–4 ವೃತ್ತಿ.
'ಸಮಂ ಬಂಧೇಷ್ವವಿಷಮಂ' – ಕಾವ್ಯಾದರ್ಶ. 1–47

20) ಮಲ್ಲಿನಾಥನಿಗೆ ಬಹಳ ಮೆಚ್ಚಿಗೆಯಾದ ಶ್ಲೋಕವಿದು. ಆಚಾರ್ಯ ದಂಡಿಯು ಹೇಳುವ ದಶಗುಣಗಳೂ ಈ ಪದ್ಯದಲ್ಲಿ ಸಮಾವೇಶಗೊಂಡಿವೆಯೆಂಬುದಾಗಿ ಅವನು ಅಭಿಪ್ರಾಯ ಪಡುತ್ತಾನೆ. ನೋಡಿ ಶಿಶು. 11.19 ವ್ಯಾಖ್ಯಾನ.

ಕಂಬರಾಮಾಯಣದಲ್ಲಿ ಸರ್ವಧರ್ಮ ಸಮನ್ವಯದೃಷ್ಟಿ

ಸಾ. ಶ. ಶ್ರೀನಿವಾಸ

ವಾಲ್ಮೀಕಿ ರಾಮಾಯಣವು ಆ ಕಾಲದ ಜನಮನದ ಸಂಸ್ಕೃತಿಯ ಅಥವಾ ಒಂದು ಧರ್ಮದ ಪ್ರತೀಕವಾಗಿ ಮಾತ್ರ ಉಳಿಯಲಿಲ್ಲ. ಕಾಲ, ದೇಶ ಧರ್ಮಗಳನ್ನು ಮೀರಿ ಕಾಲಕಾಲಕ್ಕೆ ಬೆಳೆದುಬಂದ ಭಾರತೀಯ ಆದರ್ಶಗಳನ್ನು, ಮೌಲ್ಯಗಳನ್ನು ಬೇರೆ ಬೇರೆ ಭಾಷೆಗಳಲ್ಲಿ ಅಭಿವ್ಯಕ್ತಿಸುವ ಮೂಲ ಶಕ್ತಿಯಾಗಿ, ಒಟ್ಟು ಪರಂಪರೆಯ ಸಂಕೇತವಾಗಿ ಅದು ನೆಲೆಗೊಂಡಿತು. ಮೂಲ ವೈದಿಕ ಪರಂಪರೆಯ ಈ ಮಹಾಕಾವ್ಯದ ಕಥಾ ಸಂದರ್ಭಗಳು, ಜೈನ, ಬೌದ್ಧ ಧರ್ಮ ಪರಂಪರೆಯಲ್ಲಿ ಬೇರೆ ಬೇರೆ ರೂಪಗಳಲ್ಲಿ ಮೈದೋರಿ ಜನಪ್ರಿಯವಾದವು. ಆಯಾ ಧರ್ಮಗಳ ತಾತ್ವಿಕ ನೆಲೆಗಳಲ್ಲಿ ಅದನ್ನು ಅರ್ಥೈಸುವ ಪ್ರಯತ್ನಗಳು ನಡೆದವು. ಭೌಗೋಳಿಕವಾಗಿಯೂ ಅದು ಭಾರತದ ಎಲ್ಲೆಯನ್ನು ದಾಟಿ, ಟಿಬೆಟ್, ಜಾವಾ, ಬಾಲಿ, ಸುಮಾತ್ರ, ಸಯಾಂ, ಇಂಡೋನೇಶಿಯಾ, ಕಾಂಬೋಡಿಯ ಮೊದಲಾದ ಏಶಿಯಾ ಖಂಡದ ಇತರ ಭಾಗಗಳಲ್ಲಿ ಪ್ರತಿಧ್ವನಿಸಿ ಆ ನೆಲಗಳ ಜನಜೀವನದ ಸಂಸ್ಕೃತಿಯಲ್ಲಿ ಬೆರೆತು ಮತಧರ್ಮಗಳನ್ನು ಮೀರಿದ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಲು, ಸಶಕ್ತವಾದ ಪಾತ್ರಗಳನ್ನು ವಹಿಸಿತು. ವಿಶ್ವದ ಹಲವು ಭಾಷೆಗಳಲ್ಲಿ ರಾಮಾಯಣವು ಮರುಹುಟ್ಟು ಪಡೆಯುತ್ತ, ಶಿಲ್ಪ, ಸಂಗೀತ, ಚಿತ್ರಕಲೆ, ನಾಟ್ಯ, ನಾಟಕ ಮೊದಲಾದ ಸಂಸ್ಕೃತಿ ಕಲಾಚಾರಗಳಲ್ಲಿ ಹೊಸ ಅಭಿವ್ಯಕ್ತಿಯನ್ನು ಪಡೆಯುತ್ತ, ಕಾಲ ಧರ್ಮಕ್ಕನುಗುಣವಾದ ರೂಪು ತಳೆಯುತ್ತಿರುವುದನ್ನು ನಾವು ಕಾಣುತ್ತೇವೆ. ಮೂಲ ಕಾವ್ಯದ ಪರಿಕಲ್ಪನೆಯನ್ನು ಬಂಡವಾಳವಾಗಿರಿಸಿಕೊಂಡು, ಯುಗಧರ್ಮದಿಂದ ಮೂಡಿಬಂದ ಹೊಸ ಆಲೋಚನೆ, ಚಿಂತನೆ, ದರ್ಶನಗಳನ್ನು ನಮ್ಮ ಪ್ರಾಚೀನ ಅರ್ವಾಚೀನ ಕವಿಗಳು ಪ್ರಕಟಗೊಳಿಸುತ್ತ ಬಂದಿದ್ದಾರೆ.

ತಮಿಳಿನಲ್ಲಿ ಕ್ರಿ.ಶ. 11ನೆಯ ಶತಮಾನದಲ್ಲಿ ರೂಪುತಳೆದ ಕಂಬ ರಾಮಾಯಣವೂ ಇದಕ್ಕೆ ಅಪವಾದವಲ್ಲ. ತಮಿಳು ನಾಡು, ನುಡಿ, ಸಂಸ್ಕೃತಿಯ ಸಮಗ್ರ ದರ್ಶನವುಳ್ಳ

ಕಂಬ ಮಹಾಕವಿಯು ಮೂಲ ವಾಲ್ಮೀಕಿ ರಾಮಾಯಣದಿಂದಲೆ, ಕಥಾವಸ್ತುವಿನ ನಕ್ಷೆಯನ್ನು ಸಿದ್ಧಪಡಿಸಿಕೊಂಡು, ತನ್ನ ದರ್ಶನ, ಅಭಿವ್ಯಕ್ತಿಯಲ್ಲಿ ಅದು ಹೊಸತೊಂದು ಮಹಾಕಾವ್ಯವಾಗಿ ಸೃಷ್ಟಿಯಾಗುವಂತೆ ನಿರೂಪಿಸಿದ್ದಾನೆ. ಕಾವ್ಯಶಿಲ್ಪ, ದರ್ಶನ ಸನ್ನಿವೇಶ ನಿರ್ಮಾಣ, ಪ್ರಾದೇಶಿಕ ಲಕ್ಷಣ, ಪಾತ್ರ ಸಂಯೋಜನೆಗಳಲ್ಲಿ ಕಂಬರು ಸ್ವಂತಿಕೆ, ಕಲಾವಂತಿಕೆಗಳನ್ನು ತಂದು ಮಹಾಪ್ರತಿಭೆಯನ್ನು ತೋರಿದ್ದಾರೆ.

ಕಂಬರಾಮಾಯಣವು ತಮಿಳಿನಲ್ಲಿ ರಾಮಾಯಣ ಕಥೆಯನ್ನು ಪೂರ್ಣವಾಗಿ ಒಳಗೊಂಡ ಮೊತ್ತಮೊದಲ ಮಹಾಕಾವ್ಯವಾಗಿ ಕಾಣಿಸಿಕೊಂಡಿತು. ಕ್ರಿಸ್ತಶಕೆಯ ಪೂರ್ವದಲ್ಲೇ ತನ್ನ ಸಾಹಿತ್ಯ ಸಂಪದವನ್ನು ವಿಸ್ತರಿಸಿಕೊಂಡಿರುವ ತಮಿಳಿನಲ್ಲಿ ರಾಮಾಯಣ ಕಾವ್ಯವು ಈ ಮೊದಲು ಇರಲಿಲ್ಲವೆಂದು ಇದರ ಅರ್ಥವಲ್ಲ. ಅಗವಲ್ ಛಂದಸ್ಸಿನಲ್ಲಿ ರಚಿಸಿದ ರಾಮಾಯಣವೊಂದು ಕಂಬರ ಕಾಲಕ್ಕೆ ಮುಂಚೆಯೇ ಇತ್ತೆಂಬುದಕ್ಕೆ ಆ ರಾಮಾಯಣದ ಐದು ಬಿಡಿ ಪದ್ಯಗಳು ಮಾತ್ರ ಸಾಕ್ಷಿಯಾಗಿ ಉಳಿದಿವೆ. ಜೈನ ಪರಂಪರೆಯ ರಾಮಾಯಣದ ಕೆಲವು ಪದ್ಯಗಳೂ ರಾಮಾಯಣದ ಕುರುಹನ್ನು ಉಳಿಸಿವೆ. ಆದರೆ ಸಮಗ್ರ ರೂಪದ ರಾಮಾಯಣವು ಲಭ್ಯವಾಗಬೇಕಾದರೆ ಕಂಬರ ಕಾಲದವರೆಗೆ ತಮಿಳರು ನಿರೀಕ್ಷಿಸಬೇಕಾಯಿತು. ಕಂಬರಾಮಾಯಣವು ರಚನೆಯಾದ ಮೇಲೂ ಅಂಥದೊಂದು ಮಹಾಕಾವ್ಯ ತಮಿಳಿನಲ್ಲಿ, ಮತ್ತೆ ಸೃಷ್ಟಿ ಯಾಗಲಿಲ್ಲ. ಕಂಬರ ಮಹಾಪ್ರತಿಭೆಯು, ಮುನ್ನಿನ ಹಾಗೂ ಅನಂತರದ ರಾಮಾಯಣ ಕಬ್ಬಗಳನ್ನೆಲ್ಲ ಇಕ್ಕಿ ಮೆಟ್ಟಿದುದರಿಂದಲೇ ಕಂಬ ರಾಮಾಯಣವು ಏಕಮೇವಾ ದ್ವಿತೀಯವಾಗಿ ತಮಿಳಿನಲ್ಲಿ ಶಾಶ್ವತವಾಗಿ ಜನರ ಹೃದಯದಲ್ಲಿ ನೆಲಸಿತು ಎಂಬುದು, ವಿದ್ವಾಂಸರನೇಕರ ಅಭಿಪ್ರಾಯ.

ಕಂಬರು ರಾಮನನ್ನು ಅವತಾರ ಪುರುಷನೆಂದು ನಂಬಿರುವುದರಿಂದ, ತಮ್ಮ ಕಾವ್ಯವನ್ನು 'ರಾಮಾವತಾರಂ' ಎಂದು ಕರೆದಿದ್ದಾರೆ. ಅವರ ಕಾಲಕ್ಕಾಗಲೇ ರಾಮ ಕಥೆಯು ಜನಜನಿತವಾಗಿ ತಮಿಳು ಜನರ ಸಂಸ್ಕೃತಿಯಲ್ಲಿ ನೆಲೆಯೂರಿತ್ತು. ಪ್ರಾಚೀನ ಸಂಘ ಸಾಹಿತ್ಯದ 'ಪುಜನಾನೂಱು' ಮತ್ತು 'ಅಗನಾನೂಱು'ಗಳಲ್ಲಿ ರಾಮಾಯಣ ಕಥೆಯ ಕೆಲವು ದೃಷ್ಟಾಂತಗಳು, ಉಲ್ಲೇಖಗಳು ಕಾಣಿಸಿಕೊಂಡಿವೆ. ಪುಜನಾನೂಱಿನ ಪದ್ಯವೊಂದರಲ್ಲಿ ನರ್ತಕಿಯೊಬ್ಬಳು ಚೋಳರಾಜನಿಂದ ಹಲವು ಆಭರಣಗಳನ್ನು ಮೆಚ್ಚುಗೆಯ ಪುರಸ್ಕಾರವಾಗಿ ಪಡೆಯುತ್ತಾಳೆ. ಅವುಗಳನ್ನು ಹೇಗೆ ಧರಿಸಬೇಕೆಂಬು ದನ್ನರಿಯದ ಆ ಮುಗ್ಧೆ ಬೆರಳಿನ ಉಂಗುರವನ್ನು ಕಿವಿಗೂ, ಕಿವಿಯ ಉಂಗುರವನ್ನು ಬೆರಳಿಗೂ, ಕೊರಳ ಸರವನ್ನು ನಡುಪಟ್ಟಿಯಾಗಿಯೂ, ಒಡ್ಯಾಣವನ್ನು ಕೊರಳ ಸರವಾಗಿಯೂ ಧರಿಸಿಕೊಳ್ಳುತ್ತಾಳೆ. ಅವಳ ಈ ಗೊಂದಲದಿಂದ ವಿಸ್ಮಿತನಾದ ಕವಿಯು ಆ ದೃಶ್ಯವನ್ನು ರಾಮಾಯಣದ ಸಂದರ್ಭವೊಂದಕ್ಕೆ ಹೋಲಿಸುತ್ತಾನೆ. "ಬಲಿಷ್ಠನಾದ ರಕ್ಕಸ ರಾವಣನು ಸೀತೆಯನ್ನು ಪರ್ಣಕುಟಿಯಿಂದ ಅಪಹರಿಸಿಕೊಂಡು, ಗಗನ

ಗಾಮಿಯಾಗಿ ಬರುತ್ತಿರುವಾಗ, ವೀರರಾಮನ ಮಡದಿಯಾದ ಸೀತೆಯು, ತನ್ನ ಆಭರಣಗಳ ಗಂಟನ್ನು ಮೇಲಿಂದ ಎಸೆದಾಗ, ಕಿಷ್ಕಿಂಧೆಯ ಬಳಿ ಇರುವ ವಾನರರು ಅವುಗಳನ್ನೆತ್ತಿಕೊಂಡು ಧರಿಸಿಕೊಳ್ಳುವ ವೈಖರಿಯಂತಿದೆ" ಎಂದು ಹೇಳಿದ್ದಾನೆ. (ಪುಱನಾನೂಱು 378-18-21)

'ಅಗನಾನೂಱು'ನಲ್ಲಿ ಕಡಲ ತೀರದ ವಾಚಾಳಿ ಸ್ತ್ರೀಯೊಬ್ಬಳು ಪ್ರಣಯಿಗಳಿಬ್ಬರ ವಿವಾಹಪೂರ್ವ ಸಂಬಂಧದ ಬಗ್ಗೆ ಊರಲ್ಲಿ ಗುಲ್ಲೆಬ್ಬಿಸುತ್ತಾಳೆ. ಆದರೆ ಅವರಿಬ್ಬರೂ ವಿವಾಹವಾದರೆಂಬುದನ್ನು ತಿಳಿದ ಮೇಲೆ ಅವಳು ಬಾಯಿ ಮುಚ್ಚಿಕೊಂಡುದರಿಂದ ಊರಲ್ಲೆದ್ದ ಗುಲ್ಲು ಅಡಗುತ್ತದೆ. ಇದನ್ನು ಧನುಷ್ಕೋಡಿಯ ಸಮೀಪದ ಆಲದ ಮರದ ಮೇಲೆ ಚಿಲಿಪಿಲಿಗುಟ್ಟುತ್ತ ಅಬ್ಬರ ಮಾಡುತ್ತಿರುವ ಹಕ್ಕಿಗಳು ಆ ಮರದ ಕೆಳಗೆ ನೀರವಧ್ಯಾನದಲ್ಲಿ ತೊಡಗಿದ್ದ ರಾಮನು ಕೈ ಸನ್ನೆ ಮಾಡಿದಾಗ, ಅವು ಸದ್ದಡಗಿಸಿ ನೀರವತೆಯನ್ನಾವರಿಸುವ ಸಂದರ್ಭಕ್ಕೆ ಕವಿ ಹೋಲಿಸಿದ್ದಾನೆ. (ಅಗನಾನೂಱು 70-13-16). ವಾಲ್ಮೀಕಿಯಲ್ಲಿರದ ಅವುಗಳ ಕಲ್ಪನೆಯು ಜನಪದ ಮೂಲ ವಾಗಿವೆಯೆಂದು ಹೇಳಲಾಗಿದೆ. ಶಿಲಪ್ಪದಿಕಾರದಲ್ಲಿ ಕೋವಲನು ಕಣ್ಣಗಿಯೊಡನೆ ಪುಹಾರ್ ನಗರವನ್ನು ಬಿಟ್ಟು ಹೊರಟಾಗ, ಪುಹಾರ್ ನಗರವು ರಾಮನಿಲ್ಲದ ಅಯೋಧ್ಯೆಯಂತಿತ್ತು ಎಂದು ಇಳಂಗೋ ಅಡಿಗಳು ವರ್ಣಿಸಿದ್ದಾರೆ. ಈ ಕಾವ್ಯದ ಕಾಲಕ್ಕಾಗಲೇ ರಾಮನು ದೇವರೆಂಬ ಭಾವನೆ ಬೇರೂರಿದೆ.

ಮುಂದೆ ಕ್ರಿ.ಶ. 8-9 ನೆಯ ಶತಮಾನಗಳಲ್ಲಿ ಬಂದ, ವೈಷ್ಣವ ಆಳ್ವಾರರುಗಳ ಪಾಶುರಗಳ, ಭಕ್ತಿವಾಹಿನಿಯಲ್ಲಿ, ರಾಮನ ದಿವ್ಯಲೀಲಾ ವಿನೋದ ಪ್ರಸಂಗಗಳನ್ನು ಎತ್ತಿಕೊಂಡು, ದಾರ್ಶನಿಕವಾಗಿ, ಪ್ರತಿಪಾದಿಸಿರುವುದರಿಂದ ರಾಮನು ದೈವಿಕ ಮಹಾಪುರುಷನಾಗಿ, ಶರಣಾಗತ ವತ್ಸಲನಾಗಿ, ವಿಷ್ಣುವಿನ ಅವತಾರರೂಪವಾಗಿ, ಲೋಕಪೂಜ್ಯ ಪುರುಷೋತ್ತಮನಾಗಿ, ಜನಮನವನ್ನು ಸೂರೆಗೊಳ್ಳಲು ಸಹಾಯಕ ವಾಯಿತು. ಕಂಬರು ಈ ಎಲ್ಲ ಸಂಪನ್ಮೂಲಗಳನ್ನು ಕಾವ್ಯದಲ್ಲಿ ಬಳಸಿಕೊಂಡು, ಅದ್ಭುತವೆನಿಸುವಂಥ ಕಲೆಗಾರಿಕೆಯಿಂದ, ರಾಮನನ್ನು ಧೀರೋದಾತ್ತ ನಾಯಕನನ್ನಾಗಿಸಿ ಯುಗಧರ್ಮದ ಪ್ರತೀಕವೆನಿಸಿದ ಮಹಾಕಾವ್ಯವನ್ನು ಸೃಷ್ಟಿಸಿದರು. ತಮಿಳಿನಲ್ಲಿ ರಾಮಾಯಣವೆಂದರೆ, ಕಂಬರಾಮಾಯಣವೆ ಎಂಬ ನಂಬಿಕೆ ಬೆಳೆದು, ವಾಲ್ಮೀಕಿಯನ್ನು ಮರೆಸುವಷ್ಟು ಅದು ಖ್ಯಾತಿ ಪಡೆಯಿತು.

ಕಂಬರಾಮಾಯಣದ ಭವ್ಯತೆಯಡಗಿರುವುದು, ಅವರ ಸರ್ವಧರ್ಮ ಸಮಭಾವದ ಸಂಯಕ್ ದೃಷ್ಟಿಯಲ್ಲಿ. ಕಂಬರು, ಜೀವನದ ಅಲೌಕಿಕ, ಶಾಶ್ವತ ಸತ್ಯಗಳನ್ನು ಗೌರವಿಸಿದ್ದಾರೆ. ನಾಯನ್ಮಾರರುಗಳು, ಆಳ್ವಾರರುಗಳ ಭಕ್ತಿಯ ತನ್ಮಯತೆಯ ಹಾಡುಗಳಲ್ಲಿ ಅವರಿಗೆ ವಿಶೇಷ ಆದರವಿದೆ. ತಿರುಮಂಗೈ, ಕುಲಶೇಖರ, ಶಠಗೋಪರೇ ಮೊದಲಾದ ಆಳ್ವಾರರುಗಳ ರಾಮಭಕ್ತಿಯ ಪ್ರತೀಕದ ಚಿತ್ರಗಳು

ಅವರ ಹೃದಯಾಳದಲ್ಲಿ ನೆಲೆಗೊಂಡಿವೆ. ಸಂದರ್ಭ ದೊರೆತಾಗಲೆಲ್ಲ ಈ ಭಕ್ತಿಭಾವವನ್ನು ವೈಷ್ಣವ ಮತ್ತು ಶೈವ ದರ್ಶನಗಳೆರಡರ ಸಾರ ದರ್ಶನದಲ್ಲಿ ಹರಿಹರ ಭೇದವಿಲ್ಲದೆ ಪ್ರಕಟಗೊಳಿಸಿದ್ದಾರೆ. ತಿರುಕ್ಕುರಳಿನಲ್ಲಿ ತಿರುವಳ್ಳುವರು ಹೇಳಿರುವ – ಜಗತ್ತಿನ ಸೃಷ್ಟಿಗೆಲ್ಲ ಮೂಲಕಾರಣನೊಬ್ಬನೇ, ಸೃಷ್ಟಿ ಸ್ಥಿತಿಲಯಗಳಿಗೂ ಕಾರಣ ಅವನೇ ಎಂಬ ಚಿರಂತನ ಸತ್ಯವನ್ನು ಕಾವ್ಯದ ಹಲವೆಡೆಗಳಲ್ಲಿ ವ್ಯಕ್ತವಾಗುವಂತೆ ಮಾಡಿದ್ದಾರೆ. ಕಾವ್ಯಾರಂಭದ ಪ್ರಾರ್ಥನಾ ಪದ್ಯದಲ್ಲಿ ಅವರ ಸಂದೇಶ ತೊಡಗುತ್ತದೆ.

ಉಲಗಂ ಯಾವೈಯುಂ ತಾ ಉಳವಾಕ್ಕಲುಂ
ನಿಲೈ ಪೆಱುತ್ತಲುಂ, ನೀಂಗಲುಂ, ನೀಂಗಲಾ
ಅಲಗು ಇಲಾ ವಿಳೈಯಾಟ್ಟು ಉಡೈಯಾರ್ ಅವರ್
ತಲೈನರ್ ಅನ್ನವರ್ಕ್ಕೇ ಶರಣ್ನಾಂಗಳೇ.

ಜಗವೆಲ್ಲವ, ಸೃಷ್ಟಿ ಸ್ಥಿತಿ ಲಯಗಳಿಗೊಳಪಡಿಸಿ
ನಿರಂತರ ಅನಂತಲೀಲಾ ವಿನೋದಗಳ ತೋರುವ
ಜಗದಾದಿ ಮುದಿತ ವಿಶ್ವಾತ್ಮದೊಡೆಯನಿಗೆ,
ಶರಣಾಗುವೆವು ನಾವು.

ದೇವರನ್ನು ಒಂದು ಮತದ ಸೊತ್ತಾಗಿಸದೆ, ಜಗತ್ತಿನ ಜೀವಾಧಾರವೆನಿಸಿದ ಮಹಾಶಕ್ತಿಯಾಗಿ ಕಾಣ್ಕೆಗೊಳ್ಳುವ ಕಂಬರ ದಾರ್ಶನಿಕ ದೃಷ್ಟಿಯು ವಿರಾಧ, ಕಬಂಧ, ಶರಭಂಗ, ಸುಗ್ರೀವ, ಹನುಮಂತ, ರಾವಣ ಮೊದಲಾದ ಪಾತ್ರಗಳು ಕಾಣುವ ರಾಮ ದರ್ಶನದಲ್ಲಿ ವ್ಯಕ್ತವಾಗಿ, ಕಾವ್ಯದ ಶೋಭೆಯನ್ನು ಹೆಚ್ಚಿಸಿದೆ. ಕುಮಾರವ್ಯಾಸನ ಶ್ರೀಕೃಷ್ಣನಂತೆ, ಶತ್ರು–ಮಿತ್ರರು ಉಭಯರಿಗೂ ರಾಮನ ಹಿರಿಮೆಯ ದರ್ಶನವಾಗುತ್ತದೆ. ಇವರಿಗೆಲ್ಲ ರಾಮನು ಕೇವಲ ವಿಷ್ಣುವಿನ ಅವತಾರವಾಗಿ ಕಾಣಿಸುವುದಿಲ್ಲ. ಬ್ರಹ್ಮ, ವಿಷ್ಣು, ಮಹೇಶ್ವರರಾರೂ ಅಲ್ಲದೆ ವೇದಶ್ರುತನಾದ ಜಗದಾದಿ ಮೂಲ ಶಕ್ತಿಯಾಗಿ ತೋರಿಕೊಳ್ಳುತ್ತಾನೆ. ರಾಮನಿಂದ ವಿರಾಧನ ಶಾಪ ವಿಮೋಚನೆಯಾದ ಮೇಲೆ ವಿರಾಧನು ಹೇಳುವ ಮಾತುಗಳಲ್ಲಿ ರಾಮನು ಜಗದಂಬಿಕೆಯಾಗಿ, ಪ್ರೇಮಮಯಿಯಾಗಿ ಚಿತ್ರಿತವಾಗಿದ್ದಾನೆ :

ತಾಯಿ ಗುರುತಿಸಿ ಬಳಿಗೋಡುವ ಕರುವುಂಟೆ ? ತಾಯಿ
ಪಸುವಿಗೂ ತನ್ನ ಕರುವಿದೆಂದು ತಿಳಿವುದು ಸಹಜಮಲ್ತೆ !
ನೀನೆ ಜಗಕೆಲ್ಲ ಅಂಬಿಕೆಯಾಗಿರುವೆ, ವಿಶ್ವದೊಳಗಿನ
ಚರಾಚರ ವಸ್ತುಗಳೆಲ್ಲವನು ಬಲ್ಲೆ ನೀನು.

ಸುಂದರಕಾಂಡದಲ್ಲಿ ಸೀತಾನ್ವೇಷಿಯಾಗಿ ಲಂಕೆಗೆ ಬಂದ ಹನುಮಂತನು ರಾವಣನನ್ನು ಸಂಧಿಸಿದಾಗ, ಅವನಿಗೆ ರಾಮನ ಪರಿಚಯ ಹೇಳುವುದು ಹೀಗೆ :

ಮೂಲಮುಂ, ನಡುವುಂ ಈಱುಂ ಇಲ್ಲದು ಓರ್ ಮುಮ್ಮೈತ್ತಾಯ
ಕಾಲಮುಂ ಕಣಕ್ಕುಂ ನೀತ್ತ ಕಾರಣನ್-ಕೈವಿಲ್ ಏನ್ದಿ
ಶೂಲಮುಂ ತಿತಿರಿ ಶಂಗುಂ ಕರಗಮುಂ ತುಱಸ್ದು ತೊಲ್ಲೈ
ಆಲಮುಂ ಮಲರುಂ ವೆಳ್ಳಿಪ್ಪೊರುಪ್ಪುಂವಿಟ್ಟು-ಅಯೋತ್ತಿವನ್ದಾನ್

ಆದಿಮಧ್ಯಂತಗಳಿರದ ಮೂಲ ಪುರುಷನಿವನಾಗಿ
ಕಾಲ ದೇಶಗಳ ನೀಗಿದ ಕಾರಣ ಪುರುಷನಾಗಿ
ತ್ರಿಶೂಲ, ಚಕ್ರ, ಶಂಖ ಕಮಂಡಲಗಳ ತೊರೆದವನಾಗಿ
ಕಡಲು ಕಮಲ ರಜತಾದ್ರಿಗಳ ಬಿಟ್ಟು ಕೈಲಿಕೋ
ದಂಡವ ಹಿಡಿದು ಅಯೋಧ್ಯೆಗೆ ಬಂದನಿವನು.

ಹನುಮಂತನು ಹೇಳಿದ ಈ ಮಾತುಗಳು ರಾವಣನ ಸುಪ್ತಪ್ರಜ್ಞೆಯಲ್ಲಿ ಅಡಗಿರಬೇಕು. ಯುದ್ಧಕಾಂಡದ ರಾಮರಾವಣರ ಯುದ್ಧದ ಕೊನೆಯ ಘಟ್ಟದಲ್ಲಿ ರಾಮನ ವೀರಾವೇಶದ ಯುದ್ಧ ಪರಿಣತಿಯನ್ನು ನೋಡಿ, ಅವನಿಗೆ ಸಂದೇಹ ಕಾಡುತ್ತದೆ.

ಶಿವನೊ ಅಲ್ಲನ್ ; ನಾನ್ಮುಗನಲ್ಲನ್ ; ತಿರುಮಾಲಾಂ
ಅವನೊ ಅಲ್ಲನ್ ; ಮೆಯ್ವರಮೆಲ್ಲಾಂ ಅಡುಗಿನ್ರಾನ್
ತವನೊ ಎನ್ನಿನ್ ಶೆಯ್ದು ಮುಡಿಕ್ಕುಂ ತಾನಲ್ಲನ್
ಇವನೊ ತಾನ್ ಅಪ್ವೇದ ಮುದಲ್ ಕಾರಣನ್ ?

ಅಲ್ಲ ಇವನು ಶಿವನಲ್ಲ, ಚತುರ್ಮುಖನಲ್ಲ ಶ್ರೀಮಾಲಿಯೋ ?
ಅವನೂ ಅಲ್ಲ ; ದಿವ್ಯವರಾಸ್ತ್ರಗಳ ಶಕ್ತಿಯಡಗಿಸುತಿಹನು
ಯೋಗಿಯೊ ಎನಲು ಕಡುಸಾಧನೆಗೂ ಸಿಗದನಂತ ಚೇತನನು
ಇವನು ಆ ವೇದಗಳೊರೆವ ಮೂಲಕಾರಣನೊ !

ಕಂಬರಾಮಾಯಣದ ಇಂಥ ಹಲವು ಸನ್ನಿವೇಶಗಳಲ್ಲಿ ರಾಮನ ಪರಾತ್‌ರೂಪ ದರ್ಶನವಾಗುತ್ತದೆ. ವೇದೋಕ್ತನಾದ ಮೂಲ ಪುರುಷನೇ ರಾಮನಾಗಿ ಅವತರಿಸಿದ್ದಾನೆಂದು ಹೇಳುತ್ತ ಕಂಬರು ರಾಮಾವತಾರದ ಪರಿಮಿತ ಉದ್ದೇಶದ ವ್ಯಾಪ್ತಿಯನ್ನು ವಿಸ್ತರಿಸಿದ್ದಾರೆ. "ಶಿವ-ವಿಷ್ಣು ಎಂದು ಕಲಹ ಹೂಡುವವರು ಕಡುಮೂರ್ಖರು. ಅವರಿಗೆ ಮುಕ್ತಿಸಾಧ್ಯವಿಲ್ಲ"ವೆಂದು ಸುಗ್ರೀವನ ಬಾಯಲ್ಲಿ ಹೇಳಿಸಿ ಮತೀಯ ಭಾವನೆಗೆ

ಗೆರೆ ಎಳೆದಿದ್ದಾರೆ. ಶೈವ, ವೈಷ್ಣವ, ಜೈನ, ಬೌದ್ಧ ಧರ್ಮಗಳು ತಮ್ಮ ತಮ್ಮ ಧರ್ಮದ ಶ್ರೇಷ್ಠತೆಯನ್ನು ಎತ್ತಿಹಿಡಿಯುವ ನೆಪದಲ್ಲಿ, ಪರಸ್ಪರ ದೋಷಾರೋಪಣೆಗೆ ತೊಡಗಿ, ಜನರನ್ನು ದಿಕ್ಕು ತಪ್ಪಿಸುತ್ತಿದ್ದ ಕಾಲದಲ್ಲಿ, ಕಂಬರು ಎಲ್ಲ ಧರ್ಮಗಳ ಮೂಲ ಪ್ರೇರಣೆಗೆ ಒಬ್ಬನೆ ಸರ್ವಶಕ್ತನಿರುವನೆಂದು ಸಾರಿದ್ದಾರೆ.

2

ಕಂಬರು ಕೇವಲ ಮತೀಯ ಭಾವನೆಯನ್ನು ಮಾತ್ರ ತಿರಸ್ಕರಿಸಲಿಲ್ಲ. ಜಾತಿ ವ್ಯವಸ್ಥೆಯಲ್ಲೂ ಅವರಿಗೆ ವಿಶ್ವಾಸವಿಲ್ಲವೆಂಬುದನ್ನು ರಾಮ–ಗುಹ–ಸುಗ್ರೀವ–ವಿಭೀಷಣರ ಸಂಬಂಧದ ಚಿತ್ರಣಗಳಿಂದ ಸಾಧಿಸಿ ತೋರಿಸಿದ್ದಾರೆ. ವಾಲ್ಮೀಕಿ ರಾಮಾಯಣದಲ್ಲಿ ಬರುವ ಚಾತುರ್ವರ್ಣ್ಯ ವ್ಯವಸ್ಥೆಯನ್ನು, ಅವುಗಳ ಕರ್ತವ್ಯ ನಿರ್ವಹಣೆಯ ವಿವರಗಳನ್ನು ಅವರು ಉದ್ದೇಶ ಪೂರ್ವಕವಾಗಿ ಕೈಬಿಟ್ಟಿದ್ದಾರೆ. ಸಮಾಜದಲ್ಲಿ ವೈಷಮ್ಯದ ಕ್ರಿಮಿಗಳನ್ನು ಹರಡುವ, ಮೇಲು ಕೀಳರಿಮೆಗಳ ವರ್ಣವ್ಯವಸ್ಥೆಯಲ್ಲಿ ಆಸಕ್ತಿಯಿಲ್ಲವೆಂಬುದನ್ನು ಸ್ಫುಟಗೊಳಿಸಿದ್ದಾರೆ. ರಾಮನ ಪಾತ್ರವನ್ನು, ಅವನ ಉದಾತ್ತ ಗುಣಗಳನ್ನು ಭವ್ಯೀಕರಿಸುವ ನೆಪದಲ್ಲಿ ಜಾತಿಪದ್ಧತಿಯನ್ನು ತಿರಸ್ಕರಿಸಿದ್ದಾರೆ. ಬೇರೆ ಬೇರೆ ಜನಾಂಗಗಳಿಗೆ, ಪ್ರದೇಶಗಳಿಗೆ ಸೇರಿದ ಗುಹ, ಸುಗ್ರೀವ, ಹನುಮಂತ, ವಿಭೀಷಣರನ್ನು ಒಂದೆ ಕುಟುಂಬದ ಸೋದರರಂತೆ ರಾಮನು ನಡೆಸಿಕೊಳ್ಳುವ ರೀತಿಯಲ್ಲಿ, ಕಂಬರ ಆದರ್ಶದ ನಿಲವು ಪ್ರಕಟವಾಗಿದೆ. ಈ ಭಾವನೆಯನ್ನು ತನ್ನ ಕಾವ್ಯದಲ್ಲಿ ಕಲ್ಪಿಸಿಕೊಳ್ಳಲು ವೈಷ್ಣವ ಆಳ್ವಾರರುಗಳಲ್ಲೊಬ್ಬರಾದ ತಿರುಮಂಗೈಯಾಳ್ವಾರರ ಪಾಶುರಗಳು ಅವರಿಗೆ ಸ್ಫೂರ್ತಿಕೊಟ್ಟಿವೆ. ತಿರುಮಂಗೈಯಾಳ್ವಾರರು ತಮ್ಮ ಪಾಶುರವೊಂದರಲ್ಲಿ ಗುಹನನ್ನು ರಾಮನು ಸೋದರನನ್ನಾಗಿ ಸ್ವೀಕರಿಸಿದನೆಂದು ಸ್ತುತಿಸಿದ್ದಾರೆ : "ಗುಹನು ಜಾತಿಹೀನ, ಬುದ್ಧಿಹೀನ, ಜೀವಶತ್ರುವೆಂದು ಬಗೆಯದೆ ಅವನ ಮೇಲೆ ಕರುಣೆ ತೋರಿದೆ. ಹರಿಣಾಕ್ಷಿ ಸೀತೆಯು ನಿನ್ನ ಗೆಳತಿಯೆಂದು ಹೇಳಿ ಅವನಲ್ಲಿ ಸಲುಗೆ ಬೆಳಸಿದೆ. ತಮ್ಮ ಲಕ್ಷ್ಮಣ ನಿನಗೂ ತಮ್ಮನೆಂದು ಹೇಳಿ ಅಷ್ಟಕ್ಕೆ ತೃಪ್ತನಾಗಲಿಲ್ಲ. ನೀನು ನನ್ನ ಆಪ್ತಮಿತ್ರ ಎಂದು ಪ್ರೀತಿಯ ಮಾತುಗಳನ್ನಾಡಿದೆ. ಆ ನಿನ್ನ ಮಾತುಗಳು ನನ್ನ ಹೃದಯ ತುಂಬಿರುವುದರಿಂದ, ಕಡಲ ಬಣ್ಣದ ನಿನ್ನ ಸಿರಿಯಡಿಗಳಲ್ಲಿ ನಾನು ಶರಣಾಗಿದ್ದೇನೆ" (ತಿರುಮಂಗೈಯಾಳ್ವಾರ್ : ಪೆರಿಯ ತಿರುಮೊಳಿ)

ಕಂಬರು ಈ ಸೋತ್ರದಲ್ಲಿ ಅಡಗಿರುವ ರಾಮನು ಶರಣಾಗತ ವತ್ಸಲನೆಂಬ ಭಾವನೆಯನ್ನು ಹಾಗೆಯೇ ಅನಾಮತ್ತಾಗಿ ಎತ್ತಿಕೊಂಡು, ಗುಹ, ರಾಮರ ಸಂಬಂಧ

ವನ್ನು ಮತ್ತಷ್ಟು ಉಜ್ವಲಗೊಳಿಸಿದ್ದಾರೆ. ಕಂಬರ ರಾಮನು ಸಸ್ಯಾಹಾರಿಯಾದರೂ ಗುಹನು ತನ್ನ ಪರಿಶುದ್ಧ ಮನಸ್ಸಿನಿಂದ ಪ್ರೀತಿ ಹರಿಸಿ ತಂದಿತ್ತ ಮೀನು-ಜೇನುಗಳನ್ನು ಭೇದವೆಣಿಸದೆ ಸ್ನೇಹದಿಂದ ಸ್ವೀಕರಿಸುತ್ತಾನೆ. ಗಂಗೆಯನ್ನು ದಾಟಿಸಿದ ಮೇಲೆ ಗುಹನಿಗೆ ರಾಮನನ್ನು ಅಗಲಿರಲು ಮನಸ್ಸಿಲ್ಲ. ರಾಮನೊಂದಿಗೆ ನಿಂತು ಬೆಂಗಾವಲಾಗಿ ಇರುತ್ತೇನೆಂದು ತನ್ನ ಪರಿವಾರದೊಂದಿಗೆ ಬಂದು ಕೇಳಿಕೊಳ್ಳುತ್ತಾನೆ. ರಾಮನು ಅವನನ್ನು ವಾತ್ಸಲ್ಯದಿಂದ ಕರೆದು :

"ಎನ್ನುಯಿರ್ ಅನ್ನೈಯಾಯ್ ನೀ ; ಇಳವಲ್ ಉನ್ ಇಳೈಯಾನ್
ನನ್ನುದಲ್ವಳ್ ನಿನ್ ಕೇಳ್ ನಳಿರ್ ಕಡಲ್ ನಿಲಮೆಲ್ಲಾಂ
ಉನ್ನುಡೈಯದು ; ನಾನ್ ಉನ್ನುರಿಮೈಯಿನ್ ಉಳೇನ್"

"ನೀನು ನನ್ನ ಪ್ರಾಣಕ್ಕೆ ಸಮಾನನು, ಈ ನನ್ನ ಎಳೆಯ ತಮ್ಮ ನಿನಗೂ ತಮ್ಮ. ಈ ಚೆಲುವೆ ಸೀತೆ ನಿನ್ನ ಗೆಳತಿ. ಈ ಕಡಲು ನೆಲವೆಲ್ಲ ನಿನ್ನದೆ, ನಾನು ನಿನ್ನ ಅಧೀನ." —ಎಂದು ಹೇಳಿ ಪ್ರೇಮದ ಗಂಗೆಯನ್ನೆ ಹರಿಸುತ್ತಾನೆ. ಮುಂದುವರಿದು "ಸುಖವು ದುಃಖವನ್ನು ಅನುಸರಿಸಿ ಬರುವಂತೆ, ಅಗಲಿಕೆಯನ್ನು ಹಿಂಬಾಲಿಸಿ ಮಿಲನವೂ ಬರುತ್ತದೆ. ನಾವಿದುವರೆಗೆ ನಾಲ್ವರೆನಿಸಿದ್ದೆವು. ನಿನ್ನಂತರಂಗದ ಪ್ರೀತಿಯಲ್ಲಿ ನಾವೀಗ ಐವರಾದೆವು. ಅಯೋಧ್ಯೆಯ ಜನರ ರಕ್ಷಣೆಗೆ ನನ್ನ ಮತ್ತೊಬ್ಬ ತಮ್ಮ ಭರತನಿದ್ದಾನೆ. ಇಲ್ಲಿರುವ ಬಂಧುಬಾಂಧವರನ್ನು ರಕ್ಷಿಸಲು ಯಾರಿದ್ದಾರೆ ? ನಿನ್ನ ಬಂಧುಗಳು ನನಗೂ ಬಂಧುಗಳಲ್ಲವೆ ? ಅವರೆಲ್ಲ ಸಂಕಟಕ್ಕೊಳಗಾಗಬೇಕೆ ? ಇವರೆಲ್ಲ ನನ್ನ ಬಳಗದವರು. ಅವರನ್ನು ರಕ್ಷಣೆ ಮಾಡು, ಇದು ನನ್ನ ಆಣತಿ" ಎಂದು, ಇರುವೆಡೆಯಲ್ಲೇ ಇದ್ದು ಜೀವರಕ್ಷಣೆ ಮಾಡಬೇಕೆಂದು ಅಪ್ಪಣೆ ಮಾಡುತ್ತಾನೆ.

ಗುಹನು ರಾಮನ ಸೋದರ, ಗೆಳೆಯ ಎನ್ನುವ ಭಾವನೆಗೆ ಕಂಬರು ಇಲ್ಲಿಗೇ ಮುಕ್ತಾಯ ಹಾಡುವುದಿಲ್ಲ. ಮತ್ತೂ ಹಲವು ಸಂದರ್ಭಗಳನ್ನು ಅವರು ಬಳಸಿ ಕೊಳ್ಳುತ್ತಾರೆ. ಮುಂದೆ ಭರತನು ರಾಮನನ್ನು ಸಂಧಿಸಲು ಪರಿವಾರ, ಮಾತೆಯ ರೊಂದಿಗೆ ಚಿತ್ರಕೂಟಕ್ಕೆ ಬರುವಾಗ ಗುಹನೇ ಅವರನ್ನು ಗಂಗೆ ದಾಟಿಸುತ್ತಾನೆ. ಆಗ ಭರತನು ಕೌಸಲ್ಯೆಗೆ ಗುಹನ ಪರಿಚಯಮಾಡಿಸುತ್ತಾನೆ. ಇವನು ಹಿರಿಯಣ್ಣ ರಾಘವನ ತಮ್ಮ ; ಲಕ್ಷ್ಮಣ, ಶತ್ರುಘ್ನ ಮತ್ತು ನನಗೆ ಅಣ್ಣ" ಎಂದು ಹೇಳಿ ತನಗಿಂತ ಹಿರಿಯನೆಂಬ ಮರ್ಯಾದೆಯ ಭಾವವನ್ನು ಸಲ್ಲಿಸುತ್ತಾನೆ. ಸುಂದರ ಕಾಂಡದ ಕಾಟ್ಚಿ ಪಟಲದಲ್ಲಿ ಸೀತೆಯು ಅಶೋಕ ವನದಲ್ಲಿ ಒಬ್ಬಳೇ ಇರುವಾಗ ರಾಮನ ಮಹೋನ್ನತ ಗುಣಗಳನ್ನು ನೆನೆಸಿಕೊಳ್ಳುವಾಗ ಗುಹನನ್ನು ಕುರಿತು ರಾಮನು ಆಡಿದ ಮಾತುಗಳು ನೆನಪಿಗೆ ಬರುತ್ತವೆ.

ಆಟಿ ನೀರ್ ಗಂಗ್ಯೆ ಅಪ್ಬಿ ಕಡಾವಿಯ
ಏಟ್ರೈ ವೇಡನುಕ್ಕು ಎಮ್ಬಿ ನಿನ್‌ತಮ್ಬಿ: ನೀ
ತೋಟಿನ್ ; ಮುಂಗೈ ಕೋಟಿುನ್ದಿ ಎನಚ್ಚೊನ್ನ
ವಾಟಿ ಸಣ್ವಸ್ವೈ ಉನ್ನಿ ಮಯುಂಗುವಾಳ್

ನೀರಾಳದ ಗಂಗೆಯ ದಾಟಿಸಿದ ಒಡವನಾದ ಬೇಡನಿಗೆ
ನನ್ನ ತಮ್ಮ ನಿನಗೂ ತಮ್ಮ, ನೀನೆನ್ನ ಗೆಳೆಯ ಈ ನನ್ನ
ಪ್ರಿಯೆ ನಿನ್ನತ್ತಿಗೆ ! ಎಂದು ಹೇಳಿದ ರಾಮನ
ಪ್ರೇಮಾರ್ದ್ರ ಮಾತುಗಳನು ನೆನೆದು ಶೋಕಿಸುವಳು

ಬೇಡನಾದ ಗುಹನನ್ನು ಸೋದರನಾಗಿ ಸ್ವೀಕರಿಸಿ ತನ್ನ ಬಳಗವನ್ನು ಬೆಳೆಸಿಕೊಂಡ ರಾಮನ ಮಾನವೀಯ ಗುಣವನ್ನು ಹೇಳುವ ಕಂಬರಿಗೆ ಈ ಸೋದರ ಸಂಬಂಧವನ್ನು ವಿಸ್ತರಿಸುತ್ತ ಹೋಗುವುದರಲ್ಲಿ ವಿಶೇಷ ಒಲವಿದೆ. ಸಂದರ್ಭ ಒದಗಿದಾಗಲೆಲ್ಲ ರಾಮನ ಸರ್ವಜನಾಂಗೀಯ ಪ್ರೇಮವನ್ನು ಮತ್ತೆ ಮತ್ತೆ ಪ್ರಕಟಿಸಿ, ಜಾತಿ ಶೃಂಖಲೆಯನ್ನು ಮುರಿಯುವುದರಲ್ಲಿ ಕಂಬರ ಮಹಾಕವಿ ಪ್ರಜ್ಞೆ ಜಾಗೃತವಾಗಿರುತ್ತದೆ. ರಾಮ-ಸುಗ್ರೀವ ಹನುಮಂತ, ವಿಭೀಷಣರ ಬಾಂಧವ್ಯವನ್ನು ಚಿತ್ರಿಸುವಾಗ ಕಂಬರು ಆ ಸಂದರ್ಭಗಳನ್ನು ತಮ್ಮ ಉದ್ದೇಶಕ್ಕೆ ಚೆನ್ನಾಗಿ ಬಳಸಿಕೊಳ್ಳುತ್ತಾರೆ. ಗುಹನಂತೆ ವಾನರಕುಲದ ಸುಗ್ರೀವನನ್ನೂ, ಗೆಳೆಯ, ಸೋದರ ಎಂದು ಕರೆದು ತನ್ನ ಪರಿವಾರವನ್ನು ವಿಸ್ತರಿಸಿ ಕೊಳ್ಳುತ್ತಾನೆ. ವಿಭೀಷಣನು ರಾಮನಲ್ಲಿ ಶರಣಾಗತಿಯನ್ನು ಬಯಸಿ ಬಂದಾಗ ರಾಮನು ಆಡುವ ಮಾತುಗಳಲ್ಲಿ ಮತ್ತೆ ಆ ಪ್ರಜ್ಞೆ ಎಚ್ಚರಗೊಳ್ಳುತ್ತದೆ.

ಗುಹನೋಡು ಐವರಾನೊಂ ಮುನ್ಬು ; ಪಿನ್ ಕುನ್ರು ಶೂಟ್ವಾನ್
ಮಗನೊಡುಂ ಅರುವರಾನೋಂ ; ಎಮ್ಮುಟ್ರೈ ಅನ್ಬಿನ್‌ವನ್ದ
ಅಗನವಲ್ ಕಾಡೆಲ್ ಐಯ ! ನಿನ್ನೊಡು ಎಳುವರಾನೋಂ
ಪುಗಲುರುಂ ಕಾನಂ ತನ್ದು ಪುದಲ್ವರಾಲ್ ಪೊಲಿನ್ದಾನ್ ಉನ್ದೈ

ಗುಹನೊಂದಿಗೆ ನಾವು ಐವರು ಸೋದರರಾದೆವು ; ಮಲೆವಾಸಿ ಸುಗ್ರೀವನನ್ನು ಸೇರಿ ಆರುಮಂದಿ ಸೋದರರೆನಿಸಿದೆವು ; ನಮ್ಮಲ್ಲಿ ಪ್ರೀತಿಯಿಟ್ಟು ಮನಸ್ಸು ಸೂರೆಗೊಂಡ ಅಯ್ಯನೆ ನಿನ್ನೊಂದಿಗೆ ನಾವೀಗ ಏಳುಮಂದಿ ಒಡಹುಟ್ಟಿದೆವು. ಕಡಿದಾದ ಕಾಡಿಗೆನ್ನನು ಕಳಿಸಿದ ನಿನ್ನ ತಂದೆ ತನ್ನ ಸಂತಾನವನ್ನು ವೃದ್ಧಿಸಿಕೊಂಡನು.

—ಎಂದು ಹಿಂದಿನ ಸಂಬಂಧಗಳನ್ನು ಮೆಲುಕು ಹಾಕುತ್ತ ಹೊಸ ಸಂಬಂಧವನ್ನು ಪಡೆದುಕೊಳ್ಳುವುದರಲ್ಲಿ ರಾಮನು ಸಂತೋಷ ಸಂಭ್ರಮಗಳನ್ನು ಪ್ರದರ್ಶಿಸುತ್ತಾನೆ.

ಇಲ್ಲಿ ದಶರಥನನ್ನು ವಿಭೀಷಣನ ತಂದೆಯೆಂದು ಕರೆದು ತನ್ನನ್ನು ಕಾಡಿಗೆ ಕಳಿಸಿ ನಿನ್ನ ತಂದೆ ಪುತ್ರ ಸಂತಾನವನ್ನು ಪಡೆಚ್ಚಿಸಿಕೊಂಡನು ಎನ್ನುವಾಗ ರಾಮನ ಲಘುಹಾಸ್ಯ ಪ್ರಜ್ಞೆಯೂ ಮಿಂಚುತ್ತದೆ.

ಹನುಮಂತನನ್ನು ರಾಮನು ಸೇವಕನೆಂದೆಣಿಸದೆ, ಆಪ್ತ ಮಿತ್ರನಂತೆ ನಡೆಸಿ ಕೊಳ್ಳುವ ಸಂದರ್ಭವೊಂದನ್ನು ಕಂಬರು ಕಲ್ಪಿಸಿಕೊಂಡಿದ್ದಾರೆ. ಶ್ರೀರಾಮನ ಪಟ್ಟಾಭಿಷೇಕವಾದ ಮೇಲೆ ವಾನರ ಮಿತ್ರರನ್ನು ಒಬ್ಬೊಬ್ಬರನ್ನಾಗಿ ಕರೆದು, ಉಡುಗೊರೆ ಸನ್ಮಾನಗಳನ್ನಿತ್ತು ರಾಮನು ಗೌರವಿಸುತ್ತಾನೆ. ಆಗ ಮಾರುತಿಯ ಸರದಿ ಬರುತ್ತದೆ. ರಾಮನ ಸ್ನೇಹ ಭಾವ, ಆಗ ಕಟ್ಟೊಡೆದು ಹರಿಯುತ್ತದೆ. ಅವನನ್ನು ಅನುಗ್ರಹ ಪೂರಿತ ಕಣ್ಣುಗಳಲ್ಲಿ ಕಂಡು

'ಆರ್ ಉದವಿಡುದಕ್ಕುಗ ಓತ್ತಾರ್, ನೀಅಲಾಲ್, ಅನ್ರುಶೆಯ್ದ
ಪೇರ್ ಉದವಿಕ್ಕು ಯಾನ್ ಶೆಯ್ ಶೆಯಲ್ ಪಿಱಿದಿಲ್ಲೈ ಪೈಮ್ಬಾಣ್
ಪೇಲ್ ಉದವಿಯ ತಿಣ್‌ತೋಳಾಲ್ ಪೊರುನ್ದು ಅಪ್ಪುಲ್ಲುಗ !'

ನಿನ್ನಂತೆ ಸಂಕಟದ ನೇರದಲಿ ಯಾರೆನಗೆ ಒದಗಿ ನಿಂತವರು ?
ಅಂದು ನೀಮಾಡಿದುಪಕಾರಕ್ಕೆ ನಾನೇನು ಕೊಡಬಲ್ಲೆ ?
ಸಮರದಲಿ ಹೋರಿ ಜಯತಂದ ಆ ಬಲಿಮೆಯ ತೋಳ್ಗಳಿಂ
ಬಿಗಿದಪ್ಪು ಎನ್ನನೊಮ್ಮೆ

—ಎಂದು ಸ್ನೇಹ ವಾತ್ಸಲ್ಯಗಳಿಂದ ಬಾಹುಗಳನ್ನು ನೀಡಿ ಮಾರುತಿಯನ್ನು 'ನೀನೆ ಬಂದು ನನ್ನನ್ನು ಅಪ್ಪಿಕೋ' ಎಂದು ಸಲುಗೆಯಲ್ಲಿ ಕರೆಯುತ್ತಾನೆ. ಆದರೆ ಆಂಜನೇಯನು ಮಾತ್ರ ಹಾಗೆ ಮಾಡದೆ ದಾಸ್ಯಭಾವದಲ್ಲಿ ಬಾಗಿ ಕೈಯಿಂದ ಬಾಯಿ ಮುಚ್ಚಿದ ಭಂಗಿಯಲ್ಲಿ ನಿಲ್ಲುತ್ತಾನೆಂದು ಕಂಬರು ವರ್ಣಿಸಿದ್ದಾರೆ.*

ಈ ಎಲ್ಲ ಸಂದರ್ಭಗಳಲ್ಲಿಯೂ ಕಂಬರ ರಾಮ ದಿವ್ಯೋದಾತ್ತವಾಗಿ ನಡೆದು ಕೊಳ್ಳುತ್ತಾನೆ. ಪ್ರಾಂತೀಯ, ಜನಾಂಗೀಯ ಭೇದವೆಣಿಸದೆ, ಆಸೇತುಹಿಮಾಚಲ ಪರ್ಯಂತ ಇರುವ ಎಲ್ಲ ಜನರು ಒಂದು ಕುಟುಂಬದವರೆಂಬ ಸಂದೇಶವನ್ನು ಸಾರುವುದು ಕಂಬರ ಮೂಲ ಆಶಯವಾಗಿದೆ. ಗುಹ, ಸುಗ್ರೀವ, ವಿಭೀಷಣರು ಭಾರತೀಯ ಸಮಾಜದ ವಿವಿಧ ಸ್ತರಗಳನ್ನು, ಪ್ರದೇಶಗಳನ್ನು ಪ್ರತಿನಿಧಿಸುವ ಪ್ರತೀಕಗಳಾಗಿ ನಿಲ್ಲುತ್ತಾರೆ. ರಾಮನು ಅವರೆಲ್ಲರನ್ನು ಒಂದಾಗಿಸುವ ಮಹಾಶಕ್ತಿಯ ಸಂಕೇತವಾಗುತ್ತಾನೆ. ಮಧ್ಯಕಾಲೀನ ಸಮಾಜದಲ್ಲಿ ಬೇರೂರಿದ್ದ ವರ್ಣ, ಜಾತಿ ವ್ಯವಸ್ಥೆಯ ಕರಾಳ ಶಕ್ತಿಯನ್ನು ದಮನ ಮಾಡುವುದು ಕಂಬರ ದೃಢ ನಿಲವೂ

* ಈ ದೃಶ್ಯದ ಶಿಲ್ಪವೊಂದನ್ನು ಚೋಳರ ಕಾಲದ ಕಂಚಿನ ಪ್ರತಿಮೆಯಲ್ಲಿ ಕಡೆದಿರಿಸಿದ್ದಾರೆ.

ಆಗಿತ್ತೆಂದು ಕಾಣುತ್ತದೆ. ಯುದ್ಧ ಕಾಂಡದಲ್ಲಿ ಕುಂಭಕರ್ಣನ ಅವಸಾನದ ಸಮಯದಲ್ಲಿ ರಾಮನ ಸನ್ನಿಧಿಯಲ್ಲಿ ವಿಭೀಷಣನನ್ನು ಕುರಿತು ಕುಂಭಕರ್ಣನು ಆಡುವ ಮಾತುಗಳು ಕಂಬರ ಉದಾತ್ತ ನಿಲುವನ್ನು ದೃಢಪಡಿಸುತ್ತದೆ.

ನೀತಿಯಾಲ್ ವನ್ದದು ಒರು ನೆಡುನ್ದರುಂ ನೆಜಿ ಅಲ್ಲಾಲ್
ಜಾತಿಯಾಲ್ ವನ್ದ ಶಿಜುನೆಜಿಯುಜಿಯಾನ್ ಎನ್‌ತಮ್ಬಿ
ಆದಿಯಾಲ್ ಉನ್ನೈ ಅಡೈನ್ದಾನ್ ; ಅರಸರ್ ಉರುಕೊಣ್ಡ ಅಮ್ಮೈನ್ದ
ವೇದಿಯಾ ಇನ್ನಂ ಅಡೈಕ್ಕಲಂ ಯಾನ್ ವೇಣ್ಡಿನೇನ್

ನೀತಿಯಲಿ ನಿರ್ಮಿಸಿದ ಹೆದ್ದಾರಿಯನಲ್ಲದೆ
ಜಾತಿಯಲಿ ಸವೆದ ಕಿರುದಾರಿಯನರಿಯನೆನ್ನ ತಮ್ಮ
ಜಗದಾದಿಯಾದ ನಿನ್ನ ಸೇರಿದನು ನಂಬಿ ; ಅರಸು
ರೂಪಿಂತೋರ್ದ ವೇದಶ್ರುತನೆ ನೀನವನ ಪೊರೆದು ರಕ್ಷಿಪುದು

ಪರಿಶೀಲನ ಗ್ರಂಥಗಳು

1. ಎಸ್. ರಾಜಂ : ಕಂಬರಾಮಾಯಣಂ (ರಾಮಾವತಾರಂ)—ಆರು ಕಾಂಡಗಳು 5 ತಂಬೂ ಚೆಟ್ಟಿ ರಸ್ತೆ, ಮದ್ರಾಸು-1 1958-59
2. ಮು. ವರದರಾಜನ್ : ತಮಿಳು ಇಲಕ್ಕಿಯ ವರಲಾರು—ಸಾಹಿತ್ಯ ಅಕಾಡೆಮಿ ನವದೆಹಲಿ 1970
3. ಎಸ್. ಮಹಾರಾಜನ್ : ಕಂಬನ್ ಅನು : ಕೆ. ಕುಶಾಲಪ್ಪಗೌಡ, ಸಾಹಿತ್ಯ ಅಕಾಡೆಮಿ—ನವದೆಹಲಿ 1978
4. V. V. S. Aiyar — Kamba Ramayana-a study. Bharatiya Vidya Bhavan, Bombay. 1965
5. J. S. M. Hooper — Hymns of the Alvars, Pioneer Book Services Madras. 1985
6. S. Ramakrishna — The Epic muse : The Ramayana and Paradise lost, New Delhi. 1977

ಶಾಸನಗಳಲ್ಲಿ ರಾಮಾಯಣದ ಕೆಲವು ಅಂಶಗಳು

ಹೆಚ್. ಎಂ. ನಾಗರಾಜರಾವ್

ವಾಲ್ಮೀಕಿ ರಚಿಸಿದ ರಾಮಾಯಣ ಆಸ್ತಿಕರಿಗೆ ಪಾರಾಯಣ ಗ್ರಂಥ; ಸಾಹಿತ್ಯಾಸಕ್ತರಿಗೆ ಜಗತ್ತಿನ ಮಹಾಕಾವ್ಯಗಳಲ್ಲೊಂದು ; ಸಾಮಾನ್ಯ ಹಿಂದೂಗಳಿಗೆ ಒಂದು ಅವತಾರದ ಕಥೆ ; ಇಷ್ಟೇ ಅಲ್ಲ, ವಿಚಾರವಾದಿಗಳೆಂದು ತಮ್ಮನ್ನು ಕರೆದು ಕೊಳ್ಳುವವರಿಗೆ ಆಸಕ್ತಿಯನ್ನು ಕೆಣಕುವ ಕೃತಿ ಕೂಡ ! ಒಂದು ರೀತಿಯಲ್ಲಿ ರಾಮಾಯಣ ಮಾನವ ಅಂತರಂಗಕ್ಕೆ ಹಿಡಿದ ಕನ್ನಡಿ. ಅವರವರ ದೃಷ್ಟಿ, ಸಂಸ್ಕಾರ ಗಳಿಗೆ ಅನುಸಾರವಾದ ಮನೋಬಿಂಬಗಳು ಅದರಲ್ಲಿ ಕಾಣುತ್ತವೆ. ಆದ್ದರಿಂದ "ವಾಲ್ಮೀಕಿ ರಾಮಾಯಣವೆಂದರೆ ಭಾರತೀಯ ಸಂಸ್ಕೃತಿಯ ಜೀವನಾದರ್ಶಗಳ ನೈಜ ಚಿತ್ರಣ", "ಅದು ನಮ್ಮ ಪ್ರಾಚೀನ ರಾಷ್ಟ್ರೀಯ ಚರಿತ್ರೆ", "ರಾಮಾಯಣ ಒಂದು ಶಾಪಕಥೆ–ವರಕಥೆ" ಮುಂತಾದ ಹಲವು ಅಭಿಪ್ರಾಯಗಳು ವಿದ್ವಾಂಸರಲ್ಲಿರುವುದು ಸ್ವಾಭಾವಿಕವೇ.1 ಒಟ್ಟಾರೆ ಭಾರತೀಯ ಸಾಹಿತ್ಯ ಕೃತಿಗಳಿಗೆ ರಾಮಾಯಣ ನೀಡಿದ ಪ್ರೇರಣೆ ಮತ್ತು ಧರ್ಮ ಹಾಗೂ ಸಂಸ್ಕೃತಿಗಳ ಮೇಲೆ ಅದು ಬೀರಿರುವ ಪ್ರಭಾವ ಅಪಾರ.

ಶಾಸನಗಳು ಮೂಲಭೂತವಾಗಿ ಐತಿಹಾಸಿಕ ದಾಖಲೆಗಳು. ಒಂದು ನಿರ್ದಿಷ್ಟ ಘಟನೆಯ ಅಥವಾ ಸಂಗತಿಯ ನೇರ ನಿರೂಪಣೆಗಷ್ಟೇ ಮೊದಮೊದಲು ಸೀಮಿತ ವಾಗಿದ್ದ ಶಾಸನಗಳು ಕ್ರಮೇಣ ಇತರ ಹಲವಂಶಗಳನ್ನು ಮೈಗೂಡಿಸಿಕೊಳ್ಳುತ್ತ ಬೆಳೆಬೆಳೆದು ಸಾಹಿತ್ಯರೂಪ ತಳೆದು ನಿಂತವು. ಶಾಸನಗಳಲ್ಲಿ ಮೂಲ ಉದ್ದೇಶ ಹಿಂದೆ ಸರಿದು ಇತರ ಅಂಶಗಳೇ ಮೆರೆದವು. "ಒಂದೊಂದು ಶಾಸನದಲ್ಲಿಯೂ ಮಂಗಳ ಪದ್ಯಗಳು, ಚಕ್ರವರ್ತಿ, ಅವನ ಪೌರಾಣಿಕ ಹಿನ್ನೆಲೆ, ಚಾರಿತ್ರಿಕ ವಂಶಾವಳಿ, ಒಬ್ಬೊಬ್ಬ ರಾಜನ ವರ್ಣನೆ, ಆಳುವ ರಾಜನ ಸಾಹಸ ಪರಾಕ್ರಮಗಳು, ಅವನ ಸಾಮಂತರು, ಅವರ ವಂಶಾವಳಿ, ಮಾಡಿದ ದಾನ, ಕಟ್ಟಿಸಿದ ದೇವಾಲಯಗಳು,

ಊರು, ಊರಿರುವ ನಾಡು, ದಾನ ಪಡೆದವರು, ಅವರ ವಂಶ, ಕೊನೆಯಲ್ಲಿ ದಾನ ಫಲ, ಅದನ್ನು ಕೆಡಿಸುವುದರಿಂದುಂಟಾಗುವ ಪಾಪ—ಈ ಒಂದೊಂದೂ ಹಂತ ಹಂತವಾಗಿ ಚಿತ್ರಿಸುವಲ್ಲಿ ಅವೇ ಒಂದೊಂದು ಪುಟ್ಟ ಕಾವ್ಯವಾಗಿ ಪರಿಣಮಿಸಿದವು."2 ಗದ್ಯವಾಗಲಿ ಪದ್ಯವಾಗಲಿ ಶಾಸನಗಳು ಕೆಲವೊಮ್ಮೆ ಸೊಗಸಾದ ಸ್ವೋಪಜ್ಞ ವರ್ಣನೆ ಅಲಂಕಾರಗಳಿಂದ ಕೂಡಿದ್ದರೆ, ಮತ್ತೆ ಕೆಲವೊಮ್ಮೆ ಪೇಲವವೂ ಸಾಂಪ್ರದಾಯಿಕ ಸಿದ್ಧ ಶೈಲಿಯವೂ ಆಗಿ ಚರ್ವಿತಚರ್ವಣವೆನಿಸಿದವು. ಹಾಗಿದ್ದರೂ ಅವು ನಾಡಿನ ರಾಜಕೀಯ ಇತಿಹಾಸಕ್ಕೆ ಮಾತ್ರವಲ್ಲದೆ ಧರ್ಮ, ಸಮಾಜ, ಅರ್ಥನೀತಿ, ಭಾಷೆ, ಸಾಹಿತ್ಯ, ಸಂಸ್ಕೃತಿ ಇತ್ಯಾದಿಗಳ ಇತಿಹಾಸಕ್ಕೂ ಅಮೂಲ್ಯ ಆಕರಗಳಾದವು.

ಧರ್ಮ ಪ್ರಧಾನವಾದ ಶಾಸನ ಸಂಸ್ಕೃತಿ ಭಾರತೀಯ ಸಂಸ್ಕೃತಿಯಿಂದ ಸ್ವಾಭಾವಿಕವಾಗಿಯೇ ಅಭಿನ್ನ. ಶಾಸನಗಳಲ್ಲಿ ನಮ್ಮ ಕಾವ್ಯ ಪುರಾಣಗಳ ಹಲವು ಅಂಶಗಳು ಅಲ್ಲಲ್ಲಿ ಆನುಷಂಗಿಕವಾಗಿ ಬಿಂಬಿತವಾಗಿರುವಂತೆಯೇ ರಾಮಾಯಣದ ಕೆಲವು ಅಂಶಗಳು ನಿರೂಪಿತವಾಗಿವೆ. ಅಂಥ ಅಂಶಗಳಲ್ಲಿ ಕೆಲವನ್ನು ಆಯ್ದು ಪರಿಚಯಿಸುವುದಷ್ಟೇ ಈ ಲೇಖನದ ಉದ್ದೇಶ.

1

ರಾಮಾಯಣದ ಕಥೆ ಸುವಿದಿತ ; ಮೂಲ ಕಥಾಚೌಕಟ್ಟಿಗೆ ಸಂಬಂಧಿಸಿದ ಕೆಲವು ಶಾಸನೋಲ್ಲೇಖಗಳನ್ನು ಇಲ್ಲಿ ಗಮನಿಸಿದೆ ; ಉಪಕಥೆಗಳನ್ನು—ಉದಾಹರಣೆಗೆ ಸಮುದ್ರ ಮಥನ, ಅಹಲ್ಯೆಯ ಪ್ರಸಂಗ ಇತ್ಯಾದಿ—ಗಮನಿಸಿಲ್ಲ.

ಮಂತ್ರಿ ಸುಮಂತ್ರನ ಸಲಹೆಯ ಮೇರೆಗೆ ಮತ್ತು ಕುಲಗುರು ವಸಿಷ್ಠರ ಅನುಮತಿ ಪಡೆದು ದಶರಥ ಪುತ್ರಾಪೇಕ್ಷೆಯಿಂದ ಯಾಗ ಮಾಡುತ್ತಾನೆ. ಇದಕ್ಕಾಗಿ ಋಷ್ಯಶೃಂಗನನ್ನು ಆಹ್ವಾನಿಸಲು ಆತ ಪತ್ನಿಯರು ಹಾಗೂ ಅಮಾತ್ಯರೊಡಗೂಡಿ ರೋಮಪಾದನ ಪಟ್ಟಣಕ್ಕೆ ತೆರಳುತ್ತಾನೆ. ನಡೆದ ಯಜ್ಞದ ಫಲವಾಗಿ ಶ್ರೀರಾಮ ಮತ್ತು ಆತನ ಸೋದರರು ಜನ್ಮವೆತ್ತುತ್ತಾರೆ. ಈ ಸಂದರ್ಭವೂ ಸೇರಿದಂತೆ ರಾಮಾಯಣದ ಕಥೆಯನ್ನು ಶಾಸನವೊಂದು ಅತ್ಯಂತ ಸಂಕ್ಷಿಪ್ತ ರೀತಿಯಲ್ಲಿ ತಿಳಿಸುವುದು ಹೀಗೆ : 'ಸೂರ್ಯ ವಂಶದ ಕ್ಷತ್ರಿಯಂ ದಿಳೀಪನಾತನ ಮಗಂ ರಘು ವಾತನ ಮಗನಜನಾತನ ಮಗಂ ದಶರಥ ಚಕ್ರವರ್ತ್ತಿ ತಾನಪುತ್ರಕನಪ್ಪುದಱಿ ನಿಜವಂಶಾಚಾರ್ಯ್ಯರಪ್ಪ ವಶಿಷ್ಠೋಪದೇಶದಿನಾ ರಿಶ್ಯಶ್ರಿಂಗ ಮಹಾರಿಶಿಯಂ ತಂನಲ್ಲಿಗೆ ಬರಿಸಿ ಪುತ್ರಕಾಮೇಷ್ಟಿಯಂ ಮಾಡ್ಡಿ ರಾಮ ಲಕ್ಷ್ಮಣ ಭರತ ಶತ್ರುಘ್ನರೆಂತು ನಾಲುವರು ಪುತ್ರರಂ ಪಡೆದನಲ್ಲಿ ರಾಮ ಲಕ್ಷ್ಮಣರು ರಾವಣಂ ಮೊದಲಾಗಿ ಸಮಸ್ತ ದಾನವರಂ ಸಂಹರಿಸಿ' ಅಯೋಧ್ಯೆಗೆ ಹಿಂದಿರುಗುತ್ತಾರೆ.3 ಇದರಲ್ಲಿ ದಶರಥನ ಪೂರ್ವಜರನ್ನೂ ಹೆಸರಿಸಿದೆ. ಸುಮಂತ್ರ ದಶರಥನನ್ನು ಏಕಾಂತದಲ್ಲಿ ಭೇಟಿಮಾಡಿ ಋಷ್ಯಶೃಂಗನನ್ನು ಕರೆಸುವಂತೆ ಸಲಹೆ ನೀಡಿದನೆಂದು ವಾಲ್ಮೀಕಿ ರಾಮಾಯಣದಲ್ಲಿ

ಹೇಳಿದೆ. ಪ್ರಸ್ತುತ ಶಾಸನದಲ್ಲಿ ಸುಮಂತ್ರನ ಉಲ್ಲೇಖವಿಲ್ಲ ; ಆದರೆ ವಸಿಷ್ಠರ ಪ್ರಸ್ತಾಪವಿದೆ.

* * *

ಸೀತಾ-ರಾಮ ಕಲ್ಯಾಣದ ತರುವಾಯ ತನ್ನ ಪರಿವಾರದೊಡನೆ ಅಯೋಧ್ಯೆಗೆ ಮರಳುವಾಗ ಮಾರ್ಗಮಧ್ಯೆ ರಾಮನಿಗೂ ಪರಶುರಾಮನಿಗೂ ಮುಖಾಮುಖಿಯಾಗುತ್ತದೆ. ಪರಶುರಾಮನ ಸವಾಲನ್ನು ಸ್ವೀಕರಿಸಿದ ರಾಮ ಆತನ ವೈಷ್ಣವ ಧನುಸ್ಸನ್ನು ಹೆದೆಯೇರಿಸುತ್ತಾನೆ. ಇವರ ನಡುವಣ ಸ್ಪರ್ಧೆಯನ್ನು ನೋಡಲು ದೇವದೇವತೆಗಳು ಅಲ್ಲಿಗೆ ಬಂದು ಸೇರುತ್ತಾರೆ. ಪರಶುರಾಮನೂ ವಿಷ್ಣುವಿನ ಅವತಾರವೇ. ತನ್ನ ಕಾರ್ಯ ತೀರಿತೆಂಬುದನ್ನು ಮನಗಂಡ ಪರಶುರಾಮ ತನ್ನ ಪರಾಭವವನ್ನು ಒಪ್ಪಿಕೊಂಡು ತಪಸ್ಸಿಗೆ ತೆರಳುತ್ತಾನೆ. ಈ ಹಿನ್ನೆಲೆಯಲ್ಲಿ ಶಾಸನವೊಂದರಲ್ಲಿರುವ 'ಜಯಶ್ರಿಯಂ ಪಲ್ಲವ ಪಾರ್ಥಿವಸ್ಯ ಜಹಾರ ರಾಮಸ್ಯ ಯಥೈವ ರಾಮಃ' ಎನ್ನುವ ಮಾತನ್ನು ಅರ್ಥೈಸಿಕೊಳ್ಳಬೇಕು.4 ಪಲ್ಲವ ದೊರೆಯ ಜಯಶ್ರೀ ಕದಂಬ ಅರಸ ಮೃಗೇಶನ ಪಾಲಾಗುತ್ತದೆ ; ಆತ ರಾಮನಿಂದ ಪರಾಜಿತನಾದ ರಾಮನಂತಾಗುತ್ತಾನೆ ! ಈ ರಾಮರಲ್ಲಿ ಒಬ್ಬ 'ದಶರಥಸುನುತಂ ಲಕ್ಷ್ಮಣಾಗ್ರಜನುಂ ಸೀತಾವಲ್ಲಭನುಂ ಇಕ್ಷ್ವಾಕು ಕುಳಜನುಮಪ್ಪ ರಾಮ'ನಾದರೆ,5 ಇನ್ನೊಬ್ಬ 'ಜಮದಗ್ನಿಗೆ ಪುಟ್ಟಿ ಸಮಸ್ತ ಶಸ್ತ್ರಶಾಸ್ತ್ರ ವಸತಿಭಕ್ತಿಯಿಂದೆ ಗಿರಿಜಾವರನೊಳು ನೆಜಿ ಕಲ್ತು ದುಷ್ಟರಪ್ಪವನಿಪರೆಲ್ಲರಂ ಕಿಡಿಸಿ ಸದ್ವಿಜಪಾಲಕನಾದ ರಾಮ''6

* * *

ರಾಮ ಲಕ್ಷ್ಮಣರಿಂದ ಬೇರ್ಪಟ್ಟ ಸೀತೆಯನ್ನು ರಾವಣ ಬಲಾತ್ಕಾರದಿಂದ ಕರೆದೊಯ್ಯುತ್ತಿರುವಾಗ ದುಃಖತಪ್ತಳಾದ ಆಕೆ ಮರವೊಂದರ ಮೇಲಿದ್ದ ಜಟಾಯುವನ್ನು ನೋಡುತ್ತಾಳೆ ; ತನ್ನ ಅಪಹರಣದ ವಾರ್ತೆಯನ್ನು ತನ್ನ ಪತಿಗೆ ತಿಳಿಸಬೇಕೆಂದು ಕೋರುತ್ತಾಳೆ. ರಾವಣನಿಗೆ ಜಟಾಯು ಹೇಳುವ ಬುದ್ಧಿಮಾತು ವಿಫಲವಾಗುತ್ತದೆ. ಅವರಿಬ್ಬರ ನಡುವೆ ನಡೆದ ಹೋರಾಟದಲ್ಲಿ ರಾವಣ ಗೆಲ್ಲುತ್ತಾನೆ. ಗಾಯಗೊಂಡ ಜಟಾಯು ರಾಘವಾಶ್ರಮದ ಬಳಿಯಲ್ಲೇ ಬೀಳುತ್ತಾನೆ. ರಾಮಸಾಗರದ ಶಾಸನವೊಂದು ಈ ಘಟನೆಯನ್ನು ಹೀಗೆ ಉಲ್ಲೇಖಿಸಿದೆ : 'ಸೀತೆಯಂ ರಾವಣನುಯೆ ಜಟಾಯು ಕಾದಿ ಸತ್ತಲ್ಲಿ'.7 ಈ ಸ್ಥಳದಲ್ಲಿ ರಾಮ ಪ್ರತಿಷ್ಠೆ ಮಾಡಿದ್ದ ದೇವಾಲಯದ ಜೀರ್ಣೋದ್ಧಾರ-ಪುನರ್‌ನಿರ್ಮಾಣದ ಸಂಗತಿಯೂ ಈ ಶಾಸನದಲ್ಲಿ ನಿರೂಪಿತವಾಗಿದೆ. ಶಾಸನವಿರುವ ತಾಣದ ಹೆಸರು ಜಟ್ಟಿಂಗ ರಾಮೇಶ್ವರ ಎಂದಿರುವುದು ಗಮನಾರ್ಹ.

* * *

ರಾಮ ದೂತನಾಗಿ ಲಂಕೆಗೆ ಹೋದ ಹನುಮಂತನ ಮಾತುಗಳಿಂದ ರೋಷಗೊಂಡ ರಾವಣ ಆ ವಾನರ ವೀರನ ಬಾಲವನ್ನು ಸುಟ್ಟು ಹಾಕುವಂತೆ ಆಜ್ಞೆ ಮಾಡುತ್ತಾನೆ. ಆದರೆ ಅದು ರಾವಣನಿಗೆ ತಿರುಗುಬಾಣವಾಗಿ ಲಂಕೆಯೇ ಹೊತ್ತಿ ಉರಿಯುವಂತಾಗುತ್ತದೆ. ಇದರ ವಿಸ್ತಾರವಾದ ವರ್ಣನೆ ಸುಂದರಕಾಂಡದಲ್ಲಿದೆ. ತ್ರಿಪುರವು ತ್ರಿಣೇತ್ರನಿಂದ, ಖಾಂಡವ ವನವು ಅರ್ಜುನನಿಂದ ಮತ್ತು ಲಂಕೆಯು ಹನುಮಂತನಿಂದ ನಾಶವಾದ ಹಾಗೆ ಚೋಳಪುರವು ಉದಯಾದಿತ್ಯನಿಂದ ನಿರ್ನಾಮವಾಯಿತೆಂದು ಒಂದು ಶಾಸನ ಸಾರುತ್ತದೆ.8 'ದೈತ್ಯಪುರಂ ಕಪಿಯಿಂದೆ' ಎಂಬ ಶಾಸನಪಾಠಭಾಗ ಲಂಕಾದಹನದ ಘಟನೆಯನ್ನು ಸೂಚಿಸುತ್ತದೆ.

* * *

ಸಮುದ್ರ ರಾಜನನ್ನು ಕುರಿತು ರಾಮ ಮಾಡಿದ ಪ್ರಾರ್ಥನೆ ಫಲ ನೀಡುವುದಿಲ್ಲ. ಕುಪಿತನಾದ ರಾಮ ತನ್ನ ಬಿಲ್ಲನ್ನು ಹೆದೆಯೇರಿಸಿ ಬ್ರಹ್ಮಾಸ್ತ್ರವನ್ನು ಅಭಿಮಂತ್ರಿಸಿ ಬಾಣ ಪ್ರಯೋಗಕ್ಕೆ ಸಿದ್ಧನಾಗುತ್ತಾನೆ. ಆಗ ಉಂಟಾದ ಅಲ್ಲೋಲಕಲ್ಲೋಲದ ವರ್ಣನೆಯನ್ನು ರಾಮಾಯಣದ ಯುದ್ಧಕಾಂಡದ 33ನೆಯ ಸರ್ಗದಲ್ಲಿ ನೋಡಬಹುದು : ಭೂಮಿ ಆಕಾಶಗಳು ಸೀಳಿ ಹೋಗುತ್ತಿರುವಂತೆ ಕಂಪವು ; ಬೆಟ್ಟಗಳು ನಡುಗಿದವು ; ಕತ್ತಲೆ ಕವಿಯಿತು ; ದಿಕ್ಕುಗಳು ಕಾಣದಾದವು ; ಸಮುದ್ರ ಉಕ್ಕೇರಿತು ಇತ್ಯಾದಿ. ಕೊನೆಗೆ ಸಮುದ್ರರಾಜ ಪ್ರತ್ಯಕ್ಷನಾಗಿ ರಾಮನನ್ನು ಪ್ರಾರ್ಥಿಸುತ್ತಾನೆ. ಆತನ ಸಲಹೆಯಂತೆ ರಾಮ ಬಾಣವನ್ನು ಆಭೀರರಿದ್ದ ಪ್ರದೇಶದತ್ತ ಬಿಡುತ್ತಾನೆ. ಸಮುದ್ರದ ಹೊಟ್ಟೆಯಲ್ಲಿದ್ದ ನೀರನ್ನು ಅದು ಹೀರಿ ಬಿಡುತ್ತದೆ. ಆಮೇಲೆ ವಾನರರು ಸೇತುವೆಯನ್ನು ಕಟ್ಟುತ್ತಾರೆ.

ರಾಮನ ರೋಷ ಮತ್ತು ಬಾಣ ಪ್ರಯೋಗವನ್ನು ಹೋಲಿಕೆಯಾಗುಳ್ಳ ಕೆಲವು ಪದ್ಯಗಳನ್ನು ಶಾಸನಗಳಲ್ಲಿ ಗಮನಿಸಬಹುದು. ಹೊಯ್ಸಳ ದೊರೆ ಎರೆಗಂಗನ ಕೋಪದಿಂದ ಸುಟ್ಟುಹೋದ ಕಡಲ ತೀರದ ಬಳೆಯುವಟ್ಟಣ ನೆನಪಿಗೆ ತಂದದ್ದು ರಾಮನ ಬೆಂಕಿಬಾಣದಿಂದಾಗಿ ಸಾಗರದಲ್ಲಿ ಉಕ್ಕೇರಿದ ಅಲೆಗಳನ್ನು :

ಕರೆವಿಡಿದು ಬಳೆಯುವಟ್ಟಣ
ಮುರಿವುದುಮೆಱೆಗಂಗನೃಪನ ಕೋಪಾನಳನಿಂ ।
ಸ್ಮರಿಯಿಸಿದುದು ರಾಮಶರ
ಸ್ಫುರಿತಾಗ್ನಿಯನಬ್ಧಿ ವೀಚಿನಿಚಯಾ ಚಕಿತಂ ॥9

ಹಿಂದೆ ರಾಮನ ಬಾಣಾಗ್ರಕ್ಕೆ ಬೆದರಿ ಸ್ತಬ್ಧವಾದ ಸಾಗರದಂತೆ ಈಗ ಹೊಯ್ಸಳ ನರಸಿಂಹನ ಭರ್ಜಿಯ ಮೊನೆಗೆ ಶತ್ರುಸೈನ್ಯಸಾಗರ ಹೆದರಿ ನಿಂತ ಸ್ಥಳದಲ್ಲೇ ನಿಂತು ಬಿಟ್ಟಿತಂತೆ :

ಬಂದು ಕವಿದರಿಬಳಾಂಬುಧಿ
ನಿಂದುದು ನರಸಿಂಹನೊಂದೆ ಸಬಳದ ಮೊನೆಯೊಳ್ ।
ಬಿಂದುವಿನಂದದೆ ಮುನ್ನಂ
ನಿಂದವೊಲಂಬೋಧಿ ರಾಮನಂಬಿನ ಮೊನೆಯೊಳ್ ॥10

ಇವೆರಡೂ ಪದ್ಯಗಳು ಹೊಯ್ಸಳ ಶಾಸನಗಳಲ್ಲಿ ಸಾಕಷ್ಟು ಸಲ ಬಂದಿವೆ ; 'ಗಂಭೀರ ನೀರಾಕರಮನಿತುಮಂ ರಾಮನೊಂದಂಬು ಪೀರ್ವಂತಿರೆ'[11] ಅಥವಾ 'ಅಂಬೋಧೇನ ...ರಾಘವ ಸಾಯಕಾಗ್ರಶಿಖಯಾ ಸಂತಪ್ತಮಾನಃ ಸದಾ'[12] ಮುಂತಾದ ಶಾಸನ ಸಾಲುಗಳಲ್ಲಿ ಇಂಥ ಕೆಲವು ನಿದರ್ಶನಗಳನ್ನು ಕಾಣಬಹುದು.

ಹಿಂದಿನ ಕಾಲದ ಅರಸು ಅಧಿಕಾರಿಗಳು ಕಟ್ಟಿಸಿದುದು ಕೆರೆಯಾದರೂ ಅದನ್ನು ಸಮುದ್ರವೆಂದು ಕರೆದು ಅದರ ಹೆಗ್ಗಳಿಕೆಯನ್ನು ಉತ್ಪ್ರೇಕ್ಷಿಸಿದ ಉದಾಹರಣೆಗಳಲ್ಲಿ ಕೂಡ ರಾಮಾಯಣದ ಈ ಪ್ರಸಂಗದ ಉಲ್ಲೇಖ ಕಂಡುಬರುತ್ತದೆ. ಮಹರ್ಷಿ ಅಗಸ್ತ್ಯ ಆಪೋಶನ ಮಾಡಿ ಉಗುಳಿದ ಹಾಗೂ 'ರಘುಕುಳಧವನುಗ್ರೇಷುವಿಂ ಕಾಯ್ದು'[13] ಸಮುದ್ರಕ್ಕೆ ದೀವಳಬಾಸಮುದ್ರವನ್ನು ಹೋಲಿಸಿದರ ಅದು ಅಪಚಾರವೇ ! ಇನ್ನು ವಿಷ್ಣುಸಮುದ್ರವಾದರೋ 'ರಘುವಂಶನುಗ್ರತೀವ್ರಬಾಣದಿಂದುಡುಗು'ವಂಥ[14] ಸಮುದ್ರವಲ್ಲ ! ಗೊಳಿಬಾಚಿ ಎಂಬಾತ ಕಟ್ಟಿಸಿದ ಕೆರೆಗಳು ಸಮುದ್ರವನ್ನು ಲೇವಡಿ ಮಾಡುವುದು ಹೀಗೆ :

ರಾಮನ ಬಾಣದಿಂದೆ ಲಘುವಾದುದು ನೋರ್ಪ್ಪಡ ಮತ್ತವಾನರರ್
ಪ್ರೇಮದೆ ಪರ್ಬ್ಬತ ಪ್ರತತಿಯಿಂದಮೆ ಕಟ್ಟಿದ ಸಿಂಧು ತನ್ನ ನೀ ।
ಭೀಮಪರಾಕ್ರಮಂ ಮುದದೆ ಕಟ್ಟಿದೊಳ್ಪನ ಪೆಂಪಿನಿಂದೆ ತಾಂ
ಭೀಮಸಮುದ್ರವೇಳಿಪುದು ವಾರ್ಧಿಯ ಗುಣ್ಪಿನದಿಣ್ಪನೇಳ್ಗೆಯಂ ॥15

ಈ ಪದ್ಯದಲ್ಲಿ ವಾನರರು ಸೇತುವೆ ನಿರ್ಮಿಸಿದ ಉಲ್ಲೇಖವಿರುವುದನ್ನೂ ಗಮನಿಸ ಬಹುದು. ಈ ಇನ್ನೊಂದು ಪದ್ಯ ಅದಳ ಸಮುದ್ರ ಎಂಬ ಕೆರೆಯ ವರ್ಣನೆ ;

ಉದಧಿಯೆಗುಣ್ಬಗಸ್ತ್ಯಮುನಿಪುಂಗವ ನಿನ್ನವೊ ನೀದುದಾಗಿಯುಂ
ಮದನಪರಪ್ರತಾಪ ರಘುರಾಮನ ರಾಮನ ಬಾಣಘಾತದಿಂ ।
ದುರಿದುದೇವುದೆನ್ದು ಸುಭಟಾಗ್ರಣಿಬಾಯಪೆಣ್ವೆನಂದದಿಂ
ದದಳಸಮುದ್ರವೇಳಿಪುದು ತನ್ನ ಮಹತ್ವದಿನಂಬುರಾಶಿಯು ॥16

ಇಂಥ ಹಲವಾರು ಉದಾಹರಣೆಗಳು ಶಾಸನಗಳಲ್ಲಿ ದೊರೆಯುತ್ತವೆ.

* * *

ಕುಂಭಕರ್ಣ ಕಠೋರ ತಪವನ್ನಾಚರಿಸಿದಾಗ ದೇವದೇವತೆಗಳಿಗೆ ಭಯವುಂಟಾಗಿ ಅವರು ಬ್ರಹ್ಮನನ್ನು ಪ್ರಾರ್ಥಿಸುತ್ತಾರೆ. ಅವರಿಗೆ ಅಭಯವನ್ನಿತ್ತ ಬ್ರಹ್ಮ ಕುಂಭಕರ್ಣನ ಬುದ್ಧಿಯನ್ನು ಮರುಳುಗೊಳಿಸುವಂತೆ ಸರಸ್ವತಿಗೆ ಹೇಳುತ್ತಾನೆ. ಬ್ರಹ್ಮ ಪ್ರತ್ಯಕ್ಷನಾದಾಗ ಕುಂಭಕರ್ಣ ಕೇಳಬೇಕೆಂದಿದ್ದುದು ನಿರ್ದೇವತ್ವವನ್ನು ; ಆದರೆ ಸರಸ್ವತಿಯ ಪ್ರಭಾವದಿಂದಾಗಿ ಆತ ಹೀಗೆ ಕೋರುತ್ತಾನೆ ; 'ಸ್ವಪ್ತುಂ ವರ್ಷಾಣ್ಯನೇಕಾನಿ ದೇವದೇವ ಮಮೇಪ್ಸಿತಮ್' (ಎಲೈ ದೇವ ದೇವ, ಬಹಳ ವರ್ಷಗಳ ಕಾಲ ನಾನು ನಿದ್ರಿಸುತ್ತಿರಬೇಕೆಂಬುದು ನನ್ನ ಬಯಕೆ).17 ಬ್ರಹ್ಮ ಆ ವರವನ್ನು ನೀಡುತ್ತಾನೆ.

ಜ್ಯೇಷ್ಠಾದೇವಿಯ ಮಹಿಮೆಯನ್ನು ಸಾರುವ ಶಾಸನ ಪದ್ಯವೊಂದರಲ್ಲಿ ಈ ಸನ್ನಿವೇಶ ಸೊಗಸಾಗಿ ನಿರೂಪಿತವಾಗಿದೆ :

ತಪದಿಂ ನೋಡಿರೆ ಕುಂಭಕರ್ಣನಜನಂ ಮೆಚ್ಚಿಪ್ಪುದುಂ ಮೆಚ್ಚನಿ
ತ್ತಪೆನೆಂದಬ್ಜಭವಂಗೆ ದಾನವವರಂ ನಿರ್ದೆಯ್ವವಕ್ಕೆಂದು ಯಾ ।
ಚಿಪುದಂ ಮಾನ್ದಿಸಿ ನಿಂದು ನಾಲಗೆಯೊಳೆಂದು ನಿದ್ರೆಯಕ್ಕೆಂದು ಯಾ
ಚಿಪುದಂ ಮಾಡಿಸಿಯನ್ನನಂ ಕಿಡಿಸಿದಳ್ ಬಲ್ಪೆಂತುಟೋ ಜ್ಯೇಷ್ಠೆಯಾ ॥18

* * *

ರಾಮಾಯಣದ ಕಥೆಯಲ್ಲಿ ರಾಮ–ರಾವಣರ ಯುದ್ಧ ಅಂತಿಮ ನಿರ್ಣಾಯಕ ಘಟ್ಟ. ಇಬ್ಬರ ನಡುವೆ ಉಂಟಾದ ಭೀಕರ ಹೋರಾಟ ಹೋಲಿಕೆಗೇ ಸಿಕ್ಕದ ಮಹದ್ಘಟನೆ. ಅದನ್ನು ವಾಲ್ಮೀಕಿ ವರ್ಣಿಸುವ ರೀತಿ ಇದು :

ಗಗನಂ ಗಗನಾಕಾರಂ ಸಾಗರಃ ಸಾಗರೋಪಮಃ ।
ರಾಮರಾವಣಯೋರ್ಯುದ್ಧಂ ರಾಮರಾವಣಯೋರಿವ ॥19

ಈ ವರ್ಣನೆಯನ್ನೇ ನಮ್ಮ ಪೂರ್ವಿಕರು ಅನನ್ವಯಾಲಂಕಾರವೆಂದು ಕರೆದರು. ಈ ಯುದ್ಧದಲ್ಲಿ ರಾವಣ ಪರಾಜಿತನಾಗಿ ಹತನಾಗುತ್ತಾನೆ. ಶಾಸನಗಳಲ್ಲಿ ರಾವಣವಧೆಯು ವಿಷಯ ಪ್ರಾಸಂಗಿಕವಾಗಿ ನಿರೂಪಿತವಾಗಿದೆ: 'ಅರಿವರ್ಗಂ ರೌದ್ರಮಾರ್ಗಂ ಬೆರಸು ದಶಶಿರಾಕಾರದಿಂದಾಜಿಗಣ್ಮಲ್ ಶಿರಮಂ ತದ್ವೇಗದಿಂದಂ ದಶರಥತನಯಂ ಪಾಱಲೆಚ್ಚಂತೆ' ಬಮ್ಮಭೂಪನ ಪರಾಕ್ರಮವಿದ್ದಿತು.20 ನಾರಸಿಂಹನೆಂಬ ಧೀರ 'ಲಂಕೇಶ್ವರನಂ ಕೂರಂಬಿನಿಂ ತತ್ತಱಿದದಟಂಗೆ ಯುದ್ಧಾಟೋಪದಿಂ ದೊರೆಯಾದ' !21

ತಿರುಮಲರಾಯನೆಂಬ ಅರಸ ರಾಜ್ಯ ಪಡೆದ ಸಂಗತಿಯನ್ನು ನಿರೂಪಿಸುವ ಶಾಸನವೊಂದು ರಾಮಾಯಣದ ಕಥೆಯನ್ನು ಸ್ಥೂಲವಾಗಿ ತಿಳಿಸುವುದು ಹೀಗೆ :

> ಜಾತಾಸ್ತಸ್ಯ ಮಹಾಶ್ವಮೇಧ ಸುಕೃತಾಶ್ಚಾಟ್ಸ್ತ್ರಾತ್ಪುಮರ್ತ್ಥಯಥಾ
> ಚತ್ವಾರಸ್ತನಯಾಸ್ತಥೇಷುಚ ಗುಣ್ಯೈರ್ಜ್ಯಾಯಾನ್ಸಮಾಯಾನಿಧಿಂ ।
> ಜಿತ್ವಾ ರಾವಣಮಾಹವೇ ತ್ರಿಜಗತಾಂ ರಾಮೋಯಮಾಮೋದನ
> ಸ್ಸೀತಾ ರಾಜ್ಯರಮೇಸಮೇತ್ಯವವೃಧೇ ಸಾಕೇತ ಭದ್ರಾಸನೇ ।22

"ಆತನ (ದಶರಥನ) ಮಹಾಶ್ವಮೇಧದ ಫಲವಾಗಿ ಚತುರ್ವಿಧ ಪುರುಷಾರ್ಥ ಗಳಂತೆ ನಾಲ್ವರು ಮಕ್ಕಳು ಜನಿಸಿದರು. ಅವರಲ್ಲಿ ಗುಣಶ್ರೇಷ್ಠನಾದ ರಾಮನು ಕದನದಲ್ಲಿ ರಾವಣನನ್ನು ಜಯಿಸಿ, ಮೂರು ಲೋಕಕ್ಕೆ ಆನಂದದಾಯಕನಾಗಿ ರಾಜ್ಯಶ್ರೀ ಹಾಗೂ ಸೀತಾ ಸಹಿತನಾಗಿ ಅಯೋಧ್ಯೆಯ ಸಿಂಹಾಸನಾರೂಢನಾಗಿ ಕಂಗೊಳಿಸಿದನು." ರಾಮಾವತಾರದ ಉದ್ದೇಶವನ್ನು ಇನ್ನೊಂದು ಶಿಲಾಶಾಸನ ಹೀಗೆ ನಿರೂಪಿಸುತ್ತದೆ : 'ಸಕಲಲೋಕನಾಥಂ ಶ್ರೀರಾಮಾವತಾರಮಂ ಮಾಡಿ ದಶಕಂಠನಂ ತ್ರಿದಶಕಂಟಕನಂ ಕೊಂದು ಸಕಲ ರಾಕ್ಷಸರೆಲ್ಲವಂತೀರ್ಚ್ಚಿ ಶ್ರೀ ವಿಭೀಷಣಂಗೆ ನಿತ್ಯತ್ವಮಂ ಪ್ರಸಾದಿಸಿ'23 ಲೋಕಕಲ್ಯಾಣವನ್ನು ಸಾಧಿಸಿದ.

2

ರಾಮಾಯಣ ಚಿರಂತನ ಮಹಾಕಾವ್ಯ. "ಈ ಭೂಲೋಕದ ಮೇಲೆ ಎಲ್ಲಿಯ ವರೆಗೆ ಪರ್ವತಗಳು ವಿರಾಜಿಸುತ್ತವೆಯೋ ನದಿಗಳು ಹರಿಯುತ್ತವೆಯೋ ಅಲ್ಲಿಯವರೆಗೆ ರಾಮಾಯಣವು ಜನರ ಬಾಯಿಯಲ್ಲಿ ಇರುವುದು ಖಂಡಿತ" ಎಂದು ಆಡಿದ ಬ್ರಹ್ಮ ದೇವನ ಭವಿಷ್ಯವಾಣಿಯನ್ನು ಕಾಲವೇ ಸ್ಥಿರಮಾಡಿ ತೋರಿಸಿದೆ.24 ಸ್ವತಃ ರಾಮನಿಗೇ ತನ್ನ ಕಥೆ ಅಮರವಾಗಿರುತ್ತದೆಂಬ ದೃಢ ನಂಬಿಕೆ ಇದ್ದಿರಬೇಕು ; ಆತ ವಿಭೀಷಣನಿಗೆ ಹೀಗೆ ಹೇಳುತ್ತಾನೆ :

ಯಾವಚ್ಚಂದ್ರಶ್ಚ ಸೂರ್ಯಶ್ಚ ಯಾವತ್ತಿಷ್ಠತಿ ಮೇದಿನೀ ।
ಯಾವಚ್ಚ ಮತ್ಕಥಾ ಲೋಕೇ ತಾವದ್ರಾಜ್ಯಂ ತವಾಸ್ತ್ವಿಹ ॥25

"ಸೂರ್ಯಚಂದ್ರರು ಪೃಥ್ವಿಯನ್ನು ಬೆಳಗುತ್ತಿರುವವರೆಗೆ ಮತ್ತು ನನ್ನ ಕಥೆಯು ಈ ಲೋಕದಲ್ಲಿ ಪ್ರಚಾರದಲ್ಲಿರುವವರೆಗೆ ನಿನ್ನ ರಾಜ್ಯವು ಸ್ಥಿರವಿರಲಿ". ವಿಭೀಷಣನ ಮೇಲೆ ರಾಮನಿಗಿದ್ದ ಪ್ರೀತಿ-ಸದ್ಭಾವನೆಗಳನ್ನು ಈ ಶ್ಲೋಕ ಸೂಚಿಸುತ್ತದೆ. ನಮ್ಮ ಶಾಸನ ಲೇಖಕರು ಇದನ್ನು ಅಲ್ಪ ಸ್ವಲ್ಪ ಬದಲಾವಣೆಯೊಡನೆ ಅಳವಡಿಸಿಕೊಂಡು ಶಾಸನದ ಫಲಸ್ತುತಿ ಭಾಗದಲ್ಲಿ ಸೇರಿಸಿಕೊಂಡಿದ್ದಾರೆ – ಅದು ಫಲಸ್ತುತಿಗೆ ಹೊಂದಿಕೊಳ್ಳುತ್ತದೆಯೆ ಇಲ್ಲವೆ ಎನ್ನುವ ವಿವೇಚನೆಯನ್ನೂ ಮಾಡದೆ ! ಶಾಸನಗಳಲ್ಲಿ ಬಂದಿರುವ ಶ್ಲೋಕದ ಪಾಠ ಹೀಗಿದೆ :

ಯಾವಚ್ಚಂದ್ರಸ್ಯ ಸೂರ್ಯಸ್ಯ ಯಾವತ್ತಿಷ್ಠತಿ ಮೇದಿನೀ ।
ಯಾವದ್ರಾಮಕಥಾ ಲೋಕೇ ತಾವದ್ರಾಜ್ಯ ವಿಭೀಷಣಂ ॥26

[ಚಂದ್ರ, ಸೂರ್ಯ, ಭೂಮಿ ಹಾಗೂ ರಾಮಕಥೆ ಇರುವವರೆಗೂ ವಿಭೀಷಣನ ರಾಜ್ಯವಿರುತ್ತದೆ].

3

ವಾಲ್ಮೀಕಿ ರಾಮಾಯಣದಲ್ಲಿಲ್ಲದ ಸಂದರ್ಭವೊಂದು ಶಾಸನಗಳಲ್ಲಿ ಸೂಚಿತವಾಗಿರುವುದು ಕುತೂಹಲಕಾರಿಯಾಗಿದೆ. ರಾವಣವಧೆಯ ತರುವಾಯ ರಾಮ ಲಂಕೆಯ ರಾಜ್ಯಾಧಿಕಾರವನ್ನು ವಿಭೀಷಣನಿಗೆ ಕರುಣಿಸುತ್ತಾನೆ. ರಾವಣನ ಅರಮನೆಯಲ್ಲಿ ಭೂಗತವಾಗಿದ್ದ ರತ್ನಖಚಿತವಾದ ಹರಿವಾಣವೊಂದು ಲಭ್ಯವಾಗಿ, ಅದು ರಾಮನ ಮನಸೆಳೆಯುತ್ತದೆ. ಅದನ್ನು ತನ್ನೊಡನೆ ಅಯೋಧ್ಯೆಗೆ ಕೊಂಡೊಯ್ಯಲು ರಾಮ ಉದ್ದೇಶಿಸಿದನಂತೆ. ಆಗ ಅಲ್ಲಿದ್ದ ಜಾಂಬವಂತ ರಾಮನಿಗೆ ನೇರವಾಗಿ ಹೀಗೆ ಹೇಳಿದನಂತೆ :

ಅಹೋ ರಾಘವರಾಜೇಂದ್ರ ಸಪ್ತಕಲ್ಪಸು ಜೀವನಂ ।
ನ ಶೃಣೋಮಿ ನ ಪಶ್ಯಾಮಿ ಸ್ವಯಂ ದತ್ತಾಪಹಾರಿಣಂ ॥27

"ಎಲೈ ರಾಘವರಾಜೇಂದ್ರ, (ನಾನು) ಏಳು ಕಲ್ಪಗಳ ಕಾಲದಿಂದ ಜೀವಿಸುತ್ತಿದ್ದರೂ ತಾನು ಕೊಟ್ಟದ್ದನ್ನೇ ಅಪಹರಿಸುವವನನ್ನು ಎಂದೂ ನೋಡಲಿಲ್ಲ ಮತ್ತು ಅಂಥವನ

ಬಗ್ಗೆ ಕೇಳಿಯೂ ಇಲ್ಲ." ಪುರುಷೋತ್ತಮನಾದರೂ ರಾಮನಲ್ಲಿ ಕೂಡ ಮಾನವ ಸಹಜ ದೌರ್ಬಲ್ಯ ಆವರಿಸಿತು ; ಆದರೆ ಜಾಂಬವಂತ ರಾಮನಿಗೇ ಧರ್ಮ ಸೂಕ್ಷ್ಮವನ್ನು ಬಿಡಿಸಿ ಬುದ್ಧಿ ಹೇಳಿದ !

* * *

ವಿಭೀಷಣನ ಪಟ್ಟಾಭಿಷೇಕ ಮತ್ತು ಸೀತೆಯ ಅಗ್ನಿದಿವ್ಯದ ಅನಂತರ ರಾಮ ಪುಷ್ಪಕ ವಿಮಾನದಲ್ಲಿ ಅಯೋಧ್ಯೆಯತ್ತ ಹೊರಡುತ್ತಾನೆ. ದಾರಿಯಲ್ಲಿ ಸೀತೆಗೆ ಕಿಷ್ಕಿಂಧೆ, ಋಷ್ಯಮೂಕ ಪರ್ವತ, ಪಂಪಾಸರೋವರ ಮೊದಲಾದ ಸ್ಥಳಗಳ ಪರಿಚಯ ಮಾಡಿ ಕೊಡುತ್ತಾನೆ. ಆದರೆ ಆತ ಸೀತೆಯೊಡನೆ ವಿಮಾನದಿಂದ ಇಳಿದು ಭೇಟಿ ಕೊಡುವುದು ಭರದ್ವಾಜಾಶ್ರಮಕ್ಕೆ ಮಾತ್ರ. ರಾಮ 'ಮಗುಳ್ದಯೋಧ್ಯೆಗೆ ಬರುತ್ತುಂ ಕಿಷ್ಕಿಂಧ ಪರ್ವತೋಪಕಣ್ಠದ' ಋಷ್ಯಶೃಂಗ 'ಮುನೀಂದ್ರಾಶ್ರಮ'ವನ್ನು ಸಂದರ್ಶಿಸಿದನೆಂದು ಒಂದು ಶಾಸನದಲ್ಲಿ[28] ಹೇಳಿರುವುದು ಗಮನಿಸಬೇಕಾದ ಸಂಗತಿ.

4

ಮರ್ಯಾದಾ ಪುರುಷೋತ್ತಮನೆಂದು ಪ್ರಸಿದ್ಧನಾದ ಶ್ರೀರಾಮ 'ಇಕ್ಷ್ವಾಕು ಕುಲಪ್ರದೀಪ'[29] ಅವತಾರಪುರುಷನಾಗಿ, ಆರಾಧ್ಯ ದೈವವಾಗಿ ಆತ ಶಾಸನೋಕ್ತ ನಾಗಿರುವುದು ಗುಪ್ತೋತ್ತರ ಕಾಲದಲ್ಲಿ ಎಂದು ತೋರುತ್ತದೆ. ಗುಪ್ತಕಾಲೀನ ಶಿಲ್ಪಗಳಲ್ಲೇನೋ ರಾಮಾಯಣ ದೃಶ್ಯಗಳು ಚಿತ್ರಿತವಾಗಿವೆ. ಜಗತ್ತಿನ ಸಂಕಷ್ಟ ನಿವಾರಣೆ ಮತ್ತು ಧರ್ಮಸಂಸ್ಥಾಪನೆಗಾಗಿ ದೇವರು ಅವತಾರವೆತ್ತುತ್ತಾನೆಂಬ ನಂಬುಗೆ ಭಾರತೀಯ ಪರಂಪರೆಯದು. ಆದುದರಿಂದಲೇ 'ಧರೆಯತಿಶಯ ಭಾರಮುಮಂ ಪರಿಹರಿಸಲು ರಾಮಕೃಷ್ಣರು' ಉದಯಿಸಿದರು.[30] ನಡುಗನ್ನಡದ ಶಾಸನಗಳಲ್ಲಿ ದಶಾವತಾರದ ಪರಿಕಲ್ಪನೆ ನಿಚ್ಚಳವಾಗಿ ಕಂಡುಬರುತ್ತದೆ. ಶಾಸನವೊಂದು ಅವತಾರಗಳನ್ನು 'ಸುರುಚಿರಮತ್ಸ್ಯಕೂರ್ಮಕ್ರಿಧ್ರಿಷಸೂಕರನರಸಿಂಹವಾಮನ ರಾಮನಾವರ ಲಘುರಾಮ...' ಎಂದು ಹೆಸರಿಸುತ್ತದೆ.[31] ಶ್ರೀ ಎಸ್. ಪಿ. ತಿವಾರಿ ಎಂಬ ವಿದ್ವಾಂಸರ ಪ್ರಕಾರ ಶಾಸನಗಳಿಂದ ನಾವು ಸಂಗ್ರಹಿಸಬಹುದಾದ ದಶಾವತಾರಗಳ ಸ್ತುತಿ ಇರುವ ಏಕೈಕ ನಿದರ್ಶನವೆಂದರೆ ನಾನಾನ ಅಡಯುಗಢ ಶಿಲಾಶಾಸನ. ಅವರು ಉದ್ಧರಿಸಿರುವ ರಾಮಾವತಾರದ ಶಾಸನಸ್ತುತಿ ಇದು :

ಸಮುನ್ನತಿರ್ಯಸ್ಯ ಪರಾಕ್ರಮಾಣಾಂ
ಮಹಾವನೇ ಪ್ರಣ್ಯಜನೋಪಹಾರೀ ।

ಪ್ರಮೋದ ಜಾಲಸ್ತನುತೇವ ಹೂತೀ
ಕೃತೋ ವಿಪದ್ಭ್ಯಃ ಸ ಧಿನೋತು ರಾಮಃ ॥32

ಶ್ರೀರಾಮನ ಆರಾಧನೆ ಆರಂಭವಾದ ಮೇಲೆ ಶಾಸನಗಳಲ್ಲಿ ಆತನನ್ನು ಸ್ತುತಿಸುವ ಪದ್ಯಗಳು ಕಾಣಿಸಿಕೊಳ್ಳಲಾರಂಭಿಸಿದವು. ಶಿವ-ವಿಷ್ಣುಸ್ತುತಿ ಪದ್ಯಗಳಿಗೆ ಹೋಲಿಸಿದರೆ ರಾಮಸ್ತುತಿ ಪದ್ಯಗಳ ಸಂಖ್ಯೆ ಅತಿ ಕಡಿಮೆ. ಮಾದರಿಗಾಗಿ ಒಂದೆರಡು ಸ್ತುತಿಗಳನ್ನು ಇಲ್ಲಿ ಉದ್ಧರಿಸಬಹುದು :

ಸೀತಾ ಲಕ್ಷ್ಮಣ ಸಂಯುಕ್ತಂ ಆಂಜನೇಯಾಭಿವಂದಿತಂ ।
ಕಾರುಣ್ಯಮೂರ್ತಿ ಕಂಜಾಕ್ಷಂ ರಾಮಚಂದ್ರಂ ನಮಾಮ್ಯಹಂ ॥33

ವಾಲ್ಮೀಕಿಗೆ ರಾಮಚಂದ್ರನ ಗುಣಶೀಲಗಳನ್ನು ಎಷ್ಟು ವರ್ಣಿಸಿದರೂ ತೃಪ್ತಿಯಿಲ್ಲ. "ಅವನ ಮಾತು ಬಂದಾಗ ಕಾವ್ಯದಲ್ಲಿ ಒಂದು ಕಡೆ ಅವನ ಗುಣಕಥನ ಮೂವತ್ತು ಶ್ಲೋಕದಷ್ಟು ವಿಸ್ತಾರವಾಗಿದೆ."34 ಶಾಸನಸ್ತುತಿ ಪದ್ಯವೊಂದು ರಾಮನ ವ್ಯಕ್ತಿತ್ವವನ್ನು ಸಮರ್ಥವಾಗಿ ಚಿತ್ರಿಸುತ್ತದೆ :

ರಾಮಾಭಿರಾಮಂ ನಯನಾಭಿರಾಮಂ
ಶ್ರೋತಾಭಿರಾಮಂ ವಚನಾಭಿರಾಮಂ ।
ಸರ್ವಾಭಿರಾಮಂ ಸತತಾಭಿರಾಮಂ
ವಂದೇ ಸದಾ ದಾಶರಥಂ ಚ ರಾಮಂ ॥35

ದಶರಥನಂದನ ಶ್ರೀರಾಮ ರೂಪದಲ್ಲಿ ಮನೋಹರ ; ಆತನ ನಡೆ ನುಡಿ ಎಲ್ಲ ಯಾವಾಗಲೂ ಮಧುರ.

ಕೆಲವು ಶಾಸನಗಳು ಶ್ರೀರಾಮ, ಶ್ರೀರಾಮಾಯ ನಮಃ ಶ್ರೀರಾಮಚಂದ್ರಾಯ ನಮಃ, ಸೀತಾರಾಮ ಪ್ರಸನ್ನ ಎಂದು ಮುಂತಾಗಿ ದೇವನಮನದೊಂದಿಗೆ ಆರಂಭವಾಗಿವೆ.

5

ರಾಮಾಯಣದ ಅನೇಕ ಪಾತ್ರಗಳು ಸಾಂದರ್ಭಿಕವಾಗಿ ಶಾಸನಗಳಲ್ಲಿ ಉಲ್ಲೇಖಿತ ವಾಗಿವೆ. ಇಲ್ಲಿ ಕೆಲವು ಪ್ರಮುಖ ಪಾತ್ರಗಳನ್ನು ಮಾತ್ರ ತುಂಬ ಸ್ಥೂಲವಾಗಿ ಸಮೀಕ್ಷಿಸಬಹುದು.

ಶ್ರೀರಾಮನ ತಂದೆಯಾದ ದಶರಥನ ವರ್ಣನೆ ಶಾಸನವೊಂದರಲ್ಲಿ ಉಪಲಬ್ಧ ವಾಗಿದೆ :

ಆಸೀತ್ಪ್ರತಾಪನಿಧಿರಸ್ಯ ಕುಲಪ್ರದೀಪಃ
ಕೀರ್ತ್ಯರ್ದ್ಭುತೋ ದಶರಥಕ್ಷಿತಿಪಾಲವರ್ಯಃ ।
ಯಸ್ಯೋಜ್ವಲಜ್ಜಗತಿ ಧಾಮ ಯಥಾ ತಥಾ
ಸನ್ನೇತ್ರಾಣಿದತ್ಯ ಸುದೃಶಾಂ ಚ ನಿರಂಜನಾನಿ ॥36

ಪ್ರತಾಪ ನಿಧಿಯಾದ ದಶರಥ ಈ ಕುಲದ ಸೂರ್ಯನಾಗಿದ್ದನು ; ಆತ ರಾಜರಲ್ಲಿ ಶ್ರೇಷ್ಠ, ಪ್ರಖ್ಯಾತ. ಆತನ ಉಜ್ವಲ ಪರಾಕ್ರಮದಿಂದಾಗಿ ಶತ್ರುಪತ್ನಿಯರ ನೇತ್ರಗಳು ಕಾಡಿಗೆ ರಹಿತವಾಗಿ ಕಾಂತಿಹೀನವಾದವು. ತಿಪ್ಪಾಜಿ ಮತ್ತು ನಾಗಲಾದೇವಿ ಎಂಬಿಬ್ಬರು ಪತ್ನಿಯರನ್ನು ಹೊಂದಿದ್ದ ವೀರನರಸಿಂಹ–ಕೌಸಲ್ಯೆ ಮತ್ತು ಸುಮಿತ್ರೆಯರಲ್ಲಿ ದಶರಥ ರಾಮ ಲಕ್ಷ್ಮಣರನ್ನು ಪಡೆದಂತೆ–ಇಬ್ಬರು ಮಕ್ಕಳನ್ನು ಪಡೆದ.37

ಶ್ರೀರಾಮ ಪರಾಕ್ರಮದ ಪ್ರತಿರೂಪ ಎನ್ನುವ ಅಂಶವನ್ನು ಶಾಸನಗಳಲ್ಲಿ ಬರುವ ಕೆಲವು ಬಿರುದುಗಳೂ ಬಿಂಬಿಸುತ್ತವೆ. ಅಂಥ ಬಿರುದುಗಳಲ್ಲಿ ಚಲದಂಕರಾಮ, ಸಂಗ್ರಾಮರಾಮ, ರಣರಂಗ ರಾಘವ, ಶೌರ್ಯ ರಘುಜಾತ, ಶೌರ್ಯದೊಳ್ ಶ್ರೀರಾಮ, ವಿಕ್ರಾಂತದೊಳ್ ರಘುನಂದನ, ಚಲದೊಳಾ ರಘುನಂದನ, ಕೊರವಂಕರಾಮ ಮುಂತಾದವು ಸೇರಿವೆ. ಎಷ್ಟೋ ವೀರರು ತಮ್ಮ ತಮ್ಮ ವಂಶಕ್ಕೆ ರಾಮನಂತೆ ಕುಲದೀಪಕರೆನಿಸಿದರು. ಕದಂಬದೊರೆ ಕಾಕುತ್ಸ್ಥವರ್ಮ ಗುಣಶೀಲಗಳಲ್ಲಿ ಕಾಕುತ್ಸ್ಥ ಸಮಾನನೆನಿಸಿದ.38 ಚಾಳುಕ್ಯ ಮಂಗಲೀಶ ರಾಮನಂತೆ ಅಪರಾಜಿತ.39 ದೂರದ ಇಂಡೋನೇಷ್ಯದಲ್ಲಿ ರಾಜ್ಯವಾಳಿದ ಸಂಜಯ 'ಶೌರ್ಯಾದಿಗುಣ್ಯೋ ರಘುರಿವ' ಎಂಬ ಖ್ಯಾತಿ ಪಡೆದಿದ್ದ.40 ಬಿಲ್ಲುಗಾರಿಕೆಯಲ್ಲಿ ರಾಮ ಅಸಮಾನ. ಗಂಗರಸ ಶ್ರೀಪುರುಷ 'ಚಾಪೇ ದಶರಥತನಯ' ಎನಿಸಿದ್ದ.41 ಹೊಯ್ಸಳ ವಂಶದ ಒಂದನೆಯ ನರಸಿಂಹ 'ಧನುರ್ವಿದ್ಯಾರಾಮ'ನೆಂಬ ಖ್ಯಾತಿ ಹೊಂದಿದ್ದ.42

ಶೌರ್ಯದ ಜೊತೆಗೆ ಉನ್ನತಿ ಅಥವಾ ಏಳಿಗೆ ರಾಮನ ವಿಶೇಷಣಗಳಲ್ಲಿ ಸೇರಿರುವ ನಿದರ್ಶನಗಳಿವೆ. ಕೇಶಿಮಯ್ಯ 'ಘನಶೌರ್ಯೋನ್ನತಿಯೊಳ್ ನೆಗೆಟ್ದ ರಘುರಾಮಂ'.43 ಹೆಸರು ಲಕ್ಷ್ಮಣನೆಂದಾಗಿದ್ದರೂ ಆತ 'ಪರಸೇನಾಜಯ ವಿಕ್ರಮೋಂನತಿಯೊಳಾದ ಭೀಮನುಂ ರಾಮನುಂ'44 ಗಂಗನೆಂಬ ವೀರನಾದರೋ 'ರಾಮಂಗೆಣೆ ಶೌರ್ಯದೇಜ್ಜೆಗೆಯಿಂ'.45 'ದೋರ್ವಲದಿ ರಾವಣ ವೈರಿಯ ಪೋಲ್ವ' ವೀರ ಲೋಕಣ.46 ಇಂಥ ಉದಾಹರಣೆಗಳು ಅಸಂಖ್ಯಾತ.

ರಾಮ, ವಚನಕ್ಕೆ ಬದ್ಧನಾಗಿದ್ದವನು ; ಪಿತೃವಾಕ್ಯ ಪರಿಪಾಲನೆಗಾಗಿ ಕಾಡಿಗೆ ಹೋದವನು. ಆಡಿದ ಮಾತು ಹಿಂದಿರುಗಿ ಬರುವುದಿಲ್ಲ ; ರಾಮನ ಬಾಣ ವಿಫಲ ವಾಗುವುದಿಲ್ಲ. ಈ ಅರ್ಥವ್ಯಾಪ್ತಿಯ ಒಂದೆರಡು ದೃಷ್ಟಾಂತಗಳನ್ನು ಶಾಸನಗಳಿಂದ ಉದ್ಧರಿಸಬಹುದು. ಕಾದಂಬ ಸೋಯಿದೇವನಿಗೆ 'ರಾಮಶರಪ್ರಕರಂ ನಿಜೋದ್ಧ ವಾಕ್ಪ್ರಸರಮುಸ್'47 ಎಂಬ ಪ್ರಸಿದ್ಧಿ ಇದ್ದಿತಷ್ಟೇ ಅಲ್ಲ, ಆತನ 'ವಾಕ್ಯ ಪ್ರಸರಂ ಶ್ರೀರಾಮಬಾಣಕ್ಕಧಿಕತೆ48ಯಿಂದ ಕೂಡಿತ್ತೆಂಬ ಖ್ಯಾತಿಯೂ ಇತ್ತು ! ಸೇವುಣ ರಾಮಚಂದ್ರನ ವಿಶೇಷಣಗಳಲ್ಲಿ 'ಸಮುಚಿತ ಸತ್ಯ ವಚನಾನುಸಂಧಾನ ರಾಮಬಾಣನುಂ' ಎಂಬುದೊಂದು.49 ಎಡವರಿ ಎಂಬಾತ 'ನುಡಿದ ನುಡಿ ರಾಮ ಬಾಣ'.50 ಬಿಜ್ಜಳ 'ಅಚಳಿತವಚನಸೂತನ ರಘುಸುತ' ಎನಿಸಿದ್ದ.51

ದುಷ್ಟಮರ್ದನ ಮತ್ತು ಶಿಷ್ಟ ರಕ್ಷಣ – ಅವತಾರದ ಉದ್ದೇಶದಂತೆಯೇ-ವೀರಪುರುಷನ ಲಕ್ಷಣ. ಹೊಯ್ಸಳ ವಿಷ್ಣುವರ್ಧನ 'ದುಷ್ಟರಂ ಮರ್ದಿಸಿ ತುಷ್ಟಿಯಂ ಪಡೆದು ಶಿಷ್ಟ ಜನಪ್ರಕರಕ್ಕೆ ರಾಮನಂತಿಷ್ಟ'ನಾಗಿದ್ದ ವೀರ ದೊರೆ.52

ಅದೇ ವಂಶದ ನರಸಿಂಹ 'ದಶಶಿರನ ವಧೆಗೆ' ತನ್ಮೂಲಕ ವಿಭೀಷಣನ ಪ್ರತಿಷ್ಠಾಪನೆಗೆ ಕಾರಣನಾದ ಶ್ರೀರಾಮನಂತೆ ಶತ್ರುಗಳನ್ನು ನಿಗ್ರಹಿಸಿ 'ಚೋಳ ಪ್ರತಿಷ್ಠಾಚಾರ್ಯ'ನೆಂಬ ಹೆಸರು ಪಡೆದ.53 ಉದಯಾದಿತ್ಯನಿಗೆ 'ಇದಿರೊಳ್ ರಾವಣನಿಂದು ಮಾರ್ಮಲೆದೊಡಂ' ಗೆಲುವು ನಿಶ್ಚಿತವೇ.54 ಕಳಚುರಿವಂಶದ ಬಿಜ್ಜಳ 'ಇದಿರಾಗೆ ರಾವಣನುಮಂ ನೆಲಕ್ಕಿಕ್ಕುವ' ಧೀರ.55

ಶ್ರೀರಾಮ ಕರುಣಾಮೂರ್ತಿ ಕೂಡ.56 ಹೊಯ್ಸಳ ವಿಷ್ಣುವರ್ಧನನಲ್ಲಿ ದಶಾವತಾರಗಳೂ ಅಂತರ್ಗತವಾಗಿದ್ದವು ; ಆತ 'ಆತ್ಮ ಪ್ರಭಾವಾಸ್ಪದದಲು ರಾಮ ತ್ರಯತ್ವ'ದ ಸಾಕಾರರೂಪ.57 ಇಲ್ಲಿನ ರಾಮತ್ರಯರೆಂದರೆ ಪರಶುರಾಮ, ಕೋದಂಡ ರಾಮ ಹಾಗೂ ಬಲರಾಮ. ಮೈಸೂರ ಅರಸು ಕೃಷ್ಣರಾಜ ಒಡೆಯರು ಶ್ರೀರಾಮನಂತೆ ಕೀರ್ತಿ ವೈಭವಗಳಿಂದ ಕೂಡಿದ್ದರು.58 ಶಾಸನೋಕ್ತ ಬಿರುದುಗಳ ಪೈಕಿ 'ಪರಾಂಗನಾ ರಾಮ' ಎಂಬುದು ಏಕಪತ್ನೀವ್ರತಸ್ಥನಾದ ರಾಮನ ಅಕಳಂಕ ವ್ಯಕ್ತಿತ್ವವನ್ನು ಪ್ರತಿನಿಧಿಸುತ್ತದೆ.

ಹಿಂದಿನ ವೀರರಿಗಿಂತ ತಾವು ಶ್ರೇಷ್ಠರೆಂಬ ಆತ್ಮ ಪ್ರಶಂಸೆಯ ಅತಿಶಯೋಕ್ತಿ ಕೂಡ ಶಾಸನಗಳಲ್ಲಿ ಧಾರಾಳವಾಗಿ ಕಂಡುಬರುತ್ತದೆ. ಬಾಚಿ ಎಂಬಾತ ಸಂಗ್ರಾಮದೊಳ್ ರಾಮನಿಂ ಪಿರಿಯಂ'.59 ಕಾಂಬೋಡಿಯಾದ ಅರಸ ರಾಜೇಂದ್ರವರ್ಮ ರಾಮನಿಗಿಂತ ಹೆಚ್ಚು ! ರಾಮ ರಾಜಪಟ್ಟವನ್ನು ತ್ಯಾಗ ಮಾಡಬೇಕಾಯಿತು ; ಹೆದೆಯೇರಿಸುವಾಗ ದುರ್ಬಲ ಬಿಲ್ಲು ಮುರಿದುಹೋಯಿತು ; ಅತನ 'ಲಕ್ಷ್ಮಿ' (ಸೀತೆ)ಯನ್ನು ಶತ್ರು ಕೊಂಡೊಯ್ದ. ಆದರೆ ರಾಜೇಂದ್ರನ ರಾಜ್ಯ ಪಟ್ಟ ಸ್ಥಿರವಾಗಿತ್ತು ; ಆತನ ಸದೃಢ ಬಿಲ್ಲು ಎಂದೂ ತುಂಡಾಗಲಿಲ್ಲ ಹಾಗೂ ಆತನ ಶ್ರೀಯನ್ನು ಯಾವ ಶತ್ರುವಿಗೂ

ಅಪಹರಿಸಲಾಗಲಿಲ್ಲ.60 ರಾಮನ ಹೆಸರಿನ ಮೊದಲಕ್ಷರ ('ರಾ') ವನ್ನು ಕೇಳಿದ ಕೂಡಲೇ ಮಾರೀಚ ಬೆಚ್ಚಿಬೀಳುವಂತೆ ರಾಜೇಂದ್ರವರ್ಮನ ಹೆಸರಿನ ಮೊದಲಕ್ಷರ ಕಿವಿಗೆ ಬಿದ್ದ ಕೂಡಲೇ ಶತ್ರುಗಳು – ಎಷ್ಟೇ ಶೂರರಾಗಿದ್ದರೂ – ಎರಡನೆಯ ಅಕ್ಷರವನ್ನು ಕೇಳಲು ಭೀತರಾಗುತ್ತಿದ್ದರಂತೆ !61

ಒಬ್ಬ ಮಗ ಜನಿಸಿದಾಗ ಆತನನ್ನು ರಾಮನಿಗೂ, ಇಬ್ಬರನ್ನು ರಾಮ ಲಕ್ಷ್ಮಣರಿಗೂ ಮತ್ತು ನಾಲ್ವರನ್ನು ರಾಮ, ಲಕ್ಷ್ಮಣ, ಭರತ ಶತ್ರುಘ್ನರಿಗೂ ಹೋಲಿಸಿರುವ ಉದಾಹರಣೆಗಳು ಶಾಸನಗಳಲ್ಲಿ ಕಾಣಸಿಗುತ್ತವೆ. ದಶರಥನಿಗೆ ರಾಮ ಜನಿಸಿದ ಹಾಗೆ ಸಂಗಮನಿಗೆ ಬುಕ್ಕ ಜನಿಸಿದ.62 ಮಾರಸಿಂಘವಿಭು ಮತ್ತು ಲೋಕಾಂಬಿಕೆಗೆ ಇಬ್ಬರು ಮಕ್ಕಳು 'ರಾಮ ಲಕ್ಷ್ಮಣರ ತೆಜದಿಂದೀ ಮಹಿಯೊಳ್ ಪುಟ್ಟಿದರು.'63 ಕೇಶವದಂಡನಾಥನ ತಮ್ಮಂದಿರಾದ ಬಾಚೆಯ ಮತ್ತು ಬಮ್ಮ 'ರಾಮ ಲಕ್ಷ್ಮಣಾಕಾರತೆಯಿಂ'ದ ಕೂಡಿದ ವೀರರು.64 ವೀರನರಸಿಂಹ ಮತ್ತು ಕೃಷ್ಣರಾಯರು ರಾಮ ಲಕ್ಷ್ಮಣರಂತೆ ವೀರರು ಹಾಗೂ ವಿನಯಶೀಲರು.65 ಮದ್ದಿರಾಜನ ನಾಲ್ವರು ಮಕ್ಕಳು ರಾಮ, ಲಕ್ಷ್ಮಣ, ಭರತ ಶತ್ರುಘ್ನರಂತೆ ಇದ್ದುದರಿಂದ ಅವರನ್ನು ಸಾಮಾನ್ಯರೊಡನೆ ಹೋಲಿಸಲಾಗುತ್ತಿರಲಿಲ್ಲ.66 'ಲಕ್ಷ್ಮಣ ಇವಾಭಿವನ್ದಿತ ಸುಮಿತ್ರೋ ರಾಮಾನುವೃತ್ತಿ ಚತುರಶ್ಚ ಭರತ ಇವ ಶತ್ರುಘ್ನ ಸಚಿವೋ ಎನ್ನುವುದು ಗಂಗ ರಾಚಮಲ್ಲನ ಸ್ವಾರಸ್ಯಕ ರವರ್ಣನೆ.67

ಪಂಚ ಪತಿವ್ರತೆಯರಲ್ಲಿ ಮೂವರು – ಅಹಲ್ಯಾ, ಮಂಡೋದರಿ ಮತ್ತು ಸೀತೆ ರಾಮಾಯಣದ ಪಾತ್ರಗಳು. ಪಾತಿವ್ರತ್ಯದ ವಿಷಯದಲ್ಲಿ ಅಹಲ್ಯೆ ಸಂದೇಹಾತೀತಳಲ್ಲ. ರಾಮಾಯಣದಲ್ಲಿ ಮಂಡೋದರಿಯ ಪಾತ್ರ ಅತ್ಯಂತ ಗೌಣ. ಹೀಗಾಗಿ ಸೀತೆಯೇ ಪಾತಿವ್ರತ್ಯದ ಆದರ್ಶ ಮೂರ್ತಿಯಾಗಿ ನಮ್ಮ ಶಾಸನ ಕವಿಗಳಿಗೆ ಕಂಡಿದ್ದರಲ್ಲಿ ಆಶ್ಚರ್ಯವೇನಿಲ್ಲ. ಸ್ತ್ರೀಯರ ಸದ್ಗುಣಗಳನ್ನು ವರ್ಣಿಸುವಾಗ ಸೀತೆಯ ಹೋಲಿಕೆ ಅನಿವಾರ್ಯವೆನ್ನುವಷ್ಟರ ಮಟ್ಟಿಗೆ ಶಾಸನಗಳಲ್ಲಿ ಆಕೆಯ ಉಲ್ಲೇಖಗಳು ಉಪಲಬ್ಧವಾಗಿವೆ. ರಾಮನನ್ನು ಸೀತೆ ಅನುಸರಿಸಿದಂತೆ ಮೈಸೂರಿನ ಅರಸಿ ಚಲ್ವಾಜಮಾಂಬಾ ತನ್ನ ಪತಿಯನ್ನು ನೆರಳಿನ ಹಾಗೆ ಅನುಸರಿಸಿದ ಗುಣವಂತೆಯಾಗಿದ್ದಳು.68 'ರಾಮಂಗೆಂತಾ ಸೀತೆ ವಧುವಾದಳಂತಿರೆ ಭೂತಳನುತಯುತ್ತಿಯಬ್ಬೆ' ಕೇತನೃಪಾಳನಿಗೆ ಸತಿಯಾದಳು.69 ಪೊನ್ನಕಬ್ಬೆ 'ಕಲಿಕಾಲ ಸೀತೆವೆಸರಂ ಪಡೆದಳ್'70 ಎರೆಯಂಗ-ಏಚಲದೇವಿಯವರ ದಾಂಪತ್ಯ 'ಜನಕಾತ್ಮಜೆ ರಾಮರ ದಾಂಪತ್ಯದಂತೆ ಅನ್ಯೋನ್ಯವಾಗಿತ್ತು.71 ಸೋವಲ ದೇವಿಗೆ 'ರಾಘವನರ್ದಾಂಗಿ ಪತಿಹಿತಾಚರಣೆಯಿಂ' ಎಂಬ ಹೆಗ್ಗಳಿಕೆ ಇತ್ತು.72

ಏಚಿಕಬ್ಬೆ ಕ್ಷಿತಿಸುತೆಗಿಂತ ಮಿಗಿಲೆನಿಸಿದಳು.73 ಕನಕಬ್ಬೆ ಹಿರಿಮೆಯಲ್ಲಿ 'ಶ್ರೀರಾಮನ ಸೀತೆಗೆ ದುಗುಣಂ' ಇದ್ದಾಕೆ.74 ಪಟ್ಟಮಹಾದೇವಿಯ ಶ್ರೇಷ್ಠತೆ ಇನ್ನೂ

ಹೆಚ್ಚಿಸದು. ಆಕೆಯಾದರೋ 'ಕುಡುತೆಗೆ ವಂದ ಜಹ್ನುಸುತೆಯಲ್ಲದ ಜಾಹ್ನವಿ ದಕ್ಷ ಯಜ್ಞದೊಳು ತೊಡರದ ಗೌರಿ ರಾವಣನ ಬಾರಿಗೆ ಬೀಳದ ಸೀತೆ'!75 ಶಾಸನಗಳಲ್ಲಿ ಇಂಥ ದೃಷ್ಟಾಂತಗಳು ಬಹು ಸಂಖ್ಯೆಯಲ್ಲಿ ದೊರೆಯುತ್ತವೆ.

ರಾಮನ ಸೋದರ ಲಕ್ಷ್ಮಣನ ಶಾಸನೋಲ್ಲೇಖಗಳೂ ನಮಗೆ ಲಭ್ಯವಾಗಿವೆ. ರಾಮಚಮೂಪನ ತಮ್ಮನಾದ ಕೇಶವ 'ಲಕ್ಷ್ಮಣ ವಿಸ್ತಾರ ಸುಮಿತ್ರಾಧಿಕ ಪುಣ್ಯಾರಾಮ' ಎನಿಸಿದ್ದ.76 ಲಕ್ಷ್ಮರಸ ಎಂಬ ಅಧಿಕಾರಿಯ ವರ್ಣನೆ ಸೊಗಸಾಗಿದೆ : ಸಮರ ಸಮಯದಲ್ಲಿ ಆತ ರಾಮನಂತೆ ; 'ಪರಸ್ತ್ರೀಯೊಳ್ ಬಂದೊಡೆ ರಾವಣಾತ್ಮಜ ಚಮೂ ವಿದ್ರಾವಣ'ನಾದ ಲಕ್ಷ್ಮಣನಂತೆ !77 ಇದು ಆತನ ಪರಾಕ್ರಮವನ್ನೂ ಪರಿಶುದ್ಧ ಬದುಕನ್ನೂ ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುತ್ತದೆ. ಭರತ-ಶತ್ರುಘ್ನರಿಗೆ ಸಂಬಂಧಿಸಿದಂತೆ 'ಕೃತಸೀಮಗೀತ ಭರತಂ'78 ಮತ್ತು 'ಪ್ರತಾಪದೆಡೆಯೊಳು ಶತ್ರುಘ್ನನ್'79 ಮುಂತಾದ ಉದಾಹರಣೆಗಳನ್ನು ಶಾಸನಗಳಿಂದ ಆರಿಸಬಹುದು. ದಶರಥನಿಂದ ರಾಮನಿಗೆ ಸುಮಂತ್ರ ಮಂತ್ರಿಯಾಗಿ ದೊರೆತ ಹಾಗೆ ಬುಕ್ಕನಿಂದ ಇಮ್ಮಡಿ ಹರಿಹರನಿಗೆ ಮುದ್ದದಂಡಾಧಿಪತಿ ಮಂತ್ರಿಯಾಗಿ ದೊರೆತನಂತೆ.80

ಸ್ವಾಮಿನಿಷ್ಠೆಗೆ ಮತ್ತೊಂದು ಹೆಸರು ಹನುಮಂತ. 'ನನ್ನ ಕಥೆಗಳು ಈ ಭೂಲೋಕದಲ್ಲಿ ಪ್ರಚಾರದಲ್ಲಿರುವವರೆಗೆ ನನ್ನ ಆಜ್ಞೆಯನ್ನು ಪರಿಪಾಲಿಸಿ ನೀನು ಸುಪ್ರಸನ್ನನಾಗಿ ಈ ಭೂತಲದಲ್ಲಿ ಸುಖವಾಗಿರು !' ಎಂಬ ಆಶೀರ್ವಾದವನ್ನು ರಾಮನು ಈತನಿಗೆ ಕೊಟ್ಟನು.81 ಹನುಮಂತನನ್ನು ಕುರಿತ ಶಾಸನೋಲ್ಲೇಖಗಳು ಹಲವಿವೆ. ಶೌರ್ಯಂಜನಾನಂದನಂ, ಘನಶೌರ್ಯಮರುತ್ತನಯಂ, ಸಾಹಸದೊಳು ಹನುಮಂತ, ಪ್ರಬಳದೊವ್ವಳದೊಳು ಪಡಿ ವಾಯುನಂದನ ಮುಂತಾದ ಬಿರುದುಗಳು ಅವನ ಪರಾಕ್ರಮಕ್ಕೆ ಮತ್ತು ಶುಚಿಕಪಿರಾಜ, ಶೌಚಾಂಜನೇಯ, ಪರವನಿತೆಗನಿಲತನಯ ಮುಂತಾದ ಬಿರುದುಗಳು ಅವನ ಪರಿಶುದ್ಧ ಬದುಕಿಗೂ ಸಂದ ಅರ್ಹ ಗುಣ ವಾಚಕಗಳು. ಕ್ರಿ.ಶ. 8-9ನೆಯ ಶತಮಾನದ ಹೊತ್ತಿಗಾಗಲೇ ಪರಿವಾರದೇವತೆಯಾಗಿ ಹನುಮಂತನ ಆರಾಧನೆ ಆರಂಭವಾಗಿತ್ತು. ಕಪಿಧ್ವಜ ಅಥವಾ ವಾನರ ಮಹಾಧ್ವಜಗಳನ್ನು ಹೊಂದಿದ ಹಲವು ರಾಜಮನೆತನಗಳು ಅಸ್ತಿತ್ವದಲ್ಲಿದ್ದವು. ಶಾಸನಗಳು ಉಲ್ಲೇಖಿಸುವ ಪೇಸಣಹನುಮ ಎಂಬ ಬಿರುದು ಗಮನಾರ್ಹ. ಹೊಯ್ಸಳ ಬಲ್ಲಾಳನ ಆದೇಶವನ್ನು ಭರತ ದಂಡಾಧಿಪನು 'ರಾಗದಿಂ ವಾಯುಸುತಂ ರಾಮಾಜ್ಞೆಯಿಂದಂ ನಡೆವ ತೆಱದಿ' ಪಾಲಿಸುತ್ತಿದ್ದ.82 ಅದೇ ಅರಸನಿಗೆ ಕುವರ ಲಕ್ಷ್ಮ 'ರಾಮನ ಬೀಡಿಂಗಣುವ'ನಂತೆ ಇದ್ದ ವೀರ.83 'ರಾಮಂಗಣುಮನ ತೆಱದಿಂ' ಸೇವುಣ ದೊರೆ 'ರಾಮಮಹೀವಲ್ಲಭಂಗೆ ತಿಪ್ಪಾಮಾತ್ಯ' ಇದ್ದಂತೆ.84 ಎಕ್ಕಲ 'ಕಾಯ್ವನೊಳ್ ಹನುಮ' ನೆನಿಸಿದ್ದ.85 ನಾಗತರ 'ಕಲಿಯುಗದಣುಮ'ನಾಗಿದ್ದರೆ,86 ಹೆಗ್ಗಡೆ ಎರಗನಿಗೆ

ಪತಿಭಕ್ತಿಯಲ್ಲಿ 'ಮಾರುತಸುತಂಗೆ ಪಡಿಮಾಡಿ' ಎಂಬ ಖ್ಯಾತಿ ಇತ್ತು.87 ಇಂಥ ಉದಾಹರಣೆಗಳು ಅನೇಕ.

ರಾವಣನೊಬ್ಬ ಮಹಾವೀರ. ಆತನ ಪ್ರತಾಪವನ್ನು ಶಾಸನಗಳು ಉಲ್ಲೇಖಿಸಿವೆ. ಶಾಸನವೊಂದರಲ್ಲಿ ಒಬ್ಬ ಅರಸನನ್ನು 'ದಶಮುಖಮಿವ ಜಿತ್ವಾ ದರ್ಪಿತ ವೈರಿವರ್ಗಂ' ಎಂದು ವರ್ಣಿಸಲಾಗಿದೆ.88 ದೋರ್ವಲದಿಂ ರಾವಣಂ, ಪದನಖದೊಳ್ ದಶಾನನತೆ, ಭುಜಬಳದೊಳು ರಾವಣ ಮುಂತಾದ ವಿಶೇಷಣಗಳು ಶಾಸನಗಳಲ್ಲಿ ಕಾಣಸಿಗುತ್ತವೆ. ಕಳಚುರಿ ಶಾಸನಗಳಲ್ಲಿ ಸರ್ವಸಾಮಾನ್ಯವಾಗಿ 'ಪ್ರತಾಪಲಂಕೇಶ್ವರ' ಎಂಬ ಬಿರುದಿರುತ್ತದೆ. ಕೆಲವು ಶಾಸನಗಳಲ್ಲಿ ಚಲದಂಕರಾಮ ಮತ್ತು ಪ್ರತಾಪಲಂಕೇಶ್ವರ ಎಂಬ ಬಿರುದುಗಳು ಅಕ್ಕಪಕ್ಕದಲ್ಲಿಯೇ ಇರುವುದು ಸ್ವಾರಸ್ಯಕರ ಅಂಶ.89

ಕೆಲವು ಶಾಸನಗಳಲ್ಲಿ 'ಸಮರವಿಭೀಷಣ' ಎಂಬ ಬಿರುದಿದೆ.90 ವಿಭೀಷಣ ಮತ್ತು ಹನುಮಂತರು ಶ್ರೇಷ್ಠ ವಿಷ್ಣುಭಕ್ತರು ಸಹ. ಆದರೆ ದಾಮೋದರ ಶೆಟ್ಟಿ ಎಂಬ ಭಕ್ತ ಅವರಿಗಿಂತಲೂ ಮಿಗಿಲಾದ 'ಭಕ್ತಿನಿಧಾನ'ನೆನ್ನಿಸಿದ್ದನಂತೆ!91

ರಾಮಾಯಣ ಭಾರತಗಳ ಮಹಾಚೇತನಗಳೊಂದಿಗೆ ಇತಿಹಾಸದ ವ್ಯಕ್ತಿಗಳನ್ನು ಹೋಲಿಸಿ ವರ್ಣಿಸುವುದು ನಮ್ಮ ಹಿಂದಿನ ಕವಿಗಳ ಒಂದು ಸಂಪ್ರದಾಯವೇ ಆಗಿತ್ತೆನ್ನಬಹುದು. ಅದು ಅವರ ಜ್ಞಾನಪ್ರತಿಭೆಗಳ ದ್ಯೋತಕವೂ ಹೌದು. ಇದಕ್ಕೊಂದು ನಿದರ್ಶನವಿದು :

ಸುತಧರ್ಮ್ಮಂ ರಿಪುಭೀಮನರ್ಜ್ಜುನಯಶಂ ಪಿದ್ವಿಷ್ಟ ಭೂಭೃದ್ಯಮಂ
ಕ್ಷಿತಿರಾಮಂ ಕೃತಸೀಮಗೀತ ಭರತಂ ಭಾಸ್ವತ್ಸುಮಿತ್ರೋದ್ಭವಂ ।
ಕ್ಷಿತಿಪಾಳಂ ನರಸಿಂಹದೇವನವನೀ ಶತ್ರುಘ್ನನಂತುದ್ಭ ಭಾ
ರತ ರಾಮಾಯಣ ಪೂರ್ವ್ವಪುಣ್ಯ ಪುರುಷ ಪ್ರಖ್ಯಾತಿಯಂ ತಾಳ್ದಿದಂ ॥92

ಅಲ್ಲಲ್ಲಿ ಶ್ಲೇಷಾರ್ಥವೂ ಇರುವುದುಂಟು :

ಶತ್ರುಘ್ನಂ ಹರಿಶೌರ್ಯನಂಗದಭುಜಂ ಸುಗ್ರೀವನಾತ್ಮೇಶ ಸೌ
ಮಿತ್ರಂ ರಾಮನಪಾಮರಂ ನಲವರಂ ದುರ್ಯೋಧನಂ ಭೀಮ ।
ಗಾತ್ರಂ ಭೀಷ್ಮಯುಧಿಷ್ಠಿರಂ ಗುರುಕೃಪಂ ನತ್ಕರ್ಣನೆಂದಂದೆದ
ಲ್ಚಿತ್ರಂ ಭಾವಿಸೆ ಲಕ್ಷ್ಮಭೂಪಚರಿತಂ ರಾಮಾಯಣಂ ಭಾರತ ॥93

6

ಶಾಸನ ಪಾಠಗಳ ಕೊನೆಯಲ್ಲಿ ಬರುವ ಫಲಸ್ತುತಿಗಳಲ್ಲಿ ಕೆಲವು ರಾಮನನ್ನು

ಉಲ್ಲೇಖಿಸುತ್ತವೆ. ಶಾಸನವೊಂದರಲ್ಲಿ 'ಶ್ರೀರಾಮ ವಾಕ್ಯಂ' ಎಂದು ಹೇಳಿ ತರುವಾಯ ಈ ಪ್ರಸಿದ್ಧ ಶ್ಲೋಕವನ್ನು ಹೇಳಿದೆ :

ಬಹುಭಿರ್ವಸುಧಾ ಭುಕ್ತಾ ರಾಜಭಿಃ ಸಗರಾದಿಭಿಃ ।
ಯಸ್ಯ ಯಸ್ಯ ಯದಾ ಭೂಮಿಸ್ತಸ್ಯ ತಸ್ಯ ತದಾಫಲಂ ॥94

ಈ ಶ್ಲೋಕ ಪದ್ಮಪುರಾಣ ಹಾಗೂ ಭವಿಷ್ಯ ಪುರಾಣಗಳಲ್ಲಿಯೂ ಇದೆ. ರಾಮನು ಹೀಗೆ ಹೇಳಿರುವುದುಂಟು :

ಇದಞ್ಚ ರಾಮಗೀತ ಶ್ಲೋಕಃ
ಯಾನೀಹ ದಾನಾನಿ ಪುರಾನರೇನ್ದ್ರೈ । ರ್ದತ್ತಾನಿ ಧರ್ಮ್ಮಾರ್ತ್ಥ ಯಶಸ್ಕರಾಣಿ ।
ಧರ್ಮ್ಮಾನುರೋಧಾನ್ನೃಪ ಗೌರವಾಚ್ಚ । ಮಯಾಪ್ಯನುಜ್ಞಾತ ಫಲಾನಿ ತಾನಿ ॥95

ಆದರೆ ಸರ್ವ ಸಾಮಾನ್ಯವಾಗಿ ಕಂಡುಬರುವುದು ಈ ಪದ್ಯ :

ಸಾಮಾನ್ಯೋಯಂ ಧರ್ಮಸೇತುರ್ನೃಪಾಣಾಂ । ಕಾಲೇ ಕಾಲೇ ಪಾಲನೀಯೋ ಭವದ್ಭಿಃ ।
ಸರ್ವ್ವಾನೇತಾನ್ಭಾವಿನಃ ಪಾರ್ಥಿವೇಂದ್ರಾನ್ । ಭೂಯೋ ಭೂಯೋ ಯಾಚತೇ ರಾಮಚಂದ್ರಃ ॥96

ಇದು ಹಾಗೂ ಇತರ ಕೆಲವು ಫಲಸ್ತುತಿ ಶ್ಲೋಕಗಳಲ್ಲಿ ಕೆಲವನ್ನು ಹೇಳಿ ತದನಂತರ 'ಇದಂ ಪ್ರತಿಪಾಳಿಸಿದಂಗೆ ಪೂರ್ವ್ವೋಕ್ತ ರಾಮಪ್ರಾರ್ತ್ಥನೆಯ ಫಲ' ಎಂದು ಒಂದು ಶಾಸನದಲ್ಲಿ ಹೇಳಿರುವ ನಿದರ್ಶನ ದೊರೆಯುತ್ತದೆ.

ದಾನವನ್ನು 'ಶ್ರೀರಾಮಾರ್ಪಣಮಸ್ತು' ಎಂದು ಒಪ್ಪಿಸಿದ ಮತ್ತು ನೀಡಿದ ದಾನಕ್ಕೆ 'ಶ್ರೀರಾಮ ರಕ್ಷೆ' ಎಂದು ಹೇಳಿದ ಉದಾಹರಣೆಗಳಿವೆ. ಎಷ್ಟೋ ಶಾಸನ ಪಾಠಗಳು ಶ್ರೀರಾಮ ಎಂಬ ಮಂಗಳ ನಾಮದೊಡನೆ ಕೊನೆಗೊಂಡಿವೆ.

7

ಭಾರತದ ಅನೇಕ ಗ್ರಾಮಗಳು ರಾಮಾಯಣ ಭಾರತಗಳಿಗೆ ಸಂಬಂಧಿಸಿದ ಐತಿಹ್ಯಗಳನ್ನು ಹೊಂದಿವೆ. ರಾಮಕ್ಷೇತ್ರಗಳೂ ಲಕ್ಷ್ಮಣ ತೀರ್ಥಗಳೂ ಸೀತಾ ಸ್ಥಳಗಳೂ ದೇಶಾದ್ಯಂತ ಕಾಣಸಿಗುತ್ತವೆ. ಆದರೆ ಜಾನಪದ ನಂಬುಗೆಗೆ ದೊರೆಯುವ ಲಿಖಿತ ಆಧಾರಗಳು ಮಾತ್ರ ಅತ್ಯಲ್ಪ. ಅವೂ ಅನಂತರ ಕಾಲದವೆಂಬುದನ್ನು ಮರೆಯದೆ

ಒಂದೆರಡು ಉದಾಹರಣೆಗಳನ್ನು ಗಮನಿಸಬಹುದು. ಧಾರವಾಡ ಜಿಲ್ಲೆಯ ಲಕ್ಕುಂಡಿಯು 'ಶ್ರೀರಾಮಪುರದತ್ತಿಯಗ್ರಹಾಂ'97 ಮತ್ತು 'ಶ್ರೀ ದಾಶರಥಿ ವಿನಿರ್ಮಿತ ಮಹಾಗ್ರಾಮ'ವಾಗಿತ್ತು.98 ಅದೇ ಜಿಲ್ಲೆಯ ಕುಂದಗೋಳವು 'ದಶಮುಖವಿಜಯೀ ರಾಮದತ್ತಾಗ್ರಹಾರ'ವಾಗಿತ್ತು.99 ಶ್ರೀರಾಮದತ್ತಿ ಅಥವಾ ರಘುಜದತ್ತಿ ಅಗ್ರಹಾರಗಳು ಹಲವಿವೆ.

ಶ್ರೀರಾಮನೇ ಪ್ರತಿಷ್ಠೆ ಮಾಡಿ ಪೂಜಿಸಿದ ದೇವಾಲಯಗಳ ಉಲ್ಲೇಖಗಳೂ ನಮಗೆ ಸಾಕಷ್ಟು ಸಂಖ್ಯೆಯಲ್ಲಿ ದೊರೆಯುತ್ತವೆ. ಹನಸೋಗೆಯ ಬಸದಿಗಳನ್ನು ಸ್ಥಾಪಿಸಿದವನು ರಾಮ !100 ನಂದಿದುರ್ಗದ ಶಾಸನವೊಂದರಲ್ಲಿ "ಸೂರ್ಯವಂಶ ವ್ಯೋಮ ಸೂರ್ಯ್ಯೇನ ಮಹಾರಥೇ ದಾಶರಥಿನಾ ರಾಮಸ್ವಾಮಿನಾ ಪ್ರತಿಷ್ಠಾಪಿತಾಯ ಭಗವತೋರ್ಹತಃ ಪರಮೇಷ್ಟಿನಃ" ಎಂದು ಹೇಳಿರುವುದು ಗಮನಿಸಬೇಕಾದ ಸಂಗತಿ.101 ರಾಮ ಸ್ಥಾಪಿಸಿದ ಶಿವಲಿಂಗಗಳಿಗೆ ಲೆಕ್ಕವಿಲ್ಲ. ಇವುಗಳಲ್ಲಿ 'ಶ್ರೀರಾಮ ಪರಿಪೂಜಿತ ಶ್ರೀರಾಮೇಶ್ವರ'102 'ಶ್ರೀರಾಮನಿಂದಿಲ್ಲಿ ಪೂಜೆಗೊಂಡ ಅಮರ ಗೊಂಡಾಧೀಶ್ವರ'103 ಮುಂತಾದವು ಸೇರಿವೆ. ಚುಂಚನ ಕಟ್ಟೆಯಲ್ಲಿ ಸೀತೆ ಸ್ನಾನ ಮಾಡಿದಳೆಂದು ಹೇಳಲಾದ ತಾಣವೊಂದನ್ನು ಒಂದು ಶಾಸನ ಉಲ್ಲೇಖಿಸುತ್ತದೆ.104 ಬಾಬಾ ಬುಡನ್‌ಗಿರಿಯು ಬಳಿ 'ಶ್ರೀರಾಮಭೃತ್ಯ ಹನುಮಂತ ಸ್ಥಾಪಿತ ಸಂಜೀವನ ಸಿಧರಸ'ಗಳಿವೆ.105 ಈಗಿನ ಹಂಪೆಯ ಪ್ರದೇಶ ರಾಮಾಯಣದ ಕಿಷ್ಕಿಂಧೆ ಎನ್ನುವ ಸಂಗತಿ ಸರ್ವವಿದಿತ.

8

ವೇದ ವೇದಾಂತಗಳಂತೆಯೇ ರಾಮಾಯಣ ಭಾರತಗಳ ಜ್ಞಾನವೂ ಒಂದೆ ವಿದ್ವತ್ತಿನ ಮಾನದಂಡವಾಗಿತ್ತು. ಪೂಲಿಗ್ರಾಮದ ಸಾವಿರ ಮಹಾಜನರ ಖ್ಯಾತಿ ಇದು :

ಶ್ರೀರಾಮಾಯಣ ಭಾರತಾದಿ ಮನುಚಾರಿತ್ರಂಗಳ್ ವ್ಯಾಪ್ತಿಯೊಳ್ ।
ಸಾರಾಸಾರ ವಿಚಾರ ತರ್ಕನಿಚಯ ಪ್ರಖ್ಯಾತ ಶಾಸ್ತ್ರಂಗಳೊಳ್ ।
ಶೂರರ್ ವೇದ ಸಮೂಹದೊಳ್ ಸಕಲ ತತ್ವಜ್ಞಾನ ಸಂಪತ್ತಿಯಿಂ ।
ದಾರಾಧ್ಯರ್ ಧರೆಗೆಂದೊಡಿಂ ಪಿರಿಯರಾರ್ ಸಾಸಿರ್ವರಿಂದುರ್ವಿಯೊಳ್ ॥106

ರಾಮಾಯಣ ಪಠಣ ಮತ್ತು ಶ್ರವಣ ಪುಣ್ಯಕರವೆಂಬ ಭಾವನೆ ಎಲ್ಲರಲ್ಲಿಯೂ ಇತ್ತು. ಬೇಲೂರ ಅಧಿಪ ಕೃಷ್ಣಪ್ಪನಾಯಕನು ಪುರಾಣಿಕ ನರಸಿಂಹಭಟ್ಟರಿಗೆ 'ಶ್ರೀಮದ್ರಾಮಾಯಣ ಪುರಾಣವಂನೂ ಸಾಕಲ್ಯವಾಗಿ ಕೇಳಿ ಯೀ ತಥಾತಿಥಿ ಶ್ರೀರಾಮನೌಮಿಯಲ್ಲಿ

ಸ್ವಾಮಿ ಪಟ್ಟಾಭಿಷೇಕೋತ್ಸವ ಕಾಲದಲ್ಲಿ ಸಹಿರಣ್ಯೋದಕ ದಾನ ಧಾರಾಪೂರ್ವಕವಾಗಿ ಶ್ರೀ ಸೀತಾರಾಮಾರ್ಪಣವಾಗಿ' ಆರು ಖಂಡುಗ ಭೂಮಿಯನ್ನು ದಾನವಿತ್ತ.[107] ರಾಮದೇಗುಲಗಳ ನಿರ್ಮಾಣ ಹಾಗೂ ದೇವರ ಪೂಜಾದಿ ಸೇವೆಗಳಿಗೆ ನೀಡಿದ ದಾನ, ರಾಮೋತ್ಸವ ಮುಂತಾದವನ್ನು ಕುರಿತಂತೆ ಶಾಸನೋಲ್ಲೇಖಗಳಿವೆ : 'ಚೈತ್ರ ಶುದ್ಧ ಶ್ರೀರಾಮನವಮಿ ಈ ಶುಭದಿವಸದಲ್ಲಿ ಹಿಡಿಂಬಾಪುರಿ ಗ್ರಾಮದೊಳಗೆ ಶ್ರೀರಾಮ ದೇವರಿಗೆ ನೂತನವಾಗಿ' ದೇವಾಲಯವೊಂದನ್ನು ನಿರ್ಮಿಸಲಾಯಿತು,[108] 'ಗುಡಿಯನ್ನು ಕಟ್ಟಿಸಿ ಶ್ರೀರಾಮಚಂದ್ರದೇವರ ಸುಪ್ರತಿಷ್ಠೆಯ' ಮಾಡಿದ ಸಂಗತಿಯನ್ನು ನಿರೂಪಿಸುವ ಒಂದು ಶಾಸನವಿರುವ ಗ್ರಾಮದ ಹೆಸರು ಇಂದಿಗೂ ಗುಡಿಪಳ್ಳಿ ಎಂದಿದೆ. ಎಷ್ಟೋ ರಾಮಪುರ, ರಾಮೇಶ್ವರ, ರಾಮನಪಳ್ಳಿಗಳನ್ನು ಶಾಸನಗಳು ಉಲ್ಲೇಖಿಸುತ್ತವೆ. ಹನುಮಂತನ ದೇವಾಲಯಗಳ ಉಲ್ಲೇಖಗಳನ್ನೂ ಶಾಸನಗಳಲ್ಲಿ ಕಾಣಬಹುದು.

ಹಲವು ದೇವಾಲಯಗಳ ಶಿಲ್ಪ ಸಾಲುಗಳಲ್ಲಿ ರಾಮಾಯಣದ ದೃಶ್ಯಗಳನ್ನು ಕೆತ್ತಿರುವುದನ್ನು ನೋಡಬಹುದು. ಅಂಥ ಶಿಲ್ಪಗಳ ಕೆಳಗೆ ದೃಶ್ಯವನ್ನು ಸೂಚಿಸುವ ಕಿರುಶಾಸನಗಳನ್ನು—ವಿಶೇಷವಾಗಿ ಹೊಯ್ಸಳ ದೇವಾಲಯಗಳಲ್ಲಿ—ಬರೆದಿರುವ ನಿದರ್ಶನಗಳಿವೆ.

9

ಸಾಂದರ್ಭಿಕವಾದ ಕೆಲವು ಅಂಶಗಳನ್ನು ಇಲ್ಲಿ ಗಮನಿಸುವುದು ಸೂಕ್ತ. ಕ್ರಿ.ಶ. 10ನೆಯ ಶತಮಾನದ ಆದಿಭಾಗದಲ್ಲೇ ರಾಮಾಯಣದ ಕಥೆ ಇಂಡೋನೇಷ್ಯದಲ್ಲಿ ಜನಪ್ರಿಯವಾಗಿತ್ತೆನ್ನಲು ಶಾಸನಾಧಾರಗಳು ದೊರಕುತ್ತವೆ. ವಾದ್ಯಮೇಳ ಹಾಗೂ ಅಭಿನಯ ಸಹಿತವಾಗಿ ರಾಮಾಯಣವನ್ನು ಪಠಿಸುವ ಪದ್ಧತಿ ಇದ್ದಿತೆನ್ನಲು Si Jaluk recited the Ramayana blowing flutes and making buffoonry ಎಂಬ ಮಾತು ಪುಷ್ಟಿ ನೀಡುತ್ತದೆ.[109] ರಾಮದೇವತೆಯ ಉಲ್ಲೇಖಗಳನ್ನೂ ಅಲ್ಲಿನ ಶಾಸನಗಳಲ್ಲಿ ಕಾಣಬಹುದು. ಇಂದಿಗೂ ಅಲ್ಲಿ ರಾಮಾಯಣ ಜನಜೀವನದಲ್ಲಿ ಹಾಸುಹೊಕ್ಕಿದೆ. ಕಂಬುಜದ ಶಾಸನಗಳಲ್ಲಿ 'ವೇದ, ವೇದಾಂತ, ಸ್ಮೃತಿ, ರಾಮಾಯಣ, ಮಹಾಭಾರತ, ಹರಿವಂಶ ಮುಂತಾದ ಗ್ರಂಥಗಳಿಗೆ ಸಂಬಂಧಪಟ್ಟ ಪ್ರಸಂಗಗಳು' ನಿರೂಪಿತವಾಗಿವೆ.[110]

ಶ್ರುತಕೀರ್ತಿ ಎಂಬಾತ ವಿಶಿಷ್ಟ ರೀತಿಯಲ್ಲಿ ಎಂದರೆ ಹಿಂದಿನಿಂದಲೂ ಮುಂದಿನಿಂದಲೂ ಓದಬಹುದಾದ 'ರಾಘವ ಪಾಂಡವೀಯ' ಎಂಬ ಅದ್ಭುತ ಕೃತಿಯನ್ನು ರಚಿಸಿ ವಿದ್ವಲ್ಲೋಕವನ್ನು ಬೆರುಗುಗೊಳಿಸಿದ.[111] ದೇವನಮನವಷ್ಟೇ ಶಾಸನಗಳ ವಸ್ತುವಾಗಿರುವ ಉದಾಹರಣೆಗಳುಂಟು : "ಕಂಬದ ರಾಮಾಯಣದ ನಾರಾಯಣನ

ಮಕ್ಕಳು ರಾಮಾಯಣದ ರಾಮುಪನು ಲಕ್ಷ್ಮಣನು ಅನುಗವಳ್ಳಿಯ ರಾಮಚಂದ್ರ ದೇವರ ಪಾದಕೆ ನಮಸ್ಕಾರ ಮಾಡಿ ಹೋದರು."[112] ಶ್ರೀರಘುನಾಥ ಮಠ ದೇವಾಲಯಗಳು ಅಸ್ತಿತ್ವಕ್ಕೆ ಬಂದವು.[113] ಜಾನಪದ ಕಲಾಪ್ರಕಾರಗಳಲ್ಲಿ ಇಂದು ವಿಶಿಷ್ಟವೆನಿಸಿರುವ ಬೊಂಬೆಯಾಟಕ್ಕೆ ರಾಮಾಯಣ ಪ್ರಿಯವಸ್ತು. ಅಂಥ ಕಲಾವಿದನೊಬ್ಬನ ಉಲ್ಲೇಖ ಇದು : 'ರಾಮಾಣ್ಯದ ಬೊಂಬಲಾಟದ ರಾಮಯ್ಯ'; ಒಂದು ಗ್ರಾಮವನ್ನು ಆತನಿಗೆ ದಾನ ನೀಡಲಾಯಿತು.[114] ಕಲೆಗಿದ್ದ ಪ್ರೋತ್ಸಾಹವೂ ಇದರಿಂದ ಗೊತ್ತಾಗುತ್ತದೆ. ಅಯೋಧ್ಯಾಪುರವೆಂಬ ಹೆಸರಿನ ಹಲವು ಗ್ರಾಮಗಳನ್ನು ಶಾಸನಗಳು ಉಲ್ಲೇಖಿಸುತ್ತವೆ.[115] ರಾಘವನಿದ್ದ ಅಯೋಧ್ಯೆಯಂತೆ ಹರಿಹರನಿದ್ದ ವಿಜಯನಗರ ಕಂಗೊಳಿಸುತ್ತಿತ್ತು.[116] ಚಾಳುಕ್ಯ ವಂಶಜರು ಅಯೋಧ್ಯಾಪುರ ಪರಮೇಶ್ವರ ಎಂಬ ಬಿರುದನ್ನು ಹೊಂದಿದ್ದರು.[117]

ಇಕ್ಷ್ವಾಕು ವಂಶವೆಂಬ ಹೆಸರಿನ ರಾಜವಂಶವೊಂದು ನಾಗಾರ್ಜುನ ಕೊಂಡ ಪ್ರದೇಶವನ್ನು ಹಿಂದೆ ಆಳಿತು. ಈ ಹೆಸರು ಕೇಳಿದ ಕೂಡಲೆ ನಮಗೆ ನೆನಪಾಗುವುದು ಅಯೋಧ್ಯೆಯ ರಾಜವಂಶವೇ. ಯದುವಂಶಜರಲ್ಲಿ ಕೆಲವರು ಕಿಷ್ಕಿಂಧೆಗೆ ಬಂದರು :

> ತಸ್ಮಿನ್ ಜಾತಾಃ ನೃಪಾಃ ಕೇಚಿತ್ಕಿಷ್ಕಿಂಧಾಯಾಂ ರಘೂತ್ತಮಂ ।
> ಸುಗ್ರೀವಾರಾಧಿತಂ ಸೀತಾರಾಮಂ ನಂ ತುಂ ಸಮಾಗತಾಃ ॥[118]

ಹಾಗೆ ಬಂದವರು ಇಲ್ಲಿಯೆ ನೆಲೆನಿಂತು ರಾಜ್ಯವಾಳಿದರು. ಸಂತೆಬೆನ್ನೂರ ಪ್ರಭುಗಳು 'ರಾಮಚಂದ್ರಸ್ವಾಮಿಯವರ ಪಾದಪದ್ಮಾರಾಧಕರಾದ ಹನುಮಂತದೇವರ ನಿಜಭಕ್ತ'[119]ರಾಗಿದ್ದರು. ಇಂಥ ರಾಜಮನೆತನಗಳು ಹಲವಿದೆ.

ಇಲ್ಲೊಂದು ಕೂಟ ತಾಮ್ರಶಾಸನದ ಪ್ರಸ್ತಾಪವನ್ನು ಮಾಡಬಹುದೆಂದು ತೋರುತ್ತದೆ. ತ್ರೇತಾಯುಗದಲ್ಲಿ ಅಯೋಧ್ಯೆಗೆ 'ಶ್ರೀ ರಾಮಚಂದ್ರಸ್ವಾಮಿಯವರು । ನಾನಾ ವರ್ಣಾಶ್ರಮದವರ । ಕರೆಕಳುಯಿಸಿ ಯೇಳು ಜೊಂಕಿನ ಮಾಣಿಕ್ಯಕ್ಕೆ ಸೂತ್ರವಂ ಪೋಣಿಸೂ ಯಂನ್ನಲಾಗಿ । ಯಾವ ಜಾತಿಯವರ ಕೈಯಲ್ಲು । ಪೋಣಿಸುವದಕ್ಕೆ ಆಗದೆ ಯಿರಲಾಗಿ ಬುಧನು ಕೊಟ್ಟ ಬುದ್ಧಿಯಿಂದ್ಧಾ' ಅಕ್ಕಸಾಲೆ ಜಾತಿಯವರು ಆ ಮಾಣಿಕ್ಯಕ್ಕೆ ದಾರ ಪೋಣಿಸಿ ಶ್ರೀರಾಮನಿಗೆ ಅರ್ಪಿಸಿದರಂತೆ ; ಆತ ಅವರನ್ನು 'ಅರ್ಧ ಸಿಂಹಾಸನದ ಮೇಲೆ ಕುಳ್ಳಿರಿಶಿ' ಹಲವು ಬಗೆಯ ಉಡುಗೊರೆಗಳನ್ನೂ ಗೌರವ ಲಾಂಛನಗಳನ್ನೂ ಕೊಟ್ಟು ಮರ್ಯಾದೆ ಮಾಡಿದನಂತೆ ![120] ತಮ್ಮ ಜಾತಿಯ ಹೆಗ್ಗಳಿಕೆಯನ್ನು ಬಡಾಯಿಕೊಚ್ಚಿಕೊಳ್ಳುವ ಮಾನವ ಪ್ರವೃತ್ತಿಯನ್ನು ಇದು ಸೂಚಿಸುತ್ತದೆಂದು ಹೇಳಿದರೆ ಸಾಕು.

10

ಈ ಹಿಂದೆಯೇ ಹೇಳಿದಂತೆ ಶಾಸನಗಳು ಪ್ರಮುಖವಾಗಿ ಇತಿಹಾಸದ ಆಕರಗಳು. ನಮ್ಮ ದೇಶದ ಶಾಸನ ಸಂಖ್ಯೆಯೇ ಸುಮಾರು ಒಂದು ಲಕ್ಷದಷ್ಟಿದೆ ಎಂದು ಅಂದಾಜು ಮಾಡಿದೆ ; ಅದರಲ್ಲಿ ಕನ್ನಡ-ತಮಿಳುಗಳದ್ದೇ ಸಿಂಹಪಾಲು. ಲಭ್ಯವಿದ್ದ ಶಾಸನ ಸಾಮಗ್ರಿಯನ್ನು ಸ್ಥೂಲವಾಗಿ ಸಮೀಕ್ಷಿಸಿ, ಸೀಮಿತ ಕಾಲದಲ್ಲಿ ಪ್ರಸ್ತುತ ಲೇಖನವನ್ನು ಸಿದ್ಧಪಡಿಸಿರುವುದರಿಂದ ಇದು ಸಮಗ್ರವಲ್ಲ ; ಪರಿಪೂರ್ಣವೂ ಅಲ್ಲ. ಶಾಸನಗಳನ್ನು ಹೊಸ ದೃಷ್ಟಿಯಿಂದ ಅಧ್ಯಯನ ಮಾಡಬಹುದಾದ ಸಾಧ್ಯತೆಯನ್ನು ಇದು ಸೂಚಿಸಿದರೆ, ಪ್ರಯತ್ನ ಸಫಲವಾದಂತೆ.* ಶ್ರೀರಾಮ ಮತ್ತು ಇತರರ ಒಂದು ಸ್ತುತಿಯೊಂದಿಗೆ ಈ ಲೇಖನದ ಉಪಸಂಹಾರ ಮಾಡಿದರೆ ಉಚಿತವಾದೀತು :

ಸೀತಾರಾಮ ಪ್ರಸನ್ನ

ಪುರತಃ ಪ್ರಾಂಜಲಿಂ ವಂದೇ ಮಾರುತಿಂ ತವ ಕಿಂಕರಂ
ಸುಗ್ರೀವಂ ಭರತಂ ವಂದೇ ವಿಭೀಷಣ ಮಥಾಶ್ರಯೇ ।
ಲಕ್ಷ್ಮಣಂ ಚಾಂಗದಂ ವಂದೇ ಶತ್ರುಘ್ನಂ ಪ್ರಣಮಾಮ್ಯಹಂ
ಜಾಂಬವಂತಂ ಚ ವಾಯವ್ಯದಳಾದಿಷು ಯಥಾಕ್ರಮಂ ॥121

ಟಿಪ್ಪಣಿಗಳು

1. ನೋಡಿ, ಸರಸ್ವತಿ ಗಜಾನನ ರಿಸಬೂಡ (ಅನು) : ವಾಲ್ಮೀಕಿ ರಾಮಾಯಣ : ಶಾಪ ಮತ್ತು ವರ, ಪ್ರಸ್ತಾವನೆ.
2. ಡಾ॥ ಟಿ. ವಿ. ವೆಂಕಟಾಚಲಶಾಸ್ತ್ರೀ (ಸಂ) : ಕನ್ನಡ ಸಾಹಿತ್ಯ ಚರಿತ್ರೆ, ಸಂ. ೩, ಪು. ೨೬೯.
3. Karnatak Inscriptions (KI) Vol. I, No. 25, 1186 A.D.

---

*ಇಂಥದೊಂದು ಲೇಖನದ ಸಾಧ್ಯತೆಯನ್ನು ಸೂಚಿಸಿದವರು ಮಿತ್ರರಾದ ಕೆ. ಜಿ. ಪ್ರಕಾಶ್. ಇದನ್ನು ಬರೆಯಲು ಪ್ರೇರಣೆಯನ್ನು ನೀಡಿದವರು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರೂ ಹಿರಿಯ ಪ್ರಾಧ್ಯಾಪಕರೂ ಆದ ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ. ಇವರಿಬ್ಬರಿಗೂ ನನ್ನ ಕೃತಜ್ಞತೆಗಳು.

4. Corpus of Kadamba Inscriptions, Vol. I, No. 14, 5th Century A.D.
5. E.C. Vol. V (Revised), K. R. Nagar 25, 11-12th Century A.D.
6. South Indian Inscriptions (SII), Vol. XV No. 57, 1184 A.D.
7. E.C. Vol. XI, Molakalmuru-27, 962 A.D.
8. S.I.I. Vol. XX, No. 49, 1076 A.D.
9. E.C. Vol. IX (Revised), Belur-16, 1117 A.D.
10. Ibid, Belur-317, 1173 A.D
11. Mysore Archaeological Report (MAR)-1925, No. 30, 1120 A.D.
12. M.A.R. - 1947-56, No. 50, 1535 A.D.
13. E.C. Vol. X, Mulbagal-38, C. 900 A.D.
14. M.A R - 1925, No. 64, C. 1181 A.D.
15. & 16. E C. Vol. XI, Tumkur 9, 1151 A.D.
17. ರಾಮಾಯಣ, ಉ ಕಾಂ. 10, 45
18. A Corpus of Inscriptions of Kannada Districts of Hyderabad State No. 13, 1178 A.D.
19. ರಾಮಾಯಣ, ಯು. ಕಾಂ. 107, 52
20. E.C. Vol. VI, Kadur-156, 1191 A.D.
21. S.I.I. Vol. XV, No. 59, 1184 A.D.
22. E.C., Vol. III (Revised), Nanjangud-115, 1543 A.D.
23. E.C., Vol. XII, Kunigal-1, 1151 A.D.
24. ವಾಲ್ಮೀಕಿ ರಾಮಾಯಣ : ಶಾಪ ಮತ್ತು ವರ, ಪು. 20
25. ರಾಮಾಯಣ, ಉ. ಕಾಂ. 108, 28
26. S.I.I. Vol. IX, Part I, No. 44, 1049 A.D. ; E.C. Vol. XI, Holalkere-127, 1387 A.D. ; E.C. Vol. XII, Sira-1, 1609 A.D., etc.

ಅರಕಲಗೂಡು ತಾಲೂಕಿನ ಒಂದು ಶಾಸನದಲ್ಲಿ (E.C., Vol. VIII Revised), Arakalagudu-134, 1189 A.D.) ಈ ಶ್ಲೋಕವನ್ನು ಕೊಟ್ಟು ತರುವಾಯ "ಎಂಬೀ ಶ್ಲೋಕದರ್ತ್ಥವೆಂತೆಂದಡೆ ಕೋಟಿ ಪಯಂ ಕವಿಲೆಯುಂ ಏಕೋಟಿ ತಪೋಧನರಂ ವೇದವಿದರಂ ಪನ್ನಿಕೋಟಿಯುಂ ಕೋಟಿ ತೀರ್ಥದ ಕೋಟಿ ಮಹಜನದ ಅಳಿದಂ" ಎಂದು ಹೇಳಿದೆ !

ಸಾಂದರ್ಭಿಕವಾಗಿ ಇನ್ನೊಂದು ಅಂಶವನ್ನೂ ಇಲ್ಲಿ ಗಮನಿಸಬಹುದು. ವಿಭೀಷಣ ದ್ವಾಪರಯುಗದಲ್ಲಿಯು ರಾಜನಾಗಿದ್ದ. ದಕ್ಷಿಣ ಸಮುದ್ರ ತೀರದಲ್ಲಿ ನಿಂತ ಸಹದೇವ ಘಟೋತ್ಕಚನನ್ನು ವಿಭೀಷಣನ ಆಸ್ಥಾನಕ್ಕೆ ರಾಯಭಾರಿಯಾಗಿ ಕಳುಹಿಸಿದ. ವಿಭೀಷಣ

ಯುಧಿಷ್ಠಿರನ ಸಾರ್ವಭೌಮತ್ವವನ್ನು ಒಪ್ಪಿಕೊಂಡು ಹೇರಳವಾಗಿ ಕಪ್ಪ ಕಾಣಿಕೆಗಳನ್ನು ಕಳುಹಿಸಿಕೊಟ್ಟ (ಶ್ರೀ ಮನ್ಮಹಾಭಾರತ, ಸಭಾಪರ್ವ, ಸರ್ಗ ೩೧, ಭಾರತದರ್ಶನ, ಪು. 1596-97). ಇದರ ಪ್ರಸ್ತಾಪವನ್ನು ಶಾಸನವೊಂದರಲ್ಲಿಯೂ ಕಾಣಬಹುದು. (E.C. Vol. VII, Shikaripur-126, 1036 A.D.).

27. E.C. Vol. VIII, Sorab-382, 1395 A.D. ; E.C., Vol. VII, Channagiri-51, 1758 A.D. etc. Rice's footnote. ಆದರೆ ರೈಸ್ ಮೂಲವನ್ನು ತಿಳಿಸಿಲ್ಲ.
28. K.I. Vol. I, No. 25, 1186 A.D.
29. E.C., Vol. XI, Davangere-107, 1516 A.D.
30. E.C. Vol. XI, Davangere-59, 1280 A.D. ; E.C. Vol. VII, Honnali-17, 1286 A.D.
31. E C. Vol. VII, Shimoga-5, 1218 A.D.
32. S. P. Tewari : Hindu Iconography, P. 72
33. E.C. Vol. VI, Tarikere-21 & 24, 1655 A.D.
34. ಮಾಸ್ತಿ ವೆಂಕಟೇಶ ಅಯ್ಯಂಗಾರ್ : ಆದಿಕವಿ ವಾಲ್ಮೀಕಿ, ಪು. ೧೦೩
35. E.C. Vol. XI, Holalkere-127, 1387 A.D.
36. E.C. Vol. III (Revised), Nanjanagudu-115, 1543 A.D.
37. E.C. Vol. IX (Revised), Belur-195, 1539 A.D.
38. Corpus of Kadamba Inscriptions, Vol. I No. 23, 6th Century A.D.
39. Dr. S. Srikantha Sastry : Sources of Karnataka History, P. 36.
40. Corpus of the inscriptions of Java, Vol. I, No. 3, 732 AD.,
41. E.C. Vol. IV (Revised), Chamarajanagara-356, 904 A.D.
42. E.C. Vol. XII, Tiptur-61, 1162 A.D.
43. E.C. Vol. VII, Shikaripur-185, 1157 A.D.
44. E.C. Vol. VIII, Sorab-140, 1198 A.D.
45. Ibid, Sorab-328, 1159 A.D.
46. E.C. Vol. VI, Kadur-38, 1191 A.D.
47. E.C. Vol. XI, Davangere-25, C. 1100 A.D.
48. E.C. Vol. VIII, Sorab-328, 1159 A.D.
49. E.C. Vol. XI, Jagalur-30, 1279 A.D.
50. E.C. Vol. VII, Channagiri-38 & 39, 1149 A.D.
51. S.I.I. Vol. XV No. 77, 12th Century A.D.
52. M.A R. 1930, No. 1, 12th Century A.D.

53. E.C. Vol. XVI, Chikkanayakanahalli-62 (Revised), 1242 A D.
54. E.C. Vol. VIII, Sorab-299, 1073 A.D.
55. Epigraphia Indica (E I.) Vol. XVIII, 212, 1162 A.D.
56. E.C. Vol. XVI, Gubbi-74, 1776 A.D.
57. E.C. Vol. VI, Chikmagalur-140, 1157 A.D.
58. E.C. Vol. V (Revised) Mysore-26, 1860 A.D.
59. E.C. Vol. VIII, Sorab-299, 1073 A.D.
60. & 61. Dr. M. K. Sharan : Select Combodian Inscriptions,
62. E.C. Vol. XI, Davangere-23, 1410 A.D.
63. E.C. Vol. VII, Shimoga-88, 1203 A.D.
64. S.I.I. Vol. XX, No. 142, 1165 A.D.
65. E C. Vol. IX (Revised), Belur-195, 1539 A.D.
66. E.C. Vol. VIII (Revised), Hassan-133, 12th Century A.D.
67. E.C. Vol. V (Revised), K. R. Nagar-49, 819 A.D.
68. ಛಾಯಾನುವೃತ್ತ್ಯಾಭವದಾತ್ಮಭರ್ತುರ್ ರಾಮಸ್ಯ ಸೀತೇವ ಗುಣಭಿರಾಮಾ – E C. Vol. V (Revised), T-Narasipura-14, 18th Century A.D.
69. K.I. Vol. VI, No. 37, 1174 A.D.
70. E C. Vol. IV (Revised), Heggadadevanakote-60, 1057 A.D.
71. E.C. Vol. II (Revised) Sravana Belagola-4.1, 1159 A.D.
72. S.I.I. Vol. XX, No. 179, 12th Century A.D.
73. Andhra Pradesh Government Archaeological Series, No. 3, Ins 2, 1058 A.D.
74. E.C. Vol. VIII, Sagar-103, 1089 A.D.
75. K.I. Vol. VI, No. 75, 1213 A.D.
76. E.C. Vol. VIII, Sorab-140, 1198 A.D.
77. E.C. Vol. VII, Shikaripura-13, 1068 A.D.
78. E.C. Vol. IX (Revised), Belur-410, 1160 A.D.
79. E.C. Vol. V, Channarayapatna-246, 1157 A.D.
80. E.C. Vol. XI, Davangere-34, 1379 A.D.
81. ವಾಲ್ಮೀಕಿ ರಾಮಾಯಣ : ಶಾಪ ಮತ್ತು ವರ ಪು. 427
82. E.C. Vol. VII (Revised), Nagamangala-72, 1183 A.D.
83. E.C. Vol. IX (Revised), Belur-300, 12-13th Century A.D.

84. E.C. Vol. XI, Davangere-70, 1276 A.D.
85. E.C. Vol. VIII, Sorab-138, 1145 A.D.
86. ವಿವರಗಳಿಗೆ ನೋಡಿ, ಸೀತಾರಾಮ ಜಾಗೀರ್‌ದಾರ್ : ಶಾಸನಗಳಲ್ಲಿ ಆಂಜನೇಯ, ಹನುಮಚ್ಛ್ರೀ (ಸವಿನೆಂಚಿಕೆ) ೧೯೯೦
87. E.C. Vol. VIII (Revised), Hassan-142, 1156 A.D.
88. E.C. Vol. III (Revised), Nanjangudu-115, 1543 A.D.
89. S.I.I. Vol. XV, No. 134, 1178 A.D.
90. S.I.I. Vol. XX, No. 111, 1140 A.D.
91. E.C. Vol. V, Arasikere-108, 1255 A.D.
92. E.C. Vol. IX, (Revised) Belur-410, 1160 A.D.
93. E.C. Vol. VII, Shikaripur-136, 1068 A.D.
94. E.C. Vol. XII, Sira-95, 1403 A.D.
95. E.C. Vol. IV (Revised), Piriyapattana-49, C. 450 A.D.
96. E.C. Vol. VII, Shikaripur-151, 1047 A.D.
    ಇದರ ಪಾಠಾಂತರಗಳುಂಟು - ನೋಡಿ D. C. Sircar : Indian Epigraphy P. 193

    ಇದನ್ನು ನೋಡಿ : ವಾಲ್ಮೀಕೀರಪಿ ಶ್ಲೋಕ :
    ಸರ್ವಾನೇವ ಪ್ರಾರ್ಥಯತ್ಯೇಷರಾಮೋ । ಭೂಯೋಭೂಯೋ
    ಭಾವಿನಃಪಾರ್ಥಿವೇನ್ದ್ರಾನ್ ।
    ಸಾಮಾನ್ಯೋಯಂ ಧರ್ಮಸೇತುರ್ನೃಪಾಣಾಂ । ಕಾಲೇಕಾಲೇ ರಕ್ಷಣೀಯಂ ಕ್ರಮೇಣ ॥
    E.C. Vol. VII (Revised), Mandya-35, 713 A.D.
    ಇದರ ಪೂರ್ವಾರ್ಧ ಹೀಗೂ ಬಂದಿದೆ : ಸರ್ವಾನೇತಾನ್ ಭಾವಿನಃ ಪಾರ್ಥಿವೇಂದ್ರಾನ್ ಭೂಯೋ ಭೂಯೋ ಪ್ರಾರ್ಥಯತ್ಯೇಷ ರಾಮಃ ।
    Corpus of Bengal Inscriptions No. 2
97. K.I. Vol. II, No. 9, 1075 A.D.
98. ಎ. ಎಂ. ಅಣ್ಣಿಗೆರೆ ಮತ್ತು ಆರ್. ಶೇಷಶಾಸ್ತ್ರಿ (ಸಂ) : ಶಾಸನಸಂಪದ ಸಂಖ್ಯೆ 13, 1007 A.D.
99. ಮೋಪುಂಡಿ ಮಲ್ಲಾರಿ : ಕನ್ನಡ ನಾಡಿನ ಕೆಲವು ಶಾಸನ ಕವಿಗಳು, ಪು. ೨೫೮, 1240 A.D.
100. E.C. Vol. V (Revised), K. R. Nagar-25, 11-12th Century A.D.
101. E.C. Vol. X, Chik-Ballapur-29, C. 750 A.D.
102. E.C. Vol. IX, Magadi-1, 1630 A.D.
103. E.C. Vol. XVI, Gubbi-16, 1896 A.D.
104. E.C. Vol. V (Revised), K. R. Nagar 105, 18th Century A.D.
105. E.C. Vol. VI, Chikmagalur-108, 1707 A.D.

106. E.I. Vol. XVIII, 212, 1162 A.D.
107. E.C. Vol. IX (Revised), Sakaleshapura-40, 1712 A.D.
108. E.C. Vol. X, Goribidnur-10, 1848 A.D.
109. Corpus of the Inscriptions of Java, Vol. II, No. 72, 907 A.D.
110. ಡಾ. ಎ. ವಿ. ನರಸಿಂಹಮೂರ್ತಿ : ಸಾಂಸ್ಕೃತಿಕ ಬೃಹದ್ಭಾರತ, ಪು. ೫೩
111. E.C. Vol. II (Revised), Sravanabelagola-71, 1163 A.D.
112. E.C. Vol. VIII (Revised), Hassan-89, 1377-78 A.D.
113. K.I. Vol. VI, No. 69, 1526 A.D.
114. M.A.R. 1941-3, 1543 A.D.
115. E.C. Vol. XII, Pavagada-5, 1512 : E.C. Vol. VIII, Thirthahalli-24, C. 1405 A.D. ಇತ್ಯಾದಿ
116. E.C. Vol. XI, Davangere-34, 1379 A.D.
117. Indian Antiquary, Vol. V, P 17, 1019 A.D.
118. E.C. Vol. X, Goribidnur-77, 1505 A.D.
119. E.C. Vol. VI, Tarikere-23 1681 A.D.
120. E.C. Vol. IX, Bangalore-96, 1402 A.D. (?)
121. E.C. Vol. IV (Revised), Hunasuru-7, 1829 A.D.

* * * *

ಧರ್ಮವು ಧನ ಸಂಪಾದನೆಗೆ ಒಂದು ಸುಲಭ ಮಾರ್ಗವಾಗಿದೆ. ಧರ್ಮದ ಅನುಷ್ಠಾನವು ತನ್ನ ಶ್ರೇಯಸ್ಸಿಗೆ ಕಾರಣ, ಜೀವೋತ್ಕರ್ಷಕ್ಕೆ ಸಾಧನ ಎಂಬುದು ಮರೆತುಹೋಗಿದೆ.

ಎನ್. ರಂಗನಾಥ ಶರ್ಮಾ

"ಭಕ್ತಿ"-ಆಳ್ವಾರರು (ತಮಿಳುನಾಡಿನ ವೈಷ್ಣವ ಸಂತರು), ಕರ್ನಾಟಕದ ಶಿವಶರಣರು ಹಾಗೂ ಹರಿದಾಸರಲ್ಲಿ : ಒಂದು ತೌಲನಿಕ ಪರಿಚಯ

ಎನ್. ಕೆ. ರಾಮಶೇಷನ್

೧) "ಅಂಕೋಲಂ ನಿಜಬೀಜಸಂತತಿರಯಸ್ಕಾಂತೋಪಲಂ ಸೂಚಿಕಾ
ಸಾಧ್ವೀ ನೈಜವಿಭುಂ ಲತಾಕ್ಷಿತಿರುಹಂ ಸಿಂಧುಃ ಸರಿದ್ವಲ್ಲಭಂ ।
ಪ್ರಾಪ್ನೋತೀಹ ಯಥಾತಥಾ ಪಶುಪತೇಃ ಪಾದಾರವಿಂದ ದ್ವಯಂ
ಚೇತೋವೃತ್ತಿರುಪೇತ್ಯ ತಿಷ್ಠತಿ ಸದಾ ಸಾ ಭಕ್ತಿಃ ಇತ್ಯುಚ್ಯತೇ"[1]

"ಹೇ ಪಶುಪತಿ, ಜಗದೀಶ್ವರ, ಅಂಕೋಲೆ ಮರದ ಬೀಜಗಳು ಆ ಮರವನ್ನು ಹೇಗೆ ಅಂಟಿಕೊಂಡೇ ಇರುವುವೋ, ಸೂಜಿಯು ಸೂಜಿಗಲ್ಲಿಗೆ ಆಕರ್ಷಿತವಾಗುವುದೋ, ಬಳ್ಳಿಯು ಮರವನ್ನು ತಬ್ಬಿಕೊಂಡು ಆಶ್ರಯಿಸುವುದೋ ನದಿಯು ಸಾಗರವನ್ನು ಸೇರುತ್ತದೆಯೋ, ಆ ತೆರನಾಗಿ ನನ್ನ ಚಿತ್ತವೃತ್ತಿಯೂ ಸಹ ನಿನ್ನ ಪಾದಕಮಲಗಳನ್ನು ಸೇರಿ, ಅಲ್ಲಿಯೇ ಸದಾ ನಿಲ್ಲುತ್ತದೆ. ಅದನ್ನೇ 'ಭಕ್ತಿ' ಎನ್ನುವುದು." ಅದ್ವೈತ ತತ್ತ್ವ (Monism) ಸಂಸ್ಥಾಪಕ—ಪ್ರತಿಪಾದಕರಾದ ಆದಿ ಶಂಕರರು ತಮ್ಮ 'ಶಿವಾನಂದಲಹರಿ' ಸ್ತೋತ್ರದಲ್ಲಿ ಬಿನ್ನವಿಸಿಕೊಳ್ಳುವ ಸಾಲುಗಳಿವು.

೨) ಭಕ್ತಿಯು ತುಂಬ ಪ್ರಾಚೀನವಾದದ್ದು. ಭಕ್ತಿಯ ಇತಿಹಾಸವೂ ದೊಡ್ಡದು. 'ಭಕ್ತಿ' ಎಂಬ ಪದ 'ಭಜ–ಸೇವಾಯಾಂ' ಎಂಬ ಧಾತುವಿನಿಂದ ನಿಷ್ಪನ್ನವಾಗಿ ರುವುದರಿಂದ ಹಾಗೂ ಸೇವೆಗೈಯಲು 'ಪ್ರೇಮ'ವು ಇರಬೇಕಾದ್ದು ಅವಶ್ಯವಾಗಿರುವುದ

---

1. ''ಸಾಭಕ್ತಿರಿತ್ಯುಚ್ಯತೇ'' ಎಂದೇ ಛಂದಸ್ಸು. ಅದನ್ನು ''ಸಾಭಕ್ತಿಃ ಇತ್ಯುಚ್ಯತೇ'' ಎಂದು ಸಂಬೋಧನಾತ್ಮಕವಾಗಿ ಮಾಡಿಕೊಂಡಿದೆ—ಆಚಾರ್ಯ ಶಂಕರರ—'ಶಿವಾನಂದ ಲಹರೀ'ಯಿಂದಾಯ್ದುದು.

ರಿಂದ 'ಭಕ್ತಿ' ಎಂದಾಗ, "ಪ್ರೇಮ ಪೂರ್ವಕವಾದ ಸೇವೆ" ಎಂಬ ಅರ್ಥವು ಸಹಜವಾಗಿಯೇ ಮೂಡುತ್ತದೆ.

ಇದಲ್ಲದೆ "ಆಶ್ರಯಿಸು-ಭಜ" ಎಂಬುದೆ 'ಭಕ್ತಿ'ಯ ವ್ಯಾಖ್ಯೆಗೆ ಕಾರಕವೆನ್ನಿಸುವುದು. ಪ್ರಾಚೀನವೆನಿಸಿರುವ ಋಗ್ವೇದದ ಮಂತ್ರಗಳಲ್ಲಿಯೇ ಭಕ್ತಿಯ ಸುಳುಹು, ಹೊಳಹು, ಹರಹು ಗಮನಾರ್ಹ.

೩) "ಯಾರು ಜಗತ್ಕಾರಣನೂ, ಜಗತ್ಕರ್ತೃವೂ, ನಿತ್ಯನೂತನನೂ, ಶ್ರೀಪತಿಯೂ ಆದ ವಿಷ್ಣುವಿಗೆ ತನ್ನನ್ನು ಸಮರ್ಪಿಸಿಕೊಳ್ಳುವನೊ, ಅವನ ಶ್ರೇಷ್ಠವಾದ ಜನ್ಮಕರ್ಮಾದಿಗಳನ್ನು ನುತಿಸುವನೋ, ಅಂಥವನು ಚಿತ್ಸ್ವರೂಪನಾದ ಮಹಾವಿಷ್ಣುವನ್ನೇ ಪಡೆಯುತ್ತಾನೆ." ಇಲ್ಲಿ ವಿಷ್ಣು ಎಂಬ ಪದಕ್ಕೆ ಸರ್ವವ್ಯಾಪ್ತ,2 'ವಾಸುದೇವಃ ಸರ್ವಮಿತಿ', ವಿಶ್ವವ್ಯಾಪಿ, ವಿಭೂತಿಯೋಗದನ್ವಿತ ಎಂದೆಲ್ಲ ಅರ್ಥವಿಶೇಷ ಗಮನಾರ್ಹ, ಪರಿಗಣನಾರ್ಹ ಹಾಗೂ ಆಸ್ವಾದನೀಯ.

೪) ಕಠೋಪನಿಷತ್ತು ಈಶ್ವರಾನುಗ್ರಹದ ಅಗತ್ಯ ಕುರಿತು ತಿಳಿಸುತ್ತಾ ಭಕ್ತಿಯನ್ನು ವ್ಯಾಖ್ಯಾನಿಸುತ್ತದೆ :

"ಯಮೇವೈಷ ವೃಣುತೇ ತೇನ ಲಭ್ಯಃ
ತಸ್ಯೈಷ ಆತ್ಮಾ ವಿವೃಣುತೇ ತನೂಂಸ್ವಾಮ್"

"ಈ ಆತ್ಮನು ಯಾರನ್ನು ಆರಿಸುವನೋ, ಅವನಿಂದ ಪಡೆಯಲ್ಪಡುತ್ತಾನೆ." ಇದೇ ರೀತಿಯಲ್ಲಿ 'ಶ್ವೇತಾಶ್ವತರ' ಎಂಬ ಉಪನಿಷತ್ತಿನ ಒಂದು ತುಣುಕು ಇಂತಿದೆ :

ಯಸ್ಯ ದೇವೇ ಪರಾಭಕ್ತಿಃ
ಯಥಾದೇವೇ ತಥಾ ಗುರೌ ॥
ತಸ್ಯೈತೇ ಕಥಿತಾಹ್ಯರ್ಥಾಃ ।
ಪ್ರಕಾಶನ್ತೇ ಮಹಾತ್ಮನಃ ॥

"ಯಾವ ವ್ಯಕ್ತಿಗೆ ದೈವದಲ್ಲಿ ಪರಾಭಕ್ತಿಯು ಇರುವುದೋ, ದೇವರಲ್ಲಿ ಇರುವಂತೆಯೇ ಗುರುವಿನಲ್ಲಿಯೂ ಇರುವುದೋ ಅಂಥ ಮಹಾತ್ಮನಿಗೆ ಉಪದೇಶಿಸಲ್ಪಟ್ಟ (ಶ್ರುತಿ) ಈ ಅರ್ಥಗಳು ಪ್ರಕಟವಾಗುತ್ತವೆ." ಇಲ್ಲಿ ಭಕ್ತಿಯ ಒಂದು ಪ್ರಭೇದದ ಪರಿಚಯ

2. ಸರ್ವಸ್ಥಳದಿ ವ್ಯಾಪ್ತನಾದ ಸರ್ವದೋಷರಹಿತನಾದ, ಸರ್ವವಂದ್ಯನಾದ ಪುರಂದರ ವಿಠಲನನ್ನು ಸೇವಿಸುವಳೋ ಏನು ಧನ್ಯಳೋ ಲಕುಮಿ ಎಂಥ ಮಾನ್ಯಳೋ...(ಪುರಂದರ ದಾಸರು)

ವಾಗುತ್ತದೆ ಹಾಗೂ ಆಚಾರ್ಯ ನಿಷ್ಠೆ—ಗುರುಭಕ್ತಿಯು – ಕೂಡ ಪ್ರಾಧಾನ್ಯ ಪಡೆದಿದೆ ಯೆಂಬುದು ವೇದ್ಯವಾದೀತು.

ಭಕ್ತಿ ಹೀಗೆ ಮೂಡಿಬಂದದ್ದಲ್ಲದೆ ಬೆಳೆದುದರ ಬಗ್ಗೆಯೆ ಪದ್ಮಪುರಾಣದ ಒಂದು ಶ್ಲೋಕ ಹೀಗೆ ಪಡಿನುಡಿಯುತ್ತದೆ :

'ಉತ್ಪನ್ನಾ ದ್ರವಿಡೇ ಸಾಹಂ
ವೃದ್ಧಿಂ ಕರ್ಣಾಟಕೇ ಗತಾ
ಕ್ವಚಿತ್ ಕ್ವಚಿತ್ ಮಹಾರಾಷ್ಟ್ರೇ
ಗುರ್ಜರೇ ಜೀರ್ಣತಾ ಗತಾ"

ಎಂಬುದರಿಂದ ಭಕ್ತಿಯನ್ನೆ ಪ್ರಧಾನ ಸೂತ್ರವಾಗಿ, ಒಂದು ಪಂಥ, ಯೋಗ, ಸಿದ್ಧಾಂತವಾಗಿ ಪರಿಗಣಿಸಿ, ಅಂಗೀಕರಿಸಿ, ಭಕ್ತಿಪಂಥಗಳನ್ನೆ ಸ್ಥಾಪಿಸಿದ ಯಶಸ್ಸು ದಕ್ಷಿಣ ಭಾರತೀಯರಿಗೆ ಸಲ್ಲುತ್ತದೆ ಎನ್ನಬಹುದು.

೫) "ಭಾಗವತ ಮಹಾತ್ಮ್ಯ" ಸಹ 'ಭಕ್ತಿರೇಕೈವ ಮುಕ್ತಿದಾ' ಎಂದು ಭಕ್ತಿಯ ಹಿರಿಮೆಯನ್ನು ಸಾರುತ್ತದೆ. ಪರಮಾತ್ಮನಲ್ಲಿ ದೃಢ ಭಕುತಿಯೊಂದೇ ಮುಕುತಿ ಪದವೀಯುವಂತಹುದು. ಹಾಗೂ ಜ್ಞಾನ-ಕರ್ಮ-ಕ್ರಿಯಾ-ರಾಜಯೋಗ ಗಳಂತೆಯೆ 'ಭಕ್ತಿಯೋಗ'ವುಂಟೆಂಬುದರ ಬಗ್ಗೆ ಭಾಗವತವು ತಿಳಿಸುತ್ತದೆ :

ಏತಾವಾನೇವ ಲೋಕೇಸ್ಮಿನ್ ಪುಂಸಾಂ
ಧರ್ಮಃಪರಃ ಸ್ಮೃತಃ ।
ಭಕ್ತಿಯೋಗೋ ಭಗವತಿ ತನ್ನಾಮಗ್ರಹಣಾಧಿಭಿಃ

'ಭಗವಂತನನ್ನು ಕುರಿತಂತೆ ಅವನ ನಾಮೋಚ್ಚಾರಣೆಯೇ ಮೊದಲಾದವುಗಳಿಂದ ಉಂಟಾಗತಕ್ಕ ಭಕ್ತಿಯೋಗವೇ ಈ ಲೋಕದಲ್ಲಿ 'ಶ್ರೇಷ್ಠ ಮಾನವಧರ್ಮ'ವೆಂದು ಪರಿಗಣಿಸಲ್ಪಟ್ಟಿದೆ. 'ಕಾ ದುರ್ಲಭಾ ನರಾಣಾಂ? ಹರಿಭಕ್ತಿಃ' ಎನ್ನುತ್ತದೆ. ಸುಭಾಷಿತ ವೊಂದರ ತುಣುಕು. "ಜನರಿಗೆ ದುರ್ಲಭವಾವುದು? ಹರಿಭಕ್ತಿ" ಇಂಥದನ್ನು "ಸರ್ವದಾ ಪ್ರೇಮ ರೂಪಿಣೀ" ಎನ್ನುವುದು 'ಭಾಗವತ ಮಹಾತ್ಮ್ಯ'ದ ಸಾಲುಗಳ ಸಾರ.

'ಪ್ರಸ್ಥಾನತ್ರಯಿ'ದಲ್ಲಿ ಒಂದಾದ ಭಗವದ್ಗೀತೆಯಲ್ಲಿ ಭಕ್ತಿಯನ್ನು ಒಂದು 'ಯೋಗ'ವೆಂದೇ ಪರಿಗಣಿಸಿರುವುದು ಸುವಿದಿತ.[1] ಇದರಂತೆಯೆ ಮಹಾಭಾರತದ 'ಭೀಷ್ಮ ಪರ್ವ'ದಲ್ಲಿ ಗೀತಾಚಾರ್ಯ ಸ್ಪಷ್ಟೀಕರಿಸುತ್ತಾನೆ :

---

1. ಮಯ್ಯಾವೇಶ್ಯ ಮನೋ ಯೇ ಮಾಂ ನಿತ್ಯಯುಕ್ತಾ ಉಪಾಸತೇ ।
ಶ್ರದ್ಧಯಾ ಪರಯೋಪೇತಾಸ್ತೇ ಮೇ ಯುಕ್ತತಮಾ ಮತಾಃ ॥
ಎನ್ನುವುದು ಒಂದು ಅರ್ಥಯುಕ್ತ ನಿರೂಪಣೆ ಕೂಡ.

ನಾಯಮಾತ್ಮಾ ಪ್ರವಚನೇನ ಲಭ್ಯಃ । ನ ಮೇಧಯಾ ನ ಬಹುನಾಶ್ರುತೇನ
ಯಮೇ ವೈಷವೃಣುತೇ ತೇನಲಭ್ಯಃ । ತಸ್ಯೈಷ ಆತ್ಮಾ ವಿವೃಣುತೇ ತನೂಂಸ್ವಾಮ್ ॥
ಭಕ್ತ್ಯಾತ್ವನನ್ಯಯಾ ಶಕ್ಯ ಅಹಂಮೇವಂ ವಿಧೋऽರ್ಜುನ ।
ಜ್ಞಾತುಂ ದ್ರಷ್ಟುಂ ಚ ತತ್ವೇನ ಪ್ರವೇಷ್ಟುಂ ಚ ಪರಂತಪ ॥
ಮನ್ಮನಾಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಯುಕ್ತ್ವೈವ ಮಾತ್ಮಾನಂ ಮತ್ಪರಾಯಣಃ ॥

ಅನನ್ಯವಾದ ಭಕ್ತಿಯಿಂದ ಮಾತ್ರವೇ ನಾನು ಲಭಿಸುವೆನೇ ಹೊರತು ಪ್ರವಚನ, ವಾದದಿಂದ ಲಭ್ಯನಲ್ಲ. ತತ್ವ-ಭಕ್ತಿತತ್ವದಿಂದ ನಾನು ಅರಿಯಲೂ ಕಾಣಲೂ ಶಕ್ಯನು. 'ಅನನ್ಯಭಕ್ತಿ'ಯೆಂದರೆ, ಯಾವ ಭಕ್ತಿಯಿಂದ ಎಲ್ಲ ಕಾರಣಗಳಿಂದ ವಾಸುದೇವನ ಹೊರತಾಗಿ ಬೇರೆ ಯಾರೂ ಲಭಿಸುವದಿಲ್ಲವೋ ಅಂತಹುದು, ಎಂದರ್ಥ. "ಭಕ್ತಿಮಾನ್ಯಃ ಸಮೇಪ್ರಿಯಃ" ಎಂದೇ ಕೃಷ್ಣ ಸಾರಿದ್ದಾನೆ. ಸೂತ್ರಕಾರರಾದ ನಾರದ ರಂತೂ, ಅವನನ್ನು ಮರೆತರೆ ಪರಮವ್ಯಾಕುಲ, ಅದೇ ಭಕ್ತಿಯ ಗುರುತು ಎನ್ನುತ್ತಾರೆ.

ಭಕ್ತಿಸಿದ್ಧಾಂತವು ಭಾಗವತ ಧರ್ಮವೆನಿಸಿದಂತೆ, ಇಲ್ಲಿ ಭಗವತ್—ಭಗವಂತ ಎಂಬುವಕ್ಕೆ ಷಡ್ಗುಣದ ಐಶ್ವರ್ಯದೊಡಗೂಡಿದ ಶ್ರೀಮಹಾವಿಷ್ಣುವೇ ಎಂದೂ ಅರ್ಥ. ಅವನೇ ಭಾಗವತಧರ್ಮದ ಆರಾಧ್ಯದೈವ. ಶ್ರೀಮನ್ನಾರಾಯಣನೇ ಈ ಧರ್ಮದ ದೈವ ಎನಿಸುವ ಪ್ರಯುಕ್ತ "ನಾರಾಯಣೀಯ ಧರ್ಮ" ; ಶ್ರೀಕೃಷ್ಣನು ಜನಿಸಿದ 'ಸತ್ವತ್' ಕುಲದಲ್ಲಿ ಈ ಧರ್ಮ ಪ್ರಚಲಿತವಾದದ್ದರಿಂದ "ಸಾತ್ವತಧರ್ಮ" ವೆಂದೂ, ಏಕಾಂತ ಭಕ್ತಿಯನ್ನು ಉಪದೇಶ ಮಾಡುವುದರಿಂದ "ಏಕಾಂತಿಕ ಮತ" ವೆಂದೂ, ಪಾಂಚರಾತ್ರ ಆಗಮಗಳಲ್ಲಿ ಪ್ರಧಾನವಾಗಿ ಚರ್ಚಿತವಾಗಿರುವುದರಿಂದ "ಪಾಂಚರಾತ್ರಾಗಮ"ವೆಂತಲೂ, 'ವೈಷ್ಣವ ಧರ್ಮ'ವೆಂದೂ, ವಿವಿಧ ರೀತಿಯಲ್ಲಿ ಕರೆದಿದ್ದಾರೆ. ಭಾಗವತ ಧರ್ಮದ ಆಧಾರಗ್ರಂಥಗಳೆಂದರೆ, ಮಹಾಭಾರತದ ಶಾಂತಿ ಪರ್ವ—ನಾರಾಯಣೀಯ, ವಿಷ್ಣುಪುರಾಣ, ಭಾಗವತ, ಪಾಂಚರಾತ್ರಾಗಮಗಳು, ಶಾಂಡಿಲ್ಯ-ನಾರದರ ಭಕ್ತಿಸೂತ್ರಗಳೇ ಮೊದಲಾದವು.

ಶಾಂಡಿಲ್ಯ-ನಾರದ ಋಷಿವರ್ಯರು ಸೂತ್ರಕಾರರಾಗಿ, ಭಕ್ತಿಯ ಬಗ್ಗೆ ನಡಸಿರುವ ಜಿಜ್ಞಾಸೆಯು ತುಂಬ ದೀರ್ಘವೂ, ಗಣನೀಯವೂ ಆದದ್ದು. "ಅಥಾತೋ ಭಕ್ತಿ ಜಿಜ್ಞಾಸಾ..." ಎಂದೇ ಶಾಂಡಿಲ್ಯ ಸೂತ್ರದಾರಂಭ ! "ಸಾಪರಾನುರಕ್ತಿರೀಶ್ವರೇ" ಎಂದು ಶಾಂಡಿಲ್ಯರು ನಿರೂಪಿಸಿದಂತೆಯೆ, ಭಕ್ತಿಯನ್ನು ವ್ಯಾಖ್ಯಾನಿಸುವ ನಾರದರು,1 "ಸಾತು

1. ವಿವರಗಳಿಗೆ 'ಶಾಂಡಿಲ್ಯ ಸೂತ್ರ'ಗಳು (ಸಂ : ಸ್ವಾಮಿ ಹರ್ಷಾನಂದ) ಹಾಗೂ 'ನಾರದಭಕ್ತಿ ಸೂತ್ರ'ಗಳು (ಸ್ವಾಮಿ ಸೋಮನಾಥಾನಂದ) ಗಮನಾರ್ಹ

—ರಾಮಕೃಷ್ಣಾಶ್ರಮದ ಪ್ರಕಟಣೆ

ಅಸ್ಮಿನ್ ಪರಮಪ್ರೇಮ ರೂಪಾ" ಎನ್ನುತ್ತಾರೆ. ಭಕ್ತಿಯು ಪರಮ ಪ್ರೇಮ ರೂಪವಾದದ್ದು. "ಪ್ರೇಮ"ವೆಂದಾಗ ಯಾವುದೋ ನಿರೀಕ್ಷಣೆ, ಅಪೇಕ್ಷೆಯಿದ್ದೀತು, ಆದರೆ, "ಪರಮ ಪ್ರೇಮ"ದಲ್ಲಿ ಯಾವುದೆ ನಿರೀಕ್ಷೆ, ಅಪೇಕ್ಷೆಗಳಿಲ್ಲ.

ಈ ತೆರನಾದ ಅನೇಕ ನಿರೂಪಣೆ, ಮಹನೀಯರ ಚಿಂತನ-ದಿವ್ಯಾನುಭವಗಳನ್ನು ಮನಗಂಡಾಗ ಭಕ್ತಿಯು ಭಗವಂತನಿಗೂ, ಭಕ್ತನಿಗೂ ಇರುವ ಒಂದು ಉತ್ಕೃಷ್ಟ ಸಂಬಂಧ ಸೇತು ಎನಿಸುತ್ತದೆ. ಇಂಗ್ಲಿಷಿನಲ್ಲಿ Love of God with exceeding affection ಎಂದಂತೆ. ಅದು ಅನಿರ್ವಚನೀಯ, ಅನುಭವವೇದ್ಯ ಮಾತ್ರ. ಭಕ್ತಿಯ ಮಜಲನ್ನು ಮುಟ್ಟಿದ ಡಿಂಗರಿಗನಿಗೆ ಇನ್ನೇನೂ ಬೇಕೆನ್ನಿಸುವುದಿಲ್ಲ. ನಾರದರು ಇದನ್ನೆ 'ಯಲ್ಲಬ್ಧ್ವಾ ಪುಮಾನ್ ಸಿದ್ಧೋ ಭವತಿ, ಅಮೃತೋ ಭವತಿ, ತೃಪ್ತೋ ಭವತಿ, ಯತ್ಪ್ರಾಪ್ಯ ನ ಕಿಂಚಿದ್ವಾಂಛತಿ, ನ ಶೋಚತಿ, ನ ದ್ವೇಷ್ಟಿ, ನ ರಮತೇ, ನ ಉತ್ಸಾಹೀ ಭವತಿ", ಯಜ್ಜ್ಞಾತ್ವಾ ಮತ್ತೋ ಭವತಿ, ಸ್ತಬ್ಧೋ ಭವತಿ, ಆತ್ಮಾರಾಮೋಭವತಿ" ಎಂದು ಉದ್ಗರಿಸುತ್ತಾರೆ ! ಇವನ್ನೇ ಏಕಾದಶ ಆಸಕ್ತಿಗಳೆಂದೂ ಕರೆಯುವುದು. ಇದೇ ರೀತಿ ಪರಾಶರರ ಸುತರಾದ ವ್ಯಾಸರು, "ಪೂಜಾದಿಕಾರ್ಯಗಳಲ್ಲಿ ಇರುವ ವಿಶೇಷ ಅನುರಾಗವೇ ಭಕ್ತಿ" ಎನ್ನುತ್ತಾರೆ. ಭಕ್ತಿ, ಒಟ್ಟಾರೆ ಒಂದು ಆಂತರಿಕ ಅನುಭವ, ಅದು ಜ್ಞಾನಕ್ಕೂ ಒಂದು ಕೈ ಮಿಗಿಲು. ಜ್ಞಾನ, ಭಕ್ತಿಯ ಮಜಲನ್ನು ತಲುಪಲು ಸಾಧಕ, ಪೋಷಕ, ಉತ್ತೇಜಕ ಕೂಡ. ವಾಲ್ಮೀಕಿರಾಮಾಯಣ, ಆಚಾರ್ಯರ ವಿವಿಧ ಸಿದ್ಧಾಂತದರ್ಶನಗಳೂ ಭಕ್ತಿಯ ಸ್ವರೂಪ[1] ಕುರಿತಂತೆ ತಂತಮ್ಮ ನಿಟ್ಟಿನಲ್ಲಿ ವ್ಯಾಖ್ಯಾನಿಸುತ್ತವೆ :

[2]ರಾಮಾಯಣ : ಅಥ ಕ ಮಾಸ್ಯ ವಿಷಯ: ಸ್ನೇಹ :......ಉತ್ಕೃಷ್ಟೇ ಪ್ರೀತಿ:...

ರಾಮಾನುಜ : ಸ್ನೇಹ ಪೂರ್ವಕಂ ಅನುಧ್ಯಾನಮ್

ವೇದಾಂತದೇಶಿಕರು : ಮಹನೀಯ ವಿಷಯೇ ಪ್ರೀತಿರೇವ
ಸ್ನೇಹ ಪೂರ್ವಕ ಅನುಧ್ಯಾನಮಿತಿ
ಪ್ರೀತಿರೂಪಾತ್ ಸಏವ ಭಕ್ತಿಯೋಗಃ

---

1. ಹನ್ನೊಂದು ಬಗೆಯ 'ಆಸಕ್ತಿ' (ನಾರದಭಕ್ತಿ ಸೂತ್ರ)ಗಳ ಮೂಲಕ ಭಗವಂತನನ್ನು ಆರಾಧಿಸಬಹುದು. ಗುಣಮಾಹಾತ್ಮ್ಯಾಸಕ್ತಿ, ರೂಪಾಸಕ್ತಿ, ಪೂಜಾಸಕ್ತಿ, ಸ್ಮರಣಾಸಕ್ತಿ, ದಾಸ್ಯಾಸಕ್ತಿ, ಸಖ್ಯಾಸಕ್ತಿ, ವಾತ್ಸಲ್ಯಾಸಕ್ತಿ, ಕಾಂತ್ಯಾಸಕ್ತಿ, ಆತ್ಮನಿವೇದನಾಸಕ್ತಿ, ತನ್ಮಯಾಸಕ್ತಿ, ಪರಮವಿರಹಾಸಕ್ತಿ.
2. ವಿವರಕ್ಕೆ—Aspects of Bhakri -K. C. Varadachari

ಮಧ್ವಾಚಾರ್ಯರು : ಮಾಹಾತ್ಮ್ಯ ಜ್ಞಾನ ಪೂರ್ವಸ್ತು ಸುದೃಢಃ ।
ಸರ್ವತೋಽಧಿಕಃ ।
ಸ್ನೇಹೋ ಭಕ್ತಿರಿತಿ ಪ್ರೋಕ್ತಸ್ತಯಾ ಮುಕ್ತಿರ್ನ ಚಾನ್ಯಥಾ ॥

ಹಾಗೆಯೆ ದ್ವೈತತತ್ವದಲ್ಲಿ ಭಕ್ತಿ ಎಂದರೆ, ದಾಸ್ಯ-ಸಖ್ಯ-ಆತ್ಮ ನಿವೇದನ. ಜಯತೀರ್ಥರು : (ಟೀಕಾಚಾರ್ಯರು) ನಿರವಧಿಕ ಅನಂತ ಅನವದ್ಯ ಕಲ್ಯಾಣಗುಣ್ವಕ ಜ್ಞಾನ ಪೂರ್ವಕಃ ಸ್ವಾತ್ಮೀಯ ಸಮಸ್ತವಸ್ತುಭ್ಯೋ ಅನೇಕ ಗುಣಾಧಿಕೋ ಅಂತರಾಯ ಸಹಸ್ರೇಣಾಪಿ ಅಪ್ರತಿಬದ್ಧೋ **ನಿರಂತರ ಪ್ರೇಮ ಪ್ರವಾಹಃ।**

ಎಲ್ಲಕ್ಕೂ ಮಿಗಿಲಾಗಿ ಪ್ರೀತಿಸುವ ನಿರಂತರ ಪ್ರೇಮ ಪ್ರವಾಹವೇ ಭಕ್ತಿ. ಭಗವಂತನಿಗೆ ದಾನ, ತಪಸ್ಸು, ಶುಚಿ, ವ್ರತ, ಯಜ್ಞ-ಎಲ್ಲಕ್ಕಿಂತಲೂ ನಿರ್ಮಳವಾದ (ಪ್ರೀಯತೇಽ ಮಲಯಾ ಭಕ್ತ್ಯಾ) ಭಕ್ತಿಯೊಂದೆ ಸಾಕು. ಮುಕ್ತಿಗೆ ಜ್ಞಾನ ಬೇಕು, ಹಾಗೆಯೆ ಜ್ಞಾನ-ಭಕ್ತಿಯಿಂದ ಲಭಿಸುವ ದ್ರವ್ಯ ವಿಶೇಷವೂ ಆದೀತು.

ಭಾಗವತದ ಪ್ರಕಾರ, ಭಕ್ತಿಯು ಒಂಭತ್ತು ವಿಧವೆಂದು ತಿಳಿಯುಬರುತ್ತದೆ :

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮ ನಿವೇದನಂ ॥

ಈ ನವವಿಧಭಕ್ತಿಗೆ ನಿದರ್ಶನರೂ ಇದಾರೆ :

ಶ್ರವಣಕ್ಕೆ ಪರೀಕ್ಷಿತ್ ರಾಜ, ಕೀರ್ತನೆಗೆ ನಾರದ ಮಹಾಮುನಿ, ಸ್ಮರಣೆಗೆ ಪ್ರಹ್ಲಾದ, ದೇವರ ಪಾದ ಭಜನೆಗೆ ಲಕ್ಷ್ಮೀದೇವಿ, ಅರ್ಚನ(ಪೂಜೆ)ಗೆ ಪೃಥುಮಹಾರಾಜ, ಅಭಿವಂದನೆಗೆ ಅಕ್ರೂರ, ದಾಸ್ಯಕ್ಕೆ ಹನುಮಂತ, ಸಖ್ಯಕ್ಕೆ ಅರ್ಜುನ, ಸರ್ವಾರ್ಪಣ ಭಕುತಿಗೆ ಬಲಿಚಕ್ರವರ್ತಿ, ಮೊದಲಾದವರು.

ಆಚಾರ್ಯ ರಾಮಾನುಜರ "ಶ್ರೀ ಭಾಷ್ಯ" ಆರಂಭವಾಗುವುದೇ ಭಕ್ತಿ ಸ್ವರೂಪ ಕುರಿತಂತೆ :

ಅಖಿಲಭುವನಜನ್ಮಸ್ಥೇಮಭಂಗಾದಿಲೀಲೇ
ವಿನತವಿವಿಧಭೂತವ್ರಾತರಕ್ಷೈಕದೀಕ್ಷೇ ॥
ಶ್ರುತಿಶಿರಸಿ ವಿದೀಪ್ತೇ ಬ್ರಹ್ಮಣಿ ಶ್ರೀನಿವಾಸೇ ।
ಭವತು ಮಮಪರ ಸ್ಮಿನ್ ಶೇಮುಷೀ ಭಕ್ತಿರೂಪಾ ॥

ಇಲ್ಲಿ ಶ್ರೀನಿವಾಸನನ್ನು "ಭಕ್ತಿರೂಪ"ಯೆಂದೇ ಸಂದರ್ಶಿಸಿದ್ದಾರೆ ಆಚಾರ್ಯರು.

ನಾಲಾಯಿರ ದಿವ್ಯಪ್ರಬಂಧ ಅಥವಾ ಆಳ್ವಾರರ ಭಕ್ತಿಗೀತೆಗಳು :

ತಮಿಳುನಾಡಿನಲ್ಲಿ ಕ್ರಿ. ಶ. 4–5 ರಿಂದ 7–8ನೆಯ ಶತಕದ ಅವಧಿಯಲ್ಲಿದ್ದ ರೆನ್ನಲಾಗುವ ಆಳ್ವಾರ್ – ನಾಯನಾರ್ ಮಹನೀಯರ ದಿವ್ಯಪ್ರಬಂಧ, ಭಕ್ತಿಗೀತ (ತೇವಾರಂ ವಚನಗಳು), ಜ್ಞಾನ–ಭಕ್ತಿ–ವೈರಾಗ್ಯ ಸಾರುವಂಥ ಕೃತಿ ಸಮುಚ್ಚಯ, ಎನ್ನಬಹುದು. ಒಬ್ಬರು ಪರಿಭಕ್ತ–ವಿಷ್ಣು ಸರ್ವೋತ್ತಮತೆಯ ಪ್ರತಿಪಾದಕರು, ಎರಡನೆಯವರು ಪರಮ ಶಿವಭಕ್ತರು, ನಿಷ್ಠ ಪ್ರತಿಪಾದಕರು.

ದೇವಸ್ಥಾನ—ಅರ್ಚಾವಿಗ್ರಹದ ಪ್ರಾಮುಖ್ಯತೆ, ಅದರಲ್ಲಿಯ ಪರವಶತೆ–ಇವುಗಳನ್ನು ಹೆಚ್ಚು ಮಾನ್ಯಮಾಡಿ, ಜನಪ್ರಿಯವಾಗಿಸಿದವರು ಆಳ್ವಾರರು. ಭಕ್ತಿಮಾರ್ಗಕ್ಕೆ ಯಾವುದೇ ಮತ—ಜಾತಿ ಭೇದವಿಲ್ಲವೆಂದು ನಿರ್ಭೀತಿಯಿಂದ ಸಾರಿದವರು ವೈಷ್ಣವ ಸಂತರಾದ ಆಳ್ವಾರರು.[1] ಆಳ್ವಾರ್ ಎಂದರೆ, ಆಳುವವರು–ವಿಷ್ಣುಭಕ್ತಿ ಸಾಮ್ರಾಜ್ಯವನ್ನು ಆಳುವವರು ಎಂದಂತೆಯೆ, "ಮುಳುಗಿದವರು" (ಭಕ್ತಿಯಲ್ಲಿ) ಎಂಬುದಾಗಿಯೂ ಪಂಡಿತರು ಅರ್ಥೈಸುತ್ತಾರೆ. ಭಗವಂತನನ್ನು ಕುರಿತು, ಕಂಡುಕೊಂಡ ದಿವ್ಯಾನುಭವದಲ್ಲಿ ಆಳವಾಗಿ ಮುಳುಗಿ ಅದರಿಂದ ಪಡೆದ ದಿವ್ಯಾನಂದವನ್ನು ಮಧುರ ಗೀತಗಳಾಗಿ ಹಾಡಿದವರು.

ಆಳ್ವಾರರ ದಿವ್ಯಪ್ರಬಂಧಗಳನ್ನು "ನಾಲಾಯಿರ ದಿವ್ಯ ಪ್ರಬಂಧ", ತಿರವಾಯ್ಮೊಟಿ(ಳಿ) (ಸಿರಿಬಾಯನುಡಿ), ದ್ರಾವಿಡವೇದ, ದ್ರವಿಡೋಪನಿಷತ್ತು ಎಂದೆಲ್ಲ ಕರೆಯುವುದಿದೆ. ಆಳ್ವಾರರಿಂದ ತಮಿಳಿನಲ್ಲಿ ಭಕ್ತಿಸಾಹಿತ್ಯಕ್ಕೆ ಒಂದು ಚೈತನ್ಯ ಬಂದಿತೆಂದರೆ ಉತ್ಪ್ರೇಕ್ಷೆಯಲ್ಲ. ಆಳ್ವಾರರು ಭಾಗವತ ಧರ್ಮಾನುವರ್ತಿಗಳು,[2] ಸಗುಣೋಪಾಸಕರು, ಹರಿಸರ್ವೋತ್ತಮತ್ವ ಪ್ರತಿಪಾದಕರು. ಇವರ ಮತಕ್ಕೆ ಪಾಂಚರಾತ್ರ ಮತ, ಏಕಾಂತಿಕ ಮತವೆಂತಲೂ ಹೆಸರುಂಟು. ಭಾಗವತ ಧರ್ಮದಲ್ಲಿ ಏಕದೇವೋಪಾಸನೆ, ಭಕ್ತಿ, ಪ್ರಪತ್ತಿ(ಶರಣಾಗತಿ)ಗಳಿಗೆ ಪ್ರಾಧಾನ್ಯ. ಭಗವಂತ ಪ್ರೇಮಸ್ವರೂಪಿ, ಸರ್ವರಿಗೂ ಒಲಿದು ಬರುವನೆಂದೇ—ನಾರಾಯಣ ತತ್ವ ರೂಪದಲ್ಲಿ—ಆಳ್ವಾರರು ಸಾರಿ ಹೇಳಿದ್ದು.

ಆಳ್ವಾರರ "ಭಕ್ತಿಪಂಥ" ಕುರಿತಂತೆ "ಭಾಗವತ" ಗ್ರಂಥದಲ್ಲಿ ಹೀಗಿದೆ :

> ಕಲೌಖಲು ಭವಿಷ್ಯಂತಿ ನಾರಾಯಣ ನಾರಾಯಣಾಃ ।
> ಕ್ವಚಿತ್ ಕ್ವಚಿನ್ಮಹಾಭಾಗ ದ್ರಮಿಡೇಶು ಚ ಭೂರಿಶಃ॥

---

1. ಮಧ್ವಸಂಪ್ರದಾಯಸ್ಥರು ಆಳ್ವಾರರನ್ನು 'ವೀರವೈಷ್ಣವ' ರೆಂದೂ ಕರೆಯುವುದಿದೆ. (ಉಡುಪಿಯ ಅದಮಾರು ಪರ್ಯಾಯ ಪೀಠಾಧೀಶರ ಸಂದರ್ಶನದಲ್ಲಿ ಲೇಖಕನಿಗೆ ತಿಳಿಸಿದ್ದು).
2. ಆಳ್ವಾರರನ್ನು ಕುರಿತು ಪ್ರೊ॥ ಎಂ. ಯಾಮುನಾಚಾರ್ಯರ, ಡಾ॥ ಎಸ್. ಎಸ್. ಅನಂತರಂಗಾಚಾರ್ಯರ ಗ್ರಂಥಗಳು ಗಮನೀಯ.

ತಾಮ್ರಪರ್ಣೀ ನದೀ ಯತ್ರ ಕೃತಮಾಲಾ ಯಶಸ್ವಿನೀ ।
ಕಾವೇರೀಚ ಮಹಾಭಾಗಾ ಪ್ರತೀಚೀಚ ಮಹಾನದೀ ॥

ಇಲ್ಲಿ ಉಕ್ತಗೊಂಡಿರುವ ಎಲ್ಲ ನದಿಗಳ ತೀರದಲ್ಲಿ ಅವತರಿಸಿದ ಆಳ್ವಾರರಿಂದ, ಅನಂತರ ಕ್ರಿ. ಶ. 11ನೆಯ ಶತಮಾನದಲ್ಲಿ ಬಂದ ರಾಮಾನುಜರು ಪೂರ್ಣ ಸ್ಫೂರ್ತಿ ಪಡೆದದ್ದು ಸುಸ್ಪಷ್ಟ. ಭಾಗವತ ಮತದ ವಿಶಾಲ ನೆಳಲಲ್ಲಿ ನೀಚೋಚ್ಚ ಭಾವಕ್ಕೆ ಎಡೆಯೆ ಇರಲಿಲ್ಲ. "ಓಂ ನಮೋ ನಾರಾಯಣಾಯ", "ಓಂ ನಮೋ ಭಗವತೇ ವಾಸುದೇವಾಯ" ಎಂಬುವ ಅಷ್ಟಾಕ್ಷರೀ-ದ್ವಾದಶಾಕ್ಷರೀ ಮಂತ್ರವೆ ಆಳ್ವಾರರ ಚಿಂತನ. "ಕುಲಂ ತರುಂ ಶೆಲ್ವಂ ತಂದಿಡುಮ್" ಎನ್ನುತ್ತಾರೆ ಒಬ್ಬ ಆಳ್ವಾರರು. ಅಂದರೆ, ಭಗವದ್ಭಕ್ತಿಯು ಕುಲವಿರದವನಿಗೆ ಕುಲವನ್ನು, ಐಶ್ವರ್ಯವಿಲ್ಲದಾತನಿಗೆ ಐಸಿರಿಯನ್ನು ತಂದುಕೊಡುವುದೆಂದು ಆಳ್ವಾರರು ಪರಿಭಾವಿಸುತ್ತಾರೆ. ರಾಮಾನುಜರು, ತಿರುಪಾಣಿಯಾಳ್ವಾರರ ಬದುಕಿಗೆ ಸಂಬಂಧಿಸಿದ ಘಟನಾವಳಿ, ಭಕ್ತಿಗೇ ಜಯವೆಂದು ಮನವರಿಕೆ ಮಾಡುವುವು.

ಆಳ್ವಾರರು ಹನ್ನೆರಡು ಮಂದಿ. ಗುರುಪರಂಪರೆಯ ಕ್ರಮವನ್ನಾಧರಿಸಿ, ಆಳ್ವಾರರನ್ನು ಹೆಸರಿಸಬಹುದು : ಪೊಯ್‌ಗೈಆಳ್ವಾರ್, ಪೂದತ್ತಾಳ್ವಾರ್, ಪೇಯಾಳ್ವಾರ್, ತಿರುಮಳಿಶೈ, ಕುಲಶೇಖರರು, ಪೆರಿಯಾಳ್ವಾರ್, ಆಂಡಾಳ್ (ಹೆಣ್ಣು), ತೊಂಡರಡಿ ಪ್ಪೊಡಿಯಾಳ್ವಾರ್, ತಿರುಪ್ಪಾಣಿ ಆಳ್ವಾರ್, ತಿರುಮಂಗೈ, ನಮ್ಮಾಳ್ವಾರ್ ಮತ್ತು ಮಧುರ ಕವಿ ಆಳ್ವಾರ್.1 ಆಳ್ವಾರರ ಭಕ್ತಿ ಅಸದಳ, ಅನ್ಯಾದೃಶವಾದದ್ದು. 'ಓಂ'ಕಾರದ ಅಕಾರ-ಉಕಾರ-ಮಕಾರ ಎಂಬುದಕ್ಕೆ ಅನಾದಿ-ಉನಕ್ಕಾಮ (ನಿನಗಾಗಿ) ಮಹಾನ್ ಎಂದೇ ಪರಮಾತ್ಮನನ್ನು ಸ್ತುತಿಸಿದರು ಆಳ್ವಾರರು. 'ಶರಣಾಗತಿ', 'ದಾಸ ದಾಸೋಹಂ' ಮೊದಲಾದ ಭಕ್ತಿಭಾವಗಳ ಪ್ರವರ್ತಕರಾದ ಆಳ್ವಾರರ ರಚನೆ-ಭಕ್ತಿಗೀತೆ-ಜ್ಞಾನ-ಭಕ್ತಿ-ವೈರಾಗ್ಯ ಮಾತ್ರವಲ್ಲ, ಉತ್ತಮ ಕಾವ್ಯವೆಂದೂ ಪರಿಗಣಿಸಲ್ಪಟ್ಟಿವೆ.

ಆಳ್ವಾರರ ದಿವ್ಯ ಪ್ರಬಂಧಗಳನ್ನು ನಿತ್ಯದೇವತಾರ್ಚನ ಸಮಯದಲ್ಲಿ ಹಾಡತಕ್ಕ ಪರಿಪಾಠ, ಶ್ರೀವೈಷ್ಣವ ಸಂಪ್ರದಾಯದಲ್ಲಿ ಇದೆ. ಇದೇಯೆ ಕ್ರಿ.ಶ. 14ರಲ್ಲಿ ಶ್ರೀರಂಗದಲ್ಲಿದ್ದ ಶ್ರೀಪಾದರಾಜರಿಗೂ ಉತ್ತಮ ಪ್ರಭಾವ ಬೀರಿ ಅವರು ಕರ್ನಾಟಕದ ಮೂಡಬಾಗಿಲಿಗೆ (ಇಂದಿನ ಮುಳಬಾಗಿಲು) ಒಂದು ನೆಲೆ ನಿಂತನಂತರ, ದೇವರ ಪೂಜೆಯ ಪರಿಮಳದ್ರವ್ಯವಾಗಿ ಕನ್ನಡದಲ್ಲಿ ಕೀರ್ತನೆಗಳನ್ನು ಶ್ರೀಹರಿ ಪ್ರೀತ್ಯರ್ಥವಾಗಿ

1. ಭೂತಂ ಸರಶ್ಚ ಮಹದಾಹ್ವಯಭಟ್ಟನಾಥ । ಶ್ರೀಭಕ್ತಿಸಾರ ಕುಲಶೇಖರ ಯೋಗಿವಾಹಾನ್ ॥ ಭಕ್ತಾಂಘ್ರಿರೇಣು ಪರಕಾಲಯತೀಂದ್ರಮಿಶ್ರಾನ್ । ಶ್ರೀಮತ್ಪರಾಂಕುಶಮುನಿಂ ಪ್ರಣತೋಽಸ್ಮಿನಿತ್ಯಂ ॥ ಎಂಬ ಈ ಶ್ಲೋಕ, 12 ಆಳ್ವಾರರನ್ನು ಕುರಿತದ್ದು.

ಹಾಡಿದರು. ಅದೇ ಹರಿದಾಸ ಸಾಹಿತ್ಯ ಸಂಪದದ ಬೆಳವಣಿಗೆಗೂ ಶುಭನಾಂದಿಯ ಶ್ರೀಕಾರ ಹಾಡಿತೆನ್ನಬಹುದು.

ಓ, ಪರಮ ಸುಂದರನೋ
ಮುಗಿಲವಣ್ಣಾ ಕಮಲನಯನ
ಎನ್ನಾತ್ಮವ ಸೆಳೆವುತಿರುವ
ಪರಮಾನುಗ್ರಹವೆ.

ಎಂದು ಹಂಬಲಿಸುವ ಆಳ್ವಾರರದು ಪ್ರೇಮಭಕ್ತಿ, ಅನನ್ಯ ಪ್ರೇಮವೆ ಅಲ್ಲಿ ಹಾಸು ಹೊಕ್ಕಾಗಿರುವಂಥದು. ಆಳ್ವಾರರ ನಂಬುಗೆಯಂತೆ ಭಗವಂತನ ರೂಪ ಇಂತಿದೆ :

1) ಪರವಾಸುದೇವ (ವೈಕುಂಠ), 2) ವ್ಯೂಹರೂಪಿ (ಹಾಲ್ಕಡಲು), 3) ರಾಮಕೃಷ್ಣರ ವೈಭವ, 4) ಯೋಗಿಗಳ ಹೃದಯಾಂತರ್ಯಾಮಿ, 5) ದೇವಾಲಯ ಗಳಲ್ಲಿ (ಅರ್ಚಾವಿಗ್ರಹ ಸ್ವರೂಪಿ)

ಪರವಾಸುದೇವನನ್ನು "ನಿತ್ಯವಿಭೂತಿ"ಯೆಂದೂ, ಅರ್ಚಾವಿಗ್ರಹರೂಪವನ್ನು 'ಲೀಲಾ ವಿಭೂತಿ ಸ್ವರೂಪ'ನೆಂದೂ ಬಣ್ಣಿಸಿದ್ದಾರೆ. ಭಗವದನುಭವಕ್ಕಾಗಿ ಹಾತೊರೆದ ಅವರ ಬದುಕಲ್ಲಿಯೆ ಎಷ್ಟೋ ಘಟನೆ ಜರುಗಿವೆ. ತಮಿಳಿನಲ್ಲಿ ಜನಪ್ರಿಯವಾದ 'ಅಂದಾದಿ, ವೆಣ್ಬಾ, ದಂತ' ಮುಂತಾದ ಛಂದೋ ಪ್ರಕಾರಗಳ "ದಿವ್ಯ ಪ್ರಬಂಧ" ಎಲ್ಲವನ್ನೂ ಅಭಿವ್ಯಕ್ತಗೊಳಿಸುತ್ತವೆ. ಒಂದಂಶವಂತೂ ದಿಟ : ಜನ್ಯಸಾಮಾನ್ಯರ ಬಳಕೆಯ ಭಾಷೆಯಾದ ತಮಿಳಿನಲ್ಲಿ ಭಕ್ತಿಸಾಹಿತ್ಯಸುಮವರಳಿಸಿದ ಆಳ್ವಾರರು ಜನತಾ ಕವಿಗಳು, ಸರ್ವೋದಯ ಹರಿಕಾರರು, ಜನಮನಗೆದ್ದ ಅಪರೋಕ್ಷಜ್ಞಾನಿಗಳು. 'ತೊಂಡರಡಿಪ್ಪೊಡಿ' ಎಂದರೆ ಭಕ್ತರ ಪಾದಧೂಳಿ – ಭಕ್ತಾಂಘ್ರಿರೇಣು ಎಂದೇ ಅರ್ಥ ; ಅದೇ ಹೆಸರು ಆಳ್ವಾರರದು. ಹಿರಿಯ ಸಾಹಿತಿ ಮಾಸ್ತಿಯವರು ಅಭಿಪ್ರಾಯ ಪಡುವಂತೆ "ಕೇವಲ ಸಾಹಿತ್ಯವೆಂದೇ ಬಗೆದರೂ ಈ ಕೃತಿ ಅತ್ಯುತ್ತಮವಾದ ಕವಿತೆ ಎಂದು ಒಪ್ಪಬೇಕು. ಇದರ ನೋಟವು ಕವಿಯದು, ಇದರ ಮಾತು ಕವಿಯದು, ಇದರ ಕಲೆ ಸಂಪೂರ್ಣವಾಗಿ ಕಾವ್ಯದ್ದು."[1]

ಆಳ್ವಾರರಲ್ಲಿ ಹಿರಿಯರು ಪೆರಿಯಾಳ್ವಾರ್—[2] ಅವರಿಗೊಲಿದು ಶ್ರೀಶ ಪ್ರತ್ಯಕ್ಷನಾದಾಗ ಆ ಮಹಾನುಭಾವನಿಗೆ ಕಂಡ ಕಂಡವರ ದೃಷ್ಟಿ ತಾಗೀತು ಎಂದು ಮನುಜ ಸಹಜವಾದ ಭೀತಿಯಿಂದ ಪೆರಿಯಾಳ್ವಾರರು 'ಮಂಗಲಾ ಶಾಸನ'[3]ವನ್ನು ಹಾಡಿದರಂತೆ.

1. 'ವೈಷ್ಣವ ಸಂತರ ಕೀರ್ತನೆಗಳು'–ವಿಮರ್ಶೆ.
2. ಪಟ್ಟರ್‌ಪಿರಾನ್–ಹಿರಿಯಭಟ್ಟರು–ಇವರ ಮಗಳೇ ಆಂಡಾಳ್, ಭಕ್ತಿಯಲ್ಲೆ ಅದ್ದಿದವಳು.
3. ತಿರುಪಲ್ಲಾಂಡು–ಶ್ರೇಷ್ಠವಾದ ಪರಾಕು–ಹಾಡಿ ಪ್ರಶಂಸಿಸುವುದು.

ಇದೇ ಆಳ್ವಾರರು "ತಿರಮೊಳಿ" ಪ್ರಬಂಧದಲ್ಲಿ (ಶ್ರೇಷ್ಠವಾದ ನುಡಿ-ಮೊಳಿ-ಎಂದರೆ ಮಾತು) ತಾನು ಯಶೋದೆಯಾಗಿ ಪರಿಭಾವಿಸಿ, ಶ್ರೀಕೃಷ್ಣನ ವಿವಿಧ ಬಾಲ ಲೀಲೆಗಳನ್ನು ಬಣ್ಣಿಸುವ ಪಾಶುರಗಳನ್ನು ಸಹೃದಯರಿಗೆ ಉಣಬಡಿಸಿದ್ದಾರೆ. ಪ್ರತಿಯೊಂದು ಗೀತವೂ ಸವಿದು, ಆಲೋಡನೆ ನಡೆಸುವಂಥವು. ಆಳ್ವಾರರಲ್ಲಿ ರಾಜರಾಗಿದ್ದದರು ಶ್ರೀಕುಲಶೇಖರರು – ಇವರ 'ಪೆರುಮಾಳ್ ತಿರುಮೋಳಿ' (ದೇವರ ಶ್ರೇಷ್ಠನುಡಿ) ಮುಕುಂದ ಮಾಲೆ, ಭಕ್ತಿ ಸಾಹಿತ್ಯಕ್ಕೇ ಒಂದು ಹೆಗ್ಗುರುತು.

ನಾಸ್ಥಾ ಧರ್ಮೇ ನವ ಸುನಿಚಯೇ ನೈವ ಕಾಮೋಪಭೋಗೇ ।
ಯದ್ಯದ್ಭವ್ಯಂ ಭವತು ಭಗವನ್ ಪೂರ್ವಕರ್ಮಾನುರೂಪಂ ॥
ಏತತ್ಪ್ರಾರ್ಥ್ಯಂ ಮಮ ಬಹುಮತಂ ಜನ್ಮ ಜನ್ಮಾಂತರೇಽಪಿ ।
ತ್ವತ್ಪಾದಾಂಭೋರುಹಯುಗಗತಾ **ನಿಶ್ಚಲಾ ಭಕ್ತಿರಸ್ತು** ॥

ಇಲ್ಲಿ ಭಕ್ತಿಯೊಂದನ್ನು ಬಯಸಿಯೆ ಕುಲಶೇಖರರು ಹಾಡಿದ್ದು.

ತಿರುಪಾಣಿ, ಆಗಿನ ಕಾಲದಲ್ಲಿ ಮಾನವ ನಿರ್ಮಿತ ಜಾತಿಯಲ್ಲಿ ಕೆಳಸ್ತರದವ. ಆದರೆ, ಭಕ್ತಿಯಲ್ಲಿ ಅವನೇ ದೊರೆ. ತಿರುಪಾಣಿ ಹಾಡಿದ ಅಮಲನಾದಿಪಿರಾನ್ (ನಿಷ್ಕಳಂಕ, ಅನಾದಿ, ಹಿರಿಯ) ಒಂದು ಭಕ್ತಿಗೀತ ಗುಚ್ಛ. ಇದೊಂದು ಕಾವ್ಯವೂ ಹೌದು. ತಿರುಮಂಗೈ ಆಳ್ವಾರರ "ಪೆರಿಯ ತಿರುಮೋಳಿ" ಯಲ್ಲಂತೂ, ಭಕ್ತಿ-ಹಾಗೂ ಅದರ ವಿವಿಧ ಅವಸ್ಥೆಗಳೂ (ಸಖ್ಯ, ವಾತ್ಸಲ್ಯ, ಮಧುರ) ಒಡಮೂಡಿಬರುತ್ತವೆ.

"ನೀಲಮುಗಿಲ ಬಣ್ಣದವನೆನ್ನ ಮನವ ತುಂಬಿಹನು
ಓಹ್ ! ತೀವಿ ಬರುವ ಮುದ ಸಿಹಿ ಸುಧೆ !" (ಅಮಲನಾದಿಪಿರಾನ್)
ತಪವು ನಿನ್ನ ಕುರಿತೇಕೆ, ನೀನೆ ಎಲ್ಲವೆಲ್ಲವಾಗಿರೆ" (ತಿರುಮಂಗೈ)

ಎಂದೇ ಗದ್ಗದಿತರಾಗಿ ಶ್ರೀಹರಿಯ ಸಾಯುಜ್ಯಕ್ಕಾಗಿ ಮೊರೆಯಿಡುತ್ತಾರೆ.

ಆಳ್ವಾರರ ದಿವ್ಯ ಪ್ರಬಂಧ ಸಾಹಿತ್ಯ 4000 ಸಾಲು ಎಂದರೆ, 'ಪಾಶುರಗಳು-ಕೆಲವು ಸಾಲಿನ ಸಮೂಹ-ಸೇರಿ ಒಟ್ಟಾರೆ "ನಾಲಾಯಿರ ದಿವ್ಯಪ್ರಬಂಧ"ವೆನಿಸುತ್ತವೆ. ಅದನ್ನು ಹೀಗೆ ಬಿನ್ನಯಿಸುವುದು ಸೂಕ್ತ :

ಪೆರಿಯಾಳ್ವಾರ್—ತಿರಪಲ್ಲಾಂಡು	12	473
ತಿರುಮೊಳಿ	461	
ಆಂಡಾಳ್—ತಿರುಪ್ಪಾವೈ	30	173
ನಾಚ್ಚಿಯಾರ್ ತಿರುಮೊಳಿ	143	

ಕುಲಶೇಖರ—ಪೆರುಮಾಳ್ ತಿರುಮೊಳಿ		105
ತಿರುಮಳಿಶೈ—ತಿರುಚ್ಚಂದವಿರುತ್ತಮ್	120	216
ನಾನ್ಮುಖನ್ ತಿರುವಂದಾದಿ	96	
ತೊಂಡರಿಪ್ಪೊಡಿ—ತಿರುಮಾಲೈ	45	55
ತಿರುಪ್ಪಳ್ಳಿ ಎಳುಚ್ಚಿ	10	
ತಿರುಪ್ಪಾಣ—ಅಮಲನಾದಿ ಪಿರಾನ್		10
ಮಧುರಕವಿ—ಬಾಷ್ಪಾಂಜಲಿ ; ಕಣ್ಣಿನುಣ್ ಶಿರುತ್ತಾಂಬು		11
ತಿರುಮಂಗೈ—ಪೆರಿಯ ತಿರುಮೊಳಿ, ತಿರುಕ್ಕುರುನ್ದಾಣ್ಡಹಂ ತಿರುವೆಳುಕೂತ್ತಿರುಕ್ಕೈ—ಪೆರಿಯತಿರುಮಡಲ್ ಶಿರಿಯ ತಿರುಮಡಲ್		1361
ಪೊಯ್‌ಗೈ—ಮುದಲ್ ತಿರುವಂದಾದಿ		100
ಪೂದತ್ತಾಳ್ವಾರ್—ಇರಂಡಾಂ ತಿರುವಂದಾದಿ ಮೂನ್ರಾಂ ತಿರುವಂದಾದಿ		300
ನಮ್ಮಾಳ್ವಾರ್—ತಿರುವಾಯ್ಮೊಳಿ ತಿರುವಿರುತ್ತಂ ತಿರುವಾಶಿರಿಯಂ, ಪೆರಿಯತಿರುವಂದಾದಿ		1296
	ಒಟ್ಟಾರೆ	4000

ಇಲ್ಲಿ ತೆಂಕಲೈ, ವಡಗಲೈ ಎಂಬೆರಡು ಸಂಪ್ರದಾಯಸ್ಥರ ಲೆಕ್ಕಚಾರವು ಸ್ವಲ್ಪ ಭಿನ್ನವಾದರೂ, "ನಾಲಾಯಿರವೂ ದಾಸಭೂತರಾದ ನಮ್ಮೆಲ್ಲರ ಬಾಳುವೆ"ಯೆಂದೆ ನಿಗಮಾಂತ ದೇಶಿಕರು ಭಕ್ತಿಯಿಂದ ಸಾರುತ್ತಾರೆ.

ಆಳ್ವಾರರ ದಿವ್ಯ ಪ್ರಬಂಧಗಳ ಅಧ್ಯಯನದ ಮೂಲಕ ಎರಡು ಮುಖ್ಯ ವಿಚಾರ ಗೋಚರಿಸುತ್ತದೆ :

1) ಅದೊಂದು ಸರ್ವೋದಯ ಆಂದೋಲನ, ಭಕ್ತಿಯ ಪ್ರತಿಪಾದನ—ತನ್ಮೂಲಕ ಜ್ಞಾನಾರ್ಜನ. ಸಮಷ್ಟಿಯ ಹಿತ—ಸಮಾಜಸ್ವಾಸ್ಥ್ಯ, ಆದಕ್ಕೆ ಅಗತ್ಯವೆನಿಸುವ ನೀತಿಯ ಚೌಕಟ್ಟಿನಲ್ಲಿ—ಇದೂ ಅರಿಯಬಹುದಾದ ಅಂಶವೇ.

2) ಶ್ರೀಸಾಮಾನ್ಯ—ತಿರುಪಾಣ, ತಿರುಮಂಗೈ ಕೂಡ—ತನ್ನ ನಾಡಿನ ನುಡಿ ಸಂಪದದ ಮೂಲಕ ಭಕ್ತಿಗೆ ಅಭಿವ್ಯಕ್ತಿ ನೀಡಿದ್ದು.

ಸಂಸ್ಕೃತ—ದೇವಭಾಷೆಯಲ್ಲಿರುವ ವೇದೋಪನಿಷತ್ತುಗಳ ಸಾರವೆಲ್ಲ ಸಹಜ ದೇಸಿಯಲ್ಲಿ ಮೂಡಿಬಂದ ಭಕ್ತಿಗೀತ ಸಮುಚ್ಚಯ, ನಾಲಾಯಿರ ದಿವ್ಯ ಪ್ರಬಂಧ

ವೆಂಬುದು, ನೆನಪಿನಲ್ಲಿಡುವಂಥದು. ಮತ್ತೆ ಅಲ್ಲಿ ಶರಣಾಗತಿ, ಪ್ರಪತ್ತಿಯೇ ಮುಕ್ತಿಗೆ ಹೇತು, ಎಂಬುದರ ಪ್ರತಿಪಾದನೆ. ಇದು ಪಂಡಿತಪಾಮರರಿಗೂ ಗ್ರಾಹ್ಯ, ಅನುಸರಣೀಯವೆನಿಸುತ್ತವೆ. ಒಂದೆರಡು ಸಾಲುಗಳ ಸವಿ ಸವಿದು, ವಿಸ್ತರವೆನಿಸುವ ಆಳ್ವಾರರ ಭಕ್ತಿಸಾಹಿತ್ಯ ಸಮೀಕ್ಷೆಯನ್ನು ನಾವು ಮನಗಾಣಿಸಬಹುದೆನ್ನಿಸುತ್ತದೆ :

ಪೊಯ್‌ಹೈ ಆಳ್ವಾರರ ಒಂದು ಪಾಶುರ ಹೀಗಿದೆ :

ವೈಯ್ಯುಂ ತಗಳಿಯಾವಾರ್ ಕಡಲೇನೆಯ್ಯಾಯ್
ವೆಯ್ಯ ಕದಿರೋನ್ ಮಿಳಿಕ್ಕಾಗ ವೆಯ್ಯ
ಶುಡರಾ (ರೆ) ಯಾನಡಿಕ್ಕೇ ಶೂಟ್ಟಿನೇನ್ ಶೊನ್‌ಯಾವೈ
ಇಡರಾ (ರೆ) ನೀಙ್ಗವೇಯೇನ್ರು

ಇದರ ಕನ್ನಡೀಕರಣ, ಪೂಸ್ತಿಯವರು ಹೀಗೆ ಕಂಡರಿಸುತ್ತಾರೆ :

ನೆಲವೇ ಹಣತೆಯಾಗಿ ಹರಹಿದ ಕಡಲು ನೆಯ್ಯಾಗಿ
ಬಿಸುಗದಿರ ಸೂರ್ಯನೇ ಸೊಡರ ಕುಡಿಯಾಗಿರಲು
ಎಡರ ಕಡಲಾದ ಸಂಸಾರ ಅಳಿಯಲಿ ಎಂದು
ಸೊಡರಂತೆ ಚಕ್ರವನು ಹಿಡಿದವನ ಕೆನ್ನಡಿಗೆ
ನುಡಿಮಾಲೆಯಿದನು ತೊಡಿಸಿದೆನು
ನೆಯ್ = ತುಪ್ಪ

'ವಾಕ್ಯಂ ರಸಾತ್ಮಕಂ ಕಾವ್ಯಂ' ಎಂಬುದರ ಜತೆಗೆ 'ಕಾವ್ಯಾಸ್ಯಾತ್ಮಾ ಧ್ವನಿಃ' ಎಂಬುದನ್ನು ಜತೆಗೂಡಿಸಿಕೊಂಡರೆ, ಈ ಪಾಶುರದಲ್ಲಿ ರಸ-ಧ್ವನಿಗಳ ಹಿತವಾದ ಸಮ್ಮಿಲನ ಮೈದಾಂತಿದೆಯೆಂಬುದು ತಿಳಿದುಬರುವುದಿಲ್ಲವೆ ?

ಹೇಮಂತ ಋತುವಿನ ಮಾಗಿ ಕುಳಿರ ಮುಂಜಾವಿನ ವೇಳೆಗಳಲ್ಲಿ ಶ್ರೀಮನ್ನಾರಾಯಣನನ್ನೆ ಪತಿಯಾಗಿ ಪಡೆಯಲಿಚ್ಛಿಸಿ ವ್ರತ (ನೋಂಪಿ-) ಆಚರಿಸುವ ಆಂಡಾಳ್ ಹಾಡಿದ 'ತಿರುಪ್ಪಾವೈ' ಮೂವತ್ತು ಗೀತಗಳ ಒಂದು ಗೊಂಚಲು. 'ತಿರು'- ಎಂದರೆ ಶ್ರೇಷ್ಠ, ಪಾವೈ ಎಂದರೆ 'ವ್ರತ'ವೆಂದಾಗುತ್ತದೆ. 'ಸಿರಿನೋಂಪಿ' ಎನ್ನಬಹುದು. ಮಧುರಭಾವದ ಭಕ್ತಿ, ನಾಯಕ-ನಾಯಿಕೆಯ ಭಾವ, ಅದೇ ಭಕ್ತಿ ಇಲ್ಲಿ ಪ್ರಾಧಾನ್ಯತೆ ಪಡೆದಿದೆ. "ಕುಲವು ಮುಖ್ಯವಲ್ಲ, ಭಗವದ್ಭಕ್ತಿ ಮುಖ್ಯ. ಚತುರ್ವೇದ ಅಭ್ಯಾಸ ಮಾಡಿದವರೂ ನಿನ್ನ ಕಿಂಕರತ್ವವೇ ಪರಮಪುರುಷಾರ್ಥ ಎಂದರಿಯ ದವರಿಗಿಂತ ಪಂಚಮಕುಲಜರಾದರೂ ನಿನ್ನ ಅಂತರಂಗದ ಭಕ್ತರಾದ ದಾಸರು

ಮೇಲಲ್ಲವೆ ?" ಎಂದು ಆಳ್ವಾರರು ಪ್ರಶ್ನಿಸುವಲ್ಲಿ ಅಂದಿನ ಸಮಾಜ-ಸಂಸ್ಕೃತಿಯ ಅಧ್ಯಯನ ಸಹ ನಡೆಸಬಹುದೆನ್ನಿಸುತ್ತದೆ. ಭಕ್ತಿಯ ಭಾಗ್ಯವು ಎಲ್ಲ ಕುಲದವರನ್ನು ಪಾಲಿಸುವುದೆಂದು ನುಡಿವ ತಿರುಮಂಗೈ ಆಳ್ವಾರರ ಒಂದು ಪಾಶುರ, ಅವರ ನಂತರ ಅದೆಷ್ಟೋ ಶತಮಾನ ಕಳೆದಾದ ಮೇಲೆ ಬಂದ ಸರ್ವೋದಯ ಹರಿಕಾರ ಬಸವಣ್ಣನ ವಚನದ ಸಾಲುಗಳಲ್ಲಿಯೂ ಎಷ್ಟು ಸೊಗಸಾಗಿ ಅನ್ವಯಿಸಿ ಬಂದಿದೆ ಎಂಬುದು ಗಮನಾರ್ಹ :

ಕೋಲೂರಿ ಮುಂದೆ ನಡೆಯುವಂಥ ಮುಪ್ಪು ನಮ್ಮ ಮೇಲೆ
ಸುಳಿಯುವ ಮುನ್ನ,
ಕಾಲೂರಿ ನಿಂತಾಗ ತೂರಾಡುವ ಗತಿ ನಮಗೆ ಬರುವ ಮುನ್ನ
ಪೆತ್ತ ತಾಯಂತೆ ನಟಿಸಿ ಬಂದ ರಕ್ಕಸಿಯ[1]
ಉಸಿರನ್ನು ಹೀರಿದ ನಮ್ಮ ಸ್ವಾಮಿಗೆ ತಲೆ ಬಾಗುವ (ತಿರುಮಂಗೈ)

ನೆರೆ ಕೆನ್ನೆಗೆ, ತೆರೆಗಲ್ಲಕ್ಕೆ ಶರೀರ ಗೂಡುವೋಗದ ಮುನ್ನ
ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ
ಕಾಲ ಮೇಲೆ ಕೈಯನೂರಿ ಕೋಲು ಹಿಡಿಯದ ಮುನ್ನ
ಮುಪ್ಪಿಂದೊಪ್ಪವಳಿಯದ ಮುನ್ನ ಮೃತ್ಯು ಮುಟ್ಟದ ಮುನ್ನ,
ಪೂಜಿಸುವ ನಮ್ಮ ಕೂಡಲ ಸಂಗಮದೇವನ (ಬಸವಣ್ಣ)

ಆಳ್ವಾರರ ಭಕ್ತಿಯ ಆಂದೋಲನ ಹೀಗೆ ಹೆದ್ದೊರೆಯಾಗಿ ಹರಿದು ಕಡಲಾಗಿ ನಿಂತ ವಿಶಾಲದರ್ಶನ. ಅಲ್ಲಿ ಭಕ್ತಿಗೇ ಪ್ರಾಧಾನ್ಯ, ತರ್ಕಕ್ಕಿಂತ ಭಾವಕ್ಕೆ ಮಿಗಿಲಾದ ಮೌಲ್ಯ.

ತಮಿಳುನಾಡಿನ ಆಳ್ವಾರರ ನಂತರ ಅಂಥ ಜನತಾ ಚಳುವಳಿಯನ್ನು ನಾವು ಸಂದರ್ಶಿಸುವುದು, ಕರ್ನಾಟಕದಲ್ಲಿ ಕ್ರಿ.ಶ. 12ನೆಯ ಶತಕದಲ್ಲಿ ಮೂಡಿಬಂದ ಶಿವಶರಣರು—ಅವರ ವಚನ ಸಾಹಿತ್ಯ ಸಂಪದದಲ್ಲಿ ಹಾಗೂ ಅನಂತರ ಕ್ರಿ.ಶ. 14ನೆ ಶತಕದಿಂದ ಬಂದ ಹರಿದಾಸರು ಅವರ ಕೀರ್ತನ ಸಂಪದದ ಮೂಲಕ.

Great Minds Think alike ಎಂಬಂತೆ, ದಿವದತ್ತ ಭೂಮದತ್ತ ಬಗೆಗೆಷ್ಟು ಆಲೋಚಿಸುವ ದಿವ್ಯಚೇತನಗಳು ಒಂದೇ ತೆರನಾಗಿ ಸ್ಪಂದಿಸುತ್ತವೆಂಬುದು ಈ ಎರಡೂ ಭಕ್ತಿಯ-ಸಮುದ್ಧಾರ್ಮಿಕ ಆಂದೋಲನಗಳ Socio-Religious Reform Movement) ಸಾಹಿತ್ಯ ಸಂಪದದ ಮೂಲಕ ಮನಗಾಣಬಹುದಾಗಿದೆ.

---

1. ಪೂತನಿ–ಬಾಲಕೃಷ್ಣನನ್ನು ಸಂಹರಿಸಲು ಕಂಸನಿಂದ ಆಜ್ಞಪ್ತಳಾಗಿಬಂದ ರಾಕ್ಷಸಿ.

ಅದರಲ್ಲಿಯೂ ವಚನಕಾರರ ಸಮಾಜ ಸುಧಾರಣಾ ಮನೋಭಾವ, ಅವರು ಟಂಕಿಸಿದ "ಕಾಯಕತತ್ವ", ಕಂಡುಕೊಂಡ "ಷಟ್ಸ್ಥಲ" ಒಂದು ಕ್ರಾಂತಿಯೇ ಸರಿ. ಹರಿದಾಸರ ಹರಿಭಕ್ತಿ ವಾಹಿನಿ, ವೈದಿಕಧರ್ಮ ಪ್ರಜ್ಞೆ, "ಮಧುಕರ ವೃತ್ತಿ", ಅವರ ಸಮಾಜ ಸುಧಾರಣೆಯ ಕಳಕಳಿ, ಸಾತ್ವಿಕ ಸ್ವರೂಪದ್ದೆನಿಸುತ್ತದೆ. ವಚನ-ಕೀರ್ತನ ಸಂಪದ, ಈ ದಿಶೆಯಲ್ಲಿ ನಿರಂತರ ಅಧ್ಯಯನಶೀಲವೆನ್ನಿಸುತ್ತವೆ.

ನಿತ್ಯ ಪರಿಪೂರ್ಣತ್ವಕ್ಕೆ ತಲುಪಲು, ವಚನಕಾರರು ಕಟ್ಟಿದ "ಎರಡಿಲ್ಲದ" ಭಕುತಿಯ ಪಂಥ, ಈ ಹಾದಿ ಗುರುತಿಸಲು "ಅನ್ಯಭಿನ್ನ"ವಿಲ್ಲದ ಜ್ಞಾನದ ಮಾರ್ಗ. ಹೀಗೆ ಶರಣರ ಶಿವಯೋಗದ ಸಂಧಾನ, ಶಿವಪೂಜೆ, ಶಿವಾಚಾರ, "ನಿಜವನೆಯ್ದಿಸುವ" ಕರ್ಮದ ಶಿವರಹಸ್ಯ, ಷಟ್ಸ್ಥಲ ಸಿದ್ಧಾಂತದ ಉನ್ನತ ಮಜಲು. "ಅನುಭಾವ", ವಚನಕಾರರು ಟಂಕಿಸಿದ, ಉನ್ನತ ಅರ್ಥವಿರುವ ಪದಪುಂಜ. 1"ಅರಿವಿನ ತೃಪ್ತಿಗೆ ಅನುಭಾವವೇ ಆಶ್ರಯ, ಲಿಂಗಾನುಭವದಿಂದ ನಿಮ್ಮ ಕಂಡೆನ್ನ ಮರೆದೆ ಕೂಡಲಸಂಗಮ ದೇವಾ" ಎಂದೇ ಬಸವಣ್ಣ ಹಾಡುತ್ತಾರೆ.1 ಇಲ್ಲಿ ಯೋಗ ಸಾಧನೆ, ಎಲ್ಲವನ್ನೂ ಅಳವಡಿಸಿಕೊಳ್ಳಬೇಕಾಗುತ್ತದೆ :

"ತನ್ನ ತಾ ನೋಡುವುದು ಜ್ಞಾನ
ತನ್ನ ತಾ ಕೂಡುವುದು ಯೋಗ
ತನ್ನತಾ ಮಾಡುವುದು ಕ್ರಿಯೆ"
"ಆವ ಕಾಲದೊಳು ಬಳಿಕಾವ ದೇಶದೊಳು
ಬೇರಾವ ವಸ್ತುವಿನೊಳಡವೆರೆಯದಲೆ
ಮಮತೆ ಆವ ಪರಿಯೊಳು ತನ್ನ
ಮೇಲಿರ್ಪುದಂತೆ ಗುರು ದೇವತೆ
ಯೊಳನುರಾಗವಿಹುದೆ ನಿಜಭಕ್ತಿ" (ನಿಜಗುಣ ಶಿವಯೋಗಿ)

ಇಲ್ಲೆಲ್ಲ ಭಕ್ತಿಯ ಊಟೆ ಸಹಜ ನಿರ್ಮಿತ. ಇದರ ಜತೆಗೇ ಪ್ರಸಿದ್ಧ ಸೂಕ್ತಿಯೆನಿಸುವ ಬಸವಣ್ಣನ ಕೆಲವು ಸಾಲು, ಭಕ್ತಿಯ ಸೂತ್ರವೂ ಆಗುತ್ತವೆ :

i) "ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ"
ii) "ಕಳಬೇಡ ಕೊಲಬೇಡ ಪುಸಿಯ ನುಡಿಯಲು ಬೇಡ" ಎಂಬ ಶಾಸನಸಪ್ತಕ,

---

1. ಬತ್ತೀಸರಾಗದಲ್ಲಿ ಸ್ವರವೆತ್ತಿ ಹಾಡುತ್ತಿದ್ದರಂತೆ.

"ಅದೇ ಅಂತರಂಗಶುದ್ಧಿ, ಬಹಿರಂಗಶುದ್ಧಿ, ಕೂಡಲಸಂಗಮದೇವನ ನೊಲಿಸುವ ಪರಿ"ಯೂ ಆದಾವು !

iii) "ದಯವಿಲ್ಲದ ಧರ್ಮವ್ಯಾವುದಯ್ಯ"

iv) "ಆಚಾರವೇ ಸ್ವರ್ಗ, ಅನಾಚಾರವೇ ನರಕ"

v) "ನಾದಪ್ರಿಯ ಶಿವನೆಂಬರು, ನಾದಪ್ರಿಯ ಶಿವನಲ್ಲಯ್ಯ,
ವೇದಪ್ರಿಯ ಶಿವನೆಂಬರು, ವೇದಪ್ರಿಯ ಶಿವನಲ್ಲಯ್ಯ......
......ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವ"

vi) "ಭಕ್ತಿ ಎಂತಹುದಯ್ಯ, ದಾಸಯ್ಯ ಮಾಡಿದಂತಹುದಯ್ಯ, "ಸಿರಿಯಾಳ ಮಾಡಿದಂತಹುದಯ್ಯ......ಕೂಡಲಸಂಗಮದೇವಾ"

ಈ ಸಾಲುಗಳಲ್ಲೆಲ್ಲ ಭಕ್ತಿಯ ಭಾವ, ಅನನ್ಯ ಪ್ರೇಮ ಪ್ರವಹಿಸುತ್ತದೆ. ವ್ಯಷ್ಟಿ-ಸಮಷ್ಟಿಯ ಶುದ್ಧ ಗಂಗೆಯೂ ಹರಿದಾತು, ಎನ್ನಿಸುತ್ತದೆ.

ವಚನಕಾರರ ವೀರ ಮಾಹೇಶ್ವರ ನಿಷ್ಠೆ, ಜಂಗಮ ನಿಷ್ಠೆ, ಶಿವಭಕ್ತಿಯ ಪಾರಮ್ಯ ಪ್ರತಿಪಾದನೆ, ಸಮಾಜ ಸುಧಾರಣಾ ಕ್ರಾಂತಿ ಮನೋಧರ್ಮ, ಭಕ್ತಿಯ ಸೆಲೆ ಕಾಣಿಸುವ ನೆಲೆ, ಇವೆಲ್ಲದರ ಅಭಿವ್ಯಕ್ತಿ ವಚನ ಸಂಪದದ ಮೂಲಕ ಆಗಿದೆ ಯೆಂಬುದು ಸುವಿದಿತ. ಇದರ ಬೆನ್ನಿಗೇ ಮೂಡಿಬಂದು, ಬೆಳೆದು, ಪ್ರಸರಿಸಿದ ಭಕ್ತಿಯಾಂದೋಲನ, ಹರಿದಾಸರ ಸಾತ್ವಿಕ ಸೌಮ್ಯ ಆಂದೋಲನ. ಹರಿ ಸರ್ವೋತ್ತಮತೆ-ಹರಿಭಕ್ತಿ ಪ್ರತಿಪಾದನೆ, "ಹರಿ ನೀನೊಲಿಯಲು ಆರು ಮುನಿದರೇನು, ಮುನಿದು ಮಾತಾಡದಿದ್ದರೇನು" ಎಂಬಂಥ ಕೆಚ್ಚು ತೋರಿಸಿ, ಡಂಭಕತನ-ಠಕ್ಕು-ಬೂಟಾಟಿಕೆ ತೊಡೆದು ಸ್ವಸ್ಥ ಸಮಾಜವನ್ನು ಕಾಣ ಬಯಸಿದರು, ಕರ್ಣಾಟಕದ ಹರಿದಾಸರು. ದಾಸ ಸಾಹಿತ್ಯ ಸಂಪದದ ತೀವ್ರ ಕಳಕಳಿಯುಳ್ಳ ಬೆಟಗೇರಿಯವರೆಂದಂತೆ, "ದಾಸರೊಬ್ಬರು ನಮ್ಮಲ್ಲಿ ಆಗಿ ಹೋಗದಿದ್ದರೆ ವೇದಾಂತ ತತ್ತ್ವಗಳು ಒತ್ತಟ್ಟಿಗೆ ಉಳಿಯುತ್ತಿದ್ದವು ಮತ್ತು ಸಾಮಾನ್ಯ ಜನರು ಒಂದು ನಿಟ್ಟಿಗೆ ಉಳಿಯುತ್ತಿದ್ದರು."[1] ತಮಿಳಿನ ಆಳ್ವಾರರ ಭಕ್ತಿ ಪ್ರಬಂಧ "ದ್ರಾವಿಡವೇದ"ವೆನಿಸಿದಂತೆ, ಹರಿದಾಸರ ಕೀರ್ತನ ಸಂಪದವನ್ನು "ಕನ್ನಡವೇದ"ವೆಂದರೂ ಹೆಚ್ಚುಗಾರಿಕೆಯಿಲ್ಲ. ಅದಲ್ಲದೆ, "ಕನ್ನಡವನ್ನೂ ಅನಾದರಣ ಮಾಡದೆ, ಕನ್ನಡವನ್ನು ಮೈಲಿಗೆಯ ಮಾತೆಂದು ತೆಗಳದೆ, ಈ ಭಾಷೆಯಲ್ಲಿಯೆ ಪರಮಾತ್ಮನನ್ನು ಕೀರ್ತಿಸಿದರು, ಲೋಕಕ್ಕೆ ಉಪದೇಶ ನೀಡಿದರು".2 ಮಧ್ವಾಚಾರ್ಯರ ಹರಿಭಕ್ತಿ ವಾಹಿನಿಯು "ದ್ವಾದಶ ಸ್ತೋತ್ರ"ದ

1. 'ಪೂಜಾತತ್ತ್ವ'-ಪುರಂದರ ಸಾಹಿತ್ಯ ಸಂಪುಟ-ಸಂಪಾದರ ಮಾತು ಮಿಂಚಿನಬಳ್ಳಿ ಪ್ರಕಟನೆ, ಧಾರವಾಡ.

2. ಡಿ. ಕೆ. ಭೀಮಸೇನರಾವ್ : ಅನುಭವಾಮೃತ ಮತ್ತು ಹರಿಕಥಾಮೃತಸಾರ.

ಮೂಲಕ ಪ್ರಸರಿಸಿದಂತೆ, ದೂರದ ತಮಿಳುದೇಶದ ಶ್ರೀರಂಗದಿಂದ ಕನ್ನಡನಾಡಿನ ಮುಳಬಾಗಿಲಿಗೆ ಬಂದು ನೆಲೆ ನಿಂತ ಮಠಾಧೀಶರಾದ ಶ್ರೀಪಾದರಾಜರು, ಅಲ್ಲಿನ ತನಕ ಸಂಸ್ಕೃತದಲ್ಲಡಕಗೊಂಡಿದ್ದ ವೇದೋಪನಿಷತ್ತು ಪುರಾಣ, ವೇದಾಂತ, ಭಾಗವತ, ನಾರಾಯಣೀಯ, ಮೊದಲಾದ ಉತ್ಕೃಷ್ಟ ಭಕ್ತಿ ಸಾಹಿತ್ಯದ ಸೊಗಸನ್ನು ತಿಳಿಗನ್ನಡ ಕೀರ್ತನೆಗಳ ಮೂಲಕ ಪ್ರಚುರಪಡಿಸಿ, ದಾಸಸಾಹಿತ್ಯಕ್ಕೆ 'ಶ್ರೀ'ಕಾರ ಬಿತ್ತಿದರೆನ್ನಬೇಕು. ಶ್ರೀರಂಗದ ದೇವಾಲಯ-ಶ್ರೀ ರಂಗನಾಥನ ದಿವ್ಯ ಸಾನ್ನಿಧ್ಯ-ಪೂಜಾ ಸಮಯದಲ್ಲಿ ಮಧುರವಾಗಿ ಹಾಡುತ್ತಿದ್ದ ಆಳ್ವಾರರ ದಿವ್ಯ ಪ್ರಬಂಧ, ಶ್ರೀಪಾದರಾಜರಿಗೆ ಇದೇ ರೀತಿ ತಾವೂ ಪೂಜಾ ಸಮಯದಲ್ಲಿ ಕನ್ನಡ ಕೀರ್ತನೆ ರೂಪದಲ್ಲಿ ಶ್ರೀ ಹರಿ ಕೈಂಕರ್ಯವನ್ನು ನಡಸಬಾರದೇಕೆ ? ಎಂದೆನ್ನಿಸಿ, ಆ ಪ್ರಭಾವದಿಂದ, ಕೀರ್ತನೆಗಳನ್ನು ರಚಿಸಿರುವುದೂ ಪರಿಭಾವಿಸುವಂತಹುದೆ. ವ್ಯಾಸರನ್ನು ಅರಿತ ವ್ಯಾಸ ಕೂಟದವರಷ್ಟೆ, ಕನ್ನಡದ ದಾಸಕೂಟಕ್ಕೂ ಮಾನ್ಯತೆ ದೊರೆಯಲಾರಂಭಿಸಿತು. ಹರಿದಾಸ ಪಡೆಯೆ ಸಿದ್ಧ ಆದಂತೆ, ದಾಸ ಸಾಹಿತ್ಯವೂ ಬೆಳೆಯಿತು. ಮುಂದೆ ಸುಮಾರು 200ಕ್ಕೂ ಹೆಚ್ಚು ಹರಿದಾಸರು ಆಗಿಹೋಗಿರುವರೆಂದಾಗ ಹರಿದಾಸ ಆಂದೋಲನದ ವಿಸ್ತಾರ ಅರಿವಾದೀತು.

ಇದಿಷ್ಟೆ ಅಲ್ಲ. ಹರಿದಾಸರಿಂದ ಕರ್ನಾಟಕ ಸಂಗೀತ-ಸಂಗೀತಶಾಸ್ತ್ರಕ್ಕೆ ಹಾಗೂ ಕನ್ನಡ ಸಾಹಿತ್ಯದಲ್ಲಿ ಕೀರ್ತನ ಪ್ರಕಾರ-ದಂಡಕ-ವೃತ್ತನಾಮ[1], ಮೊದಲಾದ ಅಪರೂಪದ ಛಂದಸ್ಸೂ ದೊರೆಯಿತು. ಸಾಹಿತ್ಯ ಸಮೃದ್ಧಿ, ಭಕ್ತಿ ಸಮೃದ್ಧಿ,-ಮನಪೂತಗೊಳಿಸುವ ಕಾರ್ಯವೂ ಬೆಳೆಯಿತೆನ್ನಬೇಕು. ಅಲ್ಲದೆ, ಈಗಾಗಲೆ ಬಳಕೆಯಲ್ಲಿದ್ದ ತ್ರಿಪದಿ, ಷಟ್ಪದಿ, ಸಾಂಗತ್ಯಗಳ ಬಳಕೆಯೂ ಆಯಿತು. "ಶ್ರೀ ಹರಿಯೇ ಸರ್ವೋತ್ತಮ, ವಾಯು ಜೀವೋತ್ತಮ, ನಾರಾಯಣನು ಸರ್ವತಂತ್ರ ಸ್ವತಂತ್ರ, ನಿರ್ದೋಷಿ, ನಿಷ್ಕಳಂಕ, (ಅಖಿಲಾಮ್ನಾಯೈಕವೇದ್ಯೋಹರಿಃ) ವೇದಪ್ರಾಮಾಣ್ಯದಿಂದ ಮಾತ್ರವೇ ಶ್ರೀ ಹರಿಯನ್ನು ಅರಿಯಲು ಸಾಧ್ಯ". ಇದನ್ನೆ ಹರಿದಾಸರು ತಮ್ಮ ಕೃತಿಗಳಲ್ಲಿ ಬಿತ್ತರಿಸಿದ್ದು. ಬೆಳಗು ಮೂಡುವ ವೇಳೆಗೇ ಸುಶ್ರಾವ್ಯವಾಗಿ ಹಲವಾರು ಸಂಕೀರ್ತನೆಗಳಿಂದ ಎಲ್ಲರನ್ನೂ ಎಚ್ಚರಿಸಿ, ಮನ-ತನು ಸ್ವಸ್ಥವಾಗಿಸುವ ಶುದ್ಧೀಕರಣ ಕೈಂಕರ್ಯವನ್ನು ಹರಿದಾಸರು ಕೈಗೊಂಡರೆಂದರೂ ಹೊಂದುತ್ತದೆ.

ಹರಿದಾಸರ ಭಕ್ತಿಪ್ರಸಾರ, ಅದೇ ಒಂದು ವಿಶಿಷ್ಟವೆನಿಸುವಂಥದು. ಕಾರಣ, ಭಾಗವತದ ಒಂದು ಶ್ಲೋಕವನ್ನು ಹರಿದಾಸರು ತಮ್ಮದಾಗಿಸಿಕೊಂಡು ಕೀರ್ತನಗಳಲ್ಲಿ ಅಭಿವ್ಯಕ್ತಿಸಿದ ಪರಿ :

---

1. ಶ್ಲೋಕ-ಗೀತೆಗಳ ಸಮುಚ್ಚಯ

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮ ನಿವೇದನಮ್

ಈ ಶ್ಲೋಕದ ನವವಿಧಭಕುತಿ ವೈವಿಧ್ಯವೆ ಹರಿದಾಸರ ಕೃತಿಗಳ ವಿಶಿಷ್ಟ ಗುಣ. ಇದನ್ನು ತುಂಬಿ ತೀವಿದ ಪುರಂದರದಾಸರ ಕೀರ್ತನ ಸಂಪದ, ಅವರ ಗುರು ವ್ಯಾಸರಾಯ ಸ್ವಾಮಿಗಳಿಂದಲೇ "ಪುರಂದರೋಪನಿಷತ್ತು" ಎಂದು ನಾಮಕರಣ ಆಯಿತು.

ದಾಸರಲ್ಲಿ ಸೃಜನಾತ್ಮಕ ಕವಿಗಳೂ ಆದವರು ಕನಕದಾಸರು. "ಕನಕನನ್ನು ಕೆಣಕದಿರು, ಕೆಣಕಿ ತಿಣುಕದಿರು" ಎಂದೆ ಅನ್ನಿಸುವ ವ್ಯಕ್ತಿತ್ವ ಕನಕದಾಸರದು. ಕನಕದಾಸರಲ್ಲಿನ ಜಾನಪದ ಸೊಗಡು, ದಾಸಸಾಹಿತ್ಯದ ವೈಶಿಷ್ಟ್ಯವೆನ್ನಿಸುವಂತೆಯೆ, ಪ್ರಸನ್ನ ವೆಂಕಟ ದಾಸರ "ಕೋಲು ಪದ"ವೂ ಉತ್ತಮ ಭಕ್ತಿಗೀತವೆಂದೆನ್ನಿಸುತ್ತದೆ.[1] ಅದೇ ರೀತಿ' ಶ್ರೀಪಾದರಾಜರ ಭ್ರಮರಗೀತ, ವ್ಯಾಸರಾಯರ ವೇಣುಗೀತ, ಹೀಗೆ. ಹರಿಭಕ್ತಿಯ ಒಂಬತ್ತು ವಿಧ ವೈವಿಧ್ಯವನ್ನು ಪುರಂದರದಾಸರ ಒಂದು ದೀರ್ಘ ಕೃತಿ–ಸುಳಾದಿ–ಪ್ರತಿಪಾದಿಸುವ ವೈಖರಿ, ಅನನ್ಯವಾದದ್ದು.

ಹರಿಯ ಒಂಭತ್ತು ಭಕ್ತಿಯ ಬಲ್ಲ ಧೀರ ।
ಮರಳಿ ಸಂಸೃತಿಯ ದಾರಿಗೆ ಹುಟ್ಟಿ ಬಾರ ।
ದುರಾಚಾರ ದುಷ್ಕೃತಿಗಳನು ಕಂಡು ಸೇರ ।
ಹಿರಿಯರೊಳು ಬಿರುನುಡಿಯ ಜಿಹ್ವೆಗೆ ತಾರ ।
ಪುರಂದರ ವಿಠಲರೇಯನುದಾರ ।
ಚರಣಾಬ್ಜಸಿಷ್ಠೆ ಅಂಗಡಿ ಇಟ್ಟು ತೋರ ।

ಎಂದಾರಂಭಿಸುವ ದಾಸರು, ಒಂಭತ್ತು ವಿಧ ಭಕುತಿಯನ್ನು ಕುರಿತು ಹಾಡುತ್ತಾರೆ.[2] ಪಂಚಭಾವಗಳಾದ ಶಾಂತ, ದಾಸ್ಯ, ಸಖ್ಯ, ಮಧುರ, ವಾತ್ಸಲ್ಯಗಳಲ್ಲಿ ಅಡಕ ಗೊಂಡಿರುವ ಭಕ್ತಿಯೇ ಹರಿದಾಸರಲ್ಲಿ ನವವಿಧ ಭಕುತಿಯಾಗಿ ವಿಸ್ತೃತಗೊಂಡಿದೆ, ಎನ್ನಬಹುದು.

ದಾಸ ಸಾಹಿತ್ಯದ ಆದ್ಯಪ್ರವರ್ತಕರೆನಿಸುವ ಶ್ರೀ ಪಾದರಾಜರು ರಚಿಸಿರುವ ಕೃತಿಗಳೆಲ್ಲವರಲ್ಲೂ ಹರಿಭಕ್ತಿಯ ಹೊನಲು, ಪ್ರಾಸಂಗಿಕಭಾವ, ಸಹಜವಾಗಿಯೆ ಒಡಮೂಡುತ್ತದೆ : "ಧ್ಯಾನವು ಕೃತಯುಗದಿ, ಯಜನ ಯಜ್ಞವು ತ್ರೇತಾಯುಗದಿ,

---

1. ಈ ನಿಟ್ಟಿನಲ್ಲಿ ರಂಗನಾಥ ದಿವಾಕರರ 'ಹರಿಭಕ್ತಿ ಸುಧೆ' ಹಾಗೂ ಡಾ॥ ಜಿ. ವರದರಾಜಾ ರಾಯರು ಸಂಪಾದಿಸಿರುವ 'ಹರಿಭಕ್ತಿವಾಹಿನಿ'–ಸಂಪಾದಿತ ಕೃತಿಗಳು ಗಮನಾರ್ಹ.
2. ಪುರಂದರದಾಸರ ಕೃತಿಗಳು (ಸುಬೋಧ)

ದಾನವಾಂತಕನ ದೇವತಾರ್ಚನೆ ದ್ವಾಪರಯುಗದಿ, ಆ ಮಾನವರಿಗೆಷ್ಟು ಫಲವೊ ಅಷ್ಟು ಫಲವು, ಕಲಿಯುಗದಿ ಗಾನದಲಿ ಕೇಶವಯೆನಲು ಕೈಗೂಡುವನು ರಂಗವಿಠಲ." ಈ ಚಿಕ್ಕ ಉಗಾಭೋಗದಲ್ಲಿ ಅಂತರಂಗಿಕ ಭಕ್ತಿಗಿರುವ ಪ್ರಾಮುಖ್ಯತೆ ಸುಸ್ಪಷ್ಟ. "ನಾ ನಿನಗೇನು ಬೇಡುವುದಿಲ್ಲ ಎನ್ನ ಹೃದಯ ಕಮಲದೊಳು ನಿಂದಿರೆ ಹರಿಯೆ" ಎಂಬುದೆ ಶ್ರೀ ಪಾದರಾಜರ ಮನೋಧರ್ಮ. ವಾತ್ಸಲ್ಯಭಾವದ ಅನೇಕ ಕೀರ್ತನೆಗಳು ವ್ಯಾಸರಾಯರಲ್ಲಿ, ಸೋದೆಯ ವಾದಿರಾಜರಲ್ಲಿ, ಪುರಂದರರಲ್ಲಿ ತಾನೇ ತಾನಾಗಿ ಹೊಮ್ಮಿದೆ.

ಹರಿದಾಸ ಸಾಹಿತ್ಯದ ದ್ವಿತೀಯ ಹಂತದ ಪ್ರಮುಖರಾದ ಶ್ರೀ ವಿಜಯದಾಸರು "ಜ್ಞಾನ ಸುಳಾದಿ", "ಭಕ್ತಿ ಸುಳಾದಿ"ಗಳನ್ನು ಹಾಡಿರುವಂತೆಯೇ ಅವರ ಶಿಷ್ಯರಾದ ಶ್ರೀ ಗೋಪಾಲದಾಸರು "ವೈರಾಗ್ಯ ಸುಳಾದಿ"ಯನ್ನು ಹಾಡಿದ್ದಾರೆ. ಕನಕದಾಸರ 'ಕೇಶವನಾಮ' ಕೀರ್ತನಭಕ್ತಿಗೆ ಉತ್ತಮ ಉದಾಹರಣೆ. ಜಗನ್ನಾಥದಾಸರ 'ಹರಿಕಥಾಮೃತಸಾರ'ದ ಒಂದು ಪದ್ಯ ಹರಿಭಕುತಿ-ಮಹತಿ ಕುರಿತಂತೆ ಹೀಗೆ ವ್ಯಾಖ್ಯಾನಿಸುತ್ತದೆ :

ಶ್ರವಣಮನಕಾನಂದವೀವುದು
ಭವಜನಿತ ದುಃಖಗಳ ಕಳೆವುದು
ವಿವಿಧ ಭೋಗಗಳಿಹ ಪದಂಗಳನಿತ್ತು ಸಲಹುವುದು ।
ಭುವನ ಪಾವನವೆನಿಪ ಲಕುಮಿ
ಧವನ ಮಂಗಳ ಕಥೆಯು ಪರಮೋ
ತ್ಸವದಿ ಕಿವಿಗೊಟ್ಟಾಲಿಪುದು ಸಂತಸದಿ ಭೂಸರರು॥

ಪುರಂದರದಾಸರ ಅನೇಕ ಕೀರ್ತನೆಗಳಲ್ಲಿ ಒಂದೆರಡರ ಸಾಲುಗಳು ಭಕ್ತಿಗೊಂದು ಉದಾಹರಣೆಯಾಗಿ ಸದಾ ನಿಲ್ಲುತ್ತವೆ :

i) ಕೇಳನೋ ಹರಿ ತಾಳನೋ ತಾಳಮೇಳಗಳಿದ್ದು **ಪ್ರೇಮವಿಲ್ಲದ** ಗಾನ
ii) ಎನಗು ಆಣೆ ರಂಗ ನಿನಗೂ ಆಣೆ
ಎನಗೂ ನಿನಗೂ ಇಬ್ಬರಿಗೂ ನಿನ್ನ ಭಕ್ತರಾಣೆ।

ಎಂಬ ಕೀರ್ತನೆಯ ಕೊನೆಯ ಸಾಲು ಇಡೀ ಕೃತಿಯ ತಿರುಳಾಗುತ್ತದೆ :

"ಹರಿ ನಿನ್ನಾಶ್ರಯ ಮಾಡದಿದ್ದರೆ ಎನಗೆ ಆಣೆ, ರಂಗ
ಪುರಂದರವಿಠಲ ನೀನೊಲಿಯದಿದ್ದರೆ ನಿನಗೆ ಆಣೆ"

ಹರಿದಾಸರು ಹಾಡಿದ ಮಧುರಭಾವ ಭಕ್ತಿಯೊಡಗೂಡಿದ ಕೃತಿಗಳು ಮತ್ತೆ ಮತ್ತೆ ಆಳ್ವಾರರ ದಿವ್ಯ ಪ್ರಬಂಧವನ್ನು ನೆನಪಿಗೆ ತರುತ್ತವೆ. ಅಳವರಿಯದಂತಾಗುತ್ತದೆ.

ಹೀಗೆ ಭಕ್ತಿ-ಭಕ್ತ-ಭಗವಂತರ ಸಂಬಂಧ ಸೇತುವಾಗುತ್ತದೆ. ಅಲ್ಲದೆ ವರ್ಣನೆಗೆ ಸಿಲುಕದ ಅನುಭವ ವೇದ್ಯ ವಿಚಿತ್ರ ವ್ಯಾಪಾರವೂ ಆಗುತ್ತದೆ. ಭಕ್ತ-ಭಗವಂತನ ಬಾಂಧವ್ಯ, ಈ ಭಕ್ತಿ ಸೇತುವಿನಿಂದ ಅಸದೃಶ, ಅಲೌಕಿಕವೂ ಎನಿಸಿಯಾವು. ಭಕ್ತಿಯ ವಿಶಾಲವ್ಯಾಪ್ತಿಯನ್ನು ಕೇವಲ ಪರಿಚಯಿಸುವ ಈ ಸಾಲುಗಳಿಗೆ ಹರಿದಾಸ ಹೃದಯ ರೂಪವಾದ ಮಹನೀಯರ ಸ್ಮರಣೆಯಿಂದ 'ಪವಮಾನ' ಹಾಡಬಹುದೆಂದೆನಿಸುತ್ತದೆ :

> "ನಮಃ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ।
> ನಮಃ ಪುರಂದರಾರ್ಯಾಯ ವಿಜಯಾರ್ಯಾಯ ತೇ ನಮಃ ॥

ಎಂಬುವ ಸಾಲುಗಳಲ್ಲಿ ಹರಿದಾಸ ಸಾಹಿತ್ಯದ ಆದ್ಯ ಪ್ರವರ್ತಕರಾದ ಶ್ರೀಪಾದರಾಜರ ಹೆಸರಿನೊಂದಿಗೇ ಅವರ ಪ್ರಿಯಶಿಷ್ಯರಾಗಿ ವ್ಯಾಸದಾಸ ಕೂಟಗಳೆರಡನ್ನೂ ಸಂಘಟಿಸಿದ ವ್ಯಾಸರಾಯಸ್ವಾಮಿಗಳ ಸ್ಮರಣೆಯೂ ಆಗಿದೆ. ಇಬ್ಬರೂ ಮಠಾಧೀಶರು, ಕಾವಿಯುಟ್ಟ ಸನ್ಯಾಸಿಗಳು, ಇದರ ಜೊತೆಗೆ ಸೋದೆಯ ಶ್ರೀವಾದಿರಾಜಸ್ವಾಮಿಗಳೂ ಹಾಗೂ ವ್ಯಾಸರಾಯರ ಇನ್ನೊಂದು ಅವತಾರ ಸ್ವರೂಪರೆನಿಸುವ ಮಂತ್ರಾಲಯದ ಶ್ರೀ ರಾಘವೇಂದ್ರ ತೀರ್ಥರ ನೆನಪೂ ಮೂಡಿ ಬರುತ್ತದೆ.

ಇದರಂತೆಯೇ ಹರಿದಾಸ ಕೂಟದ ಪ್ರಮುಖ ಸಂಘಟಕರಾದ ಶ್ರೀಪುರಂದರ ದಾಸರ ಜತೆ ಜತೆಗೇ ಶ್ರೀ ಕನಕದಾಸ-ವೈಕುಂಠದಾಸರ ನೆನಪೂ, ದಾಸಸಾಹಿತ್ಯದ ದ್ವಿತೀಯ ಹಂತದ ಪ್ರಮುಖರಾದ ಶ್ರೀ ವಿಜಯದಾಸರ-ಅವರ ಶಿಷ್ಯರಾದ ಗೋಪಾಲದಾಸರ-ಜಗನ್ನಾಥದಾಸರ ಹಾಗೂ ಅವರ ಶಿಷ್ಯರಾದ ಶ್ರೀ ಪ್ರಾಣೇಶದಾಸರ ಭಕ್ತಿ ಸಾಹಿತ್ಯವೂ ನೆನಪಾಗುತ್ತವೆ. ಇಲ್ಲೆಲ್ಲ ಸ್ಪಂದಿಸಿ-ಕಾಂಬ ಪ್ರಮುಖ ಅನಿಸಿಕೆ, ತರ್ಕ-ವಾದಕ್ಕೆ ಅತೀತವಾದ ಮನಸ್ಸಿಗೆ ಮಾತ್ರ ನಿಲುಕುವ ಬದುಕನ್ನೆ ಅರಳಿಸುವ 'ಭಕ್ತಿ'ಯ ಬಗ್ಗೆ ಅದೊಂದು ಆರದ ನೀಯಾಳದ ಊಟೆಯೆನಿಸುತ್ತದೆ, ಸಮಾಜದ ಸಮಷ್ಟಿ ಹಿತ ಕಾಯಬಲ್ಲ ಸುಧೆ ಕೂಡ ಎಂದೆನಿಸುತ್ತದೆ.

ಕನ್ನಡದಲ್ಲಿ ತೋಂಡೀ ಸಾಹಿತ್ಯ ಸಂಪಾದನೆ

ಟಿ. ಎಸ್. ನಾಗರತ್ನ

ಮುದ್ರಣ ಸೌಕರ್ಯವಿಲ್ಲದಿದ್ದ ಕಾಲದಲ್ಲಿ ಗ್ರಂಥಸಂರಕ್ಷಣೆ ಬಹಳ ಕಷ್ಟಕರ ಕಾರ್ಯವಾಗಿತ್ತು. ಗ್ರಂಥಗಳನ್ನು ಬಾಯಿಪಾಠ ಮಾಡಿಯೋ, ಓಲೆಗರಿಗಳಲ್ಲಿ ಕಂಡರಿಸಿಯೋ ಉಳಿಸಿಕೊಳ್ಳುತ್ತಿದ್ದರು. ಹೀಗೆ ಎರಡೂ ರೀತಿಗಳಲ್ಲಿ ಉಳಿದುಕೊಂಡು ಬಂದಿರುವ ಸಾಹಿತ್ಯವನ್ನು ೧) ತೋಂಡೀ ಸಾಹಿತ್ಯವೆಂದೂ ೨) ಲಿಖಿತ ಸಾಹಿತ್ಯವೆಂದೂ ಕರೆಯಬಹುದಾಗಿದೆ. ಮೊದಲನೆಯದು ಬಾಯಿಂದ ಬಾಯಿಗೆ ದಾಟಿ ಬಂದರೆ ಎರಡನೆಯದು ಲಿಖಿತ ರೂಪದಲ್ಲಿ ನಕಲುಗಳಾಗಿ ಮರುನಕಲುಗಳಾಗಿ ಉಳಿದುಬಂದಿವೆ. ಹೀಗೆ ಗಟ್ಟಿ ಮಾಡುವಾಗ ಅಥವಾ ನಕಲು ಮಾಡುವಾಗ ವ್ಯಕ್ತಿಯಿಂದ ವ್ಯಕ್ತಿಗೆ, ಪ್ರತಿಯಿಂದ ಪ್ರತಿಗೆ ಬಾಯ್ತಪ್ಪಿನಿಂದಲೋ ಕೈತಪ್ಪಿನಿಂದಲೋ ಹಲಕೆಲವು ವ್ಯತ್ಯಾಸಗಳಾಗಿಬಿಡುತ್ತವೆ. ಪರಿಣಾಮವಾಗಿ ಮೂಲಗ್ರಂಥದ ಸ್ವರೂಪ ಬದಲಾಗುತ್ತಾ ಸಾಗುತ್ತದೆ. ಹೀಗೆ ಒಂದು ಪಠ್ಯ ಹೆಚ್ಚು ಹೆಚ್ಚು ಬಾಯ್ಗಳನ್ನು, ಕೈಗಳನ್ನು ದಾಟಿದಷ್ಟೂ ವ್ಯತ್ಯಾಸಗಳೂ ಹೆಚ್ಚಾಗುತ್ತವೆ. ಒಂದು ಹಂತದಲ್ಲಿ ಕವಿಯ ಅಥವಾ ವಕ್ತೃವಿನ ಮೂಲಪಾಠ ಹೇಗಿತ್ತು ಎಂಬುದನ್ನು ಪತ್ತೆಹಚ್ಚುವುದೇ ಸಮಸ್ಯೆ ಯಾಗಿಬಿಡುತ್ತದೆ. ಆಗ ಆ ಹೊತ್ತಿಗೆ ದೊರೆಯುವ ಅವುಗಳ ಹಲವಾರು ಪಾಠಗಳ ಅಥವಾ ಪ್ರತಿಗಳ ಸಹಾಯದಿಂದ ಕವಿಯ ಮೂಲಪಾಠವೇನಿರಬಹುದೆಂಬುದನ್ನು ನಿರ್ಣಯಿಸುವುದೇ ಅಲ್ಲದೇ ಕವಿಕೃತಿಗಳ ಪರಿಚಯ, ವಿಮರ್ಶೆಯೇ ಮೊದಲಾದ ವಿದ್ವತ್ಪರಿಕರಗಳಿಂದ ಕೂಡಿದ ಗ್ರಂಥವನ್ನು ಹೊರತರುವುದೇ ಶಾಸ್ತ್ರೀಯವಾದ ಗ್ರಂಥಸಂಪಾದನೆ. ಈ ಕ್ರಮದಲ್ಲಿ ಅನುಸರಿಸುವ ನಿಯಮಗಳೇ ಗ್ರಂಥಸಂಪಾದನಾಶಾಸ್ತ್ರ ತತ್ವಗಳು. ಭಾರತದಲ್ಲಿ ಬಹಳ ಹಿಂದಿನಿಂದಲೂ ಈ ಶಾಸ್ತ್ರ ಅಸ್ತಿತ್ವದಲ್ಲಿದೆ ಮತ್ತು ಕನ್ನಡದಲ್ಲಿ ಸು. ೧೮೧೭ ರಿಂದಲೂ ಬಳಕೆಯಲ್ಲಿರುವ ಮಾಹಿತಿ ದೊರೆಯುತ್ತದೆ. ಸು. ೨೦ನೇ ಶತಮಾನದ ಆದಿಭಾಗದಲ್ಲಿ ಕನ್ನಡ ಗ್ರಂಥ ಸಂಪಾದನಾ ಶಾಸ್ತ್ರವು ಅಧಿಕೃತವಾಗಿ ರೂಪುಗೊಂಡಿತು.

ಕನ್ನಡದಲ್ಲಿ ಲಿಖಿತಸಾಹಿತ್ಯದ ಪ್ರಾಚೀನತೆಯೇ ಸಾವಿರ ವರ್ಷಕ್ಕೂ ಮಿಕ್ಕಿದ್ದು ಎನ್ನುವ ಮಾತಿರುವಾಗ ಕೇವಲ ಬಾಯಿಂದ ಬಾಯಿಗೆ ಬಂದಿರುವ ತೋಂಡೀ ಸಾಹಿತ್ಯದ ಇತಿಹಾಸ ಅದಕ್ಕಿಂತ ಪ್ರಾಚೀನವೆಂಬುದು ಸ್ಪಷ್ಟ. ಬಹುಶಃ ಮನುಷ್ಯ ಭಾಷೆಯನ್ನು ಕಲಿತು ನಾಗರಿಕತೆಯತ್ತ ಮುನ್ನಡೆಯಲು ಆರಂಭಿಸಿದಾಗಲೇ ತೋಂಡೀ ಸಾಹಿತ್ಯದ ಹುಟ್ಟೂ ಆಗಿರಬೇಕು. ತನ್ನ ಅನುಭವಗಳನ್ನು ಇನ್ನೊಬ್ಬರೊಡನೆ ರಸವತ್ತಾಗಿ ಬಣ್ಣಿಸಿ ಹಂಚಿಕೊಳ್ಳುವ ಉದ್ದೇಶದಿಂದ ಕತೆಗಳೂ ಕಾವ್ಯಗಳೂ ಮೈತಾಳಿವೆ. ಈ ಎಲ್ಲ ಸಾಹಿತ್ಯ ಪರಿಕರ, ಪ್ರಕಾರಗಳೂ ಅಂದಿನಿಂದ ಇಂದಿನವರೆಗೆ ಜನಸಾಮಾನ್ಯರಲ್ಲಿ ಅತ್ಯಂತ ಜನಪ್ರಿಯ ಪ್ರಕಾರಗಳಾಗಿ ಉಳಿದುಬಂದಿವೆ. ಕಾಲಕಾಲಕ್ಕೆ ಹೊಸ ರೂಪುರೇಷೆಗಳನ್ನು ಪಡೆಯುತ್ತ, ವ್ಯಕ್ತಿಗತ ಶಕ್ತಿ ಸಾಮರ್ಥ್ಯಗಳ ಮೂಲಕ ಪರಿಸರದ ಒಳಹೊಕ್ಕು ಎಲ್ಲವನ್ನೂ ಒಳಗೊಂಡು ಬೆಳೆಯುತ್ತ ಸಾಗಿದೆ. ಬೆಳೆದು ಕ್ರಮೇಣ ಹಲವು ಹತ್ತು ಪ್ರಕಾರಗಳಾಗಿ ವಿಭಜನೆಗೊಂಡಿರುವುದಲ್ಲದೆ ಅವುಗಳಲ್ಲಿ ಒಂದೊಂದೂ ಪ್ರತ್ಯೇಕ ಪ್ರತ್ಯೇಕವಾಗಿ, ಸ್ವತಂತ್ರವಾಗಿ ತಂತಮ್ಮ ಇರುವಿಕೆಯನ್ನು ಪ್ರಕಟಿಸಿದೆ. ಹೀಗೆ ಕನ್ನಡವಲ್ಲಿ ಪ್ರಚಲಿತವಿರುವ ತೋಂಡೀಸಾಹಿತ್ಯವನ್ನು ಮುಖ್ಯವಾಗಿ ಮೂರು ಪ್ರಕಾರಗಳಲ್ಲಿ ಗುರುತಿಸಬಹುದು. 1) ಜನಪದ ಸಾಹಿತ್ಯ 2) ವಚನ ಸಾಹಿತ್ಯ 3) ಹರಿದಾಸ ಸಾಹಿತ್ಯ. ಜನಪದ ಸಾಹಿತ್ಯ ಮತ್ತು ವಚನ ಸಾಹಿತ್ಯಗಳ ಸಂಪಾದನೆಯ ಹಿನ್ನೆಲೆಯಲ್ಲಿ ಹರಿದಾಸ ಸಾಹಿತ್ಯದ ಶಾಸ್ತ್ರೀಯ ಸಂಪಾದನೆಯನ್ನು ಕುರಿತು ವಿವೇಚಿಸುವುದೇ ಪ್ರಸ್ತುತ ಪ್ರಬಂಧದ ಉದ್ದೇಶ.

ಸಾಹಿತ್ಯ ಕೇವಲ ಮನೋರಂಜನೆಗೆ ಮಾತ್ರವಲ್ಲ ; ಕಾಂತಾ ಸಮ್ಮಿತದಂತೆ ನೀತಿಪಾಠವನ್ನೂ ಒಳಗೊಂಡಿರುತ್ತದೆ. ಸಮಾಜದ ಅನೇಕ ಅನ್ಯಾಯ, ನೋವು, ತುಡಿತಗಳಿಗೆ ಮುಖವಾಣಿಯಾಗಿರುವುದಲ್ಲದೆ ಅವನ್ನು ಪ್ರತಿಭಟಿಸುವ ಮೌನ ಚೀತ್ಕಾರವೂ ಆಗಿರುತ್ತದೆ. ಜನತೆಯನ್ನು ತಿದ್ದುವ ಕಳಕಳಿ ಕಲಾವಿದನಲ್ಲಿ ಅದಮ್ಯವಾಗಿರುತ್ತದೆ. ಇಷ್ಟೆಲ್ಲ ಸೂಕ್ಷ್ಮಗಳನ್ನು ಒಳಗೊಂಡಿರುವ ಜನಪದ ಸಾಹಿತ್ಯ ಶಿಷ್ಟ ಸಾಹಿತ್ಯದಂತೆ 'ಸಿದ್ಧ ಸಾಹಿತ್ಯ'ವಲ್ಲ. ವಸ್ತುವಿನ ಮೂಲಹಂದರ ಒಂದೇ ಆಗಿರುತ್ತದೆಯಲ್ಲದೆ ಒಬೊಬ್ಬ ಕಲಾವಿದನ ಪ್ರದರ್ಶನವೂ ಒಂದೊಂದು ಪ್ರತ್ಯೇಕವಾದ ಸೃಷ್ಟಿಕಾರ್ಯವೇ ಆಗಿರುತ್ತದೆಂಬುದು ಗಮನಾರ್ಹವಾದ ಮತ್ತು ತುಂಬ ಮುಖ್ಯವಾದ ವಿಚಾರ. "ಒಬ್ಬ ಪ್ರದರ್ಶಕನ ಕಥಾನಿರೂಪಣೆಯ ಪಠ್ಯವು ಸಮಯ–ಸಂದರ್ಭ ಶ್ರೋತೃ ವರ್ಗಕ್ಕನುಸರಿಸಿ ಬದಲಾಗುತ್ತಾ ಹೋಗುತ್ತದೆ."[1]—ಎನ್ನುವ ಎ. ವಿ. ನಾವಡರ ಮಾತನ್ನಿಲ್ಲಿ ನೆನೆಯಬಹುದು. ಕೇವಲ ಜನಪದ ಕತೆಯ ಪ್ರದರ್ಶನ ಸಂದರ್ಭಕ್ಕೆ ಮಾತ್ರವಲ್ಲ

---

1. "ಪ್ರದರ್ಶಕ ಸಿದ್ಧಾಂತದ ಹಿನ್ನೆಲೆಯಲ್ಲಿ ಜನಪದ ಕತೆಯೊಂದರ ಅಧ್ಯಯನ, ಸಂಶೋಧನ, ಪು. ೩೬೭, ೧೯೯೧ ಬೆಂಗಳೂರು.

ಕಾವ್ಯಪ್ರದರ್ಶನದಲ್ಲೂ ಈ ಮಾತು ನಿಜ. ಶ್ರೋತೃಗಳ ಪ್ರತಿಕ್ರಿಯೆ ತೀವ್ರವಾಗಿದ್ದಷ್ಟೂ ಕಲಾವಿದನ ಸೃಜನಶೀಲತೆ ಹರಿತವಾಗುತ್ತದೆ. ಯಕ್ಷಗಾನ, ಬಯಲಾಟ, ಹರಿಕಥೆಗಳಂತಹ ಕಲಾಪ್ರಕಾರಗಳ ಪ್ರದರ್ಶನದ ಸಮಯದಲ್ಲಿ ನಮ್ಮೆಲ್ಲರ ಅನುಭವಕ್ಕೂ ಬಂದಿರುವ ವಿಚಾರವಿದು. ಅಲ್ಲದೆ ಯಾವ ಒಬ್ಬ ಕಲಾವಿದ ಅಥವಾ ವಕ್ತೃವೂ ತಾನು ಒಂದು ಬಾರಿ ಹೇಳಿದ್ದನ್ನು ಹೇಳಿದ ರೀತಿಯಲ್ಲೇ ಪುನರಾವರ್ತಿಸುವುದಿಲ್ಲ ; ಅದು ಸುಲಭವೂ ಅಲ್ಲ. ಹಾಗೆಯೇ ಕಥಾಹಂದರ ಅಥವಾ ಕಾವ್ಯದ ಚೌಕಟ್ಟು ಒಂದೇ ಆಗಿದ್ದರೂ, ವಿಭಿನ್ನ ಕಲಾವಿದರಿಂದ ಒಂದೇ ಪರಿಸರದಲ್ಲಿ ಅದನ್ನು ಹಾಡಿಸಿದರೂ ಅದು ಭಿನ್ನ ಭಿನ್ನ ಪಾಠಗಳಾಗಿಯೇ ಸೃಷ್ಟಿಯಾಗುತ್ತದೆ. ಪ್ರತಿಯೊಂದು ಪಾಠವೂ ಆಯಾ ಕಲಾವಿದನ ಮನೋಧರ್ಮ, ಭಾಷಾಪರಿಣತಿ, ಶೈಲಿ, ಕಲಾಕುಶಲತೆ, ನಿರ್ವಹಣಾ ಸಾಮರ್ಥ್ಯಗಳನ್ನು ಅವಲಂಬಿಸಿ ಹುಟ್ಟಿದ 'ಪಠ್ಯ'ವಾಗಿರುತ್ತದೆ. ಪರಿಣಾಮವಾಗಿ ಕಥಾಭಾಗ ಹಿಗ್ಗುವ, ಕುಗ್ಗುವ ಸಾಧ್ಯತೆಗಳು ಹೆಚ್ಚು. ಭಯಭಕ್ತಿಗಳಿಂದ ಕಥೆ ಕಾವ್ಯಗಳ ಪ್ರದರ್ಶನದಲ್ಲಿ ತೊಡಗಿದರೂ ವರ್ತಮಾನಕಾಲದ ರಾಜಕೀಯ, ಸಾಮಾಜಿಕ ಸಮಸ್ಯೆಗಳನ್ನು ಮೂಲ ಕಥಾನಕದೊಂದಿಗೇ ಪ್ರಸ್ತಾಪಿಸಿ ಜನತೆಯನ್ನು ರಂಜಿಸಬಲ್ಲ ರಸಿಕರು ನಮ್ಮ ಜನಪದ ಕಲಾವಿದರು. ಆದುದರಿಂದ ಜನಪದ ಸಾಹಿತ್ಯದ ಯಾವುದೇ ಪ್ರದರ್ಶನ ಒಂದು ಇನ್ನೊಂದರ "ನೀಲಿಪ್ರತಿ"ಯಾಗಿರಲು ಸಾಧ್ಯವಿಲ್ಲ. ನಾಲ್ಕು ಜನ ವಕ್ತೃಗಳಿಂದ ಹಾಡಿಸಿ, ಹೇಳಿಸಿ ಸಂಗ್ರಹಿಸಿದಾಗ ನಾಲ್ಕು ಭಿನ್ನಪಾಠಗಳೇ ಸಿದ್ಧವಾಗುತ್ತವೆ, ನಲವತ್ತು ಜನ ವಕ್ತೃಗಳಿಂದ ಹೇಳಿಸಿದಾಗ ನಲವತ್ತು ಭಿನ್ನಪಾಠಗಳು ಸಂಗ್ರಹವಾಗುತ್ತವೆ. ಕೇವಲ ವಸ್ತುವಿನ ನಿರ್ವಹಣೆಯಲ್ಲಿನ ವ್ಯತ್ಯಾಸಗಳು ಮಾತ್ರವಲ್ಲ ; ನಿರ್ವಹಣಾ ಮಾಧ್ಯಮವಾದ ಛಂದಸ್ಸೂ ಬದಲಾಗಿರುವುದುಂಟು. ಹೀಗೆ 'ವಸ್ತು ಒಂದೇ ಆಗಿದ್ದು ಬೇರೆ ಬೇರೆ ರೂಪಗಳಲ್ಲಿ ಕರ್ನಾಟಕದಾದ್ಯಂತ ಸಿಕ್ಕುವ ಅತಿದೀರ್ಘ ಕಾವ್ಯ' 'ಗುಣಸಾಗರೆ'[1]—ವನ್ನು ಕುರಿತು ಕೃಷ್ಣಮೂರ್ತಿ ಹನೂರು ಅವರ ಅಭಿಪ್ರಾಯವನ್ನಿಲ್ಲಿ ಉದಾಹರಿಸಬಹುದು. ಕಾಡಸಿದ್ದಮ್ಮನ ಕತೆಯ ಹಾಡೂ ಹೀಗೆಯೇ ಕರ್ನಾಟಕದ ಭಿನ್ನಭಿನ್ನ ಭಾಗಗಳಲ್ಲಿ ಭಿನ್ನ ಭಿನ್ನ ರೂಪಗಳಲ್ಲಿ ಪ್ರಚಲಿತವಾಗಿದೆಯೆಂಬ ಅಂಶ ಗಮನಾರ್ಹ. ಸತ್ಯ ಶೀಲ ಪಾತಿವ್ರತ್ಯಗಳಂತಹ ಮೌಲ್ಯಗಳಿಗೆ ಹೆಚ್ಚಿನ ಬೆಲೆ ಕೊಡುವ ನಮ್ಮ ನಾಡಿನಲ್ಲಿ ಅಂತಹ ಮೌಲ್ಯಗಳನ್ನು ಬಿತ್ತರಿಸುವ ಕಾವ್ಯಗಳೂ ಹೆಚ್ಚು. ಅಂತಹ ಕಾವ್ಯಗಳು ಜನಪ್ರಿಯತೆಯನ್ನು ಗಳಿಸಿರುತ್ತವೆ. ಕಾವ್ಯ ಹೆಚ್ಚು ಹೆಚ್ಚು ಜನಪ್ರಿಯವಾದಂತೆ ಹೆಚ್ಚು ಹೆಚ್ಚು ಭಿನ್ನಪಾಠಗಳು ಸೃಷ್ಟಿಯಾಗುತ್ತಾ ಹೋಗುತ್ತವೆ. 'ಮಾಪಗದ ಕೆಂಚವ್ವನ ಹಾಡು'

---

1. "ಕತ್ತಲ ದಾರಿ ದೂರ", ಪ್ರಸ್ತಾವನೆ, ಪು. ೨೦ ; ಕನ್ನಡ ಸಾಹಿತ್ಯ ಪರಿಷತ್ತು, ೧೯೮೧, ಬೆಂಗಳೂರು.

ಈ ಮಾತಿಗೆ ಉತ್ತಮ ಉದಾಹರಣೆ. ಕೇಂದ್ರಕಥಾ ವಸ್ತು ಸ್ಥಳದಿಂದ ಸ್ಥಳಕ್ಕೆ ಪಯಣಿಸಿದ್ದರೂ ಕಾಲಕ್ರಮದಲ್ಲಿ ಆಯಾ ನೆಲದ ಭಾಷೆ, ಅನುಭವ, ಬನಿಗಳನ್ನೆಲ್ಲ ಒಳಗೊಂಡು ಕ್ರಮೇಣ ತ್ರಿವಿಕ್ರಮನಂತೆ ಬೆಳೆದು ನಿಲ್ಲುತ್ತದೆ. ಬರುಬರುತ್ತಾ ಒಂದೊಂದು ಭಿನ್ನಪಾಠವೂ ಒಂದೊಂದು ಸ್ವತಂತ್ರ ರೂಪವನ್ನೇ ಪಡೆದುಬಿಡುತ್ತದೆ. ಆದ್ದರಿಂದ "ಈ ಮಾದರಿಯ ಜನಪದ ಕಥನಗೀತೆಗಳಿಗೆ ಪಾಠಾಂತರಗಳನ್ನೂ ಹುಡುಕದೆ ಆಯಾ ಪ್ರದೇಶದ ಹಿನ್ನೆಲೆಯಲ್ಲೇ ನೋಡಬೇಕಾಗುತ್ತದೆ."1 ದೊರೆಯುವ ಭಿನ್ನ ಪಾಠಗಳೆಲ್ಲವನ್ನೂ ಸಂಗ್ರಹಿಸುವುದು ಸೂಕ್ತ. ಇದರೊಂದಿಗೆ ಒಬ್ಬೊಬ್ಬ ಕಲಾವಿದನ ನಿರ್ವಹಣಾ ಸಾಮರ್ಥ್ಯವೂ ಆಯಾ ಪಾಠಕ್ಕೆ ಒಂದೊಂದು ಮಿತಿಯಾಗಿ ಪರಿಣಮಿಸುತ್ತದೆಂಬುದನ್ನೂ ನಾವಿಲ್ಲಿ ಮರೆಯಬಾರದು.

ಹೀಗೆ ತೋಂಡೀಸಾಹಿತ್ಯವಾಗಿಯೇ ಬೆಳೆದು ಬಂದಿರುವ ಜನಪದ ಸಾಹಿತ್ಯದ ಸಂಪಾದನೆ ಸಮಸ್ಯೆಗಳ ಹುತ್ತವಾಗಿ ಪರಿಣಮಿಸಿದರೂ ಅವನ್ನು ಎದುರಿಸಿ ಕಾರ್ಯ ನಿರ್ವಹಿಸಿರುವ ರೀತಿಗೆ 'ಮಲೆಯಮಾದೇಶ್ವರ ಕಾವ್ಯ'ದ ಶಾಸ್ತ್ರೀಯ ಸಂಪಾದನೆ ಅತ್ಯುತ್ತಮ ಉದಾಹರಣೆ. ಹತ್ತು ಜನ ಮಾದೇಶ್ವರನ ಭಕ್ತರಿಂದ ಸಂಗ್ರಹಿಸಿದ ಹತ್ತು ಭಿನ್ನಪಾಠಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ, ಆ ಪೈಕಿ ಉತ್ತಮ ಹಾಗೂ ಶುದ್ಧವಾಗಿದೆಯೆಂದು ತೋರುವ ಒಂದು ಪಾಠವನ್ನು ಆರಿಸಿ ಅದನ್ನು 'ಮೂಲ ಪಾಠ'ವಾಗಿ ಬಳಸಿಕೊಳ್ಳಲಾಗಿದೆ. ಉಳಿದ ಒಂಬತ್ತು ಭಿನ್ನ ಆಕರಗಳಿಂದ ಪಾಠಾಂತರ ಸಂಕಲನ ಮಾಡಿ, ಆಕರಗಳಿಗಿರುವ ಪರಸ್ಪರ ವ್ಯತ್ಯಾಸಗಳು, ಅವುಗಳಲ್ಲಿ ಬರುವ ಪ್ರಕ್ಷೇಪಗಳು, ಸಂಕ್ಷೇಪಗಳು ಎಲ್ಲವನ್ನೂ ಗುರುತಿಸಿಕೊಂಡು ಶಿಷ್ಟಕೃತಿಗಳಿಗೆ ಅನ್ವಯ ವಾಗುವ ಗ್ರಂಥ ಸಂಪಾದನಾಶಾಸ್ತ್ರ ತತ್ವಗಳನ್ನು ಅನ್ವಯಿಸಿ ಪರಿಷ್ಕರಣ ಕಾರ್ಯ ಮಾಡಲಾಗಿದೆ. ಸಂಪಾದಕರ ದೃಷ್ಟಿಯಲ್ಲಿ "ಜನಪದ ಸಾಹಿತ್ಯದಲ್ಲಿ ಮೂಲ ಮಾತೃಕೆಯನ್ನು ಸಿದ್ಧಪಡಿಸುವುದೆಂದರೆ ಆ ಸಾಹಿತ್ಯ ಉಗಮಸ್ಥಿತಿಯಲ್ಲಿ ಹೇಗಿತ್ತು ಎಂಬುದರ ಶೋಧನೆಯಲ್ಲಿ ಎಂಬುದನ್ನು ಮನಗಾಣಬೇಕು. ಹಾಗೆ ಶೋಧಿಸಹೊರಟರೆ ಈ ಕಾವ್ಯ ಪ್ರಾರಂಭಾವಸ್ಥೆಯಲ್ಲಿ ಇಷ್ಟು ವಿಸ್ತಾರವಾಗಿರಲು ಸಾಧ್ಯವೇ ಇಲ್ಲ. ಕಾಲ ಕಾಲಕ್ಕೆ ಹೊಸ ಕಥಾಭಾಗಗಳು, ಘಟನಾವಳಿಗಳು, ಸನ್ನಿವೇಶಗಳು ಸೇರುತ್ತ ಬೆಳೆದು ಬರುವುದು ಜನಪದ ಸಾಹಿತ್ಯದ ಲಕ್ಷಣವಾದ್ದರಿಂದ ಮೂಲದಲ್ಲಿ ಈ ಕಾವ್ಯ ಹೇಗಿದ್ದಿರ ಬಹುದೆಂದು ಕಲ್ಪಿಸಿಕೊಂಡರೆ ಕೇವಲ ಇತಿಹಾಸರೂಪದ ಹೇಳಿಕೆಗಳಿಂದ ಕೂಡಿದ್ದಿರ ಬಹುದು ಎನ್ನಿಸುತ್ತದೆ"2 ಇಷ್ಟೆಲ್ಲ ಎಚ್ಚರವಿಟ್ಟುಕೊಂಡು ಸೂಕ್ಷ್ಮಗ್ರಾಹಿಗಳಾಗಿ ಆ

---

1. ಅದೇ ಪು. ೨೫

2. "ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ" ಸಂಪುಟ ೧, ಡಾ. ಪಿ. ಕೆ. ರಾಜಶೇಖರ, ಪ್ರಸ್ತಾವನೆ, ಪು. ೬೯-೭೦, ೧೯೭೩, ಮೈಸೂರು.

ಹತ್ತು ಪಾಠಗಳ ಸಹಾಯದಿಂದ ಮೂಲಕಥಾಹಂದರಕ್ಕೆ ಧಕ್ಕೆಬಾರದಂತೆ ಎಲ್ಲವುಗಳ ಆಶಯ, ಘಟನೆಗಳು ನಿರೂಪಣೆ ವರ್ಣನೆಗಳನ್ನೂ ಸಂಯೋಜಿಸಿ, ಇಡೀ ಕಾವ್ಯದ ಭಾಷೆ ಶೈಲಿಗಳು ಮುಕ್ಕಾಗದಂತೆ ಮಲೆಯಮಾದೇಶ್ವರ ಕಾವ್ಯವನ್ನು ಸಿದ್ಧಪಡಿಸಲಾಗಿದೆ. ಆದರೂ ಅದರಲ್ಲಿ ಗ್ರಂಥ ಸಂಪಾದನೆಯ ದೃಷ್ಟಿಯಿಂದ ಮೂಲಭೂತವಾಗಿ ಕಾಣುವ ಕೊರತೆಗಳಿವೆ : ಹತ್ತೂ ವಕ್ತೃಗಳ ಪಾಠಗಳಲ್ಲಿರುವ ವ್ಯತ್ಯಾಸಗಳು—ಅಡಿಟಿಪ್ಪಣಿಯಲ್ಲಿ ಸೂಚನೆಗಳಿದ್ದರೂ—ಮೂಲರೂಪದಲ್ಲಿ ನಮಗೆ ತಿಳಿಯುವುದಿಲ್ಲ. ಅಲ್ಲಲ್ಲಿ ವ್ಯತ್ಯಸ್ಥ ಕಥಾಸಂಗ್ರಹವನ್ನು ಅಡಿಟಿಪ್ಪಣಿಯಲ್ಲಿ ಕೊಟ್ಟಿದ್ದರೂ ಅವುಗಳ ಮೂಲ ಪಾಠಗಳ ಸ್ವರೂಪವೂ ನಮಗೆ ತಿಳಿಯುವುದಿಲ್ಲ. ಸಿನೀಮಾಯ ಹೊಡೆತಕ್ಕೆ ಸಿಕ್ಕಿವೆಯೆಂಬ ಕಾರಣಕ್ಕಾಗಿ ಸಂಪಾದಕರು ಕೈಬಿಟ್ಟಿರುವ ಪಾಠಗಳ ರೂಪುರೇಷೆಗಳೂ ನಮಗೆ ಅಲ್ಲಿ ಲಭ್ಯವಿಲ್ಲ. ಆಸಕ್ತರು, ವಿದ್ವಾಂಸರು ಆ ವಿವರಗಳಿಗೆ ಪುನಃ ಸಂಪಾದಕರನ್ನೇ ಆಶ್ರಯಿಸಬೇಕು. ಪ್ರಸ್ತುತಗ್ರಂಥದಲ್ಲಿ ಇದೊಂದು ಕೊರತೆಯೇ ಸರಿ. ಎಲ್ಲಕ್ಕಿಂತ ಹೆಚ್ಚಾಗಿ ಒಂದೇ ಕಾವ್ಯದ ಒಂದೊಂದು ಭಾಗಕ್ಕೆ ಒಂದೊಂದು ಪಠ್ಯ ಮೂಲವಾಗಿದ್ದು ಇಡೀ ಕಾವ್ಯವೇ ಭಿನ್ನವಕ್ತೃಗಳನ್ನಾಧರಿಸಿದ ಒಂದು ಸುಸಂಬದ್ಧ ಮಿಶ್ರ ಪಾಠವೇನೋ ಎಂದೂ ಒಮ್ಮೊಮ್ಮೆ ಅನ್ನಿಸುವುದುಂಟು. ತಾವು ಪರಿಷ್ಕರಣದಲ್ಲಿ ಅನುಸರಿಸಿರುವ ಕ್ರಮವನ್ನು ವಿವರವಾಗಿ ಗ್ರಂಥದ ಮೊದಲಲ್ಲೇ ತಿಳಿಸಿರುವ ಸಂಪಾದಕರ ಸತ್ಯನಿಷ್ಠೆ ಮೆಚ್ಚುವಂಥದು-ಈ ಸಣ್ಣಪುಟ್ಟ ವಿಚಾರಗಳು ಏನೇ ಇರಲಿ ಜನಪದ ಸಾಹಿತ್ಯದ ಶಾಸ್ತ್ರೀಯ ಸಂಪಾದನೆಗೆ ಒಂದು ಮಾರ್ಗ ಹಾಕಿಕೊಟ್ಟ ಏಕೈಕ ಕೃತಿ 'ಮಲೆಯ ಮಾದೇಶ್ವರ ಕಾವ್ಯ —ಎನ್ನುವುದರಲ್ಲಿ ಎರಡನೆಯ ಅಭಿಪ್ರಾಯವಿಲ್ಲ.

ಜನಪದ ಸಾಹಿತ್ಯ ಸಂಗ್ರಹ ಸಂಪಾದನೆಗಳಿಗೆ ಹೋಲಿಸಿದರೆ ವಚನಸಾಹಿತ್ಯ ದಾಸಸಾಹಿತ್ಯಗಳ ಸಂಗ್ರಹ ಸಂಪಾದನೆಗಳು ಪರವಾಗಿಲ್ಲ. ವಚನಸಾಹಿತ್ಯ ಪ್ರಾರಂಭದ ದೆಸೆಯಲ್ಲಿಯೇ ಪ್ರಜ್ಞಾಪೂರ್ವಕವಾಗಿ ಹಾಗೂ ವ್ಯವಸ್ಥಿತವಾಗಿ ಸಂಗ್ರಹಿತವಾಗಿರುವುದನ್ನು ಗಮನಿಸಬಹುದು. ಮಠಮಾನ್ಯಗಳಲ್ಲಿ, ವಿದ್ವಜ್ಜನರ ಮನೆಗಳಲ್ಲಿ ಶ್ರೀ ಸಾಮಾನ್ಯರಲ್ಲಿ ಕೂಡ ತಾಳೆಗರಿ, ಕೋರಿಕಾಗದಗಳಲ್ಲಿ ಬರೆದ ವಚನಸಾಹಿತ್ಯದ ಹಸ್ತಪ್ರತಿಗಳು ಸಮೃದ್ಧವಾಗಿ ದೊರೆತಿವೆ. ಕರ್ನಾಟಕ ವಿಶ್ವವಿದ್ಯಾಲಯವೊಂದರಲ್ಲಿಯೇ ಇದುವರೆಗೆ ಸು. ಮೂರುಸಾವಿರದಷ್ಟು ವಚನಸಾಹಿತ್ಯದ ಹಸ್ತಪ್ರತಿಗಳು ಸಂಗ್ರಹವಾಗಿವೆಯೆಂದರೆ ಅವುಗಳ ವಿಪುಲತೆ, ಜನಪ್ರಿಯತೆಗಳನ್ನು ತಿಳಿಯಬಹುದು. ಇಷ್ಟೆಲ್ಲ ಆಕರಬಾಹುಳ್ಯವಿದ್ದರೂ ವಚನ ಸಾಹಿತ್ಯ ಸಂಪಾದನೆ ಒಂದು ಇಡೀ ಕಾವ್ಯವನ್ನು ಸಂಪಾದಿಸುವಷ್ಟು ಸುಲಭವಲ್ಲ ; ಸರಳವಲ್ಲ. ಮೂಲ ಸಾಮಗ್ರಿಗಳಾದ ಹಸ್ತಪ್ರತಿಗಳ ಸ್ವರೂಪದಲ್ಲಿಯೇ ಸಾಕಷ್ಟು ಸಮಸ್ಯೆಗಳಿವೆ. ವಚನಸಾಹಿತ್ಯ ಸಂಗ್ರಹಕಾರ್ಯ ಮೊದಲಿನಿಂದಲೂ ನಡೆದಿದ್ದರೂ ಒಬ್ಬೊಬ್ಬ ವಚನಕಾರನ ಸಮಗ್ರ ವಚನಗಳನ್ನು ಒಟ್ಟಿಗೇ ಸಂಗ್ರಹಿಸುವ ಕಾರ್ಯ ವ್ಯವಸ್ಥಿತವಾಗಿ ಆಗಿಲ್ಲ. ವಚನಗಳ ವಸ್ತು,

ವಿಷಯಾನುಗುಣವಾದ ಸಂಗ್ರಹಗಳೇ ಹೆಚ್ಚು. ಉದಾ : ಷಟ್‌ಸ್ಥಲ ವಚನಗಳ ಕಟ್ಟುಗಳು, ಏಕೋತ್ತರ ಶತಸ್ಥಲದ ಸಂಕಲನಗಳು, ಸರ್ವಪುರಾತನರ ವಚನಗಳು ಇತ್ಯಾದಿ. ಇವು ಯಾವುವೂ ಆಯಾ ಶರಣರ ಸಮಗ್ರ ವಚನಸಂಗ್ರಹಗಳಲ್ಲ. ಒಂದೊಂದು ಸಂಕಲನದ ಉದ್ದೇಶವೂ, ವಿಷಯಗಳೂ ಬೇರೆಬೇರೆ. ಒಂದೇ ಹೆಸರಿನ ಎರಡು ಕಟ್ಟುಗಳಲ್ಲೂ ಆಯಾ ಸಂಗ್ರಹಕಾರನಿಗೆ ದೊರೆತ ಸಾಧನ ಸಾಮಗ್ರಿಗಳಿರುವುದು ಗಮನಾರ್ಹ. ಹೀಗಾಗಿ ಸಾವಿರಾರು ಸಂಖ್ಯೆಯಲ್ಲಿ ಹಸ್ತಪ್ರತಿಗಳು ದೊರೆತಿದ್ದರೂ ವಚನ ಸಾಹಿತ್ಯ ಸಂಪಾದನೆಗೆ ಅವೆಲ್ಲ ಭಿನ್ನ ಭಿನ್ನ ಆಕರಗಳಾಗಿಯೇ ಪರಿಣಮಿಸುತ್ತವೆ. ಎಲ್ಲೋ ಅಲ್ಲೊಂದು ಇಲ್ಲೊಂದು ಹಸ್ತಪ್ರತಿಯನ್ನು ಈ ದೃಷ್ಟಿಯಿಂದ ನಿವಾರಿಸ ಬಹುದು ಅಷ್ಟೇ. ಇವೆಲ್ಲ ವಿಚಾರಗಳನ್ನೂ ಗಮನದಲ್ಲಿರಿಸಿಕೊಂಡು ದೊರೆತ ಕಟ್ಟುಗಳ ಪ್ರಾಚೀನತೆ ಆಧಾರಗಳ ವಿಪುಲತೆಗಳನ್ನಾಧರಿಸಿ ಮೂಲ ವಚನಗಳನ್ನು ಬೇರ್ಪಡಿಸಿ ಕೊಂಡು, ಆಕರಬಾಹುಳ್ಯವನ್ನನುಸರಿಸಿಯೇ ಸಂಪಾದನ ಕಾರ್ಯ ಮಾಡಬೇಕಾಗುತ್ತದೆ. ಡಾ॥ ಆರ್. ಸಿ. ಹಿರೇಮಠರು ಚನ್ನಬಸವಣ್ಣನವರ ವಚನಗಳನ್ನು ಇದೇ ಕ್ರಮವನ್ನನು ಸರಿಸಿ ಸಂಪಾದಿಸಿದ್ದಾರೆ. ಅಲ್ಲಿ ವಿಭಿನ್ನ ವರ್ಗದ ಪ್ರಾಚೀನ ಪ್ರತಿಗಳಿಗೆ ವಿಶೇಷ ಪ್ರಾಶಸ್ತ್ಯ ಕೊಟ್ಟು, ತಾಳೆಗರಿಯಲ್ಲಿರುವ ಹಸ್ತಪ್ರತಿಯನ್ನು ಆಧಾರವಾಗಿಟ್ಟುಕೊಂಡು ಪಾಠನಿರ್ಣಯ ಮಾಡಲಾಗಿದೆ. ಪ್ರತಿಯೊಂದು ವಚನದ ವ್ಯಂಗ್ಯಾರ್ಥಗಳನ್ನೂ ಗ್ರಹಿಸಿ, ವಚನಕಾರರ ತತ್ವ ಭಾವ ಭಾಷೆಗಳನ್ನು ಗಮನಿಸಿ ಹೆಚ್ಚಿನ ನಿಷ್ಕೃಷ್ಟತೆಯನ್ನು ಸಾಧಿಸಿದೆ. ವಚನಗಳ ಶಾಸ್ತ್ರೀಯ ಸಂಪಾದನೆಗೆ ಡಾ॥ ಎಲ್. ಬಸವರಾಜುರವರ ('ಅಕ್ಕನ ವಚನಗಳು' ಇತ್ಯಾದಿ) ಸಂಪಾದಿತ ಗ್ರಂಥಗಳನ್ನೂ ಉದಾಹರಿಸಬಹುದು. ಓಲೆಯ ಗ್ರಂಥಗಳು ವಿವಿಧ ಉದ್ದೇಶಗಳಿಂದ ಸಂಗ್ರಹಿತವಾದ ವಿವಿಧ ರೀತಿಯ ಸಂಕಲನಗಳು, ಮುದ್ರಿತ ಗ್ರಂಥಗಳು – ಎಲ್ಲವನ್ನೂ ಸಂಪಾದನ ಕಾರ್ಯದಲ್ಲಿ ಬಳಸಿಕೊಂಡಿದ್ದು ಅಚ್ಚುಕಟ್ಟಾಗಿ ಸಂಪಾದಿಸಿಕೊಟ್ಟಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯ ಈ ನಿಟ್ಟಿನಲ್ಲಿ ಮಹತ್ವದ ಕೆಲಸ ಮಾಡುತ್ತಿದೆ.

ದಾಸಸಾಹಿತ್ಯ ಸಂಪಾದನೆಗೆ ವಚನಸಾಹಿತ್ಯಕ್ಕೆ ದೊರೆಯುವಷ್ಟು ವಿಪುಲವಾಗಿ ಹಸ್ತಪ್ರತಿಗಳು ದೊರೆಯುವುದಿಲ್ಲ. ಕರ್ತೃಗಳ ಸಂಖ್ಯೆಯೂ ಜನಪದ ಸಾಹಿತ್ಯಕ್ಕಿದ್ದಷ್ಟು ಇಲ್ಲ. ಹರಿದಾಸ ಸಾಹಿತ್ಯಕ್ಕೆ ಸಂಬಂಧಪಟ್ಟ ಮೂಲ ಸಾಮಗ್ರಿಗಳನ್ನು ಕೇವಲ ಆಸಕ್ತರ ಸಂಗ್ರಹಗಳಲ್ಲಿ ಮಾತ್ರ ಪಡೆಯಬಹುದು. ಇಲ್ಲಿಯೂ ಕೂಡ ಹಸ್ತಪ್ರತಿಯ ಸ್ವರೂಪದಲ್ಲೇ ಸಾಕಷ್ಟು ಸಮಸ್ಯೆಗಳಿವೆ. ದೊರೆಯುವ ವಿಭಿನ್ನ ಕಾಲ ದೇಶ ಅಭಿರುಚಿಗಳ ಸಂಗ್ರಹಗಳನ್ನು ಶಾಸ್ತ್ರೀಯವಾಗಿ ವರ್ಗೀಕರಿಸುವುದಾಗಲೀ, ಪೀಳಿಗೆ ಗುರುತಿಸುವುದಾಗಲೀ ಸಾಧ್ಯವಿಲ್ಲ. ಯಾವ ಪ್ರತಿಯೂ ಒಂದರ ನಕಲು ಮತ್ತೊಂದಲ್ಲ. ಹೆಚ್ಚಿನ ಪ್ರತಿಗಳಲ್ಲಿ ಕಾಲನಿರ್ದೇಶನವೂ ಇರುವುದಿಲ್ಲ. ಪ್ರತಿಗಳಲ್ಲಿ ಪರಸ್ಪರ ಹೋಲಿಕೆ ಗಳಾಗಲೀ ವ್ಯತ್ಯಾಸಗಳಾಗಲೀ ದಟ್ಟವಾಗಿ ಕಂಡುಬರುವುದಿಲ್ಲ. ಒಂದೊಂದು ಹಸ್ತಪ್ರತಿ

ಯಲ್ಲಿನ ಸಂಗ್ರಹವೂ ಆಯಾ ಸಂಗ್ರಹಕಾರನ ಅಭಿರುಚಿಗೆ ತಕ್ಕಂತೆ ರೂಪುಗೊಂಡಿರುತ್ತದೆ. ಹಾಗಾಗಿ ಹಸ್ತಪ್ರತಿಗಳಲ್ಲಿ ಪರಸ್ಪರ ಸಂಬಂಧವನ್ನು ಗುರುತಿಸುವುದು ಸಾಧ್ಯವಿಲ್ಲ. ಪ್ರತಿಯೊಂದು ಹಸ್ತಪ್ರತಿಗೂ ಪ್ರತ್ಯೇಕ ಹಾಗೂ ಸ್ವತಂತ್ರ ಹಸ್ತಪ್ರತಿಯ ಬೆಲೆಯನ್ನು ಕೊಡುವುದು ಅನಿವಾರ್ಯ. ಯಾವುದೇ ಒಬ್ಬ ಹರಿದಾಸರ ಕೃತಿಗಳು ಒಟ್ಟಾಗಿ ಒಂದು ಹಸ್ತಪ್ರತಿಯಲ್ಲಿ ದೊರೆಯುವುದಿಲ್ಲ. (ಅಪವಾದಗಳಿರಬಹುದು). ದೊರೆಯುವ ಕೀರ್ತನೆಗಳನ್ನು ಕೂಡ ಯಾವುದೇ ಒಂದು ಕ್ರಮವನ್ನನುಸರಿಸಿ ದಾಖಲಿಸಿಲ್ಲ. ಒಟ್ಟಾರೆ ಈ ದಾಖಲಾತಿಯ ಹಿನ್ನೆಲೆಯಲ್ಲಿ ವಚನ ಸಾಹಿತ್ಯ ಸಂಗ್ರಹದಲ್ಲಿರುವಂತೆ ಹೆಚ್ಚಿನ ಉದ್ದೇಶವೇನೂ ಇರುವಂತಿಲ್ಲ. ತಮಗೆ ಇಷ್ಟವಾದ ಕೃತಿಯನ್ನು ಹಾಡುವ ಉದ್ದೇಶದಿಂದ ಬರೆದಿಟ್ಟುಕೊಂಡಿರಬಹುದು, ಅಷ್ಟೇ. ಹೆಚ್ಚೆಂದರೆ ದಾಸರ ಕೃತಿಗಳನ್ನು ಬರೆದಿಡುವುದು ಒಂದು ಪುಣ್ಯದ ಕೆಲಸವೆಂಬ ಭಾವನೆ ಕೆಲವು ಲಿಪಿಕಾರರಲ್ಲಿದ್ದಿರಬಹುದು. ಆದುದರಿಂದ ಯಾವ ಪ್ರತಿಯಲ್ಲಿನ ಯಾವ ಕೃತಿಯನ್ನೇ ಆಗಲಿ ಒಂದೊಂದು ಪ್ರತ್ಯೇಕ ಘಟಕವೆಂಬುದಾಗಿಯೇ ಭಾವಿಸಿ ಇತರ ಪ್ರತಿಗಳಲ್ಲಿ ಬರುವ ಭಿನ್ನ ಪಾಠಗಳನ್ನಾಧರಿಸಿ ಮೂಲ ಪಾಠವನ್ನು ನಿರ್ಣಯಿಸಬೇಕಾಗುತ್ತದೆ. ಈ ದೃಷ್ಟಿಯಿಂದ ವಚನಸಾಹಿತ್ಯ ದಾಸಸಾಹಿತ್ಯಕ್ಕಿಂತ ಹೆಚ್ಚಿನ ಹಿಡಿತಕ್ಕೆ ಸಿಕ್ಕುತ್ತದೆ. ಕಾರಣ ಪ್ರಾಚೀನ ವೀರಶೈವ ಪುರಾಣಗಳು, ಶೂನ್ಯಸಂಪಾದನೆಗಳು, ಬೆಡಗಿನ ವಚನಗಳಂತಹ ವಿಭಿನ್ನ ದೃಷ್ಟಿಯ ಸಂಕಲನಗಳು, ಓಲೆಯ ಹಾಗೂ ಮುದ್ರಿತ ಗ್ರಂಥಗಳು-ಹೀಗೆ ತಕ್ಕಮಟ್ಟಿನ ವ್ಯವಸ್ಥಿತ ಸಂಗ್ರಹವಾದರೂ ವಚನ ಸಾಹಿತ್ಯಕ್ಕಿದೆ.

ದಾಸಸಾಹಿತ್ಯದ ಹಸ್ತಪ್ರತಿಗಳ ಈ ಸ್ವರೂಪವನ್ನಾಧರಿಸಿ ಒಂದೊಂದು ಪ್ರತ್ಯೇಕ ಕೀರ್ತನೆಗೂ ದೊರೆಯುವ ಆಕರಗಳನ್ನೆಲ್ಲ ಒಟ್ಟುಮಾಡಿ ಅವುಗಳಲ್ಲೇ ಆಯಾ ದಾಸರು ಬದುಕಿ ಬಾಳಿದ ಸ್ಥಳದ ದೃಷ್ಟಿಯಿಂದ ಪ್ರಾದೇಶಿಕವೆಂದಾಗಲೀ ಪ್ರತಿಯ ಸ್ವರೂಪದ ದೃಷ್ಟಿಯಿಂದ ಪ್ರಾಚೀನವೆಂದಾಗಲೀ ಅಥವಾ ಶುದ್ಧಪಾಠವನ್ನಾಧರಿಸಿದ ಶುದ್ಧಪ್ರತಿ ಯೆಂದಾಗಲೀ ಒಂದು ಪ್ರತಿಯನ್ನು ಆಯ್ದು ಅದನ್ನು ಮೂಲವೆಂದು ಭಾವಿಸಿ ಆ ಕೀರ್ತನೆಯ ಉಳಿದ ಆಕರಗಳಿಂದ ಪಾಠಾಂತರಗಳನ್ನು ಸಂಕಲಿಸುವುದು ಅನಿವಾರ್ಯ ವಾಗಿದೆ. ಈ ಕ್ರಮದಿಂದಾಗಿ ಒಂದೊಂದು ಕೀರ್ತನೆಯ ಸಂಪಾದನೆಯೂ ಒಂದೊಂದು ಕಾವ್ಯಸಂಪಾದನೆಯಂತೆಯೇ ಇರುತ್ತದೆ. ಈ ಕ್ರಮವನ್ನನುಸರಿಸಿ ಹರಿದಾಸ ಸಾಹಿತ್ಯವನ್ನು ಸಂಪಾದಿಸುವಾಗ ಆಕರಗಳ ಸಂಖ್ಯಾಬಲವನ್ನು ಅವಲಂಬಿಸುವುದು ಅನಿವಾರ್ಯ. ಒಂದು ಕೀರ್ತನೆ ಕೇವಲ ಒಂದೇ ಒಂದು ಆಕರದಲ್ಲಿ ದೊರೆತಾಗ ಅದನ್ನು ಅನುಮಾನದಲ್ಲೇ ಗ್ರಹಿಸಿ 'ಏಕೈಕ ಆಕರ'ವೆಂದು ಪ್ರತ್ಯೇಕವಾಗಿ ಸೂಚಿಸಿ ವಸ್ತುಸ್ಥಿತಿಯನ್ನು ಮುಂದಿಡುವುದು ಸೂಕ್ತ. ಒಂದು ಕೃತಿಗೆ ಎರಡು ಅಥವಾ ಹೆಚ್ಚಿನ ಪ್ರತಿಗಳ ಆಧಾರ ದೊರೆತಾಗ ಅದನ್ನು ವಿಶ್ವಸನೀಯವೆಂದು ಭಾವಿಸಲು ಅಡ್ಡಿಯಿಲ್ಲ. ದಾಸಸಾಹಿತ್ಯ ಅಥವಾ ವಚನಸಾಹಿತ್ಯ ಸಂಪಾದನೆಯು

ಒಂದು ಸಂಪುಟವನ್ನು ನೂರು ಹಸ್ತಪ್ರತಿಗಳ ಸಹಾಯದಿಂದ ಸಿದ್ಧಪಡಿಸಿದೆ ಎಂದು ಹೇಳಿದರೆ ಪ್ರತಿಯೊಂದು ವಚನ ಅಥವಾ ಕೀರ್ತನೆಗೂ ನೂರುನೂರು ಆಕರಗಳಿವೆ ಯೆಂದರ್ಥವಲ್ಲ. ಒಂದು ವಚನಕ್ಕೆ ೧ ರಿಂದ ೧೮–೨೦ ಅಥವಾ ಒಂದು ಕೀರ್ತನೆಗೆ ೧ ರಿಂದ ೧೬–೧೮ ಆಕರಗಳಿರುತ್ತವೆ. ಅಂದರೆ ಇಡೀ ಸಂಪುಟದಲ್ಲಿರುವ ಎಲ್ಲ ಕೃತಿಗಳಿಗೂ ಸೇರಿ ನೂರು ಹಸ್ತಪ್ರತಿಗಳನ್ನು ಬಳಸಿಕೊಳ್ಳಲಾಗಿದೆಯೆಂದು ಅರ್ಥ. ಈ ನಿಟ್ಟಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮೂಲಕ ಡಾ. ಜಿ. ವರದರಾಜರಾಯರು ಗಣನೀಯ ಕೆಲಸ ಮಾಡಿದ್ದಾರೆ.

ವಚನ ಹಾಗೂ ಕೀರ್ತನೆಗಳ ಸಂಪಾದನೆಯಲ್ಲಿ ಕೆಲವು ಸಮಾನ ಸಮಸ್ಯೆಗಳು ಎದುರಾಗುತ್ತವೆ. 'ಅಂಕಿತಪಲ್ಲಟ' ಅಂತಹ ಮಹತ್ತರ ಸಮಸ್ಯೆಗಳಲ್ಲೊಂದು. ವಚನಗಳ ಲ್ಲಾಗಲೀ ಕೀರ್ತನೆಗಳಲ್ಲಾಗಲೀ ಅವುಗಳ ವಸ್ತು, ಭಾಷೆ, ವಿಷಯಗಳು ಸಾಮಾನ್ಯವಾಗಿ ಒಂದೇ ರೀತಿಯಿರುವುದರಿಂದ ವಿಂಗಡಣೆಯೂ ಕಷ್ಟ. ಆಯಾ ಕೃತಿಕಾರನ ದೇಶ ಭಾಷೆ ಶೈಲಿ ಮನೋಧರ್ಮ ವ್ಯಕ್ತಿತ್ವ ಸಿದ್ಧಾಂತ ದರ್ಶನಾದಿಗಳೇ ಕೊನೆಯ ನಿರ್ಣಾಯಕ ಅಂಶಗಳಾಗುತ್ತವೆಂಬುದರಲ್ಲಿ ಸಂಶಯವಿಲ್ಲ. ವಚನಗಳಲ್ಲಿ ಪರಸ್ಪರ ಅಂಕಿತಪಲ್ಲಟ ಗಳಾದರೆ ಷಟ್‌ಸ್ಥಲ ವಚನಗಳ ಕಟ್ಟಿನಲ್ಲಿ ಆ ವಚನ ಯಾವ ಅಂಕಿತದಲ್ಲಿ ಬಂದಿದೆ ? ವಿಜಾತೀಯ ಸಂಕಲನ ಗ್ರಂಥಗಳಿಂದ ಏನಾದರೂ ಆಧಾರ ದೊರೆಯುತ್ತದೆಯೇ ? ಅನ್ಯಗ್ರಂಥಗಳಿಂದ ಏನಾದರೂ ಸಹಾಯವಾಗಬಹುದೇ ? ಇತ್ಯಾದಿ ವಿಚಾರಗಳನ್ನು ಗಮನಿಸಬೇಕಾಗುತ್ತದೆ. ಉದಾಗೆ : ಸಜಾತೀಯವಾದ ಎರಡು ಷಟ್‌ಸ್ಥಲ ವಚನಗಳ ಕಟ್ಟುಗಳಲ್ಲಿ ಒಂದು ವಚನ ಎರಡೂ ಅಂಕಿತಗಳಲ್ಲಿ ದೊರೆತಲ್ಲಿ, ವಿಜಾತೀಯವಾದ ಏಕೋತ್ತರ ಶತಸ್ಥಲ ವಚನಗಳ ಕಟ್ಟಿನಲ್ಲಿ ಅದೇ ವಚನ ಯಾರ ಹೆಸರಿನಲ್ಲಿ ಬರುತ್ತ ದೆಂಬುದನ್ನು ಗಮನಿಸಿ, ಅನ್ಯಗ್ರಂಥವಾದ ಶೂನ್ಯ ಸಂಪಾದನೆಯಲ್ಲಿ ಸಹಾಯ ದೊರೆಯುತ್ತದೇನೋ ನೋಡಬಹುದು. ದಾಸರ ಕೀರ್ತನೆಗಳಲ್ಲಿ ಅಂಕಿತಪಲ್ಲಟ ಗಳಾದಾಗ ನಿರ್ಣಯ ಇನ್ನೂ ಕಷ್ಟ. ಆಕರ ಬಾಹುಳ್ಯ, ಹಸ್ತಪ್ರತಿಯ ಪರಿಶುದ್ಧತೆಯ ಪ್ರಮಾಣ, ಪ್ರಾಸಸ್ಥಾನದಲ್ಲಿ ಅಂಕಿತ ಬಂದಿದೆಯೇ ಹೇಗೆಂಬ ಪರಿಶೀಲನೆ, ಆಯಾ ದಾಸರ ವ್ಯಕ್ತಿತ್ವ, ಮನೋಧರ್ಮ, ಶೈಲಿಗಳ ಹಿನ್ನೆಲೆಯಲ್ಲಿ ಕೀರ್ತನೆಯ ಸೂಕ್ಷ್ಮ ಪರಿಶೀಲನೆ, ಇವುಗಳನ್ನಾಧರಿಸಿ ಅಂಕಿತ ನಿರ್ಣಯ ಮಾಡಬೇಕಾಗುತ್ತದೆ. ಅಂಕಿತ ಪ್ರಾಸ ಸ್ಥಾನದಲ್ಲಿ ಬಂದಿದ್ದರೆ ಪಲ್ಲಟವಾಗುವುದು ಅಪರೂಪ. ಇಷ್ಟೆಲ್ಲ ಎಚ್ಚರಿಕೆ ವಹಿಸಿದರೂ ತಪ್ಪುಗಳನ್ನೇ ಉಳಿಸುವ ಸಾಧ್ಯತೆಯಿಲ್ಲದಿಲ್ಲ ; ಆದರೆ ಅಂತಹ ಸಂಭವ ಕಡಿಮೆ.

ಎಷ್ಟೋ ವೇಳೆ ವಚನವೊಂದರ ಅಥವಾ ಕೀರ್ತನೆಯೊಂದರ ಪ್ರಾರಂಭ ಒಂದೇ ಆಗಿದ್ದು ಮುಂದಣ ಸಾಲುಗಳು ಅಥವಾ ನುಡಿಗಳು ಬೇರೆಬೇರೆಯಾಗಿರುವುದುಂಟು. ಅಥವಾ ಪ್ರಾರಂಭ ಬೇರೆ ಬೇರೆಯಾಗಿದ್ದು ಮುಂದಣ ಸಾಲುಗಳು, ನುಡಿಗಳು ಒಂದೇ ಆಗಿರುವುದೂ ಉಂಟು. ಉದಾ : 'ಕಲ್ಪಿತದಿಂದ...' ಎಂದು ಪ್ರಾರಂಭವಾಗುವ

'ಭಕುತಿಯಿಂದ...ಎಂದು ಪ್ರಾರಂಭವಾಗುವ ಎರಡು ವಚನಗಳೂ ಒಂದೇ.[1] 'ಎಲ್ಲರು ಮಾಡುವುದು ಹೊಟ್ಟೆಗಾಗಿ...' ಎನ್ನುವ ಪ್ರಾರಂಭದ ಕೀರ್ತನೆ ಪುರಂದರ ಹಾಗೂ ಕನಕರಿಬ್ಬರ ಅಂಕಿತದಲ್ಲೂ ಇರುವ ಎರಡು ಬೇರೆ ಬೇರೆ ಕೀರ್ತನೆಗಳೇ. ಈ ವ್ಯತ್ಯಾಸಗಳು ತಪ್ಪು ದಾಖಲೆಗಳಿಂದ ಆಗಿರಬಹುದು ; ತಪ್ಪು ಗ್ರಹಿಕೆಯಿಂದಲೇ ಆಗಿರುವ ಸಾಧ್ಯತೆಯೂ ಇದೆ. ಅಥವಾ ಒಂದರ ಅನುಕರಣೆ ಇನ್ನೊಂದಾಗಿರಬಹುದು. ಒಬ್ಬರದೇ ರಚನೆಯಾಗಿದ್ದರಂತೂ ಕೃತಿಯ ಒಂದು ಭಾಗದ ಬಳಿಕೆ ಮತ್ತೊಂದು ಕೃತಿಯಲ್ಲಾಗಿರುವ ಪೇಲವ ಸಾಧ್ಯತೆಯೂ ಇಲ್ಲದಿಲ್ಲ. ವಚನ ಸಾಹಿತ್ಯ ಮತ್ತು ದಾಸಸಾಹಿತ್ಯಗಳ ಸಂಪಾದನೆಯ ಸಂದರ್ಭದಲ್ಲಿ ಮತ್ತೊಂದು ವಿಶೇಷ ಸಮಸ್ಯೆ ಕೂಡ ಎದುರಾಗಿದೆ. ಪರಸ್ಪರ ಹೋಲುವ ವಚನ ಹಾಗೂ ಉಗಾಭೋಗಗಳ ಕರ್ತೃತ್ವ ನಿರ್ಣಯ ಹೇಗೆ ಎನ್ನುವ ಸಮಸ್ಯೆ. ಉಗಾಭೋಗಕ್ಕೆ ಸಂಗೀತಪ್ರಬಂಧವಾದ ಉದ್ಗ್ರಾಹಾಭೋಗ ಮೂಲವೆಂಬ ಮಾತಿದ್ದರೂ ಎಷ್ಟೋ ವಚನ ಮತ್ತು ಉಗಾಭೋಗಗಳ ಅಂಕಿತಗಳನ್ನು ಅಳಿಸಿಬಿಟ್ಟರೆ ಯಾವುದು ಉಗಾಭೋಗ ಯಾವುದು ವಚನ ಎಂದು ಹೇಳಲು ಸಾಧ್ಯವಾಗುವುದಿಲ್ಲ. ಇನ್ನು ಅಂಕಿತ ನಿರ್ಣಯದ ಮಾತಂತೂ ದೂರವೇ ಉಳಿಯುತ್ತದೆ. ಅಂತೆಯೇ ಸಮಸಂಖ್ಯೆಯ ಪ್ರತಿಗಳಲ್ಲಿ ಭಿನ್ನ ಅಂಕಿತಗಳಿಂದ ಒಂದು ಕೃತಿ ದಾಖಲಾಗಿದ್ದು ಅಂಕಿತ ನಿರ್ಧಾರ ಕಷ್ಟವೆನಿಸಿದರೆ ಅಂತಹ ಕೀರ್ತನೆಯನ್ನು 'ಅಂಕಿತ ಸಂದಿಗ್ಧ'ವೆಂದು ನಿರ್ದೇಶಿಸುವುದು ಉತ್ತಮ.

ವಚನ ಹಾಗೂ ಕೀರ್ತನೆಗಳಲ್ಲಿ ಬರುವ ಸ್ಖಾಲಿತ್ಯಗಳ ಸ್ವರೂಪ ಮತ್ತೊಂದು ಸಮಸ್ಯೆ. ಜನಪದ ಕಾವ್ಯಗಳಿಗೆ ಹೋಲಿಸಿದಾಗ ವಚನ ಕೀರ್ತನೆಗಳು ಗಾತ್ರದಲ್ಲಿ ಚಿಕ್ಕವು. ನಿರ್ದಿಷ್ಟ ಹಾಗೂ ಸೀಮಿತ ಉದ್ದೇಶವುಳ್ಳವು. ಭಕ್ತಿ ತತ್ವಪ್ರತಿಪಾದನೆಯೇ ಅವುಗಳ ಮುಖ್ಯ ಗುರಿ. ಮತ ಧರ್ಮ ಸಂಪ್ರದಾಯ ನಿಷ್ಠರಲ್ಲಿ ಹೆಚ್ಚಾಗಿ ಪ್ರಚಾರ ವಾಗಿರುವಂಥವು. ಆದುದರಿಂದ ಕೃತಿಯನ್ನು ವಿನಾಕಾರಣ ಹಿಗ್ಗಾಮುಗ್ಗಾ ಎಳೆಯುವ ಪ್ರಯತ್ನ ಕಂಡುಬರುವುದಿಲ್ಲ. ಮತ್ತು ಮನೋರಂಜನೆಯ ಉದ್ದೇಶ ಇಲ್ಲಿ ಗೌಣವಾದುದರಿಂದ ಸ್ವಪ್ರತಿಭೆಯಿಂದ ಮೂಲವನ್ನು ಬೆಳೆಸಿ ರಂಜನೀಯವಾಗಿ ಹೇಳಲು ಹೋಗಿಲ್ಲ. ಆ ಮಟ್ಟಿಗೆ ಕೃತಿಗಳ ಪರಿಶುದ್ಧತೆ ಉಳಿದು ಕೃತಿಗಳು ಪ್ರಕ್ಷೇಪ, ಸಂಕ್ಷೇಪ ಗಳಂತಹ ಬದಲಾವಣೆಗಳಿಗೆ ಹೆಚ್ಚು ಪಕ್ಕಾಗಿಲ್ಲ. ಹಾಗೆಂದು ಅದರಿಂದ ಸಂಪೂರ್ಣ ಮುಕ್ತವಾಗಿಯೂ ಇಲ್ಲ. ಶ್ರೀಹರಿಯನ್ನು ಸ್ತುತಿಸುವ, ಅವನ ಗುಣಗಳನ್ನು ಹೊಗಳುವ ಸಂದರ್ಭಗಳಲ್ಲಿ ಲಿಪಿಕಾರನ ಅದಮ್ಯ ಭಕ್ತಿ ಚಪಲತೆಗಳಿಂದ ಮೂಲಪಾಠಕ್ಕೆ ನುಡಿಗಳೋ ಸಾಲುಗಳೋ ಹೆಚ್ಚಾಗಿ ಸೇರುವುದುಂಟು. ಉದಾಹರಣೆಗೆ ವಾದಿರಾಜರ

---

1. ನೋಡಿ : ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರ ವಚನಗಳು. ಸಂ. ಆರ್. ಸಿ. ಹಿರೇಮಠ, ಕರ್ನಾಟಕ ವಿಶ್ವವಿದ್ಯಾಲಯ, ೧೯೬೫, ಧಾರವಾಡ, ವಚನ ೧೬೦ ಮತ್ತು ೭೧೭.

'ಏಕಾದಶಿ ನಿರ್ಣಯ ಅನಲು ಸಮನೆ' ಎಂಬ ಕೃತಿಗೆ ಬಳಸಿರುವ ಐದು ಹಸ್ತಪ್ರತಿಗಳ ಪೈಕಿ ಬೇ. ೪೧ರಲ್ಲಿ ಎರಡು ನುಡಿಗಳು ಹೆಚ್ಚಾಗಿರುವುದನ್ನು ಗಮನಿಸಬಹುದು1.

ಕೆಲವೊಮ್ಮೆ ಕೇಳಿ ಬರೆದುಕೊಳ್ಳುವಾಗಲೋ ನೋಡಿ ಬರೆದುಕೊಳ್ಳುವಾಗಲೋ ಕೆಲವು ಭಾಗಗಳು ಬಿಟ್ಟುಹೋಗಬಹುದು. ಉದಾಹರಣೆಗೆ 'ತ್ರಾಣಿ ಶ್ರೀ ಕೃಷ್ಣವೇಣಿ' ಎನ್ನುವ ಜಗನ್ನಾಥದಾಸರ ಕೀರ್ತನೆಯ ಸಂಪಾದನೆಯಲ್ಲಿ ಬಳಸಿರುವ ಐದು ಪ್ರತಿಗಳ ಪೈಕಿ ಸ. ೨೧ರಲ್ಲಿ ಐದನೆಯ ನುಡಿಯೇ ಬಿಟ್ಟುಹೋಗಿದೆ.2 ಅಂತೆಯೇ ಕೃತಿಯ ಪದಗಳು ಸಾಲುಗಳು ಅದಲುಬದಲಾಗಿರುವ ಉದಾಹರಣೆಗಳೂ ವಿಪುಲವಾಗಿವೆ.3 ಈ ಎಲ್ಲ ರೀತಿಯ ಸ್ಖಾಲಿತ್ಯಗಳೂ ವಚನಗಳ ಸಂಪಾದನೆಯಲ್ಲೂ ಹಾಸುಹೊಕ್ಕಾಗಿವೆ.

ವಚನಗಳು ಮತ್ತು ಕೀರ್ತನೆಗಳು ಗಾತ್ರದಲ್ಲಿ ಚಿಕ್ಕವಾಗಿರುವುದರಿಂದ ಇಡೀ ಕೃತಿಗೆ ದೊರೆಯುವ ಎಲ್ಲ ಪಾಠವ್ಯತ್ಯಾಸಗಳನ್ನೂ ಕ್ರಮಸಂಖ್ಯೆಯೊಂದಿಗೆ ಅಡಿಟಿಪ್ಪಣಿಯಲ್ಲಿ ತೋರಿಸುವುದು ಸುಲಭ.4 ಅದರ ಸಹಾಯದಿಂದ ಅಲ್ಲಿ ಬಳಸಿರುವ ಯಾವ ಹಸ್ತಪ್ರತಿಯ ಪಾಠವನ್ನಾದರೂ ಆಮೂಲಾಗ್ರವಾಗಿ ಗ್ರಹಿಸುವ ಸಾಧ್ಯತೆಯಿದೆ. ಅದಕ್ಕಾಗಿ ಸಂಪಾದಕರನ್ನಾಶ್ರಯಿಸುವ ಅಥವಾ ಪುನಃ ಆಯಾ ಹಸ್ತಪ್ರತಿಗಳನ್ನೇ ತೆಗೆದು ನೋಡುವ ಅಗತ್ಯವಿಲ್ಲ. ಮತ್ತು ಸಂಪಾದಕರ ಅಲ್ಲಿಯ ಪಾಠಸ್ವೀಕೃತಿಯೇ ಅಂತಿಮವಾದದ್ದು ಹಾಗೂ ಪರಿಶುದ್ಧವಾದದ್ದು ಎನ್ನುವ ಧೋರಣೆಯೂ ಬೇಕಿಲ್ಲ. ಯಾರು ಬೇಕಾದರೂ ಸ್ವೀಕೃತ ಪಾಠವನ್ನು ಉಳಿದ ಪಾಠಗಳ ಸಹಾಯದಿಂದ ತಿದ್ದುವ, ತ್ಯಜಿಸಿ ಬೇರೆ ಪಾಠವನ್ನೇ ಸ್ವೀಕರಿಸುವ ಸ್ವಾತಂತ್ರ್ಯವಿರುವುದರೊಂದಿಗೆ ಅದಕ್ಕೆ ಬೇಕಾದ ಸಿದ್ಧಸಾಮಗ್ರಿ ಅಲ್ಲಿಯೇ ದೊರೆಯುತ್ತದೆ. ಈ ದೃಷ್ಟಿಯಿಂದ ಅಡಿಟಿಪ್ಪಣಿಯಲ್ಲಿ ಉಪಲಬ್ಧ ಪಾಠಗಳೆಲ್ಲವನ್ನೂ ಕೊಡುವುದು ಸ್ವಾಗತಾರ್ಹ. ಖರ್ಚಿನ ಬಾಬ್ತು ಸ್ವಲ್ಪ ಹೆಚ್ಚಾದರೂ ಉಪಯುಕ್ತತೆಯ ದೃಷ್ಟಿಯಿಂದ ಅತ್ಯಗತ್ಯ.

ಪಾಠಾಂತರಗಳನ್ನು ಸೂಚಿಸಲು ಬಳಸುವ ಸಂಕೇತಗಳನ್ನು ಕುರಿತು ಒಂದೆರಡು ಮಾತುಗಳನ್ನು ಹೇಳುವುದು ಸೂಕ್ತ. ವಚನಗಳ ಹಾಗೂ ಕೀರ್ತನೆಗಳ ಸಂಪಾದನೆಯಲ್ಲಿ ಹಸ್ತಪ್ರತಿಗಳ ಬಾಹುಳ್ಯ, ಅಸಂಖ್ಯಾತ ಸ್ಖಾಲಿತ್ಯಗಳು, ಶಬ್ದ ನುಡಿ ಸಾಲುಗಳ ಪಲ್ಲಟಗಳು, ಪ್ರಕ್ಷೇಪಗಳು, ಸಂಕ್ಷೇಪಗಳು ಎಲ್ಲವನ್ನೂ ವಿವರವಾಗಿ ಹಾಗೂ

---

1. ಶ್ರೀ ವಾದಿರಾಜರ ಕೃತಿಗಳು ಪು. ೯೬ ಸಂ. ಡಾ|| ಟಿ. ಎನ್. ನಾಗರತ್ನ, ಕ. ಅ. ಸಂಸ್ಥೆ, ಮೈಸೂರು.
2. ಅದೇ ಪು. ೮೫–೮೬.
3. ಶ್ರೀ ವಾದಿರಾಜರ ದೀರ್ಘಕೃತಿಗಳು, ಪು. ೧೨, ೬೬–೬೭, ೮೨ ಇತ್ಯಾದಿ. ಸಂ. ಡಾ. ಟಿ. ಎನ್. ನಾಗರತ್ನ, ಕ. ಅ. ಸಂಸ್ಥೆ, ೧೯೮೭, ಮೈಸೂರು.
4. ನೋಡಿ : ಕ. ಅ. ಸಂಸ್ಥೆಯ ಹರಿದಾಸ ಸಾಹಿತ್ಯ ಮಾಲೆಯ ಪ್ರಕಟಣೆಗಳು.

ನಿಷ್ಕೃಷ್ಟವಾಗಿ ಸೂಚಿಸಲು ಹೆಚ್ಚಿನ ಸಂಖ್ಯೆಗಳಲ್ಲಿ ಸಂಕೇತಗಳನ್ನು ಬಳಸಬೇಕಾಗುತ್ತದೆ. ಕಾವ್ಯದಲ್ಲಿ ಬಳಸುವಂತೆ ಇಲ್ಲಿ ಯಾವುದೇ ಒಂದು ನಿರ್ದಿಷ್ಟ ಸಂಕೇತವನ್ನು ನಿಯತವಾಗಿ ಒಂದೇ ಅರ್ಥದಲ್ಲಿ ಒಂದು ಸಂಪಾದನಾ ಕೃತಿಯುದ್ದಕ್ಕೂ ಬಳಸಲು ಸಾಧ್ಯವಾಗುವುದಿಲ್ಲ. ಕೆಲವೊಮ್ಮೆ ಒಂದು ಕೀರ್ತನೆಯಲ್ಲಿ ಕೂಡ ಹಾಗೆ ಬಳಸಲು ಬರುವುದಿಲ್ಲ. ಕಾರಣ ಪಲ್ಲವಿಯಿಂದ ಹಿಡಿದು ಪ್ರತಿ ಸಾಲು ನುಡಿಗಳಲ್ಲೂ ವ್ಯತ್ಯಾಸಗಳು ಬಂದಾಗ ಒಂದೇ ಸಂಕೇತದಿಂದ ಹೆಚ್ಚು ವ್ಯತ್ಯಾಸಗಳನ್ನು ಸೂಚಿಸಹೊರಟರೆ ಓದುಗರನ್ನು ಗೊಂದಲದಲ್ಲಿ ಕೆಡಹಿದಂತಾಗುತ್ತದೆ. ಆದುದರಿಂದ ಆದಷ್ಟೂ ಸ್ಪಷ್ಟತೆಗೆ ಒತ್ತುಕೊಟ್ಟು ಸಂಕೇತದ ದೃಷ್ಟಿಯಿಂದ ಪ್ರತಿ ಪುಟವನ್ನೂ ಒಂದು ಪುಟ್ಟ ಘಟಕವಾಗಿ ಪರಿಗಣಿಸುವುದು ಮೇಲು. ಅನುಮಾನ, ಗೊಂದಲಗಳಿಗೆಡೆಕೊಡದಂತೆ ಆಯಾ ಪುಟದಲ್ಲಿ ಮೇಲೆ ಕಾಣಿಸುವ ಸಂಕೇತಗಳಿಗೆ ಆಯಾ ಪುಟದ ಅಡಿಟಿಪ್ಪಣಿಗಳಲ್ಲಿ ವಿವರಗಳನ್ನು ಕಾಣಿಸಿದರೆ ಸಂಕೇತ ಬಳಕೆಯ ಉದ್ದೇಶ ಪೂರ್ಣವಾದಂತೆ. ಇವುಗಳೊಂದಿಗೆ ಸಂಪಾದಿತ ಕೃತಿಯ ಉದ್ದಕ್ಕೂ ಒಂದೇ ಅರ್ಥದಲ್ಲಿ ಬಳಸಿರುವ ಕೆಲವು ಸಂಕೇತಗಳನ್ನು ಮುಖ್ಯ ಸಂಕೇತಗಳೆಂದು ಕರೆದು ಪತ್ಯದ ಮೊದಲಲ್ಲೇ ಅವುಗಳಿಗೆ ವಿವರಣೆಯನ್ನೂ ಕೊಡಲಾಗುತ್ತದೆ.[1] ಉದಾ. : ಪ. = ಪಲ್ಲವಿ, ನು. = ನುಡಿ ಇತ್ಯಾದಿ.

ಒಟ್ಟಿನಲ್ಲಿ ತೋಂಡೀಸಾಹಿತ್ಯ ಸಂಪಾದನೆ ಲಿಖಿತ ಸಾಹಿತ್ಯ ಸಂಪಾದನೆಗಿಂತ ಹೆಚ್ಚಿನ ಸಮಸ್ಯೆಗಳನ್ನು ತಂದೊಡ್ಡುತ್ತದ. ಗ್ರಂಥ ಸಂಪಾದನ ಶಾಸ್ತ್ರದ ತತ್ವಗಳನ್ನು ತೋಂಡೀಸಾಹಿತ್ಯಕ್ಕೆ ನೇರವಾಗಿ ಅನ್ವಯಿಸಲು ಇರುವ ತೊಡಕುಗಳನ್ನು ಇದುವರೆಗೂ ವಿವೇಚಿಸಿ ನೋಡಿದೆವು. ಇತರ ಹಸ್ತಪ್ರತಿಗಳಂತೆ ತೋಂಡೀ ಸಾಹಿತ್ಯದ ಹಸ್ತಪ್ರತಿಗಳ ವರ್ಗೀಕರಣ ಮತ್ತು ಪೀಳಿಗೆ ನಿರ್ಣಯಗಳು ಸಾಧ್ಯವಾಗದಿರುವುದು ಅದಕ್ಕೆ ಬಹು ಮುಖ್ಯ ಕಾರಣ. ಶಾಸ್ತ್ರೀಯ ಗ್ರಂಥ ಸಂಪಾದನೆಯ ತತ್ವಗಳನ್ನು ಅನ್ವಯಿಸಲು ಸಾಧ್ಯವಾಗುವಂತೆ ಜನಪದ ಸಾಹಿತ್ಯ, ವಚನ ಸಾಹಿತ್ಯ, ದಾಸಸಾಹಿತ್ಯಗಳು ತಮ್ಮದೇ ಆದ ಪರಿಹಾರಗಳನ್ನು ಕಂಡುಕೊಳ್ಳುವುದು ಅತ್ಯಗತ್ಯ. ಈ ನಿಟ್ಟಿನಲ್ಲಿ ವಚನಸಾಹಿತ್ಯದ ಶಾಸ್ತ್ರೀಯ ಸಂಪಾದನೆಯ ಕಾರ್ಯ ಕರ್ನಾಟಕ ವಿಶ್ವವಿದ್ಯಾಲಯದಲ್ಲೂ, ದಾಸಸಾಹಿತ್ಯದ ಶಾಸ್ತ್ರೀಯ ಸಂಪಾದನೆಯ ಕಾರ್ಯ ಮೈಸೂರು ವಿಶ್ವವಿದ್ಯಾ ನಿಲಯದಲ್ಲೂ ನಡೆಯುತ್ತಿರುವುದು ಗಮನಾರ್ಹ. ಜನಪದ ಸಾಹಿತ್ಯದ ಶಾಸ್ತ್ರೀಯ ಸಂಪಾದನೆಯ ಕಾರ್ಯ ಕೂಡ ಇದೀಗ ಚಿಂತನಪರರನ್ನು ಕೈಬೀಸಿ ಕರೆಯುತ್ತಿದೆ.

---

1. ಹೆಚ್ಚಿನ ವಿವರಗಳಿಗೆ ನೋಡಿ : ಕ. ಅ. ಸಂಸ್ಥೆಯ ಪರಿದಾಸ ಸಾಹಿತ್ಯ ಮಾಲೆಯ ಪ್ರಕಟಣೆಗಳು.

ಕನ್ನಡ ವ್ಯಾಕರಣಗಳ ಮೇಲೆ ಸಂಸ್ಕೃತ ವ್ಯಾಕರಣಗಳ ಪ್ರಭಾವ

ಡಾ|| ಕೆ. ಕೆಂಪೇಗೌಡ

ಆರು ವೇದಾಂಗಗಳಲ್ಲಿ ವ್ಯಾಕರಣವೂ ಒಂದು. ಪ್ರಾಚೀನ ಭಾರತದಲ್ಲಿ ಶಾಸ್ತ್ರಗಳಲೆಲ್ಲಾ ವ್ಯಾಕರಣಶಾಸ್ತ್ರಕ್ಕೆ ಅಗ್ರಸ್ಥಾನ. ಪ್ರಾಚೀನ ಭಾರತದಲ್ಲಿ ಬೇರೆ ಬೇರೆ ಶಾಸ್ತ್ರಗಳ ಅಧ್ಯಯನ ಆರಂಭಿಸುವುದಕ್ಕೆ ಮೊದಲು ವ್ಯಾಕರಣಶಾಸ್ತ್ರವನ್ನು ಅಧ್ಯಯನ ಮಾಡಬೇಕಾಗಿದ್ದಿತು. ಸರ್ವ ವಿದ್ಯೆಗಳಿಗೂ ವ್ಯಾಕರಣವೇ ಮೂಲ ಎಂಬುದು ಅವರ ನಂಬಿಕೆಯಾಗಿದ್ದದ್ದು ಇದಕ್ಕೆ ಮುಖ್ಯ ಕಾರಣ. ವೈದಿಕ ಚಿಂತನೆಗಳ ಜೊತೆ ಜೊತೆಯಲ್ಲಿಯೇ ವ್ಯಾಕರಣವೂ ಬೆಳೆಯುತ್ತಾ ಬಂದ ಕಾರಣದಿಂದಾಗಿಯೇ ವೇದಗಳಲ್ಲಿ ಅನೇಕ ವ್ಯಾಕರಣ ವಿಚಾರಗಳು ಕಾಣಿಸಿಕೊಳ್ಳಲು ಕಾರಣವಾಗಿದೆ.

ಒಂದು ಭಾಷೆಯ ವರ್ಣ, ಪದ, ವಾಕ್ಯಗಳನ್ನು ವಿಶ್ಲೇಷಿಸಿ ವಿವರಿಸಿಕೊಳ್ಳುವುದು ಸಾಮಾನ್ಯ ಅರ್ಥದಲ್ಲಿ ವ್ಯಾಕರಣ ಎನಿಸಿಕೊಳ್ಳುತ್ತದೆ. ಭಾಷೆಯಲ್ಲಿ ಪ್ರತಿಯೊಂದುಪದವೂ ವಾಕ್ಯವೂ ತನ್ನದೇ ಆದ ರೀತಿಯಲ್ಲಿ ರಚಿತವಾಗಿರುತ್ತದೆ. ಇಂತಹ ಪದ ಮತ್ತು ವಾಕ್ಯ ರಚನೆಗಳ ರೀತಿನೀತಿಗಳನ್ನು ವಿವರಿಸಿಕೊಳ್ಳುವುದು ವ್ಯಾಕರಣವೆನಿಸಿಕೊಳ್ಳುತ್ತದೆ.

ಭಾಷೆಯಲ್ಲಿ ವರ್ಣಗಳಿಂದ ಪದಗಳು, ಪದಗಳಿಂದ ವಾಕ್ಯಗಳು ನಿರ್ಮಾಣವಾಗಿರುತ್ತವೆ. ಈ ನಿರ್ಮಾಣದ ಕ್ರಮ ಭಾಷೆಯಿಂದ ಭಾಷೆಗೆ ಬೇರೆ ಬೇರೆಯಾಗುತ್ತದೆ. ಈ ಪದ ಮತ್ತು ವಾಕ್ಯಗಳ ನಿರ್ಮಾಣ ಕ್ರಮವನ್ನು ವಿಶ್ಲೇಷಿಸಿ ವಿವರಿಸುವುದು ವ್ಯಾಕರಣಶಾಸ್ತ್ರದ ಮುಖ್ಯ ಉದ್ದೇಶ.

ಸಂಸ್ಕೃತದಲ್ಲಿ ವ್ಯಾಕರಣ, ಶಬ್ದಾನುಶಾಸನ, ಶಬ್ದಶಾಸ್ತ್ರ ಇವು ಸಮಾನಾರ್ಥಕ ಶಬ್ದಗಳು. ಪ್ರಕೃತಿ ಮತ್ತು ಪ್ರತ್ಯಯಗಳನ್ನು ವಿಭಜಿಸಿಕೊಳ್ಳುವುದು ವ್ಯಾಕೃತಿ ಎನಿಸಿಕೊಂಡರೆ, ಶಬ್ದಗಳ ವೈಜ್ಞಾನಿಕ ಅಧ್ಯಯನ ಶಬ್ದಶಾಸ್ತ್ರವೆನಿಸಿಕೊಳ್ಳುತ್ತದೆ. ಇದೇ ರೀತಿ ಶಬ್ದಗಳ ಅನುಶಾಸನವನ್ನು ಶಬ್ದಾನುಶಾಸನ ಎನ್ನುವರು.

ವೇದೋಪನಿಷತ್ತುಗಳಲ್ಲಿ ವ್ಯಾಕರಣಕ್ಕೆ ಸಂಬಂಧಿಸಿದ ಅನೇಕ ವಿಚಾರಗಳು,

ಪಾರಿಭಾಷಿಕ ಶಬ್ದಗಳು ದೊರೆಯುತ್ತವೆ. ಸಂಸ್ಕೃತವ್ಯಾಕರಣಸಾಹಿತ್ಯದ ಇತಿಹಾಸದಲ್ಲಿ ಪಾಣಿನಿಯ ವ್ಯಾಕರಣ ಮಹತ್ವಪೂರ್ಣವಾದದ್ದು. ವ್ಯಾಕರಣಶಾಸ್ತ್ರದ ಕ್ಷೇತ್ರದಲ್ಲಿ ಇದಕ್ಕೆ ಹೆಚ್ಚು ಗೌರವಪೂರ್ವಕವಾದ ಸ್ಥಾನವಿದೆ. ಜಗತ್ತಿನ ಯಾವ ಭಾಷೆಯಲ್ಲಿಯೂ ವ್ಯಾಕರಣ ಎಂಬುದರ ಕಲ್ಪನೆಯೇ ಇರದಿದ್ದ ಕಾಲದಲ್ಲಿ ಈ ವ್ಯಾಕರಣ ಹೊರಬಂದಿದ್ದು ಇದಕ್ಕೆ ಮುಖ್ಯ ಕಾರಣ. ಪಾಣಿನಿಯ ವ್ಯಾಕರಣಕ್ಕಿಂತಲೂ ಹಿಂದೆಯೇ ಕೆಲವು ವ್ಯಾಕರಣಗಳು ರಚಿತವಾಗಿದ್ದವು ಎಂದು ಕೆಲವರ ಅಭಿಪ್ರಾಯ. ಪಾಣಿನಿಯೇ ಕೆಲವು ವೈಯಾಕರಣರನ್ನು ಹೆಸರಿಸಿದ್ದಾನೆ. ಪಾಣಿನಿಗಿಂತಲೂ ಹಿಂದೆ ಕೆಲವು ವ್ಯಾಕರಣಗಳು ರಚಿತವಾಗಿದ್ದಿರಲೇಬೇಕು. ಇಲ್ಲದಿದ್ದರೆ ಪಾಣಿನಿ ಇಷ್ಟೊಂದು ವೈಜ್ಞಾನಿಕವಾದ ವ್ಯಾಕರಣವನ್ನು ರಚಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಪ್ರಾತಿಶಾಖ್ಯ ಮತ್ತು ಶಿಕ್ಷಾಗ್ರಂಥಗಳಲ್ಲಿಯೂ ಕೂಡ ವ್ಯಾಕರಣಕ್ಕೆ ಸಂಬಂಧಿಸಿದ ಅನೇಕ ವಿಚಾರಗಳು ದೊರೆಯುತ್ತವೆ. ಪ್ರಾತಿಶಾಖ್ಯ ಗ್ರಂಥಗಳು ಪಾಣಿನಿಗಿಂತಲೂ ಹಿಂದೆಯೇ ಹುಟ್ಟಿಕೊಂಡಂತಹವುಗಳಾಗಿವೆ. ಇಲ್ಲಿಯವರೆಗೆ ಆರು ಪ್ರಮುಖ ಪ್ರಾತಿಶಾಖ್ಯ ಗ್ರಂಥಗಳು ಮಾತ್ರ ದೊರೆತಿವೆ. ಇವುಗಳಲ್ಲಿ ಪದಪಾಠ, ಉಚ್ಚಾರಣೆ, ಸ್ವರ, ಸಂಧಿ, ಹ್ರಸ್ವ ದೀರ್ಘ ಸ್ವರಗಳು ಮುಂತಾದುವುಗಳ ವಿವರಣೆಗಳು ದೊರೆಯುತ್ತವೆ. ಪ್ರಾತಿಶಾಖ್ಯ ಗ್ರಂಥಗಳು ನೇರವಾಗಿ ವ್ಯಾಕರಣ ಗ್ರಂಥಗಳಲ್ಲ. ಆದರೂ ವ್ಯಾಕರಣಕ್ಕೆ ಸಂಬಂಧಿಸಿದ ಅನೇಕ ವಿಚಾರಗಳು ಇವುಗಳಲ್ಲಿ ನಿರೂಪಿತವಾಗಿವೆ.

ಪಾಣಿನಿ ತನ್ನ ವ್ಯಾಕರಣದಲ್ಲಿ ಹನ್ನೆರಡು ಜನ ವೈಯಾಕರಣರ ಹೆಸರನ್ನು ಹೇಳಿದ್ದಾನೆ. ಆದರೆ ಅವರ ಯಾವ ಗ್ರಂಥಗಳೂ ದೊರೆತಿಲ್ಲ. ಇವುಗಳಲ್ಲಿ ಇಂದ್ರನ ಐಂದ್ರ ವ್ಯಾಕರಣ ಬಹಳ ಮಹತ್ವಪೂರ್ಣವಾದದ್ದು. ಐಂದ್ರ ವ್ಯಾಕರಣದ ಪ್ರಭಾವ ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ ಕಂಡುಬರುತ್ತದೆ, ಆದರೂ ಪಾಣಿನಿ ಪೂರ್ಣವಾಗಿ ಐಂದ್ರ ವ್ಯಾಕರಣವನ್ನು ಅನುಕರಿಸಿಲ್ಲ.

ಶಿಕ್ಷಾಗ್ರಂಥಗಳು ಪ್ರಾತಿಶಾಖ್ಯ ಗ್ರಂಥಗಳಿಗಿಂತಲೂ ಹಿಂದೆಯೇ ರಚಿತವಾಗಿರಬೇಕು. ವರ್ಣಗಳ ಉಚ್ಚಾರ ಇತ್ಯಾದಿಗಳಿಗೆ ಸಂಬಂಧಿಸಿದ ವಿಚಾರಗಳು ಶಿಕ್ಷಾಗ್ರಂಥಗಳಲ್ಲಿ ದೊರೆಯುತ್ತವೆ. ಪಾಣಿನಿಗಿಂತಲೂ ಹಿಂದಿನವನೆಂದು ಹೇಳಲಾಗುತ್ತಿರುವ ಯಾಸ್ಕನು ತನ್ನ ನಿರುಕ್ತದಲ್ಲಿ ಕೆಲವು ವೈಯಾಕರಣರ ಹೆಸರುಗಳನ್ನು ಪಟ್ಟಿಮಾಡಿದ್ದಾನೆ. ಈ ಎಲ್ಲ ವಿಚಾರಗಳನ್ನು ಗಮನಿಸಿದರೆ ಪಾಣಿನಿಗಿಂತಲೂ ಹಿಂದೆ ಕೆಲವು ವ್ಯಾಕರಣ ಸಂಪ್ರದಾಯಗಳು ಇದ್ದಿರಬೇಕೆಂದು ಇದರಿಂದ ಊಹಿಸಲು ಅವಕಾಶಗಳಿವೆ. ಆದರೆ ಆ ಕಾಲದ ಯಾವ ವ್ಯಾಕರಣಗಳೂ ದೊರೆತಿಲ್ಲ.

ವ್ಯಾಕರಣ ಕ್ಷೇತ್ರದಲ್ಲಿ ಪಾಣಿನಿ ವ್ಯಾಕರಣ ಅತ್ಯಪೂರ್ವವಾದ ಕೃತಿ. ಪಾಣಿನಿಯ ವ್ಯಾಕರಣದಲ್ಲಿ ಒಟ್ಟು ಎಂಟು ಅಧ್ಯಾಯಗಳಿವೆ. ಆದ್ದರಿಂದಲೇ ಇದಕ್ಕೆ ಅಷ್ಟಾಧ್ಯಾಯಿ ಎಂಬ ಹೆಸರು ಬರಲು ಕಾರಣವಿರಬೇಕು. ಇದರ ಪ್ರತಿ ಅಧ್ಯಾಯದಲ್ಲಿಯೂ ನಾಲ್ಕು

ಪಾದಗಳಿವೆ. ಆ ಎಂಟು ಅಧ್ಯಾಯಗಳನ್ನು ಎರಡು ಭಾಗಗಳನ್ನಾಗಿ ವರ್ಗೀಕರಿಸಿ ಕೊಳ್ಳಲಾಗಿದೆ. ಇದರ ಎರಡನೆಯ ಅಧ್ಯಾಯದಲ್ಲಿ ಧ್ವನಿಶಾಸ್ತ್ರ ಮತ್ತು ಶಬ್ದಶಾಸ್ತ್ರಕ್ಕೆ ಸಂಬಂಧಿಸಿದ ವಿಚಾರಗಳನ್ನು ವಿವರಿಸಲಾಗಿದೆ. ಅಷ್ಟಾಧ್ಯಾಯಿ ಸೂತ್ರದ ಶೈಲಿಯಲ್ಲಿದೆ. ಇದರಲ್ಲಿ ಪಾಣಿನಿ ಸುವ್ಯವಸ್ಥಿತವಾದ ಹಾಗೂ ಹೆಚ್ಚು ರೂಢಿಯಲ್ಲಿದ್ದ ಬುದ್ಧಿಪೂರ್ವಕ ವಾದ ಶೈಲಿಯನ್ನು ಅನುಸರಿಸಿದ್ದಾನೆ. ಸೂತ್ರ ಶೈಲಿಯನ್ನು ಅನುಸರಿಸದಿದ್ದರೆ ಸಂಪೂರ್ಣ ವ್ಯಾಕರಣವನ್ನು ಇಷ್ಟೊಂದು ಸಂಕ್ಷಿಪ್ತವಾಗಿ ಹೇಳಲು ಸಾಧ್ಯವಾಗುತ್ತಿರಲಿಲ್ಲ. ಅಷ್ಟಾಧ್ಯಾಯಿಯಲ್ಲಿ ಸಾಹಿತ್ಯಿಕ ಸಂಸ್ಕೃತವನ್ನು ಮಾತ್ರವಲ್ಲದೆ ವೈದಿಕ ಸಂಸ್ಕೃತವನ್ನು ಗಮನಿಸಲಾಗಿದೆ. ಇದರಲ್ಲಿ ನಿರೂಪಿತವಾಗಿರುವ ಸೂತ್ರಗಳು ಮುಂದಿನ ವೈಯಾಕರಣರಿಗೆ ಮಾರ್ಗದರ್ಶಕವಾದವು. **ಕಾತ್ಯಾಯನನು** ಅಷ್ಟಾಧ್ಯಾಯಿಯ ಸೂತ್ರಗಳನ್ನು ಪೂರ್ಣವಾಗಿ ಪರಿಶೀಲಿಸಿ ವಿಮರ್ಶಾತ್ಮಕ ಹಾಗೂ ವಿವರಣಾತ್ಮಕ ಟಿಪ್ಪಣಿಗಳನ್ನು ಬರೆದನು. ಈ ಟಿಪ್ಪಣಿಯೇ ವಾರ್ತಿಕ ಎಂಬ ಹೆಸರು ಪಡೆಯಿತು. ವಾರ್ತಿಕೆಗಳಲ್ಲಿ ಕೆಲವು ಪದ್ಯರೂಪದಲ್ಲಿದ್ದರೆ ಮತ್ತೆ ಕೆಲವು ಗದ್ಯರೂಪದಲ್ಲಿವೆ. ಅಚ್ ಗೆ ಸ್ವರ, ಹಲ್ ಗೆ ವ್ಯಂಜನ, ಅಕ್ ಗೆ ಹ್ರಸ್ವಾಕ್ಷರ ಎಂಬ ಅರ್ಥವುಳ್ಳ ಪಾರಿಭಾಷಿಕ ಶಬ್ದಗಳು ವಾರ್ತಿಕೆ ಗಳಲ್ಲಿ ದೊರೆಯುತ್ತವೆ. ಕಾತ್ಯಾಯನ ಪಾಣಿನಿಯ ವ್ಯಾಕರಣದ ಸೂತ್ರಗಳಿಗೆ ವಾರ್ತಿಕೆಗಳನ್ನು ಹೇಳಿದನೇ ವಿನಾ ಅವನು ವ್ಯಾಕರಣವನ್ನು ರಚಿಸಲಿಲ್ಲ.

ಪತಂಜಲಿಯು ಪಾಣಿನಿಯ ಸೂತ್ರಗಳಿಗೆ ಭಾಷ್ಯವನ್ನು ರಚಿಸಿದನು. ಕಾತ್ಯಾಯ ನನು ತನ್ನ ವಾರ್ತಿಕೆಯಲ್ಲಿ ಹೇಳದೆ ಬಿಟ್ಟ ಎಷ್ಟೋ ವಿಚಾರಗಳನ್ನು ಪತಂಜಲಿ ತನ್ನ ಮಹಾಭಾಷ್ಯದಲ್ಲಿ ಹೇಳಿದ್ದಾನೆ. ಪತಂಜಲಿಯ ಮಹಾಭಾಷ್ಯದಲ್ಲಿಯೂ ಪಾಣಿನಿಯ ಅಷ್ಟಾಧ್ಯಾಯಿಯಂತೆಯೇ ಎಂಟು ಅಧ್ಯಾಯಗಳಿವೆ. ಪ್ರತಿ ಅಧ್ಯಾಯದಲ್ಲಿಯೂ ನಾಲ್ಕು ಪಾದಗಳಿವೆ. ಮಹಾಭಾಷ್ಯ ಅಷ್ಟಾಧಾಯಿಯ ಸೂಕ್ಷ್ಮ ಅಧ್ಯಯನವಾಗಿ ತೋರಿಬರುತ್ತದೆ. ಪಾಣಿನಿಯ ಕೆಲವು ಸೂತ್ರಗಳನ್ನು ಪತಂಜಲಿ ಮಹಾಭಾಷ್ಯದಲ್ಲಿ ಮಾರ್ಪಾಡು ಮಾಡಿದ್ದಾನೆ. ಪತಂಜಲಿ ಒಂದು ಹೊಸ ವ್ಯಾಕರಣ ಸಂಪ್ರದಾಯವನ್ನು ನಿರ್ಮಿಸಲು ಹೊರಟವನಂತೆ ತೋರಿಬಂದರೂ ಅವನು ಹೊಸದೇನನ್ನೂ ಮಾಡಲಿಲ್ಲ. ಮಹಾಭಾಷ್ಯ ಪಾಣಿನಿಯ ಅಷ್ಟಾಧ್ಯಾಯಿಯ ವಿಮರ್ಶಾತ್ಮಕ ಹಾಗೂ ವಿವರಣಾತ್ಮಕ ಅಧ್ಯಯನವಾಗಿ ತೋರಿ ಬರುತ್ತದೆ. ಸಂಸ್ಕೃತ ವ್ಯಾಕರಣ ಕ್ಷೇತ್ರದಲ್ಲಿ ಪಾಣಿನಿ, ಪತಂಜಲಿ, ಕಾತ್ಯಾಯನರು ಮುನಿತ್ರಯರೆಂದು ಹೆಸರುಗಳಿಸಿಕೊಂಡಿದ್ದಾರೆ. ಕಾತ್ಯಾಯನನಂತೆಯೇ ಪತಂಜಲಿಯೂ ಹೊಸ ವ್ಯಾಕರಣವನ್ನೇನನ್ನೂ ಬರೆಯಲಿಲ್ಲ.

ಮಹಾಭಾಷ್ಯದ ಅನಂತರ ಅಷ್ಟಾಧ್ಯಾಯಿಯನ್ನು ಕುರಿತ ಅನೇಕ ಟೀಕಾ ಟಿಪ್ಪಣಿಗಳು, ವ್ಯಾಖ್ಯಾನಗಳು ಹೊರಬಂದವು. ಅದೇ ರೀತಿ ಮಹಾಭಾಷ್ಯವನ್ನು ಕುರಿತ ಅನೇಕ ಟೀಕಾಟಿಪ್ಪಣಿಗಳು ವ್ಯಾಖ್ಯಾನಗಳು ಹೊರಬಂದವು. ಅವುಗಳಲ್ಲಿ ಅಷ್ಟಾಧ್ಯಾಯಿಯನ್ನು ಕುರಿತು ಜಯಾದಿತ್ಯ ಮತ್ತು ವಾಮನರ ಕಾಶಿಕಾವೃತ್ತಿ, ಜಿನೇಂದ್ರ

ಬುದ್ಧಿಯ ಕಾಶಿಕಾ ನ್ಯಾಸ ಅಥವಾ ಕಾಶಿಕಾ ವಿವರಣ ಪಂಚಿಕಾ, ಹರದತ್ತನ ಪದ ಮಂಜರಿ, ಪುರುಷೋತ್ತಮ ದೇವನ ಭಾಷಾವೃತ್ತಿ ಮುಂತಾದುವು ಮುಖ್ಯವಾಗಿದ್ದರೆ, ಮಹಾ ಭಾಷ್ಯವನ್ನು ಕುರಿತ ಭರ್ತೃಹರಿಯ ಮಹಾಭಾಷ್ಯ ದೀಪಿಕೆ, ವಾಕ್ಯ ಪದೀಯ,ಕೈಯಟನ ಪ್ರದೀಪ, ಭಟ್ಟೋಜಿ ದೀಕ್ಷಿತನ ಶಬ್ದಕೌಸ್ತುಭ ಮುಂತಾದವು ಮುಖ್ಯವಾಗಿವೆ.

ರೂಪಸಿದ್ಧಿಗಳನ್ನು ಗಮನದಲ್ಲಿರಿಸಿಕೊಂಡು ರಚಿತವಾದ ಗ್ರಂಥಗಳನ್ನು ಪ್ರಕ್ರಿಯಾ ಗ್ರಂಥಗಳು ಎನ್ನುವರು. ಅಷ್ಟಾಧ್ಯಾಯಿಯಲ್ಲಿ ಕಂಡುಬರುವ ವ್ಯಾಕರಣ ತತ್ವಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುವ ಗ್ರಂಥಗಳೇ ಈ ಪ್ರಕ್ರಿಯಾ ಗ್ರಂಥಗಳು. ರೂಪಾವತಾರ, ರೂಪಮಾಲೆ ಎಂಬ ಗ್ರಂಥಗಳು ಈ ದೃಷ್ಟಿಯಿಂದಲೇ ರಚಿತವಾದ ಮುಖ್ಯ ಪ್ರಕ್ರಿಯಾ ಗ್ರಂಥಗಳಾಗಿವೆ. ರೂಪಸಿದ್ಧಿಗೆ ಸಂಬಂಧಿಸಿದ ವಿಚಾರಗಳು ಅಷ್ಟಾಧ್ಯಾಯಿಯಲ್ಲಾಗಲಿ ಮಹಾಭಾಷ್ಯದಲ್ಲಿಯಾಗಲಿ ಕಾಣಲು ಬರುವುದಿಲ್ಲ. ಅಷ್ಟಾಧ್ಯಾಯಿಯ ಮೌಲಿಕತತ್ವಗಳ ಆಧಾರದ ಮೇಲೆ ರೂಪಸಿದ್ಧಿ ಪ್ರಕ್ರಿಯೆಗಳು ಹುಟ್ಟಿಕೊಂಡವು. ಅಷ್ಟಾಧ್ಯಾಯಿಯ ಅಧ್ಯಯನ ಕಾಲಕ್ರಮೇಣ ಕ್ಲಿಷ್ಟ ವಾಗತೊಡಗಿದುದು ಇಂತಹ ಪ್ರಕ್ರಿಯಾಗ್ರಂಥಗಳ ರಚನೆಗೆ ಕಾರಣವಾಯಿತು. ಅಷ್ಟಾಧ್ಯಾಯಿಯನ್ನು ಸರಳಗೊಳಿಸುವುದು, ಸುಲಭಗೊಳಿಸುವುದು, ಸಂಕ್ಷಿಪ್ತ ಗೊಳಿಸುವುದು ಇಂತಹ ರೂಪಾಂತರ ಮತ್ತು ರೂಪಮಾಲೆಗಳ ಮುಖ್ಯ ಉದ್ದೇಶವಾಗಿ ತೋರಿಬಂದಿತು. ಬೌದ್ಧಸನ್ಯಾಸಿ ಧರ್ಮಕೀರ್ತಿ ಎಂಬಾತನು ರೂಪಾವತಾರ ಎಂಬ ಗ್ರಂಥವನ್ನು, ವಿಮಲಸರಸ್ವತಿ ರೂಪಮಾಲಾ ಎಂಬ ಗ್ರಂಥವನ್ನು ಈ ದೃಷ್ಟಿಯಿಂದಲೇ ರಚಿಸಿದರು. ರೂಪಾವತಾರದಲ್ಲಿ ವ್ಯಾಕರಣ ವಿಚಾರಗಳನ್ನು ಕಾತಂತ್ರ ವ್ಯಾಕರಣದ ತಳಹದಿಯ ಮೇಲೆ ವಿವರಿಸಿಕೊಳ್ಳಲು ಪ್ರಯತ್ನ ಮಾಡಲಾಗಿದೆ. ಈ ರೂಪಾವತಾರ ಎಂಬ ಗ್ರಂಥಕ್ಕೆ ತನ್ನದೇ ಆದ ಸ್ಥಾನವಿದೆ.

ವಿಮಲಸರಸ್ವತಿಯು ಧರ್ಮಕೀರ್ತಿಯ ರೂಪಾವತಾರದ ಮಾದರಿಯಲ್ಲಿ ರೂಪಮಾಲಾ ಎಂಬ ಗ್ರಂಥವನ್ನು ರಚಿಸಿದನು. ಇದೇ ರೀತಿ ರಾಮಚಂದ್ರನು ಪ್ರಕ್ರಿಯಾ ಕೌಮುದಿಯನ್ನು ರಚಿಸಿದನು. ಅಷ್ಟಾಧ್ಯಾಯಿಯನ್ನು ಕುರಿತ ಪ್ರಕ್ರಿಯಾ ಗ್ರಂಥಗಳಲ್ಲಿ ಇವು ಬಹಳ ಮುಖ್ಯವಾದ ಗ್ರಂಥಗಳಾಗಿವೆ. ಇದರ ಮೇಲೂ ಅನೇಕ ವ್ಯಾಖ್ಯಾನಗಳು ಹುಟ್ಟಿಕೊಂಡವು. ಅವುಗಳಲ್ಲಿ ಕೃಷ್ಣನ ಪ್ರಕ್ರಿಯಾ ಪ್ರಕಾಶ ಬಹಳ ಮುಖ್ಯವಾದದ್ದು. ಇದೇ ರೀತಿ ಭಟ್ಟೋಜಿ ದೀಕ್ಷಿತನು ಸಿದ್ಧಾಂತ ಕೌಮುದಿಯನ್ನು, ನಾರಾಯಣ ಭಟ್ಟನು ಪ್ರಕ್ರಿಯಾಸರ್ವಸ್ವ ಎಂಬ ಗ್ರಂಥವನ್ನು ರಚಿಸಿದರು. ಅಷ್ಟಾಧ್ಯಾಯಿಯನ್ನು ಸರಿಯಾಗಿ ಅರಿತುಕೊಳ್ಳಲು ಮತ್ತು ಸಂಧಿ, ಸಮಾಸ ಪ್ರಕ್ರಿಯೆ ಗಳನ್ನು ತಿಳಿಯಲು ಇವು ಎಷ್ಟೊಂದು ಅವಶ್ಯಕ ಎಂಬುದು ಅವುಗಳ ಅಧ್ಯಯನದಲ್ಲಿ ತೊಡಗಿದಾಗ ವ್ಯಕ್ತವಾಗುತ್ತದೆ.

ಪಾಣಿನಿಯ ಅನಂತರ ವ್ಯಾಕರಣದ ಇತಿಹಾಸದಲ್ಲಿ ಅತಿಮುಖ್ಯವಾದ ಎರಡು ಪ್ರವೃತ್ತಿಗಳು ಹುಟ್ಟಿಕೊಂಡವು. ಈ ಪ್ರವೃತ್ತಿಗಳಲ್ಲಿ ಒಂದು ಪಾಣಿನಿಗಿಂತ ಹಿಂದಿನ ಯುಗಕ್ಕೆ ಸಂಬಂಧಿಸಿದ್ದಾಗಿದ್ದರೆ, ಇನ್ನೊಂದು ಅಷ್ಟಾಧ್ಯಾಯಿಗೆ ಸಂಬಂಧಿಸಿದ್ದಾಗಿದೆ. ಕಾತಂತ್ರ, ಸಾರಸ್ವತ ವ್ಯಾಕರಣಗಳು ಮೊದಲನೆಯ ಪ್ರವೃತ್ತಿಗೆ ಸಂಬಂಧಿಸಿದ್ದರೆ, ಚಾಂದ್ರ, ಸರಸ್ವತೀ ಕಂಠಾಭರಣ, ಸಿದ್ಧ ಹೇಮ ಶಬ್ದಾನುಶಾಸನ ಮುಂತಾದ ವ್ಯಾಕರಣಗಳು ಎರಡನೆಯ ಪ್ರವೃತ್ತಿಗೆ ಸಂಬಂಧಿಸಿದವುಗಳಾಗಿವೆ.

ಅಷ್ಟಾಧ್ಯಾಯಿಯ ಅಧ್ಯಯನ ಪ್ರಚಲಿತವಾಗಿದ್ದ ಕಾಲದಲ್ಲಿ ಬೇರೆ ಬೇರೆ ವ್ಯಾಕರಣಗಳು ಹುಟ್ಟಿಕೊಳ್ಳಲು ಬೇರೆ ಬೇರೆ ಕಾರಣಗಳಿದ್ದವು. ವಾರ್ತಿಕ, ಮಹಾಭಾಷ್ಯ, ವೃತ್ತಿ ಇತ್ಯಾದಿಗಳಲ್ಲಿ ಅಷ್ಟಾಧ್ಯಾಯಿಗೆ ಸಂಬಂಧಿಸಿದ ಅನೇಕ ವಿಚಾರಗಳ ಬಗ್ಗೆ ಕೊರತೆ ಇದ್ದೇ ಇರುತ್ತಿದ್ದವು. ಅಷ್ಟಾಧ್ಯಾಯಿಯಲ್ಲಿ ತೋರಿಬರುವ ಕೊರತೆಗಳನ್ನು ಹೋಗಲಾಡಿಸಲು ಮಾಡಿದ ಪ್ರಯತ್ನವಾಗಿ ಚಾಂದ್ರ ವ್ಯಾಕರಣ, ಸರಸ್ವತೀಕಂಠಾಭರಣ ಸಿದ್ಧಹೇಮಶಬ್ದಾನುಶಾಸನ ಮುಂತಾದ ವ್ಯಾಕರಣ ಗ್ರಂಥಗಳು ಹೊರಬಂದವು. ಸರಸ್ವತೀಕಂಠಾಭರಣ ಇವುಗಳಲ್ಲಿ ಬಹಳ ಮುಖ್ಯವಾದದ್ದು. ಕಾತಂತ್ರ, ಜೈನೇಂದ್ರ, ಶಾಕಟಾಯನ, ಸಾರಸ್ವತ, ಸರಸ್ವತೀಕಂಠಾಭರಣ, ಸಿದ್ಧಹೇಮಶಬ್ದಾನುಶಾಸನ ಸಂಸ್ಕೃತ ವ್ಯಾಕರಣ ಗ್ರಂಥಗಳಲ್ಲಿ ಹೆಚ್ಚು ಮಹತ್ವಪೂರ್ಣವಾದವು.

ಶರ್ವವರ್ಮನಿಂದ ರಚಿತವಾದ ಕಾತಂತ್ರ ವ್ಯಾಕರಣ ಪ್ರಕ್ರಿಯಾತ್ಮಕ ವ್ಯಾಕರಣಗಳಲ್ಲಿ ಬಹಳ ಮುಖ್ಯವಾದದ್ದು. ಶಾತವಾಹನ ಮಹಾರಾಜನಿಗೆ ಸಂಸ್ಕೃತ ವ್ಯಾಕರಣ ಕಲಿಸಲು, ಸುಲಭವಾಗಿ ಬೋಧಿಸಲು ಅನುಕೂಲವಾಗುವ ವ್ಯಾಕರಣ ಒಂದನ್ನು ರಚಿಸಿಕೊಳ್ಳಲಾಯಿತು. ಇದೇ ಕಾತಂತ್ರ ವ್ಯಾಕರಣ ಎಂಬ ಹೆಸರಿನಿಂದ ಹೊರಬಂದಿತು. ಈ ಕಾತಂತ್ರ ವ್ಯಾಕರಣಕ್ಕೆ ಕಲಾಪ ವ್ಯಾಕರಣ, ಕುಮಾರ ವ್ಯಾಕರಣ ಎಂಬ ಹೆಸರುಗಳು ಇವೆ. ಶರ್ವವರ್ಮನು ಕುಮಾರಸ್ವಾಮಿಯ ಅನುಗ್ರಹದಿಂದ ಕುಮಾರ ವ್ಯಾಕರಣವನ್ನು ರಚಿಸಿದನೆಂದು, ಶರ್ವವರ್ಮನಿಗೆ ಕುಮಾರಸ್ವಾಮಿ ಪ್ರತ್ಯಕ್ಷವಾಗಿ ಈ ವ್ಯಾಕರಣ ಬರೆಸಿದುದು ಕಲಾಪ ವ್ಯಾಕರಣವೆನಿಸಿಕೊಂಡಿತೆಂದು ಕಥೆಗಳಿವೆ. ಈ ವ್ಯಾಕರಣಕ್ಕೆ ಕಾತಂತ್ರ ಎಂಬ ಹೆಸರು ಬರಲು ಒಂದು ಬೃಹದ್ ವ್ಯಾಕರಣವನ್ನು ಲಘು ವ್ಯಾಕರಣವನ್ನಾಗಿ ಪರಿವರ್ತಿಸಿದ್ದು ಇದಕ್ಕೆ ಲಘುವ್ಯಾಕರಣ ಅಥವಾ ಕಾತಂತ್ರವ್ಯಾಕರಣ ಎಂಬ ಹೆಸರು ಬರಲು ಕಾರಣವಿರಬಹುದಾದರೂ ಇದನ್ನು ಕೆಲವರು ಬಾಲವ್ಯಾಕರಣ ಎಂತಲೂ ಕರೆದಿದ್ದಾರೆ. ಕಾತಂತ್ರ ಯಾವ ಧರ್ಮದ ತಳಹದಿಯ ಮೇಲೆ ರಚಿತವಾದ ವ್ಯಾಕರಣವಲ್ಲ. ಶರ್ವವರ್ಮ ಜೈನನನಲ್ಲ, ಕುಮಾರ ವ್ಯಾಕರಣಕ್ಕೆ ಕೌಮಾರ್ಯ ವ್ಯಾಕರಣ ಅಥವಾ ಬಾಲವ್ಯಾಕರಣ ಎಂಬ ಹೆಸರುಗಳು ರೂಢಿಯಲ್ಲಿವೆ. ಒಟ್ಟಿನಲ್ಲಿ ಕಾತಂತ್ರ ವ್ಯಾಕರಣವನ್ನು ಅಷ್ಟಾಧ್ಯಾಯಿಗೆ ಹೋಲಿಸಿದರೆ ಸರಳವೂ, ಸಂಕ್ಷಿಪ್ತವೂ, ಸಮಗ್ರವೂ ಸುಲಭವೂ ಆಗಿ ತೋರಿಬರುತ್ತದೆ. ಕಾತಂತ್ರ ವ್ಯಾಕರಣದಲ್ಲಿ ನಾಲ್ಕು

ಅಧ್ಯಾಯಗಳಿವೆ. ಪ್ರತಿ ಅಧ್ಯಾಯದಲ್ಲಿಯೂ ಕೆಲವು ಪಾದಗಳು ಇವೆ. ಈ ಪಾದಗಳ ಸಂಖ್ಯೆ ಆ ಅಧ್ಯಾಯಗಳಲ್ಲಿ ಸಮಾನವಾಗಿಲ್ಲ. ಇದು ಪೂರ್ಣವಾಗಿ ಪ್ರಕ್ರಿಯಾತ್ಮಕ ವ್ಯಾಕರಣವಾದುದರಿಂದ ಇದು ರೂಪಾವತಾರಕ್ಕಿಂತಲೂ ಹೆಚ್ಚು ಸಮರ್ಪಕವಾದ ವ್ಯಾಕರಣವಾಗಿ ತೋರಿಬರುತ್ತದೆ. ಇದರಲ್ಲಿ ಸ್ವರ, ಸಂಧ್ಯಕ್ಷರ, ವ್ಯಂಜನ, ಘೋಷ, ಅಂತಸ್ಥ, ಊಷ್ಮ ಇತ್ಯಾದಿ ಪಾರಿಭಾಷಿಕ ಶಬ್ದಗಳು, ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ ಬಳಕೆಯಾಗಿಲ್ಲದ ಕೆಲವು ಪಾರಿಭಾಷಿಕ ಶಬ್ದಗಳು ಬಳಕೆಯಾಗಿವೆ. ಕಾತಂತ್ರದ ವ್ಯಾಕರಣ ಸೂತ್ರಗಳು ಸರಳವೂ ಸಂಕ್ಷಿಪ್ತವೂ ಆಗಿವೆ. ಈ ಸೂತ್ರಗಳು ಪ್ರಾತಿಶಾಖ್ಯಗಳ ಸೂತ್ರಗಳನ್ನು ಹೆಚ್ಚು ಹೋಲುತ್ತವೆ. ವೈದಿಕ ಪ್ರಕ್ರಿಯೆಗಳನ್ನು ಇದರಲ್ಲಿ ಪೂರ್ಣವಾಗಿ ಕೈಬಿಡಲಾಗಿದೆ. ಸರಳತೆ ಸಂಕ್ಷಿಪ್ತತೆಯೇ ಕಾತಂತ್ರದ ವೈಶಿಷ್ಟ್ಯ ; ಕಾತಂತ್ರಕ್ಕೆ ಅನೇಕ ಟೀಕಾಟಿಪ್ಪಣಿಗಳ ವ್ಯಾಖ್ಯಾನಗಳು ಹುಟ್ಟಿಕೊಂಡಿವೆ. ಅವುಗಳಲ್ಲಿ ದುರ್ಗಸಿಂಹನ ವೃತ್ತಿ ಬಹಳ ಮುಖ್ಯವಾದುದ್ದು. ಟಿಬೆಟ್, ಕಾಶ್ಮೀರ, ಬಂಗಾಳ ಮುಂತಾದ ಕಡೆಗಳಲ್ಲಿ ಇದು ಹೆಚ್ಚು ಕಾಲ ಪ್ರಚಾರದಲ್ಲಿದ್ದಿತು. ದಕ್ಷಿಣ ಭಾರತದಲ್ಲಿಯೂ ಕಾತಂತ್ರ ವ್ಯಾಕರಣ ಹೆಚ್ಚು ಪ್ರಚಾರದಲ್ಲಿದ್ದಿತು. ಇದೊಂದು ವಿಶಿಷ್ಟ ವ್ಯಾಕರಣ ಪದ್ಧತಿಯನ್ನು ರೂಪಿಸಿದೆ. ಕೆಲವು ದ್ರಾವಿಡಭಾಷೆಗಳ ವ್ಯಾಕರಣಗಳಿಗೆ ಇದು ಮಾದರಿಯಾಗಿದೆ. ಹಳಗನ್ನಡದ ವ್ಯಾಕರಣಗಳು ಪೂರ್ಣವಾಗಿ ಕಾತಂತ್ರ ವ್ಯಾಕರಣವನ್ನೇ ಅನುಸರಿಸಿವೆ.

ಚಾಂದ್ರ ವ್ಯಾಕರಣವನ್ನ ಚಂದ್ರಗೋಮಿ ಎಂಬಾತನು ರಚಿಸಿದನು. ಈ ಚಾಂದ್ರ ವ್ಯಾಕರಣದಲ್ಲಿ ಆರು ಅಧ್ಯಾಯಗಳಿವೆ. ಕಾಶಿಕಾವೃತ್ತಿಯ ಮೇಲೆ ಚಾಂದ್ರ ವ್ಯಾಕರಣದ ಪ್ರಭಾವ ಅಧಿಕವಾಗಿ ಉಂಟಾಗಿದೆ. ಚಾಂದ್ರದ ಮೇಲೆ ಕಾತಂತ್ರದ ಪ್ರಭಾವವೂ ಕೂಡ ಆಗಿದೆ. ನಾಮ, ವಿಭಕ್ತಿ, ಕಾರಕ, ಸಮಾಸ, ತದ್ಧಿತ, ಮುಂತಾದುವುಗಳ ವಿವರಣೆ ಇದರಲ್ಲಿದೆ. ಚಾಂದ್ರ ವ್ಯಾಕರಣ ಸರಳತೆ, ಸ್ಪಷ್ಟತೆ, ಹ್ರಸ್ವತೆ, ಪೂರ್ಣತೆ ಇತ್ಯಾದಿಗಳಿಗೆ ಹೆಸರಾಗಿದೆ. ಇದು ಕಾಶ್ಮೀರ, ನೇಪಾಳ, ಟಿಬೆಟ್, ಸಿಲೋನ್ ಮುಂತಾದ ಬೌದ್ಧ ದೇಶಗಳಲ್ಲಿ ಹೆಚ್ಚು ಪ್ರಚಾರದಲ್ಲಿದೆ.

ಜೈನೇಂದ್ರ ವ್ಯಾಕರಣ ದೇವನಂದಿಯಿಂದ ರಚಿತವಾದದ್ದು. ಈ ವ್ಯಾಕರಣವನ್ನು ಕನ್ನಡದ ಕವಿಗಳಾದ ಚಾವುಂಡರಾಯ, ನೇಮಿಚಂದ್ರ ಮುಂತಾದವರು ಮುಕ್ತಕಂಠದಿಂದ ಹೊಗಳಿದ್ದಾರೆ. ಜೈನೇಂದ್ರ ವ್ಯಾಕರಣವು ಚಾಂದ್ರ ಮತ್ತು ಕಾತಂತ್ರ ವ್ಯಾಕರಣಗಳಿಗಿಂದ ಭಿನ್ನವಾಗಿದೆ. ಜೈನೇಂದ್ರ ಪೂರ್ಣವಾಗಿ ಅಷ್ಟಾಧ್ಯಾಯಿಯನ್ನು ಅನುಸರಿಸಿದೆ. ಜೈನಧರ್ಮದ ಪ್ರಭಾವ ಇದರಲ್ಲಿ ಕಂಡುಬರುತ್ತದೆ. ಪಾಣಿನಿಯ ವ್ಯಾಕರಣವನ್ನು ಸಂಕ್ಷಿಪ್ತವಾಗಿ ಸರಳವಾಗಿ ಹೇಳುವುದು ದೇವನಂದಿಯ ಮುಖ್ಯ ಉದ್ದೇಶ. ಇದರಲ್ಲಿ ಬಳಕೆಯಾಗಿರುವ ಪಾರಿಭಾಷಿಕ ಶಬ್ದಗಳು ಅಷ್ಟಾಧ್ಯಾಯಿಗಿಂತ ಭಿನ್ನವಾಗಿವೆ. ಜೈನೇಂದ್ರ ವ್ಯಾಕರಣದ ಎರಡು ಪಾಠಗಳು ಪ್ರಚಾರದಲ್ಲಿವೆ. ಜೈನೇಂದ್ರ ವ್ಯಾಕರಣ ಕನ್ನಡ ನಾಡಿನ ಅಪೂರ್ವ ಕೊಡುಗೆ ಎಂದು ಕೆಲವರ ಅಭಿಪ್ರಾಯ.

ಸಂಸ್ಕೃತ ವ್ಯಾಕರಣಗಳಲ್ಲಿ ಶಾಕಟಾಯನನ ವ್ಯಾಕರಣ ಬಹಳ ಮುಖ್ಯವಾದದ್ದು. ಈ ವ್ಯಾಕರಣದಲ್ಲಿ ನಾಲ್ಕು ಅಧ್ಯಾಯಗಳಿವೆ. ಪ್ರತಿ ಅಧ್ಯಾಯದಲ್ಲಿಯೂ ನಾಲ್ಕು ಪಾದಗಳಿವೆ. ಇದರ ಮೇಲೆ ಚಾಂದ್ರ ವ್ಯಾಕರಣದ ಪ್ರಭಾವ ಉಂಟಾಗಿದೆ. ಅಷ್ಟಾಧ್ಯಾಯಿಯನ್ನು ಸರಳಗೊಳಿಸುವುದು ಹಾಗೂ ಸಂಕ್ಷಿಪ್ತ ಗೊಳಿಸುವುದು ಶಾಕಟಾಯನ, ಚಾಂದ್ರ ಮತ್ತು ಜೈನೇಂದ್ರ ವ್ಯಾಕರಣಗಳ ಮುಖ್ಯ ಉದ್ದೇಶ. ಸರಳತೆ, ಸಂಕ್ಷಿಪ್ತತೆ, ಸಂಪೂರ್ಣತೆ, ಇವುಗಳ ಮುಖ್ಯ ಲಕ್ಷಣ. ಚಾಂದ್ರದಂತೆಯೇ ಜೈನೇಂದ್ರ ಮತ್ತು ಶಾಕಟಾಯನ ವ್ಯಾಕರಣಗಳಲ್ಲಿಯೂ ವೈದಿಕ ಸ್ವರ ಪ್ರಕ್ರಿಯೆಗಳನ್ನು ಕೈಬಿಡಲಾಗಿದೆ. ಶಾಕಟಾಯನ ವ್ಯಾಕರಣ ಜೈನೇಂದ್ರ ವ್ಯಾಕರಣದಿಂದ ಅನೇಕ ಪಾರಿಭಾಷಿಕ ಶಬ್ದಗಳನ್ನು ಸ್ವೀಕರಿಸಿದೆ. ಆದರೂ ಶಾಕಟಾಯನ ವ್ಯಾಕರಣ ಪೂರ್ಣವಾಗಿ ಯಾವ ವ್ಯಾಕರಣವನ್ನು ಅನುಕರಿಸಿಲ್ಲ. ಹೇಮಚಂದ್ರನ ಸಿದ್ಧಹೇಮ ಶಬ್ದಾನುಶಾಸನದ ಮೇಲೆ ಇದರ ಪ್ರಭಾವ ಕಂಡುಬರುತ್ತದೆ.

ಭೋಜರಾಜ ಎಂಬಾತನು ಸರಸ್ವತೀಕಂಠಾಭರಣ ಎಂಬ ವ್ಯಾಕರಣವನ್ನು ರಚಿಸಿದನು. ಈತನು ಕಾವ್ಯಮೀಮಾಂಸೆ, ಆಯುರ್ವೇದ, ಸಂಗೀತಶಾಸ್ತ್ರ ಇತ್ಯಾದಿಗಳ ಮೇಲೆ ಕೃತಿಗಳನ್ನು ರಚಿಸಿದ್ದಾನೆ. ಅಷ್ಟಾಧ್ಯಾಯಿಯನ್ನು ಸರಳ ಹಾಗೂ ಸಂಕ್ಷಿಪ್ತ ಗೊಳಿಸುವುದು ಈತನ ವ್ಯಾಕರಣದ ಮುಖ್ಯ ಉದ್ದೇಶ. ಸರಸ್ವತೀಕಂಠಭರಣ ವ್ಯಾಕರಣ ದಲ್ಲಿ ಚಾಂದ್ರ, ಜೈನೇಂದ್ರ, ಕಾತಂತ್ರ ಮತ್ತು ಶಾಕಟಾಯನ ವ್ಯಾಕರಣಗಳ ಪ್ರಭಾವ ಕಂಡುಬರುತ್ತದೆ. ಸರಸ್ವತೀಕಂಠಾಭರಣದಲ್ಲಿಯೂ ಎಂಟು ಅಧ್ಯಾಯಗಳಿವೆ. ಪ್ರತಿ ಅಧ್ಯಾಯದಲ್ಲಿಯೂ ನಾಲ್ಕು ಪಾದಗಳಿವೆ. ಅಷ್ಟಾಧ್ಯಾಯಿಯನ್ನು ಅನುಸರಿಸಿದ ಈ ವ್ಯಾಕರಣದಲ್ಲಿ ಅದರ ಸೂತ್ರಗಳನ್ನು ಅಗತ್ಯವೆನಿಸಿದ ಕಡೆ ಮಾರ್ಪಾಡು ಮಾಡಿಕೊಳ್ಳ ಲಾಗಿದೆ. ಭೋಜರಾಜನು ತನಗೆ ಪರಿಚಯವಿದ್ದ ಎಲ್ಲ ವ್ಯಾಕರಣಗಳನ್ನು ಈ ವ್ಯಾಕರಣದ ರಚನೆಗೆ ಬಳಿಸಿಕೊಂಡಿದ್ದಾನೆ.

ಸಿದ್ಧಹೇಮ ಶಬ್ದಾನುಶಾಸನ ಜೈನ ವ್ಯಾಕರಣಗಳಲ್ಲಿ ಬಹಳ ಮುಖ್ಯವಾದದ್ದು. ಇದನ್ನು ಹೇಮಚಂದ್ರಸೂರಿ ರಚಿಸಿದನು. ಭೋಜರಾಜನಂತೆ ಈತನು ಅಸಾಮಾನ್ಯ ಪಂಡಿತನಾಗಿದ್ದನು. ವ್ಯಾಕರಣ, ನ್ಯಾಯ, ಛಂದಸ್ಸು, ಕಾವ್ಯ, ಧರ್ಮ, ಮುಂತಾದುವು ಗಳ ಮೇಲೆ ಕೃತಿ ರಚಿಸಿದ್ದಾನೆ. ಸಿದ್ಧಹೇಮ ಶಬ್ದಾನುಶಾಸನವನ್ನು ಹೇಮಚಂದ್ರನ ವ್ಯಾಕರಣ ಎಂತಲೂ ಕರೆಯುವರು. ಈ ವ್ಯಾಕರಣಕ್ಕೂ ಅಷ್ಟಾಧ್ಯಾಯಿಯೇ ಮೂಲ ಆಧಾರ. ಅಷ್ಟಾಧ್ಯಾಯಿಯನ್ನು ಸುಧಾರಿಸಿ ಸಂಕ್ಷಿಪ್ತಗೊಳಿಸುವುದು ಹಾಗೂ ಸರಳ ಗೊಳಿಸುವುದು ಈ ವ್ಯಾಕರಣದ ಮುಖ್ಯ ಉದ್ದೇಶ. ಈ ಸಿದ್ಧಹೇಮ ಶಬ್ದಾನುಶಾಸನ ದಲ್ಲಿ ಎಂಟು ಅಧ್ಯಾಯಗಳಿವೆ. ಪ್ರತಿ ಅಧ್ಯಾಯದಲ್ಲಿಯೂ ಇತರ ವ್ಯಾಕರಣಗಳಂತೆ ನಾಲ್ಕು ಪಾದಗಳಿವೆ. ಮೊದಲು ಏಳು ಅಧ್ಯಾಯಗಳಲ್ಲಿ ಸಂಸ್ಕೃತದ ವ್ಯಾಕರಣ ವಿಚಾರ ಗಳನ್ನು ಕೊನೆಯ ಅಧ್ಯಾಯದಲ್ಲಿ ಪ್ರಾಕೃತ ಮತ್ತು ಅಪಭ್ರಂಶದ ವ್ಯಾಕರಣ ವಿಚಾರ

ಗಳನ್ನು ಪ್ರಸ್ತಾಪಿಸಲಾಗಿದೆ. ಜೈನೇಂದ್ರ, ಚಾಂದ್ರ, ಶಾಕಟಾಯನ, ಕಾತಂತ್ರ, ಮಹಾಭಾಷ್ಯ ಮುಂತಾದ ವ್ಯಾಕರಣಗಳ ಪ್ರಭಾವವು ಇದರಲ್ಲಿ ಕಂಡುಬರುತ್ತದೆ. ಹೇಮಚಂದ್ರನು ಕುಮಾರಪಾಲನ ಆಶ್ರಯದಲ್ಲಿದ್ದುದರಿಂದ ಕುಮಾರಪಾಲಚರಿತೆ ಎಂಬ ಕೃತಿಯನ್ನು ರಚಿಸಿದ್ದಾನೆ. ಇದೊಂದು ವಿಶಿಷ್ಟವಾದ ಕಾವ್ಯಗ್ರಂಥ. ಈ ಗ್ರಂಥ ದಲ್ಲಿಯೂ ಕೆಲವು ವ್ಯಾಕರಣ ವಿಚಾರಗಳನ್ನು ಪ್ರಸ್ತಾಪಿಸಿದ್ದಾನೆ. ಈತನ ಕೊನೆಯ ಅಧ್ಯಾಯ ಪ್ರಾಕೃತ ಮತ್ತು ಅಪಭ್ರಂಶ ಭಾಷೆಗಳಿಗೆ ಮೀಸಲಾದದ್ದು. ಸಂಸ್ಕೃತ ವ್ಯಾಕರಣ ವಿಚಾರಗಳ ಜೊತೆಗೆ ಪ್ರಾಕೃತ ಮತ್ತು ಅಪಭ್ರಂಶ ಭಾಷೆಗಳ ವ್ಯಾಕರಣ ವಿಚಾರಗಳನ್ನು ಹೇಳಿರುವುದು ಇದರಲ್ಲಿ ಹೆಚ್ಚು ವೈಶಿಷ್ಟ್ಯಪೂರ್ಣವಾಗಿದೆ. ಕೊನೆಯ ಅಧ್ಯಾಯದ ನಾಲ್ಕನೆಯ ಪಾದದಲ್ಲಿ ಪ್ರಾಕೃತ ಅಪಭ್ರಂಶ ಭಾಷೆಗಳನ್ನು ಪಟ್ಟಿಮಾಡ ಲಾಗಿದೆ. ಸಂಸ್ಕೃತ ಪ್ರಾಕೃತ ವ್ಯಾಕರಣ ವಿಚಾರಗಳನ್ನು ಸೇರಿಸಿ ಹೊಸ ಬಗೆಯ ವ್ಯಾಕರಣವನ್ನು ಹೇಮಚಂದ್ರನು ರಚಿಸಿದ್ದಾನೆ. ಇದು ಪಶ್ಚಿಮ ಭಾರತದಲ್ಲಿ ಪ್ರಚಾರ ದಲ್ಲಿದ್ದಿತು.

ಸಾರಸ್ವತ ವ್ಯಾಕರಣವನ್ನು ಅನುಭೂತಿ ಸ್ವರೂಪಾಚಾರ್ಯ ಎಂಬಾತನು ರಚಿಸಿದನು. ಸಾರಸ್ವತ ಪ್ರಕ್ರಿಯಾ ಎಂಬ ಹೆಸರಿನಿಂದ ಇದು ಪ್ರಚಾರದಲ್ಲಿದೆ. ಸಾರಸ್ವತ ವ್ಯಾಕರಣ ಐಂದ್ರ ಮತ್ತು ಪಾಣಿನಿ ವ್ಯಾಕರಣಗಳ ಮಧ್ಯವರ್ತಿ ವ್ಯಾಕರಣ ವಾಗಿ ತೋರಿಬರುತ್ತವೆ. ಸಾರಸ್ವತ ವ್ಯಾಕರಣವೂ ಕೂಡ ಇತರ ವ್ಯಾಕರಣ ಗಳಂತೆಯೇ ಅಷ್ಟಾಧ್ಯಾಯಿಯನ್ನು ಸರಳ ಹಾಗೂ ಸಂಕ್ಷಿಪ್ತಗೊಳಿಸುವ ಉದ್ದೇಶದಿಂದ ಹುಟ್ಟಿಕೊಂಡಿದ್ದು. ಇದರ ಮುಖ್ಯ ಉದ್ದೇಶ ವ್ಯಾಕರಣಕ್ಕಾಗಿ ವ್ಯಾಕರಣವಲ್ಲ. ಸಾಹಿತ್ಯ ಅಭ್ಯಾಸಕ್ಕಾಗಿ ಮಾತ್ರ ವ್ಯಾಕರಣ ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಬಿಹಾರ, ವಾರಣಾಸಿಗಳಲ್ಲಿ ಇದು ಹೆಚ್ಚು ಪ್ರಚಾರದಲ್ಲಿದೆ. ಈ ವ್ಯಾಕರಣದ ಜೊತೆಗೆ ಬೋಪ ದೇವನ ಮುಗ್ಧಬೋಧೆ, ಕ್ರಮದೀಶ್ವರನ ಸಂಕ್ಷಿಪ್ತಸಾರ, ಪದ್ಮನಾಭಭಟ್ಟನ ಸೌಪದ್ಮ ವ್ಯಾಕರಣ ಮುಂತಾದುವುಗಳನ್ನು ಹೆಸರಿಸಿಕೊಳ್ಳ ಬಹುದಾಗಿದೆ.

ಕನ್ನಡನಾಡಿನಲ್ಲಿ ಸಂಸ್ಕೃತದ ಅಧ್ಯಯನಕ್ಕೆ ಮೊದಲಿನಿಂದಲೂ ವಿಶೇಷವಾದ ಸ್ಥಾನವಿದ್ದಿತು. ಭಾಷೆಯ ಅಧ್ಯಯನ ವ್ಯಾಕರಣದ ಅಧ್ಯಯನದ ಮೂಲಕವೇ ನಡೆಯುತ್ತಿದ್ದಿತು. ಈ ಕಾರಣದಿಂದ ಪ್ರಾಚೀನ ಕಾಲದಲ್ಲಿ ಕನ್ನಡ ನಾಡಿನಲ್ಲಿ ಅನೇಕ ವ್ಯಾಕರಣ ಸಂಪ್ರದಾಯಗಳು ಪದ್ಧತಿಗಳು ಪ್ರಚಾರದಲ್ಲಿದ್ದವು. ಕ್ರಿ.ಶ. 1053ರ ಮೊಳುಗುಂದ ಶಿಲಾಶಾಸನದಲ್ಲಿ ನಯಸೇನ ಒಬ್ಬ ವೈಯಾಕರಣನೆಂದೂ ಸಂಸ್ಕೃತದಲ್ಲಿ ಹೆಸರಾಗಿದ್ದ ಆರು ಸಂಸ್ಕೃತ ವ್ಯಾಕರಣ ಸಂಪ್ರದಾಯಗಳು ಇದರಲ್ಲಿ ಉಲ್ಲೇಖವಾಗಿವೆ. ಕೋಡಿ ಮಠವನ್ನು ವರ್ಣಿಸುವ ಶಿಕಾರಿಪುರದ ಶಿಲಾಶಾಸನದಲ್ಲಿ ಕೆಲವು ವ್ಯಾಕರಣಗಳ ಉಲ್ಲೇಖಗಳಿವೆ. ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ವ್ಯಾಕರಣ

ಸಂಪ್ರದಾಯಗಳು ಪ್ರಚಾರದಲ್ಲಿದ್ದವು ಎಂಬುದು ಇವುಗಳಿಂದ ವ್ಯಕ್ತವಾಗುತ್ತದೆ. ಸಂಸ್ಕೃತ ವ್ಯಾಕರಣಗಳ ಅಧ್ಯಯನ ಮತ್ತು ಅಧ್ಯಾಪನ, ವ್ಯಾಕರಣಗಳ ನಿರ್ಮಾಣ ಮುಂತಾದವುಗಳಲ್ಲಿ ಕನ್ನಡಿಗರ ಪಾತ್ರ ಹಿರಿಯದಾದುದಾಗಿದೆ. ವ್ಯಾಕರಣ ಪದ್ಧತಿಗಳ ಅಧ್ಯಯನಕ್ಕಾಗಿ ಅನೇಕ ಟೀಕಾಗ್ರಂಥಗಳು ಕರ್ನಾಟಕದಲ್ಲಿ ಪ್ರಚಾರದಲ್ಲಿದ್ದವು. ದೇವೇಂದ್ರನ ರಾಜಾವಳಿ ಕಥೆ, ಚಂದ್ರಯ್ಯನ ಪೂಜ್ಯಪಾದಚರಿತೆ ಇವುಗಳಿಂದ ಪೂಜ್ಯಪಾದ ಕರ್ನಾಟಕದವನೆಂದು ತಿಳಿದುಬರುತ್ತದೆ. ಜೈನೇಂದ್ರ ವ್ಯಾಕರಣ ಸಂಪ್ರದಾಯಕ್ಕೆ ಈತನೇ ಮೂಲಪುರುಷ. ಪೂಜ್ಯಪಾದನು ಪಾಣಿನಿಯ ವ್ಯಾಕರಣಕ್ಕೆ ಒಂದು ನ್ಯಾಸವನ್ನು ಬರೆದಿದ್ದನೆಂದು ಕೆಲವರ ಅಭಿಪ್ರಾಯ. ಈ ದಿಸೆಯಲ್ಲಿ ಯಾವುದನ್ನೂ ಖಚಿತವಾಗಿ ಹೇಳಲು ಬರುವುದಿಲ್ಲ.

ಗುಮ್ಮರೆಡ್ಡಿಪುರದ ಶಿಲಾಶಾಸನದಲ್ಲಿ ದುರ್ವಿನೀತನ ಶಬ್ದಾವತಾರವನ್ನು ಉಲ್ಲೇಖಿಸಲಾಗಿದೆ. ಈತನು ಪೂಜ್ಯ ಪಾದನಂತೆ ಶಬ್ದಾವತಾರ ರಚಿಸಿದ್ದನು. ಪೂಜ್ಯ ಪಾದ ಮತ್ತು ದುರ್ವಿನೀತರ ವ್ಯಾಕರಣಗಳ ಹೆಸರು ಒಂದು ಆಗಿರುವುದರಿಂದ ದುರ್ವಿನೀತನು ತನ್ನ ಗುರುವಾಗಿದ್ದ ಪೂಜ್ಯ ಪಾದನ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿರ ಬೇಕೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ದುರ್ವಿನೀತನ ಶಬ್ದಾವತಾರ ಪಾಣಿನಿಯ ವ್ಯಾಕರಣಕ್ಕೆ ಸಂಸ್ಕೃತದಲ್ಲಿ ಬರೆದ ಟೀಕೆ ಎಂದು ಮತ್ತೆ ಕೆಲವು ವಿದ್ವಾಂಸರ ಅಭಿಪ್ರಾಯ. ಶಬ್ದಾನುಶಾಸನ ಎಂಬ ವ್ಯಾಕರಣವನ್ನು ಸಂಸ್ಕೃತದಲ್ಲಿ ಬರೆದ ಶಾಕಟಾಯನನೂ ಕರ್ನಾಟಕದವನೆ. ಈತನು ರಾಷ್ಟ್ರಕೂಟ ದೊರೆ ನೃಪತುಂಗನ ಆಸ್ಥಾನದಲ್ಲಿದ್ದವನು. ಇದು ಕನ್ನಡನಾಡು ನೀಡಿದ ಎರಡನೆಯ ವ್ಯಾಕರಣವಾಗಿದೆ. ಗುಣನಂದಿ ಎಂಬ ವೈಯಾಕರಣನೂ ಕೂಡ ಕರ್ನಾಟಕದವನೆಂದು ಶ್ರವಣ ಬೆಳಗೊಳದ ಶಿಲಾಶಾಸನದಿಂದ ತಿಳಿದು ಬರುತ್ತದೆ. ಕೇಶಿರಾಜನ ಶಬ್ದಮಣಿದರ್ಪಣ, ನಂಜುಂಡ ಕವಿಯ ರಾಮನಾಥ ಚರಿತೆ, ಭಟ್ಟಾಕಳಂಕನ ಶಬ್ದಾನುಶಾಸನಗಳಲ್ಲಿ ಗುಣನಂದಿಯ ಉಲ್ಲೇಖವಿದೆ. ಈತನು ಶಬ್ದಾರ್ಣವ ಎಂಬ ವ್ಯಾಕರಣವನ್ನು ಬರೆದಿದ್ದನು. ಗುಣನಂದಿ ಒಬ್ಬ ಕನ್ನಡ ಕವಿ ಎಂಬುದರ ಜೊತೆಗೆ ಒಬ್ಬ ಸಂಸ್ಕೃತ ವೈಯಾಕರಣ ಎಂಬುದು ಇವುಗಳಿಂದ ತಿಳಿದುಬರುತ್ತದೆ. ಗುಣನಂದಿಯು ಜೈನೇಂದ್ರ ವ್ಯಾಕರಣಕ್ಕೆ ಭಾಷ್ಯವನ್ನು ಬರೆದಿದ್ದನೆಂದು ಹೇಳಲಾಗುತ್ತಿದೆ.

ದಯಪಾಲ ಎಂಬಾತನು ರೂಪಸಿದ್ಧಿ ಎಂಬ ವ್ಯಾಕರಣವನ್ನು ರಚಿಸಿದ್ದನು. ಇದು ಶಾಕಟಾಯನನ ವ್ಯಾಕರಣ ಪ್ರಕ್ರಿಯಾ ಗ್ರಂಥಕ್ಕೆ ಸಂಬಂಧಿಸಿದ್ದು. ಕನ್ನಡದ ಕೆಲವು ಶಾಸನಗಳಲ್ಲಿ ರೂಪಸಿದ್ಧಿಯ ಉಲ್ಲೇಖವಿದೆ. ಇದರಿಂದ ದಯಪಾಲ ಕನ್ನಡ ನಾಡಿನವನು ಎಂದು ಊಹಿಸಲು ಅವಕಾಶಗಳಿವೆ.

ಸಂಸ್ಕೃತದಂತೆಯೇ ಪ್ರಾಕೃತದಲ್ಲಿಯೂ ವ್ಯಾಕರಣಗಳು ರಚನೆಯಾಗಿವೆ. ಪ್ರಾಕೃತ ಸಂಸ್ಕೃತದಿಂದ ನಿಷ್ಪನ್ನವಾದ ಭಾಷೆ, ಪ್ರಾಕೃತ ವ್ಯಾಕರಣಗಳಲ್ಲಿ ಎರಡು

ಮುಖ್ಯ ಸಂಪ್ರದಾಯಗಳಿವೆ. ಇವುಗಳಲ್ಲಿ ಮೊದಲನೆಯ ಸಂಪ್ರದಾಯವನ್ನು ವಾಲ್ಮೀಕಿ ಸಂಪ್ರದಾಯವೆಂದೂ, ಎರಡನೆಯ ಸಂಪ್ರದಾಯವನ್ನು ವರರುಚಿಯ ಸಂಪ್ರದಾಯವೆಂದೂ ಕರೆಯಲಾಗುತ್ತಿದೆ. ಹೇಮಚಂದ್ರನ ಸಿದ್ಧಹೇಮಶಬ್ದಾನು ಶಾಸನ ವಾಲ್ಮೀಕಿ ಸಂಪ್ರದಾಯಕ್ಕೆ ಸಂಬಂಧಿಸಿದ್ದಾಗಿದ್ದರೆ ವರರುಚಿಯ ಪ್ರಾಕೃತ ಪ್ರಕಾಶ ಎರಡನೆಯ ಸಂಪ್ರದಾಯಕ್ಕೆ ಸಂಬಂಧಿಸಿದ್ದುದಾಗಿದೆ. ಪ್ರಾಕೃತ ಪ್ರಕಾಶದಲ್ಲಿ ಪ್ರಾಕೃತದ ನಾಲ್ಕು ಪ್ರಭೇದಗಳನ್ನು ಪ್ರಸ್ತಾಪಿಸಲಾಗಿದೆ. ಹೇಮಚಂದ್ರನ ಸಿದ್ಧಹೇಮ ಶಬ್ದಾನುಸಶಾಸನದ ಕೊನೆಯ ಅಧ್ಯಾಯದಲ್ಲಿ ಪ್ರಾಕೃತ ವ್ಯಾಕರಣವನ್ನು ನಿರೂಪಿಸ ಲಾಗಿದೆ. ಇದರಲ್ಲಿ ಧ್ವನಿಶಾಸ್ತ್ರ, ಶಬ್ದಶಾಸ್ತ್ರ, ಧಾತು ವಿಚಾರಗಳನ್ನು ಹೇಳಲಾಗಿದೆ. ಇದರ ಕೊನೆಯ ಪಾದದಲ್ಲಿ ಪ್ರಾಕೃತ ಭಾಷೆಗಳ ವಿವರಣೆಯ ಜೊತೆಗೆ ಅಪಭ್ರಂಶದ ವಿವರಣೆಯೂ ದೊರೆಯುತ್ತದೆ. ಹೀಗಾಗಿ ಸಿದ್ಧಹೇಮಶಬ್ದಾನುಶಾಸನ ಶ್ರೀಮಂತವೂ, ಸಮಗ್ರವೂ, ಪರಿಪೂರ್ಣವೂ ಆದ ವ್ಯಾಕರಣವಾಗಿದೆ ಎನ್ನಬಹುದು. ಪ್ರಾಕೃತ ವ್ಯಾಕರಣಗಳಲ್ಲಿ ಸಂಸ್ಕೃತದ ವರ್ಣಮಾಲೆಯನ್ನು ಆಧಾರವಾಗಿಟ್ಟುಕೊಂಡು ಪ್ರಾಕೃತ ವರ್ಣಗಳನ್ನು ನಿರ್ಣಯಿಸುವ ಪ್ರಯತ್ನ ಮಾಡಲಾಗಿದೆ. ಈ ದಿಸೆಯಲ್ಲಿ ಕ್ರಮದೀಶ್ವರನ ಸಂಕ್ಷಿಪ್ತಸಾರ, ತ್ರಿವಿಕ್ರಮನ ಪ್ರಾಕೃತ ವ್ಯಾಕರಣ, ಮಾರ್ಕಂಡೇಯನ ಪ್ರಾಕೃತ ಸರ್ವಸ್ವ ಮುಂತಾದ ಪ್ರಾಕೃತ ವ್ಯಾಕರಣಗಳನ್ನು ಇಲ್ಲಿ ಹೆಸರಿಸಿಕೊಳ್ಳಬಹುದಾಗಿದೆ.

ಕರ್ನಾಟಕದಲ್ಲಿಯೂ ಕೆಲವು ಪ್ರಾಕೃತ ವ್ಯಾಕರಣಗಳು ಕಾಣಸಿಗುತ್ತವೆ. ಅಶೋಕನ ಪ್ರಾಕೃತ ಶಾಸನಗಳಲ್ಲಿ ಕೆಲವು ಕರ್ನಾಟಕದಲ್ಲಿ ದೊರೆಯುತ್ತವೆ. ಶಾತವಾಹನರ ಕಾಲದ ಕೆಲವು ಪ್ರಾಕೃತ ವ್ಯಾಕರಣಗಳು ಕಾಣಸಿಗುತ್ತವೆ. ಇವುಗಳಿಂದ ಕರ್ನಾಟಕದಲ್ಲಿ ಪ್ರಾಕೃತ ಬಹಳ ಪ್ರಾಚೀನ ಕಾಲದಿಂದಲೂ ವ್ಯಾವಹಾರಿಕ ಭಾಷೆಯಾಗಿ ಬಳಕೆಯಲ್ಲಿದ್ದಿರಬಹುದೆಂದು ಊಹಿಸಬಹುದಾಗಿದೆ. ಪ್ರಾಕೃತ ಜೈನರ ಪವಿತ್ರ ಭಾಷೆ. ಜೈನಮತಕ್ಕೆ ಸಂಬಂಧಿಸಿದ ಅನೇಕ ಧರ್ಮಗ್ರಂಥಗಳು ಪ್ರಾಕೃತದಲ್ಲಿವೆ. ಕನ್ನಡ ನಾಡಿನಲ್ಲಿ ಕನ್ನಡಿಗರು ಪ್ರಾಕೃತದಲ್ಲಿ ಸಾಹಿತ್ಯ ರಚಿಸುತ್ತಿದ್ದರು. ಇದಕ್ಕೆ ಗುಣಾಢ್ಯನ ಬೃಹತ್ ಕಥಾಮಂಜರಿ, ಹಾಲನ ಗಾಥಾಸಪ್ತಸದಿ ಮುಂತಾದುವುಗಳನ್ನು ಉದಾಹರಿಸಿಕೊಳ್ಳಬಹುದು. ಕನ್ನಡದ ಕವಿ ನೇಮಿಚಂದ್ರನು ಪ್ರಾಕೃತದಲ್ಲಿಯೂ ಪಂಡಿತನಾಗಿದ್ದನು. ವಿಮಲಸೂರಿಯ ಪಉಮಚರಿಯ ಎಂಬ ಗ್ರಂಥಕ್ಕೆ ನೇಮಿಚಂದ್ರನು ಬಹುವಾಗಿ ಋಣಿಯಾಗಿರುವುದನ್ನು ಹೇಳಿಕೊಂಡಿದ್ದಾನೆ. ತ್ರಿವಿಕ್ರಮನ ಪ್ರಾಕೃತ ವ್ಯಾಕರಣ ಕರ್ನಾಟಕದ ಕೊಡುಗೆಯಾಗಿದೆ ಎಂದು ಕೆಲವರ ಅಭಿಪ್ರಾಯ.

ಪ್ರಾಕೃತದಂತೆಯೇ ಪಾಳಿ ಭಾಷೆಯಲ್ಲಿಯಂತೂ ವ್ಯಾಕರಣ ಗ್ರಂಥಗಳು ಭಾರತದಲ್ಲಿ ರಚಿತವಾಗಿದ್ದವು. ಪಾಳಿ ವ್ಯಾಕರಣಗಳಿಗೆ ಸಂಸ್ಕೃತ ವ್ಯಾಕರಣಗಳನ್ನೇ ಮಾದರಿ ಯನ್ನಾಗಿ ಬಳಸಿಕೊಳ್ಳಲಾಗುತ್ತಿದ್ದಿತು. ಪ್ರಾಕೃತದ ಕೆಲವು ವ್ಯಾಕರಣಗಳು ಸಂಸ್ಕೃತದಲ್ಲಿ

ರಚಿತವಾಗಿದ್ದರೆ, ಪಾಳಿ ವ್ಯಾಕರಣಗಳು ಪಾಳಿಯಲ್ಲಿಯೇ ರಚಿತವಾಗಿವೆ. ಬೋಧಿಸತ್ತ್ವ ವ್ಯಾಕರಣ, ಕಚ್ಚಾಯನನ ವ್ಯಾಕರಣ, ಸಬ್ಬಗುಣಾಕರ ವ್ಯಾಕರಣ, ಮೊಗ್ಗಲ್ಲಾನ್ ವ್ಯಾಕರಣ, ಸದ್ದ ನೀತಿ ವ್ಯಾಕರಣ ಮುಂತಾದುವು ಪಾಳಿ ವ್ಯಾಕರಣಗಳಲ್ಲಿ ಮುಖ್ಯವಾಗಿವೆ. ಪಾಳಿ ವ್ಯಾಕರಣಗಳಲ್ಲಿ ಕಚ್ಚಾಯನನ ವ್ಯಾಕರಣವೇ ಹೆಚ್ಚು ಪ್ರಾಚೀನವಾದದ್ದು. ಈತನ ವ್ಯಾಕರಣ ಪ್ರಕ್ರಿಯಾ ಮಾದರಿಯ ವ್ಯಾಕರಣವಾಗಿದೆ. ಪ್ರಾಕೃತ ವ್ಯಾಕರಣಗಳು ಪಾಣಿನಿಗೆ ಹೆಚ್ಚು ಋಣಿಯಾಗಿದ್ದರೆ ಪಾಳಿ ವ್ಯಾಕರಣಗಳು ಕಾತಂತ್ರ ವ್ಯಾಕರಣಕ್ಕೆ ಹೆಚ್ಚು ಋಣಿಯಾಗಿವೆ. ಥೇರ ಮೊಗ್ಗಲ್ಲಾನನ ವ್ಯಾಕರಣವೂ ಕಚ್ಚಾಯನನ ವ್ಯಾಕರಣದಂತೆ ಹೆಚ್ಚು ಮಹತ್ವಪೂರ್ಣವಾದದ್ದು. ಇದರಲ್ಲಿ ಅಷ್ಟಾಧ್ಯಾಯಿ, ಕಾತಂತ್ರ, ಚಾಂದ್ರ ವ್ಯಾಕರಣಗಳ ಪ್ರಭಾವವು ಕಂಡುಬರುತ್ತದೆ. ಸದ್ದನೀತಿ ಎಂಬ ವ್ಯಾಕರಣವನ್ನು ಅಗ್ಗವಂಶ ಎಂಬ ಬಿಕ್ಕು ರಚಿಸಿದನು. ಇದು ಕಚ್ಚಾಯನನ ವ್ಯಾಕರಣ ಆಧಾರಿತವಾದುದಾಗಿದೆ. ಪಾಳಿ ಮತ್ತು ಪ್ರಾಕೃತ ವ್ಯಾಕರಣಗಳಲ್ಲಿ ತೋರಿ ಬರುವ ಬಹು ಮುಖ್ಯವಾದ ವ್ಯತ್ಯಾಸವೇನೆಂದರೆ ಪ್ರಾಕೃತ ವ್ಯಾಕರಣಗಳು ಪ್ರಾಕೃತ ಭಾಷೆಯನ್ನು ಸಂಸ್ಕೃತದಿಂದ ನಿಷ್ಪನ್ನವಾದ ಭಾಷೆಯನ್ನಾಗಿ ಪರಿಗಣಿಸಿಕೊಂಡರೆ, ಪಾಳಿ ವ್ಯಾಕರಣಗಳು ಪಾಳಿಯನ್ನು ಒಂದು ಸ್ವತಂತ್ರ ಭಾಷೆಯನ್ನಾಗಿ ಪರಿಗಣಿಸಿಕೊಂಡಿವೆ.

ಅಶೋಕನ ಕೆಲವು ಪಾಳಿ ಶಿಲಾಶಾಸನಗಳು, ಚಂದ್ರವಳ್ಳಿಯ ಶಿಲಾಶಾಸನ ಇವು ಕರ್ನಾಟಕದಲ್ಲಿಯೇ ದೊರೆಯುತ್ತವೆ. ಶಾತವಾಹನರ ಕಾಲದಲ್ಲಿ ಬೌದ್ಧಮತ ಪ್ರಚಾರದಲ್ಲಿತ್ತು ಎಂಬುದಕ್ಕೆ ಆಧಾರಗಳು ದೊರೆಯುತ್ತವೆ. ಕರ್ನಾಟಕದ ಕೊಪ್ಪಳ ಮತ್ತು ಬಳ್ಳಗಾವಿಗಳು ಒಂದು ಕಾಲದಲ್ಲಿ ಬೌದ್ಧಮತದ ಕೇಂದ್ರಗಳಾಗಿದ್ದವು. ಬೌದ್ಧ ಧರ್ಮದ ಗ್ರಂಥಗಳು ಪಾಳಿಯಲ್ಲಿವೆ. ತ್ರಿಪಿಟಕವೂ ಪಾಳಿಯಲ್ಲಿದೆ. ಇದು ಗೌತಮ ಬುದ್ಧನ ಉಪದೇಶಗಳ ಒಂದು ಸಂಗ್ರಹ. ಕಚ್ಚಾಯನನ ವ್ಯಾಕರಣ ದಕ್ಷಿಣ ಭಾರತದಲ್ಲಿ ಪ್ರಚಾರದಲ್ಲಿತ್ತು ಎಂಬುದಕ್ಕೆ ಆಧಾರಗಳು ದೊರೆಯುತ್ತವೆ.

ಹಳಗನ್ನಡದಲ್ಲಿ ನಾಲ್ಕು ಪ್ರಮುಖ ವ್ಯಾಕರಣಗಳು ಮಾತ್ರ ದೊರೆತಿವೆ. ಅವುಗಳಲ್ಲಿ ಕಾವ್ಯಾವಲೋಕನದ ಶಬ್ದಸ್ಮೃತಿ, ಕರ್ಣಾಟಕ ಭಾಷಾಭೂಷಣ, ಶಬ್ದಮಣಿದರ್ಪಣ, ಕರ್ನಾಟಕ ಶಬ್ದಾನುಶಾಸನ ವ್ಯಾಕರಣಗಳು ಮುಖ್ಯವಾಗಿವೆ. ಇವುಗಳಲ್ಲಿ ಕರ್ಣಾಟಕ ಭಾಷಾಭೂಷಣ ಮತ್ತು ಕರ್ನಾಟಕ ಶಬ್ದಾನುಶಾಸನಗಳು ಸಂಸ್ಕೃತದಲ್ಲಿದ್ದರೆ, ಶಬ್ದಸ್ಮೃತಿ ಮತ್ತು ಶಬ್ದಮಣಿದರ್ಪಣಗಳು ಕನ್ನಡದಲ್ಲಿವೆ. ಇವುಗಳ ಜೊತೆಗೆ ಕವಿರಾಜಮಾರ್ಗವನ್ನು ಹೆಸರಿಸಿಕೊಳ್ಳಬಹುದು. ಇದರಲ್ಲಿ ಹಳಗನ್ನಡಕ್ಕೆ ಸಂಬಂಧಿಸಿದ ಅನೇಕ ವ್ಯಾಕರಣ ವಿಚಾರಗಳ ಪ್ರಸ್ತಾಪವಾಗಿದೆ.

ಕವಿರಾಜಮಾರ್ಗ ನೇರವಾಗಿ ವ್ಯಾಕರಣ ಗ್ರಂಥವಲ್ಲ. ಇದೊಂದು ಅಲಂಕಾರಿಕ ಗ್ರಂಥ. ಸಂಸ್ಕೃತದಲ್ಲಿ ಪಾಣಿನಿಗಿಂತಲೂ ಹಿಂದೆಯೇ ವ್ಯಾಕರಣ ವಿಚಾರಗಳು ರೂಪು

ಗೊಂಡಿದ್ದಂತೆಯೇ ಕವಿರಾಜಮಾರ್ಗಕ್ಕಿಂತಲೂ ಹಿಂದೆಯೇ ಕನ್ನಡದ ವ್ಯಾಕರಣ ವಿಚಾರಗಳು ರೂಪುಗೊಂಡಿದ್ದವು. ಪ್ರಾಚೀನ ಕಾಲದಲ್ಲಿ ಕಾವ್ಯಶಾಸ್ತ್ರಗಳ ಜೊತೆಜೊತೆಯಲ್ಲಿಯೇ ವ್ಯಾಕರಣ ವಿಚಾರಗಳ ಚಿಂತನೆಯೂ ನಡೆಯುತ್ತಲೇ ಬಂದಿರಬೇಕು. ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳ ಪ್ರಭಾವಕ್ಕೆ ಒಳಗಾಗಿದ್ದ ಕನ್ನಡ ಭಾಷೆಯಲ್ಲಿಯೂ ವ್ಯಾಕರಣ ನಿಯಮಗಳು ಸಾಕಷ್ಟು ರೂಪುಗೊಂಡಿರಬಹುದೆಂದು ಇದರಿಂದ ಊಹಿಸಲು ಅವಕಾಶಗಳಿವೆ. ಕವಿರಾಜಮಾರ್ಗ ಕಾವ್ಯದೋಷಗಳನ್ನು, ವ್ಯಾಕರಣ ದೋಷಗಳನ್ನು ಮತ್ತು ಪ್ರಯೋಗ ದೋಷಗಳನ್ನು ಎತ್ತಿ ತೋರಿಸುತ್ತದೆ. ಇದರಲ್ಲಿ ವಿಭಕ್ತಿ, ಕಾರಕ, ಕರ್ಮ, ಕರಣ, ಸಂಬೋಧನೆ, ಮುಂತಾದ ಪಾರಿಭಾಷಿಕ ಶಬ್ದಗಳನ್ನು ವಿವರಣೆಗಳಿಲ್ಲದೆ ಬಳಸಲಾಗಿದೆ. ಅಲಂಕಾರ, ಛಂದಸ್ಸು, ವ್ಯಾಕರಣಗಳಿಗೆ ಸಂಬಂಧಿಸಿದ ಅನೇಕ ವಿಚಾರಗಳು ಇದರಲ್ಲಿ ಪ್ರಸ್ತಾಪವಾಗಿವೆ. ಕವಿರಾಜಮಾರ್ಗಕ್ಕಿಂತ ಹಿಂದೆ ರಚಿತವಾಗಿದ್ದ ವ್ಯಾಕರಣಗಳು ಸಂಸ್ಕೃತದ ಹಾದಿಯಲ್ಲಿಯೇ ರಚಿತವಾಗಿದ್ದವು. ಆದರೆ ಅಂತಹ ವ್ಯಾಕರಣಗಳು ದೊರಕಿಲ್ಲ.

ಕವಿರಾಜಮಾರ್ಗದ ಮೊದಲನೆಯ ಪರಿಚ್ಛೇದದಲ್ಲಿ ಸಮಸಂಸ್ಕೃತ, ಅರಿಸಮಾಸ ದೋಷ, ವಿರೂಪಸಂಧಿ, ಕಾರಕ ವಚನ, ಸಮುಚ್ಚಯ ಮುಂತಾದವುಗಳ ದೋಷಗಳನ್ನು ಹೇಳಿದೆ. ಎರಡನೆಯ ಪರಿಚ್ಛೇದದಲ್ಲಿ ಕ್ರಿಯಾ ವಿಶೇಷಣಗಳು, ಅವ್ಯಯಗಳ ಪ್ರಯೋಗ, ದಕ್ಷಿಣೋತ್ತರ ಮಾರ್ಗ, ಕೆಲವು ಕ್ರಿಯಾ ಪದಗಳ ವಿಚಾರ ಉಕ್ತವಾಗಿದೆ. ಕವಿರಾಜಮಾರ್ಗದಲ್ಲಿ ಉಕ್ತವಾಗಿರುವ ಪಾರಿಭಾಷಿಕ ಶಬ್ದಗಳು ಮುಂದಿನ ವ್ಯಾಕರಣಗಳಲ್ಲಿ ಹಾಗೆಯೇ ಮುಂದುವರಿದಿದೆ.

ಕವಿರಾಜಮಾರ್ಗ ಮತ್ತು ಶಬ್ದಸ್ಮೃತಿಗಳ ನಡುವಿನ ಕಾಲದಲ್ಲಿ ಕೆಲವು ವ್ಯಾಕರಣ ಗ್ರಂಥಗಳು ರಚಿತವಾಗಿದ್ದಿರಬಹುದು. ಆ ಯಾವ ವ್ಯಾಕರಣ ಗ್ರಂಥವೂ ಲಭ್ಯವಾಗಿಲ್ಲ. ರನ್ನ, ನಯಸೇನ, ಸುಮನೋಬಾಣ, ಜನ್ನ ಮುಂತಾದವರು ವೈಯಾಕರಣರೆಂದು ಅವರು ಕನ್ನಡದಲ್ಲಿ ವ್ಯಾಕರಣಗಳನ್ನು ರಚಿಸಿದ್ದರೆಂದು ಹೇಳುವ ಕೆಲವು ಉಲ್ಲೇಖಗಳು ದೊರೆಯುತ್ತವೆ. ಅಜಿತ ಪುರಾಣದಲ್ಲಿ ರನ್ನನು ವ್ಯಾಕರಣ ಪಂಡಿತನಾಗಿದ್ದನೆಂದು ಉಲ್ಲೇಖಿಸಲಾಗಿದೆ. ಆದರೆ ಅವನು ಕನ್ನಡ ವ್ಯಾಕರಣವೊಂದನ್ನು ರಚಿಸಿದ್ದನು ಎಂಬುದಕ್ಕೆ ಆಧಾರಗಳಿಲ್ಲ. ಜನ್ನನು ಅನಂತನಾಥಪುರಾಣದಲ್ಲಿ ರನ್ನನು ವೈಯಾಕರಣನೆಂದು ಹೇಳಿದ್ದಾನೆ. ಇದರಿಂದ ರನ್ನನು ವ್ಯಾಕರಣ ಗ್ರಂಥವೊಂದನ್ನು ರಚಿಸಿದ್ದಾನೆಂದು ಹೇಳಲು ಅವಕಾಶಗಳಿವೆ.

ಮುಳುಗುಂದದ ಶಿಲಾಶಾಸನದಲ್ಲಿ ನಯಸೇನನು ವೈಯಾಕರಣನೆಂದು ಉಲ್ಲೇಖಿಸಲಾಗಿದೆ. ಭಾಷಾಭೂಷಣದಲ್ಲಿಯೂ ನಯಸೇನನ ಪ್ರಸ್ತಾಪವಿದೆ. ಈತನು ಕನ್ನಡ ವ್ಯಾಕರಣವೊಂದನ್ನು ಬರೆದಿರಬೇಕೆಂದು ಕೆಲವರ ಊಹೆ. ಆತನ ಯಾವ ವ್ಯಾಕರಣವೂ ದೊರೆತಿಲ್ಲ.

ಜನ್ನನ ಅನಂಥನಾಥ ಪುರಾಣದಲ್ಲಿ ಸುಮನೋಬಾಣನೆಂಬ ವೈಯಾಕರಣನ ಉಲ್ಲೇಖವಿದೆ. ಕೇಶಿರಾಜನ ಶಬ್ದಮಣಿದರ್ಪಣದಲ್ಲಿಯೂ ಸುಮನೋಬಾಣನ ಹೆಸರನ್ನು ಹೇಳಲಾಗಿದೆ. ಈ ಸುಮನೋಬಾಣನ ಬಗ್ಗೆ ವಿದ್ವಾಂಸರಲ್ಲಿ ಅಭಿಪ್ರಾಯ ಭೇದಗಳಿವೆ. ಶಬ್ದಮಣಿದರ್ಪಣದಲ್ಲಿ ಸುಮನೋಬಾಣನು ವೈಯಾಕರಣನೆಂದು ಹೇಳಿಲ್ಲ. ಈತನು ಕನ್ನಡದಲ್ಲಿ ವ್ಯಾಕರಣವನ್ನು ಬರೆದಿದ್ದನೆಂದು ಕೆಲವರು ಊಹಿಸಿದ್ದಾರೆ. ಆದರೆ ಆ ಯಾವ ವ್ಯಾಕರಣವೂ ದೊರೆತಿಲ್ಲ.

ಯಶೋಧರಚರಿತೆ ಮತ್ತು ಅನಂತನಾಥ ಪುರಾಣಗಳಲ್ಲಿ ರನ್ನ, ಜನ್ನರು ವೈಯಾಕರಣರೆಂದು ಉಲ್ಲೇಖಿಸಲಾಗಿದೆ. ಆದರೆ ಇವರು ವ್ಯಾಕರಣ ರಚಿಸಿದ್ದರೆಂದು ಎಲ್ಲಿಯೂ ಹೇಳಿಲ್ಲ. ಅವರ ಯಾವ ವ್ಯಾಕರಣಗಳು ದೊರಕಿಲ್ಲ.

ರನ್ನ, ನಯಸೇನ, ಸುಮನೋಬಾಣ, ಜನ್ನರು ಒಂದು ಪಕ್ಷ ಕನ್ನಡದಲ್ಲಿ ವ್ಯಾಕರಣಗಳನ್ನು ರಚಿಸಿದ್ದರೆ ಸಂಸ್ಕೃತ ವ್ಯಾಕರಣಗಳಲ್ಲಿಯಾಗಲಿ, ಕನ್ನಡ ವ್ಯಾಕರಣ ಗಳಲ್ಲಿಯಾಗಲಿ ಅವರ ಹೆಸರು ಉಲ್ಲೇಖವಾಗುತ್ತಿದ್ದಿತು. ಆದರೆ ಇವರ ಯಾವ ಹೆಸರುಗಳು ಹಾಗೆ ಉಲ್ಲೇಖವಾಗಿಲ್ಲ. ಶಬ್ದಸ್ಮೃತಿ, ಶಬ್ದಮಣಿದರ್ಪಣಗಳಲ್ಲಿ ಉಲ್ಲೇಖಿಸಲಾಗಿರುವ ಕೆಲವು ಉಕ್ತಿಗಳಿಂದ ಆ ಕಾಲದಲ್ಲಿ ಕೆಲವು ವ್ಯಾಕರಣಗಳು ಕನ್ನಡದಲ್ಲಿ ರಚಿತವಾಗಿದ್ದಿರಬಹುದೆಂದು ಊಹಿಸಲು ಅವಕಾಶಗಳಿವೆ. ಆದರೆ ಅವುಗಳ ಬಗ್ಗೆ ಯಾವುದನ್ನೂ ಖಚಿತವಾಗಿ ಹೇಳಲು ಬರುವುದಿಲ್ಲ.

ಪ್ರಾಚೀನ ಕಾಲದಲ್ಲಿ ಕವಿಯಾಗಿದ್ದವನಿಗೆ ವ್ಯಾಕರಣ ಅಭ್ಯಾಸದ ಅವಶ್ಯಕತೆ ಇದ್ದಿತು. ಆದ್ದರಿಂದ ಅವರು ವ್ಯಾಕರಣದಲ್ಲಿ ಪಂಡಿತರಾಗಿರುತ್ತಿದ್ದರು. ಅಂದಮಾತ್ರಕ್ಕೆ ಅವರು ವ್ಯಾಕರಣ ರಚಿಸಲೇಬೇಕೆಂಬುದೇನೂ ಇಲ್ಲ. ಭಾರತದಲ್ಲಿ ಬೇರೆ ಬೇರೆ ವ್ಯಾಕರಣಗಳು ಆ ಕಾಲದಲ್ಲಿ ರಚನೆಯಾಗಿವೆ. ಅಂತೆಯೇ ಕನ್ನಡದಲ್ಲಿಯೂ ವ್ಯಾಕರಣಗಳು ರಚನೆಯಾಗಿದ್ದಿರಬಹುದು. ಹಾಗೆ ನಿರ್ಮಾಣವಾದ ವ್ಯಾಕರಣಗಳಲ್ಲಿ ನಾಲ್ಕು ವ್ಯಾಕರಣಗಳು ಮಾತ್ರ ದೊರೆತಿವೆ. ಉಳಿದ ಯಾವ ವ್ಯಾಕರಣಗಳೂ ಕನ್ನಡದಲ್ಲಿ ದೊರಕಿಲ್ಲ. ದೊರೆತಿರುವ ಹಳಗನ್ನಡದ ಆ ನಾಲ್ಕು ವಾಕ್ಯಗಳಲ್ಲಿ ಕಾವ್ಯಾವಲೋಕನದಲ್ಲಿ ಉಕ್ತವಾಗಿರುವ ಶಬ್ದಸ್ಮೃತಿಯೇ ಮೊತ್ತಮೊದಲನೆಯದು. ಕರ್ಣಾಟಕ ಭಾಷಾ ಭೂಷಣ ಅವುಗಳಲ್ಲಿ ಎರಡನೆಯದು. ಕೇಶಿರಾಜನ ಶಬ್ದಮಣಿದರ್ಪಣ ಅವುಗಳಲ್ಲಿ ಮೂರನೆಯದು. ಕರ್ಣಾಟಕ ಶಬ್ದಾನುಶಾಸನ ಅವುಗಳಲ್ಲಿ ಕೊನೆಯದು. ಶಬ್ದಮಣಿ ದರ್ಪಣ ಮತ್ತು ಶಬ್ದಸ್ಮೃತಿಗಳು ಮೇಲೆ ಹೇಳಿದಂತೆ ಕನ್ನಡದಲ್ಲಿ ರಚಿತವಾಗಿದ್ದರೆ, ಕರ್ಣಾಟಕ ಭಾಷಾಭೂಷಣ ಮತ್ತು ಕರ್ನಾಟಕ ಶಬ್ದಾನುಶಾಸನಗಳು ಸಂಸ್ಕೃತದಲ್ಲಿ ರಚಿತವಾಗಿವೆ. ಇವುಗಳ ಜೊತೆಗೆ ಶ್ರೀವಿಜಯ ರಚಿತ ಕವಿರಾಜಮಾರ್ಗವನ್ನು ಹೆಸರಿಸಿಕೊಳ್ಳಬಹುದು. ಶಬ್ದಾನುಶಾಸನ ಭಾಷಾಭೂಷಣಗಳು ಪೂರ್ಣವಾಗಿ ಸಂಸ್ಕೃತ ವ್ಯಾಕರಣಗಳನ್ನು ಅನುಸರಿಸಿ ರಚಿತವಾಗಿದ್ದರೆ ಶಬ್ದಸ್ಮೃತಿ ಮತ್ತು ಶಬ್ದಮಣಿ

ದರ್ಪಣಗಳು ಸಂಸ್ಕೃತ ವ್ಯಾಕರಣಗಳನ್ನು ಅನುಸರಿಸಿ ರಚಿತವಾಗಿದ್ದರೂ ಅವು ಕೆಲವು ವಿಚಾರಗಳನ್ನು ಅನುಕೂಲ ಮತ್ತು ಕನ್ನಡದ ಜಾಯಮಾನಕ್ಕೆ ತಕ್ಕಂತೆ ಮಾರ್ಪಾಡು ಮಾಡಿಕೊಂಡಿವೆ.

ಶಬ್ದಸ್ಮೃತಿ ವ್ಯಾಕರಣ ನಾಗವರ್ಮನಿಂದ ರಚಿತವಾದದ್ದು. ಇದರ ಕೊನೆಯ ಪದ್ಯದಿಂದ ಇದು ವ್ಯಕ್ತವಾಗುತ್ತದೆ. ಭಾಷಾಭೂಷಣವನ್ನು ರಚಿಸಿದವನು ಕೂಡ ನಾಗವರ್ಮನೆ. ಭಾಷಾಭೂಷಣದ ಕೊನೆಯ ಸೂತ್ರದಲ್ಲಿ ಇದನ್ನು ಹೇಳಲಾಗಿದೆ. ಭಟ್ಟಾಕಳಂಕನು ತನ್ನ ಶಬ್ದಾನುಶಾಸನದಲ್ಲಿ ಭಾಷಾಭೂಷಣ ರಚಿಸಿದವನು ನಾಗವರ್ಮನೆಂದೇ ಹೇಳಿದ್ದಾನ. ಇಷ್ಟಾದರೂ ಕೆಲವರು ಶಬ್ದಸ್ಮೃತಿ ಮತ್ತು ಭಾಷಾಭೂಷಣ ವ್ಯಾಕರಣ ಗ್ರಂಥಗಳನ್ನು ರಬಿಸಿದವರು ಬೇರೆಬೇರೆ ನಾಗರ್ವರ್ಮರೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಎರಡು ವ್ಯಾಕರಣಗಳಲ್ಲಿ ಕಂಡುಬರುವ ಸಮಾನ ಅಂಶಗಳನ್ನು ಆಧರಿಸಿ ಕೆಲವರು ಈ ಎರಡು ವ್ಯಾಕರಣಗಳನ್ನು ರಚಿಸಿದವನು ಒಬ್ಬನೇ ನಾಗವರ್ಮನೆಂದು ಹೇಳಿದ್ದಾರೆ. ಈ ದಿಸೆಯಲ್ಲಿ ಯಾವುದನ್ನೂ ಖಚಿತವಾಗಿ ಹೇಳಲು ಬರುವುದಿಲ್ಲ. ಶಬ್ದಸ್ಮೃತಿ ಮತ್ತು ಭಾಷಾಭೂಷಣ ವ್ಯಾಕರಣಗಳು ಬೇರೆ ಬೇರೆ ಭಾಷೆಗಳಲ್ಲಿರುವ ವ್ಯಾಕರಣಗಳು. ಇಷ್ಟೇ ಅಲ್ಲ ಈ ಎರಡು ವ್ಯಾಕರಣಗಳಲ್ಲಿಯೂ ಅನೇಕ ಸಮಾನ ಅಂಶಗಳು ನಿರೂಪಿತವಾಗಿವೆ. ಅವುಗಳಲ್ಲಿ ಕೆಲವು ಬೇರೆ ಬೇರೆ ಅಂಶಗಳು ಕೂಡ ಕಂಡುಬರುತ್ತವೆ. ಈ ಎರಡು ವ್ಯಾಕರಣಗಳನ್ನು ಪರಸ್ಪರ ಹೋಲಿಸಿ ಪರಿಶೀಲಿಸಿದಾಗ ಅವುಗಳ ಪ್ರಯೋಗ ಇತ್ಯಾದಿಗಳಲ್ಲಿ ಸಾಕಷ್ಟು ವ್ಯತ್ಯಾಸವೂ ಕಂಡುಬರುತ್ತದೆ.

ಶಬ್ದಸ್ಮೃತಿಯಲ್ಲಿ ಒಟ್ಟು 96 ಸೂತ್ರಗಳಿವೆ. ಈ ಸೂತ್ರಗಳಲ್ಲಿ ಕನ್ನಡ ವ್ಯಾಕರಣವನ್ನು ಸಂಕ್ಷಿಪ್ತವಾಗಿ ನಿರೂಪಿಸುವ ಪ್ರಯತ್ನ ಮಾಡಲಾಗಿದೆ. ಸಂಜ್ಞಾ, ಸಂಧಿ, ವಿಭಕ್ತಿ, ಕಾರಕ, ಸಮಾಸ, ತದ್ಧಿತ, ಆಖ್ಯಾತ ಪ್ರಕರಣಗಳು ಇದರಲ್ಲಿ ಮುಖ್ಯವಾಗಿವೆ.

ಕರ್ನಾಟಕ ಭಾಷಾಭೂಷಣ ಸಂಸ್ಕೃತದಲ್ಲಿ ದೊರೆಯುವ ಮೊತ್ತ ಮೊದಲ ಕನ್ನಡ ವ್ಯಾಕರಣ. ಇದರಲ್ಲಿ ಒಟ್ಟು 269 ಸೂತ್ರಗಳಿವೆ. ಇದರಲ್ಲಿ ಸಂಜ್ಞಾ, ಸಂಧಿ, ವಿಭಕ್ತಿ, ಕಾರಕ, ಯುಷ್ಮದಾದಿ ಸಮಾಸ, ತದ್ಧಿತ, ಆಖ್ಯಾತ, ಅವ್ಯಯ ಮತ್ತು ನಿಪಾತ ಎಂದು ಹತ್ತು ಪ್ರಕರಣಗಳಿವೆ. ಇದರಲ್ಲಿ ಶಬ್ದಸ್ಮೃತಿಗಿಂತಲೂ ವ್ಯಾಕರಣ ವಿಚಾರಗಳು ಹೆಚ್ಚು ವಿಸ್ತಾರವಾಗಿವೆ. ಭಾಷಾಭೂಷಣಕಾರನೇ ತನ್ನ ಸೂತ್ರಗಳಿಗೆ ತಾನೇ ವೃತ್ತಿಯನ್ನು ಬರೆದಿದ್ದಾನೆ. ಇದರಲ್ಲಿ ಸಂಸ್ಕೃತ ವ್ಯಾಕರಣಗಳ ಪ್ರಭಾವ ಸ್ಪಷ್ಟವಾಗಿ ಗೋಚರವಾಗುವುದು. ಭಾಷಾಭೂಷಣ ಎಂಬ ಹೆಸರು ವಿಶಿಷ್ಟವಾದದ್ದು. ಸಂಸ್ಕೃತದಲ್ಲಿ ಈ ಹೆಸರಿನ ಯಾವ ವ್ಯಾಕರಣವೂ ದೊರೆಯುವುದಿಲ್ಲ. ತೆಲುಗಿನಲ್ಲಿ ಆಂಧ್ರ ಭಾಷಾಭೂಷಣ ಎಂಬ ಹೆಸರಿನ ವ್ಯಾಕರಣವಿದೆ. ಇದರ ಮೇಲೆ ಭಾಷಾಭೂಷಣದ ಪ್ರಭಾವ ಉಂಟಾಗಿರಬಹುದೆಂದು ತೋರುತ್ತದೆ.

ಕೇಶಿರಾಜನ ಶಬ್ದಮಣಿದರ್ಪಣ ಹಳಗನ್ನಡ ವ್ಯಾಕರಣಗಳಲ್ಲಿ ಹೆಚ್ಚು ಮಹತ್ವಪೂರ್ಣವಾದದ್ದು. ಕನ್ನಡದ ವ್ಯಾಕರಣ ವಿಚಾರಗಳನ್ನು ಉಳಿದ ವ್ಯಾಕರಣಗಳಿಗಿಂತ ಹೆಚ್ಚು ಸಮರ್ಪಕವಾಗಿ ಇದರಲ್ಲಿ ನಿರೂಪಿಸಲಾಗಿದೆ. ಶಬ್ದಮಣಿದರ್ಪಣದಲ್ಲಿ ಒಟ್ಟು 337 ಸೂತ್ರಗಳಿವೆ. ಸಂಧಿ, ನಾಮ, ಸಮಾಸ, ತದ್ಧಿತ, ಆಖ್ಯಾತ, ಧಾತು, ಅಪಭ್ರಂಶ ಅವ್ಯಯ ಎಂಬ ಪ್ರಕರಣಗಳಿವೆ. ಕನ್ನಡದ ವಿಶಿಷ್ಟ ಲಕ್ಷಣಗಳಾದ ಱಳ ಘಟಿತಶಬ್ದಗಳು, ನಿತ್ಯಬಿಂದುಕ ಮತ್ತು ವಿಕಲ್ಪ ಬಿಂದುಕಗಳು, ನಿಯತ ದ್ವಿತ್ವಗಳು, ಶಿಥಿಲ ದ್ವಿತ್ವಗಳು, ಧಾತುಗಳು ಅವುಗಳ ಅರ್ಥನಿರ್ದೇಶನ ಮುಂತಾದುವು ಇದರಲ್ಲಿ ವಿವರವಾಗಿ ನಿರೂಪಿತವಾಗಿವೆ. ಶಬ್ದಮಣಿದರ್ಪಣದಲ್ಲಿ ಶಬ್ದಸ್ಮೃತಿ, ಕವಿರಾಜಮಾರ್ಗ, ಭಾಷಾಭೂಷಣಗಳ ಪ್ರಭಾವವು ಕಂಡುಬರುತ್ತದೆ. ಹಳಗನ್ನಡ ವ್ಯಾಕರಣಗಳಲ್ಲಿ ಯಾವುದರಲ್ಲಿಯೂ ಕಂಡುಬಾರದ ಱ ಕಾರ ಯುಕ್ತ ಪದಗಳಪಟ್ಟಿ, ಧಾತುಪಾಠ, ಪ್ರಯೋಗಸಾರ ಮುಂತಾದ ವಿಶಿಷ್ಟ ವಿಚಾರಗಳು ಶಬ್ದಮಣಿದರ್ಪಣದಲ್ಲಿವೆ. ಕೇಶಿರಾಜನ ಭಾಷಾಪ್ರಜ್ಞೆ, ವ್ಯಾಕರಣ ವಿಚಾರಗಳ ಸಮಗ್ರತೆ, ಪ್ರಯೋಗನಿಷ್ಠೆ, ಸಮಕಾಲೀನ ಪ್ರಜ್ಞೆ, ಕಾವ್ಯಾಭಿರುಚಿ ಇತ್ಯಾದಿ ಗುಣಗಳು ಶಬ್ದಮಣಿದರ್ಪಣದಲ್ಲಿ ವ್ಯಕ್ತವಾಗುತ್ತವೆ. ಪಾಶ್ಚಾತ್ಯ ವಿದ್ವಾಂಸರು ಶಬ್ದಮಣಿದರ್ಪಣವನ್ನು ದ್ರಾವಿಡ ಭಾಷೆಗಳ ವ್ಯಾಕರಣಗಳಲೆಲ್ಲಾ ಸರ್ವಶ್ರೇಷ್ಠಕೃತಿ ಎಂದು ಮುಕ್ತ ಕಂಠದಿಂದ ಹೊಗಳಿದ್ದಾರೆ.

ಕೇಶಿರಾಜನ ತಂದೆ ಮತ್ತು ಮತದ ಬಗ್ಗೆ ಖಚಿತವಾದ ಯಾವ ಆಧಾರಗಳೂ ದೊರೆಯುವುದಿಲ್ಲ. ಈ ಕಾರಣದಿಂದ ಆತನ ತಂದೆ ಯಾರು, ಆತನ ಮತ ಯಾವುದು ಎಂಬುವುಗಳ ಬಗ್ಗೆ ಖಚಿತವಾಗಿ ಹೇಳಲು ಬರುವುದಿಲ್ಲ. ಈ ದೆಸೆಯಲ್ಲಿ ವಿದ್ವಾಂಸರಲ್ಲಿ ಅಭಿಪ್ರಾಯಭೇದಗಳಿವೆ. ಭಾಷಾಭೂಷಣ ಮತ್ತು ಇತರ ಸಂಸ್ಕೃತದ ಪ್ರಕ್ರಿಯಾ ಗ್ರಂಥಗಳನ್ನು ಆಧರಿಸಿ ಕೇಶಿರಾಜನು ತನ್ನ ಸೂತ್ರಗಳಿಗೆ ತಾನೆ ವೃತ್ತಿಯನ್ನು ಬರೆದಿದ್ದಾನೆ. ಲಿಂಗಣಾರಾಧ್ಯ ವೃತ್ತಿಗೆ ಕೇಶಿರಾಜನ ವೃತ್ತಿಯೇ ಮೂಲ ಆಧಾರವಾಗಿರುವಂತೆ ತೋರಿಬರುತ್ತದೆ.

ಶಬ್ದಮಣಿದರ್ಪಣದ ಪ್ರಯೋಗಗಳು ವ್ಯಾಕರಣದ ಅಭ್ಯಾಸಕ್ಕೆ ತುಂಬ ಉಪಯುಕ್ತವಾಗಿವೆ. ಈ ಪ್ರಯೋಗಗಳ ವಿಚಾರದಲ್ಲಿಯೂ ಪಾಠದ ಸಮಸ್ಯೆಗಳಿವೆ. ಶಬ್ದಮಣಿದರ್ಪಣ ಎಂಬ ಹೆಸರನ್ನು ಸಂಸ್ಕೃತ ವ್ಯಾಕರಣಗಳ ಹೆಸರಿನೊಡನೆ ಹೋಲಿಸಿದಾಗ ಇದು ವೈಶಿಷ್ಟ್ಯಪೂರ್ಣವಾದ ಹೆಸರಿನಂತೆ ಕಂಡುಬರುತ್ತದೆ. ಕೃತಿಕಾರನ ದೃಷ್ಟಿ ಅವನ ಈ ವ್ಯಾಕರಣದಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿದೆ. ಕೇಶಿರಾಜ ತನಗಿಂತ ಹಿಂದಿನ ವೈಯಾಕರಣರು ಹೇಳಿರುವ ವಿಚಾರಗಳಲ್ಲಿ ಭಿನ್ನ ಅಭಿಪ್ರಾಯವಿದ್ದ ಕಡೆ ಅವುಗಳನ್ನು ಒತ್ತಿ ಹೇಳಿರುವುದು ಕಂಡುಬರುತ್ತದೆ. ಪ್ರಾಚೀನರು ಯಾರೂ ಹೇಳದಿರುವ ಅನೇಕ ವಿಚಾರಗಳನ್ನು ಕೇಶಿರಾಜನು ತನ್ನ ವ್ಯಾಕರಣದಲ್ಲಿ ಹೇಳಿದ್ದಾನೆ. ಕ್ಷ ಳ ವಿಚಾರ, ಎ ಒಗಳ ವಿಚಾರ, ಸಮಸಂಸ್ಕೃತ ಮತ್ತು ಅಚ್ಚಕನ್ನಡ ಶಬ್ದಗಳ ಸಮಾಸ, ಮೂರು ಲಿಂಗಗಳು,

ಎರಡು ವಚನಗಳು, ಗಮಕ ಸಮಾಸ ಮುಂತಾದುವುಗಳನ್ನು ಕೇಶಿರಾಜನು ಶಬ್ದಮಣಿ ದರ್ಪಣದಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ.

ಶಬ್ದಸ್ಮೃತಿ ಮತ್ತು ಭಾಷಾಭೂಷಣಗಳು ಕನ್ನಡದಲ್ಲಿ ಮಹಾಪ್ರಾಣಾಕ್ಷರಗಳಿವೆ ಎಂದರೆ ಕೇಶಿರಾಜ ಶಬ್ದಮಣಿದರ್ಪಣದಲ್ಲಿ ಕನ್ನಡದಲ್ಲಿ ಮಹಾಪ್ರಾಣಾಕ್ಷರಗಳಿಲ್ಲ ಎಂದಿದ್ದಾನೆ. ಮಹಾಪ್ರಾಣಾಕ್ಷರಗಳು ಕನ್ನಡಕ್ಕೆ ಸಹಜವಲ್ಲದಿದ್ದರೂ ಸಂಖ್ಯಾನು ಕರಣಾದಿ ಶಬ್ದಗಳಲ್ಲಿ ಮಾತ್ರ ಇವು ಕಾಣಿಸಿಕೊಳ್ಳುತ್ತವೆ ಎಂದು ಹೇಳಿದ್ದಾನೆ. ಶಬ್ದಸ್ಮೃತಿ ಮತ್ತು ಭಾಷಾಭೂಷಣಗಳು ಸಂಸ್ಕೃತ ಮತ್ತು ಅಚ್ಚಕನ್ನಡ ಶಬ್ದಗಳನ್ನು ಸೇರಿಸಿ ಸಮಾಸ ಮಾಡಬಹುದೆಂದರೆ, ಶಬ್ದಮಣಿದರ್ಪಣ ಹಾಗೆ ಸಮಾಸ ಮಾಡ ಬಾರದು ಎಂದು ಹೇಳಿದೆ. ಸಂಸ್ಕೃತದಲ್ಲಿರುವಂತೆ ಒಂಬತ್ತು ಬಗೆಯ ಲಿಂಗಗಳು ಇವೆಯಾದರೂ ಕನ್ನಡದಲ್ಲಿ ಮೂರು ಬಗೆಯ ಲಿಂಗಗಳು ಪ್ರಧಾನವಾಗಿವೆ ಎಂದು ಶಬ್ದಮಣಿದರ್ಪಣ ಹೇಳುತ್ತದೆ. ಈ ವಿವರಣೆ ಶಬ್ದಸ್ಮೃತಿ ಮತ್ತು ಭಾಷಾಭೂಷಣಗಳಲ್ಲಿ ಇಲ್ಲ. ಕವಿರಾಜ ಮಾರ್ಗ ಕನ್ನಡದಲ್ಲಿ ಎರಡು ವಚನಗಳಿವೆ ಎಂದರೆ, ಶಬ್ದಸ್ಮೃತಿ ಮತ್ತು ಭಾಷಾಭೂಷಣಗಳು ಕನ್ನಡದಲ್ಲಿ ಮೂರು ಬಗೆಯ ವಚನಗಳಿವೆ ಎಂದಿವೆ. ಶಬ್ದಮಣಿದರ್ಪಣ ಕನ್ನಡದಲ್ಲಿ ಮೂರು ಬಗೆಯ ವಚನಗಳಿವೆಯಾದರೂ ದ್ವಿವಚನ ವನ್ನು ಸಂದರ್ಭಕ್ಕೆ ತಕ್ಕಂತೆ ತಿಳಿಯಬೇಕೆಂದು ಹೇಳಿದೆ. ಶಬ್ದಮಣಿದರ್ಪಣದಲ್ಲಿ ಗಮಕ ಸಮಾಸ ಕೇಶಿರಾಜನ ಸ್ವತಂತ್ರ ಸೃಷ್ಟಿಯಾದರೆ, ಶಬ್ದಸ್ಮೃತಿ ಮತ್ತು ಭಾಷಾಭೂಷಣ ಗಳಲ್ಲಿ ಗಮಕ ಸಮಾಸದ ಪ್ರಸ್ತಾಪವಿಲ್ಲ. ತನಗಿಂತ ಹಿಂದಿನವರ ಹೇಳಿಕೆಗಳನ್ನು ಕೇಶಿರಾಜನು ಗಮನಿಸಿದ್ದರೂ ಅದೇ ಹಾದಿಯಲ್ಲಿ ಮುಂದುವರಿಯುತ್ತಾ ಕೆಲವು ಸಂದರ್ಭಗಳಲ್ಲಿ ಅವನು ಎಡವಿದ್ದಾನೆನ್ನಬಹುದು.

ಭಟ್ಟಾಕಳಂಕನ ಶಬ್ದಾನುಶಾಸನ ಹಳಗನ್ನಡ ವ್ಯಾಕರಣಗಳಲ್ಲಿ ಹೆಚ್ಚು ಪ್ರೌಢವಾದ ವ್ಯಾಕರಣ. ಇದು ಸಂಸ್ಕೃತದಲ್ಲಿದೆ. ಇದರಲ್ಲಿ 592 ಸೂತ್ರಗಳಿವೆ. ಈ ಸೂತ್ರಗಳಿಗೆ ಭಾಷಾಮಂಜರಿ ಎಂಬ ವೃತ್ತಿಯೂ, ಮಂಜರಿಮಕರಂದ ಎಂಬ ವ್ಯಾಖ್ಯಾನವೂ ಇವೆ. ಶಬ್ದಾನುಶಾಸನ ಎಂಬ ಹೆಸರು ಸಂಸ್ಕೃತ ವ್ಯಾಕರಣಗಳಲ್ಲಿಯೂ ದೊರೆಯುತ್ತದೆ. ಇದರಲ್ಲಿ ಪಾಣಿನಿಯ ವ್ಯಾಕರಣ ನಿರೂಪಣಾ ಪದ್ಧತಿಯನ್ನು ಅನುಸರಿಸಲಾಗಿದೆ. ಶಬ್ದ ಮಣಿದರ್ಪಣ, ಶಾಕಟಾಯನ ಮತ್ತು ಕಾತಂತ್ರ ವ್ಯಾಕರಣ ಪದ್ಧತಿಯನ್ನು ಅನುಸರಿಸಿದೆ. ಒಟ್ಟಿನಲ್ಲಿ ಈ ವ್ಯಾಕರಣ ಹಳಗನ್ನಡ ವ್ಯಾಸಂಗಕ್ಕೆ ಹೆಚ್ಚು ಉಪಯುಕ್ತವಾದದ್ದು ಆಗಿದೆ ಎನ್ನಬಹುದು.

ಹಳಗನ್ನಡ ವ್ಯಾಕರಣಗಳನ್ನು ಪರಸ್ಪರ ಹೋಲಿಸಿದಾಗ ಅವುಗಳ ಭಾಷಾ ಮಾಧ್ಯಮ ಮತ್ತು ಸೂತ್ರರಚನೆ ಇವುಗಳನ್ನು ಬಿಟ್ಟರೆ ಶಬ್ದಸ್ಮೃತಿ, ಭಾಷಾಭೂಷಣ, ಶಬ್ದಮಣಿದರ್ಪಣ ಮತ್ತು ಶಬ್ದಾನುಶಾಸನಗಳಲ್ಲಿ ವ್ಯಾಕರಣ ವಿಚಾರಗಳ ನಿರೂಪಣೆ

ಸಮಾನವಾಗಿದೆ. ಶಬ್ದಸ್ಮೃತಿ ಸಂಕ್ಷಿಪ್ತತೆಗೂ ಭಾಷಾಭೂಷಣ ಶಬ್ದಮಣಿದರ್ಪಣ ಮತ್ತು ಶಬ್ದಾನುಶಾಸನಗಳು ವಿಸ್ತಾರತೆಗೂ ಹೆಸರಾಗಿವೆ. ಶಬ್ದಸ್ಮೃತಿ ಮತ್ತು ಶಬ್ದ ಮಣಿ ದರ್ಪಣಗಳು ಕಾವ್ಯಭಾಷೆಯ ಪ್ರಯೋಗಗಳನ್ನು ಬಳಸಿಕೊಂಡರೆ ಭಾಷಾಭೂಷಣ ಮತ್ತು ಶಬ್ದಾನುಶಾಸನಗಳು ಪೂರ್ತಿ ಕೃತಿಗಳ ಕವಿ ಪ್ರಯೋಗಗಳನ್ನು ಬಳಸಿಕೊಂಡಿವೆ. ವ್ಯಾಕರಣ ವಿಚಾರಗಳ ಪ್ರತಿಪಾದನೆಯ ದೃಷ್ಟಿಯಿಂದ ಶಬ್ದಸ್ಮೃತಿಗೆ ಭಾಷಾಭೂಷಣವೂ ಶಬ್ದಸ್ಮೃತಿ ಭಾಷಾಭೂಷಣಗಳಿಗೆ ಶಬ್ದಮಣಿದರ್ಪಣವೂ, ಇವುಗಳಿಗೆ ಶಬ್ದಾನು ಶಾಸನವೂ ಋಣಿಯಾಗಿರುವಂತೆ ಕಂಡು ಬರುತ್ತವೆ. ಹಳಗನ್ನಡ ವ್ಯಾಕರಣಗಳು ಒಂದಲ್ಲ ಒಂದು ಸಂಸ್ಕೃತ ವ್ಯಾಕರಣಗಳ ಪ್ರಭಾವಕ್ಕೆ ಒಳಗಾಗಿವೆ. ಕವಿರಾಜಮಾರ್ಗ ಕಾರನು ದಂಡಿ, ಭಾಮಹರನ್ನು ಅನುಸರಿಸಿದರೆ, ಕಾವ್ಯಾವಲೋಕನ ವಾಮನ, ರುದ್ರಟ ಭಾಮಹ, ದಂಡಿ ಮುಂತಾದವರನ್ನು ಅನುಸರಿಸಿದೆ. ಹೀಗೆ ಶಬ್ದಮಣಿದರ್ಪಣ, ಶಬ್ದಾನುಶಾಸನ ವ್ಯಾಕರಣಗಳು ಸಂಸ್ಕೃತದ ಬೇರೆ ಬೇರೆ ವ್ಯಾಕರಣ ಸಂಪ್ರದಾಯಗಳನ್ನು ಅನುಸರಿಸಿರುವುದು ಕಂಡು ಬರುತ್ತದೆ. ಶಬ್ದಸ್ಮೃತಿ ಮತ್ತು ಭಾಷಾಭೂಷಣಗಳ ಕರ್ತೃ ಜೈನನಾದರೂ ಈ ವ್ಯಾಕರಣಗಳು ಪೂರ್ಣವಾಗಿ ಜೈನಸಂಪ್ರದಾಯದ ವ್ಯಾಕರಣಗಳಾದ ಜೈನೇಂದ್ರ, ಶಾಕಟಾಯನ ಮುಂತಾದವರ ವ್ಯಾಕರಣಗಳ ಪ್ರಭಾವಕ್ಕೆ ಅಷ್ಟಾಗಿ ಒಳಗಾಗಿಲ್ಲ.

ವ್ಯಾಕರಣ ಗ್ರಂಥಗಳು ಕನ್ನಡದಲ್ಲಿ ನಿರ್ಮಾಣವಾಗುವುದಕ್ಕೆ ಮುಂಚೆಯೇ ಹಳಗನ್ನಡಕಾವ್ಯಗಳಲ್ಲಿ ಸಂಸ್ಕೃತ ಶಬ್ದಗಳು ಸೇರಲು ಆರಂಭವಾಗಿದ್ದಿತು. ಆಗಿನ ಕಾಲದ ವೈಯಾಕರಣರು ಕನ್ನಡದ ಕಾವ್ಯ ಭಾಷೆಯ ಮೇಲೆ ಉಂಟಾಗಿದ್ದ ಸಂಸ್ಕೃತದ ಪ್ರಭಾವ ವನ್ನು ಗುರುತಿಸಿದ್ದರು. ಸಂಸ್ಕೃತ ವ್ಯಾಕರಣಗಳನ್ನು ಅನುಸರಿಸಿ ಹಳಗನ್ನಡ ವ್ಯಾಕರಣ ಗಳು ರಚನೆಯಾದವು. ಹಳಗನ್ನಡ ವ್ಯಾಕರಣಗಳು ಐಂದ್ರ ಪದ್ಧತಿಗೆ ಸೇರಿದ ಕಾತಂತ್ರ ವ್ಯಾಕರಣವನ್ನು ಅನುಸರಿಸಿರುವಂತೆ ತೋರಿಬರುತ್ತವೆ. ಕನ್ನಡದ ವ್ಯಾಕರಣಗಳು ಸಂಸ್ಕೃತದ ಪ್ರಕ್ರಿಯಾ ಪದ್ಧತಿಯ ವ್ಯಾಕರಣಗಳ ವರ್ಗಕ್ಕೆ ಸೇರುತ್ತವೆ. ಶಬ್ದಸ್ಮೃತಿ ಮತ್ತು ಭಾಷಾಭೂಷಣ ಇವುಗಳ ಕರ್ತೃ ಜೈನನಾದರೂ ಇವುಗಳಲ್ಲಿ ಅಷ್ಟೊಂದು ಜೈನ ಧರ್ಮದ ಪ್ರಭಾವವೇನೂ ಕಾಣಿಸಿಕೊಳ್ಳುವುದಿಲ್ಲ. ಕನ್ನಡ ವ್ಯಾಕರಣಗಳ ಸೂತ್ರ, ವೃತ್ತಿ ಪ್ರಯೋಗಗಳು ಸಂಸ್ಕೃತದ ಪ್ರಕ್ರಿಯಾಗ್ರಂಥಗಳನ್ನು ಅನುಸರಿಸಿವೆ. ಭಾಷಾ ಭೂಷಣ, ಶಬ್ದಮಣಿದರ್ಪಣಗಳು ಸೂತ್ರ, ವೃತಿ ಪ್ರಯೋಗಗಳ ರೀತಿಯಲ್ಲಿ ನಿರೂಪಿತ ವಾಗಿದ್ದರೆ, ಶಬ್ದಸ್ಮೃತಿ ಮಾತ್ರ ವೃತ್ತಿಯನ್ನು ಕೈಬಿಟ್ಟಿದೆ. ಶಬ್ದಸ್ಮೃತಿ ಮತ್ತು ಶಬ್ದ ಮಣಿದರ್ಪಣಗಳು ಮಾತ್ರ ರಚನೆಯಲ್ಲಿ ಪ್ರಾತಿಶಾಖ್ಯ ಮತ್ತು ಕಾತಂತ್ರಗಳನ್ನು ಪ್ರಧಾನವಾಗಿ ಅನುಸರಿಸಿವೆ. ಕಾರಕ ನಿರೂಪಣೆಯಲ್ಲಿ ಇವು ಪಾಣಿನಿಯ ಅಷ್ಟಾಧ್ಯಾಯಿ ಯನ್ನು ಆಧಾರವಾಗಿಟ್ಟುಕೊಂಡಿವೆ. ಹಲವು ಕಡೆಗಳಲ್ಲಿ ಸಂಸ್ಕೃತದ ಸೂತ್ರಗಳನ್ನು ಕನ್ನಡಕ್ಕೆ ಅನುವಾದಿಸಿಕೊಳ್ಳಲಾಗಿದೆ. ಭಾಷಾಭೂಷಣ, ಪ್ರಾತಿಶಾಖ್ಯ, ಕಾತಂತ್ರ,

ಅಷ್ಟಾಧ್ಯಾಯಿ ಮಾತ್ರವಲ್ಲದೆ ಸಿದ್ಧಹೇಮ ಶಬ್ದಾನುಶಾಸನದ ಸೂತ್ರಗಳನ್ನು ಬಳಸಿಕೊಂಡಿದೆ. ಸಂಸ್ಕೃತ ವ್ಯಾಕರಣಗಳ ಸೂತ್ರಗಳು ಕನ್ನಡ ವ್ಯಾಕರಣಗಳಲ್ಲಿ ವೃತ್ತಿಯಾಗಿ, ವೃತ್ತಿಗಳು ಸೂತ್ರಗಳಾಗಿ ಪರಿವರ್ತನೆಗೊಂಡಿವೆ. ಭಾಷಾಭೂಷಣ, ಶಬ್ದಮಣಿದರ್ಪಣಗಳು ಅಷ್ಟಾಧ್ಯಾಯಿ, ಕಾತಂತ್ರ ವ್ಯಾಕರಣಗಳ ಕೆಲವು ಪ್ರಯೋಗಗಳನ್ನು ಅನುವಾದಿಸಿಕೊಂಡಿವೆ.

ಹಳಗನ್ನಡ ವ್ಯಾಕರಣಗಳು ಐಂದ್ರಪದ್ಧತಿಗೆ ಸೇರಿದ ವ್ಯಾಕರಣಗಳಾದುದರಿಂದ ಕಾತಂತ್ರ ಮತ್ತು ಪ್ರಾತಿಶಾಖ್ಯಗಳಿಂದ ಅನೇಕ ಪಾರಿಭಾಷಕ ಶಬ್ದಗಳನ್ನು ಸ್ವೀಕರಿಸಿವೆ. ಸ್ವರ, ವ್ಯಂಜನ, ಸಂಧ್ಯಕ್ಷರ, ಸಮಾಸ, ಸಂಧಿ, ಸಂಹಿತೆ, ಕಾರಕ, ಸಮಾಸ ಮುಂತಾದುವುಗಳನ್ನು ಪಾಣಿನಿಯ ಅಷ್ಟಾಧ್ಯಾಯಿಯಿಂದ ಮತ್ತು ಕಾತಂತ್ರದಿಂದ ಸ್ವೀಕರಿಸಲಾಗಿದೆ. ಲಿಂಗ, ಯೋಗವಾಹಗಳನ್ನು ಕಾತಂತ್ರದಿಂದಲೂ, ವಿಸರ್ಗ ಇತ್ಯಾದಿಗಳನ್ನು ಸಿದ್ಧಹೇಮ ಶಬ್ದಾನುಶಾಸನದಿಂದಲೂ ನಪ್ ಎಂಬುದನ್ನು ಜೈನೇಂದ್ರದಿಂದಲೂ, ಉಪಾಂತ ಎಂಬುದನ್ನು ಚಾಂದ್ರದಿಂದಲೂ ಎತ್ತಿಕೊಳ್ಳಲಾಗಿದೆ. ಅವರ್ಗ ಇತ್ಯಾದಿ ಪಾರಿಭಾಷಿಕ ಶಬ್ದಗಳು ಕನ್ನಡ ವೈಯಾಕರಣರು ತಾವೇ ಕಲ್ಪಿಸಿಕೊಂಡ ಶಬ್ದಗಳು. ಕನ್ನಡ ವ್ಯಾಕರಣಗಳು ಸಂಸ್ಕೃತದ ಪ್ರಕ್ರಿಯಾ ಗ್ರಂಥಗಳನ್ನು ಅನುಸರಿಸಿ ಸಂಜ್ಞೆಗಳನ್ನು ನಿರೂಪಿಸಿದ ನಂತರ ಸಂಧಿ, ನಾಮ, ಸಮಾಸ, ತದ್ಧಿತ, ಕ್ರಿಯೆ, ಕೃದಂತ, ಅವ್ಯಯಗಳನ್ನು ನಿರೂಪಿಸಿವೆ. ಇದು ಸಂಸ್ಕೃತದ ಪ್ರಕ್ರಿಯಾ ವ್ಯಾಕರಣಗಳ ಕ್ರಮ. ಈ ಕ್ರಮವನ್ನೇ ಕನ್ನಡದ ವ್ಯಾಕರಣಗಳು ಅನುಸರಿಸಿವೆ. ವಿಷಯ ವರ್ಗೀಕರಣದ ವಿಚಾರಕ್ಕೆ ಶಬ್ದಸ್ಮೃತಿ ಮತ್ತು ಶಬ್ದಮಣಿದರ್ಪಣಗಳು ಕಾತಂತ್ರವನ್ನು, ಭಾಷಾಭೂಷಣ ಕಾತಂತ್ರದ ಜೊತೆಗೆ ರೂಪಾವತಾರವನ್ನು ಅನುಕರಿಸಿವೆ.

ಹಳಗನ್ನಡ ವ್ಯಾಕರಣಗಳು ಕಾತಂತ್ರ ಹೇಳುವ ಸಂಸ್ಕೃತದ ವರ್ಣಮಾಲೆಯನ್ನು ಆಧರಿಸಿವೆಯಾದರೂ ವರ್ಣಮಾಲೆಯ ವಿಚಾರದಲ್ಲಿ ಕನ್ನಡ ವ್ಯಾಕರಣಗಳು ಪ್ರಾತಿಶಾಖ್ಯ ಪದ್ಧತಿಯನ್ನು ಅನುಸರಿಸಿವೆ. ಹಾಗಾಗಿ ಕನ್ನಡ ವ್ಯಾಕರಣಗಳಲ್ಲಿ ಯ,ರ,ಲ,ವ,ಗಳು, ಅನುನಾಸಿಕ, ಬಿಂದು, ವಿಸರ್ಗ, ಸ್ವರ ಮತ್ತು ವ್ಯಂಜನಗಳನ್ನು ನಿರೂಪಿಸುವಲ್ಲಿ ಕಾತಂತ್ರ ಮತ್ತು ಪ್ರಾತಿಶಾಖ್ಯ ಗ್ರಂಥಗಳನ್ನು ಅನುಸರಿಸಿವೆ. ಇದೇ ರೀತಿ ಕನ್ನಡದ ಸಂಧಿ, ಸ್ವರಸಂಧಿ, ಪ್ರಕೃತಿಭಾವ, ವ್ಯಂಜನಸಂಧಿ ಇತ್ಯಾದಿಗಳಲ್ಲಿ ಅವುಗಳನ್ನು ಪೂರ್ಣವಾಗಿ ಅನುಸರಿಸಿವೆ.

ಕನ್ನಡ ವ್ಯಾಕರಣಗಳಲ್ಲಿ ನಾಮಪ್ರಕೃತಿಯನ್ನು ಲಿಂಗ ಎಂದು ಕರೆದಿರುವಲ್ಲಿ ಕಾತಂತ್ರದ ಪ್ರಭಾವವಿದೆ. ಸಂಸ್ಕೃತ ವ್ಯಾಕರಣ ಗ್ರಂಥಗಳು ಪುರುಷರನ್ನು ಆಧರಿಸಿ ಸರ್ವನಾಮಗಳನ್ನು ಉತ್ತಮ ಪುರುಷ, ಮಧ್ಯಮ ಪುರುಷ, ಪ್ರಥಮ ಪುರುಷ ಎಂದು ವಿಭಜಿಸಿಕೊಂಡಿಲ್ಲ. ಈ ವಿಚಾರದಲ್ಲಿ ಕನ್ನಡದ ವ್ಯಾಕರಣಗಳು ಸಂಸ್ಕೃತ ವ್ಯಾಕರಣಗಳನ್ನೇ ಅನುಸರಿಸಿವೆ. ನವವಿಧ ಲಿಂಗಗಳು, ಮೂರು ಬಗೆಯ ವಚನಗಳ ಕಲ್ಪನೆ ಸಂಸ್ಕೃತ

ವ್ಯಾಕರಣಗಳಲ್ಲಿದೆ. ಕನ್ನಡ ವ್ಯಾಕರಣಗಳು ಇವುಗಳನ್ನೇ ಅನುಸರಿಸಿದರೂ ಕೆಲವು ಕಡೆ ತಮ್ಮದೇ ಆದ ರೀತಿಯಲ್ಲಿ ನಿರೂಪಿಸಿಕೊಂಡಿವೆ. ಕವಿರಾಜಮಾರ್ಗ ಮುಂತಾದ ಗ್ರಂಥಗಳಲ್ಲಿ ಹೇಳಿರುವಂತೆ ಆರು ಕಾರಕಗಳು ಕರ್ತೃವನ್ನು ಸೇರುತ್ತವೆ. ಷಷ್ಠಿಗೆ ಕಾರಕತ್ವವಿಲ್ಲ ಇತ್ಯಾದಿಗಳ ವಿಚಾರದಲ್ಲಿ ಸಂಸ್ಕೃತದ ಪ್ರಭಾವ ಸ್ಪಷ್ಟವಾಗಿದೆ. ಕಾರಕಗಳ ಕ್ರಮಗಳ ವಿಚಾರದಲ್ಲಿ ಕನ್ನಡ ವ್ಯಾಕರಣಗಳು ಸರಸ್ವತೀಕಂಠಾಭರಣವನ್ನು ಅನುಸರಿಸಿವೆ. ಭಾಷಾಭೂಷಣ, ಶಬ್ದಮಣಿದರ್ಪಣಗಳು ಕಾರಕ ನಿರೂಪಣೆಯಲ್ಲಿ ರೂಪಾವತಾರ ಮತ್ತು ಸಿದ್ಧಹೇಮ ಶಬ್ದಾನುಶಾಸನವನ್ನು ಅನುಸರಿಸಿದರೆ, ಭಾಷಾಭೂಷಣ ಹೆಚ್ಚಾಗಿ ಅಷ್ಟಾಧ್ಯಾಯಿಯನ್ನು ಶಬ್ದಮಣಿದರ್ಪಣ ಹೆಚ್ಚಾಗಿ ಕಾತಂತ್ರವನ್ನು ಅನುಸರಿಸಿವೆ.

ಸಮಾಸ ಅವುಗಳ ಪ್ರಭೇದ ಮತ್ತು ಲಕ್ಷಣಗಳ ನಿರೂಪಣೆಯಲ್ಲಿ ಕನ್ನಡ ವ್ಯಾಕರಣಗಳು ಕಾತಂತ್ರ, ಅಷ್ಟಾಧ್ಯಾಯಿ, ಮಹಾಭಾಷ್ಯಗಳನ್ನು ಅನುಸರಿಸಿವೆ. ಪ್ರತಿ ಸಮಾಸದ ಲಕ್ಷಣವನ್ನು ನಿರೂಪಿಸುವಲ್ಲಿ ಭಾಷಾಭೂಷಣ ಹೆಚ್ಚಾಗಿ ಮಹಾಭಾಷ್ಯವನ್ನು ಅನುಸರಿಸಿದೆ.

ಧಾತುಗಳ ಕಲ್ಪನೆ ಅವುಗಳ ವರ್ಗೀಕರಣಗಳ ವಿಚಾರದಲ್ಲಿ ಭಾಷಾಭೂಷಣ ಮತ್ತು ಶಬ್ದಮಣಿದರ್ಪಣಗಳು ಶಾಕಟಾಯನ ಮತ್ತು ಸಿದ್ಧಹೇಮ ಶಬ್ದಾನುಶಾಸನಗಳನ್ನು ಅನುಸರಿಸಿವೆ. ಧಾತುಗಳಿಗೆ ಅರ್ಥನಿರ್ದೇಶನ ಮಾಡುವುದು ಶಬ್ದಮಣಿದರ್ಪಣದಲ್ಲಿದೆಯಾದರೂ ಇದಕ್ಕೆ ಸಂಸ್ಕೃತದ ಧಾತುಪಾಠವನ್ನು ಅನುಸರಿಸಲಾಗಿದೆ. ಆಖ್ಯಾತ ವಿಭಕ್ತಿಗಳನ್ನು ಪುರುಷಗಳನ್ನು ಆಧರಿಸಿ ವಿಭಜಿಸಿಕೊಳ್ಳುವಲ್ಲಿ ಕನ್ನಡ ವ್ಯಾಕರಣಗಳು ಅಷ್ಟಾಧ್ಯಾಯಿ ಮತ್ತು ಕಾತಂತ್ರಗಳನ್ನು ಅನುಸರಿಸಿವೆ. ಆಖ್ಯಾತ ವಿಭಕ್ತಿಗಳಿಗೆ ಭೂತವತಿ, ವರ್ತಮಾನ, ಭವಿಷ್ಯಂತಿ ಎಂಬ ಸಂಜ್ಞೆಗಳನ್ನು ವಿಧಿಸುವಲ್ಲಿ ಶಬ್ದಸ್ಮೃತಿ ಮತ್ತು ಭಾಷಾಭೂಷಣಗಳು ಕಾತಂತ್ರವನ್ನು ಅನುಸರಿಸಿವೆ. ಸ್ತ್ರೀನಪುಂಸಕಗಳನ್ನು ಪ್ರಥಮ ಪುರುಷದಲ್ಲಿ ಕಡೆಗಣಿಸಿ ಆರು ವಿಭಕ್ತಿಗಳನ್ನು ಹೇಳುವಲ್ಲಿ ಸಂಸ್ಕೃತದ ಪ್ರಭಾವ ಸ್ಪಷ್ಟವಾಗಿದೆ. ಸತಿಸಪ್ತಮಿಯ ವಿಚಾರದಲ್ಲಿ ಕನ್ನಡದ ವ್ಯಾಕರಣಗಳು ಪೂರ್ಣವಾಗಿ ಸಂಸ್ಕೃತದ ವ್ಯಾಕರಣಗಳನ್ನು ಅನುಸರಿಸಿವೆ.

ಕನ್ನಡ ವ್ಯಾಕರಣಗಳು ತದ್ಧಿತ ಪ್ರತ್ಯಯಗಳ ಅರ್ಥವನ್ನು ನಿರೂಪಿಸುವಲ್ಲಿ ಸಂಸ್ಕೃತ ವ್ಯಾಕರಣಗಳ ಮಾದರಿಯನ್ನು ಅನುಸರಿಸಿವೆ. ಅವ್ಯಯಗಳಿಗೆ ವಿಭಕ್ತಿ ಸೇರಿ ಅನಂತರ ಲೋಪವಾಗುತ್ತವೆ ಎಂದು ಹೇಳಿರುವುದರಲ್ಲಿ ಸಂಸ್ಕೃತ ವ್ಯಾಕರಣದ ಪ್ರಭಾವವಿದೆ. ವಿಶೇಷಣ ವಿಶೇಷ್ಯದ ಲಿಂಗ, ವಚನ, ವಿಭಕ್ತಿಗಳನ್ನು ಹೊಂದಿರಬೇಕು ಎಂಬುವದರಲ್ಲಿ, ಪ್ರಶ್ನಾರ್ಥಕ ಸರ್ವನಾಮಗಳನ್ನು ಸಂಬಂಧಾತ್ಮಕ ಸರ್ವನಾಮಗಳಂತೆ ಬಳಸುವ ವಿಚಾರದಲ್ಲಿ ಸಂಸ್ಕೃತ ವ್ಯಾಕರಣಗಳ ಪ್ರಭಾವ ಸ್ಪಷ್ಟವಾಗಿರುವುದನ್ನು ಗುರುತಿಸಿಕೊಳ್ಳಬಹುದು.

ಅಚ್ಚಗನ್ನಡ ವರ್ಣಮಾಲೆಗೆ ಐ, ಔಗಳು, ಮಹಾಪ್ರಾಣಾಕ್ಷರಗಳು, ಬಿಂದುಕಗಳು

ಸೇರಲು ಪ್ರಾಕೃತ ವ್ಯಾಕರಣಗಳು, ಪ್ರಾಕೃತದ ಬರವಣಿಗೆಯ ರೂಪಗಳು ಕನ್ನಡದಲ್ಲಿ ಸೇರಿರುವ ಅಪಭ್ರಂಶ ಶಬ್ದಗಳು ಕಾರಣವೆಂದು ಕೆಲವರ ಅಭಿಪ್ರಾಯ. ಕನ್ನಡಕ್ಕೆ ಅವಶ್ಯಕವಿಲ್ಲದ ವರ್ಣಗಳನ್ನು ವರ್ಣಮಾಲೆಯಿಂದ ತೆಗೆದುಹಾಕಲು ಪ್ರಾಕೃತ ವ್ಯಾಕರಣ ಗಳ ಪ್ರಭಾವ ಮುಖ್ಯ ಕಾರಣ. ದೇಶೀಯ ವರ್ಣಗಳ ವಿಚಾರದಲ್ಲಿ ಕನ್ನಡದ ವ್ಯಾಕರಣ ಗಳು ಸ್ವತಂತ್ರ ದೃಷ್ಟಿಯನ್ನು ಅನುಸರಿಸಿವೆ. ಆನ್, ನೀನ್,ತಾನ್ ಎಂಬ ಸರ್ವನಾಮಗಳ ಸಂಜ್ಞೆಯ ವಿಚಾರದಲ್ಲಿ ಸಂಸ್ಕೃತ ವ್ಯಾಕರಣಗಳ ಪ್ರಭಾವವಿಲ್ಲ. ಸಮಸಂಸ್ಕೃತ, ವಿರಹಿತಾವ್ಯಯ, ಸಂಸ್ಕೃತಲಿಂಗ ಮುಂತಾದುವುಗಳ ವಿಚಾರದಲ್ಲಿ ಕನ್ನಡದ ವ್ಯಾಕರಣಗಳು ಸಂಸ್ಕೃತವನ್ನೂ ಅನುಸರಿಸಿಲ್ಲ. ಪಂಚಮೀ ವಿಭಕ್ತಿ ಪ್ರತ್ಯಯದ ಕಲ್ಪನೆಗೆ ಸಂಸ್ಕೃತ ವ್ಯಾಕರಣಗಳ ಪ್ರಭಾವ ಕಾರಣವಲ್ಲ. ಗಮಕಸಮಾಸ ಶಬ್ದಮಣಿ ದರ್ಪಣಕಾರನ ಸ್ವಂತ ಸೃಷ್ಟಿ. ಸಂಧಿಗೆ ಸಂಸ್ಕೃತ ವ್ಯಾಕರಣಗಳ ಪ್ರೇರಣೆ ಇಲ್ಲ. ಪದಮಧ್ಯ ಮತ್ತು ಪದಾಂತ್ಯ ಎರಡು ಸಂಧಿ ವಿಷಯಗಳು ಎರಡು ಕನ್ನಡ ವ್ಯಾಕರಣಗಳ ಸ್ವತಂತ್ರ ಸೃಷ್ಟಿ. ಧಾತುಗಳನ್ನು ಕಂಡು ಹಿಡಿಯುವ ವಿಚಾರದಲ್ಲಿ ಸಂಸ್ಕೃತ ವ್ಯಾಕರಣಗಳ ಪ್ರೇರಣೆ ಇಲ್ಲ. ಧಾತು ಮತ್ತು ಆಖ್ಯಾತಗಳ ನಡುವೆ ಕಾಲಸೂಚಕ ವಿಕರಣ ಬರುವುದಾಗಿ ಶಬ್ದಮಣಿದರ್ಪಣ ಹೇಳಿದೆ. ಇದಕ್ಕೆ ಸಂಸ್ಕೃತ ವ್ಯಾಕರಣಗಳ ಹಿನ್ನೆಲೆ ಕಾರಣವಲ್ಲ. ಕೃಲಿಂಗದ ವಿವರಣೆ ಶಬ್ದಮಣಿದರ್ಪಣಕಾರನ ಸ್ವತಂತ್ರ ನಿರೂಪಣೆ. ಸ್ತ್ರೀ ಪ್ರತ್ಯಯಗಳನ್ನು ತದ್ಧಿತ ಪ್ರತ್ಯಯಗಳೊಡನೆ ಸೇರಿಸಿಕೊಂಡಿದ್ದು, ಕನ್ನಡ ವ್ಯಾಕರಣಗಳ ಸ್ವಂತ ದೃಷ್ಟಿ. ಶಬ್ದಸ್ಮೃತಿ ಎಂಬ ಹೆಸರಿನಲ್ಲಿ ಸಂಸ್ಕೃತ ವ್ಯಾಕರಣಗಳ ಪ್ರಭಾವವಿದೆ. ಆದರೆ ಭಾಷಾಭೂಷಣ ಮತ್ತು ಶಬ್ದಮಣಿದರ್ಪಣ ಎಂಬುವುಗಳ ಹೆಸರಿನಲ್ಲಿ ಸಂಸ್ಕೃತ ವ್ಯಾಕರಣಗಳ ಪ್ರಭಾವವಿಲ್ಲ. ಈ ಹೆಸರುಗಳು ಸಂಸ್ಕೃತಕ್ಕಿಂತ ಭಿನ್ನವಾಗಿವೆ.

ಸಂಸ್ಕೃತ ವ್ಯಾಕರಣಗಳ ಪ್ರಭಾವಕ್ಕೆ ಕನ್ನಡದ ವ್ಯಾಕರಣಗಳು ಒಳಗಾದ ಕಾರಣದಿಂದ ಕನ್ನಡಕ್ಕೆ ಒಗ್ಗದ ಕೆಲವು ವಿಚಾರಗಳನ್ನು ಅವು ಪ್ರತಿಪಾದಿಸಿವೆ. ಸುವರ್ಣ, ನಾಮಿ, ಇತ್ಯಾದಿ ಪಾರಿಭಾಷಿಕ ಶಬ್ದಗಳು ಕನ್ನಡ ವ್ಯಾಕರಣಕ್ಕೆ ಅನಗತ್ಯ ಸಂಜ್ಞೆಗಳಾಗಿವೆ. ನವವಿಧ ಲಿಂಗಗಳು, ದ್ವಿವಚನ, ಪ್ರಥಮಾ ವಿಭಕ್ತಿ, ಸಂಬೋಧನೆಯಲ್ಲಿ ಪ್ರಥಮೆಯ ಕಲ್ಪನೆ ಕನ್ನಡಕ್ಕೆ ಅಗತ್ಯವಿಲ್ಲ. ಕಾರಕ ನಿರೂಪಣೆಯಲ್ಲಿ ಕಂಡುಬರುವ ಬೇರೆ ಬೇರೆ ಅರ್ಥಗಳು ಸಂಸ್ಕೃತ ವ್ಯಾಕರಣಗಳ ಪ್ರಭಾವದಿಂದ ಪ್ರತಿಪಾದಿತವಾದುವು ಗಳಾಗಿವೆ. ಸಪ್ತಮ್ಯರ್ಥದ ಪ್ರಥಮ, ದ್ವಿತೀಯಾರ್ಥದ ಪ್ರಥಮ, ಪಂಚಮ್ಯರ್ಥದ ದ್ವಿತೀಯ ಮುಂತಾದ ವಿಭಕ್ತಿ ಪಲ್ಲಟ ವಿಚಾರಗಳು ಕನ್ನಡಕ್ಕೆ ಸಹಜವೇನಲ್ಲ. ಕನ್ನಡ ವ್ಯಾಕರಣಗಳಲ್ಲಿ ಸಂಜ್ಞೆಯನ್ನು ಬಿಟ್ಟರೆ ಸಂಸ್ಕೃತ ವ್ಯಾಕರಣಗಳ ಪ್ರಭಾವ ನಾಮ (ಕಾರಕ ಪ್ರಕರಣ) ಮತ್ತು ಸಮಾಸಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಸಂಧಿ, ಆಖ್ಯಾತ, ತದ್ಧಿತ, ಅವ್ಯಯಗಳು ಮುಂತಾದುವುಗಳ ನಿರೂಪಣೆಯಲ್ಲಿ ಸಂಸ್ಕೃತ ವ್ಯಾಕರಣಗಳ ಪ್ರಭಾವ ಅಷ್ಟಾಗಿ ಉಂಟಾಗಿಲ್ಲ ಎನ್ನಬಹುದು.

ವಾಲ್ಮೀಕಿ ರಾಮಾಯಣದ ಅಹಲ್ಯಾಪ್ರಸಂಗ

ಡಾ. ಸಿ. ಪಿ. ಕೃಷ್ಣಕುಮಾರ್

ವಾಲ್ಮೀಕಿ ರಾಮಾಯಣದ ಬಾಲಕಾಂಡದ ಬಹುಭಾಗ ಪ್ರಕ್ಷಿಪ್ತವೆಂದು ವಿದ್ವಾಂಸರಿಂದ ಪರಿಗಣಿತವಾಗಿದೆ. ಆದರೆ ರಾಮಾಯಣ, ಮಹಾಭಾರತಗಳಂಥ 'ವಿಕಾಸಶೀಲ ಮಹಾಕಾವ್ಯ' (Epic of growth) ಗಳಲ್ಲಿ ಯಾವುದೇ ಭಾಗವನ್ನು ಪ್ರಕ್ಷಿಪ್ತ ಎನ್ನುವುದು ಔಪಚಾರಿಕವಷ್ಟೆ. ಅಲ್ಲಿ ಮೂಲ, ಪ್ರಕ್ಷೇಪ ಎಂಬ ಭೇದ ಒಂದರ್ಥದಲ್ಲಿ ಕೃತಕವಾದದ್ದು. ಏನೇ ಇರಲಿ, ರಾಮಾಯಣದಲ್ಲಿ ಬರುವ ಅಹಲ್ಯಾಪ್ರಸಂಗ ಪ್ರಕ್ಷಿಪ್ತವಾಗಿದ್ದಿರಬಹುದು ; ಮಾತ್ರವಲ್ಲ, ಅದು ಸಂಕ್ಷಿಪ್ತವೂ ಹೌದು. ಕೇವಲ ಗೆರೆಗಳ ರೂಪದಲ್ಲಿ ಉಜ್ವಲವಾಗಿ ಬೆಳಗುವ ಚಿತ್ರವೊಂದನ್ನು ಕೊರೆದಿದ್ದಾನೆ, ಕವಿ.

"ಅಹಲ್ಯಾಯೈ ಜಾರಃ" ಎಂಬ ವಿಶೇಷಣವನ್ನು ಇಂದ್ರ ವೈದಿಕ ಸಾಹಿತ್ಯದಲ್ಲೇ ಪಡೆದುಕೊಂಡಿದ್ದಾನೆ. ಇಂದ್ರ, ಅಹಲ್ಯೆಯರು ಜಾರಿದ ಕಥೆ "ಖಚಿತವಾದ ಆಕಾರವನ್ನು ತಾಳಿ ಮೊದಲು ಕಾಣಿಸಿಕೊಳ್ಳುವುದು ವಾಲ್ಮೀಕಿಯ ರಾಮಾಯಣದಲ್ಲಿ". ಕಥೆಗೇನೊ ಆಕಾರ ಬಂತು; ಆದರೆ ಅಹಲ್ಯೆ ತನ್ನ ಪಾಪಕ್ಕಾಗಿ ನಡುವೆ ಆಕಾರ ಕಳೆದುಕೊಳ್ಳಬೇಕಾಯಿತು ! ರಾಮಮಹಿಮೆಯ ಪ್ರಕಾಶನಕ್ಕೆ ಮತ್ತು ಪ್ರದರ್ಶನಕ್ಕೆ ಅಹಲ್ಯೋದ್ಧಾರ ಒಂದು ನಿದರ್ಶನವಾಗಿದೆ ಎಂದು ಬಹುಮಂದಿಯ ಭಾವನೆ ; ತಪ್ಪೇನಲ್ಲ. ಆದರೆ ಅಲ್ಲಿ ಅಹಲ್ಯೆಯ ಮಹಿಮೆಯೂ ವ್ಯಕ್ತವಾಗಿರುವುದನ್ನು ಮರೆಯಬಾರದು. ಅಹಲ್ಯೆಯ ಉದ್ಧಾರಕ್ಕೆ ರಾಮ ಒಂದು ರೀತಿಯಲ್ಲಿ ಕಾರಣನಾದಂತೆ, ರಾಮಾವತಾರದ ಉತ್ತರೋತ್ತರ ವಿಕಾಸಕ್ಕೆ ಅಹಲ್ಯೆಯೂ ನೆರವಾಗುತ್ತಾಳೆ.

ಗೌತಮನಿಲ್ಲದ ವೇಳೆಯನ್ನರಿತು "ಶಚೀಪತಿ ಸಹಸ್ರಾಕ್ಷ" ಮುನಿವೇಷವನ್ನು ಧರಿಸಿ, ಅಹಲ್ಯೆಯಲ್ಲಿಗೆ ಬರುತ್ತಾನೆ. ಇಲ್ಲಿ ಇಂದ್ರನಿಗೆ ಕೊಟ್ಟಿರುವ 'ಶಚೀಪತಿ', 'ಸಹಸ್ರಾಕ್ಷ' ಎಂಬ ವಿಶೇಷಣಗಳು ಅರ್ಥವತ್ತಾಗಿವೆ. ಶಚಿ ಮಹಾಪತಿವ್ರತೆ ; ಆದರೆ ಅವಳ ಪತಿಗೆ ಪರಸ್ತ್ರೀ ಚಾಪಲ್ಯ : ಎಂಥ ವಿಪರ್ಯಾಸ ! 'ಸಹಸ್ರಾಕ್ಷ' ಎಂಬುದು ಇಂದ್ರನ

ಘನತೆಯನ್ನು ಕುರಿತ ಮಾತು. ಅಂತಹವನು ಈಗ ಎಚ್ಚರ ತಪ್ಪುತ್ತಿದ್ದಾನೆ, ಕಾಮದಿಂದ ಕುರುಡಾಗಿದ್ದಾನೆ ಎಂಬುದು ಇಲ್ಲಿಯು ವ್ಯಂಗ್ಯ.

ಅಹಲ್ಯೆಗೆ ಇಂದ್ರ ನುಡಿಯುತ್ತಾನೆ : "ಅರ್ಥಿಗಳು ಋತುಕಾಲವನ್ನು ಪ್ರತೀಕ್ಷಿಸುವುದಿಲ್ಲ, ಹೇ ಸಮಾಹಿತೆ ! ನಿನ್ನೊಡನೆ ನಾನು ಸಂಗವನ್ನಿಚ್ಛಿಸುತ್ತೇನೆ, ಹೇ ಸುಮಧ್ಯಮೆ !" 'ಸಮಾಹಿತೆ' ಎಂಬುದು ಅಹಲ್ಯೆಗೆ ಒಪ್ಪುವ ವಿಶೇಷಣ : ಇದುವರೆಗೆ ಅವಳು ಗೌತಮನೊಡನೆ ತಪಸ್ಸು ಮಾಡಿದವಳು. ಆದರೆ ಈಗ ಭ್ರಷ್ಟಳಾಗಲಿದ್ದಾಳೆ. 'ಸುಮಧ್ಯಮೆ' ಎಂಬ ಸಂಬೋಧನೆ ಇಂದ್ರನ ಕಾಮುಕ ಸ್ವಭಾವವನ್ನು ವ್ಯಂಜಿಸುತ್ತದೆ ; ಅಂತೆಯೆ ಮುಂದೆ ಬರುವ 'ಸುಶ್ರೋಣಿ' ಎಂಬ ಸಂಬೋಧನೆ ಕೂಡ ಅವನ ಅಸಭ್ಯ ಮನೋಭಾವ, ನಡೆವಳಿಕೆಗಳಿಗೆ ದ್ಯೋತಕವಾಗಿದೆ. ಕವಿಯ ಪದಪ್ರಯೋಗ ಇಲ್ಲೆಲ್ಲ ಕೇವಲ ಸಾಂಪ್ರದಾಯಿಕವಾಗಿರದೆ, ಔಚಿತ್ಯಪೂರ್ಣವಾಗಿದೆ.

ಮುನಿವೇಷದಲ್ಲಿ ಬಂದವನು ಇಂದ್ರನೆಂದು ಅಹಲ್ಯೆಗೆ ತಿಳಿಯುತ್ತದೆ. ತನ್ನ ಪತಿಯೆಂದೆ ಭಾವಿಸಿ ಅವಳು ಅವನನ್ನು ಕೂಡಿದಳೆಂದಿದ್ದರೆ, ಕತೆಯಲ್ಲಿ ಮಾನವೀಯ ಸ್ವಾರಸ್ಯವಿರುತ್ತಿರಲಿಲ್ಲ. ಬಂದವನು ಇಂದ್ರನೆಂದು ತಿಳಿದೂ ಅವನಿಗೇಕೆ ಅವಳು ಮನಸ್ಸು, ಮೈಗಳನ್ನು ತೆತ್ತಳು ? "ದೇವರಾಜ ಕುತೂಹಲದಿಂದ" ಎಂದು ಕವಿ ಕಾರಣ ಹೇಳುತ್ತಾನೆ. ("ಮತಿಂ ಚಕಾರ ದುರ್ಮೇಧಾ ದೇವರಾಜ ಕುತೂಹಲಾತ್"). ಮಾನವನೊಬ್ಬ—ಅವನೆಷ್ಟೇ ಸುಂದರಾಂಗನಾಗಿರಲಿ—ಬಯಸಿ ಬಂದಿದ್ದರೆ, ಅಹಲ್ಯೆಯ ಚಿತ್ತ ಚಂಚಲವಾಗುತ್ತಿರಲಿಲ್ಲ. ಆದರೆ ಬಂದವನು ದೇವ ಮಾತ್ರವಲ್ಲ, ದೇವೇಂದ್ರ. ಅವನ ವಿಷಯದಲ್ಲಿ ಅವಳಿಗೆ ಕುತೂಹಲವಾಗುತ್ತದೆ ; ತನ್ನ ಪತಿಯಲ್ಲಿ ಇಲ್ಲದ್ದು ಏನೋ ಅವನಲ್ಲಿದೆ, ತನ್ನ ಪತಿ ಕೊಡದ ಸುಖವನ್ನು ಅವನು ಕೊಡಬಹುದು ಎಂದು ಅವಳು ಭ್ರಮಿಸುತ್ತಾಳೆ ; "ಅರಸನಿಗಾಗಿ ಪುರುಷನನ್ನು ಮರೆತ ಹಾಗೆ" ಎಂಬ ಗಾದೆಗೆ ಉದಾಹರಣೆಯಾಗುತ್ತಾಳೆ. ಈ ಕೆಟ್ಟ ಕುತೂಹಲವೆ ಅವಳ ದುರಂತವಾಗುತ್ತದೆ. ಅಂತೂ "ದೇವರಾಜನನ್ನು ಕುರಿತ ಕುತೂಹಲದಿಂದ" ಎಂಬ ಮಾತು ಬಹಳ ಮಾರ್ಮಿಕವಾಗಿದೆ ; ಮನೋವೈಜ್ಞಾನಿಕ ಒಳನೋಟದಿಂದ ಕೂಡಿದೆ.

ಸಮಾಗಮದ ನಂತರ ಅಹಲ್ಯೆ ಇಂದ್ರನಿಗೆ ಹೇಳುತ್ತಾಳೆ : "ಕೃತಾರ್ಥಳಾದೆ, ಸುರಶ್ರೇಷ್ಠ ! ಹೊರಟು ಹೋಗು ಬೇಗ ಇಲ್ಲಿಂದ, ಹೇ ಪ್ರಭು ! ನಿನ್ನನ್ನೂ ನನ್ನನ್ನೂ, ಹೇ ದೇವೇಶ, ರಕ್ಷಿಸು, ಹೇ ಮಾನದ !" ಈ ಮಾತುಗಳಲ್ಲಿ ಅಹಲ್ಯೆಯ ಮನಸ್ಸಿನ ಸಂಕೀರ್ಣಸ್ಥಿತಿ ಪ್ರಕಟವಾಗಿದೆ. ಒಂದು ಕಡೆ ತೃಪ್ತಿ, ಇನ್ನೊಂದು ಕಡೆ ಭೀತಿ. 'ಮಾನದ' ಎಂಬ ವಿಶೇಷಣವೊಂದು ವ್ಯಂಗ್ಯ. ಮಾನ ಕಳೆದವನು ಮಾನ ಕೊಡುವುದಾದರೂ ಹೇಗೆ ? ಮೋಹದಿಂದ ವಿವೇಕ ನೀಗಿಕೊಂಡಿದ್ದಾಳೆ, ಅಹಲ್ಯೆ. ಇಂದ್ರನಾದರೂ ನಗುತ್ತ ಅಹಲ್ಯೆಗೆ ನುಡಿಯುತ್ತಾನೆ : "ಸುಶ್ರೋಣಿ ! ಪರಿತುಷ್ಟನಾದೆ. ಬಂದಂತೆಯೆ ತೆರಳುತ್ತೇನೆ". ಅವನ ನಗು ಸಹಜವಾಗಿದೆ, ಅರ್ಥಗರ್ಭಿತವಾಗಿದೆ.

ಆದರೆ ಅದು ಬಹುಕಾಲ ಉಳಿಯುವುದಿಲ್ಲ, "ಬೆಂಕಿಯಂತೆ ಬೆಳಗುತ್ತಿರುವ ಗೌತಮ", ತನ್ನನ್ನು ಕಂಡು "ಹೆದರಿ ಮುಖ ಬಿಳಿಚಿಕೊಂಡ" ಇಂದ್ರನನ್ನು "ವಿಫಲನಾಗು" ಎಂದು ಶಪಿಸುತ್ತಾನೆ.

ಆಮೇಲೆ 'ದುಷ್ಟಚಾರಿಣಿ'ಯಾದ ಅಹಲ್ಯೆಗೆ ಹೀಗೆ ಶಾಪ ಕೊಡುತ್ತಾನೆ, ಗೌತಮ :

ಇಹ ವರ್ಷ ಸಹಸ್ರಾಣಿ ಬಹೂನಿ ತ್ವಂ ನಿವತ್ಸ್ಯಸಿ
ವಾಯುಭಕ್ಷಾ ನಿರಾಹಾರಾ ತಪ್ಯಂತೀ ಭಸ್ಮಶಾಯಿನೀ
ಅದೃಶ್ಯಾ ಸರ್ವಭೂತಾನಾಮಾಶ್ರಮೇಽಸ್ಮಿನ್ ನಿವತ್ಸ್ಯಸಿ
ಯದಾ ಚೈತದ್ವನಂ ಘೋರಂ ರಾಮೋ ದಶರಥಾತ್ಮಜಃ
ಆಗಮಿಷ್ಯತಿ ದುರ್ಧಷಸ್ತದಾ ಪೂತಾ ಭವಿಷ್ಯಸಿ
ತಸ್ಯಾತಿಥ್ಯೇನ ದುರ್ವೃತ್ತೇ ಲೋಭಮೋಹ ವಿವರ್ಜಿತಾ
ಮತ್ಸಕಾಶೇ ಮುದಾ ಯುಕ್ತಾ ಸ್ವಂ ವಪುರ್ಧಾರಯಿಷ್ಯಸಿ.

(ಇಲ್ಲೀ ಅನೇಕ ಸಹಸ್ರ ವರ್ಷ ವಾಸಿಸುತ್ತಿರು ; ಗಾಳಿ ತಿನ್ನುತ್ತ, ಉಣಿಸಿಲ್ಲದೆ, ಬೂದಿಯಲ್ಲಿ ಹೊರಳುತ್ತ, ತಪಿಸುತ್ತಿರು. ಸರ್ವಜೀವಿಗಳಿಗೂ ಅದೃಶ್ಯಳಾಗಿ ಈ ಆಶ್ರಮದಲ್ಲೆ ಇರು. ದಶರಥಪುತ್ರನಾದ, ಅಜೇಯನಾದ ರಾಮ ಈ ಘೋರ ವನಕ್ಕೆ ಬಂದಾಗ, ನೀನು ಅವನ ಆತಿಥ್ಯದಿಂದ ಪವಿತ್ರಳಾಗುವೆ. ಕೆಟ್ಟ ನಡತೆಯವಳೆ, ನೀನು ಲೋಭ ಮೋಹಗಳನ್ನು ಕಳೆದುಕೊಂಡು, ಸ್ವಶರೀರವನ್ನು ಧರಿಸಿ, ನನ್ನೊಡನೇ ಸಂತೋಷದಿಂದಿರುವೆ).

ಗೌತಮನ ಈ ಶಾಪದಲ್ಲಿ ಅಹಲ್ಯೆಯ ಪ್ರಾಯಶ್ಚಿತ್ತವೂ ಇಂಗಿತವಾಗಿರುವುದನ್ನು ಗಮನಿಸಬೇಕು. ಅದು ಒಂದರ್ಥದಲ್ಲಿ ದುರವಸ್ಥೆ, ತಾಪ ; ಇನ್ನೊಂದರ್ಥದಲ್ಲಿ ತಪಸ್ಸು. ಅಸ್ತಿತ್ವವನ್ನೆ ಕಳೆದುಕೊಳ್ಳುವುದು ಭಯಂಕರ ಶಿಕ್ಷೆಯೇನೋ ದಿಟ ; ಆದರೆ "ಸರ್ವ ಭೂತಗಳಿಗೂ ಅದೃಶ್ಯ"ಳಾಗಿರುವುದು ಅಸಾಮಾನ್ಯತೆಯ ಲಕ್ಷಣವೂ ಅಲ್ಲವೆ ? ಅವಳು "ಭಸ್ಮಶಾಯಿನಿ"ಯಾಗುತ್ತಾಳೆ, ನಿಜ. ಆದರೆ ಶಿವನೂ ಭಸ್ಮಧರನಲ್ಲವೆ ? ಇಂದ್ರಿಯ ಸಂಯಮವನ್ನು ನೀಗಿಕೊಂಡು, ಇಂದ್ರನೊಡನೆ ನೆರೆದು, ತಪಶ್ಚ್ಯುತಳಾದ ಅಹಲ್ಯೆ ಮತ್ತೆ ಆದೇ ಆಶ್ರಮದಲ್ಲಿ ಘೋರ ತಪಶ್ಚರಣ ನಿರತಳಾಗುತ್ತಾಳೆ ; ಅದೇ ಅವಳ ಉದ್ಧರಣ ಹೇತುವಾಗುತ್ತದೆ. ರಾಮಾನುಗ್ರಹ ನಿಮಿತ್ತ ಮಾತ್ರವಾಗಿ ಕೆಲಸ ಮಾಡುತ್ತದೆ. ನಿಮಿತ್ತ ಎಂದಾಕ್ಷಣ, ಅನಗತ್ಯ ಅಥವಾ ಗೌಣ ಎಂದು ಅರ್ಥವಲ್ಲ.

ವಿಶ್ವಾಮಿತ್ರನೊಡನೆ ಮಿಥಿಲೆಗೆ ಹೊರಟ ರಾಮ, ಅಲ್ಲಿನ ಉಪವನದಲ್ಲಿ "ರಮ್ಯ ನಿರ್ಜನ ಪುರಾತನ"ವಾದ ಆಶ್ರಮವೊಂದನ್ನು ಕಂಡು ಅದರ ಬಗೆಗೆ ಪ್ರಶ್ನಿಸಿದಾಗ, ಅಹಲ್ಯೆಯ ಕಥೆಯನ್ನು ಹೇಳಿದ ವಿಶ್ವಾಮಿತ್ರ, "ಹೇ ಮಹಾತೇಜ, ಪುಣ್ಯಕರ್ಮನ ಈ

ಆಶ್ರಮವನ್ನು ಸೇರಿ, ದೇವರೂಪಿಣಿಯಾದ ಅಹಲ್ಯೆಯನ್ನು ಉದ್ಧರಿಸು" ಎನ್ನುತ್ತಾನೆ. ಇಲ್ಲಿ 'ದೇವರೂಪಿಣಿ' ಎಂಬ ವಿಶೇಷಣ ಲಕ್ಷಿಸಬೇಕಾದ್ದು. ಅಹಲ್ಯೆಯ ಉದ್ಧಾರ ಈಗಾಗಲೆ ಬಹುಮಟ್ಟಿಗೆ ಸಿದ್ಧಿಸಿದೆ; ಅಂತಿಮ ಸ್ಪರ್ಶಕ್ಕಾಗಿ ಅದು ಕಾಯುತ್ತಿದೆ. ರಾಮ ಆ ದಿವ್ಯಶಿಲ್ಪಕ್ಕೆ ಪರಿಪೂರ್ಣತೆಯನ್ನೀಯುತ್ತಾನೆ.

ರಾಮನು ಲಕ್ಷ್ಮಣನೊಡಗೂಡಿ, ವಿಶ್ವಾಮಿತ್ರನನ್ನು ಮುಂದಿಟ್ಟುಕೊಂಡು ಆ ಆಶ್ರಮವನ್ನು ಹೊಗುತ್ತಾನೆ. "ಅಲ್ಲಿ ಆ ಮಹಾಭಾಗೆ ಅಹಲ್ಯೆಯನ್ನು-ತಪಸ್ಸಿನಿಂದ ಬೆಳಗುತ್ತಿರುವ ಪ್ರಭೆಯುಳ್ಳ, ಸುರಾಸುರರಿಗೂ ಲೋಕಗಳಿಗೂ ದುರ್ನಿರೀಕ್ಷ್ಯಳಾದ, ಧಾತಾರನ ಪ್ರಯತ್ನದಿಂದ ದಿವ್ಯ ಮಾಯಾಮಯಿಯಂತೆ ನಿರ್ಮಿತಳಾದ, ತುಷಾರಾವೃತವಾದ ಅಭ್ರಸಹಿತವಾದ ಪೂರ್ಣಚಂದ್ರನಂತೆ ಪ್ರಭೆಯುಳ್ಳ, ಧೂಮಪರೀತಾಂಗಿಯಾದರೂ ದೀಪ್ತವಾದ ಅಗ್ನಿಶಿಖೆಯಂತಿರುವ, ಜಲಮಧ್ಯದಲ್ಲಿ ತೊಳಗುವ ದುರಾಧರ್ಷವಾದ ಸೂರ್ಯಪ್ರಭೆಯಂತಿರುವ ಆ ಅಹಲ್ಯೆಯನ್ನು-ಕಂಡನು". ಇಲ್ಲಿನ ಹೋಲಿಕೆಗಳೆಲ್ಲ ಉದ್ಧಾರೋನ್ಮುಖಳಾದ ಅಹಲ್ಯೆಯ ಹಿರಿಮೆ ಗರಿಮೆಗಳನ್ನು ಅತ್ಯಂತ ಸಮರ್ಥವಾಗಿ ವ್ಯಂಜಿಸುತ್ತವೆ. ಅವಳು ಪಾಪಮುಕ್ತೆಯಾಗಿ ಅರೂಪದಿಂದ ರೂಪಕ್ಕೆ, ಅಸ್ಪಷ್ಟತೆಯಿಂದ ಸ್ಪಷ್ಟತಗೆ ಸಂಕ್ರಮಿಸುವ ಚಿತ್ರ ಇಲ್ಲಿದೆ.

ಅಹಲ್ಯೆ ಶಾಪಾಂತವನ್ನು ಹೊಂದಿ ಎಲ್ಲರಿಗೂ ಕಾಣಿಸಿಕೊಳ್ಳುತ್ತಾಳೆ. ರಾಮಲಕ್ಷ್ಮಣರು ಅವಳ ಪಾದಗಳನ್ನು ಹಿಡಿದುಕೊಳ್ಳುತ್ತಾರೆ; ಅವಳು ಕೂಡ ಗೌತಮವಚನವನ್ನು ಸ್ಮರಿಸಿ, ಅವರಿಗೆ ಪ್ರತಿಯಾಗಿ ಎರಗುತ್ತಾಳೆ; ಆತಿಥ್ಯ ಮಾಡುತ್ತಾಳೆ. ದೇವತೆಗಳು 'ತಪೋಬಲವಿಶುದ್ಧಾಂಗಿ'ಯಾದ ಅಹಲ್ಯೆಯನ್ನು ಪೂಜಿಸುತ್ತಾರೆ. 'ದೇವರಾಜ ಕುತೂಹಲ'ದಿಂದ ಪತನಗೊಂಡಿದ್ದ ಅಹಲ್ಯೆ ಈಗ ದೇವಪೂಜಿತೆ, ಪುನರ್ಜನ್ಮಗೊಂಡ ಪೂತೆ !

ರಾಮ ಮತ್ತು ಅಹಲ್ಯೆ ಪರಸ್ಪರ ಎರಗುವ ದೃಶ್ಯ "ಅನ್ಯೋನ್ಯ ಪಾವನಮಭೂದುಭಯಂ ಸಮೇತ್ಯ" ಎಂಬ ಕಾಳಿದಾಸನ ಉಕ್ತಿಯನ್ನು ಜ್ಞಾಪಿಸುತ್ತದೆ.

ವಾಲ್ಮೀಕಿರಾಮಾಯಣದ ಅಲ್ಪಾವಕಾಶದಲ್ಲಿ ಧ್ವನಿಬಂಧುರವಾಗಿ ಮಿಂಚಿರುವ ಈ ಅಹಲ್ಯಾವೃತ್ತಾಂತ ಮುಂದೆ ಕವಿಗಳ ಕಲ್ಪವಲ್ಲಿಯಾಗಿ ಪರಿಣಮಿಸಿತು. ಅದರ ಬೇರು ರಾಮಾಯಣದಲ್ಲಿದೆ, ಅಹಲ್ಯೆಯ ಉದ್ಧಾರ ಅವಳ ತಪಸ್ಸಿನಲ್ಲೇ ನಿಕ್ಷಿಪ್ತವಾಗಿರುವ ಹಾಗೆ. ರಾಮಾವತಾರದ ಗೆಲುವಿಗೆ ಎಷ್ಟೊಂದು ಶಕ್ತಿಗಳು ರಕ್ಷೆ ಕಟ್ಟಿದವು ! ಈ ದಿಶೆಯಲ್ಲಿ ರಾಮನ ಪಾಲಿಗೆ ಪ್ರಾಯಶಃ ಅಹಲ್ಯೆ ಮತ್ತೊಬ್ಬ ಕೌಸಲ್ಯೆ !

ಶ್ರೀ ರಾಮಾಯಣ ಕಾವ್ಯದಲ್ಲಿ ಜೀವನಧರ್ಮ
ಒಂದು ಚಿಂತನೆ

ಡಾ. ಎ. ಎಸ್. ವೇಣುಗೋಪಾಲ ರಾವ್

॥ ರಘುಕುಲಾನ್ವಯ ರತ್ನದೀಪಂ ನಮಾಮಿ ॥

ಯಾವುದೇ ಒಂದು ಮಹತ್‌ಕೃತಿ, ತನ್ನ ಎಲ್ಲ ಅರ್ಥವನ್ನೂ ವಾಚಕನಿಗೆ ಒಮ್ಮೆಲೇ ಬಿಟ್ಟುಕೊಡುವುದಿಲ್ಲ. ಅವನ ಮನಸ್ಸು, ವಯಸ್ಸು, ಅನುಭವ, ಸಂಸ್ಕಾರಗಳು ಬೆಳೆದಂತೆ, ಕೃತಿಯೂ ಬೆಳೆಯುತ್ತಾ ಹೋಗುತ್ತದೆ. ಜೊತೆಗೆ ಕಾಲ–ಜನಾಂಗ–ದೇಶದ ಚಿಂತನೆಯ ಪರಿವರ್ತನೆಗಳು, ಮೌಲ್ಯಗಳ ವಿವೇಚನೆಯಲ್ಲಿ ಆಗಬಹುದಾದ ಬದಲಾವಣೆಗಳು, ಒದಗಬಹುದಾದ ಹೊಸ ಹೊಸ ವಿಮರ್ಶಾ ವಿಧಾನ, ಅಂತರ ಶಾಸ್ತ್ರ ಶಿಸ್ತುಗಳು, ಒಂದು ಕೃತಿಯನ್ನು ವಿಭಿನ್ನ ನೋಟಗಳಿಂದ ನಿರುಕಿಸುವ ಅವಕಾಶವನ್ನು ಒದಗಿಸುತ್ತವೆ. ಹೀಗೆ ನವನವೀನ ಅರ್ಥವಲಯಗಳನ್ನು ವಿಸ್ತರಿಸಿಕೊಳ್ಳುತ್ತಾ ಹೋಗುವುದು ವೈವಿಧ್ಯದ ಚಿಂತನೆಯ ಸಾಧ್ಯತೆಗಳಿಗೂ ತನ್ನನ್ನು ಒಡ್ಡಿಕೊಳ್ಳುವುದು, ಹಾಗೆ ಒಡ್ಡಿಕೊಂಡ ನಂತರವೂ ಇನ್ನೂ ಗುಂಭವಾಗಿ, ಗೂಢವಾಗಿ, ಅಜೇಯವಾಗಿ ನಿಲ್ಲುವುದೇ ಮಹಾಕೃತಿಯ ಲಕ್ಷಣ.

ಭಾರತೀಯ ಸಂಸ್ಕೃತಿಯ ಪ್ರಾತಿನಿಧಿಕ ಕಾವ್ಯ ಎನಿಸಿದ ಶ್ರೀ ವಾಲ್ಮೀಕಿ ರಾಮಾಯಣವನ್ನು ಮತ್ತೊಮ್ಮೆ ಓದುವುದಕ್ಕೆ ತೆರೆದಾಗ ಈ ಎಲ್ಲ ಚಿಂತನೆಗಳು ವಾಚಕ–ವಿಮರ್ಶಕನನ್ನು ಬೆರಗುಗೊಳಿಸುತ್ತವೆ. ಜನಜೀವನದ ನರನಾಡಿಯಲ್ಲಿ ಬೆರೆತು ಹೋಗಿರುವ ಈ ಕಾವ್ಯದ ಎಲ್ಲ ಅರ್ಥವಲಯಗಳನ್ನೂ ಹಿಡಿದಿಡುವುದು ಯಾರಿಗೆ ಸಾಧ್ಯ ? ಮೂಲಕೃತಿಯಲ್ಲೇ ಕಾವ್ಯದಲ್ಲಿ ಯಾವ ಅಂಶಕ್ಕೆ ಮುಖ್ಯವಾದ ಒತ್ತು ಬೀಳಬಹುದು ಎಂಬುದನ್ನು ಕವಿಯ ಮಾತುಗಳಲ್ಲೇ ಸೂಚ್ಯವಾಗಿರುವುದನ್ನು ಗಮನಿಸಬಹುದು :

"ಕಾವ್ಯಂ ರಾಮಾಯಣಂ ಕೃತ್ಸ್ನಂ ಸೀತಾಯಾಶ್ಚರಿತಂ ಮಹತ್
ಪೌಲಸ್ತ್ಯವಧಮಿತ್ಯೇವ ಚಕಾರ ಚರಿತವ್ರತಃ ॥" (ಬಾ.ಕಾ.ಸ. ೪)

ಇದು ಧೀರೋದಾತ್ತ ಶ್ರೀರಾಮಚಂದ್ರನ ಬದುಕಿನ ಸುದೀರ್ಘ ಪಯಣವೇ ? ಸೀತಾದೇವಿಯ ಮಹತ್ತರ ಚಾರಿತ್ರ್ಯವೆ ? ಧೀರೋದ್ಧತ ರಾವಣನ ವಧೆಯ ಕಥೆಯೆ ? ಶ್ರೀ ರಾಮಾಯಣ ಕಾವ್ಯದಲ್ಲಿ ಈ ಎಲ್ಲವೂ ಇದ್ದು, ಅದರ ಮೂಲಶೃತಿ ಯಾವುದು ? ಎಂಬುದನ್ನು ಚಿಂತಿಸಿದರೇ ಸಾಕು, ಅದರ ಅರ್ಥವಲಯಗಳು ವಿಸ್ತರಿಸುತ್ತವೆ ; ಧರ್ಮವೇ ಅಧ್ಯಾತ್ಮವೇ ? ಅವತಾರದ ಪುರಾಣ ಕಲ್ಪನೆಯೆ ? ರಾಜಧರ್ಮವೆ ? ರಾಜಕಾರಣವೆ ? ವಂಶೋನ್ನತಿಯ ಮಹಾ ಮೌಲ್ಯವೆ ? ವ್ಯಕ್ತಿ ವ್ಯಕ್ತಿಗಳ ನಡುವಣ ಸಂಘರ್ಷವೆ ? ವ್ಯಕ್ತಿಯೊಳಗಣ ಒಳತೋಟಿಗಳೆ ? ದುಷ್ಟಶಕ್ತಿಯ ವಿಜೃಂಭಣೆ, ಕುಣಿತ-ಕಡೆಗೆ ಮಣಿತದ ಕತೆಯೆ ? ನಿಟ್ಟುಸಿರಿನಲ್ಲೇ ಕೊನೆಗೊಳ್ಳುವ ಉದಾತ್ತ ನಾಯಕ ನಾಯಕಿಯ ಕೊನೆಯುಸಿರಿನ ಕಥೆಯ ವ್ಯಥೆಯೆ ? ಶ್ರೀ ರಾಮಾಯಣ ಕಾವ್ಯದಲ್ಲಿ ಏನಿದೆ – ಏನಿಲ್ಲ ? ಹೀಗಾಗಿ ಪ್ರಾಚೀನ ಯುಗದಲ್ಲಿಯೇ ಅಧ್ಯಾತ್ಮ ರಾಮಾಯಣ, ಆನಂದರಾಮಾಯಣ, ವಾಶಿಷ್ಠ ರಾಮಾಯಣ ಕೃತಿಗಳು ಮೂಡಿಬಂದವು. ಭಾಸ-ಭವಭೂತಿ-ಕಾಳಿದಾಸರ ಹೊಸ ಚಿಂತನೆಗಳೂ ಹೊಸ ಹೊಸ ಕಾವ್ಯ ನಾಟಕಗಳಿಗೆ ಕಾರಣವಾದವು. ಇನ್ನು ದೇಶೀಯ ಭಾಷೆಗಳಲ್ಲಿ ರಚಿತವಾದ ಕೃತಿಗಳಿಗೆ ಲೆಕ್ಕ ಉಂಟೆ ? ಕೃತ್ತಿವಾಸ ರಾಮಾಯಣ, ಕಂಬ ರಾಮಾಯಣ, ತುಳಸೀ ರಾಮಾಯಣ...ಭುವನೈಕ ರಾಮಾಭ್ಯುದಯ, ರಾಮಚರಿತ ಪುರಾಣಂ, ತೊರವೆ ರಾಮಾಯಣ, ಹನೂಮದ್ವಿಲಾಸ, ಕಡೆಕಡೆಗೆ ಸಾಕೇತ, ಶ್ರೀರಾಮಾಯಣ ದರ್ಶನಂ...ಹೀಗೆ ಪಟ್ಟಿ ಮುಗಿಯುವುದೇ ಇಲ್ಲವಲ್ಲ ! ಈ ಕೃತಿಗಳು ತಮತಮಗೆ ಸ್ವೋಪಜ್ಞ ಕೃತಿಗಳಾಗಿರುವಂತೆಯೇ, ಒಂದು ದೃಷ್ಟಿಯಲ್ಲಿ ವಾಲ್ಮೀಕಿ ರಾಮಾಯಣದ ಮರು ವಿಮರ್ಶೆ, ಪುನರ್ಮೌಲ್ಯಮಾಪನವೂ ಆಗಿದೆಯಷ್ಟೆ. ಇನ್ನು ಕೇವಲ ವಿಮರ್ಶೆಯ ಕ್ಷೇತ್ರಕ್ಕೆ ಬಂದರಂತೂ ಬಿಡುಗಣ್ಣರಾಗಿ ಬೆರಗುಗೊಳ್ಳುವುದೊಂದೇ ಗತಿ. ಕವಿ ರವೀಂದ್ರರಿಂದ ಶ್ರೀನಿವಾಸಶಾಸ್ತ್ರಿಗಳವರೆಗೆ, ಮಾಸ್ತಿಯವರಿಂದ ಪೋಲಂಕಿ ರಾಮಮೂರ್ತಿಗಳವರೆಗೆ ಅದರ ವೈವಿಧ್ಯ-ವಿಲಾಸ. ಅಷ್ಟೇಕೆ ನಮ್ಮ ಗ್ರಾಮೀಣ ಹೆಣ್ಣು ಮಗಳು ಹಾಡಿದ—

"ಜನಕರಾಯನ ಮಗಳು ವನಕೆ ತೊಟ್ಟಿಲ ಕಟ್ಟಿ
ಲವಕುಶರ ತೂಗ್ಯಾಳ । ನಗುನಗುತ
ವನವಾಸ ಕಳೆದಾಳ ॥"

ಎಂಬುದೂ ರಾಮಾಯಣ ಕಾವ್ಯದ ಮೌಲ್ಯ ಚಿಂತನೆಯೇ ತಾನೆ ? ಮುಖ್ಯವಾದ

ಮಾತೆಂದರೆ ಈ ಎಲ್ಲ ಚಿಂತನೆ-ಭಾವನೆ-ಬೆಲೆಕಟ್ಟುವ ಕೌಶಲಗಳನ್ನೂ ತಾಳಿಕೊಂಡು, ಅವುಗಳಿಂದಲೇ ಮತ್ತಷ್ಟು ಅಲಂಕೃತವಾಗಿ ನಗುನಗುತ್ತಲೇ ನಿಲ್ಲುವ ದಿವ್ಯಮಂಗಳ ವಿಗ್ರಹವಾಗಿದೆ ಮೂಲಕೃತಿ. ಎಲ್ಲ ಚಿಂತನ-ವಿಮರ್ಶೆಗಳೂ ಅವರವರ ಮನಸ್ಸಿನ ಕೃತಿ-ವಿಕೃತಿ-ಸಂಸ್ಕೃತಿಯಾಗಿ ವಿಜೃಂಭಿಸಬಲ್ಲವು ಅಷ್ಟೆ ! ಮೂಲ ಕೃತಿಯ ಅರ್ಥದ ಪರಿಪೂರ್ಣಗ್ರಹಣ ಇನ್ನೂ ಎತ್ತರದ ಸಾಧ್ಯತೆಯಾಗಿಯೇ ಉಳಿಯುತ್ತದೆ. ಅದರ ಶಿಲ್ಪ ಅತಿ ತುಂಗ-ಸೌಂದರ್ಯ-ಉದಾತ್ತ, ಇವು ಮುಪ್ಪುರಿಗೊಂಡ ಭವ್ಯ ಶಿಲ್ಪ. ಇನ್ನು ಅದರ ರಹಸ್ಯ ಗೊಮ್ಮಟನ ಸುಂದರ ಮಂದಹಾಸ. ಕಂಡೆವೆಂದರೆ ಕಂಡೆವು, ಉಂಡೆವೆಂದರೆ ಉಂಡೆವು, ಇಲ್ಲವೆಂದರೆ ಇಲ್ಲ !

೨

ವಾಲ್ಮೀಕಿ ರಾಮಾಯಣ ಭಾರತದ ಸುಪ್ರಸಿದ್ಧ ರಾಜವಂಶವೊಂದರ ಮಹತ್ತರ ಘಟ್ಟ ಎಂಬುದು ಈ ಪ್ರಬಂಧದ ನೆಲೆಗಟ್ಟು. ಮರ್ಯಾದಾ ಪುರುಷೋತ್ತಮನಾಗಿ ಆ ವಂಶದ ಸ್ವೀಕೃತ ಜೀವನ ಧರ್ಮವನ್ನು ಪಾಲಿಸಲು ಕಂಕಣ ಬದ್ಧನಾದವನು—ಚಿತ್ರ ವಿಚಿತ್ರ ಪರೀಕ್ಷೆಗಳಿಗೆ ತನ್ನನ್ನು ಒಡ್ಡಿಕೊಂಡವನು—ಸಮಸ್ಯೆಗಳ ಸುಳಿಸುಳಿಯ ಮಧ್ಯದಲ್ಲೇ ಬಂಡೆಗಲ್ಲಿನಂತೆ ನಿಂತರೂ ನಯವಾಗುತ್ತಾ ಹೋದವನು—ಸಾವು ನೋವುಗಳ ಸಂಕಟಗಳ ಹಾಗೆಯೇ ಸಂತಸ ಸಮೃದ್ಧಿಗಳ ವಾತ್ಸಲ್ಯ ಅಂತಃಕರಣಗಳ ಕೋಟಿ ಕಾರ್ತೀಕವನ್ನು ಬೆಳಗಿಸುತ್ತಾ ಹಿಗ್ಗಿದವನು, ಕುಗ್ಗಿದವನು, ಗಟ್ಟಿಗೊಂಡವನು ಆದರೂ ಅತ್ಯಂತ ಮೃದುವಾದವನು—ನಮ್ಮ ಕಾವ್ಯದ ನಾಯಕ. "ಕಾಲಾಗ್ನಿ ಸದೃಶೋ ರುದ್ರಃ ಕ್ಷಮಯಾ ಪೃಥಿವೀ ಸಮಃ !" ಧರ್ಮಜ್ಞ ಮಾತ್ರವಲ್ಲ "ರಾಮೋ ವಿಗ್ರಹವಾನ್ ಧರ್ಮಃ" ಧರ್ಮದ ಮೂರ್ತಿಮಂತ ಸ್ವರೂಪ.

ಆದರೆ ಸ್ವತಃ ರಾಮಚಂದ್ರ ಹೇಳುತ್ತಾನೆ : "ಇದೇನು ಹೊಸಧರ್ಮವಲ್ಲ, ನಾನೇನು ಹೊಸದಾಗಿ ಪ್ರಾರಂಭಿಸುವುದಲ್ಲ. ಸನಾತನವಾದದ್ದು. ನನ್ನ ವಂಶದ ರಕ್ತದಲ್ಲಿಯೇ ಹರಿದು ಬಂದದ್ದು. ನಾನು ಅದನ್ನೇ ಮುಂದುವರೆಸುತ್ತಿದ್ದೇನೆ ಅಷ್ಟೆ !" ಗಮನಿಸಿ :

ವಿದ್ಧಿ ಮಾಂ ಋಷಿಭಿಸ್ತುಲ್ಯಂ ಕೇವಲಂ ಧರ್ಮಮಾಸ್ಥಿತಂ ॥
ಪ್ರಾಣಾನಪಿ ಪರಿತ್ಯಜ್ಯ ಸರ್ವಥಾ ಕೃತಮೇವ ತತ್ ॥
ನಹ್ಯತೋ ಧರ್ಮಚರಣಂ ಕಿಂಚಿದಸ್ತಿ ಮಹತ್ತರಮ್ ॥
ಅನುಕ್ತೋऽಪ್ಯತ್ರ ಭವತಾ ಭವತ್ಯಾ ವಚನಾದಹಮ್ ॥
ಏಷ ಧರ್ಮಸ್ಸನಾತನಃ ॥

(ಅಯೋಧ್ಯಾಕಾಂಡ ಸ. ೧೯)

"ಕೇವಲ ಧರ್ಮದಲ್ಲಿ ನಿಂತಿರುವ ಋಷಿ ಸದೃಶನೆಂದು ನನ್ನನ್ನು ತಿಳಿ. ಪ್ರಾಣವನ್ನಾದರೂ ನೀಗಿಯೇನು, ಅದನ್ನು ಪಾಲಿಸುತ್ತೇನೆ. ಈ ಧರ್ಮಾಚರಣೆಗಿಂತ ಮಹತ್ತರವಾದುದೇನೂ ಇಲ್ಲ. ಅದನ್ನು ಬಾಯಿಂದ ಹೇಳಬೇಕಾದ್ದೇ ಇಲ್ಲ. ಅನಾದಿಯಿಂದ ಬಂದ ಧರ್ಮ ಇದು".

ಹೀಗೆ ಗಟ್ಟಿಯಾಗಿ ಹೇಳುತ್ತಿರುವ ಈ ಅನುಕ್ತ ಧರ್ಮದ ಬಗ್ಗೆ ರಾಮನ ಮನಸ್ಸು ಮುಂದೆ ಮತ್ತಷ್ಟು ಸ್ಪಷ್ಟವಾಗುತ್ತದೆ. ನೋಡಿ :

"ಧರ್ಮೋಹಿ ಪರಮೋ ಲೋಕೇ ಧರ್ಮೇ ಸತ್ಯಂ ಪ್ರತಿಷ್ಠಿತಮ್।"

ಮತ್ತೆ ಕೇಳಿ :

"ನಾಹಂ ಧರ್ಮಮಪೂರ್ವಂ ತೇ ಪ್ರತಿಕೂಲಂ ಪ್ರವರ್ತಯೇ !
ಪೂರ್ವೈರಯಮಭಿಪ್ರೇತೋ ಗತೋ ಮಾರ್ಗೋऽನುಗಮ್ಯತೇ ॥
ತದೇತತ್ತು ಮಯಾಕಾರ್ಯಂ ಕ್ರಿಯತೇ ಭುವಿ ನಾನ್ಯಥಾ ॥"

"ನಾನು ಹಿಂದೆಂದೂ ಕಾಣದ ಧರ್ಮವೊಂದನ್ನು ನಿನಗೆ ಪ್ರತಿಕೂಲವಾಗಿ ಹೊಸದಾಗಿ ಆರಂಭಿಸುತ್ತಿಲ್ಲ. ಪೂರ್ವಿಕರು ಸಮ್ಮತಿಸಿ ನಡೆದ ಈ ಮಾರ್ಗವನ್ನೇ ನಾನೂ ಅನುಸರಿಸುತ್ತೇನೆ. ಮಾಡಬೇಕಾದ ಕಾರ್ಯವನ್ನು ನಾನು ಮಾಡುತ್ತಿರುವೆನೇ ಹೊರತು ಬೇರೆಯಲ್ಲ". [ಅಯೋಧ್ಯಾಕಾಂಡ. ಸರ್ಗ ೨೧]

ಎಂತಹ ಧರ್ಮ ವಿಷಯ ಇದು ! ಇದು ಇಂದಿನದಲ್ಲ–ನೆನ್ನೆಯದಲ್ಲ. ತಾನು ತನ್ನ ಹಿರಿಯರ ಧರ್ಮವನ್ನು ಮುಂದುವರೆಸುತ್ತಿದ್ದೇನೆ. ಇದು ಸನಾತನ ಧರ್ಮ. ತಾನೇನೂ ಪ್ರಾರಂಭಿಕನಲ್ಲ–ಪ್ರವರ್ತಕ ಮಾತ್ರ. ಇಷ್ಟು ಖಂಡಿತವಾಗಿ ರಾಮನು ಹೇಳುವ ರಾಘವವೀರೋದಾತ್ತರು ಆಚರಿಸಿಕೊಂಡು ಬಂದಿದ್ದ ಜೀವನ ಧರ್ಮವಾದರೂ ಏನು ? ಪ್ರಕೃತದಲ್ಲಿ ರಾಮಚಂದ್ರನ ಎದುರಿನಲ್ಲಿ ವಿದೀರ್ಣ ಮನಸ್ಸಿನಿಂದ ಆ ಧರ್ಮ ರಾಮನನ್ನು ಯಾಚಿಸುತ್ತಿರುವುದಾದರೂ ಏನನ್ನು ? ಅನುಕ್ತಂ–ವ್ಯಕ್ತವಾಗುತ್ತಿರುವ ಆ ಧರ್ಮದ ವ್ಯಸನದ ಸ್ವರೂಪವಾದರೂ ಏನು ? ಚಿಂತನೀಯವಲ್ಲವೆ ?

೩

ಭಾರತೀಯ ಚಿಂತನೆಯ ಆಸ್ತಿಭಾರ ಅತ್ಯಂತ ಘನವಾದದ್ದು. ಜೀವನ ಒಂದು ಕಲೆ. ಅದೊಂದು ಬರಿಯ ಆಕಸ್ಮಿಕವಲ್ಲ. ಹೇಗೆ ಹೇಗೋ ಮುಗಿಸಿ ಎಸೆಯು

ವಂತಹುದಲ್ಲ. ಆದರ್ಶ ಜೀವನ ಸಂಸಾರದ ಭೂಷಣ. ಸಮಾಜದ ಸೌಂದರ್ಯ, ವ್ಯಷ್ಟಿ-ಸಮಷ್ಟಿಯ ಸಾಮರಸ್ಯದ ಬೆಸುಗೆಯೇ ಅದರ ಕಲೆ. ಅಂತಹ ಜೀವನಧರ್ಮ ಸಾಧಿಸಿ ಗೆಲ್ಲಬೇಕಾದ ಪುರುಷಾರ್ಥ. ಧರ್ಮಾರ್ಥ ಕಾಮ ಮೋಕ್ಷಗಳಿಗೆ ಅಲ್ಲಿ ಯಥೋಚಿತವಾದ ಸ್ಥಾನ ನಿರ್ದೇಶವುಂಟು. ಯಾವುದೂ ಅಲ್ಲಿ ತ್ಯಾಜ್ಯವಲ್ಲ. ಯಾವುದರ ಅಕಾಲ ವಿಜೃಂಭಣೆಯೂ ಅಲ್ಲಿ ಇಲ್ಲ. ಲೋಕದ ಸಂಪತ್ತು ಲೋಕದ ಸೌಂದರ್ಯ ಎರಡೂ ಬಾಳಿನ ಪರಿಪೂರ್ಣತೆಗೆ ಅವಶ್ಯಕವೇ. ಆದರೆ ಅವೆರಡೂ ತಮಗೆ ತಾವೇ ವಿಶೃಂಖಲವಾಗಿ ವಿಜೃಂಭಿಸುವಂತಿಲ್ಲ. "ಧರ್ಮಂ ಪ್ರಧಾನಂ ಅರ್ಥಂ ಧರ್ಮಾಂಘ್ರಿಪ ಫಲಂ ಆದರೊಳಗಣ ಸವಿ ಕಾಮಂ" ಎಂದು ನಮ್ಮ ಪಂಪನು ಸುಂದರವಾಗಿ ಸೂತ್ರೈಸಲಿಲ್ಲವೆ ? "ಧರ್ಮಾ ವಿರುದ್ಧೋ ಭೂತೇಷು ಕಾಮೋಸ್ಮಿ ಭರತರ್ಷಭ" ಎಂದು ಗೀತಾಚಾರ್ಯನೇ ನುಡಿಯಲಿಲ್ಲವೆ ? ಈ ಧರ್ಮ ವೆಂದರೂ ಏನು ? ಅದೊಂದು ದಂಡಧಾರಿ.

> "ಧರ್ಮವದು ಜೀವನದ ಮರ್ಮವದು
> ಅರ್ಥಕಾಮಗಳಿಗಂಕೆಯಿಡೆ ಧರ್ಮದುದಯ" [ಪುತಿನ-ರಸಚಿಂತನ]

ನಿಜ, ಅರ್ಥ ಕಾಮಗಳು ಕೆರಳದಂತೆ, ವಿನೀತವಾಗಿಯೇ ಸುಖಿಸುವಂತೆ, ವರ್ಧಿಸುವಂತೆ ಅಂಕೆಯಿಡುವ ಮಹಾನ್ ಶಕ್ತಿ ಈ ಧರ್ಮ. ಈ ಅಂಕೆಯ ಬೆಲೆಯನ್ನು ರಾಮನು ಸೂಚಿಸುವ ಪೂರ್ವಸೂರಿಗಳು ಚೆನ್ನಾಗಿ ಬಲ್ಲವರು. ಇಕ್ಷ್ವಾಕುವಂಶದ ಸುವರ್ಣ ಸರಪಳಿಯಲ್ಲಿ ಶ್ರೀರಾಮನೂ ಒಂದು ಕೊಂಡಿಯಷ್ಟೆ ! ಏಷ ಧರ್ಮಸ್ಸನಾತನಃ । ಸನಾತನರು ಎಂದರೆ ಯಾರು ? ಈ ವಂಶವಂತೂ ಅತಿ ಪ್ರಾಚೀನವಷ್ಟೆ ?

> "ಸರ್ವಾಪೂರ್ವಮಿಯಂ ಯೇಷಾಮಾಸೀತ್ಕೃತ್ಸ್ನಾ ವಸುಂಧರಾ
> ಪ್ರಜಾಪತಿಮುಪಾದಾಯ ನೃಪಾಣಾಂ ಜಯಶಾಲಿನಾಂ"

* * *

> ಇಕ್ಷ್ವಾಕೂಣಾಂ ಇದಂ ತೇಷಾಂ ರಾಜ್ಞಾಂ ವಂಶೇ ಮಹಾತ್ಮನಾಂ
> ಮಹದುತ್ಪನ್ನಮಾಖ್ಯಾನಂ ರಾಮಾಯಣಮಿತಿ ಶ್ರುತಂ ।
> (ಬಾ. ಕಾ. ಸ. ೫)

ಎಂಬ ಶ್ಲೋಕಗಳನ್ನು ಗಮನಿಸಿಯೇ ಮುಂದೆ ಹೋಗಬಹುದಷ್ಟೆ ! ಅದು ಪ್ರಜಾಪತಿ ಮನುವಿನಿಂದಲೂ ಹರಿದು ಬಂದ ವಂಶವಷ್ಟೆ ! ಅಂಥ ಇಕ್ಷ್ವಾಕು ರಾಜವಂಶದಲ್ಲಿ ಹುಟ್ಟಿದ ಮಹಾಚರಿತ್ರೆಯೇ ರಾಮಾಯಣ. ಅದನ್ನು ಅಸೂಯಾ

ರಹಿತವಾಗಿ ಕೇಳುವ ಶ್ರೋತೃಗಳಿಗೆ ಒದಗುವುದು-ಧರ್ಮಕ್ಕೆ ವಿರುದ್ಧವಾಗದ ಇಷ್ಟಾರ್ಥ ಸಂಪತ್ತುಗಳಂತೆ !

ಇನ್ನು ಇವರು ಆಳಿದ ಅಯೋಧ್ಯಾಪಟ್ಟಣವೋ ಸಾಕ್ಷಾತ್ ಮಾನವೇಂದ್ರನಾದ ಮನುವಿನಿಂದಲೇ ನಿರ್ಮಿಸಲ್ಪಟ್ಟಿದ್ದು. ಅಲ್ಲಿ ಹುಟ್ಟಿದ ಕಥೆಯಿದು. ಅಲ್ಲಿ ಸತತವಾಗಿ ಪರಿಪಾಲಿಸಲ್ಪಟ್ಟ ಜೀವನ ಧರ್ಮವಿದು. ಅದರ ಖಚಿತ ಸ್ವರೂಪವನ್ನು ಕಾಳಿದಾಸನು ಕಡೆದಿಟ್ಟುಬಿಟ್ಟಿದ್ದಾನೆ : (ರಘುವಂಶ ಸ. ೧)

"ಶೈಶವೇಭ್ಯಸ್ತ ವಿದ್ಯಾನಾಂ ಯೌವನೇ ವಿಷಯೈಷಿಣಾಂ
ವಾರ್ಧಕೇ ಮುನಿವೃತ್ತೀನಾಂ ಯೋಗೇನಾಂತೇ ತನುತ್ಯಜಾಂ ॥

ಇದು ಧರ್ಮಾರ್ಥ ಕಾಮಸ್ವರೂಪ. ಸುಖ ಸಂತೋಷ, ಸಂಪತ್ತುಗಳೂ ಬದುಕಿನ ವೇಳಾಪಟ್ಟಿಯಂತೆ ಕಾಲನಿಬದ್ಧವಾಗಿಯೇ ಪಡೆಯತಕ್ಕದ್ದು, ಅನುಭವಿಸತಕ್ಕದ್ದು. ಸಿದ್ಧತೆ-ಸಾಧನೆ-ಸಿದ್ಧಿ ಹೀಗೆ ಜೀವನಧರ್ಮ. ಈ ಧರ್ಮವನ್ನೇ ಸಂತತವಾಗಿ ದಿಲೀಪ-ರಘು-ಅಜ ಮುಂತಾದ ಮಹಿಮಾನ್ವಿತರು ಆಚರಿಸಿಕೊಂಡು ಬಂದದ್ದು. ಇದೀಗ ಶ್ರೀರಾಮಚಂದ್ರನೆದುರು ನಿಂತ ಸವಾಲೂ ಅದೇ ಆಗಿತ್ತು. ಧರ್ಮವು ಒಡ್ಡಿದ ಈ ಸವಾಲಿನೆದುರು ಈಗ ವೃದ್ಧ ದಶರಥ-ತರುಣ ಶ್ರೀರಾಮ ಮುಖಾ ಮುಖಿಯಾಗಿ ನಿಂತಿದ್ದಾರೆ. ಅಥವಾ ಇನ್ನೂ ಸರಿಯಾಗಿ ಹೇಳುವುದಾದರೆ ವೃದ್ಧ ದಶರಥ 'ಕಿರಿಯ' ರಾಣಿಯ ಬಳಿ ಶೋಕತಪ್ತನಾಗಿ ಒರಗಿದ್ದಾನೆ. ಆಜಾನುಬಾಹುವೂ ಅರವಿಂದದಲಾಯತಾಕ್ಷನೂ ಆದ ಶ್ರೀ ರಾಘವ ನೇರವಾಗಿ ನಿಂತಿದ್ದಾನೆ-ಅಯೋಧ್ಯಾ ಕಾಂಡದಲ್ಲಿ. ಅವರವರ ನೇತ್ರಸಂಭಾಷಣ ನಡೆಯುತ್ತಿರಲಿ. ರಘುವಂಶದ ಅರಸರು ಬಾಳಿ ಬದುಕಿದ ಧರ್ಮವನ್ನು ಕೊಂಚವೇ ಸ್ಮರಿಸಿ ಹಿಂತಿರುಗಿ ಬರೋಣ !

ದಿಲೀಪ ಚಕ್ರವರ್ತಿಯೂ ಪುತ್ರಕಾಮನೇ. ಸುದಕ್ಷಿಣೆಯೊಡನೆ ಅವನ ಸುಂದರ ಸಂಸಾರದಲ್ಲಿ ಇದೊಂದೇ ಕೊರತೆ. ಪತ್ನಿ ಸುದಕ್ಷಿಣೆಯಲ್ಲಿಯೇ ಸತ್ಸಂತಾನ ವನ್ನು ಕಾಣುವ ಸದಪೇಕ್ಷೆ ಅವನಿಗೆ. "ವಿಲಂಬಿತಫಲೈಃ ಕಾಲಂ ಸನಿನಾಯ ಮನೋರಥೈಃ॥" (ರಘುವಂಶ ೧-೩೩) ಆದರೆ ಸಂತಾನಕ್ಕೆಂದೇ ಮತ್ತೆ ಮತ್ತೆ ಹೆಣ್ಣು ತರಲು ಹೊರಡಲಿಲ್ಲ, ಬದಲಾಗಿ ದಂಪತಿಗಳು ಪರಿಶುದ್ಧರಾಗಿ, ವ್ರತನಿಷ್ಠರಾಗಿ ಗುರು ವಸಿಷ್ಠರನ್ನು ಆಶ್ರಮದಲ್ಲಿ ಸಂದರ್ಶಿಸಿದರು. (ಗುರುವನ್ನು ಅರಮನೆಗೇ ಬರ ಮಾಡಿಕೊಳ್ಳಲಿಲ್ಲ !) ರಾಜನೋ "ದುಷ್ಪ್ರಾಪಯಶ, ಮಹಿಷೀಸಖ, ಶ್ರಾಂತವಾಹನ, ಭೂಪಾಲ"-ಕಂಡದ್ದು ಸಂಯಮಿ ಮಹರ್ಷಿಯನ್ನು-ಸಂಜೆಯವೇಳೆ-ತಪೋವನದಲ್ಲಿ- ಮಹಾಪತಿವ್ರತೆ ಅರುಂಧತಿಯ ದಿವ್ಯಸನ್ನಿಧಿಯಲ್ಲಿ. ತನ್ನ ಬದುಕಿನ ಕೊರತೆಯನ್ನು ಅತ್ಯಂತ ವಿನಯಪೂರ್ವಕವಾಗಿ ವಿನಂತಿಸಿದ ಭೂಪಾಲನಿಗೆ ಧ್ಯಾನದಿಂದ ಕಾರಣವನ್ನು

ತಿಳಿದ ಮುನಿ ಸೂಚಿಸಿದುದು ನಂದಿನಿಯ ಅನುಗ್ರಹವನ್ನು ಪಡೆದು ಸಂತಾನವನ್ನು ಕಾಣಬಹುದು ಎಂದು. ದಿಲೀಪನಿಂದ ಆದುದೂ ಈ ಹಿಂದೆ ಅವಸರದಲ್ಲಿ ಸುರಭಿಯನ್ನು ವಂದಿಸದೆ ಬಂದ ಕಿಂಚಿತ್ ಧರ್ಮಲೋಪ. ಅದೂ ಸಹ ಋತುಸ್ನಾತೆಯಾದ ಪ್ರಿಯಕರಳನ್ನು ನೆನೆವ ಆತುರದಲ್ಲಿ ! ಇದೀಗ ಗುರುವಿನ ಸೂಚನೆಯಂತೆ ದಂಪತಿಗಳು ಶುದ್ಧ ಭಕ್ತಿಯಿಂದ, ತಪೋಜೀವನವನ್ನು ನಡೆಸಿ ನಂದಿನಿಯ ವರವನ್ನು ಪಡೆದು ರಘುಮಹಾರಾಜನನ್ನು ತಮ್ಮ ವಂಶೋದ್ಧಾರಕನನ್ನಾಗಿ ಕಂಡರಷ್ಟೆ ! ಅದೊಂದು ದಿವ್ಯಸುಂದರ ಶುಭ್ರ ಆಖ್ಯಾನ. ಆದರ ವ್ಯಾಖ್ಯಾನಕ್ಕೆ ಇಲ್ಲಿ ಅವಕಾಶವಿಲ್ಲ. ಮುಖ್ಯವಾಗಿ ಗಮನಿಸಬೇಕಾದುದು ದಿಲೀಪನ ಕಿಂಚಿತ್ ಧರ್ಮೋಲ್ಲಂಘನ-ಪಶ್ಚಾತ್ತಾಪ-ಪರಿಹಾರ ; ಧರ್ಮಪ್ರಸನ್ನತೆ-ಅದರ ಮಧುರ ಫಲ.

ಮುಂದೆ ರಘು ರಾಜಕುವರ ಬೆಳೆದ ತರುಣನಾದ, ವಿವಾಹಿತನಾದ. ವೃದ್ಧ ರಾಜನಿಂದ ಅಭಿಷಕ್ತನಾಗಿ ದೊರೆಯಾದ. ಮುಂದೆ ?

"ಅಥ ಸ ವಿಷಯವ್ಯಾವೃತ್ತಾತ್ಮಾ ಯಥಾವಿಧಿ ಸೂನವೇ
ನೃಪತಿ ಕಕುದಂ ದತ್ತ್ವಾ ಯೂನೇ ಸಿತಾತಪವಾರಣಮ್
ಮುನಿವನತರುಚ್ಛಾಯಾಂ ದೇವ್ಯಾ ತಯಾ ಸಹ ಶಿಶ್ರಿಯೇ
ಗಲಿತವಯಸಾಮಿಕ್ಷ್ವಾಕೂಣಾಂ **ಇದಂ ಹಿ ಕುಲವ್ರತಮ್** ||

ಇಳಿವಯಸ್ಸಿನಲ್ಲಿ ವಿಷಯಸುಖ ವಿರಕ್ತಿ, ಪ್ರಾಪ್ತ ವಯಸ್ಸಿನ ಮಗನಿಗೆ ರಾಜ್ಯಪಟ್ಟ ಪ್ರದಾನ, ವೃದ್ಧೆ ಪತ್ನಿಯೊಡನೆ ತಪೋವನಗಮನ, 'ವಾರ್ಧಕೇ ಮುನಿ ವೃತ್ತೀನಾಂ'- ಇದು ತಾನೇ ಇಕ್ಷ್ವಾಕುಗಳ ಕುಲವ್ರತ ? (ರಘುವಂಶ. ೩-೭೦)

ಮುಂದೆ ರಘುಮಹಾರಾಜನಾದರೋ ಲೋಕವನ್ನು ಧರ್ಮದಿಂದ ಪರಿಪಾಲಿಸಿ ವೃದ್ಧಾಪ್ಯದಲ್ಲಿ ಮಗ ಅಜನಿಗೆ ಪಟ್ಟಗಟ್ಟಿದ ಮೇಲೆ-

ಪ್ರಥಮ ಪರಿಗತಾರ್ಥಃ ತಂ ರಘುಃ ಸಂವೃತ್ತಂ
ವಿಜಯಿನಮಭಿನಂದ್ಯ **ಶ್ಲಾಘ್ಯಜಾಯಾಸಮೇತಂ**
ತದುಪಹಿತ ಕುಟುಂಬಃ **ಶಾಂತಿಮಾರ್ಗೋತ್ಸುಕೋಽಭೂ**
ನ್ನ ಹಿ ಸತಿ ಕುಲಧುರ್ಯೇ **ಸೂರ್ಯವಂಶ್ಯಾ ಗೃಹಾಯ** (ರಘುವಂಶ ೩-೭೧)

ಮಗ ವಿಜಯಿಯಾಗಿ ವಿವಾಹಿತನಾಗಿ ರಾಜ್ಯಭಾರ ದಕ್ಷನಾಗಿ ಬೆಳೆದು ನಿಂತನೆಂದರೆ, ಸೂರ್ಯವಂಶದರಸರಿಗೆ ವಿಷಯ ವಿರಕ್ತಿ, ತಪೋವನದ ಬಯಕೆ. ಹೊರೆಯನ್ನು ಮಗನ ಸುದೀರ್ಘ ಬಾಹುಗಳಿಗೆ ಇಳಿಸುವ ಕಾತರ. ಜೀವನ ಧರ್ಮದ ಪರಿಪಾಲನೆಯ ಪ್ರಾಮಾಣಿಕತೆ.

ಈ ಹೃದಯಂಗಮ ಕಥಾನಕದ ಪೂರ್ವವಿವರಗಳನ್ನು ಸುದೀರ್ಘವಾಗಿ ವಿವರಿಸುವ ಚಾಪಲ್ಯವನ್ನು ಪ್ರಬಂಧವಿಸ್ತಾರದ ಭಯದಿಂದ ಸಂಯಮಿಸಿಕೊಳ್ಳಬೇಕಾಗಿದೆ ! ದಶರಥನ ಕಥೆ ತೀರ ಕಾದು ಬಿಟ್ಟಿದೆ !

ದಶರಥನ ತಂದೆ ಅಜನೃಪನಂತೂ ಆದರ್ಶ ಪ್ರಣಯಿ. ಇಂದುಮತೀ ವಿವಾಹ-ಮೋಹೋನ್ಮಾದ-ಅಕಾಲದ ಮರಣಗಳು ಅವನನ್ನು ಹಣ್ಣು ಹಣ್ಣು ಮಾಡಿಬಿಟ್ಟವು. ಆದರೂ ರಾಜ್ಯಭಾರದ ಕರ್ತವ್ಯವನ್ನು ದಶರಥನು ಪ್ರಾಪ್ತವಯಸ್ಕನಾಗುವವರೆಗೂ ವಹಿಸಲೇಬೇಕಾಯಿತು. ಅನಂತರ "ಸಮ್ಯಗ್ವಿನೀತಮಥ ವರ್ಮಹರಂ ಕುಮಾರಂ । ಆದಿಶ್ಯ ರಕ್ಷಣವಿಧೌ ವಿಧಿವತ್ ಪ್ರಜಾನಾಂ..." ಅನಂತರವೇ ಸರಯೂಗಂಗಾ ಸಂಗಮ ಸ್ಥಾನದಲ್ಲಿ ಪ್ರಾಯೋಪವೇಶಗಮನದಿಂದ ಅವನ ದೇಹತ್ಯಾಗ. ಹಾದಿ ಕೊಂಚ ಬೇರೆಯಾದರೂ ಅಜನು ರಘುವಂಶದ ವಿಧಿಯನ್ನು ತೀರಾ ಬಲಿಕೊಡಲಿಲ್ಲ.

ಇದೀಗ ದಶರಥಮಹಾರಾಜನ ರಾಜ್ಯಭಾರ ವೈಭವ !

೪

ದಶರಥನೂ ಮಹಾಪ್ರಾಜ್ಞನೇ. ವೇದಶಾಸ್ತ್ರವಿದನೇ. ಧರ್ಮವನ್ನು ಓದಿ. ಕೇಳಿ ಬಲ್ಲವನೇ. (ವೇದವಿತ್ಸರ್ವ ಸಂಗ್ರಹ . ದೀರ್ಘದರ್ಶೀ, ಮಹಾತೇಜಾ...ಧರ್ಮಪರೋ ವಶೀ ಮಹರ್ಷಿಕಲ್ಪ : ರಾಜರ್ಷಿ ; ಇತ್ಯಾದಿ ಅವನ ಪ್ರಶಂಸೆ.) ಅವನು ಏಕೆ ಮೇಲಿಂದ ಮೇಲೆ ಹೆಣ್ಣುಗಳನ್ನು ವರಿಸಿದನೋ ತಿಳಿಯದು. ಕೌಸಲ್ಯೆ, ಸುಮಿತ್ರೆ, ಕೈಕೆ ಈ ಮೂವರೂ ವಿಧಿವತ್ತಾಗಿ ಪಾಣಿಗ್ರಹಣ ಮಾಡಿದ ರಾಣಿಯರೇ ಎಂಬುದಂತೂ ಸ್ಪಷ್ಟ. ಇವರಲ್ಲಿ ಕೈಕೆಯ ಕಥೆ ಮಾತ್ರ ಅಯೋಧ್ಯಾಕಾಂಡದಲ್ಲಿ ಸಾಕಷ್ಟು ವಿಸ್ತಾರವಾಗಿಯೇ ಕಥಿತವಾಗಿದೆ. ಅದನ್ನು ಅವಶ್ಯವಿದ್ದಲ್ಲಿ ಮುಂದೆ ಗಮನಿಸಬಹುದು. ಪ್ರಕೃತ ಅವನಲ್ಲಿ ಮಗನಿಗಾಗಿ ಪರಿತಪನ ಹಾಗೂ ಅದಕ್ಕಾಗಿ ಅಶ್ವಮೇಧಯಾಗದ ಸಂಕಲ್ಪ ಮೂಡುವ ವೇಳೆಗೆ ಸಾಕಷ್ಟು ಕಾಲ ರಾಣಿಯರೊಡನೆ ಅವನು ಸಂಸಾರ ಮಾಡಿದಂತೆ ತೋರುತ್ತದೆ. (ತಸ್ಯ ತ್ವೇವಂಪ್ರಭಾವಸ್ಯ ಧರ್ಮಜ್ಞಸ್ಯ ಮಹಾತ್ಮನಃ । ಸುತಾರ್ಥಂ ತಪ್ಯಮಾನಸ್ಯ ನಾಸೀದ್ವಂಶಕರಸ್ಸುತಃ ॥ ಚಿಂತಯಾನಸ್ಯ ತಸ್ಯೈವಂ ಬುದ್ಧಿರಾಸೀನ್ಮಹಾತ್ಮನಃ । ಸುತಾರ್ಥಂ ಹಯಮೇಧೇನ ಕಿಮರ್ಥಂ ನ ಯಜಾಮ್ಯಹಂ ॥)

ಇದು ದಿಲೀಪನ ತಪಸ್ಸಲ್ಲ-ಹಯಮೇಧ ! ಗುರು ಧ್ಯಾನದಲ್ಲಿ ಕಂಡ ದರ್ಶನವಲ್ಲ. ರಾಜನ ಮನದಲ್ಲೇ ಅರಮನೆಯಲ್ಲೇ ಸ್ಫುರಿಸಿದ ಚಿಂತನೆ. (ಚಿಂತೆ ?). ಅನಂತರ ಮಂತ್ರಿಮಹರ್ಷಿಗಳೊಡನೆ ಸಮಾಲೋಚನೆ ಇತ್ಯಾದಿ. ಮುಂದಿನ ಕಥೆ ಚಿರಪರಿಚಿತ.

ಯಜ್ಞಪುರುಷನು ನೀಡಿದ ಪಾಯಸದ ಹಂಚಿಕೆಯಿಂದ ರಾಣಿಯರು ನಾಲ್ವರು ಮಕ್ಕಳನ್ನು ಪಡೆದರಷ್ಟೆ ! ದಿಲೀಪ, ರಘು, ಅಜರಂತೆ ದಶರಥನಿಗೆ ಏಕಪತ್ನೀ ನಿಷ್ಠೆ ಒಲಿಯಲಿಲ್ಲ. ಹಾಗಿದ್ದರೆ ಕತೆ ಬೇರೆಯೇ ಆಗಬಹುದಿತ್ತೇನೋ. ರಾಘವರ ಜೀವನ ಧರ್ಮವಾಹಿನಿ ಅಖಂಡವಾಗಿಯೇ ಹರಿಯುತ್ತಿತ್ತೇನೋ—ಚಿಂತನೀಯ. ಇರಲಿ. ದಶರಥನು ಇನ್ನೂ ಸಂಸಾರಸುಖವನ್ನು ಅನುಭವಿಸುತ್ತಲೇ ಇದ್ದಾನೆ. ರಾಮಲಕ್ಷ್ಮಣರಿಗೆ ವಿಶ್ವಾಮಿತ್ರಮುನಿಯ ಅನುಗ್ರಹದ ಮೂಲಕ ಪ್ರಥಮ ವನವಾಸ, ದಿವ್ಯಾಸ್ತ್ರಗಳ ಪ್ರದಾನ. ಅತ್ಯಂತ ಆರೋಗ್ಯಕರವಾದ ಬ್ರಹ್ಮಚರ್ಯನಿಷ್ಠೆ. ಅನಂತರವೇ ವಿವಾಹ ಮಂಗಲ. ಬಾಲಕಾಂಡದ ಅಂತ್ಯ ಅದೆಷ್ಟು ಶುಭ್ರ–ಸುಂದರ ಹಾಗೂ ಧರ್ಮನಿಷ್ಠ ! ಅಲ್ಲಿ ಸಂಪತ್ತಿನ ಫಲ–ಸಂತೋಷದ ಸ್ವಾದ ಎರಡೂ ಉಂಟು. ಧರ್ಮವೃಕ್ಷದ ಪರಮ ಫಲ ಅದು. ಮಹಾಕವಿ ವಾಲ್ಮೀಕಿಯನ್ನೇ ಲಾಲಿಸೋಣ !

"...ರಾಮಸ್ತು ಸೀತಯಾ ಸಾರ್ಧಂ ವಿಜಹಾರ ಬಹೂನ್ ಋತೂನ್
ಮನಸ್ವೀ ತದ್ಗತಸ್ತಸ್ಯಾ ನಿತ್ಯಂ ಹೃದಿ ಸಮರ್ಪಿತಃ ॥
ಪ್ರಿಯಾ ತು ಸೀತಾ ರಾಮಸ್ಯ ದಾರಾಃ ಪಿತೃಕೃತಾ ಇತಿ ॥
ಗುಣಾದ್ರೂಪಗುಣಾಚ್ಚಾಪಿ ಪ್ರೀತಿರ್ಭೂಯೋಽಭ್ಯವರ್ಧತ
ತಸ್ಯಾಶ್ಚ ಭರ್ತಾ ದ್ವಿಗುಣಂ ಹೃದಯೇ ಪರಿವರ್ತತೇ ॥
ಅಂತರ್ಜಾತಮಪಿ ವ್ಯಕ್ತ ಮಾಖ್ಯಾತಿ ಹೃದಯಂ ಹೃದಾ
ತಸ್ಯಭೂಯೋ ವಿಶೇಷೇಣ ಮೈಥಿಲೀ ಜನಕಾತ್ಮಜಾ ।
ದೇವತಾಭಿಃಸಮಾ ರೂಪೇ ಸೀತಾ ಶ್ರೀರಿವ ರೂಪಿಣೀ ॥
ತಯಾ ಸ ರಾಜರ್ಷಿ ಸುತೋಽಭಿರಾಮಯಾ
ಸಮೇಯಿವಾನುತ್ತಮ ರಾಜಕನ್ಯಯಾ
ಅತೀವ ರಾಮಶ್ಶುಶುಭೇತಿ ಕಾಮಯಾ
ವಿಭುಃಶ್ರಿಯಾ ವಿಷ್ಣುರಿವಾಮರೇಶ್ವರಃ ॥

ಎಂತಹ ಕಾಂತಿಯುಕ್ತ ಅನುರಾಗಭರಿತ ಸುಂದರ ಸಂಸಾರ ಇದು. 'ಅದ್ವೈತಂ ಸುಖ ದುಃಖಯೋಃ' ಎಂದು ಮುಂದೆ ಭವಭೂತಿ ಉದ್ಗರಿಸಿದನಲ್ಲವೆ ? ಮಹಾಕವಿ ವಾಲ್ಮೀಕಿಯ ಈ ಸ್ನೇಹಾರ್ದ್ರ ಚಿತ್ರಣ ಕವಿ–ವಾಚಕನ ಹೃದಯ ಸಂವಾದ. ಅದಕ್ಕೆ ಅನುವಾದದ ಹಂಗೇಕೆ ? ಅನುರಾಗ ದೀಪ್ತ ಮೌನದ ಮಂದಹಾಸವೇ ಅದರ ಬೆಲೆ ಅದರ ಸಾರ್ಥಕ್ಯ. ರಾಮಚಂದ್ರನಿಗೆ ಸಹಜವಾಗಿ ಸೀತೆಯಲ್ಲಿ ಅನುರಾಗ, ತಂದೆಯ ಸಂಕಲ್ಪವೂ ಈ ವಿವಾಹದಲ್ಲಿ ಸೇರಿದ್ದುದರಿಂದ ಅವಳು ಮತ್ತಷ್ಟು ಪ್ರಿಯೆ ! ರೂಪಕ್ಕೇನೂ ಕೊರತೆಯಿಲ್ಲ, ಆದರೆ ಆಕೆಯ ಗುಣಗಣ ಏನು ಕಡಿಮೆಯೇ ? ಆ

ಗುಣದಿಂದಲೇ ಅವರ ಪ್ರೀತಿ ದಿನೇ ದಿನೇ ಬೆಳೆಯುತ್ತಲೇ ಹೋಯಿತು. ರಾಮನ ಪ್ರೀತಿಗೆ ಇಮ್ಮಡಿಯಾದ ಪ್ರೀತಿ ಆ ಪ್ರೇಯಸಿಯದು. ಅವಳ ಮನೋಭಿಪ್ರಾಯ ವನ್ನು ಅವಳು ಹೇಳದೆಯೇ ರಾಮನು ಅರಿತು ಬಿಡುತ್ತಿದ್ದ. ಅವಳಾದರೂ ಹಾಗೆಯೇ ಅಲ್ಲವೆ ?

ಇಂತಹ ಸ್ನೇಹಾರ್ದ್ರ ಚಿತ್ರದೊಡನೆ ಬಾಲಕಾಂಡವು ಮುಕ್ತಾಯವಾಗುತ್ತದೆ. ಮುಂದಿನ ಅಯೋಧ್ಯಾಕಾಂಡದ ದಶರಥನ ವಿಕೃತ ದಾಂಪತ್ಯ ಜೀವನದ ಬಿರುಗಾಳಿಯ ಮುನ್ಸೂಚನೆ ಸೂಕ್ಷ್ಮಜ್ಞನಾದ ಓದುಗನಿಗೆ ತಟ್ಟಿಯೇ ತಟ್ಟುತ್ತದೆ. ರಾಮನದು ಅನುರೂಪ ದಾಂಪತ್ಯ. ಏಕಪತ್ನೀ ರತಿ. ಲಕ್ಷ್ಮೀನಾರಾಯಣ ಸ್ವರೂಪಾಯ ! ಇಂತಹ ಸಿಹಿಕೂಟ ಸಂಸಾರದ ಶೃಂಗಾರ. ಸಮಾಜದ ಶೋಭೆ.

ಮುಂದೆ, ದಶರಥನಿಗೆ ತೀರಸಹಜವಾದ ಜೀವನಧರ್ಮವೆಂದರೆ ವಾರ್ಧಕೇ ಮುನಿವೃತ್ತೀನಾಂ । ಯೋಗೇನಾಂತೇ ತನುತ್ಯಜಾಂ ಅಲ್ಲವೆ ? ಪ್ರತಿಯೊಂದು ಜೀವದ ಬಯಕೆ—ಆದರ್ಶಗಳಾದರೂ ಏನು ಈ ನಾಡಿನಲ್ಲಿ ? ವಿನಾ ದೈನ್ಯೇನ ಜೀವನಂ—ಅನಾಯಾಸೇನ ಮರಣಂ ಅಲ್ಲವೇ ? ರಘುವಂಶದ ಜೀವನಾದರ್ಶವೇ ಹೀಗೆ ತಾನೆ ? ಏಷ ಧರ್ಮಃ ಸನಾತನಃ !

ಆದರೆ ಆದುದಾದರೂ ಏನು ?

ॐ

ಶ್ರೀ ರಾಮನಿಗೆ ಯೌವರಾಜ್ಯಾಭಿಷೇಕದ ಸಂಕಲ್ಪ ದಶರಥನಲ್ಲಿ ಉಂಟಾದಾಗ ಅವನು ಸಾಕಷ್ಟು ವೃದ್ಧನಾಗಿದ್ದ ಎಂಬ ಸೂಚನೆಗಳು ಕಾವ್ಯದಲ್ಲಿ ಸ್ಪಷ್ಟವಾಗಿಯೇ ಇದೆ. ಬದುಕನ್ನು ಹಂಗಿಸುವ ಹಾಗೆ ಮಹಾಕವಿ ಈ ಸುತ್ತಿಗೆ ಪೆಟ್ಟನ್ನು ಕುಟ್ಟುತ್ತಲೇ ಇದ್ದಾರೆ. ಗಮನಿಸಿ :

...ಅಥ ರಾಜ್ಞೋ ಬಭೂವೈವಂ ವೃದ್ಧಸ್ಯ ಚಿರಜೀವಿನಃ ।
...ಪ್ರೀತಿರೇಷಾ ಕಥಂ ರಾಮೋ ರಾಜಾಸ್ಯಾನ್ಮಯಿ ಜೀವತಿ ।
...ಅನೇನ ವಯಸಾ ದೃಷ್ಟ್ವಾ ಯಥಾಸ್ವರ್ಗಮವಾಪ್ನುಯಾಮ್ ॥
...ದಿವ್ಯಂತರಿಕ್ಷೇ ಭೂಮೌಚ ಘೋರಮುತ್ಪಾತಜಂ ಭಯಮ್ ।
ಸಂಚಚಕ್ಷೇ ಚ ಮೇಧಾವೀ ಶರೀರೇ ಚಾತ್ಮನೋ ಜರಾಂ ।

(ಅಯೋಧ್ಯಾಕಾಂಡ—ಸರ್ಗ ೧)

ವೃದ್ಧಾಪ್ಯ ಸಮೀಪಿಸಿತು, ಆವರಿಸಿತು, ಪರಲೋಕದ ಗಂಟೆಗಳ ದನಿ ಕಿವಿಗೇ ಬಂದು ಬಡಿಯುತ್ತಿದೆ. ಅವನ ಶರೀರ ಮನಸ್ಸು ಮಾತ್ರವಲ್ಲ ಸಮಸ್ತ ಪ್ರಕೃತಿಯೇ ಗಹಗಹಿಸು

ತ್ತಿದೆ—"ರಾಜಾ ದಶರಥ ನೀನು, ವೃದ್ಧ ಸಾವಿಗೆ ಸಿದ್ಧನಾಗು. ಸಂಸಾರ ಸುಖ ಇನ್ನು ಸಾಕು. ವಾನಪ್ರಸ್ಥಕ್ಕೆ ಸಿದ್ಧನಾಗು ...ಇದೇ ನಿನ್ನ ವಂಶದ ಜೀವನಧರ್ಮ" ಎಂದಲ್ಲವೇ ಅದರ ಶಾಶ್ವತ ದನಿ ! ದಶರಥನ ಮನಸ್ಸಿಗೂ ಅದರ ಛಾಯೆ ಮುಸುಕಿದಂತೆ ತೋರು ತ್ತದೆ. ಮುಪ್ಪು, ಸಾವು. ಇದು ಶರೀರಧರ್ಮ. ಅದಕ್ಕೆ ಸಿದ್ಧವಾಗುವುದು ಜೀವನ ಧರ್ಮವೂ ಹೌದು. ಆ ಧರ್ಮವೇ ಅವನನ್ನು ರಾಮಚಂದ್ರನ ಯೌವರಾಜ್ಯಕ್ಕೆ ಪ್ರೇರಿಸಿದುದು—ಸಹಜವೇ. ಈ ಬಗೆಗೆ ಸಮಾಲೋಚಿಸಲು ಕರೆದ ಮಹಾಸಭೆಯಲ್ಲಿ ರಾಜಾ ದಶರಥನ ಮಾತುಗಳು ಪರಂಪರೆಯನ್ನು ಪಾಲಿಸುವ ಅರ್ಥವನ್ನೇ ಒಳಗೊಂಡಿವೆ. "ಸೋಹಮಿಕ್ಷ್ವಾಕುಭಿಸ್ಸರ್ವೈರ್ನರೇಂದ್ರೈ : ಪರಿಪಾಲಿತಮ್ । ಶ್ರೇಯಸಾ ಯೋಕ್ತು ಕಾಮೋಸ್ಮಿ ಸುಖಾರ್ಹಮಖಿಲಂ ಜಗತ್ ॥" ಮತ್ತೆ ವೃದ್ಧಾಪ್ಯದ ನೆನಪು ರಾಜಾ ದಶರಥನಿಗೆ... ಪಾಂಡರಸ್ಯಾತಪತ್ರಸ್ಯಛಾಯಾಯಾಂ ಜರಿತಂ ಮಯಾ ॥... ಜೀರ್ಣಸ್ಯಾಸ್ಯ ಶರೀರಸ್ಯ ವಿಶ್ರಾಂತಿಮಭಿರೋಚತೇ ॥" ಸ್ಪಷ್ಟವಾಗಿಯೇ ಸಾರಿಬಿಡುತ್ತಾನೆ. "ಜೀರ್ಣವಾದ ಈ ಶರೀರಕ್ಕೆ ವಿಶ್ರಾಂತಿಕೊಡಲು ಇಚ್ಛಿಸುತ್ತೇನೆ...ಧರ್ಮಪರಿಪಾಲನೆಯ ಭಾರದಿಂದ ತುಂಬ ಬಳಲಿರುತ್ತೇನೆ...ಭೂಮಂಡಲವನ್ನು ನನ್ನ ಪುತ್ರನಾದ ರಾಮನಿಗೆ ವಹಿಸಿಕೊಟ್ಟು ನನ್ನ ಆಯಾಸವನ್ನು ಪರಿಹರಿಸಿಕೊಳ್ಳಬೇಕೆಂದಿದ್ದೇನೆ." ಇದೆಲ್ಲವೂ ಸರಿಯಾದ ಆಲೋಚನೆಯೇ. ಜನದ ಮಾತಿನಲ್ಲೂ ಪುನಃ ವಾರ್ಧಕ್ಯದ ನೆನಪು ! "ಸಮೇತ್ಯ ಮಂತ್ರಯಿತ್ವಾತು ಸಮತಾಗತ ಬುದ್ಧಯಃ । ಊಚುಶ್ಚ ಮನಸಾ ಜ್ಞಾತ್ವಾ ವೃದ್ಧಂ ದಶರಥಂ ನೃಪಮ್ ॥" ಏನೆಂದು ? "ಅನೇಕವರ್ಷ ಸಾಹಸ್ರೋ ವೃದ್ಧಸ್ತ್ವಮಸಿ ಪಾರ್ಥಿವ...ಸ ರಾಮಂ ಯುವರಾಜಾನಂ ಅಭಿಷಿಂಚಸ್ವ ಧಾರ್ಮಿಕಂ ॥" ದಶರಥನ ವೃದ್ಧಾಪ್ಯದ ಮಾತು ರಾಮನ ಧಾರ್ಮಿಕತೆಯ ಮಾತೂ ಹೇಗೆ ತೆಕ್ಕೆಯಾಗಿ ಬಂದಿವೆ ಪರಿಶೀಲಿಸಬಹುದು. ಎಲ್ಲವೂ ಪರಂಪರೆಗೆ ಅನುಗುಣ ವಾಗಿಯೇ ಇದೆಯಲ್ಲಾ ಎಂಬ ಸಮಾಧಾನದ ನಿಟ್ಟುಸಿರು ! (ಅಯೋಧ್ಯಾಕಾಂಡ : ಸರ್ಗ ೨)

ಮುಂದೆ ಪಟ್ಟಾಭಿಷೇಕದ ಸಿದ್ಧತೆಗಳ ವೈಭವ, ಜನಜಂಗುಳಿ ಜಾತ್ರೆ, ವಸಿಷ್ಠ ವಾಮದೇವರೊಡನೆ ಸಮಾಲೋಚನೆ, ಸುಮಂತ್ರನ ಮೂಲಕ ಶ್ರೀರಾಮನಿಗೆ ಆಹ್ವಾನ, ವೈಭವದ ಮೆರವಣಿಗೆಯಲ್ಲಿ ರಾಮಾಗಮನ, ತಂದೆಯ ಎದುರು ತಲೆಬಾಗಿದ ವಿನಯ ಮೂರ್ತಿ, ಪ್ರಿಯವಾರ್ತಾಲಾಪ, ವೃದ್ಧ ದಶರಥನಿಂದ ಶ್ರೀರಾಮನಿಗೆ ಜಿತೇಂದ್ರಿಯತ್ವದ ಉಪದೇಶ(!) ಕಾಮಕ್ರೋಧಗಳಿಂದ ಹುಟ್ಟತಕ್ಕ ದುಷ್ಟಚೇಷ್ಟೆಗಳನ್ನು ಬಿಡುವವನಾಗು ಎಂಬ ಹಿತವಾದ(!'). ಎಂತಹ ನಾಟಕೀಯ ವ್ಯಂಗ್ಯವಿದೆ ನಿಜಕ್ಕೂ ಕವಿಯ ಈ ಮಾತು ಗಳಲ್ಲಿ !

ಶ್ರೀರಾಮನ ಗೆಳೆಯರು ಈ ಪ್ರಿಯವಾರ್ತೆಯನ್ನು ಕೇಳಿದ ಒಡನೆಯೇ ಮಾಡಿದು ದೇನು ? ಕೌಸಲ್ಯಾದೇವಿಯ ಬಳಿಗೆ ಓಡಿಬಂದರು. "...ತಚ್ಛ್ರುತ್ವಾ ಸುಹೃದಸ್ತಸ್ಯ

ರಾಮಸ್ಯ ಪ್ರಿಯಕಾರಿಣಃ। ತ್ವರಿತಾಃಶ್ಶೀಘ್ರಮಭ್ಯೇತ್ಯ ಕೌಸಲ್ಯಾಯ್ಯೈ ನ್ಯವೇದಯನ್ ॥" ಮಹಾರಾಣಿಯ ಸಂತಸಕ್ಕೆ ಪಾರವುಂಟೆ ? ಅವಳು ಸಂಭ್ರಮದಿಂದ ನೀಡಿದ ಧನಕನಕದ ಉಡುಗೊರೆಗಳಿಗೆ ಲೆಕ್ಕ ಉಂಟೆ ? (ಅ. ಕಾಂ. ಸರ್ಗ. 2)

ದಶರಥನು ಮತ್ತೊಮ್ಮೆ ಮಗನನ್ನು ಕರೆಸಿಕೊಳ್ಳುತ್ತಾನೆ (ಸರ್ಗ-೪). ಅಲ್ಲಿ ಮತ್ತೊಮ್ಮೆ ವೃದ್ಧಾಪ್ಯದ ಮಾತು ! "...ರಾಮ ವೃದ್ಧೋಽಸ್ಮಿ ದೀರ್ಘಾಯುರ್ಭುಕ್ತಾ ಭೋಗಾ ಮಯೇಪ್ಸಿತಾಃ ।..." "ದಾನ ಮಾಡಿಯಾಯಿತು, ಇಷ್ಟಪಟ್ಟ ಸುಖಗಳನ್ನೆಲ್ಲ ವನ್ನೂ ಅನುಭವಿಸಿದ್ದೇನೆ. ದೇವ ಋಷಿ ಪಿತೃವಿಪ್ರರ ಋಣಗಳಿಂದ ಮುಕ್ತನಾಗಿ ನನ್ನ ಆತ್ಮಋಣವನ್ನು ಕಳೆದುಕೊಂಡಿದ್ದೇನೆ..." ಮುಂದೆ ತನಗೆ ಉಂಟಾದ ದುಃಸ್ವಪ್ನಗಳ ಮಾತು, ಮರಣದ ಶಂಕೆ ಇತ್ಯಾದಿ. ಲೋಕ ವಿರಕ್ತಿಗೆ, ಪ್ರಶಾಂತ ಮನಸ್ಸಿಗೆ ಇದಕ್ಕಿಂತ ಹೆಚ್ಚಿನ ಕಾರಣ ಮತ್ತೇನು ಬೇಕು ? ಇಂತಹದೇ ಸನ್ನಿವೇಶದಲ್ಲಿ ದಿಲೀಪ, ರಘು, ಅಜರಿಗೆ ಎಲ್ಲಿಲ್ಲದ ಧನ್ಯತೆ, ಸಂತೃಪ್ತಿ. ಆದರೆ ದಶರಥನಿಗೆ ಅವ್ಯಕ್ತ ಕಳವಳ, ಶಂಕೆ, ಭೀತಿ !..."ಆದಾಗ್ಯೂ ಮನುಷ್ಯರ **ಮನಸ್ಸು** ಅಸ್ಥಿರ ಎಂದು ನನ್ನ ಅಭಿಪ್ರಾಯ..." ಎಲಾ ಇದೇನು ಅಪಶ್ರುತಿ ದಶರಥನ ಮಾತಿನಲ್ಲಿ ?..."ಇಂಥ ಕೆಲಸಗಳಿಗೆ ಅನೇಕ ವಿಘ್ನಗಳುಂಟಾಗುವುವಷ್ಟೆ! ಭರತನು ಈ ಪಟ್ಟಣದಿಂದ ಹೊರದೇಶಕ್ಕೆ ಕಳುಹಿಸಲ್ಪಟ್ಟಿರುವುದರಿಂದ **ಆ ಸಮಯದಲ್ಲೇ** ನಿನ್ನ ಅಭಿಷೇಕಕ್ಕೆ ತಕ್ಕ ಕಾಲವೆಂದು ನನ್ನ ಅಭಿಪ್ರಾಯ !" ಇದೆಂತಹ ಶಂಕೆ ? ವೃದ್ಧ ದಶರಥ ತನ್ನ ಗೋರಿಯನ್ನು ತಾನೇ ತೋಡಿಕೊಳ್ಳುತ್ತಿದ್ದಾನೆಯೆ ? ಮನುಷ್ಯ ಮನಸ್ಸಿನ ಜಟಿಲ ಕುಟಿಲ ಸೂಕ್ಷ್ಮಗಳಿಗೆ ಮಹಾಕವಿ ಹೇಗೆ ಕನ್ನಡಿ ಹಿಡಿಯುತಿದ್ದಾನೆ. ಮುಂದಿನ ದುರಂತ ದುಂದುಭಿಯ ದನಿ ಈಗಾಗಲೇ ಕೇಳಿಬರುತ್ತಿದೆಯಲ್ಲವೆ ? ಇಲ್ಲಿ ಅಸ್ಥಿರಗೊಂಡಿರುವುದು ನಿಜಕ್ಕೂ ಯಾರ ಮನಸ್ಸು ? ಉದ್ವಿಗ್ನಗೊಂಡಿರುವುದು ನಿಜಕ್ಕೂ ಯಾರ ಬುದ್ಧಿ ? ಭೇಷ್, ವಾಲ್ಮೀಕಿ ಕವಿಋಷಿ !

ಶ್ರೀರಾಮನಾದರೋ ಅತ್ಯಂತ ಸಹಜವಾಗಿ ಕೌಸಲ್ಯೆಯ ಬಳಿಗೆ ಬಂದ. ಅಲ್ಲಿ ಸುಮಿತ್ರೆ, ಲಕ್ಷ್ಮಣ, ಸೀತಾದೇವಿಯ ಸ್ನೇಹದ ಪರಿಷತ್ತು. ತನಗೂ ವೈದೇಹಿಗೂ ಉಚಿತ ಮಂಗಲಕಾರ್ಯಗಳನ್ನು ಮಾಡಿಸುವಂತೆ ತಾಯಿಯ ಬಳಿ ಮುದ್ದುಗರೆವ ರಾಮವಾತ್ಸಲ್ಯ. ಕೌಸಲ್ಯಾದೇವಿಯ ಹರ್ಷಬಾಷ್ಪ. ಅವಳ ಆಶೀರ್ವಾದವನ್ನು ಶಿರದಲ್ಲಿ ಭರಿಸಿ **ಸೀತಾಸಮೇತನಾಗಿ** ತನ್ನ ಅಂತಃಪುರಕ್ಕೆ ಹಿಂತಿರುಗಿದ ತರುಣ ಶ್ರೀರಾಮ !

ಆದರೆ ವೃದ್ಧ ದಶರಥ ಎಲ್ಲಿದ್ದಾನೆ ? ಪ್ರಿಯ ಪುತ್ರನ ಯೌವ ರಾಜ್ಯಾಭಿಷೇಕದ ಸುವಾರ್ತೆಯನ್ನು ಅವನು ಮೊದಲು ಸಾರಿಹೇಳಬೇಕಾದುದು ತನ್ನ ಪಟ್ಟಮಹಿಷಿ ಕೌಸಲ್ಯೆಗಲ್ಲವೆ ? ಅದಕ್ಕಿಂತ ಸಹಜವಾದ ಸಂಗತಿ ಬೇರೆ ಏನು ಇದ್ದೀತು ? ಆದರೆ ರಾಮಾಯಣ ಕಾವ್ಯ ಈ ಕಥೆಯನ್ನು ಬಿಚ್ಚುವ ರೀತಿಯನ್ನು ಪರಿಭಾವಿಸಿ. ಈವರೆಗೆ

ಮತ್ತೆ ಮತ್ತೆ ಕಿವಿಗಪ್ಪಳಿಸಿದ ವೃದ್ಧತ್ವದ ಮಾತು ಮೂದಲಿಕೆಯ ಗಹಗಹಿಕೆಯಲ್ಲವೆ ಚಿಂತಿಸಿ, ಮಹಾಕವಿ ಪ್ರತಿಭೆಯನ್ನು ಮನನ ಮಾಡಿ.

"ರಾಮಾಭಿಷೇಕದ ವಾರ್ತೆ ಈ ವೇಳೆಗೆ ಪ್ರಜೆಗಳಿಗೆಲ್ಲ ತಿಳಿದಿದೆ ಎಂದು ಭಾವಿಸಿದ ದಶರಥನು ತನ್ನ ಪ್ರೇಮಕ್ಕೆ ಅರ್ಹಳಾದ **ಕೈಕೇಯಿಗೆ** ಆ ಪ್ರಿಯ ವಾರ್ತೆಯನ್ನು ಹೇಳಲು **ಅವಳ** ಅಂತಃಪುರವನ್ನು ಪ್ರವೇಶಿಸಿದನು. ಅಲ್ಲಿ ಪ್ರಿಯೆಯನ್ನು ಕಾಣದ ಮೇಲೂ ಅವಳನ್ನೇ ವಿಚಾರಿಸುತ್ತಾ ವ್ಯಸನವನ್ನು ಹೊಂದಿದ, ಸೇವಕಳನ್ನು ಪ್ರಶ್ನಿಸಿದ–ಮಡದಿ ಕೋಪಗೃಹವನ್ನು ಪ್ರವೇಶಿಸಿರುವುದನ್ನು ಕೇಳಿ—ರಾಜಾ ಪರಮ ದುರ್ಮನಾಃ ವಿಷಸಾದ । ಪುನರ್ಭಾರ್ಯೋ ಲುಳಿತ ವ್ಯಾಕುಲೇಂದ್ರಿಯಃ ॥ ಯುವತಿ ಪತ್ನಿಯ ಕೋಪದ ಸುದ್ದಿಯನ್ನು ಕೇಳಿಯೇ ಅವನ ಮನಶ್ಶಾಂತಿ ಕದಡಿದುದು ಮಾತ್ರವಲ್ಲ ಸಕಲ ಇಂದ್ರಿಯಗಳೂ ತಲ್ಲಣಗೊಂಡವು ! ಇವನು ದಶರಥ ಮಹಾರಾಜ. ಮುಹೂರ್ತ ಮೊದಲು ಮಗನಿಗೆ ಜಿತೇಂದ್ರಿಯತ್ವವನ್ನು ಉಪದೇಶಿಸಿದ ವೃದ್ಧ ದೊರೆ ! ಆತನು ಕೈಕೇಯಿಯ ಅಂತಃಪುರವನ್ನು ಪ್ರವೇಶಿಸಿದ ಉದ್ದೇಶವಾದರೂ ಏನು ? ಮಹಾಕವಿಯಲ್ಲಿ ಮುಚ್ಚುಮರೆಯೇ ಇಲ್ಲವಲ್ಲಾ. ಆ ಬಗ್ಗೆ ಕೇಳಿ :

"ನ ದದರ್ಶ ಪ್ರಿಯಾಂ ರಾಜಾ ಕೈಕೇಯೀಂ **ಶಯನೋತ್ತಮೇ**
ಸ ಕಾಮಬಲ ಸಂಯುಕ್ತೋ ರತ್ಯರ್ಥಂ ಮನುಜಾಧಿಪಃ ॥"

ಅವಳೋ ಪತಿತ ದೇವತೆ. ಇವನು ?

"ಸವೃದ್ಧಃ ತರುಣೀಂ ಭಾರ್ಯಾಂ ಪ್ರಾಣೇಭ್ಯೋಪಿ ಗರೀಯಸೀಂ ।"
ಮುಂದಿನ ಅವನ ಪ್ರಿಯಲಾಲನೆ, ಶೃಂಗಾರವೋ ಶೃಂಗಾರದ ಆಭಾಸವೋ ವಾಚಕರು ಚಿಂತಿಸಲಿ.

ಕೋಪಗೃಹದಲ್ಲಿ ಮಲಗಿದ್ದ ಪ್ರೇಯಸಿಯನ್ನು ದಶರಥನು ಕಂಡ. ಹೆಣ್ಣಾನೆಯನ್ನು ಅದರ ಸಲಗವು ಪ್ರೇಮದಿಂದ ಸ್ಪರ್ಶಿಸುವಂತೆ ಮೈದಡವಿದ—ಮಹಾಗಜ ಇವಾರಣ್ಯೇ ಸ್ನೇಹಾತ್ ಪರಿಮಮರ್ಶ ತಾಮ್। ಪರಿಮೃಶ್ಯಚ ಪಾಣಿಭ್ಯಾಂ ಅಭಿಸಂತ್ರಸ್ತ ಚೇತನಃ । ಎಂತಹ ದಶರಥ ಮಹಾರಾಜನಿವನು ?

"ಕಾಮೀ ಕಮಲಪತ್ರಾಕ್ಷೀಂ ಉವಾಚ ವನಿತಾಮಿದಂ"
(ಸರ್ಗ–೧೦ ಅ.ಕಾಂ.)

ಮುಂದಿನ ಅವನ ನಿರರ್ಗಳ ಪ್ರೇಮಲಾಲನೆ ಇಕ್ಷ್ವಾಕು ವಂಶದ ಅರಸರಿಗೆ ಮರ್ಯಾದೆ ತರುವಂತಹುದೇ ಯೋಚಿಸೋಣ. "ದೇವಿ, ಯಾರು ನಿನ್ನನ್ನು ನಿಂದಿಸಿದರು ? ಯಾರು ನಿನ್ನನ್ನು ಅವಮಾನಗೊಳಿಸಿದರು ?...ನಿನಗೆ ಆಗಬೇಕಾದ ಪ್ರಿಯಕಾರ್ಯವೇನಾದರೂ ಉಂಟೆ ? ಅಥವಾ ಯಾರಾದರೂ ನಿನ್ನನ್ನು ಅಪ್ರಿಯ ಕಾರ್ಯದಿಂದ ನೋಯಿಸಿದರೆ ?

ಯಾವಾತನಿಗೆ ಈಗ ಪ್ರಿಯವನ್ನು ಮಾಡಲಿ ? ಅಥವಾ ಯಾರಿಗೆ ಬಹಳವಾದ ಅಪ್ರಿಯವನ್ನು ಮಾಡಲಿ ?...ಅಥವಾ **ವಧಾರ್ಹನಲ್ಲದವನನ್ನು ವಧಿಸಬೇಕೆ ? ವಧಿಸಲ್ಪಡಬೇಕಾದವನನ್ನು ಬಿಡುಗಡೆ ಮಾಡಬೇಕೆ ?** ಯಾವನಾದರೂ ದರಿದ್ರನನ್ನು ಶ್ರೀಮಂತನನ್ನಾಗಿಸಬೇಕೆ ? **ಅಥವಾ ಶ್ರೀಮಂತನೊಬ್ಬನನ್ನು** ನಿರ್ಧನನ್ನಾಗಿ ಮಾಡಬೇಕೇ...ಯಾರಿಂದ ನಿನಗೆ ಭಯವು ಒದಗಿದೆ ಎಂಬುದನ್ನು ನಿಶ್ಚಯವಾಗಿ ಹೇಳು. ಸೂರ್ಯನು ಮಂಜನ್ನು ಹೋಗಲಾಡಿಸುವಂತೆ ಅದನ್ನೆಲ್ಲ ಹೋಗಲಾಡಿಸುವೆನು." (ಅಯೋಧ್ಯಾಕಾಂಡ, ಸರ್ಗ-೧೦).

೬

ರಘುವಂಶದ ಅರಸನ ಈ ಮಹಾಪತನವನ್ನು ಕಂಡು ಮನಸ್ಸು ತೀರ ವ್ಯಥಿತವಾಗಿ ಬಿಡುತ್ತದೆ. ಅದೂ ಬದುಕಿನ ಯಾವ ಹಂತದಲ್ಲಿ ಈ ಉನ್ಮತ್ತ ಪ್ರಣಯಾಲಾಪ ? ಧರ್ಮದಕಟ್ಟಡವನ್ನೇ ಶಿಥಿಲಗೊಳಿಸುವ ಅಪಲಾಪ ? ವಾನ ಪ್ರಸ್ಥಕ್ಕೆ ಸಿದ್ಧನಾಗಬೇಕಾದ ರಾಜನೇ ಈತ ? ಬಾಲಕಾಂಡದ 6ನೆಯ ಸರ್ಗದಲ್ಲಿ ವಿಸ್ತಾರವಾಗಿ ವರ್ಣಿತವಾದ ರಾಜಧರ್ಮ ಎಂತಹುದು ? "...ದಶರಥನು ಮಹರ್ಷಿಗಳಿಗೆ ಸಮನಾಗಿ ಮೂರು ಲೋಕಗಳಲ್ಲಿ ಖ್ಯಾತನಾದ ರಾಜರ್ಷಿ... ಜಿತೇಂದ್ರಿಯ, ಧರ್ಮಾರ್ಥಕಾಮಗಳನ್ನು ಅನುಸರಿಸುವವ," ಅಯೋಧ್ಯಾಕಾಂಡದಲ್ಲಿ ಸರ್ಗ 2ರಲ್ಲಿ ತರುಣ ರಾಮನನ್ನು ಪ್ರಶಂಸಿಸುತ್ತಾ ಅಯೋಧ್ಯೆಯ ಪುರಜನರು ಆಡಿದ ಮಾತುಗಳಲ್ಲಿ ಮುಖ್ಯವಾದುದೇನು ? "...ಈತನು ಕೋಪಗೊಂಡುದಾದರೂ ಅನುಗ್ರಹವವನ್ನು ತೋರಿದುದೇ ಆದರೂ ಎಂದೂ ನಿರರ್ಥಕವಾದುದೇ ಇಲ್ಲ. ವಧಾರ್ಹರಾದವರನ್ನು ನಿಯಮಗಳಿಗೆ ಅನುಸಾರವಾಗಿ ಖಂಡಿತವಾಗಿಯೂ ಕೊಲ್ಲುವವನು. ವಧಾರ್ಹರಲ್ಲದವರಲ್ಲಿ ಕೋಪವನ್ನು ತೋರಿಸುವುದೂ ಇಲ್ಲ." ಹೀಗೆ ದುಷ್ಟ ಶಿಕ್ಷಣ ಶಿಷ್ಟ ರಕ್ಷಣವೇ ರಘುವಂಶದ ಅರಸರ ರಾಜಧರ್ಮದ ಪ್ರಮುಖ ಲಕ್ಷಣ ವಾಗಿರುತ್ತ ಈಗ ದಶರಥನು—"ಅವಧ್ಯೋ ವಧ್ಯತಾಂ ಕೋವಾ । ಕೋವಾ ವಧ್ಯೋ ವಿಮುಚ್ಯತಾಮ್ ॥ ದರಿದ್ರಃ ಕೋವಾಭವತ್ವಾಢ್ಯೋ ದ್ರವ್ಯವಾನ್ವಾಪ್ಯ ಕಿಂಚನಃ ॥" ಎಂದು ಘೋಷಿಸಬಹುದೆ ? ಹಾಗೆ ವೀರ ಘೋಷಣೆ ಮಾಡಿದವನು ವೃದ್ಧ ಕಾಮುಕನೇ ಅಲ್ಲವೇ ? ಇದೇನೂ ಈ ಲೇಖಕನ ಸ್ವಕಪೋಲ ಕಲ್ಪನೆಯಲ್ಲ. ಅಯೋಧ್ಯಾಕಾಂಡದ ೧೧ನೆಯ ಸರ್ಗದ ಆರಂಭವೇ—

"ತಂ ಮನ್ಮಥಶರೈರ್ವಿದ್ಧಂ ಕಾಮವೇಗ ವಶಾನುಗಮ್ ।
ಉವಾಚ ಪೃಥಿವೀಪಾಲಂ ಕೈಕೇಯೀ ದಾರುಣಂ ವಚಃ ॥"

ಆ ದಾರುಣತೆ ಎಂತಹುದು ಎಂಬುದು ಸುಪರಿಚಿತ. ಕೈಕೇಯಿ ಸ್ವಭಾವತಃ ಹಟಮಾರಿ. ಸುಪ್ತವಾಗಿದ್ದ ಆ ಅವಿವೇಕ-ಮೊಂಡುತನ ಮಂಥರೆಯಿಂದ ಪ್ರಚೋದಿತವಾಯಿತಷ್ಟೆ.

ಅವಳ ಪೂರ್ವವೃತ್ತಾಂತವನ್ನು ಸ್ವತಃ ತಿಳಿದ ಸುಮಂತ್ರನೇ ಈ ಬಗ್ಗೆ ಸಾಕ್ಷಿ ನುಡಿಯಬಲ್ಲ. ಅಯೋಧ್ಯಾಕಾಂಡದ ೩೫ನೆಯ ಸರ್ಗವನ್ನು ಗಮನಿಸಿದರೆ ಸಾಕು. ದಶರಥನ ದೈನ್ಯ, ವೈಧವ್ಯದ ಭಯ, ಜನಾಪವಾದ, ಯಾವುದಕ್ಕೂ ಜಗ್ಗದೆ ಹಿಡಿದ ಹಟವನ್ನೇ ಉಡದಂತೆ ಹಿಡಿದ ಕೈಕೇಯಿಯನ್ನು ಕುರಿತು ಸುಮಂತ್ರನು ಹೇಳುತ್ತಾನಲ್ಲವೆ ? "...ಮಾವಿನ ಗಿಡವನ್ನು ಕೊಡಲಿಯಿಂದ ಕಡಿದು ಹಾಕಿ ಬೇವಿನ ಗಿಡವನ್ನು ಬೆಳೆಸಿ ಅದಕ್ಕೆ ಹಾಲೆರೆಯುತ್ತಿದ್ದರೆ ಅದು ಸಿಹಿಯಾಗಲಾರದಷ್ಟೆ ? ನಿನ್ನ ತಾಯಿಯಂತೆ ನಿನಗೂ ಇದು ಹುಟ್ಟು ಸ್ವಭಾವವೆಂದೇ ತಿಳಿಯುತ್ತೇನೆ. ಬೇವಿನಮರದಿಂದ ಜೇನು ಸುರಿಯುವುದಿಲ್ಲ ವೆಂದು ಲೋಕವಾರ್ತೆ. ದುಷ್ಕಾರ್ಯ ಪ್ರವೀಣಳಾದ ನಿನ್ನ ಸ್ವಭಾವವನ್ನು ಉದಾಹರಿಸುವ ಇದನ್ನು ಹಿಂದೆ ಕೇಳಿದ್ದೇನೆ" ಎಂದು ಸುಮಂತ್ರನು ಕೈಕೇಯಿ ತಂದೆಗೆ ಒಬ್ಬ ಮುನಿಯಿಂದ ದತ್ತವಾದ ವರದಂತೆ, ಕ್ರಿಮಿಕೀಟಗಳ ಭಾಷೆಯನ್ನು ತಿಳಿಯ ಬಲ್ಲವನಾಗಿದ್ದುದು, ಒಮ್ಮೆ ಅಂತಃಪುರದಲ್ಲಿ ಸತಿಯೊಡನೆ ಮಲಗಿದ್ದಾಗ ಇರುವೆಗಳ ಪರಿಹಾಸದ ಮಾತು ಕೇಳಿ ನಕ್ಕುದೂ, ಅದರ ವಿವರವನ್ನು ಹೇಳೆಂದು ಕೈಕೇಯ ತಾಯಿ ಪುನಃ ಪುನಃ ಒತ್ತಾಯಿಸಿದುದೂ, ಅದಕ್ಕೆ ಕೇಕಯ ರಾಜನು ಆ ಬಗ್ಗೆ ತನಗಿರುವ ನಿರ್ಬಂಧವನ್ನು ತಿಳಿಸಿ ಹಾಗೆ ಹೇಳಿದರೆ ಕೂಡಲೆ ತನಗೆ ಮರಣವಾಗುವ ಸಂಗತಿಯನ್ನು ತಿಳಿಸಿದುದೂ ಆಗ ಆಕೆ : "...ಮ್ರಿಯತಾಂ ಧ್ವಂಸತಾಂವೇಯಂ ಮಾ ಕೃಥಾಸ್ತ್ವಂ ಮಹೀಪತೇ ॥ ನೀನು ಸತ್ತರೂ ಸರಿಯೇ ಬದುಕಿದ್ದರೂ ಸರಿಯೇ ನನಗೆ ಹೇಳು ಎಂದು ಹಟ ಹಿಡಿದುದು—ಈ ಎಲ್ಲ ಕಥೆಯನ್ನು ವಿವರಿಸಿ "ಎಲೈ, ಪಾಪದರ್ಶಿನಿ ನೀನೂ ಸಹ ನಿನ್ನ ತಾಯಿಯಂತೆ ಹಟಮಾರಿ...ಗಂಡುಮಕ್ಕಳು ತಂದೆಯನ್ನೂ ಹೆಣ್ಣುಮಕ್ಕಳು ತಾಯಿಯನ್ನೂ ಹೋಲುತ್ತಾರೆ ಎಂಬ ಲೌಕಿಕದ ನಾಣ್ನುಡಿ ದಿಟವೆಂದೇ ತೋರುತ್ತದೆ।" ಎಂದು ಖಂಡಿತವಾಗಿ ನುಡಿದು ಬಿಟ್ಟನಷ್ಟೆ ! ದಶರಥ ಮೋಹಗ್ರಸ್ತನಾಗಿ ಅಧರ್ಮಾಚರಣೆಗೂ ಮನಮಾಡಿದ್ದು ಇಂತಹ ಹೆಣ್ಣಿನ ಕಾಮುಕ್ಕಾಗಿ ; ಅದರಲ್ಲೂ ತನ್ನ ವೃದ್ಧಾಪ್ಯದಲ್ಲಿ–ವಾನಪ್ರಸ್ಥಕ್ಕೆ ಸಿದ್ಧನಾಗಬೇಕಾದ ಕ್ಷಣದಲ್ಲಿ. ರಘುವಂಶದ ಧರ್ಮಸೌಧ ಗಡಗಡನೆ ನಡುಗಲಿಲ್ಲವೆ ? ಚಿಂತಿಸಬೇಕು. ಬಾಲಕಾಂಡದ ಅಂತ್ಯದ ಅನುರೂಪ ದಾಂಪತ್ಯದೊಡನೆ ಈ ಸಂದರ್ಭವನ್ನು ಹೋಲಿಸಿನೋಡಬೇಕು. ಅಲ್ಲಿ ಪತಿಯ ಮನಸ್ಸನ್ನು ಅವನು ಆಡದಿದ್ದರೂ ಅರಿಯುವ ಸ್ನಿಗ್ಧ ಪ್ರೇಮದ ಸೀತೆ. ಇಲ್ಲಿ ಬಗೆ ಬಗೆಯಾಗಿ ಆಡಿ ತೋರಿದರೂ ಹೃದಯವನ್ನೇ ಇದುರು ಬಗೆದಿಟ್ಟರೂ ಮೋಹದ ಬಲೆಯಲ್ಲಿ ವೃದ್ಧನನ್ನು ಕೆಡವಿ ಪಾಪ ಸಂಕಲ್ಪಕ್ಕೆ ಪ್ರೇರಿಸಿದ ಕೇಕಯ ಪುತ್ರಿ. ಅಲ್ಲಿ ಸನಾತನ ಧರ್ಮವನ್ನು ಕ್ಷಣ ಕ್ಷಣಕ್ಕೂ ನೆನಪಿಸಿಕೊಳ್ಳುವ ತರುಣ ರಾಮ—ಇಲ್ಲಿ ಒಂದೇ ಕ್ಷಣದಲ್ಲಿ ಅದನ್ನು ಧೂಳೀಪಟ ಮಾಡಲು ಸಿದ್ಧನಾದ ವೃದ್ಧ ದಶರಥ. ಎಂತಹ ವೈಪರೀತ್ಯ ! ಪರಿಣಾಮವೇನು ? ರಘುವಂಶದ ಜೀವನದ ವೇಳಾಪಟ್ಟಿ ಪಲ್ಲಟವಾದುದು. ಎಳೆಯ ಪತ್ನಿಯೊಡನೆ ಸಂಸಾರ ಸುಖವನ್ನು ಅನುಭವಿಸುತ್ತಾ, ಸತ್ಸಂತಾನವನ್ನು

ಪಡೆದು, ಸಾಮ್ರಾಜ್ಯಪದವನ್ನು ಆಳಬೇಕಾದ ತರುಣ ರಾಮನಿಗೆ ವನವಾಸ, ಮುನಿ ವೃತ್ತಿಯನ್ನು ಸ್ವೀಕರಿಸಿ ತಪೋವನಗಮನಕ್ಕೆ ಸಿದ್ಧನಾಗಬೇಕಾದ ವೃದ್ಧ ದಶರಥನಿಗೆ ಅರಮನೆಯಲ್ಲಿ ಮರಣ, ಅದೂ ಎಂತಹ ಶೋಕೋನ್ಮತ್ತ ಸನ್ನಿವೇಶದಲ್ಲಿ! "ಕೈಕೇಯೀ, ದುಷ್ಟಚಾರಿಣೀ, ನನ್ನನ್ನು ಮುಟ್ಟಬೇಡ, ನಹಿತ್ವಾಂ ದ್ರಷ್ಟುಮಿಚ್ಛಾಮಿ, ನ ಭಾರ್ಯಾ ನಚ ಬಾಂಧವೀ". ಇತ್ಯಾದಿ ಕಠಿಣೋಕ್ತಿಯಿಂದ ನಿಂದಿಸುತ್ತಾ ಪ್ರಾಣ ಬಿಡುವುದು, ಅರಮನೆಯಲ್ಲಿ ರಾಣಿಯರ ಕಂಬನಿಯ ಹೊಳೆ ಹರಿಯುವುದು, ಸಾಯುವ ಕ್ಷಣದಲ್ಲೂ ತನ್ನ ಹಿಂದಿನ ಪಾಪಕರ್ಮವನ್ನು ಅದರಿಂದ ಒದಗಿದ ಕ್ರೂರ ಶಾಪವನ್ನು ನೆನೆಯುತ್ತಾ ಅಶಾಂತನಾಗುವುದು. ಒಟ್ಟಿನಲ್ಲಿ ದುರ್ಮರಣವೋ? "ಅನಾಯಾಸೇನ ಮರಣಂ" ಎಂಬ ಆದರ್ಶ ಸಾಧ್ಯವಾಗಲೇ ಇಲ್ಲ. "ಯೋಗೇನ ಅಂತೇ ತನುತ್ಯಜಾಂ" ಎಂಬ ರಾಘವರ ನೀತಿಗೂ ದಶರಥ ಎರವಾದ. ಅರಮನೆ ಯಲ್ಲಿ ಒಬ್ಬರಲ್ಲ ಮೂವರು ವಿಧವೆಯರು. ದುಃಖತಪ್ತ ಬಂಧು ಜನ, ರಾಜನಿಲ್ಲದ ರಾಜ್ಯದ ಹಾಹಾಕಾರ. ಈ ವಿಪತ್ ಪರಂಪರೆ ಇಲ್ಲಿಗೆ ಮುಗಿಯಿತೆ? ರಾಮನ ವನವಾಸದಲ್ಲಿ ಮುಗಿಲು ಮುಟ್ಟಿತಲ್ಲವೆ? ಈ ರಾಘವರು ಎಂಥವರು?– "ಆಫಲೋದಯ ಕರ್ಮಣಾಂ ಆಸಮುದ್ರಕ್ಷಿತೀಶಾನಾಂ ಅನಾಕರಥವರ್ತ್ಮನಾಂ" (ರಘುವಂಶ–ಸರ್ಗ ೧). ಹಿಡಿದ ಕೆಲಸ ಕೈಗೂಡುವವರೆಗೂ ಬಿಡುವವರಲ್ಲ–ಲೋಕ ರಕ್ಷಣೆ ಹಾಗಿರಲಿ, ಸಗ್ಗದ ದೇವತೆಗಳಿಗೂ ಅವರ ನೆರವು ಬೇಕು. ಅವರ ರಥಚಕ್ರದ ಸದ್ದು ಸಗ್ಗದ ಬೀದಿ ಬೀದಿಗಳಲ್ಲೂ ದನಿಗೊಡುವಂತಹುದು! ಆದರೆ ಈಗ ಏನಾಗಿ ಹೋಯಿತು? ಮಗನಿಗೆ ಯೌವರಾಜ್ಯದ ಅಭಿಷೇಕವನ್ನು ದಶರಥ ಪ್ರಾರಂಭಿಸಿದ್ದುದಷ್ಟೆ–ಅದು ಫಲಕಾರಿಯಾಗಲೇ ಇಲ್ಲ. ಅರಮನೆಯ ಸಿಂಹಾಸನವಿರಲಿ ಅರಮನೆಯೂ ಇಲ್ಲದ ವನವಾಸಿ ರಾಮಚಂದ್ರ. ಮೂರೂ ಲೋಕಗಳಲ್ಲಿ ವಿಜಯಿ ಗಳಾಗುತ್ತಿದ್ದ ರಘುವಂಶದರಸರ ಹಿರಿಯ ಸೊಸೆಯನ್ನು ಕಾಡಿನಲ್ಲಿ ಕಾಮುಕನೊಬ್ಬನು ಅಪಹರಿಸುತ್ತಿರುವಾಗ ಆ ಹೆಣ್ಣು ದೈನ್ಯದಿಂದ ಚೀರಿಡುತ್ತಿದ್ದಾಳೆ–ಕಾಪಾಡು ರಾಮಾ, ಕಾಪಿಡು ಸೌಮಿತ್ರೀ ಎಂದು. ರಕ್ಷಣೆಗೆ ಧಾವಿಸಿದ ಪಕ್ಕಿಯೂ ಪಕ್ಕವಿಲ್ಲದೆ ಮುರಿದು ಬೀಳುತ್ತದೆ. ಸಮಸ್ತ ಪ್ರಕೃತಿಯೇ ಕಂಬನಿ ಸುರಿಸುತ್ತದೆ. ಎದೆ ನಡುಗಿಸುವ ಹೃದಯ ಕರಗಿಸುವ ಘೋರ ದುರಂತವಲ್ಲವೇ ಇದು? ರಾಘವರ ಜೀವನಧರ್ಮ ಎಲ್ಲಿಗೆ ಬಂದಿತು? "ಕಾಮೀ ಕಮಲಾಯತಾಕ್ಷೀಂ ಉವಾಚ" ಎಂಬ ಗಹಿಗಹಿಕೆಗೆ ಪಕ್ಕಾಗಿ ಹೋಯಿತೇ ದಶರಥನ ಸಂಸಾರ. ಸುದೀರ್ಘ ಸುಂದರ ಪರಂಪರೆಯಿಂದ ಜಾರಿದ ಫಲವಲ್ಲವೇ ಇದು?

೭

ಆದರೆ ಕಾವ್ಯದ ನಾಯಕ ಧೀರೋದಾತ್ತ ಶ್ರೀ ರಾಮಚಂದ್ರ. ಈ ದುರಂತ ವನ್ನೇ ಸವಾಲಾಗಿ ಸ್ವೀಕರಿಸಿದವನು. "ರಾಮೋ ಧರ್ಮಪರಃ ನಾರ್ಥಪರಃ" ಎಂಬ

ಗಟ್ಟಿನೆಲದಲ್ಲಿ ನಿಂತವನು. ಮುರಿದ ಮನೆಯನ್ನು ಮತ್ತೆ ಕಟ್ಟಲು ಹೊರಟವನು. ಕಟ್ಟುವ ಕೆಲಸ ಮುರಿಯುವಷ್ಟು ಸುಲಭವಲ್ಲ. ಅದಕ್ಕೆ ಶ್ರಮ-ಸಂಯಮ ಎರಡೂ ಬೇಕು. ತಪನವೂ ಬೇಕು. ಶ್ರೀ ರಾಮಲಕ್ಷ್ಮಣರು ವನವಾಸಕ್ಕೆ ಹೊರಟಾಗ ವಿನಾಶದ ಬಿಲ್ಲು ಬಾಣಗಳನ್ನು ಮಾತ್ರ ಹಿಡಿದು ಹೊರಡಲಿಲ್ಲ. ಕಾಡಿನಲ್ಲಿ ಅಲ್ಲಲ್ಲಿ ಕುಟೀರಗಳನ್ನು ನಿರ್ಮಿಸಲು ಬೇಕಾದ ಗುದ್ದಲಿ ಪಿಕಾಸಿಗಳನ್ನೂ ಹಿಡಿದು ಹೊರಟರು. ಅವರು ಧರಿಸಿದುದೋ ಸಂನ್ಯಾಸವೇಷ-ನಾರುಮಡಿ. ಹೀಗೆ ಸ್ವರಕ್ಷಣ, ಸ್ವಪೋಷಣದ ಸಶ್ರಮದ ಸನ್ಯಾಸಯಾತ್ರೆ ಅವರದ್ದು. ಋಷಿ ಮುನಿಗಳ ಸಾಹಚರ್ಯದಿಂದ ಆತ್ಮಶ್ರೀ ವರ್ಧನ, ಕಬಂಧಾದಿ ರಕ್ಕಸರ ಸಂಹಾರದಿಂದ ವೀರಶ್ರೀ ವರ್ಧನ ಎರಡೂ ನಡೆಯಿತು. ದಶರಥನ ಸೊಸೆಯ ಅಪಹಾರಕನಿಗೆ ನ್ಯಾಯವಾದ ದಂಡನೆಯೂ ಒದಗಿತು. ತಮ್ಮನ ಹೆಂಡತಿಯ ಮೇಲೆಯೇ ಕಣ್ಣುಹಾಕಿದ, ಅವನನ್ನೇ ರಾಜ್ಯಭ್ರಷ್ಟನನ್ನಾಗಿ ಮಾಡಿದ ವಾಲಿಯ ವಧೆಯೂ ಆಯಿತು. ಶಬರಿ-ಸುಗ್ರೀವ-ವಿಭೀಷಣಾದಿಗಳಿಗೆ ಅಭಯದ ಅನುಗ್ರಹವೂ ದೊರೆಯಿತು. ಆದರೆ ನ್ಯಾಯೋಚಿತವಾಗಿ ನಡೆಯಬೇಕಿದ್ದ ಶ್ರೀ ರಾಮ ಪಟ್ಟಾಭಿಷೇಕವನ್ನು ಕವಿ ಮುಂದೂಡುತ್ತಲೇ ಬಂದನೆಂಬುದು ಗಮನಾರ್ಹ. ಸರಯೂ ನದಿಯ ತೀರದಲ್ಲಿ ನಡೆದುದು ಪಾದುಕಾ ಪಟ್ಟಾಭಿಷೇಕ ಮಾತ್ರ. ಅದು ಇನ್ನೂ ರಾಮಾಯಣದ ಆರಂಭವಷ್ಟೆ! ಕಟ್ಟುವ ಕೆಲಸದ ಸಿದ್ಧತೆ ಮಾತ್ರ. ಸುಗ್ರೀವನ ಪಟ್ಟಾಭಿಷೇಕದ ಸಂಭ್ರಮದಲ್ಲೂ ಜಟಾಧಾರಿ ರಾಮ ಕಿಷ್ಕಿಂಧೆಯ ಹೊರಹೊರಗೇ ಇದ್ದ-ತಾನು ನಗರ ಪ್ರವೇಶ ಮಾಡಲೇ ಇಲ್ಲ. ಅದು ಇನ್ನೂ ವನವಾಸದ ಅವಧಿ. ವೈರಿ ರಾವಣನ ವಧೆಯಾಯಿತು ಲಂಕೆಯ ಬಯಲಲ್ಲಿ. ಬಯಸಿದ್ದರೆ ಇಡಿಯ ರಾಜ್ಯವನ್ನೇ ಶ್ರೀ ರಾಮನಿಗೆ ವಹಿಸಿ ಪಟ್ಟಾಭಿಷೇಕ ಮಾಡಿಬಿಡುತ್ತಿದ್ದ ಶರಣಾಗತ ವಿಭೀಷಣ. ತಾನು ಕಿಂಕರನಾಗಿ ನಿಂತು ಬಿಡುತ್ತಿದ್ದ ತನ್ನ ಸ್ವಾಮಿಯ ಎದುರು! ಆದರೆ ಮಹಾಕವಿಯ ಕಣ್ಣು ಕಾಣ ಬಯಸಿದುದು-ಮುರಿದ ಮನೆ ಕಟ್ಟಿದುದನ್ನು. ಅದಕ್ಕೆ ಸರಯೂ ನದಿಯ ತೀರ, ಕಿಷ್ಕಿಂಧೆ, ಲಂಕೆಗಳಲ್ಲ ಸರಿಯಾದ ಕ್ಷೇತ್ರ. ತನ್ನ ಮನೆ ಕೆಡವಿ ಬಿದ್ದಾಗ ಬೇರೊಂದು ಮನೆಯ ರಿಪೇರಿಯಾದರೆ ಸಾಕೆ? ಸಾಧುವೆ? ಆದರೆ ಅದು ಅಲ್ಲೇ ಆಗಬೇಕಲ್ಲವೆ? ಅದೇ ಅಯೋಧ್ಯೆಯಲ್ಲಿ. ಅದೇ ಸುವರ್ಣ ಸಿಂಹಾಸನದಲ್ಲಿ. ರಘುವಂಶದ ಪರಂಪರಾಗತವಾದ ಬೆಳ್ಗೊಡೆಯ ಅಡಿಯಲ್ಲಿ ಪಟ್ಟಾಭಿಷಕ್ತನಾಗಬೇಕು ಶ್ರೀ ರಾಮಚಂದ್ರ-ಭರತನಲ್ಲ, ಲಕ್ಷ್ಮಣನಲ್ಲ. ಆಗ ಮಾತ್ರ ವಂಶದ ಪರಂಪರೆ ಅಖಂಡವಾದೀತು. ಆಗ ಮಾತ್ರ ವಾಲ್ಮೀಕಿ ಕೃತಕೃತ್ಯ. ಆಗಲೇ ಅವನು "...ಆಫಲೋದಯ ಕರ್ಮಣಾಂ" ಆಗುವುದು! ರಾವಣವಧೆ ಈ ಪುನರುಜ್ಜೀವನದ ಮಹಾನ್ ಕಥೆಯಲ್ಲಿ ಒಂದು ಉಪಕತೆಯಷ್ಟೆ. ಬೇಕಾದರೆ ಅದನ್ನು ಪತಾಕಾ ಎನ್ನಿ, ಪ್ರಕರಿಯಲ್ಲದಿದ ರೆ! ರಾವಣ ವಧೆಯಲ್ಲಿ ಕತೆಯೇನು ಮುಗಿಯಲಿಲ್ಲವಲ್ಲ. ಅದರ

ಮಂಗಳ ಅಯೋಧ್ಯೆಯಲ್ಲಿ–ಲಂಕೆಯಲ್ಲಲ್ಲ–ಶ್ರೀ ರಾಮ ಪಟ್ಟಾಭಿಷೇಕದಲ್ಲಿ. ಅದೂ ಎಂತಹ ಪಟ್ಟಾಭಿಷೇಕ ! ಮುರಿದ ಮನೆಯ ರಿಪೇರಿ ಮಾತ್ರವಲ್ಲ–ಮತ್ತಷ್ಟು ವರ್ಣಮಯವಾದ ಉಜ್ಜ್ವಲವಾದ ಪುನರ್ನಿರ್ಮಾಣದ ಭವ್ಯಕಥೆ. ಕೇಕಯ ರಾಜಪುತ್ರಿ ವಂಶದ ಹಿರಿಯ ಮಗನನ್ನು ಕಾಡು ಪಾಲು ಮಾಡಿದ್ದಳು. ಆದರೆ ಅವನು ಹಿಂತಿರುಗಿಯೇ ಬಂದ–ಹೊಸ ಹೊಸ ಬಂಧು ಬಾಂಧವರೊಂದಿಗೆ. ಮತ್ತಷ್ಟು ಸಾಮರ್ಥ್ಯ–ಸಂಪತ್ತು–ವೈಭವಗಳೊಂದಿಗೆ. ವಂಶದ ಕಳಂಕವನ್ನು ಪೂರ್ಣವಾಗಿ ತೊಳೆದು ಬಿಟ್ಟ ಶ್ರೀ ರಾಮ. ಏಕಪತ್ನೀ ವ್ರತಸ್ಥನಾಗಿ ರಾಮರಾಜ್ಯವನ್ನು ಕಟ್ಟಿದ. [ತಂದೆಯ ವಿಷಮ ವಿಲಾಸೀ ಜೀವನವನ್ನು ಕಂಡೇ ಹಾಗೆ ಮಾಡಿದನೋ ? ವಾಲಿ–ಸುಗ್ರೀವರ ವಿಕೃತ ದಾಂಪತ್ಯ ಸಂಬಂಧಗಳನ್ನು ಕಂಡೇ ಅಂಜನಾಸುತ ಅಖಂಡ ಬ್ರಹ್ಮಚಾರಿಯಾಗಿಬಿಟ್ಟನೋ...ಚಿಂತನೀಯ!] ಆ ಸುಮಧುರ ಸುಂದರ ಕ್ಷಣವನ್ನು ಮಹಾಕವಿಯ ಕುಶಲಕುಂಚವೇ ಚಿತ್ರಿಸಲಿ :

"ವೈದೇಹೀ ಸಹಿತಂ ಸುರದ್ರುಮತಲೇ ಹೈಮೇ ಮಹಾಮಂಟಪೇ
ಮಧ್ಯೇ ಪುಷ್ಪಕಮಾಸನೇ ಮಣಿಮಯೇ ವೀರಾಸನೇ ಸುಸ್ಥಿತಂ ।
ಅಗ್ರೇವಾಚಯತಿ ಪ್ರಭಂಜನಸುತೇ ತತ್ತ್ವಂ ಮುನಿಭ್ಯಃ
ಪರಂ ವ್ಯಾಖ್ಯಾಂತಂ ಭರತಾದಿಭಿಃ ಪರಿವೃತಂ ರಾಮಂ ಭಜೇ ಶ್ಯಾಮಲಂ ॥

ವಾಮೇ ಭೂಮಿಸುತಾ ಪುರಶ್ಚ ಹನುಮಾನ್ ಪಶ್ಚಾತ್ ಸುಮಿತ್ರಾಸುತಃ
ಶತ್ರುಘ್ನೋ ಭರತಶ್ಚ ಪಾರ್ಶ್ವದಲಯೋರ್ವಾಯ್ವಾದಿ ಕೋಣೇಷುಚ ।
ಸುಗ್ರೀವಶ್ಚ ವಿಭೀಷಣಶ್ಚ ಯುವರಾಟ್ ತಾರಾ ಸುತೋ ಜಾಂಬವಾನ್
ಮಧ್ಯೇ ನೀಲಸರೋಜ ಕೋಮಲ ರುಚಿಂ ರಾಮಂ ಭಜೇ ಶ್ಯಾಮಲಂ ॥

ಆ ಸುಂದರ ಸಂಸಾರದ ತುಂಬಿದ ಸಭೆಯಲ್ಲೆಲ್ಲೋ ಕುಳಿತ, ತನ್ನ ಪಾಪ ಸಂಕಲ್ಪದ ನೆನಪಿನಲ್ಲಿ, ಪಶ್ಚಾತ್ತಾಪದಲ್ಲಿ, ಕೊಂಚ ಕುಸಿದ ಕೇಕಯ ರಾಜಪುತ್ರಿಯ ಹನಿಗಣ್ಣು ನಮ್ಮನ್ನು ನಮ್ಮ ಚರ್ಯೆಯ ಬಗ್ಗೆ ಸದಾ ನಾಚಿಸುತ್ತಿರಲಿ, ಎಚ್ಚರಿಸುತ್ತಿರಲಿ !

ಒಂದು ಟಿಪ್ಪಣಿ

ನನ್ನ ಶ್ರೀ ರಾಮಾಯಣ ಚಿಂತನೆ ಅಸಾಂಪ್ರದಾಯಿಕ ಎನಿಸಿದರೆ ಸನ್ಮಾನ್ಯ ಸಂಪಾದಕರೂ, ವಾಚಕರೂ ಕ್ಷಮಿಸಲಿ. ಹಿಡಿದ ಹಾದಿ ಬೇರೆಯಾದರೂ ಇಲ್ಲಿಯ ಸಾಂಸ್ಕೃತಿಕ ಚೇತನೆ ನಮ್ಮ ವೇದಧರ್ಮದ ಜೀವನ ದೃಷ್ಟಿಗೆ, ಕವಿವರ್ಯನ ಅಂತರಂಗದ ಆಶಯಕ್ಕೆ ವಿರೋಧವಾಗಿಲ್ಲ ಎಂಬ ಆತ್ಮವಿಶ್ವಾಸ ನನಗಿದೆ. ಇಷ್ಟಾದರೂ ಸದಾ ಶ್ರೀ ರಾಮಾಯಣ ಕಾವ್ಯ ಸಲಿಲದಲ್ಲಿ ಅವಗಾಹನ ಮಾಡುತ್ತಾ ಪುನೀತರಾದ ಪೂಜ್ಯ ಶ್ರೀ ರಂಗನಾಥ ಶರ್ಮಾಜಿಯವರ ವಾತ್ಸಲ್ಯ ರಕ್ಷೆಯನ್ನು ವಿನೀತನಾಗಿ ಬೇಡುತ್ತಿದ್ದೇನೆ.

'ಶ್ರೀತತ್ತ್ವನಿಧಿ'ಯನ್ನು ಕುರಿತು

ವಿದ್ಯಾಲಂಕಾರ, ಶಾಸ್ತ್ರ ಚೂಡಾಮಣಿ, ಸಂಗೀತ ಕಲಾರತ್ನ
ಪ್ರೊ|| ಸಾ. ಕೃ. ರಾಮಚಂದ್ರ ರಾವ್

ಮುಮ್ಮಡಿ ಕೃಷ್ಣರಾಜ ಒಡೆಯರ ರಚನೆಗಳಲ್ಲಿ ಮುಖ್ಯವಾದುದು 'ಶ್ರೀತತ್ತ್ವನಿಧಿ'. ಇದು ಮುಖ್ಯವೆನಿಸಿಕೊಳ್ಳಲು ಕಾರಣಗಳು ಹಲವು. ಗ್ರಂಥದ ಗಾತ್ರ ಮೊದಲನೆಯದು. ನನ್ನಲ್ಲಿರುವ (ಚಿತ್ರಗಳಿರದ) ಹಸ್ತಪ್ರತಿಯೆ ಒಂದು ನೂರು ಅರವತ್ತೆರಡು ಪುಟಗಳಷ್ಟಿದೆ (ಪ್ರತಿ ಪುಟದ ಆಕಾರ ಒಂದು ಅಡಿ ಅಗಲ, ಎಂಟು ಅಂಗುಲಗಳಷ್ಟು ಉದ್ದ). ಮೈಸೂರಿನಲ್ಲಿರುವ ಸಚಿತ್ರಹಸ್ತಪ್ರತಿಯಲ್ಲಿ ಸುಮಾರು ಒಂದು ಸಾವಿರ ಮತ್ತು ಐನೂರು ಪುಟಗಳಿವೆ (ರಾಯಲ್ ಆಕಾರದವು). ಗ್ರಂಥದ ವೈಶಿಷ್ಟ್ಯಕ್ಕೆ ಎರಡನೆಯ ಕಾರಣ ವೆಂದರೆ ಅಲ್ಲಿ ಅಡಕವಾಗಿರುವ ವಿಷಯಗಳ ವ್ಯಾಪ್ತಿ. ಇದೊಂದು ವಿಶ್ವಕೋಶವೆಂದೇ ಹೇಳಬಹುದು. ಮೇಲುನೋಟಕ್ಕೆ ಧಾರ್ಮಿಕ ಚೌಕಟ್ಟೇ ಇರುವಂತೆ ತೋರಿದರೂ ಅದರಲ್ಲಿ ಅಡಕವಾಗಿರುವ ವಿಷಯಗಳು ಸಂಗೀತ, ಜ್ಯೋತಿಷ, ಶಾಸ್ತ್ರವಿಭಾಗಗಳು, ಕಲೆ, ಆಟ (ಪಗಡೆ, ಚದುರಂಗ, ಗಂಜೀಫ ಇತ್ಯಾದಿ) ಇವನ್ನೆಲ್ಲ ಒಳಗೊಂಡಿವೆ. ನಮ್ಮ ನಾಡಿನಲ್ಲಿ ಇಂಥ ಕೋಶಗಳು ತೀರವಿರಳ. ಕೆಳದಿಯ ಬಸವಭೂಪಾಲನು (1709-10 ರ ಸುಮಾರಿಗೆ) ರಚಿಸಿದ 'ಶಿವತತ್ತ್ವ ರತ್ನಾಕರ'ವೊಂದನ್ನು ನೆನಪಿಗೆ ತಂದುಕೊಳ್ಳ ಬಹುದಷ್ಟೆ. ಅದಾಗಲಿ 'ಶ್ರೀತತ್ತ್ವನಿಧಿ'ಯ ಮುಂದೆ ತಲೆಯೆತ್ತಿ ನಿಲ್ಲಲಾರದು. ದೇಶದ ಇತರ ಪ್ರಾಂತಗಳಲ್ಲೂ ಇಂಥ ಪ್ರಯತ್ನವೇನು ನಡೆದಿಲ್ಲ.

ಮೂರನೆಯ ಕಾರಣವೆಂದರೆ, ಗ್ರಂಥದಲ್ಲಿ ಸಿಂಹಪಾಲು ಚಿತ್ರಗಳದ್ದೆ ಆಗಿರುವುದು. ಮೈಸೂರಿನ ಹಸ್ತಪ್ರತಿಯಲ್ಲಿ ಎರಡು ಸಾವಿರಕ್ಕೂ ಮಿಕ್ಕು ಚಿತ್ರಗಳಿವೆಯೆಂದು ತಿಳಿದು ಬರುತ್ತದೆ. ಚಿತ್ರಗಳ ಸಂಖ್ಯೆಯಷ್ಟೇ ಗಮನಾರ್ಹ ಎಂದೂ ಅಲ್ಲ ; ಚಿತ್ರಗಳ ಸ್ವಭಾವ, ಗುಣ, ಧೋರಣೆ, ಶೈಲಿ ಇವೂ ಎದ್ದುಕಾಣುವಂಥವು. ಗ್ರಂಥಕ್ಕೆ ಚಿತ್ರಗಳನ್ನು ಬರೆಯಿಸುವ ಪದ್ಧತಿಯೇನೋ ಪ್ರಾಚೀನವಾದುದು. ನಮ್ಮ ತಾಳಪತ್ರಗ್ರಂಥಗಳಲ್ಲೇ ಕಿರುಚಿತ್ರಗಳ ಸೇರ್ಪಡೆ ನಡುಯುಗದಲ್ಲಿದ್ದಿತು. ಇತಿಹಾಸ, ಕಥೆ, ಕವನಗಳಿಗೆ

ಚಿತ್ರಗಳನ್ನು ಸಂದರ್ಭೋಚಿತವಾಗಿ ಸೇರಿಸಿ ಪ್ರತಿಮಾಡಿಸುವುದು ಪರ್ಶಿಯನ್ ಅರಸರ ಒತ್ತಾಸೆಯಿಂದ ಬಳಕೆಗೆ ಬಂದಿತು. ಮೊದಮೊದಲು ಆಳಿದ ಮೊಗಲಾಯಿ ಅರಸರೂ ಇದನ್ನು ಬೆಳೆಯಿಸಿದರು ; ಆದರೆ ಮೊಗಲಾಯಿ ರಾಜ್ಯ ಇಳಿಮುಖವಾಗತೊಡಗಿದಾಗ ಈ ಪದ್ಧತಿಯೂ ಹಿಂದೆ ಬಿದ್ದಿತು. ಮತ್ತೆ ಈ ಪದ್ಧತಿಯನ್ನು ಎತ್ತಿ ನಿಲ್ಲಿಸಿದವರು ಮುಮ್ಮಡಿಯವರೆ. ಅವರ ನಂತರ ಅದೇನು ಉಳಿಯಲಿಲ್ಲವೆನ್ನಿ. ಅಂತೂ ಅವರ ಗ್ರಂಥನಿರ್ಮಾಣದಲ್ಲಿ ಲಿಪಿಕಾರರ ಪಾತ್ರದಂತೆ ಚಿತ್ರಕಾರರ ಪಾತ್ರವೂ ಹೆಚ್ಚಿನದೆ ಆಗಿದ್ದಿತು.

ನಾಲ್ಕನೆಯದೊಂದು ಕಾರಣವನ್ನೂ ಹೇಳಬಹುದು. ಅದು ಗ್ರಂಥದ ಉದ್ದೇಶವನ್ನು ಕುರಿತದ್ದು. 'ಶ್ರೀತತ್ತ್ವನಿಧಿ'ಯಲ್ಲಿ ಎದ್ದು ಕಾಣುವ ಆಶಯವೆಂದರೆ, ನಮ್ಮ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಸೇರಿಬಂದಿರುವ ಹಲವು ವಿವರಗಳಿಗೆ ಮೂರ್ತಿಕಲ್ಪನೆಯನ್ನು ಮಾಡುವುದು. ನಾವು ಪೂಜೆಮಾಡುವ ಹಲವಾರು ದೇವತೆಗಳಿಗೆ ಆಕಾರ ಒದಗಿಸುವುದು ಸರಿಯೆ ; ಆದರೆ ರಾಗ, ತಾಳ, ಗ್ರಹ, ನಕ್ಷತ್ರ, ವಾರ, ರಾಶಿ, ಶಾಸ್ತ್ರಭಾಗ, ವಿದ್ಯಾಸ್ಥಾನ ಇವಕ್ಕೆಲ್ಲ ರೂಪಗಳನ್ನು ಕಲ್ಪಿಸಿಕೊಳ್ಳುವುದುಂಟೆ ? ಇದು ಮುಮ್ಮಡಿಯವರದ್ದೇ ಹವಣಿಕೆ ಎನ್ನುವಂತಿಲ್ಲ. ಹೀಗೆ ಎಲ್ಲಕ್ಕೂ ಆಕಾರಚಿಂತನ ಮಾಡುವುದು ತುಂಬ ಹಿಂದಿನ ಒಂದು ಹವ್ಯಾಸ. ಋಗ್ವೇದದಲ್ಲೇ (೪, ೫೮, ೩) ಅಗ್ನಿಗೆ ನಾಲ್ಕು ಕೊಂಬು, ಮೂರು ಕಾಲು, ಎರಡು ತಲೆ, ಏಳು ತೋಳು ಹೀಗೆಲ್ಲ ಹೇಳಿರುವುದಿದೆ. ನಾವು ಬಳಸುವ ಮಾತನ್ನೆ ವೇದವು ದೇವತೆಯಂತೆ ಬಗೆಯಿತಲ್ಲವೆ ? ('ದೇವೀಂ ವಾಚಮಜಯಂತ ದೇವಾಃ' ೮,೧೦೦,೧೧). ಕ್ರಿಸ್ತಪೂರ್ವ ಏಳುನೂರು ವರ್ಷಗಳಷ್ಟು ಹಿಂದೆಯೆ ಯಾಸ್ಕರು ತಮ್ಮ 'ನಿರುಕ್ತ'ದಲ್ಲಿ ಪರೋಕ್ಷವಾದುದನ್ನು ಪ್ರತ್ಯಕ್ಷದಂತೆ ಬಗೆಯಲು 'ರೂಪೋಪಮ್' ಎಂಬ ಸಂವಿಧಾನವನ್ನು ಬಳಸಿದರು (೩, ೧೬). ಅವರು ದೇವತೆಗಳ ಆಕಾರಚಿಂತನೆಯನ್ನು ಮಾಡಿದುದೂ ಹೀಗೆಯೆ. ಅವರ ನಂತರ ಒಂದು ನೂರು ವರ್ಷಗಳೊಳಗೇ ಕಾಣಿಸಿಕೊಂಡ ಪಾಣಿನಿಗಳು ವೃತ್ತಕ್ಕೆ ಒಂದು ಮೂರ್ತರೂಪವನ್ನು ಕೊಡುವ ಪ್ರಯತ್ನ ಮಾಡಿದರು.

ಈ ಹವ್ಯಾಸಕ್ಕೆ ಅಲ್ಲಲ್ಲಿ ಅಷ್ಟಿಷ್ಟು ಆಜ್ಯ ದೊರೆಯಿತಾದರೂ, ಬಹುಮಟ್ಟಿಗೆ ಈ ಪ್ರವೃತ್ತಿಯು ಕೇವಲ ಕೆಲವು ನಿಘಂಟುಕಾರರ ವಿನೋದಕ್ಕೆಂದು ಸೀಮಿತವಾಯಿತು ಅಷ್ಟೆ. ಪೂಜೆ, ಉಪಾಸನೆ, ಧ್ಯಾನ ಇವುಗಳಿಗೆ ನೆರವಾಗಲೇನೋ ದೇವತೆಗಳಿಗೆ ಆಕಾರ ವಿರುವುದು ಎಲ್ಲರಿಗೂ ಒಪ್ಪಿಗೆಯಾಯಿತು. ವಿಷ್ಣುಸಂಹಿತೆಯು (೨೯, ೫೫) ರೂಪವನ್ನು ಬಿಟ್ಟರೆ ಧ್ಯಾನಮಾಡುವುದಾದರೂ ಹೇಗೆ ಎಂಬ ನಿಲುವನ್ನು ತಳೆಯಿತು ('ನ ಚ ರೂಪಂ ವಿನಾ ಧ್ಯಾತುಂ ಕೇನಾಪಿ ಶಕ್ಯತೇ'). ಉಳಿದಂತೆ ಸಹಜವಾಗಿಯೇ ಆಕಾರಚಿಂತನೆಯು ಅಗತ್ಯ ಅಷ್ಟಾಗಿ ಕಂಡುಬರಲಿಲ್ಲ. ಮುಮ್ಮಡಿಯವರು ಈ ಹಳೆಯ ಹವ್ಯಾಸವನ್ನು ಮತ್ತೆ ಎತ್ತಿಕೊಂಡದ್ದು ವಿಶೇಷ.

'ಶ್ರೀತತ್ತ್ವನಿಧಿ'ಯಲ್ಲಿರುವುದೇ ಆಕರಚಿಂತನೆ. ಇದಕ್ಕಾಗಿ ಮುಮ್ಮಡಿಯವರು ಆಯ್ದುಕೊಂಡ ವಿವರಗಳನ್ನು ಒಂಬತ್ತು ವರ್ಗಗಳಲ್ಲಿ ವಿಂಗಡಿಸಿಕೊಂಡಿದ್ದಾರೆ. ಒಂದೊಂದು ವರ್ಗವನ್ನೂ ಅವರು ನಿಧಿಯೆಂದು ಕರೆದಿದ್ದಾರೆ. ನವ-ನಿಧಿಗಳನ್ನು ಕೂಡಿಸಿ 'ಶ್ರೀತತ್ತ್ವನಿಧಿ'ಯಾಯಿತು. ಹೆಸರಿನ ಸ್ವಾರಸ್ಯವನ್ನೂ ಗಮನಿಸಬೇಕು. ಹೆಸರಿನ ಮೊದಲ ಭಾಗವಾದ 'ಶ್ರೀ' ಎಂಬುದೇನೋ ಸಾಂಪ್ರದಾಯಿಕವಾದ, ಔಪಚಾರಿಕವಾದ ವಿಶೇಷಣವಿದ್ದೀತು. 'ಶ್ರೀ' ಎನ್ನುವ ಮಾತಿಗೆ ಲಕ್ಷ್ಮಿ, ಶೋಭೆ, ಸಂಪತ್ತು, ವಿಭೂತಿ ಎಂಬರ್ಥಗಳಿವೆಯಾದರೂ "ಸಿದ್ಧಂ ಸಿದ್ಧಾಧಿಕಾರಾಂತ್ಚ ಶ್ರೀಪೂರ್ವಂ ಸಮುದೀರಯೇತ್" ಎಂಬ ಆದೇಶವೇ ಇಲ್ಲಿ ಕೆಲಸಮಾಡಿದೆಯೆನ್ನಬಹುದು. 'ತತ್ತ್ವ' ಎನ್ನುವ ಮಾತಿಗೂ ಹಲವು ಅರ್ಥಗಳಿವೆ. ಇರುವುದು, ಸಾರಭೂತವಾಗಿರುವುದು, ಮುಖ್ಯವಾದುದು ಎಂಬರ್ಥಗಳಲ್ಲದೆ ಎಣಿಕೆಗೆ ಬರುವಂಥದು ಎಂಬುದೂ ಇದೆ. ಈ ಅರ್ಥದಲ್ಲಿಯೇ ಸಾಂಖ್ಯದರ್ಶನವು ಇಪ್ಪತ್ತುನಾಲ್ಕು ಅಥವಾ ಇಪತ್ತೈದು ತತ್ತ್ವಗಳನ್ನು ನಿರ್ದೇಶಿಸಿ 'ತತ್ತ್ವಸಮಾಸ'ವೆಂದಿತು. ಇರುವುದು, ಮುಖ್ಯವಾದುದು, ಸಾರಭೂತವಾದುದು ಎಂಬರ್ಥವನ್ನು ಹಿಡಿದು 'ತತ್ತ್ವನಿಶ್ಚಯ', 'ತತ್ತ್ವವಿವೇಕ', 'ತತ್ತ್ವಶುದ್ಧಿ' 'ತತ್ತ್ವಜ್ಞಾನ', 'ತತ್ತ್ವಬೋಧ' ಮೊದಲಾದ ಮಾತುಗಳು ಬಳಕೆಗೆ ಬಂದುವು. ಮುಮ್ಮಡಿಯವರು ಗ್ರಂಥದ ಮೊದಲಲ್ಲಿ ಹಲವಾರು ಶಾಸ್ತ್ರಭಾಗಗಳಿಂದ ಸಾರವತ್ತಾದ ವಿವರಗಳನ್ನು ತಾವು ಆಯ್ದುಕೊಂಡಿರುವುದಾಗಿ ತಿಳಿಸುತ್ತ 'ಸಾರಂ ಸಂಗೃಹ್ಯ ತತ್ತ್ವತಃ' ಎಂದು ಹೇಳಿರುವರು.

'ನಿಧಿ'ಯೆನ್ನುವ ಮಾತಿಗೆ ('ಧಾ' ಎಂಬ ಧಾತುವಿನಿಂದ) ಇಡುವುದು, ಕೂಡಿಸುವುದು, ಕಾಪಾಡುವುದು, ಉಳಿಸಿಕೊಳ್ಳುವುದು ಎಂಬರ್ಥವಿದೆ. ಬೆಲೆಬಾಳುವ, ಸಾರವತ್ತಾದ ಪದಾರ್ಥಗಳನ್ನು ಕೂಡಿಸಿಡುವ ಸ್ಥಳ 'ನಿಧಿ' ('ನಿಧೀಯತೇ ಅತ್ರ'). 'ಗುಣನಿಧಿ', 'ಜಲನಿಧಿ' ಮೊದಲಾದ ಪ್ರಯೋಗಗಳಲ್ಲಿ ಆಧಾರ, ನೆಲೆ ಎಂಬರ್ಥವೂ ಇದೆ. ಎಲ್ಲ ಕಲೆಗಳನ್ನೂ ಒಳಗೊಂಡಿರುವ ಪೂರ್ಣಿಮೆಯ ಚಂದ್ರನಿಗೆ 'ಕಲಾನಿಧಿ' ಯೆಂದು ಹೆಸರು. ಮೇಲೆ ಕಾಣಿಸಿದಂತೆ ಸಾರವತ್ತಾದ, ಮುಖ್ಯವೆನಿಸಿದ ವಿವರಗಳನ್ನು ಒಂದೆಡೆ ಕೂಡಿಸಿದರೆ 'ತತ್ತ್ವನಿಧಿ'ಯೆಂದಾಯಿತು.

'ನಿಧಿ'ಯೆಂದರೆ ರತ್ನವೆಂದೂ ವಾಡಿಕೆಯ ಅರ್ಥ. ರತ್ನವೆಂದರೆ ಮೂಲಾರ್ಥದಲ್ಲಿ ನಮಗೆ ಪ್ರಿಯವಾದುದು, ಬೆಲೆಯುಳ್ಳದ್ದು, ಕಷ್ಟಪಟ್ಟು ದೊರಕಿಸಿಕೊಳ್ಳಬೇಕಾದುದು. ಕುಬೇರನನ್ನು 'ನಿಧಿಪತಿ'ಯೆಂದು ನಿರ್ದೇಶಿಸುವುದುಂಟಷ್ಟೆ. ಅವನ ವಶದಲ್ಲಿ ಒಂಬತ್ತು ಬಗೆಯ ರತ್ನಗಳಿವೆಯೆಂದು ನಂಬಿಕೆ, ಹಾಗಾಗಿ ಅವನು 'ನಿಧಿಪತಿ' ('ಕುಬೇರಸ್ಯ ನವಧಾ ರತ್ನ ವಿಶೇಷಃ'). ಅವನ ನವನಿಧಿಗಳನ್ನು ಪದ್ಮ, ಮಹಾಪದ್ಮ, ಶಂಖ, ಮಕರ, ಕಚ್ಛಪ, ಮುಕುಂದ, ಕುಂದ, (ಅಥವಾ ನಂದ), ನೀಲ, ಮತ್ತು ವರ್ಚ (ಅಥವಾ ಖರ್ವ) ಎಂದು ನಿರ್ದೇಶಿಸುವುದೂ ಇದೆ. ಇವನ್ನು ಕುಬೇರನ ಅನುಚರ

ರೆಂದೂ ಹೇಳುತ್ತಾರೆ. 'ಈ 'ನವ-ನಿಧಿ'ಯೆಂಬ ಕಲ್ಪನೆಯನ್ನು ಹಿಡಿದೇ ಮುಮ್ಮಡಿಯವರು 'ಶ್ರೀ ತತ್ತ್ವನಿಧಿ'ಯಲ್ಲೂ ಒಂಬತ್ತು ನಿಧಿಗಳೆಂಬ ಪರಿಚ್ಛೇದಗಳನ್ನು ಮಾಡಿರುವಂತೆ ತೋರುತ್ತದೆ. ಗ್ರಂಥದ ಪ್ರಾಸ್ತಾವಿಕ ಶ್ಲೋಕಗಳಲ್ಲಿ 'ಶ್ರೀ ತತ್ತ್ವನಿಧ್ಯಾಖ್ಯೇ ನವ ನಿಧ್ಯಾತ್ಮಕೇ ಶುಭೇ' ಎಂದು ಹೇಳಿದ್ದಾರೆ.

ಮಾರ್ಕಂಡೇಯ ಪುರಾಣ (೬೮ನೆಯ ಅಧ್ಯಾಯ)ದಲ್ಲಿ ಎಂಟೇ ನಿಧಿಗಳನ್ನು ಹೇಳಿದ್ದರೂ 'ನಿಧಿ'ಯೆಂಬ ಮಾತಿನ ಅರ್ಥವನ್ನು ಹಿಗ್ಗಿಸಿ ಸಿಧಿಯನ್ನು ಅರಿತದ್ದರಿಂದ ಆಗುವ ಪ್ರಯೋಜನವನ್ನು ಹೇಳಿದೆ-

"ಇತ್ಯೇತೇ ನಿಧಯಃ ಖ್ಯಾತಾ ನರಾಣಾಮರ್ಥದೇವತಾಃ ।
ಮಿಶ್ರಾವಲೋಕಿನೋ ಮಿಶ್ರಸ್ವಭಾವಫಲದಾಯಿನಃ ॥
ಯಥಾ ಖ್ಯಾತಃ ಸ್ವಭಾವಸ್ತು ಭವತ್ಯೇಕವಿಲೋಕನಾತ್ ।
ಸರ್ವೇಷಾಮಾಧಿಪತ್ಯೇ ಚ ಶ್ರೀ ರೇಷಾಂ ದ್ವಿಜ ಪದ್ಮಿನೀ ॥'

ಇದನ್ನು ದೃಷ್ಟಿಯಲ್ಲಿರಿಸಿಕೊಂಡೇ ಮುಮ್ಮಡಿಯವರು ಈ ನಿಧಿಗಳನ್ನು ಸಂಗ್ರಹಿಸಿದರು. ಅವರೇ ಗ್ರಂಥದ ಮೊದಲಲ್ಲಿ "ಪ್ರಪಂಚಸ್ಯೋಪಕಾರಾಯ ಪ್ರಕಾಶ್ಯಂತೇ ಯಥಾಮತಿ" ಎಂದು ಹೇಳಿರುವುದನ್ನು ಗಮನಿಸಬೇಕು. ಇಲ್ಲಿ ಕಾಣಿಸಿರುವ ವಿವರಗಳನ್ನು ತಿಳಿದುಕೊಂಡರೆ ಬದುಕಿನಲ್ಲಿ ಕುಬೇರನ ನವನಿಧಿಗಳೆಂಬ ಸಂಪತ್ತನ್ನೂ ಪಡೆದುಕೊಳ್ಳುವುದು ಸಾಧ್ಯವಾದೀತು ಎಂಬರ್ಥದಲ್ಲಿ "ಏತನ್ನವನಿಧಿಜ್ಞಾನಾತ್ ಸುಲಭಾ ನಿಧಯೋ ನವ" ಎಂದೂ ಅವರು ಸೂಚಿಸಿದ್ದಾರೆ. ಎಂದರೆ ನಮ್ಮ ಬದುಕಿನ ಸ್ವಾರಸ್ಯವನ್ನೂ ಸಾರ್ಥಕತೆಯನ್ನೂ ಹೆಚ್ಚಿಸಿಕೊಳ್ಳಲು 'ಶ್ರೀ ತತ್ತ್ವನಿಧಿ'ಯಲ್ಲಿ ಬಂದಿರುವ ವಿಚಾರಗಳು ನೆರವಾಗಬಲ್ಲುವೆಂದು ಅವರ ಆಶಯ.

'ಶ್ರೀ ತತ್ತ್ವನಿಧಿ'ಯಲ್ಲಿರುವ ಶ್ಲೋಕಗಳು (ಮೊದಲಲ್ಲಿ ಎಂಟು ಶ್ಲೋಕಗಳನ್ನು ಬಿಟ್ಟರೆ) ಅವರ ಸ್ವಂತ ರಚನೆಗಳಲ್ಲ; ವಿಷಯಗಳೂ ಅವರ ಕಲ್ಪನೆಯೇನಲ್ಲ. ಪ್ರಮುಖವಾಗಿ ಇದೊಂದು ಸಂಕಲನ ಗ್ರಂಥ. ಇದನ್ನು ಅವರೇ ಮೊದಲಲ್ಲಿ ಹೇಳಿಯೂ ಇದ್ದಾರೆ. ಹಲವಾರು ಆಕರಗಳಿಂದ ಪ್ರಸ್ತುತ ಭಾಗಗಳನ್ನು ಆಯ್ದುಕೊಂಡು ಇಲ್ಲಿ ಕೂಡಿಸಿದ್ದಾರೆ. ನಡುನಡುವೆ ತಮ್ಮ ಮಾತುಗಳಿಂದ ಸಂದರ್ಭವನ್ನೂ ಸಂಬಂಧವನ್ನೂ ಸೂಚಿಸಿದ್ದಾರೆ. ಅಷ್ಟೆ. ಆಕರಸ್ಮರಣೆಯನ್ನು ಅಲ್ಲಲ್ಲಿಯೆ ಮಾಡಿದ್ದಾರೆ. ಅವರು ಬಳಸಿಕೊಂಡಿರುವ ಪ್ರಾಚೀನ ಗ್ರಂಥಗಳೂ ಪ್ರಕರಣಗಳೂ ಇವು—

ನೃಸಿಂಹಪ್ರಸಾದ, ಷೋಡಶೀಕಲ್ಪ, ಚಂಡೀಕಲ್ಪ, ಲಲಿತೋಪಾಖ್ಯಾನ, ಜ್ಞಾನಾರ್ಣವ, ಷೋಢಾಕಲ್ಪ, ಶೈವಾಗಮ, ಸ್ಕಂದಯಾಮಳ, ದುರ್ಗಾ

ಕಲ್ಪ, ಕಾರಣಾಗಮ, ಪ್ರತ್ಯಂಗಿರಾಕಲ್ಪ, ಮಹಾಲಕ್ಷ್ಮೀರತ್ನಕೋಶ, ನಾರದಸಂಹಿತೆ, ಸುದರ್ಶನಸಂಹಿತೆ, ಅಹಿರ್ಬುಧ್ನಸಂಹಿತೆ, ವಾರಾಹೀಕಲ್ಪ ಶ್ಯಾಮಲಾಕಲ್ಪ, ತ್ರಿಪುರಸುಂದರೀಕಲ್ಪ, ಶಾರದಾ ತಿಲಕ, ಪದ್ಮಪುರಾಣ, ಸೋಮನಾಥ ಪಲ್ಲೀ ಮಂತ್ರಶಾಸ್ತ್ರ, ಶಾಬರ ತಂತ್ರ, ಸಿದ್ಧಶಾಬರ ತಂತ್ರ, ಇಂದ್ರಾಕ್ಷೀಕಲ್ಪ, ಭವಾನೀಕಲ್ಪ, ತುಲಸೀಮಹಾತ್ಮ್ಯ, ಮಾರ್ಕಂಡೇಯ ಪುರಾಣ, ಪಾಂಚರಾತ್ರಸಂಹಿತೆ, (ಕ್ರಿಯಾಪಾದ) ಆಥರ್ವಣ ರಹಸ್ಯ, ಆಶ್ವಲಾಯನ ಕಲ್ಪ, ಭಾಗವತ, ಸ್ಕಂದಪುರಾಣ, ನರಸಿಂಹಪುರಾಣ (ಬ್ರಹ್ಮನಾರದ ಸಂವಾದ), ಭೃಗುಸಂಹಿತೆ, ವಾಯವೀಯ ಸಂಹಿತೆ, ನಿರ್ಣಯ ಸಿಂಧು, ಪದ್ಮೋತ್ತರಖಂಡ, ಮಂತ್ರಸಾರ, ಹೇಮಾದ್ರಿ ದಾನಕಾಂಡ, ಉಡ್ಡಾಮರತಂತ್ರ, ದತ್ತಾತ್ರೇಯ ಕಲ್ಪ, ಶಂಕರಸಂಹಿತಾ (ಸ್ಕಾಂದ), ಮುದ್ಗಲ ಪುರಾಣ, ಭಟ್ಟಭಾಸ್ಕರೀಯ, ರತ್ನಮಾಲಾ, ಆಗ್ನೇಯಪುರಾಣ, ಶೈವಾಗಮಶೇಖರ, ಮಲ್ಲಾರೀ ಮಹಾತ್ಮ್ಯ, ಭೈರವಕಲ್ಪ, ಆಯುರ್ವೇದ ತಂತ್ರ, ಪ್ರಯೋಗ ರತ್ನ (ನಾರಣ ಭಟ್ಟೀಯ), ಶಿಂಗಾಭಟ್ಟೀಯ ಪ್ರಯೋಗ, ಶಿವರಹಸ್ಯ (ತೃತೀಯಾಂಶ), ಧರ್ಮಶಾಸ್ತ್ರಾಚಾರಖಂಡ (ವೈಕುಂಠ ದೀಕ್ಷಿತೀಯ), ಬ್ರಹ್ಮಾಂಡ ಪುರಾಣ (ಲಕ್ಷ್ಮೀನಾರಾಯಣ ಸಂವಾದ), ತಂತ್ರಸಾರಗ್ರಂಥ, ಮಯೂಖ (ದಾನಖಂಡ), ಸಿದ್ಧಾಂತಶೇಖರ, ಸ್ಮೃತಿಮುಕ್ತಾಫಲ, ಜ್ಯೋತಿಷಾರ್ಣವ, ಯತಿರಾಜಸಪ್ತತಿ, ಮದನರತ್ನ ಜ್ಯೋತಿಃಶಾಸ್ತ್ರ, ಪರಾಶರಮಾಧವೀಯ, ದೈವಜ್ಞವಿಲಾಸ, ನಕ್ಷತ್ರಚೂಡಾಮಣಿ, ಸೂರ್ಯಸಿದ್ಧಾಂತ, ಜ್ಯೋತಿಷ ರತ್ನಾಕರ, ಸಚ್ಚರಿತ್ರ ರಕ್ಷೆ, ಲಲಿತಾಗಮ ಇತ್ಯಾದಿ.

ಈ ಪಟ್ಟಿಯ ಪರಾಮರ್ಶೆಯಿಂದ ಗ್ರಂಥಕಾರರ ಅಧ್ಯಯನದ ಹರವು ಎಷ್ಟು ಎಂಬುದನ್ನು ಊಹಿಸಿಕೊಳ್ಳಬಹುದು. ಆಸ್ಥಾನ ಪಂಡಿತರಿಂದ ನೆರವು ಪಡೆದು ಕೊಂಡಿರುವ ಸಾಧ್ಯತೆಯಿದೆ. ಯಾವ ಗ್ರಂಥಕಾರನಿಗಾದರೂ ಇಂಥ ಅವಲಂಬನೆ ಇದ್ದದ್ದೇ. ಆದರೆ ಹಲವು ಗ್ರಂಥಗಳ ನೇರವಾದ ಪರಿಚಯ ಅವರಿಗಿದ್ದುದು ಆಯ್ಕೆಯ ವಿವೇಕದಿಂದ ಸ್ಪಷ್ಟವಾಗುತ್ತದೆ. ಶೈವ, ವೈಷ್ಣವ, ಶಾಕ್ತಸಂಪ್ರದಾಯಗಳಲ್ಲಿ ಅವರಿಗೆ ಪ್ರವೇಶವಿದ್ದಿತು. ಸ್ವತಃ ಕವಿ, ಸಾಹಿತಿ; ಗ್ರಂಥರಚನೆಯ ಒಳಗುಟ್ಟನ್ನು ಬಲ್ಲವರು. ಸಂಕಲನ ಗ್ರಂಥವಾದರೂ ಸ್ವತಂತ್ರ ಗ್ರಂಥದ ಕಳೆಯನ್ನು ಇಲ್ಲಿ ಮೂಡಿಸಿದ್ದಾರೆ. ಕಡೆಯ ಕೌತುಕನಿಧಿಯೇನೋ ಬಹುಮಟ್ಟಿಗೆ ಅವರ ಸ್ವತಂತ್ರರಚನೆಯೆ.

ಗ್ರಂಥದಲ್ಲಿ ಒಂಬತ್ತು 'ನಿಧಿ'ಗಳೆನಿಸಿಕೊಳ್ಳುವ ಪರಿಚ್ಛೇದಗಳಿವೆಯೆಂದು ಆಗಲೆ ಹೇಳಿದೆನಷ್ಟೆ. ಅವುಗಳ ಸ್ಥೂಲಪರಿಚಯವನ್ನು ಮೊದಲೆ ಮಾಡಿಕೊಂಡರೆ ಒಳಿತು.

೧) ಮೊದಲನೆಯದು 'ಚಾಮುಂಡಾದಿಶಕ್ತಿ ಸ್ವರೂಪ ನಿರೂಪಣ'ವೆಂಬ ನಿಧಿಯೆಂದು ಆ ಭಾಗದ ಪುಷ್ಪಿಕೆಯಲ್ಲಿ ಹೇಳಲಾಗಿದೆ. 'ಶಕ್ತಿನಿಧಿ'ಯೆಂದು ಅಡಕವಾದ ಹೆಸರು. ಇದರಲ್ಲಿ ತಮ್ಮ ಕುಲದೇವತೆಯಾದ ಚಾಮುಂಡೇಶ್ವರಿಯ ಮೂರ್ತಿಧ್ಯಾನ ದಿಂದ ಆರಂಭಿಸಿ ವಿವಿಧ ಶಕ್ತಿರೂಪಗಳ ವರ್ಣನೆಯಿದೆ. ರಾಜರಾಜೇಶ್ವರಿ, ಮಹಾಕಾಳಿ, ಮಹಾಲಕ್ಷ್ಮಿ, ಮಹಾಸರಸ್ವತಿ, ಶ್ರೀಚಕ್ರದಲ್ಲಿರುವ ದೇವತೆಯರು (ಲಲಿತೋಪಾಖ್ಯಾನ ರೀತ್ಯಾ ಮತ್ತು ಶರಭತಂತ್ರ ರೀತ್ಯಾ), ಮೂಲಾಧಾರಾದಿ ಸಪ್ತಪೀಠೇಶ್ವರಿಯರು, ಸಪ್ತಮಾತೃಕೆಯರು, ನವದುರ್ಗೆಯರು, ತಾಂತ್ರಿಕ ದೇವತೆಯರಾದ ಪ್ರತ್ಯಂಗಿರಾ, ಶೂಲಿನಿ, ಧೂಮಾವತಿ, ಉಗ್ರತಾರಾ, ಕುರುಕುಲ್ಲಾ ಮೊದಲಾದವರು ಚತುಃಷಷ್ಟಿ ಕಲಾದೇವಿಯರು, ಅಷ್ಟಮಹಾಲಕ್ಷ್ಮಿಯರು, ವಾಗೀಶ್ವರೀ ಭೇದಗಳು, ವಾರಾಹೀ ಭೇದಗಳು, ತ್ರಿಸಂಧ್ಯಾದೇವಿಯರು (ಗಾಯಿತ್ರಿ, ಸಾವಿತ್ರಿ, ಸರಸ್ವತಿ), ಅನ್ನಪೂರ್ಣಾ ಭೇದ, ಪರಿವಾರಶಕ್ತಿಯರು ಇವರೆಲ್ಲರ ಆಕಾರ, ಆಯುಧ, ವರ್ಣ, ವಾಹನ ಮೊದಲಾದ ವಿವರಗಳನ್ನು ಕೊಟ್ಟಿದ್ದಾರೆ.

೨) ಎರಡನೆಯದು 'ವಿರಾಡ್ರೂಪಾದಿ ವಿಷ್ಣುಸ್ವರೂಪ ನಿರೂಪಣ'ವೆಂಬ ನಿಧಿಯೆಂದು ಈ ಅಧ್ಯಾಯದ ಮುಕ್ತಾಯ ವಾಕ್ಯದಲ್ಲಿ ಕಾಣಿಸಿದೆ ; 'ವಿಷ್ಣುನಿಧಿ' ಯೆಂಬುದು ಸಂಗ್ರಹನಾಮ. ಇದರಲ್ಲಿ ವಿಷ್ಣುವಿನ ಹಲವಾರು ರೂಪಗಳಿಗೆ ಧ್ಯಾನ ಶ್ಲೋಕಗಳಿವೆ. ವಿರಾಟ್‌ಪುರುಷ, ಮಹಾವೈಕುಂಠಮೂರ್ತಿ, ವಿಷ್ಣು, ಲಕ್ಷ್ಮಿ, ಭೂದೇವಿ ನೀಳಾದೇವಿ, ವೈಕುಂಠನಾರಾಯಣ, ತಾರಕರಾಮ, ಶಿಂಶುಮಾರ, ತ್ರಿವಿಕ್ರಮ, ಹಯಗ್ರೀವ, ಭೂವರಾಹ, ಧರಣೀವರಾಹ, ಶ್ರೀಕರಮೂರ್ತಿ, ಹಂಸಮೂರ್ತಿ, ದಧಿವಾಮನ, ಅಶ್ವತ್ಥನಾರಾಯಣ, ಲಕ್ಷ್ಮೀನೃಸಿಂಹ, ಕೇಶವಾದಿ ಚತುರ್ವಿಂಶತಿ ಮೂರ್ತಿಗಳು, ವ್ಯೂಹ ಚತುಷ್ಟಯ (ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ), ದಶಾವತಾರಗಳು, ಸೂರ್ಯನಾರಾಯಣ, ಗಂಡಭೇರುಂಡ ನೃಸಿಂಹ, ಪಂಚವಕ್ತ್ರ ನರಸಿಂಹ, ಪ್ರತಾಪರಾಮ, ಪರಿವಾರ ಪಟ್ಟಾಭಿರಾಮ, ಅನಂತಮೂರ್ತಿ, ಗೋಪಾಲಕೃಷ್ಣ, ಸಂತಾನ ಗೋಪಾಲ, ಮದನಗೋಪಾಲ, ಸುದರ್ಶನ, ವಿಷ್ವಕ್ಸೇನ, ಹನುಮಾನ್, ಪಂಚಮುಖ ಆಂಜನೇಯ, ಗರುಡ, ಕಾರ್ತವೀರ್ಯ, ಮನ್ಮಥ, ದತ್ತಾತ್ರೇಯ ಈ ರೂಪಗಳು ವಿವರಣೆಗೆಬರುತ್ತವೆ.

೩) ಮೂರನೆಯದು 'ಮಹಾಕೈಲಾಸ ಮೂರ್ತ್ಯಾದಿ ಶಿವಮೂರ್ತಿ ಸ್ವರೂಪ ನಿರೂಪಣ'ವೆಂಬ ನಿಧಿ, ಇದಕ್ಕೆ ಶಿವನಿಧಿಯೆಂದು ಸಂಕ್ಷಿಪ್ತನಾಮ. ಇದರಲ್ಲಿ ಮಹೇಶ್ವರ, ಗೌರಿ, ಮಹಾಕೈಲಾಸಮೂರ್ತಿ, ತ್ವಾತ್ರಿಂಶದ್ಘೋರಮೂರ್ತಿ, ಮೃತ್ಯುಂಜಯ, ನೀಲಕಂಠ, ರುದ್ರ, ಉಮಾಮಹೇಶ್ವರ, ಸಭಾಪತಿ, ಸದ್ಯೋಜಾತಾದಿ ಪಂಚ ಮೂರ್ತಿಗಳು, ಏಳು ಬಗೆಯ ತಾಂಡವಮೂರ್ತಿಗಳು, ಭವನೇ ಮೊದಲಾಗಿ ಎಂಟು

ಮೂರ್ತಿಗಳು, ಏಕಾದಶರುದ್ರರು, ಇಪ್ಪತ್ತೈದು ಲೀಲಾಮೂರ್ತಿಗಳು, ಮೂವತ್ತೆರಡು ಗಣಪತಿಗಳು, ಹದಿನೇಳು ಸುಬ್ರಹ್ಮಣ್ಯ ಮೂರ್ತಿಗಳು, ವೀರಭದ್ರ, ಸ್ವರ್ಣಾಕರ್ಷಣ ಭೈರವ, ವಟುಕ ಭೈರವ, ಮಲ್ಲಾರಿ, ಚಂಡೇಶ, ಪಾಶುಪತಾಸ್ತ್ರಮೂರ್ತಿ, ಖಡ್ಗರಾವಣ, ಎಂಟು ಬಗೆಯ ಭೈರವರು ಹೇಳಲ್ಪಟ್ಟಿದ್ದಾರೆ.

೪) ನಾಲ್ಕನೆಯದಾದ ಬ್ರಹ್ಮನಿಧಿಯನ್ನು ಪುಷ್ಪಿಕೆ 'ಚತುರ್ಮುಖ ಬ್ರಹ್ಮಾದಿ ದಿಕ್ಪಾಲನಿರೂಪಣ'ವೆಂದು ವಿವರಿಸಿದೆ. ಇದರಲ್ಲಿ ಚತುರ್ಮುಖಬ್ರಹ್ಮ, ಸರಸ್ವತಿ, ಐವರು ಬ್ರಹ್ಮರು (ಆದ್ಯ, ಲೋಕಪಾಲ, ಪ್ರಜಾಪತಿ, ವಿಧಿ, ವಿಶ್ವಕರ್ಮ), ಒಂಭತ್ತು ಮಂದಿ ಪ್ರಜೇಶ್ವರರು, ಏಳು ಋಷಿಗಳು, ಧರ್ಮಾದಿ ಚತುಷ್ಟಯ (ಅಧರ್ಮ, ಅಜ್ಞಾನ, ಅವೈರಾಗ್ಯ, ಅನೈಶ್ವರ್ಯ), ಪುಣ್ಯ-ಪಾಪ ಪುರುಷರು, ನಾಲ್ಕು ವೇದಗಳ ಸ್ವರೂಪ, ಪತ್ನಿ, ಗೋತ್ರ, ಅಧಿದೈವ ಇತ್ಯಾದಿ ; ಉಪವೇದಗಳು (ಆಯುರ್ವೇದ, ಧನುರ್ವೇದ), ವೇದಷಡಂಗಗಳು (ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದ, ಜ್ಯೋತಿಷ), ಮಿಮಾಂಸಾ-ನ್ಯಾಯ, ಧರ್ಮಶಾಸ್ತ್ರಗಳು, ಪುರಾಣ, ಇತಿಹಾಸ, ಭರತಶಾಸ್ತ್ರ, ಪಾಂಚರಾತ್ರ, ಪಾಶುಪತಶಾಸ್ತ್ರಗಳು, ಪಾತಂಜಲ, ಸಾಂಖ್ಯದರ್ಶನಗಳು, ಅರವತ್ತನಾಲ್ಕು ಕಲೆಗಳು, ಪಂಚಭೂತಗಳು, ದಶದಿಕ್ಕುಗಳು, ಅಷ್ಟದಿಗ್ಗಜಗಳು, ಅಷ್ಟ ದಿಕ್ಪಾಲಕರು, ವಸುಗಳು, ಮರುತ್ತುಗಳು, ಸಪ್ತ ಸಮುದ್ರಗಳು, ಅಷ್ಟನದಿಗಳು, ದ್ವಾದಶಾಯುಧಗಳು, ಶಕ್ತಿತ್ರಯ (ಪ್ರಭು, ಮಂತ್ರ, ಉತ್ಸಾಹ), ಉಪಾಯ ಚತುಷ್ಟಯ (ಸಾಮ, ದಾನ. ಭೇದ, ದಂಡ,) ಹದಿನಾಲ್ಕು ಮನುಗಳು, ಒಂಬತ್ತು ಮಂದಿ ಚಿರಂಜೀವಿಗಳು (ಅಶ್ವತ್ಥಾಮ, ಬಲಿ, ವ್ಯಾಸ, ಹನುಮಾನ್, ವಿಭೀಷಣ, ಕೃಪ, ಪ್ರಹ್ಲಾದ, ಮಾರ್ಕಂಡೇಯ), ಮರೀಚಿಯೆ, ಮೊದಲಾದ ಋಷಿಗಳು ಇವರೆಲ್ಲರ ರೂಪಕಲ್ಪನೆಯಿದೆ.

೫) ಐದನೆಯದಾದ ಗ್ರಹನಿಧಿ 'ಯುಗಾದಿ ಕಾಲಭೇದ ತದ್ದೇವತಾ ಸ್ವರೂಪ ನಿರೂಪಣೆ'ಗೆ ಮೀಸಲಾದದ್ದು. ಸೂರ್ಯನೇ ಮೊದಲಾದ ಗ್ರಹಗಳು, ಅವುಗಳ ಅಧಿದೇವತೆ, ಪ್ರತ್ಯಧಿದೇವತೆಗಳು. ನಾಲ್ಕು ಯುಗಗಳು, ಪ್ರಭವವೇ ಮೊದಲಾಗಿ ಅರವತ್ತು ಸಂವತ್ಸರಗಳು, ಎರಡು ಅಯನಗಳು (ಉತ್ತರಾಯಣ, ದಕ್ಷಿಣಾಯನ), ಆರು ಋತುಗಳು, ಹನ್ನೆರಡು ಮಾಸಗಳು, ದ್ವಾದಶ ಸಂಕ್ರಾಂತಿ ಸ್ವರೂಪಗಳು, ದ್ವಾದಶಾದಿತ್ಯರು, ಅಧಿಮಾಸ-ಕ್ಷಯಮಾಸಲಕ್ಷಣ, ಶುಕ್ಲ-ಕೃಷ್ಣ ಪಕ್ಷಗಳು, ವಾರಗಳು, ನಕ್ಷತ್ರಗಳು, ಗಳಿಗೆಗಳು, ಕಾಲಾಕಾಷ್ಠಾ ನಿಮೇಷ, ವಿಷ್ಕಂಭವೇ ಮೊದಲಾಗಿ ಇಪ್ಪತ್ತೇಳು ಯೋಗಗಳು, ಬವಾದಿ ಹನ್ನೊಂದು ಕರಣಗಳು. ಸಾಧ್ವಯೋಗ, ಗುಳಿಕಸ್ವರೂಪ, ಜನ್ಮನಕ್ಷತ್ರ ಸ್ವರೂಪ, ಮೇಷಾದಿ ದ್ರೇಕ್ಕಾಣಸ್ವರೂಪ, ದಿವಾಸ್ವರೂಪ, ರಾತ್ರಿಸ್ವರೂಪ, ಸಂಧ್ಯಾಸ್ವರೂಪ ಮುಂತಾದ ವಿವರಗಳ ಸಂಕಲನ ಇಲ್ಲಿದೆ. ಇವೆಲ್ಲವನ್ನೂ ಮೂರ್ತಿ ಗಳಂತೆ ಬಗೆದು ಅವುಗಳಿಗೆ ಧ್ಯಾನಶ್ಲೋಕಗಳನ್ನು ಕೊಟ್ಟಿದ್ದಾರೆ. ಆಯಾ ಕಾಲಭೇದದಲ್ಲಿ

ಮಾಡಬೇಕಾದ ಕ್ರಿಯೆಗಳು, ಮಾಡಬಾರದ ಕ್ರಿಯೆಗಳು, ಕೊಡಬೇಕಾದ ದಾನ, ಅವುಗಳಲ್ಲಿ ಹುಟ್ಟಿದವರ ಸ್ವಭಾವ ಮುಂತಾದ ಫಲಜ್ಯೋತಿಷ ವಿವರಗಳು ಇವುಗಳನ್ನೂ ಹೇಳಿದ್ದಾರೆ. ಇವಲ್ಲದೆ ಕಾಳರಾಹು, ಅಪಸ್ಮಾರ, ಮಹಾಕಾಲ, ಮೃತ್ಯುದೇವತೆ, ಕೃತ್ಯಾ ಮುಂತಾದ ದೇವತೆಗಳ ಚಿತ್ರಣವೂ ಇದೆ. ನಿಧಿಗಳಲ್ಲೆಲ್ಲ ಇದೇ ತುಂಬ ದೊಡ್ಡದು. ಜ್ಯೋತಿಷದ ಎಲ್ಲ ವಿಚಾರಗಳೂ ಇಲ್ಲಿ ಕಾಣಸಿಗುತ್ತವೆ.

೬) ಆರನೆಯದು ವೈಷ್ಣವನಿಧಿ ; ಇದನ್ನು 'ವಿಷ್ಣುಕ್ಷೇತ್ರ ಸಾಲಿಗ್ರಾಮಾದಿ ಲಕ್ಷಣ ನಿರೂಪಣ'ವೆಂದು ಪುಷ್ಪಿಕೆ ಬಣ್ಣಿಸಿದೆ. ಇಲ್ಲಿ ಬ್ರಹ್ಮಾಂಡಪುರಾಣದ ಒಕ್ಕಣೆಯನ್ನನುಸರಿಸಿ ನೂರ ಹದಿನಾರು ದಿವ್ಯಸ್ಥಳಗಳು, ನೂರೆಂಟು ತಿರುಪತಿಗಳು' ಎಂಟು ಸ್ವಯಂವ್ಯಕ್ತ ಕ್ಷೇತ್ರಗಳು (ಶ್ರೀರಂಗ, ವೆಂಕಟಶೈಲ, ಶ್ರೀಮುಷ್ಣ, ತೋತಾದ್ರಿ, ಪುಷ್ಕರ, ಬದರಿ, ನೈಮಿಶಾರಣ್ಯ, ಸಾಲಿಗ್ರಾಮ) ಇವನ್ನು ಆಯಾ ದೇವತೆ, ವಿಮಾನ, ತೀರ್ಥ ಮುಂತಾದ ವಿವರಗಳೊಂದಿಗೆ ಪಟ್ಟಿ ಮಾಡಿದ್ದಾರೆ. ಶ್ರೀವೈಷ್ಣವ ಸಂಪ್ರದಾಯದ ಹನ್ನೆರಡು ಆಳ್ವಾರರು, ರಾಮಾನುಜರೇ ಮೊದಲಾಗಿ ಆಚಾರ್ಯರು, ಇವರ ವಿವರಗಳೂ ಇವೆ. ಪ್ರಪತ್ತಿಸೋಪಾನ. ಊರ್ಧ್ವಪುಂಡ್ರ ವಿಧಾನ, ತುಳಸೀಮಹಾತ್ಮೆ, ಯತಿರಾಜಸಪ್ತತಿ, ರಾಮಾನುಜಾಷ್ಟೋತ್ತರ ಈ ಪ್ರಕರಣ ಗ್ರಂಥಗಳ ಪೂರ್ಣ ಪಾಠವನ್ನು ಕೊಡಲಾಗಿದೆ. ವಿಷ್ಣುವಿನ ಪಂಚಬೇರ ಮೂರ್ತಿಗಳನ್ನು ವೈಖಾನಸ, ಪಾಂಚರಾತ್ರ ಎರಡೂ ಆಗಮಗಳಂತೆ ಕಾಣಿಸಿದ್ದಾರೆ. ಕಡೆಯಲ್ಲಿ ನೃಸಿಂಹ ಪುರಾಣದಲ್ಲಿ ಬರುವ ಶಾಲಿಗ್ರಾಮ ಲಕ್ಷಣವನ್ನೂ ವಿಸ್ತಾರವಾಗಿಯೆ ಉದ್ಧರಿಸಿದ್ದಾರೆ.

೭) ಏಳನೆಯದಾದ ಶೈವನಿಧಿಯಲ್ಲಿ 'ಶಿವಕ್ಷೇತ್ರಬಿಲ್ವಾದಿಮಹಾತ್ಮ್ಯ ಕಥನ' ಇದೆ. ಲಲಿತಾಗಮ, ವಾಯವೀಯಸಂಹಿತೆ, ಶಿವರಹಸ್ಯ, ಸ್ಕಾಂದಪುರಾಣ (ವೀರ ಮಾಹೇಶ್ವರ ಕಾಂಡ), ಹೇಮಾದ್ರಿಯ ದಾನಕಾಂಡ ಮುಂತಾದ ಆಕರಗಳಿಂದ ನೂರ ಹದಿಮೂರು ಶೈವಕ್ಷೇತ್ರಗಳು, ಶಿವನ ಒಂಬತ್ತು ಬೇರ ಮೂರ್ತಿಗಳು, ಪಾರ್ಥಿವಾದಿ ಲಿಂಗಭೇದ, ಅರವತ್ತು ಮೂವರು ಪುರಾತನರು (ಅವರ ಹೆಸರು, ವರ್ಣ, ಆಶ್ರಮ ಧರ್ಮ, ಸ್ವಕ್ಷೇತ್ರ ಮುಂತಾದ ವಿವರಗಳೊಂದಿಗೆ) ಈ ವಿಚಾರಗಳು ಬಂದಿವೆ. ರುದ್ರಾಕ್ಷಿ ಮಾಹಾತ್ಮ್ಯ, ಬಿಲ್ವಮಾಹಾತ್ಮ್ಯ, ಭಸ್ಮಮಾಹಾತ್ಮ್ಯ, ಮಾಲಾಚೀ ದ್ವಾದಶನಾಮ ಸ್ತೋತ್ರ ಇವುಗಳ ಪೂರ್ಣ ಪಾಠವೂ ಇದೆ.

ವೈಷ್ಣವನಿಧಿಯು ಬಳಕೆಯಲ್ಲಿರುವ ಶ್ರೀವೈಷ್ಣವ ಸಂಪ್ರದಾಯದ ಇಡೀ ಚೌಕಟ್ಟನ್ನು ಸಂಗ್ರಹವಾಗಿ ಕಾಣಿಸಿರುವಂತೆಯೆ ಶೈವನಿಧಿಯು ಶೈವಸ್ಮಾರ್ತ, ವೀರಶೈವ ಸಂಪ್ರದಾಯಗಳ ಮೂಲಸ್ವರೂಪವನ್ನು ತೋರಿಸುತ್ತದೆ.

೮) ಎಂಟನೆಯದಾದ ಆಗಮನಿಧಿ ನಮ್ಮ ಸಾರಸ್ವತ ಸಂಪತ್ತನ್ನು ಕುರಿತದ್ದು. 'ಆಗಮತಂತ್ರೋಪನಿಷತ್ ಪ್ರಭೇದ ತತ್ತತ್ ಕರ್ತೃಪ್ರಭೇದ ನಿರೂಪಣ'ವೆಂಬ ಒಕ್ಕಣೆಯಿದೆ. ಮಹಾಭಾರತ, ಭಾಗವತ, ರಾಮಾಯಣ, ಮತ್ತು ಸ್ಕಾಂದಪುರಾಣ

ಗಳಲ್ಲಿ ಬರುವ ವಿಭಾಗಗಳನ್ನನುಸರಿಸಿ ಶ್ಲೋಕಸಂಖ್ಯೆಯನ್ನು ಎಣಿಸಿ ಹೇಳಿರುವುದು ಇಲ್ಲಿನ ವಿಶೇಷ. ಇವೆಲ್ಲ ಕೃಷ್ಣರಾಜಒಡೆಯರದ್ದೇ ಶ್ಲೋಕಗಳು. ನಾಲ್ಕು ವೇದಗಳು, ನಾಲ್ಕು ಉಪವೇದಗಳು, ಆರು ವೇದಾಂಗಗಳು, ಉಪನಿಷತ್ತುಗಳು, ಹದಿನೆಂಟು ಪುರಾಣಗಳು, ಸ್ಮೃತಿಗಳು, ವೈಷ್ಣವಾಗಮಗಳು (ವೈಖಾನಸ, ಪಾಂಚರಾತ್ರ, ಪ್ರತಿಷ್ಠಾಸಾರ, ವಿಜ್ಞಾನಲಲಿತ), ಶೈವಾಗಮಗಳು (ಕಾಮಿಕವೇ ಮೊದಲಾದ ಇಪ್ಪತ್ತೆಂಟು), ವೈದಿಕತಂತ್ರಗಳು (ಚಂದ್ರಜ್ಞಾನ, ಸರ್ವಜ್ಞಾನೋತ್ತರ ಇತ್ಯಾದಿ), ತೊಂಬತ್ತಾರು ಶಾಕ್ತಾಗಮಗಳು, ಇವುಗಳ ಸ್ವರೂಪವನ್ನು ಇಲ್ಲಿ ಕಾಣಿಸಿದ್ದಾರೆ. ಪಂಚಾಯತನ ಪೂಜಾಕ್ರಮವನ್ನು ಹೇಳುತ್ತ ದೇವೀಪಂಚಾಯತನಕ್ಕೆ ಗುರುಗಳನ್ನು ಹೇಳಿ, ಮುಂದಕ್ಕೆ ಕನ್ನಡದಲ್ಲೇ ವಿವರಗಳನ್ನು ಬರೆದಿದ್ದಾರೆ. 'ಕಾಳಹಸ್ತಿವಿಲಾಸ'ದಿಂದ ಗೌರೀಪಂಚಾಯತನ ವಿಚಾರ ಎತ್ತಿಕೊಂಡಿದ್ದಾರೆ. ಕಡೆಯಲ್ಲಿ "ಶಾಲೀವಾಹನ ಶಕವರ್ಷಗಳು ೧೭೫೩ಳ ವರ್ತಮಾನವಾದ ಖರಸಂವತ್ಸರ ಜ್ಯೇಷ್ಠಶುದ್ಧ ೭ ಗುರುವಾರದಲ್ಲು" ಬರೆದಿದ್ದೆಂಬ ಒಕ್ಕಣೆಯಿದೆ.

೮) ಕಡೆಯದು ಕೌತುಕನಿಧಿಯೆನಿಸಿಕೊಂಡಿದೆ. ಕೌತುಕ ಎನ್ನುವ ಮಾತಿಗೆ ಕುತೂಹಲ, ಹರ್ಷ, ಉತ್ಸವ ಎನ್ನುವ ಅರ್ಥಗಳಿವೆ. ಸಂತೋಷಕ್ಕಾಗಿ ಆಡುವ ಆಟಗಳನ್ನು ಇಲ್ಲಿ ಕೌತುಕವೆಂದು ಕರೆದಿದ್ದಾರೆ. ಈ ನಿಧಿಯ ಆರಂಭದಲ್ಲೇ ಚಾಮುಂಡೇಶ್ವರಿ ಗಂಜೀಫ಼ು ಎಂಬಾಟದ ವಿಸ್ತಾರವಾದ ವಿವರಣೆಯಿದೆ; ಇದರ ಕ್ರಮವನ್ನು 'ಶ್ರೀಕೃಷ್ಣರಾಜ ಮಹಾರಾಜ ಕಂಠೀರವ'ರೇ ವಿರಚಿಸಿದ್ದೆಂಬ ಒಕ್ಕಣೆಯೂ ಇದೆ. ಮುಂದೆ ಜಗನ್ಮೋಹನ ನವೀನ ದಶಾವತಾರ, ನವಗ್ರಹ, ದೇವೀ ದಶಾವತಾರ, ಪಂಚಪಾಂಡವ, ದಿಕ್ಪಾಲ, ಮನೋಹರ, ಸರ್ವಮಂಗಳಾ, ನವರತ್ನ ಎಂಬ ಗಂಜೀಫ಼ು ಆಟದ ಬೇರೆಬೇರೆ ಬಗೆಗಳನ್ನು ಹೇಳಿದ್ದಾರೆ. ಪಗಡೆ (ಪೇಟಿಕಾ) ಆಟದ ಕೃಷ್ಣರಾಜ ಪೀಟು, ಸದ್ಯೋಜಾತಪೀಟು, ರಾಮಪೀಟು, ಎಂಟು ಮುಖದ ಪಗಡೆ, ಷಣ್ಮುಖದ ಪಗಡೆ, ಬುರುಜಿನ ಪಗಡೆ, ನವಗ್ರಹದ ಪಗಡೆ, ಭೂಚಕ್ರದ ಪಗಡೆ, ಶ್ರೀಚಕ್ರದ ದಶದಳದ ಪಗಡೆ—ಈ ಪ್ರಭೇದಗಳನ್ನೂ ಕಾಣಿಸಿದ್ದಾರೆ. "ಜ್ಯೋತಿಃಶಾಸ್ತ್ರ ರೀತ್ಯಾ ಯಲ್ಲಾ ಆಟವು ಆಡಬಹುದು" ಎಂಬ ಸೂಚನೆಯೂ ಬಂದಿದೆ. ಕಡೆಯಲ್ಲಿ ಆನೆಕಟ್ಟಿನ ಆಟ, ಕುರಿತ ಅಕ್ಷರವನ್ನು ಹೇಳುವುದಕ್ಕೆ ಶ್ಲೋಕಗಳು (ಸಂಖ್ಯೆಯಿಂದ ಅಕ್ಷರಕ್ರಮ, ಅಕ್ಷರಗಳಿಂದ ಸಂಖ್ಯೆಯನ್ನು ತಿಳಿಯುವ ಕ್ರಮ), ಕೈಯಲ್ಲಿ ಹಿಡಿದ ಪದಾರ್ಥವನ್ನು ನೋಡದೆ ತಿಳಿದು ಹೇಳುವ ಪದ್ಯಗಳು, ದೇವೀಸಾಯುಜ್ಯ ಮುಕ್ತಿ ಆಟವನ್ನು ಕುರಿತ ಪದ್ಯಗಳು (ಕನ್ನಡ ಸೀಸಮಾಲಿಕೆ) ಮತ್ತು ಕಾರಣ–ಕಾರ್ಯಗಳ ಲೆಕ್ಕ ಇವೆ.

ಈ ನಿಧಿಯೂ ಮಹಾರಾಜರ ಸ್ವಂತರಚನೆಯೆ ಎನ್ನಬಹುದು. "ಶಾಲಿವಾಹನ ಶಕವರ್ಷಂಗಳು ೧೭೪೫ನೇ ಚಿತ್ರಭಾನು, ಸಂವತ್ಸರದ ಆಷಾಢ ಶುದ್ಧ ೧೧ ಭಾನುವಾರದಲ್ಲು" ಎಂಬ ಒಕ್ಕಣೆ ಈ ನಿಧಿಯ ಮೊದಲ ಭಾಗದಲ್ಲಿ ಬಂದಿದೆ.

ಶ್ರೀಮತಿ-ವಜ್ರಜಂಘರ ಕಥಾಪ್ರಸಂಗ : ಶೀಲಾಂಕ-ಪಂಪ

ಡಾ. ಸರಸ್ವತಿ

ಕ್ರಿ. ಶ. ಒಂಬತ್ತನೆಯ ಶತಮಾನದಲ್ಲಿದ್ದ ಶೀಲಾಂಕನ ಪ್ರಾಕೃತದ 'ಚಉಪ್ಪನ್ನ ಮಹಾಪುರಿಸ ಚರಿಯಂ' ಶ್ವೇತಾಂಬರ ಪರಂಪರೆಯ ಪ್ರಾತಿನಿಧಿಕ ಕಾವ್ಯವಾಗಿದೆ. ಈ ಮಹಾಪುರಾಣಾಂತರ್ಗತವಾಗಿ ಬರುವ 'ರಿಸಹಸಾಮಿ—ಭರಹಚಕ್ಕವಟ್ಟಿ ಚರಿಯಂ' ಎಂಬ ಕಥಾಭಾಗದಲ್ಲಿ ವೃಷಭನಾಥನ ಚರಿತ್ರೆಯು ಸಾಕಷ್ಟು ವಿಸ್ತೃತವಾಗಿ ವರ್ಣಿತವಾಗಿದೆ. ಕ್ರಿ. ಶ. ಹತ್ತನೆಯ ಶತಮಾನದಲ್ಲಿದ್ದ ಪಂಪನ 'ಆದಿಪುರಾಣ' ವೃಷಭನಾಥನ ಕಥೆಯನ್ನು ನಿರೂಪಿಸುವ ಸ್ವತಂತ್ರವಾದ ಕನ್ನಡ ಕಾವ್ಯವಾಗಿದೆ.

ಪ್ರಸ್ತುತ ಲೇಖನದಲ್ಲಿ, ಈ ವಿಭಿನ್ನ ಪರಂಪರೆಯ (ಶ್ವೇತಾಂಬರ–ದಿಗಂಬರ) ಕವಿಗಳಲ್ಲಿ ಶ್ರೀಮತಿ-ವಜ್ರಜಂಘರ ಪ್ರಸಂಗವು ಮೂಡಿ ಬಂದಿರುವ ವಿಧಾನವನ್ನು ಪರಿಶೀಲಿಸುವ ಪ್ರಯತ್ನವನ್ನು ಮಾಡಲಾಗಿದೆ.

ಆದಿತೀರ್ಥಂಕರನ ಭವಾವಳಿಗಳಲ್ಲಿ ನಾಲ್ಕನೆಯ ಭವವಾದ ವಜ್ರಜಂಘ ಭವದ ನಿರೂಪಣೆ, ಶ್ವೇತಾಂಬರ—ದಿಗಂಬರ ಕಥಾಪರಂಪರೆಗಳಲ್ಲಿ ಮೂಡಿಬಂದಿರುವ ವಿಧಾನ ರೋಚಕವಾದುದು. ಪೂರ್ವಭವದ ಸ್ನೇಹಾನ್ವಿತವಾಗಿ ಬಂದ ಭಾವದಿಂದ ಶ್ರೀಮತಿ/ಶ್ರೀಕಾಂತೆ ವಜ್ರಜಂಘರು ವಿವಾಹವಾದುದು, ತಮ್ಮ ವೈವಾಹಿಕ ಜೀವನದ ಜೊತೆಗೆ ಅವರು ಅಳವಡಿಸಿಕೊಂಡಿದ್ದ ಧಾರ್ಮಿಕ ಪ್ರಜ್ಞೆ, ಅವರಲ್ಲಿದ್ದ ಉತ್ಕಟ ಪ್ರೀತಿ, ಸಹ ಮರಣ-ಈ ಕಥಾಂಶಗಳ ಚೌಕಟ್ಟಿನಲ್ಲಿಯೇ ಎರಡೂ ಕಥಾಪರಂಪರೆಗಳು ಬರುತ್ತವೆಯಾದರೂ, ಅಲ್ಲಲ್ಲಿಯೇ ಕೆಲವು ಕುತೂಹಲಕಾರಿಯಾದ ವ್ಯತ್ಯಾಸಗಳು ಕಂಡು ಬರುತ್ತವೆ.

ಶೀಲಾಂಕನಲ್ಲಿ ಬರುವ ಕಥಾಭಾಗದ ಸಂಕ್ಷಿಪ್ತ ವಿವರ ಹೀಗಿದೆ—

ಜಂಬೂದ್ವೀಪದ ಪುಷ್ಕಲಾವತಿ ಎಂಬ ವಿಷಯದಲ್ಲಿರುವ ಲೋಕಾರ್ಗಲ ಎಂಬ ನಗರದ ರಾಜ ಸುವರ್ಣಜಂಘ. ಆತನ ಹೆಂಡತಿ ಲಕ್ಷ್ಮಿ ಎಂಬುವಳು. ಸ್ವರ್ಗದಿಂದ

ಚ್ಯುತನಾದ ಲಲಿತಾಂಗದೇವನು ಇವರಿಗೆ ಪುತ್ರನಾಗಿ ಜನಿಸಿದನು. ಈತನಿಗೆ ವಜ್ರಜಂಘ ನೆಂದು ಹೆಸರಾಯಿತು. ಆತನ ಬಳಿಕ ಚ್ಯುತಳಾದ ಸ್ವಯಂಪ್ರಭೆಯು, ವಜ್ರದತ್ತರಾಜ ಹಾಗೂ ಧಾರಿಣಿಯರಿಗೆ ಮಗಳಾಗಿ ಹುಟ್ಟಿದಳು. ಅವಳಿಗೆ ಶ್ರೀಕಾಂತೆ (ಸಿರಿಕಾಂತೆ) ಎಂದು ಹೆಸರಿಡಲಾಯಿತು. ಈಕೆಗೆ ಯೌವನ ಪ್ರಾಪ್ತಿಯಾಗಲು ತಂದೆ ಸ್ವಯಂ ವರವನ್ನು ವ್ಯವಸ್ಥೆ ಮಾಡಿದನು. ಈಕೆಗೆ ಪೂರ್ವಭವದ ಭಾಸದಿಂದಾಗಿ ಸ್ನೇಹಮೂಡಿ ವಜ್ರಜಂಘನನ್ನು ವರಿಸಿದಳು. ವಿವಾಹಿತರಾದ ಇವರು ಸಕಲ ಭೋಗಭಾಗ್ಯಗಳನ್ನನು ಭವಿಸಿದರು. ಪೂರ್ವಭವಾಭ್ಯಾಸದಿಂದ ಧರ್ಮ ಜಾಗೃತರಾಗಿದ್ದರು. ಹೀಗಿರುವಲ್ಲಿ ವಜ್ರಜಂಘನ ತಂದೆ, ವಜ್ರಜಂಘನಿಗೆ ರಾಜ್ಯಾಭಿಷೇಕ ಮಾಡಿ ಪ್ರವ್ರಜ್ಯೆಯನ್ನು ಹೊಂದಿದನು.

ವಜ್ರಜಂಘನಿಗೆ ಶ್ರೀಕಾಂತೆಯಲ್ಲಿ ಮಗನೊಬ್ಬನಾದನು. ಬೆಳೆದು ಯೌವನ ಸಂಪನ್ನನಾದನು.

ಒಮ್ಮೆ ಧವಲಗೃಹದ ಏಳನೆಯ ನೆಲೆಯಲ್ಲಿ ವಜ್ರಜಂಘನಿದ್ದನು. ಆತನ ಕೂದಲನ್ನು ಶ್ರೀಕಾಂತೆ ನೇವರಿಸುತ್ತಿದ್ದಳು. ಆತನ ಕಿವಿಯ ಬಳಿ ಒಂದು ನೆರೆಗೂದಲನ್ನು ಕಂಡು ಅವಳು ಉದ್ವಿಗ್ನಗೊಂಡಳು. ಆಗ ವೈರಾಗ್ಯ ಪರನಾದ ವಜ್ರಜಂಘನು ಪತ್ನಿಯನ್ನು ಕುರಿತು ವೈರಾಗ್ಯದ ಉಪದೇಶವನ್ನು ಮಾಡಿದನು.

ಅವರಲ್ಲಿ ವೈರಾಗ್ಯ ಭಾವವು ಮನೆಮಾಡಿಕೊಂಡಿದ್ದ ದಿನಗಳಲ್ಲಿ, ರಾಜಾಕಾಂಕ್ಷಿ ಯಾದ ಮಗನು, ಅವರನ್ನು ಧೂಮ ಪ್ರಯೋಗದಿಂದ ಸತಿಗೃಹದಲ್ಲಿ ಕೊಂದನು.

'ಆದಿಪುರಾಣ'ದಲ್ಲಿ ಈ ಕಥೆಯ ವಿನ್ಯಾಸ ಬೇರೆಯಾಗಿರುವುದು ಕಂಡುಬರುತ್ತದೆ. ನಾಮವ್ಯತ್ಯಾಸಗಳೂ ಇವೆ.

ಆದಿಪುರಾಣದಲ್ಲಿ ಈ ಭವಾವಳಿಯ ನಿರೂಪಣೆಯಲ್ಲಿ ಕಂಡುಬರುವ ಕಥಾ ಘಟ್ಟಗಳು ಹಲವಾರು.

ಲಲಿತಾಂಗದೇವನು ಸ್ವರ್ಗದಿಂದ ಚ್ಯುತನಾಗಿ ಪುಷ್ಕಳಾದರೇ ದೇಶದ ರಾಜ ವಜ್ರಬಾಹುವಿಗೂ ರಾಣಿ ಸೌಂದರಿಗೂ ವಜ್ರಜಂಘನೆಂಬ ಮಗನಾಗಿ ಹುಟ್ಟಿದುದು— ಸ್ವಯಂಪ್ರಭೆಯು ವಜ್ರದಂತ ನೃಪತಿಗೂ ಲಕ್ಷ್ಮೀಮತಿಗೂ ಶ್ರೀಮತಿಯೆಂಬ ಮಗಳಾಗಿ ಹುಟ್ಟಿದುದು—ಪಂಡಿತೆಯಿಂದ ಆಕೆ ಕಲಾಪ್ರವೀಣೆಯಾದುದು—ದೇವಸಂಕುಲವನ್ನು ನೋಡಿ ಶ್ರೀಮತಿ ಜಾತಿಸ್ಮರೆಯಾಗಿ ಮೂರ್ಛೆ ಹೋದುದು—ತಂದೆತಾಯಿಗಳು ವಿಚಾರಿಸಲು ಬಂದುದು—ವಜ್ರದಂತ ಚಕ್ರವರ್ತಿಯ ಆಯುಧಾಗಾರದಲ್ಲಿ ಚಕ್ರರತ್ನ ಉತ್ಪನ್ನ—ಯಶೋಧರ ಮುನಿಗಳ ಕೇವಲ ಜ್ಞಾನೋದಯ—ಕೇವಲಿಗಳನ್ನು ಪೂಜಿಸಿ ಅವಧಿಜ್ಞಾನ ಸಂಪನ್ನನಾಗಿ ವಜ್ರದಂತನು ದಿಗ್ವಿಜಯಕ್ಕೆ ತೆರಳಿದುದು—ಪಂಡಿತೆ ಶ್ರೀಮತಿಯ ಮನದ ಅಳಲನ್ನು ಅರಿಯುವುದು—ಶ್ರೀಮತಿಯ ಹಿಂದಿನ ಭವದ ವೃತ್ತಾಂತ—ಶ್ರೀಮತಿ ಬರೆದುಕೊಟ್ಟ ಚಿತ್ರಪಟದಿಂದ ಪಂಡಿತೆಯು ವಜ್ರಜಂಘನನ್ನು

ಸಂದರ್ಶಿಸುವುದು-ದಿಗ್ವಿಜಯದಿಂದ ಹಿಂದಿರುಗಿದ ವಜ್ರದಂತನು ಮಗಳಿಗೆ ಸಮಾಧಾನ ಹೇಳುವುದು-ವಜ್ರದಂತ ಮೊದಲಾದವರ ಭವಾಂತರ ಕಥೆ-ವಜ್ರಜಂಘ ಶ್ರೀಮತಿಯರ ವಿವಾಹ—ಪುತ್ರರ ಜನನ—ವಜ್ರದಂತ ವಜ್ರಬಾಹುಗಳ ವೈರಾಗ್ಯ—ವಜ್ರಜಂಘನು ಪುಂಡರೀಕಿಣಿಯಲ್ಲಾದ ಅರಾಜಕತೆಯನ್ನು ಹೋಗಲಾಡಿಸಲು ಶ್ರೀಮತಿಯೊಂದಿಗೆ ಪ್ರಯಾಣ ಬೆಳೆಸಿದುದು—ಚಾರಣ ಮುನಿಗಳಿಗೆ ಆಹಾರದಾನ ನೀಡಿದುದು—ತನ್ನ ಮಂತ್ರಿ ಮೊದಲಾದವರ ಭವವೃತ್ತಾಂತವನ್ನರಿತುದು—ಪುಂಡರೀಕಿಣಿಯನ್ನು ನಿಷ್ಕಂಟಕ ಗೊಳಿಸಿ ಹಿಂದಿರುಗಿದುದು—ಕಾಲಾನಂತರ ಸೆಜ್ಜೆಮನೆಯಲ್ಲಿ ಶ್ರೀಮತಿ ವಜ್ರಜಂಘರು ಗವಾಕ್ಷದ ಬಾಗಿಲನ್ನು ತೆರೆಯುವುದನ್ನು ಮರೆತು ಮಲಗಿರುವಾಗ ಹೊಗೆ ಸುತ್ತಿಕೊಂಡು ಸಾಯುವುದು—ಈ ವಿಶಾಲವಾದ ಹರವಿನಲ್ಲಿ ಶ್ರೀಮತಿ—ವಜ್ರಜಂಘರ ಭವವು ಆದಿಪುರಾಣದಲ್ಲಿ ಚಿತ್ರಿತವಾಗಿದೆ.

ಜಿನಸೇನಾಚಾರ್ಯರ ಪೂರ್ವಪುರಾಣವನ್ನನುಸರಿಸಿದಂತೆ ಪಂಪನು ನಿರೂಪಿಸಿರುವ ಈ ಭವದ ಕಥೆಯಲ್ಲಿ ಕಥಾಘಟ್ಟದ ಹರವಿನ ಜೊತೆಗೆ, ಜಟಿಲತೆಯೂ ಕಂಡು ಬರುತ್ತದೆ. ಹಲವಾರು ಭವ ಸಂಬಂಧಗಳು ರೂಪಗೊಳ್ಳುವ ಭವಾವಳಿಯು ನಿಗೂಢತೆ ಚಿತ್ರಿತವಾಗಿದೆ. ಶೀಲಾಂಕನ ಸಂಕ್ಷಿಪ್ತ ಸರಳ ಕಥಾವಿನ್ಯಾಸದಲ್ಲಿ ಈ ಒಂದು ಚಿತ್ರಣ ಕಂಡು ಬರುವುದಿಲ್ಲ.

ಶ್ರೀಮತಿ ವಜ್ರಜಂಘರ ವಿವಾಹದ ಹಿನ್ನೆಲೆಯಲ್ಲಿರುವ ವಿವರಗಳು ಎರಡೂ ಕಾವ್ಯಗಳಲ್ಲಿ ವಿಭಿನ್ನರೀತಿಯಲ್ಲಿ ಆಳವಟ್ಟಿವೆ. ಒಂದು ಕಡೆ ಸ್ವಯಂವರದ ಹಿನ್ನೆಲೆ ಮೂಡಿ ಬಂದಿದ್ದರೆ; ಮತ್ತೊಂದೆಡೆ ಚಿತ್ರಪಟದ ವೃತ್ತಾಂತ ಮೂಡಿ ಬಂದಿದೆ. ಪಂಪನು ನೀಡುವ ವಿವರಗಳಲ್ಲಿ ಜಾನಪದೀಯ ರೋಚಕತೆ ಕಂಡುಬರುತ್ತದೆ. ಪಂಡಿತೆಯು ಶ್ರೀಮತಿ ಬರೆದುಕೊಟ್ಟ ಚಿತ್ರಪಟವನ್ನು ಹಿಡಿದು ವಜ್ರಜಂಘನನ್ನು ಪತ್ತೆಹಚ್ಚುವ ಸಂದರ್ಭದಲ್ಲಿ ಇದನ್ನು ಗುರುತಿಸಬಹುದಾಗಿದೆ. ಎರಡೂ ಕಾವ್ಯಗಳಲ್ಲಿ ಪೂರ್ವಜನ್ಮ ಸ್ಮರಣೆಯ ವಿಚಾರವಿದ್ದರೂ ಪಂಪನ ಕಾವ್ಯದಲ್ಲಿ ಅದು ಎದ್ದು ಕಾಣುತ್ತದೆ.

ಈ ದಂಪತಿಗಳು ಭೋಗ ಭಾಗ್ಯಗಳನ್ನನುಭವಿಸುತ್ತಿದ್ದಂತೆ ಧರ್ಮನಿರತರೂ ಆಗಿದ್ದರು ಎಂಬುದು ಎರಡೂ ಕಾವ್ಯಗಳಲ್ಲಿ ಬರುವ ವಿಷಯವಾದರೂ, ಶೀಲಾಂಕನು ಕೊಡುವ ಒಂದು ಸುಂದರ ಚಿತ್ರಣ ಪಂಪನಲ್ಲಿಲ್ಲ. ವಜ್ರಜಂಘನ ಚೇತನ ವೈರಾಗ್ಯದತ್ತ ಒಲಿಯುತ್ತದೆಂಬುದಕ್ಕೆ ಕಲ್ಪಿಸಿರುವ ಸನ್ನಿವೇಶ ಮೋಹಕವಾದುದು. ಆತ್ಮೀಯ ಸನ್ನಿವೇಶವೊಂದರಲ್ಲಿ ನೆರೆಗೂದಲನ್ನು ಕಾಣುವ ರೀತಿ, ಅದರೊಂದಿಗೆ ತಂದಿರುವ ವೈರಾಗ್ಯ ಭಾವನೆ ಮನಸೆಳೆಯುವಂತಿದೆ.

ಗಂಡನ ತಲೆಯನ್ನು ನೇವರಿಸುತ್ತಿದ್ದ ಶ್ರೀಕಾಂತೆ ಗಂಡನ ನೆರೆಗೂದಲನ್ನು ಕಂಡು ಉದ್ವಿಗ್ನಗೊಂಡಳು. ಆಗ ವೈರಾಗ್ಯಪರನಾದ ವಜ್ರಜಂಘನು ಹೇಳಿದ ಮಾತುಗಳಿವು—

"ಸುಂದರೀ, ಏಕೆ ಉದ್ವಿಗ್ನಳಾಗಿರುವೆ ? ಧರ್ಮವೃಕ್ಷದ ಬೀಜವಾಗಿರುವ ಇದು ನೆರೆಗೂಲಿನ ನೆಪದಲ್ಲಿ ಬಂದಿದೆಯಷ್ಟೆ—ಏಕೆಂದರೆ ಕೂದಲು ನಿಹಿತವಾದ ಹೃದಯದ ಕಲುಷಭಾವವನ್ನು, ಸುಂದರಿಯೇ, ಹೊರ ಹಾಕುತ್ತದೆ. ಧರ್ಮದಲ್ಲಿ ಬುದ್ಧಿಯನ್ನು ಪ್ರೇರೇಪಿಸುತ್ತದೆ. ಮುಪ್ಪಿಗೆ ಸಮಾನವಾದ ಸುಖವುಳ್ಳವನಿಲ್ಲ (ಗೆಳತಿಯಿಲ್ಲ ?) (ಪದ್ಯ ೯೪ ಪು. ೩೦).

ವಿಷಯಸಂಗವನ್ನು ಪರಿಹಾರಮಾಡು. ಅಸಮಂಜಸವಾದುದನ್ನು ತ್ಯಜಿಸು. ತಪಸ್ಸನ್ನು ಆಚರಿಸು—ಹೀಗೆಂದು ಕಿವಿಯ ಮೂಲಕ್ಕೆ ಬಂದಂತಹ ನೆರೆಗೂದಲು ಗುಟ್ಟಾಗಿ ಹೇಳುತ್ತದೆಯೋ ಎನ್ನುವಂತಿದೆ. (ಪದ್ಯ ೯೫ ಪು. ೩೦)

ಮದ್ಯ ಮುಂತಾದುದರಲ್ಲಿ ಆಸಕ್ತವಾದ ಮನ (?) ಯೌವನದ ಮಧುವಿನಿಂದ ಬೋಧಿತವಾದ ರಾಗೋತ್ಪನ್ನಮಾಡಿದ ಮದವು, ಸುಂದರಿಯೇ, ಬೇಗನೆ ನಿದ್ರೆಯಲ್ಲಿಯೋ ಎನ್ನುವಂತೆ ಮುಪ್ಪಿನಿಂದ ಬೇಗನೆ ಹೊರಟು ಹೋಗುತ್ತದೆ. (೯೬–೩೦)

ದೂರೀಕೃತವಾದ ಯೌವನದ ಭಾರದಿಂದ ಮರೆಯಾದ ಶುಭ್ರ ಹೃದಯಗಳು ಮುಪ್ಪಿನಿಂದ ಶರತ್ಕಾಲದಲ್ಲಿ (?) ಸರೋವರದ ನೀರಿನಂತೆ (ಶುಭ್ರವಾಗಿ) ಆಗುವುವು. (೯೭–೩೦)

ಈ ರೀತಿಯಾಗಿ ಉಂಟಾದ ಹಿರಿದಾದ ಸಂವೇಗದಿಂದ ಮೂಡಿದ ಪ್ರವ್ರಜ್ಯೆಯ ವ್ಯವಸಾಯವುಳ್ಳವನಾಗಿ ರಾಜನು ಬಂಧನ ಕಳಚಿದವನಾಗಿ ಸಹಚರಿ ಸಮೇತನಾಗಿ ಇರುವಷ್ಟರಲ್ಲಿ"...(೯೪–೩೦)[1]

ಸಾಂಸಾರಿಕ ಆತ್ಮೀಯ ವಾತಾವರಣದಲ್ಲಿ ಧುತ್ ಎಂದು ತಲೆದೋರುವ ವೈರಾಗ್ಯ ಭಾವ, ಮುಪ್ಪನ್ನು ಉತ್ಸವದಂತೆ ಎದುರುಗೊಳ್ಳುವ ವಜ್ರಜಂಘನ ಮಾನಸಿಕ ಪರಿಪಕ್ವತೆ ಇವುಗಳನ್ನು ಕವಿ ಐದು ಪದ್ಯಗಳಲ್ಲಿ ಮೂಡಿಸಿದ್ದಾನೆ.

ಶ್ರೀಮತಿ ವಜ್ರಜಂಘರು ಧೂಮಕ್ಕೆ ಸಿಲುಕಿ ಸತ್ತ ವಿಚಾರವು ಎರಡೂ ಕಾವ್ಯಗಳಲ್ಲಿ ಬರುತ್ತದೆಯಾದರೂ, ಇದಕ್ಕೆ ಕಾರಣೀಭೂತವಾದ ಅಂಶದ ಬಗೆಗೆ ವಿವರಗಳು ಬೇರೆಯಾಗುತ್ತವೆ. ಶೀಲಾಂಕನು, ವಜ್ರಜಂಘ–ಶ್ರೀಮತಿಯರ ಮಗನೇ ಇದಕ್ಕೆ ಕಾರಣನಾದನೆಂದು ತಿಳಿಸಿದ್ದಾನೆ. ಆತ ಹೀಗೆ ಮಾಡಲು ಕಾರಣವಾದ ಅಂಶಗಳನ್ನು ಪಟ್ಟಿಮಾಡಿ ತಿಳಿಸುವವನಂತೆ, ಆತನ ದೂಷಿತವಾದ ಗುಣಸ್ವಭಾವಗಳನ್ನು, ಕವಿ ನಮ್ಮ ಮುಂದೆ ಇಡುತ್ತಾನೆ. ಆ ಘಾತುಕನಾದ ಪುತ್ರನು ತಂದೆಗೆ ಜನಿಸಿದ ವೈರಾಗ್ಯ ಭಾವವನ್ನು ಅರಿತವನಾಗಿರಲಿಲ್ಲ. (ಒಂದು ವೇಳೆ ತಿಳಿದಿದ್ದರೆ ಈ ಅಕೃತ್ಯವನ್ನು ಎಸಗದಂತಹ ತಾಳ್ಮೆಯನ್ನು ವಹಿಸುತ್ತಿದ್ದನೇನೋ). ಸಂಸಾರವನ್ನು ಹಗುರವಾಗಿ ತೆಗೆದುಕೊಂಡವನು, ಕೆಟ್ಟ ನಡತೆಯವನು, ಮೇಲಾಗಿ ರಾಜ್ಯಾಕಾಂಕ್ಷಿಯಾಗಿದ್ದವನು. ಭೋಗಾಭಿಲಾಷಿಯಾದವನು ಎಂಬೀ ಅಂಶಗಳನ್ನು ಕವಿ ಮಗನ ಅಕೃತ್ಯದ ಭೂಮಿಕೆಯನ್ನಾಗಿ ನೀಡಿದ್ದಾನೆ[2] (ಪಂಪನ ಪ್ರಕಾರ, ಶ್ರೀಮತಿ–ವಜ್ರಜಂಘರ ಮಕ್ಕಳು

ಉತ್ತಮ ಸಂಸ್ಕಾರವಂತರು. ಈಗಾಗಲೇ ದೀಕ್ಷೆಯನ್ನು ಪಡೆದುಕೊಂಡ ಧರ್ಮ ನಿಷ್ಠರು.)

ಜಿನಸೇನಾಚಾರ್ಯರನ್ನನುಸರಿಸಿರುವ ಪಂಪನಾದರೋ ವಜ್ರಜಂಘ-ಶ್ರೀಮತಿ ಯರ ಸಹಮರಣದ ವಿಚಾರವನ್ನು ಭಾವದೀಪ್ತಿಗೊಳಿಸಿ ವರ್ಣಿಸಿರುವನು. ಇಲ್ಲಿ ಅವರ ಮರಣಕ್ಕೆ ಕಾರಣವಾಗಿ ಬರುವ ವಿಷಯ ಅವರ ಮರವೆ. ಕಾಲಾಗರು ಧೂಪದ ಪರಿಮಳದ ಸುಗಂಧದ ಆಹ್ಲಾದವು ಬೀರುತ್ತಿದ್ದ, ಮಣಿದೀಪದ ಪ್ರಕಾಶವುಳ್ಳ ಶಯ್ಯಾ ಗೃಹದಲ್ಲಿ ಸಮುದ್ರ ನೊರೆಯಂತೆ ಬೆಳ್ಳಗಿರುವ ರೇಷ್ಮೆ ದುಪ್ಪಟಗಳನ್ನು ಹಾಸಿದ್ದ ಶಯ್ಯಾತಲ್ಪದಲ್ಲಿ ಈ ದಂಪತಿಗಳು ಸುಖವನ್ನನುಭವಿಸುತ್ತಾ ನಿದ್ರಾಪರವಶರಾದರು. ಆದರೆ ಆ ಸುಖದ ನಿವಾಸವೇ ಮರಣದ ಆವಾಸವಾಯಿತು. ಮುಚ್ಚಿದ ಗವಾಕ್ಷವನ್ನು ತೆರೆಯಲು ಮರೆತರು. ಧೂಪವು ನೀಳ್ದು ಕ್ರಮವಾಗಿ ಮಂದವಾಗಿ ಹರಡಿ...'ಆ ದಂಪತಿಯಂ ಪ್ರುದುಂಗೊಳಿಸಿ ಲೋಕಾಶ್ಚರ್ಯಮಂ ಮಾಡಿ ಕೋದುದು ಕೃಷ್ಣಾಗರು ಧೂಪಧೂಮನಿವಹಂ ಕೃಷ್ಣೋರಗಂ ಕೊಲ್ವವೊಲ್' (೫-೨೩) ಬಿಡದೆ ಹೊಗೆ ಸುತ್ತಲು 'ತೋಳಂ ಸಡಿಲಿಸದಾ ಪ್ರಾಣವಲ್ಲಭರ್ ಪ್ರಾಣಮನಂದೊಡೆಗಳೆದ.' (೫-೨೪) ಓಪರೋಪರು ಜೊತೆಜೊತೆಯಾಗಿ ಸಾಯುವ ಸ್ಥೈಪನ್ನು ಪಡೆದರು. ಮುಂದುವರಿದು ಪಂಪನು ಉನ್ನತವಾದ ದರ್ಶನವನ್ನು ಸಾರಿದ್ದಾನೆ. 'ಸಂಸೃತಿ ಭೋಗಂಗಳ್ ಭೋಗಿ ಭೋಗದಿಂ ವಿಷಮಂಗಳ್ ! (೫-೨೫)

ಈ ದರ್ಶನವನ್ನು ಸಾರಲು ಶ್ರೀಮತಿ-ವಜ್ರಜಂಘರ ಭೋಗ ಜೀವನದ ಒಂದು ಮಗ್ಗುಲನ್ನು ತೋರಿಸುವವನಂತೆ ಅವರ ಶಯನ ಮಂದಿರ ಹಾಗೂ ಧೂಪದ ವಿಚಾರಗಳನ್ನು ನೀಡಿದ್ದಾನೆ. ಭೋಗದ ತುತ್ತತುದಿಯಲ್ಲಿದ್ದ ಅವರು ಆ ಭೋಗವೇ ಕಾರಣವಾಗಿ ಅಸು ನೀಗಿದರು. ಶ್ರೀಮತಿ-ವಜ್ರಜಂಘರ ಸಹ ಮರಣವನ್ನು ಕವಿ ಹಂತ ಹಂತವಾಗಿ ನಮ್ಮ ಮುಂದೆ ಚಿತ್ರ ಬಿಡಿಸುವವನಂತೆ ಸುಂದರ ಪ್ರತಿಮಾ ವಿಧಾನದಿಂದ ಮೂಡಿಸಿದ್ದಾನೆ.

ಶೀಲಾಂಕನಾಗಲಿ, ಪಂಪನಾಗಲಿ ಈ ಪ್ರಸಂಗದಲ್ಲಿ ಸಾರುವ ಅಂಶವೇನೆಂದರೆ- ನಂಬಿದ ಪುತ್ರನಾಗಲಿ, ನೆಚ್ಚಿದ ಭೋಗವಾಗಲಿ ಜೀವಿಗೆ ಶಾಶ್ವತವಲ್ಲ. ಲೌಕಿಕ ಜೀವನ ದಿಂದ ಮಿಗಿಲಾದ ಆತ್ಮಸಾಕ್ಷಾತ್ಕಾರವೇ ಜೀವನದ ಹೆಗ್ಗುರಿ. ಉಳಿದುದೆಲ್ಲಾ ನಶ್ವರ ಎಂಬುದನ್ನು ಪರಂಪರಾನುಗತವಾಗಿ ಬಂದ ಕಥಾಶ್ರಯಗಳಿಂದ ಹೊರ ಹೊಮ್ಮಿಸಿದ್ದಾರೆ. ಅದನ್ನು ತಮ್ಮ ಪ್ರತಿಭಾಸಾಮರ್ಥ್ಯಕ್ಕೆ ತಕ್ಕಂತೆ ಕಾವ್ಯಭೂಮಿಕೆಯಲ್ಲಿ ಅಳವಡಿಸಿದ್ದಾರೆ. ಪಂಪನ ರೀತಿ ವಿಸ್ತೃತ, ಭಾವ ಗಂಭೀರ, ಶೀಲಾಂಕನ ರೀತಿ ಸಂಕ್ಷಿಪ್ತ, ಸರಳ, ನೇರ.

ಅಡಿಟಿಪ್ಪಣಿಗಳು :

1. ಸುಂದರಿ ; ಕಿಮುವ್ವಿಗ್ಗಸಿ ? ಧಮ್ಮತರುಬೀಯಮೋಯಂ ಪಲಿಯಚ್ಛಲೇಣಂ ಸಮಾಗಯಂ ತಿ, ಜಓ—

ಅವಣೇಇ ಕಲುಸಭಾವಂ ಸುಂದರಿ ! ಸನಿರೋರುಹಸ್ಸ ಹಿಯಯಸ್ಸ ।
ಕರೋಇ ಮಇಂ ಧಮ್ಮೇ ಜರಾವಿ ಸರಿಸೋ ಸುಹೀ (ಸಹೀ ?) ಣತ್ಥಿ ॥೯೪॥

ಪರಿಹರಸು ವಿಸಯಸಂಗಂ, ಉಜ್ಝ ಸು ಅಸಮಂಜಸಂ, ತವಂ ಚರಸು ।
ಇಯ ಭಣಇ ವ ಣಿಹ್ಯಯಂ ಸುಯಣು ! ಕಣ್ಣ ಮೂಲಾಗಯಂ ಪಲಿಯಂ ॥೯೫॥

ಮಜ್ಜಾಇಕ್ಕಮಣರಓ ಜೊವ್ವಣಮಹುಬೋಹಿಓ ಜಣಿಯರಾಓ ।
ಸಣಿಯಂ ಓಸರಇ ಮಓ ಸುಂದರಿ ! ನಿದ್ದ್ರಾವಿ ವಿ(ವ) ಜರಾಪ ॥೯೬॥

ವವಗಯ ಜೊವ್ವಣಗರುಯತ್ತಣೇಣ ಣಿಹುಯಾಇಂ ಪಯಇಧವಲಾಇಂ ।
ಸರಸಲಿಲಾಇಂ ವ ಸ ರವಿ ಜರಾವಿ ಜಾಯಂತಿ ಹಿಯಯಾ ಇಂ ॥೯೭॥

ಇಯ ಚಾತಗರುಯಸಂವೇಗ ಜಣಿಯ ಪವ್ವಜ್ಜಸಜ್ಜವವಸಾಗು ।
ಅಚ್ಛಇ ರಾಯಾ ಜಾ ಗಲಿಯ ಬಂಧಣೋ ಸಹಯರಿ ಸಮೇಓ ॥೯೮॥
(Chuppannamahapurisacariyam Prakrit Text Society—Varanasi 5 Ahmedabad 5)

2. ತಾವ ಯ ಸಂಜಾಯ ಮಹಾಮೋಹೇಣಂ ಅವಮಣಿಯಮಹಾರಾಯ
ಚಿತ್ತೇಣ ಸಂಸಾರಸುಲಹೇಣ ದುರ್ಜಣ ವ ಸಾಯುವವಸಿವಿಣಂ
ರಜ್ಜಕಂಖಿವಿಣ ಭೋಗಾಹಿಲಾಸಿಣಾ ಪುತ್ತೇಣ ಆಸುಜೀವಾವಹಾರಿಣಾ
ಧೂಯಪ್ಪಓಗೇಣಂ ರಇಹರಪಸುತ್ತೋ ಸಹ ಪಿಯಾಏ ವಾವಾಇಓ,
ಮರಿಊಣ ಉತ್ತರಕುರಾವಿ...ಸಮುಪ್ಪಣ್ಣೋತ್ತಿ ।
(ಅದೇ) (ಪುಟ 30)

ಅನು :

ಅಷ್ಟರಲ್ಲಿಯಾದರೋ ಮಹಾಮೋಹ ಹುಟ್ಟಿದಂತಹ ರಾಜನ ಚಿತ್ರವನ್ನು ತಿಳಿಯದಿದ್ದ, ಸಂಸಾರ ಸ್ಥಿತಿಯಲ್ಲಿ ಸುಲಭನಾಗಿರುವ, ಕೆಟ್ಟ ನಡತೆಯ ವಶನಾದ, ರಾಜ್ಯಾಕಾಂಕ್ಷಿಯಾದ, ಭೋಗಾಭಿಲಾಷಿಯಾದ ಪುತ್ರನಿಂದ ಶೀಘ್ರರೀತಿಯಿಂದ ಜೀವ ತೆಗೆಯುವ ಧೂಪದ ಪ್ರಯೋಗದಿಂದ ರತಿಗೃಹದಲ್ಲಿ ಪ್ರಿಯೆಯೊಡನೆ ಮಲಗಿದ್ದ (ವಜ್ರಜಂಘನು) ಕೊಲ್ಲಲ್ಪಟ್ಟನು. ಸತ್ತು ಉತ್ತರ ಕುರುವಿನಲ್ಲಿ...ಹುಟ್ಟಿದನು.

ವಾನಪ್ರಸ್ಥಾಶ್ರಮ

ಯು. ಕೃಷ್ಣಶರ್ಮಾ

ಭಾರತೀಯ ದರ್ಶನಗಳ ಪ್ರಕಾರ 'ಮೋಕ್ಷ'ವೇ ಪರಮ ಪುರುಷಾರ್ಥ. ಪರಮಾನಂದಾನುಭವದ ಸ್ಥಿತಿಯೇ ಮೋಕ್ಷ. ಪಾಂಚಭೌತಿಕವಾದ ಈ ಶರೀರದಲ್ಲಿ ಜೀವನಿಗೆ ದುಃಖಸಂಮಿಶ್ರವಾದ ಹಾಗೂ ಅತ್ಯಲ್ಪವಾದ ಸುಖ ದೊರೆಕೀತೇ ಹೊರತು ಪರಮಾನಂದವು ಅರ್ಥಾತ್ ದರ್ಶನಗಳು ತಿಳಿಸುವ ಬ್ರಹ್ಮಾನಂದವು ಅನುಭವಕ್ಕೆ ಬರಲಾರದು. ಯೋಗಿಗಳು ಮುನಿಗಳು ಮೊದಲಾದ ಮಹಾತ್ಮರಿಗೆ ಯೋಗಸಮಾಧಿಯಲ್ಲಿದ್ದಾಗ ಬ್ರಹ್ಮಾನಂದವೂ ಕೂಡ ಅನುಭವಕ್ಕೆ ಬರುತ್ತದೆಂದು ಹೇಳುತ್ತಾರೆ. ಮೋಕ್ಷ ಸಿಗುವವರೆಗೂ ಕೂಡ ಜೀವನಿಗೆ ಹುಟ್ಟು–ಸಾವೆಂಬ ಶಾರೀರಿಕ ಕ್ಲೇಶ ತಪ್ಪಿದ್ದಲ್ಲ. ಜೀವನು ಪರಮಾತ್ಮನಲ್ಲಿ ಲೀನನಾದಾಗ ಮೋಕ್ಷ ಸ್ಥಿತಿಯು ಸಿದ್ಧಿಸಿದಂತಾಗುತ್ತದೆಂದೂ ಹೇಳುತ್ತಾರೆ. ಜೀವಾತ್ಮನನ್ನು ಪರಮಾತ್ಮನಲ್ಲಿ ಲೀನವಾಗಿಸುವ ಬಗೆಯನ್ನು ಈ ಜನ್ಮದಲ್ಲೇ ನಾವು ಪ್ರಯತ್ನಪೂರ್ವಕ ಸಾಧನೆಯಿಂದ ಅರಿತದ್ದಾದರೆ ಮುಂದೆಂದಾದರೂ ನಮಗೆ ಪುನರಾವೃತ್ತಿರಹಿತವಾದ ಮೋಕ್ಷಸ್ಥಿತಿಯು ದೊರಕುತ್ತದೆಂದು ದರ್ಶನಗಳು ತಿಳಿಸುತ್ತವೆ. ಮೋಕ್ಷವೆಂಬುದು ಸ್ವಪ್ರಯತ್ನದಿಂದ ಸಾಧಿಸಿಕೊಳ್ಳಬೇಕಾದ ಸ್ಥಿತಿಯಾದುದರಿಂದ ಇದಕ್ಕಾಗಿ ಸಾಧನೆ ಉಪಾಸನೆಗಳನ್ನು ಕೈಕೊಳ್ಳಬೇಕಾದುದು ಅನಿವಾರ್ಯ. ಬ್ರಹ್ಮವಿದ್ಯೆ, ವೈರಾಗ್ಯ, ಧ್ಯಾನಯೋಗ, ಮುಂತಾಗಿ ಆತ್ಮಜ್ಞಾನಕ್ಕೆ ಕಾರಣಗಳನ್ನು ಹೇಳುತ್ತಾರೆ. ಆತ್ಮಜ್ಞಾನವು ಮೋಕ್ಷಕ್ಕೆ ನೇರವಾಗಿ ಕಾರಣವಾಗುವುದರಿಂದ ವೈರಾಗ್ಯ, ಧ್ಯಾನಯೋಗ, ಬ್ರಹ್ಮವಿದ್ಯೋಪಾಸನೆ ಮುಂತಾದವುಗಳ ಸಾಧನೆಗೆ ವಾನಪ್ರಸ್ಥಾಶ್ರಮವು ಪ್ರಶಸ್ತವೆಂದು ಪರಿಗಣಿಸಲಾಗಿದೆ.

ಬ್ರಹ್ಮಚರ್ಯ, ಗಾರ್ಹಸ್ಥ್ಯ ವಾನಪ್ರಸ್ಥ, ಸಂನ್ಯಾಸವೆಂಬೀ ನಾಲ್ಕು ಆಶ್ರಮಗಳು ತ್ರೈವರ್ಣಿಕರಿಗೆ ವಿಹಿತವಾಗಿವೆ. ಈ ನಾಲ್ಕು ಆಶ್ರಮಗಳ ಪೈಕಿ ಬ್ರಹ್ಮಚರ್ಯ ಗಾರ್ಹಸ್ಥ್ಯ(ಗೃಹಸ್ಥಾಶ್ರಮ)ವೆಂಬೀ ಎರಡು ಮಾತ್ರ ಅನುಷ್ಠಾನದಲ್ಲಿವೆಯೆನ್ನಬಹುದು. ವ್ರತನಿಯಮಗಳನ್ನು ಪಾಲಿಸುತ್ತಾ ಆಶ್ರಮದಲ್ಲಿ ಗುರುವಿನ ಬಳಿ ವೇದ–ಶಾಸ್ತ್ರಗಳನ್ನು ಅಧ್ಯಯನ ಮಾಡುವ, ಆಯುಷ್ಯದ ಮೊದಲ ಭಾಗಕ್ಕೆ 'ಬ್ರಹ್ಮಚರ್ಯಾಶ್ರಮ'ವೆಂದು

ಹೆಸರು, ಇಂತಹ ನಿಯಮಬದ್ಧವಾದ 'ಬ್ರಹ್ಮಚರ್ಯಾಶ್ರಮ'ದ ಪರಿಪಾಲನೆಯು ಇಂದು ಅಪರೂಪವೇ ಸರಿ. ಹಾಗೆ ನೋಡಿದರೆ ಇಂದು ಗೃಹಸ್ಥಾಶ್ರಮ'ವೊಂದೇ ಗಟ್ಟಿ. ಸಂನ್ಯಾಸವು ಕ್ವಚಿತ್ತಾಗಿ ನೋಡಸಿಗುತ್ತದೆಯಾದರೂ ಅದು ಇಂದು ಸಾರ್ವತ್ರಿಕವಾಗಿ ಆಚರಣೆಯಲ್ಲಿಲ್ಲ. ವಾನಪ್ರಸ್ಥಾಶ್ರಮದ ಆಚರಣೆಯು ಇಂದು ಪ್ರಚಲಿತವಾಗಿಲ್ಲ. ಅಪವಾದ ರೂಪದಲ್ಲಿ ಕ್ವಚಿತ್ ಇದೆಯೆಂದು ಹೇಳುತ್ತಾರೆ. ಇದ್ದರೂ ಕೂಡ ಸ್ಮೃತಿಗಳಲ್ಲಿ ಹೇಳಿದ ರೂಪದಲ್ಲಿಲ್ಲ. ಅಲ್ಲೋ ಇಲ್ಲೋ ಎಲ್ಲೋ ಕ್ಷೇತ್ರಗಳಲ್ಲಿ, ನದೀತೀರದಲ್ಲಿ, ಮಠಗಳಲ್ಲಿ 'ವೃದ್ಧಾಶ್ರಮ'ವೆಂಬ ಹೆಸರಿನಿಂದ ನಿರ್ಮಿತವಾದ ತಂಗುದಾಣಗಳಲ್ಲಿ ರೂಪಾಂತರದ ಅವಸ್ಥೆ ಅಥವಾ ಅವ್ಯವಸ್ಥೆಯಲ್ಲಿ ಯಾರೋ ಕೆಲವರು ಅನ್ಯಥಾ ಶರಣಂ ನಾಸ್ತಿಗಳು ಇದ್ದರೂ ಇರಬಹುದು ಅಷ್ಟೇ. ಕಠೋರವಾದ ನಿಯಮಗಳನ್ನು ಪಾಲಿಸುತ್ತಾ ತಪಸ್ಸನ್ನಾಚರಿಸುತ್ತಿರುವ ವಾನಪ್ರಸ್ಥಾಶ್ರಮಿಗಳು ಇಂದು ತೀರ ವಿರಳ.

ವರ್ಣ ಹಾಗೂ ಆಶ್ರಮಗಳ ವ್ಯವಸ್ಥೆಗಳು ರೂಪುಗೊಂಡ ಆರಂಭದಿಂದಲೂ ಪ್ರಾಚೀನ ಭಾರತದಲ್ಲಿ ತ್ರೈವರ್ಣಿಕರಿಗೆ ಗೃಹಸ್ಥಾಶ್ರಮದ ನಂತರ ಬರುವ ಆಶ್ರಮ (ಜೀವನಕ್ರಮ, ಸಾಮಾಜಿಕ ವ್ಯವಸ್ಥೆ)ವೇ ವಾನಪ್ರಸ್ಥಾಶ್ರಮ, ವನಾಶ್ರಮವೆನಿಸಿ ಕೊಳ್ಳುತ್ತದೆ. ಆಯುಷ್ಯದ ಮೂರನೆಯ ಭಾಗವನ್ನು ವಾನಪ್ರಸ್ಥರಾಗಿ ಕಳೆಯ ಬೇಕೆಂದು ಸ್ಮೃತಿಗಳು ಹೇಳುತ್ತವೆ. ಪ್ರಾಚೀನ ಭಾರತದಲ್ಲಿ ಇದೊಂದು ಸಾಮಾಜಿಕ ವ್ಯವಸ್ಥೆಯೇ ಆಗಿತ್ತೆಂದು ಊಹಿಸಬಹುದು.

ಶೈಶವೇಽಭ್ಯಸ್ತವಿದ್ಯಾನಾಂ ಯೌವನೇ ವಿಷಯೈಷಿಣಾಂ ।
ವಾರ್ಧಕೇ ಮುನಿವೃತ್ತೀನಾಂ ಯೋಗೇನಾಂತೇ ತನುತ್ಯಜಾಂ ॥

ಎಂಬೀ ವಾಕ್ಯದಲ್ಲಿ ಕಾಳಿದಾಸನು ಸಂಕ್ಷೇಪವಾಗಿ ಪ್ರಾಚೀನ ಭಾರತದ ಸಾಮಾಜಿಕ ಜೀವನಕ್ರಮವನ್ನು ಸೂಚಿಸಿದ್ದಾನೆನ್ನಬಹುದು, 'ಮುನಿವೃತ್ತಿ' ಎಂದರೆ ವಾನಪ್ರಸ್ಥಾ ಶ್ರಮವೆಂದರ್ಥ, 'ಪ್ರಜಾತಂತುಂ ಮಾ ವ್ಯವಚ್ಛೇತ್ಸೀಃ' 'ಋಣಾನಿ ತ್ರೀಣ್ಯಪಾಕೃತ್ಯ ಮನೋ ಮೋಕ್ಷೇ ನಿವೇಶಯೇತ್' ಎಂಬಿವೇ ಮೊದಲಾದ ಕಟ್ಟಳೆಯ ಪ್ರಕಾರ ವಿದ್ಯಾಭ್ಯಾಸದ ನಂತರ ಗೃಹಸ್ಥನಾಗಿ ಸಂತತಿಯನ್ನು ಪಡೆದು ದೇವ-ಪಿತೃಕಾರ್ಯಾದಿ ಕರ್ಮಾನುಷ್ಠಾನಗಳನ್ನೂ ಆಚರಿಸಿ ಭುಕ್ತ-ಭೋಗನಾದ ನಂತರ ಮೋಕ್ಷೇಚ್ಛುವಾಗಿ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಬೇಕೆಂದು ತಿಳಿದು ಬರುತ್ತದೆ.

ಗೃಹಸ್ಥಾಶ್ರಮದಲ್ಲಿ ಸಂಸಾರನಿರ್ವಾಹಕ್ಕಾಗಿ ಧನಸಂಗ್ರಹದ ದಿಕ್ಕಿನಲ್ಲಿ ಬಹು ವಿಧವಾದ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಬೇಕಾಗುತ್ತದೆ. 'ಅರ್ಥೇಪ್ಸುತಾ ಪರಂ ದುಃಖಮರ್ಥಪ್ರಾಪ್ತೌ ತತೋಽಧಿಕಂ'. ಹಂಗಿನ ಅರಮನೆಯನ್ನು ತೊರೆದು ಕಾಡಿಗೆ ಹೋಗಿ ನೀರಿನ ಬದಿಯಲ್ಲಿ ಗುಡಿಸಲು ಕಟ್ಟಿಕೊಂಡು ವಾಸಿಸುವ ವಾನಪ್ರಸ್ಥರ ನಿರಾಳವೋ ನಿರಾಳ. ಕಾಡಿನಲ್ಲಿ ದೊರೆಯುವ ಹಣ್ಣು-ಹಂಪಲು, ಗೆಡ್ಡೆ-ಗೆಣಸುಗಳನ್ನೇ

ತಿಂದು ಬದುಕುವ ಅವರಿಗೆ ನೆಮ್ಮದಿಯೋ ನೆಮ್ಮದಿ ! ಕಾಡಿನಲ್ಲಿ ಬೆಳೆದ ಧಾನ್ಯಗಳು ಅಥವಾ ರೈತರು ಬೆಳೆಯನ್ನು ಕಟಾವು ಮಾಡಿದ ನಂತರ, ಗದ್ದೆಗಳಲ್ಲಿ ಬಿದ್ದಿರುವ ಕಾಳು ಗಳನ್ನು ಆರಿಸಿ ತಂದು ಅದರಿಂದ (ಉಂಛವೃತ್ತಿ) ವಾನಪ್ರಸ್ಥರು ಬದುಕಬೇಕು. ಯಾವುದೇ ಬಗೆಯ ದ್ರವ್ಯಸಂಗ್ರಹವೂ ಕೂಡದು, ಅವರು ಋಷಿಧರ್ಮದಲ್ಲಿರಬೇಕೆಂದು ವಿಹಿತವಾಗಿದೆ.

ಸ್ಥಂಡಿಲೇ ಶಯನಂ ಯೋಗಃ ಶಾಕ-ಪರ್ಣ-ನಿಷೇವಣಂ ।
ಫಲ-ಮೂಲಾಶನಂ ವಾಯುರಾಪಃ ಶೈವಲಭಕ್ಷಣಂ ॥
ಋಷೀಣಾಂ ನಿಯಮಾ ಹ್ಯೇತೇ...।

ಸಂಸಾರಿಯಾಗಿದ್ದಾಗ 'ಸರ್ವಸಂಗಪರಿತ್ಯಾಗ'ವೆಂಬುದು ಸಾಧ್ಯವಾಗದು. (ನ ಕರ್ಮಣಾ, ನಪ್ರಜಯಾ, ಧನೇನ, ತ್ಯಾಗೇನೈಕೇ ಅಮೃತತ್ವಮಾನಶುಃ). ಧರ್ಮಾರ್ಥ ಕಾಮಗಳನ್ನು ಸಾಧಿಸುವದರಲ್ಲೇ ಗೃಹಸ್ಥನ ಶಕ್ತಿ ಹಾಗೂ ಸಮಯಗಳು ವ್ಯಯವಾಗು ವದರಿಂದ ಮೋಕ್ಷ ಸಾಧನೆಗೆ ಅವನಿಗೆ ಅವಕಾಶವೇ ಸಿಗುವದಿಲ್ಲ. ತೃತೀಯ-ತುರೀಯಾ ಶ್ರಮಗಳೆರಡೂ ಮೋಕ್ಷಸಾಧನೆಗಾಗಿಯೇ ವಿಹಿತವಾಗಿವೆ, ಮೋಕ್ಷ ಸಾಧನೆಗೆ ವೈರಾಗ್ಯವೇ ಮೊದಲ ಮೆಟ್ಟಲು. ಗೃಹಸ್ಥನಿಗೆ 'ಅಹಂಕಾರ ಮಮಕಾರ'ಗಳು ಅಂಟಿ ಕೊಂಡಿರುವದರಿಂದ ವೈರಾಗ್ಯವು ಅವನಿಂದ ದೂರವೇ ಸರಿ, ಅಂತೆಯೇ ಊರು-ಮನೆ ಬಿಟ್ಟು ಕಾಡಿಗೆ ಹೋಗುವದು ವಾನಪ್ರಸ್ಥನ ಮೊದಲ ಕರ್ತವ್ಯ.

"ನಗರಪರಿಭವಾನ್ ವಿಮೋಕ್ತುಮೇತೇ ವನಮಭಿಗಮ್ಯ ಮನಸ್ವಿನೋ ವಸಂತಿ ।"—ಭಾಸಃ

ಕಾಡಿನ ಪ್ರಶಾಂತ ವಾತಾವರಣದಲ್ಲಿ ಸದಾಕಾಲವೂ ತಪಸ್ಸು, ಯಮನಿಯಮಾದಿ ಯೋಗಸಾಧನೆ, ಉಪನಿಷದರ್ಥಗಳ ಶ್ರವಣಮನನಾದಿಗಳು, ಜೀವ-ಬ್ರಹ್ಮೈಕ್ಯಾನು ಸಂಧಾನ ಇತ್ಯಾದಿಗಳೇ ವಾನಪ್ರಸ್ಥರ ದಿನಚರಿ. ಪುಣ್ಯಾಶ್ರಮ ಪುಣ್ಯಕ್ಷೇತ್ರಗಳ ದರ್ಶನಕ್ಕಾಗಿ ಇವರು ದೇಶಸಂಚಾರವನ್ನು ಕೈಗೊಳ್ಳುವದೂ ಉಂಟು. ವಾನಪ್ರಸ್ಥರಾದ ಋಷಿ-ಮುನಿಗಳ ಆಶ್ರಮಗಳು ಕಾಡುಗಳಲ್ಲಿ ನದೀತೀರಗಳಲ್ಲಿ ಅಲ್ಲಲ್ಲಿ ರಾಷ್ಟ್ರದ ಉದ್ದಗಲಕ್ಕೂ ಇದ್ದೇ ಇರುತ್ತಿದ್ದವು. ಇಂತಹ ಆಶ್ರಮಗಳಲ್ಲಿ ಅತಿಥಿ-ಅಭ್ಯಾಗತರಿಗೆ ಯಾವಾಗಲೂ ಸ್ವಾಗತವಿತ್ತು. ಮಹಾಮಹಾ ಜ್ಞಾನಿಗಳು ತಪಸ್ವಿಗಳು ಇಂತಹ ಆಶ್ರಮಗಳ ಕುಲಪತಿಗಳಾಗಿರುತ್ತಿದ್ದರು. ಸಂಚಾರಿಗಳಾದ ವಾನಪ್ರಸ್ಥರು ಇಂತಹ ಋಷ್ಯಾಶ್ರಮಗಳಲ್ಲಿ ಕೆಲವು ದಿನಗಳು ತಂಗಿದ್ದು ತಮ್ಮ ಪ್ರಯಾಣವನ್ನು ಮುಂದುವರಿಸು

ತ್ತಿದ್ದರು. ಕೆಲವರು ಜ್ಞಾನಾರ್ಜನೆ, ತತ್ತ್ವಜಿಜ್ಞಾಸೆಗಾಗಿಯೋ ಆಯಾ ಆಶ್ರಮಗಳಲ್ಲಿ ಕೆಲವು ದಿನಗಳು, ತಿಂಗಳುಗಳವರೆಗೂ ತಂಗಿದ್ದು ಜ್ಞಾನಿಗಳ ಬಳಿಯಲ್ಲಿ ವೇದಾಂತ ಶ್ರವಣ ಮಾಡುತ್ತಿದ್ದರು. ಹೀಗೆ ಈ ಆಶ್ರಮದಲ್ಲಿ ತಪಸ್ಸು ತತ್ತ್ವಜ್ಞಾನಗಳಿಂದ ಸಾಧಕರಲ್ಲಿ ದೃಢತರವಾದ ವೈರಾಗ್ಯವು ನೆಲೆಗೊಳ್ಳಲು ಅನುಕೂಲವಾಗುತ್ತಿತ್ತು. ಈ ನಿಶ್ಚಲ ವೈರಾಗ್ಯವೇ ಸನ್ಯಾಸಾಶ್ರಮದ ಭೂಮಿಕೆ, ಬುನಾದಿ.

ಜಾಜಲಿಯೆಂಬ ವಾನಪ್ರಸ್ಥನ ಜೀವನ ಕ್ರಮವು ಮಹಾಭಾರತದಲ್ಲಿ ಹೀಗೆ ವರ್ಣಿಸಲ್ಪಟ್ಟಿದೆ :

ಜಾಜಲಿಯು ಕಾಡಿನಲ್ಲಿ ವಾಸಿಸುತ್ತಾ ಅಗ್ನಿಪರಿಚರ್ಯೆ, ಹಾಗೂ ಸ್ವಾಧ್ಯಾಯಾಧ್ಯನಗಳನ್ನು ನಿಷ್ಠೆಯಿಂದ ನೆರವೇರಿಸುತ್ತಿದ್ದನು. ಮಳೆಗಾಲದಲ್ಲಿ ಮಳೆಯಲ್ಲೂ, ಚಳಿಗಾಲದಲ್ಲಿ ನೀರಿನಲ್ಲೂ, ಬೇಸಿಗೆಯಲ್ಲಿ ಬಿಸಿಲಿನಲ್ಲೂ ತಪಸ್ಸು ಮಾಡುತ್ತಿದ್ದನು. ಕೆಲವೊಮ್ಮೆ ನಿರಾಹಾರನಾಗಿ ಇನ್ನೊಮ್ಮೆ ವಾಯುಭಕ್ಷಕನಾಗಿ ಕಾಷ್ಠವತ್ ನಿಶ್ಚಲನಾಗಿ ತಪಸ್ಸಿಗೆ ಕುಳಿತಿರುತ್ತಿದ್ದನು. ಹೀಗೆ ಅಲುಗದೆ, ಕದಲದೆ ತಪಸ್ಸಿಗೆ ಕುಳಿತ ಜಾಜಲಿಯ ತಲೆಕೂದಲುಗಳಲ್ಲಿ ಎರಡು ಹಕ್ಕಿಗಳು ಸುಖವಾಗಿ ವಾಸವಾಗಿದ್ದವಂತೆ ! ಕೆಲವು ತಿಂಗಳುಗಳವರೆಗೆ ಜಾಜಲಿಯು ಇದೇ ರೀತಿ ತಪೋಮಗ್ನನಾಗಿದ್ದನು. ವೈದಿಕಯುಗದ ಋಷಿಗಳ ಜೀವನಕ್ರಮವೇ ವಾನಪ್ರಸ್ಥರ ಜೀವನಕ್ರಮವಾಗಿತ್ತೆನ್ನಬಹುದು. ವೇದದಲ್ಲಿ ವಾನಪ್ರಸ್ಥರನ್ನೇ ವೈಖಾನಸರೆಂದು ಕರೆಯಲಾಗಿದೆ. ಕಾಳಿದಾಸನ ಶಾಕುಂತಲದಲ್ಲಿ ಬರುವ ಕಣ್ವರ ಶಿಷ್ಯರಾದ ಶಾರ್ಙ್ಗರವ–ಶಾರದ್ವತರು ವಾನಪ್ರಸ್ಥ ಋಷಿಗಳೆಂಬುದನ್ನು ಗಮನಿಸಬಹುದು.

ಪುಷ್ಪ–ಮೂಲ–ಫಲೈರ್ವಾಪಿ ಕೇವಲೈರ್ವರ್ತಯೇತ್ ಸದಾ ।
ಕಾಲಪಕ್ವೈಃ ಸ್ವಯಂ ಶೀರ್ಣೈರ್ವೈಖಾನಸಮತೇ ಸ್ಥಿತಃ ॥

ಎಂಬುದಾಗಿ ವಾನಪ್ರಸ್ಥರಿಗೆ ಆಹಾರನಿಯಮವು ವಿಹಿತವಾಗಿದೆ. ಹಿಂದೆ ರಾಜರು ಮಹಾರಾಜರು ಕೂಡ ತಮ್ಮ ಆಯುಷ್ಯದ ಕೊನೆಯ ಕಾಲವನ್ನು ಕಾಡಿನಲ್ಲಿ ಕಳೆಯುತ್ತಿದ್ದರೆಂದು ತಿಳಿದುಬರುತ್ತದೆ. ಧೃತರಾಷ್ಟ್ರನು ತನ್ನ ಕೊನೆಯ ದಿನಗಳನ್ನು ಕಾಡಿನಲ್ಲಿ ತಪಸ್ಸು ಮಾಡುತ್ತಾ ಕಳೆದನೆಂದು ಮಹಾಭಾರತದಲ್ಲಿ ಹೇಳಿದೆ :

ತ್ವಗಸ್ಥಿಭೂತಃ ಪರಿಶುಷ್ಕಮಾಂಸಃ ಜಟಾಜಿನೀ ವಲ್ಕಲಸಂವೃತಾಂಗಃ ।
ಸ ಪಾರ್ಥಿವಸ್ತತ್ರ ತಪಶ್ಚಚಾರ ಮಹರ್ಷಿವತ್ತೀವ್ರಮಪೇತದೋಷಃ ॥

ವಾನಪ್ರಸ್ಥರಲ್ಲಿ ಯಾಯಾವರ, ವೈಖಾನಸ, ವಾಲಖಿಲ್ಯ, ಸೈಕತ ಮುಂತಾಗಿ ಅನೇಕ ಪ್ರಕಾರಗಳಿವೆ. ಶರೀರಪೋಷಣೆಗೆ ಅನೇಕ ಉಪಾಯಗಳಿದ್ದಂತೆಯೇ ಶರೀರ

ಶೋಷಣೆಗೂ ಅನೇಕ ಉಪಾಯಗಳನ್ನು ಹೇಳಿದ್ದಾರೆ. ಶರೀರ ಶೋಷಣೆಯ ಪ್ರಕ್ರಿಯೆಯ ಪ್ರಭೇದವನ್ನನುಸರಿಸಿ ವಾನಪ್ರಸ್ಥರಲ್ಲಿ ಯಾಯಾವರ, ವೈಖಾನಸ ಮುಂತಾಗಿ ಅವಾಂತರ ವಿಭಾಗವನ್ನು ಕಲ್ಪಿಸಿದ್ದಾರೆ. ತಪಃ ಪ್ರಭೇದಗಳೇ ಶರೀರ ಶೋಷಣೆಯ ವಿಧಾನಗಳೆನಿಸುತ್ತವೆ.

ಈ ವಾನಪ್ರಸ್ಥರು, ವನದಲ್ಲಿ ವಾಸವಾಗಿರುವ ಋಷಿ-ಮುನಿಗಳು ತಮಗೇನಾದರೂ ವಿಪತ್ತು ಎದುರಾದರೆ ಎಲ್ಲರೂ ಒಟ್ಟಿಗೆ ಸೇರಿ ಪ್ರತೀಕಾರವನ್ನು ಚಿಂತಿಸುತ್ತಾರೆ. ತಾಟಕಿಯ ಉಪಟಳದಿಂದ ಬೇಸತ್ತ ವಿಶ್ವಾಮಿತ್ರನು ಅವಳನ್ನು ಹದ್ದುಬಸ್ತು ಮಾಡಲು ಶ್ರೀರಾಮನನ್ನು ಕರೆತರುವುದು ಪ್ರಸಿದ್ಧವಿದೆ. ಮಹಾಭಾರತದ ಅನುಶಾಸನಪರ್ವದಲ್ಲಿ ವಾನಪ್ರಸ್ಥರ ಸಾಧಾರಣ ಧರ್ಮಗಳು ಹೀಗೆ ಸಂಗ್ರಹೀತವಾಗಿವೆ:

ಮೂರು ಹೊತ್ತು ಸ್ನಾನ, ದೇವ-ಪಿತೃ ಪೂಜೆ, ಅಗ್ನಿಹೋತ್ರ, ಇಷ್ಟಿಗಳು, ಆಹಾರಕ್ಕಾಗಿ ನೀವಾರಧಾನ್ಯ, ಹಣ್ಣುಹಂಪಲು, ಗೆಡ್ಡೆಗೆಣಸುಗಳು, ಎಣ್ಣೆಗಾಗಿ ಇಂಗುದೀ ಏರಂಡತೈಲಗಳು, ಯೋಗಾಭ್ಯಾಸ, ವೀರಾಸನದಲ್ಲಿ ತಪಶ್ಚರ್ಯೆ, ರಾಗ ದ್ವೇಷಾದಿ ರಾಹಿತ್ಯ, ನೆಲದ ಮೇಲೆ ಮಲಗುವಿಕೆ ಇತ್ಯಾದಿ ವ್ರತ ನಿಯಮಗಳು.

ವನನಿತ್ಯೈವಃ ವನಚರೆವಃ ವನಪೆವಃ ವನಗೋಚರೆವಃ ।
ವನಂ ಗುರುಮಿವಾಸಾದ್ಯ ವಸ್ತವ್ಯಂ ವನಜೀವಿಭಿಃ

ಎಂಬುದಾಗಿ ವಾನಪ್ರಸ್ಥರಿಗೆ ಕಠಿಣನಿಯಮಗಳು ವಿಹಿತವಾಗಿವೆ.

ಗೃಹಸ್ಥಾಶ್ರಮದಲ್ಲಿದ್ದಾಗ ನೆರವೇರಿಸಬೇಕಾದ ನಿತ್ಯಕರ್ಮಗಳೆಲ್ಲವೂ ವಾನ ಪ್ರಸ್ಥರಿಗೂ ಸಮಾನ. ಕಠೋರ ನಿಯಮಪಾಲನೆ ಉಗ್ರವಾದ ತಪಸ್ಸುಗಳು ವಾನಪ್ರಸ್ಥರಿಗೆ ವಿಶೇಷವಾಗಿ ವಿಹಿತವಾಗಿವೆ. ನಾರುಡುಗೆ ಧರಿಸಬೇಕು. ಉಗುರು ಕೂದಲುಗಳನ್ನು ಕತ್ತರಿಸಬಾರದು. ಶರೀರ ಸೌಂದರ್ಯ, ದೇಹಾರೋಗ್ಯಗಳ ವಿಷಯದಲ್ಲಿ ಉದಾಸೀನರಾಗಿರಬೇಕು. ಲೋಕಹಿತಸಾಧನೆಯೇ ಅವರ ಉದ್ದೇಶ. ಹೆಚ್ಚು ಕಾಲ ಬದುಕಬೇಕೆಂಬ ಆಸೆಯೂ ಅವರಿಗಿಲ್ಲ. ಕ್ರಮೇಣ ಆಹಾರವನ್ನು ಕಡಿಮೆ ಮಾಡುತ್ತಾ ಬರಬೇಕು. ಕೊನೆ ಕೊನೆಗೆ ಗಾಳಿ ನೀರುಗಳನ್ನು ಮಾತ್ರ ಸೇವಿಸಲು ಆರಂಭಿಸಬೇಕು. ಹೀಗೆ ದೇಹವನ್ನು ಒಣಗಿಸಿ ಸಮಾಧಿಸ್ಥರಾಗಿ ಪ್ರಾಣ ಬಿಡಬಹುದು.

ಗೃಹಸ್ಥಾಶ್ರಮದಿಂದ ವಾನಪ್ರಸ್ಥಾಶ್ರಮಕ್ಕೆ ಹೋಗುವಾಗ ವೃದ್ಧಳಾದ ಪತ್ನಿಯನ್ನು ಮಕ್ಕಳ ಬಳಿಯಲ್ಲೇ ಬಿಟ್ಟು ಬರಬಹುದು. ಒಂದು ವೇಳೆ ಅವಳೂ ಕೂಡ ಗಂಡನ ಜೊತೆಯಲ್ಲಿ ಕಾಡಿಗೆ ಬರಲು ಉತ್ಸುಕಳಾದರೆ ಜೊತೆಯಲ್ಲಿ ಕರಕೊಂಡೂ

ಹೋಗಬಹುದು. ಧೃತರಾಷ್ಟ್ರನು ವಾನಪ್ರಸ್ಥಾಶ್ರಮಕ್ಕೆ ಹೋಗುವಾಗ ಅವನ ಜೊತೆಯಲ್ಲಿ ಗಾಂಧಾರಿಯೂ ಕಾಡಿಗೆ ಹೋದಳೆಂದು ಮಹಾಭಾರತದಲ್ಲಿ ಹೇಳಿದೆ.

ವಾನಪ್ರಸ್ಥರಾದ ಋಷಿಗಳು ಕೆಲವರು ತಮ್ಮ ಕರ್ತವ್ಯವೆಂದು ಬಗೆದು ಸ್ವತಃ ಯಜ್ಞ-ಯಾಗಾದಿಗಳನ್ನು ಆಚರಿಸುತ್ತಿದ್ದರು. ರಾಜ-ಮಹಾರಾಜರು ಆಚರಿಸುವ ಯಾಗಗಳಲ್ಲಿ ಆರ್ತ್ವಿಜ್ಯವನ್ನೂ ವಹಿಸುತ್ತಿದ್ದರು. ಹೀಗೆ ಯಜನ ಯಾಜನಗಳನ್ನು ಅವರು ಪಾಲಿಸಿಕೊಂಡು ಬರುತ್ತಿದ್ದರು. ಪ್ರಾಚೀನ ಕಾಲದಲ್ಲಿ ಋಷಿಮುನಿಗಳು ಕಾಡಿನಲ್ಲೇ ವಾಸವಾಗಿದ್ದು ಯೌವನದಲ್ಲಿ ಗೃಹಸ್ಥಾಶ್ರಮಿಗಳಾಗಿದ್ದು ನಂತರ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸುತ್ತಿದ್ದರು. ಋಷಿ-ಮುನಿಗಳು ಸಂದರ್ಭಾನುಸಾರ ರಾಜ-ಮಹಾರಾಜರ ಯಜ್ಞಯಾಗಾದಿ ನಿಮಿತ್ತ ಅಥವಾ ದೇಶ ಸಂಚಾರದ ಸಂದರ್ಭದಲ್ಲಿ ಆಗಾಗ ಪಟ್ಟಣಗಳಿಗೂ ಬಂದು ಹೋಗುತ್ತಿದ್ದರು. ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿದ ನಂತರ ಸಂತಾನೋತ್ಪಾದನೆಯೇ ಮೊದಲಾದ ದಾಂಪತ್ಯಧರ್ಮಗಳು ನಿಷಿದ್ಧ.

ತಪಸ್ಸು

ತಪಸ್ಸೆಂಬುದು ಸಾತ್ತ್ವಿಕವಾದ ಆತ್ಮಶಕ್ತಿ. ಸೃಷ್ಟಿ ಸ್ಥಿತಿ ಲಯ ಮುಂತಾದ ಯಾವುದೇ ಮಹತ್ಕಾರ್ಯವೂ ತಪಃಸಾಮರ್ಥ್ಯದಿಂದಲೇ ಜರುಗಬೇಕು. ತಪಸ್ಸು ಅನೇಕ ವಿಧ. ಇಂದ್ರಿಯ ಹಾಗೂ ಮನಸ್ಸನ್ನು ವಿಷಯಗಳತ್ತ ಧಾವಿಸದಂತೆ ತಡೆ ಹಿಡಿಯುವಿಕೆಗೆ ತಪಸ್ಸೆನ್ನುತ್ತಾರೆ. ಆಯಾಯ ಆಶ್ರಮಕ್ಕೆ ವಿಹಿತವಾದ ಕರ್ಮಗಳ ಅನುಷ್ಠಾನವೂ ಕೂಡ ತಪಸ್ಸೆನಿಸುತ್ತದೆ.

'ಬ್ರಾಹ್ಮಣಸ್ಯ ತಪೋ ಜ್ಞಾನಂ'
ದೇವ–ದ್ವಿಜ–ಗುರು–ಪ್ರಾಜ್ಞ–ಪೂಜನಂ ಶೌಚಮಾರ್ಜವಂ ।
ಬ್ರಹ್ಮಚರ್ಯಮಹಿಂಸಾ ಚ ಶಾರೀರಂ ತಪ ಉಚ್ಯತೇ ॥
ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯ ಹಿತಂ ಚ ಯತ್ ।
ಸ್ವಾಧ್ಯಾಯಾಭ್ಯಸನಂ ಚೈವ ವಾಙ್ಮಯಂ ತಪ ಉಚ್ಯತೇ ॥
ಮನಃ ಪ್ರಸಾದಃ ಸೌಮ್ಯತ್ವಂ ಮೌನಮಾತ್ಮವಿನಿಗ್ರಹಃ ।
ಭಾವಸಂಶುದ್ಧಿರಿತ್ಯೇತತ್ ತಪೋ ಮಾನಸಮುಚ್ಯತೇ ॥ —ಭಗವದ್ಗೀತಾ

ಎಂಬೀ ಮೂರು ಬಗೆಯ ತಪಸ್ಸನ್ನು ಗೃಹಸ್ಥನೂ ಕೂಡ ಸಾಧ್ಯವಾದ ಮಟ್ಟಿಗೂ ಹೆಚ್ಚು ಹೆಚ್ಚಾಗಿ ಆಚರಿಸಿಕೊಂಡು ಬರಲು ಪ್ರಯತ್ನಿಸಬೇಕೆಂದು ನಮ್ಮ ಹಿರಿಯರು ಹೇಳುತ್ತಾರೆ, ತಪಸ್ಸೆಂಬುದೊಂದು ವಿಶಿಷ್ಟವಾದ ಶಕ್ತಿ, ವಾನಪ್ರಸ್ಥರಿಗಂತೂ ತಪಸ್ಸೇ ಸರ್ವಸ್ವ.

ಯದ್ದುಶ್ಚರಂ ಯದ್ದುರಾಪಂ ದುರಾಮ್ನಾಯಂ ದುರಾಧರ್ಷಂ ದುರನ್ವಯಂ ।
ತತ್ಸರ್ವಂ ತಪಸಾ ಸಾಧ್ಯಂ ತಪೋ ಹಿ ದುರತಿಕ್ರಮಂ ॥

—ಮಹಾಭಾರತ

"ನಾತಪ್ತತಪಸಃ ಪುತ್ರ ! ಪ್ರಾಪ್ನುವಂತಿ ಮಹತ್ಸುಖಂ ।"
"ತಪಸಾ ಶಕ್ಯತೇ ಪ್ರಾಪ್ತುಂ ದೇವತ್ವಮಪಿ ನಿಶ್ಚಯಾತ್ ॥

ಹೀಗೆ ನಮ್ಮ ಪ್ರಾಚೀನ ಸಂಸ್ಕೃತಿಯ ಪ್ರಕಾರ ವಾನಪ್ರಸ್ಥಾಶ್ರಮವು ತ್ರೈವರ್ಣಿಕರಿಗೆ ಸರ್ವೇಸಾಮಾನ್ಯವಾಗಿತ್ತು. ವಾನಪ್ರಸ್ಥರು ಲೋಕಹಿತ ಕಾಮನೆಯುಳ್ಳವರಾಗಿದ್ದರು. ಸರ್ವಾತ್ಮನಾ ತಪಃಸಾಧನೆಯೇ ಅವರ ಗುರಿಯಾಗಿತ್ತು.

ಆಧುನಿಕ ಯುಗದಲ್ಲೂ ಸಹ ವಾನಪ್ರಸ್ಥಾಶ್ರಮದ ಉಪಯುಕ್ತತೆ, ಉಪಾದೇಯತೆಯನ್ನು ಕೆಲವರು ಒಪ್ಪಿ ಹೇಳಿದ್ದಾರೆ. ಪಶ್ಚಿಮ ಜರ್ಮನಿಯ "ಬ್ಲಾಕ್ ಫಾರೆಸ್ಟ್" (ಕಪ್ಪು ಕಾಡು) ಎಂಬಲ್ಲಿ ಡಾ. ಡರ್ಕ್‌ಹೀಮ್ ಎಂಬುವರು ವಾನಪ್ರಸ್ಥರಿಗಾಗಿ ಆಶ್ರಮವೊಂದನ್ನು ಸ್ಥಾಪಿಸಿದ್ದಾರಂತೆ. ಕಾಶ್ಮೀರದ ರಾಜಪುತ್ರ ಶ್ರೀಮಾನ್ ಡಾ. ಕರಣಸಿಂಹ ಅವರು—"ಪ್ರಶಾಂತವಾದ ಈ ಶೇಷನಾಗ ಸರೋವರದ ಪರಿಸರದಲ್ಲಿ ಒಂದಿಲ್ಲೊಂದು ದಿನ ಪರ್ಣಶಾಲೆಯನ್ನು ಕಟ್ಟಿಕೊಂಡು ವಾನಪ್ರಸ್ಥ ಜೀವನವನ್ನು ಸಾಗಿಸಬೇಕೆಂಬುದು ನನ್ನ ಹಂಬಲ" ಎಂದು ಒಮ್ಮೆ ಹೇಳಿದ್ದರಂತೆ.

ನಗರ ಹಾಗೂ ಗ್ರಾಮವಾಸಿಗಳು ಜೀವನದ ಸುಖ-ಸೌಲಭ್ಯಗಳ ಸಂಪಾದನೆಗಾಗಿ ಹಗಲಿರುಳೂ ಪರದಾಡಬೇಕಾಗುತ್ತದೆ. ಇಷ್ಟಾದರೂ ನಮಗಿಂದು ನಿರಾಳ ನೆಮ್ಮದಿಗಳು ಕೈಗೆಟುಕಿವೆಯೆಂದು ಹೇಳುವಂತಿಲ್ಲ. 'ಶಾಂತಿ ಬೇಕು ಶಾಂತಿ' ಎಂದು ಇಡೀ ವಿಶ್ವವೇ ಇಂದು ಶಾಂತಿಗಾಗಿ ಚಡಪಡಿಸುತ್ತಿದೆ. ಭೌತಿಕ-ಸುಖ-ಭೋಗಗಳಿಂದ ಶಾಶ್ವತಸುಖ ಸಿಗಲಾರದೆಂದು ಮನಗಂಡ ಮಾನವನು ಪ್ರಶಾಂತವಾದ ವನದತ್ತ ಆಕರ್ಷಿತನಾಗುವುದರಲ್ಲಿ ಆಶ್ಚರ್ಯವಿಲ್ಲ. ಅರಣ್ಯದಲ್ಲಿ ಋಷಿ-ಮುನಿಗಳ ಜೀವನಚರ್ಯೆಯನ್ನು ಕೈಲಾದ ಮಟ್ಟಿಗೂ ಅನುಸರಿಸುತ್ತಾ ಶೇಷಾಯುಷ್ಯವನ್ನು ಕಳೆಯುವುದರಲ್ಲೇ ವಾನಪ್ರಸ್ಥರು ನೆಮ್ಮದಿಯನ್ನು ಕಂಡುಕೊಂಡುದು ಸಮುಚಿತವೇ ಸರಿ.

ವಾನಪ್ರಸ್ಥಾಶ್ರಮವು ಐಚ್ಛಿಕವಾಗಿತ್ತೆಂದು ತೋರುತ್ತದೆ. ವೈದಿಕ ಯುಗದ ಕೆಲವುಜನ ಋಷಿಗಳು ತಮ್ಮ ಆಯುಷ್ಯದ ಕೊನೆಯವರೆಗೂ ಗೃಹಸ್ಥಾಶ್ರಮದಲ್ಲೇ ಇದ್ದರೆಂಬುದಕ್ಕೆ ಉದಾಹರಣೆಗಳು ಸಿಗುತ್ತವೆ. ವೈರಾಗ್ಯಶಾಲಿಯಾದವನು ಗೃಹಸ್ಥಾಶ್ರಮದಿಂದಲೇ ನೇರವಾಗಿ ಸಂನ್ಯಾಸಾಶ್ರಮ ಸ್ವೀಕರಿಸಬಹುದು. ವೈರಾಗ್ಯಶಾಲಿಗೆ ವಾನಪ್ರಸ್ಥಾಶ್ರಮವು ಕಡ್ಡಾಯವೇನೂ ಅಲ್ಲವೆಂದು ಸ್ಮೃತಿಗಳು ಹೇಳುತ್ತವೆ.

ಇತ್ತೀಚಿನ ದಿನಗಳಲ್ಲಿ ವಾನಪ್ರಸ್ಥಾಶ್ರಮ ಪದ್ಧತಿಯು ಲುಪ್ತವಾಗಿದೆ. ಬಹಳ ಹಿಂದೆಯೇ ವಾನಪ್ರಸ್ಥರ ಅನುಕೂಲಕ್ಕಾಗಿ ನದೀತೀರದ ಕೆಲವೆಡೆಗಳಲ್ಲಿ ಆಶ್ರಮಗಳು ಮಠಗಳು ತಂಗುದಾಣಗಳು ನಿರ್ಮಿತವಾಗಿದ್ದವು. ಕಾಶ್ಮೀರದ ರಾಜ ಅವಂತಿವರ್ಮನ ಮಂತ್ರಿ ಶೂರನು ತಪಸ್ವಿಗಳಿಗಾಗಿ ದೊಡ್ಡ ಮಠವೊಂದನ್ನು ಕಟ್ಟಿಸಿದ್ದನಂತೆ. ಇಂತಹ ಮಠ, ಧರ್ಮಶಾಲೆಗಳಲ್ಲಿ ಇಂದಿಗೂ ಕೂಡ ತೃತೀಯ-ತುರೀಯಾಶ್ರಮಿಗಳು ಕೆಲವರು (ಅಂದರೆ ವಾನಪ್ರಸ್ಥಾಶ್ರಮಕ್ಕೆ ಅರ್ಹರು ಹಾಗೂ ಸಂನ್ಯಾಸಿಗಳು) ವಾಸಿಸುತ್ತಿರುವದನ್ನು ಕಾಣಬಹುದು.

ವೃದ್ಧಾಪ್ಯದಲ್ಲಿ ಕಾಡಿಗೆ ಹೋಗಿ ಕ್ಲೇಶಕರವಾದ ಕಠಿನ ನಿಯಮಪಾಲನೆಯ ವಾನಪ್ರಸ್ಥಾಶ್ರಮವು ನಮಗಿಂದು ಪ್ರಸ್ತುತವಲ್ಲ. ಅನುಸರಿಸಬಹುದಾದ ವಾನಪ್ರಸ್ಥಾಶ್ರಮದ ಕೆಲವು ಸಾತ್ವಿಕ ಆದರ್ಶಗಳನ್ನು-ನಮ್ಮ ಕೊನೆಯ ದಿನಗಳಲ್ಲಿ-ಪಾಲಿಸಲು ಪ್ರಯತ್ನಿಸೋಣ.

ಇಂದ್ರಿಯಾಣಾಂ ಪ್ರಸಂಗೇನ ದೋಷಮೃಚ್ಛತ್ಯ ಸಂಶಯಂ ।
ಸನ್ನಿಯಮ್ಯ ತು ತಾನ್ಯೇವ ತತಃ ಸಿದ್ಧಿಮವಾಪ್ನುಯಾತ್ ॥

(ಡಾ. ರಾಮಜೀ ಉಪಾಧ್ಯಾಯರ ಸಂಸ್ಕೃತ ಲೇಖನವೊಂದರ ಆಧಾರದಿಂದ)

ದಂಡೋಪಾಯವೂ ಕಾರ್ಯಕಾರಿಯಾಗದಿದ್ದಾಗ ಏನು ಮಾಡಬೇಕು ? ಮತ್ತೆ ಸಾಮಕ್ಕೇ ಹಿಂದಿರುಗಬೇಕು.

ಪಂಜಾಬು ಸಮಸ್ಯೆಯಿಂದಾದ ಕತ್ತಲೆಯೇ ನಿದರ್ಶನ. ಹುಟ್ಟಬಾರದ ಕತ್ತಲೆ ಹೇಗೋ ಹುಟ್ಟಿತು. ಇದು ಹೊಗೆಯಿಂದಾದ ಕತ್ತಲೆ. ಬುಡದಲ್ಲಿ ಬೆಂಕಿ ಇದೆ. ಅದನ್ನು ಪೂರ್ಣ ತೊಡೆಯದಿದ್ದಲ್ಲಿ ಇಡೀ ಜನಾಂಗಕ್ಕೇ ಅಪಾಯವುಂಟು...ಇದಕ್ಕೆ ಪರಿಹಾರ ಸಾಮೋಪಾಯ ಒಂದೇ.

—"ಸೂಕ್ತಿ-ವ್ಯಾಪ್ತಿ"ಯಲ್ಲಿ
ಶ್ರೀ ರಂಗನಾಥಶರ್ಮರು

ಪಟ್ಟಾಭಿರಾಮ ಧ್ಯಾನ

ಡಾ|| ಪು. ತಿ. ನರಸಿಂಹಾಚಾರ್

ನಮ್ಮ ನಾಡಿನ, ಏಕೆ, ಇಡೀ ಜಗತ್ತಿನ ಇಂದಿನ ಪರಿಸ್ಥಿತಿಯನ್ನು ಪರಿಶೀಲಿಸಿದರೆ ಸೂಕ್ಷ್ಮ ಸಂವೇದಿಗಳಾದ ಸಜ್ಜನರು ಖೇದಗೊಳ್ಳದೆ ಇರಲಾರರು. ಈ ವಿಷಯದಲ್ಲಿ ಮನಸ್ಸಿಗೆ ಸ್ವಲ್ಪ ಸಮಾಧಾನ ತರುವ ಒಂದು ಪ್ರಾಚೀನ ವಾಕ್ಯವು ಉಂಟು : "ನ ಕದಾಪಿ ಅನೀದೃಶಂ ಜಗತ್" ಜಗತ್ತು ಈಗ ಇರುವ ಹಾಗೆ ಇರದೆ ಬೇರೆ ತೆರದಲ್ಲಿ ಎಂದಿಗೂ ಇರಲಿಲ್ಲ. ಪೂರ್ವಮೀಮಾಂಸಾ ದರ್ಶನಕಾರರ ಈ ಮಾತಿಗೆ ಸಾಕ್ಷಿಯಾಗಿ ಒಬ್ಬ ಪ್ರಾಚೀನ ಕವಿಯ ಶ್ಲೋಕ ನೆನಪಿಗೆ ಬರುತ್ತದೆ.

ಗೇಹಂ ದುರ್ಗತ ಬಂಧುಭಿರ್ಗುರುಗೃಹಂ
ಛಾತ್ರೈರಹಂಕಾರಿ ಭಿರ್ಹಟ್ಟಂ ಪತ್ತನವಂಚಕೈಃ
ಮುನಿಜನ್ಯೈಃ ಶಾಪೋನ್ಮುಖೈ ರಾಶ್ರಮಾನ್ ।
ಸಿಂಹಾದ್ಯೈಶ್ವ ವನಂ ಖಲೈರುಪವನಂ
ಚೋರೈರ್ದಿಗನ್ತಾನಪಿ ಸಂಕೀರ್ಣಾನ್ಯವಲೋಕ್ಯ
ಸತ್ಯ ಸರಲಃ ಸಾಧುಃ ಕ್ವ ವಿಶ್ರಾಮ್ಯತಿ ॥

(ಬಡ ನೆಂಟರಿಂದ ಮನೆ, ಅಹಂಕಾರಿಗಳಾದ ವಿದ್ಯಾರ್ಥಿಗಳಿಂದ ಗುರುಮನೆ, ಪಟ್ಟಣ ವಂಚಕರಿಂದ ಚಿನಿವಾರ ಕಟ್ಟೆ, ಕಂಡರೆ ಬೈಗಳ ಮಳೆ ಸುರಿಸುವ ಮುನಿಜನರಿಂದ ಆಶ್ರಮಗಳು, ಸಿಂಹಾದಿಗಳಿಂದ ಕಾಡು, ಕೇಡಿಗರಿಂದ ಉದ್ಯಾನ, ದಾರಿಗಳ್ಳರಿಂದ ದಿಕ್ಕು ದೆಸೆಗಳು ತುಂಬಿ ಹೋಗಿರುವುದನ್ನು ಕಂಡು ಸತ್ಯ ಸರಳನಾದ ಸಾಧುಪುರುಷ ಎಲ್ಲಿ ನೆಮ್ಮದಿಯಾಗಿ ತಲೆಯಿಡಬಲ್ಲ !)

ಅಂಥ ಸ್ಥಳ ಅವಸಿಗಿದೆ. ವಾಲ್ಮೀಕಿ ಮಹರ್ಷಿಯ ಆದಿ ಕಾವ್ಯವಾದ ಶ್ರೀಮದ್ರಾಮಾಯಣದಲ್ಲಿ.

* * *

ಧರ್ಮವೆನ್ನುವುದು ಸತ್ತ್ವಶಾಲಿಗಳಲ್ಲಿ ಪ್ರವರ್ತಿತವಾಗಿರುವ ಊರ್ಜೆ. ಅಂಥ ಧರ್ಮನಿಷ್ಠರಾದ ಮಹಾಪುರುಷರ ಮೆಲ್ಪಂಕ್ತಿಯಲ್ಲಿ ನಡೆಯುವವರು ಸಾಮಾನ್ಯ ಜನ. ಆದರೆ ದೊಡ್ಡವರಲ್ಲಿ ಅನೀತಿಯ ಸೋಂಕು ಆದರೆ ಗತಿಯೇನು ? ಇದನ್ನು ಕುರಿತು ಯೋಚಿಸಿದ ವಾಲ್ಮೀಕಿ ಮಹರ್ಷಿಗಳು ಅನೀತಿಯ ದೌರ್ಬಲ್ಯವಿಲ್ಲದ ಮಹಾಪುರುಷ ಇರುವುದು ಸಾಧ್ಯವೇ ಎಂದು ನೋಡುತ್ತಿರುವಾಗ ನಾರದರು ಅಂಥ ದುರ್ಲಭನಾದ ಪುರುಷಶ್ರೇಷ್ಠನಿದ್ದಾನೆ ಎಂದು ತಿಳಿಸುತ್ತಾರೆ. ಅಂಥ ಚಾರಿತ್ರಕ ಪುರುಷನಿದ್ದಾನೆಂದು ತಿಳಿದಾಗ ಅವನ ಚರಿತ್ರೆಯನ್ನು ನಾರದಮುನಿಯ ಬಾಯಿಂದ ಕೇಳಿದಾಗ ಅವನನ್ನು ಕುರಿತು ಕಾವ್ಯವನ್ನು ಬರೆಯುವ ಮನಸ್ಸು ಮಾಡುತ್ತಾರೆ ವಾಲ್ಮೀಕಿ ಮಹರ್ಷಿಗಳು. ಇದು ವಾಲ್ಮೀಕಿಗಳ ಪ್ರಶ್ನೆ.

ಕೋನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚವೀರ್ಯವಾನ್ ।
ಧರ್ಮಜ್ಞಶ್ಚ ಕೃತಜ್ಞಶ್ಚ ಸತ್ಯವಾಕ್ಯೋ ದೃಢವ್ರತಃ ॥
ಚಾರಿತ್ರೇಣ ಚ ಕೋ ಯುಕ್ತಃ ಸರ್ವಭೂತೇಶು ಕೋ ಹಿತಃ ।
ವಿದ್ವಾನ್ ಕಃ ಕಃ ಸಮರ್ಥಶ್ಚ ಕಶ್ಚೈಕ ಪ್ರಿಯ ದರ್ಶನಃ ॥
ಆತ್ಮವಾನ್ ಕೋ ಜಿತಕ್ರೋಧೋ ದ್ಯುತಿಮಾನ್ ಕೋಽನಸೂಯಕಃ ।
ಕಸ್ಯಬಿಭ್ರತಿ ದೇವಾಶ್ಚ ಜಾತ ರೋಷಸ್ಯ ಸಂಯುಗೇ ॥
ಏತದಿಚ್ಛಾಮ್ಯಹಂ ಶ್ರೋತುಂ ಪರಂ ಕೌತೂಹಲಂ ಹಿ ಮೇ ।

ಹೀಗೆ ಶ್ರೀಮದ್ರಾಮಾಯಣ ಉತ್ತಮಶ್ಲೋಕನಾದ ಮಹಾಪುರುಷನ ಚರಿತ್ರೆಯನ್ನು ವರ್ಣಿಸುವ ಕಾವ್ಯವಾಗಿದೆ. ಇಂಥಾ ಕಾವ್ಯದಿಂದ ಉಂಟಾಗುವ ಸಂತೋಷ ಉಲ್ಲಾಸಗಳನ್ನು ಭಾಗವತಕಾರರು ಒಂದು ಶ್ಲೋಕದಲ್ಲಿ ಹೀಗೆ ವರ್ಣಿಸಿದ್ದಾರೆ :

ತದೇವ ರಮ್ಯಂ ರುಚಿರಂ ನವಂ ನವಂ
ತದೇವ ಶ್ಚಸನ್ ಮನಸೋ ಮಹೋತ್ಸವಂ
ತದೇವ ಶೋಕಾರ್ಣವ ಶೋಷಣಂ ನೃಣಾಂ
ಯದುತ್ತಮಶ್ಲೋಕ ಯಶೋನುಗೀಯತೇ

ಇದರಲ್ಲಿ ಮುಖ್ಯವಾದದ್ದು "ತದೇವ ಶೋಕಾರ್ಣವ ಶೋಷಣಂ ನೃಣಾಂ" ಎಂಬ ಮಾತುಗಳು. ಇಂಥಾ ಕಾವ್ಯಗಳಲ್ಲಿ ವರ್ಣಿತವಾಗಿರುವವನು ಅಂಥ ಮಹಾಪುರುಷ. ಮಾನವ ತನ್ನ ಬದುಕಿನಲ್ಲಿ ಪಡಬಹುದಾದ ಕಷ್ಟಕೋಟಲೆಗಳನ್ನು ಅನುಭವಿಸಿ ಅವುಗಳನ್ನು ಅಂತಸ್ಸತ್ತ್ವದಿಂದ ಗೆದ್ದು ಜಯಶಾಲಿಯಾಗಿ ಮೆರೆಯುವ ಒಬ್ಬ ಮಹಾಪುರುಷನ ಕಥೆ ಅಂಥಾದ್ದು. ಆತನ ಮತ್ತು ಆತನ ಪರಿವಾರದ, ಆ ಕಾಲದ ಜನರು ಪಡುವ ದೊಡ್ಡ ದೊಡ್ಡ ದುಃಖಗಳನ್ನು ನೆನೆಯುತ್ತಾ ನಮ್ಮ ಅಲ್ಪ ದುಃಖಗಳು ತೇಲಿ ಹೋಗುತ್ತವೆ. ಮನುಸ್ಸು ತನಗೆ ಸಹಜವಾದ ಸಂತೋಷ ಉಲ್ಲಾಸಗಳನ್ನು ಪಡೆಯುತ್ತದೆ. ಹೀಗೆ ಆತನ ಕಥೆಯನ್ನು ಓದುವವನು ಆತನ ಗೆಲವಿನಲ್ಲಿ ತಾನೂ ಪಾಲುಗೊಂಡು ತೇಜಸ್ವಿಯಾಗುತ್ತಾನೆ ಸಂತೋಷಿಯಾಗುತ್ತಾನೆ. ಆದದ್ದರಿಂದ ಶ್ರೀಮದ್ರಾಮಾಯಣವನ್ನು ಪಾರಾಯಣ ಮಾಡುವುದರಿಂದ ಅಲ್ಲಿನ ವ್ಯಕ್ತಿಗಳನ್ನು ಕಂಡು, ಅವರು ಅದನ್ನು ಮೀರಿದ್ದನ್ನು ಕಂಡು ಜಗತ್ತಿನಲ್ಲಿ ಆದಷ್ಟು ಸುಖ ಸಂತೋಷದಿಂದ ಬಾಳಬಹುದು ಎನಿಸುತ್ತದೆ.

ಈ ಹೊತ್ತಿನ ಮಾನವನ ಜೀವನವನ್ನು ಎರಡು ದೃಷ್ಟಿಗಳಿಂದ ನೋಡಬಹುದು. ಮೊದಲನೆಯದು "ಜಗತಿ ಹಿ ಬಹು ದುಃಖೇ", "ದುರ್ಲಭಃ ಪ್ರೀತಿಯೋಗಃ", "ಸಂಸಾರಂ ಸಾಗರಂ ಘೋರಂ ಅನಂತ ಕ್ಲೇಶ ಭಾಜನಂ" ಎಂಬಂಥ ಮಾತುಗಳು ಜಗತ್ತಿನ ನಿಸ್ಸಾರತೆಯನ್ನು ನಿಸ್ಸಂತೋಷದ ದೃಷ್ಟಿಯನ್ನು ತೋರಿಸುತ್ತದೆ.

ಮತ್ತೊಂದು, ಪುರಂದರದಾಸರ ಮಾತುಗಳಲ್ಲಿ "ಮಾನವ ಜನ್ಮ ದೊಡ್ಡದು; ಇದ ಹಾನಿ ಮಾಡಬೇಡಿ ಹುಚ್ಚಪ್ಪಗಳಿರ" ಎಂಬ ಮಾತು. "ದುರ್ಲಭಂ ಮಾನುಷಂ ಜನ್ಮ", "ಈಸಬೇಕು ಇದ್ದು ಜೈಸಬೇಕು"–ಇಂಥ ಸ್ಫೂರ್ತಿದಾಯಕವಾದ ವಾಕ್ಯಗಳೂ ಕೂಡ ನಮಗೆ ಜಗತ್ತಿನ ವಿಷಯದಲ್ಲಿ ಹೇಳಿರುವಂಥ ಮಾತುಗಳು.

ಮಹಾಸತ್ತ್ವರ ಬದುಕು ಎರಡನೆಯ ದೃಷ್ಟಿಯವರ ಮಾತನ್ನು ಸ್ವೀಕರಿಸಿ ಕೃತಾರ್ಥವಾಗುತ್ತದೆ.

ಶ್ರೀಮದ್ರಾಮಾಯಣದಲ್ಲಿ ಈ ಎರಡು ದೃಷ್ಟಿಗಳ ಸಮನ್ವಯವನ್ನೂ ನಾವು ನೋಡಬಹುದು.

ನಮ್ಮ ದಾರ್ಶನಿಕರು ಹೇಳಿರುವ ಚತುರ್ವಿಧ ಪುರುಷಾರ್ಥಗಳಲ್ಲಿ ದ್ವಿತೀಯ ಮತ್ತು ತೃತೀಯ ಪುರುಷಾರ್ಥಗಳು ಮಾನವನ ಸಕಲ ಯತ್ನಗಳಲ್ಲಿಯೂ ಗೋಚರಿಸುತ್ತವೆ. ಇವುಗಳಿಲ್ಲದೆ ಅವನ ಬದುಕು ನೀರಸವಾಗುತ್ತದೆ, ಜಡವಾಗುತ್ತದೆ, ಅರ್ಥಹೀನವಾಗುತ್ತದೆ. ಅರ್ಥ ಕಾಮಗಳ ಅಪೇಕ್ಷೆ ಸತ್ತ್ವವಂತರಲ್ಲಿ ಹುಲುಸಾಗಿ ಕಾಣಿಸಿಕೊಳ್ಳುತ್ತದೆ. ಇವುಗಳನ್ನು ನಿಯಂತ್ರಣಗೊಳಿಸಿ, ವ್ಯವಸ್ಥೆಗೊಳಿಸಿ ಅನುಭವಿಸಿದ್ದಾದರೆ ಅದು ಮನುಷ್ಯನ ಸಂತೋಷ ಉಲ್ಲಾಸಗಳಿಗೆ ಕಾರಣವಾಗುತ್ತದೆ. ಅವ್ಯವಸ್ಥಿತವಾಗಿ ಮನುಷ್ಯನನ್ನು ಅವು ಆಕ್ರಮಿಸಿದರೆ ಆತ ಅಲ್ಪ ಸ್ವಲ್ಪ ಸಂತೋಷಕ್ಕೂ

ಮಹಾದುಃಖಕ್ಕೂ ಈಡಾಗುತ್ತಾನೆ. ಈ ಅರ್ಥ ಕಾಮಗಳನ್ನು ನಿಯಂತ್ರಿಸಿ ಸದ್ವಿನಿಯೋಗಪಡಿಸುವ ಒಂದು ಆಧ್ಯಾತ್ಮಿಕ ಶಕ್ತಿ ಮಾನವನಲ್ಲಿಯೇ ಉತ್ಪತ್ತಿಯಾಗುತ್ತದೆ. ಇದನ್ನೇ ಧಾರ್ಮಿಕ ಶಕ್ತಿ ಎಂದು ಕರೆಯುತ್ತೇವೆ. ಅದನ್ನು ಪ್ರಥಮ ಪುರುಷಾರ್ಥವಾಗಿ ಮಾಡಿ, ಒಂದು ಒತ್ತನ್ನು ಕೊಟ್ಟು ಅರ್ಥಕಾಮಗಳನ್ನು ಅದರಿಂದ ನಿಯಂತ್ರಿಸಿ ಅರ್ಥಕಾಮಗಳನ್ನು ಚೆನ್ನಾಗಿ ಅನುಭವಿಸುವ ದ್ವಾರಾ ಜೀವನದಲ್ಲಿ ಸಂತೋಷವನ್ನು ಪಡೆಯಬಹುದು.

ವ್ಯಾವಹಾರಿಕ ಲೋಕದಲ್ಲಿ ಧರ್ಮ ಪ್ರವರ್ತಿಸುವುದು ನ್ಯಾಯ ಮತ್ತು ಮೈತ್ರಿಯ ಮೂಲಕ. ನೊಂದವನಿಗೆ ನ್ಯಾಯದಿಂದ ಸಿಗುವುದು ಸಮಾಧಾನ. ಅವನ ಎದುರಾಳಿಯೂ ನ್ಯಾಯವನ್ನು ಒಪ್ಪಿಕೊಂಡಾಗ ಅವನ ಲೋಭ ನಾಶವಾಗುತ್ತದೆ. ಅವನು ಧರ್ಮ ಪ್ರವೃತ್ತನಾಗಿ ಪವಿತ್ರನಾಗುತ್ತಾನೆ. ಹೀಗೆ ನ್ಯಾಯ ಇಬ್ಬರಿಗೂ ಹಿತವನ್ನು ತರುತ್ತದೆ. ಅವರಲ್ಲಿ ಪ್ರೀತಿಯ ಮನೋಭಾವನ್ನು ಹುಟ್ಟಿಸುತ್ತದೆ.

ಆದದ್ದರಿಂದ ಧರ್ಮವನ್ನು ಅರ್ಥಕಾಮಗಳ ವೈಜ್ಞಾನಿಕ ಕೃಷಿಗೆ ನಿಯುಕ್ತವಾದ ಊರ್ಜೆ ಎಂದು ಹೇಳಬಹುದು. ಇದನ್ನೇ ವ್ಯಾಸ ಮಹರ್ಷಿಗಳು "ಧರ್ಮಾತ್ ಅರ್ಥಶ್ಚ ಕಾಮಶ್ಚ" ಧರ್ಮದಿಂದ ಅರ್ಥವು ಪೂರೈಸಲ್ಪಡುತ್ತದೆ ಕಾಮವೂ ಪೂರೈಸಲ್ಪಡುತ್ತದೆ ಎಂದು ಎರಡು ಕೈಗಳನ್ನೂ ಎತ್ತಿ ಘೋಷಿಸಿದ್ದಾರೆ.

ಈ ಧಾರ್ಮಿಕ ಶಕ್ತಿಯ ದೌರ್ಬಲ್ಯದಿಂದ ಹೇಗೆ ಉನ್ನತರಾದ ಶ್ರೇಷ್ಠರಾದ ಪುರುಷರ ಬದುಕಿನಲ್ಲಿ ಅರ್ಥಕಾಮಗಳ ದುಷ್ಪ್ರವೃತ್ತಿಗಳು ಹುಟ್ಟುತ್ತವೆ ಎಂಬುದನ್ನು ಅಯೋಧ್ಯಾ ಕಾಂಡದಲ್ಲಿ ಅನುಪಮವಾದ ರೀತಿಯಲ್ಲಿ ಕವಿ ವರ್ಣಿಸಿರುವುದನ್ನು ನಾವು ಕಾಣಬಹುದು.

ಶ್ರೀಮದ್ರಾಮಾಯಣದ ತುಂಬ ಶೋಕ ತುಂಬಿದೆ. ಅದಕ್ಕೆ ಕಾರಣ ಅಲ್ಲಿಯ ಕೆಲವು ನಾಯಕರಲ್ಲಿ ಧಾರ್ಮಿಕ ಊರ್ಜೆಯ ಕೊರತೆ, ಅಥವಾ ಕಾಮಗಳ ಪ್ರಾಬಲ್ಯ. ಶ್ರೀರಾಮ, ಲಕ್ಷ್ಮಣ, ಭರತ, ಶತ್ರುಘ್ನ, ಸೀತೆಯರಲ್ಲಿ ಈ ಧಾರ್ಮಿಕ ಊರ್ಜೆ ಅತ್ಯಂತ ಶಕ್ತಿಯುತವಾಗಿ ವರ್ತಿಸುತ್ತಿರುವುದನ್ನೂ ಕಾಣುತ್ತೇವೆ.

ಅರ್ಥ ಕಾಮಗಳಲ್ಲಿ ಮುಖ್ಯವಾದ ಪ್ರವೃತ್ತಿ ಲೋಭ ಪ್ರವೃತ್ತಿ. "ಲೋಭಃ ಸರ್ವ ಗುಣಾನ್ ಹನ್ತಿ" ಎಂದು ಒಂದು ಆರ್ಯವಚನವಿದೆ. ಮತ್ತೊಂದು ಮಹಾವಾಕ್ಯ ವ್ಯಾಸರದು ಈ ರೀತಿ ಇದೆ :" ವಿಷಯಾಸಕ್ತ ಚಿತ್ತಾನಾಂ ಗುಣಃ ಕೋ ವಾ ನ ನಶ್ಯತೇ ನಮಾನುಷ್ಯಂ ನವೈದುಷ್ಯಂ ನಾಭಿಜಾತ್ಯಂ, ನಸತ್ಯವಾಕ್". ವಿಷಯಾಸಕ್ತ ಚಿತ್ತರಿಗೆ ಮಾನವೀಯತೆ ಪಾಂಡಿತ್ಯ, ಒಳ್ಳೆಯ ಕುಲದ ಮರ್ಯಾದೆ ಮತ್ತು ಸತ್ಯವಚನ–ಇಂಥ ಶ್ರೇಷ್ಠ ಗುಣಗಳು ನಾಶ ಹೊಂದುತ್ತವೆ. ವಿಷಯಾಸಕ್ತಿ, ಅರ್ಥ, ಕಾಮ ಪ್ರಪಂಚಕ್ಕೆ ಸೇರಿದ್ದು. ಭಗವಾನ್ ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ ಇದಕ್ಕೆ ಪೂರಕವಾಗಿ ಈ ಮಾತನ್ನು ಹೇಳಿದ್ದಾನೆ :

ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ
ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾದೇತತ್ರಯಂ ತ್ಯಜೇತ್ ॥

ಮನುಷ್ಯನ ಬದುಕಿನಲ್ಲಿ ಈ ಮೂರು ಅದಮ್ಯ ಶಕ್ತಿಗಳು ಪ್ರವರ್ತಿಸುತ್ತವೆ. ಭೂಲೋಕದಲ್ಲಿ ನರಕವನ್ನೇ ಸೃಷ್ಟಿ ಮಾಡುತ್ತವೆ. ಮಾನವನ ಇತಿಹಾಸದ ಪುಟ ಪುಟಗಳಲ್ಲಿ ಇದು ಸ್ಫುಟವಾಗಿ ಗೋಚರಿಸುತ್ತದೆ.

ತ್ಯಜೇತ್ ಎಂಬ ಮಾತನ್ನು ಕೃಷ್ಣ ಅರ್ಜುನನಂಥಾ ಮಹಾವೀರನಿಗೆ ಹೇಳಿದ್ದಾನೆ ಎಂಬುದನ್ನು ಗಮನಿಸಬೇಕು. ಆದದ್ದರಿಂದ ಇವುಗಳ ತ್ಯಜನ ಮಹಾಸತ್ತ್ವರಿಗೆ ಮಾತ್ರ ಸಾಧ್ಯ.

ಇಂಥ ದುರ್ದಮ್ಯವಾದ ಪ್ರವೃತ್ತಿಗಳ ಹಿಡಿತಕ್ಕೆ ಸಿಕ್ಕದೆ ಅವುಗಳನ್ನು ನಿಯಂತ್ರಿಸಿ ಈ ಜಗತ್ತಿನ ಸ್ಥಿತಿಗಳನ್ನು ಉತ್ತಮಗೊಳಿಸುವ ಮಹಾಪುರುಷನನ್ನು ಅವತಾರವೆಂದೇ ಪರಿಗಣಿಸಬೇಕು. ಶ್ರೀಮದ್ರಾಮಾಯಣದ ಶ್ರೀ ರಾಮ ಅಂಥಾ ಮಹಾಪುರುಷ. ಇದರಲ್ಲಿ ಆತನಿಗೆ ಸರಿಸಮವೆನಿಸುವವಳು ಸೀತಾದೇವಿ.

ಅಯೋಧ್ಯಾಕಾಂಡದಲ್ಲಿ ಕಂಡು ಬರುವ ಸಕಲ ಸದ್ಗುಣ ಸಂಪನ್ನೆಯಾದ ಪರಮ ಸುಂದರಿ ಕೈಕೆಯಿ, ರಾಮನಿಗೆ ಪಟ್ಟಾಭಿಷೇಕವಾಗುವ ಸಮಯದಲ್ಲಿ, ತನ್ನಿಂದ ಧಿಕ್ಕೃತಳಾದ ಕೌಸಲ್ಯೆ ಪ್ರಬಲಳಾಗಿ ತನಗೆ ಈಗಿರುವ ಪ್ರತಿಷ್ಠೆಗೆ ಕುಂದುಬರುತ್ತದೆ ಎಂಬ ಪ್ರತಿಷ್ಠಾ ಕಾಮದಿಂದ ವ್ಯಾಪ್ತಳಾಗಿ ಎಂಥ ದುಷ್ಕೃತ್ಯಕ್ಕೆ ಮನಮಾಡಿದಳು ! ಆ ಮಂಥರೆ, ರಾಮನು ಮುಂದೆ ಯುವರಾಜನಾದರೆ ಅಂತಃಪುರದಲ್ಲಿ ತನ್ನ ಆಡಳಿತ ಹಿಂದಿನಂತೆಯೇ ನಡೆಯಲಾರದು ಎಂಬ ವ್ಯಸನದಿಂದ ಆ ಕೈಕೆಯಿಯ ಮನಸ್ಸನ್ನು ಕೆಡಿಸಿದಳು. ಆ ಕೈಕೆಯಿಗೆ ರಾಮನ ಗುಣದಲ್ಲಿ ನಂಬಿಕೆಯಿತ್ತು. ಪಿತೃವಾಕ್ಯಪರಿಪಾಲನೆ ಮಾಡುತ್ತಾನೆಂಬ ನಂಬಿಕೆಯಿತ್ತು. ಆದರೆ ಭರತ ರಾಮನಿಗೆ ಸಮನಾದ ಗುಣಶಾಲಿ ಎಂಬುದು ಪುತ್ರವ್ಯಾಮೋಹದಿಂದ ಆಕೆಗೆ ಗೋಚರಿಸಲಿಲ್ಲ. ತನ್ನ ಮಗನಿಗೂ ರಾಜ್ಯಕಾಮ ಇದೆಯೆಂದು ಭಾವಿಸಿದಳು ಆಕೆ. ಆದರೆ ಮಹಾಪುರುಷ ಭರತ ಕಾಮರಹಿತನಾದವನು. ಆದದ್ದರಿಂದ ಕೈಕೆಯಿಯ ನಿರೀಕ್ಷೆ ವಿಫಲವಾಯಿತು.

ಹೀಗೆ ಅಯೋಧ್ಯಾಕಾಂಡದಲ್ಲಿ ವ್ಯಾಪಿಸಿರುವ ದುಃಖಕ್ಕೆ ಕಾರಣ ಕೈಕೆಯಿಯ ರಾಜ್ಯಕಾಮನೆ. ಜನಗಳಿಗಾದರೋ ರಾಮನಂಥ ಸದ್ಗುಣಿ ಸಿಗಲಿಲ್ಲವಲ್ಲ ಎಂಬ ದುಃಖವೇ. ಅದೂ ಕಾಮವೇ. ದಶರಥನನ್ನು ಧಿಕ್ಕರಿಸಿ ರಾಜ್ಯವಾಳು ಎಂದು ಅವರು ಪ್ರಚೋದಿಸುವುದೂ ಕಾಮವೇ.

ಇಲ್ಲಿ ಒಂದು ಸಂಗತಿಯನ್ನು ಗಮನಿಸಬೇಕು. ಸೀತೆ ರಾಮನನ್ನು, ತನ್ನನ್ನೂ ಕಾಡಿಗೆ ಕರೆದುಕೊಂಡು ಹೋಗು ಎಂದು ಕೇಳಿದಳೇ ಹೊರತು ಮಿಕ್ಕವರು ಸೂಚಿಸಿದಂತೆ ದಶರಥನನ್ನು ಧಿಕ್ಕರಿಸಿ ರಾಜನಾಗು ಎನ್ನಲಿಲ್ಲ.

ಆದರೆ ಇಂಥ ಕಾಮನೆಗಳಿಂದ ದೂರವಾಗಿರುವ ಶ್ರೀರಾಮ, ತಂದೆಯು ಮಾತನ್ನು ಮಗ ನಡಸಲಿಲ್ಲ ಎಂಬ ದೂರಿಗೆ ಪಾತ್ರನಾಗಿ, ಅವನ ರಾಜ ತೇಜಸ್ಸನ್ನು ಕುಂದಿಸಿ ತಾನು ರಾಜನಾಗುವ ಆಸೆಯಿಂದ ನಿರ್ಲಿಪ್ತನಾಗಿ, ಸಿಂಹಾಸನವನ್ನು ಏರಿದರೆ ರಾಜ್ಯ ಕೆಟ್ಟು ಹೋಗುತ್ತದೆ ಎಂಬ ದೂರದೃಷ್ಟಿಯಿಂದ, ರಾಜಹಿತ, ರಾಷ್ಟ್ರಹಿತ ಈ ಎರಡನ್ನೂ ಕಾಪಾಡಬೇಕಾದರೆ ತಾನು ತಂದೆಯು ಮಾತನ್ನು ನಡೆಸಬೇಕು ಎಂದು ರಾಜ್ಯತ್ಯಾಗ ಮಾಡಿದ. ದಶರಥನ ಮೇಲಿನ ಪ್ರೀತಿಯಿಂದ ರಾಮ ನಡೆದುಕೊಂಡದ್ದು ಹಾಗೆ. ಅದು ಮಹೋಜ್ರ್ಜಾವಂತನ ಲಕ್ಷಣ.

ಇದರಿಂದ ರಾಮನಲ್ಲಿ ವೈರಾಗ್ಯ ಹುಟ್ಟಿತು ಎಂದೇನೂ ಅಲ್ಲ. ಅವನು ಪ್ರೀತಿವಂತ ಮನುಷ್ಯ. ಎಷ್ಟು ಸುಖ ಸಾಧ್ಯವೋ ಅಷ್ಟನ್ನೂ ಪಡಬೇಕೆಂದು ಆಸೆಪಟ್ಟ ರಸಿಕ. ಅಂಥವನು ಇಂಥ ಒಂದು ತ್ಯಾಗವನ್ನು ಕೈಗೊಳ್ಳಬೇಕಾದರೆ ಅದು ಮಹಾ ಪುರುಷನಾದವನಿಗೆ ಮಾತ್ರ ಸಾಧ್ಯ. ರಾಮ ದಶರಥನ ಅಪ್ಪಣೆಯನ್ನು ಅಂಗೀಕರಿಸಿ ಬೀದಿಯಲ್ಲಿ ಹೋಗುತ್ತಿರಬೇಕಾದರೆ, ರಾಮ ಯುವರಾಜ ಪದವಿಯ ಸ್ವೀಕಾರಕ್ಕೆ ಹೋಗುವಾಗ ಯಾವ ಕಳೆ ಅವನ ಮುಖದಲ್ಲಿತ್ತೋ, ರಾಜ್ಯವನ್ನು ಪರಿತ್ಯಜಿಸಿ ಹೋಗುವಾಗ ಅದೇ ಬಗೆಯ ಕಳೆಯನ್ನು ಜನ ನೋಡಿದರು. ಆತನನ್ನು ನೋಡಿ ಜನ ಹೀಗೆ ಮಾತನಾಡಿಕೊಳ್ಳುತ್ತಾರೆ.

ಐಶ್ವರ್ಯಸ್ಯ ರಸಜ್ಞಃ ಸನ್ ಕಾಮಿನಾಂ ಚೈವ ಕಾಮದಃ
ನೇಚ್ಛತ್ಯೇವಾನೃತಂ ಕರ್ತುಂ ಪಿತರಂ ಧರ್ಮಗೌರವಾತ್ ॥

(ರಾಮನು ಐಶ್ವರ್ಯದ ಸವಿಯನ್ನು ಬಲ್ಲವನಾದರೂ ಬೇಡಿದವರಿಗೆ ಇಷ್ಟಾರ್ಥಗಳನ್ನು ಸಲ್ಲಿಸಲು ಶಕ್ತನಾದರೂ ಧರ್ಮದ ಅಭಿಮಾನದಿಂದ ತಂದೆಯನ್ನು ಮಾತಿಗೆ ತಪ್ಪಿದವನೆಂದು ಮಾಡಲು ಸರ್ವಥಾ ಬಯಸುವುದಿಲ್ಲ.)

ಕಾಮಲೋಭಗಳನ್ನು ಅದುಮಿಡುವ ಧಾರ್ಮಿಕೋಜ್ರ್ಜೆಯೇ ಅವನು ರಾಜ್ಯವನ್ನು ತ್ಯಜಿಸುವಂತೆ ಮಾಡಿತು.

ಶ್ರೀ ರಾಮನ ಬದುಕಿನಲ್ಲಿ ಬರುವ ಎರಡು ಮಹತ್ತ್ವದ ಪ್ರಸಂಗಗಳಲ್ಲಿ ಇದೊಂದು.

ಮತ್ತೊಂದು ಚಿತ್ರಕೂಟದಲ್ಲಿರುವಾಗ ಸ್ವರ್ಣಮೃಗದ ಬೆನ್ನಟ್ಟಿ ಹೋದದ್ದು. ಈ ಎರಡು ಪ್ರಸಂಗಗಳನ್ನು ಕುರಿತು ಭಾಗವತಕಾರರು ಒಂದು ಮನೋಹರವಾದ ಶ್ಲೋಕವನ್ನು ಹೇಳಿದ್ದಾರೆ. ಎರಡು ಕೃತ್ಯಗಳೂ ಕೂಡ ಪ್ರೀತಿಯಿಂದ ಪ್ರಚೋದಿತವಾದದ್ದು.

ತ್ಯಕ್ತ್ವಾ ಸುದುತ್ಯಜ ಸುರೇಪ್ಸಿತ ರಾಜ್ಯಲಕ್ಷ್ಮೀಂ
ಧರ್ಮಿಷ್ಠ ಆರ್ಯವಚಸಾ ಯದಗಾದರಣ್ಯಂ
ಮಾಯಾಮೃಗಂ ದಯಿತಯೇಪ್ಸಿತ ರನ್ವ ಧಾವತ್
ವಂದೇ ಮಹಾಪುರುಷ ತೇ ಚರಣಾರವಿಂದಂ

ರಾಜ್ಯತ್ಯಾಗದಲ್ಲಿ ಧರ್ಮಪ್ರಜ್ಞೆಯ ಜೊತೆಗೆ ತಂದೆಯ ಮೇಲೆ ಇರುವ ಪ್ರೀತಿ ಸೇರಿಗೊಂಡಿದೆ. ಅದು ದೇವ ದುರ್ಲಭವಾದ ರಾಜ್ಯಶ್ರೀಯನ್ನು ತೊರೆಯುವಂತೆ ಮಾಡಿತು. ಮತ್ತೊಂದು ಪ್ರಸಂಗದಲ್ಲಿ ಎಂದೂ ಏನನ್ನೂ ಬಯಸದ ತನ್ನ ಪ್ರೀತಿ ಪಾತ್ರಳಾದ ಸೀತೆ ಇದೊಂದು, ಚಿನ್ನದ ಜಿಂಕೆಗೆ ಆಸೆಪಟ್ಟಿದ್ದಾಳೆ. ಅದನ್ನು ಪೂರೈಸುವುದು ತನ್ನ ಕರ್ತವ್ಯವೆಂದುಕೊಳ್ಳುತ್ತಾನೆ. ಇಲ್ಲಿಯೂ ಧರ್ಮಪ್ರೀತಿ ಸೇರಿದೆ.

ಇಲ್ಲಿ ಸೀತೆಗೂ ಸ್ವಲ್ಪ ಲೋಭ ಇದೆ ಎಂದು ಕಾಣುತ್ತದೆ. ಅದು ಅವಳ ಯಾವ ಗುಣಗಳನ್ನು ಕಡಿಮೆ ಮಾಡದಿದ್ದರೂ ದುರಂತಕ್ಕೆ ಕಾರಣವಾಯಿತು. ಆಮೇಲೆ ರಾಮ ಅತ್ತ ಹೋಗಿ ಮಾರೀಚ ಮಾಯಾಮೃಗವನ್ನು ಸಂಹಾರ ಮಾಡಿ, ಅವನು ಕೂಗಿಕೊಂಡಾಗ, ರಾಮನ ಮೇಲಿನ ಅತೀವವಾದ ಪ್ರೀತಿಯಿಂದ ರಾಮನು ಎಂಥಾ ಶೂರ ಎಂಬುದು ಕೂಡ ಮರೆತುಹೋಯಿತು. ಭೀತಿ ಅವಳನ್ನಾವರಿಸಿತು. ಹೀಗೆ ಆಕೆ ಸ್ವಲ್ಪಕಾಲ ಲೋಭಕ್ಕೆ ವ್ಯಾಮೋಹಕ್ಕೆ ಬಲಿಯಾದಳು. ಆದರೆ ಆಕೆ ಮಹಾ ಛಲಗಾತಿ, ಧೈರ್ಯಶಾಲಿಯಾದದ್ದರಿಂದ ಬದುಕಿ ಬಂದಳು.

ರಾವಣ ಮಹಾಸತ್ತ್ವಶಾಲಿಯಾದರೂ ಮಾರೀಚನ ಹಿತವಾಕ್ಯವನ್ನು ಕೇಳಲಿಲ್ಲ. "ಅಪ್ರಿಯಸ್ಯ ಚ ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ" ಎಂಬುದಾಗಿ ಮಾರೀಚ ನೊಂದುಕೊಳ್ಳಬೇಕಾಯಿತು.

ಹನುಮಂತ ರಾವಣನನ್ನು ಅಂತಃಪುರದಲ್ಲಿ ನೋಡಿ ಹೇಳಿದ ಮಾತು ; ಅವನಲ್ಲಿ ಒಂದು ದುರ್ಗುಣವಿಲ್ಲದಿದ್ದರೆ ರಾಕ್ಷಸರಿಗೆ ಮಾತ್ರವೇ ಅಲ್ಲ ದೇವತೆಗಳಿಗೂ ದೇವೇಂದ್ರನಿಗೂ ಸಹ ಅಧಿಪತಿಯಾಗಬಲ್ಲ, ಇವನು ಎಂಥಾ ಮಹಾಪುರುಷ ಎಂದುಕೊಳ್ಳುತ್ತಾನೆ. ಆತನ ದುರಂತ, ಕಾಮದಲ್ಲಿ ನಿಗೂಢವಾಗಿದೆ. ಅದನ್ನು ಜಯಿಸುವಷ್ಟು ಧಾರ್ಮಿಕ ಊರ್ಜೆ ಅವನಲ್ಲಿ ಇರಲಿಲ್ಲ.

ಅಶೋಕ ವನದಲ್ಲಿ ಸರ್ವಾಲಂಕಾರ ಭೂಷಿತನಾಗಿ ಸೀತೆಯನ್ನು ನೋಡಲು ಹೋದ ರಾವಣನ ದುರವಸ್ಥೆಯನ್ನು ಈ ಶ್ಲೋಕ ತಿಳಿಸುತ್ತದೆ :

ಚಾರುಸ್ಮಿತೇ ಚಾರುದತಿ ಚಾರುನೇತ್ರೇ ವಿಲಾಸಿನೀ
ಮನೋ ಹರಸಿ ಮೇ ಭೀರು ಗರುಡಃ ಪನ್ನಗಂ ಯಥಾ

ಸೀತೆಯ ಸೌಂದರ್ಯವೆಂಬ ವೈನತೇಯನ ಕಾಲುಗಳಿಗೆ ಸಿಕ್ಕಿ ವಿಲಿವಿಲಿ ಯಾಡುತ್ತದೆ ರಾವಣನ ಜೀವ.

ಸೀತೆಗಾದರೋ,

ಸ್ಮಶಾನ ಚೈತ್ಯ ಪ್ರತಿಮಃ ಭೂಷಿತೋಽ ಪಿ ಭಯಂಕರಃ

ಎಂಬಂತೆ ಅಸಹ್ಯವಾಗಿ ರಾವಣ ಕಂಡ.

ಆಭರಣಗಳಿಂದ ಅಲಂಕೃತನಾಗಿದ್ದರೂ ಸೀತೆಗೆ ರಾವಣ ಸ್ಮಶಾನದ ಒಂದು ಭೀಕರವಾದ ಮರದಂತೆ ಕಂಡನು. ಈತ ಕಾಮುಕ್ಕೆ ಸಿಕ್ಕಿದವನು, ಆಕೆ ಕಾಮ ವರ್ಜಿತಳು ಎಂಬುದನ್ನು ಈ ಎರಡು ಶ್ಲೋಕಗಳು ಚೆನ್ನಾಗಿ ವರ್ಣಿಸುತ್ತವೆ.

ರಾಮ ತನ್ನ ಕುಲದ ವಿಚಾರದಲ್ಲಿ ತಂದೆಯ ವಿಚಾರದಲ್ಲಿ ತುಂಬ ವ್ಯಾಮೋಹ ವುಳ್ಳವನು. ಮೋಹ ಎಂಬುದೂ ಅರಿಷಡ್ವರ್ಗದಲ್ಲಿ ಒಂದು. ರಾವಣಸಂಹಾರವಾದ ಮೇಲೆ ಈ ಮೋಹದಿಂದ ಕಲುಷಿತನಾದ ಮನುಷ್ಯ ಸೀತೆಯನ್ನು ಧಿಕ್ಕರಿಸುತ್ತಾನೆ. ತನ್ನ ಅಪ್ಪಣೆಯ ಮೇರೆಗೆ ಸರ್ವಾಲಂಕಾರ ಭೂಷಿತೆಯಾಗಿ ಸೀತೆ ಬಂದು ಎದುರಲ್ಲಿ ನಿಂತಾಗ ಆಕೆಯನ್ನು ನೋಡಿ ಹೀಗೆನ್ನುತ್ತಾನೆ :

ದೀಪೋ ನೇತ್ರಾತುರಸ್ಯೇವ ಪ್ರತಿಕೂಲಾಸಿ ಮೇ ದೃಢಂ

ಸೀತೆಯ ಪಾರಿಶುದ್ಧ್ಯದ ವಿಷಯವಾಗಿ ರಾಮನಿಗೆ ಅಂತರಂಗದಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಆದರೆ ಜನಾಭಿಪ್ರಾಯದ ಭೀತಿಯಿಂದ ಈ ಮಾತನ್ನು ಹೇಳುತ್ತಾನೆ. ಕಣ್ಣು ಬೇನೆಯಿರುವವನಿಗೆ ದೀಪವನ್ನು ನೋಡಲು ಸಾಧ್ಯವಿಲ್ಲ. ಅದು ಅವನ ಕಣ್ಣನ್ನು ಚುಚ್ಚುತ್ತದೆ. ದೀಪ ಮಂಗಳಕಾರವಾದದು. ಕಣ್ಣು ಬೇನೆಯಿರುವವನಿಗೆ ಅದನ್ನು ನೋಡಲಾಗುವುದಿಲ್ಲ. ದೋಷವಿರುವುದು ಕಣ್ಣಿನಲ್ಲಿ. ಅದಕ್ಕಾಗಿ ಇವನ ಬೇನೆಯನ್ನು ಕಳೆಯಲು ಸೀತೆ ಅಗ್ನಿ ಪ್ರವೇಶ ಮಾಡಬೇಕಾಯಿತು.

ವಾಲಿ ಸುಗ್ರೀವರ ಪ್ರಸಂಗದಲ್ಲಿ, ವಿಭೀಷಣ ರಾವಣರ ಪ್ರಸಂಗದಲ್ಲಿ, ಈ ಅರಿ ಷಡ್ವರ್ಗಗಳ ಧಾರ್ಮಿಕೂರ್ಜೆಯ ಶೈಥಿಲ್ಯವನ್ನು ನಾವು ಕಾಣುತ್ತೇವೆ.

ಹೀಗೆ ಸೀತೆ ಕೂಡ ಲಕ್ಷ್ಮಣನನ್ನು ರಾಮನನ್ನು ದೂಷಿಸಿದ್ದಕಾಗಿ ತಕ್ಕ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಾಯಿತು. ಅದಾದ ನಂತರ ರಾಮ ನೈಜವಾದ ಪ್ರೀತಿ ತೋರಿಸುತ್ತಾನೆ. ಅಯೋಧ್ಯೆಗೆ ಹೋದ ಮೇಲೆ,

ರಾಮಂ ರತ್ನಮಯೇ ಪೀಠೇ ಸಹಸೀತಂ ನ್ಯವೇಷಯತ್

ಮನುಕುಲದ ಸಿಂಹಾಸನದಲ್ಲಿ ಕೂರಿಸಲ್ಪಟ್ಟು ಮಹರ್ಷಿಗಳಿಂದ ಅಭಿಷೇಕ ಮಾಡಲ್ಪಡು ತ್ತಾರೆ.

ಇಂಥಾ ಮಹಾಪುರುಷನಾದ ರಾಮನನ್ನು ವರ್ಣಿಸುತ್ತದೆ ಈ ಧ್ಯಾನ ಶ್ಲೋಕ :

ವಾಮೇ ಭೂಮಿ ಸುತಾ ಪುರಶ್ಚ ಹನುಮಾನ್ ಪಶ್ಚಾತ್ ಸುಮಿತ್ರಾಸುತಃ
ಶತ್ರುಘ್ನೋ ಭರತಶ್ಚ ಪಾಮ ದಯೋರ್ವಾಯ್ವಾದಿ ಕೋಣೇಷುಚ
ಸುಗ್ರೀವಶ್ಚ ವಿಭೀಷಣಶ್ಚ ಯುವರಾಟ್ ತಾರಾಸುತೋ ಜಾಂಬವಾನ್
ಮಧ್ಯೇ ನೀಲಸರೋಜ ಕೋಮಲ ರುಚಿಂ ರಾಮಂ ಭದೇ ಶ್ಯಾಮಲಮ್

ಇಲ್ಲಿ ಉತ್ತರ ಕಾಂಡವನ್ನು ನೆನೆಯುವುದಿಲ್ಲ. ಅದು ಪಾರಾಯಣ ಯೋಗ್ಯವೂ ಅಲ್ಲ. ಅದು ವಾಲ್ಮೀಕಿ ಪ್ರಣೀತವೇ ಎಂಬುದೇ ಸಂದೇಹ. ಆದದ್ದರಿಂದ ಈ ಧ್ಯಾನ ಶ್ಲೋಕದಲ್ಲಿ ನಿಲ್ಲೋಣ. ನಿಂತು ರಾಮನಂಥ ಮಹಾ ಪುರುಷನನ್ನು ಮನಸ್ಸಿನಲ್ಲಿ ತುಂಬಿಕೊಳ್ಳೋಣ.

ಈ ಚಿತ್ರದಲ್ಲಿ ಶ್ರೀಮದ್ರಾಮಾಯಣದ ಹತ್ತು ಪಾತ್ರಗಳು ಸಮ್ಮಿಳಿತವಾಗಿದ್ದಾರೆ. ಇದರಲ್ಲಿ ಐವರು ಉತ್ತರ ಭಾರತಕ್ಕೆ ಸೇರಿದವರು. ಮತ್ತೆ ಐವರು ವಿಂಧ್ಯದ ಕೆಳಗಿನ ಮಧ್ಯ ಮತ್ತು ದಕ್ಷಿಣ ಭಾರತಗಳಿಗೆ ಸೇರಿದವರು ಈ ಹತ್ತು ಮಹಾವ್ಯಕ್ತಿಗಳ ದರ್ಶನದಿಂದ ನಮಗೆ ಭಾರತೀಯ ಸಂಸ್ಕೃತಿಯೆಂದು ಯಾವುದನ್ನು ತಿಳಿಯು ತ್ತೇವೆಯೋ ಆ ಸಂಸ್ಕೃತಿಯ ಅಖಂಡ ದರ್ಶನ ನಮಗೆ ಸಿಗುತ್ತದೆ.

ಮೊದಲು ಸೀತಾದೇವಿ ನಮ್ಮ ಧ್ಯಾನಕ್ಕೆ ಸಿಗುತ್ತಾಳೆ. ಸಿಂಹಾಸನಸ್ಥನಾದ ಶ್ರೀ ರಾಮನ ಎಡಭಾಗದಲ್ಲಿ ಆಸೀನಳಾಗಿದ್ದಾಳೆ. ಎಡಭಾಗ ಸ್ತ್ರೀಯರಿಗೆ ಸೌಭಾಗ್ಯ ಸ್ಥಾನ. ದಂಪತಿಗಳಿಗೆ ಹಿರಿಯರು ಮಾಡುವ ಎಲ್ಲ ಆಶೀರ್ವಾದಗಳೂ ಈ ಸೌಭಾಗ್ಯ ಸ್ಥಾನದಲ್ಲಿರುವ ಧರ್ಮಪತ್ನಿಗೆ ಸಲ್ಲುತ್ತವೆ. ಸೀತಾದೇವಿ ರಾಮನಷ್ಟೇ ಮಹತ್ವ ವುಳ್ಳವಳು. ಅವನ ಹಾಗೆಯೇ ಲೋಕೋತ್ತರೆ. ಈ ಲೋಕೋತ್ತರರ ವಿಷಯವಲ್ಲಿ ಒಂದು ಗಾದೆಯ ಮಾತಿವೆ. ಅವರ ಮನಸ್ಸು ವಜ್ರಕ್ಕಿಂತ ಕಠಿಣವಾದದ್ದು, ಹೂವಿಗಿಂತ ಮೃದುವಾದದ್ದು ಎಂದು. ಈ ಎರಡು ಗುಣಗಳೂ ಪ್ರಸಂಗೋಚಿತವಾಗಿ ವರ್ತಿಸುತ್ತದೆ. ಈ ಕಠೋರವೃತ್ತಿಯನ್ನು ಸೀತೆಯಲ್ಲಿ ನಾಲ್ಕು ಬಾರಿ ಕಾಣುತ್ತೇವೆ. ಶ್ರೀರಾಮನು ಕಾಡಿಗೆ ಹೊರಟಾಗ ತನ್ನನ್ನು ಇಲ್ಲಿ ಬಿಟ್ಟು ಹೋಗಬಾರದು ಎಂಬ ಛಲದಿಂದ ಕಠೋರವಾದ ಮಾತನ್ನು ಹೇಳುತ್ತಾಳೆ. ಅದು ಪ್ರೀತಿಯಿಂದ ಹೇಳಿದ ಮಾತು ; ಅಗಲಲಾರದ ಸತಿಯ ಮಾತು. ಇಲ್ಲಿ ಒಂದು ವಿಶೇಷ ಕಂಡು ಬರುತ್ತದೆ. ಎಲ್ಲಿ ನಿಷ್ಕಲ್ಮಷವೂ ಗಾಢವೂ ಆದ ಪ್ರೀತಿ ಇದೆಯೋ ಅಂಥ ಪ್ರೀತಿಯಿರುವ ವ್ಯಕ್ತಿಗೆ

ತನ್ನ ಪ್ರೀತಿಗೆ ಪಾತ್ರನಾದ ವ್ಯಕ್ತಿಯ ವಿಷಯದಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರುತ್ತದೆ. ಸೀತೆ ತನ್ನ ವ್ಯಕ್ತಿತ್ವವನ್ನು ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ರಾಮನನ್ನು ಅಪೇಕ್ಷಿಸಿದಳು. ಭರತನ ಆಳ್ವಿಕೆಯಲ್ಲಿದ್ದರೆ ಎರಡಕ್ಕೂ ಧಕ್ಕೆ ಬರುತ್ತದೆ ಎಂಬ ಶಂಕೆ ಅವಳಿಗೆ. ಮತ್ತೊಂದು ಸಂದರ್ಭದಲ್ಲಿ ಲಕ್ಷ್ಮಣನನ್ನು ಕುರಿತು ಕಠೋರವಾದ ಮಾತುಗಳನ್ನಾಡುತ್ತಾಳೆ. ಅದೂ ರಾಮನಲ್ಲಿ ವಿಶೇಷವಾದ ಪ್ರೀತಿಯಿಂದಲೇ. "ಅತಿಸ್ನೇಹಃ ಪಾಪ ಶಂಕೀ". ಪ್ರೀತಿ ಪಾತ್ರರಾದವರ ವಿಷಯದಲ್ಲಿ ತುಂಬ ಆತಂಕ ಪಡುತ್ತೇವೆ. ಅದು ಪ್ರೀತಿಯಿಂದಲೇ ಹುಟ್ಟಿದ್ದು. ರಾವಣನನ್ನು ಕಂಡು ಕಠೋರವಾಗಿ ಧಿಕ್ಕರಿಸುತ್ತಾಳೆ. ಈ ಕಠೋರತೆ ಅವಳ ಪಾತಿವ್ರತ್ಯವನ್ನು ಕಾಪಾಡಿತು. ನಾಲ್ಕನೆಯ ಸಲ ರಾಮ ತನ್ನ ವಿಷಯದಲ್ಲಿ ಶಂಕೆಗೆ ಒಳಗಾದಾಗ ಆತನನ್ನು ಕುರಿತು ಕಠೋರವಾದ ಮಾತುಗಳನ್ನಾಡಿ ಅಗ್ನಿಪ್ರವೇಶ ಮಾಡುತ್ತಾಳೆ. ಈ ಕೃತ್ಯದಿಂದ ರಾಮ ಪರಿಶುದ್ಧನಾದ. ಹೀಗೆ ಇವೆಲ್ಲ ಆಕೆಯ ಕಠೋರ ವೃತ್ತಿಗಳಿಗೆ ಉದಾಹರಣೆ.

ಇನ್ನು ಆಕೆ ಮೃದುವಾಗಿ ವರ್ತಿಸಿದ್ದು. ಹನುಮಂತ ರಾವಣ ವಧೆಯ ವೃತ್ತಾಂತವನ್ನು ಸೀತೆಗೆ ಹೇಳಿ ಆಕೆಗೆ ಹರ್ಷವನ್ನು ತಂದು "ನಿನ್ನನ್ನು ಕಾಡಿದ ಈ ರಾಕ್ಷಸಿಯರನ್ನು ಹಲ್ಲಿನಿಂದ ಅಗಿದು, ಗುದ್ದಿ, ಪರಚಿ ಕೊಂದುಬಿಡುತ್ತೇನೆ" ಎಂದು ಆರ್ಭಟಿಸಿದಾಗ :

ಕಾರ್ಯಂ ಕರುಣಮಾರ್ಯೇಣ ನ ಕಶ್ಚಿನ್ನಾಪರಾಧ್ಯತಿ ॥

ಎನ್ನುತ್ತಾಳೆ. "ಆ ರಾಕ್ಷಸಿಯರು ಅವರ ರಾಜನಿಗೆ ಅಧೀನರಾಗಿ ಹಾಗೆ ನಡೆದು ಕೊಂಡರು. ಅವರ ತಪ್ಪನ್ನು ಗಣನೆಗೆ ತೆಗೆದುಕೊಳ್ಳಬಾರದು. ಈ ಲೋಕದಲ್ಲಿ ತಪ್ಪು ಮಾಡದವರು ಯಾರಿದ್ದಾರೆ ?" ಎಂದು ಹೇಳಿ ಅತ್ಯಂತ ಮೃದುವಾದ ಮನಸ್ಸನ್ನು ಪ್ರಕಾಶಪಡಿಸುತ್ತಾಳೆ.

ಹಾಗೆಯೇ ಅಗ್ನಿದಿವ್ಯದ ರಾಮನ ಅಷ್ಟು ಸಮೀಚೀನವಲ್ಲದ ಕೆಲಸವನ್ನು ಮನ್ನಿಸಿ ಯಾವ ಕಹಿಯನ್ನೂ ಮನಸ್ಸಿನಲ್ಲಿ ಇಟ್ಟುಕೊಳ್ಳದೆ ಪುಷ್ಪಕದಲ್ಲಿ ತೆರಳಿ ಅವನೊಡನೆ ಸಿಂಹಾಸನದಲ್ಲಿ ಆಸೀನಳಾಗಿ ಋಷಿಗಳಿಂದ ಅಭಿಷಕ್ತಳಾದ ಸೀತೆ ವಿರಾಜಮಾನಳಾಗಿ ನಮ್ಮ ದೃಷ್ಟಿಗೆ ಗೋಚರಿಸುತ್ತಾಳೆ. ರಾಮನ ವಿಷಯದಲ್ಲಿ ಆಕೆಯ ಮಧುರ ಭಾವ ಮನಸ್ಸಿಗೆ ಬಹಳ ಸಂತೋಷವನ್ನು ತರುತ್ತದೆ.

ಪರೋಕ್ಷದಲ್ಲಿ ಅನಸೂಯೆಗೆ ತನ್ನ ರಾಮನ ಗುಣವನ್ನು ವರ್ಣಿಸುವಾಗ ಈ ಮಾತುಗಳು ಅವಳಿಂದ ಹೊರಡುತ್ತವೆ ;

ಕಿಂ ಪುನರ್ಯೋ ಗುಣಶ್ಲಾಘ್ಯಃ ಸಾನುಕ್ರೋಶೋ ಜಿತೇಂದ್ರಿಯಃ ।
ಸ್ಥಿರಾನುರಾಗೋ ಧರ್ಮಾತ್ಮಾ ಮಾತೃವತ್ ಪಿತೃವತ್ ಪ್ರಿಯಃ ॥

"ತಂದೆ ತಾಯಿಯರ ಹಾಗೆ ಯಾವ ಪ್ರತಿಫಲವನ್ನೂ ಅಪೇಕ್ಷಿಸದೆ ನನ್ನನ್ನು ನೋಡಿಕೊಂಡ ರಾಮ. ನಾನು ಇಷ್ಟಪಡದೆ ನನ್ನ ಮೇಲೆ ಪ್ರಭುತ್ವವನ್ನು ಚಲಾಯಿಸಲಿಲ್ಲ. ಸಾನು ಕ್ರೋಶಃ, ಕನಿಕರದಿಂದ ನೋಡಿಕೊಂಡ. ನಿರ್ವ್ಯಾಜ ಪ್ರೀತಿಯಿಂದ ನೋಡಿಕೊಂಡ." ಈ ಮಾತುಗಳನ್ನು ಹೆಂಡತಿಯ ಬಾಯಿಂದ ಹೊರಡಿಸಿಕೊಂಡ ರಾಮ ಪುಣ್ಯಶಾಲಿಯೇ ಸರಿ. ಅದಲ್ಲದೆ ಅಶೋಕ ವನದಲ್ಲಿ, ಹನುಮಂತ ನೋಡುತ್ತಿದ್ದಂತೆ, ಆಕೆ ರಾಮನನ್ನು ನೆನೆದು ಬಹು ಸುಂದರವಾದ ಈ ಮಾತುಗಳನ್ನು ಹೇಳುತ್ತಾಳೆ :

ತಂ ಪದ್ಮದಲ ಪತ್ರಾಕ್ಷಂ ಸಿಂಹವಿಕ್ರಾಂತ ಗಾಮಿನಮ್
ಧನ್ಯಾಃ ಪಶ್ಯಂತಿ ಮೇ ನಾಥಂ ಕೃತಜ್ಞಂ ಪ್ರಿಯವಾದಿನಮ್

ಬಹು ಸುಂದರವಾದ ಮಾತುಗಳು. "ಒಂದೂ ಗಡುಸಾದ ಮಾತಿಲ್ಲ. ಅಂಥ ಪುರುಷೋತ್ತಮನನ್ನು ಬೇರೆಯವರು ನೋಡುತ್ತಾರೆ. ನನಗೆ ಅಂಥ ಭಾಗ್ಯವಿಲ್ಲವಲ್ಲ !" ಈ ಶ್ಲೋಕದಲ್ಲಿ ರಾಮನ ವಿಷಯದಲ್ಲಿ ಸೀತೆಯ ಪ್ರೀತಿ ಗೌರವ ಬಹುಮಾನಗಳು ಮಡುಗಟ್ಟಿವೆ.

ಮೇಲೆ ಹೇಳಿದ ಧ್ಯಾನ ಶ್ಲೋಕದಲ್ಲಿ ಆಕೆಯ ಬಲಮಗ್ಗುಲಲ್ಲಿ ಶ್ರೀರಾಮ ವಿರಾಜಿಸುತ್ತಿದ್ದಾನೆ. ಅಗ್ನಿದಿವ್ಯದಲ್ಲಿ ಹೊರತು ಬೇರೆ ಎಲ್ಲೂ ಸೀತೆಯನ್ನು ಆತ ಕಠಿಣವಾಗಿ ನಡಸಿಕೊಂಡದ್ದು ಕಂಡು ಬರುವುದಿಲ್ಲ. ಆಕೆಯನ್ನು ಕಂಡರೆ ಅತನಿಗೆ ಪ್ರೀತಿಯೊಂದೇ ಅಲ್ಲ, ತುಂಬ ಗೌರವ ಮನ್ನಣೆ ಇತ್ತು. ಆತನಿಗೆ ಒಬ್ಬನಿಗೇ ಅಲ್ಲ ಲಕ್ಷ್ಮಣನಿಗೂ ಗೌರವಾದರ ಭಕ್ತಿಭಾವಗಳು ಆಕೆಯ ವಿಷಯದಲ್ಲಿತ್ತು.

ಇದಕ್ಕೆ ನಿದರ್ಶನವಾಗಿ ಒಂದು ಸಣ್ಣ ಪ್ರಸಂಗವನ್ನು ಇಲ್ಲಿ ನಾವು ಸೂಚಿಸಬಹುದು. ಗಂಗಾನದಿಯನ್ನು ದಾಟಿದ ಮೇಲೆ ರಾಮ ಲಕ್ಷ್ಮಣ, ಸೀತೆ ಮೂವರೇ ದಂಡಕಾರಣ್ಯವನ್ನು ಕುರಿತು ಹೊರಟಿದ್ದಾರೆ. ಮಧ್ಯದಲ್ಲಿ ವೇಗವಾಗಿ ಹರಿಯುತ್ತಿದ್ದ ಯಮುನಾನದಿ ಸಿಗುತ್ತದೆ. ಅದನ್ನು ದಾಟಲು ದೃಢವಾದ ತೆಪ್ಪವನ್ನು ರಾಮ ಲಕ್ಷ್ಮಣರು ಅಲ್ಲಿನ ಮರದ ಕೊಂಬೆಗಳಿಂದ ಬಿದಿರಿನಿಂದ ಬಳ್ಳಿಗಳಿಂದ ಕಟ್ಟುತ್ತಾರೆ. ಆ ತೆಪ್ಪದಲ್ಲಿ ಸೀತೆಗೋಸ್ಕರವಾಗಿಯೇ ಲಕ್ಷ್ಮಣ ಬೆತ್ತ ಲಾವಂಚ ಮೆದೆಹುಲ್ಲು ಹಾಸನ್ನು ಹಾಸುತ್ತಾನೆ. ಸೀತೆಯು ಒಡವೆಗಳನ್ನು ಇಟ್ಟುಕೊಳ್ಳುವುದಕ್ಕೆ ಬೇರೆ ಒಂದು ಸ್ಥಳವನ್ನು ಕಲ್ಪಿಸುತ್ತಾನೆ. ಆದರೆ ಸೀತೆಗೆ ತೆಪ್ಪ ಏರಲು ಬಾರದು. ಕಾಲಿಟ್ಟರೆ ತೆಪ್ಪ ಮುಂದೆ ಸರಿಯುತ್ತದೆ. ಆಗ ಶ್ರೀರಾಮ :

ತತ್ರಶ್ರಿಯಮಿವಾಚಿಂತ್ಯಾಂ ರಾಮೋ ದಾಶರಥಿಃ ಪ್ರಿಯಾಮ್ ॥
ಈಷತ್ಸಂಲಜ್ಜಮಾನಾಂ ರಾಮಧ್ಯಾರೋಕಪಯ ತಪ್ಲವಮ್ ।

ಲಜ್ಜೆಯಿಂದ ಅರಳಿ ಕೆಂಪಾದ ಸೀತೆಯನ್ನು ಶ್ರೀರಾಮ ತೆಪ್ಪಕ್ಕೆ ಹೇಗೆ ಹತ್ತಿಸುತ್ತಾನೆ ಎಂಬುದು ಚಿತ್ರಕಾರನ ಪ್ರತಿಭೆಯನ್ನು ಕೆಣಕುತ್ತದೆ. ಎತ್ತಿಕೊಂಡು ಹೋಗಿ ಕೂರಿಸಿದನೆ ? ಹಸ್ತಲಾಘವ ಕೊಟ್ಟು ಏರಿಸಿದನೆ ? ಲಜ್ಜಾವೃತವಾದ ಸೀತೆಯ ಮುಖ ಹೇಗಿದ್ದಿತು ? ಈ ಸುಂದರವಾದ ಸನ್ನಿವೇಶ ಮನಸ್ಸನ್ನು ಉಲ್ಲಾಸಗೊಳಿಸುತ್ತದೆ. ಆ ನದಿಯನ್ನು ದಾಟಿಸಲು ಎಷ್ಟು ಸೌಕರ್ಯವನ್ನು ಕಲ್ಪಿಸಿದರು ಅವರು ! ಎಷ್ಟು ಮಧುರ ಭಾವ ತುಂಬಿದೆ ಇಲ್ಲಿ ! ಸೀತೆಯ ಇಡೀ ವ್ಯಕ್ತಿತ್ವದ ಸಾರವನ್ನೇ ಕಡೆದು ನಿಲ್ಲಿಸುತ್ತವೆ ಈ ಶ್ಲೋಕಗಳು.

ಸೀತೆ ಪರಮ ಸುಂದರಿ, ಪ್ರೌಢೆ, ಮನಸ್ವಿನಿ, ಸುಸಂಸ್ಕೃತೆ. ರಾವಣನಿಂದ ಅಪಹೃತಳಾದ ಸೀತೆಯನ್ನು ನೆನೆದು ರಾಮ ಈ ಮಾತುಗಳನ್ನು ಹೇಳುತ್ತಾನೆ.

ತಚ್ಚಾರ್ವಂಚಿತ ಪಕ್ಷ್ಮಾಕ್ಷಂ ಸುಗಂಧಿ ಶುಭಮವ್ರಣಮ್
ಅಪಶ್ಯತೋ ಮುಖಂ ತಸ್ಯಾಃ ಸೀದತೀವ ಮನೋ ಮಮ
ಸ್ಮಿತಹಾಸ್ಯಾಂತರಯುತಂ ಪ್ರಗಲ್ಭಂ ಅತಿ ಸುಂದರಂ
ವೈದೇಹ್ಯಾ ವಾಕ್ಯಮತುಲಂ ಕದಾಶ್ರೋಷ್ಯಾಮಿ ಲಕ್ಷ್ಮಣ

ಸೀತೆಯ ಅನುಪಮ ಸೌಂದರ್ಯವನ್ನು ಸಾಂಸ್ಕೃತಿಕ ವೈಭವವನ್ನೂ ತಾತ್ತ್ವಿಕ ಪ್ರೌಢಿಮೆಯನ್ನೂ ರಸಿಕತೆಯನ್ನೂ ಬಹು ಚೆನ್ನಾಗಿ ಚಿತ್ರಿಸುತ್ತವೆ ಈ ಶ್ಲೋಕಗಳು.

ಮತ್ತೊಂದು ಸಂದರ್ಭದಲ್ಲಿ "ಸೀತೆ ದಾತ್ಯೂಹ ಎಂಬ ನೀರು ಹಕ್ಕಿಯ ಕೂಜಿತವನ್ನು ಮೊದಲ ಬಾರಿಗೆ ಕೇಳಿ ಆ ಧ್ವನಿಯ ಮಾಧುರ್ಯಕ್ಕೆ ಮರುಳಾಗಿ, ನನ್ನನ್ನು ಕರೆದು 'ಅಗೋ, ಹಕ್ಕಿ ಕೂತಿದೆ ನೋಡು. ಎಷ್ಟು ಚೆನ್ನಾಗಿದೆ !' ಎಂದು ಹೇಳಿ ತಾನು ಹರ್ಷಗೊಂಡು ನನ್ನನ್ನೂ ಹರ್ಷಗೊಳಿಸಿದಳು" ಎನ್ನುತ್ತಾನೆ ಶ್ರೀರಾಮ. ಅಂದರೆ ಸೀತೆಯ ಮನಸ್ಸು ರಾಮನ ಮನಸ್ಸಿಗೆ ಎಲ್ಲದರಲ್ಲೂ ಸಂವಾದಿಯಾದದ್ದು.

ಮೇಲೆ ಹೇಳಿದ ಧ್ಯಾನ ಶ್ಲೋಕದಲ್ಲಿ ಇವರಿಬ್ಬರ ಮುಂದೆ ನಮ್ರನಾಗಿ ದಾಸ್ಯಭಾವದಿಂದ ಮಾರುತಿ ಕುಳಿತಿದ್ದಾನೆ. ರಾಮ ಸಿಕ್ಕುವವರೆಗೂ ತನ್ನ ಯೋಗ್ಯತೆಗೆ ತಕ್ಕ ನಾಯಕನನ್ನು ಮಾರುತಿ ಪಡೆದಿರಲಿಲ್ಲ. ಆ ವಾನರ ಬುಡಕಟ್ಟಿನಲ್ಲೇ ಅತಿ ಬುದ್ಧಿವಂತ ಅವನು. ಈತನನ್ನೂ ಸಾಂಕೇತಿಕವಾಗಿ ಶಂಕರಾಚಾರ್ಯರು ಮತ್ತು ವೇದಾಂತ ದೇಶಿಕರು ಆಚಾರ್ಯನೆಂದು ಕರೆದಿದ್ದಾರೆ. ಸಕೃತ್ ಸಂಸಾರದಲ್ಲಿ ಸಿಕ್ಕಿ ಬಿದ್ದು ನರಳುತ್ತಿರುವ ಜೀವಾತ್ಮನಿಗೆ "ಭಗವಂತನು ನಿನ್ನ ವಿಷಯದಲ್ಲಿ ಆತಂಕ ಗೊಂಡಿದ್ದಾನೆ. ನಿನ್ನ ರಕ್ಷಣೆಗೆ ಬರುತ್ತಾನೆ" ಎಂಬ ಪ್ರಣಯ ಸಂದೇಶವನ್ನು ಆಚಾರ್ಯ ತನ್ನ ಉಪದೇಶದಿಂದ ತಲುಪಿಸಿ ಭರವಸೆ ನೀಡುತ್ತಾನೋ ಎನ್ನುವ ಹಾಗೆ ದಶಾನನ ಸೆರೆಮನೆಯಲ್ಲಿ ನರಳುತ್ತಿರುವ ಸೀತೆಗೆ ಆಂಜನೇಯನು ರಾಮನ ಸಂದೇಶವನ್ನು

ತಿಳಿಸುತ್ತಾನೆ. ಆದದ್ದರಿಂದ ಜೀವಾತ್ಮ ಪರಮಾತ್ಮರಿಗೆ ಸಂಬಂಧವನ್ನು ಕಲ್ಪಿಸುವ ಆಚಾರ್ಯನೇ ಹನುಮಂತ. ಹನುಮಂತನ ಗುಡಿಯಿಲ್ಲದ ಗ್ರಾಮಗಳು ಭಾರತದಲ್ಲಿಲ್ಲ. ವಾಲ್ಮೀಕಿ ಮಹರ್ಷಿಗಳು ಹನುಮಂತನನ್ನು "ಬುದ್ಧಿಮತಾಂ ವರಿಷ್ಠಂ, ರಾಮಾಯಣ ಮಹಾಮಾಲಾತ್ನಂ" ಎಂಬುದಾಗಿ ಕೊಂಡಾಡಿದ್ದಾರೆ.

ರಾಮಾಯಣ ಪಾರಾಯಣ ನಡೆಯುತ್ತಿರುವಾಗ ರಾಮಾಯಣ ಪಟ್ಟಾಭಿಷೇಕ ಕಲ್ಪಗಳಲ್ಲಿ ಒಂದು ಮಣೆಯನ್ನು ಹನುಮಂತ ದೇವರಿಗೆ ಮೀಸಲಾಗಿಡುತ್ತಾರೆ. ಅವನು ಅದೃಶ್ಯವಾಗಿ ರಾಮಾಯಣ ಪಾರಾಯಣ ಸಮಯಕ್ಕೆ ದಯಮಾಡಿಸುತ್ತಾನೆಂದು, ಇಂಥ ಮಹಾಪುರುಷನನ್ನು ನೋಡಿ ಯಾರ ಮನಸ್ಸು ತಾನೆ ಉಲ್ಲಾಸಗೊಳ್ಳುವುದಿಲ್ಲ ? ಆ ಧ್ಯಾನ ಶ್ಲೋಕದಂತೆ ಹಿಂದೆ ಲಕ್ಷ್ಮಣಸ್ವಾಮಿ ಇದ್ದಾನೆ.

ಅಹಮಸ್ಯಾವರೋ ಭ್ರಾತಾ ಗುಣೈರ್ದಾಸ್ಯ ಮುಪಾಗತಃ

ರಾಮನ ಗುಣಗಳಿಗೆ ಮನಸೋತು ಅವನ ಸೇವೆಗಾಗಿಯೇ ತನ್ನ ಸಂಪೂರ್ಣ ಜೀವನವನ್ನು ಮೀಸಲಾಗಿಟ್ಟವನು. ಅವನಿಗೆ ದಾಸನಾಗಿಬಿಟ್ಟವನು. ಈ ದಾಸ್ಯದಲ್ಲಿ ಸಂತೋಷವನ್ನು ಕಂಡವನು. ಯಾವಾಗಲೂ ಖೇದಕರವಾದ ದಾಸ್ಯದಲ್ಲಿ ಸುಖವನ್ನೂ ನೆಮ್ಮದಿಯನ್ನೂ ಕಳೆಗುಂದದೆ ಇರುವಿಕೆಯನ್ನೂ ಮನುಷ್ಯನು ಕಾಣಬೇಕಾದರೆ ಗುಣವಂತರ ಕೈಂಕರ್ಯದಲ್ಲಿ ನಿರತನಾಗಿರಬೇಕು. ಮಹಾತ್ಮನಾದ ಲಕ್ಷ್ಮಣ ಇದರ ಆನಂದಕ್ಕೆ ದ್ಯೋತಕನಾಗಿದ್ದಾನೆ.

ಪರ್ಣಕುಟಿಯಲ್ಲಿ ಲಕ್ಷ್ಮಣನು ಪರ್ಣಶಾಲೆಯನ್ನು ಕಟ್ಟಿ ಅದನ್ನು ರಾಮನಿಗೆ ನಿವೇದಿಸಿದಾಗ ರಾಮ ತುಂಬ ಆನಂದಪಟ್ಟ. "ನೀನು ನನಗೆ ತಂದೆ ಇಲ್ಲ ಎನಿಸಲಿಲ್ಲಿಲ್ಲ" ಎಂದು ಹೇಳಿ ಆಲಂಗಿಸಿಕೊಳ್ಳುತ್ತಾನೆ. ಆ ಸುಮಿತ್ರೆ ಧನ್ಯಳು. ಲಕ್ಷ್ಮಣ ರಾಮ ಸೇವೆಯಲ್ಲಿ ತೊಡಗಿದಾಗ ಸುಮಿತ್ರೆ ಕೌಸಲ್ಯೆಯ ಸೇವೆಯಲ್ಲಿ ತೊಡಗಿದಳು.

ಮೇಲಿನ ಧ್ಯಾನ ಶ್ಲೋಕದಲ್ಲಿ ಒಂದು ಕಡೆ ಭರತ, ಇನ್ನೊಂದು ಕಡೆ ಶತ್ರುಘ್ನ. ಭರತನ ವಿಷಯದಲ್ಲಿ ಹೆಚ್ಚು ಹೇಳಬೇಕಾಗಿಲ್ಲ. ಅವನು ಎಲ್ಲರಿಂದಲೂ ಕೆಲವು ಕಾಲ ಸಂಶಯಕ್ಕೆ ಒಳಪಟ್ಟವನಾದನು. ಅವನನ್ನು ಚೆನ್ನಾಗಿ ತಿಳಿದಿದ್ದವನು ರಾಮನೊಬ್ಬನೇ. ಕೈಕೇಯಿಗೇ ಅವನ ಉದಾರ ಸ್ವಭಾವ ತಿಳಿದಿರಲಿಲ್ಲ, ಕೌಸಲ್ಯೆಗೂ ಭರತ ತನ್ನ ನಿಷ್ಕಪಟ ಮನಸ್ಸನ್ನು ಶಪಥಮಾಡಿ ತಿಳಿಸಬೇಕಾಯಿತು. ಸೈನ್ಯ ಸಮೇತನಾಗಿ ರಾಮನನ್ನು ಕಾಣಲು ಬಂದಾಗ ಲಕ್ಷ್ಮಣನೂ ಅವನಲ್ಲಿ ಶಂಕೆಪಟ್ಟು ರಾಮನಿಗೆ ಕಟುವಾಗಿ ಹೇಳಿದ. "ನಮ್ಮನ್ನು ಕೊಲ್ಲಲು ಬರುತಿದ್ದಾನೆ" ಎಂದು. ಆದರೆ ರಾಮ ಭರತನಿಂದ ರಾಜ್ಯವನ್ನೇ ಕೊಡಿಸಿ ಬಿಡುಕವುದಾಗಿ ಹೇಳಿದಾಗ ಲಕ್ಷ್ಮಣ ಲಜ್ಜೆಯಿಂದ ಕುಗ್ಗಿಹೋದ.

ಶ್ರೀರಾಮನು ರಾವಣವಧೆಯಾದ ಮೇಲೆ ಪುಷ್ಪಕದಲ್ಲಿ ಅಯೋಧ್ಯೆಯನ್ನು ಸಮೀಪಿಸುತ್ತಿದ್ದಾಗ ಭರತನ ಮನಸ್ಸನ್ನು ತಿಳಿಯಲು ಹನುಮಂತನನ್ನು ಅಟ್ಟಿದ. ಆದರೆ ಇದು ಶಂಕೆಯಿಂದಲ್ಲ. ಭರತನಿಗೆ ರಾಜ್ಯದಲ್ಲಿ ಸ್ವಲ್ಪವಾದರೂ ಆಸೆಯಿರುವುದಾದರೆ ಅವನಿಗೆ ಅದನ್ನು ಬಿಟ್ಟುಕೊಡುವ ಔದಾರ್ಯ ಅದು. ಅವನಲ್ಲಿ ಅನುಮಾನದಿಂದಲ್ಲ. ಭರತ ರಾಮನ ಪಾದಗಳಿಗೆ ಪಾದುಕೆಗಳನ್ನು ಜೋಡಿಸುತ್ತಾನೆ. ಆಗ ಆ ಅಣ್ಣ ತಮ್ಮಂದಿರ ನಡವಳಿಕೆಯನ್ನು ನೋಡಿ ವಾನರರು ಕಣ್ಣೀರಿಡುತ್ತಾರೆ. ವಾಲಿ ಸುಗ್ರೀವರು ಹೀಗಿರುತ್ತಿದ್ದರೆ ಹೇಗಿರುತ್ತಿತ್ತು ? ಸೌಭ್ರಾತೃತ್ವದ ಮೌಲ್ಯ ಪ್ರೀತಿಯ ಕಣ್ಣೀರು ಅದು, ಆನಂದ ಬಾಷ್ಪ ಅದು.

ನಮ್ಮ ಮನಸ್ಸಿನಲ್ಲಿ ಸಾಮಾನ್ಯವಾಗಿ ಭರತ ಮೃದು ಮನಸ್ಸಿನವನು ಸಾಧು ಎಂಬ ಭಾವನೆ ಮೂಡುತ್ತದೆ. ಆದರೆ ಅವನು ಮಹಾಶೂರ. ಅವನು ಸೋದರ ಮಾವನ ಮನೆಯಿಂದ ಹಿಂದಿರುಗಿ ಬರುವಾಗ ಕೋರೆ ಹಲ್ಲುಗಳುಳ್ಳ ನಾಯಿಗಳನ್ನು ಅವರ ಮಾವ ಕೊಟ್ಟ ಎಂದು ಬರುತ್ತದೆ.

> ಅಂತಃಪುರೇ ಅತಿ ಸಂವೃದ್ಧಾನ್ ವ್ಯಾಘ್ರವೀರ್ಯ ಬಲಾನ್ವಿತಾನ್ ।
> ದಂಷ್ಟ್ರಾಯುಧಾನ್ ಮಹಾಕಾಯಾನ್ ಶುನಶ್ಚೋಪಾಯನಂ ದದೌ ॥

ಎಡಬಲದಲ್ಲಿ ಈ ಬೇಟೆ ನಾಯಿಗಳಿಂದ ಕೂಡಿದ ವೀರಭರತನನ್ನು, ಧರ್ಮನಮ್ರನಾದ ಭರತನನ್ನು, ನೆನೆಸಿಕೊಂಡು ಮುಂದೆ ಹೋಗೋಣ.

ಅವನಿಗೆ ಸೇರಿದಂತೆ ನಿಂತವನು ಶತ್ರುಘ್ನ.

ಒಂದು ಮೂಲೆಯಲ್ಲಿ ವಿಭೀಷಣ, ರಾವಣನಿಂದ ಧಿಕ್ಕೃತನಾಗಿ ಪರಿತ್ಯಕ್ತನಾಗಿ ಬಂದ ಮಹಾನುಭಾವ ಅವನು. ರಾಮನ ನಿರ್ಲೋಭವನ್ನು ಪರಾಕ್ರಮವನ್ನು ಆಶ್ರಿತ ವಾತ್ಸಲ್ಯವನ್ನು ಕಂಡು ಶರಣಾಗತನಾಗುತ್ತಾನೆ. ಒಬ್ಬ ಸಜ್ಜನ ಇನ್ನೊಬ್ಬನನ್ನು ಸೇರಿದ ಹಾಗಾಯಿತು. ಆಶ್ರಿತವಾತ್ಸಲ್ಯವೆಂಬ ಗುಣ ತನ್ನ ಸತ್ತ್ವದಲ್ಲಿ ಸಂಪೂರ್ಣ ನಂಬಿಕೆಯುಳ್ಳ ಧೀರನಿಗೆ ಮಾತ್ರ ಸಾಧ್ಯ, ಶರಣಾಗತ ರಕ್ಷಕ ಎಂಬುದನ್ನು ರಾಮನಲ್ಲಿ ದ್ಯೋತಕ ಮಾಡಿಸುತ್ತಾನೆ ವಿಭೀಷಣ. ಲಂಕೆಯಿಂದ ಯಾವುದನ್ನೂ ಸ್ವೀಕರಿಸದೆ ಪುಷ್ಪಕವನ್ನು ಸ್ವಲ್ಪ ಕಾಲ ಮಾತ್ರ ಉಪಯೋಗಿಸಿಕೊಂಡ ರಾಮ. ರಾಮನಲ್ಲಿ ಲೋಭವಿಲ್ಲ. ಯಾವ ಷರತ್ತೂ ಇಲ್ಲದೆ ಲಂಕೆಯನ್ನು ವಿಭೀಷಣನಿಗೆ ಕೊಟ್ಟಿದ್ದಾನೆ.

ಇನ್ನೊಂದು ಮೂಲೆಯಲ್ಲಿ ಸುಗ್ರೀವನಿದ್ದಾನೆ. ಸುಗ್ರೀವನಲ್ಲಿ ರಾಮನಿಗಿರುವ ಮೈತ್ರೀಭಾವ ಇಲ್ಲಿ ಪ್ರಕಾಶಗೊಳ್ಳುತ್ತದೆ. ಅಯೋಧ್ಯೆಯಲ್ಲಿ ರಾಮ, ಸುಗ್ರೀವನನ್ನು ತುಂಬ ಮರ್ಯಾದೆಯಿಂದ ಕಾಣುತ್ತಾನೆ, ತನ್ನ ಅರಮನೆಯನ್ನೇ ಅವನ ಬಿಡಾರಕ್ಕಾಗಿ ಬಿಟ್ಟುಕೊಡುತ್ತಾನೆ, ಶತ್ರುಂಜಯವೆಂಬ ಆನೆಯ ಮೇಲೆ ಕೂರಿಸಿ ಮೆರವಣಿಗೆ

ಮಾಡಿಸುತ್ತಾನೆ. ಇಷ್ಟು ಗಾಢವಾದ ಮೈತ್ರೀ ಭಾವವಿದ್ದರೂ ಇದು ರಾಮನ ನ್ಯಾಯ ಬುದ್ಧಿಗೆ ಅಡ್ಡಿಬರಲಿಲ್ಲ. ಸುಗ್ರೀವನ ಸಂತಾನಕ್ಕೆ ಕಿಷ್ಕಿಂಧೆಯನ್ನು ಕೊಡದೆ ವಾಲಿಯ ಮಗ ಅಂಗದನಿಗೆ ಕೊಡಿಸುತ್ತಾನೆ.

ಧರ್ಮದ ಪ್ರವರ್ತನ ರೂಪವಾದ ಮೈತ್ರೀ, ನ್ಯಾಯ ಇವರಿಬ್ಬರ ವಿಷಯದಲ್ಲಿ ಕಾಣಿಸಿಕೊಳ್ಳುತ್ತದೆ.

ಇನ್ನೊಂದು ಮೂಲೆಯಲ್ಲಿ ಜಾಂಬವಂತ. ಅವನು ಮಹಾ ಬುದ್ಧಿವಂತ. ಹನುಮಂತನನ್ನು ಶೌರ್ಯ ಸಾಹಸಗಳಿಗೆ ಪ್ರೋತ್ಸಾಹಿಸುವುದರಲ್ಲಿ ನಿಸ್ಸೀಮ.

ಮಧ್ಯದಲ್ಲಿ ನೀಲ ಕೋಮಲ ರುಚಿಯಿಂದ ತೇಜಸ್ಸಿನಿಂದ ಸದ್ಗುಣಗಳಿಂದ, ಯಾರ ಸ್ವಾತಂತ್ರ್ಯವನ್ನೂ ಕಸಿದುಕೊಳ್ಳದೆ, ಯಾರ ಸಂಪತ್ತನ್ನೂ ಅಪಹರಿಸದೆ, ಒಂದು ಶುಚಿರ್ಭೂತವಾದ ವಾತಾವರಣವನ್ನು ಕಲ್ಪಿಸಿ, ಅಖಂಡ ಭಾರತ ಖಂಡವನ್ನು ತನ್ನ ಧಾರ್ಮಿಕ ತೇಜಸ್ಸಿನಿಂದ ಕಟ್ಟಿ, ಭಾರತಕ್ಕೆ ಸಮೃದ್ಧಿಯನ್ನು ಶಾಂತಿಯನ್ನೂ ಆನಂದ ವನ್ನೂ ತಂದ ಶ್ರೀರಾಮ ವಿರಾಜಮಾನನಾಗಿದ್ದಾನೆ.

ಇಷ್ಟು ಧ್ವನಿಗಳೂ ಒಂದು ಧ್ಯಾನ ಶ್ಲೋಕದಿಂದ ಹೊರಡುತ್ತವೆ.

೩

ಬಾಲ ಕಾಂಡದಲ್ಲಿ ಬರುವ ಸೂಚನೆಯನ್ನು ಬಿಟ್ಟರೆ ರಾಮಕಥಾ ಪ್ರವಾಹದಲ್ಲಿ ರಾಮ ಅವತಾರ ಪುರುಷನೆಂದು ಎಲ್ಲೂ ಕಂಡುಬರುವುದಿಲ್ಲ. ವಾಲ್ಮೀಕಿ ನೆನೆದದ್ದು ಒಬ್ಬ ಆದರ್ಶ ಪುರುಷನನ್ನು, ಅರ್ಥ ಕಾಮಗಳ ವಿಷಯದಲ್ಲಿ ಯಾವ ಕೊರತೆಯನ್ನೂ ಕಾಣದವನನ್ನು. ವರಿಷ್ಠ ವರ್ಗದಲ್ಲಿ ಕಾಮ ಕ್ರೋಧಗಳು ತಲೆ ಹಾಕಿ ಲೋಕದ ಸ್ಥಿತಿ ಕೆಡುತ್ತಿರುವುದನ್ನು ವಾಲ್ಮೀಕಿ ಮಹರ್ಷಿಗಳು ಗಮನಿಸಿ, ಧರ್ಮದಿಂದ ನಿಯಂತ್ರಿತ ನಾದ ಮನುಷ್ಯನಲ್ಲಿ ಇರಬೇಕಾದ ಗುಣಗಳನ್ನು ಪರಿಚಿಂತಿಸುತ್ತಾರೆ. ನಾರದ ಮಹರ್ಷಿ ಗಳು ಅವರ ಆಶ್ರಮಕ್ಕೆ ಬಂದಾಗ ಅವರ ಮುಂದೆ ತಮ್ಮ ಆಲೋಚನೆಗಳನ್ನು ನಿವೇದಿ ಸುತ್ತಾರೆ. ಆ ಗುಣಗಳ ಪಟ್ಟಿಯನ್ನು ನೋಡಿದರೆ ವಾಲ್ಮೀಕಿ ಎಂಥಾ ಆದರ್ಶಪುರುಷ ನನ್ನು ಮನಸ್ಸಿನಲ್ಲಿ ಕಲ್ಪಿಸಿ ಕೊಂಡಿದ್ದರು ಎಂಬುದು ತಿಳಿಯುತ್ತದೆ.

"ಕೋನ್ವಸ್ಮಿನ್ ಸಾಂಪ್ರತಂ ಲೋಕೇ...
...ಪರಂ ಕೌತೂಹಲಂ ಹಿ ಮೇ"

ನಾರದ ಮಹರ್ಷಿಗಳ ಬಾಯಿಂದ ಇಂಥವನು ಲೋಕದಲ್ಲಿದ್ದ ಎಂಬುದಾಗಿ ತಿಳಿದಾಗ ವಾಲ್ಮೀಕಿ ಮಹರ್ಷಿಗಳಿಗೆ ಆಶ್ಚರ್ಯವಾಗುತ್ತದೆ. ತನ್ನ ಆದರ್ಶ ಚಿಂತನೆಗೂ

ಈ ವಾಸ್ತವ ಸ್ಥಿತಿಗೂ ಒಂದು ಸಂಬಂಧ ಏರ್ಪಡುತ್ತದೆ. ಆಗ ಆತನ ಪ್ರತಿಭೆಯಿಂದ ರಾಮಾಯಣ ಮಹಾಕಾವ್ಯ ಮೂಡಿ ಬರುತ್ತದೆ.

ರಾಮ ಲೋಕವನ್ನು ಉದ್ಧಾರ ಮಾಡಬೇಕು ಎಂಬ ಉದ್ದೇಶದಿಂದ ಬಂದ ಹಾಗೆ ಕಾಣಲಿಲ್ಲ. ಪರಿಷ್ಠ ವರ್ಗದಲ್ಲಿ ತಲೆ ಹಾಕಿದ ಕಾಮ ಕ್ರೋಧ ಲೋಭ ರೂಪವಾದ ಧರ್ಮಗ್ಲಾನಿ ಈ ಅಪೂರ್ವ ಗುಣ ಸಂಪನ್ನನನ್ನು ಕೆಣಕಿತು, ಕಾಡಿತು ಸೋತಿತು. ಈ ಗೆಲವಿನಿಂದ ಲೋಕ ತನಗೆ ತಾನೆ ಚೆನ್ನಾಯಿತು. ರಾಮನು ಪೌರುಷಾವಲಂಬಿ, ದೈವಾವಲಂಬಿಯಲ್ಲ. ಶ್ರೀಕೃಷ್ಣ ಗೀತೆಯಲ್ಲಿ "ಪೌರುಷಂ ನೃಷು" ಎಂಬುದಾಗಿ ಮನುಷ್ಯರಲ್ಲಿ ಪೌರುಷವನ್ನೇ ದೈವಗುಣ ಎಂದಿದ್ದಾನೆ. ಈ ಗುಣದಿಂದಲೇ ರಾಮ ದೈವದ ಅಂತಸ್ತಿಗೆ ಏರಿ ತನ್ನ ಪೌರುಷವನ್ನು ಮೆರೆದಿದ್ದಾನೆ.

ಶ್ರೀರಾಮಚರಿತದಲ್ಲಿ ಯಾವ ಪವಾಡಗಳೂ ಉಪದೇಶಗಳೂ ಕಂಡು ಬರುವುದಿಲ್ಲ. ವಿಸ್ಮಯಕರವಾದ ಸನ್ಮನುಷ್ಯನ ನಡವಳಿಕೆಗಳು ಮಾತ್ರ ಕಂಡು ಬರುತ್ತವೆ. ಅಜಿತೇಂದ್ರಿಯನಾದವನು ಒಂದು ದೇಶವನ್ನು ಕಟ್ಟಿ ಆಳುವುದು ಅಸಾಧ್ಯ. ಒಬ್ಬ ಮಹಾ ಪುರುಷನಲ್ಲಿ ವಾಲ್ಮೀಕಿ ಮಹರ್ಷಿಗಳು ಯಾವ ಗುಣಗಳು ಇರಬೇಕೆಂದು ಅಪೇಕ್ಷಿಸಿದರೋ ಅಂಥ ಮಹಾತ್ಮನ ಸಾನ್ನಿಧ್ಯದಿಂದಲೇ ಲೋಕ ಚೆನ್ನಾಗುತ್ತದೆ.

ಲೋಕದ ಮಾತೇ ರಾಮಾಯಣದಲ್ಲಿ ಸಿಕ್ಕುವುದು. ಅದು ಐಹಿಕ ಜೀವನಕ್ಕೆ ಸಂಬಂಧಪಟ್ಟ ಕಾವ್ಯ. ಯಾವ ಕಾರ್ಪಣ್ಯವೂ ಮನುಷ್ಯನಲ್ಲಿ ಇರಬಾರದು. ಆದರೆ ಜೀವನ ಸುವ್ಯವಸ್ಥಿತವಾಗಿ ಇರಬೇಕಾದರೆ ಅರ್ಥಕಾಮಗಳು ಎಲ್ಲರ ಶ್ರೇಯಸ್ಸಿಗೂ ಪ್ರೇಯಸ್ಸಿಗೂ ಒದಗುವಂತೆ ಮಾಡತಕ್ಕ ನಿಯಂತ್ರಣ ಶಕ್ತಿಗೆ ನಿಯೋಜಕ ಶಕ್ತಿಗೆ ಒಳಪಟ್ಟಿರಬೇಕು. ಈ ನಿಯಂತ್ರಣ ಮತ್ತು ಕುಶಲ ವಿನಿಯೋಗ ಶಕ್ತಿಯು ಧಾರ್ಮಿಕ ಶಕ್ತಿ. ಈ ಶಕ್ತಿ ಕುಗ್ಗಿದರೆ ಲೋಕದಲ್ಲಿ ಕಷ್ಟಗಳು ಬರುತ್ತವೆ, ಇದೇ ಧರ್ಮಗ್ಲಾನಿ.

ಈ ನಿಯಂತ್ರಣ ಶಕ್ತಿ ಅರ್ಥ ಕಾಮಗಳ ಸ್ವರೂಕವನ್ನು ಅವಲಂಬಿಸಿರುವುದರಿಂದ ಅದೂ ಬದಲಾಗುತ್ತ ಹೋಗುತ್ತದೆ. ಕಲಿಯುಗ ಕೃತಯುಗಕ್ಕೆ ಸಮೀಪವಾದ ಕಾಲ. ಧರ್ಮ ಕರ್ಮ ಸಂಯೋಗದಿಂದ ಈಗಿನ ಲೋಕ ರಾಜರ ಚಕ್ರವರ್ತಿಗಳ ಹಿಡಿತದಿಂದ ಬಿಡಿಸಿಕೊಂಡು ಪ್ರಜೆಗಳ ಕೈಗೆ ಬಂದಿದೆ. ಈ ಸಂಧಿ ಕಾಲದಲ್ಲಿ ಸ್ವಲ್ಪ ಅವ್ಯವಸ್ಥೆ ಸಹಜ. ಕೃತಯುಗದಲ್ಲಿ ರಾಜರೇ ಇರಲಿಲ್ಲ. ಆ ಕೃತಯುಗದ ಸ್ಥಿತಿಯನ್ನು ಕುರಿತು ಶ್ಲೋಕವೊಂದಿದೆ :

ನೈವ ರಾಜ್ಯಂ ನ ರಾಜಾಸೀನ್ನ ಚ ದಂಡೋ ನ ದಾಂಡಿಕಃ ।
ಧರ್ಮೇಣೈವ ಪ್ರಜಾಸ್ಸರ್ವಾ ರಕ್ಷಂತಿ ಸ್ಮ ಪರಸ್ಪರಂ॥

ಅಂದರೆ ಎಲ್ಲಿ ಅರ್ಥ ಕಾಮಗಳ ನ್ಯಾಯ ಮೈತ್ರಿಗಳ ನಿಯೋಜನ ಶಕ್ತಿ, ಆ ಧರ್ಮ, ಪ್ರಜೆಗಳಲ್ಲಿ ಪ್ರವರ್ತಿತವಾಗಿರುವುದೋ ಅಲ್ಲಿ, ಅಂಥಾ ಸಂಧ್ಯಾ ಕಾಲದಲ್ಲಿ, ನಾವಿದ್ದೇವೆ.

ಈಗ ಈ ಧಾರ್ಮಿಕ ಪ್ರಜ್ಞೆ ರಾಮಾಯಣದಂಥ ಮಹಾಕಾವ್ಯಗಳನ್ನು ಅನುಶೀಲನ ಮಾಡುವುದರಿಂದ ಜಾಗೃತವಾಗುತ್ತದೆ. ಇನ್ನೊಂದು ಬಹು ಮುಖ್ಯವಾದ ಫಲವೆಂದರೆ ಸಜ್ಜನರ ಸಹವಾಸ. ಆ ಸಜ್ಜನರ ಸಹವಾಸದ ಮಹಿಮೆಯನ್ನು ಈ ಶ್ಲೋಕ ಹೇಳುತ್ತದೆ.

ಜಾಡ್ಯಂ ಧಿಯೋ ಹರತಿ ಸಿಂಚತಿ ವಾಚಿ ಸತ್ಯಂ
ಮಾನೋನ್ನತಿಂ ದಿಶತಿ ಪಾಪಮಪಾಕರೋತಿ
ಚೇತಃ ಪ್ರಸಾದಯತಿ ದಿಕ್ಷು ತನೋತಿ ಕೀರ್ತಿಂ
ಸತ್ಸಂಗತಿಃ ಕಥಯ ಕಿಂ ನ ಕರೋತಿ ಪುಂಸಾಂ॥

ಮನಸ್ಸಿನ ಜಡತೆಯನ್ನು ಹರಿಸುತ್ತದೆ, ಸುಳ್ಳು ನಮ್ಮ ಬಾಯಿಂದ ಬರದ ಹಾಗೆ ಮಾತಿನಲ್ಲಿ ಸತ್ಯವನ್ನು ಚಿಮುಕಿಸುತ್ತದೆ. ನಮ್ಮಲ್ಲಿ ನಮಗೆ ಅಭಿಮಾನ ಹುಟ್ಟಿ ನಾವು ಬೆಲೆಯುಳ್ಳವರು ಅನಿಸುತ್ತದೆ, ಕೇಡನ್ನು ಮಾಡಬಾರದು ಎಂಬ ಪ್ರವೃತ್ತಿಯನ್ನು ಹುಟ್ಟಿಸುತ್ತದೆ. ಜೀವನವನ್ನು ಉಲ್ಲಾಸಗೊಳಿಸುತ್ತದೆ. ದಿಕ್ಕು ದಿಕ್ಕುಗಳಲ್ಲಿ ಕೀರ್ತಿಯನ್ನು ಹರಡುತ್ತದೆ. ಸತ್ಸಂಗ ಮನುಷ್ಯನಿಗೆ ಯಾವ ಒಳ್ಳೆಯದನ್ನು ತಾನೆ ಮಾಡಲಾರದು !

ವಾಲ್ಮೀಕಿ ಮಹರ್ಷಿ ಪ್ರಣೀತವಾದ ಶ್ರೀಮದ್ರಾಮಾಯಣದಲ್ಲಿ ಇಂಥ ಸತ್ಸಂಗ ದೊರೆಯುತ್ತದೆ. ಅದರಿಂದ ನಮ್ಮಲ್ಲಿ ನಮ್ಮ ನಂಬಿಕೆ ಹೆಚ್ಚುತ್ತದೆ. ದೇಶದ ವಿಚಾರದಲ್ಲಿ ಪ್ರೀತಿ ಹುಟ್ಟುತ್ತದೆ. ದೇವರ ವಿಚಾರದಲ್ಲಿ ಆಸಕ್ತಿ ಬರುತ್ತದೆ. ಅವನ್ನು ಕಾಣಬೇಕು ಎಂಬ ಹುಮ್ಮಸ್ಸು ಮೂಡುತ್ತದೆ.

ಶ್ರೀರಾಮ ಸೀತೆಯರ ಮತ್ತು ಅವರ ಪರಿವಾರದ ಚಿತ್ರವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಧರ್ಮವನ್ನು ಚಿಂತಿಸಿ ಕಾಮ ಕ್ರೋಧಗಳಿಗೆ ವಶರಾಗದೆ ಧಾರ್ಮಿಕ ರಾಗೋಣ.

ಲೋಕಾಃ ಸಮಸ್ತಾಃ ಸುಖಿನೋಭವಂತು.

ಪೂರ್ಣಚಂದ್ರಾನನನಾದ ಅತೀವ ಪ್ರಿಯದರ್ಶನನಾದ ರೂಪೌದಾರ್ಯಗುಣಗಳಿಂದ ಎಲ್ಲರ ದೃಷ್ಟಿಯನ್ನೂ ಮನಸ್ಸನ್ನೂ ಅಪಹರಿಸುವ ಗುಣಶಾಲಿಯಾದ ರಾಮನನ್ನು ನಮ್ಮ ಸ್ಮರಣೆಯಲ್ಲಿ ಸದಾ ಇಟ್ಟುಕೊಂಡು ಪಾಪಕೃತ್ಯಗಳಿಂದ ದೂರರಾಗಿ ಪ್ರೀತಿ ವರ್ಧಕವಾದ ಗುಣಗಳನ್ನು ಬೆಳೆಸಿಕೊಂಡು ಸ್ವತಂತ್ರ ರಾಷ್ಟ್ರದ ರಾಷ್ಟ್ರಕರಾಗಿ ಮೆರೆಯೋಣ.

ಶ್ರೀ ಮದ್ರಾಮಾಯಣ ಪ್ರಿಯರೂ ಮಹಾವಿದ್ವಾಂಸರೂ ರಸಿಕ ಸಜ್ಜನರೂ ಆದ ವಿದ್ವಾನ್ ಶ್ರೀ ಎಸ್. ರಂಗನಾಥ ಶರ್ಮಾ ಅಭಿನಂದನ ಗ್ರಂಥಕ್ಕೆ ನನ್ನ ಈ ಬರಹದ ಕೊಡುಗೆ ಅವರಿಗೆ ಪ್ರೀತಿಯನ್ನು ಉಂಟುಮಾಡಲಿ. ನನ್ನ ಗೌರವಾದರ ಮಮತೆಗಳ ಸಂಕೇತವಾಗಿ ಶೋಭಿಸಲಿ ; ಸಹೃದಯರ ಮನಸ್ಸನ್ನು ಉಲ್ಲಾಸಗೊಳಿಸಲಿ. ಉದಾರ ಹೃದಯರು ಸ್ಖಾಲಿತ್ಯಗಳನ್ನು ಕ್ಷಮಿಸಲಿ.

ಶ್ರೀ ರಾಮಾಯ ತಸ್ಮೈ ನಮಃ

ಶ್ರೀ ರಂಗನಾಥ ಶರ್ಮರ ಸಮಸ್ಯಾಪೂರಣ ಪದ್ಯಗಳು.

ಎತ್ತಣವನಮತಿ ಗಹನಮ
ದೆತ್ತಣದೀ ರಾಜ ಭವನ ಮತಿಶಯ ಸುಖದಂ ।
ಕತ್ತಲೆ ಕಂಗಳಿಗೆನೆ ಸಾ-
ಕತ್ತೆಯ ಪವರಕ್ಷೆಯೆನಗೆ ಭಯಮಿಲ್ಲೆಂದಳ್ ॥

o o o

ಸತಿ ಪರಮ ಮನೋಜ್ಞೇ ಭಾರತಾದಿ ಪ್ರಬಂಧೇ
ಮತಿ ವಿಕಸನ ದಕ್ಷೇ ಸಂಸ್ಕೃತೇ ರಾಜಮಾನೇ ।
ಅಯ ಮುಪ್ಪಹತ ದೃಷ್ಟಿಸ್ತತ್ ಪರಿತ್ಯಜ್ಯ ಮೌಢ್ಯಾತ್
ಉದಯತಿ ಕರದಿಂದೌಯಾತಿ ದೃತ್ವಾಽಽತಪತ್ರಂ ॥

ಶ್ರೀ ರಂಗನಾಥಶರ್ಮಾ ಅವರನ್ನು ಕುರಿತು

ನಮ್ಮ ತಂದೆಯನ್ನು ನಾನು ಕಂಡಂತೆ

ಎನ್. ಆರ್. ಜಯಶ್ರೀ

ನಮ್ಮ ತಂದೆ ಎಂದ ಕೊಡಲೇ ಘಟ್ಟನೆ ನನಗೆ ನೆನಪಾಗುವುದು ಬಾಲ್ಯದ ಒಂದು ಘಟನೆ. ಆಗ ನಾನು 6-7 ವರ್ಷದವಳಿರಬಹುದು. ವಠಾರವೊಂದರಲ್ಲಿ ನಮ್ಮ ವಾಸ. ನನ್ನ ಅಣ್ಣ, ಅಕ್ಕ, ತಮ್ಮ ಹಾಗೂ ನಾನೂ ಸೇರಿದಂತೆ ವಠಾರದ ಅಕ್ಕಪಕ್ಕದ ಮಕ್ಕಳನ್ನು ಕಲೆಹಾಕಿ ನಮ್ಮ ತಂದೆ ಸಂಸ್ಕೃತ ಹೇಳಿಕೊಡುತ್ತಿದ್ದರು. ಪ್ರತಿನಿತ್ಯ ಹಿಂದಿನ ದಿನದ ಬಾಯಿಪಾಠ ತಪ್ಪದೇ ಒಪ್ಪಿಸಬೇಕಾಗುತ್ತಿತ್ತು. ಆ ದಿನ ನಿಗದಿಗೊಳಿಸಿದ್ದ ಅಮರಕೋಶದ ಸಾಲುಗಳನ್ನು ಆಟದ ಹುಮ್ಮಸ್ಸಿನಲ್ಲಿ ನಾನು ಕಂಠಸ್ಥ ಮಾಡಿಕೊಂಡಿರಲಿಲ್ಲ. ಉಳಿದವರೆಲ್ಲರೂ ತಪ್ಪದೇ ಹೇಳುತ್ತಿದ್ದಾರೆ. ನನಗೆ ಒಳಗೇ ತೀವ್ರ ಆತಂಕ. ಮಿಕ್ಕವರ ಎದುರು ಅವಮಾನವಾಗುತ್ತದೆ ಎಂಬ ಅಳುಕಿಗಿಂತ ಬಾಯಿಪಾಠ ತಪ್ಪಿಸಿದ್ದಕ್ಕೆ ತಂದೆಯವರ ಸಿಟ್ಟನ್ನು ಎದುರಿಸಬೇಕಲ್ಲ ಎಂದು. ಇನ್ನೇನು ನನ್ನ ಸರದಿ ಬಂದೇ ಬಿಟ್ಟಿತು ಎನ್ನುವಾಗ ಹುಸಿ ಕೆಮ್ಮು ನಟಿಸಲಾರಂಭಿಸಿದೆ. ತಂದೆಯವರು ಕಾದೇ ಕಾದರು. ನನ್ನ ಕೆಮ್ಮು ನಿಲ್ಲುವ ಸೂಚನೆ ಕಾಣಲಿಲ್ಲ. ಬೇಸತ್ತ ಅವರು ಹೊರಗೆ ನಡಿ ಎಂದು ಗದರಿಸಿದರು. ಪಾರಾದೆ ಎಂದು ತಕ್ಷಣ ಅಲ್ಲಿಂದ ಜಾಗ ಖಾಲಿ ಮಾಡಿದೆ. ಈ ಘಟನೆಯನ್ನು ಏಕೆ ಹೇಳುತ್ತಿದ್ದೀನಿ ಎಂದರೆ, ಕಲಿಯುವಿಕೆಯಲ್ಲಿ ಅವರಿಗಿದ್ದ ಶಿಸ್ತು, ಕಟ್ಟುನಿಟ್ಟು ಕಲಿಸುವಿಕೆಯಲ್ಲೂ ತೋರಿಬರುತ್ತಿತ್ತು. ಇವತ್ತಿಗೂ ಅಧ್ಯಯನದಲ್ಲಿ ಅವರಿಗಿರುವ ಶ್ರದ್ಧೆ ಬೆರಗುಗೊಳಿಸುವಂತಹುದು. ಪ್ರತಿನಿತ್ಯ ಹಲವಾರು ಘಂಟೆಗಳು ಅಧ್ಯಯನ, ಬರವಣಿಗೆಗೆ ಮೀಸಲು. ಬರೆದೂ ಬರೆದೂ ಅವರ ಬಲಗೈಯ ಮಧ್ಯದ ಬೆರಳಿನಲ್ಲಿ ಶಾಶ್ವತ ಗಂಟೇ ಉಂಟಾಗಿದೆ ! ಅವರ ಬರವಣಿಗೆ ಬಾಲ್ಯದಲ್ಲಿಯೇ ನಮ್ಮ ಮೇಲೆ ಎಷ್ಟು ಪರಿಣಾಮ ಬೀರಿತ್ತೆಂದರೆ ಹಾಳೆಗಳ

ಮೇಲೆ ಗೀಚುವುದೇ ನಮ್ಮ ಮುಖ್ಯ ಆಟವಾಗಿತ್ತು. ನಮ್ಮ ತಾಯಿ ನಾವು ಕೇಳಿದ ಕೂಡಲೇ ಸಿಗುವಂತೆ ಹಾಳೆಗಳನ್ನು, ಪೆನ್ಸಿಲ್‌ಗಳನ್ನು ಪ್ರತ್ಯೇಕವಾಗಿ ಇಡುತ್ತಿದ್ದರು.

ಓದುವಾಗ, ಬರೆಯುವಾಗ ಹಾಗೂ ಚಿಂತನೆಯಲ್ಲಿದ್ದಾಗ ಅವರಿಗಿರುವ ಏಕಾಗ್ರತೆ ತೀವ್ರವಾದದ್ದು. ರಸ್ತೆಯಲ್ಲಿ ನಾವು ಅವರ ಎದುರೇ ಬಂದರೂ, ಪಕ್ಕದಲ್ಲೇ ಹಾಯ್ದರೂ ಅವರಿಗೆ ಗೊತ್ತಾಗುತ್ತಿರಲಿಲ್ಲ. ತೀವ್ರ ಚಿಂತನೆಯಲ್ಲಿ ಮುಳುಗಿದ್ದಾಗ ನಾವೇನಾದರೂ ಕೇಳಿದರೆ ಪ್ರತ್ಯುತ್ತರಿಸಿದವರು ಆಮೇಲೆ ನೀನು ನನಗೆ ಯಾವಾಗ ಹೇಳಿದೆ ಎಂದು ಕೇಳುತ್ತಿದ್ದರು. ಯಾವ ಸಮಯದಲ್ಲಿ ಅವರನ್ನು ಮಾತನಾಡಿಸಬೇಕು ಎಂದು ನಾವೇ ಕಲಿತೆವೆನ್ನಿ.

ಯಾವ ವಿಷಯವನ್ನು ಅರಿಯುವುದಾದರೂ ಅವರಿಗೆ ಅದರ ಆಳಕ್ಕೆ ಹೋಗಬೇಕು. ಸಣ್ಣಪುಟ್ಟ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಬೇಕು. ಅಮೇರಿಕಾಗೆ ನನ್ನ ಅಕ್ಕನ ಮನೆಗೆ ಬಂದಾಗ, ಅವಳ ಮನೆ ಎದುರಿಗೆ ಯಾರೋ ಮನೆಯೊಂದನ್ನು ಕಟ್ಟುತ್ತಿದ್ದರು. ಸ್ಥಳದಲ್ಲಿಯೇ ನಿಂತು ಕಟ್ಟುವ ಶೈಲಿಯನ್ನು ತಿಳಿದುಕೊಂಡದ್ದೇ ಅಲ್ಲದೆ, ಪುಸ್ತಕಾಲಯದಿಂದ ಪುಸ್ತಕಗಳನ್ನು ತರಿಸಿಕೊಂಡು ಓದಿ ಕೆಲವು ವರ್ಷಗಳಿಂದ ಅಲ್ಲಿ ವಾಸವಿದ್ದ ನಮಗೇ ವಿವರಿಸಿ ಹೇಳಿದರು. ಪ್ರೇಕ್ಷಣೀಯ ಸ್ಥಳಗಳನ್ನು ನೋಡುತ್ತಲೇ ಎರಡೂವರೆ ತಿಂಗಳುಗಳ ಕಾಲ ಅಲ್ಲಿದ್ದ ಅವರು ಭಾರತದಲ್ಲಿ ಸಮಾರಂಭ, ಭಾಷಣ ಎಂದು ಸಮಯವೇ ಸಿಕ್ಕುವುದಿಲ್ಲ, ಇಲ್ಲಾದರೆ ಯಾವ ಕಾಟವೂ ಇಲ್ಲ ಎನ್ನುತ್ತ ಭಾಗವತ ಏಕಾದಶ ದ್ವಾದಶ ಸ್ಕಂದಗಳ ಅನುವಾದ ಮಾಡಿ ಮುಗಿಸಿಬಿಟ್ಟರು. ಆದರೆ ಜೇನಿರುವುದನ್ನು ದುಂಬಿಗೆ ಹೇಳಿಕೊಡಬೇಕೇ ? ಅವರು ಬಂದಿರುವ ವಿಷಯ ತಿಳಿದು ಕನ್ನಡ ಸಂಘದವರು ಭಾಷಣಕ್ಕೆ ಕರೆದರು. ನ್ಯೂಜರ್ಸಿಯಿಂದ ಪೆನ್ಸಿಲ್ವೇನಿಯಾಗೆ ಪ್ರಯಾಣಿಸುತ್ತಿದ್ದಾಗ ಕಾರಿನ ಹಿಂದಿನ ಸೀಟಿನಲ್ಲಿ ನಿಶ್ಚಿಂತೆಯಿಂದ ನಿದ್ರಿಸುತ್ತಿದ್ದ ಅವರನ್ನು ಕಂಡು ನಮ್ಮ ಭಾವ ಭಾಷಣ ಮಾಡುವುದು ಅವರಾದರೂ, ಉದ್ವೇಗ ನಮಗಿದೆಯೇ ಹೊರತು ಅವರಿಗಿಲ್ಲ ಎಂದು ಬೆರಗಾದರು.

ಭಾರತ ದರ್ಶನದಲ್ಲಿ 'ವಿಶ್ವಾಮಿತ್ರ' ಎಂಬ ಕಾವ್ಯನಾಮದಲ್ಲಿ ಬರೆಯುತ್ತಿದ್ದ ವಿಷಯ ನಮ್ಮ ತಾಯಿಗೇ ಗೊತ್ತಿರಲಿಲ್ಲವಂತೆ. ಅವರು 'ಇದ್ಯಾರೋ ವಿಶ್ವಾಮಿತ್ರ ಎನ್ನುವವರು ತುಂಬಾ ಚೆನ್ನಾಗಿ ಬರೆಯುತ್ತಾರೆ" ಎಂದು ಹೇಳುತ್ತಿದ್ದರಂತೆ ! ನಮ್ಮ ತಾಯಿಯ ಅಕಾಲಿಕ ಮರಣ ನಮ್ಮೆಲ್ಲರಿಗೂ ತೀವ್ರ ಆಘಾತವನ್ನುಂಟುಮಾಡಿದರೂ, ಅವರು ಮಾಡಬೇಕಾಗಿದ್ದ ಕರ್ತವ್ಯಗಳನ್ನು ಇವತ್ತಿಗೂ ನಮ್ಮ ತಂದೆಯವರು ಮಾಡುತ್ತಿದ್ದಾರೆ. ಅವರಿಗಿರುವ ಕರ್ತವ್ಯಪ್ರಜ್ಞೆ ಅತ್ಯಂತ ನಿಖರವಾದುದು. ನನಗೆ

ಇದು ಎಷ್ಟೋ ಸಲ 'ಅತಿ' ಎಂದು ಅನಿಸಿ, ಏಕೆ ಇನ್ನೂ ಕರ್ತವ್ಯ ಕರ್ತವ್ಯ ಎಂದು ಒದ್ದಾಡುತ್ತೀರಿ ಎಂದು ಹೇಳಿದ್ದುಂಟು.

ಇತ್ತೀಚೆಗೆ ಮೊಮ್ಮಗನ ಕೈಹಿಡಿದು, ಅವನು ಕೇಳಿದನೆಂದ ಕೂಡಲೇ ಬರೆಯುತ್ತಿದ್ದುದನ್ನು ಬಿಟ್ಟು ಪಾರ್ಕ್, ದೇವಸ್ಥಾನಗಳಿಗೆ ಹೋಗುತ್ತಿದ್ದ ದೃಶ್ಯ ಸರ್ವೇ ಸಾಮಾನ್ಯವಾಗಿತ್ತು. ಈ 'Luxury' ನಮಗಿಲ್ಲವಾಗಿದ್ದರೂ, ನೋಡು ತ್ತಿದ್ದೇವೆ ಎಂದು ನಾನು ಹಾಸ್ಯ ಮಾಡಿದ್ದುಂಟು.

ಸಂಪ್ರದಾಯಸ್ಥ ಮನೆತನದಲ್ಲಿ ಹುಟ್ಟಿ ಇವತ್ತಿಗೂ ಅದನ್ನು ಮುಂದುವರೆಸಿ ಕೊಂಡು ಬಂದಿರುವ ಅವರು ನಮ್ಮ ಮೇಲೆ ಯಾವ ಅಭಿಪ್ರಾಯಗಳನ್ನೂ ಹೇರಿದವರಲ್ಲ. ವಿದ್ಯಾಭ್ಯಾಸ, ವಿವಾಹ ಮೊದಲಾದ ಮುಖ್ಯ ತೀರ್ಮಾನಗಳನ್ನು ನಮಗೇ ಬಿಟ್ಟವರು. ನನ್ನ ಅಕ್ಕ ವೈದ್ಯಳಾಗಲು ಹೊರಟಾಗ ಹುಡುಗಿಗೆ ಏಕೆ ಇದು ಎಂದು ಕೆಲವರು ಹೇಳಿದರೂ. ನಮ್ಮ ತಂದೆಯವರ ವಿರೋಧ ತಿಲವಷ್ಟೂ ಇರಲಿಲ್ಲ. ಜೀವನದಲ್ಲಿ ಯಾವ ವಿದ್ಯೆಯನ್ನೇ ಕಲಿಯಲಿ, ಯಾವ ಕೆಲಸವನ್ನೇ ಮಾಡಲಿ ಅದರಲ್ಲಿ ಶ್ರದ್ಧೆ, ಅಚ್ಚುಕಟ್ಟುಗಳು ಇರಬೇಕು ಎನ್ನುವುದೇ ಅವರ ಸೂತ್ರ. ಓದಿಗಾಗಿ ಚಿಕ್ಕವಯಸ್ಸಿನಲ್ಲಿಯೇ ಮನೆಯಿಂದ ಹೊರಟು, ವಾರಾನ್ನದಲ್ಲಿ ಮುಂದೆ ಬಂದ ಅವರಿಗೆ ಜೀವನದ ಯಾವ ತಿರುವುಗಳೂ ಸುಲಭವಾಗಿರಲಿಲ್ಲ.

ಶೋಕಸ್ಥಾನ ಸಹಸ್ರಾಣಿ ಭಯಸ್ಥಾನ ಶತಾನಿ ಚ ।
ದಿವಸೇ ದಿವಸೇ ಮೂಢಮಾವಿಶಂತಿ ನ ಪಂಡಿತಮ್ ॥

ಎನ್ನುವಂತೆ ಅವು ಯಾವುವೂ ಅವರ ಸಾಧನೆಯನ್ನು ಕುಂಠಿತಗೊಳಿಸಲಿಲ್ಲ.

ಹೀಗೆ ಹೇಳಹೊರಟರೆ ನೆನಪುಗಳು, ಅನುಭವಗಳು ಹಾಗೂ ಅನಿಸಿಕೆಗಳು ಒಂದರ ಮೇಲೊಂದು ಬರುತ್ತವೆ. ಒಂದು ಮಧುರ ನೆನಪಿನೊಂದಿಗೆ ಮುಕ್ತಾಯ ಮಾಡುತ್ತೇನೆ. ನಾನು 2–3 ವರ್ಷದವಳಿದ್ದಾಗ ಪ್ರತಿದಿನ ಸಂಜೆ 2 ಘಂಟೆಗೆ ನಮ್ಮ ತಂದೆಗಾಗಿ ಮನೆಯ ಹೊರಗಡೆ ಕಾಯುತ್ತಿದ್ದೆ. ಯಾರು ಏನು ಹೇಳಿದರೂ ಕುಳಿತ ಜಾಗದಿಂದ ಕದಲುತ್ತಿರಲಿಲ್ಲ. ಅವರು ಬರುವ ಸಮಯವಾಯಿತು ಎಂದು ಹೇಗೆ ಗೊತ್ತಾಗುತ್ತಿತ್ತು ಎಂದು ಈಗಲೂ ನನಗೆ ಅರ್ಥವಾಗಿಲ್ಲ. ಅದಕ್ಕಿಂತ ಹೆಚ್ಚಾಗಿ ಅಷ್ಟು ಚಿಕ್ಕವಳಿದ್ದಾಗಿನ ಅನುಭವ ಇವತ್ತಿಗೂ ಇಷ್ಟು ಹಚ್ಚ ಹಸಿರಾಗಿರುವುದು ಇನ್ನೂ ಆಶ್ಚರ್ಯ. ನಾನು ಕಾಯುತ್ತಿರುತ್ತೇನೆಂದು ಅವರು ಧಾವಂತದಿಂದ ಬರುತ್ತಿದ್ದರು.

ಎತ್ತಿಕೊಂಡು ಒಳಗೆ ಬಂದ ಕೂಡಲೇ ಕೆಳಗಿಳಿದು ಓಡಿಬಿಡುತ್ತಿದ್ದೆ. ಒಮ್ಮೆ ಕಾಲೇಜಿನಿಂದ ಇನ್ನೆಲ್ಲಿಗೋ ಸ್ನೇಹಿತರ ಜೊತೆ ಹೋಗಬೇಕಾದ ಪ್ರಸಂಗ ಬಂದಿತಂತೆ. ನಾನು ಕಾಯುತ್ತಿರುತ್ತೇನೆಂದು ಒಂದು ಕ್ಷಣ ಮನೆಗೆ ಹೋಗಿ ನಂತರ ಹೋಗೋಣ ಎಂದು ಸ್ನೇಹಿತರನ್ನೂ ಜೊತೆಗೇ ಕರೆದುಕೊಂಡು ಬಂದಿದ್ದರಂತೆ. ಮೃದು ಹಾಗೂ ಬಿಗು ವ್ಯಕ್ತಿತ್ವಗಳ ಹಿಂದಿರುವ ಅವರ ಅಂತಃಸತ್ತ್ವ ಪರಿಣಾಮಕಾರಿಯಾದುದು.

ಅಸ್ತಿ ದಂಡಾವತೀ ತೀರೇ ನಡ ಹಳ್ಳೀತಿ ವಿಶ್ರುತಃ ।
ಗ್ರಾಮೋ ರಾಮೇಶ್ವರ ವಿಭು ಪ್ರಸಾದ ವಿಮಲೀಕೃತಃ ॥
ವಿಶ್ವಾಮಿತ್ರಾನ್ವವಾಯೋಽ ಭೂದ್ ದ್ವಿಜಸ್ತಿರುಮಲಾಭಿಧಃ ।
ತತ್ರ ಶಿಷ್ಯ ಸದಾಚಾರೋ ನೃಹರೇ ಃ ಕರುಣಾತ್ಮನಃ ॥
ಪ್ರಿಯಾಃ ಸಂಜಜ್ಞಿರೇ ತಸ್ಯ ತನಯಾ ವಿನಯೋ ಜ್ವಲಾಃ ।
ತಚ್ಛರೀರಾದ್ವಿನಿಷ್ಕ್ರಾಂತಾಶ್ಚತ್ವಾರ ಇವ ಬಾಹವಃ ॥
ತೇಷಾಮನ್ಯತಮೋ ಧೀಮಾನ್ ರಂಗನಾಥಪದ ಶ್ರುತಃ ।
ಭಕ್ತ್ಯಾ ತುಷ್ಟಾವ ನಿಷ್ಠಾವಾನ್ ಇಮಾಂ ಗುರು ಪರಂಪರಾಮ್ ॥

ಶ್ರೀ ರಂಗನಾಥ ಶರ್ಮರ
ಶ್ರೀ ಗುರು ಪರಂಪರಾಚರಿತಮ್ – ಇಂದ

ವಿದ್ವಾನ್ ಎನ್. ರಂಗನಾಥ ಶರ್ಮಾ

ಡಾ. ಡಿ. ವಿ. ರಾವ್

"ವನಸುಮದೊಲೆನ್ನ ಜೀವನವು ವಿಕಸಿಸುವಂತೆ
ಮನವನನುಗೊಳಿಸು ಗುರುವೆ–ಹೇ ದೇವ
ಜನಕೆ ಸಂತಸವೀವ ಘನನು ನಾನೆಂದೆಂಬ
ಎಣಿಕೆ ತೋರದೆ ಜಗದ ಪೊಗಳಿಕೆಗೆ ಬಾಯ್ ಬಿಡದೆ
ಕಾನನದಿ ಮಲ್ಲಿಗೆಯು ಮೌನದಿಂ ಬಿರಿದು ನಿಜ
ಸೌರಭವ ಸೂಸಿ ನಲವಿಂ ತಾನೆಲೆಯು ಪೀತಿರ್ದು
ದೀನತೆಯು ತೋರಿ ಅಭಿಮಾನವನು ತೊರೆದು ಕೃತಕೃತ್ಯತೆಯು ಪಡೆವಂತೆ–"

ಕೀರ್ತಿಶೇಷರಾದ ಮಾನ್ಯ ಡಿ. ವಿ. ಗುಂಡಪ್ಪನವರ 'ವನಸುಮ' ಎಂಬ ಪದ್ಯದ ಮೇಲಿನ ಸಾಲುಗಳು ಶ್ರೀ ರಂಗನಾಥಶರ್ಮರ ಜೀವನದ ಸಾರವನ್ನು ಪ್ರತಿಬಿಂಬಿಸುತ್ತವೆ ಎಂದು ನನ್ನ ಮನೋಭಾವ.

ಶ್ರೀ ರಂಗನಾಥಶರ್ಮಾರನ್ನು ನಾನು ಮೊದಲು ಕಂಡದ್ದು ಸುಮಾರು ಅರ್ಧ ಶತಮಾನಕ್ಕೂ ಹಿಂದೆ. ಆಗ ಅವರು ವಿದ್ಯಾರ್ಥಿದೆಸೆಯಲ್ಲಿದ್ದರು. ಬೆಂಗಳೂರಿನ ಬಸವನಗುಡಿ ಬಡಾವಣೆಯಲ್ಲಿರುವ ವ್ಯಾಸ ಮಂದಿರದಲ್ಲಿ ಇದ್ದರು. ಚಕ್ಕಂಬಟ್ಟಲು ಹಾಕಿ ನೆಟ್ಟಗೆ ಕುಳಿತು ಮುಂದೆ ಕಾಲುಮಣೆಯ ಮೇಲಿದ್ದ ಪುಸ್ತಕವನ್ನು ಓದುವುದರಲ್ಲಿ ತಲ್ಲೀನರಾಗಿದ್ದರು. ಸದೃಢವಲ್ಲದ ಶರೀರ, ತಲೆಯ ಮೇಲೆ ಶಿಖೆ, ಎಡಹೆಗಲ ಮೇಲಿಂದ ಇಳಿದ ಯಜ್ಞೋಪವೀತ, ತಲೆ ಎತ್ತಿ ನೋಡಿದಾಗ ಅವರ ಕಣ್ಣುಗಳಲ್ಲಿ ಕಂಡ ಶುಭ್ರ ಕಳೆ. ಅಂದು ನನ್ನ ಮೊದಲ ನೋಟಕ್ಕೆ ಕಂಡುದು ಇಂದೂ ನೆನಪಿಗೆ ಬರುತ್ತದೆ. ಅಂದಿನಿಂದ ಹಲವು ಬಾರಿ ಅವರನ್ನು ಕಂಡಿದ್ದೇನೆ. ಜೀವನದಲ್ಲಿ ಅವರು ಅನುಭವಿಸಿದ ಕಷ್ಟ ಸುಖಗಳ ಸಂಗತಿಗಳನ್ನು ಕೇಳಿದ್ದೇನೆ, ಅವರ ವಿದ್ಯಾಭಿವೃದ್ಧಿ,

ಸ್ಥಾನಮಾನ, ಕೃತಿ ರಚನೆ, ಪ್ರಸಿದ್ಧಿ ಪ್ರಶಸ್ತಿಗಳ ಕುರಿತು ತಿಳಿದುಕೊಂಡಿದ್ದೇನೆ. ವಿದ್ಯಾಭ್ಯಾಸದಲ್ಲಿ, ಜೀವನದಲ್ಲಿ ಶುದ್ಧ ಚಾರಿತ್ರ್ಯದಲ್ಲಿ, ದೈವ ಭಕ್ತಿಯಲ್ಲಿ, ಸದ್ಗುಣಗಳಲ್ಲಿ, ನ್ಯಾಯ ನಡತೆಗಳಲ್ಲಿ ಅವರಿಗಿರುವ ಅಚಲ ಆಸಕ್ತಿ, ಅದಮ್ಯಶ್ರದ್ಧೆ, ಅಮಿತ ಉತ್ಸಾಹ ಮತ್ತು ಯೋಗ್ಯ, ಅವಶ್ಯಕ, ಸಾಧ್ಯ ಎಂಬ ಕರ್ತವ್ಯಗಳಲ್ಲಿ ಇರುವ ಛಲ, ಈ ಗುಣಗಳನ್ನು ನಾನು ಮೆಚ್ಚಿಕೊಂಡಿದ್ದೇನೆ.

ಈಗ ಅವರ ಹಿತೈಷಿಗಳೂ, ಅಭಿಮಾನಿಗಳೂ, ಸ್ನೇಹಿತರೂ ಅದ ಕೆಲವು ಮಹನೀಯರು ಒಟ್ಟಾಗಿ ಅವರಿಗೆ ಒಂದು ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸುತ್ತಿದ್ದಾರೆ. ಅದು ಅವಶ್ಯವಾದ ಮತ್ತು ಸ್ತುತ್ಯವಾದ ಕಾರ್ಯ. ಪ್ರಶಂಸನೀಯವಾದುದೂ ಆಗಿದೆ.

ಭಾರತೀಯರು ಪ್ರಾಚೀನ ಕಾಲದಿಂದಲೂ ಅಧ್ಯಯನಾಸಕ್ತರು, ಮತ್ತು ಚಿಂತನಶೀಲರು. ಅಧ್ಯಯನವು ತೇಜಸ್ಸಿನಿಂದ ಕೂಡಿರಬೇಕೆಂಬುದು ಅವರ ಧ್ಯೇಯ. ಧ್ಯೇಯ ಇದ್ದರೆ ಮಾತ್ರ ತೇಜಸ್ಸು ಬರಲಾರದು. ಒಮ್ಮನದ ಪ್ರಾರ್ಥನೆಯೊಂದಿಗೆ ಶ್ರದ್ಧಾ ಭಕ್ತಿಗಳಲ್ಲದೆ ಜೀವನ ಯೋಗವೂ ಮಿಳಿತಗೊಂಡಿರಬೇಕು. ಪ್ರಾರ್ಥನೆ ಮತ್ತು ಜೀವನಯೋಗದ ಸಂಮಿಳನವೆ ವೈಚಾರಿಕತೆ ಎಂದು ವಿನೋಬಾಜಿ ಹೇಳಿರುವರು. ಜೀವನ ಧರ್ಮವು ಚಿಂತನಗಳೊಂದಿಗೆ ಮೇಳವಿಸಿಕೊಳ್ಳದೆ ಇದ್ದರೆ ಅಧ್ಯಯನವು ವಿಚಾರ ಹೀನವಾಗಿ ಸತ್ವಹೀನವಾಗುವುದು. ಚಿಂತನೆ, ಅಧ್ಯಯನ, ಚರ್ಚೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಡಿ.ವಿ.ಜಿ.ಯವರು ಬೆಂಗಳೂರಿನಲ್ಲಿ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯನ್ನು ಸ್ಥಾಪಿಸಿದರು. ಶ್ರೀ ರಂಗನಾಥಶರ್ಮರು ಅದರ ನಿಕಟ ಸಂಪರ್ಕವನ್ನು ಇಟ್ಟುಕೊಂಡ ಕ್ರಿಯಾಶೀಲವ್ಯಕ್ತಿ.

ಶ್ರೀ ರಂಗನಾಥಶರ್ಮ ಅವರು ಶಿವಮೊಗ್ಗ ಜಿಲ್ಲಾ ಸೊರಬ ತಾಲ್ಲೂಕಿನ ನಡಹಳ್ಳಿ ಎಂಬ ಗ್ರಾಮದಲ್ಲಿ 7-4-1916ರಲ್ಲಿ ಜನಿಸಿದರು. ಅವರದು ಹವ್ಯಕ ಬ್ರಾಹ್ಮಣ ಮನೆತನ. ದಿವಂಗತರಾದ ಅವರ ತಾಯಿ ಶ್ರೀಮತಿ ಜಾನಕಮ್ಮ ಮತ್ತು ತಂದೆ ಶ್ರೀ ತಿಮ್ಮಪ್ಪನವರು ಸಜ್ಜನರು. ಕೃಷಿಕ ವೃತ್ತಿಯಲ್ಲಿದ್ದರು. ಶ್ರೀ ರಂಗನಾಥಶರ್ಮರಿಗೆ ನಾಲ್ಕು ಜನ ಅಣ್ಣ ತಮ್ಮಂದಿರು, ನಾಲ್ವರು ಅಕ್ಕತಂಗಿಯರು ತುಂಬಿದ ಕುಟುಂಬದಲ್ಲಿ ಬೆಳೆದ ಅವರು ತಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ನಡಹಳ್ಳಿ ಮತ್ತು ಸೊರಬದಲ್ಲಿ ಮುಗಿಸಿದರು.

ಸಮೃದ್ಧ ಬೆಳೆಯು ಬಂದಾಗ ಅದು ಬೆಳೆದ ನೆಲ ಫಲವತ್ತಾಗಿರುವುದು ಸಹಜವಲ್ಲವೆ ? ಶ್ರೀರಂಗನಾಥಶರ್ಮರ ತಂದೆಯವರು ವಿದ್ಯಾಭಿಲಾಷಿಗಳು. ಆಗ ಕನ್ನಡದಲ್ಲಿ ಲಭ್ಯವಾಗಿದ್ದ ವೇದಾಂತ ಪುಸ್ತಕಗಳನ್ನು ಓದಿ ಮನನ ಮಾಡಿಕೊಂಡ, ಕರ್ಮಕಾಂಡವನ್ನು ಅರಿತು ಆಚರಿಸಿಕೊಂಡು ಬಂದ ಕರ್ಮಠ. ಶ್ರೀರಂಗನಾಥಶರ್ಮರ ಚಿಕ್ಕಪ್ಪಂದಿರಾದ ದಿ॥ ವೆಂಕಪ್ಪನವರು ಆ ಕಾಲದ ಒಬ್ಬ ಅಪ್ರತಿಮ ಪ್ರತಿಭಾವಂತ,

ಆಡುಮುಟ್ಟದ ಸೊಪ್ಪಿಲ್ಲ ಎಂಬ ನಾಡನುಡಿ ಅವರಿಗೆ ಅನ್ವಯವಾಗುತ್ತಿತ್ತು. ಅವರು ಸ್ವಂತ ವ್ಯಾಸಂಗದಿಂದಲೇ ಸಂಸ್ಕೃತ ಭಾಷೆಯನ್ನು ಚೆನ್ನಾಗಿ ಕಲಿತು ತಿಳಿದವರು. ತರ್ಕವ್ಯಾಕರಣಾದಿ ಶಾಸ್ತ್ರಗಳನ್ನು ವಿಧಿವತ್ತಾಗಿ ಅಧ್ಯಯನ ಮಾಡಿರದಿದ್ದರೂ ಅವುಗಳಲ್ಲಿ ಅವರ ಪಾಂಡಿತ್ಯಕ್ಕೇನೂ ಕೊರತೆ ಇರಲಿಲ್ಲ. ಸಂಸ್ಕೃತದಲ್ಲಿ ಅವರ ಕವಿತಾ ಸಾಮರ್ಥ್ಯ ಶ್ಲಾಘನೀಯವಾಗಿತ್ತು. ಬಹುಶಃ ತಮಗೇ ಅರಿವಾಗದಂತೆ ಶ್ರೀರಂಗನಾಥಶರ್ಮರು ಅವರಿಂದ ಪ್ರಭಾವಿತರಾಗಿರಬೇಕು.

ಆಗ ಇಂಗ್ಲಿಷ್ ಭಾಷೆಗೆ ಬಹಳ ಗೌರವ ಮತ್ತು ಪ್ರಾಧಾನ್ಯಸ್ಥಾನ ಇತ್ತು. ಸ್ನಾತಕೋತ್ತರ ಪದವಿಗಳಾದ ಬಿ.ಎ., ಎಂ.ಎ. ಮೊದಲಾದವುಗಳು ವಿದ್ಯಾರ್ಥಿಗಳ ಗುರಿ, ಗಮನವಾಗಿತ್ತು. ಬಾಲಕ ರಂಗನಾಥನಿಗೆ ಅಂತಹ ಆಸೆ ಇದ್ದುದೇನೂ ಹೆಚ್ಚಲ್ಲ. ಆದರೆ ಪರಿಸ್ಥಿತಿ ಪೂರಕವಾಗಿರಲಿಲ್ಲ. ಸೊರಬದ ಹತ್ತಿರ ಎಲ್ಲೂ ಹೈಸ್ಕೂಲು ಕಾಲೇಜುಗಳಿರಲಿಲ್ಲ. ಪರಸ್ಥಳಕ್ಕೆ ಹೋಗಿ ವ್ಯಾಸಂಗ ಮಾಡಬೇಕು ಎಂದರೆ ಅಲ್ಲಿ ಊಟ ವಸತಿಗಳ ವ್ಯವಸ್ಥೆಗಳಾಗಬೇಕು. ಅಂತಹ ಖರ್ಚುವೆಚ್ಚಗಳ ಭಾರವನ್ನು ಹೊರಲು ಅವರ ತಂದೆಯವರಿಗೆ ಶಕ್ತಿ ಇರಲಿಲ್ಲ. ದೊಡ್ಡ ಕುಟುಂಬ. ಆದಾಯ ಬಹಳ ಪರಿಮಿತ. ಸಂಸಾರದ ವೆಚ್ಚ ಅಧಿಕ. ಆದ್ದರಿಂದ ಬಾಲಕ ರಂಗನಾಥನಿಗೆ ಅವನು ಬಯಸಿದ ಇಂಗ್ಲಿಷ್ ವಿದ್ಯಾಭ್ಯಾಸ ಮುಂದುವರಿಸಲಾಗಲಿಲ್ಲ.

ಹೇಗಾದರೂ ವಿದ್ಯಾಭ್ಯಾಸವನ್ನು ಮುಂದುವರಿಸಲೇಬೇಕೆಂಬ ಅದಮ್ಯ ಆಕಾಂಕ್ಷೆ ರಂಗನಾಥನದು. ಮನಸ್ಸಿದ್ದರೆ ಮಾರ್ಗ ಇದೆ. ಆಗಡಿ ಆನಂದವನದಿಂದ ಸದ್ಬೋಧ ಚಂದ್ರಿಕೆ ಎಂಬ ಮಾಸಪತ್ರಿಕೆ ಪ್ರಕಟವಾಗುತ್ತಿತ್ತು. ಆ ಕಾಲದ ಜನಪ್ರಿಯ ಮಾಸಪತ್ರಿಕೆ ಅದು. ಆನಂದವನದ ಆಶ್ರಮದಲ್ಲಿ ಸಂಸ್ಕೃತ ವಿದ್ಯಾಭ್ಯಾಸ ಮಾಡುವವರಿಗೆ ಉಚಿತವಾಗಿ ಊಟ ವಸತಿ ಸೌಕರ್ಯಗಳನ್ನು ಕಲ್ಪಿಸಿಕೊಡುವುದಾಗಿ ಸದ್ಬೋಧ ಚಂದ್ರಿಕೆಯಲ್ಲಿ ಪ್ರಕಟವಾಗಿತ್ತು. ರಂಗನಾಥನ ವಿದ್ಯಾಭ್ಯಾಸದ ಹಂಬಲು ಗರಿಗೆದರಿ ಆಕಾಶಕ್ಕೆ ಹಾರಿತು. ಅದೇ ಕ್ಷಣ ಕಾರ್ಯತತ್ಪರನಾದ ರಂಗನಾಥ ಆನಂದವನಕ್ಕೆ ಪತ್ರ ಬರೆದ. ಅಲ್ಲಿಗೆ ಬರಬಹುದೆಂದು ವ್ಯವಸ್ಥಾಪಕರ ಪತ್ರವೂ ಬಂದಿತು. ಬಾಲಕ ರಂಗನಾಥ ಕರ್ತವ್ಯನಿಷ್ಠ. ತಂದೆ ತಾಯಿಗಳ ಒಪ್ಪಿಗೆಯನ್ನು ಕೇಳಿಪಡೆದುಕೊಂಡು ಆನಂದವನ ಆಶ್ರಮಕ್ಕೆ ಹೋದ.

ವಿಧಿಯು ಶ್ರೀರಂಗನಾಥಶರ್ಮರ ಸಂಸ್ಕೃತಾಭ್ಯಾಸದ ಉಜ್ವಲಭವಿಷ್ಯಕ್ಕೆ ಅಂದು ಅಸ್ತಿವಾರ ಹಾಕಿತು. ಅಲ್ಲದೆ ಅದು ಸಂಸ್ಕೃತದ ಬಗ್ಗೆ ರಂಗನಾಥರ ಮನಸ್ಸಿನಲ್ಲಿ ಅಚಲವಾದ ಒಲವನ್ನು ಮೂಡಿಸಿತು.

"ಸಂಸ್ಕೃತ ಅಧ್ಯಯನ ಮಾಡುವಾಗ ಒಂದು ಗೊತ್ತಾದ ಮಾರ್ಗದಲ್ಲಿ ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವುದರ ಕುರಿತು ಪೂರ್ವಭಾವಿಯಾಗಿ ನೀವು ಚಿಂತಿಸಿದ್ದಿರಾ ? ನಿಮ್ಮ ಭವಿಷ್ಯದ ಯೋಜನೆ ಹೇಗಿತ್ತು ?" ಎಂದು ನಾನು ಕೇಳಿದುದಕ್ಕೆ ಶ್ರೀರಂಗನಾಥ ಶರ್ಮರು ಕ್ಷಣಕಾಲ ಮೌನವಾಗಿದ್ದು ಹೇಳಿದರು :

"ಭವಿಷ್ಯ ಜೀವನದ ವಿಷಯವಾಗಿ ಚಿಂತಿಸುವಷ್ಟು ವಯಸ್ಸಾಗಲೀ, ತಿಳಿವಳಿಕೆಯಾಗಲೀ ಆಗ ನನಗೆ ಇರಲಿಲ್ಲ. ಪ್ರಸ್ತುತ ಅಧ್ಯಯನದ ಕಡೆ ಮಾತ್ರ ನನ್ನ ಗಮನವಿತ್ತು. ಅನಂತರ ಸಂಸ್ಕೃತದಲ್ಲಿ ಪ್ರೌಢಾಧ್ಯಯನ ಮಾಡುವಾಗ ಅದರ ಆಲೋಚನೆ ಬಂದದ್ದುಂಟು. ಇಂಗ್ಲಿಷ್ ಕಲಿತು ಪದವಿ ಸಂಪಾದಿಸಿದವರೂ ಕೆಲಸವಿಲ್ಲದೆ ಅಲೆಯುತ್ತಿರುವುದನ್ನು ಕಂಡಿದ್ದೆ. ಹೇಗೋ ಜೀವನ ನಡೆಯುವುದೆಂಬ ನಂಬಿಕೆ ರಕ್ಷಾ ಕವಚವಾಯಿತು. ಮಹತ್ತರವಾದ ಆಸೆಯನ್ನೇನೂ ನಾನು ಇಟ್ಟುಕೊಂಡಿರಲಿಲ್ಲ."

ಆನಂದವನದಲ್ಲಿ ಅಧ್ಯಯನ ಮಾಡಿಕೊಂಡಿದ್ದ ಬಾಲಕ ರಂಗನಾಥನಿಗೆ ಆ ಬಯಲುಸೀಮೆಯ ಹವಾಗುಣ, ಆಹಾರಗಳು ಒಗ್ಗಲಿಲ್ಲ. ಅನಿವಾರ್ಯವಾಗಿ ಪರಿಸ್ಥಿತಿಯ ಒತ್ತಡದಿಂದ ಅವನು ಮನೆಗೆ ಮರಳಿದ. ಆನಂದವನದಲ್ಲಿ ಅವನಿಗೆ ಹೆಚ್ಚಿನದೇನನ್ನೂ ಕಲಿಯುವುದಾಗಲಿಲ್ಲ. ಮನೆಗೆ ಮರಳಿದ ಮೇಲೆ ಅವನ ದೈಹಿಕ ಆರೋಗ್ಯ ಸುಧಾರಿಸಿತು. ಆದರೆ ಮುಂದಿನ ವಿದ್ಯಾಭ್ಯಾಸದ ಚಿಂತೆ ಮನಸ್ಸನ್ನು ಪೀಡಿಸತೊಡಗಿತು. ಮುಂದಿನ ದಾರಿ ಹುಡುಕಲು ಪ್ರಯತ್ನಿಸಿತು. ಆಗ ಸಾಗರ ತಾಲ್ಲೂಕು ಕೆಳದಿಯಲ್ಲಿ ಸಂಸ್ಕೃತ ಪಾಠಶಾಲೆ ನಡೆಯುತ್ತಿತ್ತು. ಹೊಸಹಳ್ಳಿ–ಮತ್ತೂರಿನ ವೇ॥ ಕೇಶವಶಾಸ್ತ್ರಿ ಮತ್ತು ವೇದಮೂರ್ತಿ ನಾರಾಯಣಶಾಸ್ತ್ರಿಗಳು ಅಲ್ಲಿ ಉಪಾಧ್ಯಾಯರಾಗಿದ್ದರು. ಅಲ್ಲಿ ಸಂಸ್ಕೃತ ಮತ್ತು ವೇದಪಾಠ ಚೆನ್ನಾಗಿ ನಡೆಯುತ್ತಿತ್ತು. ಈ ವಿಷಯ ತಿಳಿದ ರಂಗನಾಥ ಅಲ್ಲಿಗೆ ಹೋಗಲು ಅಪ್ಪಣೆ ಪಡೆದ. ಕೆಳದಿಯಲ್ಲಿ ಪಾಠಶಾಲೆಗೆ ಸೇರಿದೊಡನೆ ಶಾಸ್ತ್ರಿಗಳ ಮತ್ತು ಸ್ಥಳೀಕರ ಔದಾರ್ಯದಿಂದ ಊಟ ವಸತಿ ಸೌಕರ್ಯಗಳು ದೊರೆತವು. ಇತ್ತೀಚೆಗೆ ಕೆಳದಿಯಲ್ಲಿ ಅವರ ರಾಮಾಯಣ ವಾಚನ ಮತ್ತು ಸನ್ಮಾನ ಸಮಾರಂಭದಲ್ಲಿ ಅವರು, ತಾವು ಬಾಲ್ಯದಲ್ಲಿ ಕೆಳದಿ–ಹಾರೇಗೊಪ್ಪದಲ್ಲಿ ವಿದ್ಯಾರ್ಥಿಯಾಗಿದ್ದುದನ್ನು ನೆನಪಿಸಿಕೊಂಡು ಅಲ್ಲಿನ ಜನರಿಗೆ ಕೃತಜ್ಞತೆಯನ್ನು ಅರ್ಪಿಸಿದ್ದು ಅವರ ಭವ್ಯ ವ್ಯಕ್ತಿತ್ವದ ಲಕ್ಷಣವನ್ನು ಎತ್ತಿ ತೋರಿಸಿತ್ತು.

ಅಲ್ಲಿಂದ ಮುಂದೆ ತಮ್ಮ ವಿದ್ಯಾಭ್ಯಾಸವನ್ನು ಕುರಿತು ಶ್ರೀರಂಗನಾಥ ಶರ್ಮ ಹೇಳುತ್ತಾರೆ :

"ಆ ಪಾಠಶಾಲೆಯಲ್ಲಿ ಮೂರು ವರ್ಷ ಕಾಲ ನನ್ನ ವ್ಯಾಸಂಗ ನಡೆಯಿತು. ನನ್ನ ಸಂಸ್ಕೃತಾಭ್ಯಾಸ ಆರಂಭ ಆದದ್ದು ಅಲ್ಲಿಯೇ ಎನ್ನುವುದು ಸೂಕ್ತ. ಇಬ್ಬರು ಶಾಸ್ತ್ರಿಗಳೂ ಚೆನ್ನಾಗಿ ಆಸಕ್ತಿಯಿಂದ ಪಾಠ ಹೇಳುತ್ತಿದ್ದರು. ನನ್ನ ಮೇಲೆ ಅವರಿಗೆ ವಿಶೇಷ ವಾತ್ಸಲ್ಯವಿತ್ತು. ಮೈಸೂರು ಸರ್ಕಾರವು ನಡೆಸುತ್ತಿದ್ದ ಸಂಸ್ಕೃತ ಪರೀಕ್ಷೆಗಳಲ್ಲಿ ಪ್ರಥಮ ಪರೀಕ್ಷೆಗೆ ಕುಳಿತೆ. ಪರೀಕ್ಷಾಕೇಂದ್ರ ಸಾಗರದಲ್ಲಿತ್ತು. ಪರೀಕ್ಷೆಗೆ ಕುಳಿತ 6 ಜನ ವಿದ್ಯಾರ್ಥಿಗಳಲ್ಲಿ ನಾನೊಬ್ಬನೇ ತೇರ್ಗಡೆಯಾದವನು. ಇದರಿಂದ ಅಧ್ಯಾಪಕ ಶಾಸ್ತ್ರಿಗಳಿಗೆ ನನ್ನಲ್ಲಿ ಅನುಗ್ರಹ ಬುದ್ಧಿ ಇನ್ನೂ ಅಧಿಕವಾಯಿತು. ನನ್ನನ್ನು ಕಾವ್ಯ ಪರೀಕ್ಷೆಗೆ ಕಳುಹಿಸಲು ವೇ॥ ನಾರಾಯಣ ಶಾಸ್ತ್ರಿಗಳು ಪ್ರತ್ಯೇಕವಾಗಿ ಪರೀಕ್ಷಾ ಸಿದ್ಧತೆಗಾಗಿ ಪಾಠ

ಹೇಳುತ್ತಿದ್ದರು. ಬೆಂಗಳೂರಲ್ಲಿ ಪರೀಕ್ಷಾಕೇಂದ್ರ, ಪರೀಕ್ಷೆಗೆ ಹೋದೆ. ಬೆಂಗಳೂರಿಗೆ ಆಗಲೇ ಪ್ರಥಮ ಪ್ರವೇಶವಾದದ್ದು. ಕಾವ್ಯ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾದೆ. ವ್ಯಾಕರಣದಲ್ಲಿ ನಾನೇ ಸಮಸ್ತ ವಿದ್ಯಾರ್ಥಿಗಳಿಗಿಂತ ಅಧಿಕ ಅಂಕ ಗಳಿಸಿದ್ದೆ. ನನ್ನ ಅಧ್ಯಾಪಕರಾದ ವೇ॥ ನಾರಾಯಣಶಾಸ್ತ್ರಿಗಳು ಆನಂದ ತುಂದಿಲರಾದರು. ಬೆಂಗಳೂರಿಗೆ ಹೋಗಿ ಮುಂದೆ ಪ್ರೌಢ ವಿದ್ಯಾಭ್ಯಾಸವನ್ನು ಮಾಡಬೇಕೆಂದು ನನ್ನನ್ನು ಪ್ರೋತ್ಸಾಹಿಸಿದರು. ಮನೆಯಲ್ಲಿಯೂ ಒಪ್ಪಿಗೆ ದೊರೆಯಿತು. ನಾನು ಪ್ರೌಢ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಬಂದೆ.

"ನನ್ನ ಸಾಧನೆ ಶ್ರೇಯಸ್ಸು ಏನಿದ್ದರೂ ಇದಕ್ಕೆ ಮೂಲ ಕಾರಣಭೂತರಾದವರು ವೇ॥ ನಾರಾಯಣಶಾಸ್ತ್ರಿಗಳು ಮತ್ತು ವೇ॥ ಕೇಶವಶಾಸ್ತ್ರಿಗಳು. ಅವರು ಹೇಳಿದ್ದು ಬಾಲ್ಯಪಾಠವೇ ಆಗಿದ್ದರೂ ನನ್ನ ಭವಿಷ್ಯಕ್ಕೆ ತಳಹದಿಯನ್ನು ಹಾಕಿ ಪ್ರೋತ್ಸಾಹಿಸಿದ ಪುಣ್ಯಾತ್ಮರು ಅವರು. ಆವರು ನನ್ನ ಹೃದಯದಲ್ಲಿ ಸದಾ ನೆಲೆಸಿರುತ್ತಾರೆ."

ಪೌಢ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಬಂದ ಯುವಕ ರಂಗನಾಥಶರ್ಮರು ಶ್ರೀಜಯಚಾಮರಾಜೇಂದ್ರ ಕಾಲೇಜನ್ನು ಸೇರಿದರು. ಆಗ ಅವರಿಗೆ ಯೌವ್ವನದಲ್ಲಿ ಸಹಜವಾಗಿ ಮೂಡಿಬರುವ ಮನೋದಾರ್ಢ್ಯ, ಧೈರ್ಯ, ಸ್ಥೈರ್ಯಗಳಲ್ಲದೆ ಬೇರೆ ಏನೂ ಇರಲಿಲ್ಲ. ಊಟ ವಸತಿಗಾಗಿ ಸಹ ಹಣ ಕೊಟ್ಟು ಅಭ್ಯಾಸಮಾಡುವ ಅನುಕೂಲ ಇರಲಿಲ್ಲ. ಎಂಟು ವರ್ಷಕಾಲ ಅವರು ಶ್ರೀ ಜಯಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ಅಧ್ಯಯನ ಮಾಡಿ ಪದವೀಧರರಾದುದು ಅವರ ಅದಮ್ಯ ವಿದ್ಯಾಕಾಂಕ್ಷೆ, ಸ್ಥೈರ್ಯ, ಧೈರ್ಯ ಸಹನೆಗಳಿಂದ ಮಾತ್ರ. ಮೊದಲು 2 ವರ್ಷ ಕಾಲ ಅವರು ಅವರಿವರ ಮನೆಗಳಲ್ಲಿ ವಾರಾನ್ನ ಮಾಡಿಕೊಂಡು ಜೀವಿಸಿದ್ದರು. ವ್ಯಾಸಮಂದಿರದಲ್ಲಿ ವಾಸ. ಅಷ್ಟರಲ್ಲಿ ಅವರ ಮುಖ ಮೈಗಳಲ್ಲಿ ಎಕ್ಸಿಮ ಚರ್ಮರೋಗವು ಕಾಣಿಸಿ ಕೊಂಡಿತು. ಕ್ರಮೇಣ ಅದು ನಖಶಿಖಾಂತವಾಗಿ ಕೆನ್ನೆ, ಕಿವಿ, ಕಣ್ಣುರೆಪ್ಪೆಗಳಿಗೂ ಸಹ ವ್ಯಾಪಿಸಿಕೊಂಡಿತು. ಈ ಸ್ಥಿತಿಯಲ್ಲಿ ವಾರಾನ್ನದ ಮನೆಗಳಿಗಾಗಲೀ, ಕಾಲೇಜಿಗಾಗಲೀ ಹೋಗುವುದಾದರೂ ಹೇಗೆ ? ಜನ ಕಣ್ಣರಳಿಸಿ ನೋಡಿ ದೂರ ಮಾಡುವುದನ್ನೂ ಲೆಕ್ಕಿಸದೆ ವಿದ್ಯಾಭ್ಯಾಸವನ್ನು ತಪ್ಪಿಸಲಿಲ್ಲ. ಸ್ವತಃ ಅಡಿಗೆ ಮಾಡಿಕೊಂಡು ಊಟ ಮಾಡಲು ಪ್ರಾರಂಭಿಸಿದರು. ಕೈಲಿ ಇಕ್ಕಳ ಹಿಡಿದು ಅಡಿಗೆ ಮಾಡಿಕೊಂಡು ಚಮಚದಿಂದ ತಿನ್ನುತ್ತಿದ್ದರು. ಕಾಲೇಜಿಗೆ ಹೋಗಿರಲಿ, ಬಿಡಲಿ ದಿನ ದಿನದ ಪಾಠ ಕ್ರಮವನ್ನು ಅನುಸರಿಸಿ ಅಭ್ಯಾಸ ಮುಂದುವರಿಸಿದರು. ಮೂರು ವರ್ಷಕಾಲ ಉಪ್ಪು, ಹುಳಿ, ಖಾರ, ಮಸಾಲೆಗಳನ್ನು ಪೂರ್ತಿಬಿಟ್ಟು ಬರಿ ಸಪ್ಪೆಯನ್ನೇ ಉಂಡು ಕಠೋರ ಪಥ್ಯ ಮಾಡಿದರು. ಅದು ಒಂದು ಸಾಧನೆ ಮತ್ತು ತಪಸ್ಸು ಎಂದೇ ಹೇಳಬೇಕು. ದೇಹಕ್ಕೆ ಅವಶ್ಯಕವಾದ ಪೌಷ್ಠಿಕಾಂಶ ಸಿಗದೆ ಆಗಾಗ ಅತಿಸಾರವ್ಯಾಧಿ ಸಹ ಕಾಣಿಸಿಕೊಂಡಿತ್ತು. ಹಲವು ದಿನ ಅವರಿಗೆ ಹಸಿವು ನಿದ್ರೆಗಳು ಏನೆಂಬುದೇ ತಿಳಿಯದಾಯಿತು. ಒಂದೆ ಕಡೆ ಗುಣವಾಗಲಾರ

ದೆಂಬತಹ ರೋಗ, ಮತ್ತೊಂದು ಕಡೆ ಬಡತನದ ಬವಣೆ, ತನ್ನ ಹೃನ್ಮನಸುಗಳಿಗೆ ತೃಪ್ತಿಯಾಗುವಂತೆ ವಿದ್ಯಾಭ್ಯಾಸ ಮಾಡಲಾಗದಂಥ ಚಿಂತೆ, ಈ ಮೂರೂ ಸೇರಿ ಶಕ್ತಿಮೀರಿ ಅವರನ್ನು ಒಂದೊಂದು ಕಡೆಯಿಂದ ಜಗ್ಗಿ ಹಿಂಸಿಸಿದರೂ ಅವರು ತಮ್ಮ ವಿದ್ಯಾಭ್ಯಾಸ ಮತ್ತು ಸಂಸ್ಕೃತ ಅಧ್ಯಯನದಿಂದ ವಿಚಲಿತರಾಗಲಿಲ್ಲ. ಈ ಜಗತ್ತಿನಲ್ಲಿ ವಿದ್ಯಾರ್ಥಿ ದೆಸೆಯಲ್ಲಿ ತನ್ನಷ್ಟು ರೋಗರುಜಿನಗಳನ್ನು ಅನುಭವಿಸಿದವರು ಯಾರೂ ಇರಲಿಕ್ಕಿಲ್ಲ ಎಂಬ ಭಾವನೆ ಅವರಿಗೆ ಬಂದಿದ್ದರೆ ಅದು ಅತ್ಯಂತ ಸಹಜವಾದುದೆ ! ಇಂತಹ ದಾರುಣ ಪರಿಸ್ಥಿತಿಯಲ್ಲಿ ಅವರು ಜೀವ ಹಿಡಿದು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿ ನಿರ್ಧರಿಸಿಕೊಂಡ ಗುರಿಯನ್ನು ತಲುಪಿದುದು ಮಾನವನ ತಾಳ್ಮೆಗೆ, ಮನೋದಾರ್ಢ್ಯಕ್ಕೆ ಒಂದು ಉನ್ನತ ನಿದರ್ಶನ ಎಂದು ಹೇಳಬಹುದು. ತಾಳಿದವನು ಬಾಳಿಯಾನು ಎಂಬ ಗಾದೆ ಮಾತನ್ನು ಸ್ಥಿರಪಡಿಸಿದವರು ಯುವಕ ರಂಗನಾಥಶರ್ಮ.

ಶ್ರೀ ಜಯಚಾಮರಾಜೇಂದ್ರ ಕಾಲೇಜಿನಲ್ಲಿ ಎಂಟು ವರ್ಷಗಳ ಕಾಲ ಶ್ರದ್ಧೆಯಿಂದ ಅಧ್ಯಯನ ಮಾಡಿ ಶ್ರೀರಂಗನಾಥಶರ್ಮರು ಸಂಸ್ಕೃತ ಭಾಷೆಯಲ್ಲಿ ವ್ಯಾಕರಣ ಶಾಸ್ತ್ರ ಮತ್ತು ಅಲಂಕಾರ ಶಾಸ್ತ್ರಗಳಲ್ಲಿ 'ವಿದ್ವತ್' ಪರೀಕ್ಷೆಗಳಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಆಗಿದ್ದಾರೆ. ಸಂಸ್ಕೃತದಲ್ಲಿ ಈ ಎರಡೂ ಪರೀಕ್ಷೆಗಳು ಉಚ್ಚಮಟ್ಟದ್ದು. ಸಂಸ್ಕೃತ ಎಂದರೆ ಕಬ್ಬಿಣದ ಕಡಲೆ ಎಂಬ ಮಾತು ನಮ್ಮ ಜನರಲ್ಲಿ ಪ್ರಚಲಿತವಾಗಿದೆ. ಈ ಕಬ್ಬಿಣದ ಕಡಲೆಯನ್ನು ತಿಂದು ಅರಗಿಸಿಕೊಂಡ ಅದಮ್ಯ ಶಕ್ತಿ ಶ್ರೀರಂಗನಾಥ ಶರ್ಮರದು. ವ್ಯಾಕರಣ ಶಾಸ್ತ್ರದ ಪ್ರೊಫೆಸರ್ ಆಗಿದ್ದ ವಿದ್ವಾನ್ ವೇ॥ ಬ್ರ॥ ನು. ಸೊ. ತಿರುನಾರಾಯಣ ಅಯ್ಯಂಗಾರ್ ಅವರನ್ನು ಶರ್ಮ ಈಗಲೂ ನೆನಪಿಸಿಕೊಳ್ಳುತ್ತಾರೆ. ಆಪತ್ತಿಗೆ ಆದವರನ್ನು ಮರೆಯಲಾದೀತೆ? ಮಾನವ ಧರ್ಮವನ್ನು ಅರಿತವರು ಶ್ರೀರಂಗನಾಥಶರ್ಮ.

ಅಷ್ಟೊಂದು ರೋಗ ರುಜಿನಗಳಿಂದ ಬಳಲಿದರೂ ಶ್ರೀರಂಗನಾಥಶರ್ಮ ಸಾಮೂಹಿಕ, ಸಾಂಘಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ದೂರ ಆದವರಲ್ಲ. ಮನುಷ್ಯನು ಮನುಷ್ಯರ ಸ್ನೇಹಾದರಗಳಿಂದ ತಾನು ತಾಳ್ಮೆ ಸಹಿಷ್ಣುತೆ ಮತ್ತು ಸಂತೃಪ್ತಿಯನ್ನು ಪಡೆಯಬಹುದು ಎನ್ನುತ್ತಾರೆ ಅನುಭವಿಯಾದ ಶ್ರೀರಂಗನಾಥಶರ್ಮ. ಇವರು ನಾಲ್ಕು ವರ್ಷ ಶ್ರೀ ಜಯಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿ ಸಂಘಕ್ಕೆ ಕಾರ್ಯದರ್ಶಿ ಆಗಿದ್ದರು. ಸಂಘದ ವತಿಯಿಂದ ಹಲವು ಉಪನ್ಯಾಸಾದಿ ಕಾರ್ಯಕ್ರಮಗಳನ್ನೂ ಯಶಸ್ವಿಯಾಗಿ ಏರ್ಪಡಿಸಿದ್ದರು. ವ್ಯಾಸಮಂದಿರಂ ಎಂಬ ವಿದ್ಯಾರ್ಥಿ ವಸತಿಗೃಹದಲ್ಲಿ 4 ವರ್ಷಕ್ಕೂ ಹೆಚ್ಚುಕಾಲ ಸಕ್ರಿಯರಾದ ಮೇಲ್ವಿಚಾರಕ (ಪ್ರಿಫೆಕ್ಟ್) ಆಗಿದ್ದರು. ವ್ಯಾಸಮಂದಿರದಲ್ಲಿ ಪ್ರತಿಯೊಂದು ಪಕ್ಷದಲ್ಲಿಯೂ ಪ್ರದೋಷ ಪೂಜೆ, ಅಂತ್ಯಾಕ್ಷರಿ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಿ ಸಂತೋಷಪಡುತ್ತಿದ್ದರು. "ಸುಖ ದುಃಖೇ ಸಮೇಕೃತ್ವಾ, ಸಮದುಃಖ ಸುಖಃ

ಸ್ವಸ್ಥಃ" ಎಂಬ ಹಿತನುಡಿಯನ್ನು ಆಚರಣೆಯಲ್ಲಿ ತಂದುಕೊಂಡವರು. ವೈಯಕ್ತಿಕ ದಾರುಣ ಸಮಯದಲ್ಲಿಯೂ ಸಾಂಘಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಂತೋಷಿಸುವ ಪ್ರವೃತ್ತಿ ಇದ್ದ ರಂಗನಾಥಶರ್ಮರಲ್ಲಿ ಅವರದೇ ಆದ ಒಂದು ಅನುಕರಣೀಯ ವೈಶಿಷ್ಟ್ಯಪೂರ್ಣ ವ್ಯಕ್ತಿತ್ವವನ್ನು ಕಾಣಬಹುದು.

ಕಾಲೇಜಿನ ವ್ಯಾಸಂಗ ಮುಗಿದ ಅನಂತರ ಶ್ರೀರಂಗನಾಥಶರ್ಮರು ಮೊದ ಮೊದಲು ಪ್ರೌಢಶಾಲೆಯಲ್ಲಿ ಸಂಸ್ಕೃತ ಮತ್ತು ಕನ್ನಡ ಬೋಧಕರಾಗಿದ್ದರು. ತಾವು ಕಲಿತ ವಿದ್ಯೆಯ ಮಟ್ಟಕ್ಕೆ ತಾವು ಮಾಡುತ್ತಿರುವ ಕಾರ್ಯದರ್ಜೆಯಲ್ಲಿ ಕಿರಿದು ಎಂದು ಭಾವಿಸಿದವರಲ್ಲ. ಹಿಡಿದ ಕಾರ್ಯವನ್ನು ಹೃತ್ಪೂರ್ವಕ ಶ್ರದ್ಧೆಯಿಂದ ಮಾಡಬೇಕೆಂಬುದು ಅವರ ಧ್ಯೇಯ, ಇಂದಿಗೂ ಸಹ. ಬೇಲೂರಿನ ಸಂಸ್ಕೃತ ಪಾಠಶಾಲೆಯಲ್ಲಿ ಎರಡು ವರ್ಷ ಅಧ್ಯಾಪಕರಾಗಿದ್ದರು. ಅನಂತರ 1948ರಿಂದ 1976ರವರೆಗೆ 28 ವರ್ಷಕಾಲ ಬೆಂಗಳೂರು ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣ ಶಾಸ್ತ್ರ ಮತ್ತು ಅಲಂಕಾರಶಾಸ್ತ್ರದ ಅಧ್ಯಾಪಕರಾಗಿದ್ದರು. ಪ್ರೊಫೆಸರಾಗಿ ನಿವೃತ್ತರಾದರು. ಆ ಮಧ್ಯೆ 6 ತಿಂಗಳು ಮೈಸೂರು ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣ ಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು.

ಶ್ರೀರಂಗನಾಥಶರ್ಮ ಸಮರ್ಥ ಅಧ್ಯಾಪಕ ಒಂದೇ ಅಲ್ಲ, ಸರಸ ಸಂಭಾಷಣಾಕಾರ, ವಿದ್ವತ್ ಪೂರಿತವಾಗ್ಮಿ, ಹೆಸರಾಂತ ಬರಹಗಾರ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದಲೂ, ಅನೇಕ ಸಾರ್ವಜನಿಕ ಸಂಘ-ಸಂಸ್ಥೆಗಳಿಂದಲೂ ಸಂಮಾನಿತರು. ಆದಿಚುಂಚನಗಿರಿಯಲ್ಲಿ ನಡೆದ ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್ತಿನ ಪಂಚಮ ಅಧಿವೇಶನಕ್ಕೆ ಅಧ್ಯಕ್ಷರಾಗಿದ್ದರು. ಉಜ್ಜಯನಿಯಲ್ಲಿ ನಡೆದ ಕಾಳಿದಾಸ ಸಮಾರೋಹದಲ್ಲಿ ಯಶಸ್ವಿಯಾಗಿ ಪಾಲ್ಗೊಂಡಿದ್ದರು. ಧಾರವಾಡದಲ್ಲಿ ನಡೆದ ಓರಿಯಂಟಲ್ ಕಾನ್‌ಫರೆನ್ಸ್, ತಿರುಪತಿಯಲ್ಲಿ ನಡೆದ ಕೇಂದ್ರ ಸಂಸ್ಕೃತ ವಿದ್ಯಾಲಯದ ವಿದ್ವನ್ಮಣಿಗಳ ಸಭೆಗಳಲ್ಲಿ ಆಹ್ವಾನಿತ ಅತಿಥಿಯಾಗಿ ಭಾಷಣ ಮಾಡಿದ್ದಾರೆ. ಪ್ರಬಂಧ ಗಳನ್ನು ಮಂಡಿಸಿದ್ದಾರೆ. ಮದ್ರಾಸಿನಲ್ಲಿ ಮಹಾಮಹೋಪಾಧ್ಯಾಯ ಕುಪ್ಪುಸ್ವಾಮಿ ಶಾಸ್ತ್ರಿಗಳ ಹೆಸರಿನಲ್ಲಿ ನಡೆದ ಸಂಸ್ಕೃತ ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿದ್ದಾರೆ. ನವದೆಹಲಿಯ ಆಕಾಶವಾಣಿಯ ಆಹ್ವಾನದ ಮೇಲೆ ಅಲ್ಲಿ ಸಂಸ್ಕೃತ ಕವಿತಾ ಗೋಷ್ಠಿಯಲ್ಲಿ ಭಾಗವಹಿಸಿದ್ದಾರೆ. ಇಂತಹ ಕಾರ್ಯಕ್ರಮಗಳು ಇನ್ನೂ ಎಷ್ಟೋ ಇವೆ. ಆದರೆ ಅವರಾಗಿ ಹೇಳಿಕೊಳ್ಳುವುದು ಕಡಿಮೆ.

ಲೇಖಕರಾಗಿ ಶ್ರೀರಂಗನಾಥಶರ್ಮರ ಸೇವೆ ವಿಪುಲವಾದುದು, ಚಿರಂಜೀವಿ ಆದುದು. ಅವರು ಬರೆದು ಮುದ್ರಿತವಾದ ಗ್ರಂಥಗಳು 55ಕ್ಕೂ ಹೆಚ್ಚು ಇವೆ. ಮುಖ್ಯವಾಗಿ ಹೆಸರಿಸಬೇಕಾದವುಗಳು :

1) ವಾಲ್ಮೀಕಿ ರಾಮಾಯಣದ 7 ಕಾಂಡಗಳ ಕನ್ನಡಾನುವಾದ 8 ಸಂಪುಟಗಳಲ್ಲಿ
2) ವಿಷ್ಣು ಪುರಾಣ—2 ಸಂಪುಟಗಳಲ್ಲಿ ಪೂರ್ಣ
3) ಭಾಗವತದ 10, 11, 12ನೇ ಸ್ಕಂಧಗಳ ಅನುವಾದ 3 ಸಂಪುಟಗಳಲ್ಲಿ
4) ಶ್ರುತಿಸಾರ ಸಮುದ್ಧರಣ.
5) ಸಂಸ್ಕೃತ ಜೈಮಿನಿ ಭಾರತದ ಅನುವಾದ
6) ಅಮರಕೋಶ ಕನ್ನಡ ವ್ಯಾಖ್ಯಾನ
7) ಸೂಕ್ತಿ-ವ್ಯಾಪ್ತಿ
8) ಸಂದರ್ಭ ಸೂಕ್ತಿ
9) ವಾಲ್ಮೀಕಿ ಮುನಿಗಳ ಹಾಸ್ಯ ಪ್ರವೃತ್ತಿ
10) ಶ್ರೀರಾಮಚಂದ್ರ
11) ಬಾಹುಬಲಿ ವಿಜಯ (ಸಂಸ್ಕೃತ ನಾಟಕ)
12) ಏಕಚಕ್ರಂ (ಸಂಸ್ಕೃತ ನಾಟಕ)
13) ಮೂರು ಸುಪ್ರಭಾತಗಳು : ಶ್ರೀರಾಮ, ಗೋಮಟೇಶ್ವರ ಮತ್ತು ಕುಕ್ಕೆ ಸುಬ್ರಹ್ಮಣ್ಯ
14) ಹದಿಮೂರು ಹಳೆಗನ್ನಡ ಕಾವ್ಯಗಳ ಅನುವಾದಕಾರ್ಯದಲ್ಲಿ ನೆರವು, ಕನ್ನಡ ಸಾಹಿತ್ಯ ಪರಿಷತ್ತಿನ ಏರ್ಪಾಡಿನಿಂದ
15) ಹೊಸಗನ್ನಡ ವ್ಯಾಕರಣ
16) ನಿಪಾತಾರ್ಥ ನಿರ್ಣಯ (ಸಂಸ್ಕೃತ) ಅಲ್ಲದೆ ಇನ್ನೂ ಹಲವು ಚಿಕ್ಕ ಪುಟ್ಟ ಇವೆ. "ವಿಶ್ವಾಮಿತ್ರ" ಎಂಬ ಕಾವ್ಯನಾಮದಿಂದ (ಉತ್ಥಾನ) ಮಾಸಪತ್ರಿಕೆಯಲ್ಲಿ ಕಳೆದ 12 ವರ್ಷಗಳಿಂದ ಸೂಕ್ತಿ-ವ್ಯಾಪ್ತಿ ಎಂಬ ಶೀರ್ಷಿಕೆಯಲ್ಲಿ ಅರ್ಥವಾಕ್ಯಗಳನ್ನು ಬರೆಯುತ್ತಿದ್ದಾರೆ.

ಶ್ರೀರಂಗನಾಥಶರ್ಮರ ಕನ್ನಡ ಅನುವಾದದ ವಾಲ್ಮೀಕಿ ರಾಮಾಯಣದ ಭಾಷೆ, ಶೈಲಿ, ಅರ್ಥ, ಭಾವಗಳಲ್ಲಿ ಅವರದೇ ಆದ ಛಾಪು ಬಿದ್ದಿದೆ. ಪಂಡಿತ-ಪಾಮರ ರೀರ್ವರನ್ನೂ ಸಮನಾಗಿ ಆಕರ್ಷಿಸುತ್ತದೆ, ತೃಪ್ತಿ ಪಡಿಸುತ್ತದೆ. ಅವುಗಳಲ್ಲಿ ಅವರ ಹೃದಯಕ್ಕೆ ಹತ್ತಿರವಾದುದು ಸುಂದರಕಾಂಡ ಎಂದು ನನ್ನ ಅನಿಸಿಕೆ. ವಾಲ್ಮೀಕಿ ರಾಮಾಯಣದ ಏಳೂ ಕಾಂಡಗಳನ್ನೂ ಅನುವಾದಿಸಲು ತಮಗೆ ಮೂರು ವರ್ಷಗಳು ಸಾಕಾದರೂ, ಪ್ರಕಾಶಕರ ಅನಾನುಕೂಲಗಳಿಗೆ ಹೊಂದಿಕೊಳ್ಳುವುದು ತೀರ ಅವಶ್ಯಕ ವಾದುದರಿಂದ ಎಂಟು ವರ್ಷಗಳು ಬೇಕಾಯಿತು, ಅದರ ಪ್ರಕಟನೆಗೆ ಎನ್ನುತ್ತಾರೆ. ವಾಲ್ಮೀಕಿ ರಾಮಾಯಣವನ್ನು ಕನ್ನಡಕ್ಕೆ ಅನುವಾದಿಸಲು ಮೂಲ ಪ್ರೇರಕರಾದವರು ದಿವಂಗತ ಡಾ॥ ಡಿ.ವಿ.ಜಿ.ಯವರು. ಅನಂತರ ಸ್ವತಃ ಸಂಸ್ಕೃತ ವ್ಯಾಕರಣ ಮತ್ತು ಅಲಂಕಾರ ಶಾಸ್ತ್ರಗಳಲ್ಲಿ ಪಂಡಿತರಾದ ಶ್ರೀರಂಗನಾಥಶರ್ಮರಿಗೆ ವಾಲ್ಮೀಕಿ

ರಾಮಾಯಣದ ಸೌಂದರ್ಯವೇ ಪ್ರಚೋದಿಸಿ ಅನುವಾದ ಕಾರ್ಯವನ್ನು ಸಂಪೂರ್ಣಗೊಳಿಸಿತು. ವಾಲ್ಮೀಕಿಯ ಭಾವ ವಿಚಾರಧಾರೆಗಳ ಅಂತರಾರ್ಥ ಸೌಂದರ್ಯಗಳ ಸ್ವಾರಸ್ಯವನ್ನು ತಿಳಿಯಲು ಅವರೇ ವಿವರಿಸಬೇಕು. ಕೇಳುವವರ ಮೇಲೆ ಅದು ಹೆಚ್ಚು ಪರಿಣಾಮಕಾರಿ.

ಮೂವತ್ತೈದು ವರ್ಷಗಳಿಗೂ ಹೆಚ್ಚು ಕಾಲ ಅಧ್ಯಾಪಕ ವೃತ್ತಿಯಲ್ಲಿದ್ದ ಶ್ರೀರಂಗನಾಥಶರ್ಮರೊಡನೆ ಪ್ರಸ್ತುತ ವಿದ್ಯಾಭ್ಯಾಸದ ಪದ್ಧತಿ, ವ್ಯವಸ್ಥೆ ಮತ್ತು ಪಾಠ ಕ್ರಮಗಳನ್ನು ಕುರಿತು ಅವರ ಅಭಿಪ್ರಾಯಗಳನ್ನು ತಿಳಿದುಕೊಳ್ಳಬೇಕೆಂಬ ಅಭಿಲಾಷೆಯಿಂದ ಕೆಲವು ಪ್ರಶ್ನೆಗಳನ್ನು ಅವರ ಮುಂದಿಟ್ಟೆ.

● "ಕನ್ನಡ, ಸಂಸ್ಕೃತ ಅಥವಾ ಇಂಗ್ಲಿಷ್ ಈ ಭಾಷೆಗಳಲ್ಲಿ ಇಂದಿನ ವಿದ್ಯಾಭ್ಯಾಸದ ರೀತಿ, ನೀತಿ, ಪದ್ಧತಿ ವ್ಯವಸ್ಥೆ ಮತ್ತು ಪಾಠ ಕ್ರಮಗಳನ್ನು ಕುರಿತು ನಿಮ್ಮ ಅಭಿಪ್ರಾಯವೇನು ?"

○ "ವೈಜ್ಞಾನಿಕ ವಿಷಯಗಳನ್ನು ಹೊರತುಪಡಿಸಿ ಭಾಷಾಧ್ಯಯನದ ವಿಷಯವಾಗಿ ಮಾತ್ರ ಹೇಳಬಲ್ಲೆ. ಕನ್ನಡ, ಇಂಗ್ಲಿಷ್ ಈ ಭಾಷೆಗಳ ಅಧ್ಯಯನ ಮತ್ತು ಜ್ಞಾನದ ಮಟ್ಟ ತುಂಬಾ ಕುಸಿದು ಹೋಗಿದೆ. ವಿದ್ಯಾರ್ಥಿಗಳಿಗೆ ಕಷ್ಟವಾಗಬಾರದು, ಮಾನಸಿಕ ಶ್ರಮ ಆಗದಿರಲಿ, ವಿದ್ಯಾರ್ಥಿಗಳ ತೇರ್ಗಡೆಯ ಸಂಖ್ಯೆಯನ್ನು ಮಾತ್ರ ಹೆಚ್ಚಿಸಬೇಕು ಎಂದಿಷ್ಟೇ ವಿದ್ಯಾ ಇಲಾಖೆಯವರ, ವಿದ್ಯಾಸಂಸ್ಥೆಗಳ ಘನೋದ್ದೇಶವಾಗಿ ಪರಿಣಮಿಸಿದೆ. ಈಗ ಸಂಸ್ಕೃತ ಭಾಷೆಗೂ ಮತ್ತು ಸಂಸ್ಕೃತದ ವಿಭಿನ್ನ ಶಾಸ್ತ್ರಗಳಿಗೂ ಈ ಸೋಂಕು ವ್ಯಾಪಿಸಿದೆ. ಈ ವಿಷಯಗಳಲ್ಲಿ ನಾವು ಹೆಮ್ಮೆ ಪಡಬೇಕಾದ ಸಾಧನೆ ಏನೂ ಇಲ್ಲ"

● "ಇಂದಿನ ವಿದ್ಯಾಭ್ಯಾಸ ಕ್ರಮವು ಬಾಲಕರ ಮತ್ತು ಯುವಕರ ಜ್ಞಾನಾಭಿವೃದ್ಧಿ, ಶೀಲನಿರ್ಮಾಣ ಮತ್ತು ಮಹಿಮಾಯುತ ವ್ಯಕ್ತಿತ್ವವನ್ನು ಯೋಗ್ಯವಾಗಿ ಬೆಳೆಸಲು ಸಾಧಕ ಆಗಿವೆಯೆ ?"

○ "ಸಂಸ್ಕೃತ ಶಾಲೆಗಳಲ್ಲಾಗಲೀ ಇತರ ಸಾರ್ವಜನಿಕ ವಿದ್ಯಾಸಂಸ್ಥೆಗಳಲ್ಲಾಗಲೀ ನಡೆಯುವ ವಿದ್ಯಾಭ್ಯಾಸ ಕ್ರಮದಲ್ಲಿ ಶೀಲ ನಿರ್ಮಾಣದ ಪ್ರಶ್ನೆಯೇ ಇಲ್ಲ. ನೀತಿ ಬೋಧನೆಗೆ ಅವಕಾಶವನ್ನೇ ಕಲ್ಪಿಸಿಲ್ಲ. ಮಹಿಮಾನ್ವಿತ ವ್ಯಕ್ತಿಯಾಗಿ ಬೆಳೆಯುವ ಚಿಂತನೆ ದೂರವೇ ಉಳಿದಿದೆ. ಆಯಾ ವಿಷಯಗಳಲ್ಲಿ ಸ್ವಲ್ಪ ಜ್ಞಾನಾಭಿವೃದ್ಧಿಗೆ ಅವಕಾಶ ಮಾತ್ರ ಇದೆ. ಬ್ರಿಟಿಷರ ಕಾಲದಲ್ಲಿ ಜ್ಞಾನಾಭಿವೃದ್ಧಿಗೆ ಅಧಿಕ ಸಾಧಕವಾದ ಪಾಠಕ್ರಮ ಇತ್ತು. ಈಗ ಅದೂ ಇಲ್ಲ."

● "ಇಂದಿನ ಸರ್ಕಾರಗಳು ನಿಯೋಜಿಸಿದ ಸಂಸ್ಕೃತ ವಿದ್ಯಾಭ್ಯಾಸದ ಪ್ರಕಾರ ಮತ್ತು ಪ್ರಚಾರಗಳನ್ನು ಕುರಿತು ನಿಮ್ಮ ಅಭಿಪ್ರಾಯವೇನು ?"

○ "ಇಂದು ನಮ್ಮ ಕರ್ನಾಟಕ ಸರ್ಕಾರವು ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಹಣವನ್ನೇನೋ ಒದಗಿಸಿದೆ. ಅಧ್ಯಾಪಕರ ಸಂಬಳ ಸಾರಿಗೆಗಳನ್ನು ಉತ್ತಮ ಪಡಿಸಿದೆ. ಆದರೆ ಹಣವನ್ನು ಒದಗಿಸಿ ತನ್ನ ಜವಾಬ್ದಾರಿ ಮುಗಿಯಿತೆಂದು ಕೈ ತೊಳೆದುಕೊಂಡರೆ ಯಾವ ಪ್ರಯೋಜನವೂ ಆಗುವುದಿಲ್ಲ. ಹಿಂದೆ ತಿಂಗಳಿಗೆ ರೂ. 30 ವೇತನ ಪಡೆಯುತ್ತಿದ್ದ ಅಧ್ಯಾಪಕರು ತುಂಬಾ ಆಸಕ್ತಿಯಿಂದ ಶ್ರದ್ಧೆಯಿಂದ ಪಾಠ ಹೇಳುತ್ತಿದ್ದರು. ಈಗ ತಿಂಗಳಿಗೆ 3000 ರೂ/-ವೇತನ ಪಡೆಯುತ್ತಿದ್ದರೂ ಹಿಂದಿನ ದಶಾಂಶದಷ್ಟು ಆಸಕ್ತಿ ಶ್ರದ್ಧೆಗಳು ಹೆಚ್ಚಿನ ಅಧ್ಯಾಪಕರುಗಳಲ್ಲಿಲ್ಲ. ಸರ್ಕಾರವು ಉಪೇಕ್ಷಾರೂಪದಲ್ಲಿ ಪ್ರೋತ್ಸಾಹವನ್ನೇ ಕೊಡುತ್ತಿದೆ. ಸಂಸ್ಕೃತ ಶಾಲೆಗಳಿಗೆ ಮೇಲ್ವಿಚಾರಣೆ ಇಲ್ಲವೆಂದರೂ ಸಲ್ಲುತ್ತದೆ. ಜಾತೀಯತೆಯ ಭೂತ ಈ ರಂಗದಲ್ಲಿಯೂ ಒಳಹೊಕ್ಕಿದೆ. ಸಂಸ್ಕೃತದ ವಿಷಯವಾಗಿ ಬರಿಯ ಮಾತಿನ ಪ್ರಚಾರವಿರಬಹುದೇ ಹೊರತು ಕ್ರಿಯಾರೂಪದಲ್ಲಿ ಅದರ ಅಭಿವ್ಯಕ್ತಿ ಆಗಿಯೇ ಇಲ್ಲ"

● "ಇಂದು ಭಾರತದಲ್ಲಿ ಸಂಸ್ಕೃತ ಭಾಷೆಗೆ ಒಂದು ಭದ್ರ ಬುನಾದಿ ಮತ್ತು ಭವಿಷ್ಯ ಇದೆ ಎಂದು ನಿಮಗೆ ಅನಿಸುತ್ತದೆಯೇ ?"

○ "ಭರತ ಖಂಡದಲ್ಲಿ ಸಂಸ್ಕೃತ ಭಾಷೆಗೆ ಭದ್ರವಾದ ಬುನಾದಿಯುಂಟು. ಅದು ಅನಾದಿ ಸಿದ್ಧವಾದದ್ದು. ತನ್ನ ಯೋಗ್ಯತಾಬಲದಿಂದಲೇ ಸ್ಥಾಪಿಸಿಕೊಂಡದ್ದು. ಸರ್ಕಾರವು ಹಾಕಿದ ಬುನಾದಿಯಲ್ಲ. ಅದನ್ನೀಗ ಹೆಮ್ಮರವನ್ನಾಗಿ ಬೆಳೆಸಬಹುದಿತ್ತು. ಆದರೆ ವಿಭಿನ್ನ ಕ್ಷುದ್ರ ಶಕ್ತಿಗಳು ಅಡ್ಡ ಬರುತ್ತಿವೆ. ಇಷ್ಟು ಮಾತ್ರ ನಿಜ. ಯಾರು ನೀರನ್ನೆರೆಯದಿದ್ದರೂ ಸಂಸ್ಕೃತವು ತನ್ನ ತೇಜೋವೀರ್ಯಗಳಿಂದ ಸದಾ ಹಚ್ಚಹಸಿರಾಗಿ ಇದ್ದೇ ಇರುತ್ತದೆ. ಕೆಲವು ವೇಳೆ ಚಿಗುರಬಹುದು. ಚಿಗುರನ್ನು ಕಡಿದರೂ ಅದರ ಚಿಗುರುವ ಶಕ್ತಿಯನ್ನು ಮಾತ್ರ ಯಾವ ಮಾನವ ಶಕ್ತಿಯೂ ತಡೆಯಲಾರದು. ನಾನು ಹೇಳಬಹುದಾದದ್ದು ಇಷ್ಟು. ಸಂಸ್ಕೃತ ಭಾಷೆಯಲ್ಲಿರುವ ವಾಙ್ಮಯವು ಅದ್ಭುತ ವಾದದ್ದು. ಭಾಷೆಯನ್ನು ಕುರಿತು ಕೆಲವು ಕಾವ್ಯ ಮತ್ತು ನಾಟಕಗಳನ್ನು ಓದಿಕೊಂಡರೆ ಸಂಸ್ಕೃತಾಧ್ಯಯನ ಮುಗಿಯುತ್ತದೆ ಎಂದು ಜನರು ತಿಳಿದುಕೊಂಡಿದ್ದಾರೆ. ಇದು ಸಂಪೂರ್ಣ ತಪ್ಪಾದ ಅಭಿಪ್ರಾಯ. ಶಾಸ್ತ್ರವಾಙ್ಮಯವೇ ಸಂಸ್ಕೃತದಲ್ಲಿ ಮುಖ್ಯವಾದದ್ದು. ತರ್ಕ, ವ್ಯಾಕರಣ, ಸಾಂಖ್ಯ, ಮೀಮಾಂಸ, ವೇದಾಂತಾದಿ ದರ್ಶನಗಳು ಅತ್ಯಂತ ಪ್ರೌಢವಾಗಿ ಬೆಳೆದು ವಿಸ್ತರಿಸಿಕೊಂಡಿವೆ. ಹಾಗೆಯೇ ಅಲಂಕಾರ ಶಾಸ್ತ್ರ ಸಹ. ಇವುಗಳನ್ನು ವ್ಯಾಸಂಗ ಮಾಡಿದವರನ್ನು ಮಾತ್ರ "ಸಂಸ್ಕೃತಜ್ಞ" ಎಂದು ನಾನು ತಿಳಿಯುತ್ತೇನೆ. ಇಂಥವರ ಸಂಖ್ಯೆ ವಿರಳವಾಗುತ್ತಿದೆ. ಈ ಶಾಸ್ತ್ರಾಧ್ಯಯನಗಳಿಗೆ ಪ್ರೋತ್ಸಾಹ ಕೊಡುವುದಕ್ಕಾಗಿ ವಿದ್ವಾಂಸರ ವಾಕ್ಯಾರ್ಥಗೋಷ್ಠಿಗಳು ಸೇರುತ್ತವೆ.

ಶೃಂಗೇರಿಯಲ್ಲಿ ಪ್ರತಿ ವರ್ಷವೂ ಶ್ರೀ ಜಗದ್ಗುರುಗಳು ಈ ವಿದ್ವದ್‌ಗೋಷ್ಠಿಯನ್ನು ಏರ್ಪಡಿಸುತ್ತಿದ್ದಾರೆ. ಕನ್ನಡ ನಾಡಿನಲ್ಲಿ ನಡೆಯುತ್ತಿರುವ ಗೋಷ್ಠಿ ಇದೊಂದೇ. ಮಂತ್ರಾಲಯದ ಶ್ರೀಗಳವರೂ ವರ್ಷಕ್ಕೆ ಎರಡು ಬಾರಿ ಇಂಥಾ ಗೋಷ್ಠಿಯನ್ನೇ ಮಂತ್ರಾಲಯದಲ್ಲೂ ನಡೆಸುತ್ತಾರೆ. ಭರತ ಖಂಡದ ವಿವಿಧ ಸ್ಥಳಗಳಿಂದ ವಿಖ್ಯಾತ ವಿದ್ವಾಂಸರು ಆಗಮಿಸುವರು. ನಾನೂ ಭಾಗವಹಿಸುತ್ತಿದ್ದೇನೆ. ಅಲ್ಲಿ ನಡೆಯುವ ವಾಕ್ಯಾರ್ಥಗಳು ವಿದ್ವಾಂಸರ ಪಾಂಡಿತ್ಯಕ್ಕೆ ಒರೆಗಲ್ಲಾಗುತ್ತವೆ. ಈ ಬಗೆಯ ಗೋಷ್ಠಿಗಳು ಆಂಧ್ರ ಪ್ರದೇಶದಲ್ಲಿಯೂ, ಕಾಶೀಪ್ರಾಂತ್ಯದಲ್ಲಿಯೂ ನಡೆಯುತ್ತವೆ. ಇಂತಹ ಗೋಷ್ಠಿಗಳಲ್ಲಿ ಭಾಗವಹಿಸುವ ವಿದ್ವಾಂಸರ ಪಾಂಡಿತ್ಯವು ಸ್ವಯಂಪ್ರೇರಿತವಾಗಿ ಬಂದದ್ದು. ಇಂಥ ಗೋಷ್ಠಿಗಳನ್ನು ಉಳಿಸಿ ನಡೆಸಿಕೊಂಡು ಹೋಗಲು ಸರ್ಕಾರ ಪ್ರಯತ್ನಿಸುತ್ತಿಲ್ಲ. ಕೇವಲ ವಿದ್ಯಾಭಿಮಾನಿಗಳಿಂದ ಮಾತ್ರ ಇವು ಉಳಿದಿವೆ. ಇಂತಹ ಜ್ಞಾನ ಕುತೂಹಲಿಗಳು ನಮ್ಮ ರಾಷ್ಟ್ರದಲ್ಲಿ ಈಗಲೂ ಇದ್ದಾರೆ. ಆದುದರಿಂದಲೇ ಸಂಸ್ಕೃತದ ಬುನಾದಿ ಅನಾದಿಯಿಂದಲೂ ಸ್ವಯಂಸಿದ್ಧವೆಂದೂ ಸದಾ ಹಸಿರಾಗಿರ ಬಲ್ಲುದೆಂದೂ ನನ್ನ ಅಭಿಪ್ರಾಯ."

● "ಪ್ರಸ್ತುತ ಶತಮಾನದ ಮತ್ತು ಹಿಂದಿನ ಸಂಸ್ಕೃತ ಮತ್ತು ಕನ್ನಡ ಲೇಖಕರಲ್ಲಿ ನಿಮ್ಮ ಮೆಚ್ಚಿನ ಲೇಖಕರು ಯಾರು ?"

○ "ಪ್ರಾಚೀನ ಸಂಸ್ಕೃತ ಲೇಖಕರ ಪಟ್ಟಿ ಬಹಳ ದೊಡ್ಡದಾಗಬಹುದು. ವ್ಯಾಸ, ವಾಲ್ಮೀಕಿ, ಕಾಳಿದಾಸ, ಬಾಣಭಟ್ಟ, ಭಾಸ, ಭವಭೂತಿ ಇತ್ಯಾದಿ. ಹಾಗೆಯೇ ಶಾಸ್ತ್ರ ಗ್ರಂಥಗಳನ್ನು ರಚಿಸಿದವರೂ ವಿಪುಲವಾಗಿದ್ದಾರೆ. ಅವರೆಲ್ಲರೂ ನನಗೆ ಮೆಚ್ಚಿಕೆ ಯಾದವರೇ. ಪ್ರಸ್ತುತ ಶತಮಾನದಲ್ಲಿ ಸಂಸ್ಕೃತ ಲೇಖಕರು–ಉತ್ತಮ ಮಟ್ಟದವರು– ವಿರಳ. ಆದರೂ ಮಹಾರಾಷ್ಟ್ರದ ಅಪ್ಪಾಶಾಸ್ತ್ರಿಗಳು, ಪಂಡಿತ ಕ್ಷಮಾರಾವ್ ಎಂಬ ಕವಯಿತ್ರಿ ಇಬ್ಬರೂ ಸಹ ಉತ್ತಮ ಲೇಖಕರು.

"ಕನ್ನಡದ ಪ್ರಾಚೀನ ಕಾವ್ಯ ವಿಷಯವೂ ಅಷ್ಟೇ. ಕುಮಾರವ್ಯಾಸ, ಲಕ್ಷ್ಮೀಶ, ಪಂಪ ಮತ್ತು ರಾಘವಾಂಕ. ಪ್ರಸ್ತುತ ಶತಮಾನದ ಕನ್ನಡ ಲೇಖಕರಲ್ಲಿ ದಿವಂಗತ ಡಾ|| ಡಿ. ವಿ. ಗುಂಡಪ್ಪನವರು ಮತ್ತು ವಿ. ಸೀತಾರಾಮಯ್ಯನವರು ನನಗೆ ಮೆಚ್ಚಿಕೆ ಯಾದವರು."

ಶ್ರೀರಂಗನಾಥಶರ್ಮರ ಭಾವ ವಿಚಾರಧಾರೆಗಳು ಅವರ ಸ್ವಂತ ಜೀವನಾನುಭವ ಗಳಲ್ಲಿ ಕಂಡ ಸುಖ, ದುಃಖ, ಕಷ್ಟ, ಕೊರತೆ, ಆಸೆ, ನಿರಾಸೆ ಮೊದಲಾದ ಮಾನವೀಯ ಜೀವನದ ನೋವು ನಲಿವುಗಳ ಸಂಘರ್ಷಣೆಯ ಒರೆಗಲ್ಲಿಗೆ ತಿಕ್ಕಿ ನೋಡಿ

ನಿರ್ಧರಿಸಿದವುಗಳು. ಸಂಸ್ಕೃತ ಭಾಷೆಯ ಕಾವ್ಯ ಮೀಮಾಂಸಾದಿ ನಿತ್ಯ ಶಾಶ್ವತ ಶ್ರೇಷ್ಠ ಗ್ರಂಥಗಳನ್ನು ಕೂಲಂಕಶವಾಗಿ ವಿಮರ್ಶಾತ್ಮಕ ದೃಷ್ಟಿಯಿಂದ ಅಧ್ಯಯನ ಮಾಡಿದುದರ ಫಲವಾಗಿ ಮೂಡಿ ಬೆಳೆದು ಬಂದವುಗಳು. ಅವುಗಳ ಮೇಲೆ ಪಕ್ಷಪಾತದ ನೆರಳು ಬಿದ್ದಿಲ್ಲ. ಆವುಗಳಲ್ಲಿ ಅಪಕ್ವತೆಯ ಲಕ್ಷಣಗಳಿಲ್ಲ. ಅಸಂಬದ್ಧಕ್ಕೆ ಆಸ್ಪದವಿಲ್ಲ.

ಆದರೂ, ಯಾರ ವಿಚಾರಧಾರೆಗಳೂ ಸಾರ್ವತ್ರಿಕ, ಸಾರ್ವಲೌಕಿಕ, ಸರ್ವವ್ಯಾಪಿ ಯಾಗಲಾರವು. ಅವು ಅವರವರ ವಿದ್ಯೆ, ಅನುಭವ, ಸಂಸ್ಕೃತಿಗಳನ್ನು ಅವಲಂಬಿಸಿದೆ ಎಂದು ಹೇಳಲೂ ಬೇಕಾಗುವುದು.

ಸಾಂಪ್ರದಾಯಿಕರೂ ಕರ್ಮನಿಷ್ಠರೂ ಆದ ತಾಯಿತಂದೆಯರ ಪೋಷಣೆಯಲ್ಲಿ ಮತ್ತೆ ಅದೇ ಪರಿಸರದಲ್ಲಿ ಬೆಳೆದ ಶ್ರೀ ರಂಗನಾಥ ಶರ್ಮರು ಐವತ್ತು ವರ್ಷಗಳ ಕಾಲ ಸಂಸ್ಕೃತಾಧ್ಯಯನ, ಅಧ್ಯಾಪನತಪಸ್ಸು, ಶುದ್ಧ ಸಾಂಪ್ರದಾಯಿಕ ಜೀವನ ನಡೆಸಿ ದುದರಿಂದ ಅವರ ಭಾವ ವಿಚಾರ ಧಾರೆಗಳು ಸಾಂಪ್ರದಾಯಿಕ ಆಗಿರುವುದು ಸಹಜವೆ. ಅವರ 'ಗೀತಾ ಪ್ರವಚನ' ಎಂಬ ಲೇಖನ ಮಾಲಿಕೆಯ ನಿವೇದನೆಯಲ್ಲಿ "ಸಾಂಪ್ರದಾಯಿಕ ಅರ್ಥವಿವರಣೆಯೇ ನಮಗೆ ಸಂಮತ. ಸಂಪ್ರದಾಯ ಪರಂಪರೆಯನ್ನು ಬಿಟ್ಟು ನೂತನವಾಗಿ ಶೋಧಿಸಿ ಹೇಳುವ ತಾತ್ಪರ್ಯಗಳ ಕಡೆ ನಮ್ಮ ಒಲವು ಪರಿಮಿತವೇ ಸರಿ" ಎಂದು ಹೇಳಿಕೊಂಡಿದ್ದಾರೆ. ಕಾವ್ಯ ಶಾಸ್ತ್ರಾರ್ಥಗಳ ವಿಷಯಗಳಲ್ಲಿ ಅವರ ವಿಚಾರಧಾರೆಗಳು ವಾದ ವಿವಾದಗಳಿಗೆ ಎಡೆ ಮಾಡಿಕೊಡದಷ್ಟು ಸ್ಪಷ್ಟವಾಗಿರುತ್ತದೆ. ಎಲ್ಲಾ ಸಂಪ್ರದಾಯಗಳಲ್ಲಿಯೂ ಅವರು ಗೌರವಬುದ್ಧಿ ಉಳ್ಳವರು. ಯಾವುದೇ ಮತತತ್ತ್ವಜ್ಞಾನವಾಗಲೀ, ಅವುಗಳ ವಿಷಯದಲ್ಲಿ ಜನತೆ ಇಡುವ ಶ್ರದ್ಧಾಭಕ್ತಿಗಳೇ ಮುಖ್ಯವಾದುದೆಂದು ಅವರ ಖಚಿತ ಅಭಿಪ್ರಾಯ. ಯಾರನ್ನಾದರೂ ವಾದದಿಂದ ಒಪ್ಪಿಸಬಹುದೆಂಬ ಅಭಿಪ್ರಾಯವನ್ನು ಅವರು ಒಪ್ಪಲಾರರು. ತಮ್ಮ ಬರಹಗಳಲ್ಲಿ ಪೂರ್ವಾಪರ ವಿಚಾರಧಾರೆಗಳನ್ನು ಪಂಡಿತಪಾಮರರಾದಿಯಾಗಿ ಎಲ್ಲರಿಗೂ ಮನ ಮುಟ್ಟುವಂತೆ ಅವಶ್ಯಕವಾದಷ್ಟು ಸರಳವಾಗಿ ಸಂಕ್ಷೇಪವಾಗಿ ಮಂಡಿಸುವುದೇ ಅವರ ಧ್ಯೇಯ ಎಂಬುದು ಅವರ ಕೃತಿಗಳನ್ನು ಅಧ್ಯಯನ ಮಾಡಿದವರಿಗೆ ಸ್ಪಷ್ಟವಾಗುತ್ತದೆ. ಕಾವ್ಯಗಳನ್ನು ಓದುವುದರಿಂದ ಮನಸ್ಸಿನ ಕಲ್ಮಶಗಳು ತೊಳೆದು ಹೋಗಿ ಶಾಂತವಾಗುವುದು ಎಂಬ ವಿಚಾರ ಅವರ ಅನುಭವಸಿದ್ಧ ನಂಬಿಕೆ. ತಮ್ಮ ಭಾವ ವಿಚಾರಗಳನ್ನು ಅವರು ವಿವರಿಸುವಾಗ ಮೇಲಿನ ವಿಚಾರಗಳನ್ನು ಪದೇ ಪದೇ ಹೇಳಿದುದುಂಟು. ವೇದಾಂತವು ತರ್ಕಾದಿ ಶಾಸ್ತ್ರಗಳಿಗಿಂತ ಮೇಲಾದುದು. ಶಾಸ್ತ್ರಗಳೆಲ್ಲವೂ ವೇದಾಂತ ಎಂಬ ಭವ್ಯ ಸೌಧಕ್ಕೆ ಮೆಟ್ಟಿಲುಗಳು ಮಾತ್ರ. ಉಪನಿಷತ್ ಸಿದ್ಧಾಂತಗಳೇ ವೇದಾಂತ ಎನ್ನಬಹುದು. ಇವು ಅವರ ವಿಚಾರಧಾರೆಯ ತಿರುಳು.

ಶ್ರೀ ರಂಗನಾಥ ಶರ್ಮರ ವೈಚಾರಿಕ, ವ್ಯಾವಹಾರಿಕ ಚಿಂತನೆಯ ವಿಶಾಲತೆ ಮತ್ತು ಗಂಭೀರತೆಗಳನ್ನು ತಿಳಿಯಬೇಕಾದರೆ ಅವರ "ಸಂದರ್ಭ ಸೂಕ್ತಿ" ಮತ್ತು "ಸೂಕ್ತಿ-ವ್ಯಾಪ್ತಿ" ಎಂಬ ಗ್ರಂಥಗಳನ್ನು ಮನನ ಮಾಡಬೇಕು. ಅವರ ಸಂಸ್ಕೃತ ಕೃತಿಗಳಲ್ಲೂ ಅವರ ವಿಚಾರಧಾರೆಯ ಸೃಜನಶೀಲ ವೈಶಿಷ್ಟ್ಯವನ್ನು ಕಾಣಬಹುದು. ನಿವೃತ್ತ ಸಂಸ್ಕೃತ ಪ್ರೊಫೆಸರ್ ಡಾ॥ ಕೆ. ಕೃಷ್ಣಮೂರ್ತಿಯವರು—"Vidwan Sri N. Ranganatha Sharma whose erudition in SANSKRIT is equal to **his imaginative creativity** in that Medium" ಎಂದು ಬರೆದಿದ್ದಾರೆ.

ಈ ಸಂದರ್ಭದಲ್ಲಿ ಶ್ರೀ ರಂಗನಾಥ ಶರ್ಮರ ಕುಟುಂಬವನ್ನು ಕುರಿತು ಕೆಲವು ಮಾತುಗಳನ್ನು ಬರೆದರೆ ತಪ್ಪಾಗಲಾರದೆಂದು ಭಾವಿಸುತ್ತೇನೆ. ಅವರು 1941ರಲ್ಲಿ ವಿವಾಹವಾದರು. ಅವರ ಪತ್ನಿ ಶ್ರೀಮತಿ ಕಮಲಾಕ್ಷಮ್ಮನವರು ಸಹಧರ್ಮಿಣಿ ಎಂಬ ಶಬ್ದಕ್ಕೆ ಯೋಗ್ಯರೂ, ಅರ್ಹರೂ ಆಗಿದ್ದರು. ಅವರ ಅಕಾಲ ಮರಣ ಆ ಕುಟುಂಬಕ್ಕೆ ತುಂಬಲಾರದ ನಷ್ಟ. ಅವರು ಸಂಸಾರಕ್ಕೆ ಬಂದೊದಗುತ್ತಿದ್ದ ಕೊರತೆ ಕಷ್ಟಗಳನ್ನು ಧೈರ್ಯದಿಂದ ಮೌನವಾಗಿ ಎದುರಿಸಿ ಲೋಕ ವ್ಯವಹಾರಜ್ಞಾನದಿಂದ ಸಮರ್ಥರಾಗಿ ಅದನ್ನು ನಡೆಸಿಕೊಂಡು ಹೋಗುತ್ತಿದ್ದರು. ಮಕ್ಕಳ ಪಾಲನೆಯೊಂದಿಗೆ ಅವರ ಗುಣಶೀಲ ನಿರ್ಮಾಣದಲ್ಲಿ ಆ ತಾಯಿಯ ಪಾತ್ರ ಮೆಚ್ಚುವಂತಹುದು. ಶ್ರೀ ರಂಗನಾಥ ಶರ್ಮರ ಲೇಖನ ಮತ್ತು ಅಧ್ಯಯನ ವ್ಯವಸಾಯಕ್ಕೆ ಸ್ವಲ್ಪವೂ ಅಡೆತಡೆಯುಂಟಾಗದಂತೆ ಅವರು ನೀಡಿದ ಬೆಂಬಲ ಮತ್ತು ವ್ಯವಹಾರ್ಯ ಅನುಕೂಲಗಳು ನನ್ನ ಗಮನ ಸೆಳೆದ ಅಂಶ. ಶ್ರೀ ರಂಗನಾಥ ಶರ್ಮರು ಬರೆಯಲು ಕುಳಿತಿದ್ದಾಗ ಅವರ ಏಕಾಂತ ಮತ್ತು ಏಕಾಗ್ರತೆಗಳಿಗೆ ಭಂಗ ಬಾರದಂತೆ ಕುಶಲತೆಯಿಂದ ಮಕ್ಕಳನ್ನೂ, ಮನೆಗೆಲಸಗಳನ್ನೂ ಸ್ವಲ್ಪವೂ ಅತೃಪ್ತಿ ಇಲ್ಲದಂತೆ ನಡೆಸಿಕೊಳ್ಳುತ್ತಿದ್ದರು. ಮಕ್ಕಳಿಗೆ ತಾಯಿ ತಂದೆಯಲ್ಲಿರುವ ಗೌರವ, ಪ್ರೀತಿ, ವಿಶ್ವಾಸಗಳ ತಳಹದಿ ಗಟ್ಟಿಯಾಗಲು ತಾಯಿಯೇ ಕಾರಣ.

ಪರಿಪೂರ್ಣವಾದುದೂ, ಅನ್ಯೂನವಾದುದೂ ಯಾವುದೂ ಯಾರೂ ಇಲ್ಲ. ಕೆಲವು ಕುಂದುಕೊರತೆಗಳಿರುವುದು ಸಹಜವೆ. ಆದರೆ ತನ್ನ ಮತ್ತು ತನ್ನನ್ನು ಅವಲಂಬಿಸಿದವರ ಜೀವನವನ್ನು ತೃಪ್ತ ಮತ್ತು ಗಣನೀಯ ಮಟ್ಟದ ಸುಖ ಶಾಂತಿಗಳಿಂದ ನಡೆಸಿಕೊಂಡು ಹೋಗುವವರು ಪ್ರಶಂಸಾರ್ಹರು. ಇಂಥ ಪ್ರಶಂಸೆಗೆ ಅರ್ಹರಾದವರು ದಿವಂಗತ ಶ್ರೀಮತಿ ಕಮಲಾಕ್ಷಮ್ಮನವರು.

ಶ್ರೀ ರಂಗನಾಥ ಶರ್ಮರಿಗೆ ಇಬ್ಬರು ಗಂಡು ಮಕ್ಕಳೂ ಇಬ್ಬರು ಹೆಣ್ಣು ಮಕ್ಕಳೂ ಇದ್ದಾರೆ. ಹಿರಿಯ ಮಗ ಶ್ರೀ ಸದಾನಂದ ಸಿಂಡಿಕೇಟ್ ಬ್ಯಾಂಕಿನಲ್ಲಿ ಆಫೀಸರ್. ಕಿರಿಯ ಮಗ ಡಾ॥ ನಾಗಭೂಷಣ ವೈದ್ಯಕೀಯ ಪದವೀಧರ. ಅವರ ಪತ್ನಿಯೂ ವೈದ್ಯಕೀಯ ಪದವೀಧರೆ. ಇಬ್ಬರೂ ಬೆಂಗಳೂರಿನ ರಾಮಯ್ಯ ಮೆಡಿಕಲ್ ಕಾಲೇಜಿನಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ಹಿರಿಯ ಮಗಳು ಶ್ರೀಮತಿ

ಶಾರದೆಯು ಹಲವು ಉನ್ನತ ವೈದ್ಯಕೀಯ ಪದವಿ ಪಡೆದವರು. ಅವರ ಪತಿಯೂ ವೈದ್ಯರು. ಇಬ್ಬರೂ ತಮ್ಮ ಮಗಳೊಡನೆ ಯು.ಎಸ್.ಎ.ನಲ್ಲಿ ಇದ್ದಾರೆ. ಕಿರಿಯ ಮಗಳು ಶ್ರೀಮತಿ ಜಯಶ್ರೀ ಸಂಸ್ಕೃತ ಎಂ.ಎ.ಯಲ್ಲಿ ತೇರ್ಗಡೆಯಾಗಿ ಅಧ್ಯಾಪಕಿಯಾಗಿದ್ದು, ಈಗ ಪತಿಯೊಡನೆ ಯು.ಎಸ್.ಎ,ನಲ್ಲಿ ಇದ್ದಾರೆ.

ಈಗ 75 ವರ್ಷ ತುಂಬಿದ ಶ್ರೀ ರಂಗನಾಥ ಶರ್ಮರು, ತಮ್ಮ ಶ್ರಮದ ದುಡಿಮೆಯಿಂದಲೇ ಬೆಂಗಳೂರಿನ ವಿಜಯನಗರ ಬಡಾವಣೆಯಲ್ಲಿ ಕಟ್ಟಿದ ಸ್ವಂತ ಮನೆಯಲ್ಲಿ ಸಂಸಾರ ತಾಪತ್ರಯಗಳಿಂದ ದೂರಾಗಿ ತಮ್ಮ ಪ್ರವಚನ, ಲೇಖನ ವ್ಯವಸಾಯಗಳಿಂದ ಜನತೆಗೆ ಜ್ಞಾನದಾನ ಕಾರ್ಯದಲ್ಲಿ ತೊಡಗಿಕೊಂಡಿದಾರೆ. ಅವರಿಗೆ ದೇವರು ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನು ಕೊಡಲಿ ಎಂದು ಈ ಅಭಿನಂದನ ಸಮಾರಂಭ ಸಮಯದಲ್ಲಿ ಹಾರೈಸುತ್ತೇವೆ.

ಸಂಖ್ಯೆಯೇ ಪ್ರಧಾನವೆಂದಾಗ ಯಾರ ಸಂಖ್ಯೆ ಹೆಚ್ಚಿದೆಯೋ ಅವರೇ ಮಹಾಜನರು. ಜನರನ್ನು ಒಟ್ಟುಗೂಡಿಸಿ ಸಂಖ್ಯಾ ಬಲದಿಂದ ಮಹತ್ತ್ವವನ್ನು ತಂದು ಕೊಡತಕ್ಕದ್ದು ಜಾತಿ, ಮತ. 'ವೋಟು' ಎಂಬ ಶಬ್ದಕ್ಕೆ 'ಮತ' ಎಂದು ಭಾಷಾಂತರಿಸಿಕೊಟ್ಟವರ ಜಾಣ್ಮೆ ಮೆಚ್ಚತಕ್ಕದ್ದು. ಜಾತಿಯನ್ನು ಬಿಟ್ಟರೆ ಭಾಷೆ ಎರಡನೆಯ ಸ್ಥಾನವನ್ನು ಗಳಿಸಿಕೊಂಡಿದೆ.

—'ಸೂಕ್ತಿ-ವ್ಯಾಪ್ತಿ'ಯಲ್ಲಿ
ಶ್ರೀ ರಂಗನಾಥ ಶರ್ಮರು

ವಿದ್ವಾನ್ ಎನ್. ರಂಗನಾಥಶರ್ಮರವರಿಗೆ ಶುಭಾಶಂಸೆ

ಹೆಚ್. ಎಂ. ತಿಮ್ಮಪ್ಪ

ಶ್ರೀಮನ್ಮಂಗಳ ಮೂರ್ತಿ ನಾಗಮುಖನಿಂಗಾರಂಭದೊಳ್‌ವಂದಿಸು ।
ತ್ತಾಮಾಹೇಶ್ವರಿಯಾದಿಶಕ್ತಿಯ ಪದಾಂಭೋಜಕ್ಕೆ ಮೈಯಿಕ್ಕಿ ಮೇಣ್ ॥
ಧೀಮಾತೆಶ್ರುತಿರೂಪಿ ವಾಣಿಗೆರಗುತ್ತಾಂ ಬೇಡುವೆಂ ಭಕ್ತಿಯಿಂ ।
ಸಮ್ಮಾನೋತ್ಸವ ಕಾರ್ಯಕೀಯಲಿ ಸದಾ ನಿರ್ವಿಘ್ನಮಂ ಭದ್ರಮಂ ॥1॥

ಭರತಮಾತೆಯ ನೊಸಲ ತಿಲಕದಂತೆಸೆಯುವೀ ।
ಸಿರಿಯ ಕರ್ನಾಟಕದ ಚೆಲುವಿನ್ನೆಸಿರಿನಾಡು ।
ಸುರಸುಂದರರದಬೀಡು ಪ್ರಕೃತಿಸಿರಿನೆಲೆವೀಡು ಮಲೆನಾಡು ಕಲೆಯುನಾಡು ॥
ಕರಮೆಸೆವುದದರೊಳಗೆ ಶಿವಮೊಗ್ಗ ಜಿಲ್ಲೆಯಾ ।
ಸೊರಬವಂತದರೆಡೆಯೊಳಿನ್ನೇಂ ಸುಶೋಭಿಪುದೊ ।
ಕಿರುವಳ್ಳಿ ನಡಹಳ್ಳಿ ಹೊಲಗದ್ದೆ ತೆಂಗು ಕೌಂಗಲೆವಳ್ಳಿ ತೋಟದಿಂದೆ ॥2॥

ಉರುತರದ ಸೊಗಸನಿಂದೆಸೆಯುವೀ ಗ್ರಾಮದೊಳ ।
ಗಿರುವುದೈ ಪಲವಾರು ಹೈವವಿಪ್ರೋತ್ತಮರ ।
ಪರಿವಾರ ಸಕುಟುಂಬದಿಂದಲ್ಲಿ ಯೊಗ್ಗಟ್ಟಿನಿಂದೊಳ್ಳೆ ಕೃಷಿಕರೆನಿಸಿ ॥
ಮೆರೆವ ವಿಶ್ವಾಮಿತ್ರ ಗೋತ್ರದಾ ಜಾನಕೀ
ತಿರುಮಲರ್‌ಯೆಂಬ ವಂಪತಿಗಳ್ಗೆ ನಾಲ್ವರೊಳ್ ।
ಎರಡನೆಯ ಸುತರೆನಿಸಿ ರಂಗನಾಥರ್ ಮೆರೆದರೈ ಸ್ವಯಂಪ್ರತಿಭೆಯಿಂದೆ ॥3॥

ವ್ಯಾಕರಣ ಶಾಸ್ತ್ರದೊಳ್ ಪಾಂಡಿತ್ಯಮಂ ಗಳಿಸಿ ।
ಈ ಕನ್ನಡದ ರಾಜಧಾನಿ ಬೆಂಗ್ಳೂರಿನೊಳ್ ।
ವ್ಯಾಕರಣದಾಚಾರ್ಯರೆನಿಸಿದರ್ ಸಂಸ್ಕೃತದ ಹಿರಿಯ ವಿದ್ಯಾಲಯದೊಳು ॥
ವ್ಯಾಕರಣಶಾಸ್ತ್ರವೇ ಸಾಕಾರತಳೆದಂತ ।
ನೇಕ ವಿದ್ವನ್ಮಣಿಗಳೊಳಗೆ ತಲೆವಣಿಯು ವೈ- ।
ಯಾಕರಣ ಸಿರಿರಂಗನಾಥರೇಂ ಬೆಳಗುವರೊ ವಿದ್ವತ್ಪ್ರಕಾಶದಿಂದೆ ॥4॥

ದೊರೆವಡೆದ ರಾಷ್ಟ್ರಪ್ರಶಸ್ತಿ ಸಂಮಾನಿತರ್ ।
ನಿರುತ ಶಾಸ್ತ್ರಾಧ್ಯಯನಶೀಲರ್ ಸುಶೀಲರನ ।
ವರತ ಸಚ್ಚಿಂತಕರ್ ಮಂಥಕರ್ ಹಿತಚಿಂತಕರ್ ಶ್ರೇಷ್ಠ ವಿದ್ವಾಂಸರು ।
ಪರಿಪರಿಯ ಶಾಸ್ತ್ರಾರ್ಥ ಬಲ್ಲಿದರ್ ಒಳ್ಳಿದರ್ ।
ತರತರದೊಳುದ್ಗ್ರಂಥ ರಚನಾ ವಿಶಾರದರ್ ।
ಸರಳಾನುವಾದಕರ್ ವಾದಕರ್ ಬೋಧಕರ್ ಸಂಶೋಧಕರ್ ಶರ್ಮರು ॥5॥

ಗುಣದೊಳ್ ಸಾಗರದಂತುದಾರಚರಿತರ್ ಸದ್ಧರ್ಮನಿಷ್ಠಾಪರರ್ ।
ಘನಪಾಂಡಿತ್ಯ ವಿಶಾರದರ್ ಉಭಯಭಾಷಾಪಂಡಿತರ್ ಮಂಡಿತರ್ ॥
ಜನರೊಳ್‌ಪೆರ್ಮೆಯನಾಂತವರ್ ಮಿಗೆ ಸದಾ ಸಾಹಿತ್ಯಸೇವಾರತರ್ ।
ಅನುಗಾಲಂ ಶುಭವೀಯಲೆಂದವರಿಗಂ ತಿಮ್ಮಪ್ಪ ತಾಂ ಬೇಡುವಂ ॥6॥

ಋಣ ಮನುಷ್ಯನಿಗೆ ಒಂದು ಕೊಳೆಯಂತೆ, ಮನಸ್ಸು,
ಮಾತು, ಮೈ—ಎಲ್ಲವನ್ನೂ ವ್ಯಾಪಿಸುವ ಅಶೌಚ.

—'ಸೂಕ್ತಿ-ವ್ಯಾಪ್ತಿ'ಯಲ್ಲಿ
ಶ್ರೀ ರಂಗನಾಥ ಶರ್ಮರು

ಅದ್ವಿತೀಯರು

ಹರಿಹರಪುರ ಬಿ. ಸುಬ್ರಹ್ಮಣ್ಯ

ಪುರಾ ಕವೀನಾಂ ಗಣನಾಪ್ರಸಂಗೇ ಕನಿಷ್ಠಿಕಾಧಿಷ್ಠಿತಕಾಳಿದಾಸಾ ||
ಅದ್ಯಾಪಿ ತತ್ತುಲ್ಯಕವೇರಭಾವಾತ್ ಅನಾಮಿಕಾ ಸಾರ್ಥವತೀ ಬಭೂವ ||

ನಮ್ಮ ಕೈಯ್ಯಲ್ಲಿರುವ ಐದು ಬೆರಳುಗಳಿಗೆ ಸಂಸ್ಕೃತದಲ್ಲಿ ಕ್ರಮವಾಗಿ ಅಂಗುಷ್ಠಿಕಾ-ತರ್ಜನೀ-ಮಧ್ಯಮಾ-ಅನಾಮಿಕಾ ಮತ್ತು ಕನಿಷ್ಠಿಕಾ ಎಂಬ ಹೆಸರುಗಳಿವೆ. ಮಂತ್ರ ಜಪಾಂಗವಾದ ಕರನ್ಯಾಸದಲ್ಲಿ ಮೊದಲ ಪ್ರಾಶಸ್ತ್ಯ ಅಂಗುಷ್ಠಿಕಾ- ಅಂದರೆ ಹೆಬ್ಬೆರಳಿಗೆ. ಆದರೆ ಏನನ್ನಾದರೂ ಲೆಕ್ಕ ಮಾಡುವಾಗ ಮಾತ್ರ ಕನಿಷ್ಠಿಕಾ- ಅಂದರೆ ಕಿರುಬೆರಳಿನಿಂದಲೇ ಪ್ರಾರಂಭಿಸುವುವು ರೂಢಿ. ಕಿರುಬೆರಳಿನ ನಂತರದ ಬೆರಳಿಗೆ ಸಂಸ್ಕೃತದಲ್ಲಿರುವ "ಅನಾಮಿಕಾ" ಅಂದರೆ "ಹೆಸರಿಲ್ಲದ್ದು" ಎಂಬ ಹೆಸರು ಹೇಗೆ ಅರ್ಥಪೂರ್ಣವೆಂಬುದನ್ನು ಮೇಲಿನ ಶ್ಲೋಕ ಸ್ವಾರಸ್ಯವಾಗಿ ಪ್ರತಿಬಿಂಬಿಸುತ್ತದೆ.

"ಹಿಂದೊಮ್ಮೆ ಶ್ರೇಷ್ಠ ಕವಿಗಳ ಹೆಸರುಗಳನ್ನು ಪಟ್ಟಿ ಮಾಡುವ ವಿಷಯ ಪಂಡಿತ ಮಂಡಲಿಯಲ್ಲಿ ಪ್ರಸ್ತಾಪಕ್ಕೆ ಬಂದಿತು. ಸರಿ ! ಮಹಾಕವಿ ಕಾಳಿದಾಸನ ಹೆಸರನ್ನು ಪ್ರಾರಂಭಿಸಿ ವಾಡಿಕೆಯಂತೆ ಕಿರುಬೆರಳನ್ನು ಮಡಿಚಲಾಯಿತು. ಮುಂದಿನ ಸರದಿ ಕಿರುಬೆರಳಿನ ಪಕ್ಕದ ಬೆರಳಿನದು. ಆದರೆ ಎಷ್ಟೇ ಪ್ರಯತ್ನಿಸಿದರೂ ಕಾಳಿದಾಸನಿಗೆ ಎರಡನೆಯ ಸ್ಥಾನದಲ್ಲಿ ನಿಲ್ಲಬಲ್ಲ ಕವಿಯ ಹೆಸರೇ ದೊರೆಯಲಿಲ್ಲ. ಇಂದಿಗೂ ಅದು ಹಾಗೆಯೇ ಉಳಿದುದರಿಂದ ಆ ಬೆರಳಿಗೆ 'ಅನಾಮಿಕಾ' (ಹೆಸರಿಲ್ಲದ್ದು) ಎಂಬ ಹೆಸರೇ ಶಾಶ್ವತವಾಗಿಬಿಟ್ಟಿದೆ."

ಸಂಸ್ಕೃತ ಕವಿತಾ ಸಾಮ್ರಾಜ್ಯದಲ್ಲಿ ಕಾಳಿದಾಸನನ್ನು ಬಿಟ್ಟರೆ ಅಂತಹ ಪರಿಗಣನೆಗೆ ಬರಬಲ್ಲ ಕವಿ ಯಾರೂ ಇಲ್ಲವೆಂಬುದನ್ನು ನಿರೂಪಿಸುವ ಈ ಪ್ರಸಂಗ ನಿಜವಾಗಿ ನಡೆಯಿತೋ ? ಅಥವಾ ಇದೊಂದು ಕವಿಚಮತ್ಕಾರವೋ ? ಹೇಗೊ ಇರಲಿ !

ಈಗಿನ ದಿನಗಳಲ್ಲಿ **ವಿದ್ವಾನ್ ರಂಗನಾಥ ಶರ್ಮಾ** ಅವರು **ಅದ್ವಿತೀಯರೆಂಬ** ಹೆಗ್ಗಳಿಕೆಗೆ ಪಾತ್ರರಾಗಿರುವುದನ್ನು ನಿರೂಪಿಸಲು ಪೀಠಿಕೆಯಾಗಿ **ಈ** ಮೇಲಿನ ಪ್ರಸಂಗ.

ಈ ಶತಮಾನದ ಮೊದಲ ದಶಕಗಳಲ್ಲಿ ಜನಿಸಿ ಇದೀಗ ಮುಕ್ಕಾಲು ಶತಮಾನ ದಾಟಿ ಮುಂದುವರಿಯುತ್ತಿರುವ—ವಿದ್ವಾನ್ ಉಪಾಧಿಗೆ ಸಾರ್ಥಕತೆ ತಂದುಕೊಟ್ಟ— ಹಿರಿಯರು ಅಲ್ಲಿ-ಇಲ್ಲಿ ಅಪರೂಪಕ್ಕೆ ಕಾಣಸಿಗುತ್ತಾರೆ. ಬಹು ವಿಷಯಗಳಲ್ಲಿ ಆಳವಾದ ಅಧ್ಯಯನ ನಡೆಸಿ ಸಂಪಾದಿಸಿಕೊಂಡ ತಿಳಿವಳಿಕೆ-ನಿರ್ದುಷ್ಟ ವೈದುಷ್ಯಗಳೆಂಬ ರತ್ನಗಳಿಗೆ ಚಿನ್ನದ ಕುಂದಣವಿಟ್ಟಂತೆ ಸರಳತನ-ಸೌಹಾರ್ದಭಾವ-ಸೌಜನ್ಯಗಳಿಂದ ಇಂಥವರ ವ್ಯಕ್ತಿತ್ವ ಪ್ರಭಾವಿತವಾಗಿದೆ. ಪುರಾತನ ಉತ್ತಮ ಮೌಲ್ಯಗಳ ಸಮರ್ಥ ಪ್ರತಿಪಾದಕರಾದ ಇವರು ನವಯುಗದ ವಾಸ್ತವ ಪ್ರಜ್ಞೆ-ವೈಚಾರಿಕತೆಗಳನ್ನೂ ಮೈಗೂಡಿಸಿಕೊಂಡು ಈ ಎರಡರ ನಡುವಣ ಕೊಂಡಿಯಂತೆ ಇದ್ದಾರೆ. ಇನ್ನೂ ಅಷ್ಟಿಷ್ಟು ಹಿಡಿದುಕೊಂಡಿರುವ ಈ ಕೊಂಡಿ ಕಳಚಿತೆಂದರೆ ಆಗ ಈ "ಪ್ರಗಲ್ಭ ಪಾಂಡಿತ್ಯ" ಎಂಬ ಮಾತು ಬಹುಶಃ ಇತಿಹಾಸವಾಗಿಬಿಡಬಹುದು.

ಇದೀಗ 77ನೇ ವಯಸ್ಸಿನಲ್ಲಿರುವ ವಿದ್ವಾನ್ ರಂಗನಾಥ ಶರ್ಮರು ಇಂತಹ ಶ್ರೇಷ್ಠ ಪಂಡಿತರಲ್ಲಿ ಒಬ್ಬರು. ಇವರು **'ಅದ್ವಿತೀಯರು'** ಎಂದು ನಾಡಿನ ಹಿರಿಯ ಹೆಸರಾಂತ ಸಾಹಿತಿಗಳಿಂದ ಪರಿಗಣಿಸಲ್ಪಟ್ಟ ಎರಡು ಪ್ರಸಂಗಗಳು ಈ ಮುಂದೆ ಕಂಡಂತೆ ಇವೆ :

ಮೊದಲನೆಯದು :

ಬೆಂಗಳೂರು ನಗರದ ನರಸಿಂಹರಾಜ ಕಾಲೋನಿ ಶ್ರೀ ರಾಮ ಮಂದಿರದ ಸಂಬಂಧವುಳ್ಳದ್ದು. ಈ ಸಂಸ್ಥೆಯ ಕಾರ್ಯ ನಿರ್ವಹಣೆ-ಚಟುವಟಿಕೆ-ಸಾಧನೆಗಳ ವಿಷಯ ಸಾಮಾನ್ಯವಾಗಿ ಎಲ್ಲರಿಗೂ ತಿಳಿದೇ ಇದೆ. ಈ ರಾಮ ಮಂದಿರದ ವ್ಯವಸ್ಥಾಪಕರಾದ ನರಸಿಂಹರಾಜಾ ಕಾಲೋನಿ ಅಸೋಸಿಯೇಷನ್‌ನವರು ಶ್ರೀ ರಾಮ ವಸಂತ ನವರಾತ್ರಿ ಉತ್ಸವವನ್ನು ಪ್ರಾರಂಭಿಸಿದ್ದು 1939ರಲ್ಲಿ. ಅಲ್ಲಿಂದ ಪ್ರತಿವರ್ಷ ಉತ್ಸವವನ್ನು ವೈವಿಧ್ಯಪೂರ್ಣವಾಗಿ ನಡೆಸುತ್ತ 25 ವರ್ಷ ತುಂಬಿದಾಗ ಅದರ ಬೆಳ್ಳಿ ಹಬ್ಬದ ಸಮಾರಂಭವನ್ನು ದೊಡ್ಡ ಪ್ರಮಾಣದಲ್ಲಿ ನೆರವೇರಿಸಿದರು. ಆ ಮಹೋತ್ಸವಕ್ಕಾಗಿ ಸಂಗ್ರಹಿಸಿದ ಹಣದಲ್ಲಿ ವೆಚ್ಚಗಳು ಕಳೆದು ನಾಲ್ಕು ಸಹಸ್ರ ರೂಪಾಯಿ ಗಳು ಉಳಿದವು. ರೂಪಾಯಿ ಈಗಿನಷ್ಟು ಅಪಮೌಲ್ಯಗೊಂಡಿರದ 1964ರ ಆ ದಿನ ಗಳಲ್ಲಿ ಇದು ಒಂದು ಉತ್ತಮ ಮೊತ್ತವೇ ಆಗಿತ್ತು. ಈ ಹಣವನ್ನು ಉಪಯುಕ್ತ ರೀತಿಯಲ್ಲಿ ವಿನಿಯೋಗಿಸಬೇಕೆಂಬುದು ಅಸೋಸಿಯೇಷನ್‌ನವರ ಆಸೆ. **ಪೂಜ್ಯ ಡಿ.ವಿ.ಜಿ.ಯವರು** ಈ ಸಂಸ್ಥೆಯ ಚಟುವಟಿಕೆಗಳನ್ನು ಆಸಕ್ತಿಯಿಂದ ಗಮನಿಸಿ

ಪ್ರೋತ್ಸಾಹಿಸುತ್ತಿದ್ದರು. ಅಸೋಸಿಯೇಷನ್‌ನವರು ಈ ಹಣದ ವಿನಿಯೋಗದ ವಿಷಯವನ್ನು ಹಿರಿಯರಾದ ಡಿ.ವಿ.ಜಿ.ಯವರ ನಿರ್ಧಾರಕ್ಕೆ ಬಿಡುವುದು ಒಳ್ಳೆಯದು ಎಂಬ ತೀರ್ಮಾನಕ್ಕೆ ಬಂದರು.

ಅಸೋಸಿಯೇಷನ್ನಿನ ಆಗಿನ ಅಧ್ಯಕ್ಷ ಶ್ರೀ ಹೆಚ್. ಎಸ್. ಕೆ. ಸ್ವಾಮಿ, ಉಪಾಧ್ಯಕ್ಷ ಶ್ರೀ ಡಿ. ಸಿ. ಅನಂತರಾಮಯ್ಯ ಮತ್ತು ಕಾರ್ಯದರ್ಶಿ ಶ್ರೀ ಎಸ್. ಎನ್. ಮೂರ್ತಿಯವರು ಪೂಜ್ಯ ಡಿ.ವಿ.ಜಿ.ಯವರನ್ನು ಭೇಟಿ ಮಾಡಿ ವಿಷಯವನ್ನು ವಿವರಿಸಿದರು. ಆಗ ಡಿ.ವಿ.ಜಿಯವರು "ಶ್ರೀ ವಾಲ್ಮೀಕಿ ರಾಮಾಯಣವನ್ನು ಕನ್ನಡಕ್ಕೆ ಅನುವಾದ ಮಾಡಿಸಿ ಪ್ರಕಟಿಸಲು ಈ ಧನವನ್ನು ವಿನಿಯೋಗಿಸಿಕೊಂಡು ಕೆಲಸ ಪ್ರಾರಂಭಿಸಿರಿ. ಕಾರ್ಯ ಯಶಸ್ವಿಯಾಗಿ ಪೂರ್ಣಗೊಳ್ಳುತ್ತದೆ. ಇದು ಅಗತ್ಯವಾಗಿ ಆಗಬೇಕಾದ ಕೆಲಸ. ನಮ್ಮ ಸಂಸ್ಕೃತಿಯ ಜೀವಾಳದಂತಿರುವ ಈ ಕಾವ್ಯದ ಪರಿಚಯ ಸಾಮಾನ್ಯ ಜನರಿಗೂ ಲಭ್ಯವಾಗುವುದರ ಜೊತೆಗೆ ಸಂಸ್ಥೆಯ ನೆನಪು ಚಿರಕಾಲ ಉಳಿಯುತ್ತದೆ" ಎಂದು ಸೂಚಿಸಿದರು. ಸಲಹೆಯೇನೋ ಅತ್ಯುತ್ತಮವಾದದ್ದೇ! ಆದರೆ ಅದನ್ನು ಕಾರ್ಯಗತಗೊಳಿಸಲು ಮೊಟ್ಟ ಮೊದಲು ಇದಿರಾಗುವ ಸಮಸ್ಯೆ : ಸಮರ್ಥ ಅನುವಾದಕರನ್ನು ಹೊಂದಿಸಿಕೊಳ್ಳುವುದು. ಅಸೋಸಿಯೇಷನ್‌ನವರು ಇದನ್ನೇ ಡಿ.ವಿ.ಜಿ.ಯವರ ಮುಂದೆ ಇಟ್ಟಾಗ ಅವರು "ಇದೊಂದು ಸಮಸ್ಯೆಯೇ ಅಲ್ಲ. ವಿದ್ವಾನ್ ರಂಗನಾಥ ಶರ್ಮರಿಗೆ ಈ ಕಾರ್ಯವನ್ನು ವಹಿಸಿದರೆ ಅತ್ಯಂತ ಸಮರ್ಪಕವಾದ ಅನುವಾದ ಹೊರಬರುತ್ತದೆ. ಕನ್ನಡ ನಾಡಿನಲ್ಲಿ ಇಂತಹ ಮಹತ್ಕಾರ್ಯವನ್ನು ನಿರ್ವಹಿಸಬಲ್ಲ **ಏಕೈಕ ವ್ಯಕ್ತಿ ರಂಗನಾಥಶರ್ಮರು** ಎಂದರು.

ಪೂಜ್ಯ ಡಿ.ವಿ.ಜಿ.ಯವರ ಸಲಹೆಯಂತೆ 1964ರಲ್ಲಿಯೇ ಶ್ರೀಮದ್ರಾಮಾಯಣದ ಸುಂದರ ಕಾಂಡವು ಶ್ರೀ ರಂಗನಾಥ ಶರ್ಮರಿಂದ ಅನುವಾದಿಸಲ್ಪಟ್ಟು ಸಮಿತಿಯವರು ಅದನ್ನು ಮುದ್ರಣ ಮಾಡಿಸಿ ಪ್ರಕಟಿಸಿದರು. ಪೂಜ್ಯ ಡಿ.ವಿ.ಜಿ.ಯವರ ವಿದ್ವತ್ಪೂರ್ಣ ಮುನ್ನುಡಿಯನ್ನೊಳಗೊಂಡ ಈ ಪುಸ್ತಕಕ್ಕೆ ಕನ್ನಡಿಗರಿಂದ ದೊರೆತ ಪ್ರೋತ್ಸಾಹ-ಆಸಕ್ತಿಗಳಿಂದಾಗಿ ಸಮಿತಿಯವರು ರಾಮಾಯಣದ ಉಳಿದ ಕಾಂಡಗಳನ್ನೂ ಶ್ರೀ ರಂಗನಾಥ ಶರ್ಮರಿಂದ ಕನ್ನಡಕ್ಕೆ ಅನುವಾದ ಮಾಡಿಸಿ ಪ್ರಕಟಿಸಿದರು.

ಹೀಗೆ ಸಂಸ್ಕೃತದ ಬೃಹತ್ಕಾವ್ಯಕಥಾನಕವೆನಿಸಿದ ಸಮಗ್ರ ವಾಲ್ಮೀಕಿ ರಾಮಾಯಣವು ಕನ್ನಡದ ಆಸಕ್ತ ಓದುಗರಿಗೆ ಲಭ್ಯವಾಯಿತು. ಪ್ರತಿಯೊಂದು ಕಾಂಡಕ್ಕೂ ಡಿ.ವಿ.ಜಿ.ಯವರ ವಿಶ್ಲೇಷಣಾತ್ಮಕ ಮುನ್ನುಡಿ, ಕನ್ನಡ ಲಿಪಿಯಲ್ಲಿ ಸಂಸ್ಕೃತದ ಮೂಲ ಶ್ಲೋಕಗಳು, ಶ್ರೀರಂಗನಾಥಶರ್ಮರ ತಿಳಿಗನ್ನಡದ ಸೊಗಸಾದ ಅನುವಾದ- ಒಳ್ಳೆಯ ಮುದ್ರಣಗಳಿಂದ ಆಕರ್ಷಕವಾದ ಈ ರಾಮಾಯಣದ ಸಂಪುಟವು ಇದುವರೆಗೆ 5 ಮುದ್ರಣಗಳನ್ನು ಕಂಡಿರುವುದೇ ಅದರ ಜನಪ್ರಿಯತೆಗೆ ಸಾಕ್ಷಿ. ಪೂಜ್ಯ ಡಿ.ವಿ.ಜಿ. ಯವರು ಮೊಟ್ಟ ಮೊದಲು ಈ ಅನುವಾದ ಕಾರ್ಯ ಮತ್ತು ಶ್ರೀ ರಂಗನಾಥಶರ್ಮರ

ಬಗ್ಗೆ ಹೇಳಿದ್ದ ಮಾತುಗಳು ನಿಜವಾಗಿಯೂ ಋಷಿವಾಣಿಗಳಂತೆ ಪರಿಣಮಿಸಿರುವುದು ಗಮನಾರ್ಹ.

1964ರಲ್ಲಿ ಸುಂದರಕಾಂಡದ ಅನುವಾದದಿಂದ ಪ್ರಾರಂಭವಾದ ಈ ಮಹತ್ಕಾರ್ಯವನ್ನು ಶ್ರೀ ಶರ್ಮರು 1974ರಲ್ಲಿ ಉತ್ತರಕಾಂಡದ ಅನುವಾದದೊಂದಿಗೆ ಪೂರ್ಣಗೊಳಿಸಿದರು. ಇದೇ ಸಂದರ್ಭದಲ್ಲಿ ಶ್ರೀರಂಗನಾಥಶರ್ಮರ ಜೀವನ ಸಂಗಾತಿಯಾಗಿ-10 ವರ್ಷಕಾಲ-ಈ ಅನುವಾದ ಕಾರ್ಯದಲ್ಲಿ ಸಹಕಾರ ನೀಡುತ್ತ ಬಂದ ಸಹಧರ್ಮಿಣಿಯ ವಿಯೋಗ ಅವರಿಗೆ ಉಂಟಾಯಿತು. ಆದರೆ 10 ವರ್ಷ ಎಡೆಬಿಡದೆ ಶ್ರೀರಾಮಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಶ್ರೀ ಶರ್ಮರು ಕೆಲಸ ಮುಗಿಯುತ್ತಿದ್ದಂತೆಯೇ ಒದಗಿ ಬಂದ ಈ ವ್ಯಸನವನ್ನು ಶ್ರೀರಾಮನಂತೆ ಸ್ಥಿತಪ್ರಜ್ಞರಾಗಿಯೇ ಸಹಿಸಿಕೊಂಡಿರಬೇಕು.

ಮುಂದೆ 1977ರಲ್ಲಿ ಇದೇ ಸಮಿತಿಯವರು ಶ್ರೀ ರಂಗನಾಥಶರ್ಮರಿಂದ ಶ್ರೀಭಾಗವತದ 10 (2 ಭಾಗ) 11 ಮತ್ತು 12ನೇ ಸ್ಕಂಧಗಳನ್ನು ಕನ್ನಡಕ್ಕೆ ಅನುವಾದ ಮಾಡಿಸಿ ಪ್ರಕಟಿಸಿದ್ದಾರೆ. ಶ್ರೀಯುತರು ರಚಿಸಿದ ಶ್ರೀರಾಮ ಕರ್ಣಾಮೃತ ಮತ್ತು ಕೆಲವು ಚಿಕ್ಕ ಪುಸ್ತಕಗಳನ್ನೂ ಸಮಿತಿ ಪ್ರಕಟಿಸಿದೆ. 1988ರಲ್ಲಿ ಶ್ರೀ ಶರ್ಮರು ಶ್ರೀ ವಿಷ್ಣು ಪುರಾಣವನ್ನು ಕನ್ನಡಕ್ಕೆ ಅನುವಾದಿಸಿದ್ದು (2 ಭಾಗ) ಶ್ರೀ ರಾಮಕೃಷ್ಣ ಮಠ (ಆಶ್ರಮ)ದಿಂದ ಪ್ರಕಟವಾಗಿದೆ.

(ಮೇಲೆ ಕಂಡ ವಿಷಯಕ್ಕೆ ಅಂಕಿ-ಅಂಶ ಒದಗಿಸಿದವರು ನ.ರಾ. ಕಾಲೋನಿ ಅಸೋಸಿಯೇಷನ್ ಕಾರ್ಯದರ್ಶಿ ಶ್ರೀ ಎಸ್. ಎನ್. ಮೂರ್ತಿಯವರು.)

ಎರಡನೆಯದು :

ಇದು ಈ ಲೇಖಕನ ಸಂಬಂಧವುಳ್ಳದ್ದು. ಇದೇ ಶತಮಾನದ ಪೂರ್ವಾರ್ಧದಲ್ಲಿ ಪ್ರಸಿದ್ಧಿ ಪಡೆದಿದ್ದ **ಶ್ರೀ ವಾಸಿಷ್ಠ ಗಣಪತಿ ಮುನಿಗಳ** (ಕಾವ್ಯಕಂಠ ಗಣಪತಿಶಾಸ್ತ್ರಿ ಎಂಬುದಾಗಿಯೂ ಕರೆಯಲ್ಪಡುತ್ತಿದ್ದ ಇವರು ಭಗವಾನ್ ರಮಣ ಮಹರ್ಷಿಗಳ ಶಿಷ್ಯರು) ಬದುಕು-ಬರಹಗಳನ್ನು ಚಿತ್ರಿಸುವ **'ವಾಸಿಷ್ಠ ವೈಭವಂ'** ಸಂಸ್ಕೃತ ಚಂಪೂ ಕಾವ್ಯವು **ದಿ|| ವೇ.ಬ್ರಂ.ಶ್ರೀ. ಕಪಾಲಿಶಾಸ್ತ್ರಿಗಳವರ** ರಚನೆ. ಇದನ್ನು ನಾನು ಕನ್ನಡಕ್ಕೆ ಅನುವಾದಿಸಿದ್ದೇನೆ. ನನ್ನ ಆತ್ಮೀಯರಾಗಿರುವ ಸೂರಳಿ ನರಸಿಹ್ಮಮೂರ್ತಿ ಎಂಬವರ ನೆರವಿನಿಂದ ಇದು ಇತ್ತೀಚೆಗೆ ಮುದ್ರಣ ಕಂಡು ಪ್ರಕಟವಾಗಿದೆ. ಈ ಕನ್ನಡ ಅನುವಾದಕ್ಕೆ ಹಿರಿಯ ಸಾಹಿತಿಯೊಬ್ಬರ ಸೂಕ್ತ ಮುನ್ನುಡಿಯನ್ನು ಪಡೆದು ಪ್ರಕಟಿಸಬೇಕೆಂಬುದು ನಮ್ಮ ಆಸೆ. ಈ ಪುಸ್ತಕದ ಪ್ರಕಾಶಕರಿಗೆ ಪರಿಚಿತರಾದ ಹಿರಿಯ ಕವಿ-ಸಾಹಿತಿ ಮಾನ್ಯ **ಪು. ತಿ. ನರಸಿಂಹಾಚಾರ್ಯರನ್ನು** ಭೇಟಿಮಾಡಿ ಪುಸ್ತಕದ ಮುದ್ರಿತ ಕರಡು ಪ್ರತಿಯನ್ನು ಕೊಟ್ಟು ವಿಷಯವನ್ನು

ವಿಜ್ಞಾಪಿಸಿಕೊಂಡೆವು. ಪುಸ್ತಕವನ್ನು ತಿರುವಿ ಹಾಕುತ್ತಲೇ ಅವರು ಹೇಳಿದ ಮಾತುಗಳು ಇವು :– "ನಾನು ಸಂಸ್ಕೃತ ಸಾಹಿತ್ಯ–ಶಾಸ್ತ್ರಾದಿಗಳನ್ನು ಆಳವಾಗಿ ಅಧ್ಯಯನ ಮಾಡಿದವನಲ್ಲ. ಅದೂ ಅಲ್ಲದೆ ಈ ಅನುವಾದದ ಮೂಲ ಸಂಸ್ಕೃತ ಗ್ರಂಥದ ಪರಿಚಯವೂ ನನಗಿಲ್ಲ. ಆದ್ದರಿಂದ ಇಂತಹ ಗ್ರಂಥಕ್ಕೆ ನಾನು ಮುನ್ನುಡಿ ಬರೆದು ಕೊಡುವುದು ಸೂಕ್ತವೆನಿಸಲಾರದು. ನೀವು ಬೇರೆ ಯಾವುದೇ ರೀತಿಯ ಪುಸ್ತಕ ಬರೆದು ತಂದಿದ್ದರೂ ನಾನು ಸಂತೋಷದಿಂದ ಓದಿ ನೋಡಿ ಮುನ್ನುಡಿ ಬರೆದು ಕೊಡುತ್ತಿದ್ದೆ. ಆದರೆ ಈ ಕೆಲಸವನ್ನು ಅತ್ಯಂತ ಸಮರ್ಪಕವಾಗಿ ಮಾಡಬಲ್ಲ ವ್ಯಕ್ತಿಯೊಬ್ಬರಿದ್ದಾರೆ. ಸಂಸ್ಕೃತ ಸಾಹಿತ್ಯ–ದರ್ಶನ ಶಾಸ್ತ್ರಗಳು–ಪುರಾಣಗಳು–ಕನ್ನಡ ಸಾಹಿತ್ಯ ಮುಂತಾಗಿ ಎಲ್ಲದರಲ್ಲೂ ವಿಶೇಷ ಜ್ಞಾನ ಸಂಪಾದಿಸಿಕೊಂಡಿರುವ—**ಕರ್ನಾಟಕದಲ್ಲೇ ಅದ್ವಿತೀಯರೆನಿಸಿರುವ ವಿದ್ವಾನ್ ರಂಗನಾಥಶರ್ಮರೇ** ಅವರು. ನೀವು ಅವರನ್ನು ಕಂಡು ನನ್ನ ವಂದನೆಯನ್ನೂ ತಿಳಿಸಿ–ಈ ಪುಸ್ತಕಕ್ಕೆ ಮುನ್ನುಡಿಯನ್ನು ಅವರಿಂದ ಪಡೆದು ಪ್ರಕಟಿಸಿದರೆ ಅದು ಈ ಪುಸ್ತಕಕ್ಕೆ ಭೂಷಣವೆನಿಸುತ್ತದೆ."

ಪದ್ಮಶ್ರೀಯೂ ಸೇರಿದಂತೆ ಹಲವು ಪ್ರಶಸ್ತಿಗಳನ್ನು ಗಳಿಸಿ ನಾಡಿನ ಗೌರವಾದರ ಗಳಿಗೆ ಪಾತ್ರರಾಗಿ, ಪು.ತಿ.ನ. ಎಂಬ ಅಚ್ಚುಮೆಚ್ಚಿನ ಹೆಸರಿನಿಂದಲೇ ಗುರುತಿಸಲ್ಪಡುವ ಈ ವಯೋವೃದ್ಧ ಸಾಹಿತಿಯ "ತಾನು ಎಲ್ಲವನೂ ತಿಳಿದವನಲ್ಲ" ಎಂಬ ನಮ್ರಭಾವ, "ಬೇರೊಬ್ಬ ವಿದ್ವಾಂಸರ ಯೋಗ್ಯತೆಯನ್ನು ಎತ್ತಿ ಹಿಡಿಯಬಲ್ಲ" ನಿಷ್ಕಲಂಕ ಹೃದಯ ವೈಶಾಲ್ಯ ಇವುಗಳನ್ನು ಬೇರೆಲ್ಲಿ ಕಾಣಲು ಸಾಧ್ಯ ?

ಪದ್ಮಶ್ರೀ ಡಾ॥ ಪು.ತಿ.ನ.ರವರ ಈ ಸಲಹೆಯಿಂದ ನನಗೆ ಆದ ಲಾಭ ಬಹು ದೊಡ್ಡದು.ವಿದ್ವಾನ್‌ರಂಗನಾಥಶರ್ಮರು "ವಾಸಿಷ್ಠ ಗಣಪತಿ ಮುನಿಗಳ" ಪರಮಪ್ರಿಯ ಶಿಷ್ಯರಾಗಿದ್ದ ಶಿರಸಿಯ ಖ್ಯಾತ ನ್ಯಾಯವಾದಿ ಶ್ರೀ ಡಿ. ವಿಶ್ವಾಮಿತ್ರರನ್ನು ಅನೇಕ ಬಾರಿ ಭೇಟಿ ಮಾಡಿ ವಾಸಿಷ್ಠ ಮುನಿಗಳ ಬಗ್ಗೆ ಹಲವು ವಿಷಯಗಳನ್ನು ತಿಳಿದುಕೊಂಡವರು ಮಾತ್ರವಲ್ಲ ! ವಾಸಿಷ್ಠರು ರಚಿಸಿದ "ಉಮಾ ಸಹಸ್ರಂ" ಮುಂತಾದ ಕೆಲವು ಗ್ರಂಥ ಗಳನ್ನೂ ವೇ॥ ಕಪಾಲಿಶಾಸ್ತ್ರಿಗಳು ರಚಿಸಿದ "ವಾಸಿಷ್ಠ ವೈಭವಂ" ಸಂಸ್ಕೃತ ಚಂಪೂ ಕಾವ್ಯವನ್ನು ಅಧ್ಯಯನ ಮಾಡಿದವರು. ಹಾಗಾಗಿ ನಾನು ಕನ್ನಡಕ್ಕೆ ಅನುವಾದಿಸಿದ "ವಾಸಿಷ್ಠ ವೈಭವಂ" ಪುಸ್ತಕವು ಶ್ರೀ ರಂಗನಾಥಶರ್ಮರಂತಹ ನುರಿತ–ಸಮರ್ಥ ವಿದ್ವಾಂಸರ ಪರಾಮರ್ಶೆಗೆ ಒಳಪಟ್ಟು ಅದಕ್ಕೆ ವಸ್ತುನಿಷ್ಠ–ವಿಮರ್ಶಾತ್ಮಕ ಮುನ್ನುಡಿ ದೊರೆತಿರುವುದೇ ನನ್ನಂತಹ ಸಾಮಾನ್ಯ ಬರಹಗಾರನಿಗೆ ಆದ ದೊಡ್ಡಲಾಭ !

"ತುಂಬಿದ ಕೊಡ ತುಳುಕುವುದಿಲ್ಲ" ಎಂಬ ಮಾತು ಶ್ರೀರಂಗನಾಥಶರ್ಮ ರಂತಹ ವ್ಯಕ್ತಿಗಳಿಂದಾಗಿಯೇ ಚಾಲತಿಗೆ ಬಂದಿರಬೇಕು. ಅವರಂತಹ ಸರಳ–ಸೌಜನ್ಯ ಪೂರ್ಣ–ಮೃದು–ಮಧುರ ವ್ಯಕ್ತಿತ್ವದ ವಿದ್ವತ್ಸಂಪನ್ನರು ಈಗಿನ ದಿನಗಳಲ್ಲಿ ತೀರಾ ವಿರಳ. ಅವರನ್ನು **'ಅದ್ವಿತೀಯರು'** ಎಂದು ಹೇಳುವುದು ಭಟ್ಟಂಗಿಯ ಹೊಗಳಿಕೆಯ

ಮಾತೇನೂ ಅಲ್ಲ! ಮೇಲೆ ಕಂಡಂತೆ ನಾಡಿನ **ಇಬ್ಬರು ಹಿರಿಯ-ಗಣ್ಯ-ಸಾಹಿತಿಗಳೇ ಶ್ರೀ ಶರ್ಮರಿಗೆ ಕೊಟ್ಟಿರುವ 'ವಿಶೇಷಣ'** ಅದು.

ಈ ವಯಸ್ಸಿನಲ್ಲಿಯೂ ಶ್ರೀರಂಗನಾಥಶರ್ಮರು ಲೇಖನ-ಸಂಶೋಧನೆ-ಪ್ರವಚನಗಳ ಮೂಲಕ ನಾಡಿಗೆ ಅತ್ಯಗತ್ಯವಾದ ಸಂಸ್ಕೃತದ ಉಳಿವು ಕನ್ನಡದ ಅಭಿವೃದ್ಧಿಗಳೆರಡನ್ನೂ **ಸವ್ಯಸಾಚಿಯಂತೆ,** ಆದರೆ ಸದ್ದು-ಗದ್ದಲವಿಲ್ಲದೆ, ನಿರ್ವಹಿಸಿ ಕೊಂಡು ಹೋಗುತ್ತಿರುವುದು ನಾಡಿನ ಭಾಗ್ಯ. ಈ ಭಾಗ್ಯ ಹೀಗೆಯೇ ಮುನ್ನಡೆಯು ವಂತೆ ಅನುಗ್ರಹಿಸಲೆಂದು ಜಗನ್ನಿಯಾಮಕ ಶಕ್ತಿಯನ್ನು ಪ್ರಾರ್ಥಿಸಿ ಈ ಸಂಭ್ರಮದ ಶುಭ ವೇಳೆಯಲ್ಲಿ ವಿದ್ವಾನ್ ರಂಗನಾಥಶರ್ಮರಿಗೆ ಹಾರ್ದಿಕ ಅಭಿವಂದನೆಗಳನ್ನು ಸಮರ್ಪಿಸುತ್ತಿದ್ದೇನೆ.

ಇದು ವಿಜ್ಞಾನ ಯುಗ. ಸ್ವತಂತ್ರ ವಿಚಾರಿಗಳು ನಾವು. ಪ್ರತ್ಯಕ್ಷವಾದದ್ದನ್ನು ಮಾತ್ರ ನಂಬಬಹುದು ; ನಮ್ಮ ಬುದ್ಧಿಗೆ ಸರಿತೋರಿದಂತೆ ಮಾತಾಡುತ್ತೇವೆ. ಅಜ್ಜ ನೆಟ್ಟ ಆ ಧರ್ಮವನ್ನು ಆಶ್ರಯಿಸತಕ್ಕವರಲ್ಲ ನಾವು—ಎನ್ನುತ್ತೇವೆ. ಆದರೆ ಅಜ್ಜ ನೆಟ್ಟದ್ದು ಮಾವಿನ ಮರವಾದರೆ ಹಣ್ಣುಗಳು ಬೇಕೆನ್ನುತ್ತೇವೆ. ದೇಶಾಂತರದ ವಾರ್ತೆಗಳೂ ಇತಿಹಾಸಕಾರರ ವಚನಗಳೂ, ವಿಜ್ಞಾನಿಗಳ ಲೆಕ್ಕಾಚಾರಗಳೂ ವೈದ್ಯರು ಹೇಳುವ ರೋಗ ಕಾರಣಗಳೂ ಪ್ರತ್ಯಕ್ಷವಲ್ಲದಿದ್ದರೂ ನಂಬುತ್ತೇವೆ...ಹಾಗೆಯೇ ಮಹಾತ್ಮರು ಸ್ವಾನುಭವದಿಂದ ಹೇಳಿದ ಪರಮಾರ್ಥ ವಿಷಯವನ್ನು ಮಾತ್ರ ಪ್ರತ್ಯಕ್ಷಯೋಗ್ಯವೆಂದು ನಾವು ನಂಬುವುದಿಲ್ಲ. ಅದಕ್ಕೆ ಹೇಳಿದ ಸಾಧನ ಸಂಪತ್ತು ಗಳನ್ನು ಗಳಿಸಿಕೊಂಡು ಪ್ರಮಾಣೀಕರಿಸಲು ಸಾಧ್ಯವೆಂದರೆ ಒಪ್ಪುವುದಿಲ್ಲ. ಇದು ಕಲಿಯುಗದ ಮಹಿಮೆ !

'ಸೂಕ್ತಿ-ವ್ಯಾಪ್ತಿ'ಯಲ್ಲಿ
ಶ್ರೀ ರಂಗನಾಥ ಶರ್ಮರು

ಶರ್ಮರು

ಸ. ವೆಂಕಟಾಚಲಪತಿ

ಶ್ರೀ ಡಿ.ವಿ.ಜಿ.ಯವರು, ಶ್ರೀ ರಂಗನಾಥಶರ್ಮ ಅವರಿಗೂ ನನಗೂ ನಡುವೆ ಒಂದು ಕೊಂಡಿಯಾಗಿದ್ದುಕೊಂಡು ನನ್ನ ಬದುಕಿಗೊಂದು ದಿಕ್ಕನ್ನೂ ಸ್ವಾರಸ್ಯವನ್ನೂ ಕೃಪೆ ಮಾಡಿದರು. ಈ ಸಂದರ್ಭದಲ್ಲಿ ನನಗೆ ನೆನಪಿಗೆ ಬರುವುದು ಗಣಪತಿಯನ್ನು ಕುರಿತ ಒಂದು ಸ್ತೋತ್ರ.

ವ್ಯಾಸರಿಗೆ ಆತ ಬಲಗೈಯಾಗಿ ಅವರು ಹೇಳಿದ್ದನ್ನು ಬರೆದುಕೊಳ್ಳುವನು. ಗಣಪತಿಯ ಕೈಯ ಓಟವನ್ನು ಕಂಡು ವ್ಯಾಸರು ಗಾಬರಿಯಾಗಿ ಅವನ ಓಟವನ್ನು ಕಡಿಮೆ ಮಾಡಲು ಕೆಲವು ಗುಟ್ಟುಗಳನ್ನು ಅಳವಡಿಸಿ, ಗಣಪತಿ ಅದನ್ನು ಅರ್ಥ ಮಾಡಿಕೊಂಡು ಬರೆಯುವ ಹೊತ್ತಿಗೆ ಮುಂದಿನ ಭಾಗವನ್ನು ರಚಿಸಿ ಹೇಳುತ್ತಿದ್ದರು. ಇದನ್ನು ವ್ಯಾಸ ಗುಟ್ಟು ಎಂದು ಕರೆಯುತ್ತಾರೆ.

ಶ್ರೀ ರಂಗನಾಥಶರ್ಮ ಅವರು ಈ ಗುಟ್ಟು ಪದ್ಯಗಳನ್ನು ಕೆಲಕಾಲದ ಹಿಂದೆ ಒಂದು ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಈಗ ಮರಳಿ ಅದನ್ನು ಪ್ರತ್ಯೇಕವಾಗಿ ಒಂದು ಪುಸ್ತಕವಾಗಿ ಪ್ರಕಟಿಸಬೇಕೆಂದು ಬೇಡುತ್ತೇನೆ.

ವ್ಯಾಸ ಗುಟ್ಟುಗಳನ್ನು ಪತ್ತೆಮಾಡಬೇಕಾದರೆ ಶರ್ಮರು ಮಹಾಭಾರತವನ್ನು ಕರತಲಾಮಲಕವನ್ನಾಗಿ ಮಾಡಿಕೊಂಡಿರಬೇಕೆಂದು ನನಗನ್ನಿಸುತ್ತದೆ. ಅವರು ಶ್ರೀಮದ್ರಾಮಾಯಣವನ್ನೂ ಹಾಗೆಯೇ ವಾಚೋವಿಧೇಯವನ್ನಾಗಿ ಮಾಡಿಕೊಂಡಿದ್ದಾರೆ. ಅವರ ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದವಂತೂ ಅತ್ಯಂತ ಜನಪ್ರಿಯವಾಗಿದೆ. ಅವರು ಅನುಬಂಧಗಳಲ್ಲಿ ಟಿಪ್ಪಣಿಯಾಗಿ ಕೊಡುವ ವಿವರಗಳಂತು ನನ್ನಂಥ ಪಾಮರನನ್ನು ಅಪ್ರತಿಭನನ್ನಾಗಿ ಮಾಡುತ್ತವೆ.

ಅವರನ್ನು ಕೊಂಡಾಡುವ ನಾನು ಕೇವಲ ನಿಮಿತ್ತ ಮಾತ್ರನು. ಕೈಲಾಸಂ ಹೇಳುವ ಹಾಗೆ ನಾನು 'ಕೇವಲಮ್ಮು' ಇದನ್ನು ನಾನು ವಿನೋದಕ್ಕಾಗಿ ಇಲ್ಲಿ ಹೇಳುತ್ತಿಲ್ಲ. ವಾಸ್ತವಾಂಶವನ್ನು ಹೇಳಲು ಹೊರಟ ನನಗೆ ನಾಚಿಕೆ ?

ಶ್ರೀಮಾನ್ ಶರ್ಮರು ಧೀಮಂತರು. ಅವರು ಪಂಡಿತ ಪಾಮರರಿಬ್ಬರನ್ನು ಸಂತೋಷಪಡಿಸತಕ್ಕವರು. ಅವರನ್ನು ಅಭಿನಂದಿಸುವ ಕಾರ್ಯ ಬಹು ಶ್ಲಾಘ್ಯವಾದದ್ದು ಶ್ರೀ ತ್ಯಾಗರಾಜ ಸ್ವಾಮಿಗಳು ಹೇಳಿದಂತೆ "ತೊಲಿ ಜೇಸಿನ ಪೂಜಾಫಲಮು"

ವಿದ್ವದ್ರಸಿಕರು

ಡಿ.ವಿ.ಜಿ.

ಶ್ರೀರಂಗನಾಥಶರ್ಮರವರು ಸಂಸ್ಕೃತ ವ್ಯಾಕರಣ ಶಾಸ್ತ್ರದಲ್ಲಿ ಆಳವೂ ವಿಶಾಲವೂ ಆಗಿ ಪ್ರಮಾಣವತ್ತಾಗಿರುವ ಪಾಂಡಿತ್ಯವನ್ನು ಸಂಪಾದಿಸಿರುವವರು. ಅವರ ಕನ್ನಡ ಭಾಷಾವಿದ್ವತ್ತೂ ಅಂಥಾದ್ದು. ಸಾಹಿತ್ಯದಲ್ಲಿ ಅವರು ಸಹೃದಯರಾಗಿ ಶೋಧನ ಶೀಲರಾಗಿ ಕಾವ್ಯಪೂರ್ವವನ್ನು ಕಂಡು ತೋರಿಸಬಲ್ಲವರು. ಅವರು ಸದಾಚಾರನಿಷ್ಠರು, ಸರಳರು. ಒಂದು ಮಹಾಕಾವ್ಯದ ಅಂತರಂಗವನ್ನು ಅನುಭವದಿಂದ ತಿಳಿಯಬೇಕಾದರೆ ಯಾವ ಮನಃಪ್ರಸಾದವೂ ತತ್ತ್ವನಿಷ್ಠೆಯೂ ಪ್ರಥಮ ಸಿದ್ಧತೆಗಳೋ ಅವೆರಡನ್ನೂ ಅವರಲ್ಲಿ ನಾನು ಕಂಡಿದ್ದೇನೆ.

ರಾಮಾಯಣವನ್ನು ಭಾಷಾಂತರ ಮಾಡುವುದು ಸುಲಭದ ಕೆಲಸವಲ್ಲ. ಮೂಲ ಗ್ರಂಥದ ಪಾಠಾಂತರಗಳಲ್ಲಿ ಉತ್ತಮವಾವುದೆಂಬುದನ್ನು ನಿಶ್ಚಯ ಮಾಡುವುದು ಮೊದಲನೆಯ ಕಷ್ಟ. ಆರಿಸಿಕೊಂಡ ಪಾಠಕ್ಕೆ ನಾನಾ ವ್ಯಾಖ್ಯಾನಗಳು ನಾನಾ ವಿಧವಾಗಿ ಅರ್ಥ ಹೇಳುವಾಗ ಯಾವುದು ಗ್ರಾಹ್ಯವೆಂಬುದು ಎರಡನೆಯ ಕಷ್ಟ. ಇದೂ ಆದಮೇಲೆ ಅದಕ್ಕೆ ತಕ್ಕ ಕನ್ನಡ ಶಬ್ದ ಸಾಮಗ್ರಿಯನ್ನೂ ವಾಕ್ಯ ಶೈಲಿಯನ್ನೂ ಅಳವಡಿಸಿ ಕೊಳ್ಳುವುದು ಬಲು ದೊಡ್ಡ ಕಷ್ಟ. ಮಾತಿಗೆ ಪ್ರತಿಮಾತನ್ನಿಡುವುದು ಭಾವಾನು ವಾದವಲ್ಲ. ಸಂಸ್ಕೃತ ಬಲ್ಲವರಿಗೆ ಸಂಸ್ಕೃತ ಮೂಲದಿಂದ ಎಂಥ ಸರಳತೆಯ, ಎಂಥ ಪದಮಾಧುರ್ಯದ, ಯಾವ ಸನ್ನಿವೇಶ ಚಿತ್ರದ ಯಾವ ಗಂಭೀರಾರ್ಥದ ಅನುಭವ ವಾಗುತ್ತದೆಯೋ ತತ್ಸದೃಶವಾದ ಅನುಭವವು ಕನ್ನಡಿಗರಾದ ಓದುಗರಿಗೆ ಅಷ್ಟು ಸುಲಭವಾಗಿ ಆಗಬೇಕೆಂಬುದಲ್ಲವೆ ಉದ್ದೇಶ ? ಇದು ಬಹುವಾಗಿ ಬುದ್ಧಿಶ್ರಮ ವನ್ನಪೇಕ್ಷಿಸುತ್ತದೆ. ರಸವಿವೇಕವನ್ನಪೇಕ್ಷಿಸುತ್ತದೆ. ಕಾವ್ಯವನ್ನು ಕಾವ್ಯವಾಗಿ ಪರಿವರ್ತಿಸುವುದಲ್ಲವೆ ನಮಗೆ ಬೇಕಾದದ್ದು ? ವಿದ್ವಾನ್ ರಂಗನಾಥ ಶರ್ಮರವರು ಸುಮಾರು ಆರು ವ್ಯಾಖ್ಯಾನಗಳನ್ನು ಪರಿಶೀಲಿಸಿ ಅಲ್ಲಿ ದೊರೆತದ್ದನ್ನು ಸ್ವತಂತ್ರ ವಿಮರ್ಶೆಯಿಂದ ನೋಡಿ ಅರ್ಥನಿಷ್ಕರ್ಷೆ ಮಾಡಿದ್ದಾರೆ. ಎಷ್ಟೋ ಸಾರಿ ತಮಗೆ ಶಂಕೆ ಉಳಿದುಕೊಂಡಾಗ ನನ್ನೊಡನೆಯೂ ಇತರ ಮಿತ್ರರೊಡನೆಯೂ ವಿಚಾರ ನಡೆಸಿದ್ದಾರೆ. ಹೀಗೆ ಪ್ರಯಾಸ ಸಿದ್ಧವಾದದ್ದು ರಾಮಾಯಣ ಭಾಷಾನುವಾದ,

ಶ್ರೀ ರಂಗನಾಥ ಶರ್ಮರ ಕನ್ನಡ ಬರಿಯ ತರ್ಜುಮೆಯಲ್ಲ. ಸ್ವತಂತ್ರ ಪ್ರಸನ್ನವಾದದ್ದು. ಕನ್ನಡದಲ್ಲಿ ವ್ಯಾಕರಣದ ಕಡೆ ಹೆಚ್ಚು ಗಮನವಿಟ್ಟರೆ ವಾಕ್ಯವು ಪೆಡಸಾಗುತ್ತದೆ. ಸುಲಭತೆಯ ಕಡೆ ನೋಡಿದರೆ ವಾಕ್ಯವು ದುರ್ಬಲವಾಗುತ್ತದೆ. ಪಾಂಡಿತ್ಯದ ಅತಿಯೂ ಪಾಮರತೆಯ ಅತಿಯೂ ಇಲ್ಲದಂತೆ ಬರೆಯುವುದು ಕನ್ನಡದಲ್ಲಿ ಬಲು ಕಷ್ಟ. ನಾಲ್ಕು ಬಗೆಯ ವಾಕ್ಯರಚನೆ ಸಾಧ್ಯವಾಗಿರುವಾಗ ಅದರಲ್ಲಿ ಯಾವುದು ರಸಪೋಷಕವೆಂದು ಶ್ರೀ ರಂಗನಾಥ ಶರ್ಮರು ಹುಡುಕಿ ತಿಳಿದಿದ್ದಾರೆ. ಅವರ ವಾಕ್ಪ್ರವಾಹದಲ್ಲಿ ಸಹಜತೆ, ಲಾಲಿತ್ಯ, ವೈಶದ್ಯ, ಗಾಂಭೀರ್ಯ, ಓಜಸ್ಸು – ಈ ಗುಣಗಳು ಪ್ರಕಾಶಮಾನವಾಗಿವೆ. ಅವರ ಮುಖ್ಯ ದೃಷ್ಟಿ ರಸಪುಷ್ಟಿಯ ಕಡೆ. ಮಾತು ಮಾತೂ ಅದಕ್ಕೆ ಸಹಾಯವಾಗಿದೆ. ಒಳ್ಳೆಯ ಕನ್ನಡ ಹೇಗಿರುತ್ತದೆಂದು ಕೇಳುವವರಿಗೆ ಇದು ನಾನು ತೋರಿಸುವ ಮಾದರಿ.

ಶ್ರೀ ರಂಗನಾಥ ಶರ್ಮರಲ್ಲಿ ನನಗೆ ಕಾಣುವ ಒಂದು ವಿಶೇಷ ಗುಣವೆಂದರೆ ಅವರ ಋಜ್ವರ್ಥ ಗ್ರಹಣ. ರಾಮಾಯಣ ವ್ಯಾಖ್ಯಾನ ಕರ್ತರೂ ಇತರ ಕಾವ್ಯ ವ್ಯಾಖ್ಯಾತರೂ ಎಷ್ಟೋ ವೇಳೆ ಅತಿಯುಕ್ತಿಗೆ ಹೋಗಿದ್ದಾರೆ, ಅಕ್ಷರವನ್ನು ಹಿಗ್ಗಾಮುಗ್ಗಾ ಎಳೆದಾಡಿ ಅಪೂರ್ವ ಸಾರಸ್ಯ, ವಿಚಿತ್ರ ರಹಸ್ಯಗಳನ್ನು ಹೊರಕ್ಕೆ ತರಲು ಯತ್ನಿಸಿದ್ದಾರೆ. ಈ ಪ್ರಯತ್ನದಲ್ಲಿ ಅವಶ್ಯವಾದ ಶಬ್ದಪಾಂಡಿತ್ಯವೂ ತರ್ಕ ಚಮತ್ಕಾರವೂ ಮೂಲ ಗ್ರಂಥದ ಸರಳವೂ ಅಕೃತಕವೂ ಆದ ಭಾವವನ್ನು ಮುಳುಗಿಸಿ ಕೈಗೆ ದೊರೆಯದಂತೆ ಮಾಡುತ್ತದೆ. ಶರ್ಮಾ ಅವರ ವಿದ್ವತ್ತಿಗೆ ಇಂಥಾ ಕೃತಕ ವ್ಯಾಖ್ಯಾನ ಅಸಾಧ್ಯವಾದದ್ದಲ್ಲ. ಆದರೆ ಅವರ ಸ್ವಭಾವದ ಒಲವು ಋಜುತೆಯ ಕಡೆಗೆ. ಅವರು ಒಣ ವಿದ್ವಾಂಸರಲ್ಲ. ವಿದ್ವದ್ರಸಿಕರು. ಆರ್ದ್ರ ಹೃದಯರು, ಅಳಬಲ್ಲವರು, ನಗಬಲ್ಲವರು, ಕನಿಕರಿಸಬಲ್ಲವರು. ಮತ್ತೊಬ್ಬರ ಹೃದ್ಭಾವವನ್ನು ಊಹಿಸಿ ಅನುಭವಿಸಬಲ್ಲವರು. ಇಂಥವರು ಮಾಡಿದ ವಾಲ್ಮೀಕಿ ಕಾವ್ಯಾನುವಾದವು ಭಾವ ವೈಶದ್ಯದಿಂದಲೂ ರಸಪುಷ್ಟಿಯಿಂದಲೂ ಆದರಣೀಯವಾಗುವುದು ಸ್ವಾಭಾವಿಕವೇ ಆಗಿದೆ.

ರಂಗನಾಥ ಶರ್ಮರವರು ಪದವೈವಿಧ್ಯವನ್ನು ತೋರಿಸುವುದರಲ್ಲಿಯೂ ಮೂಲದ ನವುರುಗಳನ್ನು ಕನ್ನಡಕ್ಕಿಳಿಸುವುದರಲ್ಲಿಯೂ ಪರಿಣತರಾಗಿದ್ದಾರೆ. ಕನ್ನಡ ಮಹಾಜನರು ಅವರ ಈ ರಸವತ್ಪಾಂಡಿತ್ಯದ ಪ್ರಯೋಜನವನ್ನು ಪಡೆದು ಅವರಿಂದ ಸಂಸ್ಕೃತದ ಇತರ ಸಾಹಿತ್ಯ ರತ್ನಗಳನ್ನು ಕನ್ನಡಕ್ಕೆ ರೂಪಾಂತರ ಮಾಡಿಸಿ ಸಂತೋಷಿಸಲಿ ಎಂದು ಹಾರೈಸುತ್ತೇನೆ.

ಪರಮಾತ್ಮನು ಅವರಿಗೆ ಸಮಸ್ತ ಶುಭಗಳನ್ನೂ ಕರುಣಿಸಲಿ.

(ಶ್ರೀಮದ್ರಾಮಾಯಣ ಕನ್ನಡ ಅನುವಾದ ಗ್ರಂಥಗಳಿಗೆ ಬರೆದ ಮುನ್ನುಡಿಗಳಿಂದ ಸಂಗ್ರಹಿಸಿದ್ದು)

ಋಜುಮಾರ್ಗದರ್ಶಿ

ಡಿ. ಆರ್. ವೆಂಕಟರಮಣನ್

"ಪ್ರತಿಯೊಬ್ಬ ಮನುಷ್ಯನೂ ರಾಜಕೀಯಕ್ಕೆ ಇಳಿಯಲು ಸಾಧ್ಯವಿಲ್ಲ. ಅದೊಂದೇ ದೇಶಸೇವೆಯ ಮಾರ್ಗವೂ ಅಲ್ಲ, ಹೇಳಿಕೆಗಳನ್ನು ಹೊರಡಿಸುವುದರಿಂದಲಾಗಲಿ, ವೇದಿಕೆಯ ಮೇಲೆ ಅಖಂಡ ಭಾಷಣ ಮಾಡುವುದರಿಂದಲಾಗಲಿ ಏನೂ ಪ್ರಯೋಜನವಾಗದು. ಪ್ರತಿಯೊಬ್ಬನೂ ತನ್ನ ಪಾಲಿನ ಕರ್ತವ್ಯವನ್ನು ನಿರ್ವಂಚನೆಯಿಂದ ನಡೆಸಿದರೆ ಸಾಕು. ಅಧಿಕಾರಿಗಳು, ಉಪಾಧ್ಯಾಯರು, ವರ್ತಕರು, ರೈತರು ಮೊದಲಾಗಿ ಪ್ರತಿಯೊಬ್ಬ ಪುರುಷನೂ ಆಲಸ್ಯವಿಲ್ಲದೆ ಮನಸ್ಸಿಟ್ಟು ಆತ್ಮಸಾಕ್ಷಿಯಾಗಿ ತನ್ನ ಕರ್ತವ್ಯನ್ನು ಪಾಲಿಸಿದರೆ ಸಾಕು. ಸ್ವಾರ್ಥವೂ ಆಯಿತು, ಪರಾರ್ಥವೂ ಆಯಿತು. "ನಿಸ್ವಾರ್ಥ ಸೇವೆ" "ಕರ್ಮ ಯೋಗ" ಮೊದಲಾದ ಶಬ್ದಗಳು ಸಾಮಾನ್ಯ ಜನತೆಗೆ ಅರ್ಥವಾಗದ ಮಾತು. ಸಾಮೂಹಿಕವಾಗಿ ಅಂತಹ ಆಚರಣೆಯು ಎಂದಿಗೂ ಬರದು. ಸ್ವಾರ್ಥವಿಲ್ಲದೆ ಕೆಲಸ ಮಾಡುವವರ ಸಂಖ್ಯೆ ವಿರಳ. ನಮ್ಮ ನಾಯಕರು ಆ ಬಗೆಯ ಬೋಧನೆ ಮಾಡುವುದನ್ನು ಬಿಡಬೇಕು. ಅನುಭವಕ್ಕೆ ಬಾರದ ಅರ್ಥವಾಗದ ದೊಡ್ಡ ದೊಡ್ಡ ಶಬ್ದಗಳನ್ನಾಡಿದರೆ ಪ್ರಯೋಜನವಾಗದು. ಪರಾರ್ಥವಿಲ್ಲದ ಕೇವಲ ಸ್ವಾರ್ಥವು ಮಾತ್ರ ಬೇಡ. ಸಾಮಾನ್ಯ ಮನುಷ್ಯನು ದೇಶಕ್ಕಾಗಿ ಹೊರಲಾರದ ಹೊರೆಯನ್ನೇನೂ ಹೊರಬೇಕಾಗಿಲ್ಲ. ದೇಶದಲ್ಲಿ ಸೋಮಾರಿಗಳಿಲ್ಲದೆ ಪ್ರತಿಯೊಬ್ಬನೂ ಕಾರ್ಯೋನ್ಮುಖನಾಗುವಂತೆಯೂ ತನ್ನ ಕರ್ತವ್ಯಗಳನ್ನು ಶಿಸ್ತು ನಿಯಮಗಳಿಂದ ವಂಚನೆಯಿಲ್ಲದೆ ಮಾಡುವಂತೆಯೂ ಪ್ರಜಾಸರ್ಕಾರಗಳೂ ಪ್ರಜಾಪ್ರತಿನಿಧಿಗಳೆನಿಸುವ ನಾಯಕರೂ ಪ್ರಯತ್ನಿಸಿದರೆ ನಿಸ್ಸಂದೇಹವಾಗಿ ಈ ಸ್ವಾತಂತ್ರ್ಯವನ್ನು ಳಿಸಿಕೊಳ್ಳುವೆವು."

—ಇದು ಶ್ರೀ ರಂಗನಾಥಶರ್ಮರು "ಸ್ವಾತಂತ್ರ್ಯ ಶಿಶು" ಎಂಬ ಶೀರ್ಷಿಕೆಯಲ್ಲಿ 20-8-1948ರ "ಕನ್ನಡ ನುಡಿ"ಯಲ್ಲಿ ಬರೆದ ಲೇಖನದ ಒಂದು ಭಾಗ.

ಈ ಮೇಲಿನ ಮಾತುಗಳು ಭಗವದ್ವಾಣಿಯ ಸರಳವಾದ ವ್ಯಾಖ್ಯಾನ ಎನ್ನಬಹುದು.

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥

ಇದು ಶರ್ಮರ ವ್ಯಕ್ತಿತ್ವಕ್ಕೆ ಬುನಾದಿ. ಅವರೇ ತಮ್ಮ ಸ್ವಕರ್ಮವಾದ ಅಧ್ಯಯನ ಅಧ್ಯಾಪನ ಗೃಹಸ್ಥಾಶ್ರಮದ ಕರ್ತವ್ಯಗಳನ್ನು ನಿಷ್ಠೆಯಿಂದ ಪರಿಪಾಲಿಸಿ ಕೃತ್ಯ ಕೃತ್ಯರಾಗಿದ್ದಾರೆ.

* * *

ಮೇಲೆ ಹೇಳಿದ ಲೇಖನದಲ್ಲಿ ಸ್ವಾತಂತ್ರ ಶಿಶು ಹುಟ್ಟಿದಾಗ ಹೇಗೆ ದೇಶ ಇಬ್ಭಾಗ ವಾಯಿತು ಎಂಬುದನ್ನು ಸೂಚಿಸಿದ್ದಾರೆ. ಈ ಘಟನೆ ಅವರಿಗೆ ದುಃಖವನ್ನು ತಂದು ಅವರ ಮನಸ್ಸಿನಲ್ಲಿ ಊರಿ ಹೋಗಿದೆಯೆನ್ನಬೇಕು. ಏಕೆಂದರೆ 'ಏಕಚಕ್ರಂ' ನಾಟಕದಲ್ಲಿ ಬರುವ ಕುಂತಿಯ ಮಾತುಗಳು : "ದ್ವಿಧಾ ವಿಭಕ್ತಂ ತು ಭಾರತ ಸಾಮ್ರಾಜ್ಯಂ, ದಾಯಾದ ಮಾತ್ಸರ್ಯೇಣ ಕೇವಲಂ", ಅವರಲ್ಲಿ ಆಗಿದ್ದ ಆ 1947ರ ಘಟನೆಯ ಸಂಕಟ ಇನ್ನೂ ಆರಿಲ್ಲ ಎಂಬುದನ್ನು ತೋರಿಸುತ್ತದೆ.

ಅಂಥಾದ್ದು ಅವರ ದೇಶಭಕ್ತಿ.

ಅವರು ಭಾರತ ದೇಶವನ್ನು ಕುರಿತು ಬರೆದಿರುವ ಪದ್ಯಗಳಲ್ಲಿ ಈ ದೇಶಭಕ್ತಿ ಎಷ್ಟು ಉಜ್ವಲವಾಗಿದೆ ಎಂಬುದನ್ನು ಕಾಣಬಹುದು, ಉದಾಹರಣೆಗೆ ಎರಡು ಪದ್ಯಗಳನ್ನು ನೋಡಬಹುದು :

ಗಿರಿವನ ಜಲ ಪುಷ್ಪೈಃ ಸರ್ವತಃ ಶೋಭಮಾನಾ
ಮೃದುವಹ ಪವಮಾನಾ ಪಾವನೀ ರತ್ನ ಗರ್ಭಾ ।
ಶುಭ ಚರಿತ ವಿಧಾತ್ರೀ ಧರ್ಮಶಾಂತ್ಯೋಃ ಸವಿತ್ರೀ
ಮಮ ಹೃದಯಮುಪಾಸ್ತೇ ಸೌಖ್ಯ ದಾತ್ರೀ ಪ್ರಜಾನಾಮ್ ॥
(ಏಕಚಕ್ರಂ 1-1)

ಹೇ ಭಾರತಾಂಬ ಜನನಿ ಪ್ರಥಮೋ ಪ್ರಸೂನಾಂ
ತ್ವಾಮಾಮನಂತಿ ಮುನಯಃ ಕಿಲ ಕರ್ಮಭೂಮಿಮ್ ।
ಯಾಚೇ ಪುನರ್ಭಗವತೀಂ ಮಮಜನ್ಮ ಭೂಯಾತ್ ।
ಭೂಯೋಽಪಿ ದೇವಿ ತವ ಗರ್ಭಸುಧಾಂಬುರಾಶೌ ॥

ಶರೀರೇ ಮೇಽನ್ತಸ್ಥಂ ರುಧಿರ ಕಣಮೇಕೈಕಮಪಿ ತೇ
ಕೃಪಾಲೇಶೋ ವ್ಯಾಪ್ತಃ ಕಿಮಪರಮಭಿ ಧಾಸ್ಯೇ ಭಗವತಿ
ಗೃಹಂ ವಸ್ತ್ರಂ ವ್ಯಾನ್ನಂ ಸಕಲಮಪಿ ಸೌಖ್ಯಂ ತವವಶೇ
ಅಹೋ ಮೇ ಸೌಭಾಗ್ಯಂ ತದುಪರಿ ಚ ವಿದ್ಯಾ ಶುಭಕರೀ ॥

(ಮಾತೃಭೂಮಿಃ ಎಂಬ ಪದ್ಯದಿಂದ)

ಇವು ಕವಿಯ ಹೃದಯದಿಂದ ಬಂದ ಮಾತುಗಳು, ಮಾಮೂಲಾದ ಮಾತುಗಳಲ್ಲ.

* * *

"ವ್ಯಾಕರಣ ಮೂಲತ್ವಾತ್ ಸರ್ವವಿದ್ಯಾನಾಂ" ಎಂದು ಹೇಳಿರುವಂತೆ ಎಲ್ಲ ಶಾಸ್ತ್ರಗಳ ಬೀಗದ ಕೈಗಳನ್ನು ತಾವು ಸಂಪಾದಿಸಿಕೊಂಡಿದ್ದರೂ ಶರ್ಮರದು ಎಲ್ಲ ತಮಗೆ ಸ್ವಾಧೀನವಾಗಿ ಬಿಟ್ಟಿದೆಯೆಂಬ ಧೋರಣೆಯಲ್ಲ. ಅವರು ತಿಳಿವಳಿಕೆಯ ವಿಷಯದಲ್ಲಿ ಪರಮ ಪ್ರಾಮಾಣಿಕರು. ಅವರು ಶಾಸ್ತ್ರ ವಿಷಯದಲ್ಲಿ ಹೇಳುವ ಈ ಮಾತುಗಳು ಈ ಗುಣವನ್ನು ಎತ್ತಿ ತೋರಿಸುತ್ತವೆ.

"ಸರ್ವಂ ಬ್ರಹ್ಮಮಯಂ ಜಗತ್" ಎಂಬ ಅಧ್ಯಾತ್ಮ ತತ್ತ್ವವನ್ನರಿಯುವುದು ಅತ್ಯಂತ ಕಠಿನವಾದುದು. ತರ್ಕ ಕರ್ಕಶವಾದ ಜಟಿಲ ಭಾಷೆಯಿಂದ ಅದನ್ನು ಪರಿಷ್ಕರಿಸುತ್ತ ಹೋದರೆ ಪ್ರಮೇಯವಾದ ತತ್ವವು ಹಿಂದುಳಿದು ವೇದಾಂತವು ಮತ್ತಷ್ಟು ಕಠಿನವಾಗಿ ದುರ್ಬೋಧವಾಗುತ್ತದೆ. ಮುಮುಕ್ಷುಗಳಿಗೆ ಅದರಿಂದ ಯಾವ ಪ್ರಯೋಜನವೂ ದೊರೆಯದು. ವಾದ ಕುತೂಹಲಿಗಳಿಗೆ ವಾಗ್ವೈಖರಿಯನ್ನು ಮೆರೆಸಲು ಮಾತ್ರ ಪುಷ್ಕಳವಾದ ಅವಕಾಶವು ದೊರೆಯುತ್ತದೆ. ಆದರಿಂದ ಶಾಸ್ತ್ರಾರಣ್ಯದಲ್ಲಿ ದಾರಿ ತಪ್ಪಿಹೋಗುವ ಸಂಭವವೇ ಹೆಚ್ಚು. ಶಮ, ದಮ, ತಿತಿಕ್ಷೆ ಮುಂತಾದ ಉನ್ನತ ಗುಣಗಳಿಗೆ ಬದಲಾಗಿ ಆತ್ಮೋದ್ಧಾರಕ್ಕೆ ಅಡ್ಡಿಯಾಗುವ ಅವಿನಯ, ಔದ್ಧತ್ಯ, ಅಹಂಕಾರ ಮುಂತಾದ ರಾಜಸ ಗುಣಗಳು ಬೆಳೆಯುವ ಸಂಭವವೇ ಅಧಿಕ, ಇಂತಹ ಕರ್ಕಶ ಮತಿಗಳು ವೇದಾಂತದಿಂದ ಯಾವ ಉಪಯೋಗವನ್ನು ಪಡೆದಾರು? ಇದರಿಂದ ಜನರು ಯಾವ ಬಗೆಯಲ್ಲಿ ಕೃತಕೃತ್ಯರಾದಾರು ?"

ಹೀಗೆ ಶರ್ಮರು ಶಾಸ್ತ್ರದಲ್ಲಿ ಅನುಭವಕ್ಕೆ ಬರುವ ಋಜ್ವರ್ಥ ಗ್ರಹಣ ಮಾಡಲು ಹೊರಟವರು. ಇದಕ್ಕೆ ಉದಾಹರಣೆಯಾಗಿ ಅವರು ಶ್ರೀಮದ್ಭಾಗವತದ ಏಕಾದಶ-ದ್ವಾದಶ ಸ್ಕಂಧಗಳ ಕನ್ನಡ ಅನುವಾದಕ್ಕೆ ಪ್ರಸ್ತಾವನೆಯಾಗಿ ಬರೆದಿರುವ ಮಾತುಗಳಲ್ಲಿ ಕೆಲವು ಭಾಗಗಳನ್ನು ನೋಡಬಹುದು :

"ಸೃಷ್ಟ್ವೇದಂ ಮನಸಾ ವಿಶ್ವಮಾತ್ಮನಾನುಪ್ರವಿಶ್ಯ ಯಃ ।
ಗುಣೈಃ ಕುರ್ವದ್ಭಿರಾಭಾತಿ ಕರ್ತೇವ ಸ್ವಪ್ನದೃಗ್ಯಥಾ ॥" (12-10-31)

"ಮನಸ್ಸಿನಿಂದ ಈ ವಿಶ್ವವನ್ನು ಸೃಷ್ಟಿಮಾಡಿ ತಾನು ಅದರೊಳಗೆ ಅನುಪ್ರವೇಶಿಸಿ ಕರ್ತವ್ಯಗಳಾದ ಸತ್ತ್ವಾದಿ ಗುಣಗಳ ಮೂಲಕ, ಕನಸು ಕಾಣುವವನ ಹಾಗೆ, ತಾನೆ ಕರ್ತೃವೋ ಎಂಬಂತೆ ತೋರಿಸಿಕೊಳ್ಳತಕ್ಕವನು ನೀನು."

ಇಲ್ಲಿ ವಿಶ್ವದ ಸೃಷ್ಟಿ "ಮನಸ್ಸಿನಿಂದ" ಎಂದಿದೆ. ಮಾನಸ ಸೃಷ್ಟಿ ಐಂದ್ರಜಾಲಿಕವೋ ಸತ್ಯವೋ ಎಂಬುದು ವಿಚಾರಾರ್ಹವಾದದ್ದು. ಸೃಷ್ಟಿಸ್ಥಿತಿ ಸಂಹಾರಗಳನ್ನು ಪರಮಾತ್ಮನು ಮಾಯೆಯಿಂದ ನಡೆಸುತ್ತಾನೆಂದು ಭಾಗವತದ ಹಲವಾರು ಸ್ಥಳಗಳಲ್ಲಿ ವರ್ಣನೆ ಇದೆ. ಇಂತಹ ಸಂದರ್ಭಗಳಲ್ಲಿ ಮಾಯೆಯೆಂಬ ಶಬ್ದ ಈ ಗ್ರಂಥದಲ್ಲಿ ನೂರಾರು ಸಲ ಬಂದಿದೆ. ಮಾಯೆಯಿಂದಾದ ಮಾನಸ ಸೃಷ್ಟಿಯ ಸ್ವರೂಪವೇನು ? ಪ್ರತಿಯೊಂದು ಕಾರ್ಯವೂ ಬುದ್ಧಿಪೂರ್ವಕವಾಗಿ ನಡೆಯುವುದರಿಂದ ಮನಸ್ಸಿನ ಸಹಕಾರವು ಸರ್ವತ್ರ ಇದ್ದೇ ಇರುತ್ತದೆ. ಆದ್ದರಿಂದ 'ಮನಸಾ' ಎಂದು ಮತ್ತೆ ಹೇಳಬೇಕಾಗಿಲ್ಲ. ಗುಣಗಳು ಕರ್ತೃಗಳೆಂದೂ ಅನುಪ್ರವೇಶಿಸಿದವನು ಕರ್ತೃವಿನಂತೆ ತೋರುತ್ತಾನೆಂದೂ ಹೇಳಿದೆ. ಮತ್ತು ಆತನು ಕನಸು ಕಾಣುವವನಂತೆ ಇದ್ದಾನೆಂದೂ ವರ್ಣನೆ ಇದೆ. ಮನಸ್ಸಿನಿಂದ ಸೃಷ್ಟಿಸಿ, ಅನುಪ್ರವೇಶಿಸಿ, ಕರ್ತೃವೋ ಎಂಬಂತೆ ಕನಸು ಕಾಣತಕ್ಕವನು ಯಾರು ?"

ಇದು ಶರ್ಮರು ವಿಚಾರ ಮಾಡುವ ರೀತಿ.

ಇನ್ನು ಋಜ್ವರ್ಥಗ್ರಹಣಕ್ಕೆ ನಮಗಿರುವ ಅಡ್ಡಿಗಳೇನು ಎಂದು ಅವರು ಹೇಳುವ ಮಾತುಗಳು ವೇದಾಂತಾಭ್ಯಾಸಿಗಳೂ ಸಾಹಿತ್ಯಾಭ್ಯಾಸಿಗಳೂ ಚಿಂತಿಸಬೇಕಾದವು :

"ವೇದಾಂತ ದರ್ಶನದಲ್ಲಿ ದ್ವೈತ, ವಿಶಿಷ್ಟಾದ್ವೈತ, ಅದ್ವೈತ—ಎಂಬ ಮೂರು ಸಂಪ್ರದಾಯಗಳು ಪ್ರಸಿದ್ಧವಾದವು. ನಾವು ಇವುಗಳಲ್ಲೊಂದು ಸಂಪ್ರದಾಯದ ಚೌಕಟ್ಟಿನೊಳಗೆ ಗಟ್ಟಿಯಾಗಿ ಕಟ್ಟಿಹಾಕಿಕೊಂಡಿರುತ್ತೇವೆ. ಉಪನಿಷತ್ತು, ಭಗವದ್ಗೀತೆ, ಬ್ರಹ್ಮಸೂತ್ರ, ಶ್ರೀಮದ್ಭಾಗವತ—ಇವುಗಳಲ್ಲಿ ನಮ್ಮ ಸಂಪ್ರದಾಯಕ್ಕೆ ಅನುಗುಣವಾದ ಅಂಶಗಳನ್ನೇ ಹುಡುಕುತ್ತೇವೆ. ಅಲ್ಲಿರುವ ಶಬ್ದಗಳನ್ನು ಯಥೇಚ್ಛವಾಗಿ ಎಳೆದು ನಮ್ಮ ಸಿದ್ಧಾಂತವೇ ಅಲ್ಲಿದೆಯೆಂಬ ಆಗ್ರಹಕ್ಕೆ ಒಳಗಾಗುತ್ತೇವೆ. ಇದೇ ಆಗ್ರಹವನ್ನು ಸಾಂಖ್ಯ ವೈಶೇಷಿಕಾದಿ ದರ್ಶನಗಳಲ್ಲಿ ನಾವು ತೋರಿಸುವುದಿಲ್ಲ. ನಮಗೆ ಅಭಿನಿವೇಶವಿಲ್ಲದ ತಟಸ್ಥ ದರ್ಶನಗಳು ಅವು ! ತಟಸ್ಥ ದೃಷ್ಟಿಯಿಂದಲೇ ಆ ಗ್ರಂಥಗಳ ಪ್ರಮೇಯವನ್ನೂ ಗುರುತಿಸುತ್ತೇವೆ. ವೇದಾಂತ ದರ್ಶನಕ್ಕೆ ಬಂದೊಡನೆ ನಮ್ಮ ತಟಸ್ಥ ದೃಷ್ಟಿ ಹಾರಿ ಹೋಗುತ್ತದೆ ! ಸ್ವತ್ವವೆಂಬ ಅಭಿಮಾನ ಎದ್ದು ನಿಂತಾಗ ಲೌಕಿಕ ವ್ಯವಹಾರದಲ್ಲಿ ಹೇಗೋ ಹಾಗೆ, ಸತ್ಯದೃಷ್ಟಿಗೆ ವ್ಯಾಮೋಹ ಮುಸುಕಿಕೊಳ್ಳುತ್ತದೆ."

"ತಟಸ್ಥ ದೃಷ್ಟಿಯನ್ನು ನಾವು ಬೆಳೆಸಿಕೊಂಡಿಲ್ಲ. ಯಾವ ಪೂರ್ವಗ್ರಹವನ್ನು ಇಟ್ಟುಕೊಳ್ಳದೆ, ಗ್ರಂಥವು ಏನು ಹೇಳುತ್ತದೆಯೆಂಬುದನ್ನು ನಾವು ನೋಡುವುದಿಲ್ಲ.

ನಮ್ಮ ಅಭಿಪ್ರಾಯವನ್ನೇ ಗ್ರಂಥದೊಳಗೆ ತುರಕಲು ಪ್ರಯತ್ನಿಸುತ್ತೇವೆ. ಗ್ರಂಥದಲ್ಲಿರುವ ವಾಕ್ಯಗಳನ್ನು ಎಳೆದಾಡಿ ನಮ್ಮ ಅಭಿಪ್ರಾಯಕ್ಕೆ ತಿರುಗಿಸಲು ಹೋಗುತ್ತೇವೆ."

ನಿಜವಾದ ತತ್ತ್ವಾನ್ವೇಷಕನು ಇಂದಿನ ಪರಿಸ್ಥಿತಿಯನ್ನು ಕಂಡು ಕಾತರವನ್ನು ವ್ಯಕ್ತಪಡಿಸುವ ಮಾತುಗಳು ಇವು. ಇವು ಚಿಂತಕನೊಬ್ಬನ ಮಾತುಗಳು. ಸತ್ಯ ದೃಷ್ಟಿಯನ್ನು ಬೆಳೆಸಿಕೊಳ್ಳಬೇಕೆಂಬ ಪ್ರಾರ್ಥನೆ ಇದು.

* * *

ಸೌಮ್ಯ ಮೂರ್ತಿಯಾದ ಶರ್ಮರು ಶಾಸ್ತ್ರದ ವಿಚಾರ ಬಂದಾಗ ಹುಲಿಯಾಗುತ್ತಾರೆ. ಆಗ ಅವರ ಅಧ್ಯಯನ ಎಷ್ಟು ವಿಶಾಲವೂ ಆಳವೂ ಆದುದು, ಆ ಶಾಸ್ತ್ರವಾಕ್ಯ ಹೇಗೆ ಅನುಭವದಲ್ಲಿ ಅನ್ವಯವಾಗಬೇಕಾದದ್ದು ಎಂಬೆಲ್ಲ ವಿಷಯಗಳೂ ಅವರ ವಾದದಲ್ಲಿ ಸೇರಿರುತ್ತವೆ. ಇದಕ್ಕೆ ಉದಾಹರಣೆಯಾಗಿ ಈ ಕೆಳಕಂಡ ಲೇಖನಗಳನ್ನು ನೋಡಬಹುದು :

1) ನಾಗವರ್ಮನ ಕಾವ್ಯಲಕ್ಷಣ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸೆಪ್ಟೆಂಬರ್ 1973.
2) ಕರುಣರಸ, ಕನ್ನಡನುಡಿ, 1-5-1974
3) ರೀತಿರಾತ್ಮಾ ಕಾವ್ಯಸ್ಯ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಡಿಸೆಂಬರ್ 1974
4) ಗಮಕ ಸಮಾಸ-ಒಂದು ಸಮೀಕ್ಷೆ, ಲೋಚನ, ಜೂನ್ 1985

* * *

ಶರ್ಮರು ಶ್ರೀಮದ್ವಾಲ್ಮೀಕಿ ರಾಮಾಯಣದ ಏಳು ಕಾಂಡಗಳನ್ನೂ, ಶ್ರೀಮದ್ಭಾಗವತದ ದಶಮ, ಏಕಾದಶ, ದ್ವಾದಶ ಸ್ಕಂಧಗಳನ್ನು, ವಿಷ್ಣು ಪುರಾಣವನ್ನು ಸಂಪೂರ್ಣವಾಗಿಯೂ, "ಶ್ರುತಿಸಾರ ಸಮುದ್ಧರಣ" ಎಂಬ ವೇದಾಂತ ಗ್ರಂಥವನ್ನೂ ಕನ್ನಡಕ್ಕೆ ತಂದು ತುಂಬ ಉಪಕಾರ ಮಾಡಿದ್ದಾರೆ.

ಭಾಷಾಂತರ ಒಂದು ಕಲೆ. ಅದರಲ್ಲೂ ಒಂದು ಭಾಷೆಯಲ್ಲಿರುವ ಕಾವ್ಯವನ್ನು ಇನ್ನೊಂದು ಭಾಷೆಗೆ ತರುವುದೆಂದರೆ ಅದು ತುಂಬ ಕಷ್ಟಸಾಧ್ಯವಾದ ಮಾತು. ಈ ಕಲೆ ಶರ್ಮರಿಗೆ ಸಿದ್ಧಿಸಿದೆ. ಅವರು ಇದಕ್ಕೆ ಬೇಕಾದ ಮೂಲ ತತ್ತ್ವಗಳನ್ನು ನಿರ್ಧರಿಸಿಕೊಂಡಿದ್ದಾರೆ.

ಅವರು ಹೇಳುತ್ತಾರೆ : "ಶ್ಲೋಕದಲ್ಲಿರುವ ಯಾವ ವಿಷಯವನ್ನೂ ಕೈಬಿಡಬಾರದು. ಹೊಸದಾಗಿ ಕೈಯಿಂದ ಸೇರಿಸಬಾರದು. ಏನಾದರೂ ಹೇಳುವದಿದ್ದರೆ ಟಿಪ್ಪಣಿಯಲ್ಲಿಯೋ ಅನುಬಂಧದಲ್ಲಿಯೋ ಬರಬೇಕು. ಕನ್ನಡದ ಜಾಯಮಾನವನ್ನನುಸರಿಸಿ ವಾಕ್ಯರಚನೆ ಭಿನ್ನವಾದರೂ ಶ್ಲೋಕದ ತಾತ್ಪರ್ಯಕ್ಕೆ ಕುಂದಾಗಬಾರದು —ಇವು ನಾನು ಅನುಸರಿಸಿದ ಅನುವಾದ ಸೂತ್ರಗಳು. ಈಗ ಬಳಕೆಯಲ್ಲಿರುವ ಕನ್ನಡ ಶೈಲಿಗೆ ಹೊಂದಿಕೊಂಡಿರಬೇಕೆಂದೂ ವಿಷಯ ನಿರೂಪಣೆ ಸರಳವಾಗಿರಬೇಕೆಂದೂ ಪ್ರಯತ್ನಿಸಿದ್ದೇನೆ. ಪ್ರತಿಪಾದ್ಯ ವಿಷಯವು ಗಹನವಾದ ಸ್ಥಳದಲ್ಲಿ ಭಾಷೆ ಸ್ವಲ್ಪ ಪೆಡಸಾದಂತೆ ತೋರಬಹುದು. ಅದು ನನಗೆ ಅನಿವಾರ್ಯವಾಗಿ ಕಂಡಿದೆ"

ಅವರು ಈ ಪ್ರಯತ್ನದಲ್ಲಿ ಸಫಲರಾಗಿದ್ದಾರೆ.

ಡಿ.ವಿ.ಜಿ.ಯವರು ಶರ್ಮರ ಅನುವಾದಲ್ಲಿ ಋಜ್ವರ್ಥಗ್ರಹಣವೇ ಮುಖ್ಯವಾದ ಗುಣವೆಂದು ಹೇಳಿ "ಇಂಥ ಒಳ್ಳೆಯ ಕನ್ನಡ ವಚನ ಸಾಹಿತ್ಯವನ್ನು ಅವರು ನಮ್ಮ ವಾಚಕರಿಗೆ ಒದಗಿಸಿಕೊಟ್ಟಿರುವುದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ" ಎಂದಿದ್ದಾರೆ. ಪು. ತಿ. ನರಸಿಂಹಾಚಾರ್ಯರು : "ಶ್ರೀ ರಂಗನಾಥ ಶರ್ಮರದು ಕನ್ನಡ ದೇಸೀಮರ್ಜಿಯನ್ನು ಕಂಡುಕೊಂಡಿರುವವರ ಬರವಣಿಗೆ. ಇವರ ಅನುವಾದದಿಂದ ಕನ್ನಡಕ್ಕೆ ಒಂದು ಹೊಸ ಗದ್ಯ ಶೈಲಿ ದೊರಕಿದೆಯೆಂದೇ ಹೇಳಬಹುದು. ವಾಲ್ಮೀಕಿ ಮಹರ್ಷಿಯ ಕವಿತೆಯ ಸ್ವಾರಸ್ಯವನ್ನು ಕಂಡುಕೊಂಡ ಸಹೃದಯರ ಅನುವಾದಗಳಿವು. ಅದರ ಚೆಲುವಿಗೆ ಮರುಳಾದವರ ಉಕ್ತಿಗಳು" ಎಂದಿದ್ದಾರೆ.

ಹೀಗೆ ಶರ್ಮರು ಹೊಸಗನ್ನಡದ ಒಂದು ಸೊಗಸಾದ ಗದ್ಯ ಶೈಲಿಯ ನಿರ್ಮಾಪಕರಾಗಿದ್ದಾರೆ.

* * *

ಅವರ ಅನುವಾದ ಕಾರ್ಯಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡಬಹುದು : (ಇದು ಹಿಂದಿನ ಅನುವಾದವನ್ನು ಕೀಳೆಂದು ತೋರಿಸುವುದಕ್ಕಾಗಿ ಮಾಡಿದ ಹೋಲಿಕೆಯಲ್ಲವೆಂದು ಬಿನ್ನಯಿಸಬಯಸುತ್ತೇನೆ.)

ಮೊದಲನೆಯದು ಮೂಲ, ಎರಡನೆಯದು ಹಿಂದಿನ ಒಂದು ಅನುವಾದ, ಮೂರನೆಯದು ಶರ್ಮರ ಅನುವಾದ.

ಇಂದ್ರಿಯಾಣಿ ಪುರಾಜಿತ್ವಾ ಜಿತಂ ತ್ರಿಭುವನಂ ತ್ವಯಾ ||
ಸ್ಮರದ್ಭಿರಿವ ತದ್ವೈರಮಿಂದ್ರಿಯೈರೇವ ನಿರ್ಜಿತಃ ।
(ಮಂಡೋದರೀ ವಾಕ್ಯ, ಯು. ಕಾಂ. 114-18)

ಪೂರ್ವದಲ್ಲಿ ನೀನು ಇಂದ್ರಿಯಗಳೆಲ್ಲವನ್ನೂ ಜಯಿಸಿ ಆ ತರುವಾಯ ಮೂರು ಲೋಕಗಳನ್ನೂ ಜಯಿಸಿದೆ. ಆ ಇಂದ್ರಿಯಗಳೆಲ್ಲವೂ ನೀನು ತಮ್ಮನ್ನು ಜಯಿಸಿ ದುದರಿಂದ ನಿನ್ನಲ್ಲಿ ವೈರವನ್ನು ಬೆಳಸಿ ಈಗ ನಿನ್ನನ್ನು ಸೋಲಿಸಿದವು.

ಹಿಂದೆ ನೀನು ಇಂದ್ರಿಯಗಳನ್ನು ಗೆದ್ದು ಅದರ ಬಲದಿಂದ ಮೂರು ಲೋಕ ಗಳನ್ನೂ ಜಯಿಸಿದೆ. ಪೂರ್ವ ವೈರವನ್ನು ಸ್ಮರಿಸಿಕೊಂಡವೋ ಎಂಬಂತೆ ಆ ಇಂದ್ರಿಯಗಳೇ ನಿನ್ನನ್ನೀಗ ಜಯಿಸಿಬಿಟ್ಟವು.

* * *

ನನು ಸ್ವಾರ್ಥ ವಿಮೂಢಾನಾಂ ಪ್ರಮತ್ತಾನಾಂ ಗೃಹೇಹಯಾ ।
ಅಹೋ ನು ಸ್ಮಾರಯಾಮಾಸ ಗೋಪವಾಕ್ಯೈಃ ಸತಾಂ ಗತಿಃ ॥
ಅನ್ಯಥಾ ಪೂರ್ಣ ಕಾಮಸ್ಯ ಕೈವಲ್ಯಾದ್ಯಾಶಿಷಾಂ ಪತೇಃ
ಈಶಿತವ್ಯೈಃ ಕಿಮಸ್ಮಾಭಿರೀಶಸ್ಯೈತದ್ ವಿಡಂಬನಮ್ ॥
(ಭಾಗವತ x–23 : 44–45)

ಆಹಾ, ಆ ಭಗವಂತನ ವಾತ್ಸಲ್ಯವನ್ನು ಕಂಡಿರಾ! ಸಂಸಾರಾಸಕ್ತಿಯಿಂದ ಕೊಬ್ಬಿ ಮೈಮರೆತು ಸ್ವಪ್ರಯೋಜನಗಳನ್ನು ಕೂಡ ತಿಳಿಯದಿರುವ ಮೂಢರಾದ ನಮ್ಮನ್ನುದ್ಧರಿಸುವುದಕ್ಕಾಗಿ ಸಾಧು ಸೇವ್ಯನಾದ ಆ ಕೃಷ್ಣಮೂರ್ತಿಯು ಗೋಪಾಲಕರ ನುಡಿಗಳಿಂದ ನಮ್ಮನ್ನು ಎಚ್ಚರಗೊಳಿಸಿದರೂ ನಾವು ತಿಳಿದುಕೊಳ್ಳದೆ ಹೋದೆವಲ್ಲ ! ಹಾಗಿಲ್ಲದಿದ್ದರೆ ಪೂರ್ಣಕಾಮನೂ ಕೈವಲ್ಯಾದಿ ಸಕಲ ಪುರುಷಾರ್ಥಪ್ರದನೂ ಆದ ಆ ಭಗವಂತನಿಗೆ ಆಜ್ಞಾಧಾರಕರಾದ ನಮ್ಮಿಂದಾಗತಕ್ಕದ್ದೇನು ?

ಆಹಾ ! ಮನೆಮಠಗಳ ವ್ಯಾಮೋಹದಿಂದ ಪ್ರಮತ್ತರಾಗಿ ಪರಮಾರ್ಥದಲ್ಲಿ ಮೂಢರಾಗಿರುವ ನಮಗೆ ಸಜ್ಜನ ರಕ್ಷಕನಾದ ಕೃಷ್ಣನು ಗೊಲ್ಲರ ಮಾತುಗಳ ಮೂಲಕ ತನ್ನನ್ನು ನೆನಪು ಮಾಡಿಕೊಟ್ಟನು, ಅಲ್ಲವೆ ? ಅಲ್ಲದಿದ್ದರೆ ಪೂರ್ಣಕಾಮನೂ ಕೈವಲ್ಯಾದಿ ವಿಭೂತಿಗಳಿಗೆ ಒಡೆಯನೂ ಆದವನಿಗೆ ನಮ್ಮಿಂದ ಏನಾಗಬೇಕಾಗಿತ್ತು ? ದಾಸರಾದ ನಮ್ಮಿಂದ ಆ ಪ್ರಭುವಿಗೆ ಆಗಬೇಕಾದದ್ದಿದೆಯೆ ? ಇದೆಯೆಂದರೆ ಹಾಸ್ಯಾಸ್ಪದ.

* * *

ಕಾಳಿದಾಸನು ಸುಮಿತ್ರೆಯು ಲಕ್ಷ್ಮಣ ಶತ್ರುಘ್ನರನ್ನು ಹೆತ್ತಳೆಂದು ಹೇಳುವಾಗ "ಸಮ್ಯಗಾರಾಧಿತಾ ವಿದ್ಯಾ ಪ್ರಬೋಧವಿನಯಾವಿವ" ಎಂಬ ಮಾತನ್ನು ಹೇಳುತ್ತಾನೆ.

ಚೆನ್ನಾಗಿ ಆರಾಧಿಸಿದ, ಅಂದರೆ ಪವಿತ್ರಬುದ್ಧಿಯಿಂದ ಕಲಿತ ವಿದ್ಯೆಯಿಂದ ಜ್ಞಾನ ವುಂಟಾಗುವುದೇ ಅಲ್ಲದೆ ವಿನಯವೂ ಬರುತ್ತದೆಯಂತೆ. ಈ ಉಪಮಾನವು ತಿಳಿಸುವ ವಿಷಯಕ್ಕೆ ಸಾಕಾರ ಮೂರ್ತಿಯಂತಿರುವವರು ಶರ್ಮರು.

ಸಮ್ಯಗ್ಜ್ಞಾನ ವಿನಯವಿದ್ದರೆ ಮಾತ್ರ ಸಾಕೆ ? ಇದು ಜೀವನದಲ್ಲಿ, ನಡತೆಯಲ್ಲಿ ಕಂಡು ಬಂದರೆ ತಾನೆ ಜ್ಞಾನದ ಸಫಲತೆ.

ಕರ್ಮದಲ್ಲಾಗಲಿ ನಡತೆಯಲ್ಲಾಗಲಿ ಸಂಶಯವುಂಟಾದರೆ ಏನು ಮಾಡಬೇಕು ? ಎಂಬುದಕ್ಕೆ ಉತ್ತರವನ್ನು ಉಪನಿಷತ್ತು ಹೀಗೆ ಹೇಳುತ್ತದೆ :

"ಯೇ ತತ್ರ ಬ್ರಾಹ್ಮಣಾಃ ಸಂಮರ್ಶಿನಃ । ಯುಕ್ತಾ ಆಯುಕ್ತಾಃ । ಅಲೂಕ್ಷಾ
ಧರ್ಮ ಕಾಮಾ ಸ್ಯುಃ । ಯಥಾ ತೇ ತತ್ರ ವರ್ತೇರನ್ । ತಥಾ ತತ್ರ
ವರ್ತೇಥಾಃ ॥"

ಇದಕ್ಕೆ ಭಗವತ್ಪಾದರ ವ್ಯಾಖ್ಯಾನ :

ಸಂಮರ್ಶನಃ ವಿಚಾರ ಕ್ಷಮಾಃ (ವಿಚಾರ ಮಾಡುವುದರಲ್ಲಿ ಸಮರ್ಥರಾಗಿಯೂ) ಯುಕ್ತಾಃ ಅಭಿಯುಕ್ತಾಃ ಕರ್ಮಣಿ ವೃತ್ತೇ ವಾ ಅಯುಕ್ತಾಃ ಅಪರ ಪ್ರಯುಕ್ತಾಃ (ಕರ್ಮದಲ್ಲಿ ಅಥವಾ ನಡತೆಯಲ್ಲಿ ನಿಪುಣರಾಗಿಯೂ ಆಯುಕ್ತರಾಗಿಯೂ ಅಂದರೆ ಮತ್ತೊಬ್ಬರಿಂದ ಪ್ರೇರಿತರಾಗದವರಾಗಿಯೂ) ಅಲೂಕ್ಷಾಃ ಅಕ್ರೂರಮತಯಃ (ಕ್ರೂರವಾದ ಬುದ್ಧಿಯಿಲ್ಲದವರಾಗಿಯೂ) ಧರ್ಮಕಾಮಾಃ ಅದೃಷ್ಟಾರ್ಥಿನಃ (ಅದೃಷ್ಟ ಫಲವನ್ನೇ ಬಯಸುವವರಾಗಿಯೂ) ಅಕಾಮ ಹತಾಃ (ಆಸೆಯ ಹೊಡೆತ ವಿಲ್ಲದವರಾಗಿಯೂ) ಇರುವವರು, ಹೇಗೆ ನಡೆದುಕೊಳ್ಳುತ್ತಾರೋ ಹಾಗೆ ನಡೆದು ಕೊಳ್ಳಬೇಕೆಂಬುದು ಉಪನಿಷತ್ತಿನ ಉಪದೇಶ.

ಹೀಗೆ ವಿಚಾರಪರರಾಗಿ, ನಡತೆಯಲ್ಲಿ ನಿಪುಣರಾಗಿ ನಿರ್ಮಲರಾಗಿ ಲೋಕದ ವಿಷಯದಲ್ಲಿ ಸಹಾನುಭೂತಿಯುಳ್ಳವರಾಗಿ ಆರ್ದ್ರ ಹೃದಯರಾಗಿ ಧರ್ಮದಲ್ಲೇ ದೃಷ್ಟಿಯುಳ್ಳವರಾಗಿ ಆಸೆಯ ಹೊಡೆತಕ್ಕೆ ಸಿಕ್ಕದವರಾಗಿರುವವರು ಶರ್ಮರು. ಇದು ಉತ್ಪ್ರೇಕ್ಷೆಯ ಮಾತಲ್ಲ. ಅವರನ್ನು ಕುರಿತು ಮೇಲೆ ಹೇಳಿದ ಎಲ್ಲ ವಿವರಣೆಗಳ ಸಾರಾಂಶ ಇದು.

ಇಂಥವರು ಪೀಠಾಧಿಪತಿಗಳ ವಿದ್ವಾಂಸರ ಮನ್ನಣೆಯನ್ನು ಸಾಮಾನ್ಯ ಜನರ ಗೌರವ ಪ್ರೀತಿ ವಿಶ್ವಾಸಗಳನ್ನು ಗಳಿಸಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಆದರೆ ಅವರ ಜೀವನಕ್ಕೆ ಹೊಸ ತಿರುವನ್ನು ಕೊಟ್ಟವರು ಶ್ರೀಮಾನ್ ಡಿ.ವಿ.ಜಿ. ಯವರು ಎಂದು ನನಗನ್ನಿಸುತ್ತದೆ. ಅವರಲ್ಲಿ ಸುಪ್ತವಾಗಿದ್ದ ಲೋಕೋಪಕಾರಕ ಗುಣವನ್ನು ಗುರುತಿಸಿ ಅದರಿಂದ ಕೆಲಸ ಮಾಡಿಸಿದವರು ಡಿ.ವಿ.ಜಿ. ಎಂದೆನಿಸುತ್ತದೆ.

ಇದರಿಂದ ರಾಮಾಯಣ ಗಂಗೆಯು ಕನ್ನಡ ಬಲ್ಲ ಸಹಸ್ರಾರು ಮನೆಗಳಲ್ಲಿ ಹರಿಯು ವಂತಾಯಿತು.

* * *

ಶರ್ಮರು 1961ರಿಂದ ಎರಡು ಮೂರು ವರ್ಷಗಳು ನಮ್ಮಲ್ಲಿ ಕೆಲವರಿಗೆ ಗೋಖಲೆ ಸಂಸ್ಥೆಯಲ್ಲಿ "ಲಘು ಸಿದ್ಧಾಂತ ಕೌಮುದಿ", 'ರಘುವಂಶ' "ಗದ್ಯಪದ್ಯ ಮಂಜರಿ" ಮುಂತಾದವುಗಳ ಪಾಠ ಹೇಳುತ್ತಿದ್ದರು. ಹಾಗೆಯೇ 1988-89ರಲ್ಲಿ ಶ್ರೀ ಶಾಂಕರ ಗೀತಾಭಾಷ್ಯದ ಪಾಠವನ್ನು ಪ್ರತಿ ಭಾನುವಾರವೂ ಮಾಡುತ್ತಿದ್ದರು. ಹಾಗೆಯೇ 1991ರಲ್ಲಿ ಶ್ರೀ ಶ್ರೀನಾಥ ಶಾಸ್ತ್ರಿಗಳ ಮನೆಯಲ್ಲಿ "ಸೌಂದರ್ಯ ಲಹರಿ" ಯನ್ನು ಕುರಿತು ಉಪನ್ಯಾಸ ಕೊಡುತ್ತಿದ್ದರು.

* * *

ಶರ್ಮರು ಸಂಸಾರದಲ್ಲಿ ಸುಖವನ್ನು ಹೇಗೋ ಹಾಗೆ ದುಃಖವನ್ನು ಕಷ್ಟಗಳನ್ನೂ ಕಂಡವರು. ಅವರಿಗೆ ಇಬ್ಬರು ಹೆಣ್ಣು ಮಕ್ಕಳು ಇಬ್ಬರು ಗಂಡು ಮಕ್ಕಳು ಇದ್ದಾರೆ. ಅವರಿಗೆ ಬೆಂಬಲವಾಗಿ ಇದ್ದ ಅವರ ಪತ್ನಿ 1974ರಲ್ಲಿ ಸ್ವರ್ಗಸ್ಥರಾದರು. ಇದು ಭರಿಸಲಾಗದ ದುಃಖವಾದರೂ ಶರ್ಮರು ಅದನ್ನು ಸಹಿಸಿಕೊಂಡು ತಮ್ಮ ಸಾರಸ್ವತ ಕಾರ್ಯವನ್ನು ಮುಂದುವರಿಸುತ್ತಿದ್ದಾರೆ.

* * *

ಹೀಗೆ ಋಜ್ವರ್ಥಗ್ರಹಣದಲ್ಲಿ ತಮ್ಮ ವಿದ್ವತ್ತನ್ನು ವಿನಿಯೋಗಿಸಿ, ಋಜು ಮಾರ್ಗದಲ್ಲಿ ಜೀವನ ನಡೆಸುತ್ತಿರುವ ಆದರ್ಶ ಮಹನೀಯರಿಗೆ ಸಹಸ್ರ ಪ್ರಣಾಮಗಳು.

ವಿದ್ವಾನ್ ಶ್ರೀ ರಂಗನಾಥ ಶರ್ಮರವರ ಮುಖ್ಯ ಬರಹಗಳು

ಎಂ. ವಿ. ರಾಮಚೈತನ್ಯ

ಸಂಸ್ಕೃತ ಗ್ರಂಥಗಳು :

1) ಗುರು ಪರಂಪರಾಚರಿತಮ್ (1969)
2) ಸಂಸ್ಕೃತ ಪ್ರಥಮ ಪ್ರವೇಶಃ (1970)
3) ಶ್ರೀ ಬಾಹುಬಲಿ ವಿಜಯಂ (ನಾಟಕ)
   ಶ್ರೀ ಗೋಮಟೇಶ್ವರ ಪಂಚರತ್ನಂ ಮತ್ತು
   ಶ್ರೀ ಗೋಮಟೇಶ್ವರ ಸುಪ್ರಭಾತಮ್ (1981)
4) ಏಕ ಚಕ್ರಂ (ನಾಟಕ) (1990)

ಕನ್ನಡ ಗ್ರಂಥಗಳು :

1) ಭಾಷಾಂತರ ಪಾಠಃ (1949)
2) ಲೌಕಿಕ ನ್ಯಾಯಗಳು (1959)
3) ಹೊಸಗನ್ನಡ ವ್ಯಾಕರಣ (1977)
4) ವಾಲ್ಮೀಕಿ ಮುನಿಗಳ ಹಾಸ್ಯ ಪ್ರವೃತ್ತಿ
5) ವರದ ಹಳ್ಳಿ ಶ್ರೀಧರ ಸ್ವಾಮಿಗಳು (1981)
6) ಶ್ರೀ ರಾಮಚಂದ್ರ (ಭಾಸ, ಕಾಳಿದಾಸ
   ಭವಭೂತಿಗಳ ದೃಷ್ಟಿಯಲ್ಲಿ) (1982)
7) ಸೂಕ್ತಿ–ವ್ಯಾಪ್ತಿ (1991)
8) ಉಪನಿಷತ್ತಿನ ಕಥೆಗಳು (1993)
9) ಭಾರತ ಭಾರತಿ ಪುಸ್ತಕ ಸಂಪದ
   ಮಾಲೆಯಲ್ಲಿ ನಾರದ, ವಾಲ್ಮೀಕಿ ಕಂಪಣ ಮುಂತಾದವು

ಕನ್ನಡಕ್ಕೆ ಅನುವಾದಗಳು :

1) ಶ್ರೀಮದ್ವಾಲ್ಮೀಕಿ ರಾಮಾಯಣ
   (ಏಳು ಕಾಂಡಗಳು) (1964–1974)
2) ಅಮರಕೋಶ (1970)
3) ವಿದುರ ನೀತಿ (1973)
4) ಶ್ರೀಮದ್ಭಾಗವತ (ದಶಮ ಸ್ಕಂಧ) (1978)
5) ಪ್ರಾರ್ಥನಾ ಶ್ಲೋಕಗಳು (1979)

6) ಶ್ರೀ ವಿಷ್ಣು ಪುರಾಣ (1986)
7) ಶ್ರೀಮದ್ಭಾಗವತದ ಏಕಾದಶ ದ್ವಾದಶ ಸ್ಕಂಧಗಳು (1990)
8) ಶ್ರುತಿ ಸಾರ ಸಮುದ್ಧರಣ } ಅಚ್ಚಿನಲ್ಲಿದೆ
9) ವಾಕ್ಯ ಪದೀಯ (ಮೊದಲನೆಯ ಖಂಡ) } ಅಚ್ಚಿನಲ್ಲಿದೆ

ಸಂಕಲನ – ಗ್ರಂಥ ಸಂಪಾದನೆ :

1) ಶ್ರೀ ಭಗವನ್ನಾಮಾವಳಿ
2) ಸುಭಾಷಿತ ಮಂಜರಿ (1977)
3) ಶ್ರೀ ಚಾಮರಾಜೋಕ್ತಿ ವಿಲಾಸ ರಾಮಾಯಣ

ಬಿಡಿ ಬರಹಗಳು

1. ಸ್ವಾತಂತ್ರ್ಯ ಶಿಶು
ಕನ್ನಡ ನುಡಿ 20–8–1948 ಕನ್ನಡ ಸಾಹಿತ್ಯ ಪರಿಷತ್
(ಸಂಪುಟ 10 ಸಂಚಿಕೆ 40) ಬೆಂಗಳೂರು–18

2. ಆಂಜನೇಯ
ಶ್ರೀ ರಾಮ ಸೇವಾ ಬೆಳ್ಳಿ ಹಬ್ಬದ ಸಂಚಿಕೆ ಶ್ರೀ ನರಸಿಂಹರಾಜ
1964 ಕಾಲೋನಿ ಅಸೋಸಿಯೇಷನ್

3. ಶ್ರೀ ಡಿ. ವಿ. ಜಿ. ತತ್ತ್ವ ಜ್ಞಾನ
ಕನ್ನಡ ನುಡಿ 1–2–70 ಕನ್ನಡ ಸಾಹಿತ್ಯ ಪರಿಷತ್
(ಸಂಪುಟ 33 ಸಂಚಿಕೆ 3) ಬೆಂಗಳೂರು–18

4. ಶ್ರೀ ಡಿ. ವಿ. ಜಿ. ತತ್ವಜ್ಞಾನ
ಕನ್ನಡ ನುಡಿ 16–2–70 ಕನ್ನಡ ಸಾಹಿತ್ಯ ಪರಿಷತ್
(ಸಂಪುಟ 33 ಸಂಚಿಕೆ 4) ಬೆಂಗಳೂರು–18

5. ನಾಗವರ್ಮನ ಕಾವ್ಯ ಲಕ್ಷಣ
ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಡಿಸೆಂಬರ್, 1973 ಕನ್ನಡ ಸಾಹಿತ್ಯ ಪರಿಷತ್
(58–2) ಬೆಂಗಳೂರು–18

6. ಕರುಣರಸ – ಒಂದು ಟಿಪ್ಪಣಿ

ಕನ್ನಡ ನುಡಿ	1-1-74 (37-9)	ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು-18

7. ರೀತಿರಾತ್ಮಾ ಕಾವ್ಯಸ್ಯ

ಕನ್ನಡಸಾಹಿತ್ಯ ಪರಿಷತ್ಪತ್ರಿಕೆ	ಡಿಸೆಂಬರ್ 1974 (59-2)	ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು-18

8. ಪುಣ್ಯ ಸ್ಮೃತಿ

(ಪೂಜ್ಯ ಡಿ.ವಿ.ಜಿ.ಯವರ ಸ್ಮರಣೆ) Public Affairs ಡಿಸೆಂಬರ್
ನವಂಬರ್ 1975
ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ
ಬೆಂಗಳೂರು-19

9. ಸಂಸ್ಕೃತ ಪಾಠಶಾಲೆಗಳು

II All Karnataka Samskrita Conference
Souvenir, October, 1978

10) ವ್ಯಾಸರು ಚಿತ್ರಿಸಿದ ಒಂದು ಬಡ ಕುಟುಂಬ

ಉತ್ಥಾನ	ಜನವರಿ 1982 (15-5)	ರಾಷ್ಟ್ರೋತ್ಥಾನ ಪರಿಷತ್ ಬೆಂಗಳೂರು-18

11. ವಾಲ್ಮೀಕಿ ಮುನಿಗಳ ಸೀತಾಯನ

ಉತ್ಥಾನ	ಏಪ್ರಿಲ್ 1984	ರಾಷ್ಟ್ರೋತ್ಥಾನ ಪರಿಷತ್ ಬೆಂಗಳೂರು-18

12. ವಾಲ್ಮೀಕಿ ಮುನಿಗಳ ಸೀತಾಯನ

ಉತ್ಥಾನ	ಮೇ 1984	ರಾಷ್ಟ್ರೋತ್ಥಾನ ಪರಿಷತ್ ಬೆಂಗಳೂರು-19

13. ವಾಲ್ಮೀಕಿ ಮುನಿಗಳ ಸೀತಾಯನ

ಉತ್ಥಾನ	ಜೂನ್, 1984	ರಾಷ್ಟ್ರೋತ್ಥಾನ ಪರಿಷತ್ ಬೆಂಗಳೂರು-19

14. ಅಖಿಲ ಕರ್ಣಾಟಕ ಸಂಸ್ಕೃತ ಪರಿಷತ್ತಿನ ಐದನೆಯ ಸಮ್ಮೇಳನದ ಅಧ್ಯಕ್ಷ ಭಾಷಣ
ಅಕ್ಟೋಬರ್, 1984 ಕರ್ನಾಟಕ ಸಂಸ್ಕೃತ ಪರಿಷತ್
ಬೆಂಗಳೂರು

15. ಸಂಸ್ಕೃತವನ್ನು ಸಂಸ್ಕೃತದಲ್ಲೇ ಕಲಿಸಿ
ಸಂಸ್ಕೃತ ತರಂಗಿಣೀ ಅಕ್ಟೋಬರ್, 1984

16. ಗಮಕಸಮಾಸ–ಒಂದು ಸಮೀಕ್ಷೆ
ಲೋಚನ ಜೂನ್, 1985 - ಬಿ. ಎಂ. ಶ್ರೀ. ಪ್ರತಿಷ್ಠಾನ
ಬೆಂಗಳೂರು–19

17. ಶ್ರೀ ರಾಮ – ವಾಲಿ ಸಂಹಾರದ ವಿಶ್ಲೇಷಣೆ
ಸುವರ್ಣ ಮಹೋತ್ಸವ ವಿಶೇಷ ಸಂಚಿಕೆ – 1988
ಶ್ರೀ ನರಸಿಂಹರಾಜಾ ಕಾಲೋನಿ ಅಸೋಸಿಯೇಷನ್
ಶ್ರೀ ರಾಮಮಂದಿರ, ಬೆಂಗಳೂರು–19

18. ಒಂದು ಚಿಂತನೆ
ವಿಪ್ರ ನುಡಿ ಮೇ, 1991
(4–3)

19. ಗಮಕ ಕಲೆ–ಸಂಸ್ಕೃತ ಕಾವ್ಯಗಳು
ಗಮಕ ಮಂದಾರ ನೆನಪಿನ ಸಂಚಿಕೆ 1983 ಅಖಿಲ ಕರ್ನಾಟಕ ಪ್ರಥಮ
ಗಮಕ ಕಲಾ ಸಮ್ಮೇಳನ, ಬೆಂಗಳೂರು

20. ಮಹಾಭಾರತದಲ್ಲಿ ರಸ ನಿರೂಪಣೆ
ಶ್ರೀ ಮನ್ಮಹಾ ಭಾರತ ಮಂಗಳ ಸ್ಮರಣ ಸಂಚಿಕೆ ಭಾರತ ದರ್ಶನ
ಬೆಂಗಳೂರು – 28

21. ಆತ್ಮಜ್ಞಾನಿಯೊಬ್ಬನೇ ಧೀರನು ಶಂಕರಭಾಸ್ಕರ
(ಜನವರಿ–ಮಾರ್ಚ್, 1994)

22. ಶ್ರೀ ರಾಮ ಕಥಾವೈಭವಮ್ ಗ್ರಂಥಕ್ಕೆ ಪ್ರಸ್ತಾವನೆ
(1987) ಶ್ರೀ ನರಸಿಂಹರಾಜ ಕಾಲೋನಿ ಅಸೋಸಿಯೇಷನ್ (ರಿ)
ಶ್ರೀ ರಾಮ ಮಂದಿರ
ನರಸಿಂಹರಾಜ ಕಾಲೋನಿ, ಬೆಂಗಳೂರು–19

23. ವಾಸಿಷ್ಠ ವೈಭವಂ ಗ್ರಂಥಕ್ಕೆ ಮುನ್ನುಡಿ

ಶ್ರೀ ರಂಗನಾಥಶರ್ಮಾರವರು ಸಂಸ್ಕೃತ ವ್ಯಾಕರಣ ಶಾಸ್ತ್ರದಲ್ಲಿ ಆಳವೂ ವಿಶಾಲವೂ ಆಗಿ ಪ್ರಮಾಣವತ್ತಾಗಿರುವ ಪಾಂಡಿತ್ಯವನ್ನು ಸಂಪಾದಿಸಿರುವವರು. ಅವರ ಕನ್ನಡ ಭಾಷಾವಿದ್ವತ್ತೂ ಅಂಥಾದ್ದು. ಸಾಹಿತ್ಯದಲ್ಲಿ ಅವರು ಸಹೃದಯರಾಗಿ ಶೋಧನಶೀಲರಾಗಿ ಕಾವ್ಯಮರ್ಮವನ್ನು ಕಂಡು ತೋರಿಸಬಲ್ಲವರು. ಅವರು ಸದಾಚಾರನಿಷ್ಠರು, ಸರಳರು. ಒಂದು ಮಹಾಕಾವ್ಯದ ಅಂತರಂಗವನ್ನು ಅನುಭವದಿಂದ ತಿಳಿಯಬೇಕಾದರೆ ಯಾವ ಮನಃ ಪ್ರಸಾದವೂ ತತ್ತ್ವನಿಷ್ಠೆಯೂ ಪ್ರಥಮ ಸಿದ್ಧತೆಗಳೋ ಅವೆರಡನ್ನೂ ಅವರಲ್ಲಿ ನಾನು ಕಂಡಿದ್ದೇನೆ.

ಶ್ರೀ ರಂಗನಾಥಶರ್ಮಾರಲ್ಲಿ ನನಗೆ ಕಾಣುವ ಒಂದು ವಿಶೇಷ ಗುಣವೆಂದರೆ ಅವರ ಋಜ್ವರ್ಥ ಗ್ರಹಣ. ಅವರು ಒಣ ವಿದ್ವಾಂಸರಲ್ಲ. ವಿದ್ವದ್ರಸಿಕರು, ಆರ್ದ್ರಹೃದಯರು, ಅಳಬಲ್ಲವರು, ನಗಬಲ್ಲವರು, ಕನಿಕರಿಸಬಲ್ಲವರು. ಮತ್ತೊಬ್ಬರ ಹೃದ್ಭಾವವನ್ನು ಊಹಿಸಿ ಅನುಭವಿಸ ಬಲ್ಲವರು.

—ಡಿ.ವಿ.ಜಿ.

ವಿದ್ವಾನ್ ಶ್ರೀ ಎನ್. ರಂಗನಾಥಶರ್ಮಾ ಅಭಿನಂದನ ಸಮಿತಿ
ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ
ಎನ್. ಆರ್. ಕಾಲೊನಿ, ಬೆಂಗಳೂರು–560 019